


ತ.ರಾ.ಸು.

ಬದುಕು ಬರೆಹ

ಸಂಪಾದಕ: ಶಾ. ಮಂ. ಕೃಷ್ಣರಾಯ

ತ.ರಾ.ಸು. ಬದುಕು-ಬರೆಹ

ಸಂಪಾದಕ
ಶಾ. ಮಂ. ಕೃಷ್ಣರಾಯ

ವಿಶ್ವಭಾರತಿ ಪ್ರಕಾಶನ
ಸ್ಟೇಷನ್ ರಸ್ತೆ, ಮಡಗಾಂವ್ (ಗೋವಾ)

'TA. RA. SU. Baduku Bareha' (Ta. Ra. Su. life and works) - A Felicilation Volume dedicated to Shri. T.R. Subba Rao on the occasion of his 63rd birth day Edited by Shri S. M. KRISHNA RAO, M. A. Published by - Vishwabharathi Publications, Station Road, MARGAO (Goa).

First Edition - April - 1982

Price - Rs. 50/- Calico Rs. 65/-

Printed by : Sri B. KRISHNA BHAT, B.A.
Sri Guruprasad Printers, Bangalore 4.


Cover Art : Sri K. B. KULKARNI

ಪ್ರಥಮ ಮುದ್ರಣ : ಏಪ್ರಿಲ್ ೧೯೮೨

ಕಲೆ : ಶ್ರೀ ಕೆ.ಬಿ. ಕುಲಕರ್ಣಿ

ಫೋಟೊ : ಶ್ರೀ ಕೆ. ಜಿ. ಸೋಮಶೇಖರ

ಮುದ್ರಣ : ಶ್ರೀ ಬಿ. ಕೃಷ್ಣ ಭಟ್, ಬಿ.ಎ.
ಶ್ರೀ ಗುರುಪ್ರಸಾದ್ ಪ್ರಿಂಟರ್ಸ್,
35, ರತ್ನ ವಿಲಾಸ ರಸ್ತೆ, ಬೆಂಗಳೂರು 4.



ಕಳೆದ ನಾಲ್ಕುದಶಕಗಳಿಗೂ ಮೀರಿ ಸ್ವಾತಂತ್ರ್ಯ ಹೋರಾಟಗಾರರಾಗಿ,
ಪತ್ರಕರ್ತರಾಗಿ, ಪ್ರಗತಿಶೀಲ ಚಳುವಳಿ, ಕರ್ನಾಟಕ ಏಕೀಕರಣ,
ಕನ್ನಡ ಚಳುವಳಿಗಳಲ್ಲಿ ದುಡಿದು ನಾಡಿನ ಹೆಸರಾಂತ ಬರೆಹಗಾರರೆಂದೆನಿಸಿ
ಕನ್ನಡ ಸಾಹಿತ್ಯಕ್ಕೆ ಚಿರಸ್ಥಾಯಿಯಾಗಿ ನಿಲ್ಲುವ
ಕೃತಿಗಳನ್ನು ನೀಡಿ ಕನ್ನಡ ನಾಡು–ನುಡಿಯ ನಿತಾಂತ ಸೇವೆಗೈದ

ಶ್ರೀ ತ. ರಾ. ಸುಬ್ಬರಾಯರಿಗೆ

ಕನ್ನಡಿಗರು ಆದರಾಭಿಮಾನದಿಂದ 'ಜೀವೇತ್ ಶರದಃ ಶತಂ'
ಎಂದು ಹಾರೈಸಿ ಅರ್ಪಿಸಿದ ಪ್ರೀತಿ– ವಿಶ್ವಾಸದ ಉಡುಗೊರೆ.

ಬಿಚ್ಚು ಮನಸಿನ ಮಾತು

ತ.ರಾ.ಸು.

ಕನ್ನಡ ಸಾರಸ್ವತ ಪ್ರಪಂಚಕ್ಕೆ ಗೊತ್ತಿರುವ ಹೆಸರು.ತಳುಕಿನ ರಾಮಸ್ವಾಮಯ್ಯನವರ ಮಗ ಸುಬ್ಬರಾಯರು. ಹುಟ್ಟಿದ್ದು ಮಲೆ ಬೆನ್ನೂರಿನಲ್ಲಿ, ಓದಿದ್ದು ಚಿತ್ರದುರ್ಗದಲ್ಲಿ, ಬೆಳೆದುದು ಬೆಂಗಳೂರಿನಲ್ಲಿ, ಪ್ರವರ್ಧಮಾನರಾದುದು ಮೈಸೂರಿನಲ್ಲಿ.

ಹಾಗಾದರೆ ಇವರೇನು ಮಾಡಿದ್ದಾರೆ ?

ಇವರು ಕನ್ನಡದಲ್ಲಿ ಬರೆದು ಬದುಕಿದ್ದಾರೆ. ಆಂ ? ಎಂದು ಯಾರೂ ಹುಬ್ಬೇರಿಸಬೇಕಿಲ್ಲ. ಸ್ವ ಸಾಮರ್ಥ್ಯವುಳ್ಳ ಲೇಖಕ ಸೃಜನಾತ್ಮಕ ಸಾಹಿತ್ಯ ರಚಿಸಿ ಯಾವ ವಂದಿ ಮಾಗಧರ ಸಹಾಯವಿಲ್ಲದೆ ಕಳೆದ ನಾಲ್ಕು ದಶಕಗಳಿಂದ ಎದೆಯಾನಿಸಿ ನಿಂತಿದ್ದಾರೆಂದರೆ ಸಣ್ಣ ಮಾತಲ್ಲ. ಈ ವೊಂಡು ಧೈರ್ಯದಿಂದ ಬರೆದು ಬದುಕಿದವರು ಕರ್ನಾಟಕದಲ್ಲಿ ಕೀರ್ತಿ ಶೇಷ ಅ.ನ.ಕೃ., ಡಾ. ಕಾರಂತ, ತ.ರಾ.ಸು., ಕಟ್ಟೀಮನಿ ಎನ್ನಬಹುದು. ಪ್ರಾಯಃ ಇಂಥ ಧೈರ್ಯ ಇವರ ಹಿಂದಿನವರೂ ಮಾಡಿರಲಿಕ್ಕಿಲ್ಲ, ಮುಂದಿನವರೂ ಮಾಡಲಿಕ್ಕಿಲ್ಲ. ಕಾರಣ ಕನ್ನಡಕ್ಕಿರುವುದು ಸೀಮಿತ ಮಾರುಕಟ್ಟೆ.

ಸುಮಾರು ೭೦ ಕಾದಂಬರಿ, ನಾಲ್ಕು ಕಥಾ ಸಂಗ್ರಹ ಮತ್ತಿತರ ಕೃತಿಗಳನ್ನು ರಚಿಸಿದ ತ.ರಾ.ಸು. ತಮ್ಮ ಎಲ್ಲ ಕೃತಿಗಳಲ್ಲೂ ತ.ರಾ.ಸು. ಹೆಜ್ಜೆಯ ಗುರುತು ಉಳಿಸಿದ್ದಾರೆ. ಅವರು ರಾಷ್ಟ್ರೀಯ ನಾಯಕರ ಕುರಿತು ಬರೆದ 'ರೇಖಾ ಚಿತ್ರಗಳು' ಎಂಬ ಪುಟ್ಟ ಪುಸ್ತಕದಲ್ಲೂ ತ.ರಾ.ಸು.ತನ ಕಾಣುತ್ತದೆ.

ಅವರ ಮೊದಲ ಕಾದಂಬರಿ 'ಮನೆಗೆ ಬಂದ ಮಹಾಲಕ್ಷ್ಮಿ'ಗೆ ದೊರೆತ ಸ್ವಾಗತ ನೋಡಿದರೆ ಮತ್ತೆ ಯಾರಾದರೂ ಆದರೆ ಅಲ್ಲಿಗೇ ಲೇಖನಿ ಕುಕ್ಕಿ ಸಾಹಿತ್ಯಕ್ಕೆ ಶರಣು ಹೊಡೆಯುತ್ತಿದ್ದರೇನೋ. ಆದರೆ ಈ ಮೊಳಕೆಯೊಡೆಯುವ ಚಿಗುರಿನಲ್ಲಿನ ಸತ್ವ ಶಕ್ತಿಯನ್ನು ಗುರುತಿಸಿದ ಅ. ನ. ಕೃ. ಅವರು ಆಕ್ಷೇಪವೆತ್ತಿದವರನ್ನು ನಿರುತ್ತರಗೊಳಿಸಿ ತ.ರಾ.ಸು. ಬರೆವಣಿಗೆಗೆ ಪ್ರೋತ್ಸಾಹಿಸಿದರು. ಮುಂದೆ ತ.ರಾ.ಸು. ಅದೇ ಮಾಸ್ತಿಯವರ ಕೈಯಿಂದಲೇ ಶ್ರೇಷ್ಠ ಕಾದಂಬರಿಕಾರ ಪ್ರಶಸ್ತಿಯನ್ನು, (ಕನ್ನಡ ಸಾಹಿತ್ಯ ಪರಿಷತ್ತಿನ ರಜತ ವರ್ಷದಲ್ಲಿ) ಸ್ವೀಕರಿಸುತ್ತಾರೆಂದು ಯಾರಿಗೆ ಗೊತ್ತಿತ್ತು ? ಪ್ರಾಯಃ ಇದೇ ಅವರ ಜೀವಿತದಲ್ಲಿ ಪಡೆದ ಅತ್ಯುತ್ತಮ ಪ್ರಶಸ್ತಿಯೆನ್ನಬಹುದು. ಅದಕ್ಕಾಗಿ ತ.ರಾ.ಸು. ಪಟ್ಟ ಶ್ರಮ ಎಷ್ಟು,ಮಾಡಿದ ಅಧ್ಯಯನವೆಷ್ಟು, ತ್ಯಾಗವೆಷ್ಟು ಎಂದು ಗಮನಿಸಿದಾಗ ತ.ರಾ.ಸು. ಅವರಲ್ಲಿನ ಛಲ, ತಾಳ್ಮೆ, ಸಂಯಮಂಗಳ ಕಲ್ಪನೆ ಬರುತ್ತದೆ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಬರೆಯುವುದಿರಲಿ ಸಾಹಿತ್ಯ ಚಳುವಳಿಗಳ ರಾಷ್ಟ್ರೀಯ ಆಂದೋಲನದ ಇತಿಹಾಸ ಬರೆಯುವುದರಲ್ಲಿ ಅವರು ತ.ರಾ.ಸು ಅವರನ್ನು ಮರೆತು ಮುಂದೆ ಹೋಗುವುದು ಸಾಧ್ಯವಿಲ್ಲ.

ಅವರ ಸಾಹಿತ್ಯದ ಕುರಿತು ಪ್ರಸಿದ್ಧ ವಿಮರ್ಶಕ ಪ್ರೊ॥ ಎಲ್. ಎಸ್. ಶೇಷ ಗಿರಿರಾವ್ ಅವರು ಇವ (ಪ್ರಗತಿ ಶೀಲ) ರಲ್ಲಿ ಕಲೆಗಾರಿಕೆ ತ.ರಾ.ಸು. ಅವರದು, ಚಿತ್ರಮಯವಾದ ಭಾಷೆ, ಕಣ್ಣಿಗೆ ಕಟ್ಟುವಂತೆ ನೋಟವನ್ನಾಗಲಿ ಅವರು ವರ್ಣಿಸ ಬಲ್ಲರು. ಅವರ ಪ್ರಾರಂಭದ ಕಾದಂಬರಿಗಳಲ್ಲಿ ಅವೇಶ ಹೆಚ್ಚು, ಬರೆಹಕ್ಕೆ ಸಕ್ಕರೆ ಅಂಟಿದಂತೆ ಭಾವುಕತೆ ಅಂಟುತ್ತದೆ...... ತ.ರಾ.ಸು. ಭಾಷೆಯ ಬಳಕೆಯಲ್ಲಿ ಮಾತ್ರ ಕಲೆಗಾರರಲ್ಲ, ಕಾದಂಬರಿಯ ತಂತ್ರದಲ್ಲಿಯೂ ಕಲೆಗಾರರು. ಇಡೀ ಕಾದಂಬರಿಯ ಕ್ರಿಯೆ ಒಂದು ಬೆಳಗಿನಿಂದ ಮರು ಬೆಳಗಿನಲ್ಲಿ ಅಡಕ ಮಾಡಬಲ್ಲರು. ಇಷ್ಟೇ ಅವಧಿ ಯಲ್ಲಿ ಒಂದು ಪಂಗಡದ ಕಷ್ಟ ಕಾರ್ಪಣ್ಯಗಳನ್ನು ಚಿತ್ರಿಸಬಲ್ಲರು. 'ಪ್ರಜ್ಞಾಪ್ರವಾಹ' ತಂತ್ರವನ್ನು ಕನ್ನಡದಲ್ಲಿ ಮೊಟ್ಟ ಮೊದಲನೆಯ ಬಾರಿಗೆ ಗಮನಾರ್ಹವಾಗಿ ಬಳಸಿ ದವರು ತ.ರಾ.ಸು. "ಬಿಡುಗಡೆಯ ಬೇಡಿ" ಕಾದಂಬರಿಯಲ್ಲಿ

ಅಂತೆಯೇ ಪ್ರೊ॥ ಜಿ. ಎಚ್. ನಾಯಕ ಅವರು ತ.ರಾ.ಸು. ಅವರ 0-0=0 ಕಥೆಯನ್ನು ವಿಮರ್ಶಿಸುತ್ತ ತ.ರಾ.ಸು. ಅವರ 0-0=0 ಮತ್ತಿತರ ಕೆಲವು ಕಥೆಗಳಲ್ಲಿ ಪ್ರಗತಿ ಶೀಲ ಧೋರಣೆಯ ಅಂಶಗಳಿದ್ದರೂ ಅದನ್ನು ಮೀರಿದ ವಸ್ತು ವಿಸ್ತಾರ ಮತ್ತು ಹೊಸ ಅಭಿವ್ಯಕ್ತಿ ವಿಧಾನದ ಜಾಡನ್ನು ತೆರೆಯುವ ಕಾಳಜಿಗಳು ಕಾಣುತ್ತವೆ. ಕನ್ನಡ ಸಣ್ಣ ಕಥೆಯ ವಸ್ತು ಮತ್ತು ತಂತ್ರದ ದೃಷ್ಟಿಯಿಂದ 0-0=0 ಕಥೆಯ ಚಾರಿತ್ರಿಕ ಮಹತ್ವವನ್ನು ಗುರುತಿಸದೆ ಮುಂದೆ ಸಾಗುವಂತಿಲ್ಲ. ನವೋದಯ ಮತ್ತು ಪ್ರಗತಿ ಶೀಲದಲ್ಲಿ ಸಾಮಾನ್ಯವಾಗಿರುವ ಪುಷ್ಟವಾದ ಕಥೆ, ನೇರ ನಿರೂಪಣೆಯ ರೀತಿ ಇದರಲಿಲ್ಲ. ನನಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಪ್ರಜ್ಞಾ ಪ್ರವಾಹ (Stream of consciousness) ತಂತ್ರವನ್ನು ಬಳಸಿರುವ ಪ್ರಥಮ ಸಣ್ಣ ಕಥೆ ಇದಾಗಿದೆ. ಸಣ್ಣ ಕಥೆಗೆ ಭಾವಗೀತಾತ ಕತೆಯನ್ನು ಒಳಗೊಳಿಸುತ್ತಿರುವ ಯತ್ನದಲ್ಲೂ ಹೊಸತನ ಕಾಣಿಸುತ್ತದೆ * ಎಂದ್ದಿದಾರೆ.

ಕನ್ನಡದ ಇನ್ನೊಬ್ಬ ವಿಮರ್ಶಕರಾದ ಡಾ॥ ಹಾ. ಮಾ. ನಾಯಕ ಅವರು ಹೊಸ ಗನ್ನಡದ ಗದ್ಯ ಶಿಲ್ಪಿಗಳಲ್ಲಿ ತ.ರಾ.ಸು. ಒಬ್ಬರು. ಇದು ತ.ರಾ.ಸು. ಅವರದೇ ಬರವಣಿಗೆ ಎಂದು ಖಚಿತವಾಗಿ ಗುರುತಿಸಲು ಸಾಧ್ಯವಾಗುವಷ್ಟು ಮಟ್ಟಿಗೆ ಅವರ ವಿಶಿಷ್ಟತೆಯಿದೆ, ಕಥೆಯ ಕುತೂಹಲ, ಪಾತ್ರ ಸೃಷ್ಟಿಯಲ್ಲಿನ ಖಚಿತತೆ, ಸನ್ನಿವೇಶಗಳ ಜ್ವಲಂತತೆಗಳನ್ನು ಅವರು ಅದ್ಭುತವಾಗಿ ನಿರ್ವಹಿಸಬಲ್ಲರು.

---

§ ಹೊಸಗನ್ನಡ ಸಾಹಿತ್ಯ ರೂಪಗಳು. ಪು. ೧೮೦, ಬೆಂಗಳೂರು ವಿಶ್ವವಿದ್ಯಾ ನಿಲಯ

* ಕನ್ನಡ ಸಣ್ಣ ಕಥೆಗಳು ಪ್ರಸ್ತಾವನೆ XII-XII ನ್ಯಾಷನಲ್ ಬುಕ್ ಟ್ರಸ್ಟ್

ಬದುಕಿನ ಹೃದಯ ಸ್ಪಂದನವನ್ನು ಅವರು ಯಶಸ್ವಿಯಾಗಿ ಕೇಳಿಸಬಲ್ಲರು. ಹೊರ ಜೀವನದ ಸಮಸ್ಯೆಗಳನ್ನು ಬಲ್ಲ ತ.ರಾ ಸು. ಮನಸ್ಸಿನ ಒಳ ಪದರಗಳನ್ನು ಸಮರ್ಥ ವಾಗಿ ಬಿಚ್ಚಿ ತೋರಿಸಬಲ್ಲರು' * ಎಂದಿದ್ದಾರೆ.

ಇವು ತ.ರಾ.ಸು. ಅವರ ಸಾಹಿತ್ಯದ ಕುರಿತು ಪ್ರಸಿದ್ಧ ವಿಮರ್ಶಕರ ಅಭಿಪ್ರಾಯಂಗಳು. ಅವರ ಸಾಹಿತ್ಯ ಭಾವಾವೇಶಕ್ಕೆ ಒಳಗಾಗುತ್ತದೆಯೆಂಬ ಆಕ್ಷೇಪಣೆಯೂ ಇದೆ. ಈ ಮಾತು ನಿಜವಿದ್ದರೂ ಒಂದು ಸನ್ನಿವೇಶವನ್ನು ಚಿತ್ರಿಸುವಾಗ ಭಾಷೆ, ಆವೇಶಕ್ಕೆ ಒಳಗಾಗುವುದು ಸಹಜವೇನೋ. ತ.ರಾ.ಸು. ಬದುಕನ್ನು ಅರ್ಥೈಸುವ ಬಗೆ, ಅದಕ್ಕೆ ನೀಡುವ ಸ್ವತಂತ್ರ ದೃಷ್ಟಿಕೋನ, ಬದುಕಿಗೆ ಹತ್ತಿರಗೊಳಿಸುವ ಕ್ರಿಯೆಯಲ್ಲಿ ಅವರ ಶೈಲಿ, ವಸ್ತು ವಿನ್ಯಾಸ, ತಂತ್ರ, ಸಂಭಾಷಣೆಗಳನ್ನು ಗಮನಿಸಿದಾಗ ತ.ರಾ.ಸು. ನವೋದಯದ ಬುನಾದಿಯಲ್ಲಿ ಪ್ರಗತಿ ಶೀಲ ಕಟ್ಟಡದಲ್ಲಿ ನಿಂತು ನವ್ಯದ ಧ್ವನಿ ಹೊರಡಿಸಿದ್ದಾರೆ ಎಂಬುದು ಸುಳ್ಳಲ್ಲ. ಇವರು ನವ್ಯಕಥೆ ಬರೆದಿದ್ದಾರೆ- ಇವರು ನವ್ಯಕವಿತೆ ಬರೆದುದುಂಟು, ಇವರ ಕಾದಂಬರಿಗಳಲ್ಲಿ ಹೊಸ ಹೊಸ ತಂತ್ರಗಳನ್ನು ಅಷ್ಟೇ ಸಹಜವೆನ್ನುವಂತೆ ಬಳಸಿದ್ದಾರೆ. ಇಂದು ನವ್ಯರು ಬಳಸಿದ ತಂತ್ರಗಳೆಲ್ಲ ತ.ರಾ.ಸು. ಅವರ ಕಥೆ-ಕಾದಂಬರಿಗಳಲ್ಲಿ ಇಂದೂ ಕಾಣಬಹುದು. ಅವರ ಬಿಡುಗಡೆಯ ಬೇಡಿ, ಹಂಸಗೀತೆ. ಆಕಸ್ಮಿಕ, ಅಪರಾಧಿ, ಚಂದವಳ್ಳಿಯ ತೋಟ, ಮುಂತಾದ ಅನೇಕ ಕಾದಂಬರಿಗಳಲ್ಲಿ ತ.ರಾ.ಸು. ಅವರು ಬಳಸಿದ ತಂತ್ರ ಗುರುತಿಸ ಬಹುದು. ಅವರು ತಮ್ಮ ಸಾವಿರಾರು ಪುಟದ ಸಾಹಿತ್ಯದಲ್ಲಿ ಚಿತ್ರಿಸಿದ ಪಾತ್ರಗಳು ಒಂದು ಇನ್ನೊಂದರ ಪಡಿಯಚ್ಚುಗಳಾಗಿ ಉಳಿದಿಲ್ಲ. ಅವು ಒಂದ ಕ್ಕೊಂದು ಭಿನ್ನ, ವೈವಿಧ್ಯ ಪೂರ್ಣ, ವೈಶಿಷ್ಟ್ಯ ಪೂರ್ಣವಾಗಿವೆ. ತ.ರಾ.ಸು. ಅವರ ಸಂಭಾಷಣೆಗಳು ಪಾತ್ರಗಳಲ್ಲಿ ಜೀವ ತುಂಬುತ್ತವೆ. ಒಂದು ಸನ್ನಿವೇಶವನ್ನು ಜೀವಂತ ಗೊಳಿಸುವಲ್ಲಿ, ಸ್ಫಟಿಕದ ಶಲಾಕೆಯಾಗಿ ಹೃದಯವನ್ನು ಗೆದ್ದುಕೊಳ್ಳುತ್ತವೆ. ಸಂಭಾಷಣೆಯಿಂದಲೇ ಒಂದು ಸನ್ನಿವೇಶವನ್ನು ಹೃದಯ ಸ್ಪರ್ಶಿಯಾಗಿ ನಿಲ್ಲಿಸುವ ಸಾಮರ್ಥ್ಯ ಲೇಖಕನಿಗಿದೆ.

ಒಬ್ಬ ಲೇಖಕ ಸಾಮಾಜಿಕ ಕಾದಂಬರಿಗಳನ್ನು ಬರೆದು ಯಶಸ್ವಿಯಾದರೆ ಆತ ಐತಿಹಾಸಿಕ, ಕಾದಂಬರಿಗಳಲ್ಲಿಯೂ ಅಷ್ಟೇ ಯಶಸ್ಸು ಸಂಪಾದಿಸುತ್ತಾನೆಂದು ಹೇಳಲು ಬರುವುದಿಲ್ಲ. ಆದರೆ ತ.ರಾ.ಸು. ಐತಿಹಾಸಿಕ, ಸಾಮಾಜಿಕ, ಪುರಾಣವಸ್ತುಗಳನ್ನಾ ಧರಿಸಿ ಬರೆದ ಕಾದಂಬರಿಗಳಲ್ಲೆಲ್ಲ ಯಶಸ್ಸಿನ ಮೆಟ್ಟಿಲುಗಳನ್ನೆಲ್ಲ ಏರುತ್ತಹೋಗಿದ್ದಾರೆ. ಇತಿಹಾಸದ ಒಂದು ಎಳೆಯನ್ನು ಹಿಡಿದು ಅವರು ಕಲ್ಪನಾ ಸಾಮರ್ಥ್ಯದಿಂದ ಚಿತ್ರ ದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಹತ್ತು ಕಾದಂಬರಿಗಳಲ್ಲಿ ನೂರಾರು ವಿಭಿನ್ನ ಪಾತ್ರಗಳನ್ನು, ಸನ್ನಿವೇಶಗಳನ್ನು ತಂದು ಇತಿಹಾಸಕ್ಕೆ ಜೀವಂತಿಕೆಯನ್ನು ಕೊಡಬಲ್ಲ ರಾದರೆ ಚಂದವಳ್ಳಿಯ ತೋಟ, ನಾಗರ ಹಾವು, ಕೇದಿಗೆವನದಂತಹ ಕಾದಂಬರಿಗಳಲ್ಲಿ

* ಸಮೀಕ್ಷೆ - ಪು - ೯೨ - ಗೀತಾ ಬುಕ್ ಹೌಸ್, ಮೈಸೂರು

ವಿವಿಧ ತಲೆ ಮಾರುಗಳ ಬದುಕಿನ ಪರಹು ತೆರೆದಿಡಬಲ್ಲರು. ಅಂತೆಯೇ ನಚಿಕೇತನ ಜೀವನಕ್ಕೆ ಸಂಬಂಧಿಸಿದ ಆಕಾಲದ ತತ್ವಜ್ಞಾನ, ಸತ್ಯಕಾಮ–ಜಾಬಾಲಿಯ ಕಾಲದ ಬದುಕಿನ ಸತ್ಯಗಳನ್ನು ಅವರು ಅಷ್ಟೇ ಸಮರ್ಥಶಾಲಿಯಾಗಿ ಚಿತ್ರಿಸಬಲ್ಲರು. ೪x೪= ೧ ಕಾದಂಬರಿಯ ಶೀರ್ಷಿಕೆಯೇ ಅರ್ಥಪೂರ್ಣವಾಗಿದೆ. ಇಡೀ ಕಾದಂಬರಿಯ ಭಾಷ್ಯವನ್ನು ಅದರ ಅರ್ಥಗಾಂಭೀರ್ಯವನ್ನು ತ.ರಾ.ಸು.ಈ ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಕಾವ್ಯಾತ್ಮಕವಾದ ಶೈಲಿಯಲ್ಲಿ ಬರೆದಿದ್ದಾರೆ. ಈ ಮೊದಲ ಅಧ್ಯಾಯ ಪೂರ್ಣದು ಅರ್ಥೈಸುವಲ್ಲಿ ಯಶಸ್ವಿಯಾದ ಓದುಗ ಕಾದಂಬರಿಯ ರಸಸ್ವಾದ ಮಾಡ ಬಹುದು. ತ.ರಾ.ಸು. ವಿಮರ್ಶಾ ಸಾಹಿತ್ಯದಲ್ಲಿ ಹೆಚ್ಚು ಕೈಯಾಡಿಸಿಲ್ಲ. ಆದರೆ ಒಬ್ಬ ಲೇಖಕನ ಕೃತಿಗಳನ್ನು ಪರಿಶೀಲಿಸಿ ಅದಕ್ಕೊಂದು ಪ್ರೌಢ ವಿಮರ್ಶೆಯನ್ನು ಬರೆದು ಅದೂ ಆ ಲೇಖಕ ಅ.ನ.ಕೃ. ಅವರ ಜೀವನ ಹಾಗೂ ಸಾಹಿತ್ಯದ ಕುರಿತು ಬರೆದ ಮಾತುಗಳು. ಅಂದಿನ ಅಭಿಪ್ರಾಯಗಳು ಇಂದಿಗೂ ಸತ್ಯವಾಗಿವೆಯೆಂದರೆ ತ.ರಾ.ಸು. ಅವರ ವಸ್ತುನಿಷ್ಠ ವಿಮರ್ಶೆಯ ಕಲ್ಪನೆ ಬರಬಹುದು. ಅ.ನ.ಕೃ. ಗ್ರಂಥದಲ್ಲಿ ರಾಯರ ಕುರಿತು ಗೌರವದ ಮಾತುಗಳೂ ಇರಬಹುದು. ಅದು ಸಹಜ. ಆದರೆ ಕಾದಂಬರಿಯ ಪಾತ್ರಗಳನ್ನು ವಿಶ್ಲೇಷಿಸುವಾಗ ತ.ರಾ.ಸು. ಅವರು ತಮ್ಮ ಅಭಿಪ್ರಾಯವನ್ನು ಒಂದೆರಡು ಸಾಲುಗಳಲ್ಲಿಯೇ ಸೆಳೆಮಿಂಚಿನಂತೆ ತಂದು ಬಿಡುತ್ತಾರೆ. ಅವು ಅತ್ತಿತ್ತ ವಾಲುವ ಅಭಿಪ್ರಾಯಗಳಾಗದೆ ಖಚಿತವಾದ ಅಭಿಪ್ರಾಯಗಳಾಗುತ್ತವೆ.

ತ.ರಾ.ಸು. ಮುದ್ದಾಂ ಸಾಹಿತಿಗಳಲ್ಲ. ಅವರಿಗೆ ಏನಾದರೂ ಗೀಚಲೇ ಬೇಕು ಎಂಬ ಹಠವಿಲ್ಲ. ದಿನ ನಿತ್ಯವೂ ಅಷ್ಟಿಷ್ಟು ಬರೆದು ಬಿಸಾಕಲೇಬೇಕೆಂಬ ನಿರ್ಬಂಧಕ್ಕೂ ಅವರು ಒಳಗಾಗುವುದಿಲ್ಲ. ಬರೆಯಬೇಕು ಎಂದು ಅನಿಸಿದರೆ ಹಗಲು ರಾತ್ರಿಗಳ ಪರಿವೆಯಿಲ್ಲದೆ, ಊಟ–ನಿದ್ರೆಗಳ ಯೋಚನೆಯಿಲ್ಲದೆ ಒಂದೇ ಸುತ್ತಿನಲ್ಲಿ ಬರೆದ ಅಕ್ಷರ ವನ್ನು ಅಳಿಸದೆ, ಬರೆದುದನ್ನು ಪ್ರತಿ ಮಾಡುತ್ತ ಮಾಡುತ್ತ ಭಟ್ಟಿಯಿಳಿಸದೆ, ಗಟ್ಟಿತನ ತೂರಿಕೊಳ್ಳದೆ ಬರೆದು ಮುದ್ರಣಾಲಯಕ್ಕೆ ಕಳಿಸಿಬಿಡುತ್ತಾರೆ. ಕೆಲವೊಮ್ಮೆ ದೋಷ ಗಳು ನುಸುಳಬಹುದು.ಆದರೆ ಬರೆವಣಿಗೆಯಲ್ಲಿ ಈ ಕ್ರಮವೇ ಉಚಿತವಾದುದು.ಪ್ರತಿ ಮಾಡುತ್ತ ಹೋದಂತೆ ಮೂಲಕೃತಿಯ ರೂಪವೇ ಬದಲಾಗಬಹುದು. ಕಳೆದ ಹತ್ತು ವರ್ಷಗಳಲ್ಲಿ ತ.ರಾ.ಸು. ಎರಡೇ ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಸಾವಿರಾರು ಗ್ರಂಥಗಳನ್ನು ಓದಿದ್ದಾರೆ. ಅವರ ಇತ್ತೀಚೆಗೆ ಬರೆದ 'ದುರ್ಗಾಸ್ತಮಾನ' ಎಂಬ ಬೃಹತ್ ಐತಿಹಾಸಿಕ ಕಾದಂಬರಿ ಕೇವಲ ಎರಡೇ ತಿಂಗಳುಗಳಲ್ಲಿ, ತಮ್ಮ ಅನಾರೋಗ್ಯವನ್ನೂ ಗಮನಿಸದೆ, ತಾವೇ ಕುಳಿತು ಬರೆದಿದ್ದಾರೆ. ಇದು ತ.ರಾ.ಸು. ಪ್ರತಿಭೆಗೆ ಮಾತ್ರ ಸಾಧ್ಯ. ಕಳೆದ ಹನ್ನೆರಡು ವರ್ಷಗಳಿಂದ ಅವರು ಅದ್ವೈತ ಮತ ಸ್ಥಾಪಕ ಶ್ರೀ ಶಂಕರಾಚಾರ್ಯರನ್ನು ಕುರಿತು ಕಾದಂಬರಿ ಬರೆಯಬೇಕೆಂದುಕೊಂಡು ಅಧ್ಯಯನದಲ್ಲಿ ತೊಡಗಿದ್ದಾರೆ. ಅದಕ್ಕೆ ಅವರು ಕಾಲಡಿ. ಉಡುಪಿ, ಶೃಂಗೇರಿಗಳಿಗೆ ಸುತ್ತಾಡಿ ಅಲ್ಲಿನ ದಾಖಲೆಗಳನ್ನು ಪರಿಸರವನ್ನು ಪರಿಶೀಲಿಸಿ ಇಂಗ್ಲಿಷ್, ಕನ್ನಡ

ಮಳೆಯಾಳಂ ಸಂಸ್ಕೃತ ಮೊದಲಾದ ಭಾಷೆಯ ಸಾಹಿತ್ಯವನ್ನು ಅಭ್ಯಸಿಸುತ್ತಿದ್ದಾರೆ ತಮಗೆ ಬಂದ ಸಂದೇಹಗಳನ್ನು ಪಂಡಿತರೊಂದಿಗೆ ಚರ್ಚಿಸಿದ್ದಾರೆ. ಅವರ ಕಣ್ಣ ಮುಂದೆ ಒಂದು ಸ್ಪಷ್ಟಚಿತ್ರ ಮೂಡಿ ನಿಲ್ಲುವವರೆಗೆ ಅವರು ಬರೆಯ ತೊಡಗುವುದಿಲ್ಲ ತ.ರಾ.ಸು. ಅವರು ಕೇವಲ ಕಲ್ಪನೆಯ ಸೊಗಸಾಗಿ, ಭಾವನೆಯ ಭಾರದಿಂದ, ಕಟ್ಟು ಕಥೆಗಳನ್ನೆಲ್ಲ ನಂಬಿ ಚಿತ್ರಿಸುವುದಿಲ್ಲ. ಅಲ್ಲಿ ಅವರಿಗೆ ವೈಚಾರಿಕ, ವೈಜ್ಞಾನಿಕ ವಿಶ್ಲೇಷಣೆ ಬೇಕು. ಮಾನಸಶಾಸ್ತ್ರ,ಶಾಸನ, ಐತಿಹಾಸಿಕ ದಾಖಲೆಗಳೆಲ್ಲವರ ಅಧ್ಯಯನ ಬೇಕು. ಅದಕ್ಕಾಗಿ ಅವರು ಸತತ ಚಿಂತನೆ ಮಾಡುತ್ತಾರೆ. ಇಂದಿನ ಸಂದರ್ಭದಲ್ಲಿ ತ.ರಾ.ಸು. ಸಾಹಿತ್ಯ ಕೊಂಚ ಭಿನ್ನವಾಗಿ ಕಾಣಬಹುದು. ಆದರೆ ಅವರು ಬದುಕಿನ ಕಾಲ, ಓದಿದ ಸಾಹಿತ್ಯ, ಜೀವನಾನುಭವ, ಒಪ್ಪಿಕೊಂಡ ಸತ್ಯಗಳನ್ನು ಗಮನಿಸಿದಾಗ ಅನ್ಯರ ದಾರಿ ತ.ರಾ.ಸು. ಅವರೂ ತುಳಿಯಬೇಕಂ ಎಂದು ಅಪೇಕ್ಷಿಸುವುದು ಸಮಂಜಸವಲ್ಲ. ಅವರವರು ನಂಬಿದ ಮೌಲ್ಯಗಳು ಅವರನ್ನು ಮುಂದುವರಿಸುತ್ತವೆ.

ಪ್ರಗತಿಶೀಲರು ನಾಸ್ತಿಕರಲ್ಲ ಎಂದು ಒಂದು ಸಂದರ್ಭದಲ್ಲಿ ಅ.ನ.ಕೃ. ಅವರೇ ಸ್ಪಷ್ಟ ಪಡಿಸಿದ್ದಾರೆ. ಹೀಗೆಂದ ಮಾತ್ರಕ್ಕೆ ಪ್ರಗತಿಶೀಲರೆಲ್ಲ ಮೂಢನಂಬಿಕೆಗಳನ್ನು, ಮತಾಚಾರಗಳನ್ನು ಚಾತುರ್ವಣ್ಯ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಾರೆ, ಎಂದು ಭಾಷ್ಯ ಬರೆಯುವುದಂ ಅಷ್ಟು ಸಮರ್ಪಕವಲ್ಲ. ತ.ರಾ.ಸು. ಅವರನ್ನು, ಅ.ನ.ಕೃ. ಅವರನ್ನು ತೀರ ಹತ್ತಿರದಿಂದ ಬಲ್ಲ ನಾನು ಅವರು ಜಾತೀಯತೆಯಿಂದ ನರಳಿದು-ದನ್ನು ನೋಡಿಲ್ಲ. ಕಂಡ ಕಂಡ ಬಾಬಾಗಳ ಹಿಂದೆ ಹೋದುದನ್ನು ನೋಡಿಲ್ಲ. ಅನೇಕ ಬಾರಿ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಬೂಟಾಟಿಕೆ, ಕಪಟ, ವಂಚನೆ, ಅಸಂಬದ್ಧ ಆಚರಣೆಗಳನ್ನು ನೋಡಿ ಕೆರಳುತ್ತಾರೆ.ತ.ರಾ.ಸು. ಜೋತಿಷ್ಯ ನಂಬುತ್ತಾರೆ. ಜೋತಿಷ್ಯ ಶಾಸ್ತ್ರದ ನೂರಾರು ಗ್ರಂಥಗಳನ್ನು ಓದಿ, ತಜ್ಞರನ್ನು ಕಂಡು, ಕಳೆದ ೨೦ ವರ್ಷಗಳಿಂದ ಅದೊಂದು ಹವ್ಯಾಸವೆಂದು ಅಧ್ಯಯನದಲ್ಲಿ ತೊಡಗಿ ಇಂದು ನಿಖರ ಜ್ಯೋತಿಶ್ಯಾಸ್ತ್ರದ ಒಳಿತು ಕೆಡಕುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಸಾಮರ್ಥ್ಯ ಅವರಿಗುಂಟು.

ತ.ರಾ.ಸು. ಓದುವುದು ಹೆಚ್ಚು, ಬರೆಯುವುದು ಕಡಿಮೆ. ಓದು ಕೇವಲ ಸಾಹಿತ್ಯಕ್ಕೆ ಸೀಮಿತವಾದುದಲ್ಲ. ತಂತ್ರ ಶಾಸ್ತ್ರ, ವಿಜ್ಞಾನ, ವಾಸ್ತುಶಿಲ್ಪ, ಶಾಸನ ಜೋತಿಷ್ಯ, ಇತಿಹಾಸ, ಕಲೆ, ಸಂಗೀತ, ರಂಗ ಭೂಮಿ, ಸಮಾಜ ಶಾಸ್ತ್ರ ಹೀಗೆ ಅವರ ಓದಿನ ಮುಖ ಒಂದಲ್ಲ-ಹಲವು. ಅಂತೆಯೇ ಅವರ ಅಭಿರುಚಿಯೂ ವ್ಯಾಪಕ. ಅವರು ವರ್ಣ ಚಿತ್ರಗಳನ್ನು ಕಲೆ ಹಾಕುತ್ತಾರೆ. ಪ್ರಕೃತಿ ಸೌಂದರ್ಯದಿಂದ ಕೂಡಿದ ಭಾವ ಚಿತ್ರಗಳನ್ನು ಸೆರೆ ಹಿಡಿಯುತ್ತಾರೆ. ಪುಸ್ತಕ ಪತ್ರಿಕೆಗಳನ್ನು ಕಲೆ ಹಾಕುವುದಂತೂ ಇದ್ದೇ ಇದೆ. ಅವರ ಮನೆಯ ಮುಂದೆ ಗುಲಾಬಿಯ ತೋಟವಿದೆ. ಬಗೆ ಬಗೆಯ ಬಣ್ಣ ಬಣ್ಣದ ಗುಲಾಬಿಗಳು ಅಲ್ಲಿ ಅರಳಿ ಮನವನು ಮುದಗೊಳಿಸುತ್ತವೆ. ಮನೆಯ

ಹೆಬ್ಬಾಗಿಲ ಬಳಿ ಹಬ್ಬಿಸಿದ ಹೂ ಬಳ್ಳಿ, ಬಿರು ಪರಿಮಳದಿಂದ ಪರಿಸರವನ್ನು ಘಮ ಘಮಿಸುವಂತೆ ಮಾಡುವ ಸಂಪಿಗೆ ಮರ, ಸ್ನಿಗ್ಧ ಸುಗಂಧದ ಮಲ್ಲಿಗೆ ತ.ರಾ.ಸು. ಅವರ ಸೌಂದರ್ಯ ಪ್ರಜ್ಞೆ ಸಾರುತ್ತವೆ. ಅವರ ಮನೆ 'ಗಿರಿಕನ್ಯಕ' ಪ್ರವೇಶಿಸುತ್ತಿದ್ದಂತೆ ಬಲಗಡೆಗೆ ತೂಗು ಹಾಕಿದೆ; ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರ ಅಪೂರ್ವ ತೈಲ ಚಿತ್ರ, ಅಧ್ಯಯನದ ಕೋಣೆಯಲ್ಲಿ ದೊಡ್ಡ ವರ್ಣ ರಂಜಿತ ಶಂಕರಾಚಾರ್ಯರ ಚಿತ್ರ, ಇನ್ನೊಂದು ಕಡೆ ಕನ್ನಡಕ್ಕಾಗಿಯೇ ಮಡಿದ ಅ. ನ. ಕೃ. ಅವರ ವರ್ಣ ಚಿತ್ರ, ಮಿಕ್ಕೆಲ್ಲ ಕಡೆ ಪ್ರಕೃತಿ ಸೌಂದರ್ಯ ಪ್ರತಿಬಿಂಬಿಸುವ ವರ್ಣ ಚಿತ್ರಗಳು, ತ.ರಾ.ಸು. ಅಭಿರುಚಿಗೊಂದು ಸಾಕ್ಷಿಯಾಗುತ್ತವೆ. ತ.ರಾ.ಸು. ಶಾಸ್ತ್ರೀಯ ಸಂಗೀತ ಪ್ರಿಯ. ಸಂಗೀತ ದಿಗ್ಗಜರ ಧ್ವನಿ ಮುದ್ರಿಕೆಗಳು ಅವರಲ್ಲಿವೆ. ಒಮ್ಮೊಮ್ಮೆ ಅವರು ಈ ನಾದಲೋಕದಲ್ಲಿ ಮೈಮರೆತು ಕುಳಿತುಬಿಡುತ್ತಾರೆ. ಬೇಸರ ಬಂದರೆ ಮನೆಯವರೊಂದಿಗೆ ಪಗಡೆಯಾಡುತ್ತಾರೆ.

ತ.ರಾ.ಸು. ಅವರ ಬದುಕಿಗೊಂದು ಶಿಸ್ತು, ಸಂಯಮ, ಮೆರಗು ನೀಡಿದವರು ಅ.ನ.ಕೃ., ಸಿದ್ಧವನಹಳ್ಳಿ ಕೃಷ್ಣಶರ್ಮ, ಹಾಗೂ ಬಿ. ಎನ್. ಗುಪ್ತ. ಬರೆವಣಿಗೆಯಲ್ಲಿ ಅಚ್ಚುಕಟ್ಟುತನ ಕೃಷ್ಣಶರ್ಮರಿಂದ ಕಲಿತಿದ್ದಾರೆ. ಜ್ಞಾನ ಕ್ಷಿತಿಜ ವಿಸ್ತರಿಸಲು ಬೇಕಾಗುವ ಅಧ್ಯಯನ, ಮನನ ಮಾಡುವ ಕ್ರಮ, ಚಿಂತನೆಯ ದಾರಿ ತೋರಿದವರು ಕೃಷ್ಣರಾಯರು. ವ್ಯಾಪಕವಾದ ಓದು, ಅದನ್ನು ಪತ್ರಿಕಾ ರಂಗದಲ್ಲಿ ಅಳವಡಿಸಿದ ಕ್ರಮಗಳನ್ನು, ಅಚ್ಚುಕಟ್ಟುತನ, ಮಿತವ್ಯಯಗಳನ್ನು ಬಿ. ಎನ್. ಗುಪ್ತರಿಂದ ಕಲಿತರು. ಇದಲ್ಲದೆ ಅಂದಿನ ಸ್ವಾತಂತ್ರ್ಯ ಹೋರಾಟಗಾರರೂ, ಕವಿಗಳೂ, ದಾರ್ಶನಿಕರೂ, ಸಿದ್ಧ ಪುರುಷರೂ ಇವರ ಮೇಲೆ ಪ್ರಭಾವ ಬೀರಿದ್ದಾರೆ.

ತ.ರಾ.ಸು. ಅವರದು ಸಾಹಿತಿಗಳ ಮನೆತನ. ಅವರ ಅಜ್ಜ ಸುಬ್ಬಣ್ಣ ಪ್ರಸಿದ್ಧ ಆಶುಕವಿ. ಅವರ ದೊಡ್ಡಪ್ಪ ಕನ್ನಡದ ಅಶ್ವಿನಿ ಕುಮಾರರಲ್ಲಿ ಒಬ್ಬರೆನಿಸಿದ ತಳುಕಿನ ವೆಂಕಣ್ಣಯ್ಯ, ಚಿಕ್ಕಪ್ಪ ತ. ಸು. ಶಾಮರಾಯ, ಸೋದರ ಮಾವ ಪ್ರಸಿದ್ಧ ಪ್ರಹಸನ ಕಾರರಾದ, ಕ್ಷೀರ ಸಾಗರರೆಂದು ಖ್ಯಾತರಾದ ಬಿ. ಎಸ್. ಶಾಸ್ತ್ರಿ. ಇಂಥ ಪರಂಪರೆಯಲ್ಲಿ ಹುಟ್ಟಿದ್ದರೂ ತ.ರಾ.ಸು. ಭಿನ್ನರಾಗಿ ಬೆಳೆದಿದ್ದಾರೆ.

ಕೆಲವರು ಅ.ನ.ಕೃ. ಮತ್ತು ತ.ರಾ.ಸು. ಅವರನ್ನು ಹೋಲಿಸುವುದುಂಟು. ಸಾಹಿತಿ, ಕಲಾವಿದರು, ಸಂಗೀತಕಾರ, ಚಿತ್ರಕಾರರನ್ನು ಪರಸ್ಪರ ಹೋಲಿಸುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಅ.ನ.ಕೃ. ಆಯ್ದುಕೊಂಡ ಕೆಲವು ವಸ್ತುಗಳನ್ನೇ ತ.ರಾ.ಸು. ಆಯ್ದುಕೊಂಡಿದ್ದರೂ, ಇಬ್ಬರೂ ಪ್ರಗತಿ ಶೀಲ ಪಥದಲ್ಲಿಯೇ ಹೆಜ್ಜೆಯಿಕ್ಕಿದ್ದರೂ, ಹೊರ ನೋಟದಲ್ಲಿ ಇಬ್ಬರಲ್ಲೂ ಪರಸ್ಪರ ಸೌಮ್ಯ ಕಾಣಬಹುದಾದರೂ ಇಬ್ಬರೂ ಸ್ವಂತಂತ್ರವಾಗಿ ಬದುಕಿದ್ದಾರೆ. ಸ್ವತಂತ್ರವಾಗಿ ಬೆಳೆದಿದ್ದಾರೆ. ಇಲ್ಲಿ ಒಬ್ಬರು ಮೇಲು, ಇನ್ನೊಬ್ಬರು ಕೀಳು ಎಂದು ವಿಶ್ಲೇಷಿಸುವುದು ಸತ್ಯಕ್ಕೆ ಅಪಚಾರವೆಸಗಿದಂತೆ.

ಅ.ನ.ಕೃ. ಬರೆವಣಿಗೆಯ ಸೊಗಸು, ಸೌಂದರ್ಯ ಬೇರೆ. ತ.ರಾ.ಸು. ಅವರ ಬರೆವಣಿಗೆಯ ಆವೇಶ, ಆಯಾಮಗಳು ಬೇರೆ. ಎರಡಕ್ಕೂ ತನ್ನದೇ ವೈಶಿಷ್ಟ್ಯವಿದೆ. ಖಚಿತ ನಿಲುವು ಇದೆ. ಒಬ್ಬೊಬ್ಬರಿಗೆ ಒಂದೊಂದು ಬಗೆಯ ಬರೆವಣಿಗೆ ಹಿಡಿಸಬಹುದು. ಕಾರಂತರ ಬರೆವಣಿಗೆ ಮೆಚ್ಚುವವರು ಭೈರಪ್ಪನವರ ಬರೆವಣಿಗೆ ಮೆಚ್ಚುತ್ತಾರೆಂದೇನಿಲ್ಲ. ಅದು ಅವರವರ ಆಸಕ್ತಿ, ಅಭಿರುಚಿ, ಸಂಸ್ಕಾರಗಳನ್ನವಲಂಬಿಸಿದ ಮಾತು. ತ. ರಾ. ಸು. – ಅ. ನ. ಕೃ. ಇಬ್ಬರೂ ಪ್ರಗತಿ ಶೀಲ ಸಾಹಿತ್ಯಾಕಾಶದಲ್ಲಿ ಎರಡು ಧ್ರುವಗಳಿದ್ದಂತೆ. ಇವರು ಆಕಸ್ಮಿಕವಾಗಿ ಮೂಡಿ ಮಾಯವಾಗುವ ಧೂಮಕೇತುಗಳಂತಲ್ಲ. ಒಬ್ಬರು ಇನ್ನೊಬ್ಬರ ಕಾರ್ಬನ ಕಾಪಿಯಾಗಬೇಕು ಎಂದು ಬಯಸುವುದು ಅನುಚಿತ. ಅ.ನ.ಕೃ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಯುಗವನ್ನು ತೆರೆದರೆ ಆ ಯುಗದಲ್ಲಿ ತ.ರಾ.ಸು. ಪ್ರಮುಖ ಕೃತಿಕಾರರಾಗುತ್ತಾರೆಂಬುದು ನಿಸ್ಸಂದೇಹ.

'ಬರೆದು ಬದುಕುತ್ತೇನೆ' ಎಂದು ಕನ್ನಡದ ಮಟ್ಟಿಗೆ ಹೇಳುವುದು ಒಣ ಜಂಬದ ಮಾತು ಆಗಬಹುದು. ಆದರೆ ಅ.ನ.ಕೃ., ಕಾರಂತ, ತ.ರಾ.ಸು. ಬರೆದು ಬದುಕಿದ್ದಾರೆ ಎಂದು ಹೇಳಿದರೆ ಮುಂದೆ ಅದೊಂದು ದಾಖಲೆಯಾಗಬಹುದು. ಇಂಗ್ಲೀಷಿನ ವ್ಯಾಮೋಹದಿಂದ ಕನ್ನಡ ವಾಚಕವೃಂದ ಕನ್ನಡ ಕೃತಿಕಾರರನ್ನು ತಿರಸ್ಕಾರದಿಂದ ನೋಡುವ ಕಾಲದಲ್ಲಿ ಸಂಪ್ರದಾಯದ ಸೆರೆಮನೆಯಲ್ಲಿ ಕನ್ನಡ ಸಾಹಿತ್ಯ ಬಿದ್ದು ಒದ್ದಾಡುತ್ತಿದ್ದಾಗ, ಪ್ರಗತಿಶೀಲ ಪಂಥದ ತೋಳತೆಕ್ಕೆಯಲ್ಲಿ ಅ.ನ.ಕೃ., ತ.ರಾ.ಸು. ಬಿಡುವಿಲ್ಲದೆ ಬರೆದು, ಬರೆದು, ಕಡೆಯ ತನಕ ಬರೆಯುತ್ತ ಬದುಕಿದವರು ಎಂಬುದು ಸಣ್ಣ ಮಾತೇನಲ್ಲ. ಹೊಟ್ಟೆಯ ಪಾಡಿಗೆ ವೃತ್ತಿಯೊಂದು ಇದ್ದಾಗ ದೊಡ್ಡ ದೊಡ್ಡ ವೇದಾಂತ, ಸಿದ್ಧಾಂತ, ಉಪದೇಶಗಳನ್ನು ಮಂಡಿಸುವುದು ಮಹಾ ಸಾಧನೆಯೇನೂ ಅಲ್ಲ. ಬರೆವಣಿಗೆಯನ್ನೇ ಜೀವನೋಪಾಯದ ಸಾಧನವಾಗಿ ತೆಗೆದುಕೊಂಡಾಗ ಸಾಹಿತಿಯಾದವನು ಹೆಚ್ಚಿನ ಜವಾಬ್ದಾರಿ ವಹಿಸಬೇಕಾದುದು ಅಗತ್ಯ, ಅನಿವಾರ್ಯ ಕೂಡ. ಕೆಲವು ವೇಳೆ ಜೊಳ್ಳು ಕೃತಿಗಳು– ಹೊಟ್ಟೆ ಪಾಡಿಗಾಗಿ ಬರೆದ ಕೃತಿಗಳು ಬರುವುದು ಸಾಧ್ಯ. ಆದರೆ ಇದರಿಂದ ಅವರು ಬರೆದುದೆಲ್ಲ ಸಾಹಿತ್ಯವಲ್ಲ, ಅದಕ್ಕೇನು ಮೌಲ್ಯವಿಲ್ಲವೆಂದು ಹೇಳುವುದು ಅವರ ಒಳ್ಳೆಯ ಕೃತಿಗಳಿಗೆ ಬಗೆಯುವ ಅಪಚಾರವೆನ್ನಬಹುದು. ಆಗ ಅಂಥ ವಿಮರ್ಶೆಯೇ ಮೌಲ್ಯ ಕಳೆದುಕೊಳ್ಳುವ ಅಪಾಯವುಂಟು. ತ.ರಾ.ಸು. ಅವರು ಚಿತ್ರಿಸಿದ ಕಾದಂಬರಿ ಪಾತ್ರಗಳ ವೈವಿಧ್ಯವೇನು, ಸನ್ನಿವೇಶಗಳನ್ನು ಚಿತ್ರಿಸುವಲ್ಲಿ ತೋರಿದ ಜಾಣ್ಮೆಯೇನು, ಸಂಭಾಷಣೆಗಳಲ್ಲಿ, ನಿರೂಪಣೆಯಲ್ಲಿ ತೋರಿದ ಪ್ರತಿಭೆಯೇನು, ಭಾಷೆಯ ಬಳಕೆಯಲ್ಲಿ ವೈಶಿಷ್ಟ್ಯವೇನು ಎಂದು ಗುರುತಿಸಿದಾಗ ಮಾತ್ರ ತ.ರಾ.ಸು.ಕೃತಿಗಳ ರಸಾಸ್ವಾದನೆಗೆ ಅವಕಾಶವಾಗುತ್ತದೆ. ಸ್ಥಾನ ಬಲವಿಲ್ಲದೆ, ಅಧಿಕಾರಬಲವಿಲ್ಲದೆ, ಧನಬಲವಿಲ್ಲದೆ ಕೇವಲ ವಾಚಕ ಬಲವನ್ನೇ ನಂಬಿ ಹತ್ತಿರ ಹತ್ತಿರ ನೂರು ಕೃತಿಗಳನ್ನೂ ಬರೆದು ಇಂದಿಗೂ ಜನಪ್ರಿಯತೆಯನ್ನೂ. ವಿಮರ್ಶಕರ ಮೆಚ್ಚುಗೆಯನ್ನು ಉಳಿಸಿಕೊಂಡವರು ತ.ರಾ.ಸು.

ತ.ರಾ.ಸು. ಸಮಕಾಲೀನ ಬದುಕಿನೊಂದಿಗೆ ಸ್ಪಂದಿಸುತ್ತಾರೆ. ಅವರು ಬದುಕಿಗೆ ವಿಮುಖರಾಗಿ ನಿಂತು, ಕೇವಲ ಕಲ್ಪನೆಯ ಕಣ್ಣುಗಳಿಂದ ಬದುಕಿನ ಶೃಂಗಾರವನ್ನಷ್ಟೇ ವರ್ಣಿಸಿ, ನಾಲ್ಕು ಗೋಡೆಗಳಾಚೆ ಹೋಗದೆ ಉಪದೇಶಗಳ ದೊಡ್ಡ ದೊಡ್ಡ ಮಾತುಗಳನ್ನು ಗಿಡಿಯುವುದಿಲ್ಲ. ಅವರು ಜೀವನವನ್ನು ಹತ್ತಿರದಿಂದ ನಿರೀಕ್ಷಿಸುತ್ತಾರೆ. ಆಗು–ಹೋಗುಗಳನ್ನು ಗುರುತಿಸುತ್ತಾರೆ. ಅವರ ಸಾಹಿತ್ಯದಲ್ಲಿ ಈ ಗುಣವನ್ನು ಕಾಣಬಹುದು.

ತ.ರಾ.ಸು.ರವರ ಅನೇಕ ಕಾದಂಬರಿಗಳು ಪಠ್ಯಪುಸ್ತಕಗಳಾಗಿವೆ,ಚಲನ ಚಿತ್ರಗ–ಳಾಗಿ ರಜತ ಪರದೆಯ ಮೇಲೂ ಯಶಸ್ವಿಯಾಗಿದೆ. ಇವರ 'ಹಂಸಗೀತೆ' ಹಿಂದೀ ಭಾಷೆಯಲ್ಲಿ 'ಬಸಂತ ಬಹಾರ' ಎಂಬ ಹೆಸರಿನಿಂದ ರಾಷ್ಟ್ರ ಪ್ರಶಸ್ತಿ ಪಡೆಯಿತು. ಅನಂತರ ಇಪ್ಪತ್ತು ವರ್ಷಗಳ ಮೇಲೆ ಅದೇ 'ಹಂಸ ಗೀತೆ' ಕನ್ನಡದಲ್ಲಿ ಬಂದಿದೆ. ನಾಗರಹಾವು ಕನ್ನಡದಲ್ಲಿ ಯಶಸ್ವಿಯಾಯಿತಷ್ಟೇ ಅಲ್ಲ, ಹಿಂದಿಯಲ್ಲೂ ಅದು 'ಜಹರಿಲಾ ಇನ್‌ಸಾನ' ಎಂದು ಹೆಸರಿನಿಂದ ಪ್ರಸಿದ್ಧವಾಯಿತು. ಇವರ ಇತರ ಕಾದಂಬರಿಗಳಾದ ಚಂದವಳ್ಳಿಯ ತೋಟ, ಚಂದನದ ಗೊಂಬೆ, ಮಾರ್ಗದರ್ಶಿ ಮೊದಲಾದ ಕಾದಂಬರಿಗಳು ತೆರೆ ಕಂಡಿವೆ; ಅಪಾರ ಜನಪ್ರಿಯತೆಯನ್ನೂ ಪಡೆದಿವೆ.

ಅವರು ಸಿದ್ಧವನಹಳ್ಳಿ ನಿಜಲಿಂಗಪ್ಪನವರ ನೇತೃತ್ವದಲ್ಲಿ ನಡೆದ ಭಾರತೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದರು. 1937 ರಿಂದ 1942 ರವರೆಗೆ ಶಿವಪುರದ ಧ್ವಜ ಸತ್ಯಾಗ್ರಹ, ಚಲೇ ಜಾವ್ ಚಳುವಳಿ, ಅರಣ್ಯ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಜೈಲಿನ ರುಚಿ ಕಂಡಿದ್ದಾರೆ.

ಪ್ರಗತಿಶೀಲ ಚಳುವಳಿಯನಂತರ ಕನ್ನಡಿಗರನ್ನು ಜಾಗೃತಗೊಳಿಸಲು ಅ.ನ.ಕೃ ನೇತೃತ್ವದಲ್ಲಿ ಆರಂಭವಾದ 'ಸಂಯುಕ್ತರಂಗ'ದ ಕನ್ನಡ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ತ.ರಾ.ಸು. ನಾಡು ನುಡಿಯ ಅಭಿಮಾನದಿಂದ ದುಡಿದಿದ್ದಾರೆ. ಕೆಲಕಾಲ ಮೈಸೂರಿನಲ್ಲಿ ಕನ್ನಡ ಪಕ್ಷದ ಅಧ್ಯಕ್ಷರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೇಟ ಸದಸ್ಯರಾಗಿ, ಮೈಸೂರು ಮುನಿಸಿಪಾಲಿಟಿಯ ಕೌನ್ಸಿಲ್‌ರಾಗಿ ದುಡಿದು ಜನತೆಯ ಸಮಸ್ಯೆಗಳನ್ನು ತಿಳಿದುಕೊಂಡಿದ್ದಾರೆ.

ಇವರ ಸಾಹಿತ್ಯ ಸೇವೆಯನ್ನನುಲಕ್ಷಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ 1974ರಲ್ಲಿ ಪ್ರಶಸ್ತಿ ನೀಡಿ ಗೌರವಸಿತು. ಕರ್ನಾಟಕ ಸರಕಾರ ಅವರಿಗೆ 500 ರೂ. ಮಾಸಾಶನ ನೀಡುತ್ತಿದೆ. 1954 ರಲ್ಲಿ ಚಂದವಳ್ಳಿಯ ತೋಟ ಚಲನ ಚಿತ್ರದ ಉತ್ತಮ ಸಾಹಿತ್ಯಕ್ಕೆ ಕನ್ನಡ ಚಲನಚಿತ್ರ ಪ್ರೇಮಿಗಳ ಸಂಘದ 'ಶ್ರೇಷ್ಠ ಸಾಹಿತಿ' ಪುರಸ್ಕಾರ, ರಾಜ್ಯ ಸರಕಾರದ ಚಲನಚಿತ್ರ ಸಂಸ್ಥೆಯ ಶ್ರೇಷ್ಠ ಕಾದಂಬರಿ ಪ್ರಶಸ್ತಿ, 'ನಾಗರ ಹಾವು' ಗೆ 1980 ರಲ್ಲಿ 'ಶಿಲ್ಪಶ್ರೀ' ಗೆ ಶ್ರೀಗೋಮಟೇಶ್ವರ ಪುರಸ್ಕಾರ, ಇದೇ

ವರ್ಷ ಬೆಂಗಳೂರು ದಕ್ಷಿಣ ಲಯನ್ಸ್ ಸಂಸ್ಥೆಯು 'ಚಂದನದ ಗೊಂಬೆ' ಕಾದಂಬರಿಗೆ ಸಾಹಿತ್ಯ ಪ್ರಶಸ್ತಿ, ಲಭಿಸಿವೆ. ಇದಲ್ಲದೆ ಕನ್ನಡ ನಾಡಿನ ಅನೇಕ ಸಂಘ ಸಂಸ್ಥೆಗಳು ತ.ರಾ.ಸು. ಕರೆಯಿಸಿ ಮಾನಪತ್ರ ನೀಡಿ ಸನ್ಮಾನಿಸಿವೆ. ಇಷ್ಟಾದರೂ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಇವರ ಹೆಸರು ತಿಳಿದಿಲ್ಲವೇನೋ ! ನಾಡಿನಲ್ಲಿ ಐದು ವಿಶ್ವ ವಿದ್ಯಾನಿಲಯಗಳಿದ್ದರೂ ಗೌರವ ಡಾಕ್ಟರೇಟಿಗೂ ಅವರ ಹೆಸರು ಶಿಫಾರಸು ಮಾಡಿಲ್ಲ. ಪ್ರಜಾಪ್ರತಿನಿಧಿಗಳೆಂದು ಆಯ್ಕೆಯಾದ ಮಹನೀಯರು ಸಾಹಿತ್ಯ ಸಂಸ್ಕೃತಿ ಗಳು ತಮಗೆ ಸಂಬಂಧಿಸಿದ್ದಲ್ಲವೆಂದು ತಿಳಿಯಬಾರದು. ಕನ್ನಡ ನಾಡು–ನುಡಿಯ ಬಗೆಯ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ದುಡಿದ ತ.ರಾ.ಸು. ಅಂಥವರಿಗೆ ಪದ್ಮಶ್ರೀಯಂತಹ ಪುರಸ್ಕಾರಗಳು ಸಿಗದಿದ್ದರೆ, ಅವು ಯಾರಿಗಾಗಿ ಕಾದಿಡಲಾಗಿದೆ ಎಂದು ಕೇಳಬೇಕಾಗುತ್ತದೆ. ಇಂಥ ನಡವಳಿಕೆಗಳಿಂದ ಪ್ರಶಸ್ತಿಗಳು ತನ್ನ ಗಾಂಭೀರ್ಯ, ಮೌಲ್ಯಗಳನ್ನು ಕಳೆದುಕೊಳ್ಳುತ್ತವೆ. ಅಕಾಡೆಮಿಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಸರಕಾರದಲ್ಲಿರುವ ಪ್ರಜಾಪ್ರತಿನಿಧಿಗಳು ತಮ್ಮ ಆತ್ಮಶೋಧನೆ ತಾವೇ ಮಾಡಿ ಕೊಳ್ಳುವುದು ಒಳಿತು.

ಮಾಸ್ಟರ್ ಹಿರಣ್ಣಯ್ಯನವರು ತಮ್ಮದೊಂದು ನಾಟಕದಲ್ಲಿ ಹೀಗೆ ಹೇಳುತ್ತಾರೆ. 'ಬಂಗಾಲದಲ್ಲಿ ಹುಟ್ಟಿದ ರವೀಂದ್ರನಾಥ ಟಾಗೋರರು ಏನಾದರು ? .... ವಿಶ್ವಕವಿ ಯಾದರು. ಕರ್ನಾಟಕದಲ್ಲಿ ಹುಟ್ಟಿದ ತ.ರಾ.ಸು. ಏನಾದರು? ಏನಾದರೂ!.... ಮುದುಕರಾದರು' ಈ ಮಾತಿನ ವ್ಯಂಗ್ಯವನ್ನು, ಅದರ ಹಿಂದಿನ ಸತ್ಯವನ್ನು ನಮ್ಮ ಪ್ರತಿನಿಧಿಗಳು ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ಕೋಣನ ಮುಂದೆ ಕಿನ್ನರಿ ನುಡಿಸಿ ದಂತಾದೀತು. ತ.ರಾ.ಸು.ಗೆ ರಾಷ್ಟ್ರೀಯ ಪ್ರಶಸ್ತಿ ಬರಲಿ–ಬಿಡಲಿ ಅವರು ದೊಡ್ಡವರೆ, ಪ್ರಶಸ್ತಿಗಳಿಂದ ಅವರೇನು ದೊಡ್ಡವರಾಗಬೇಕಿಲ್ಲ. ಆದರೆ ನಾಡಿಗೆ ಕೀರ್ತಿ ತಂದವರನ್ನು ನಾವು ಮರೆತರೆ ಇತಿಹಾಸ ಎಂದಿಗೂ ಕ್ಷಮಿಸುವುದಿಲ್ಲ.

ಪ್ರಾಯಃ ಅದು 1967 ಇರಬಹುದು. ಒಂದು ದಿನ ಒಬ್ಬ ಪೈಜಾಮಾ–ಜುಬ್ಬ ಧರಿಸಿದ ಸಣಕಲು ವ್ಯಕ್ತಿ ಅ.ನ.ಕೃ. ಅವರ ಅನ್ನಪೂರ್ಣಕ್ಕೆ ಬಂದರು. ನಾನು ಆಗ ಅಲ್ಲಿಯೇ ಇದ್ದೆ. ನಾನು ಆಗಲೇ ಅ.ನ.ಕೃ. ಗೌರವಗ್ರಂಥ ಸಂಪಾದನೆಯ ಕಾರ್ಯದಲ್ಲಿ ತೊಡಗಿದ್ದೆ.

ಬಂದವರು ಪಾಂಡವಪುರದ ನಾ. ಪ್ರಭಾಕರ ಎಂಬ ಉತ್ಸಾಹ ತರುಣ ರಾಗಿದ್ದರು.

"ನಾನು ನಿಮ್ಮನ್ನು ಕುರಿತು ಒಂದು ಗೌರವಗ್ರಂಥ ಸಂಪಾದಿಸಬೇಕೆಂದಿದ್ದೇನೆ" ಎಂದರು. "ಇವರ ಜೊತೆಯಲ್ಲಿಯೇ ತ.ರಾ.ಸು. ಅವರಿಗೂ ಐವತ್ತು ತುಂಬು ವಾಗ ಒಂದು ಗೌರವ ಗ್ರಂಥ ಹೊರತರಬೇಕೆಂದಿದ್ದೇನೆ. ಎಂದೂ ಸೇರಿಸಿದರು. ಆಗ ಕೃಷ್ಣರಾಯರಿಗೆ 59 ವರ್ಷ ತ.ರಾ.ಸು. ಅವರಿಗೆ 47 ವರ್ಷ.

ಕೃಷ್ಣರಾಯರು ನನ್ನ ಕಡೆ ಬೆರಳು ತೋರಿ, "ಇವರು ನನ್ನ ಬಗೆಗೆ ಒಂದು ಗೌರವಗ್ರಂಥ ಸಂಪಾದಿಸುತ್ತಿದ್ದಾರೆ. ಮತ್ತೆ ನೀವು ಅದೇ ಕೆಲಸ ಮಾಡಿ ಕೈಸುಟ್ಟು ಕೊಳ್ಳುವುದು ಬೇಡ. ಒಬ್ಬರಂ ಮಾಡಿದರೆ ಸಾಕು. ನೀವು ತ.ರಾ.ಸು. ಕೆಲಸ ಕೈಗೆತ್ತಿಕೊಳ್ಳಿ. ಇದು ಮಾಡಲೇಬೇಕಾದ ಕಾರ್ಯ. ನೀವು ಚೆನ್ನಾಗಿ ಮಾಡಿ, ನನಗೂ ಸಂತೋಷವೇ." ಎಂದು ಪ್ರಭಾಕರ್ ಅವರಿಗೆ ಶುಭ ಹಾರೈಸಿದರು.

ಅಂದು ನನಗೂ ಪ್ರಭಾಕರ್‌ಗೂ ಪರಿಚಯ ಬೆಳೆಯಿತು. ನಾನು ಐದು ವರ್ಷ ಗುದ್ದಾಡಿ ಅ.ನ.ಕೃ. ಗೌರವಗ್ರಂಥ 'ರಸಚೇತನ' ಹೊರತಂದೆ. ನಾನಾಗ ಗೋವಾ ಕನ್ನಡ ಸಂಘದ ಕಾರ್ಯದರ್ಶಿ. ಗ್ರಂಥಕ್ಕೆಬೇಕಾದ ಸಾಮುಗ್ರಿ ಕಲೆ ಹಾಕುವುದು, ಲೇಖನಗಳನ್ನು ಕಲೆ ಹಾಕುವುದು, ಲೇಖನ ಸಂಗ್ರಹಕ್ಕಾಗಿ ಊರೂರು ಅಲೆಯುವುದು, ಗ್ರಂಥ ಮುದ್ರಣಕ್ಕೆ ಕೊಟ್ಟ ಬಳಿಕ ಪ್ರತಿವಾರವೂ ಹುಬ್ಬಳ್ಳಿಗೆ ಹೋಗಿ ಪ್ರೂಫ್ ನೋಡುವುದು, ಕಾಗದ ಖರೀದಿ, ಬ್ಲಾಕ್‌ಗಳಿಗೆ ಮುಂತಾದುವು ಗಳಿಗೆ ಸಾಲ ಮಾಡುವುದು ಎಲ್ಲ ಕೆಲಸವೂ ನನ್ನದೇ. ಹಣಕಾಸಿನ ಹೊಂದಿಕೆಯನ್ನೂ ನಾನೇ ಮಾಡಿಕೊಂಡು ಕಾರ್ಯ ನಿರ್ವಹಿಸಿದೆ. ಗ್ರಂಥ ಬಿಡುಗಡೆಯಾದ 6 ತಿಂಗಳಲ್ಲಿ ಮುಕ್ಕಾಲು ಸಾಲ ತೀರಿಸಿದ್ದೆ. 1971 ಅಗಪ್ಟನಲ್ಲಿ ನಾನು ನನ್ನ ಕಾರ್ಯಗೌರವ ದಿಂದ ಕಾರ್ಯದರ್ಶಿ ಪದ ಬಿಟ್ಟೆ, ಮುಂದಿನವರು ಈ ಸಾಲ ತೀರಿಸಲು ಮುಂದಾ–ಗಲಿಲ್ಲ. ಆಗ ನಾನೇ ಬೆಂಗಳೂರಿಗೆ ಹೋಗಿ, ಟೆಕ್ಸ್ಟ ಬುಕ್ಸ್ ಕಮಿಂಟಿಯಿಂದ/ ಖರೀದಿಸುವಂತೆ ಮನವೊಲಿಸಿ ಯಶಸ್ವಿಯಾಗಿ ಸಾಲದ ಮೊತ್ತಕ್ಕೆ ಸರಿಹೊಂದುಂ ವಷ್ಟು ಹಣ ಸಂಘಕ್ಕೆ ತಂದು ಕೊಟ್ಟು ಋಣಪರಿಹಾರ ಮಾಡಬೇಕಾಯಿತು. ಮಿಕ್ಕ ಪ್ರತಿಗಳನ್ನು ಮುಂದಿನ ಪದಾಧಿಕಾರಿಗಳು ತೂಕಕ್ಕೆ ಮಾರಿದರು ಎಂದು ತಿಳಿದಾಗ ನನ್ನ ಮನಸ್ಸಿಗಾದ ವ್ಯಥೆಯೆಷ್ಟು?

ಮುಂದೆ ನಾನೇ ನನ್ನ ಪ್ರಕಾಶಕರನ್ನು ಸೃಷ್ಟಿಸಬೇಕಾಯಿತು. ಪುಸ್ತಕ ಪ್ರಕಟನೆಯಂಥ ಕೆಲಸ ನಮ್ಮಂಥವರು ಮಾಡುವುದಲ್ಲ. ಪುಸ್ತಕದ ಅಂಗಡಿಯವರು ಮಾಡಬೇಕಾದ ಕಾರ್ಯಮಾಡಿ ನಮ್ಮ ಪ್ರಕಾಶಕರು ಕೈ ಸುಟ್ಟುಕೊಂಡರು. ಅದೊಂದು ದೀರ್ಘ ಕಥೆ. ಪುಸ್ತಕಗಳಿಗೆ ಗೆದ್ದಲು ಹಿಡಿದು ಅರ್ಧದಷ್ಟು ಪುಸ್ತಕಗಳು ಮಣ್ಣು ಪಾಲಾದುವು. ಕಾದಂಬರಿಗಳಾದರೆ ಖರ್ಚಾಗುತ್ತಿದ್ದವು. ವಿಚಾರ ಸಾಹಿತ್ಯ ಯಾರಿಗೆ ಬೇಕು? ಸಾಲದ ಭಾರ ಮಾತ್ರ ಖಾಯಂ ಆಗಿ ಉಳಿಯಿತು.

ಇದರಿಂದ ನನಗೆ ಸಾಹಿತ್ಯವೇ ಬೇಡವಾಯಿತು, ಒಂದೆರಡು ವರ್ಷ ಮಾನಸಿಕ ವಾಗಿ ನರಳಿದೆ. ನನ್ನ ಈ ನೋವು ಕೆಲವು ಆಪ್ತರಿಗೆ ಮಾತ್ರ ಗೊತ್ತಿದೆ. ಆದರೂ ನನ್ನ ಚಿತ್ತವೃತ್ತಿ ಸುಮ್ಮನೆ ಕೂಡುವಂಥದ್ದಲ್ಲ. ಬೀchi ಗೌರವಗ್ರಂಥದ ಕಾರ್ಯ ಹಮ್ಮಿಕೊಂಡೆ.... ಅದನ್ನು 1976ರಲ್ಲಿ ಮುಗಿಸಿದೆ. ಇನ್ನು ಇಂಥ ಹವ್ಯಾಸಗಳು ಅಪಾಯಕಾರಿ ಎಂದು ತೆಪ್ಪಗೆ ಕುಳಿತೆ.

ಅತ್ತಕಡೆ ಪ್ರಭಾಕರ್ ತ.ರಾ.ಸು. ಗ್ರಂಥದ ಕಾರ್ಯ ತೊಡಗಿದ್ದರು. ಅಲ್ಲಲ್ಲಿ ಪತ್ರಿಕೆಗಳಲ್ಲಿ ತ ರಾ.ಸು. ಕುರಿತು ಬಂದ ಲೇಖನಗಳನ್ನು ಕಲೆ ಹಾಗಿದ್ದರು. ನಾಲ್ಕಾರು ಲೇಖನಗಳನ್ನು ಬರೆಯಿಸಿದ್ದರು. ನಾಮಾಂಕಿತ ವಿಮರ್ಶಕರ ದೊಡ್ಡ ಯಾದಿಯನ್ನೇ ತಯಾರಿಸಿ ಬೇಟೆ ತೊಡಗಿದ್ದರು. ತಮ್ಮ ಬಳಿಯಿದ್ದ ತ.ರಾ.ಸು. ಕೃತಿಗಳನ್ನು ಅವರವರ ಮನೆಗೆ ತಲುಪಿಸಿ ಧನ್ಯತೆ ಕನಸು ಕಂಡರು. ಪುಸ್ತಕ ಪಡೆದವರು ಲೇಖನ ಬರೆಯದಿರುತ್ತಾರೆಯೇ ಎಂದು ತಮಗೆ ತಾವೇ ಭರವಸೆ ಮೂಡಿಸಿಕೊಂಡರು. ಆಗಾಗ್ಗೆ ವಿಮರ್ಶಕರ ಮನೆಯ ಬಾಗಿಲಿಗೆ ಹೋಗಿ 'ಪುಸ್ತಕ ಓದಿದಿರಾ ? ವಿಮರ್ಶೆ ಯಾವಾಗ ಕೊಡುತ್ತೀರಿ?' ಎಂದೆಲ್ಲ ಕೇಳಿದರು 'ಮುಂದಿನವಾರ' ಮುಂದಿನ ತಿಂಗಳು ಕೊಡುತ್ತೇನೆ,' ಎಂಬಿತ್ಯಾದಿ ಆಶ್ವಾಸನೆಗಳಿಂದ ಪ್ರಭಾಕರ ಆಶೆ ಬೆಳೆಸಿಕೊಂಡರು. ಆದರೆ ಯುಗಯುಗಾದಿ ಕಳೆದರೂ ಯುಗಾದಿ ಮರಳಿಬಂತು. ಬರೆಹಗಳು ಮಾತ್ರ ಬರಲಿಲ್ಲ, ಅದಕ್ಕೆ ಅವರು ಖರ್ಚು ಮಾಡಿದ ಹಣ ಎಷ್ಟು? ಕಳೆದುಕೊಂಡ ಪುಸ್ತಕಗಳೆಷ್ಟು? ವ್ಯಯಿಸಿದ ಶ್ರಮ ಎಷ್ಟು? ಇಷ್ಟಾಗಿಯೂ ಅವರು ಸಂಗ್ರಹಿಸಿ-ದುದು ಬದುಕು ವಿಭಾಗದಲ್ಲಿದ 16 ಬರೆಹಗಳು, ಬರೆಹ ವಿಭಾಗದಲ್ಲಿ ಪ್ರಕಟವಾದ ೨-೩ ಬರೆಹಗಳು ಇವುಗಳಲ್ಲಿ ಮುಕ್ಕಾಲು ಪಾಲು ಪತ್ರಿಕೆಯಲ್ಲಿ ಕಾಲಕಾಲಕ್ಕೆ ಪ್ರಕಟವಾದವುಗಳೇ. ಈ ಅನುಭವ ಪ್ರಭಾಕರ್‌ರ ಒಬ್ಬರ ಅನುಭವವಲ್ಲ, ಏನೂ ಅಧಿಕಾರ ಬಲವಿಲ್ಲದೆ, ಹಣಬಲವಿಲ್ಲದೆ, ಯಾವ ವಸೂಲಿಯೂ ಇಲ್ಲದ ನನ್ನಂಥ ಜನಗಳ ಪಾಲಿಗೆ ಬರುವುದೂ ಇಂಥ ಅನುಭವವೇ.

1977ರಲ್ಲಿ ಒಂದು ದಿನ ಹುಬ್ಬಳ್ಳಿಗೆ ಮಿತ್ರರಾದ ಪ್ರೊ॥ ಜಿಳೇಕಲ್ ಅವರ ಮನೆಗೆ ಹೋದಾಗ ಈ ವಿಷಯ ಪ್ರಸ್ತಾಪಿಸಿ ನೀವು ಕಾರ್ಯ ಮುಂದುವರಿಸಿ ಒಂದು ರೂಪ ಕೊಡಿ, ಎಂದರು. ಅನಂತರ ಪ್ರೊ॥ ಅನಂತಸ್ವಾಮಿ, ಮೊದಲಾದವರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ ನಾನು ಪ್ರಭಾಕರ್‌ರನ್ನು ನೋಯಿಸಿ ಈ ಕಾರ್ಯ ಕೈಗೆತ್ತಿಕೊಳ್ಳಲು ಸಿದ್ಧನಿರಲಿಲ್ಲ. ಈ ಕುರಿತು ಮಾತನಾಡಲು ನಾನು ಮತ್ತು ಪ್ರೊ॥ ಅನಂತಸ್ವಾಮಿ ನೇರವಾಗಿ ತ.ರಾ.ಸು. ಅವರ ಮನೆಗೇ ಹೋದೆವು. ಅಲ್ಲಿಯೇ ಪ್ರಭಾಕರ್ ಅವರೂ ಇದ್ದರು. ನಾವೆಲ್ಲರೂ ಮನಬಿಚ್ಚಿ ಮಾತಾಡಿದೆವು. ಪ್ರಭಾಕರ ತಾವು ಕೂಡಿಸಿದ ಲೇಖನಗಳನ್ನು ತರಿಸಿಕೊಳ್ಳಬೇಕಾದ ಲೇಖನಗಳ ಯಾದಿಯನ್ನು ನನ್ನ ಕೈಗಿತ್ತು ನಾನು ತರಿಸಿಕೊಂಡ ಲೇಖನಗಳನ್ನು ಪ್ರಕಟಿಸಬೇಕು. ಹಾಗೂ ನಾನು ಸಂಪರ್ಕಿಸಿದ ಬರೆಹಗಾರರನ್ನು ಮತ್ತೊಮ್ಮೆ ಕೇಳಬೇಕು, ಎಂದು ಸ್ವಸಂತೋಷದಿಂದ ನನಗೆ ಈ ಕೆಲಸ ಒಪ್ಪಿಸಿದರು. ಅಂದಿನಿಂದ ಅವರು ನಿಶ್ಚಿಂತ ರಾದರು. ಆದರೆ ನನ್ನ ತಲೆ? ದಿನ ದಿನಕ್ಕೆ ಬಿಸಿಯಾಯಿತು.

ನನಗೆ ತ.ರಾ.ಸು, ಗ್ರಂಥ ಸಂಪಾದಿಸುವ ಕಾರ್ಯ ಖುಷಿಯ ಕಾಯಕವೇ ಆಗಿತ್ತು. ಆದರೆ ಹಿಂದಿನ ಅನುಭವಗಳಿಂದ ಮನಸ್ಸು ಮುದುಡಿಕೊಂಡಿತ್ತು. ನನ್ನ ಬಳಿ ತ.ರಾ.ಸು. ಅವರ ಕೆಲವು ಕೃತಿಗಳಿದ್ದವು. ಮತ್ತೆ ಕೆಲವು ಸಿದ್ದಾಪುರ (ಉ.ಕ.)

ಸಾರ್ವಜನಿಕ ವಾಚನಾಲಯದಿಂದ ತರಿಸಿಕೊಂಡು ಓದಿದೆ. ಮಿಕ್ಕ ಅನೇಕ ಕೃತಿಗಳು ಸಿಗಲಿಲ್ಲ. ಅಲಭ್ಯ ಕೃತಿಗಳ ಬಗೆಗೆ ತ.ರಾ.ಸು. ಅವರಿಗೇ ಕೇಳಿದೆ. ಎಲ್ಲಿದೆ ಅವರ ಬಳಿ ? ಮರುಮುದ್ರಣಕ್ಕೆ ಬೇಕಿದ್ದರೂ ನಾವೇ ಒದಗಿಸಬೇಕಾದಂತಹ ಪರಿಸ್ಥಿತಿ ಯಾವ ಕೃತಿ ಯಾರು ಪ್ರಕಟಿಸಿದ್ದಾರೆ? ಅವುಗಳ ಮುದ್ರಣಗಳೆಷ್ಟು ? ಅವರ ಕೃತಿಗಳ ಸಂಖ್ಯೆಯೆಷ್ಟು? ಅವರ ಕೃತಿಗಳ ಕುರಿತು ಬಂದ ವಿಮರ್ಶೆಗಳಲ್ಲಿ ಅದೊಂದೂ ಅವರ ಬಳಿ ಇಲ್ಲ. ತಮಗೆ ತೋಚಿದ್ದನ್ನು ಗೀಚಿ ಮುಗಿಸಿದ್ದಾರೆ, ಮುಂದೆ ಏನಾಯಿತು? ಎಷ್ಟು ಕೃತಿಗಳು ಮಾರು ಕಟ್ಟೆಯಲ್ಲಿವೆ? ಯಾವ ಪುಸ್ತಕಗಳಿಗೆ ಬೇಡಿಕೆಯಿದೆ? ಅದೊಂದಕ್ಕೂ ಅವರು ತಲೆ ಕೆಡಿಸಿಕೊಂಡಿಲ್ಲ. ಇದು ಅ.ನ.ಕೃ. ತ.ರಾ.ಸು.ಯಥಾವತ್ತಾಗಿ ಹೋಲುವ ಕ್ರಮ. ಈ ವಿಷಯದಲ್ಲಿ ಮಾತ್ರ ಇವರಿಬ್ಬರೂ ಒಂದೇ. ಇವರ ಪುಸ್ತಕಗಳು ಮಾರುಕಟ್ಟೆಯಲ್ಲಿ ದೊರೆಯುವುದಿಲ್ಲ, ಅದರ ಒಂದು ಪ್ರತಿಯೂ ಇವರ ಬಳಿ ಇಲ್ಲ. ಗ್ರಂಥಾಲಯದಲ್ಲಿ ಹತ್ತಿಪ್ಪತ್ತು ವರ್ಷ ಒಂದು ಪುಸ್ತಕ ಅದೂ ಕಾದಂಬರಿ ಸರ್ವಾಂಗ ಸುಂದರವಾಗಿ ಇರಲು ಸಾಧ್ಯವೇ?

ನಾನು, ಪ್ರಭಾಕರ ಸೂಚಿಸಿದ ಲೇಖಕರಿಗೆ ಪತ್ರ ಬರೆದೆ. ಕೆಲವರು ತಾವು ಲೇಖನ ಕಳಿಸುತ್ತೇವೆಂದರು.ಮತ್ತೆ ಕೆಲವರು ಉತ್ತರಿಸುವ ಗೋಜಿಗೂ ಹೋಗಲಿಲ್ಲ. ಈ ಮಧ್ಯೆ ೮–೧೦ ಬಾರಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡಗಳಿಗೆ ಹೋಗಿ ಬರೆಹಗಾರರನ್ನು ವಿನಂತಿಸಿಕೊಂಡೆ, ಏನೂ ಪ್ರಯೋಜನವಾಗಲಿಲ್ಲ. ವೃಥಾ ಕಾಲಹರಣವಾಯಿತು ಅಷ್ಟೆ. ನಾನು ನನ್ನ ಪರಿಚಿತ ಬರೆಹಗಾರ ಬಂಧು ಭಗಿನಿಯರನ್ನು ಸಂಪರ್ಕಿಸಿದೆ. ಅದರಲ್ಲಿ ಅರ್ಧದಷ್ಟು ಜನ ನನಗೆ ಲೇಖನ ಕಳಿಸಿದರು. ಕೆಲವರಿಗೆ ೨೦–೨೫ ಪತ್ರಗಳನ್ನು ಬರೆದರೂ ಲೇಖನ ಬರಲಿಲ್ಲ. ಕೆಲವರು ಒಂದೇ ಪತ್ರಕ್ಕೆ ಲೇಖನ ಕಳಿಸಿದ್ದೂ ಉಂಟು.

ಪತ್ರವ್ಯವಹಾರಕ್ಕಾಗಿ, ಲೇಖಕರನ್ನು ಮುಖತಃ ಸಂಪರ್ಕಿಸುವ ಸಲುವಾಗಿ ಸಾವಿರಾರು ರೂಪಾಯಿ ಕಳೆದುಕೊಂಡೆ.ಇಷ್ಟಾಗಿಯೂ ಇಲ್ಲಿ ಎಲ್ಲ ಕೃತಿಗಳ ವಿಮರ್ಶೆ ಸಾಧ್ಯವಾಗಲಿಲ್ಲ. ಕೆಲವು ಲೇಖನಗಳನ್ನು ಮರಳಿ ಕಳಿಸಿ ಸರಿಪಡಿಸಿ ತರಿಸಿಕೊಂಡೆ. ಮತ್ತೆ ಕೆಲವು ಹೊಂದಿಸಿಕೊಂಡೆ. ಕೆಲವು ಪುಸ್ತಕಗಳಲ್ಲಿ ಪ್ರಕಟವಾದ ವಿಮರ್ಶೆಗಳನ್ನು ಎತ್ತಿಕೊಂಡು ಇಲ್ಲಿ ಸೇರಿಸಿದ್ದೇನೆ. ಇಲ್ಲಿರುವ "ನೃಪತುಂಗ"ದ ವಿಮರ್ಶೆ ದೇಜಗೌ ಅವರ "ನೂರೆಂಟು ಪುಸ್ತಕಗಳು", ತ.ರಾ.ಸು. "ಅರ್ಧಹಾದಿ" ಡಾ॥ ಹಾ. ಮಾ. ನಾಯಕರ "ಸಲ್ಲಾಪ" , "ಇಣುಕು ನೋಟ" ಎಚ್. ಜೆ. ಲಕ್ಕಪ್ಪಗೌಡರು ಬರೆದ ಲೇಖನ. ಮೈಸೂರು ವಿಶ್ವ ವಿದ್ಯಾನಿಲಯದವರು "ಸುವರ್ಣ ಸಂಪುಟ" ಹಂಸಗೀತೆ – ಒಂದು ವಿವೇಚನೆ ಪ್ರಬುದ್ಧ ಕರ್ನಾಟಕದಿಂದ ಉಕ್ತಿವೈಚಿತ್ರ್ಯಗಳು "ಯುಗಪುರುಷ" ದಿಂದ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ- ಪ್ರೊ। ಕೆ. ಡಿ. ಕುರ್ತಕೋಟಿ ಯವರ ಇದೇ ಹೆಸರಿನ ಗ್ರಂಥದಿಂದ, ಹೊಸಗನ್ನಡ ಸಾಹಿತ್ಯ, ಬೆಂಗಳೂರು ವಿಶ್ವ ವಿದ್ಯಾ ನಿಲಯ ತ.ರಾ.ಸು.ಗೆ ಸಂಬಂಧಿಸಿದ ವಿಮರ್ಶೆಯನ್ನಷ್ಟೇ ಆಯ್ದುಕೊಂಡು

ಪ್ರಕಟಿಸಲಾಗಿದೆ. ಇವೆಲ್ಲ ಸಾಮಗ್ರಿ ಮುಂದೆ ಅಧ್ಯಯನ ನಡೆಸುವವರಿಗೆ ಒಂದೇ ಕಡೆ ಸಿಗುವಂತಾಗಬೇಕೆಂದು ಪ್ರಪಂಚ, ಮಲ್ಲಿಗೆ, ತುಷಾರ ಮೊದಲಾದ ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನು ಬಳಸಿಕೊಂಡಿದ್ದೇನೆ. ಈ ಮೇಲ್ಕಾಣಿಸಿದ ಗ್ರಂಥಗಳ ಪ್ರಕಾಶ ಕರಿಗೂ, ಲೇಖಕರಿಗೂ, ಪತ್ರಿಕೆಗಳ ಸಂಪಾದಕರಿಗೂ ನಾನು ಋಣಭಾರದಿಂದ ತಲೆ ಬಾಗುತ್ತೇನೆ.

ಲೇಖನಗಳು ಬರುವ ತನಕ ಮುದ್ರಣಕ್ಕೆ ಕಳಿಸಬಾರದು ಎಂದು ನಿರ್ಧರಿಸಿ ದಿನ ಕಳೆಯುತ್ತ ಬಂದೆ. ಆದರೆ ಈ ವಿಷಯದಲ್ಲಿ ಹುಚ್ಚು ಬಿಡುವ ತನಕ ಮದುವೆಯಾಗುವುದಿಲ್ಲ. ಮದುವೆಯಾಗುವ ತನಕ ಹುಚ್ಚು ಬಿಡುವುದಿಲ್ಲ ಎಂಬ ಮಾತು ಸತ್ಯ. ಮುದ್ರಣಾಲಯಕ್ಕೆ ಹೋದ ಬಳಿಕ ಲೇಖನಗಳು ಬರಲಾರಂಭಿಸುತ್ತವೆ. ಆಗ ಲೇಖನಗಳನ್ನು ಕ್ರಮದಲ್ಲಿ ಹೊಂದಿಸುವುದು ಕಷ್ಟವಾಗು ತ್ತವೆ. ಎಂದಾಗ ನನ್ನ ಮನವಿಯನ್ನು ಮನ್ನಿಸಿ ಲೇಖನ ಕಳುಹಿಸಿದ ಎಲ್ಲ ಬರಹಗಾರ ಬಂಧು ಭಗಿನಿಯರ ಸಹಕಾರ ಬದುಕಿನುದ್ದಕ್ಕೂ ಮರೆಯುವಂಥದ್ದಲ್ಲ. "ರಸಚೇತನ" ದಿಂದಲೂ ಈ ತನಕ ಕೆಲವು ಲೇಖಕರು ನನ್ನ ಬೆಂಗಾವಲಿಗೆ ನಿಂತು ನನ್ನನ್ನು ಮುನ್ನಡೆ ಸಿದ್ದಾರೆ. ಈ ಗ್ರಂಥದಲ್ಲಿ ಅಲ್ಲಲ್ಲಿ ಬೇರೆ ಬೇರೆ ಗ್ರಂಥಗಳಿಂದ ಲೇಖಕರ ಅಭಿಪ್ರಾಯ ಗಳನ್ನು ಎತ್ತಿಕೊಳ್ಳಲಾಗಿದೆ. ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥದ ಆರಂಭದಿಂದಲೂ ದುಡಿದ, ನಾನು ಕೆಲಸ ಕೈಗೆತ್ತಿಕೊಂಡ ಬಳಿಕವೂ ನನ್ನ ಹಿಂದೆ ನಿಂತು ಲೇಖನ ಸಂಗ್ರಹಿಸುವ ಕಾರ್ಯದಲ್ಲಿ ಸಹಕರಿಸಿದ ಪ್ರಿಯ ಪ್ರಭಾಕರ್ ಹಾಗೂ ಜಿ. ಎಸ್. ಭಟ್ಟ, ಭಾವ ಚಿತ್ರಗಳನ್ನು ಒದಗಿಸಿದ ಬಸವರಾಜ ಫೋಟೋ ಸ್ಟುಡಿಯೋ, ಕೆ. ಜಿ. ಸೋಮಶೇಖರ, ಮೈಸೂರಿನ ಕೆಲ ಸ್ಟುಡಿಯೋ ಗಳು, ಪಡಿಯಚ್ಚುಗಳು ಒದಗಿಸಿದ ರವಿ ಪ್ರೋಸೆಸ್ ಸ್ಟುಡಿಯೋ, ಮುಖ ಚಿತ್ರದ ಪಡಿ ಯಚ್ಚು ಒದಗಿಸಿದ ಡಂಕನ್ ಆರ್ಟ್ಸ್, ಮುಖ ಚಿತ್ರ ಹಾಗೂ ಹಿಂಬದಿಯ ವಿನ್ಯಾಸ ರಚಿಸಿದ ಕೆ. ಬಿ. ಕುಲಕರ್ಣಿ, ಹುಬ್ಬಳ್ಳಿ, ಮುಖ ಚಿತ್ರ ಮುದ್ರಿಸಿದ ರಮೇಶ್ ಪ್ರಿಂಟಿಂಗ್ ಪ್ರೆಸ್, ಕರಡು ತಿದ್ದುವ ಕೆಲಸವನ್ನು ತಮ್ಮ ಕಾರ್ಯಬಾಹುಳ್ಯವನ್ನೂ ಬದಿಗೊತ್ತಿ ಮಾಡಿದ ಸೋದರಿ ಶ್ರೀಮತಿ ವಿಶಾಲಾಕ್ಷಿ ದಕ್ಷಿಣಾಮೂರ್ತಿ ಹಾಗೂ ಟಿ.ಎನ್.ಎಸ್. ಶಾಸ್ತ್ರಿ, ಕೆಲವು ಗ್ರಂಥಗಳನ್ನು ನೀಡಿದ ಸಿದ್ದಾಪುರದ ಸಾರ್ವಜನಿಕ ವಾಚನಾಲಯದ ಗ್ರಂಥಪಾಲ ಶ್ರೀ ದಿವಾಕರ ಮೊದಲಾದವರು ನೀಡಿದ ಸಹಕಾರಕ್ಕೆ ನನ್ನ ಹಾರ್ದಿಕ ಕೃತಜ್ಞತೆಗಳು.

ಈ ಬೃಹತ್ ಗ್ರಂಥದ ಸ್ಫೂರ್ತಿ ಕೇಂದ್ರವಾಗಿ ನಿಂತವರು ನನ್ನ ಹಿತೈಷಿಗಳೂ, ಆತ್ಮೀಯರೂ, ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘದ ಅಧ್ಯಕ್ಷ ರಾದ ಶ್ರೀ ಬಿ. ಕೃಷ್ಣಭಟ್ಟರು. ಅವರು ತಮ್ಮ ಬಿಡುವಿಲ್ಲದ ಸಮಯದಲ್ಲೂ ಈ ಗ್ರಂಥ ಅಂದವಾಗಿ ಮುದ್ರಣಗೊಳ್ಳುವಂತೆ ಏರ್ಪಾಟು ಮಾಡಿದರು. ಶ್ರೀ ಗುರು ಪ್ರಸಾದ್ ಪ್ರಿಂಟರ್ಸ್‌ನ ಎಲ್ಲ ಸಿಬ್ಬಂದಿ ವರ್ಗವೂ ಮುಖ್ಯವಾಗಿ ಮ್ಯಾನೇಜರ್ ಶ್ರೀ ಸತ್ಯನಾರಾ.

ಯಣಶಾಸ್ತ್ರಿ ಅವರು ಹೆಚ್ಚಿನ ಹೊಣೆಗಾರಿಕೆಯಿಂದ ಮುದ್ರಣಮಾಡಿಕೊಟ್ಟಿದ್ದಾರೆ. ಈಗ ನೈಜೀರಿಯಡಲ್ಲಿರುವ ಬಂಧು ಪ್ರೊ|| ಬಿಳೀಕಲ್, ಡಾ. ಬಿ.ಎಸ್. ಶಾಸ್ತ್ರಿ, ಯು. ಎಂ ಶ್ರೀಧರ್, ಮಾಸ್ಟರ್ ಹಿರಣ್ಣಯ್ಯ. ಸಿ. ರಂಗನಾಥ್‌ರಾವ್. ಕೆ. ರಮಾನಂದ ಆಚಾರ್ಯ, ಬಿ. ವಿ. ರಾಜಾರಾಂ, ಎಂ. ಸಿ. ರಾಜೇಂದ್ರ, ವೀರೇಗೌಡ ಮೊದಲಾದ ಸಹೃದಯ ಮಿತ್ರರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಇದರಲ್ಲಿ ಕುಂದುಕೊರತೆಗಳೇನೇ ಇದ್ದರೂ ಅದಕ್ಕೆ ನಾನೇ ಹೊಣೆಗಾರ. ಒಳಿತೇನಾದರೂ ಇದ್ದರೆ ಅದರ ಶ್ರೇಯಸ್ಸು ಮೇಲೆ ನಮೂದಿಸಿದವರಿಗೆ ಸಲ್ಲಬೇಕು.

ದುಂದುಂಭಿನಾಮ ಸಂವತ್ಸರದ ಯುಗಾದಿಯ ಶುಭಾಶಯಂಗಳೊಂದಿಗೆ

ನಿಮ್ಮವನೇ
ಶಾ. ಮಂ. ಕೃಷ್ಣರಾಯ

ಗೋವೆಯ ಕನ್ನಡ ಪ್ರಕಟನೆಗಳು

೧.	ರಾಜಧರ್ಮ*	ಶಾ. ಮಂ. ಕೃಷ್ಣರಾಯ	೨-೦೦
೨.	ಬಂಡಲ್ ಬಹದ್ದೂರ್*	"	೨-೦೦
೩.	ಮುತ್ಸ್ಯಾಳರು	"	೨-೦೦
೪.	ಮಾಮೂಲು	"	೨-೦೦
೫.	ದೇವಭೂಮಿ ಗೋಮಂತಕ*	"	೬-೦೦
೬.	ಸೌಂದರ್ಯನಿಧಿ ಗೋವಾ*	"	೨-೦೦
೭.	ರಸಚೇತನ (ಅ.ನ.ಕೃ. ಗೌರವ ಗ್ರಂಥ) ಸಂ.-	ಶಾ.ಮಂ. ಕೃಷ್ಣರಾಯ	೪೦-೦೦
೮.	ತಿಂಮದರ್ಶನ (ಬೀಚಿ ಗೌರವ ಗ್ರಂಥ) ಸಂ.-	"	೧೫-೦೦
೯.	ಚಿರಚೇತನ (ಅ.ನ.ಕೃ. ಮುನ್ನುಡಿ ಸಂಗ್ರಹ)	"	೧೫-೦೦
೧೦.	ಬರಹಗಾರನ ಬದುಕು-ಆತ್ಮಕಥೆ	ಅ.ನ.ಕೃ.	೨೦-೦೦
೧೧.	ಉತ್ತರ ಭೂಪ	ಬೀChi	೧೫-೦೦
೧೨.	ರಶ್ಮಿ (ಕೊಂಕಣಿ ಕವನಗಳ ಕನ್ನಡಾನುವಾದ)		೩-೦೦
೧೩.	ಮಗುವಿನ ಭಾವ ಜಗತ್ತು	ಡಾ. ರ. ವಿ. ಪಂಡಿತ	೮-೦೦
೧೪.	ಅಗ್ನಿ ಕುಂಡ - ಕಾದಂಬರಿ -	ದಯಾನಂದ ತೊರ್ಕೆ	೬-೦೦
೧೫.	ಅಲೆಯುಲೆಗಳು - (ಕವನ ಸಂಗ್ರಹ)	ನಾ. ಅ. ಕುಲಕರ್ಣಿ	೫-೦೦
೧೬.	ಈ ಜನ ಈ ಮನ*	ಶಾ. ಮಂ. ಕೃಷ್ಣರಾಯ	೫-೦೦

ಇಂಡಿಯಾ ಬುಕ್ ಹೌಸ್ - ಬೆಂಗಳೂರು

೧.	ಗೋವಾ ಕದಂಬಕುಲ*	"	೧-೫೦
೨.	ವರಕವಿ ತಿಪ್ಪಯ್ಯ ಮಾಸ್ತರರು*	"	೧-೫೦
೩.	ಬಸವರಾಜ ಮನಸೂರ	"	೨-೦೦
೪.	ಹಾವನೂರು ಸಂಸ್ಥಾನ	"	೨-೦೦

*ಪ್ರತಿಗಳು ಮುಗಿದಿವೆ

ತ.ರಾ.ಸು. ಅವರ ಕೃತಿಗಳು (ಸಾಮಾಜಿಕ ಕಾದಂಬರಿಗಳು)

ಒಮ್ಮೆ ನಕ್ಕನಗು	ಮನೆಗೆ ಬಂದ ಮಹಾಲಕ್ಷ್ಮಿ	ಬೇಲಿ ಹಾಕಿದ್ದ ಹೊಲ
ರಕ್ತತರ್ಪಣ	ಮುಂಜಾವಿನಿಂದ ಮುಂಜಾವು	ಗಾಳಿಮಾತು
ಪುರುಷಾವತಾರ	ಕಣ್ಣು ತೆರೆಯಿತು	ಬಂಗಾರಿ
ಜೀತದ ಜೀವ	ಎಲ್ಲಾ ಅವನ ಹೆಸರಿನಲ್ಲೇ	ಆಕಸ್ಮಿಕ
ಬಿಡುಗಡೆಯ ಬೇಡಿ	ಚಂದವಳ್ಳಿಯತೋಟ	ಅಪರಾಧಿ
ಚಂದನದ ಗೊಂಬೆ	ಎರಡು ಹೆಣ್ಣು ಒಂದು ಗಂಡು	ಪರಿಣಾಮ
ಚಕ್ರತೀರ್ಥ	ವಿಷಪ್ರಾಶನ	ಕಾಮಾಕ್ಷಿ
ಮಸಣದಹೂವು	ಮರಳು ಸೇತುವೆ	ನಾಯಕಿ
ಸಾಕುಮಗಳು	ಹಾವು ಹಿಡಿದವರು	ಪಂಜರದ ಪಕ್ಷಿ
ಗ್ರಹಣ ಬಿಟ್ಟಿತು	ಶುಕ್ರವಾರದ ಲಕ್ಷ್ಮಿ	ಭಾಗ್ಯಶಿಲ್ಪಿ
ಬೇಡದ ಮಗು	ಹೆಣ್ಣು ಕಟ್ಟಿದ ಮನೆ	ರಾಜೇಶ್ವರಿ
ಬೆಂಕಿಯ ಬಲೆ	ಮಾರ್ಗದರ್ಶಿ	ಕೇದಿಗೆವನ
ನಾಗರ ಹಾವು	ಬೆಳಕಿನ ಬೀದಿ	ಶಿಶುದೈತ್ಯ
ಕಾರ್ಕೋಟಕ	ಪರಿಮಳದ ಉರುಳು	ಲಾವಣ್ಯವತಿ
ಸರ್ಪಮತ್ಸರ	ಪೋಟಾಪೋಟಿ	ಯಕ್ಷಪ್ರಶ್ನೆ
ಮೊದಲನೋಟ	ಅಕ್ಕಮ್ಮನ ಭಾಗ್ಯ	ಗೃಹಪ್ರವೇಶ
ಬಯಕೆಯ ಬಂದಿ	ಚದುರಂಗದ ಮನೆ	ಶ್ರೀ ಚಕ್ರೇಶ್ವರಿ

ಐತಿಹಾಸಿಕ ಕಾದಂಬರಿಗಳು :

ನೃಪತುಂಗ	ಹಂಸಗೀತೆ	ಸಿಡಿಲಮೊಗ್ಗು
ಕೀರ್ತಿನಾರಾಯಣ	ಅಗ್ನಿರಥ–ಮುಕ್ತಿಪಥ	ಶಿಲ್ಪಶ್ರೀ
ಕಸ್ತೂರಿ ಕಂಕಣ	ಕಂಬನಿಯ ಕುಯಿಲು	ರಾಜ್ಯದಾಹ
ದುರ್ಗಾಸ್ತಮಾನ	ತಿರುಗುಬಾಣ	ರಕ್ತರಾತ್ರಿ
ವಿಜಯೋತ್ಸವ 1, 2.	ಹೊಸಹಗಲು	

ಪೌರಾಣಿಕ ಕಾದಂಬರಿಗಳು: ಬೆಳಕು ತಂದ ಬಾಲಕ   ೪x೪= ೦

ಕಥಾ ಸಂಗ್ರಹಗಳು : ಇದೇ ನಿಜವಾದ ಸಂಪತ್ತು   ರೂಪಸಿ

ಗಿರಿ ಮಲ್ಲಿಗೆಯ ನಂದನದಲ್ಲಿ   ತೊಟ್ಟಿಲು ತೂಗಿತು

ನಾಟಕಗಳು : ಮೃತ್ಯು ಸಿಂಹಾಸನ   ಜ್ವಾಲಾ

ಮಹಾಶ್ವೇತೆ   ಅನ್ನಾವತಾರ

ಭಾಷಾಂತರ : ಬಾರ್ಬೋಸಾ ಕಂಡ ವಿಜಯನಗರ   ಗಾಂಧೀಜೀ

ಮರೆಯಲಾಗದ ಪರಿಮಳ   ಪ್ರಥಮ ಪ್ರಣಯ   ನಂದನವನ

ಮದಾಂಬಾವರಿ   ನಿಮ್ಮ ಆಹಾರ   ಡಾ. ಕೊಟ್ನಿಸ್

ಜೀವನ ಸಾಹಿತ್ಯ : ರೇಖಾ ಚಿತ್ರಗಳು 1, 2   ಅ. ನ. ಕೃ.


ಮಕ್ಕಳ ಸಾಹಿತ್ಯ (ವಯಸ್ಕರ ಶಿಕ್ಷಣ)   ನಾಗರಮುರಿ

ಖಂಡನೆ : ಕ್ರಿಯಾಶಕ್ತಿ ವಿದ್ಯಾರಣ್ಯ

ಸಂಪಾದಿತ : ದಳಪತಿ ಜವಾಹರ್   ಶ್ರೀ ಜಗದ್ಗುರು

ಎಲ್ಲಿ - ಏನಿದೆ ?

ತ.ರಾ.ಸು. ಬರೆಹ



ಶ್ರೀ ತ. ರಾ. ಸು.

ಕಾವ್ಯಾಂಜಲಿ

—ನ. ನಾಗಲಿಂಗಸ್ವಾಮಿ

ಕ ನ್ನಡದ ಕುಲದೇವಿ ಭುವನೇಶ್ವರಿಯ ಪ್ರಿಯಸುತನೆ, ಕ
ರ್ಣಾಟದೈಸಿರಿಯ ಮೈಸೂರ ಸೊಬಗಿನಲಿ, ಹ
ಟ ಯೋಗ ಮುದ್ರೆಯಲ್ಲಿ ನೀ ನಗುತ ನಲಿದಿರುವೆ
ಕ ನ್ನಡದ ಕಲಿ ನೀನು, ಹೊನ್ನುಡಿಯ ಹುಲಿ ನೀನು
ದ ಕ್ಷಮಯ ಸಾಂಗತ್ಯ, ಸಾಹಿತ್ಯ ಸಿರಿನೀನು ॥
ಖ್ಯಾ ತನಾಗಿರುವೆ ನೀ ಖ್ಯಾತರಾ ಖ್ಯಾತರಲಿ
ತ ರುಣ ತರುಣಿಯರು, ವೃದ್ಧ ಬಾಲೆಯರು, ನಿನ್ನ
ಸಾ ರಸ್ವತ ಜೀವನವ ನೆನೆನೆನೆದು ನೆನೆದಿಹರು
ಹಿ ಗ್ಗುತ್ತ ಸುಗ್ಗುತ್ತ ಹಿಮಾಚಲದ ವರೆವಿಗೂ
ತಿ ಲಕವಾಗಿಹುದು ನಿನ್ನ ಕನ್ನಡದ ಕರಿಮಸಿಯು ॥
ಶ್ರೀ ರಕ್ಷೆಯೊದಗಿಹುದು ನಿನ್ನ ಲೇಖಣಿಯಿಂದೆಮಗೆ
ತ ಂಪು ಸೊಂಪಾದ ಸಾಹಿತ್ಯ ನವರಸವ
ರಾ ಜ ಕವಿಯಂಪ್ರೊಲು, ಕವಿ ಕಾವ್ಯ ನೀಡುತ್ತ
ಸು ಜ್ಞಾನ ಸಿಂಹಾಸನದಿ ನೀನೊರಗಿ ಮೆರೆದಿರುವೆ ॥
ಶ ತೋಪಶತ ಕನ್ನಡರು, ನಿನ್ನಿರವ ಹರಸಿಹರು
ತಾ ಪದಲಿ ಬೇಯುತಿಹ ನಿನ್ನುಸಿರ ಅರಿತಿಹರು
ಯುವರಾಜ, ಮಹರಾಜ ಜನಮನಗಳಾ
ವಾ ತ್ಸಲ್ಯಮಯ ಹೃದಯದಲಿ ನೀನಿಂದು ಬೆಳಗಿರುವೆ
ಗ ತಸಿರಿಯ ಚಾರಿತ್ರ್ಯ, ನಿನ್ನಿಂದ ಮೆರೆದಂತೆ, ಕ
ಲಿ ಯುಗದಿ ನಿನಕೀರ್ತಿ, ರವರವದ ರವಿಯಂತೆ ॥

ತ. ರಾ. ಸು

— ಎಚ್ಚೆಸ್ಕೆ

ಇವರು ತಳುಕಿನ ರಾಮಸ್ವಾಮಯ್ಯ ಸುಬ್ಬರಾಯ ಕನ್ನಡ ಸಾಹಿತ್ಯದ ಸೀಮಾ ಪುರುಷರಾದ ಟಿ. ಎಸ್. ವೆಂಕಣ್ಣಯ್ಯನವರ ತಮ್ಮನ ಮಗ.'

ಆಗ ಮೂವತ್ತುವರ್ಷದ ಹಿಂದೆ, ನಲವತ್ತರ ದಶಕದಲ್ಲಿ, ಇಪ್ಪತ್ತರ ತರುಣ ರೊಬ್ಬರು ಬೆಂಗಳೂರಿನ ಕಡಲಿನಲ್ಲಿ ಈಜಲು ಧುಮುಕಿದಾಗ ಅವರಿಗಿದ್ದುದು ಇದೊಂದು ಪ್ರಶಸ್ತಿ ಮಾತ್ರ.

ಈಗ ಎಪ್ಪತ್ತರ ದಶಕದಲ್ಲಿ, ಇವರೊಬ್ಬ ಸಿದ್ಧಹಸ್ತ. ಐವತ್ತು ಕಾದಂಬರಿ ರಚಿಸಿ ಬದುಕಿನ ಶತಮಾನದ ನಡುಗೆರೆ ದಾಟಿ ಮುನ್ನಡೆದಿರುವ ಅಕ್ಷರ ಬ್ರಹ್ಮ.

ಜೀತದ ಜೀವ, ಮುಂಜಾವಿನಿಂದ ಮುಂಜಾವು, ಕಂಬನಿಯ ಕುಯಿಲು, ರಕ್ತರಾತ್ರಿ, ಹೊಸ ಹಗಲು, ಪುರುಷಾವತಾರ, ಬೆಂಕಿಯ ಬಲೆ, ಬಿಡುಗಡೆಯ ಬೇಡಿ, ಮಸಣದ ಹೂವು, ಮಾರ್ಗದರ್ಶಿ, ಭಾಗ್ಯಶಿಲ್ಪಿ, ಯಕ್ಷಪ್ರಶ್ನೆ, ಕಾಮಾಕ್ಷಿ, ಗಾಳಿಮಾತು, ಚಕ್ರತೀರ್ಥ, ಬೇಲಿಮೇಯ್ದ ಹೊಲ, ಎಲ್ಲಾ ಅವನ ಹೆಸರಿನಲ್ಲೇ, ಒಮ್ಮೆ ನಕ್ಕ ನಗು, ಅಗ್ನಿರಥ–ಮುಕ್ತಿಪಥ, ಪರಿಣಾಮ, ಬಯಸಿಬಂದ ಭಾಗ್ಯ, ಇದು ತ.ರಾ.ಸು. ರಸಾಯನ, ಜೀವನಾಯನ.

ತಮ್ಮ ಕೃತಿಗಳಿಗೆ ಹೆಸರಿಡುವ ಕಲೆಯಲ್ಲಿ ತ.ರಾ.ಸು.ವನ್ನು ಮೀರಿಸಿದವರಿಲ್ಲ.

ತ.ರಾ.ಸು. ವಿನ ಜೀವನರೇಖೆಯಲ್ಲಿ ಈ ತಲೆಮಾರಿನ ಸಾಹಿತ್ಯ ಬ್ರಹ್ಮರನೇಕರ ಬಾಳ ಪಡಿನೆಳಲನ್ನು ಕಾಣುವುದು ಸಾಧ್ಯ. ಕೆಲವು ವಿವರಗಳನ್ನು ಬಿಟ್ಟರೆ ಇವರೆಲ್ಲರ ಬಾಳೂ ಒಂದೇ ತರಹ. ಬರವಣಿಗೆಯನ್ನೇ ಬದುಕಿನ ಸಾಧನವನ್ನಾಗಿಯೂ ಮಾಡಿಕೊಂಡವರ ಹಣೆಯಬರಹ. ಲೆಕ್ಕಣಿ ಕೆಳಗಿಟ್ಟು ಬೆರಳೆಣಿಸಿ ಯೋಚಿಸುವು ದಕ್ಕೂ ಇಲ್ಲದ ಪುರಸೊತ್ತು.

ಮೈಸೂರು ನಗರದ ಒಂದು ಎತ್ತರ ಗುಡ್ಡವಾದ ಯಾದವಗಿರಿಗೆ ಮೈತಬ್ಬಿ ನಿಂತಿರುವ ಗಿರಿಕನ್ಯಕಾವಾಸಿ ತ. ರಾ. ಸು. ವಿನ ಹಿರಿಯರ ಊರು ಚಿತ್ರದುರ್ಗದ ಬಳಿಯ ತಳುಕು. ಅದೊಂದು ಬೆಂಗಾಡು. ಆದರೆ ಅದರ ಬಂಡೆಬಂಡೆಯೂ ತ. ರಾ. ಸು. ವಿಗೆ ಚೆನ್ನಾಗಿ ನೆನಪು. ಸರ್ವದಾ ಮೈಯೆಲ್ಲಾ ಕಣ್ಣಾಗಿ ಕಾವಲು ನಿಂತು, ಶತ್ರುವಿನ ಸುಳಿವು ದೊರೆತೊಡನೆಯೇ ಚಿತ್ರದುರ್ಗದ ಪಾಳೆಯಗಾರರಿಗೆ ಮುನ್ಸೂಚನೆ ನೀಡಲು ಇಲ್ಲಿನ ಕೋಡುಗಲ್ಲಿನ ಮೇಲೆ ಪಂಜು ಹೊತ್ತಿಸುತ್ತಿದ್ದುದು ಇತಿಹಾಸದ ಕತೆ. ತಳುಕಿನ ಈ ಪೂರ್ವ ಕತೆಗೂ ತ. ರಾ. ಸು. ವಿನ ಕೃತಿಗಳಿಗೂ ಈ ಒಂದು ಸಾಮಾನ್ಯ ಲಕ್ಷಣ ಇವರ ಒಂದೊಂದು ಕಾದಂಬರಿಯೂ ಒಂದೊಂದು

ಮಂಜು. ಬಾಳಿನ ಮೂಲೆ ಮೂಲೆಗಳನ್ನು ಬೆಳಗಿ ತೋರಿಸುವ ಮಶಾಲು, ಗಾಳಿ ಬೀಸಿದತ್ತ ಅಲೆದಾಡುವ ದೋಣಿ.

ತ. ರಾ. ಸು. ವಿನ ಸಾಧನೆಯೆಲ್ಲ ಸ್ವಯಾರ್ಜಿತ. ಆದರೆ ತಲೆ ತಲಾಂತರದಿಂದ ಹರಿದುಬಂದ ಸಾಹಿತ್ಯ ಸಂಸ್ಕಾರ. ಇವರ ವಂಶವೇ ಸಾಹಿತ್ಯ ವಂಶ. ಕವಿತೆಯುಮಂಶ ಮುತ್ತಾತ ಧರ್ಮಗೊಪ್ಪು. ನೌಕರಿ ಕಳೆದುಕೊಂಡಾಗ ಹಾದುಹೋಗಿ ಕಾಡಿಗೆ ನಡೆದು ಕಪಿಗಳ ನಡುವೆ ರಾಮನಾಮ ಜಪಿಸುತ್ತ ಕುಳಿತ ನಿರಾಳಿ, ತಾತ ಯಕ್ಷಗಾನ ಕಾವ್ಯ ನಿರತ, ಆಶುಕವಿತಾ ವಿನೋದಿ, ತಂದೆ ಲಾಯರಾದರೂ ಸಾಹಿತ್ಯ ವಿಲಾಸಿ. ಪದ್ಯ, ಕತೆ ಗೀಚಿ ಮನೆಗೆಬಂದ ಸಾಹಿತಿಗಳಿಗೆ ಸತ್ಕಾರ ನೀಡಿ, ಹಿಂದಿನವರ ಪರಂಪರೆಯನ್ನು ಒಂದು ರೀತಿಯಲ್ಲಿ ಮುಂದುವರಿಸಿಕೊಂಡು ಬಂದು ಮುಂದೆ ಮಗನಿಗೆ ಒಪ್ಪಿಸಿಕೊಟ್ಟರೂ ತಮ್ಮ ಒಬ್ಬನೇ ಮಗನೂ ತಮ್ಮಂತೆಯೇ ವಕೀಲಿಮಾಡಬೇಕೆಂದು ಒಂದು ಕಾಲದಲ್ಲಿ ಅವರಿಗೆ ಭ್ರಾಂತಿ.

ಆದರೆ ಈ ಹುಡುಗ ಹೈಸ್ಕೂಲಿನ ಮಟ್ಟದಲ್ಲೇ ತಂದೆಯ ಕನಸಿನ ಗುಳ್ಳೆಯನ್ನೊಡೆದ. ಮೇಷ್ಟ್ರನ್ನು ಕೆಣಕಿ ತುಂಟತನದ ಪಟ್ಟ ಪಡೆದು ಸತ್ಯಾಗ್ರಹದ ಬೆನು ಹತ್ತಿ ಜೈಲಿಗೂ ಹೋಗಿಬಂದ.

ಇದರ ನಡುವೆ ಈ ಹುಡುಗನಿಗೆ ಸಾಹಿತ್ಯದ ಚಟ. ಓದುಬರಹ, ಭಾಷಣ, ಊರಿಗೆ ಬಂದವರಿಗೆಲ್ಲ ಚಿತ್ರದುರ್ಗದ ಪಾಳೆಯಗಾರರ ಸಾಹಸ ಕತೆ ಹೇಳುವ ಉತ್ಸಾಹ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಆಗ ಏರ್ಪಡಿಸಿದ್ದ ಪ್ರಬಂಧ ಲೇಖನ ಸ್ಪರ್ಧೆಯಲ್ಲಿ ಈತನಿಗೆ ಪ್ರಥಮ ಬಹುಮಾನ. ಕನ್ನಡದ ಸುಪ್ರಸಿದ್ಧ ಬರಹಗಾರರಾದ ಸಿದ್ದವನಹಳ್ಳಿ ಕೃಷ್ಣಶರ್ಮರ ಪ್ರೋತ್ಸಾಹ. ತಂದೆಯವರ ಇಚ್ಛೆಯಂತೆ ಕಾರ್ಖಾನೆಯೊಂದರಲ್ಲಿ ದೊರಕಬಹುದಾಗಿದ್ದ ನೌಕರಿಯ ಗಾಳಕ್ಕೆ ಗಂಟಲು ಸಿಕ್ಕಿಕೊಳ್ಳದೆ ಪಾರಾಗಿ "ವಿಶ್ವ ಕರ್ನಾಟಕ" ಪತ್ರಿಕೆಯಲ್ಲಿ ಉಪಸಂಪಾದಕ.

ಆಗಿನ ಕಾಲದಲ್ಲಿ ಪತ್ರಿಕೋದ್ಯಮ ಒಂದು ಅರೆಹೊಟ್ಟೆಯ ಆದರ್ಶ. ದಿಕ್ಕಿಲ್ಲದ ಕಡಲಿನಲ್ಲಿ ದೋಣಿಯಿಂದ ದೋಣಿಗೆ ಜಿಗಿತ. ಬೆಂಗಳೂರಿನ ಬದುಕು ಬೇಸತ್ತು ಚಿತ್ರದುರ್ಗಕ್ಕೆ ಹೋಗಿ ಸ್ವಾತಂತ್ರ ಪತ್ರಿಕೋದ್ಯಮ ನಡೆಸಿ ಅದೂ ಗಿಟ್ಟದಾಗ ಮತ್ತೆ ಬೆಂಗಳೂರಿಗೆ ಬಂದು ನೌಕರಿಯ ಪತ್ರಿಕಾ ವ್ಯವಸಾಯ. ಈ ಸಿಡಿಲುಮೊಗ್ಗಿನ ಹೃದಯದಲ್ಲಿ ಹಲಬಗೆಯ ತಳಮಳ.

ಹತ್ತಾರು ಪೆಟ್ಟುಬಿದ್ದು ಚಕ್ಕೆಯೊಡೆದು ಗಟ್ಟಿರೂಪ ತಳೆದಿದ್ದ ತ.ರಾ.ಸು. ಆ ವೇಳೆಗೆ ಆಗಲೇ ಸತ್ವಪೂರ್ಣ ಲೇಖಕ, ಕೃಷ್ಣಶರ್ಮರ ಹೆಜ್ಜೆಯ ಹಿಂದೆ ಹೆಜ್ಜೆಯಿಟ್ಟು ಹೊರಟ ಈ ದಿಟ್ಟ ಜೀವಿಯ ಶೈಲಿಗೆ ಹೊಸ ಮಾಟ. ಮನೆಗೆಬಂದ ಮಹಾಲಕ್ಷ್ಮಿಯೆಂಬ ಕಾದಂಬರಿ ಬರೆದು ಮಹಾ ಸಾಹಿತಿಯೊಂದಿಗೆ ಗುದ್ದಾಟ. ಹೊಸ ಲೇಖಕರಿಗೆ ಹಳಬರು ನೀಡುತ್ತಿದ್ದ ಈ ಬಗೆಯ ಪ್ರೋತ್ಸಾಹದ ವೈಖರಿಯಿಂದ ತ.ರಾ.ಸು. ವಿಗೆ ತತ್ತರ.

ಎಂಥ ಸಮಯದಲ್ಲೂ ಸ್ಥೈರ್ಯ ನೀಡುತ್ತಿದ್ದವರೆಂದರೆ, ಕೃಷ್ಣಶರ್ಮರ ಜೊತೆಗೆ ಅ.ನ. ಕೃಷ್ಣರಾಯ ತ.ರಾ.ಸು. ಮೆಚ್ಚಿಕೊಂಡಿದ್ದ ಕಾದಂಬರೀ ಸಾರ್ವಭೌಮ. ಜಗತ್ತನ್ನು ತಿದ್ದಹೊರಟ ಇವರನ್ನೇ ಜಗತ್ತು ತಿದ್ದಲು ತೊಡಗಿದಾಗ ಈ ತಿರುಗು ಬಾಣದ ಕಾಟದಿಂದ ತ.ರಾ.ಸು. ವಿಗೆ ಜಂಜಾಟ. ಆರೋಗ್ಯ ಸಮತೋಲವೂ ನಷ್ಟ. ಆರೈಕೆಗಾಗಿ ಮೈಸೂರಿಗೆ ಬಂದ ತ ರಾ ಸು. ವಿನ ಬಾಳಿನಲ್ಲಾ ವೇಳೆಗೆ ಆಗಲೇ ಹೊಸದೊಂದು ಟಿಸಿಲು ಕೈಹಿಡಿದ ಹೆಂಡತಿಯೊಂದಿಗೆ ಸ್ವತಂತ್ರ ಬರವಣಿಗೆ; ಮನೆಖರ್ಚಿಗೂ ಮನಸ್ಸಿನ ನೆಮ್ಮದಿಗೂ ಇದೇ ಆಧಾರ.

ಆಗ ಆರಂಭವಾದದ್ದೇ ತ ರಾ ಸು. ವಿನ ಬೃಹತ್ ಕಾದಂಬರೀ ಪ್ರವಾಹ–ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಮುಮ್ಮೊಗನಾಗಿ ನಡೆಯುವುದರ ಜೊತೆಗೆ ಹಿಮ್ಮೊಗನಾಗಿಯೂ ಸಂಚರಿಸುವ ಅತೀಂದ್ರಿಯ ಪ್ರಯತ್ನ. ನಡುನಡುವೆ ನಾಟಕ, ಸಣ್ಣ ಕತೆ, ಜೀವನ ಚಿತ್ರ, ಅನುವಾದ.

ಇತ್ತೀಚೆಗೆ ರಾಜಕೀಯ ಚಲನಚಿತ್ರ.

ತ.ರಾ.ಸು.ವಿನ ಲೇಖನಿ ಸರ್ವಜನ ಪ್ರಿಯ. ಆಕಳಿಸುತ್ತಿರುವವರನ್ನು ಆಕರ್ಷಿಸಿ ಅವರಿಂದ ಓದಿಸಿಕೊಳ್ಳುವುದೇ ಶೈಲಿಯ ಪ್ರಥಮ ಲಕ್ಷಣ. ಅ.ನ.ಕೃ.ವಿನ ಜಾಡು ಹಿಡಿದು ಹೊರಟು ತಮ್ಮದೇ ಆದೊಂದು ಮಾರ್ಗ ರಚಿಸಿಕೊಂಡ ತ.ರಾ.ಸು.ವಿನ ಶೈಲಿ ಹೆಚ್ಚು ಪ್ರಖರ. ನಿರೂಪಣೆಯಲ್ಲಿ ಹೆಚ್ಚು ಉದ್ವೇಗ. ಕೆಳಕ್ಕೆಸೆದ ಸೀಸದ ಚೆಂಡಿನಂತೆ ಕ್ಷಣಕ್ಷಣಕ್ಕೂ ಹೆಚ್ಚು ವೇಗ, ಆವೇಗ, ಆಕ್ರೋಶ, ನಭದಿಂದ ಅಧೋಗಾಮಿಯಾದ ಧಬಧಬಿಯ ತರಹ, ಅತಿಶಯೋಕ್ತಿಯಾದರೂ ಕ್ಷಣಕಾಲ ಮೈಮರೆಸುವ ಚಮತ್ಕಾರ, ಈ ಕ್ಷಣ ವಿಭ್ರಮೆಯ ಚಾಂಚಲ್ಯವೇ ಇನ್ನಷ್ಟು ಕಾಲ ನಿಂತು ಮೈತುಂಬಿ ನಡೆದಿದ್ದರೆ ಹೇಗೆ ಇದ್ದೀತೆಂದು ಸಹೃದಯರು ಚಿಂತಿಸುವ ವೇಳೆಗೆ ಲೇಖನಿಯಾಗಲೇ ಹರಿದಾರಿ ದೂರ. ಹಿಂಬಾಲಿಸಿ ಓಡಲೇಬೇಕು, ವಿಧಿಯಿಲ್ಲ.

ಬಳೇಪೇಟೆಯ ಪತ್ರಿಕಾಲಯದ ಮಬ್ಬು ಕೊಠಡಿಯಿಂದ ಸಾಹಿತ್ಯಗಿರಿಗೆ ಏರಿ ಬಂದಿರುವ ತ ರಾ.ಸು. ಸ್ನೇಹಪ್ರಿಯ. ನಿರರ್ಗಳವಾದ ಭಾಷಣ ಬಿಗಿಯಬಲ್ಲವರಾದ್ದರಿಂದ ಭಕ್ತರ ಬೇಡಿಕೆ ಬಹಳ.

ನೀಳಕ್ರಾಪು, ಮಾಟ ಮುಖ, ಜುಬ್ಬ, ಪಾಯಜಾಮ. ಎಂಜಿನ್ನಿನ ಹೊಗೆ ಕೊಳವೆಯಂತೆ ಕೈ ಮುಷ್ಟಿಯ ಬೆರಳ ನಡುವೆ ಸಿಕ್ಕಿನಿಂತ ಸಿಗರೇಟಿನ ಹೊಗೆಯಲ್ಲಿ ಮೈಮರೆಯುವ ಮೋಹ.

ಬಸವಜಯಂತಿಯ ದಿವಸ ಹುಟ್ಟಿದ ತ.ರಾ.ಸು.ವಿಗೆ ಪ್ರತಿವರ್ಷವೂ ಈ ಮಹಾಪುರುಷನ ಹೆಸರು ಹೇಳಿಕೊಂಡು ಹುಟ್ಟುಹಬ್ಬದ ಪಾಯಸ ಚಪ್ಪರಿಸುವುದೊಂದು ಮಹಾಯೋಗ.

ಕನ್ನಡದ ಕಂಪು

—ದೇಜಗೌ

ಅದೊಂದು ಕಾಲವಿತ್ತು. ಬಹುಹಿಂದಿನದಲ್ಲ. ಒಂದು–ಒಂದೂವರೆ ದಶಕವಿದ್ದಿರಬಹುದು. ಅ.ನ.ಕೃ. ಕಟ್ಟೀಮನಿ, ತ.ರಾ.ಸು., ಪುರಾಣಿಕ್, ತ್ರಿವೇಣಿಯರ ಕಾದಂಬರಿಗಳಿಗೆ ಓದುಬಲ್ಲವರು ಬಾಯ್ ಬಾಯ್ ಬಿಡುತ್ತಿದ್ದ ಕಾಲವದು. ಜನತೆಯ ವಾಚನಾಭಿರುಚಿಯನ್ನು ಬೆಳೆಸಿ, ಚಲನ ಗ್ರಂಥಾಲಯಗಳನ್ನು ಪೋಷಿಸಿದ ಕಾದಂಬರಿಗಳ ಹೊಸ ಸುಗ್ಗಿಯ ಕಾಲವದು. ಹೆಣ್ಣುಮಕ್ಕಳ ಮತ್ತು ಪ್ರಯಾಣಿಕರ ಕೈಯಲ್ಲಿ ಸುಲಭ ಬೆಲೆಯ ಕಾದಂಬರಿಗಳು ರಂಜಿಸುತ್ತಿದ್ದುವು. ಈಗ ಕಾಲ ಬದಲಾಯಿಸಿದೆ. ಅವಸರ್ಪಣಿಯುಗ ಬಂದಂತಾಗಿದೆ; ಕಾಗದ, ಮುದ್ರಣಗಳ ಬೆಲೆ ಗಗನಕ್ಕೇರಿದೆ. ಸುಲಭಬೆಲೆಯ ಕಾದಂಬರಿಗಳು ಮಾಯವಾಗಿವೆ. ಜನತೆಯ ಹಾಗೂ, ಅಕ್ಷರಸ್ಥರ ಸಂಖ್ಯೆ ಗರಿಕೆಯ ಬೇರಿನಂತೆ ಬೆಳೆಯುತ್ತಿದ್ದರೂ, ಓದುವವರ ಮತ್ತು ಕೊಳ್ಳುವವರ ಸಂಖ್ಯೆ ಇಳಿಮುಖವಾಗುತ್ತಿದೆ. ಅಷ್ಟೇ ಅಲ್ಲ, ಅಂದು ಪ್ರಕಟವಾಗುತ್ತಿದ್ದ ಪುಸ್ತಕಗಳೂ ಇಲ್ಲವಾಗಿ, ಆ ತಲೆಮಾರು ಹಿಂದೆ ಸರಿದಂತೆ ಭಾಸವಾಗುತ್ತಿದೆ.

ಆ ತಲೆಮಾರಿನ ಕಾದಂಬರಿಕಾರರು ಸುದೈವದಿಂದ ಇಂದಿಗೂ ನಮ್ಮೊಡನಿದ್ದಾರೆ. ಅವರಲ್ಲಿ ತ.ರಾ.ಸು. ಒಬ್ಬರು. ಅವರ ನಾಡು ನುಡಿಗಳ ಪ್ರೇಮ ಅಪ್ರತಿಮವಾದುದು. ಅವರ ಕರ್ನಾಟಕದ ಕಲ್ಪನೆ ಭವ್ಯವಾದುದು. ಗತ ಇತಿಹಾಸದ ವೈಭವ ವಿಸ್ಮೃತಿಯ ರಸಾತಲದಲ್ಲಿ ಹೂತು ಹೋಗದಂತೆ ಕಾದಂಬರಿ ಪ್ರಕಾಶದ ಮೂಲಕ ಶಾಶ್ವತ ಸ್ಮಾರಕಗಳನ್ನು ಮುಂದಿನ ತಲೆಮಾರುಗಳಿಗಾಗಿ ಕಡೆದಿರಿಸಿರುವ ಕೀರ್ತಿ ಅವರಿಗೆ ಸಲ್ಲುತ್ತದೆ. ವಸ್ತುವಿನ ಆಯ್ಕೆಯಲ್ಲಂತೂ ಅದರ ಮೂರ್ತೀಕರಣಕ್ಕೆ ಕಾರಣವಾದ ಭಾಷೆಯಲ್ಲಿಯೂ ಅವರ ವಿದ್ವತ್ಪ್ರತಿಭೆಗಳು ಹೊರಸೂಸುತ್ತವೆ. ವಸ್ತುಭಾವ ಭಾಷೆಗಳ ಸಮನ್ವಯವನ್ನು ಸಾಧಿಸುವಲ್ಲಿ ಅವರು ನಿಸ್ಸೀಮರು. ಅವರ ಶೈಲಿಯ ಸಹಜ ಸೌಂದರ್ಯಕ್ಕಾಗಿ, ಓಘ, ಓಜಸ್ಸುಗಳಿಗಾಗಿ ಮಾರುಹೋಗದ ವಾಚಕರು ವಿರಳ.

ಕರ್ಣಾಟಕದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳು ರಚನೆಯಲ್ಲಿ ಅವರ ಸಂಶೋಧನಾಸಕ್ತಿಯೂ ವಿದ್ವತ್ಸಾಹಸವೂ ಅಭಿವ್ಯಕ್ತವಾಗುತ್ತವೆ. ಅದಕ್ಕಾಗಿ ಅವರು ಗ್ರಂಥಾಲಯಗಳಲ್ಲಿ ಅನೇಕ ದಿನಗಳನ್ನು ಕಳೆದಿದ್ದಾರೆ: ಶ್ರೀಕಂಠಶಾಸ್ತ್ರಿಗಳಂಥ ವಿದ್ವಜ್ಜನರ ಬಳಿ ಗಂಟೆಗಟ್ಟಳೆ ಚರ್ಚೆ ನಡೆಸಿದ್ದಾರೆ: ಚರಿತ್ರೆ ಪುರಾಣ ಶಾಸನ ಐತಿಹ್ಯ ಜಾನಪದಗಳನ್ನು ಸೂರೆಗೊಂಡಿದ್ದಾರೆ. ಸಂಗ್ರಹಿಸಿದ ಸಾಮಗ್ರಿಯನ್ನು ಕೇರಿ, ಸೋಸಿ, ಕಲಾವಸ್ತುವನ್ನಾಗಿ ಮಾರ್ಪಡಿಸುವಲ್ಲಿ ಅವರ ಸೃಜನ ಪ್ರತಿಭೆಯ ಮಯೂರ ಹಲಗೆದರಿ ನರ್ತಿಸುವಂತಿದೆ. ಅವರ ಐತಿಹಾಸಿಕ ಕಾದಂಬರಿಗಳಲ್ಲಿ

ಸಂಶೋಧನಾ ಸಾಮರ್ಥ್ಯ ಹಾಗೂ ಸೃಜನಶಕ್ತಿಗಳ ಒಟ್ಟಿಗೆ ಮೇಳವಿಸಿದಂತಿವೆ.

ತಮ್ಮ ಗುರು ಅ.ನ.ಕೃ. ಅವರಂತೆ ತ.ರಾ.ಸು. ವಾಕ್ಕಲಾಕೋವಿದರು. ಯಾವ ವಿಷಯವನ್ನಾರಿಸಿಕೊಂಡರೂ ಅವರ ವಾಕ್ಪ್ರವಾಹ ನಿರರ್ಗಳವಾಗಿ ಸಾಗುತ್ತದೆ. ಎಂದಿಗೂ ಪದಗಳಿಗಾಗಿ ತಡವರಿಸಿದವರಲ್ಲ. ವಾಕ್ಯ ರಚನೆಯಲ್ಲಿ ಮುಗ್ಗರಿಸಿದವರಲ್ಲ. ಆಲೋಚನೆಗಾಗಿ ಚಾವಣಿಯ ಕಡೆಗೆ ಕಣ್ಣು ಹಾಯಿಸಿದವರಲ್ಲ. ಭಾಷಣ ಪ್ರಾರಂಭಿಸಿದ ನಾಕ್ಕೈದು ನಿಮಿಷಗಳಲ್ಲಿ ತ.ರಾ.ಸು. ಮರೆಯಾಗಿ ವಿಷಯಕ್ಕೆ ಬಾಯಿ ಬಂದಂತೆ, ಮಾತೆಲ್ಲವೂ ವಿಷಯವಾದಂತೆ, ಅವರ ಇಡೀ ವ್ಯಕ್ತಿತ್ವವೇ ಮಾತಾಡುತ್ತಿದ್ದಂತೆ ಭಾಸವಾಗುತ್ತದೆ. ಶ್ರೋತೃಗಳ ಮನಸ್ಸನ್ನೆಲ್ಲ ಆಕ್ರಮಿಸಿಕೊಳ್ಳುವ, ಮಾತಿನ ಸಮ್ಮೋಹನಾಸ್ತ್ರದಲ್ಲಿ ಅವರನ್ನು ಮೈಮರೆಯಿಸುವ ಮಾತಿನ ವಿಮಾನದಲ್ಲಿ ಅವರನ್ನು ತಮ್ಮೊಡನೆ ಬೇರೊಂದು ಪ್ರಪಂಚಕ್ಕೆ ಕೊಂಡೊಯ್ಯುವ ಅಸಾಧಾರಣ ಗಾರುಡಿಗಳವರು. ಕನ್ನಡ ಕಳಪೆಯಲ್ಲ, ಸತ್ವಹೀನವಾದದ್ದಲ್ಲ, ಸರ್ವಸಮರ್ಥ ಗಂಡು ಭಾಷೆಯೆಂಬ ಭಾವನೆ ಅವರ ವಾಗ್ಮಿತೆಯಿಂದ ಅಭಿವ್ಯಕ್ತವಾಗುತ್ತದೆ.

ನಿರರ್ಗಳತೆ, ಸ್ಪಷ್ಟತೆ ಹಾಗೂ ಓಜಸ್ಸು ಅವರ ಗದ್ಯ ಶೈಲಿಯ ಪ್ರಧಾನ ಲಕ್ಷಣಗಳು, ಒಟ್ಟಲು ತನವಂತು ಶೂನ್ಯ. 'ಪದವಿಟ್ಟಳುಪ ದೊಂದಗ್ಗಳಿಕೆ'ಗೆ ಹೆಸರಾದವರು ಅವರು. ಅವರ ಹಸ್ತಪ್ರತಿಯನ್ನು ನೋಡುವುದೊಂದು ಚೆಂದ. ಅದರ ಅಕ್ಷರಗಳು ಸಾಮಾನ್ಯರಿಗಿಂತ ಸಣ್ಣದಾಗಿದ್ದರೂ, ಚೊಕ್ಕವಾಗಿ ಸ್ಪಷ್ಟವಾಗಿರುತ್ತವೆ. ಎಲ್ಲಿಯೂ ಅಂಕುಡೊಂಕುಗಳಾಗಲೀ ಚಿತ್ತಾಗಲೀ ಇರುವುದಿಲ್ಲ. ತಿಣುಕೆಗೆ ಸಾಕ್ಷಿಯಾದ ಗೀಚುಗೆರೆಗಳಿಗೆ ಸ್ಥಾನವೇ ಇಲ್ಲ.

ಲೇಖನ ಕಲೆಯನ್ನೇ ವೃತ್ತಿಯಾಗಿರಿಸಿಕೊಂಡ ಧೀಮಂತರು ಕರ್ಣಾಟಕದಲ್ಲೇಕೆ ಭಾರತದಲ್ಲಿಯೇ ತೀರ ವಿರಳ. ಇದಕ್ಕೆ ಕಾರಣ ಸುಸ್ಪಷ್ಟ. ಉತ್ತಮ ಗ್ರಂಥಗಳಿಗೂ ಇಲ್ಲಿ ಗಿರಾಕಿಗಳಿಲ್ಲ ಕೊಂಡು ಓದುವವರು ಕಡಿಮೆ. ಹೆಂಡಗೆಂಡಗಳಿಗೆ ಹೊನ್ನು ಸುರುವಿದಾರು, ಆತ್ಮೋತ್ಸಾಹಕ್ಕೆ ನೆರವಾಗಬಹುದಾದ ಗ್ರಂಥಗಳನ್ನು ಕೊಂಡಿಟ್ಟುಕೊಳ್ಳುವ ಪರಿಪಾಠ ಕನ್ನಡಿಗರಲ್ಲಿ ಬೆಳೆದಿಲ್ಲ. ಆದ್ದರಿಂದ ಅ.ನ.ಕೃ. ಅಥವಾ ತ.ರಾ.ಸು. ಅವರಂಥ ವೃತ್ತಿ ಲೇಖಕರ ಬದುಕು ಶೋಚನೀಯವಾಗಿರುತ್ತದೆ. ಹೊಟ್ಟೆಯ ಪಾಡಿಗಾಗಿ ಅವರು ಅನ್ಯೋಪಾಯವಿಲ್ಲದೆ ತಿಂಗಳಿಗೊಂದು ಪುಸ್ತಕ ತಯಾರಿಸಬೇಕಾಗುತ್ತದೆ. ಮುಕ್ಕಾಲು ಮಂದಿ ಪ್ರಕಾಶಕರಿಂದ ಮುಂಗಡ ಹಣಪಡೆದು, ಅವರ ಒತ್ತಾಯಕ್ಕಾಗಿ ಏಕ ಕಾಲದಲ್ಲಿ ಎರಡು ಮೂರು ಹಸ್ತ ಪ್ರತಿಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಬೆಳಗ್ಗೆ ಎಂಟುಪುಟ ಬರೆದು ಒಂದು ಅಚ್ಚುಕೂಟಕ್ಕೆ ರವಾನಿಸಿ ಮಧ್ಯಾಹ್ನ ಮತ್ತೆಂಟು ಪುಟ ಬರೆದು ಮತ್ತೊಂದು ಅಚ್ಚುಕೂಟಕ್ಕೊಯ್ದು ಕೊಟ್ಟು ಬರುತ್ತಾರೆ. ರಾತ್ರಿಯಲ್ಲಿ ಪ್ರೂಫ್ (Proof) ತಿದ್ದಾಣಿಕೆ: ಪ್ರೂಫ್ ತಿದ್ದುವಾಗ ಹಸ್ತ ಪ್ರತಿಯ ಸಿದ್ಧತೆ ಇದು ಅ.ನ.ಕೃ. ತ.ರಾ.ಸು. ಅಂಥವರ ನಿತ್ಯ ಪರಿಪಾಠ. ಸಂತೆಹೊತ್ತಿಗೆ ಮೂರುಮೊಳ ನೇಯುವಂಥಾದ ಪರಿಸ್ಥಿತಿಯೂ ಆಗಾಗ್ಗೆ ಅವರಿಗೆ ಸವಾಲಾಗಿ ನಿಲ್ಲುತ್ತಿದ್ದುದುಂಟು.

ಇಂಥಾದ್ದರಲ್ಲಿಯೂ, ವಾಚಕವೃಂದದ ಅಭಿರುಚಿಯನ್ನರಿತುಕೊಂಡು, ಅವರ ರುಚಿಯನ್ನು ತಿದ್ದುವಂಥ, ಅವರ ಬುದ್ಧಿ ಹೃದಯಗಳಿಗೆ ಆಹಾರವನ್ನೊದಗಿಸುವಂಥ ಕೃತಿಗಳನ್ನೊದಗಿಸಿದ್ದಕ್ಕೆ ಅವರ ಶತಾವಧಾನ ಸಾಮರ್ಥ್ಯವೇ ಕಾರಣವಾಗಿದೆ.

ಅಹುದು, ತ.ರಾ.ಸು. ಕನ್ನಡದ ಕಣಜವನ್ನು ಶ್ರೀಮಂತಗೊಳಿಸಿದ್ದಾರೆ. ಅವರು ರಚಿಸಿರುವ ಕೃತಿಗಳ ಸಂಖ್ಯೆ ಒಂದು ಬದುಕಿಗೆ ಕಡಿಮೆಯೇನಲ್ಲ. ಆದರೂ ಕನ್ನಡಿಗರು ಅವರಿಂದ ಇನ್ನೂ ಹಲವಾರು ಕೃತಿಗಳನ್ನು ನಿರೀಕ್ಷಿಸಿದ್ದರೆ ತಪ್ಪಾಗದು. ಅವರ ಬೌದ್ಧಿಕ ಪ್ರತಿಭೆ ಹಾಗೂ ಮಾನಸ ಸಾಮರ್ಥ್ಯ ಪ್ರಬಲವಾಗಿರುವಾಗಲೇ ಅವರ ದೈಹಿಕ ಸ್ವಾಸ್ಥ್ಯ ಹದಗೆಟ್ಟಿದ್ದೂ ವ್ಯಕ್ತಿ ದೃಷ್ಟಿಯಿಂದ ಮಾತ್ರವಲ್ಲ, ಸಮುದಾಯದ ದೃಷ್ಟಿಯಿಂದಲೂ ದುರ್ದೈವವೆಂದೇ ಹೇಳಬೇಕು. ಬರೆಯಬೇಕೆಂಬ ಒತ್ತಡ ಉತ್ಕಟವಾಗಿದ್ದರೂ ಅವರೂ ಬರೆಯಲಾರದವರಾಗಿದ್ದಾರೆ.

ತ.ರಾ.ಸು. ಅವರ ವಾಗ್ಮಿತೆಯ ಪ್ರಭಾವವನ್ನು ನಿದರ್ಶನಗೊಳಿಸುವ ಸಂದರ್ಭವೊಂದರ ಉಲ್ಲೇಖ ಇಲ್ಲಿ ಅಪ್ರಸ್ತುತವಾಗಲಾರದು. ಅವರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದ ಕಾಲ. ಶ್ರೀ ಶ್ರೀಮಾಲಿಯವರು ಕುಲಪತಿಗಳಾಗಿದ್ದ ಕಾಲದಲ್ಲಿ ಕಾರಣಾಂತರಗಳಿಂದ ಪತ್ರಿಕಾ ವರದಿಗಾರರಿಗೆ ಸೆನೆಟ್ ಸಭೆಗೆ ಪ್ರವೇಶಾವಕಾಶ ತಪ್ಪಿಹೋಗಿತ್ತು. ಮತ್ತೆ ಆ ಪ್ರಶೆ ಸಭೆಯಲ್ಲಿ ತಲೆಯೆತ್ತಿ, ಸದಸ್ಯರಲ್ಲಿ ಬಹುಭಾಗ ಪ್ರವೇಶಾನುಮತಿಯ ಪರವಾಗಿದ್ದಾಗ ತ.ರಾ.ಸು. ಅವರು ವಿರುದ್ಧವಾಗಿ ಅರ್ಧಗಂಟೆ ವೀರಾವೇಶದಿಂದ ಗುಡುಗಿದರು. ಆ ಗುಡುಗು ಬರಿಯ ಗರ್ಜನೆಯಾಗಿರದೆ, ಭಾವನೆ ಆಲೋಚನೆಗಳ ವರ್ಷದಿಂದ ಸಮೃದ್ಧವಾಗಿತ್ತು. ಮೊದಲು ಪರವಾಗಿ ಮಾತಾಡಿದವರೇ ಅದರ ನಾದ ಸಾಮರ್ಥ್ಯಕ್ಕೆ ತರ್ಕಬದ್ಧತೆಗೆ ಮಾರುಹೋಗಿ ಮತಾಂತರಿಗಳಾದರು. ಎಂಥ ವಿರೋಧಿಗಳನ್ನಾದರೂ ತಮ್ಮ ಕಡೆಗೆ ಸೆಳೆದುಕೊಳ್ಳಬಲ್ಲ ವಾಕ್ಕೌಶಲ್ಯ ತ.ರಾ.ಸು. ಅವರಿಗೆ ವಶವಾಗಿತ್ತೆಂಬುದಕ್ಕೆ ಇದೊಂದೇ ನಿದರ್ಶನ ಸಾಕು.

ಗುರುವಿಗೆ ತಕ್ಕ ಶಿಷ್ಯ ತ.ರಾ.ಸು. ಅ.ನ.ಕೃ. ಗರಡಿಯಲ್ಲಿ ಪಳಗಿದ ಅವರು ಸಾಹಿತ್ಯದ ವಿಚಾರಗಳಲ್ಲಿ ಗುರುವನ್ನೇ ಮೀರಿಸಿ ನಿಂತರು. ಆದರೆ ಅವರೆಂದೂ ಮರೆತು ಸಹ ತಮ್ಮ ಗುರುವನ್ನು ನಿಂದಿಸಿದವರಲ್ಲ. ಅವರ ಬಗ್ಗೆ ನಿರ್ಲಕ್ಷ್ಯ ಮನೋಭಾವವನ್ನು ತಾಳಿದವರಲ್ಲ. ಅವರ ಭೌತಿಕ ಹಾಗೂ ಮಾನಸಿಕ ಜೀವನದ ಕಣಕಣವೂ ಅವರನ್ನು ಕೃತಜ್ಞತೆಯಿಂದ ನೆನೆಯುತ್ತದೆ. ಪ್ರಗತಿಶೀಲ ಚಳುವಳಿ ಪ್ರಾರಂಭವಾದಾಗ ಅ.ನ.ಕೃ. ಅವರ ಬಲಭುಜವಾಗಿ ನಿಂತವರಲ್ಲಿ ಇವರೊಬ್ಬರು ; ತ್ರಿಕರಣಶುದ್ಧವಾಗಿ, ಶ್ರದ್ಧಾನಿಷ್ಠೆಗಳಿಂದ ಅದಕ್ಕೆ ಬೆಂಬಲ ನೀಡಿದ್ದುಂಟು. ಜಡ ಸಂಪ್ರದಾಯಕ್ಕೆ ವಿರುದ್ಧವಾಗಿ ಸೆಟೆದು ನಿಲ್ಲುವ ಪ್ರಗತಿಪರ ಮನೋಧರ್ಮ ಅವರದು.

ನಿರಂತರ ಜ್ಞಾನೇಚ್ಛುವೂ, ಜಿಜ್ಞಾಸುವೂ ಆದ ತ.ರಾ.ಸು. ರಸಿಕರೂ ಅಹುದು, ಉದಾರಿಗಳೂ ಅಹುದು. ನಿಷ್ಕಪಟ, ಮಧುರ ಸ್ನೇಹ ಈ ಗುಣಗಳಿಗೆ ಸೆಲೆಯಾಗಿದೆ. ಜಾತಿಕುಲ ಸಂಪ್ರದಾಯಗಳನ್ನು ಮೀರಿನಿಂತ, ಒಳ್ಳೆಯದಲ್ಲದಿದ್ದರೂ ಗುರುತಿಸುವ ಪ್ರೀತಿಸುವ ಸುಸಂಸ್ಕೃತರವರು. ಇತರರನ್ನು ಟೀಕಿಸುವಾಗ ಸಂಯಮದ ಗಡಿಯನ್ನು ದಾಟಿದವರಲ್ಲ. ಕನ್ನಡದ ಬಗ್ಗೆ ಮಾತನಾಡುವಾಗ ಸಹಜವಾಗಿಯೇ ಆವೇಶಕ್ಕೊಳಗಾಗುತ್ತಾರೆ. ಕರ್ಣಾಟಕದ ಗತವೈಭವದ ಬಗ್ಗೆ ಹೆಮ್ಮೆ ಪಡುವ ಅವರ ಭವಿಷ್ಯದ ಬಗ್ಗೆ ಪ್ರಾಮಾಣಿಕವಾದ ಕಳಕಳಿ ವ್ಯಕ್ತಪಡಿಸುವ, ನವಕರ್ನಾಟಕದ ಭವ್ಯ ಕಲ್ಪನೆಯನ್ನು ರೂಪಿಸಿಕೊಂಡಿರುವ ಕೆಲವೇ ಕೆಲವು ಸಾಹಿತಿಗಳಲ್ಲಿ ಇವರೊಬ್ಬರು. ಕೆಲವು ಸಾಹಿತಿಗಳಿಗೆ ಮೀಸಲಾಗಿರುವ ಗುಂಪುಗಾರಿಕೆಯಾಗಲೀ ಬೇರೆ ಸಾಹಿತಿಗಳ ಅಭ್ಯುದಯವನ್ನು ಕಂಡು ಕರುಬುವ ಅವಗುಣವಾಗಲೀ ಅವರಲ್ಲಿ ಗೈರುಹಾಜರು. ಇಂಥ ಯಾವ ಯಾವ ದೇಶಕ್ಕಾದರೂ ಯಾವ ಸಾಂಸ್ಕೃತಿಕ ಕ್ಷೇತ್ರಕ್ಕಾದರೂ ಭೂಷಣ, ಅಂಥವರ ಸ್ನೇಹವನ್ನು ಪಡೆದ ವಕ್ತಿಗಳಂ ಧನ್ಯ.

* ಹಾಡು ಹಾಡುವವನು ಬೇರೆ ಬೇರೆ ಎಂಬ ಭಾವನೆ ಹೋಗಬೇಕು. ಎರಡೂ ಒಂದಾಗಬೇಕು ನಾನು–ನೀನು ಎಂಬ ದ್ವಂದ್ವ ಇರುವವರೆಗೂ ಜೀವನದಲ್ಲಿ ಸಮರಸ ಹೇಗೆ ಸಾಧಿಸುವುದಿಲ್ಲವೋ, ಹಾಗೆ ಸಂಗೀತದಲ್ಲೂ, ಒಂದು ವೇಳೆ ಜೀವನದಲ್ಲಿ ದ್ವಂದ್ವ ಇದ್ದರೂ ನಡೆದೀತು. ಸಮರಸವೇ ಜೀವವಾದ ಸಂಗೀತದಲ್ಲಿ ಅದು ಕೂಡದೇ ಕೂಡದು. ತಲ್ಲೀನತೆಯೊಂದೇ ಸಂಗೀತದಲ್ಲಿ ಸಿದ್ಧಿಗೆ ದಾರಿ. ಹಾಡುತ್ತಿದ್ದೇನೆ ಎನ್ನುವ ಅರಿವು ಹಾಡುವಾಗ ಇರಬಾರದು.

ಗಿರಿಕನ್ಯಕಾದ ಪ್ರಶಾಂತತೆಯಲ್ಲಿ ತ.ರಾ.ಸು

— ವಿಜಯಾ

ಲೋಕದ ಕ್ರೌರ್ಯವನ್ನು ಎದುರಿಸಲು ತಕ್ಕ ಮಾನಸಿಕ ಹಾಗೂ ಶಾರೀರಿಕ ಒರಟುತನಗಳನ್ನು ಬೆಳೆಯಿಸಿಕೊಳ್ಳುವುದೂ ಅವಶ್ಯಕವೇನೋ !

ಜೀವನದ ಹುಳಿ-ಒಗರುಗಳನ್ನು ಹಣ್ಣಾಗಿಸಲು ಈ ಕಾವು ತೀರ ಅವಶ್ಯಕವೂ ಹೌದೆನಿಸಿದ್ದು ನಾನು ನಮ್ಮ ನೆಚ್ಚಿನ ಕಾದಂಬರಿಕಾರ ಸಹೃದಯಿ ತ.ರಾ.ಸು. ರವರೊಂದಿಗೆ ಮಾತನಾಡಿದಾಗ........

ಮಾನವ ಜನಾಂಗ ಎಂದೆಂದೂ ಅತ್ಯುತ್ಕೃಷ್ಟವಾದುದನ್ನಲ್ಲದೆ ಕೀಳಾದುದನ್ನು ಅಪೇಕ್ಷಿಸದು. ಅಂದಮೇಲೆ ಸಾಹಿತ್ಯ ಶ್ರೀಯಿಂದ ಪರಮಸತ್ವವನ್ನು ಲೋಕದಲ್ಲಿ ತುಂಬಲು ಶಕ್ಯವಾಗುವುದಾದರೆ, ಅದರ ಬಳಕೆ-ವ್ಯಾಪ್ತಿಯನ್ನ, ಪ್ರಯೋಗವನ್ನ ಕುರಿತು ವಿವೇಚಿಸಲೇ ಬೇಕು, ಕೃತಿಕಾರ. ಆಗಲೇ ಅವನ ಚಿಂತನೆಯ ಮೂಸೆಯಲ್ಲಿ ಬಿದ್ದೆದ್ದ ಮಹದ್ವಿವೇಚನೆಯು ಫಲಿತವಾದ ಕೃತಿ ಕಲಾತ್ಮಕವಾದೀತು. "ಅದೂ ಸಹ ಸಹೃದಯರ ಭಾವಶಕ್ತಿಗನುಗುಣವಾಗಿ ರೂಪಗೊಳ್ಳಬೇಕು, ಮಧುರವಾಗಬೇಕು" ಎಂದು ನುಡಿಯುವ ತ. ರಾ. ಸುಬ್ಬರಾಯರು ಸಾಹಿತ್ಯ ಕ್ಷೇತ್ರದ ಹಳೆಯ ಹುಲಿ. ಬದುಕಿನ ನೋವು ನಲಿವು ಸಾಹಿತ್ಯ ಕ್ಷೇತ್ರದಲ್ಲೂ ಅವರನ್ನು ಕಾಡದೆ ಬಿಟ್ಟಿಲ್ಲ.

ಎಳೆತನದಿಂದಲೂ ಸೊಗಸಾಗಿ ಹರಟುತ್ತಿದ್ದ ತ. ರಾ. ಸು. ಅವರನ್ನು" ಮಾತನ್ನು ಕೃತಿಗಿಳಿಸು, ಅನಿಸಿಕೆಯನ್ನು ಅಕ್ಷರದಲ್ಲಿ ಮುಡಿಸು" ಎಂದು ತಿದ್ದಿ ದಾರಿಮಾಡಿದ ಶ್ರೇಯಸ್ಸು ಸಲ್ಲಬೇಕಾದದ್ದು ಟಿ. ಎಸ್. ವೆಂಕಣ್ಣಯ್ಯನವರಿಗೆ. ತಂದೆ ರಾಮಸ್ವಾಮಯ್ಯ ಚಿತ್ರದುರ್ಗದಲ್ಲಿಯ ಪ್ರಸಿದ್ಧ ಲಾಯರ್ ಆಗಿದ್ದರೂ ಸ್ವಯಂ ಸಾಹಿತಿಗಳೂ ಹೌದು. ಸದಾ ಸಾಹಿತಿಗಳ ಸಾಮಿಪ್ಯ ಚರ್ಚೆ — ಹೊಸ ಹೊಸ ಚಿಂತನೆ — ಇಂಥ ವಾತಾವರಣದಲ್ಲಿ ಬೆಳೆದ ಎಳೆಯನ ಚಿಂತನೆ ತಂತಾನೆ ಸಾಹಿತ್ಯ ಶ್ರೀಯನ್ನೊಲಿದದ್ದು ಅಸಹಜವೇನಲ್ಲ. ಒಂದಿಗೇ ಅಸಂಖ್ಯಾತ ಪುಸ್ತಕಗಳ—ಗ್ರಂಥಗಳ ಅಧ್ಯಯನ — ಚರ್ಚಿಸುವ ಚಟ. ಇಂಥ ಎಳೆ ಪಯಿರನ್ನು ಕರೆದೊಯ್ದು ಚಿತ್ರದುರ್ಗದ ಕೋಟೆಯ ಅಣು-ಅಣುವನ್ನೂ ತೋರಿಸಿ ವಿಸ್ತಾರವಾಗಿ ಕಥೆ ಹೇಳಿದವರು ಹುಲ್ಲೂರು ಶ್ರೀನಿವಾಸ ಜೋಯಿಸರು. ಚಿಂತನೆ — ಭಾವಸಮಾಧಿ — ಚಿತ್ರದುರ್ಗದ ಚಾರಿತ್ರಿಕ ವ್ಯಕ್ತಿಗಳ ಸುತ್ತ ಮನಸ್ಸು ಲೀನವಾಗಿ ವಿಶಿಷ್ಟವಾದೊಂದು ರೂಪು ಕೊಡುತ್ತ ಸಿದ್ಧವಾಗುತ್ತಿರುವಾಗಲೇ ಟಿ. ಎಸ್. ವೆಂಕಣ್ಣಯ್ಯನವರು ಗಲಾಟೆಮಾಡಿ ಏನಾದರೂ ಬರೆಯಲು ಹೇಳಿದ್ದು. 'ಮಾಘೂ ಚೆಂಡು' ಕಥೆ ಬಾಲಿಶವಾಗಿ ಬರೆದ ಮೊದಲ ಅನುಭವ. ಅದಕ್ಕೆ ಹತ್ತುರೂಪಾಯಿ ಗೌರವಧನ ದೊರೆತಾಗ ಹಿಗ್ಗಿ ಓಡಿ ಸುಬೋಧ ಕುಸುಮಾಂಜಲಿಯಲ್ಲಿ ಅಷ್ಟು ಹಣಕ್ಕೂ ಓದಲು ಪುಸ್ತಕ ಕೊಂಡದ್ದು. ತಾನೇ ಶ್ರಮಿಸಿ

ಪಡೆದ ಫಲ — ಬಾಹುಗಳಲ್ಲಿ ಬಾಚಿಹಿಡಿಯುವಷ್ಟು ಪುಸ್ತಕ—ಓ...ಅದೆಂಥ ಆನಂದ ಅಂದು. ಆ ಎಳೆಯನ ಕಣ್ಣುಗಳಲ್ಲಿ! ನಂತರ 'ಸತ್ಯವಾಣಿ'ಯಲ್ಲಿ ಸ್ಪರ್ಧೆಗೆ ಕಥೆ ಬರೆದು ಮೊದಲ ಬಹುಮಾನ ಗಿಟ್ಟಿಸಿದ್ದು. ಆಗಲೇ ಎಲ್ಲರಲ್ಲೂ ಈ ಕಿರಿಯನಲ್ಲೇನೋ ಸತ್ವವಿವೆ. ಕನ್ನಡದ ಕೆಲಸ ಮಾಡಿಯಾನೆಂಬ ಭರವಸೆ ಮೂಡಿದ್ದು.

ಟಿ. ಎಸ್. ವೆಂಕಣ್ಣಯ್ಯನವರು, ಕಾಳೆ ಮೊದಲಾದವರೆಲ್ಲ ಮನೆಗೆ ತರುತ್ತಿದ್ದ ಶೇಷಾಚಲ ಗ್ರಂಥಮಾಲೆಯ ಅನೇಕ ಪುಸ್ತಕಗಳನ್ನು ತಪ್ಪದೆ ಓದುತ್ತಿದ್ದುದು ಬರವಣಿಗೆ ಪಕ್ವವಾಗಲು ಬಹಳಷ್ಟು ಕಾರಣವಾಯಿತು ಎಂಬುದು ತ.ರಾ.ಸು. ಅವರ ಅನುಭವದ ಸಿದ್ಧಾಂತ. ಇದರೊಂದಿಗೆ ಶಾಲೆಯಲ್ಲಿ ಅಧ್ಯಾಪಕರ ಮೆಚ್ಚುನುಡಿಯೂ ಸೇರಿತ್ತು. ಮೊದಲು ಬರೆದ ನಾಟಕ 'ರಣಯಂತ್ರ'. ಆವೇಳೆಗಾಗಲೇ ಅ.ನ.ಕೃ. ಪರಿಚಯ. ನಂತರದ ಓಟವೇ ಮತ್ತೊಂದು ಬಗೆ.

ಸಿದ್ಧವನಹಳ್ಳಿ ಕೃಷ್ಣಶರ್ಮರ ಪ್ರಭಾವದಿಂದಾಗಿ ಬರೆದ ಕಬೀರ್ ಮೇಲಿನ ಲೇಖನಕ್ಕೆ ಒಳ್ಳೆಯ ಸ್ವಾಗತ. ಪುನಃಶಾಸ್ತ್ರವನ್ನವಲಂಬಿಸಿ ಬರೆದ 'ಹಿಂತಿರುಗಲಿಲ್ಲ' ಜೀವನ ಪತ್ರಿಕೆಯಲ್ಲಿ ಪ್ರಕಟವಾದಾಗ ಬೇಂದ್ರೆಯವರಿಂದ ಮೆಚ್ಚುಗೆ — ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದು, "ಅದೊಂದು ಸ್ಫೂರ್ತಿದಾಯಕ ವಾತಾವರಣ" ಎನ್ನುತ್ತಾರೆ ತ. ರಾ. ಸು.

ಶಿವಮೊಗ್ಗೆಯ ಕಾಲೇಜಿನಲ್ಲಿ ಅಭ್ಯಾಸ ನಡೆಸಿದ್ದಾಗ ಭಾಸ್ಕರರಾವ್ ಮೆಮೋರಿಯಲ್ ಸ್ಪರ್ಧೆಗೆ ಭಾಗವಹಿಸಿ ಪ್ರಬಂಧ ರಚನೆಯಲ್ಲಿ ವಿಜೇತರಾದದ್ದು ಬಿ.ಎಂ. ಶ್ರೀ ಅಂದು "ಮನೆತನಕ್ಕೇ ಹೆಸರು ತರುವಂಥ ಮಗ"ನೆಂದು ಹೊಗಳಿ ಬೆನ್ನುತಟ್ಟಿದ್ದರು. ಇವೆಲ್ಲ ಬರವಣಿಗೆಯ ಗೀಳು ಉಲ್ಬಣಿಸಲು ಸ್ಫೂರ್ತಿ ಇರಬೇಕು!

ಇದೇ ಸಂದರ್ಭದಲ್ಲಿ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ. ಎಳೆ ಹೃದಯ... ಬಿಸಿರಕ್ತದ ತರುಣ... ಚಳುವಳಿಯ ಸಮುದ್ರದಲ್ಲಿ ಧುಮ್ಮಿಕ್ಕಿದ್ದರು. ಈ ಮಧ್ಯೆ 'ಮನೆಗೆ ಬಂದ ಮಹಾಲಕ್ಷ್ಮಿ' ಮೊದಲ ಕಾದಂಬರಿ ಬರೆದದ್ದು. ಮಾಪ್ರೋಸಾ ಕಾದಂಬರಿಯ ಪ್ರಭಾವ ಎಂಬ ಅಪವಾದ ತಮ್ಮ ಮೇಲೆ. ಮಾಸ್ತಿಯವರೊಂದಿಗೇ ಘರ್ಷಣೆ ಎಲ್ಲ ನೆನೆದಾಗ ಈಗಲೂ ನಗೆ ಮಿನುಗುತ್ತದೆ ತ.ರಾ.ಸು. ಮೊಗದಲ್ಲಿ.

ತ.ರಾ ಸು. ಮಾಡದ ಕೆಲಸವಿಲ್ಲ. ಬರೆಯುವ ವಸ್ತುವಿಲ್ಲ. ತ.ರಾ.ಸು. ಒಳ್ಳೆಯ ಪತ್ರಿಕೋದ್ಯಮಿಯೂ ಹೌದು. 'ವಿಶ್ವಕರ್ನಾಟಕ'ದಲ್ಲಿ ಉಪ ಸಂಪಾದಕರಾಗಿ ಬಹಳ ಕಾಲ ದುಡಿದಿದ್ದಾರೆ.

ಈ ಮಧ್ಯೆ ಚಳುವಳಿಯ ಗಲಭೆ ಬಹಳವಾದದ್ದು. ಹತ್ತರೊಡನೆ ಹನ್ನೊಂದಲ್ಲ ನಿಜಕ್ಕೂ ದೇಶದ ಸಲುವಾಗಿ ಚಳುವಳಿಯಲ್ಲಿ ಭಾಗವಹಿಸಿದ್ದು — ದೇಶಕ್ಕಾಗಿ ದುಡಿದದ್ದು — ಒಂದೇ ನೆಮ್ಮದಿ. ಆಗ ಎಲ್ಲರ ಮನೆಯಂತೆ ಇವರ ಮನೆಯಲ್ಲಿ ರಾಜಕೀಯದ ಬಗ್ಗೆ ವಿರೋಧವಿರಲಿಲ್ಲ. ಹೆತ್ತವರ ಬೆಂಬಲವಿತ್ತು ಚಳುವಳಿಗೆ. ತಂದೆಯವರ ಸಹಕಾರ. ಸುತ್ತ ರಾಜಕೀಯ ವ್ಯಕ್ತಿಗಳು — ಸದಾ ಬಿಸಿ-ಬಿಸಿ ಚರ್ಚೆ,

ಶಿವಪುರ ಸತ್ಯಾಗ್ರಹದಲ್ಲಿ ಉತ್ಸಾಹದಿಂದ ಭಾಗವಹಿಸಿ ಜೈಲಿಗೂ ತೆರಳಿದ್ದು.—ನಂತರ ನಿಜಲಿಂಗಪ್ಪನವರೊಂದಿಗೇ ಹಳ್ಳಿಗೆ ಹಿಂತಿರುಗಿದ್ದು —ಇವರ ಧೈರ್ಯ—ಸಾಹಸ—ಕಾರ್ಯ ದಕ್ಷತೆಯಿಂದಾಗಿ 'ಧ್ರುವ' ಎಂದು ನಾಮಕರಣವಾದದ್ದು. ಪುನಃ ೩ ತಿಂಗಳು ತುರಂಗವಾಸ. ೧೯೩೯ ರಲ್ಲಿ ಪುನಃ ಶಿವಮೊಗ್ಗ—೧೯೪೨ ರಲ್ಲಿ ತುಮಕೂರು ನಿಂತಲ್ಲಿ ನಿಲ್ಲದ ಕಾಲು. ಚಳುವಳಿ— ಸತ್ಯಾಗ್ರಹ, ದೇಶಭಕ್ತರ ಐಕಮತ್ಯ ಎಂದು ಹೋರಾಟದ ಸಲುವಾಗಿ ಸಂಚಾರ ನಡೆಸಿಯೇ ಇತ್ತು. ಏನೂ ಮಾಡುವ ಕೆಚ್ಚು ತುಂಬಿದಾಗ ಕಾರ್ಯ ಸುಸೂತ್ರವೇ ಆಗುತ್ತಿತ್ತು. ಗಿಡದ ಹೂವು ಮಿಡಿಯಾಗಿ ಮುಂದಿನ ಅವಸ್ಥೆಗೆ ಬೆಳೆದಂತೆಲ್ಲ ಅದರ ಗಾತ್ರವನ್ನ—ತೂಕವನ್ನ—ಧರಿಸುವಂತಹ ಶಕ್ತಿಯನ್ನು ಹೊತ್ತಿರುವ ತೊಟ್ಟೂ ತುಂಬಿಕೊಳ್ಳುತ್ತ ಬರುವುದಲ್ಲ! ತ. ರಾ. ಸು. ರವರ ದೇಶಪ್ರೇಮದ ಅಮರ ಶಕ್ತಿ ಅವರ ಒಡಲನ್ನು ರಕ್ಷಿಸಿಟ್ಟಿತ್ತು. ೧೯೪೭ ರಲ್ಲಿ 'ಕಿಡಿ' ಪತ್ರಿಕೆಯ ಸಲುವಾಗಿ ಅಂಡರ್ ಗ್ರೌಂಡ್ ವರ್ಕ್ ಆರಂಭ—. ಒಮ್ಮೆ ಎ.ಐ.ಆರ್.ಗೆ ಭಾಷಣಕ್ಕೆ ಬಂದಾಗ ಹೊಲ್ಡಾಲ್‌ನಲ್ಲಿ ಕಿಡಿ ಪತ್ರಿಕೆ ತುಂಬಿ ತಂದದ್ದು.—ಪೋಲೀಸರ ಕೈಗೆ ಸಿಕ್ಕಿಬಿದ್ದು ತಪ್ಪಿಸಿಕೊಂಡಿದ್ದೇ ಒಳ್ಳೆ ಸ್ವಾರಸ್ಯ ಪ್ರಸಂಗ. ಪತ್ರಿಕೆಗಳನ್ನೆಲ್ಲ ನಂತರ ಗುಟ್ಟಾಗಿ ಜಗನ್ಮೋಹನ್ ಪಾಲೆಸ್‌ಗೆ ಸಾಗಿಸಿದ್ದು ;— ದೇಶಾಭಿಮಾನ ಎಂಥ ಸಾಹಸಕ್ಕೂ ಸಿದ್ಧವಾಗಲು ತವಕಿಸುತ್ತದೆ. ನಾಡನ್ನು ಕಟ್ಟಲು ;—ಉಳಿಸಲು ದೇಶನಾಯಕರು ಬಳಸಿದ ಅಸ್ತ್ರ ಅಧಿಕಾರ, ಬೆದರಿಕೆಯಲ್ಲ; ಪ್ರೇಮ, ದಯೆಗಳ ದೈವೀಶಕ್ತಿಯ ಎಳೆಗಳಿಂದ ಮನ-ಮನಗಳನ್ನು ಕಟ್ಟುವ ಯತ್ನ ಅಲ್ಲಿತ್ತು. ಅವರ ಬಳಕೆಯ ಸಫಲತೆಗಾಗಿ ನೂರಾರು ಎಳೆಯರ ತ್ಯಾಗ.

ಈ ಮಧ್ಯೆ ಎನ್.ಡಿ. ಶಂಕರ್, ಆಳ್ವ ಮೊದಲಾದವರ ಪರಿಚಯ— ಪ್ರಭಾವ. ಬಹುದಿನದಿಂದ ಶ್ರಮದಿಂದಲೂ ಸಿದ್ಧಿಸಲಾಗದ ಸಾಧನೆ— ರೊಚ್ಚಿಗೆದ್ದ ಮತ ಪರಿಸರದ ಪ್ರಭಾವ— ಹೀಗಾಗಿ ಮನಸ್ಸು ಪ್ರತಿರೋಧಿಯಾಗಿ ನಿಂತದ್ದು, — ಕ್ರಾಂತಿಕಾರೀ — ಭಾವ,— ಕಮ್ಯುನಿಸಂನತ್ತ ಒಲವು. ಅಂದಿನ ರೊಚ್ಚೇ ಬಹುಪಾಲು ಲೇಖಕರು ಬರೆಯಲು ನಾಂದಿ. ಪ್ರಗತಿಶೀಲ ಲೇಖಕರ ಮೂಲವೂ ಇದೇ ಆಗಿತ್ತು.

"ಅ.ನ.ಕೃ. ಬಗ್ಗೆ ನನಗೆ ಅಪಾರ ಅಭಿಮಾನ" ಎನ್ನುವ ತ.ರಾ.ಸು. ಅ.ನ.ಕೃ. ತಮಗಿತ್ತ ನೆರವು— ಕಾದಂಬರಿಕಾರ ತಾವಾಗಲು ಅ.ನ.ಕೃ. ಕೊಟ್ಟ ತರಬೇತಿ. ಬರೆದಾಗ,— ಓದಿದಾಗ ಸುಡಿಯುತ್ತಿದ್ದ ಮೆಚ್ಚಿಗೆಯ ಸ್ಫೂರ್ತಿಯ ನುಡಿ ಎಂದೆಂದಿಗೂ ಮರೆಯಲಾಗದ್ದು" ಎನ್ನುತ್ತಾರೆ. "೧೯೫೪ ರ ಹಿಂದೆ ಅ.ನ.ಕೃ. ಸ್ವಯಂಸ್ಫೂರ್ತಿಯ ಚಿಲುಮೆಯಾಗಿದ್ದರು" ಎಂದರು.

ಅಂಥ ಇನ್ನೊಂದು ವ್ಯಕ್ತಿಯನ್ನು ಇಂದು ದೀಪ ಹಿಡಿದು ತಡಕಿದರೂ ಸಿಗುವಂತಿಲ್ಲ ಎನ್ನುವ ತ.ರಾ.ಸು. ಅ.ನ.ಕೃ.ರನ್ನು ನೆನೆದು ತುಂಬಾ ದುಃಖಿಸುತ್ತಾರೆ.

ಅ.ನ.ಕೃ. ಕುಳಿತು ಪೋಲ್ಳು ಮಾತಾಡುವ, ಆಕಾಶ ಭಾಷಣ ಮಾಡುವ ಜಟ್ಟೀ

ಜನರನ್ನ ಎಂದೂ ಒಪ್ಪಿದವರಲ್ಲ. ನಿರಂಜನ, ಅರ್ಚಿಕ ವೆಂಕಟೇಶ, ನಾಡಿಗೇರ್, ಮಾ.ನಾ.ಚೌ., ಮೊದಲಾದ ಎಲ್ಲರನ್ನೂ ಸೇರಿಸಿ ಚಿನ್ನೆನಿಸಿದ ಪುಸ್ತಕದ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಹಳಗನ್ನಡ ಕಾವ್ಯವನ್ನ ಒತ್ತಾಯದಿಂದ ಓದುವಂತೆ ಮಾಡಿದವರು ಅ.ನ.ಕೃ. ಗಾರ್ಕಿ, ಟಾಲ್‌ಸ್ಟಾಯ್‌ರನ್ನು ತಿಳಿಯುವ ಮುನ್ನ ನಮ್ಮ ನೆಲದ ಜನರಾದ ಪಂಪ, ರನ್ನ, ಸರ್ವಜ್ಞರನ್ನ ಅರಿಯಿರಿ ಎಂದು ಹೇಳುವುದು ಮಾತ್ರವಲ್ಲ, ಅವರನ್ನರ್ಥಮಾಡಿಕೊಳ್ಳಲೂ ನೆರವು ನೀಡುತ್ತಿದ್ದರು. ಇಂಥ ಸಾಹಿತ್ಯ ಚರ್ಚೆಗಳ ಅನೇಕ ರಾತ್ರಿಗಳನ್ನ ಕುಳಿತೇ ಕಳೆದಿದ್ದೇವೆ. "ಇಂಥ ನೆನಪೂ ಸಹ ನನ್ನಲ್ಲಿ ಬರೆಯುವ ಉತ್ಸಾಹ ಚಿಮ್ಮಿಸುತ್ತದೆ" ಎನ್ನುವ ತ.ರಾ.ಸು. ಅಗಿಹೋದ ದಿನಗಳನ್ನು ನೆನೆದು ಅಂಥ ದಿನ ಮತ್ತೆ ಬರಬಾರದೇ ಎಂದು ಪರಿತಪಿಸುತ್ತಿದ್ದಂತಿತ್ತು ಅವರು ಕುಳಿತ ಭಂಗಿ.

"ಸಿದ್ಧವನಹಳ್ಳಿ ನಾನು ಬರೆದ ಲೇಖನ, ಕಥೆಗಳ ಬಗ್ಗೆ ಹೇಳಿ ತಿದ್ದಿದ್ದಾರೆ, ಶೈಲಿ ಹೊಸದಾಗಲು, ಹೇಳುವ ತಂತ್ರದಲ್ಲಿ ವೈವಿಧ್ಯ ತುಂಬಲು ಅವರ ನೆರವೂ ಬಹಳ ಇದೆ" ಎನ್ನುತ್ತಾರೆ ತ.ರಾ.ಸು.

"ಬಿ. ಎಸ್. ಗುಪ್ತಾರ ಲೈಬ್ರರಿ ಸಾಮಾನ್ಯದ್ದಲ್ಲ. ಸಂಗ್ರಹಿತ ಗ್ರಂಥಗಳನ್ನೋದಿ ಚಿಂತನೆಯ ವಿಸ್ತಾರಕ್ಕೆ ಹಾದಿ ಮಾಡಿಕೊಳ್ಳಲು ಬಹಳ ನೆರವಾದರು ಗುಪ್ತ. ಗುಪ್ತ ಒಳ್ಳೆಯ ರಾಜಕೀಯ ಧುರೀಣರು, ಅವರಲ್ಲಿದ್ದ ಶಕ್ತಿ ಅಪಾರ. ಅವರ ನೆರವಿನಿಂದ ರಾಜಕೀಯದ ಅರಿವು— ವಿಚಾರ ಸಂಗ್ರಹಣೆ ಆದದ್ದು ಬಹಳ. "ಗುಪ್ತ, ತುಸು ಶಕ್ತಿ ಇರುವಾತನನ್ನು ಕಂಡರೆ ಹಿಡಿದು ಅರೆಯುವ ಸ್ವಭಾವದರು. ಅವರ ಮಾರ್ಗದರ್ಶನ ನನ್ನ ಮುಂದಿನ ಬರವಣಿಗೆಗೆ ಬಹಳ ನೆರವಾಯಿತು." ಎನ್ನುತ್ತಾ "ಜರ್ನಲಿಸಂ ನನಗೊಂದು ಹವ್ಯಾಸ. ಹೊಟ್ಟೆಪಾಡಿಗೆ ಅದು ತಕ್ಕ ಉದ್ಯೋಗ ಅಲ್ಲವೂ ಅಲ್ಲ. ನಾನು ಅದಕ್ಕಾಗಿ ಮಾಡಲೂ ಇಲ್ಲ. ಅದರಿಂದ ನನಗೆ ಆರ್ಥಿಕ ಲಾಭ ಇರಲಿಲ್ಲ. "ವಾಹಿನಿ" ಸಂಪಾದಕ ಚಿಂತಾಮಣಿ ನನಗೆ ಬಹಳ ನೆರವಾದರು. ಆಗ ಪತ್ರಿಕೋದ್ಯಮನ್ನೇ ನೆಚ್ಚಿಕೊಂಡವನ ಬದುಕು ಸ್ವಸಂಪೂರ್ಣ ಆಗುವುದು ಕಷ್ಟವಿತ್ತು ಅಂದು; ಇಂದೂ ಬಹಳ ಕಡೆ ಅಂಥದೇ ಸ್ಥಿತಿ. ಆದರೂ ಸ್ವಲ್ಪ ಉತ್ತಮವೂ ಇದ್ದಂತೆ ತೋರುತ್ತಿದೆ. ಜನ, ಸಮಾಜ, ವೃತ್ತಿ ಎಲ್ಲದರಲ್ಲೂ ಬಹಳಷ್ಟು ಬದಲಾವಣೆಗಳಾಗಿವೆ—ಆಗುತ್ತವೆ. ಇದೂ ಶುಭಸೂಚನೆಯೇ" ಎನ್ನುತ್ತಾರೆ ಕಾದಂಬರಿಕಾರ ತ.ರಾ.ಸು.

"ಅ. ನ. ಕೃ. ನಿಧನದ ಸುದ್ದಿ ಬಂದಾಗ ನಾನು ತೀವ್ರ ಖಾಯಿಲೆಯಿಂದ ಮಲಗಿದ್ದೆ. ಈ ಸುದ್ದಿ ನನ್ನನ್ನು ತುಂಬಾ ಘಾಸಿ ಮಾಡಿತು. ಆಕಾಶವಾಣಿಯವರು ಆ ಬಗ್ಗೆ ಕೇಳಿದಾಗ ದುಃಖ ಭಾರದಿಂದ ನುಡಿಯಲಾರದವನಾಗಿದ್ದೆ. ಜನ ನನಗೂ ಅ.ನ.ಕೃ.ಗೂ ಮನಸ್ತಾಪವೆಂದು ಕಥೆ ಕಟ್ಟಿದರು. ಭ್ರಮಿಸಿದ್ದರು ಈ ಜನ. ಇವರಿಗೆ ಅಂತರಂಗದ ಕಳಕಳಿ ಏನು ಗೊತ್ತಿದೆ. ಅ.ನ.ಕೃ. ತ.ರಾ.ಸು. ಎಂದೂ ಅರಿಯದ ಹಲವರು ಹಲುಬಿದರು— ಜರಿದರು. ನಾನು ನಾನೇ; ಅ. ನ. ಕೃ. ಅ.ನ.ಕೃ.ನೇ

ನಾವೇನೂ ಬದಲಾದುದಿಲ್ಲ. ದೈಹಿಕವಾಗಿ ದೂರವಿದ್ದ ಸಂದರ್ಭದಲ್ಲೂ ಮನಗಳೂ ಒಂದೇ ಆಗಿದ್ದವು. ಅವು ದೂರವಾಗಲು ಸಾಧ್ಯವೇ ಇರಲಿಲ್ಲ" ಎಂದಾಗ ನುಡಿ ನಡುಗಿ ಗದ್ಗದಿತರಾಗಿದ್ದರು.

ಪರಂಪರಾಗತ ಮೌಲ್ಯ ಪ್ರಜ್ಞೆಯೇ ಶಾಪವಾಗಿರುವಂತೆ — ಅದೇ ಈ ಸಮಾಜದ ಅಸ್ವಸ್ಥತೆಗೆ, ಬದುಕಿನ ನಿಸ್ಸಾರತೆಗೆ ಕಾರಣವಾಗಿರುವಂತೆ ತೋರುವ ಇಂದು ಸಂವೇದನಾಶೀಲರಲ್ಲದ ಸುಶಿಕ್ಷಿತರ ಸಮಾಜ ದೊಡ್ಡದಾಗಿ ಸಾಹಿತ್ಯದ ಮೌಲ್ಯದ ಪರಮಾವಧಿ ಎಂತೋ ಎನಿಸಿದೆ ಎನ್ನುವ ತ.ರಾ.ಸು. "ಸ್ವಾತಂತ್ರ್ಯಾನಂತರದ ಬದುಕಿನ ಬಗ್ಗೆ ಹೇಳುತ್ತಾ ಗಾಂಧೀಜಿಯ ನಂತರ ಗಾಂಧೀ ಇಸಂ ಹೊರಟು-ಹೋಯಿತು. ಆ ವಾತಾವರಣವೇ ಇಂದಿಲ್ಲ" ಎನ್ನುತ್ತಾ ಸ್ವಾತಂತ್ರ್ಯಕ್ಕೆ ಹೋರಾಡಿದವ್ಯಕ್ತಿ. ಮನೋಭಾವಕ್ಕೆ ಬೆಲೆ ಕಟ್ಟುವ ಇಂದಿನ ಸರ್ಕಾರ ಎಂಥ ತಪ್ಪು ಮಾಡುತ್ತಿದೆ ಎಂದು ಕಳಕಳಿಸುತ್ತಾರೆ.

"ದೇಶಪ್ರೇಮ, ಭಕ್ತಿಯ ಆ ಪುನೀತ ಭಾವಕ್ಕೆ ವಾಣಿಜ್ಯ ವಾತಾವರಣ ಕಲ್ಪಿಸುವ ಈ ಹುಚ್ಚು — ಅಸಹ್ಯ ಸಾಹಸವೇಕೆ ? ಇವರ ಹಣ ಬೇಕಿಲ್ಲ. ನನ್ನ ದೇಶಸೇವೆ ಭಕ್ತಿಗೆ ಸಂಬಂಧಿಸಿದ್ದು — ಬೆಲೆ ಕಟ್ಟಲಾರೆ — ಇವರು ಬೆಲೆ ಕಟ್ಟುವುದೂ ಬೇಕಿಲ್ಲ" ಎನ್ನುತ್ತಾರೆ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದವರಿಗೆ ಜಮೀನು. ಪರಿಹಾರ ಕೊಡುವ ಹೊಸಯೋಜನೆ ಕುರಿತು —

ಬದುಕಿನಲ್ಲಿ ಎದುರಿಸಿದ್ದೆಲ್ಲ ಒರಟುತನವನ್ನೋ, — ಪ್ರತಿಸ್ಪರ್ಧಿಗಳನ್ನೋ — ನೋವು — ಮನಸ್ತಾಪ — ವಿರೋಧ ಇಷ್ಟಾದರೂ ತ.ರಾ.ಸು. ನಿರಾಶಾವಾದಿಯಲ್ಲ. ಎಲ್ಲೋ ಕೆಲಕ್ಷಣ ವಿಸ್ಮೃತಿಯಲ್ಲಿದ್ದರೂ ನಮ್ಮ ಜನ ಎಚ್ಚೆತ್ತುಕೊಳ್ಳುತ್ತಾರೆ. ಒಳ್ಳೆಯ ಕೆಲಸ ಮಾಡಿಯೇ ಮಾಡುತ್ತಾರೆ ಎನ್ನುವ ಬಲವಾದ ಭರವಸೆ ತುಂಬಿದೆ ಇವರಲ್ಲಿ.

"ಚಿತ್ರದುರ್ಗದ ಚರಿತ್ರೆಯ ಬಗ್ಗೆ ಬರೆದ ಕೃತಿ ಬಹಳ ಚೆನ್ನ. ನಂತರ ಸಹ ನೀವು ಬರೆದ ಅನೇಕ ಕಾದಂಬರಿಗಳಲ್ಲಿ ಚರಿತ್ರೆಯ ಛಾಪೆಯೇ ಕಂಡು ಸಾಮಾಜಿಕ ವಸ್ತುವೂ ಚಾರಿತ್ರಿಕವೋ ಎಂಬಂತೆ ತೋರಲು ಕಾರಣ ಏನೆನ್ನುತ್ತೀರಿ ?" ಎಂದ ನನ್ನ ಮಾತಿಗೆ, ನನ್ನ ನಿರೀಕ್ಷೆಯಂತೆ ಅವರು ಮುಚ್ಚಿಡೇಳಲಿಲ್ಲ. "ಚಿತ್ರದುರ್ಗದ ಬಗ್ಗೆ ಆತ್ಮೀಯ ಅನುಭವ ನನ್ನ ತನ, ಅಂತೆಯೇ ಅಲ್ಲಿ ಸಹಜತೆ ಮೂಡಿ ಬಂದಿದೆ. ಅಲ್ಲದೆ ನನ್ನ ಎಲ್ಲ ಕೃತಿಗಳ ಬಗ್ಗೆ ಹೇಳಬೇಕೆಂದರೆ ನಾನೂ ಪಾತ್ರಗಳಲ್ಲಿ ವಿಲೀನವಾಗುತ್ತೇನೆ. ಹಲವರು ಹೀಗೆ ಆಗುವುದನ್ನು ಇಷ್ಟಪಟ್ಟಿಲ್ಲ. ಎಲ್ಲ ಹೇಳುವಂತೆ ಸಾಕ್ಷೀಭಾವ ತುಂಬಿ, ಇನ್ವಾಲ್ವ್ ಆಗದೆ ಇರುವುದು ನನ್ನಿಂದ ಸಾಧ್ಯವಾಗದ ಮಾತು. ಬಹಳ ಜನರಿಂದ ಇಂಥ ಟೀಕೆ ಇದ್ದೇ ಇದೆ. ಆದರೂ ನನ್ನ ದೃಷ್ಟಿಯಲ್ಲಿ ಕೃತಿ ಕುತೂಹಲಕಾರಿಯಾಗಿದ್ದು, ಸಂತೃಪ್ತಿ ಕೊಟ್ಟರಾಯಿತು. ಅದೇ ನನ್ನ ಮುಖ್ಯ ಉದ್ದೇಶ. ಮಿಕ್ಕ ಚರ್ಚೆ ನನ್ನ ಮಟ್ಟಿಗೆ ಅನವಶ್ಯಕ" ಎಂದು ನಗುನಗುತ್ತಲೇ ನುಡಿದರು ತ.ರಾ.ಸು.

"೦—೦ =೦ ನೀವು ಬರೆವದ್ದು ಹೊಸತಂತ್ರದಿಂದ, ಹೊಸ ಶೈಲಿಯಿಂದ. ಹಾಗೇ ಬೆಳೆಸಿಕೊಂಡು ಬಂದಿದ್ದರೆ ನೀವೇ ನವ್ಯ ಪಂಥದ ಮೊದಲಿಗರಾಗುತ್ತಿದ್ದಿರೇನೋ ?" ಎಂಬ ನನ್ನ ಮಾತಿಗೆ, "ನವ್ಯ ಕಾವ್ಯದ ಬಗ್ಗೆ ನನಗೆ ಸಂತೋಷವಿದೆ. ಆದರೆ ನಾನೂ ಹಾಗೇ ಬರೆಯಬೇಕೆಂಬ ಹುಚ್ಚಿಲ್ಲ. '೦—೦ =೦' ಬರೆದಾಗ ಆ ವಸ್ತುವಿಗೆ ಆ ತಂತ್ರ ತುಂಬ ಸರಿ ಎನಿಸಿತ್ತು, ಬರೆದೆ. ಆದರೂ ಸಾಹಿತ್ಯ ಯಾವುದೇ ಒಂದು ಪಂಥ ಆಗುವುದು ನನಗೆ ಒಪ್ಪದ ಮಾತು" ಎನ್ನುವ ತ.ರಾ.ಸು. ಅವರಿಗೆ ಅವರದೇ ಶೈಲಿ, ಅವರದೇ ವಿಶಿಷ್ಟ ವಿಚಾರ ಇದೆ. ಅವರೆಂದೂ ಇನ್ನಾರ ನೆರಳಿ-ನಾಸೆರೆಯುಲ್ಲಿ ನಡೆಯಲು ಸಿದ್ಧರಿಲ್ಲ.

"ಯಾವುದೋ ನಿಲುಕದ ಅರ್ಥವಾಗದ ದಾರಿಯಲ್ಲಿ ಸಾಗಲೆಳಸಿ, ಏನನ್ನೂ ಸಾಧಿಸಲಾಗದೆ ತುಯ್ದಾಡುವ ಇಂದಿನವರ ಪಾಡು ನೆನೆದಾಗ ಬೇಸರವೆನಿಸುತ್ತದೆ. ನವ್ಯ-ಸವ್ಯ ಎರೆಡೂ ಆಗದೆ ಅಪಸವ್ಯ ಅಗಹತ್ತಿದೆ. ಇದೇ ಕಾರಣದಿಂದಾಗಿಯೇ ಈಚೆಗೆ ಅಡಿಗರ ಮಟ್ಟದ ಕಾವ್ಯ ಇನ್ನೂ ಬರುತ್ತಿಲ್ಲ. ಅಡಿಗರಲ್ಲಿ ವಿದ್ಯೆ ಇದೆ. ಆತ ಪರಂಪರೆಯನ್ನೂ ಓದಿದ್ದಾರೆ. ಸತ್ವಇದೆ. ಉಳಿದ ಬಹುಪಾಲು ಲೇಖಕರಲ್ಲಿ ಕೇವಲ ಹಿಂಬಾಲಕತನ ಕಾಣುತ್ತಿದೆ. ಎತ್ತಲೂ ಹೋಗಲಾರದ ತ್ರಿಶಂಕು ಸ್ವರ್ಗದಲ್ಲಿ ಲೇಖನಿ, ಚಿಂತನೆ ಪರಿತಪಿಸುತ್ತಿವೆ" ಎನ್ನುವ ತ.ರಾ.ಸು. ರವರಿಗೆ ಸಾಹಿತ್ಯದ ಅರ್ಥವನ್ನೇ ಅರಿಯದ ಜನದ ಹುಂಬತನದಬಗ್ಗೆ ಬಹಳ ಕಳಕಳಿ.

"ಸ್ವ-ತ್ವ"ವನ್ನು ರೂಢಿಸಿಕೊಳ್ಳದ, ಪ್ರವಾಹದ ಬೆಂಬತ್ತಿ ಏನೇನೋ ಹಿಡಿಯುವ ಸಾಹಸ ಸಾಹಿತಿ ನಡೆಸಿದರೆ ಅವನ ಚಿಂತನೆ ಸಫಲವಾಗಿ ಅಕ್ಷರದಲ್ಲಿ ಮೂಡುವುದು, ಮನ-ಮನದ ಅಂತರಂಗವನ್ನು ತಲುಪುವುದು ದುಸ್ತರವೇನೋ !" ಎನ್ನುವ ತ.ರಾ.ಸು. ವೇದ, ಉಪನಿಷತ್ತು ಎಲ್ಲ ಅರಿತಿರಬೇಕು. ಅಲ್ಲಿ ಹೇಳಿದ್ದು, ಇಲ್ಲಿ ನಡೆವದ್ದು ಎಲ್ಲವರ ಬಗ್ಗೆ ಪರೀಕ್ಷಕದೃಷ್ಟಿ, ಅರ್ಥವಂತಿಕೆ, ಪ್ರಾಜ್ಞತೆ ಇಲ್ಲವೆ ಕೇವಲ ಅನುಕರಣೆಯಾದರೆ, ಜೀವನಾನುಭವದ ವಿಸ್ತಾರಕ್ಕೆ ಎಡೆಯಿಲ್ಲದೆ, ಬಂದ ಸಾಹಿತ್ಯ ಕಾಲಕ್ಕೂ ನಿಲ್ಲದೆ ಸೋಲುತ್ತದೆ. ಎಲ್ಲ ಜೊಳ್ಳಾಗುತ್ತದೆ. ನಮ್ಮಲ್ಲಿ ಶೃಂಗಾರವಿಲ್ಲವೇ ? ಪೂಜೆ—ತಂತ್ರ,—ಅಂಗನ್ಯಾಸ—ಕರನ್ಯಾಸ—ಎಲ್ಲ ಇದೆ. ಎಲ್ಲಕ್ಕೂ ಅರ್ಥವಿದೆ. ಬರವಣಿಗೆಯೂ ಇಂಥವೇ, ಇದು ಡಿಕ್ಟೇಟ್ ಮಾಡಬಲ್ಲ ಮಾಧ್ಯಮ ಅಲ್ಲ. ಅನುಭವಿಸು : ಬರಿ—ಅಭ್ಯಸಿಸು, — ಅಧ್ಯಯಿಸು — ಬದುಕಿನ ಅನಂತತೆಯನ್ನರಿಯಲು ಯತ್ನಿಸು...

ಇಂದು ನಮ್ಮ ಮನಸ್ಸು ನೂರು ಆಸಕ್ತಿಗಳಲ್ಲಿ ಹರಿದು ಹಂಚಲ್ಪಟ್ಟಿದೆ. ನೂರು ಭಯ ಆವರಿಸಿದೆ. ಸಂಶಯ ಅಲುಗಾಡುತ್ತಿದೆ. ವಿಧಿ, ನಿಷೇಧ, ನಿನ್ನನ್ನ ಅದುಮಿಡುತ್ತದೆ. ಈ ಎಲ್ಲ ಚಲನೆಯಿಂದ ದೂರಾಗಿ 'ಸ್ವ'ಸ್ಥತೆಯನ್ನ ಪಡೆ — ಅದೆ ಸಮತೂಕ. ಅದು ತನ್ನಲ್ಲೇ ತಂಗಿದೆ...

ಎಲ್ಲ ವಿಕಲ್ಪವೂ ಮಾಯವಾದಾಗಲೇ ಎಚ್ಚರಾಗುತ್ತೇವೆ. ನುಗ್ಗಿ ಬರುವ ವಾಸ್ತವಿಕತೆಗಳಿಗೆ ಮೂಕಸ್ವೀಕೃತಿಯಾಗುತ್ತದೆ. ಆಗ ವ್ಯಕ್ತಿತ್ವ ವಿಶ್ವದಂತೆಯೇ ವಿಸ್ತಾರವಾದ ಸೌಖ್ಯವನ್ನನುಭವಿಸುತ್ತದೆ. ಉಕ್ಕಿಬಂದ ಭಾವನೆಗೆ ಅಕ್ಷರದ ಅರ್ಥ ಕೊಡು ಎನ್ನುವಾಗ ಅವರು ಭಾವಸಮಾಧಿಯಲ್ಲಿದ್ದಂತಿತ್ತು.

ದೇಶ — ವಿದೇಶಗಳಿಗೂ ತೆರಳಿ ಎಲ್ಲ ವೈಚಿತ್ರ್ಯಗಳನ್ನ— ಮಾನವನ ಗೊಂದಲ ವನ್ನ ಸಮೀಪದಲ್ಲಿದ್ದು ಅರ್ಥಮಾಡಿಕೊಂಡು ಬಂದ ತ.ರಾ.ಸು. ಕಾದಂಬರಿ ಬರೆಯುವ ಮುನ್ನ ಮನದಲ್ಲೇ ಒಂದು ಕರಡು ಚಿತ್ರ ಹಾಕಿಕೊಳ್ಳುತ್ತಾರೆ. ಬರೆವಾಗ ಕಲ್ಪನೆ ಮಿತಿಯನ್ನು ಮೀರಿ ಹರಿದು ಬರುವುದುಂಟು.

ಪಾತ್ರ — ತ. ರಾ. ಸು.
ಅನಿಸಿಕೆ — ಅಂತರಂಗದ ಪಾತಳಿಯಲ್ಲಿ ವಿಲೀನತೆ
ಪಾತ್ರಗಳು .... ತ.ರಾ.ಸು....
ತ.ರಾ.ಸು. — ಪಾತ್ರಗಳು...
ಹೀಗೆ.........
ಯಾವುದು — ಯಾವುದೋ !

"ಹೀಗಾದಾಗ ಬರವಣಿಗೆ ಒಮ್ಮೊಮ್ಮೆ ಸೆಂಟಿಮೆಂಟಲ್ ಆಗುತ್ತದೆ. ಅದೂ ನನಗೆ ಪ್ರಿಯ ಹಾಗಾದರೇ ಚೆನ್ನ" ಎನ್ನುತ್ತಾರೆ ತ.ರಾ.ಸು.

ಇದೀಗ ಇವರು ಬರೆಯಲು ಸಿದ್ಧತೆ ನಡೆಸಿರುವ ಕೃತಿ ಶಂಕರಾಚಾರ್ಯರ ಜೀವನವನ್ನು ಕುರಿತು. ಭಗವಾನ್ ಶಂಕರರ ಬದುಕಿನ ಬಗ್ಗೆ — ಅಧ್ಯಾತ್ಮಿಕತೆಯ ಬಗ್ಗೆ — ರಚಿಸಲಿರುವ ಕಾದಂಬರಿಗಾಗಿ ಬಹಳಷ್ಟು ಅಧ್ಯಯನ ನಡೆಸಿದ್ದಾರೆ. ಶಂಕರರ ಜನ್ಮಸ್ಥಳವಾದ ಕಾಲಟಿ, ಅವರು ಪರ್ಯಟನಮಾಡಿದ, ನೆಲಸಿದ ಸ್ಥಳಗಳು — ಅವರ ನುಡಿ, — ಸಂದೇಶ, — ಕೃತಿ ಎಲ್ಲದರ ಬಗ್ಗೆ ಸಂಚರಿಸಿ — ಅಭ್ಯಸಿಸಿ ಕೃತಿ ಬರೆಯಲು ಅಣಿಯಾಗುತ್ತಿದ್ದಾರೆ ತ.ರಾ.ಸು.

ಸಾಹಿತಿ ಸತಿಯು ನೆರಳಾಗಿ ಶ್ರೀಮತಿ ಸ್ಫೂರ್ತಿ ತುಂಬುತ್ತಾರೆ. ನಗು-ನಗುತ್ತ ನೋವು ನಲಿವಿನಲ್ಲಿ ಸಮಭಾಗಿಯಾಗುತ್ತಾರೆ. ಮಕ್ಕಳ ತೊದಲು ಮಾತು, ಪ್ರಶಾಂತ ವಾತಾವರಣ ಇವರ ಲೇಖನಿಗೆ ಯೌವನ ತುಂಬುತ್ತಿದೆ. ಗಿರಿಕನ್ಯಕಾ ಅವರ ಶಾಂತಿ ಧಾಮ. ಅಲ್ಲಿ ಸ್ಫೂರ್ತಿ ಉಕ್ಕಿ ಬರುತ್ತದೆ.

ತ.ರಾ.ಸು. ಬರೆಯುತ್ತಿದ್ದಾರೆ. ಮಹತ್ವಪೂರ್ಣ ಕೃತಿ ಅವರಿಂದ ಹೊರ ಬರುತ್ತದೆ, ಬರುತ್ತವೆ ಇನ್ನೂ ಹಲವಾರು. ಅವರ ಲೇಖನಿ ಚಿರಂಜೀವಿ.

ಅಧ್ಯಾತ್ಮಿಕ ಚಿಂತನೆ — ಗುರು ಜೀವನದತ್ತ ಹರಿದ ಅನುಭಾವಿಯ ಜೀವನ ಇಲ್ಲಿ ಹದಗೊಂಡು ಎಂಥ ಸ್ವರ್ಗವನ್ನು ಸೃಷ್ಟಿಸಲಿದೆಯೋ ?...

ಸಹೃದಯಿ

—ದಿ| ಅರ್ಚಿಕ ವೆಂಕಟೇಶ

26 ವರ್ಷಗಳ ಹಿಂದಿನ ಮಾತು. ನೆಲಮಂಗಲ ಕರ್ನಾಟಕ ಸಂಘದವರಿಗೋ ಆದಿನ ಯುಗಾದಿ, ದೀಪಾವಳಿ ಹಬ್ಬವನ್ನು ಮೀರಿಸಿದ ಸಂಭ್ರಮ. ತಮ್ಮ ಊರಿಗೆ ಪ್ರಗತಿಶೀಲ ಸಾಹಿತಿಗಳನ್ನು ಕರೆಯಿಸಿದ್ದೇವೆಂಬ ಹೆಮ್ಮೆ, ಸಡಗರ. ತರುಣರೆಲ್ಲ ಪರಮೋತ್ಸಾಹದಿಂದ ಓಡಾಡುತ್ತಿದ್ದರು. ಸಭಾಭವನ ದಿವ್ಯವಾಗಿರುವಂತೆ ಮಾಡುವಲ್ಲಿ ಅವರಿಗೆ ವಿಶೇಷ ಆಸ್ಥೆ. ಅಂದಿನ ಕಾರ್ಯಕ್ರಮ ಜಯಪ್ರದವಾದರೆ ತಮಗೊಂದು ಕಿರೀಟಬಂದಂತೆ ಎಂದವರು ಭಾವಿಸಿಕೊಂಡಿದ್ದರು.

ಅಂದಿನ ಉಪನ್ಯಾಸಕ್ಕೆ ಹೊರಟವರು ನಾವು ನಾಲ್ಕೈದು ಜನ. ನಮ್ಮ ನಾಯಕರೋ ಕನ್ನಡನಾಡಿನ ಕಣ್ಮಣಿ, ಜನಪ್ರಿಯರಾದ, ಪ್ರಖ್ಯಾತ ಕಾದಂಬರಿಕಾರ, ತರುಣ ಜನಸ್ತೋಮದ ಪರಮಪ್ರಿಯ ಸಾಹಿತಿ ಶ್ರೀ ಅ. ನ. ಕೃಷ್ಣರಾಯರು, ಅವರ ಜೊತೆಗೆ ತ.ರಾ.ಸು, ವೆಂಕಣ್ಣ, ನಾಡಿಗೇರ ಮತ್ತು ನಾನು ಇದ್ದೆವು. ನಾವೆಲ್ಲರೂ ಅಣ್ಣ ಅ. ನ. ಕೃ ಅವರ ನಿವಾಸದಲ್ಲಿ ಕಾಫಿಕುಡಿದು, ಬಸ್ಸಿನಲ್ಲಿ ಹೊರಟೆವು. ನೆಲಮಂಗಲಕ್ಕೆ ಬಂದಾಗ ನಮಗೆ ಪರಮಾದರದ ಸ್ವಾಗತ ಕಾದಿತ್ತು. ಸ್ವಾಗತಿಸಲು ಬಂದವರಲ್ಲಿ ನೆಲಮಂಗಲ ಹೈಸ್ಕೂಲಿನ ಹೆಡ್ಮಾಸ್ಟರಾಗಿದ್ದ ಶ್ರೀ ರಾಮಚಂದ್ರರಾಯರು ಪ್ರಮುಖರಾಗಿದ್ದರು. ನಮ್ಮನ್ನೆಲ್ಲ ಎದುರುಗೊಂಡು, ನಮಗಾಗಿ ಮೀಸಲಾಗಿರಿಸಿದ ಕಟ್ಟಡಕ್ಕೆ ಕರೆದೊಯ್ದರು. ಅಲ್ಲಿಗೆ ಹೋದಮೇಲೆ ಸೊಗಸಾದ ತಿಂಡಿ–ತೀರ್ಥಗಳಿತ್ತು, ಉಪಚರಿಸಿದಮೇಲೆ ಸಭಾಮಂದಿರಕ್ಕೆ ನಮ್ಮನ್ನು ಕರೆದುಕೊಂಡು ಹೋದರು. ದಾರಿಗುಂಟ ಅನೇಕ ತರುಣರು ನಮ್ಮನ್ನು ವಿಶ್ವಾಸದಿಂದ ಮಾತನಾಡಿಸಿಕೊಂಡು ಬರುತ್ತಿದ್ದರು.

ನಾವು ಸಭಾಭವನಕ್ಕೆ ಬರುವ ಪೂರ್ವದಲ್ಲೇ ಅದು ಸ್ತ್ರೀ–ಪುರುಷರಿಂದ ಕಿಕ್ಕಿರಿದು ತುಂಬಿಹೋಗಿತ್ತು. ಸೊಗಸಾದ ಊದುಬತ್ತಿಯ ಪರಿಮಳವು ನಮ್ಮ ಹೃದಯ-ಮನಸ್ಸುಗಳನ್ನು ಆಗಲೇ ಯಾವುದೋ ಅವ್ಯಕ್ತಲೋಕದತ್ತ ಹೇರಿಸಿಕೊಂಡು ಹೋಗುತ್ತಿತ್ತು.

ದೇವತಾ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಮೊದಲಾಯಿತು. ಸ್ವಾಗತ ಭಾಷಣದಲ್ಲಿ ನಮ್ಮ ನಾಯಕ ಅ.ನ.ಕೃ ಅವರನ್ನು ಮತ್ತು ತ.ರಾ.ಸು. ನಾಡಿಗೇರ, ವೆಂಕಣ್ಣ ಮತ್ತು ನನ್ನನ್ನೂ ಪ್ರಶಂಸೆಯ ಮಾತುಗಳಲ್ಲಿ ಸಭೆಗೆ ಪರಿಚಯ ಮಾಡಿಕೊಡಲಾಯಿತು. ಅನಂತರ, ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಅ.ನ.ಕೃ ಅವರು ನಮ್ಮಲ್ಲಿ ಒಬ್ಬೊಬ್ಬರನ್ನು ಕರೆದು ಮಾತನಾಡುವಂತೆ ಸೂಚಿಸಿದರು. ಅಂದು

ಮೊದಲಿಗೆ ಮಾತನಾಡಿದವನೇ ನಾನು. ನನ್ನ ವಿಷಯ 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರಗತಿ ಶೀಲತೆ' ಎಂಬುದಾಗಿತ್ತು. ಅಂದು ನಾನು ಚೆನ್ನಾಗಿಯೇ ಮಾತನಾಡಿದೆ. ಅನಂತರ ವೆಂಕಣ್ಣ, ನಾಡಿಗೇರ ಮಾತನಾಡಿದರು. ಅವರನಂತರ ನಮ್ಮ ತ.ರಾ.ಸು. ಮಾತನಾಡಿದರು. ತ.ರಾ.ಸು. ಅವರ ಭಾಷಣವೂ ತುಂಬಾ ಸೊಗಸಾಗಿತ್ತು. ಅ.ನ.ಕೃ. ತಮ್ಮ ಅಧ್ಯಕ್ಷ ಭಾಷಣದಲ್ಲಿ ನಮ್ಮೆಲ್ಲರ ಮಾತನ್ನು ಎತ್ತಿಕೊಂಡು ತುಂಬ ಚೆನ್ನಾಗಿ ಮಾತನಾಡಿದರಷ್ಟೇ ಅಲ್ಲ ತ.ರಾ.ಸು. ಮತ್ತು ನಾವು ಬಹಳ ಮುಂದೆ ಬರತಕ್ಕ ತರುಣರು ಎಂದು ಹೆಮ್ಮೆಯಿಂದ ಹೇಳಿದರು. ಅವರ ಮಾತಿಗೆ ಬೆಂಬಲ ಕೊಡುವಂತೆ ಸಭಿಕರು ಪ್ರಚಂಡ ಕರತಾಡನಮಾಡಿ ತಮ್ಮ ಹರ್ಷ ವ್ಯಕ್ತಪಡಿಸಿದರು.

ಸಾರ್ವಜನಿಕ ವೇದಿಕೆಯಮೇಲೆ, ಅದೂ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಆಗಲೇ ಖ್ಯಾತ ನಾಮರಾಗಿದ್ದ ಶ್ರೀ ಅ. ನ. ಕೃಷ್ಣರಾಯರ ಎದುರಿನಲ್ಲಿ ನಿಂತು, ಪ್ರಥಮಬಾರಿಗೆ ಮಾತನಾಡಿ ಎಲ್ಲರಿಂದ ಮತ್ತು ಸ್ವತಃ ಅ.ನ.ಕೃ. ಅವರಿಂದ ಹೌದೆನಿಸಿಕೊಂಡವರಲ್ಲಿ ತ.ರಾ.ಸು. ಮತ್ತು ನಾನು ಮುಖ್ಯರಾಗಿದ್ದೆವು ಎಂಬ ಮಾತನ್ನು ಇಷ್ಟು ವರ್ಷಗಳನಂತರ ನೆನೆದುಕೊಂಡಾಗ ನನಗೆ ಸಂತೋಷವಾಗುತ್ತದೆ.

ಅಂದಿನ ಸಭೆ ಮುಗಿದಮೇಲೆ ನಾವೆಲ್ಲರೂ ಸಭಾಭವನದಿಂದ ಹೊರಗೆಬಂದೆವು. ಅನೇಕರು ಬಂದು; ತರುಣರಾಗಿದ್ದ ನಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಹಲವರು ಕೈಕುಲುಕಿದರು; ಹಲವರು ನಮಸ್ಕಾರ ಮಾಡಿ ಗೌರವ ಸೂಚಿಸಿದರು. ಇನ್ನೂ ಕೆಲವರು ನಮ್ಮ ಆಟೋಗ್ರಾಫ್ ತೆಗೆದುಕೊಂಡರು.

ಶ್ರೀ ಅ.ನ. ಕೃಷ್ಣರಾಯರಿಗೆ ಅಂದು ಅಪಾರ ಸಂತೋಷವಾಗಿತ್ತು. ತಾವು ಆರಿಸಿದ ಹುಡುಗರು ಕಳಪೆಯಲ್ಲ ಎಂಬ ಸಮಾಧಾನ, ತೃಪ್ತಿ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವರು ಕ್ಷೇಮವಾಗಿ ಜೋಬಿನಿಂದ ಸಿಗರೇಟ್ ತೆಗೆದು ನನ್ನ ಹತ್ತಿರ ಬಂದು ವೆಂಕಟೇಶ್, ನೀವು ತುಂಬ ಚೆನ್ನಾಗಿ ಮಾತನಾಡುತ್ತೀರಿ. ಹಳೆ ಕನ್ನಡ ಸಾಹಿತ್ಯವನ್ನು ನೀವು ಇಷ್ಟರಮಟ್ಟಿಗೆ ಅಧ್ಯಯನ ಮಾಡಿದ್ದೀರೆಂದು ನನಗೆ ತಿಳಿದಿರಲಿಲ್ಲ. ನೀವು ಇನ್ನೂ ಆಳವಾಗಿ ಓದಿ ಜೊತೆಗೆ ವೀರಶೈವ ಸಾಹಿತವನ್ನು ವಿಶೇಷವಾಗಿ ಓದಿ ನಾನು ಉಪನ್ಯಾಸಕ್ಕೆ ಹೋಗಲು ಸಾಧ್ಯವಿಲ್ಲದಾಗ ನೀವು ಹೋಗುವಂತಾಗಬೇಕು.' ಎಂದು ಹೇಳಿ ನನ್ನ ಬೆನ್ನು ತಟ್ಟಿದರು. ಅಂದು ನನಗೆ ಸ್ವರ್ಗ ಮೂರೇ ಬೆರಳು ಉಳಿದಿತ್ತು.

ತ.ರಾ.ಸು. ಅವರತ್ತ ಹೊರಳಿ ತುಂಬ ಚೆನ್ನಾಗಿ ಮಾತನಾಡಿದೆ. ಇನ್ನು ನಮ್ಮ ತಂಡದಲ್ಲಿ ಭಾಷಣದಲ್ಲಿ ನೀನೇ ಮುಂದಿರಬೇಕು. ಈ ಕಲೆಯನ್ನು ಚೆನ್ನಾಗಿ ಬೆಳಸಿಕೋ, ಹೇಗಿದ್ದರೂ ಈಗ ನಮಗೆ ಒಳ್ಳೆಯ ಅವಕಾಶವಿದೆ. ಇದರ ಸದುಪಯೋಗ ಮಾಡಿಕೊಳ್ಳಿ ಎಂದರು.

ತ.ರಾ.ಸು. ಅವರಿಗೂ ಅಂದು ಆದ ಆನಂದ ಅಷ್ಟಿಷ್ಟಲ್ಲ ಈ ರೀತಿ ನಾನು

ಮತ್ತು ತ.ರಾ.ಸು ಅದಿನವೇ "ಮುಂದೆ ಬರತಕ್ಕವರು" ಎಂದು ಜನತೆಗೆ ತೋರಿಸಿ ಕೊಟ್ಟಿದ್ದೆವು. ಕನ್ನಡದ ರಾಜರಾಜೇಶ್ವರಿಯ ಕೃಪೆಯಿಂದ, ನಮ್ಮ ನಾಡಿನ ಸಹೃದಯರ ಕೃಪಾಶೀರ್ವಾದದ ಬಲದಿಂದ ನಾವಿಬ್ಬರೂ ಸಾಹಿತ್ಯ ಮತ್ತು ಭಾಷಣ ಕ್ಷೇತ್ರದಲ್ಲಿ ಜನಕ್ಕೆ ಸಾಕಷ್ಟು ಪರಿಚಿತರಾಗಿದ್ದೇವೆಂದು ನಾನು ಅತ್ಯಂತ ವಿನಯದಿಂದ ಹೇಳಬಯಸುತ್ತೇನೆ. ನಾಡಿಗೇರರಂತೂ ತಮ್ಮದೇ ಆದ ನಗೆಗಾರಿಕೆಯಿಂದ ಪ್ರಸಿದ್ಧ ರಾಗಿದ್ದಾರೆ. ಅಂತೂ ಅ.ನ.ಕೃ ಆರಿಸಿಕೊಂಡವರೆಲ್ಲರೂ ಇಂದು ಸಿದ್ಧಪ್ರಸಿದ್ಧರು.

* * * * *

ಪ್ರಗತಿಶೀಲ ಸಾಹಿತ್ಯದ ಚಳುವಳಿಯನ್ನು ಕರ್ನಾಟಕದಲ್ಲಿ ಆರಂಭಿಸಿದ ಅದರ ಅಧ್ಯಯನ ಶ್ರೀ ಅ ನ.ಕೃ ಆ ಸಂಘಕ್ಕೆ ಕೇವಲ ನಾಲ್ಕೈದು ಜನ ತರುಣರನ್ನು ಆಯ್ದು ಕೊಂಡರು. ಅವರಲ್ಲಿ ತ.ರಾ.ಸು, ನಾಡಿಗೇರ, ವೆಂಕಣ್ಣ, ಎಸ್. ಅನಂತ ನಾರಾಯಣ ಮತ್ತು ನಾನು ಪ್ರಮುಖರಾಗಿದ್ದೆವು. ಪ್ರಗತಿಶೀಲ ಸಾಹಿತ್ಯ ಸಂಘ ಆಗ ಮಾಡಿದ ಕೆಲಸ ನಿಜಕ್ಕೂ ಅದ್ಭುತ. ಗಾರ್ಕಿ ಎಂಬ ದೊಡ್ಡ ಗ್ರಂಥ ಪ್ರಕಟ ವಾಯಿತು. ಪ್ರಗತಿಶೀಲ ಸಾಹಿತ್ಯ ಎಂಬ ಪ್ರಬಂಧ ಸಂಕಲನ, ರಸ ಋಷಿ ಎಂಬ ಕವಿತಾ ಸಂಗ್ರಹ, ಜೀವನ ಸಂಗ್ರಾಮ ಎಂಬ ಕಥಾ ಸಂಕಲನಗಳು ಪ್ರಕಟಗೊಂಡವು. ಒಂದೊಂದೂ ನಾಡಿನ ಜನತೆಯನ್ನು ಆಕರ್ಷಿಸಿದವು.

ರಬಕವಿ ಸಮ್ಮೇಳನ

1944 ರಲ್ಲಿ ರಬಕವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಅ.ನ.ಕೃ ಅವರ ನೇತೃತ್ವದಲ್ಲಿ ನಾವೆಲ್ಲ ಅಲ್ಲಿಗೆ ಹೋಗಿದ್ದೆವು. ನಮ್ಮ ಪ್ರವಾಸವೊ ಚಿರಸ್ಮರಣೀಯ ನಮ್ಮ ಜೊತೆಗಿದ್ದ ತ.ರಾ.ಸು. ಸದಾ ಒಂದಿಲ್ಲೊಂದು ಇಂಗ್ಲೀಷ್ ಕಾದಂಬರಿ ಹಿಡಿದುಕೊಂಡು ಅದರ ವಾಚನದಲ್ಲಿ ಮಗ್ನರಾಗಿರುತ್ತಿದ್ದರೂ ಆಗಾಗ ಸರಸ ಸಂಭಾಷಣೆಯಲ್ಲಿ ಬೆರೆತು ನಗೆಮಿಂಚನ್ನು ಝಳಪಿಸುತ್ತಿದ್ದರು.

ರಬಕವಿ ಸಾಹಿತ್ಯ ಸಮ್ಮೇಳನಕ್ಕೆ ಪ್ರೊ॥ ಬಸವರಾಳರು ಅಧ್ಯಕ್ಷರಾಗಿದ್ದರು. ಸಮ್ಮೇಳನದ ಅಂಗವಾಗಿ ನಡೆದ ಸಾಹಿತ್ಯ ಗೋಷ್ಠಿಗೆ ಪ್ರೊ॥ ವಿ.ಕೆ. ಗೊಕಾಕರು ಅಧ್ಯಕ್ಷರಾಗಿದ್ದರು. ಅವರ ನೇತೃತ್ವದಲ್ಲಿ ನಡೆದ ಪ್ರಗತಿಶೀಲ ಸಾಹಿತ್ಯದ ಚರ್ಚೆಯಲ್ಲಿ ನಮ್ಮನ್ನು ಸುಮಾರು 18 ಜನ ದಿಗ್ದಂತಿಗಳು ವಿರೋಧಿಸಿದರು. ಅಂದು ನಾನು, ತ.ರಾ.ಸು, ಅ.ನ.ಕೃ, ಮತ್ತು ಇನ್ನೊಂದಿಬ್ಬರು ಮಾತನಾಡಿ ನಮ್ಮ ವಿಚಾರ ಪ್ರಣಾಳಿ ಯಲ್ಲಿ ಮಂಡಿಸಿದ್ದೆವು. ನಮ್ಮ ವಾದಸರಣಿಯನ್ನು ಸಮ್ಮೇಳನಕ್ಕೆ ಬಂದು ಸೇರಿದ ಅಗಾಧ ಜನಸ್ತೋಮ ಮನಸಾರ ಮೆಚ್ಚಿತು. ಅಂದು ಓಟಿಗೆ ಹಾಕಿದಾಗಲೂ ನಮಗೇ ಜಯಮಾಲೆ ಲಭಿಸಿತು. ಇವರಿಂದಂತೂ ನಮ್ಮ ಅಂದರೆ ಪ್ರಗತಿಶೀಲ ಸಾಹಿತಿಗಳ ಕೀರ್ತಿ ಎಲ್ಲೆಡೆ ಹಬ್ಬಿತು.

ಆನಂತರ ನಾವು ಕರ್ನಾಟಕದ ಅನೇಕಕಡೆಗೆ ಹೋಗಿ ಉಪನ್ಯಾಸಮಾಡಿದೆವು. ಜನತೆಯ ಮನ್ನಣೆ, ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದೆವು.

* * * * *

ಪ್ರಗತಿಶೀಲ ಸಾಹಿತಿಗಳ ಗುಂಪಿನಲ್ಲಿ ತ.ರಾ.ಸು. ಮತ್ತು ನಾನು ಪ್ರಮುಖ ವಾಗಿದ್ದಂತೆಯೇ ಅಂದಿನ ಅತ್ಯಂತ ಜನಪ್ರಿಯ ದಿನಪತ್ರಿಕೆ 'ವಿಶ್ವ ಕರ್ನಾಟಕ'ದಲ್ಲಿಯೂ ನಾವಿಬ್ಬರೂ ಪ್ರಧಾನವಾಗಿಯೇ ಇದ್ದೆವು. ನಾವಿಬ್ಬರೂ ಪಕ್ಕ ಪಕ್ಕದಲ್ಲೇ ಪ್ರತಿನಿತ್ಯಕೂತು ಕೆಲಸಮಾಡುತ್ತಿದ್ದೆವು. ಬಿಡುವುಸಿಕ್ಕಾಗ ಸಂಜೆ ಕಂಟೋನ್ಮೆಂಟಿನ ಹಳೆಯ ಪುಸ್ತಕದ ಅಂಗಡಿಗೆ ಹೋಗಿ ಇಂಗ್ಲೀಷ್ ಕಾದಂಬರಿ ಮತ್ತು ಇತರ ಗ್ರಂಥ ಗಳನ್ನು ಕೊಂಡುಕೊಂಡು ಬರುತ್ತಿದ್ದೆವು. ಜೊತೆಜೊತೆಗೆ ಕಾಫಿ ಕುಡಿಯುತ್ತಿದ್ದೆವು. ಹರಟೆಗಂತೂ ಇತಿ ಮಿತಿಯೇ ಇರುತ್ತಿರಲಿಲ್ಲ.

ತ ರಾ.ಸು. ಅವರಿಗೆ ಪ್ರತಿಯೊಂದು ವಸ್ತುವೂ ಒಳ್ಳೆಯದೇ ಇರಬೇಕೆಂಬ ಆಪೇಕ್ಷೆ. ತಿಂಡಿತಿನ್ನಲು ಒಳ್ಳೆಯ ಹೊಟೆಲ್ಲಿಗೇ ಹೋಗಬೇಕು. ಸಿಹಿ ತೆಗೆದು ಕೊಳ್ಳದೆ ತಿಂಡಿ ತಿನ್ನುವಹಾಗೇ ಇಲ್ಲ. ಧರಿಸುವ ಬಟ್ಟೆಯಲ್ಲಿ ವಿಶೇಷ ಆಸ್ಥೆ ತೋರಿಸದೇ ಇದ್ದರೂ ಅವರದು ಸೊಗಸಾದ 'ಟೇಸ್ಟ್'. ಸಿಲ್ಕ್ ಬಟ್ಟೆಯೆಂದರೆ ಅವರಿಗೆ ಪ್ರೇಮ. ಖಾದಿ ಜುಬ್ಬ, ಖಾದಿ ದಟ್ಟಿ, ಬರಿಗಾಲು, ಕೆದರಿದ ಕೂದಲು, ಒಳ್ಳೆಯ ಅತ್ತರ್ ಎಂದರೆ ಪಂಚಪ್ರಾಣ. ಮಲ್ಲಿಗೆಪೂವು ಎಂದರೆ ಆಯಿತು, ತುಂಬ ಪ್ರೀತಿ. ಸಿಗರೇಟ್ ಇಲ್ಲದೆ ಒಂದುಗಂಟೆಯನ್ನೂ ಕಳೆಯಲಾರರು. ಈ ವಿಷಯದಲ್ಲಿ ನನಗೂ ಅವರಿಗೂ ಅಜ-ಗಜಾಂತರ ವ್ಯತ್ಯಾಸ. ಪ್ರಗತಿಶೀಲರ ಗುಂಪಿನಲ್ಲಿ ಸಿಗರೇಟ್ ಸೇದದೇ ಇದ್ದವನೆಂದರೆ ನಾನೊಬ್ಬನೇ ಎಂದು ಕಾಣುತ್ತದೆ. ಆದರೂ, ಒಂದು ದಿನವಾದರೂ ತ.ರಾ.ಸು ಆಗಲೀ ಶ್ರೀ ಅ.ನ.ಕೃ ಆಗಲಿ ನನಗೆ ಸಿಗರೇಟು ಸೇದುವಂತೆ ಬಲವಂತ ಮಾಡಲಿಲ್ಲ. ಅವರೆಲ್ಲರೂ ತುಂಬ ಸಿಗರೇಟ್ ಸೇದುತ್ತಿದ್ದ ರೆಂಬ ಕಾರಣಕ್ಕಾಗಿ ನನ್ನ ಮತ್ತು ಅವರ ಸ್ನೇಹಕ್ಕೆ ಎಂದೂ ಕುಂದಕವುಂಟಾಗಲಿಲ್ಲ.

ತ.ರಾ ಸು. ಶ್ರೀ ತಳಕಿನ ವೆಂಕಣ್ಣಯ್ಯನವರ ಹತ್ತಿರದ ಬಂಧು. ಮೇಧಾವಿಗಳ ಮನೆತನದಲ್ಲಿ ಹುಟ್ಟಿಬಂದವರು. ಬಹು ಚಿಕ್ಕಂದಿನಿಂದಲೇ ಸಾಹಿತ್ಯದಕಡೆಗೆ ಒಲವು ಹರಿಸಿದವರು. ವಿದ್ಯಾರ್ಥಿದಿಸೆಯಲ್ಲಿಯೇ ನಾಡಿನ ಸ್ವಾತಂತ್ರ್ಯದ ಕರೆಗೆ ಓಗೊಟ್ಟವರು. ಸಹೃದಯಿಯಾದ ಅವರಿಗೆ ಮಿತ್ರರನ್ನು ಮಾಡಿಕೊಳ್ಳುವ ಕಲೆ ಹಸ್ತಗತವಾಗಿದೆ. ಮಾತಿನಲ್ಲಂತೂ ಮೋಡಿಮಾಡಿಬಿಡುತ್ತಾರೆ.

ಇಂದು ತ.ರಾ.ಸು. ನಾಡಿನ ಪ್ರತಿಷ್ಠಿತ ಸಾಹಿತಿ, ಕಾದಂಬರಿಕಾರ, ಅಚ್ಚು ಮೆಚ್ಚಿನ ಲೇಖಕ. ಅವರ ಸೋದರ ಸಾಹಿತಿ, ಕವಿ, ಪತ್ರಿಕೋದ್ಯಮಿಯಾದ ನಾನು ಅವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತ ರಾ. ಸು. ಚಿರಂಜೀವಿಯಾಗಲಿ ಎಂದು ಹಾರೈಸುತ್ತೇನೆ. ಅವರಿಂದ ಇನ್ನೂ ಅಧಿಕ ಸಾಹಿತ್ಯ ಸೇವೆ ನಡೆಯಲಿ ಎಂದು ಅಪೇಕ್ಷಿಸುವುದರ ಜೊತೆಗೆ ನಮ್ಮಿಬ್ಬರ ಸ್ನೇಹ ಕನ್ನಡ ಸರಸ್ವತಿಯ ದಿವ್ಯ ದೇವಾಲಯದಲ್ಲಿ ಹಚ್ಚಿದ್ದ ದಿವ್ಯ ನಂದಾದೀಪಕ್ಕೆ ಚಿರ ಸ್ನೇಹ (ತೈಲ) ವಾಗಲಿ ಎಂದು ಆಶಿಸುತ್ತೇನೆ.

ನೆನಪಿನ ಸುಳಿಯಲ್ಲಿ

— ಹು. ಶ್ರೀ. ಪಾಂಡುರಂಗ ಜೋಯಿಸ್

ಸುಮಾರು ನಲವತ್ತು ವರುಷಗಳ ಹಿಂದಿನ ಮಾತು. ಆಗತಾನೆ ಚಿತ್ರದುರ್ಗದ ಈಶಾನ್ಯ ದಿಕ್ಕಿನಲ್ಲಿ ವೆಂಕಟೇಶಪುರ ಬಡಾವಣೆ ಉದಯವಾಗುತ್ತಿತ್ತು. ಗಿಡ, ಮರ ಮತ್ತು ಪೊದೆಗಳಿಂದ ಕೂಡಿದ್ದ ಆ ನಿರ್ಜನ ಪ್ರದೇಶದಲ್ಲಿ ಮನೆಕಟ್ಟಿ, ಮೊದಲು ವಾಸಿಸಲು ಆರಂಭಿಸಿದವರು ಇಬ್ಬರು ನ್ಯಾಯವಾದಿಗಳು. ಒಬ್ಬರು ಶ್ರೀ ತ.ರಾ.ಸು. ರವರ ಪಿತೃವರ್ಯರಾದ ಶ್ರೀ ತ.ಸು. ರಾಮಸ್ವಾಮಯ್ಯ ; ಮತ್ತೊಬ್ಬರು ನನ್ನ ತಂದೆಯವರಾದ ಇತಿಹಾಸ ಸಂಶೋಧಕ ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು. ನನಗಿಂತ ಸ್ವಲ್ಪ ಹಿರಿಯರಾದ ತ.ರಾ.ಸು. ರವರೊಂದಿಗೆ ನಾನು ನನ್ನ ಸ್ನೇಹಿತರು ಕಲೆತು ಒಟ್ಟಿಗೆ ಆಡುತ್ತಿದ್ದೆವು; ನಲ್ಮೆಯಿಂದ ಮೈಮರೆಯುತ್ತಿದ್ದೆವು; ಕಲೆತು ಮಾತನಾಡುತ್ತಿದ್ದೆವು. ಆಟಗಳಲ್ಲಿ ಎಷ್ಟೋ ಸಾರಿ ಅವರದೇ ಮೇಲುಗೈ ಆಗುತ್ತಿತ್ತು.

ತ.ರಾ.ಸು. ರವರ ಚುರುಕು ಬುದ್ಧಿ ಬಾಲ್ಯದಲ್ಲೇ ಪ್ರಕಾಶಿಸುತ್ತಿತ್ತು. ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಆಗಲೇ ಆರಂಭವಾಗಿತ್ತು. ಶಾಲೆಯ ಪುಸ್ತಕ ಭಂಡಾರದಲ್ಲಿದ್ದ ಕತೆ, ಕಾದಂಬರಿಗಳನ್ನು ತಂದು ಒಂದೇ ಮನಸ್ಸಿನಿಂದ ಓದುತ್ತಿದ್ದರು. ಅವರು ಓದದ ಕಾದಂಬರಿಗಳೇ ಪುಸ್ತಕ ಭಂಡಾರದಲ್ಲಿ ಇಲ್ಲವೆಂಬುದು ನಮ್ಮೆಲ್ಲರಿಗೂ ತಿಳಿದ ಸತ್ಯ ಸಂಗತಿಯಾಗಿತ್ತು. ಇಷ್ಟಲ್ಲದೆ ಚಿತ್ರದುರ್ಗದ ಶ್ರೀ ಕೃಷ್ಣರಾಜೇಂದ್ರ ಪುಸ್ತಕ ಭಂಡಾರವೂ ಅವರ ಓದುವ ಚಟಕ್ಕೆ ಸಾಲದಾಗಿತ್ತು.

ತ.ರಾ.ಸು. ರವರು ವ್ಯಾಸಂಗ ಮಾಡುತ್ತಿದ್ದಾಗ ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಪ್ರೇಮ ಉಕ್ಕಿಸುವ, ಇತಿಹಾಸದಲ್ಲಿ ಕುತೂಹಲ ಕೆರಳಿಸುವ ಉಪಾಧ್ಯಾಯರಿದ್ದರು. ಅಂತಹವರಿಂದ ಸ್ಫೂರ್ತಿಹೊಂದಿ, ಸಾಹಿತ್ಯ ರಚನೆಯಲ್ಲಿ ಪೂರ್ಣ ಪ್ರಯೋಜನ ಹೊಂದಿರುವರೆಂಬುದಕ್ಕೆ ತ.ರಾ.ಸು. ರವರ ಕಾದಂಬರಿಗಳೇ ಸಾಕ್ಷಿಗಳಾಗಿವೆ.

ನಮ್ಮ ತಂದೆಯವರೂ, ತ.ರಾ.ಸು. ರವರ ತಂದೆಯವರೂ ಬಾಲ್ಯಮಿತ್ರರಲ್ಲದೆ ಆಪ್ತಮಿತ್ರರೂ ಹೌದು. ಅವರಿಬ್ಬರೂ ಚಿತ್ರದುರ್ಗದ ಕನ್ನಡ ಸಾಹಿತ್ಯ ಚಟುವಟಿಕೆಗಳಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದರು. ಆಗಾಗ ಒಟ್ಟಿಗೆ ಸೇರಿ ಕತೆ. ಕಾವ್ಯ, ಇತಿಹಾಸಗಳನ್ನು ವಿಮರ್ಶಿಸುತ್ತ ಸಾಹಿತ್ಯ ಕೂಟಗಳನ್ನು ಸೇರಿಸುತ್ತಿದ್ದರು. ಅಪಾರ ಆಸಕ್ತಿಯಿಂದ ಆ ಚರ್ಚೆಗಳನ್ನು ಆಲಿಸುತ್ತ ತ.ರಾ.ಸು. ಮೈ ಪುಲಕಿತವಾಗುತ್ತಿತ್ತು. ಬಾಲ ಮನಸ್ಸಿನಮೇಲೆ ಮುದ್ರೆಯೊತ್ತಿದ ಆ ರಸನಿಮಿಷಗಳು ಮುಂದೆ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ತುಂಬಾ ಪ್ರಭಾವ ಬೀರಿರುವುದರಲ್ಲಿ ಸಂದೇಹವೇನು ?

ಚಿತ್ರದುರ್ಗಕ್ಕೆ ಬರುವ ಪ್ರಮುಖ ಸಾಹಿತಿಗಳನ್ನು ತಮ್ಮ ಮನೆಗೆ ಆಹ್ವಾನಿಸಿ ಸತ್ಕರಿಸುವ ಪರಿಪಾಠ ನಮ್ಮಿಬ್ಬರ ಪಿತೃವರ್ಯರ ಸಹಜ ಗುಣವಾಗಿತ್ತು. ಬಂದಂಥ ಪ್ರತಿಭಾವಂತವ್ಯಕ್ತಿಗಳ ಜೊತೆಯಲ್ಲಿಯೇ ಇರುತ್ತೆ. ಅವರೊಡನೆ ಸಾಹಿತ್ಯ ವಿಚಾರದಲ್ಲಿ ಪ್ರಶ್ನಿಸುತ್ತ, ಚರ್ಚಿಸುತ್ತ, ಕಾಲಕಳೆಯುವರು. ಎಷ್ಟೋವೇಳೆ ಸಮಯದ ಅರಿವಿಲ್ಲದಂತೆ ಅವರೊಡನೆಯೇ ಸುತ್ತುವರು. ಎಲ್ಲ ಉಪನ್ಯಾಸಗಳನ್ನು ಮನಗೊಟ್ಟು ಕೇಳುವರು. ಹೀಗೆ ತ.ರಾ.ಸು. ರವರ ಸಾಹಿತ್ಯ ಕುತೂಹಲ ಕೆರಳುವುದು. ಒಂದುಸಲ ತ.ರಾ.ಸು. ಮೂರುದಿನಗಳಾದರೂ ಮನೆಗೆ ಬರಲಿಲ್ಲ. ಎಲ್ಲಿ ಎಲ್ಲಿ ಹೋದರೋ ಎಂದು ಮನೆಯವರೆಲ್ಲಾ ತಡಕಾಡಿದರು. ಮೂರುದಿನಗಳಾದ ಮೇಲೆ ಮನೆಗೆ ಬಂದಾಗ ಪ್ರಶ್ನಿಸಲು, ಗಳಗನಾಥರ ಜೊತೆ ಅವರ ಸ್ಥಳಕ್ಕೆ ಹೋಗಿ ಹಿಂತಿರುಗಿದುದಾಗಿ ಪ್ರಶಾಂತ ಮನಸ್ಸಿನಿಂದ ಬಾಲಕ ತ.ರಾ.ಸು. ತಿಳಿಸಿದರು. ಮಹಾನ್ ಕನ್ನಡ ಕಾದಂಬರಿಕಾರ ದಿ. ಗಳಗನಾಥರು ಚಿತ್ರದುರ್ಗದಲ್ಲಿ ಉಪನ್ಯಾಸಗಳನ್ನು ಕೊಟ್ಟು, ಶ್ರೋತೃಗಳ ಹೃದಯದಲ್ಲಿ ಕನ್ನಡ ಡಿಂಡಿಮವ ಬಾರಿಸಿ, ಮೂರು ದಿನಗಳ ಹಿಂದೆ ತಮ್ಮೂರಿಗೆ ಹೋಗಿದ್ದರು.

ಚಿತ್ರದುರ್ಗದಬಗ್ಗೆ ತ.ರಾ.ಸು. ರವರ ಅಭಿಮಾನ ಮೇರೆ ಇಲ್ಲದಷ್ಟು ; ನಮ್ಮ ತಂದೆಯವರ ಬಗ್ಗೆಯೂ ಅಷ್ಟೇ, ತ.ರಾ.ಸು. ರವರ ಹೃದಯದಲ್ಲಿ ಮೂಡಿಬಂದ ಈ ಪ್ರೇಮ, ಅವರ ಮಾತಿನಲ್ಲಿಯೇ ಕೆಳಗೆ ಕೊಟ್ಟಿದೆ :–

“ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರೊಂದಿಗೆ ಚಿತ್ರದುರ್ಗದ ಬೆಟ್ಟದ ಕೋಟೆಯಲ್ಲಿ ಅಡ್ಡಾಡುವಾಗ ಹಿಂದೆಂದೂ ಕಾಣದ ಸೌಂದರ್ಯ, ಅಪೂರ್ವ ವೈಶಿಷ್ಟ್ಯ ಕಂಡುಬರುತ್ತದೆ. ಎಂತಲೇ ಅದೊಂದು ರಸಾನುಭವವಾಗುತ್ತದೆ. ಅವರ ಬಹು ವರ್ಷದ ಕನಸು ಮೈದಾಳಿದಂತಿರುವ ಚಿತ್ರದುರ್ಗದ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ತೋರಿಸಿದರು. ಚಿತ್ರದುರ್ಗದಲ್ಲಿ ಹುಟ್ಟಿದವನಿಗೆ ಈ ಸಂಗ್ರಹಾಲಯದಲ್ಲಿ ಸುತ್ತಾಡುವುದೊಂದು ರೋಮಾಂಚಕಾರೀ ಅನುಭವ. ಎಷ್ಟು ಜನರ ಪರಂಪರೆ ಕಳೆದಿದೆ: ಎಂತೆಂಥವರ ಬಾಳಿನ ಹಿನ್ನೆಲೆ ನಮಗೆ ಇದೆ. ಪಾಂಡವರು, ರಾಮ–ಸೀತೆಯರು, ಚಂದ್ರಹಾಸ, ಅಶೋಕ, ಮಯೂರ, ಚಾಲುಕ್ಯ, ಹೊಯಿಸಳರು: ಆ ಇತಿಹಾಸ ಪೂರ್ವಯುಗದ ಚಿತ್ರಕಾರ–ಇವರೆಲ್ಲಾ ಇಂದು ನಾವು ಓಡಾಡುವ ನೆಲವಮೇಲೆ ನಡೆದವರು ; ಆಗಸ್ಟಸ್‌ನ ನಾಣ್ಯ, ಚೀನಾದ ಚಿನ್ನ–ನಿಜ. ನಮ್ಮ ಊರಿಗೆ ನಡೆದುಬಂದಿತ್ತು, ನಮ್ಮ ಊರವರ ಬಟ್ಟೆ ಕೊಳ್ಳಲು, ಪುಲಕಿತವಾಗುತ್ತದೆ ಮೈ ಶ್ರೀ ಜೋಯಿಸರು ಈ ಮಾತುಗಳನ್ನು ಹೇಳುವಾಗ ಹೆಮ್ಮೆ ತಾನೇ ತಾನಾಗಿ ವಿಜೃಂಭಿಸುತ್ತದೆ ನಮಗೂ.

ನಿಜ–ಚಿತ್ರದುರ್ಗದ ನೆಲ ಅಂಥ ಪುಣ್ಯಭೂಮಿ. ಗಂಡುಮೆಟ್ಟು.

ತ.ರಾ.ಸು. ಭವ್ಯ ಚಾರಿತ್ರವುಳ್ಳ ವಂಶದಲ್ಲಿ ಹುಟ್ಟಿದವರು. ಅವರ ತಂದೆ ಸಾತ್ವಿಕ ಶಿರೋಮಣಿಗಳು, ಅಲ್ಲದೆ ಕನ್ನಡದಲ್ಲಿ ಸಣ್ಣ ಕತೆಗಳನ್ನು ರಚಿಸಿರುವವರು.

ಅವರ ದೊಡ್ಡಪ್ಪನವರಾದ ದಿ. ತಳುಕಿನ ವೆಂಕಣ್ಣಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಕನ್ನಡ ಪ್ರಾಚಾರ್ಯರಾಗಿದ್ದವರು: ಅನೇಕ ಕನ್ನಡ ಪ್ರಸಿದ್ಧ ಸಾಹಿತಿಗಳ ಸ್ಫೂರ್ತಿದಾತರು. ಅವರ ಚಿಕ್ಕಪ್ಪನವರಾದ ಶ್ರೀ ತ.ಸು. ಶಾಮರಾಯರು ಕನ್ನಡದ ಉದ್ದಾಮ ಸಾಹಿತಿಗಳಲ್ಲದೆ ಪ್ರಸಿದ್ಧ ವಿಮರ್ಶಕರು. ತ.ರಾ.ಸು. ತಾತಂದಿರು ದಿ. ತ. ಸುಬ್ಬಣ್ಣನವರು ಬ್ರಹ್ಮತೇಜಸ್ವಿಗಳು: ಕನ್ನಡ ನಾಟಕಗಳ ಕರ್ತೃಗಳು. ರಾಮಾಯಣ, ಮಹಾಭಾರತಗಳನ್ನು ನಿತ್ಯಪಾರಾಯಣ ಮಾಡಿ ಅವುಗಳ ಸಾರವನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡ ಪುಣ್ಯಾತ್ಮರು. ಅಲ್ಲದೆ ತ.ರಾ.ಸು ರವರ ಅನೇಕ ಬಂಧು-ಮಿತ್ರರು ಸಂಗೀತ, ಸಾಹಿತ್ಯಗಳಲ್ಲಿ ನುರಿತವರು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವ ಶ್ರೀ ತ.ರಾ.ಸು. ರವರಿಗೆ ಇಂತಹ ವಂಶದ ಹಿನ್ನೆಲೆಯಿದೆ. ಅವರ ಸಾಹಿತ್ಯ ಸೇವೆ ಆಚಂದ್ರಾರ್ಕವಾಗಲಿ!

* ಕಡಲಿನಲ್ಲಿ ಹುಟ್ಟಿದ ಮೋಡ, ಮಳೆಯಾಗಿ, ನದಿಯಾಗಿ, ಲೋಕಕ್ಕೆ ತಂಪು ನೀಡಿ, ಮತ್ತೆ ಹೇಗೆ ಕಡಲನ್ನು ಸೇರುವುದೋ ಕಲಾವಿದನ ಬಾಳೂ ಹಾಗೇ ಆಗಬೇಕು. ದೈವಾನುಗ್ರಹದಿಂದ ಅರಳಿದ ಪ್ರತಿಭಾ ಪುಷ್ಪ, ದೈವಾನುಗ್ರಹಕಾತರವಾಗಿ ಮಾರ್ಗ ಮಧ್ಯದಲ್ಲಿ ಆದಷ್ಟು ದೈವಸೃಷ್ಟಿಯ ಸೇವೆಮಾಡಿ ಕೊನೆಗೆ ದಿವ್ಯ ಪಾದಗಳಲ್ಲಿ ಲೀನವಾಗಬೇಕು. ದೈವೀಕೃಪೆಯ ಮಂತ್ರದಂಡ ತನ್ನಾವುದೋ ಕಾರ್ಯಕ್ಕಾಗಿ ಅರಸಿದ ಹೂವು ಜನತೆಗೆ ನೀಡುವ ತನ್ನ ಪರಿಮಳಕ್ಕೆ ಸುಂಕ ಕೇಳುತ್ತದೆಯೇ?

ಪರಶುರಾಮ ಶೈಲಿಯ ಅಪ್ರತಿಮ ಸಾಹಿತಿ

— ಎನ್. ನಾರಾಯಣ ಬಲ್ಲಾಳ

ಒತೆಪ್ಪಟಿಯಾಗಿ ಸಾಧಾರಣ ಉದ್ದವಾದ ಈ ಬಡಕಲು ವ್ಯಕ್ತಿ, ತ.ರಾ.ಸು. ಎಂದರೆ ನನಗೆ ಥಕ್ಕನೆ ನಂಬಿಕೆಯಾಗಲಿಲ್ಲ.

ಸಿಗರೇಟನ್ನು ವಿಪರೀತವಾಗಿ ಸೇದುವ ಅದರೊಂದಿಗೆ ಭಯಂಕರವಾಗಿ ಕೆಮ್ಮುವ ಈ ಗೋಧಿ ಬಣ್ಣದ ವ್ಯಕ್ತಿ ಕಾಲೇಜಿನ ಹುಡುಗನಂತೆ ಕಂಡರೂ, ಜೀವನದ ವಿರುದ್ಧ ದಿಕ್ಕಿನಲ್ಲಿ ಈಜಿದವರೆಂದು ಅವರ ಮುಖಮುದ್ರೆ ಹೇಳುತ್ತದೆ.

ನಾನು ಅವರನ್ನು ಪ್ರಥಮವಾಗಿ ಸಂಧಿಸಿ, ಮಾತು ಕತೆಯಾಡಿದ್ದು ಪ್ರಾಯಶಃ ೧೯೬೩ರ ಫೆಬ್ರವರಿ ಮಾಹೆ, ಉಡುಪಿಯಲ್ಲಿ; ಅದೂ ಮಲ್ಪೆಯ ಸುಂದರ ಪಡುಕಡಲ ಕರೆಯ ಮರಳು ರಾಶಿಯಲ್ಲೇ. ಆಗ ಅವರು ನಿಸರ್ಗ ಸುಂದರ ಸೂರ್ಯಾಸ್ತದ ವಿಹಂಗಮ ದೃಶ್ಯವನ್ನೂ, ಅದರ ಸೊಬಗನ್ನೂ ಸವಿಯುತ್ತಿದ್ದರು.

ಶ್ರೀ ತ.ರಾ.ಸು. ಉಡುಪಿಗೆ ಬಂದಿದ್ದಾರೆಂದೂ, ಅವರ ಸಂಗಡ ನಾನು ಸ್ವಲ್ಪ ಸಹಕರಿಸಬೇಕಂದೂ 'ಪ್ರಕಾಶ' ಪತ್ರಿಕೆಯ ಮಾನ್ಯ ಸಂಪಾದಕರು ಫೋನಿನಲ್ಲಿ ಹೇಳಿದಾಗ ನನಗೆ ಆನಂದವೂ, ಆಶ್ಚರ್ಯವೂ ಏಕಕಾಲದಲ್ಲಾದವು. ಶ್ರೀ ತ.ರಾ.ಸು. ಬಂದುದು ಒಂದು ಆಕಸ್ಮಿಕವಾಗಿದ್ದಂತೆ ಅವರ ಸಂದರ್ಶನ ಲಾಭ ಆನಂದದಾಯಕವೇ ಆಗಿತ್ತು.

ಸಾಮಾನ್ಯವಾಗಿ ನಾನು ಮೆಚ್ಚುವ ಕೆಲವೇ ಕನ್ನಡ ಸಾಹಿತಿಗಳಲ್ಲಿ ಶ್ರೀ ತ ರಾ.ಸು. ಅವರು ಒಬ್ಬರು. ಅವರ ಕಥನ ತಂತ್ರ, ಆ ಶೈಲಿಯ ಭಾವಾವೇಶ, ನಿರೂಪಣೆಯ ಹೃದಯಂಗಮ ಸಾಮರ್ಥ್ಯ ಆನಂದವನ್ನು ತರುತ್ತವೆ.

ಇಂತಹ ತ.ರಾ.ಸು. ಮೈಸೂರು ಪುರಸಭೆಯ ಒಬ್ಬ ಸದಸ್ಯರಾಗಿ ಆರಿಸಿ ಬಂದುದನ್ನು ಪತ್ರಿಕೆ ಸಾರಿದಾಗ "ಸಾಹಿತಿಗೇಕೆ ಈ ಒಣ ರಾಜಕೀಯ?" ಎಂದು ಕೆಲವರು ಕೇಳಿದರು,

ಸಾಹಿತಿಯು ರಾಜಕಾರಿಣಿಯಾಗಬಲ್ಲ ಉದಾಹರಣೆ ನಮ್ಮಲ್ಲಿದೆ. ಅದರೆ ಶ್ರೀ ತ.ರಾ.ಸು. ರವರಂತಹ ಸಾಹಿತ್ಯವನ್ನೇ ಜೀವನದ ಬದುಕಾಗಿ ಮಾಡಿಕೊಂಡವರಿಗೆ ಇದು ಸಾಧ್ಯವೇ ಎನಿಸಬಹುದು.

ಹಾಗೆ ನೋಡಿದರೆ ಶ್ರೀ ತ.ರಾ.ಸು. ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ರಾಜಕೀಯ ಸಂಪರ್ಕವಿಟ್ಟುಕೊಂಡವರು. ಚಳುವಳಿಯ ಕಾಲದಲ್ಲಿ ಬ್ರಿಟಿಷ್ ರಾಜಸಭೆಗೆ ವಿರೋಧವಾಗಿ ಹೋರಾಟ ನಡೆಸಿ, ಕಬ್ಬಿಣದ ಪಂಜರ ಸೇರಿದ ಅಸಂಖ್ಯಾತ ಸಿಂಹದ ಮರಿಗಳಲ್ಲಿ ಶ್ರೀಯುತರು ಕೂಡಾ ಒಬ್ಬರು.

ಶ್ರೀಯುತರದು ಕೆಚ್ಚೆದೆಯ ಜೀವ ಯಾವಾಗಲೂ ಅವರು ಹುರುಪಿನ ಆವೇಶದಲ್ಲೇ ಇರುವಂತೆ ಅವರ ಲೇಖನಿಯ ರಭಸ ನಮ್ಮನ್ನು ನಡೆಸುತ್ತ ಹೋಗುವಂತಹುದಲ್ಲ. ಓದಿಸುತ್ತ ಉದ್ರೇಕಗೊಳಿಸುತ್ತ ಮುನ್ನಡೆಸುವಂತಹುದು. ಅವರ ಶೈಲಿಯ ಓಟ, ಆ ಚೇತನಪ್ರಸಾದ, ಆ ಓಜಸ್ಸು, ಆ ಕೆಚ್ಚು ಬಹುಶಃ ಕನ್ನಡದ ಕಾದಂಬರಿಕಾರರಲ್ಲಿ ಯಾರಿಗೂ ಇಲ್ಲ. ಇವರ ಶೈಲಿಯು ವಿಶಿಷ್ಟ ಮಾದರಿಯದು ಹಾಗೂ ಜನಪ್ರಿಯವೂ ಹೌದು. ನಾವು ಇವರ ಕಾದಂಬರಿಯನ್ನೇ ಓದುವುದಾದರೂ ಅವರಲ್ಲೊಂದು ಪ್ರತ್ಯೇಕವಾದ ವೈವಿಧ್ಯ ಕಾಣುತ್ತದೆ. ಅವರ ಲೇಖನಿಯ ಸತ್ವಪೂರಿತ ಶಕ್ತಿ ನಮ್ಮ ಹೃದಯದ ಮಾನವೀಯತೆಯನ್ನು ಕೆರಳಿಸಿ, ನಮ್ಮಲ್ಲೊಂದು ಅದಮ್ಯ ಉತ್ಸಾಹವನ್ನು ಉಂಟುಮಾಡುತ್ತದೆ. ಕಾದಂಬರಿಯ ಚಿತ್ರಣದ ವಾತಾವರಣದೊಂದಿಗೆ ನಾವೊಬ್ಬ ಪ್ರೇಕ್ಷಕರಾಗಿ ಸೇರಿ ಹೋಗದೆ ಯಾವುದೋ ಒಂದು ಪಾತ್ರದಲ್ಲೇ ನಾವು ನಮ್ಮ ಜೀವನ ರೂಪಿಸಿಕೊಳ್ಳುವಂತಾಗುತ್ತದೆ. ಅಂತಹ ಶಕ್ತಿವಾನ್ ಶೈಲಿಯ ಶ್ರೀ ತ.ರಾ.ಸು. ಕನ್ನಡ ಸಾಹಿತ್ಯರಂಗಕ್ಕೆ ಕೋಲ್ಮಿಂಚಿನಂತೆ ತೋರಿ ಕೊಂಡರು.

ಲೇಖಕ ನೂರಾರು ಕಾದಂಬರಿ ಬರೆದಾಕ್ಷಣ ಅವನು ಮಹಾಸಾಹಿತಿ ಎನಿಸುವುದಿಲ್ಲ. ಒಂದೇ ಒಂದು ಜನಪ್ರಿಯ ಕಥೆ ಬರೆದೂ ಮಹಾಸಾಹಿತಿ ಎನಿಸಬಲ್ಲ ಲೇಖಕ ತನ್ನ ಸಫಲವಾದ ಒಂದೇ ಒಂದು ಕೃತಿಯ ಮೂಲಕ ಸಾಹಿತ್ಯರಂಗದ ಶಾಶ್ವತ ಸ್ಥಾನ ಪಡೆಯಬಹುದು. ೧೯೪೭ರ ಸಮಯದಲ್ಲಿ "ಮನೆಗೆ ಬಂದ ಮಹಾಲಕ್ಷ್ಮಿ"ಯ ಮೂಲಕ ಒಮ್ಮೆಗೇ ಸಾಹಿತ್ಯಾಕಾಶದಲ್ಲಿ ತೂರಿಬಂದ ಈ ತರುಣ ಸಾಹಿತಿಯು ಒಳ್ಳೆಯ ಭರವಸೆಯನ್ನೂ ವಿಶ್ವಾಸವನ್ನೂ ಹುಟ್ಟಿಸಿದರು. ಈ ಕಾದಂಬರಿಯ ವಸ್ತುವಿನ ಬಗ್ಗೆ ಹಿರಿ ಸಾಹಿತಿಗಳು ಒಂದು ಆಂದೋಲನವನ್ನೇ ಎಬ್ಬಿಸಿದರೂ, ಶ್ರೀ ತ.ರಾ.ಸು. ರವರ ಲೇಖನಿ ನಿರ್ಭೀತಿಯಿಂದ ಮುಂದುವರಿಯಿತು.

ಶ್ರೀ ತ.ರಾ.ಸು. ಸಮರ್ಥ ಕಾದಂಬರಿಕಾರರು, ಅವರು ಹಲವಾರು ಸಾಮಾಜಿಕ ಸಮಸ್ಯೆಗಳ ಮೇಲೆ ಸಾಹಿತ್ಯ ರಚಿಸಿದ್ದಾರೆ. ಅವರ ಕಥನ ಕಲೆಯ ವೈಶಿಷ್ಟ್ಯವೆಂದರೆ ವಾಸ್ತವಿಕ ನಿರೂಪಣೆಯ ಹಿನ್ನೆಲೆಯಲ್ಲೇ ಓದುಗರು ಓದುತ್ತ ಹೋದ ಹಾಗೆ ಮನಸ್ಸಿಗೆ ಸುಳಿಯಬಹುದಾದ ಸಮಸ್ಯೆಗಳನ್ನು ಊಹಿಸಿ, ತನ್ನಷ್ಟಕ್ಕೆ ಉತ್ತರಿಸುವ ಒಂದು ಅದ್ಭುತ ಜಾಣ್ಮೆ.

ಶ್ರೀ ತ.ರಾ.ಸು. ಇಂದು ಸಾಹಿತ್ಯ ರಂಗಕ್ಕೆ ಅನೇಕ ಅಮೂಲ್ಯ ಕೃತಿ ನೀಡಿದ್ದಾರೆ. ಅವರ ಎಲ್ಲ ಕೃತಿಗಳೂ ಸಂಪೂರ್ಣ ಯಶಸ್ವಿ ಎಂದು ನಾವು ಖಂಡಿತ ಹೇಳುವುದಿಲ್ಲವಾದರೂ ಅವರ ಒಂದೊಂದು ಕಾದಂಬರಿಯಲ್ಲಿ ಒಂದೊಂದು ಹೊಸ ಸಮಸ್ಯೆ ಇದೆ. "ಸೂಳೆ" ಸಮಾಜದ ಒಂದು ವ್ಯಂಗ್ಯ ಟೀಕಾವಸ್ತು. ಆ ಟೀಕೆಯನ್ನು ನಡೆಸುವ ಮಾಡಿದವರು [illegible] ಧರ್ಮ ಆರಾಧಕರು. ಈ ಆರಾಧನೆಯಲ್ಲೇ ಸೂಳೆ ಒಂದು ಬೇಗಡೆಯದು. ತಾಯ್ತನದ ಗೌರವ, ಸ್ತ್ರೀ ಸಹಜ ಮಾನವೀಯತೆ ಇವೆ ಎಂಬುದನ್ನು

ಮರೆಯುತ್ತಾರೆ. ಈ ವಿಷಯ ಪ್ರತಿಪಾದನೆಯ ಜಾಲದಲ್ಲಿ ಅವರು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ ಉತ್ತಮ ಕಾದಂಬರಿಯೇ "ಮಸಣದ ಹೂ".

ಇಲ್ಲಿ ವೇಶ್ಯಾ ಸಮಸ್ಯೆಯ ಒಂದು ದುರಂತ ಮುಖವನ್ನು ಪ್ರಭಾವಿಯಾಗಿ, ಶಕ್ತಿಯುತವಾಗಿ ಹಾಗೂ ಪರಿಪೂರ್ಣವಾಗಿ ಶ್ರೀ ತ.ರಾ.ಸು. ಚಿತ್ರಿಸಿದ್ದಾರೆ. ವೇಶ್ಯೆಯ ನಗ್ನಚಿತ್ರವನ್ನು ಇದ್ದಕ್ಕಿದ್ದಂತೆ ಅಶ್ಲೀಲವಾಗಿಕೂಡ – ಶ್ರೀ ತ.ರಾ.ಸು. ಬಣ್ಣಿಸಿದ್ದರೂ ಕೂಡ ಕರುಳು ಕತ್ತರಿಸಿ ಅನುಕಂಪದ ಕಣ್ಣೀರು ಸುರಿಯುತ್ತದೆ, ಇದು ಕಾಮಪ್ರಚೋದಕ ಕಾದಂಬರಿಯಲ್ಲ. ಕಾಮಜೀವನದ ಭೀಭತ್ಸ ಚಿತ್ರ. ಈ ಕಾದಂಬರಿಯ ವ್ಯಕ್ತಿಗಳನ್ನು ನೋಡಿ ನಾವು ಅನುಕಂಪ ಸೂಚಿಸುತ್ತೇವೆ, ದುಃಖಿಸುತ್ತೇವೆ. "ಅಯ್ಯೋ ಪಾಪ" ಎನ್ನುತ್ತೇವೆ ಹೊರತು ನಮ್ಮ ಮನಸ್ಸು ಕಾಮಪೂರಿತವಾಗುವುದಿಲ್ಲ. ಜೀವನದ ಅಧಃಪತನದ ಒಂದು ನಿತ್ಯನೂತನ ಚಿತ್ರವನ್ನು ಕೊಡುವುದರ ಜೊತೆಗೆ ಕನ್ನಡ ಕಾದಂಬರಿ ಪರಂಪರೆಯಲ್ಲಿ ಸರ್ವಕಾಲೀನವೂ ಉಳಿಯಬಲ್ಲ ಒಂದು ಅತಿ ಉನ್ನತವಾದ ಸಾಹಿತ್ಯ ಕಾಣಿಕೆಯನ್ನು ನೀಡಿದ್ದಾರೆ.

ಹಾಗೆಯೇ ಅವರು ಪತ್ರಿಕೋದ್ಯಮಿಯ ಜೀವನದ ಸುಖ–ಕಷ್ಟಗಳನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ ಯಥಾರ್ಥ ಸನ್ನಿವೇಶದ ಸುಂದರ ಕಾದಂಬರಿ "ಮುಂಜಾವಿನಿಂದ ಮುಂಜಾವು" ಅವರ ಇನ್ನೊಂದು ಶ್ರೇಷ್ಠ ಕೃತಿ. ಇದು ಅವರ ಪತ್ರಿಕೋದ್ಯಮದ ದುರ್ಧರ ಅನುಭವದ ಪರಿಪೂರ್ಣ ಚಿತ್ರವೆನ್ನಬಹುದು.

ಶ್ರೀ ತ.ರಾ.ಸು. ಪತ್ರಿಕೋದ್ಯಮಿಯಾಗಿ ಒಳ್ಳೆಯ ಆದರ್ಶವನ್ನೇ ತೋರಿದ್ದಾರೆ. ಶ್ರೀ ತಿ. ತಾ. ಶರ್ಮರ ಗರಡಿಯಲ್ಲಿ ತಮ್ಮ ಲೇಖನಿಗೆ ಕೆಚ್ಚನ್ನು ತುಂಬಿಕೊಂಡರು. ಅವರ ನಿರರ್ಗಳವಾದ ವಿಚಾರಧಾರೆಗೆ ಶ್ರೀ ಶರ್ಮರ ಮಾರ್ಗದರ್ಶನವೇ ಕಾರಣವೆಂಬುದನ್ನು ಇಂದಿಗೂ ಅವರು ಒಪ್ಪುತ್ತಾರೆ. ಇವರು "ವಿಶ್ವ ಕರ್ನಾಟಕ" ದೈನಿಕದಲ್ಲಿ ದುಡಿಯುತ್ತಿದ್ದಾಗ ಇವರ ಲೇಖನಿಯ ಪ್ರತಿಭೆ ಕನ್ನಡ ಪತ್ರಿಕಾ ಲೋಕವನ್ನೇ ಬೆರಗುಗೊಳಿಸಿತು. "ವಾಹಿನಿ" ಎಂಬ ಸಾಪ್ತಾಹಿಕವು ಎರಡು ವರ್ಷಗಳ ಕಾಲ ಅವರ ಸಂಪಾದಕತ್ವದಲ್ಲಿ ನಡೆಯಿತು.

ಶ್ರೀ ತ.ರಾ.ಸು. ನಿರರ್ಗಳವಾದ ತನ್ನ ಶೈಲಿ ಸಂಪತ್ತನ್ನು ಬಹು ವ್ಯವಸ್ಥಿತವಾಗಿಯೂ ಉದ್ಬೋಧಕವಾಗಿಯೂ ಬಳಸಿ, "ಐತಿಹಾಸಿಕ ಕಾದಂಬರಿಗಳು ಈ ರೀತಿ ಬರೆಯಲ್ಪಡಬೇಕು" ಎಂದು ಜನಮೆಚ್ಚುಗೆ ಗಳಿಸಿದುದು ಅವರ ಚಿತ್ರದುರ್ಗದ ಐತಿಹಾಸಿಕ ಕಾದಂಬರಿಗಳಲ್ಲಿ ಅವರು ಇತಿಹಾಸದ ಬಗ್ಗೆ ಬರೆದ ಕಾದಂಬರಿಗಳು ನಿಜವಾಗಿಯೂ ನಮ್ಮ ಕನ್ನಡ ಸಾಹಿತ್ಯಕ್ಕೆ ನೀಡಿದ ದೇಣಿಗೆಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ಕಾದಂಬರಿಗಳಲ್ಲಿ ಒಂದು ಹೊಸ ಪರಂಪರೆಯನ್ನು ಆರಂಭಿಸಿದ ಕೀರ್ತಿ ಇವರಿಗೆ ಸಲ್ಲಬೇಕು. ಇತಿಹಾಸವು ಸಾಮಾನ್ಯವಾಗಿ ಒಣ ಹಾಗೂ ಚರ್ವಿತಚರ್ವಣ ವಸ್ತು ವಿಶೇಷದಿಂದ ಕೂಡಿರುವಂತಹದು. ಇಂತಹ ವಸ್ತುವಿನಲ್ಲೂ ಚೈತನ್ಯ ತುಂಬಿ, ನಮ್ಮ ನರನಾಡಿಗಳಲ್ಲೂ ಆವೇಶ ಹೊರಸೂಸುವಂತೆ ಮಾಡಿ,

ಜನರ ಪ್ರಜ್ಞೆಯಲ್ಲಿ ಹೊಸ ಮಾರ್ಗದರ್ಶನ ಸಾಧಿಸಿದರು. ಅವರು ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿ ಬರೆಯ ತೊಡಗಿದಾಗ ಜನ ಅವರ ಕಾದಂಬರಿಯ ಬಗ್ಗೆ ಹುಚ್ಚೆದ್ದುಹೋದರು. "ಕಂಬನಿಯ ಕುಯಿಲು", "ರಕ್ತ ರಾತ್ರಿ" "ತಿರುಗು ಬಾಣ" – ಕನ್ನಡ ಇತಿಹಾಸದ ಭವ್ಯ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾದ ಅಮೋಘವಾದ ಕೃತಿಗಳು ಆ ವರೆಗೆ ಕನ್ನಡದಲ್ಲಿ ಅನೇಕ ಐತಿಹಾಸಿಕ ಕಾದಂಬರಿಗಳು ಬಂದಿದ್ದವಾದರೂ, ಶ್ರೀ ತ.ರಾ.ಸು. ರವರ ಕೆಚ್ಚಿನ ಶೈಲಿ ನಿರೂಪಣಾ ಸಾಮರ್ಥ್ಯದ ಇದಿರು ಬೇರೆಲ್ಲಾ ಕಾದಂಬರಿಗಳಿಗಿಂತಲೂ ಇದಕ್ಕೆ ಮುಕುಟ ಸ್ಥಾನವನ್ನೇ ಜನ ಕೊಟ್ಟರು. ಚಿತ್ರದುರ್ಗಕ್ಕೆ ಸಂಬಂಧಿಸಿ ಆಮೇಲೆ ಬಂದ ಅವರ ಎರಡು ಕಾದಂಬರಿಗಳು ವಸ್ತುವಿನ ಕೊರತೆಯಿಂದ ಶಿಥಿಲವ ಕಥೆ ನಾರಿದರೂ. ವಿಷ್ಣುವರ್ಧನನ ಜೀವನದ ಕುರಿತಾದ ಅವರ ರಜತಮಹೋತ್ಸವ ಕಾದಂಬರಿ – "ಸಿಡಿಲ ಮೊಗ್ಗು" ಕನ್ನಡ ಸಾಹಿತ್ಯ ಪ್ರಪಂಚದಲ್ಲೇ ಒಂದು ಅತ್ಯುಚ್ಚ ಸ್ಥಾನವನ್ನೇರಿತು. ಅಂತೆಯೇ "ನೃಪತುಂಗ" ಮತ್ತು "ಹಂಸಗೀತೆ" — ಇವು ಕನ್ನಡ ಸಾಹಿತ್ಯರಂಗದ ಅನರ್ಘ್ಯ ರತ್ನಗಳು, ಅವರ ಸಾಮಾಜಿಕ ಕಾದಂಬರಿಗಳೂ ಒಂದು ಹೊಸ ವೈಚಾರಿಕ ದಿಗ್ದರ್ಶನ ನೀಡುತ್ತವೆಂಬುದನ್ನು ಒಪ್ಪಬಹುದು.

ಶ್ರೀ ತ.ರಾ.ಸು. ರವರಲ್ಲಿ ನಾನು ಮೆಚ್ಚುವುದು ಅವರ ಶೈಲಿಯನ್ನು. ಜಲಪಾತದ ನಿರರ್ಗಳ ಧಾರೆಯಂತೆ ಓತಪ್ರೋತವಾಗಿ ಹರಿದು ಬರುವ ಅವರ ಶಬ್ದಸಂಪತ್ತು ನಮ್ಮ ನರನಾಡಿಗಳಲ್ಲಿ ಸತತ ಭಾವೋದ್ವೇಗವನ್ನುಂಟು ಮಾಡುತ್ತದೆ. ಅವರದು ಚೇತನಾತ್ಮಕವಾದ ಬರಸಿಡಿಲು.

ಶ್ರೀ ತ.ರಾ.ಸು. ಇನ್ನೂ ಹುಡುಗಾಟಿಕೆಯ ಮುಖಮುದ್ರೆಯುಳ್ಳ ಕಾಲೇಜು ಹುಡುಗನಂತೆ ಕಾಣುತ್ತಾರೆ. ಅವರ ಗುಂಗುರು ಕೂದಲಿನ ನೀಳ ಮುಖದಲ್ಲಿ ಕೆಚ್ಚಿನ ಶೈಲಿಯ ಪ್ರತಿಭೆಯ ಯಾವ ಕುರುಹೂ ಕಾಣದೆ ಮೃದು ಹಾಸದ ಶಾಂತತೆಯೇ ಕಂಡು ಬರುತ್ತದೆ. ಜನರ ಒಡನಾಟದಲ್ಲಿ ಅವರು ತುಂಬ ವಿಶ್ವಾಸವಾಗಿ, ನಿರಹಂಕಾರವಾಗಿ ನಡೆಯುತ್ತಾರೆ.

ಕನ್ನಡದ ಕೆಲವೇ ಉತ್ತಮ ಹಾಗೂ ಪ್ರತಿಭಾಸ್ವಿತ ಭಾಷಣಕಾರರಲ್ಲಿ ಶ್ರೀ ತ.ರಾ.ಸು. ಒಬ್ಬರೆಂದು ನಿಸ್ಸಂಕೋಚವಾಗಿ ಹೇಳಬಹುದು. ಅವರ ಭಾಷಣ ನಿರರ್ಗಳವಿರುವಂತೆ ಸಮರ್ಥ ಪ್ರತಿಪಾದನೆಯದೂ ಆಕರ್ಷಣೀಯ ಮಾಧ್ಯಮವೂ ಆಗಿದೆ. ನಿರರ್ಗಳವಾಗಿ, ಗಂಗಾ ಪ್ರವಾಹದಂತೆ ಗಂಟೆಗಟ್ಟಳೆ ಮಾತನಾಡಬಲ್ಲ ಅವರ ವಾಗ್ಝರಿಗೆ ಶ್ರೋತೃಗಳನ್ನು ಆಕರ್ಷಿಸಿ ಹಿಡಿದಿಡುವ ಶಕ್ತಿ ಇದೆ. ಆದ್ದರಿಂದಲೇ ಶ್ರೀ ಸುಬ್ಬರಾಯರ ಭಾಷಣವೆಂದೊಡನೆ ಜನ ಕಿಕ್ಕಿರಿದು ಸೇರುತ್ತಾರೆ.

ಅವರು ಆಳವಾದ ಅಭ್ಯಾಸಿಗಳು; ಸತತ ವಿಚಾರ ವಿಮರ್ಶಕರು; ಜೀವನದ ದೃಷ್ಟಿಯನ್ನು ಆಳವಾಗಿ ಅಭ್ಯಸಿಸುವಂತೆ, ಸ್ವತಃ ಪರಿಶೀಲಕರೂ ಆಗಿದ್ದಾರೆ.

ಕರಾವಳಿ ಬಳಿಯ ಮೀನುಗಾರರ ಜೀವನದ ಒಂದು ಸುಂದರ ಕಾದಂಬರಿಯನ್ನು

ಬರೆಯುವ ಅಭಿಲಾಷೆ ಇದೆಯಾಗಿ ಅವರು ನನ್ನೊಡನೆ ಹೇಳಿದರು. ಅದಕ್ಕಾಗಿ ಅವರು ವಿಶೇಷವಾದ ಅಭ್ಯಾಸ ನಡೆಸಲು ಇನ್ನೊಮ್ಮೆ ಬರುವುದಾಗಿ ಹೇಳಿದ್ದಾರೆ.

ಶ್ರೀ ಅ. ನ. ಕೃಷ್ಣರಾಯರ ಕುರಿತು ಅವರೊಂದು ಪರಿಚಯಾತ್ಮಕ ಗ್ರಂಥ ಬರೆದಿದ್ದಾರೆ. ನಮ್ಮ ಸಾಹಿತ್ಯದ ಜೀವನ ಚರಿತ್ರೆಯ ಪ್ರಾಕಾರದಲ್ಲಿ ಅದಕ್ಕೊಂದು ಮಹತ್ವದ ಸ್ಥಾನವಿದೆ. ಶ್ರೀ ಅ. ನ. ಕೃ. ಬಗೆಗೆ ಅವರು ತಾಳಿದ ಅಭಿಪ್ರಾಯ ಕೆಲವೊಮ್ಮೆ ವೈಯಕ್ತಿಕವಾಗಿ ಕಂಡರೂ ಅವರು ಅದನ್ನು ನಿರೂಪಿಸಿದ ಧಾಟಿ, ಮುನ್ನಡಸಿದ ಕ್ರಮ, ಆ ಶೈಲಿಯ ಓಜಸ್ಸು ನಿಜಕ್ಕೂ ಅದ್ಭುತವಾದುದು.

ಕನ್ನಡದ ಜನ ಇನ್ನೂ ಕತ್ತಲಲ್ಲಿದ್ದಾಗಲೇ ಹಿಂದೀ ನಿರ್ಮಾತೃಗಳು ಇವರ “ಹಂಸಗೀತೆ” ಯನ್ನು “ಬಸಂತ ಬಹಾರ್” ಎಂಬ ಹಿಂದೀ ಚಿತ್ರವಾಗಿ ರೂಪಾಂತರಿಸಿದರು. ಅದು ಹಿಂದೀ ಚಿತ್ರರಂಗದಲ್ಲಿ ಯಶಸ್ವಿಯೂ ಆಯಿತು. ಆ ಬಳಿಕ ಅವರ “ಚಂದವಳ್ಳಿಯ ತೋಟ” ಕಾದಂಬರಿ ತೆರೆಗೆ ಬಂತು. ಇತ್ತೀಚೆಗೆ ಅವರ “ಚಕ್ರತೀರ್ಥ” ಕೂಡಾ ಚಲನಚಿತ್ರವಾಗಿ ಒಳ್ಳೇ ಹೆಸರನ್ನು ಸಂಪಾದಿಸಿತು.

ಇಂದು ಅವರು ಕನ್ನಡದ ಹೆಸರಾಂತ ಕಾದಂಬರಿಕಾರರಾಗಿದ್ದಾರೆ. ಅವರು ಚಿತ್ರದುರ್ಗದ ಹೆಸರಾಂತ ಮನೆತನಕ್ಕೆ ಸೇರಿದವರು. ಈ ಮನೆತನವು ಸಾಹಿತ್ಯರಂಗದಲ್ಲಿ ಮೈಸೂರು ಸಂಸ್ಥಾನದಲ್ಲೇ ಹೆಸರು ಪಡೆದಿದ್ದಿತು. ಅದೇ ಮನೆತನಕ್ಕೆ ಸೇರಿದ ತಳುಕಿನ ಶ್ರೀ ವೆಂಕಣ್ಣಯ್ಯನವರು ಸಾಹಿತ್ಯದಲ್ಲೇ ಅಪ್ರತಿಮರೆಂದು ಹೆಸರುಗಳಿಸಿದವರು. ಅದೇ ಕುಟುಂಬದಲ್ಲಿ ಹುಟ್ಟಿಬಂದ ದಿ॥ ವೆಂಕಣ್ಣಯ್ಯನವರ ತಮ್ಮನ ಮಕ್ಕಳೇ ಶ್ರೀ ತ. ರಾ. ಸು.

ಸಂಸಾರಿಯಾದ ಶ್ರೀಯುತರು ಈಗ ಮೈಸೂರಿನಲ್ಲಿ ನೆಲೆಸಿದ್ದಾರೆ. ಕಾದಂಬರಿಕಾರರಾಗಿಯೇ ಬಹುಶಃ ಸಾರ್ಥಕ ಜೀವನ ಸಾಗಿಸುತ್ತಿದ್ದಾರೆ. ಅವರ ಸಾಹಿತ್ಯ ಸೃಷ್ಟಿಯಲ್ಲಿ ವಾಸ್ತವಿಕ ಅನುಭವವಿದೆ; ದೃಷ್ಟಿಕೋನದಲ್ಲಿ ಅಭ್ಯಾಸದ ಕೊಸರು ಇದೆ; ಲೇಖನಿಯಲ್ಲಂತೂ ಉಜ್ವಲವಾದ ಕೆಚ್ಚಿನ ಸಂಪತ್ತಿದೆ.

ಕನ್ನಡದ ಕೆಲವೇ ಪ್ರತಿಭಾನ್ವಿತರಲ್ಲಿ ಶ್ರೀ ತ. ರಾ. ಸು. ಒಬ್ಬರೆನ್ನುವುದು ಅನುಮಾನವಿಲ್ಲದ ಸತ್ಯ. ಅವರ ಲೇಖನಿ ಕನ್ನಡ ಸಾಹಿತ್ಯದ ಭಾಗ್ಯ, ಒಂದು ಹೆಮ್ಮೆ ಅಪೂರ್ವ ಶಕ್ತಿಯೂ ಆಗಿದೆ.

ಶಬ್ದ ಶಿಲ್ಪಿ

— ಪಾಟೀಲ ಪುಟ್ಟಪ್ಪ

ತನಗೆ ಯಾರೂ ವೈರಿಗಳೇ ಇಲ್ಲವೆನ್ನುವ ವ್ಯಕ್ತಿಯೊಬ್ಬರು ನಮ್ಮ ಮಧ್ಯದಲ್ಲಿ ಬಾಳಿ ಬದುಕಿ ಹೋದರು. ತಮ್ಮನ್ನು ಯಾರೇ ದ್ವೇಷಿಸಿದರೂ ಅವರು ಎಲ್ಲರನ್ನೂ ಪ್ರೀತಿಸಿದರು. ಅವರ ಬಗೆಗೆ ಯಾರು ಎಂಥದೇ ಕೆಡುಕನ್ನೇ ಮಾಡಿದ್ದರೂ ಅ. ನ. ಕೃ. ಅದೊಂದನ್ನೂ ನೆನೆಯದೆ, ತನಗೆ ಅವರು ಯಾವುದೂ ಅಹಿತ ಮಾಡಿಲ್ಲವೆಂಬಂತೆ, ಅವರೊಂದಿಗೆ ಅಂತಃಕರಣದಿಂದಲೇ ನಡೆದುಕೊಂಡರು. ಆ ಉಜ್ವಲ ಮಾದರಿಗೆ ಸಮೀಪವಾದ ವ್ಯಕ್ತಿ ಯಾರು ಎಂದು ಸುತ್ತಲೂ ದೃಷ್ಟಿಯನ್ನು ಬೀರಿ ನೋಡಿದಾಗ ನಮ್ಮ ಕಣ್ಣಿಗೆ ತ. ರಾ. ಸು. ಬೀಳುತ್ತಾರೆ. ಅವರ ಜೀವನವು ಮುಚ್ಚು ಮರೆ ಇಲ್ಲದ ತೆರೆದ ಪುಸ್ತಕ. ಕೃಷ್ಣರಾಯರ ಆ ಸ್ವಭಾವ ಗುಣದ ಛಾಯೆಯನ್ನು ನಾವು ತ. ರಾ. ಸು. ಜೀವನದಲ್ಲಿ ಗುರುತಿಸಿಕೊಳ್ಳಬಹುದು.

ತ. ರಾ. ಸು. ಎನ್ನುವ ಹೆಸರು ಅಕ್ಷರ ಬಲ್ಲ ಕನ್ನಡಿಗರ ಹೃದಯದ ಮೇಲೆ ಅಚ್ಚೊತ್ತಿದಂತೆ ಮೂಡಿಕೊಂಡಿದೆ. ಆ ತರದ ಮನುಷ್ಯನನ್ನು ಕಾಣುವುದೇ ಅಪರೂಪ, ಜೀವನದಲ್ಲಿ ತಮಗೇನೇ ತೊಂದರೆ ಇದ್ದರೂ ಅವರು ಕನ್ನಡ ಜನರಿಗೆ ತಮ್ಮ ಸಾಹಿತ್ಯದಿಂದ ರಸಾನುಭೂತಿ ಒದಗಿಸಿ ಕೊಟ್ಟಿದ್ದಾರೆ. ತ. ರಾ. ಸು. ಗಿಂತ ಅವರ ಕೃತಿ ದೊಡ್ಡದು. ಮನುಷ್ಯ ಹದಗೊಂಡಿರುವುದರಿಂದ ಅವನು ತನ್ನ ಕೃತಿಗಿಂತ ದೊಡ್ಡವನಾಗಿ ಕಾಣುತ್ತಾನೆ. ಆ ಆತ್ಮೀಯತೆ, ಅಂತಃಕರಣ, ಆ ಮನಸ್ಸಿನ ಮೋಡಿ ತ. ರಾ. ಸು. ಒಬ್ಬರಿಗೇ ಸಾಧ್ಯ. ಅವರ ಮಾತು ಹೃದಯದಿಂದ ಬರುವುದರಿಂದ, ಅವರಲ್ಲಿ ನಾವು ಅವರ ಹೃದಯವನ್ನು ಕಾಣುತ್ತೇವೆ. ಅವರನ್ನು ಕಾಣಲು ಅಪರಿಚಿತರೇ ಹೋಗಿರಲಿ ತಿರುಗಿ ಬರುವಾಗ ಅವರು ತ. ರಾ. ಸು. ಸ್ನೇಹದ ಹೊರೆಯನ್ನು ಹೊತ್ತು ಬಂದಿರುತ್ತಾರೆ.

ಅವರು ಹಚ್ಚಿಕೊಂಡ, ಅವರನ್ನು ಹಚ್ಚಿಕೊಳ್ಳುವ ಕರುಳು ಬಳ್ಳಿ ಕರ್ನಾಟಕದ ಒಳಗೂ ಹೊರಗೂ ಹಬ್ಬಿಕೊಂಡಿದೆ. ತಮ್ಮ ಬಳಿಗೆ ಯಾರೇ ಬರಲಿ, ಅವರನ್ನು ತ. ರಾ. ಸು. ಅಗಲಿದ ಬಂಧುವನ್ನು ಕಂಡಂತೆ, ತಬ್ಬಿಕೊಳ್ಳುತ್ತಾರೆ. ಅದೆಲ್ಲವೂ ಅವರಿಗೆ ತುಂಬ ಸಹಜ. ಅವರಲ್ಲಿ ಕೃತ್ರಿಮತೆಯ ಲವಲೇಶವೂ ಇರುವುದಿಲ್ಲ. ಅವರಿಗೆ ತನ್ನದು ನಿನ್ನದು ಎನ್ನುವ ಯಾವ ಭೇದವೂ ಕಾಣಿಸಲಾರದು. ನಿಮ್ಮ ಮನೆಯಲ್ಲಿದ್ದರೂ ಅವರು ನಿಮ್ಮ ಮನೆಯಲ್ಲಿ ಇದ್ದಂತೆಯೇ ಇರುತ್ತಾರೆ; ತಮ್ಮ ಮನೆಯಲ್ಲಿದ್ದರೂ ಅವರು ನಿಮ್ಮ ಮನೆಯಲ್ಲಿ ಇದ್ದಂತೆಯೇ ಇರುತ್ತಾರೆ: ಅವರ ಜೀವನದಲ್ಲಿ ದ್ವೈತಕ್ಕೆ ಅವಕಾಶವೇ ಇಲ್ಲ. ಅವರು ತಾವು ಇರುವಂತೆಯೇ ಇರುತ್ತಾರೆ, ಇರುವಂತೆಯೇ ಆಡುತ್ತಾರೆ.

ಎಲ್ಲ ಜಾತಿಗಳ ಜನರಲ್ಲಿಯೂ ಅವರಿಗೆ ಸ್ನೇಹಿತರಿದ್ದಾರೆ. ಅವರಿಗೆ ಜನರು ಕಾಣಿಸುವಂತೆ ಜಾತಿಗಳು ಕಾಣಿಸುವುದಿಲ್ಲ. ವ್ಯಕ್ತಿಯನ್ನು ಅವರು ವ್ಯಕ್ತಿಯೆಂದು ಗೌರವಿಸುತ್ತಾರಲ್ಲದೆ, ಇಂಥ ಜಾತಿಗೆ ಸೇರಿದವನೆಂದು ಅವರೆಂದೂ ಗೌರವಿಸುವವರಲ್ಲ. ಈ ಕಾರಣದಿಂದಲೇ ಅವರು ಕರ್ನಾಟಕ ಸಂಸ್ಕೃತಿಯ ಸಹಿಷ್ಣುತೆಯ ಸಾರಸರ್ವಸ್ವವನ್ನು ಮೈಗೂಡಿಸಿಕೊಂಡು ಬೆಳೆದಿದ್ದಾರೆ. ಅವರು ಜನತೆಯ ಕೋಪಗಳನ್ನು ಕಂಡು ಮರುಗಿದ್ದಾರೆ, ಘನತೆಯನ್ನು ಕಂಡು ಹಿಗ್ಗಿದ್ದಾರೆ, ಜನಪದವನ್ನು ಬೆಳೆಸುವ ಉತ್ತುಂಗ ಆಲೋಚನೆಗೆ ಅವರು ಸದಾ ತಮ್ಮನ್ನು ಗುರಿಪಡಿಸಿಕೊಂಡಿದ್ದಾರೆ.

ತ. ರಾ. ಸು. ರವರು ಇತಿಹಾಸದ ಕಣಜವೆನಿಸಿದ ಚಿತ್ರದುರ್ಗದಲ್ಲಿ, ಸಾಹಿತ್ಯದ ತವರು ಮನೆ ಎನಿಸಿದ ಕುಟುಂಬದಲ್ಲಿ, ಕರ್ನಾಟಕದ ಸಾರ್ವಜನಿಕ ಹಾಗೂ ಸಾರಸ್ವತ ಚರಿತ್ರೆ ನಿರ್ಮಿಸಿದ ಜನರ ಮಧ್ಯದಲ್ಲಿ ಬೆಳೆದು ಬಂದಿದ್ದಾರೆ. ಹುಲ್ಲೂರು ಶ್ರೀನಿವಾಸ ಜೋಯಿಸ, ತಳುಕಿನ ವೆಂಕಣ್ಣಯ್ಯ, ಸಿದ್ದವ್ವನಹಳ್ಳಿ ಕೃಷ್ಣ ಶರ್ಮ, ಸಿದ್ದಪ್ಪನಹಳ್ಳಿ ನಿಜಲಿಂಗಪ್ಪ ಮೊದಲಾದ ಘಟಾನು ಘಟಿಗಳ ಸಹವಾಸ ಸಾನ್ನಿಧ್ಯದಲ್ಲಿ ಬೆಳೆದಿರುವ ಅವರಿಗೆ ಎಲ್ಲ ಎತ್ತರಗಳೂ ಕಾಣಿಸಿವೆ. ಚಿತ್ರದುರ್ಗದ ಕಲ್ಲು ನೀರು ಕುಡಿದು ಬೆಳೆದ ಗಟ್ಟಿಗತನ ಅವರ ರಕ್ತ ಗುಣವಾಗಿದೆ. ಹೋರಾಟದ ಜಿಗುಟುಗಾರಿಕೆಯನ್ನು ಅವರು ಚಿತ್ರದುರ್ಗದ ನೆಲ ನೀರುಗಳಿಂದಲೇ ಪಡೆದುಕೊಂಡಿದ್ದಾರೆ. ಬಹುಶಃ ತ. ರಾ. ಸು. ರಂಥ ಸಾಹಿತ್ಯವಾತಾವರಣದಲ್ಲಿ ಬೆಳೆದು ಬಂದವರು, ಕರ್ನಾಟಕದ ಮಾತಂತೂ ಇರಲಿ, ದೇಶದಲ್ಲಿಯೇ ಕೈ ಬೆರಳ ಮೇಲೆ ಎಣಿಸುವಷ್ಟು ಜನ ಕೂಡ ಸಿಕ್ಕಲಾರರು. ಅವರ ಅಜ್ಜ ತಳುಕಿನ ಸುಬ್ಬಣ್ಣ ಆಶು ಕವಿತೆಗೆ, ಜಾನಪದದ ನಾಟಕಗಳಿಗೆ ಆ ಪ್ರದೇಶದಲ್ಲೆಲ್ಲ ಪ್ರಖ್ಯಾತರೆನಿಸಿದ್ದರು. ಅವರ ದೊಡ್ಡಪ್ಪ ಟಿ. ಎಸ್. ವೆಂಕಣ್ಣಯ್ಯನವರು, ಕುವೆಂಪುರವರಿಗೆ ಗುರುವಾಗಿ, ನಮ್ಮ ನಾಡಿನ ಸಾಹಿತ್ಯದ ದಿಗ್ಗಜರೆನಿಸಿದವರು. ಅವರ ತಂದೆ ಟಿ. ಎಸ್. ರಾಮಸ್ವಾಮಯ್ಯನವರು ಚಿತ್ರದುರ್ಗದಲ್ಲಿ ವಕೀಲರಾಗಿ ತಮ್ಮ ಮನೆಯನ್ನು ಸಾಹಿತ್ಯ ಮಂದಿರವಾಗಿ ಮಾಡಿಕೊಂಡಿದ್ದವರು. ಆ ಮನೆಯು ಸಾಹಿತ್ಯ ಕಲಾಪಕ್ಕೆ ಹೆಸರಾಗಿ, ಕನ್ನಡ ನಾಡಿನ ಸಾಹಿತ್ಯ ಶ್ರೇಷ್ಠರನ್ನೆಲ್ಲ ಆಕರ್ಷಿಸುತ್ತಿದ್ದಿತು.

ವಯಸ್ಸು ಚಿಕ್ಕದಾದರೂ, ತ.ರಾ.ಸು. ತಮ್ಮ ವಯಸ್ಸಿಗೆ ಮೀರಿದ ಬುದ್ಧಿಪ್ರೌಢಿಮೆಯನ್ನು ಪಡೆದು ಬೆಳೆದರು. ಅವರು ಸಣ್ಣವರಾದರೂ ದೊಡ್ಡವರೊಂದಿಗೆ ಆಡುತ್ತಿದ್ದರು. ಅವರಿಗೆ ಮಾಸ್ತಿ, ಡಿ.ವಿ.ಜಿ, ಅ.ನ.ಕೃ. ಎಲ್ಲರೂ ಗೊತ್ತು. ದೊಡ್ಡವರ ಮಾತಿನಲ್ಲಿ ಇವರು ತಮ್ಮದೂ ಒಂದು ಕರಡಿಯನ್ನು ಬಿಟ್ಟೇ ಇರುತ್ತಿದ್ದರು. 'ಸುಬ್ಬುವಿನ ಹಾಡು ಕಥೆ ಕೇಳಿ, ವೆಂಕಣ್ಣಯ್ಯನವರು, "ಸುಮ್ಮನೆ" ಬಾಯಲ್ಲಿ ಹಾರಾಡಿದರೇನು ಬಂತು, ಏನಾದರೂ ಒಂದು ಬರೆ. ನಿನಗೆ ನಾನು ಹತ್ತು ರೂಪಾಯಿ ಕೊಡುತ್ತೇನೆ" ಎಂದು ಹೇಳಿದ್ದರು. ತ.ರಾ.ಸು. ಆ ಸವಾಲನ್ನು

ಓದುವುದೇ ಬಿಟ್ಟವರೇ ಅಲ್ಲ. ವೆಂಕಣ್ಣಯ್ಯನವರು ಎಳೆಯ ಸುಬ್ಬುವಿನ ಸ್ವಾಭಿಮಾನವನ್ನೇ ಕೆಣಕಿದ್ದರು. ತ.ರಾ.ಸು. ಲೆಕ್ಕಣಿಕೆಯಿಂದ ಪುಟ್ಟನ ಚೆಂಡು ಬಂದೇ ಬಿಟ್ಟಿತು. ತಮ್ಮ ದೊಡ್ಡಪ್ಪನ ಎದುರು ಅದನ್ನು ಓದಿ ಅವರ ಬಹುಮಾನವನ್ನು ಗಿಟ್ಟಿಸಿಯೇ ಬಿಟ್ಟರು. "ಸುಬ್ಬು, ನೀನು ಚೆನ್ನಾಗಿ ಬರೆದಿದ್ದೀ. ಹೀಗೆಯೇ ಬರೆಯುತ್ತ ಹೋದರೆ ನೀನು ಒಳ್ಳೆಯ ಲೇಖಕನಾಗುತ್ತೀ" ಎಂದು ವೆಂಕಣ್ಣಯ್ಯನವರು ತ.ರಾ.ಸು. ವನ್ನು ಹುರಿದುಂಬಿಸಿದರು.

ತ.ರಾ.ಸು. ರಲ್ಲಿ ನಿಸರ್ಗ ಸುಭಗವಾದ ಕಲೆ ಇದ್ದೇ ಇದ್ದಿತು. ಅದು ಓದಿನಿಂದ, ಶ್ರವಣದಿಂದ ಸಂವಾದದಿಂದ ಪರಿಪೋಷಣೆಯನ್ನು ಪಡೆಯಿತು. ಕೈಗೆ ಯಾವುದೇ ಪುಸ್ತಕ ಸಿಕ್ಕಿದರೂ ತ.ರಾ.ಸು. ಅದನ್ನು ಪೂರ್ಣ ಮುಗಿಸಿಯೇ ಏಳುತ್ತಿದ್ದರು. ಮನೆಯ ಪುಸ್ತಕ ಮುಗಿದವು. ಚಿತ್ರದುರ್ಗದ ಸಾರ್ವಜನಿಕ ಗ್ರಂಥಾಲಯದ ಪುಸ್ತಕ ಮುಗಿದವು. ಹೆಚ್ಚಿನ ಪುಸ್ತಕ ಓದಲೆಂದೇ ಅವರು ಒಮ್ಮೆ ತಂದೆಯ ಜೇಬಿನಿಂದ ದುಡ್ಡು ಹೊಡೆದುಕೊಂಡು ಮೈಸೂರಿಗೆ ತಮ್ಮ ದೊಡ್ಡಪ್ಪ ವೆಂಕಣ್ಣಯ್ಯನವರ ಕಡೆಗೆ ಹೋಗಿದ್ದರು. ಜ್ಞಾನದ ಹಂಬಲ ಅವರನ್ನು ಕಂಡ ಕಂಡಲ್ಲಿಗೆ ಕೊಂಡೊಯ್ದಿತು.

ಸಾಂಪ್ರದಾಯವಾದೀ ಪರಿಸರದಲ್ಲಿ ಬೆಳೆದವರಾದರೂ ತ.ರಾ.ಸು. ಸಾಂಪ್ರದಾಯಕ್ಕೆ ಕಟ್ಟುಬಿದ್ದವರಲ್ಲ. ಪರಂಪರೆಯ ಕಟ್ಟುಗಳನ್ನು ಹರಿದೊಗೆದು ಅವರು ತಮ್ಮನ್ನು ತಾವೇ ರೂಪಿಸಿಕೊಂಡು ಬೆಳೆದಿದ್ದಾರೆ. ಅವರು ನಾಟಕದ ಗೀಳು ಹಚ್ಚಿಕೊಂಡು ನಾಟಕ ಕಂಪನಿಯೊಂದಿಗೆ ಓಡಿಹೋಗಿದ್ದರು. ಶಾಲೆಯ ಆವರಣವು ಅವರಿಗೆ ತುಂಬ ಚಿಕ್ಕ ಕ್ಷೇತ್ರವೆನಿಸಿದ್ದಿತು. ಅವರು ಅನೇಕ ವಿಷಯಗಳಲ್ಲಿ ಆಳವಾದ ಆಸಕ್ತಿ ಹೊಂದಿದ್ದರು. ಆದರೆ ಶಾಲೆಯ ಓದಿನಲ್ಲಿ ಶ್ರದ್ಧೆ ಇರಲಿಲ್ಲ. ಅವರು ಸ್ಥಾಪಿತ ಚೌಕಟ್ಟಿನಲ್ಲಿ ಹೊಂದಿಕೆ ಮಾಡಿಕೊಂಡು ಇರುವವರಲ್ಲ ಎಂಬುದನ್ನು ಇದು ತೋರಿಸಿಕೊಡುತ್ತದೆ. ತ.ರಾ.ಸು. ರವರ ಬುದ್ಧಿಯ ಬಗೆಗೆ ಅವರ ಶಿಕ್ಷಕರೆಲ್ಲರೂ ತಲೆದೂಗಿದ್ದರು. ಆದರೆ ಪರೀಕ್ಷೆಗೆ ಓದುವುದಿಲ್ಲವೆಂದು ಅವರಿಗೆ ತ.ರಾ.ಸು. ಮೇಲೆ ಬಹು ಬಲವಾದ ಆಕ್ಷೇಪ.

ಚಿಕ್ಕಂದಿನಿಂದಲೇ ಸಾಹಿತ್ಯವನ್ನು ಮೈಗೂಡಿಸಿಕೊಂಡಂತೆ ಅವರು ರಾಷ್ಟ್ರಾಭಿಮಾನವನ್ನೂ ಮೈಗೂಡಿಸಿಕೊಂಡಿದ್ದರು. ಚಿತ್ರದುರ್ಗದಲ್ಲಿ ಅವರು ನಿಜಲಿಂಗಪ್ಪನವರ ನೇತೃತ್ವದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಆ ನಂತರ ರಾಷ್ಟ್ರೀಯ ಆಂದೋಲನದಲ್ಲಿ ಧುಮುಕಿ ಸೆರೆಮನೆ ಸೇರಿದರು. ಅವರು ಯಾವಾಗಲೂ ಸ್ಥಾಪಿತ ವ್ಯವಸ್ಥೆಯ ವಿರುದ್ಧ ಬಂಡು ಹೂಡಿದರು. ರೂಢಿಜನ್ಯ ತಿಳಿವಳಿಕೆಗಳನ್ನು ಪ್ರತಿಭಟಿಸಿ ನಿಂತರು. ಸಾಹಿತ್ಯದಲ್ಲಿ, ಸಮಾಜದಲ್ಲಿ ಅವರು ಪ್ರಗತಿಶೀಲತೆಯನ್ನು ಅಪೇಕ್ಷಿಸಿದರು. ತಮ್ಮ ಗತಿ ಹಾಗೂ ಬಲವುಗಳಂತೆ ಸಮಾಜ ಚಲಿಸದಿದ್ದಾಗ ಅವರು ನಾಯಕರಾದವರ ನಿಷ್ಕ್ರಿಯತೆಯನ್ನು ಕಂಡು, ಅವರ ಬಗೆಗೆ

ನಂಬುಗೆ ಕಳೆದುಕೊಂಡರು. ಅವರು ಒಳಗೊಂದು ಹೊರಗೊಂದು ಎನ್ನುವ ಆಷಾಢಭೂತಿತನವನ್ನು ಎಂದೂ ಸಹಿಸಿಕೊಂಡವರಲ್ಲ; ಕನ್ನಡ ಸಾಹಿತ್ಯವೂ ಕೂಡ ಹೊಸ ಅವಿಷ್ಕಾರಗಳನ್ನು ಪಡೆದುಕೊಂಡು, ಜನತೆಯ ಬದುಕು ಭಾವನೆಗಳನ್ನು ಪ್ರಶಂಸಿಸಬೇಕೆಂದು ಅವರು ಹೇಳಿದರು.

ತಮ್ಮಂತೆ ತಮ್ಮ ಮಗ ಲಾಯರ್ ಆಗಬೇಕೆಂದಿದ್ದ ರಾಮಸ್ವಾಮಯ್ಯನವರಿಗೆ, ಗಣಿತ ತಲೆಗೆ ಹೋಗದೆ ಅತ ಮ್ಯಾಟ್ರಿಕ್‌ನಲ್ಲಿ ಲಾಗ ಹೊಡೆದುದನ್ನು ತಿಳಿದು, ಸಾಹಿತ್ಯವನ್ನು ಮೂಗಿಗೆ ಹಿಡಿದ ಕುಳಿತುಕೊಂಡಿರುತ್ತಿದ್ದ ಅವನಿಗೆ ಪಟ್ಟು ಹಾಕಿದರು. ಸಿಟ್ಟಿನ ಭರದಲ್ಲಿ, ತ. ರಾ. ಸು. ತಾವು ಬರೆದುದನ್ನೆಲ್ಲ ಆಗ ಸುಟ್ಟು ಹಾಕಿದರು. ಆದರೆ ತಾವು ದೊಡ್ಡ ಬರಹಗಾರನಾಗಬೇಕೆಂಬ ಬಯಕೆಯನ್ನು ಮಾತ್ರ ತ. ರಾ. ಸು. ಅವರಿಗೆ ಸುಟ್ಟು ಹಾಕಲಿಕ್ಕೆ ಆಗಲಿಲ್ಲ. ರವೀಂದ್ರರಂತೆ ಹೆಸರು ಮಾಡುವ ತಮ್ಮ ನಿರ್ಧಾರವನ್ನು ತಂದೆಯ ಡೈರಿಯಲ್ಲಿ ಬರೆದರು.

ಚಿತ್ರದುರ್ಗಕ್ಕೆ ಆಗಾಗ ಬಂದು ಹೋಗುತ್ತಿದ್ದ ಧಾರವಾಡ ಮನೋಹರ ಗ್ರಂಥ ಮಾಲೆಯ 'ಜಡಭರತ' ಜಿ. ಬಿ. ಜೋಶಿಯವರಿಗೆ ಮಾತ್ರ ತ. ರಾ. ಸು. ಒಂದು ವಸ್ತು ಆಗುತ್ತಾರೆನ್ನುವ ಭರವಸೆ ಕಾಣಿಸಿದ್ದಿತು. ಒಳ್ಳೆಯ ಬರೆಹಗಾರಿಕೆಗೆ ಬೇಕಾದ ಮೂಲ ಸಾಮಗ್ರಿ ಅವರಲ್ಲಿದೆಯೆಂದು ಅವರು ಮನವರಿಕೆ ಮಾಡಿಕೊಂಡಿದ್ದರು.

ಅಸ್ಪೃಶ್ಯತೆಯ ವಿರುದ್ಧ ಜನರನ್ನು ಕ್ರಾಂತಿಗೆ ಪ್ರೇರೇಪಿಸಿದರೆಂಬ ಆಪಾದನೆ ಹೊತ್ತು ಒಮ್ಮೆ ಜೇಲಿಗೆ ಹೋಗಿ ಬಂದಿದ್ದ ತ. ರಾ. ಸು. ತುಮಕೂರಿನಲ್ಲಿ ಇಂಟರ್ ಮೀಡಿಯೇಟ್ ಓದುವಾಗ ಚಲೇಜಾವ್ ಚಳವಳಿಯಲ್ಲಿ ಧುಮುಕಿ ಪುನಃ ಜೇಲಿಗೆ ಹೋದರು. ಅವರ ಕಾಲೇಜು ಓದಿಗೆ ಅದೇ ಕೊನೆಯಾಯಿತು. ಅವರು ಸಂಪಾದಿಸಿದ ಜ್ಞಾನವೆಲ್ಲವೂ ಈ ಕಾಲೇಜು ಆವರಣದ ಆಚೆಗೇ ಪಡೆದುದಾಗಿದೆ. ಅವರದು ಪರೀಕ್ಷೆಯ ಓದಲ್ಲ, ಪ್ರೊಫೆಸರರಿಗೆ ಹೇಳುವಂಥ ಓದು.

ಸೆರೆಮನೆಯಿಂದ ಹೊರಬಂದಮೇಲೆ, 'ಮುಂದೇನು' ಎನ್ನುವ ಪ್ರಶ್ನೆ ತ. ರಾ. ಸು. ಮುಂದೆ ಮತ್ತೆ ಎದುರು ನಿಂತಿತು. ಸಿದ್ದವನಹಳ್ಳಿ ಕೃಷ್ಣಶರ್ಮರಿಗೆ ತ. ರಾ. ಸು. ಎಂದರೆ ತುಂಬ ಅಚ್ಚು ಮೆಚ್ಚು. ಉರಿಯುವ ಮನಸ್ಸು ಹಾಗೂ ಹರಿತವಾದ ಲೆಕ್ಕಣಿಕೆಯನ್ನು, ಪಡೆದಿದ್ದ ಆವರ ಬಗೆಗೆ ಕೃಷ್ಣಶರ್ಮರಿಗೆ ಆಸಕ್ತಿ ಇರುವುದು ಸಹಜ. ಆಂದೋಲನದ ಗರಡಿಯ ಉಸ್ತಾದರಾದ ಅವರಿಗೆ ತಮ್ಮಂಥ ಪ್ರವೃತ್ತಿಯ ಜನರ ಬಗೆಗೆ ಪ್ರೀತಿ ಇದ್ದೇ ಇರುತ್ತಿತ್ತು. ಬೆಂಗಳೂರಿಗೆ ಬಂದು 'ವಿಶ್ವ ಕರ್ನಾಟಕ'ದಲ್ಲಿ ಕೆಲಸಮಾಡಲು ಬಾ ಎಂದು ಅವರು ಕರೆ ನೀಡಿದರು. ಕುಂಟುತ್ತ ಕೂರುತ್ತ ತೊಳಲುತ್ತ ನಡೆದಿದ್ದ, 'ವಿಶ್ವ ಕರ್ನಾಟಕ' ಅವರಿಗಿನ್ನೇನು ಕೊಟ್ಟೀತು ? ತಿಂಗಳಿಗೆ ಇಪ್ಪತ್ತೈದು ರೂಪಾಯಿ ಸಂಭಾವನೆಯ ಮೇಲೆ, ತ. ರಾ. ಸು. ಉಪ

ಸಂಪಾದಕರಾಗಿ ಅಲ್ಲಿ ಕೆಲಸ ಆರಂಭಿಸಿದರು. ಅರೆ ಹೊಟ್ಟೆ ಬರಿಹೊಟ್ಟೆಯ ಸ್ಥಿತಿ ಇದ್ದರೂ ಇತಿಹಾಸ ಮಾಡುವ ಉತ್ಸಾಹ ಅವರಲ್ಲಿ ತುಂಬಿಕೊಂಡಿದ್ದಿತು.

ಬೆಂಗಳೂರು ತ. ರಾ. ಸು. ಅವರಿಗೆ ಚಿರಸ್ಮರಣೀಯ ಸ್ನೇಹವನ್ನು ಒದಗಿಸಿ ಕೊಟ್ಟಿತು. ಕರ್ನಾಟಕದ ಮೂಲಕ ವಿಶ್ವವನ್ನೇ ಹಿಡಿದುಕೊಂಡಿದ್ದ, ಅ. ನ. ಕೃ. ತ. ರಾ. ಸು. ರವರ ಕ್ಷಿತಿಜದಲ್ಲಿ ಕಾಣಿಸಿಕೊಂಡರು. ಅ. ನ. ಕೃ. ಎಳೆಯರನ್ನು ಹಿಡಿದುಕೊಂಡು ಅವರನ್ನು ರೂಪುಗೊಳಿಸುತ್ತಿದ್ದರು. ಇನ್ನೊಬ್ಬರು ಬೆಳೆದು ದೊಡ್ಡವರಾದರೆ, ತಮ್ಮ ಸಿಂಹಾಸನಕ್ಕೆ ಎಲ್ಲಿ ಊನವೋ ಎನ್ನುವ ಸ್ವಭಾವದವರು ಅ. ನ..ಕೃ. ಅಲ್ಲ. ಆ ಕಾಲದಲ್ಲಿಯೇ ತ. ರಾ. ಸು. ರವರ ಪ್ರಥಮ ಕಾದಂಬರಿಯನ್ನು ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಪ್ರಕಟಿಸಿದರು. ಆ ಕಾದಂಬರಿ. 'ಮನೆಗೆ ಬಂದ ಮಹಾಲಕ್ಷ್ಮಿ'ಯ ಬಗೆಗೆ ದೊಡ್ಡವರೊಬ್ಬರು ಮಾಡಿದ ಸಲ್ಲದ ಟೀಕೆಯ ಬಗೆಗೆ ಅ. ನ. ಕೃ. ಸರಿಯಾದ ಉತ್ತರಕೊಟ್ಟು ತ. ರಾ. ಸು. ಧೈರ್ಯಗೆಡದಂತೆ ನೋಡಿಕೊಂಡರು.

ತಮ್ಮ ಗರಡಿಯಲ್ಲಿ ತ. ರಾ. ಸು. ರವರಿಗೆ ಅ. ನ. ಕೃ. ಬಹುದೊಡ್ಡ ತರಬೇತಿಯನ್ನು ಒದಗಿಸಿಕೊಟ್ಟರು. ತಮ್ಮ ಜತೆಯಲ್ಲಿ ಅವರನ್ನು ಕರೆದುಕೊಂಡು ಹೋಗಿ ಅವರಿಗೆ ಕರ್ನಾಟಕ ದರ್ಶನ ಮಾಡಿಸಿದರು. ಪ್ರಗತಿಶೀಲ ಚಳುವಳಿಯಲ್ಲಿ ತ. ರಾ. ಸು. ಅವರೂ ಒಂದು ಪ್ರಮುಖ ಪಾತ್ರ ಅನುಭವಿಸಿದರು. ಕೃಷ್ಣರಾಯರ ಮನೋವೈಶಾಲ್ಯ ದೃಷ್ಟಿ ವೈಶಾಲ್ಯ ಹಾಗೂ ವಿಚಾರ ವೈಶಾಲ್ಯಗಳು ತ.ರಾ.ಸು. ಮನಸ್ಸಿನಮೇಲೆ ಭಾರೀ ಪ್ರಭಾವ ಬೀರಿದವು. ಅ. ನ. ಕೃ. ಅವರ ಹೃದಯದಲ್ಲಿ ವಿಷಕ್ಕೆ, ಮಾತ್ಸರ್ಯಕ್ಕೆ, ಸಂಕುಚಿತತನಕ್ಕೆ ಸ್ಥಳವೇ ಇರಲಿಲ್ಲ. ಆ ಪ್ರತಿಬಿಂಬದಲ್ಲಿಯೇ ತ. ರಾ. ಸು. ಮೂರ್ತಿ ನಿರ್ಮಾಣಗೊಂಡಿದೆ. ಅ. ನ. ಕೃ ಹೋದರು. ಆ ಸ್ಥಾನದಲ್ಲಿ ಈಗ ತ. ರಾ. ಸು. ಇದ್ದಾರೆ. ಅವರ ಮನಸ್ಸು ಮುಗಿಲಗಲ.

ತ. ರಾ. ಸು. ಆರೆಂಟು ವರ್ಷ ಪತ್ರಿಕೆಗಳಲ್ಲಿ, ಪತ್ರಿಕಾ ಪ್ರಯೋಗಗಳಲ್ಲಿ ತಮ್ಮ ಜೀವ ಸವೆಸಿ, ಬರೆಹದಮೇಲೆಯೇ ಬದುಕಬೇಕೆಂದು ನಿರ್ಧರಿಸಿ ಹಿಂದಿನ ಮೂವತ್ತು ವರ್ಷಗಳಿಂದಲೂ ಮೈಸೂರಿನಲ್ಲಿಯೇ ಮನೆಮಾಡಿಕೊಂಡು ನಿಂತಿದ್ದಾರೆ. ತಮ್ಮ ಬರೆವಣಿಗೆಯ ಮೇಲೆಯೇ ಬದುಕಿದವರು ಹಿಂದೆ ಅ. ನ. ಕೃ. ಇದ್ದರು; ಈಗ ಕಾರಂತ, ತ. ರಾ. ಸು. ಮಾತ್ರ ಇದ್ದಾರೆ.

ಕಾದಂಬರಿ ಕ್ಷೇತ್ರದಲ್ಲಿ ತ. ರಾ. ಸು. ಎತ್ತಿದ ಕೈ ಎನಿಸಿದ್ದಾರೆ. ಅವರ ಶೈಲಿ, ತಂತ್ರ, ನಿರೂಪಣೆಗಳಿಗೆ ಮಾರುಹೋಗದವರೇ ಇಲ್ಲ. ಅವರ ಗದ್ಯವು ಪದ್ಯದ ಮೆರುಗನ್ನು ಪಡೆದುಕೊಂಡಿದೆ. ಕಾವ್ಯದ ಧ್ವನಿಯನ್ನು ಅವರ ಗದ್ಯದಲ್ಲಿ ಕೇಳಬಹುದು. ಅವರ 'ಸಿಡಿಲ ಮೊಗ್ಗು' ಅಪೂರ್ವ ಕೃತಿಯಾಗಿದೆ. ಅವರಲ್ಲಿರುವ ಗದ್ಯದಂಥ ಗದ್ಯವನ್ನು, ಗದ್ಯದ ದೊರೆ ಎನಿಸಿದ ಅ. ನ. ಕೃ. ಕೂಡ ಬರೆದಿಲ್ಲ.

ಆಕಾಶದಿಂದ ಮಳೆ ಇಳಿದಂತೆ, ತ. ರಾ. ಸು. ಲೇಖನಿಯಿಂದ ಕಾದಂಬರಿಗಳು

ಓತ ಪ್ರೋತವಾಗಿ ಹರಿದುಬಂದಿವೆ. ಅವರ ಕಂಬನಿಯ ಕುಯಿಲು ರಕ್ತ ರಾತ್ರಿ ಕಾದಂಬರಿಗಳು ಬರುವುದಕ್ಕೆ, ಸ್ವಂತದ ಒತ್ತಡವಲ್ಲದೆ, ಹುಲ್ಲೂರು ಶ್ರೀನಿವಾಸ ಜೋಯಿಸರ ಪ್ರೇರಣೆಗಳಿಗೂ ನಿಜಲಿಂಗಪ್ಪನವರ ಒತ್ತಾಯಗಳಿಗೂ ಕಾರಣ ವಾಗಿವೆ. "ಸುಬ್ಬೂ ನೀನು ಚೆನ್ನಾಗಿ ಬರೆಯುತ್ತೀ. ಲಘುವಾದ ವಸ್ತುಗಳನ್ನು ಬಿಟ್ಟು, ಘನವಾದ ವಸ್ತುಗಳನ್ನು ತೆಗೆದುಕೊಂಡು ಬರೆ. ಬೆಟ್ಟಗಳನ್ನು ಅಲುಗಿಸುವ ಶಕ್ತಿ ನಿನ್ನ ಲೆಕ್ಕಣಿಕೆಯಲ್ಲಿದೆ. ಚಿತ್ರದುರ್ಗದ ಇತಿಹಾಸದಲ್ಲಿ ಬೇಕಾದಂಥ ಗ್ರಂಥಗಳಿವೆ. ಅವನ್ನು ತೆಗೆದುಕೊಂಡು ಬರೆ ಎಂದು ನಿಜಲಿಂಗಪ್ಪನವರು ಆತ್ಮೀಯತೆಯಿಂದ ಹೇಳಿದುದು ತ. ರಾ. ಸು. ಮನಸ್ಸಿನ ಮೇಲೆ ಮುಟ್ಟಿದಂತೆ ಕೆಲಸ ಮಾಡಿತು. ●



ತ.ರಾ.ಸು. ಅಧ್ಯಯನದ ಕೋಣೆಯಲ್ಲ

ಕಾದಂಬರಿ ಕುಲತಿಲಕ

— ಮಾ ಭೀ. ಶೇ.

"ಈತ ಕೇವಲ ವ್ಯಕ್ತಿಯಲ್ಲ; ಒಂದು ಅದ್ಭುತ ಶಕ್ತಿ ಪಾತ್ರಗಳಲ್ಲಿ ಪ್ರಾಣ ತುಂಬಿ ಸೃಷ್ಟಿಸಿದ ಸಾಹಿತ್ಯಬ್ರಹ್ಮ"

ವಾಕ್‌ಶ್ರೀ, ಭಾಷಾಶ್ರೀ, ಸಾಹಿತ್ಯಶ್ರೀಗಳ ತ್ರಿವೇಣಿ ಸಂಗಮದಲ್ಲಿ ಮಿಂದು ಕನ್ನಡ ಸಾರಸ್ವತ ಲೋಕದಲ್ಲಿ ಗೊಮ್ಮಟನಂತೆ ನಿಂತಿರುವ ಪವಾಡ ಪುರುಷ ತ.ರಾ.ಸು. ರವರ ಸಾಹಿತ್ಯ ಸೇವೆಯ ಬಗ್ಗೆ ಬರೆಯುವದೆಂದರೆ ಗೌರಿಶಂಕರ ಯಾನದಂಥ ಸಾಹಸ ಕಾರ್ಯವೇ ಸರಿ.

"ವೇದಾದಿ ವೇದಂ ಪುರುಷಂ ಮಹಂತಂ" ಎಂಬ ಪುರುಷ ಸೂಕ್ತದ ಜೀವಂತ ರೂಪ ಎನ್ನಬಹುದಾದ ಶ್ರೀ ತ.ರಾ.ಸು. ರವರು ಚಿತ್ರದುರ್ಗದ ಗಂಡು ನೆಲದಲ್ಲಿ ಜನಿಸಿದರು. ಬದುಕನ್ನು ಹೋರಾಟದಿಂದಲೇ ಆರಂಭಿಸಿದರು. ಭಾರತಾಂಬೆಯ ದಾಸ್ಯಶೃಂಖಲೆಯನ್ನು ಕಡಿಯಲು ಕಂಕಣತೊಟ್ಟು ಮಣ್ಣಿನ ತಿಲಕವನ್ನಿಟ್ಟು, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಮಾತೃಭೂಮಿಯ ಋಣವನ್ನು ತೀರಿಸಿದ ಈತ ರಾಜಕಾರಣಿಯಲ್ಲ, ದೇಶ ಪ್ರೇಮಿ. ರಾಜಕಾರಣಿ ಎಂಬ ಶಬ್ದ ಇಂದು ತನ್ನ ಬೆಲೆಯನ್ನು ಕಳೆದುಕೊಂಡಿದೆ. ಆದ್ದರಿಂದ ತ.ರಾ.ಸು. ರವರನ್ನು ದೇಶ ಪ್ರೇಮಿ ಎಂದು ಕರೆಯೋಣ. ನಾವು ರಾಷ್ಟ್ರಭಕ್ತರಾಗಲು ತ.ರಾ.ಸು. ರವರ ಹಾದಿಯನ್ನು ತುಳಿಯೋಣ. ದೇಶಕ್ಕಾಗಿ ಕಾರಾಗೃಹವನ್ನು ಸೇರಿದ ತ.ರಾ.ಸು. ಮಂತ್ರಿಯಾಗಿ ಅದರ ಪ್ರತಿಫಲವನ್ನು ಅನುಭವಿಸಲು ಬಯಸಿದವರಲ್ಲ. ಅವರ ಬದುಕು, ಸಾಹಿತ್ಯಕ್ಕಾಗಿ ಜನ್ಮ ತಾಳಿದ್ದು, ಮುಂದೆ ಪ್ರತಿಕೋದ್ಯಮಿಯಾದ ತ.ರಾ.ಸು. "ಮನೆಗೆ ಬಂದ ಮಹಾಲಕ್ಷ್ಮಿ"ಯ ಮೂಲಕ ಸಾಹಿತಿಯಾಗಿ, ಹಿರಿಯಣ್ಣ ಅ.ನ.ಕೃ. ರವರಿಂದ ಬೆನ್ನು ತಟ್ಟಿಸಿಕೊಂಡರು. ಅಂದು ಸಾಹಿತ್ಯ ಕೆಲವು ಮಡಿಸಾಹಿತಿಗಳ ಕತ್ತಲ ಜೋಳಿಗೆಯ ಶಿಶುವಾಗಿತ್ತು. ಜನಸಾಮಾನ್ಯರ ಬದುಕಿಗೆ, ಸುಧಾರಣೆಗೆ ಪ್ರಯೋಜನವಾಗದೆ ಗ್ರಹಣ ಚಂದ್ರವಾಗಿತ್ತು.

ತ.ರಾ.ಸು. ರವರ ಪ್ರಥಮ ಪ್ರಯತ್ನದಮೇಲೆ ಹಿರಿಯರಿಂದ ಗದಾ ಪ್ರಹಾರ. ಈ ಸಾಹಿತ್ಯ ಸೇನಾನಿ ಆ ಗದಾ ಪ್ರಹಾರಕ್ಕೆ ಎದೆ ಕೊಟ್ಟು ನಿಂತು, ಇಂದು ಎದೆ ಎತ್ತಿ ನಿಂತಿದ್ದಾರೆ. ಅವರ ಸಾಹಿತ್ಯ ಗಂಗೆ ಧಾರೆಧಾರೆಯಾಗಿ ಹರಿಯಿತು. ತಮ್ಮ ಬದುಕನ್ನೆ ಸಾಹಿತ್ಯಕ್ಕಾಗಿ ಮುಡುಪಾಗಿಟ್ಟು ಗಾಯತ್ರಿಯ ಜಪಶಕ್ತಿಯಿಂದ ಚೈತನ್ಯ ಗೊಂಡು ಅವಿಶ್ರಾಂತವಾಗಿ ದುಡಿದರು. ಅವರ ದುಡಿಮೆ ಕನ್ನಡ ಸಾರಸ್ವತ ಲೋಕದ ಅಮೂಲ್ಯ ಆಸ್ತಿ.

ಅವರ ಲೇಖನಿಯಿಂದ ಇಳಿದು ಬಂದ ಸಾಹಿತ್ಯ ಸರಸ್ವತಿ, ಕೀರ್ತಿಲಕ್ಷ್ಮಿ, ಧನಲಕ್ಷ್ಮಿ ಯನ್ನು ಅವರ ಬದುಕಿಗೆ ಆಹ್ವಾನಿಸಿದಳು. ಸಾಹಿತಿ ಭಿಕ್ಷುಕನಲ್ಲ; ದರಿದ್ರನಲ್ಲ. ಸಾಹಿತ್ಯದ

ಹೆಸರು ಹೇಳಿಕೊಂಡು ಬದುಕುವವನು ದರಿದ್ರ, ಭಿಕ್ಷುಕ, ಎಂಬ ಮಾತಿನ ಸತ್ಯಾ ಸತ್ಯತೆ ತಮ್ಮ ಬದುಕಿನಲ್ಲಿ ತೋರಿಸಿಕೊಟ್ಟರು. ತ.ರಾ.ಸು. ರವರ ಜ್ಞಾನದ ಬಗ್ಗೆ ಹೇಳಬಹುದಾದರೆ 'ಮೂವಿಂಗ್ ಎನ್‌ಸೈಕ್ಲೋಪಿಡಿಯಾ' ಎಂದು ಹೇಳಿದಲ್ಲಿ ಸತ್ಯಕ್ಕೆ ಸಮೀಪ.

ಜನತೆಯ ಹೃದಯ ಸಿಂಹಾಸನದ ಮೇಲೆ ವಿರಾಜಿಸುತ್ತಿರುವ ಅನಭಿಷಿಕ್ತ 'ಸಾಹಿತ್ಯ ಚಕ್ರವರ್ತಿ.' ಇವರ ಕಾದಂಬರಿಗಳು ರಕ್ತವನ್ನು ಕುದಿಸಬಲ್ಲುವು, ಹೃದಯವನ್ನು ಹಿಂಡಬಲ್ಲುವು, ಮೆದುಳಿನಲ್ಲಿ ವಿಚಾರ ಕ್ರಾಂತಿಯನ್ನು ಎಬ್ಬಿಸಬಲ್ಲುವು.
ಮನೆಮನೆಗಳಲ್ಲಿ, ಮನಮನಗಳಲ್ಲಿ ಬೆಳಗಿದ ಅವರ ಕಲಾಕೃತಿಗಳು ಕನ್ನಡಸಾಹಿತ್ಯ ಸರಸ್ವತಿಗೆ ತೊಡಿಸಿದ ಮುತ್ತಿನ ಹಾರ.

ಚಿತ್ರದುರ್ಗದ ಕಲ್ಲುಕಲ್ಲುಗಳಿಂದ ಕಥೆ ಹೇಳಿಸಿದರು, 'ಕಂಬನಿಯ ಕುಯಿಲು', 'ರಕ್ತ ರಾತ್ರಿ', 'ತಿರುಗುಬಾಣ' ಗಳಲ್ಲಿ ಪಾರೋಕಿಯ ವಿಶ್ವರೂಪ ದರ್ಶನ ಮಾಡಿದರು 'ಮಸಣದ ಹೂವಿನಲ್ಲಿ'. ಬಾಳುವೆಯ ಅಮೃತ ಮಥನದ ಪೌರೋಹಿತ್ಯ ವಹಿಸಿದರು 'ಚಕ್ರತೀರ್ಥ'ದಲ್ಲಿ.

ಮುಂಜಾವಿನಿಂದ ಮುಂಜಾವಿನಲ್ಲಿ ಬೆಳಕಿನಲ್ಲಿ ಮೈಗೂಡಿರುವ ಏಳು ಬಣ್ಣವನ್ನು ತೋರಿಸಿದರು. ಮಾನವನ ರಾಗದ್ವೇಷಗಳ ಅಗ್ನಿಯಲ್ಲಿ ನಡೆಯುವ ಖಾಂಡವ ದಹನವನ್ನು ಮನಮುಟ್ಟುವಂತೆ ಹೇಳಿದರು ಚಂದವಳ್ಳಿಯ ತೋಟದಲ್ಲಿ. ಕನ್ನಡ ಸಾಹಿತ್ಯದಲ್ಲಿ ಹೊಸಪಂಥಕ್ಕೆ ನಾಂದಿ ಹಾಡಿದ ಈ ಹರಿಕಾರನ ಒಂದೊಂದು ಕೃತಿಗಳು ತನ್ನದೇ ಆದ ವೈವಿಧ್ಯತೆಯಿಂದ ವಿರಾಜಿಸಿವೆ. "ಲೇಖನಿ ಕತ್ತಿಗಿಂತ ಹರಿತ" ಎಂಬ ಹಿರಿಯೋಕ್ತಿಗೆ ತ.ರಾ.ಸು. ರವರ ಕಾದಂಬರಿಗಳು ಉದಾಹರಣೆಯಾಗಿವೆ. ಇವರ ಕಾದಂಬರಿಗಳು ಪಠ್ಯಪುಸ್ತಕವಾಗಿವೆ, ಚಲನಚಿತ್ರಗಳಾಗಿವೆ, ಅದಕ್ಕೂ ಹೆಚ್ಚಾಗಿ ಕನ್ನಡ ಜನ ಶಂಕರಿಯ ಹೃದಯ ಹೃದಯಗಳಲ್ಲಿ ನಂದಾ ದೀಪವಾಗಿ ಬೆಳಗುತ್ತಿವೆ.

ಸಾಮಾನ್ಯ ಮನುಷ್ಯರಾಗಿ ತ.ರಾ.ಸು. ರವರ ವ್ಯಕ್ತಿತ್ವ ತುಂಬಾ ಹಿರಿದು; ಸ್ನೇಹಜೀವಿ, "ಬದುಕುಗಳ ಉದ್ಧಾರಕ್ಕಾಗಿ ಬದುಕು" ಎಂಬ ಮಾನವೀಯ ಸಿದ್ಧಾಂತದ ಅನುಯಾಯಿ. ಕನ್ನಡವೇ ನನ್ನ ಸರ್ವಸ್ವ ಅದಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧ ಎನ್ನುವ ಕನ್ನಡಾಭಿಮಾನಿ, ತ.ರಾ.ಸು. ರವರ ಬಗ್ಗೆ ನಾನು ಯೋಚಿಸಿದಾಗಲೆಲ್ಲಾ ಕಾವೆಲ್‌ರವರು ಉಮರ್‌ನ ಬಗ್ಗೆ ಹೇಳಿರುವ ಮಾತುಗಳು ನನಗೆ ನೆನಪಿಗೆ ಬರುತ್ತವೆ. ಕಾವೆಲ್ ರವರ ಒಂದೊಂದು ನುಡಿಯೂ ನನಗೆ ತ.ರಾ.ಸು. ರವರ ನೆನಪನ್ನು ತಂದಿದೆ. ಇಲ್ಲಿ ಕಾವೆಲ್‌ರವರ ಮಾತುಗಳನ್ನು ಪುನರುಚ್ಚರಿಸಿದರೆ, ತ.ರಾ.ಸು. ರವರನ್ನು ಸರಿಯಾಗಿ ಅರ್ಥ ಮಾಡಿಕೊಂಡು ವರ್ಣಿಸಿದ ಆನಂದ ನನಗಾಗುತ್ತದೆ.

.........Has a natural temper and genius and acted upon by the circumstances in which he lived. He was a man of subtle, strong and cultivated Intellect, fine imagination and heart passionate for truth and justice, Who justly revolted from their country's false religion and false or foolish devotion to it.

ತ.ರಾ.ಸು. ರವರ ಭವ್ಯ ಬದುಕು ತನ್ನ ಭವ್ಯತೆಯನ್ನು ನಾಡಿಗೆ ಅಲಂಕರಿಸುತ್ತಾ ಚಿರಾಯುವಾಗಲಿ. ಅವರ ಸಹಸ್ರ ಕೃತಿಗಳು ಕನ್ನಡ ನಾಡಿನ ಸಾಹಿತ್ಯ ವಿಜಯ ವೈಜಯಂತಿಯಲ್ಲಿ ವಿಶ್ವದ ಸಾಹಿತ್ಯ ನಭೋಮಂಡಲದಲ್ಲಿ ಹಾರಿಸಿ, ಕನ್ನಡದ ಕೀರ್ತಿಯನ್ನು ವಿಶ್ವಮಾನ್ಯ ಮಾಡಲಿ, ಇದನ್ನು ಕನ್ನಡಿಗರು ಕಣ್ತುಂಬ ಕಂಡು ಆನಂದಿಸಲಿ–ಆ ಆನಂದದ ದಿನ ಹತ್ತಿರವಾಗಲಿ. 'ಕನ್ನಡಿಗರ ತಾಯಿ ಚಾಮುಂಡಿ ಅವರ ಸೇವೆಗೆ ತನ್ನ ಮಹಾಶಕ್ತಿಯನ್ನು ಧಾರೆ ಎರೆಯಲಿ' 'ಎಂದು ಸಮಸ್ತ ಕನ್ನಡಿಗರ ಪರವಾಗಿ ನನ್ನ ಪ್ರಾರ್ಥನೆ.

ಅನುಭವವೂ ಮಳೆಯ ನೀರಿನಂತೆ ಅನುಭವ ಆದಾಗ ಮನಸ್ಸಿನ ಮೇಲೆ ಏನೋ ಪರಿಣಾಮವಾಗುತ್ತದೆ. ಕೊಂಚ ಹೊತ್ತಾದ ಮೇಲೆ ಮರೆವಿನಲ್ಲಿ ಆರಿ ಹೋಗುತ್ತದೆ. ಅದು ಅಷ್ಟು ಪರಿಣಾಮಕಾರಿಯಲ್ಲ. ತಾತ್ಕಾಲಿಕ ಪರಿಣಾಮ ಅದರದು. ಆ ಪರಿಣಾಮ ಚಿರವಾಗಬೇಕಾದರೆ, ಮಳೆಯ ನೀರನ್ನು ಕೆರೆಯಲ್ಲೋ ಬಾವಿಯಲ್ಲೋ ಸಂಗ್ರಹಿಸಿ ಆರಿ ಹೋಗದಂತೆ ಇಟ್ಟುಕೊಂಡು, ಅಗತ್ಯವಾದಾಗ, ಬೇಕಾದುದಕ್ಕೆ ಬಳಸುವಂತೆ ಅನುಭವವನ್ನು ಸಂಗ್ರಹಿಸಬೇಕು. ಆಗ ಅದು ಪ್ರತಿಭೆಗೆ ಪೋಷಕವಾಗುತ್ತದೆ.

ಭಾವಜೀವಿ

— ನವರತ್ನರಾಮ್

"ಹಂಸಗೀತೆ"ಯನ್ನು ಬರೆದವರು ಇವರೇ

ಇದೊಂದೇ ಅಲ್ಲ, ಈಗ ಸಿಗರೇಟನ್ನು ಮೃದುವಾಗಿ ಹಿಡಿದಿರುವ ಆ ತೆಳುಬೆರಳುಗಳು ಸೃಷ್ಟಿಸಿದ ಕಾದಂಬರಿಗಳೆಷ್ಟೋ ?

ಚಿತ್ರದುರ್ಗದ ಇತಿಹಾಸದ ಪುಟಗಳಲ್ಲಿ ಮೆರೆದ ಮುದ್ದಣ್ಣ, ರಾಯಣ್ಣ, ಚಿಕ್ಕಣ್ಣ ಸೋದರತ್ರಯರು, ಗಿರಿಜೆಯಂತಹ ಬೆಂಕಿಯ ಹೆಣ್ಣು, ಮನಸಿನ ಮೇಲೆ ಕಠೋರತೆಯ ಮುದ್ರೆಯನ್ನು ಅಳಿಸಲಾಗದಂತೆ ಒತ್ತಿದರು.

ನಾಗರಹಾವಿನ ಸ್ವಭಾವದ ರಾಮಾಚಾರಿಯೊಡನೆ ಮಾರ್ಗರೇಟ್ — ಅಲಮೇಲುವಿನ ಎಳೆತನದ ಜ್ವಲಂತ ಪ್ರಣಯದ ಹುಚ್ಚುಕಾವಿನಲ್ಲಿ ಮನಸ್ಸನ್ನು ಕಾಯಿಸಿ ಆ ಮೂವರು ಪ್ರಣಯಿಗಳ ದುರಂತದ ಶೀತಲ ಮುದ್ರೆಯನ್ನೊತ್ತಿದರು....

ಆದರೆ 'ಹಂಸಗೀತೆ' ಯ ಚಂದ್ರಾಸಾನಿ ಆತ್ಮವನ್ನು ಆವರಿಸಿ, ಮನಸ್ಸನ್ನು ಕಂಬನಿಯಲ್ಲಿ ತೋರಿಸಿ ಮೃದುಮಾಡಿ ಮರೆಯಲಾಗದ ಮಾದಕ ಮುದ್ರೆಯನ್ನೊತ್ತಿದರು.

"ಹೂವಿನ ಹಿಡಿಗೆ ಕಬ್ಬಿಣವೆಲ್ಲಾ ಕರಗಿ ನೀರಾಯ್ತು..." ಕನ್ನಡದ ಹಿರಿಯ ಕವಿಗಳೊಬ್ಬರು ಹೇಳಿದ ಈ ವಾಕ್ಯದ ಪೂರ್ತಿ ಅನುಭವವಾಗುವುದು 'ಹಂಸಗೀತೆ' ಯಂತಹ ಕೃತಿಯನ್ನೋದಿದಾಗ.

ಕೋಮಲತೆಯಷ್ಟೇ ಚೆನ್ನಾಗಿ ಕಠೋರತೆಯನ್ನೂ ಚಿತ್ರಿಸಬಲ್ಲ ಆ ಕೈಬೆರಳುಗಳು ಈಗ ಲೇಖನಿಯ ಬದಲು ಸಿಗರೇಟನ್ನು ಹಿಡಿದು ತಟಸ್ಥವಾಗಿ ವಿಶ್ರಾಂತಿ ಪಡೆಯುತ್ತಿರುವಂತೆ ಭಾಸವಾಗುತ್ತದೆ. ಭಾವನಾಲೋಕದಲ್ಲಿ ಅಲೆದು ದಣಿದ ಮನಕ್ಕೆ ಅಮೃತ ಸೇಚನೆಯಾಯಿತೇನೋ ಎನ್ನುವಂತೆ ಮುಖದಲ್ಲಿ ಶಾಂತತೆ, ಸೌಮ್ಯತೆ... "ಸಿಗರೇಟನ್ನ ಕಡಿಮೆಮಾಡಿ ಸಾರ್...." ವಿಪರೀತ ಕೆಮ್ಮತೊಡಗಿದಾಗ ಸುತ್ತಲಿದ್ದ ಅಭಿಮಾನಿಗಳು, ಆತ್ಮೀಯರು ಕಳಕಳಿಯಿಂದ ಹೇಳಿದರು.

ಅವರು ಸುಮ್ಮನೆ ನಕ್ಕರು. ನಿಷ್ಕಪಟ ಹೃದಯಕ್ಕೆ ಕನ್ನಡಿ ಹಿಡಿದಂತಹ ಆ ನಗು, ಅಸಹಾಯಕತೆಯದಲ್ಲ, ಯಾವುದೋ ಅರಿವು ಕಂಡ ನಗು ಅದು.

"ಹಂಸಗೀತೆ"ಯನ್ನೋದಿದಾಗ ಮನಸಿನಲ್ಲುದಿಸಿದ ಭಾವನೆಗಳನ್ನು ತೋಡಿಕೊಂಡಾಗಲೂ ಅದೇ ರೀತಿ ನಕ್ಕರು. ತೋಡಿಕೊಂಡದ್ದನ್ನೆಲ್ಲಾ ತಾಳ್ಮೆ, ಸೌಜನ್ಯಗಳಿಂದ ಕೇಳಿದರು.

"ನೋಡು... ಆ ಪಾತ್ರಗಳೆಲ್ಲಾ ಕಲ್ಪನೆಯವು" ಎಂದರು ಸಿಗರೇಟಿನ ಬೂದಿಯನ್ನು ಚಿಟಿಕೆ ಹೊಡೆದು ಉದುರಿಸುತ್ತ.

"ಚಂದ್ರಾಸಾನಿ ?"

"ಅವಳೂ ಕೂಡಾ..."

ಎಂತಹ ಸುಂದರ ಕಲ್ಪನೆಯ ಮೂಸೆಯಲ್ಲಿ ರೂಪುಗೊಂಡ ಹೆಣ್ಣು ಅವಳು! ಪ್ರೇಮ, ತ್ಯಾಗ, ರಸಿಕತೆಯ ಸುಂದರ ಸಮ್ಮಿಳನದ ಚಂದಾ ಮನಸ್ಸಿನಲ್ಲಿ ಜೀವಂತ ಹೆಣ್ಣಾಗಿ ಸೋಗಿದ್ದಳು, ಮತ್ತೆ ಈಗ ಅವಳು ಕಲ್ಪನೆಯ ಹೆಣ್ಣೆನ್ನುವ ಕಠೋರ ಸತ್ಯವನ್ನು ಮನಸ್ಸು ಒಪ್ಪದಾಯಿತು.

"ಬೇಡಿ...ಹಾಗೆ ಹೇಳಬೇಡಿ.... ಅಂತಹ ಹೆಣ್ಣು ಇರಲೇಬೇಕು. ಅವಳನ್ನು ಕಂಡ ಮೇಲೆ ಸೂಳೆ ಅನ್ನೋ ಮಾತಿಗೆ ಬಹಳ ಗೌರವಯುತವಾದ, ಸುಂದರವಾದ ಅರ್ಥ ಹೊಳೆಯುತ್ತೆ ಮನಸ್ಸಿಗೆ....ಅಂಥಾ ಹೆಣ್ಣು ಬರಿಯ ಕಲ್ಪನೆಯವಳಾಗಲು ಸಾಧ್ಯ ವಿಲ್ಲ...."

ತ.ರಾ.ಸು. ಕೈಸನ್ನೆ ಮಾಡಿ ಅಲ್ಲಿಗೇ ತಡೆದರು, ತಾವು ಹೇಳತೊಡಗಿದರು. "ಚಂದ್ರಾಸಾನಿಯ ದೊಡ್ಡ ಗುಣಗಳನ್ನ, ಕಲಾವಂತಿಕೆಯನ್ನ, ಅಭಿರುಚಿಯನ್ನುಳ್ಳ ಹೆಣ್ಣುಗಳಿದ್ದಾರೆ. ಪ್ರೇಮದ ಹೂವನ್ನು ಕಾಮದ ಬೆಂಕಿಯಲ್ಲಿ ಬಾಡಿಸಲು ಒಪ್ಪದೆ ಕಣ್ಣೀರು ಕರೆದ ವೆಂಕಟ ಸುಬ್ಬಯ್ಯನವರಂತಹ ಹೃದಯವಂತರೂ ಇದ್ದಾರೆ, ಅತ್ಯುನ್ನತ ಮಟ್ಟದ ರಸಿಕರು ಇವರೆಲ್ಲಾ, ಭಾವುಕತೆಯ ತುತ್ತತುದಿಗೇರಿ ನಿರ್ಮಲ ಆನಂದವನ್ನು ಅನುಭವಿಸಬಲ್ಲ ಪುಣ್ಯವಂತರು.... ಅಂತಹ ಮಹಾನುಭಾವರ ಪ್ರತೀಕವೇ ಚಂದ್ರಾ — ವೆಂಕಟಸುಬ್ಬಯ್ಯ ಪ್ರತಿಬಿಂಬಗಳೇ ನಿಜ, ಆದರೆ ಮೂರ್ತಿಗ ಳಿರುವುದೂ ಸುಳ್ಳಲ್ಲ...."

ಚಂದ್ರಾಸಾನಿ — ವೆಂಕಟಸುಬ್ಬಯ್ಯನವರ ಮಧುರ ಪ್ರಣಯವನ್ನು ಚಿತ್ರಿಸುವಾಗ ಅವರು ತಮ್ಮನ್ನು ತಾವೇ ಮರೆತು ಹಗಲು ರಾತ್ರೆಗಳೆನ್ನದೆ ಕುಳಿತಿದ್ದರಂತೆ. ಚೆಲುವು ರಸಿಕತೆ, ಪ್ರೇಮಗಳಂತಹ ಅಮೂಲ್ಯ ವಸ್ತುಗಳನ್ನು ಕಲೆಯ ಎರಕದಲ್ಲಿ ಹೊಯ್ದು ಚಂದ್ರಾಳಂತಹ ಅಪೂರ್ವ ಹೆಣ್ಣನ್ನು ಸೃಷ್ಟಿಸುವಾಗ ಊಟ, ನಿದ್ರೆ ಯಾವುದೂ ಅವರ ಮನಸ್ಸಿಗೆ ಬರಲಿಲ್ಲ. ಕಡೆಗೆ ಆ ಹೆಣ್ಣು ತಾನೊಲಿದ ಪ್ರಣಯಿ ವೆಂಕಟಸುಬ್ಬಯ್ಯನ ಸಂಗೀತದ ಬಾಳು ಸುಗಮವಾಗಲೆಂದು ತನ್ನ ಬಾಳನ್ನೇ ಬಲಿ ಗೊಟ್ಟುದನ್ನು ನಿರೂಪಿಸುವಾಗ ಅವರ ಎದೆ ನೊಂದು ಬೆಂದುಹೋಗಿತ್ತು. ಬರಹಗಾರ ತನ್ನ ಕೃತಿಯಲ್ಲಿ ತನ್ನನ್ನು ತಾನೇ ಮರೆತರೆ ಕೈಹಿಡಿದ ಮಡದಿ ಮರೆ ಯುವುದುಂಟೆ ?

"ಊಟ ಮಾಡುವುದಿಲ್ಲವೇ ?...." ಪ್ರೈ ಮರೆತ ಪತಿದೇವರನ್ನು ಎಚ್ಚರಿಸಿದರು.

ಆ ದಿವ್ಯ ಮಧುರ ಭಾವನಾಲೋಕದಿಂದ ಒಮ್ಮೆಲೇ ವಾಸ್ತವಲೋಕಕ್ಕೆ ಜಾರಿದಾಗ ಅವರ ತಾಳ್ಮೆ ಹಾರಿಹೋಯಿತು. ತಾನೇನು ಮಾಡುತ್ತಿದ್ದೇನೆ ಎನ್ನುವುದನ್ನು ಯೋಚಿಸದೆ, ಉಪಚಾರ ಮಾಡಲು ಬಂದ ಮಡದಿಯ ಕೆನ್ನೆಗೆ ರಭಸದಿಂದ ಬಾರಿ ಸಿಯೇ ಬಿಟ್ಟರಂತೆ. ಆಕೆ ಚಕಾರವೆತ್ತದೆ, ಅಪ್ರತಿಭಳೂ ಆಗದೆ ಅಲ್ಲಿಂದ ಒಳಗೆ ಹೊರಟು ಹೋದರು.

ಲೇಖನಿ ಮುಂದುವರೆಯಿತು. ಚಂದ್ರಾ — ವೆಂಕಟಸುಬ್ಬಯ್ಯನವರ ಪ್ರಣಯ ಅವಳ ತ್ಯಾಗದಿಂದ ಪುಟವಿಟ್ಟ ಭಂಗಾರದಂತಾಯಿತು. ಕನ್ನಡ ಸಾಹಿತ್ಯ ದೇವಿಗೆ ಅಮೂಲ್ಯ ಕೃತಿ ಕಾಣಿಕೆಯೊಂದರ ನಿರ್ಮಾಣದ ಒಂದು ಘಟ್ಟ ಪೂರೈಸಿತು.

ಈಗ ಮಡದಿಯ ನೆರವಿಲ್ಲದೆಯೇ ವಾಸ್ತವ ಲೋಕಕ್ಕೆ ಬಂದರು ತ.ರಾ.ಸು. ಹೊಟ್ಟೆ ಚುರುಕ್ಕೆನ್ನುತ್ತಿತ್ತು, ಬರೀ ಸಿಗರೇಟಿನ ಹೊಗೆ ಹೊಟ್ಟೆ ತುಂಬಲಾರದು ಎನ್ನುವುದು ಈಗ ನೆನಪಾಗಿತ್ತು. ಎದ್ದವರೇ ನೇರವಾಗಿ ಅಡಿಗೆ ಮನೆಗೆ ಬಂದರು. "ತುಂಬಾ ಹಸಿವು ಅನ್ನ ಕೊಡು !"

ಮಡದಿ ಲಗುಬಗೆಯಿಂದ ಎದ್ದು ಊಟಕ್ಕೆ ಬಡಿಸತೊಡಗಿದಾಗ ಆಕೆಯ ಕೆನ್ನೆಯ ಮೇಲೆ ಮೂಡಿದ್ದ ಕೆಂಪನೆಯ ಗುರುತುಗಳನ್ನು ಕಂಡರು. ತಮ್ಮ ಕೈ ಬೆರಳುಗಳು ನಿರ್ಮಿಸಿದ ಈ ದುಡುಕಿನ ಕೃತಿ.... ಅದನ್ನು ನೋಡಲಾಗದೆ ತಲೆ ತಗ್ಗಿಸಿಕೊಂಡೇ ಊಟ ಮಾಡುತ್ತಿದ್ದಾಗ, ಅದುವರೆಗೆ ತಡೆಹಿಡಿದಿದ್ದ ಕಣ್ಣೀರು ಈಗ ಧಾರೆಯಾಗಿ ಹರಿಯಿತು. ಪಶ್ಚಾತ್ತಾಪದಿಂದ ತಲೆಯೆತ್ತಿ ನೋಡಿದರು, ಆಕೆಯ ಕಣ್ಣುಗಳಲ್ಲೂ ಕಂಬನಿ !

ಅಲ್ಲಿಗೆ ಮಾತುನಿಲ್ಲಿಸಿ ಸುಮ್ಮನಾದರು ತ.ರಾ.ಸು. ತಾವು ರೂಪಿಸಿದ ಆ ಪ್ರೇಮಪೂರ್ಣವಾದ ಕಾದಂಬರಿಯನ್ನು ಅರ್ಥಮಾಡಿಕೊಂಡವರು ಈ ಸುಂದರ ಚಿತ್ರವನ್ನು ಅರ್ಥಮಾಡಿಕೊಳ್ಳಲಾರರೇ ಎಂದೇನೋ ?

ಒಂದೊಂದು ಕೃತಿಯನ್ನು ರಚಿಸುವಾಗಲೂ ಅದರ ಬಗ್ಗೆ ಎಷ್ಟು ಆಸಕ್ತಿ ಶ್ರಮಗಳನ್ನು ವಹಿಸುತ್ತಾರೆನ್ನುವುದನ್ನು ಇವರ ಸಮೀಪ ವರ್ತಿಗಳೆಲ್ಲರೂ ಬಲ್ಲರು. ಇವರ ವ್ಯಾಸಂಗದ ಕೋಣೆಯಲ್ಲಿ ಜೋಡಿಸಿರುವ ಸಾವಿರಾರು ಪುಸ್ತಕಗಳು ಇವರು ಓದದೆ ಬರೆಯುವ" ಸಾಹಿತಿಯಲ್ಲವೆಂದು ಸಾರಿ ಹೇಳುವವು. ತಾವು ನಿರ್ಮಿಸುವ ಕೃತಿಗೆ ಸಂಬಂಧಪಟ್ಟ ನೂರಾರು ಪುಸ್ತಕಗಳಾದರೂ ಅವುಗಳನ್ನು ಮನನ ಮಾಡದೆ ಕೃತಿ ರಚನೆಗೆ ಕೈಹಾಕರು. ವಜ್ರದಂತಹ ಇವರ ಕೃತಿಗಳ ನಿರ್ಮಾಣಕ್ಕೆ ಇದು ಒಂದು ಕಾರಣವಿರಬೇಕು.

"ಎಷ್ಟು ಓದಿದರೂ ಬರವಣಿಗೆಯೇ ಬೇರೆ.... ಮಾತುಗಳು ಹೃದಯಾಂತರಾಳದಿಂದ ಚಿಮ್ಮಿರಬೇಕು, ಸಲಿಲವಾಗಿ ಹರಿದು ಬರಬೇಕು, ಬಾಣದಂತೆ ನಾಟಿಯೇ ಗುರಿ ಮುಟ್ಟಬೇಕು" ಎನ್ನುತ್ತಾರೆ ತ.ರಾ.ಸು.

ಆ ಸತ್ವಪೂರ್ಣ ಶೈಲಿಯನ್ನು ಇವರ ಕೃತಿಗಳ ಓದುಗರೆಲ್ಲರೂ ಬಲ್ಲರು. ಸಾಹಿತ್ಯ ಸರಸ್ವತಿ ಸಂಪೂರ್ಣವಾಗಿ ಒಲಿದ ಹೊರತು ಇಂತಹ ಶೈಲಿಯಲ್ಲಿ ಸಲಿಲವಾಗಿ ಬರೆಯುವುದು ಸಾಧ್ಯವೇ ?

ತ.ರಾ.ಸು. ಸಾಹಿತ್ಯದ ಆರಾಧನೆಯಷ್ಟೇ ಶ್ರದ್ಧಾಭಕ್ತಿಗಳಿಂದ ಮಾಡುವುದೆಂದರೆ ದೇವರ ಆರಾಧನೆ. ಅಂದರೆ ಇವರನ್ನು ಹೊರಗಿನ ವಾತಾವರಣದಲ್ಲಿ ಕಂಡವರಿಗೆ ಅಚ್ಚರಿಯಾದೀತು. ಪ್ರಾತಃಕಾಲ ಮನೆಯ ಹಿಂದಿನ ಹೂದೋಟದಲ್ಲಿರುವ

ಸುಂದರ ಪುಷ್ಪಗಳನ್ನು ಬಿಡಿಸಿ ತಂದು ಆರಾಧ್ಯ ದೇವರಿಗಿಡುವರು, ಕಣ್ಣು ಮುಚ್ಚಿ ಗಂಟೆಗಟ್ಟಲೆ ಪ್ರಾರ್ಥಿಸುತ್ತ ಕುಳಿತುಬಿಡುವರು. ಪೂಜೆಯಾದ ನಂತರವೇ ಇವರ ದಿನಚರಿ ಶುರುವಾಗುವುದು. ತಾವೇ ನೆಟ್ಟು ಬೆಳೆಸಿದ ಗಿಡಗಳಿಂದ ಪುಷ್ಪಗಳನ್ನಾಯ್ದು ತಂದು ಮಾಡುವ ಅರ್ಚನೆ, ಕಲ್ಪನೆಯಲ್ಲಿ ರೂಪಗೊಂಡ ಅಮೂಲ್ಯ ನುಡಿಮುತ್ತುಗಳಿಂದ ಸಾಹಿತ್ಯ ಸರಸ್ವತಿಯ ಈ ಅರ್ಚನೆ ಒಳಹೊಕ್ಕು ನೋಡಿದಾಗ ಇವೆರಡರಿಂದ ಬೇರ್ಪಡಿಸಲಾಗದ ಅಪೂರ್ವ ವ್ಯಕ್ತಿತ್ವ ಇವರದು.

ಲೇಖನಿಯಂತೆಯೇ ಇವರ ನಾಲಗೆ. ಬರೆಯುವ ಕೈಗಳಿಗೆ ಒಲಿದ ವಾಣಿ ನುಡಿಯುವಾಗ ನಾಲಗೆಯಮೇಲೆ ನಲಿಯುವುದು ತುಂಬಾ ಅಪರೂಪವೇ. ಈ ಅಪೂರ್ವಸಾಮರ್ಥ್ಯ ಪಡೆದವರಲ್ಲಿ ತ.ರಾ.ಸು, ಒಬ್ಬರು. ಎದುರಿಗಿದ್ದ ಸೀಸೆ ಖಾಲಿಯಾಗುತ್ತಿದ್ದಂತೆ ಮನಸ್ಸು ಮತ್ತೆವಾಸ್ತವ ಲೋಕದಿಂದ ಭಾವನಾ ಪ್ರಪಂಚಕ್ಕೆ ಹಾರಿ ಹೋಗುತ್ತದೆ. ಆ ಲೋಕದ ರಮ್ಯ ಅದ್ಭುತಗಳನ್ನು ಕಂಡ ಮನಸ್ಸು ಪ್ರೇಯಸಿಯ ಬಳಿಗೋಡುವಂತೆ ಆತುರ ಕಾತುರಗಳಿಂದ ಅಲ್ಲಿಗೆ ಧಾವಿಸಲು ಈ ಪುಟ್ಟ ಸೀಸೆಯೊಂದು ನಿಮಿತ್ತಮಾತ್ರ. ಭಾವನೆಗಳಿಂದ ಮೃದುವಾದ ಇವರ ಮನಸ್ಸಿಗೆ ಯಾವುದಾದರೊಂದು ಸಂಗತಿ ನಾಟಿದಾಗ ಆ ಮಾತಿನ ವೈಖರಿಯನ್ನು ಕೇಳಬೇಕು. ತಂತಿಯನ್ನು ಮಿಡಿಯದೆ ನಾದ ಹೊರಡುವುದೆ? ಸೊಗಸಾದ ಇಂಗ್ಲೀಷಿನಲ್ಲಿ ಸತ್ವಯುತವಾದ ಕನ್ನಡದಲ್ಲಿ ಮಾತಿನ ನಿರರ್ಗಳ ಸರಪಳಿ ಎದುರಿಗೆ ಕುಳಿತವರನ್ನು ಬಂಧಿಸಿ ಮೂಕ ವಿಸ್ಮೃತರನ್ನಾಗಿ ಮಾಡುತ್ತದೆ. ಕೃತಿಗಳನ್ನು ಓದುವುದು, ಕೃತಿಕಾರನ ಈ ಮಾತುಗಳನ್ನು ಕೇಳುವುದು ಯಾವುದು ಚೆನ್ನ ಯಾವುದು ಇಲ್ಲ. ○

ಪ್ರೇಮ ತನ್ನ ಕೃಪೆಗೆ ಪಾತ್ರವಾದ ವ್ಯಕ್ತಿಯನ್ನು ಉದ್ಧಾರ ಮಾಡುತ್ತದೆ. ಕಾಮ ಪಾತಾಳಕ್ಕೆ ತಳ್ಳುತ್ತದೆ. ಒಂದರಲ್ಲಿ ಅರಿವು ಅರಳಿದರೆ ಇನ್ನೊಂದರಲ್ಲಿ ವಿಸ್ಮೃತಿ ಕವಿಯುತ್ತದೆ. ಮೊಗ್ಗನ್ನು ಅರಳಿಸಿ ಜಗತ್ತಿಗೇ ಅದರ ಸೌಂದರ್ಯ ನರುಗಂಪನ್ನು ನೀಡುವುದು ಪ್ರೇಮ, ಅರಳಿದ ಹೂವನ್ನು ಬಾಡಿಸಿಕೊಳ್ಳುವ ಬಿಸಿಲು ಕಾಮ.

ಗಿರಿಕನ್ಯಕಾ

— ಎನ್. ವಸಂತಕುಮಾರ್

ರಾಜ ಮಹಾರಾಜರು ಬಾಳಿ ಬದುಕಿದ ಮೈಸೂರಿನ ಐತಿಹಾಸಿಕ ಹಿನ್ನೆಲೆ ಹೇಳ ತೀರದು. ಈ ಸ್ಥಳದಲ್ಲಿ ಪ್ರಶಾಂತವಾದ ವಾತಾವರಣದಲ್ಲಿ, ನಿಸರ್ಗದ ಮಡಿಲಲ್ಲಿ ಇವರು ಯಾದವಗಿರಿಗೆ ಹೋಗಿ ಯಾರನ್ನು ಕೇಳಿದರೂ "ಗಿರಿಕನ್ಯಕಾ" ತೋರಿಸಬಲ್ಲರು. ಈ 'ಗಿರಿಕನ್ಯಕಾವು' ಕನ್ನಡದ ಕಲಾ ರಸಿಕರಿಗೆ ಸಾಹಿತ್ಯದ ಔತಣ ನೀಡಿದ ತ.ರಾ.ಸು. ಅವರ ಮನೆ. ವಿಶಾಲವಾದ ಈ ಮನೆಯ ಮುಂಭಾಗ, ಹಿಂಬಾಗದಲ್ಲಿ ಹೂವು, ಹಣ್ಣುಗಳಿಂದ ಅಲಂಕೃತವಾದ ಗಿಡ ಮರಗಳು ಗಾಳಿ ಬೀಸಿದಾಗ ಪ್ರತಿಯೊಬ್ಬ ಕನ್ನಡಿಗನನ್ನೂ ಕೈ ಬೀಸಿ ಕರೆದಂತೆ ಭಾಸವಾಗುತ್ತದೆ. ಒಳಗೆ ಪ್ರವೇಶಿಸಿದ ಕೂಡಲೇ, ಗೋಡೆಯಮೇಲೆ ದೊಡ್ಡದಾಗಿ ತೂಗುಹಾಕಿರುವ 'ಕನ್ನಡ ಕುಲಪುರೋಹಿತ' ಆಲೂರು ವೆಂಕಟರಾಯರ ಭಾವಚಿತ್ರ. ಇವರ ಜೊತೆಗೆ ದೇಶ ವಿದೇಶಗಳಿಂದ ಆಯ್ದು ತಂದು ಸಲಕರಿಸಿದ ಅಂದವಾದ ಪ್ರತಿಮೆಗಳಿಂದ ಕೂಡಿದ ಈ ಮನೆಯ ಒಡತಿ ಅಂಬುಜಮ್ಮ. ಕನ್ನಡ ಸಾಹಿತ್ಯಕ್ಕೆ ಒಡೆಯರೆನಿಸಿದ ತ.ರಾ.ಸು. ರವರ ಸಾಹಿತ್ಯ ಸ್ಫೂರ್ತಿಗೆ ನಂದಾದೀಪದಂತೆ ಬೆಳಗುತ್ತಿರುವ ಶ್ರೀಮತಿ ಅಂಬುಜಮ್ಮನವರು. ತ.ರಾ.ಸು. ರವರ ಹೆಸರು ಜನಪ್ರಿಯವಾಗಲು ಅವರ ಲೇಖನಿಗಿಂತ ಅವರ ಪತ್ನಿಯೇ ಕಾರಣವೆನ್ನಬಹುದು.

ಸಾಹಿತಿಯ ಜೀವನ ಸುಗಮವಾಗಿ ನಡೆಯಬೇಕಾದರೆ ಸಾಹಿತಿಗಳ ಧರ್ಮಪತ್ನಿಯರೇ ಹೆಚ್ಚಿಗೆ ಕಾರಣರಾಗಿರುತ್ತಾರೆ ಎಂದರೆ ತಪ್ಪಾಗುವುದಿಲ್ಲ. ಕಾರಣ ಸಾಹಿತಿಯ ಕಷ್ಟ ನಷ್ಟಗಳನ್ನು, ಆಗು ಹೋಗುಗಳನ್ನು ಅವರ ಭಾವಕ್ಕೆ ಅನುಗುಣವಾಗಿ ತಾಳ್ಮೆಯಿಂದ ಎಲ್ಲವನ್ನೂ ಸಹಿಸಿಕೊಂಡು ಹೋಗುವ ಈ ಹೆಣ್ಣನ್ನು ಎಷ್ಟು ಶ್ಲಾಘಿಸಿದರೂ ಸಾಲದು.

ಈ ಎಲ್ಲಾ ಗುಣಗಳನ್ನು ಅರಿತು ಸಾಹಿತ್ಯದ ಹಿನ್ನೆಲೆಯಲ್ಲಿ ನಿರಂತರವಾಗಿ ದುಡಿಯುತ್ತಿರುವ ಮಾ॥ ಶ್ರೀ॥ ಅಂಬುಜಮ್ಮನವರ ಸೇವೆ ಅಪಾರವಾದುದು.

ಒಂದು, ಎರಡು ಬೇಕು, ಮೂರು ಮಕ್ಕಳು ಸಾಕು ಎಂದು ರಾಷ್ಟ್ರವೆಲ್ಲಾ ಸಾರುತ್ತಿರುವ ಈಗ, ಅದನ್ನು ಅವರು ಸಾರುವ ಮುನ್ನವೇ ಸಾರ್ಥಕಪಡಿಸಿ, ತನ್ನ ಮುದ್ದು ಮೂರು ಮಕ್ಕಳ ಜೊತೆ ಮಕ್ಕಳಿಗೆ ತಾಯಿಯಾಗಿ, ಪತಿಗೆ ಸರಿಯಾದ ಸತಿಯಾಗಿ ಸಾಹಿತ್ಯಕ್ಕೆ ಸರಸ್ವತಿಯಾಗಿ, ಕನ್ನಡಿಗರಿಗೆ ತಾಯಿಯಾಗಿರುವ ಅಂಬುಜಮ್ಮ. ತ.ರಾ.ಸು. ರವರ ಸಾಹಿತ್ಯ ಮಾಲಿಗೆ ಅಮೃತವಾಗಿದ್ದಾರೆ.

ಮನೆಗೆ ಹೋದೊಡನೆ ಅಮ್ಮಾ ಎಂದು ಕರೆದಾಗ ಒಳಗಿನಿಂದಲೇ ಬಾ ಒಳಗೆ ಎಂದು ಮಮತೆಯಿಂದ ತಾನು ಹೆತ್ತ ಮಗನಿಗಿಂತಲೂ ಹೆಚ್ಚಾದ ಪ್ರೀತಿಯಿಂದ ಕರೆದು

ತಾನೇ ಉಣಬಡಿಸಿದ ಈ ಕೈಗಳನ್ನು ಕಂಡಾಗ ಸಾಕ್ಷಾತ್ ಅನ್ನಪೂರ್ಣೆಯು ನೆನಪು ಬರುತ್ತದೆ.

ಆದಾಯ ಇರಲಿ, ಇಲ್ಲದಿರಲಿ, ಪತಿಯ ಭಾವ ಹೇಗೇ ಇರಲಿ, ತನ್ನ ಮನೆ ಎಂಬ ಅಭಿಮಾನದಿಂದ ಗಿರಿಕನ್ಯಕಾದ ಕೀರ್ತಿ ಗಿರಿ ಮುಟ್ಟುವಂತೆ ಸಹನೆಯಿಂದ ದುಡಿಯುತ್ತಿರುವ ಅಂಬುಜಮ್ಮನಿಗೆ ಕನ್ನಡದವರೆಲ್ಲರೂ ಕನ್ನಡದ ಸಾಹಿತ್ಯವನ್ನು ಅರಿತು ಅದಕ್ಕೆ ದುಡಿಯುವವರಾಗಬೇಕು, ಎಂಬ ಆಸೆ ಅಪಾರವಾದದು, ಆದರ್ಶವಾದುದು. ಕೌಟುಂಬಿಕ ಕಾದಂಬರಿಗಳನ್ನು ಸಹಜವಾಗಿ ಸೃಷ್ಟಿಸಿದ ತ.ರಾ.ಸು. ರವರು ಹೆಣ್ಣಿನ ಮೇಲೆ ಎಷ್ಟು ಜವಾಬ್ದಾರಿ ಇರುತ್ತದೆ ಎಂಬ ಅರಿವು ಬಹುಶಃ ಅವರು ಧರ್ಮಪತ್ನಿಯಿಂದಲೇ ಅರಿತಿರಬೇಕು. ಇದಕ್ಕೆ ಅವರು ಬರೆದ 'ಹೆಣ್ಣುಕಟ್ಟಿದ ಮನೆ' ಕಾದಂಬರಿ ಸಾಕ್ಷಿ.

ಯಾರೇಬರಲಿ ಯಾವ ಕಾರ್ಯಕ್ಕೇ ಬರಲಿ ಅವರು ಕನ್ನಡಿಗರು ಅವರು ನನ್ನ ಅಣ್ಣ ತಮ್ಮ-ಅಕ್ಕ-ತಂಗಿ ಎಂಬ ಭಾವನೆಯಿಂದ, ಪ್ರೀತಿಯಿಂದ ಅವರೊಡನೆ ಬೆರೆಯುವುದನ್ನು ಕಂಡಾಗ ಅಂಬುಜಮ್ಮನನ್ನು ವಿವಾಹವಾದ ತ.ರಾ.ಸು. ನಿಜಕ್ಕೂ ಪುಣ್ಯವಂತರು.

ಇಷ್ಟೆಲ್ಲವನ್ನು ಪೊಂದಿರುವ ಹೆಣ್ಣು 'ಅಂಬುಜ' ಆದಿಶಕ್ತಿಯ ಅವತಾರವೆಂಬಂತೆ ಅದೇ ಹೆಸರು ಹೊತ್ತು ಕನ್ನಡದ ಸಾಹಿತ್ಯ ಸೇವೆಯಲ್ಲಿ ತೆರೆಯ ಮರೆಯ ಕಾಯಂತೆ ಅವಿಶ್ರಾಂತವಾಗಿ ದುಡಿಯುತ್ತಿರುವ ಮಾ॥ ಶ್ರೀ॥ ಅಂಬುಜಮ್ಮನವರು ಯಾದವ ಗಿರಿಯ, ಸೊಬಗನ್ನು ಹೆಚ್ಚಿಸಲು ನಿರ್ಮಿಸಿರುವ ಗಿರಿಕನ್ಯಕಾದ ಒಡತಿ.

ಈ ಗಿರಿಕನ್ಯಕಾದಿಂದ ಇನ್ನು ಹೆಚ್ಚು ಸಾಹಿತ್ಯ ರತ್ನಗಳು ಹೊರಬರುವಂತೆ ತ.ರಾ.ಸು. ರವರಿಗೆ ಒತ್ತಾಯಮಾಡಿ, ಸಾಹಿತ್ಯ ಸೇವೆ ನಿರಂತರವಾಗಿ ಸಾಗಲು ಇವರೇ ಕಾರಣರಾಗುತ್ತಾರೆ ಎಂಬ ವಿಶ್ವಾಸದಿಂದ ಭಕ್ತಿಪೂರ್ವಕವಾಗಿ ಈ ಮೂಲಕ ಪ್ರಾರ್ಥಿಸುತ್ತೇನೆ.

○

ಸನ್ಮಿತ್ರ ದೃಷ್ಟಿಯಲ್ಲಿ

— ಎ. ಎಲ್. ಶ್ರೀನಿವಾಸಮೂರ್ತಿ

ಇರುವೆಯೊಂದು ಆನೆಯೊಂದನ್ನ ವೀಕ್ಷಿಸಿ. ಅದೇ ಪ್ರಮಾಣದ ಚಿತ್ರಣ ಬಿಡಿಸಿ ಹೊರಟಂತಾಗಿದೆ ನನ್ನ ಪರಿಸ್ಥಿತಿ. ತ.ರಾ.ಸು. ರವರು ನನ್ನ ಹಿತೈಷಿಗಳು, ಆದರೆ ಅವರ ಬಗ್ಗೆ ಬರೆಯುವಷ್ಟು ಚೈತನ್ಯವಿಲ್ಲ. ಓದುಗರು ನನ್ನನ್ನ ಮನ್ನಿಸುತ್ತಾರೆಂದು ತಿಳಿದು ಅವರ ಆತ್ಮೀಯತೆ ಬಗ್ಗೆ ಬರೆಯಲು ಪ್ರಯತ್ನಪಟ್ಟಿದ್ದೇನೆ.

ತ.ರಾ.ಸು. ಪ್ರಚಲಿತ ಪ್ರಖ್ಯಾತ ಕಾದಂಬರಿಗಾರರಾಗಿ ಕರ್ನಾಟಕದಲ್ಲಿ ಅಪಾರ ಕೀರ್ತಿ ಗಳಿಸಿದ್ದಾರೆ. ಕನ್ನಡ ನಾಡಿನ ಪ್ರತಿಯೊಂದು ಮನೆಯಲ್ಲೂ ಅವರ ಖ್ಯಾತಿ ಹಬ್ಬಿದೆ. ಅವರು ರಾಜಕಾರಣಿಗಳೂ ಅಹುದು (ಸ್ವತಂತ್ರ ಹೋರಾಟದ ಸಮಯದಲ್ಲಿ ಬಂದೀಖಾನೆಯನ್ನೂ ಹೊಕ್ಕಿ ಬಂದಿದ್ದಾರೆ) ಈಗಂತೂ ಚಲನಚಿತ್ರ ಪ್ರಪಂಚದಲ್ಲೂ ಅವರ ಚಲನ ವಲನ ನಡೆದಿದೆ. ಇದರಿಂದಾಗಿ ಅವರ ಸಾಹಿತ್ಯ ಸೃಷ್ಟಿ ಕುಂಠಿತವಾಗಿದೆ. ಈ ವಿಚಾರ ಎಲ್ಲ ಕನ್ನಡಿಗರಿಗೂ ಗೊತ್ತಿದೆ, ತ.ರಾ.ಸು. ರವರಿಗೂ ತಿಳಿದಿದೆ. ಈ ಪರಿಸ್ಥಿತಿಗೆ ಯಾರು ಕಾರಣರು? ಸ್ವತಃ ತ.ರಾ.ಸು. ರವರೇ? ಕನ್ನಡಿಗರೇ? ಅಥವ ಸರಕಾರವೇ? ಯಾರೂ ಅಲ್ಲ ಪ್ರಕೃತಿಯೇ ಕಾರಣವೆಂದು ನನ್ನ ಭಾವನೆ. ಪ್ರತಿಯೊಬ್ಬನೂ ಕೇವಲ ಹೊಟ್ಟೆ ಬಟ್ಟೆಗಾಗಿ ಸತತ ದುಡಿಯುತ್ತಾನೆ, ಕಷ್ಟ ನಷ್ಟ ಅನುಭವಿಸುತ್ತಾನೆ. ಬೇರೆ, ಬೇರೆ ರಂಗಕ್ಕೆ ಧುಮುಕುತ್ತಾನೆ. ಇದು ಪ್ರಕೃತಿ ನಿಯಮ. ಈ ನಿಯಮಕ್ಕೆ ಸಿಕ್ಕಿ ತ.ರಾ.ಸು. ರವರು ಚಲನಚಿತ್ರ ಪ್ರಪಂಚಕ್ಕೆ ಧುಮುಕಿದರೆಂದು ಹೇಳಬಹುದು. ಇದರಿಂದ ಕನ್ನಡಿಗರು ಅಪಾರ ದುಃಖಕ್ಕೆ ಒಳಗಾಗಿದ್ದಾರೆ. ನಿಜಾ; ಅಂತೆಯೇ ತ.ರಾ.ಸು. ರವರೂ ಆತ್ಮದಲ್ಲೇ ಕೊರಗಿದ್ದಾರೆ. ಆಬಗ್ಗೆ ಎಷ್ಟೋಬಾರಿ ಪ್ರಸ್ತಾಪ ನಡೆಸಿದ್ದಾರೆ, ಆ ಕೊರಗೇ ಅವರನ್ನ ಮತ್ತಷ್ಟು ಸಂಕಷ್ಟಗಳಿಗೆ ಸಿಕ್ಕಿಸಿದೆ. ತಾಯಿ ಭುವನೇಶ್ವರಿ ಅವರ ಸಂಕಷ್ಟಗಳನ್ನು ದೂರಮಾಡಿ ಆದಷ್ಟು ಜಾಗ್ರತೆ ಅವರಿಂದ ಉತ್ಕೃಷ್ಟ ಕಾದಂಬರಿಗಳು ರಚಿಸಲ್ಪಡಲೀ ಎಂದು ಆ ಮಹಾಮಾತೆಯಲ್ಲಿ ಪ್ರಾರ್ಥಿಸುತ್ತೇನೆ.

ನನ್ನ ಅವರ ಮಿತ್ರತ್ವ ಆದದ್ದು ವಿಚಿತ್ರರೀತಿಯಲ್ಲಿ. ನರಿ ಮತ್ತು ದ್ರಾಕ್ಷಿಯ ಕಥೆಯಂತೆ ಆಗಿಲ್ಲ ನನ್ನ ಅವರ ಸ್ನೇಹ. ಕೆಲವರು ದ್ರಾಕ್ಷಿಯನ್ನ ಹುಳಿ ಎನ್ನುವವರೂ ಇದ್ದಾರೆ. ಅದು ದ್ರಾಕ್ಷಿಯ ತಪ್ಪಲ್ಲ, ತ.ರಾ.ಸು. ರವರ ವೈಯಕ್ತಿಕ ವ್ಯವಹಾರಗಳಿಂದಾಗಿ ಕೆಲವು ಮಂದಿ ಅವರ ಸ್ನೇಹವನ್ನ ದೂರವಾಗಿರುವವರೂ ಇರಬಹುದು. ಅಂತಹವರು ಅತ್ಯಲ್ಪ. ತ.ರಾ.ಸು. ರವರ ಹೃದಯವನ್ನು ಹೊಕ್ಕು ಅಂತರಾಳವನ್ನು ಅರಿತವರು ಎಂದಿಗೂ ಅವರ ಸ್ನೇಹದ ಸರಪಳಿಯ ಕೊಂಡಿಯೊಂದ ಕಳಚಿ ಕೊಳ್ಳಲು ಪ್ರಯತ್ನಿಸರು. ತಮ್ಮ ಸ್ವಾರ್ಥತೆಗಾಗಿ ಅವರ ಸ್ನೇಹವನ್ನ ಬಯಸಿ, ಅವರ ಸೇವೆಯನ್ನ ಪಡೆದು ನಂತರ ದೂರಸರಿದ ಮಿತ್ರರೂ ಅವರ ಅನುಭವದಲ್ಲಿ

ಬಾರದೇ ಹೋಗಿಲ್ಲ. ಒಮ್ಮೊಮ್ಮೆ ಅಂತಹವರ ಕೃತಘ್ನತೆಗಾಗಿ ಬಹಳ ನೊಂದು ಕೊಳ್ಳುತ್ತಾರೆ. ಅವರನ್ನ ಅರ್ಥಮಾಡಿಕೊಂಡ ಆತ್ಮೀಯರಿಗೆ ಅವರಲ್ಲಿ ಏನೂ ಬದಲಾದಂತೆ ಅಥವ ಹೊಸತರಹ ಕಾಣಬರುವುದಿಲ್ಲ, ಅಂದಿನಿಂದಲೂ ಇದ್ದ ತ.ರಾ.ಸು. ರವರೇ ಇಂದಿಗೂ ಹಾಗೇ ಇದ್ದಾರೆ. ಮುಂದೆಯೂ ಅದೇ ತ.ರಾ.ಸು. ಆಗಿರುತ್ತಾರೆ. ಅವರಲ್ಲಿ ಹಣಕ್ಕಾಗಲೀ, ಬೇರೆ ಹವ್ಯಾಸಗಳಿಗಾಗಲೀ ಆಸ್ಪದವಿಲ್ಲ. ಇವುಗಳಿಂದ ಅವರ ಆತ್ಮ ತೃಪ್ತಿಪಡಿಸುವುದೂ ಸಾಧ್ಯವಿಲ್ಲ, ಇವುಗಳ ಪ್ರಭಾವ ಅಲ್ಲಿ ಕ್ಷಣಿಕವಾಗಿರಬಲ್ಲದೇ ಹೊರತು ಶಾಶ್ವತ ಸ್ಥಾನ ಪಡೆಯಲಾರದು.

ನನ್ನ ಅವರ ಆತ್ಮೀಯತೆಗೆ ಮೇಲಿನ ಪೀಠಿಕೆ ಬರೆಯಲು ಕಾರಣ ಇಂದು ಕೇವಲ ಹಣ, ಅಥವ ಬೇರೆ, ಬೇರೆ ಹವ್ಯಾಸಗಳಿಂದ ಮಿತ್ರತ್ವ ಅಳೆಯುವ ಕಾಲ ಬಂದಿದೆ. ಇನ್ನು ನನ್ನ ತ ರಾ.ಸು. ರವರ ಆತ್ಮೀಯತೆಯಬಗ್ಗೆ ತಿಳಿಸಬೇಕೆಂದರೆ ಇಲ್ಲಿ ಹಣ, ಹವ್ಯಾಸಗಳ ಪ್ರಶ್ನೆಯೇ ಇಲ್ಲಾ (ಅಂದಂದಿನ ಕೂಳನ್ನ ಸಂಪಾದಿಸಿ ಹೊಟ್ಟೆ ತುಂಬಿಸಿ ಕೊಳ್ಳುವ ಕಾರ್ಮಿಕ ನಾನು) ನಮ್ಮಿಬ್ಬರನ್ನ ಬೆಸೆಸಿದ್ದು "ಕಲೆ" ಅದೂ "ರಂಗಭೂಮಿಯ ಅನುಭವ"

ಹದಿನೇಳು ವರ್ಷಗಳ ಹಿಂದೆ ನಂಜನಗೂಡಿನಲ್ಲಿ ನಮ್ಮ ಒಂದು ನಾಟಕ ಪ್ರದರ್ಶನ. ತ.ರಾ.ಸು. ರವರು ಆಗಮಿಸಿ, ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಸರಿ ನಂತರ ನಮ್ಮ ಬೇಡಿಕೆ "ರಕ್ತರಾತ್ರಿ" ಕಾದಂಬರಿಯನ್ನ ನಾಟಕಕ್ಕೆ ಅಳವಡಿಸಿ ಅಭಿನಯಿಸಲು ಅನುಮತಿಗೆ ಸಂತೋಷದಿಂದ ಒಪ್ಪಿಗೆ ಇತ್ತರು.

ಅನಂತರ ಅವರನ್ನ ಸಂಧಿಸಿದ್ದು ಹತ್ತು ವರ್ಷಗಳ ನಂತರ, ಈ ಅವಧಿಯಲ್ಲಿ ಹಸ್ತ ಪ್ರತಿ ಸಿದ್ಧಪಡಿಸಿದ್ದೆ. ನನ್ನ ಸ್ಥಿತಿಗತಿಯಂತೂ ಯಥಾಸ್ಥಿತಿ. ಆದರೆ ತ.ರಾ.ಸು. ರವರ ಈ ಅವಧಿಯಲ್ಲಿ ಹಿಂದಿನಂತೆ ಇರಲಿಲ್ಲ ಸ್ವಂತ ಮನೆ, ಮಧ್ಯೆ ಕಾರು ಒಂದನ್ನ ಸಹಾ ಇಟ್ಟಿದ್ದರೆಂದು ಕೇಳಿದ್ದೆ, ಹೀಗಾಗಿ ಅವರನ್ನ ಕಾಣುವುದಕ್ಕೆ ಏನೋ ಹೆದರಿಕೆ ಮತ್ತು ಭಯ. ಎರಡು, ಮೂರು ಪತ್ರ ಬರೆದಿದ್ದೆ. ನಿರುತ್ತರ. (ಈಚೆಗೆ ಅರಿತೆ ಅವರು ಪತ್ರ ಬರೆಯುವ ಹವ್ಯಾಸವನ್ನೇ ಇಟ್ಟುಕೊಂಡಿಲ್ಲಾ. ಎಲ್ಲಿ ಅದೂ ಒಂದು ಕಾದಂಬರಿ ಆದೀತೋ ಎಂಬ ಭಯವಿರಬೇಕು) ಎದುರಿಗೆ ಸಿಕ್ಕಾಗ ಬರೆಯಬೇಕೆಂದಿದನ್ನ ಗಂಟೆಗಟ್ಟಲೆ ಕುಳಿತು ತಿಳಿಸುತ್ತಾರೆ. ಒಮ್ಮೊಮ್ಮೆ ತುರ್ತು ಪರಿಸ್ಥಿತಿ ಆದರೆ, ಪತ್ರಬರೆದರೆ ತಡವಾಗುತ್ತೆಂದು ಕಾರಿನಲ್ಲೇ ಬೆಂಗಳೂರಿನವರೆಗೂ ಬಂದಿರುವ ಪ್ರಸಂಗಗಳಿವೆ. (ಕೇವಲ ಪತ್ರಕ್ಕೆ ಪ್ರತ್ಯುತ್ತರ ಬರೆಯಲಾಗದೆ)

ನನ್ನ ಒಂದು ಪತ್ರದಲ್ಲಿ "ಅನುಮತಿ ನೀಡದಿದ್ದರೆ ಹೆಂಡತಿ ಮಕ್ಕಳನ್ನ ಕೂಡಿಸಿಕೊಂಡು ನಾಟಕ ವಾಚನಮಾಡಿ ನನ್ನ ಅಭೀಷ್ಟವನ್ನ ಪೂರೈಸಿಕೊಳ್ಳುತ್ತೇನೆ" ಎಂಬ ಬೆದರಿಕೆಯ ಪದವನ್ನೂ ಸೇರಿಸಿದ್ದೆ. ಬೆದರಿಕೆ ಹಾಕಿದ ನಾನೇ ಹೆದರಿಕೆಯಿಂದಾಗಿ ಅವರ ಆಪ್ತ ಮಿತ್ರನಾದ ದಾಶರಥೀ ದೀಕ್ಷಿತರನ್ನ ಮುಂದಿಟ್ಟುಕೊಂಡು ಮೈಸೂರಿನ, ಯಾದವ ಗಿರಿಯ, "ಗಿರಿಕನ್ಯಕಾ" ಮನೆಗೆ ನಡುಗುತ್ತಲೇ ಪ್ರವೇಶಿಸಿದೆ. ನಮ್ಮ ಅದೃಷ್ಟ

ಮನೆಯಲ್ಲೇ ಇದ್ದರು. (ಯಾವ ರಾಜಕಾರಣಿಯೂ ಎಳೆದುಕೊಂಡು ಹೋಗಿರಲಿಲ್ಲ) ದೀಕ್ಷಿತರನ್ನ ಕಂಡು ಅವರಿಗೆ ಅಮಿತವಾದ ಆನಂದವಾಯಿತು. ಆಗ ನನಗೆ ಆವರಿಸಿದ ಹೆದರಿಕೆ ಕಳೆದು ಧೈರ್ಯ ಅಂಕುರಿಸಿತು. ಸರಿ ನಮ್ಮಿಬ್ಬರಿಗೆ ಹರ್ಷದ ಸ್ವಾಗತ, ಫಲಹಾರ, ಯೋಗಕ್ಷೇಮ ವಿವರಣೆ, ಊಟ, ಉಪಚಾರಗಳಲ್ಲೇ ಅರ್ಧ ದಿನ ಕಳೆಯಿತು. ತದನಂತರ ವಿಶ್ರಾಂತಿಯೂ ಆಯಿತು. ಪುನಃ ಎದ್ದತಕ್ಷಣ ಫಲಹಾರ ಸಿದ್ಧ. ತಾವೇ ಖುದ್ದಾಗಿ ಅಡಿಗೆಮನೆ ಉಸ್ತುವಾರಿ ನಡೆಸಿದ್ದರು. ಅವರೂಪದ ಅತಿಥಿಗಳಲ್ಲದೇ ನಾವು? ಇಷ್ಟಾದರೂ ನನ್ನ ನಾಟಕ ಓದಬೇಕೆಂಬ ಬಯಕೆ ಕೈಗೂಡಿರಲಿಲ್ಲ. ಬಯಕೆಯ ಹಿಂದಿದ್ದ ಹೆದರಿಕೆಯನ್ನ ನಿವಾರಿಸಿಕೊಂಡು ನಾನೇ (ಪತ್ರಬರೆಯುವುದುಬೇಡ ಎಂದು ಅರಿತು) ಸಂಧಿಸಿದ ಕಾರಣ ತಿಳಿಸಿದೆ. ಕೃತಿಯನ್ನ ಕೈಗೆತ್ತಿ, ಒಮ್ಮೆ ಕಣ್ಣುಹಾಯಿಸಿ, ಸಿದ್ಧಪಡಿಸಿದ್ದ ಚಿತ್ರಗಳನ್ನ ನೋಡಿ ಓದಲು ತಿಳಿಸಿದರು. ಒಂದು ದೃಶ್ಯ ಓದಿದೆ, ಎರಡನೇ ದೃಶ್ಯ ಆರಂಭಿಸಿದೆ. ಅಷ್ಟಕ್ಕೆ ಸಂತೋಷ ಪಟ್ಟು ಪೂರ್ತಿ ಓದಬೇಡಿ ರಂಗದಮೇಲೆ ನೋಡುತ್ತೇನೆ" ಎಂದು ತಿಳಿಸಿ ಅಭಿನಂದಿಸಲು, ಅನುಮತಿ ಇತ್ತರಲ್ಲದೆ ಅವರ ಯಾವ ಕೃತಿಯನ್ನು ಬೇಕಾದರೂ ನಾಟಕಕ್ಕೆ ಅಳವಡಿಸಲು ತಮ್ಮ ಅಭ್ಯಂತರವೇನೂ ಇಲ್ಲವೆಂದು ತಿಳಿಸಿದರು. ಅದೇ ಅವರಿತ್ತ ಮೊದಲನೆ ವರ ಪ್ರಸಾದ. ಇದು ಅವರ ವಿಶಾಲ ಹೃದಯದ ಕುರುಹು. ಅಂದು ಬೆಸೆಯಲ್ಪಟ್ಟ ಸ್ನೇಹ ಇಂದಿಗೂ ಭದ್ರವಾಗಿ ನಿಂತಿದೆ.

ಮೈಸೂರಿಗೇ ನಮ್ಮೆಲ್ಲರನ್ನೂ ಕರೆಸಿಕೊಂಡು ಪುರಭವನದಲ್ಲಿ ಈ ನಾಟಕದ ಪ್ರದರ್ಶನ ಏರ್ಪಡಿಸಿ, ವೀಕ್ಷಿಸಿ, ಅವರು ಅನುಭವಿಸಿದ ಆನಂದ ಅಷ್ಟಿಷ್ಟಲ್ಲಾ ಕೇವಲ ಬುದ್ಧಿ ಗೋಚರಕ್ಕೆ ಕಾಣುತ್ತಿದ್ದ ಪಾತ್ರಗಳು ದೃಗ್ಗೋಚರವಾದಾಗ ಯಾವ ಲೇಖಕನಿಗೆ ಸಂತೋಷವಾಗಲಾರದು. ಅಂದಿನಿಂದ ಆ ಎಲ್ಲಾ ಕಲಾವಿದರನ್ನೂ ತಮ್ಮ ಮಕ್ಕಳಂತೇ ಭಾವಿಸಿ ಇಂದಿಗೂ ನಡೆಸಿಕೊಂಡು ಬಂದಿದ್ದಾರೆ. ನಾನಂತೂ ಅವರ ಮನೆಯವರಲ್ಲೊಬ್ಬನಾಗಿದ್ದೇನೆ. ಹಬ್ಬ ಹರಿದಿನಗಳಲ್ಲಿ ನಾವು ಅಲ್ಲಿಗೆ ಹೋಗಬೇಕು. ಇಲ್ಲಿ ಏನಾದರೂ ಹಬ್ಬ ಆಚರಿಸಿದರೆ ಅವರು ಬರಬೇಕು ಅದೂ ಕುಟುಂಬ ಪರಿವಾರ ಸಮೇತರಾಗಿ. ಕುಟುಂಬ ಎಂದ ತಕ್ಷಣ ನೆನಪಿಗೆ ಬರುವುದು ತ.ರಾ.ಸು. ರವರ ಕುಟುಂಬ (ಶ್ರೀಮತಿ ಅಂಬುಜಮ್ಮ) ಆ ತಾಯಿಯೇ ಆ ಮನೆಯ ನಂದಾದೀವಿಗೆ, ಆ ಮನೆಗೆ ಹೋಗಿಬರುವವರಿಗೆಲ್ಲಾ ಅವರು "ಅಮ್ಮಾ" ಅಥವ "ತಾಯಿ" ಅದಕ್ಕೆ ಕಾರಣ ತಾಯಿಯು ಕರುಣಿಸುವ ಮಮತೆ, ಆ ದೇವಮಂದಿರದ ಆಕರ್ಷಣೆ. ಆಕೆ ದೇವತೆ ಎಂದೇ ಹೇಳಬಹುದು. ನಿಜಾ ಆ ಮನೆಯೂ ಒಂದು ದೇವ ಮಂದಿರ. ಅವರ ಪೂಜಾಗೃಹದಲ್ಲಿ ಕೂಡುವುದೂ ಒಂದು ಭಾಗ್ಯ. ಏನು ತ.ರಾ.ಸು. ದೇವಭಕ್ತರೇ ? ಎಂಬ ಅನುಮಾನ ಕೆಲವರಿಗೆ ಬರಬಹುದು. ಆ ಅನುಮಾನ ಸತ್ಯಕ್ಕೆ ಬಹಳ ದೂರ, ಸ್ವಂತ ಕೋಣೆಯಲ್ಲಿದ್ದಾಗ ಬರವಣಿಗೆ, ಅಥವ ಗೆಳೆಯರೊಂದಿಗೆ ಚರ್ಚೆ, ವರಾಂಡದಲ್ಲಿ ಮಕ್ಕಳೊಂದಿಗೆ ಆಟ, ದೇವರಮನೆ ಹೊಕ್ಕಾಗ ಭಕ್ತಿಯಿಂದ, ಶ್ರದ್ಧೆಯಿಂದ, ಏಕಾಗ್ರತೆಯಿಂದ ಪೂಜೆ. ಅವರು ದೇವ

ಭಕ್ತರಾಗಿರುವುದರಿಂದಲೇ ಮಂತ್ರಾಲಯದ ಶ್ರೀಗಳವರು, ಪೇಜಾವರ ಮಠದ ಶ್ರೀ ಶ್ರೀ ಶ್ರೀಗಳೂ, ಇನ್ನೂ ಅನೇಕ ಯತಿಶ್ರೇಷ್ಠರ ಕೃಪೆಗೆ, ಆಶೀರ್ವಾದಕ್ಕೆ ಪಾತ್ರರಾಗಿದ್ದಾರೆ. ಅವರೆಲ್ಲರ ಆಶೀರ್ವಾದ ತ.ರಾ.ಸು. ರವರಮೇಲೆ ಅನಂತವಾಗಿದೆ. ಇಂದಿಗೆ ಅವರು ಐವತ್ತೊಂದಕ್ಕೆ ಹೆಚ್ಚು ಸಂವತ್ಸರಗಳನ್ನ ಕಳೆದಿದ್ದಾರೆ, ಕಷ್ಟ, ಸುಖಗಳನ್ನ ಕಂಡಿದ್ದಾರೆ. ಮುಂದೆ ಅವರಿಗೆ ಒಳ್ಳೆಯ ದಿನಗಳನ್ನ ಕರುಣಿಸಿ, ಸಾಹಿತ್ಯ ಸೇವೆಗೆ ಅನುವು ಮಾಡಿಕೊಟ್ಟು, ಕನ್ನಡ ಜನತೆಯ ಕಾತುರತೆಯನ್ನ ನೀಗಿಸಿ ಅವರ ಆಯುರಾರೊಗ್ಯವನ್ನ ಕಾಪಾಡಿ, ಉತ್ಕೃಷ್ಟ ಕಾದಂಬರಿಗಳು ಪುನಃ ಅವರ ಲೇಖನಿಯಿಂದ ಹೊರಬರುವಂತೆ ಮಾಡು ಎಂದು ಆ ತಾಯಿ ರಾಜ ರಾಜೇಶ್ವರಿಯಲ್ಲಿ ಪ್ರಾರ್ಥನೆಯನ್ನ ಸಲ್ಲಿಸಿ ಎಂದೆಂದಿಗೂ ನನ್ನ ಅವರ ಮಿತ್ರತ್ವ ಅಮರವಾಗಿರುವಂತೆ ಕರುಣಿಸು ತಾಯೀ ಎಂದು ಮತ್ತೊಮ್ಮೆ ನನ್ನ ಪ್ರಾರ್ಥನೆಯನ್ನ ಸಲ್ಲಿಸುತ್ತೇನೆ. ಈ ಮೂಲಕ ನನ್ನ ಕನ್ನಡಿಗರ ಮಿತ್ರತ್ವ ಇನ್ನಷ್ಟು ವೃದ್ಧಿಸಲೀ ಎಂದು ಓದುಗರಿಗೆಲ್ಲಾ ನನ್ನ ವಂದನೆ. ●

"ಶಿಷ್ಯಾತ್ ಇಚ್ಛೇತ್ ಪರಾಜಯಂ"

— ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್

ನಾನು ಚಿತ್ರದುರ್ಗದ ಹೈಸ್ಕೂಲಿನಲ್ಲಿ 1930 ರಿಂದ 1934 ರ ವರೆಗೂ ಗಣಿತದ ಉಪಾಧ್ಯಾಯನಾಗಿದ್ದೆ. ಆ ಊರಿನ ವೈಶಿಷ್ಟ್ಯವೆಂದರೆ ಹಿಂದೆ ನಾಯಕರು ಪ್ರಬಲವಾಗಿದ್ದ ಕಾಲದಲ್ಲಿ ಇದು ರಾಜಧಾನಿಯಾಗಿತ್ತು. ಊರ ಸುತ್ತಲೂ ಕೋಟೆ, ಕೋಟೆಯೊಳಗೆ ಬೆಟ್ಟ, ಆ ಬೆಟ್ಟದ ಸುತ್ತಲೂ ಈಗಲೂ ಇರುವ ರಂಜಕವಾದ ದುರ್ಗಮವಾದ ಕೋಟೆ, ಬುರುಜು, ಬತೇರಿ ಮುಂತಾದುವು. ಬೆಟ್ಟದಮೇಲೆ ಸರಿಗಾಗಿ ಗೋಪಾಲಸ್ವಾಮಿ ಹೊಂಡವೆಂಬ ಒಂದು ಸಣ್ಣ ಕೆರೆಯಿದೆ ತುಪ್ಪದ ಹೊಂಡ, ಎಣ್ಣೆ ಹೊಂಡ ಎಂಬ ಉದ್ದಕ್ಕಿರುವ ಹಳ್ಳಗಳಲ್ಲಿ ನಾಯಕರು ತುಪ್ಪ ಎಣ್ಣೆಗಳನ್ನು ಕೂಡಿಡುತ್ತಿದ್ದರಂತೆ, ಅಷ್ಟು ಕೂಡಿಡಬೇಕಾದರೆ ಆಕಾಲದ ಸಮೃದ್ಧಿ ಹೆಚ್ಚಿರಬೇಕೆಂದು ಊಹಿಸಬಹುದು. ಅಲ್ಲೇ ಪಾಳುಬಿದ್ದಿರುವ ನಾಯಕರಿದ್ದ ಅರಮನೆ ಇದು ಎಂದು ಜನ ತೋರಿಸುತ್ತಾರೆ. ಬೆಟ್ಟ ಎಲ್ಲಿ ನೋಡಲೂ ರಮ್ಯ. ಆ ಕಾಲದಲ್ಲಿ ರಾಜರಿಗೆ ಇಂಥ ಕೋಟೆಗಳ ಅವಶ್ಯವಿತ್ತು. ಶ್ರೀರಂಗಪಟ್ಟಣದಂತೆ ಎನ್ನಿ, ಚಿತ್ರದುರ್ಗದ ನಾಯಕರಲ್ಲಿ ಪ್ರಸಿದ್ಧನಾಗಿದ್ದ ಮದಕರಿನಾಯಕನ ವಿಚಾರವಾಗಿ ಅನೇಕ ಪ್ರತಾಪದ ಕಥೆಗಳನ್ನು ಹೇಳುತ್ತಾರೆ. ಅಂತೂ ಮೊಟ್ಟಮೊದಲು ಚಿತ್ರದುರ್ಗಕ್ಕೆ ಹೋದವರು ಈ ಬೆಟ್ಟವನ್ನು ಹತ್ತಿನೋಡಿ ನಾಯಕರ ಕಾಲದ ವೈಭವಗಳನ್ನು ನೆನೆಸಿಕೊಳ್ಳುವುದು ಸಹಜ.

ಸುಬ್ಬರಾಯ ಚಿತ್ರದುರ್ಗದಲ್ಲಿ ಬೆಳೆದು ಅವರ ಒಂದೊಂದು ಬುರುಜು ಬತೇರಿಯನ್ನೂ ತಿಳಿದವನು. ಚಿಕ್ಕವ. ಸುಸಂಸ್ಕೃತ, ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಸಹೋದರನ ಮಗ. ವೆಂಕಣ್ಣಯ್ಯನವರು ಹೆಸರಾದ ಮೈಸೂರ್ ಯೂನಿವರ್ಸಿಟಿ ಕನ್ನಡ ಪ್ರಾಧ್ಯಾಪಕರು. ಸೆಂಟ್ರಲ್ ಕಾಲೇಜಿನಲ್ಲಿ 1920 ರಲ್ಲಿ ನನಗೂ ಪ್ರೊಫೆಸರ್. ಇವರ ಸಂಪರ್ಕದಿಂದ ಸುಬ್ಬರಾಯನಿಗೆ ಕನ್ನಡದಮೇಲೆ ಅಭಿಮಾನ ಉಂಟಾಯಿತೆ ? ಇವರ ಊರು ಥಳಕು, ಅಲ್ಲಿ ಎಲ್ಲರಿಗೂ ಕುಮಾರವ್ಯಾಸ ಲಕ್ಷ್ಮೀಶರ ಕಾವ್ಯಗಳಲ್ಲಿ ವಿಶೇಷವಾದ ಆಸಕ್ತಿ. ಆ ಕಾರಣದಿಂದ ಕನ್ನಡದಮೇಲೆ ಅಭಿಮಾನವೇ ? ಅಥವಾ ಹುಲ್ಲೂರು ಶ್ರೀನಿವಾಸ ಜೋಯಿಸ್ ಎಂಬ ಚಿತ್ರದುರ್ಗದ ಲಾಯರು ನಾಯಕರ ವಿಚಾರ ಶೋಧಿಸಿ ಕನ್ನಡದಲ್ಲಿ ಬರೆಯುತ್ತಿದ್ದರು. ಅವರ ಸಹವಾಸದಿಂದ ಕನ್ನಡದಲ್ಲಿ ಪ್ರಭಾವಿತರಾಗಿ ಕಾದಂಬರಿಗಳನ್ನು ಬರೆದು ಕನ್ನಡಕ್ಕೆ ಕೊಡಾದರೆ? ಏನೇಇರಲಿ ಕನ್ನಡಕ್ಕೆ ಕಾದಂಬರಿಗಾರರು ಬೇಕಿತ್ತು, ದೇವಿ ಒಬ್ಬನನ್ನು ದಯಪಾಲಿಸಿದಳೆಂದರೆ ಸಾಕು.

ಸುಬ್ಬರಾಯ ತುಂಟನಲ್ಲ. ಗಣಿತದಲ್ಲಿ ಅತ್ಯಧಿಕ ಅಂಕಗಳನ್ನು ತೆಗೆದವನಲ್ಲ. ನನ್ನ ಗಣನೆಗೆ ಹೇಗೆ ಬರಬೇಕು ? ಆದರೆ ಒಂದು ಇವನಿಗೆ ಹೊಳೆಯುವ ಕಣ್ಣುಗಳಿತ್ತು.

ಆ ಕಾರಣ ಇವನಲ್ಲಿ ಶಕ್ತಿ ಏನಾದರೂ ಹುದುಗಿದೆಯೆ ಎಂಬ ಊಹೆ. ಇದು ನಿಶ್ಚಯವಾಯಿತು. ಬಹುಕಾಲದಮೇಲೆ "ನೃಪತುಂಗ" ಎಂಬ ಒಂದು ಪುಸ್ತಕ SSLCಗೆ ಪಠ್ಯ ಪುಸ್ತಕವಾಗಿತ್ತು. ನಾನು ಇದ್ದುದು ಹೈಸ್ಕೂಲು, ಒಂದು ಪುಸ್ತಕವನ್ನು ಒಬ್ಬ ವಿದ್ಯಾರ್ಥಿಯಿಂದ ತೆಗೆದುಕೊಂಡು ಸುಮ್ಮನೆ ಓದಲಾರಂಭಮಾಡಿದೆ. ಆಕರ್ಷಕವಾಗಿತ್ತು. ಮುಂದುವರಿಸಿ ಮುಗಿಸಿದೆ. ಎಲ ಎಲಾ ಇದೇನು ಎಷ್ಟು ಚೆನ್ನಾಗಿದೆ! ರಾಜನ ಪಾತ್ರ, ಮಂಗರಸನಪಾತ್ರ, ರಾಜಕುಮಾರನ ಪಾತ್ರ, ರಾಜಕುಮಾರನ ಅರ್ಧಾಂಗಿಯ ಪಾತ್ರ, ಸಂಭಾಷಣೆಗಳು, ಕಥೆಯನ್ನು ಒಂದು ಕ್ಲೈಮೇಕ್ಸ್ (Climax) ಗೆ ತೆಗೆದುಕೊಂಡು ಹೋಗುವರೀತಿ, ಮುಂದೇನು ಎಂಬ ಕಾತುರತೆಯನ್ನು ಹುಟ್ಟಿಸುವ ಕ್ರಮ, ಭಾಷಾ ಗೌರವ ಇತ್ಯಾದಿಗಳನ್ನು ನೋಡಿ ಚಕಿತನಾದೆ. ಈತ ನನ್ನ ಶಿಷ್ಯ, ಎಲ್ಲಿಂದ ಬಂತು ಇಷ್ಟುಶಕ್ತಿ ಇವನಿಗೆ ಎಂದು ಜೊಂಜೆ. ನಾನು Hudson's Introduction to Literature ಎಂಬ ಪುಸ್ತಕವನ್ನು ಓದಿ ಕಾದಂಬರಿಯ ಸ್ವರೂಪವೇನೆಂದು ತಿಳಿದುಕೊಂಡಿದ್ದೆ. ಇಂಗ್ಲಿಷ್ ಕಾದಂಬರಿಗಳನ್ನು ಓದಿದ್ದೆ, ಗಳಗನಾಥರ, ವೆಂಕಟಾಚಾರ್ಯರ ಕಾದಂಬರಿಗಳನ್ನೂ ಸಹ ಕಾದಂಬರಿ ಹೀಗಿರಬೇಕು ಎಂದು ಮನಸ್ಸಿಗೆ ಅರಿವಾಗಿತ್ತು. ಚರಿತ್ರೆಯೆನ್ನುವ ಈ ಕಾದಂಬರಿ (ನೃಪತುಂಗ) ಹಾಗಿದೆಯೆಲ್ಲ, ಭೇಷ್ ಎಂದೆ.

ಅ.ನ.ಕೃ. ರವರ ಪ್ರಸಿದ್ಧವಾದ ಸಂಧ್ಯಾರಾಗದಲ್ಲಿ ಸಂಗೀತದ ವಿಚಾರ ತುಂಬಿದೆ. ತ.ರಾ.ಸು. ರವರ ಹಂಸಗೀತೆಯೂ ಹಾಗೆಯೇ ಚೆನ್ನಾಗಿದೆ, ಎಂದು ಕಿವಿಗೆ ಬಿತ್ತು. ಸಂಧ್ಯಾರಾಗವನ್ನು ಓದಿದ್ದೆ, ಮೆಚ್ಚಿದ್ದೆ. ಹಂಸಗೀತೆಯನ್ನು ಓದೋಣ ಎಂದು ಆ ಪುಸ್ತಕವನ್ನು ಸಂಪಾದಿಸಿದೆ. ನಾನೂ ಸಂಗೀತವನ್ನು ಬಲ್ಲವ. ಏನಿದೆ ಇದರಲ್ಲಿ ನೋಡಿಬಿಡೋಣ ಎಂದು ಆರಂಭಿಸಿದೆ. ಕಥೆ ನಡೆದದ್ದು ಚಿತ್ರದುರ್ಗ. ವೆಂಕಟಸುಬ್ಬಯ್ಯ ಹೇಗೆ ಸಂಗೀತ ಕಲಿತು ಅದನ್ನು ಪರಮಾತ್ಮನಿಗೆ ಮೀಸಲಾಗಿಟ್ಟ, ಅತನ ಪ್ರತಿಭೆ ಭೈರವಿ ರಾಗದಲ್ಲಿ ಹೇಗೆ ಓಡುತ್ತಿತ್ತು, ಸಂಗೀತ ಎಂಬುದು ಇತರರನ್ನು ಮೆಚ್ಚಿಸುವುದಕ್ಕಾಗಿ ಇದೆ ಎಂಬುದು ಸರಿ, (Social art) ಆದರೆ ಮುಖ್ಯವಾಗಿ ಅದು ಪರಮಾತ್ಮನನ್ನು ಭಜಿಸುವುದಕ್ಕಾಗಿ ಎಂಬುದನ್ನೆಲ್ಲಾ ಹೃದಯಂಗಮವಾಗಿ ಚಿತ್ರಿಸಿ, ಗಾಯಕನ ಪಾತ್ರವನ್ನು ಅಚ್ಚುಮೆಚ್ಚಾಗಿ ಮಾಡಿದ್ದಾರೆ. ಹಂಸಗೀತೆ ಎಂಬ ಚಿತ್ರದಲ್ಲಿ ಡಾ. ಬಾಲಮುರಳಿಯವರು ಆ ರಾಗವನ್ನು ಅದ್ಭುತವಾಗಿ ಹಾಡಿ ವೆಂಕಟಸುಬ್ಬಯ್ಯನನ್ನು ಮರೆಯದಂತೆ ಮಾಡಿದ್ದಾರೆ. ಹಾಗೆಯೇ ವೆಂಕಟಸುಬ್ಬಯ್ಯನ ಜೊತೆಯಲ್ಲಿ ಚಿಕ್ಕವಯಸ್ಸಿನಲ್ಲಿ ಸಂಗೀತ ಕಲಿತ ವೇಶ್ಯೆಯ ಪಾತ್ರವನ್ನು ಚಿತ್ರಿಸುವುದರಲ್ಲಿ, ಅವಳಿಗೆ ವೆಂಕಟಸುಬ್ಬಯ್ಯನ ಮೇಲಿದ್ದ ಪ್ರೀತಿಭಕ್ತಿಗಳನ್ನು ತೋರಿ, ಅವಳ ರೀತಿ ನೀತಿಗಳನ್ನು ಒಪ್ಪುವಂತೆ ಮಾಡಿದ್ದಾರೆ. ಇನ್ನೂ ಮುಂದುವರಿದು ಹೇಳುವುದಾದರೆ, ಚಿತ್ರದುರ್ಗದ ನಾಯಕರ ವಿಚಾರವಾಗಿ ಬರೆದಿರುವ ರಕ್ತರಾತ್ರಿ, ವಿಜಯೋತ್ಸವ ಮುಂತಾದ ಕಾದಂಬರಿಗಳು ವೀರರಸವನ್ನು ಕೆರಳಿಸುತ್ತವೆ. ಉತ್ಸಾಹ

ವನ್ನು ಪ್ರೋಷಿಸಿ ರೋಮಾಂಚಕಾರಿಯಾಗಿವೆ: ಕಾದಂಬರಿ ಬರಿಯುವುದಕ್ಕೂ ಒಂದು ಒಳಗಿನ ಶಕ್ತಿ ಪ್ರಚೋದಿಸುತ್ತಿರಬೇಕು, ಯಾರು ಬೇಕಾದರೂ ಬರಿಯಬಹುದೆಂದು ತೋರಬಹುದು, ಆದರೆ ಅಷ್ಟು ಸುಲಭವಲ್ಲ ಅದು.

ಇಷ್ಟೆಲ್ಲಾ ಓದಿದಮೇಲೆ ನನ್ನ ಶಿಷ್ಯ ಸುಬ್ಬರಾಯರನ್ನು ನೋಡಿ ಅವರ ಜೊತೆಯಲ್ಲಿ ಮಾತಾಡಿ, ಕಾದಂಬರಿ ಹೇಗೆ ಬರೆಯೋದು ಎಂದು ಕೇಳಬೇಕೆಂದು ಮನಸ್ಸಾಯಿತು, ನಾನು ನಿವೃತ್ತನಾಗಿ ಮೈಸೂರಿನಲ್ಲಿ ಒಂಟಿಕೊಪ್ಪಲಿನಲ್ಲಿದ್ದೆ, ಸುಬ್ಬರಾಯರು ಹತ್ತಿರದಲ್ಲಿ ಯಾದವ–ಗಿರಿಯಲ್ಲಿದ್ದರು. ಒಂದು ದಿವಸ ಅವರ ಮನೆಗೆ ಹೋಗಿ ಈ ಪ್ರಶ್ನೆ ಕೇಳಿದೆ. ಅವರ ಉತ್ತರ ನೋಡಿ, ಕೆಲವು ಕಾದಂಬರಿಗಳನ್ನು ಮನಸ್ಸಿನಲ್ಲಿ ನಿಯೋಜಿಸಿ ಅದರ ಸಾಮಗ್ರಿ ಹೀಗೆ, ಪಾತ್ರರಚನೆ ಹೀಗೆ, ಸಂಯೋಜನೆ ಹೀಗೆ, ಸಮಗ್ರ ಭಾವ ಹೀಗೆ ಎಂದು ಬರೆಯುವ ರೀತಿಯೊಂದು, ಇದು ಹೇಳುವಷ್ಟು ಸುಲಭವಲ್ಲ. ಸಿದ್ಧ ಹಸ್ತರಿಗೆ ಸುಲಭವೇನೊ. ಆದರೆ ಚರಿತ್ರೆಗೆ ಸಂಬಂಧಪಟ್ಟ ಕಾದಂಬರಿಗಳಿಗೆ ಸಾಮಗ್ರಿ ಸಂಗ್ರಹಿಸಿ ಅನಂತರ ಅದರ ರೂಪ ರೇಖೆಗಳು ಹೀಗೆ ಹೀಗಿರಬೇಕೆಂದು ತೀರ್ಮಾನಿಸಿ ಬರೆಯುವುದು ಅಷ್ಟು ಸುಲಭವಲ್ಲ, ಅದಕ್ಕೆ ಲೈಬ್ರರಿ ವರ್ಕ್ ಬಹಳ ಮಾಡಬೇಕೆಂದು ಈ ವಿಚಾರದಲ್ಲಿ ಮೈಸೂರು ಯೂನಿವರ್ಸಿಟಿ ಪ್ರೊಫೆಸರ್ ನೀಲಕಂಠ ಶಾಸ್ತ್ರಿಗಳ ಸಲಹೆ ತ.ರಾ.ಸು. ಗೆ ಸಿಕ್ಕಿದೆ ಎಂಬ ಜ್ಞಾಪಕ ನನಗೆ. ಕಾರಣ ಇಷ್ಟು. ಚರಿತ್ರೆ ಪ್ರೊಫೆಸರಿಗೆ ಚಾರಿತ್ರಿಕ ವಿಷಯಗಳು ಎಲ್ಲೆಲ್ಲಿ ಸಿಕ್ಕುತ್ತವೆಂದು ಗೊತ್ತು. ಒಟ್ಟಿನಲ್ಲಿ ಕಥೆ ಸತ್ಯಕ್ಕೆ ದೂರವಾಗಿರಬಾರದು, ಕಾಲದ ನೀತಿ ರೀತಿಗಳಿಗೂ ದೂರವಾಗಿರಬಾರದು. ಕಥಾನಾಯಕ ಜನರ ಮೆಚ್ಚುಗೆಯನ್ನು ಪಡೆಯುವಂತಿರಬೇಕು. ಕಥೆ ಮೇಲ್ಮಟ್ಟದ್ದಾಗಿರಬೇಕು. ಕರಣಗಳನ್ನು ಶುದ್ಧಿಮಾಡಬೇಕು. ಮುಖ್ಯವಾಗಿ ಸಾಹಿತ್ಯದ ಗುರಿಯಿಷ್ಟೇ. ಸದ್ಗುಣಗಳನ್ನು ಬೆಳಸಬೇಕು. ಭಾಷೆಯ ಸೊಗಸನ್ನು ತೋರಿಸಬೇಕು, ಆನಂದವನ್ನುಂಟುಮಾಡಬೇಕು, ರಸಯುತವಾಗಿರಬೇಕು, ತತ್ಕಾರಣ ಸಾಮಗ್ರಿಯನ್ನು ಆರಿಸಿಕೊಳ್ಳುವಾಗ ಕಥೆಯನ್ನು ನಿಯೋಜಿಸುವಾಗ ವಿವೇಕವನ್ನು ಉಪಯೋಗಿಸಬೇಕು.

ಈಚೆಗೆ ಸುಬ್ಬರಾಯರನ್ನು ನೋಡಿದ್ದೆ. ಅವರ ಮನಸ್ಸು ಉಪನಿಷತ್ತುಗಳ ಕಡೆ ವಾಲಿದೆ. ಅವು ವೇದದ ಅಂತವೇ ಅಲ್ಲವೆ? ಅವು ಜೀವನವನ್ನು ಸಾರ್ಥಕಮಾಡಿಕೊಳ್ಳುವ ರಹಸ್ಯಗಳನ್ನು ತಿಳಿಸುತ್ತವೆ. ಪರಮ ಪವಿತ್ರವಾದುವು. ಅವುಗಳಲ್ಲಿನ ಕಥೆಗಳನ್ನು ಕಾದಂಬರಿಗಳಾಗಿಸುವ ಧ್ಯೇಯ ಅವರದು. ಬಹಳ ಒಪ್ಪಿಗೆಯಾದ ಧ್ಯೇಯ, ಅವರದು. ನಚಿಕೇತನ ಕಥೆಯನ್ನು ಕಾದಂಬರಿಯಾಗಿ ಮಾಡಿದ್ದಾರೆ. ಈ ತರಹ ಕಾದಂಬರಿಗಳು ನವ್ಯವೇ. ಅವರ ಮನಸ್ಸಿಗೂ ನಮ್ಮ ಮನಸ್ಸಿಗೂ ಹಿತ, ಅವರಂತಹವರಿಗೆ ಸಾಮಗ್ರಿ ಯಾವುದಾದರೂ ಸರಿ ಕಲಾ ನೈಪುಣ್ಯವಿರುವುದರಿಂದ ಕಾದಂಬರಿಯು ಒಳ್ಳೆಯ ರೂಪವನ್ನೇ ತಾಳುತ್ತದೆ.

ಇನ್ನೊಂದು ವಿಷಯ, ಕೆಲವರು ಬರವಣಿಗೆಯಲ್ಲಿ ಚತುರರು. ಮಾತಾಡಲು ನಿಂತರೆ ಮಾತೇ ಹೊರಡುವುದಿಲ್ಲ. ಸುಬ್ಬರಾಯರು ಹಾಗಲ್ಲ ವೇದಿಕೆಯಮೇಲೆ ನಿಂತು

ಮಾತಾಡಲಾರಂಭಿಸಿದರೆ ನಾಕ್‌ರುಸ್ಸಿ. ಅಭಿಪ್ರಾಯಗಳ ಸೊಗಸು, ಸರಣಿಗಳು, ತಲೆತೂಗುವಂತಿರುತ್ತವೆ. ಕೆಲವು ಉಪನ್ಯಾಸಗಳನ್ನು ನಾನು ಕೇಳಿದ್ದೇನೆ. ಇವರು ಬರೆಯುವವರು ಮಾತ್ರವಲ್ಲ, ಆಡುವ ಮಾತನ್ನೂ ಸಹ (The spoken word) ವಾಗ್ಮಿಯಂತೆಯೂ, ವಾದಿಯಂತೆಯೂ ಉಪಯೋಗಿಸುತ್ತಾರೆ. ನಾನು ಮೇಷ್ಟ್ರು; ಮಾತಾಡಲು ಸ್ವಲ್ಪ ಕಲಿತಿದ್ದೇನೆ, ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಕೆಲವು ಜೀವನ ಚರಿತ್ರೆಗಳನ್ನೂ, ಗಮಕ ಪುಸ್ತಕಗಳನ್ನೂ, ಪ್ರಬಂಧಗಳನ್ನೂ ಬರೆದಿದ್ದೇನೆ. ನನಗೊಂದು ಆಶ್ಚರ್ಯ; ಬರೆಯುವ ಮಾತಾಗಲಿ, ಆಡುವ ಮಾತಾಗಲಿ ಸುಬ್ಬರಾಯರಲ್ಲಿ ಪರಿಣಾಮವುಳ್ಳದ್ದಾಗಿ (The spoken and the written word) ಹೊರಬೀಳುತ್ತವೆ ಎಂದು "ಶಿಷ್ಯಾದಿಚ್ಛೇತ್‌ಪರಾಜಯಂ" ಎಂದು ಹೇಳಿದರೆ ಸಾಕು.

ಕಡೆಯದಾಗಿ ಹೇಳುವುದಿಷ್ಟು. ಬರೆವಣಿಗೆ ಒಂದು ಕಲೆ, ಕವಿತೆ ಕಟ್ಟುವಂತೆ-ಸಂಗೀತದಂತೆ, ಅದು ಪರಮಾತ್ಮನ ಕೃಪೆಯಿಂದ ಆಗತಕ್ಕದ್ದು. ಅದಕ್ಕೆ ಶ್ರಮಪ್ಪಾ ಪಡಬೇಕು ಹಾಗೂ ಅದು ಪೂರ್ವಜನ್ಮದ ಪುಣ್ಯವೇನೊ, ಸುಬ್ಬರಾಯರಲ್ಲಿ ಪ್ರತಿಭೆಯಿದೆ, ವಾಕ್‌ಪಟುವಾಗಿದೆ. ಕನ್ನಡತಾಯಿಯ ಸೇವೆಯನ್ನು ಮಾಡುವ ಉತ್ಕಟೇಚ್ಛೆಯಿಂದ ಜಗದ್ರಕ್ಷಕನು ಅವರಿಗೆ ಸರ್ವ ಅನುಕೂಲಗಳನ್ನೂ ಕೊಟ್ಟು ಆಯುರಾರೋಗ್ಯಗಳನ್ನು ಕೊಟ್ಟು ಅವರಿಂದ ಇನ್ನೂ ಬಹುಕಾಲ ಕನ್ನಡವನ್ನು ಬೆಳಗಿಸಲಿ.

* ರಾಜಕೀಯ ರಂಗ ಹೆಚ್ಚಾಗಿ ಮಾತುಗಾರರ ಮನೆ. ಆ ಸುಳಿಗೆ ಸಿಲುಕಿದವರೆಲ್ಲರಿಗೂ ವಾಕ್‌ಪಾರುಷ್ಯದ ಸೋಂಕು ತಗಲಿಯೇ ತಗಲುತ್ತದೆ. ಹಾಗೋ ಹೀಗೋ ಈ ಮಾತು ಸರಿಯೋ ಅಲ್ಲವೋ ಇದರ ತೂಕ ಹೆಚ್ಚೋ ಕಡಿಮೆಯೋ ಈ ಬೇಜವಾರತನವೇ ಬರೀ ಧ್ವನಿಗಳ, ವಾದಗಳ ಪ್ರತಿಬಿಂಬ ಕೋಟೆಯಲ್ಲಿ ಗೆದ್ದುಬರುವ ಗಂಡುಗಳೇ ಕಡಿಮೆ. ಮಾತಿನ ಬಿಸಿಯಲ್ಲಿ ಮೈಮರೆತು, ಕರ್ತವ್ಯವನ್ನೇ ಮರೆಯುವವರೂ ಇದ್ದಾರೆ. ಇದು ತಮಗೆ ಸಂಬಂಧಿಸಿದುದಲ್ಲ ಎನ್ನುವ ನಿರ್ಲಿಪ್ತರೇ ಅಪರೂಪ.

(ರೇಖಾಚಿತ್ರಗಳು)

ಆತ್ಮೀಯ

— 'ತಿರುಕ', ಮಲ್ಲಾಡಿಹಳ್ಳಿ

ಗುಬ್ಬಿ ವೀರಣ್ಣನವರು ಒಮ್ಮೆ ಬಳ್ಳಾರಿಯಲ್ಲಿ ನಮ್ಮ ಆಶ್ರಮಕ್ಕಾಗಿ ಸಹಾಯಾರ್ಥ ನಾಟಕ ಒಂದನ್ನು ಏರ್ಪಡಿಸಿದ್ದರು. ಶ್ರೀ ತ. ರಾ. ಸುಬ್ಬರಾಯರ ಭೇಟಿ ನನಗಾದುದೂ ಅಲ್ಲಿಯೇ, ಮಾತಿನ ಲಹರಿಯಲ್ಲಿ, ತ.ರಾ.ಸು. ರವರೊಡನೆ ಆತ್ಮೀಯತೆಯಿಂದ ಕುಶಲ ಪ್ರಶ್ನೆ ಮಾಡುತ್ತಾ—

"ತಮಗೆಷ್ಟು ಮಕ್ಕಳು ?"—ಎಂದು ಕೇಳಿದೆ.

"ಸ್ವಾಮೀಜಿ, ಆ ಭಾಗದಲ್ಲಿ ನಾನು ನಿರ್ಭಾಗ್ಯ, ನನಗಿನ್ನೂ ಸಂತಾನ ಸಂಪತ್ತು ಲಭ್ಯವಾಗಿಲ್ಲ. ಆ ನಿಟ್ಟಿನಲ್ಲಿ ನನಗೆ ತಮ್ಮ ಕೃಪಾಶೀರ್ವಾದ ಬೇಕು." —ಎಂದ ತ.ರಾ.ಸು. ರವರು ಅಲ್ಲಿಯೇ ಇದ್ದ ತಮ್ಮ ಪತ್ನಿಯನ್ನು ಕುರಿತು–"ಅಂಬಾ,–ಬಾ.... ಸ್ವಾಮೀಜಿಯವರಿಗೆ ನಮಸ್ಕರಿಸು"—ಎಂದರು.

ಆಕೆಯು ನಮಸ್ಕರಿಸಿ ಮೇಲೆದ್ದೊಡನೆಯೇ, ನಾನು ಮುಗುಳ್ನಗೆಯೊಂದಿಗೆ ಹೇಳಿದೆ—

"ನೀವಾಗಲೇ ಮುದುಕರೆಂದುಕೊಂಡಿದ್ದೀರೇನು ? ಚಿಂತಿಸಬೇಡಿ. ಶ್ರೀ ಗುರುವಿನ ಹರಕೆ ತಮ್ಮಮೇಲಿದೆ, ಶೀಘ್ರದಲ್ಲೇ ಸಂತಾನ ಭಾಗ್ಯ ಲಭ್ಯವಾದೀತು."

ಇದಾದ ಕೆಲವು ದಿನಗಳ ನಂತರ, ಶ್ರೀಯುತರು ಆಶ್ರಮದ ಉತ್ಸವ ವೊಂದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲು ದಯಮಾಡಿಸಿದರು. ಬಂದವರೇ ನನ್ನ ಬಳಿ ಬಂದು ಆತ್ಮೀಯತೆಯಿಂದ ನನ್ನ ಕೈಗಳನ್ನು ಹಿಡಿದು ಅತ್ಯುತ್ಸಾಹದಿಂದ—

"ಸ್ವಾಮೀಜೀ, ತಮ್ಮ ಕೃಪೆ ಫಲಿಸಿತು. ಈಗ ಅಂಬಾ ಆರು ತಿಂಗಳ ಗರ್ಭಿಣಿ" ಎಂದು ಹೇಳಿದರು.

ಒಮ್ಮೆ ನಾನು ಮೈಸೂರಿಗೆ ಶ್ರೀ ಗುರುಭಿಕ್ಷೆಗೆ ಹೋದ ಸಂದರ್ಭದಲ್ಲಿ, ತ.ರಾ.ಸು. ರವರನ್ನು ಜ್ಞಾಪಿಸಿಕೊಂಡು ಅವರ ಮನೆಗೇ ಹೋದೆ. ಕಾರ್ಯನಿಮಿತ್ತವಾಗಿ ತ.ರಾ.ಸು. ರವರು ಎಲ್ಲಿಗೋ ಹೋಗಿದ್ದರು. ಅವರ ಧರ್ಮಪತ್ನಿ ಶ್ರೀಮತಿ ಅಂಬುಜಮ್ಮನವರು ನನ್ನನ್ನು ತುಂಬಾ ಆದರದಿಂದ ಸ್ವಾಗತಿಸಿ – ತಮ್ಮ ಮುದ್ದು ಕುವರನನ್ನು ನನ್ನ ಕಾಲುಗಳ ಮೇಲೆ ಹಾಕಿ,

"ಗುರುದೇವಾ, ಇದು ನಿಮ್ಮ ಕೃಪಾಶೀರ್ವಾದದ ಫಲ. ಈ ಕಂದ ನಿಮ್ಮದು. ಇದನ್ನು ಹರಸಬೇಕು."

— ಎಂದಾಗ ನನಗಾದ ಸಂತಸ ಅಷ್ಟಿಷ್ಟಲ್ಲ.

ತ.ರಾ.ಸು. ರವರು ನನಗೆ ಆತ್ಮೀಯರು. ಅವರು ಚಿತ್ರದುರ್ಗ ಜಿಲ್ಲೆಯವರು. ಸಹಜವಾಗಿಯೇ ಅವರಲ್ಲಿ ಆ ಜಿಲ್ಲೆಯ ಬಗ್ಗೆ ಪೂರ್ಣ ಅಭಿಮಾನ. ಅವರಲ್ಲಿಯೂ

ಚಿತ್ರದುರ್ಗದ ಇತಿಹಾಸವೆಂದರೆ, ಅವರಿಗೆ ಎಲ್ಲಿಲ್ಲದ ಅಕ್ಕರೆ. "ಕಂಬನಿಯ ಕುಯಿಲು"ನಿಂದ "ವಿಜಯೋತ್ಸವ"ದವರೆಗಿನ ಅವರ ಐತಿಹಾಸಿಕ ಕಾದಂಬರಿ–ಗಳನ್ನೋದದ ಕನ್ನಡಿಗರಿಲ್ಲ. 'ಇತಿಹಾಸವೆಂದರೆ ಬರದು ಕಗ್ಗವಲ್ಲ; ಅದೊಂದು ಜೀವಂತ ರಸಮಯ ಚಿಲುಮೆ – ಎಂಬುದು ಕನ್ನಡಿಗರಿಗೆ ಅರ್ಥವಾದುದು ಈ ಕಾದಂಬರಿಗಳಿಂದಲೇ, "ನೃಪತುಂಗ" "ಸಿಡಿಲಮೊಗ್ಗು" – ಮೊದಲಾದ ಐತಿಹಾಸಿಕ ಕಾದಂಬರಿಗಳೂ ಹಾಗೆಯೇ ಜನಪ್ರಿಯವಾದವು. "ಹಂಸಗೀತೆ" ಮತ್ತು "ಚಂದವಳ್ಳಿಯ ತೋಟ"ದಲ್ಲಿ ಅವರು ಬಳಸಿರುವ ತಂತ್ರ ಅಸಾಧಾರಣವಾದುದು. ಅನ್ಯಭಾಷೆಯವರೂ ಮೆಚ್ಚಿ 'ಹಂಸಗೀತೆ' ಕಾದಂಬರಿಯನ್ನು ಚಲಚಿತ್ರವಾಗಿಸಿರುವ ವಿಷಯ ಕನ್ನಡಿಗರಿಗೆ ಹೆಮ್ಮೆ ತರುವಂತಹುದು.

ಅ.ನ.ಕೃ.ರವರ ಗರಡಿಯಲ್ಲಿ ಪಳಗಿದ ತ.ರಾ.ಸು.ರವರು "ಮಸಣದ ಹೂವು" ಕಾದಂಬರಿಯನ್ನು ರಚಿಸಿ ಗುರುವಿಗೇ ತಿರುಮಂತ್ರವನ್ನು ಹೇಳಿದರು. ವಿವಿಧ ಮುಖಗಳ ಸಮಾಜ ಚಿತ್ರಣವನ್ನು ಬಿಂಬಿಸುವ ಶ್ರೀಯುತರ "ನಾಗರ ಹಾವು" "ಎರಡು ಹೆಣ್ಣು–ಒಂದು ಗಂಡು", "ಸರ್ಪಮತ್ಸರ" "ಕಾರ್ಕೋಟಕ" "ಸಾಕು ಮಗಳು", "ಆಕಸ್ಮಿಕ", "ಅಪರಾಧಿ", "ಪರಿಣಾಮ", "ಮರಳು ಸೇತುವೆ", ಮುಂತಾದ ಕಾದಂಬರಿಗಳು ಓದುಗರನ್ನು ಮುಗ್ಧರನ್ನಾಗಿಸುತ್ತವೆ.

ತ.ರಾ.ಸು. ರವರ ಕೃತಿಗಳ ಬಗ್ಗೆ ಒಂದು ಮಾತು ಹೇಳದೆ ಇರಲಾಗುವುದಿಲ್ಲ. ಇವರ ಭಾಷೆಯ ಮೋಡಿ ಎಂತಹವರನ್ನೂ ಚಕಿತರನ್ನಾಗಿಸುತ್ತದೆ. ಭಾಷೆ ಹಾಗೂ ಶೈಲಿಯ "ತನ್ನ ತನ" ವನ್ನುಳಿಸಿಕೊಂಡಿರುವ ಕೆಲವೇ ಬರಹಗಾರರಲ್ಲಿ ಇವ–ರೊಬ್ಬರು. ಯಾರು ಹೇಳಿದರೂ ಹೀಗೆಯೇ ಹೇಳಬೇಕೆಂಬ ವಿಷಯವನ್ನು ತ.ರಾ.ಸು. ರವರು ತಮ್ಮದೇ ಶೈಲಿಯಲ್ಲಿ ಹೇಳುತ್ತಾರೆ. ವಿಷಯ ಅಲ್ಪವಾದರೂ ಭಾಷೆಯ ಕಟ್ಟಡದಲ್ಲಿ ಅದನ್ನೂ ಭವ್ಯವಾಗಿಸುವ ಕಲೆ ಅವರದು. ಸಾವಿರಾರು ಗ್ರಂಥಗಳನ್ನು ಅರೆಗಿಸಿಕೊಂಡಿರುವ ಅಧ್ಯಯನ ಶೀಲರವರು. ಹಾಗೆಯೇ ನೂರಾರು ಸಾರ್ಥಕ ಗ್ರಂಥಗಳನ್ನು ರಚಿಸಿರುವ ಸಾಮರ್ಥ್ಯ ಅವರದು. ದಿ॥ ಟಿ. ಎಸ್. ವೆಂಕಣ್ಣಯ್ಯನವರ ವಂಶಸ್ಥರಾದ ಅವರಲ್ಲಿ ಇಂತಹ ಗುಣಗಳಿರುವುದು ಪವಾಡವೇನೂ ಅಲ್ಲ.

ತ.ರಾ.ಸು.ರವರು ಕನ್ನಡ ಜನತೆಗೊಂದು ಹೆಮ್ಮೆ. ಅಂತಹ ಅಪೂರ್ವ ಜೀವನಗಳು ಚಿರಕಾಲ ಬದುಕಲಿ. ಅವರು ಬದುಕಿದಷ್ಟೂ ಜನತೆ ಬದುಕುತ್ತದೆ. ಲೋಕವನ್ನು ಉಜ್ಜೀವಿಸಬಲ್ಲ ಅಂತಹ ಒಂದು ವ್ಯಕ್ತಿಯಿದ್ದರೆ ಬಾಳು ಹಸನಾದೀತು – ಚಿರ ನೂತನವಾದೀತು.

ಶ್ರೀ ಗುರುವು ಅವರಿಗೆ ಸಕಲ ಮಂಗಳವನ್ನೂ ಉಂಟು ಮಾಡಲಿ ಎಂದು ಹಾರೈಸುತ್ತೇನೆ.

ಕನ್ನಡದ ಅಮೂಲ್ಯ ನಿಧಿ

— ವಿಜಯ ನಾರಸಿಂಹ

ಯಾರ ಸಾಹಿತ್ಯ ಕೃತಿಯನ್ನು ಅವಲೋಕಿಸಿದರೆ ಚಿತ್ತ ವೃತ್ತಿಯಲ್ಲಿ ಹೊಸ ಸಂಸ್ಕಾರದ ಪರಿಷ್ಕಾರವಾಗಿ ದಿವ್ಯಚೈತನ್ಯ ವಿಜೃಂಭಿಸುವುದೋ, ಯಾರಸಾಹಿತ್ಯ ಕೃತಿಯಿಂದ ಕ್ರಿಯಾಶಾಲಿ ವಾಚಕನ ಮನಸ್ಸಿನಲ್ಲಿ ಕೋಲಾಹಲವೆದ್ದು, ಸ್ಫೂರ್ತಿಯ ಚಿಲುಮೆ ಪುಟಿದು ರಸಗಂಗಾ ಪ್ರವಾಹವಾಗಿ ಅಸಾಮಾನ್ಯ ಕಾರ್ಯವನ್ನು ಕೈಗೊಳ್ಳಲು ಪ್ರಚೋದಿಸುವುದೋ ; ಯಾರ ಸಾಹಿತ್ಯ "ಸತ್ಯಂ ಶಿವಂ ಸುಂದರಂ" ಎಂಬ ಸಾಹಿತ್ಯ ಧರ್ಮಕ್ಕೆ ನಿಷ್ಠವಾದ ಭದ್ರ ಬುನಾದಿಯ ಮೇಲೆ ನಿಂತಿದೆಯೋ ; ಅಂಥ ಸಾಹಿತಿಗೆ ಸಾಷ್ಟಾಂಗವಂದನೆ.

ತ.ರಾ.ಸು. ಅಂಥ ಸಾಹಿತ್ಯ ರತ್ನವೇ ಇಂಥ ಸಾಷ್ಟಾಂಗ ವಂದನೆಗೆ ಅರ್ಹರು.

ಕಳೆದ ದಶಕಗಳಲ್ಲಿ ಕನ್ನಡ ಸಾರಸ್ವತಲೋಕಕ್ಕೆ ಹಲವಾರು ಕಾದಂಬರಿಗಳನ್ನಿತ್ತ ನಾನು, ತ.ರಾ.ಸು. ಅವರಿಗೆ ಕಾದಂಬರಿಕಾರನಾಗಿ ಮೊದಲ ನಮನ ಸಲ್ಲಿಸುತ್ತೇನೆ.

ಇಂದು ಚಿತ್ರರಂಗದಲ್ಲಿ ಅನೇಕ ಚಲಚಿತ್ರಗಳಿಗೆ ಸಾಹಿತ್ಯ ನೀಡುತ್ತಿರುವನಾನು ತ.ರಾ.ಸು. ಅವರಲ್ಲಿರುವ ಸಾಹಿತ್ಯ ಶಾರದಾ ಸನ್ನಿಧಿಗೆ ಭಕ್ತಿ ಪುರಸ್ಸರವಾಗಿ ಮತ್ತೊಮ್ಮೆ ವಂದಿಸುತ್ತೇನೆ.

ನಾಕಂಡಂತೆ ತ.ರಾ.ಸು. ನನ್ನ ಚಿಕ್ಕಂದಿನಿಂದಲೂ ಕನ್ನಡ ಸಾಹಿತ್ಯ ಪ್ರಪಂಚದ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಶ್ರದ್ಧಾವಂತ ಲೇಖಕ ನಾಯಕ.

ಕಳೆದೆರಡು ದಶಕದ ಹಿಂದೆ ಕಾದಂಬರಿಯೊಂದನ್ನು ಬರೆದು ಅದನ್ನು ತ.ರಾ.ಸು. ಅವರ ಆಶೀರ್ವಾದಕ್ಕಾಗಿ ನಾನು ಕೊಂಡೊಯ್ದೆ, ಅವರು ಅದೇ ತಾನೆ ಮೈಸೂರಿನಲ್ಲಿ ಪದಾರ್ಪಣ ಮಾಡಿದ್ದರು. ಮುಂಜಾವಿಂದ – ಮುಂಜಾವಿಗೆ ಒಂದು ಕಾದಂಬರಿಯನ್ನು ಸರ್ವಾಂಗ ಸುಂದರವಾಗಿ ಬರೆಯುವಷ್ಟು ತೀವ್ರವಾಗಿತ್ತು ಅವರ ಕರ್ತೃತ್ವ ಶಕ್ತಿ ಆ ದಿನಗಳಲ್ಲಿ. ಅವರ ಕಾದಂಬರಿಗಳಿಗೆ ಅಪಾರ ಬೇಡಿಕೆ ಇದ್ದ ಆ ದಿನಗಳಲ್ಲಿ ಅವರಿಗೆ ವಿಶ್ರಾಂತಿ ಎಲ್ಲಿ ? ಬೇರೆಯವರ ಕಾದಂಬರಿಯನ್ನು ಓದುವಷ್ಟು ವ್ಯವಧಾನವೆಲ್ಲಿ ? ಒಂದೆಡೆ ಕುಳಿತು ಏಕಾಗ್ರತೆಯಿಂದ ಇನ್ನೊಂದು ವಿಷಯವನ್ನು ಚಿಂತಿಸುವಷ್ಟು ಸಮಾಧಾನವೆಲ್ಲಿ ? ಅದಕ್ಕಾಗಿ ಅವರು ನನಗೊಂದು ಪತ್ರವನ್ನು ಕೊಟ್ಟು ಪ್ರಕಾಶಕರನ್ನು ನೋಡಲು ಸೂಚಿಸಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಅಂದಿನಿಂದ ಕಾದಂಬರಿಕಾರನಾಗಿ ನಾನವರ ನಿಕಟವರ್ತಿಯಾದೆ– ಮಾನಸಿಕವಾಗಿ.

ಅವರ ಕಾದಂಬರಿಗಳ ನಾನು ಮುಗ್ಧ ಆರಾಧಕನಾದೆ !

**ಅವರ ಸಾಹಿತ್ಯ ನನ್ನನ್ನು ಪುಲಕಿತಗೊಳಿಸಿದೆ! ಚಕಿತ
ಗೊಳಿಸಿದೆ! ಪ್ರಚೋದನಗೊಳಿಸಿದೆ!!**

"ಧೀಯೋ ಯೋನಃ ಪ್ರಚೋದಯಾತ್"

ಚಿತ್ರದುರ್ಗದಿಂದ ಅಂದರೆ ಮದಕರಿನಾಯಕನ ಆ ಮನೆಯಿಂದ ಬಂದ ಈ ಸಾಹಿತ್ಯ ಸಿಂಹಾಸನಾಧೀಶ್ವರನ ಕೈಯಲ್ಲಿ ತನ್ನದೇ ಆದ ಸ್ವಪ್ರಕಾಶದಿಂದ ಜ್ವಲಿಸುವ ಲೇಖನಿ ಮಿಂಚಿತು. ಖಡ್ಗಕ್ಕಿಂತ ಪ್ರಬಲವಾದ ಈ ಅಸ್ತ್ರ ಪ್ರಯೋಗದಿಂದ ತ.ರಾ.ಸು. ಅನೇಕ ವಿಮರ್ಶಕರ, ಕುತರ್ಕಿಗಳ ಖಂಡನೆ ಮಾಡಿದ್ದಾರೆ. ಇವರ ಸಾಹಿತ್ಯದ ಪ್ರಭೆ ಎದುರು ಉದುರಿಬಿದ್ದ ಪತಂಗಗಳ ಸಂಖ್ಯೆ ಅನೇಕ.

ಈ ಕೃಶಾಂಗ - ಧೂಮಪ್ರಿಯ. ತರ್ಜನಿಗೂ ಮಧ್ಯೆ ಬೆರಳಿಗೂ ನಡುವೆ ಸ್ವಯಂ ಚಿಲುಮೆಯೊಂದನ್ನು ಸೃಷ್ಟಿಸಿ 'ದಂ' ಹೊಡೆದು ಚಿಟಿಕೆ ಹಾರಿಸಿದರೆಂದರೆ ಯಾವುದೋ ಭವ್ಯ ಭಾವತರಂಗ ಅವರ ಅಂತರಂಗ ಹೊಕ್ಕಿತೆಂದು ಅರ್ಥ. ಆ ಧೂಮಲೀಲೆ ಸತತವಾಗಿ ಸಾಗುತ್ತಿರುವಾಗ ಆ ಆತ್ಮಯಜ್ಞಕುಂಡದಿಂದ ಭುಗಿಲೇಳುವ ಜ್ವಾಲಾಮಾಲೆ ಚಿತ್ರ ವಿಚಿತ್ರ ಪ್ರಪಂಚವನ್ನು ಸೃಷ್ಟಿಸುತ್ತದೆ. ಆಗ ಅವರಿಗೆ ಅವರೇ ಪುರೋಹಿತ "ಬ್ರಹ್ಮಾರ್ಪಣಂ ಬ್ರಹ್ಮಹವಿಃ" ಎಂದು ಹೇಳಿಕೊಂಡೋ ಏನೋ ಚಿರನೂತನ ಸೃಷ್ಟಿ ಕಾರ್ಯದಲ್ಲಿ ತೊಡಗುವ ಈ ಬರೆಹಗಾರ ಬ್ರಹ್ಮನ ಸ್ವಭಾವದ ತೆರೆಗಳು ಬಲು ವಿಚಿತ್ರ, ವಿಚಾರ ಲಹರಿಯಂತೂ ಮನೋಹರ. ಪತ್ರಕರ್ತನಾಗಿ! ಕರ್ನಾಟಕದಲ್ಲಿ ಕ್ರಾಂತಿ ಪುರುಷನಾಗಿ ಮೈತಾಳಿದ ವಿಶಿಷ್ಟ ವ್ಯಕ್ತಿ ಮೂಲತಃ ತೆಲುಗಿನವರೆಂದರೆ ಅಚ್ಚರಿ, ಮುಲಕನಾಡು ಪಂಗಡಕ್ಕೆ ಸೇರಿದ ಈ ವೀರ ಆಂಧ್ರ ಕೇಸರಿಗೆ ಮನೆಯಲ್ಲಿ ಮಾತನಾಡುವ ಮುಲಕನಾಡು ತೆಲುಗು ಗೊತ್ತಿದೆ. ಆದರೆ ಇವರ ಸಂಪೂರ್ಣ ಒಲವು ಕನ್ನಡಕ್ಕೇ ಮೀಸಲು. ಅಚ್ಚ ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯ ಜ್ವಾಲಾಮುಖಿಯಾಗಿ "ಕಂಬನಿಕುಯಿಲು" "ರಕ್ತ ರಾತ್ರಿ" "ತಿರುಗು ಬಾಣ" ದಂಥ ಅನೇಕ ಕೃತಿಗಳ ಉಜ್ವಲ ಪ್ರಭಾಪುಂಜ ಧೀಮಂತ ಶಕ್ತಿಯಾಗಿ ಕಂಗೊಳಿಸಿದ್ದು ಕನ್ನಡ ಭಾಷೆಯ ಮಹತ್ವ.

ಜೀವನ ವಸಂತ

ರಾಯರು ಏರುಪ್ರಾಯದಲ್ಲಿದ್ದಾಗ ಅವರ ಕಾದಂಬರಿಯೊಂದು ಹಿಂದಿ ತೆರೆಯ ಮೇಲೆ ಕಾಣಿಸಿಕೊಳ್ಳುವ ಸುಯೋಗ ಪ್ರಾಪ್ತವಾಯಿತು.

ಕತೆಯನ್ನು ಹುಡುಕುತ್ತಾ ಹಿಂದಿ ಚಿತ್ರದ ಕಥಾನಾಯಕನೊಬ್ಬ ದಕ್ಷಿಣ ಭಾರತವನ್ನು ಪ್ರದಕ್ಷಿಣೆ ಹಾಕಿ ತನ್ನ ಅಭಿರುಚಿಗೆ ತಕ್ಕ ಸಂಗೀತ ಪ್ರಧಾನವಾದ ಕಥಾವಸ್ತು ಸಿಗದೆ ಕಡೆಗೆ ಕವಿಗಳ ಹಾಗೂ ಸಂಗೀತಗಾರರ ತೌರೂರಾದ ಗಂಧದ ಗುಡಿಗೆ (ಮೈಸೂರಿಗೆ) ಬಂದ,

ಭರತ್ ಭೂಷಣ್ ಎಂಬ ಆ ಹಿಂದಿ ನಾಯಕ ನಟ ಆ ವೇಳೆಗಾಗಲೇ ಪ್ರಪಂಚ ಪ್ರಸಿದ್ಧಿಯ ಪಟ್ಟಕ್ಕೇರಿದ್ದ. ಸಹಭಿರುಚಿಯ ಆ ನಾಯಕನಟ ತ.ರಾ.ಸು. ಅವರನ್ನು ಯೋಗಾಯೋಗದಿಂದ ಭೇಟಿಯಾದ.

ಅತ್ತ ತ.ರಾ.ಸು. ಅವರ "ಹಂಸಗೀತೆ"ಯನ್ನು ಆರಿಸಿಕೊಂಡ ಆ ಕಾದಂಬರಿಯ ಹಿಂದಿ ಅವತರಣಿಯ ಹೆಸರು "ಬಸಂತ್ ಬಹಾರ್".

ರಾಯರ ಜೀವನದ ವಸಂತಋತುವಾದ ಆ ಕಾಲದಲ್ಲಿ "ಹಂಸಗೀತೆ" ಚಿತ್ರೀಕರಣ ನಡೆಯುತ್ತಿತ್ತು. ಮುಂಬಯಿಗೂ, ಬೆಂಗಳೂರಿಗೂ, ಮೈಸೂರಿಗೂ ರಾಯರ ಓಡಾಟ. ವಿಮಾನ ಪ್ರಯಾಣ. ರಂಗುರಂಗಿನ ರಂಗಮಹಲ್‌ನಲ್ಲಿ ನಿವಾಸ. ಅಂತೂ ರಾಜ ಭೋಗಪ್ರಾಪ್ತವಾದದ್ದು ನಿಜ. ಅದೂ ಸ್ವಲ್ಪ ದಿನಗಳು ಮಾತ್ರ. ಮತ್ತೆ ರಾಯರು ಲೇಖನಿಗೆ ವಿರಾಮ ಕೊಡದೆ ನಿದ್ರಾಹಾರಗಳನ್ನು ತೊರೆದು ಶ್ರಮಿಸಿ ಬರೆಯ ಬೇಕಾಯಿತು. ಅದರೂ ಯಾಂತ್ರಿಕವಾಗಿ ಯಾವ ಕಾದಂಬರಿಯನ್ನೂ ಅವರು ಬರೆಯಲಿಲ್ಲ. ಪುಟ ಭರ್ತಿಗಾಗಿ ಹಾಡಿದ್ದನ್ನೇ ಹಾಡುತ್ತಿರಲಿಲ್ಲ.

ಈ ಮಧ್ಯದಲ್ಲೇ ತ.ರಾ.ಸು. ಅವರನ್ನು ತೆಲುಗು ಚಿತ್ರರಂಗದ ಪ್ರಖ್ಯಾತ ವಾಹಿನಿ ಸಂಸ್ಥೆ ಆಹ್ವಾನಿಸಿ ಅಗ್ರವೀಳ್ಯ ನೀಡಿತು.

ತ.ರಾ.ಸು. ಅವರನ್ನು ಆ ಸಂಸ್ಥೆ ಯಥಾ ಯೋಗ್ಯವಾಗಿ ಆದರಿಸಿ ರಾಜ ಮರ್ಯಾದೆ ನೀಡಿತಾದರೂ ಆ ಸಂಸ್ಥೆ ಕನ್ನಡದ ಯಾವ ಚಿತ್ರವನ್ನೂ ಮಾಡಲಿಲ್ಲ.

ದಿ|| ಬಿ. ಆರ್. ಪಂತುಲು ಹಾಗೂ ರಾಯರು

ಕನ್ನಡ ಚಿತ್ರರಂಗದಲ್ಲಿ ಅಭೂತಪೂರ್ವ ಚಿತ್ರ ನಿರ್ಮಾಣ ಸಂಸ್ಥೆ ಪದ್ಮಿನಿ ಪಿಕ್ಚರ್ಸ್‌ನ ಮಾಲೀಕ ಬಿ. ಆರ್. ಪಂತುಲು ಅವರು ನಿರ್ಮಾಪಕರೂ ನಿರ್ದೇಶಕರೂ ಆಗಿದ್ದರು. ಆಗ ಅವರ ಬಳಿ ಸಹ ನಿರ್ದೇಶಕರಾಗಿ ಇಂದಿನ ಸುಪ್ರಸಿದ್ಧ, ಧೀಮಂತ ದಿಗ್ದರ್ಶಕ ಪುಟ್ಟಣ್ಣ ಕೆಲಸ ಮಾಡುತ್ತಿದ್ದರು.

ಅದ್ಧೂರಿಯ ಚಿತ್ರಗಳನ್ನು ನಿರ್ಮಿಸುವುದರಲ್ಲಿ ಸಿದ್ಧ ಹಸ್ತರೆನಿಸಿದ್ದ ಪಂತುಲು ಅವರು ಸಹ ನಿರ್ದೇಶಕ ಪುಟ್ಟಣ್ಣನವರ ಸಲಹೆ ಮೇರೆಗೆ ತ.ರಾ.ಸು. ಅವರ 'ನೃಪತುಂಗ'ವನ್ನು ಚಿತ್ರೀಕರಿಸುವ ಸನ್ನಾಹದಲ್ಲಿ ತೊಡಗಿದರು, ಆದರೆ ಆಗಿನ ಮಾರುಕಟ್ಟೆಯ ದೃಷ್ಟಿಯಿಂದ ಕನ್ನಡದಲ್ಲಿ ಭಾರಿಬಜೆಟ್ಟಿನ ಚಿತ್ರ ತಯಾರಿಕೆಗೆ ನಿರ್ಮಾಪಕರು ಸಿದ್ಧರಿರಲಿಲ್ಲ.

ಆದರೆ ಪಂತುಲು ಅವರು ಶ್ರೀ ತ.ರಾ.ಸು. ಅವರನ್ನು ಕವಿಚಕ್ರವರ್ತಿಯಂತೆಯೇ ಸನ್ಮಾನಿಸಿ ತಮ್ಮ ಸಂಸ್ಥೆಯಲ್ಲಿ ಅವರಿಗೆ ಎಂದೂ ಗೌರವ ಸ್ಥಾನವನ್ನು ನೀಡಿದ್ದರು.

ಕನ್ನಡ ಚಿತ್ರರಂಗದಲ್ಲಿ ತ. ರಾ. ಸು. ಕೃತಿಗಳು

ಕನ್ನಡ ಚಿತ್ರರಂಗ ಹಿಂದಿನ ದಶಕಗಳಲ್ಲಿ ಅಂಬೆಗಾಲಿಡುತ್ತಿತ್ತು. ಆ ದಿಸೆಯಲ್ಲಿ ಕಾದಂಬರಿಗಳನ್ನು ತೆರೆಯ ಮೇಲೆ ತರುವ ಸಾಹಸವನ್ನು ಮಾಡಿದ್ದು ಮೆಚ್ಚತಕ್ಕ ಸಂಗತಿ. ರಾಯರ "ಚಂದವಳ್ಳಿ ತೋಟ" "ಚಕ್ರತೀರ್ಥ"ಗಳು ಆಗ ತೆರೆಕಂಡವು,

"ಚಂದವಳ್ಳಿ ತೋಟ" ಹಾಗೂ "ಚಕ್ರತೀರ್ಥ" ಚಿತ್ರಗಳಲ್ಲಿ ಹೆಚ್ಚು ಜನಪ್ರಿಯವಾದದ್ದು ಚಂದವಳ್ಳಿ ತೋಟ. ನಿರ್ಮಾಪಕ–ನಿರ್ದೇಶಕರ ಶ್ರದ್ಧೆಯಿಂದ ಚಂದವಳ್ಳಿ ತೋಟ ಹೆಚ್ಚು ಜನಮನ್ನಣೆ ಪಡೆಯಿತು. ಜತೆಗೆ ಪೂರಕವಾಗಿ ಉದಯಕುಮಾರ್ ಅಭಿನಯ ಆಚಿತ್ರವನ್ನು ಉನ್ನತ ಮಟ್ಟಕ್ಕೆ ಒಯ್ದಿತು.

"ಮಾರ್ಗದರ್ಶಿ" ಯಾವ ರೀತಿಯಿಂದಲೂ ತೆರೆಯ ಮೇಲೆ ಯಶಸ್ಸನ್ನು ಗಳಿಸದೆ ವಿಫಲವಾಯಿತು.

ಕಾದಂಬರಿಯಲ್ಲಿ ಸಾಹಿತಿ ಸರ್ವತಂತ್ರಸ್ವತಂತ್ರ. ಕಾದಂಬರಿಕಾರನ ಕಲ್ಪನಾಶಕ್ತಿ ಯಾವ ದಿಗಂತವನ್ನಾದರೂ ಮುಟ್ಟಬಹುದು. ಆದರೆ ಕಾದಂಬರಿಯನ್ನು ತೆರೆಗೆ ಅಳವಡಿಸುವಾಗ ನಿರ್ಮಾಪಕನ ಆರ್ಥಿಕ ಪರಿಸ್ಥಿತಿ, ನಿರ್ದೇಶಕನ ಊಹಾಶಕ್ತಿ ಹಾಗೂ ತಾಂತ್ರಿಕ ಯುಕ್ತಾಯುಕ್ತತೆಗಳ ಚೌಕಟ್ಟಿನಲ್ಲಿ ಸೀಮಿತವಾಗುತ್ತದೆ.

ಚಿತ್ರ ಸಾಹಿತಿ ಮೂಲಕ್ಕೆ 'ದ್ರೋಹ' ಮಾಡಬಾರದೆಂಬ ನೆಪದಿಂದ ಕಾದಂಬರಿಯ ಮೂಲದಿಂದ ಸಂಭಾಷಣೆಗಳನ್ನು ವಿಕೃತಗೊಳಿಸುವ ದುಸ್ಸಾಹಸ ಮಾಡಿ ತನ್ನ ಸಂಭಾಷಣೆಗಳನ್ನೂ ಇರುಕಿಸಿ ಅಂದಗೆಡಿಸುತ್ತಾನೆ. ಹೀಗಾಗಿ ಕೆಲವು ಕಾದಂಬರಿಗಳು ಪುಸ್ತಕ ರೂಪದಲ್ಲಿದ್ದರೇನೇ ಲೇಸೆನಿಸುತ್ತದೆ.

ಅಲ್ಲದೆ, ತ.ರಾ.ಸು. ಅವರ ಕಾದಂಬರಿ ಯಾವುದೇ ಆಗಲಿ ಚಿತ್ರರೂಪದಲ್ಲಿ ಬಂದಾಗ ಮೂಲ ಕಾದಂಬರಿಯ ಮುಂದೆ ಚಿತ್ರ ತೀರಾ ಸತ್ವಹೀನವಾಗಿ ಕಳೆ ಬರದಂತೆ ಕಾಣುತ್ತದೆ.

ಆದರೆ, "ನಾಗರ ಹಾವು" ಚಿತ್ರರಂಗದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯಿತು, ತ.ರಾ.ಸು. ಅವರ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ತೆರೆಗೆ ಸಮನ್ವಯವಾಗುವ ಸನ್ನಿವೇಶಗಳನ್ನು ರಸಪೂರ್ಣವಾಗಿ ಚಿತ್ರದ ಇತಿಮಿತಿಗಳಲ್ಲಿ ಹೇಳುವಲ್ಲಿ ನಿರ್ದೇಶಕ ಪುಟ್ಟಣ್ಣ ಖಂಡಿತ ಯಶಸ್ವಿಯಾದರು. ಆದರೆ ಕಾದಂಬರಿಕಾರ ತ.ರಾ.ಸು. ಅವರಿಗೆ ಇದು ಮೆಚ್ಚಿಕೆಯಾಗಲಿಲ್ಲ.

ರಾಯರ ಅಭಿಪ್ರಾಯ ಏನೇ ಇರಲಿ "ನಾಗರ ಹಾವು" ನೂರಕ್ಕೆ ನೂರೂ ಯಶಸ್ವಿ ಚಿತ್ರ.

"ನಾಗರ ಹಾವು" ಕನ್ನಡದಿಂದ ತಮಿಳಿನಲ್ಲಿ "ರಾಜನಾಗಂ" ಎಂದೂ ತೆಲುಗಿನಲ್ಲಿ "ಕೊಡೆನಾಗು" ಎಂತಲೂ ಹಿಂದಿಯಲ್ಲಿ "ಜಹರೀಲಾ ಇನ್‌ಸಾನ್" ಎಂತಲೂ ತೆರೆಕಂಡ ಚಿತ್ರಗಳು. ಈ ಎಲ್ಲ ಅವತರಣಿಕೆಗಳಿಗೂ ಕನ್ನಡ ಚಿತ್ರ "ನಾಗರ ಹಾವು" ಆಧಾರ,

"ಚಂದನದ ಗೊಂಬೆ"

"ಚಂದನದ ಗೊಂಬೆ" ಇತ್ತೀಚೆಗೆ ತೆರೆಕಂಡ ರಾಯರ "ಚಂದನದ ಗೊಂಬೆ" ಕಾದಂಬರಿಯ ಚಲನಚಿತ್ರ ಅಳವಡಿಕೆ.

ಈ ಚಿತ್ರದಲ್ಲೂ ಕಾದಂಬರಿಯ ಸತ್ವಶಾಲಿನಿರೂಪಣೆ ಮೂಡಿಬಂದಿಲ್ಲ. ಸಂಭಾಷಣೆಗಳು ಕಾದಂಬರಿಯಲ್ಲಿಯಂತೆಯೇ ಕೊಂಚ ಕೊಂಚ ಮಾರ್ಪಾಟಾಗಿ ಬಂದಿದ್ದರೂ ಮೂಲದ ಸಹಜತೆಯನ್ನು ಕಳೆದು ಕೊಂಡಿದೆ. ಕಾದಂಬರಿಯನ್ನು ಓದದೆ ಚಿತ್ರವನ್ನು ನೋಡಿದಾಗ "ಪರವಾ ಇಲ್ಲ" ಎನಿಸಬಹುದು.

ಆದರೆ "ಚಂದನದ ಗೊಂಬೆ" ನಿಜಕ್ಕೂ ಯಶಸ್ವಿ ಚಿತ್ರ. ಅಂದ ಮಾತ್ರಕ್ಕೆ ರಾಯರ ಕಲ್ಪನಾ ಶಕ್ತಿಯನ್ನು ಅರ್ಥ ಮಾಡಿ ಕೊಂಡ ನಿರ್ಮಾಣವೆಂದು ಒಪ್ಪಿಕೊಳ್ಳುವಂತೆ ಇಲ್ಲ.

ಈ ಚಿತ್ರ ಇತ್ತೀಚೆಗೆ ಬಿಡುಗಡೆಯಾದ ಎಷ್ಟೋ ಚಿತ್ರಗಳಿಗಿಂತ ವಿಭಿನ್ನವಾಗಿದ್ದು ವ್ಯಾಪಾರೀಯಶಸ್ಸನ್ನು ಗಳಿಸಿದೆ.

ಚಿತ್ರರಂಗ ಹಾಗೂ ರಾಯರು

ಈ ಅಸಾಧಾರಣ ಸಾಹಿತಿಗೂ ಚಿತ್ರರಂಗಕ್ಕೂ ಎಂದಿಗೂ ತೀರದ ನಂಟಿದೆ. ಕನ್ನಡ ಚಿತ್ರರಂಗದ ನಟನಟಿಯರಿಗೆ, ತಾಂತ್ರಿಕವರ್ಗದವರಿಗೆ ತ.ರಾ.ಸು. ಹಂಪಣ್ಣ. ಆದರೆ ಚಿತ್ರಕ್ಕೆ ಸಾಹಿತ್ಯ ರಚಿಸುವ ತಾಳ್ಮೆ ಅವರಿಗಿಲ್ಲ. ಅವರ ಇನ್ನೂ ಅನೇಕ ಕೃತಿಗಳು ತೆರೆಯ ಮೇಲೆ ಬರಬೇಕಾಗಿವೆ.

ಕನ್ನಡ ಚಿತ್ರರಂಗ ರಾಯರ ಕೃತಿಗಳಿಂದ ಶ್ರೀಮಂತವಾದರೆ "ಸೊಕ್ಕಿನಲಿ ತಲೆಎತ್ತಿ ಜೊತೆಯವರ ಕೂಟದಲಿ ನಾವು ಸಹ ನಿಮಗಿಂತ ಹಿರಿಯರೆಂದು" ನಮ್ಮ ಕನ್ನಡ ಚಿತ್ರರಂಗಕ್ಕೆ ಬಂದೇ ಬರುತ್ತದೆ.

ತಮ್ಮ ಕನ್ನಡ ಸಾಹಿತ್ಯ ಶ್ರೀಯಿಂದ ಗುಡಿಮನೆಯಿಂದ ಅರಮನೆಯವರೆಗೂ, ಅರಮನೆಯಿಂದ ಸಾರ್ವಜನಿಕರ ಹೃದಯದ ಮನೆಮನೆಗೂ ತಾವೇ ತಾವಾಗಿ ಏಕಮೇವಾದ್ವಿತೀಯ ಸ್ಥಾನವನ್ನು ಗಳಿಸಿ ಮೆರೆಯುತ್ತಿರುವ ತ.ರಾ.ಸು. ಅವರಿಗೆ ಅರವತ್ತು ತುಂಬಿದರೂ ನೂರಾರು ವಸಂತಗಳು ನಿರಂತರ ಸಾಹಿತ್ಯ ಸೇವೆಯನ್ನು ಮಾಡುವ ಯುವ ಶಕ್ತಿ ಅವರಲ್ಲಿ ತುಂಬಿದೆ. ಅವರ "ಶ್ರೀ ಶಂಕರಾಚಾರ್ಯ" ಪುಸ್ತಕ ರೂಪದಲ್ಲಿ ಬರಲಿದೆ. ಜಗದ್ಗುರುಗಳ ಚರಿತೆಯಿದು. ಈ ಶಾರದಾಂಬೆಯ ಸುಪುತ್ರ ತಮ್ಮ ಅಮೂಲ್ಯ ಕೊಡುಗೆಗಳಿಂದ ಸಾಹಿತ್ಯ ಭಂಡಾರವನ್ನು ತುಂಬು-ತ್ತಿರಲಿ—ಅವರ ಸಾಹಿತ್ಯ ಸಂಪತ್ತು ಕನ್ನಡ ಜನತೆಯಿಂದ ಅಭ್ಯುದಯದಿಂದ ಅನಂತವಾಗಲಿ.

ಅವರ ಲೇಖನಿ ಅಭಿಮಾನಿಗಳಿಗೆ "ಸತ್ಯಂ ಶಿವಂ ಸುಂದರಂ" ಎನ್ನುವ ಚಿತ್ರ ಸ್ವರೂಪವನ್ನು ಪ್ರದರ್ಶಿಸಲಿ.

ತ.ರಾ.ಸು. — ನಾನು

— ಚದುರಂಗ

ತ.ರಾ.ಸು. ಗೂ ನನಗೂ ನಲವತ್ತು ವರ್ಷಗಳಿಗೂ ಮಿಕ್ಕಿದ ಸ್ನೇಹ. ಸ್ನೇಹ ಎನ್ನುವುದಕ್ಕಿಂತಲೂ ಆತ್ಮೀಯ ಸಂಬಂಧ ಎಂದರೆ ಹೆಚ್ಚು ಸರಿಹೋದೀತೇನೋ. 1937–38 ರ ಅವಧಿ. ಆಗ ನಾನು ಬೆಂಗಳೂರಿನಲ್ಲಿ ಇಂಟರ್ ಮೀಡಿಯಟ್ ವಿದ್ಯಾರ್ಥಿ. ತ.ರಾ.ಸು. ಚಿತ್ರದುರ್ಗದಲ್ಲಿ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿ. ಆ ದಿನಗಳಲ್ಲಿ ವಿದ್ಯಾರ್ಥಿ ಚಳುವಳಿ ಹಳೆಯ ಮೈಸೂರಿನಲ್ಲಿ ವ್ಯಾಪಕವಾಗಿ ಹರಡಿತ್ತು. ಆಗ ಮೈಸೂರು ರಾಜ್ಯದ ವಿದ್ಯಾರ್ಥಿ ಪ್ರಮುಖರೆಲ್ಲ ಸೇರಿ ಅಖಿಲ ಮೈಸೂರು ವಿದ್ಯಾರ್ಥಿ ಫೆಡರೇಶನ್ ಸ್ಥಾಪಿಸಿದೆವು. ಆ ಸಂಸ್ಥೆಯು ತನ್ನ ಮುಖ್ಯ ಕಾರ್ಯ–ದರ್ಶಿಗಳಲ್ಲಿ ಒಬ್ಬನನ್ನಾಗಿ ನನ್ನನ್ನು ಆಯ್ಕೆ ಮಾಡಿತ್ತು. ವಿದ್ಯಾರ್ಥಿ ಸಂಘಟನೆ ಬಲಗೊಂಡಂತೆ 1939 ರಲ್ಲಿ ಅಖಿಲ ಮೈಸೂರು ವಿದ್ಯಾರ್ಥಿ ಸಮ್ಮೇಳನವನ್ನು ವ್ಯವಸ್ಥೆಗೊಳಿಸಲು ವಿದ್ಯಾರ್ಥಿ ಪ್ರಮುಖರಾದ ನಾವು ಕೆಲವರು ಸಂಸ್ಥಾನಾದ್ಯಂತ ಸಂಚರಿಸಬೇಕಾಯಿತು. ಆಗ ನನಗೆ ಪರಿಚಯವಾಗಿ, ನನ್ನ ಭುಜಕ್ಕೆ ಭುಜ ಕೊಟ್ಟು ದುಡಿದವರು ತ. ರಾ. ಸುಬ್ಬರಾಯರು. ಆ ಸಂದರ್ಭದಲ್ಲಿ ಚಿತ್ರದುರ್ಗಕ್ಕೆ ಅವರೊಡನೆ ತೆರಳಿ ಅವರ ಮನೆಯಲ್ಲಿ ಸುಮಾರು ಒಂದು ವಾರ ಕಾಲ ತಂಗಿದ್ದೆ. ಅವರ ತಂದೆಯವರು ಮೊದಲುಗೊಂಡು ಮನೆಯವರೆಲ್ಲರೂ ತಮ್ಮ ಕುಟುಂಬಕ್ಕೇ ಸೇರಿದವನಂತೆ ಬಹು ಆತ್ಮೀಯತೆಯಿಂದ ನನ್ನನ್ನು ಕಂಡು, ಪರಿ ಪರಿಯಲ್ಲಿ ಉಪಚರಿಸಿದರು. ತ. ರಾ. ಸುಬ್ಬರಾಯರಂತೂ ನನ್ನನ್ನು ತುಂಬಾ ಹಚ್ಚಿಕೊಂಡಂತಿತ್ತು. ನನಗೂ ಅವರ ನಿರ್ವ್ಯಾಜ ಪ್ರೇಮ ಆನಂದ ತಂದಿತ್ತು. ನಮ್ಮಿಬ್ಬರದೂ ಒಂದೇ ತೆರನಾದ ಕನಸುಗಾರಿಕೆ. ಯಾವ ನೌಕರಿಗೂ ಅಂಟಿಕೊಳ್ಳಬಾರದು. ಯಾರಿಗೂ ಗುಲಾಮರಾಗಬಾರದು. ರಾಷ್ಟ್ರೀಯ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕನ್ನಡಕ್ಕಾಗಿ ನಮ್ಮ ಜೀವನವನ್ನ ಮುಡುಪಾಗಿಡಬೇಕು, ಸಮಾಜದ ಎಲ್ಲ ಮೌಢ್ಯಗಳ ವಿರುದ್ಧವೂ ಹೋರಾಟ ನಡೆಸಬೇಕು — ಹೀಗೆ ಅನೇಕ ಕನಸುಗಳನ್ನು ಹೊತ್ತು, ಏನೇನೋ ಯೋಜನೆಗಳನ್ನು ಹಾಕುತ್ತ ಚಿತ್ರದುರ್ಗದ ಬೆಟ್ಟ ಬೀದಿಗಳಲ್ಲಿ ತಿರುಗಾಡಿದ ನೆನಪು. ಚಿತ್ರದುರ್ಗದಿಂದ ನಾವಿಬ್ಬರೂ ದಾವಣಗೆರೆಗೆ ಹೋಗಿದ್ದೆವು. ಅಲ್ಲಿನ ಹರಿಜನ ಹಾಸ್ಟೆಲಿನಲ್ಲಿ ನಮ್ಮಿಬ್ಬರ ಭಾಷಣ ಏರ್ಪಡಿಸಲಾಗಿತ್ತು. ಭಾಷಣ ಏರ್ಪಡಿಸಿದ್ದ ವೇಳೆ ಬೆಳಿಗ್ಗೆ ಒಂಬತ್ತು ಗಂಟೆ ಎಂದು ಕಾಣುತ್ತದೆ. ಏಕೆಂದರೆ ಅಂದು ಶಾಲೆಗೆ ರಜಾದಿನವಾಗಿರಲಿಲ್ಲ. ನಾವಿಬ್ಬರೂ ಹಾಸ್ಟೆಲಿಗೆ ಎಂಟೂವರೆಗೆ ಹೋಗಿರಬೇಕು. ಹರಿಜನ ವಿದ್ಯಾರ್ಥಿಗಳು ಹಾಸ್ಟೆಲಿನ ಹಜಾರದಲ್ಲಿ ಸಾಲಾಗಿ ಕುಳಿತು ಉಪಹಾರ ತೆಗೆದುಕೊಳ್ಳುತ್ತಿದ್ದರು. ನಾವು ಆಗಮಿಸುವ ಮುನ್ನ ತಿಂಡಿ ತಿಂದು ಮುಗಿಸಬೇಕೆಂದು ವಿದ್ಯಾರ್ಥಿಗಳೆಲ್ಲರೂ

ಹಜಾರದಲ್ಲಿ ಸಾಲಾಗಿ ತಟ್ಟೆಗಳನ್ನು ಮುಂದಿಟ್ಟುಕುಳಿತಿದ್ದರು. ನಮ್ಮನ್ನು ಕಂಡು ಅವರೆಲ್ಲರೂ ದಡಬಡನೆ ಎದ್ದು ನಿಂತರು. ಅವರನ್ನು ಕುಳಿತುಕೊಳ್ಳುವಂತೆ ಹೇಳಿ, ನಾವೂ ಅವರ ಜತೆಗೆ ಕುಳಿತೆವು. ಅವರಿಗೆ ಸಂಕೋಚ, ಆ ಕಾಲ ಹಾಗಿತ್ತು. ನನಗೋ ಹೊಟ್ಟೆ ಹಸಿದಿತ್ತು. ನಾವು ನಿಸ್ಸಂಕೋಚವಾಗಿ ಅವರ ಸಾಲಿನಲ್ಲಿ ಕುಳಿತು ಅಚ್ಚುಕಟ್ಟಾಗಿ ಉಪ್ಪಿಟ್ಟು ತಿಂದದ್ದು ನೋಡಿ, ಅವರೆಲ್ಲರೂ ಸಂತೋಷಪಟ್ಟರು. ಆ ಬಳಿಕ ನಾವಿಬ್ಬರೂ ಜಗಿದ ಭಾಷಣ ಹಿಂದೂ ಧರ್ಮದ ಹೀನ ಜಾತೀಯತೆಯ ವಿರುದ್ಧ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ !

ವಿದ್ಯಾರ್ಥಿ ಸಮ್ಮೇಳನಕ್ಕಾಗಿ ನಾವಿಬ್ಬರೂ ಸಂಚರಿಸುತ್ತಿರುವಾಗ ನಮ್ಮಿಬ್ಬರ ಬಾಂಧವ್ಯ ನಿಕಟವಾಗುತ್ತ ಹೋಯಿತು. ಕ್ರಮೇಣ ಪರಸ್ಪರ ಏಕವಚನದಲ್ಲಿ ಸಂಬೋಧಿಸುವ ಹಂತಕ್ಕೂ ನಮ್ಮ ಸಖ್ಯ ಬೆಳೆಯಿತು.

ಆದರೆ ಮೈಸೂರಿನಲ್ಲಿ ವಿದ್ಯಾರ್ಥಿ ಸಮ್ಮೇಳನ ಮುಕ್ತಾಯಗೊಂಡ ತರುವಾಯ ಅನೇಕ ವರ್ಷ ಕಾಲ ನಮ್ಮಿಬ್ಬರ ನಡುವೆ ಸಂಪರ್ಕ ಕಡಿದು ಹೋಯಿತು. ಹತ್ತು ವರ್ಷಗಳೇ ಕಳೆದಿರಬಹುದು. ಪುಣೆಯಲ್ಲಿ ಒಂದು ವರ್ಷ ಎಂ.ಎ. ಮತ್ತು ಲಾ ಪರೀಕ್ಷೆಗಳನ್ನು ಮುಗಿಸಿ ನಾನು ಮೈಸೂರು ನಗರಕ್ಕೆ ಬಂದು ನೆಲೆಸಿದೆ. ಮತ್ತೆ ವ್ಯಾಸಂಗ ಮುಂದುವರಿಸುವುದು ಕಾರಣಾಂತರದಿಂದ ತಪ್ಪಿಹೋಯಿತು. ನನ್ನ ಮನಸ್ಸು ಬರೆವಣಿಗೆಯತ್ತ ಹೊರಳಿತ್ತು. ಕೆಲವು ಸಣ್ಣ ಕತೆಗಳಿಂದ ನನ್ನ ಸಾಹಿತ್ಯ ಜೀವನ ಪ್ರಾರಂಭವಾಯಿತು. ಹೀಗಿರುವಾಗ, ಒಮ್ಮೆ ಬೆಂಗಳೂರಿನಿಂದ ನನಗೊಂದು ಪತ್ರ ಬಂತು, ಅದರ ಒಕ್ಕಣೆ ಹೀಗಿತ್ತು.

"ಮೊನ್ನೆ ಒಂದು ಮಾಸಿಕದಲ್ಲಿ 'ಚದುರಂಗ' ಎನ್ನುವ ಕಾವ್ಯನಾಮದಲ್ಲಿ ಒಂದು ಸಣ್ಣಕತೆ ಪ್ರಕಟವಾಗಿದೆ. ಅದನ್ನು ಓದಿ ನನಗೆ ತುಂಬ ಮೆಚ್ಚುಗೆಯಾಯಿತು. ಈ 'ಚದುರಂಗ' ಎಂಬ ಕಾವ್ಯನಾಮದ ಹಿಂದೆ ಅಡಗಿರುವ ನೀವು ಯಾರು? ಬಹಳ ಹಿಂದೆ ಸುಬ್ರಹ್ಮಣ್ಯರಾಜ ಅರಸು ಎಂದು ನನಗೊಬ್ಬ ಮಿತ್ರನಿದ್ದ. ಆ ಮಿತ್ರ ನೀವೇ ಆಗಿದ್ದರೆ, ದಯಮಾಡಿ ಒಡನೆಯೇ ತಿಳಿಸಬೇಕೆಂದು ವಿನಂತಿಸುತ್ತೇನೆ"–ತ.ರಾ.ಸು.

ಆ ಪತ್ರಕ್ಕೆ ಉತ್ತರವಾಗಿ ನಾನೊಂದು ಪತ್ರ ಬರೆದೆ. ಹೌದು. ಆ ಹೆಸರಿನಲ್ಲಿ ಬರೆಯುತ್ತಿರುವವನು ನಾನೇ !.... ಇತ್ತೀಚೆಗೆ ಮಾಸಿಕವೊಂದರಲ್ಲಿ ತ.ರಾ.ಸು. ಎಂಬ ಕಾವ್ಯನಾಮದಲ್ಲಿ ಸೊಗಸಾದ ಶೈಲಿಯಲ್ಲಿ ಬರೆದ ಸಣ್ಣಕತೆಯೊಂದನ್ನು ಓದಿದೆ. ನನಗೆ ತ. ರಾ. ಸುಬ್ಬರಾವ್ ಎಂಬ ಆತ್ಮೀಯ ಗೆಳೆಯರೊಬ್ಬರಿದ್ದರು. ಈಗ ತ.ರಾ.ಸು. ಎಂದು ಸಂಕುಚಿತಗೊಂಡ ಹೆಸರಿನಲ್ಲಿ ಬರೆಯುತ್ತಿರುವವರು ಆ ನನ್ನ ಹಳೆಯ ಮಿತ್ರನೆ, ಹೇಗೆ — ದಯೆಯಿಟ್ಟು ತಿಳಿಸಿ".

ಅನಂತರ ಮುಂದುವರಿದ ಪತ್ರ ವಿನಿಮಯ ಮತ್ತೆ ಹಳೆಯ ಗೆಳೆಯರಾದ ನಾವಿಬ್ಬರೂ ಭೇಟಿಯಾಗುವ ಸುಯೋಗ ಒದಗಿಸಿತು. ದಿನಗಳು ಉರುಳಿದಂತೆ ನಮ್ಮಿಬ್ಬರ ಸಖ್ಯ

ಮೊದಲಿಗಿಂತಲೂ ಮುಪ್ಪುರಿಗೊಂಡು ವರ್ಧಿಸಿತು. ಆತನೂ ಮೈಸೂರಿಗೇ ಬಂದು ನೆಲೆಸಿದ ಮೇಲಂತೂ ಇನ್ನೂ ಗಾಢವಾಗಿ ಬೆಳೆಯಿತು, ಬಲಿಯಿತು. ಆತ ಏನಾದರೂ ಬರೆಯುವ ಮುನ್ನ ಅದರ ವಸ್ತುವನ್ನು ನನ್ನೊಡನೆ ಹೇಳಿಕೊಳ್ಳಬೇಕು, ಚರ್ಚಿಸಬೇಕು, ನಾನೂ ಕೂಡ ಹಾಗೆಯೇ ಮಾಡುತ್ತಿದ್ದೆ.

ನಾವಿಬ್ಬರೂ ಬರೆದೇ ಬದುಕಬೇಕೆಂದು ನಿರ್ಧರಿಸಿದವರು, ಆದ್ದರಿಂದ ಆಗಾಗ ಸಂಸಾರ ತೂಗಿಸುವುದು ದುರ್ಭರವಾಗುತ್ತಿತ್ತು. ಬರೆಯುವುದರಲ್ಲಿ ತ.ರಾ.ಸು. ಜೂಜಿನ ಕುದುರೆ. ನನ್ನದೊ ಗಜಗರ್ಭ. ಒಂದು ಕಾದಂಬರಿಯನ್ನು ಆತ ನಾಲ್ಕೇ ದಿನಗಳಲ್ಲಿ ಬರೆದು ಮುಗಿಸಿದ್ದನ್ನು ನಾನೇ ಕಂಡು ವಿಸ್ಮಿತನಾಗಿದ್ದೇನೆ !

ಈ ಮಧ್ಯೆ ನನ್ನ ಬದುಕು ಜಟಿಲಗೊಂಡು ನನ್ನ ಹಳ್ಳಿಗೆ ಹೋಗಿ ನಾನು ನೆಲೆಸಬೇಕಾಯಿತು. ಅಲ್ಲಿ ಗರ್ಭವತಿಯಾಗಿದ್ದ ನನ್ನ ಹೆಂಡತಿಗೆ ಹುಣಸೂರು ಆಸ್ಪತ್ರೆಯಲ್ಲಿ ಪ್ರಸವವಾಯಿತು. ಆ ಕಷ್ಟ ಸಮಯದಲ್ಲಿ ತ. ರಾ. ಸು. ಮತ್ತು ಶ್ರೀಮತಿ ಅಂಬುಜಮ್ಮ ಇಬ್ಬರೂ ಕೂಸಿಗೆ ಕುಲಾಯಿ, ಕಾಲುಚೀಲ ಇತ್ಯಾದಿ ಮಮತೆಯ ಸರಕನ್ನು ತಂದಿತ್ತರು. ಈಗಲೂ ನನ್ನಮಗ ವಿಕ್ರಮನನ್ನು ಅವರ ಇನ್ನೊಬ್ಬ ಮಗನಂತೆಯೇ ಕಾಣುತ್ತಾರೆ !

ತ.ರಾ.ಸು. ಲೇಖನಿ ಬಿಡುವಿಲ್ಲದೆ ನಿರಂತರವಾಗಿ ಬರೆಯುತ್ತ ಸಾಗಿ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಬೆಲೆ ಬಾಳುವ ಸೇವೆ ಸಲ್ಲಿಸಿದೆ. ಆತನ ಒಂದೊಂದು ಕೃತಿ ಹೊರ ಬಂದಾಗಲೂ ಅದನ್ನು ನಾನೇ ಬರೆದಷ್ಟು ಹಿಗ್ಗನ್ನು ಅನುಭವಿಸಿದ್ದೇನೆ. ಆತನಿಗೂ ಅಷ್ಟೆ. ನನ್ನ ಕೃತಿ ಎಂದರೆ ತನ್ನದೇ ಎನ್ನುವಂಥ ಆತ್ಮೀಯತೆ. ಆತ ಹೇಳುತ್ತಲೇ ಇರುತ್ತಾನೆ.

"ನಮ್ಮಿಬ್ಬರ ಹೆಸರೂ ಒಂದೇ ಸ್ವಭಾವವೂ ಒಂದೇ. ನಮ್ಮಿಬ್ಬರ ಹಳ್ಳಿಗಳ ಹೆಸರೂ ಒಂದೇ. ನಾವಿಬ್ಬರೂ ಹಿಂದಿನ ಜನ್ಮದಲ್ಲಿ ಒಂದೇ ತಾಯಿಯ ಗರ್ಭದಲ್ಲಿ ಹುಟ್ಟಿದ ಸೋದರರೇ ಆಗಿರಬೇಕು," ಎಂದು.

ಆಳವಾದ ನಮ್ಮಿಬ್ಬರ ಸಂಬಂಧವನ್ನು ಗಮನಿಸಿದಾಗ ನನಗೂ ಸಹ ಆ ಮಾತು ನಿಜವಿದ್ದರೂ ಇರಬಹುದು ಎನ್ನಿಸುತ್ತದೆ.

ತ.ರಾ.ಸು: ಅರ್ಧ ಹಾದಿ

— ಡಾ॥ ಹಾ. ಮಾ. ನಾಯಕ

"ರವೀಂದ್ರನಾಥ ಠಾಕೂರರ ಹಾಗೆ ನಾನೂ ದೊಡ್ಡ ಕವಿಯಾಗುತ್ತೇನೆ".

ಎಂಟು ವರ್ಷದ ಹುಡುಗ, ಲಾಯರ್ ಆಗಿದ್ದ ತನ್ನ ತಂದೆಯವರ ಕಛೇರಿಯಲ್ಲಿ ಕುಳಿತುಕೊಂಡು ಕೈಗೆ ಸಿಕ್ಕಿದ ಒಂದು ಪುಸ್ತಕ ಎಳೆದುಕೊಂಡು ಅದರ ಮೂಲೆಯಲ್ಲಿ ತನ್ನ ಬದುಕಿನ ಶಾಸನ ಬರೆದ. ಇದಾಗಿ ನಲವತ್ತೆರಡು ವರ್ಷಗಳು ಕಳೆದಿವೆ. ಅವನಿಗೀಗ ಐವತ್ತು ತುಂಬಿದೆ. ಅವನು ಕವಿಯಾಗಲಿಲ್ಲ; ಆದರೆ ತನ್ನ ಭಾಷೆಯ ದೊಡ್ಡ ಲೇಖಕರಲ್ಲಿ ಒಬ್ಬನಾಗಿ ಖ್ಯಾತನಾಗಿದ್ದಾನೆ. ಇವರು ತ.ರಾ.ಸು. ಎಂಬ ಮೂರಕ್ಷರಗಳಿಂದ ಕನ್ನಡ ನಾಡಿನಲ್ಲೆಲ್ಲ ಪರಿಚಿತರಾಗಿರುವ ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್.

* * *

ತ.ರಾ.ಸು. ಅವರಿಗೆ ವಂಶಪಾರಂಪರ್ಯವಾದ ಸಾಹಿತ್ಯ ಪರಿಸರ; ದೇವರ ಪೂಜೆಯಷ್ಟೇ ಸಹಜವಾಗಿ ಬಂದದ್ದು ಸಾಹಿತ್ಯಾರಾಧನೆ. ಸುಬ್ಬರಾಯರಿಗೆ ಅವರ ಅಜ್ಜನದೇ ಹೆಸರು. ಆ ಅಜ್ಜನನ್ನು ತ.ರಾ.ಸು. ವರ್ಣಿಸಿರುವುದು ಹೀಗೆ: "ಯಾರ ಆಶುಕವಿತ್ವ ಶಕ್ತಿ ಇಂದು ತಳುಕು ಸೀಮೆಯ ಮನೆ ಮನೆಯ ಮಾತಾಗಿದೆಯೋ ಯಾರ ನಾಟಕಗಳು ಇಂದು ಜಾನಪದ ರಂಗಭೂಮಿಯಲ್ಲಿ ನಿತ್ಯ ನೂತನವಾಗಿ ರಂಜಿಸುತ್ತಿವೆಯೋ, ಯಾರ ದೇವರ ನಾಮಗಳು ಇಂದು ದಿನದಿನವೂ ಮುತ್ತೈದೆಯರ ಬಾಯಲ್ಲಿ ನಲಿಯುತ್ತಿವೆಯೋ ಆ ಮಹಾ ಶ್ರೀ ರಾಮ ಭಕ್ತ" ಅಜ್ಜಿಯಾದರೂ ಸಾಮಾನ್ಯರಲ್ಲ. "ಒಂದು ಅಕ್ಷರವನ್ನು ಬರೆಯಲು ಕಲಿಯದಿದ್ದರೂ, ಕುಮಾರವ್ಯಾಸ, ಲಕ್ಷ್ಮೀಶರ ಭಾರತಗಳಿಗೆ ಉದ್ದಾಮ ಪಂಡಿತರು ಮೆಚ್ಚುವಂತೆ ಅರ್ಥ ಹೇಳುವ ಶಕ್ತಿಯನ್ನು ದೈವಾಯುಕ್ತವಾಗಿ ಪಡೆದಿದ್ದ ಹೆಣ್ಣೆಂದರೆ ತಾಯಿಯೆಂದರೆ ಹೀಗೆ ಇರಬೇಕು ಎಂಬಂತೆ ಬದುಕಿದ್ದವರು." ಇಂತಹವರ ಮೊಮ್ಮಗ ತ.ರಾ.ಸು. ಅವರ ದೊಡ್ಡಪ್ಪ ಕನ್ನಡದ ಅಗ್ರಣೀ ದೇಶಿಕರಲ್ಲಿ ಒಬ್ಬರೆನಿಸಿದ್ದ ಶ್ರೀ. ವೆಂಕಣ್ಣಯ್ಯನವರು. ಹೀಗೆ ತ.ರಾ.ಸು ಮನೆತನ ಸಾಹಿತಿಗಳ ಮನೆತನ.

ಚಿಕ್ಕವಯಸ್ಸಿನಲ್ಲಿಯೇ ತ.ರಾ.ಸು. ಅವರಿಗೆ ಸಾಹಿತ್ಯದ ಗೀಳು. ಎಲ್ಲೆಲ್ಲಿಂದಲೋ ಪುಸ್ತಕಗಳನ್ನು ಸಂಗ್ರಹಿಸಿ ಓದಿದರು. ಪ್ರಾಚೀನ ಕಾವ್ಯಗಳನ್ನು ಅಭ್ಯಾಸ ಮಾಡಿದರು. ತಮ್ಮ ಚಿಕ್ಕ ಊರಿನ ಪುಸ್ತಕ ಭಂಡಾರಗಳು ಅವರ ದಾಹವನ್ನು ಆರಿಸಲಿಲ್ಲ. ಪ್ರಖ್ಯಾತರಾದ ದೊಡ್ಡಪ್ಪನವರ ಸಂಗ್ರಹವನ್ನು ಅವರು ಮುಗಿಸಿದರು. ಕನ್ನಡ ಮಾತ್ರವಲ್ಲ, ಇಂಗ್ಲೀಷನ್ನು ಓದಿದರು. ಅವರ ಓದು ಕಥೆ ಕಾದಂಬರಿಗಳಿಗಷ್ಟೆ ಸೀಮಿತವಾಗಿರಲಿಲ್ಲ. ಫಲವಾಗಿ ಅವರಿಗೆ ಪಠ್ಯಪುಸ್ತಕದ ಓದು ಒಗ್ಗಲಿಲ್ಲ.

ಪರೀಕ್ಷೆಗೆಂದು ಓದುವುದನ್ನು ಅವರು ದ್ವೇಷಿಸತೊಡಗಿದರು. ತಂದೆ ರಾಮ ಸ್ವಾಮಯ್ಯನವರಿಗೆ ಮಗ ತಮ್ಮ ಹಾಗೆ ಲಾಯರ್ ಆಗಬೇಕೆಂದು ಅಪೇಕ್ಷೆ, ಮಗನು ಸಂಪೂರ್ಣವಾದ ಕಾವ್ಯಾರಾಧಕ. ಸೆಕೆಂಡರಿ ಪರೀಕ್ಷೆ ಫಲಿತಾಂಶ ಬರುವ ದಿನವೂ ತ.ರಾ.ಸು. ಅವರಿಗೆ ನೆನಪಿರಲಿಲ್ಲ. ಅವರು ಪದ್ಯ ಬರೆಯುತ್ತಾ ಕುಳಿತಾಗ ಪರೀಕ್ಷೆ ಯಲ್ಲಿ ನಪಾಸಾದ ಸುದ್ದಿ ಬಂತು. ತಂದೆಯಿಂದ ಪೆಟ್ಟು ತಿನ್ನಬೇಕಾಗಿ ಬಂತು. ಒಂದಕ್ಕೂ ಅವರು ಜಗ್ಗಲಿಲ್ಲ. ತಮ್ಮ ಮನಸ್ಸಿನಂತೆ ನಡೆಯಬೇಕೆಂದು ಅವರ ದೃಢ ನಿರ್ಧಾರವಾಗಿತ್ತು.

ವೆಂಕಣ್ಣಯ್ಯನವರಿಗೆ ತ.ರಾ.ಸು. ಅವರಲ್ಲಿ ಅಭಿಮಾನ. ಅವರು ಒಮ್ಮೆ ಹುಡುಗನಿಗೆ ಹೇಳಿದರಂತೆ– "ನೀನು ಒಂದು ಕಥೆ ಬರಿ. ಚನ್ನಾಗಿದ್ದರೆ ಹತ್ತು ರೂಪಾಯಿ ಬಹುಮಾನ". ತ.ರಾ.ಸು. ಕಥೆ ಬರೆದರು. ಯಶಸ್ವಿಯಾದರು. ಹತ್ತು ರೂಪಾಯಿ ಗೆದ್ದರು. ಅದು ಅವರ ಸಾಹಿತ್ಯದ ಓನಾಮ. ಅದಕ್ಕೆ ಬಂದ ಮೆಚ್ಚುಗೆ ದೊಡ್ಡಪ್ಪನವರ ಉಡುಗೊರೆಯಾಗಿರದೆ, ಕನ್ನಡ ಪ್ರಾಧ್ಯಾಪಕರ ಬಹುಮಾನ ವಾಗಿತ್ತು. ಸಾಹಿತ್ಯದ ಜೊತೆಗೆ, ರಾಷ್ಟ್ರೀಯ ಆಂದೋಲನವು ತ.ರಾ.ಸು. ಅವರನ್ನು ಆಕರ್ಷಿಸಿತ್ತು. ಅದರಿಂದ ಅವರು ಸೆರೆಮನೆಗೂ ಹೋಗಿಬಂದರು.

ಇದೆಲ್ಲದರಿಂದ ಒಟ್ಟಿನಲ್ಲಿ ತ.ರಾ.ಸು. ಕಾಲೇಜು ಶಿಕ್ಷಣ ಮುಗಿಸುವುದು ಸಾಧ್ಯ ವಾಗಲಿಲ್ಲ. ಅಭ್ಯಾಸ, ವಿಮರ್ಶೆಯ ದೃಷ್ಟಿ, ನಿರೂಪಣೆಯ ಸೊಗಸು ಮೇಳವಿಸಿದ ಬರವಣಿಗೆ ಅವರಿಗೆ ಕಾಲೇಜಿನಿಂದ ಹೊರ ಬರುವ ವೇಳೆಗಾಗಲೆ ಸಿದ್ಧಿಸಿತ್ತು. ಪಠ್ಯ ಪುಸ್ತಕವಾಗಿ ಓದಬೇಕಾಗಿದ್ದ "ಕಾರಣ ಪುರುಷ" ಎಂಬ ಕಾದಂಬರಿಯನ್ನು ಕುರಿತು ತ.ರಾ.ಸು. ಬರೆದೊಪ್ಪಿಸಿದ ದೀರ್ಘವಾದ ಪ್ರಬಂಧವನ್ನು ನೋಡಿ ಕನ್ನಡ ಅಧ್ಯಾಪಕರು ಮೂಗಿನ ಮೇಲೆ ಬೆರಳಿಟ್ಟರಂತೆ, ಅದರಲ್ಲಿ ತ.ರಾ.ಸು. ಕಾದಂಬರಿ ಕಲೆಯ ರಹಸ್ಯವನ್ನೆಲ್ಲ ಚರ್ಚಿಸಿದ್ದು ವ್ಯಾಪಕವಾದ ಹಿನ್ನೆಲೆಯಲ್ಲಿ "ಕಾರಣ ಪುರುಷ"ದ ಸೋಲು ಗೆಲುವುಗಳನ್ನು ಸಮೀಕ್ಷಿಸಿದ್ದರು. ಆ ಬಗೆಯ ಬರವಣಿಗೆ ವಿದ್ಯಾರ್ಥಿಯ ದೆಂದು ನಂಬುವುದೇ ಕಷ್ಟವಾಗಿತ್ತು.

* * *

ಓದು ಬರೆಹಗಳೆರಡರಲ್ಲಿಯೂ ಈ ಬಗೆಯ ಸಿದ್ಧತೆ ಮಾಡಿಕೊಂಡು ತ.ರಾ.ಸು. ಪತ್ರಿಕೋದ್ಯಮವನ್ನು ಪ್ರವೇಶಿಸಿದರು. ಇಪ್ಪತ್ತೈದು ರೂಪಾಯಿಗಳ ವೇತನದ ಮೇಲೆ ಗ್ಯಾಲಿಯ ಗುಲಾಮರಾಗಿ ವೃತ್ತಿ ಜೀವನವನ್ನು ಆರಂಭಿಸಿದರು. ಮೊದಲು 'ವಿಶ್ವ ಕರ್ನಾಟಕ', ಆ ಮೇಲೆ 'ಪ್ರಜಾಮತ' ಪತ್ರಿಕಾ ಕಛೇರಿಗಳಲ್ಲಿ ತ.ರಾಸು. ಲೇಖನಿಯನ್ನು ಚೆನ್ನಾಗಿ ತೇದು ಮೊನೆ ಮಾಡಿದರು. ಈ ಅನುಭವ ಅವರಿಗೆ ಬರವಣಿಗೆಯನ್ನು ಸುಲಭ ಮಾಡಿಕೊಟ್ಟಿತ್ತು. ಆದರ್ಶ ಪತ್ರಿಕೋದ್ಯಮ ಅವರ ಕನಸಾಗಿತ್ತು. ಮಿತ್ರರಾದ ಚಿಂತಾಮಣಿ ಯೋಜಿಸಿದ 'ವಾಹಿನಿ' ಪತ್ರಿಕೆಗೆ ತ.ರಾ.ಸು. ಶಕ್ತಿ ಕೊಟ್ಟರು. ಆ ಪತ್ರಿಕೆಯ ಎರಡು ವಾರ್ಷಿಕ ಸಂಚಿಕೆಗಳು ಇಂದೂ

ಅನುಕರಣ ಯೋಗ್ಯವಾಗಿವೆ. ತ.ರಾ.ಸು. ತಮ್ಮ ಅಭಿರುಚಿಗೆ ಅನುಗುಣವಾಗಿ ಅಂಗೈ ಅಗಲದ 'ಚೇತನ' ಎಂಬ ಮಾಸ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ಅದು ಮೂರು ನಾಲ್ಕು ತಿಂಗಳುಗಳಿಗಿಂತ ಹೆಚ್ಚು ನಡೆಯುವುದು ಸಾಧ್ಯವಾಗಲಿಲ್ಲ. ಕನ್ನಡ ವಾಚಕರ ಅಭಿರುಚಿ ಇನ್ನೂ ಅಷ್ಟು ಬೆಳೆದಿರಲಿಲ್ಲ.

ಪತ್ರಿಕಾ ಕ್ಷೇತ್ರದಲ್ಲಿದ್ದಾಗಲೇ ತ.ರಾ.ಸು. ಸಾಹಿತ್ಯರಂಗಕ್ಕೂ ಕಾಲಿರಿಸಿದರು. ೧೯೪೩ ರಲ್ಲಿ ಅವರ ಮೊದಲಿನ ಕಾದಂಬರಿ 'ಮನೆಗೆ ಬಂದ ಮಹಾಲಕ್ಷ್ಮಿ' ಪ್ರಕಟವಾದಾಗ ಅವರಿಗಿನ್ನೂ ಇಪ್ಪತ್ತಮೂರು ವರ್ಷ. ಆ ಕಾದಂಬರಿ ಒಂದು ಕೋಲಾಹಲವನ್ನೇ ಉಂಟು ಮಾಡಿತು. ಸುಪ್ರಸಿದ್ಧರಾದ ಇಬ್ಬರು ಕನ್ನಡ ಲೇಖಕರು ಅದರ ನಿಮಿತ್ತ ಲೇಖನಿ ಮಸೆದರು. ಆಧುನಿಕ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಇನ್ನೊಂದು ಚೊಚ್ಚಲ ಕೃತಿಗೆ ಈ ಬಗೆಯ ಸ್ವಾಗತ ದೊರೆತ ಉದಾಹರಣೆ ಇಲ್ಲ. ವಾದ ವಿವಾದಗಳ ನೆಲೆ ಏನೇ ಇರಲಿ "ಮನೆಗೆ ಬಂದ ಮಹಾಲಕ್ಷ್ಮಿ" ಕನ್ನಡದ ಭಾಗ್ಯೋದಯದ ಕಡೆಗೆ ಕೈಮಾಡಿ ತೋರಿಸಿತು. ಇಪ್ಪತ್ತರ ಹುಡುಗನನ್ನು ಎಲ್ಲರೂ ಕುತೂಹಲದಿಂದ ನಿರೀಕ್ಷಿಸುವಂತೆ ಮಾಡಿತು. ಮತ್ತೆ ಮೂರೇ ವರ್ಷಗಳಲ್ಲಿ ತ.ರಾ.ಸು. "ರೂಪಸಿ" ಎಂಬ ಕಥಾ ಸಂಗ್ರಹವನ್ನು ಪ್ರಕಟಿಸಿದರು. ಸಾವಿರದ ಒಂಭೈನೂರ ನಲವತ್ತೇಳರಲ್ಲಿ ಎರಡನೆಯ ಕಾದಂಬರಿ "ರಕ್ತತರ್ಪಣ" ಹೊರಬಂತು. ಇವೆರಡಕ್ಕೂ ಓದುಗರು, ವಿಮರ್ಶಕರು ಉತ್ಸಾಹದ ಸ್ವಾಗತ ನೀಡಿದರು. ಅಲ್ಲಿಂದ ತ.ರಾ.ಸು. ಬಿಡುವಿಲ್ಲದೆ ಲೇಖನಿ ಓಡಿಸಿದರು. ಇಂದು ಅವರ ಕೃತಿಗಳ ಸಂಖ್ಯೆ ಹತ್ತಿರ ಹತ್ತಿರ ನೂರು. ಅವುಗಳಲ್ಲಿ ಕಾದಂಬರಿಗಳೇ ಸುಮಾರು ಎಪ್ಪತ್ತು. ಕಥೆ, ನಾಟಕ, ಜೀವನ, ಅನುವಾದ ಮಿಕ್ಕ ಕೃತಿಗಳು.

ಹೊಸಗನ್ನಡದ ಎಷ್ಟೋ ಲೇಖಕರ ಹಾಗೆ ತ.ರಾ.ಸು. ಅವರಿಗೂ ಅ.ನ.ಕೃ. ಸ್ಫೂರ್ತಿ ಶಕ್ತಿ. ೧೯೪೭ ರಲ್ಲಿ ಅ.ನ.ಕೃ. ಅವರನ್ನು ಕುರಿತು ತ.ರಾ.ಸು. ಒಂದು ದೊಡ್ಡ ಗ್ರಂಥವನ್ನೇ ಪ್ರಕಟಿಸಿದರು. ಕನ್ನಡಕ್ಕೆ ಆ ಬಗೆಯ ಕೃತಿಗಳಲ್ಲಿ ಅದೇ ಮೊದಲನೆಯದು ಅದರಲ್ಲಿ ತ.ರಾ.ಸು. ತಮ್ಮ ವಿಮರ್ಶನಾ ಶಕ್ತಿಯನ್ನು ಅ.ನ.ಕೃ. ಪ್ರೀತಿಯನ್ನು ಸಮ ಸಮವಾಗಿ ವಿಶಿಷ್ಟವಾಗಿ ಬೆರೆಸಿದರು. ನಾಲ್ಕನೇ ದಶಕದಲ್ಲಿನ ಪ್ರಗತಿಶೀಲ ಲೇಖಕರ ಚಳವಳಿಯಲ್ಲಿ ಅ.ನ.ಕೃ. ಸುತ್ತ ಸೇರಿದವರು ಅನೇಕರು ಕೆಲವರು ಸಂಪರ್ಕ ಮಹಿಮೆಯಿಂದ ಹೆಸರುವಾಸಿಯಾಗಿ ನಾಲ್ಕೇ ವರ್ಷಗಳಲ್ಲಿ ಮರೆತು ಹೋದರು. ಆ ಗುಂಪಿನವರಲ್ಲಿ ದಶಕಗಳನ್ನು ದಾಟಿಯೂ ತಮ್ಮ ಪ್ರತಿಭೆಯ ಆಧಾರದ ಮೇಲೆ ಯಶಸ್ವಿಯಾದವರಲ್ಲಿ ತ.ರಾ.ಸು. ಒಬ್ಬರು. ವಾಸ್ತವಿಕತೆ, ಸಾಮಾಜಿಕತೆಗಳಲ್ಲಿ, ನೀತಿ ನಿರೂಪಣೆಗಳಲ್ಲಿ, ಶೈಲಿ, ಸಂವಾದಗಳಲ್ಲಿ ತ.ರಾ.ಸು. ಅವರಿಗೆ ಅ.ನ.ಕೃ. ಮೇಲ್ಪಂಕ್ತಿ. ಆದರೆ ಈ ವಿಷಯಗಳಲ್ಲಿ ಅವರು ಹೆಚ್ಚಿನ ಕಾಲವಂತಿಕೆಯನ್ನು ಮೆರೆದರು; ಬದುಕನ್ನು ಇನ್ನೂ ಆಳವಾಗಿ ನೋಡಲು ಪ್ರಯತ್ನಿಸಿದರು. ಅ.ನ.ಕೃ. ಹೆಮ್ಮೆ ಪಡಬಹುದಾದ ಶಿಷ್ಯರಾಗಿ ತ.ರಾ.ಸು. ಸಾಹಿತ್ಯ ಪ್ರಪಂಚದಲ್ಲಿ ಸ್ಥಾಪಿತರಾದರು.

ತ.ರಾ.ಸು. ನಮ್ಮ ಇಂದಿನ ಕಾದಂಬರಿಕಾರರಲ್ಲಿ ಅಗ್ರಗಣ್ಯರು. ಅವರ ಕಾದಂಬರಿಗಳಲ್ಲಿ ಸುಮಾರು ಐವತ್ತು ಸಾಮಾಜಿಕ, ಅವರು ಆಯ್ದುಕೊಂಡ ಸಮಸ್ಯೆಗಳು ಅನೇಕ ಪಾತ್ರ ನಿರ್ವಹಣೆಯಲ್ಲಿ ಅವರು ಸಿದ್ಧಹಸ್ತರು. ಅವರ "ಪಾರಿಜಾತ" ಕಾದಂಬರಿಯನ್ನು ಓದಿದ ಮಿತ್ರರೊಬ್ಬರು, ತಾವು ಆ ಪಾತ್ರಗಳನ್ನು ಮಂಗಳೂರಿನಲ್ಲಿ ಕಂಡಂತಿದೆಯೆಂದು ಒಮ್ಮೆ ಹೇಳಿದ್ದರು. ಓದುಗರೊಂದಿಗೆ ಹೇಗೆ ಪಾತ್ರಗಳು ಆತ್ಮೀಯವಾಗಿ ಹಬ್ಬಿಕೊಳ್ಳುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆ. ತ.ರಾ.ಸು. ಕಡೆಯುವ ಪಾತ್ರಗಳು ಯಾವಾಗಲೂ ಜೀವಂತವಾಗುತ್ತವೆ. ಗತಕಾಲಕ್ಕೆ ಹೋಗಿ ಅಲ್ಲಿನ ಪಾತ್ರಗಳನ್ನು ಕಲ್ಪಿಸಬೇಕಾಗಿ ಬಂದಾಗಲೂ ಅದಕ್ಕೆ ಅವರು ರಕ್ತ ಮಾಂಸಗಳನ್ನು ತುಂಬಬಲ್ಲರು. ಅವರ ಶೈಲಿ ಶಕ್ತಿ ಪೂರ್ಣವೂ ಸುಂದರವೂ ಆದದ್ದು. ಆದರೆ ಒಮ್ಮೊಮ್ಮ ಅತಿ ಎನಿಸುವ ಮಟ್ಟಿಗೆ ಅದು ಭಾರಗೊಳ್ಳುವುದೂ ಉಂಟು, ಕೃತಕವಾಗುವುದೂ ಉಂಟು. ಎಷ್ಟೋ ವೇಳೆ ಅವರು ಬಣ್ಣದ ಮೇಲೆ ಬಣ್ಣ ಬಳಿದ ಹಾಗೆ ಬಣ್ಣಿಸುತ್ತಾರೆ. ಅನುಕಂಪೆಯನ್ನು ಅವರು ಅದ್ಭುತವಾಗಿ ತರಬಲ್ಲರು.

ಬರೆವಣಿಗೆ ಯಾಂತ್ರಿಕವಾಗಿ ತ.ರಾ.ಸು. ಅವರ ಈಚಿನ ಕಾದಂಬರಿಗಳು ಅರ್ಥಹೀನವಾಗಿ ತೋರುತ್ತವೆ. ಪ್ರಕಟಣೆಯ ವ್ಯಾಪಾರೀ ದೃಷ್ಟಿಯಿಂದ ತ.ರಾ.ಸು. ಕಲೆಗಾರಿಕೆಗೆ ಸಂಭವಿಸಿರುವ ದೊಡ್ಡ ನಷ್ಟ ಇದು. ಈಚಿನ ವರ್ಷಗಳಲ್ಲಿ ಅವರು ಸಿನಿಮಾ ಪ್ರಪಂಚಕ್ಕೆ ಸೇರಿ ಸಾಹಿತ್ಯದಿಂದ ದೂರವಾಗಿಬಿಟ್ಟಿದ್ದಾರೆ. ಇದರಿಂದ ಸಿನಿಮಾಕ್ಕೆ ಎಷ್ಟು ಲಾಭವಾಗಿದೆಯೋ ತಿಳಿಯದು, ಸಾಹಿತ್ಯಕ್ಕಂತೂ ದೊಡ್ಡ ನಷ್ಟ. ಬಹುದೊಡ್ಡ ಆಸೆಯನ್ನು ಹುಟ್ಟಿಸಿ, ಇನ್ನೇನು ಮಹಾಕೃತಿಯೊಂದನ್ನು ಬರೆದು ಬಿಡುತ್ತಾರೆ ಎಂದು ನಿರೀಕ್ಷಿಸುತ್ತಿದ್ದಾಗಲೇ ಅವರು ಅವರ ಅಭಿಮಾನಿಗಳೆಲ್ಲರನ್ನೂ ನಿರಾಶೆ ಗೊಳಿಸಿದರು. ಆದರೆ ತ.ರಾ.ಸು. ಅವರ ಹಾಗೆ ಶಕ್ತರಾದ ಲೇಖಕರು ನಮ್ಮಲ್ಲಿ ಹಲವರಿಲ್ಲ. ಆದ್ದರಿಂದಲೇ ಅವರಿಂದ ನಾಡು ಇನ್ನು ಮಹತ್ವದ ಕೃತಿಗಳನ್ನು ನಿರೀಕ್ಷಿಸುವುದರಲ್ಲಿ ತಪ್ಪೇನಿಲ್ಲ.

* * *

ತ.ರಾ.ಸು. ಹಲವು ಹತ್ತು ವಿಷಯಗಳಲ್ಲಿ ಆಸಕ್ತರು, ಕನ್ನಡ ಚಳುವಳಿ, ಶಾಂತಿಸೇನೆ, ಸಹಕಾರಿ ತತ್ತ್ವ ಹೀಗೆ ನಾನಾ ಚಟುವಟಿಕೆಗಳು. ಸಹಕಾರಿ ಅಂಗಡಿಯನ್ನು ತೆರೆದು ಅವರು ಅಕ್ಕಿ ಸಕ್ಕರೆ ಮಾರುತ್ತಿದ್ದುದೂ ಉಂಟು. ಅನೇಕ ಕನ್ನಡ ಸಂಸ್ಥೆಗಳಿಗೆ ಅವರು ಅಧ್ಯಕ್ಷರು. ಮೈಸೂರಿನ ನಗರ ಸಭೆಯಲ್ಲಿ ಅವರು ಕೆಲಕಾಲ ಸದಸ್ಯರಾಗಿದ್ದರು. ಈಚೆಗೆ ನಿಯೋಗ ಒಂದರಲ್ಲಿ ಪೂರ್ವ ಜರ್ಮನಿಗೆ ಹೋಗಿ ಬಂದರು.

ಇದೆಲ್ಲ ಇದ್ದರೂ ಅವರೊಬ್ಬ ಶುದ್ಧ ಲೇಖಕ, ಈ ಅಂಶವನ್ನು ಕೆಲವೊಮ್ಮೆ ಇತರ ಚಟುವಟಿಕೆಗಳಿಂದಾಗಿ ಅವರೇ ಮರೆತು ಬಿಡುವುದೂ ಅವರನ್ನು ಬಲ್ಲವರಿಗೆ ಹೊಸದಲ್ಲ. ಅದು ಸಾಹಿತ್ಯಕ್ಕಾಗುವ ದೊಡ್ಡ ನಷ್ಟ. ಅವರು ಹಾಗೆ ಮಾಡಬಾರದು.

ತ ರಾ.ಸು. ಅವರಿಗೆ ಈಗ ಐವತ್ತು. ಅರ್ಧ ಹಾದಿಯಷ್ಟೇ ಅವರು ನಡೆದಿದ್ದಾರೆ. ಉಳಿದ ಅರ್ಧದ ಬಗೆಗೆ ಕನ್ನಡಿಗರೆಲ್ಲರೂ ಆಸೆ ತುಂಬಿ ನೋಡುತ್ತಿದ್ದಾರೆ; ಎಲ್ಲಾ ಬಗೆಯ ಶುಭವನ್ನೂ ಕೋರುತ್ತಿದ್ದಾರೆ.

ಮೇ ೪, ೧೯೭೦

* ರಾಜಕೀಯ ಒಬ್ಬರ ಪಾಲಿಗೆ ಒಂದೊಂದು ರೀತಿ. ಅದು ಕೆಲವರ ಪಾಲಿಗೆ ಅರ್ಥಸಾಧನೆಯ ಶಸ್ತ್ರವಾದರೆ, ಮತ್ತೆ ಕೆಲವರಿಗೆ ಕೀರ್ತಿಸಾಧನೆಯ ಸಾಧನ ವಾಗುತ್ತದೆ. ಕೆಲವರಿಗೆ ಸ್ವಾರ್ಥದ ಬಳ್ಳಿ ಹಬ್ಬಿಸಲು ಹಂದರವಾದರೆ. ಕೆಲವರಿಗೆ ಸೇವೆಯ ಕಂಕಣವಾಗುತ್ತದೆ. ಹಾಗೆ ಕೆಲವರು ಬಯಸಿ ಬಯಸಿ ಈ ರಂಗಕ್ಕೆ ಬಂದರೆ, ಕೆಲವರು ಅನಿವಾರ್ಯವಾಗಿ ಬರುತ್ತಾರೆ.

(ರೇಖಾಚಿತ್ರಗಳು)



ಶ್ರೀಮತಿ ಅಂಬುಜಾ ತ.ರಾ.ಸು.

ಸ್ನೇಹಜೀವಿ

— ಮಾಸ್ಟರ್ ಹಿರಣ್ಣಯ್ಯ

ಅದು, ನಾನು ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಕಲಿಯುತ್ತಿದ್ದ ಕಾಲ. ನಾನು ಆಗ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷನಾಗಿದ್ದೆ. ಕಾಲೇಜಿನ ಆವರಣದಲ್ಲಿ ರಾಜಕೀಯ, ಜಾತೀಯತೆಗಳಿಗೆ ಪ್ರವೇಶವಿಲ್ಲದ ಕಾಲ. ತೈತರೀಯ ಉಪನಿಷತ್ತಿನಲ್ಲಿ ಹೇಳಿದಂತೆ ಗುರು-ಶಿಷ್ಯರು ಒಡಗೂಡಿ, ಪರಬ್ರಹ್ಮನನ್ನು ಪ್ರಾರ್ಥಿಸಿ 'ಓಂ' ಕಾರ ಮಂತ್ರಮುಖೇನ ಜ್ಞಾನಾರ್ಜನೆ ಮಾಡುವ ಪವಿತ್ರ ವಾತಾವರಣವಿದ್ದ ಕಾಲ. ಗುರುಗಳನ್ನು ಗುರುಗಳಂತೆಯೇ ಕಾಣುವ ಅಂದಿನ ವಿದ್ಯಾರ್ಥಿವೃಂದಕ್ಕೆ ಗುರುಗಳ ಮಾತೇ ವೇದವಾಕ್ಯ. ಅವರು ಹಾಕಿದ ಗೆರೆಯನ್ನು ಒಂದಿಷ್ಟೂ ದಾಟದ, ವಿನಯವೇ ಮೂರ್ತಿವೆತ್ತಂತಹ ವಿದ್ಯಾರ್ಥಿವೃಂದದ ಕಾಲ.

ಅಂದು ನಮಗೆ ನಮ್ಮ ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳಿಗೆ ಮುಕ್ತಾಯ ಸಮಾರಂಭಕ್ಕೆ ಬರುವ ಅತಿಥಿ ಬೇಕಾಗಿತ್ತು. ನಾವೆಲ್ಲ ತಲೆ ಕೆರೆದುಕೊಂಡು ಮಧ್ಯಾಹ್ನದವರೆಗೂ ಚರ್ಚಿಸಿ ಸೋತು, ಕೊನೆಗೆ ಗುರುಗಳ ಸಲಹೆ ಕೇಳಲು ಹೋದೆವು. ಅಂದು ನಮಗೆ ಆಂಗ್ಲನಾಟಕದ ಸಾರಸರ್ವಸ್ವವನ್ನು ರಸವತ್ತಾಗಿ ನಿರೂಪಿಸುವ ಮೆಚ್ಚಿನ ಗುರುಗಳೂ, ಇಂದಿನ ನವ್ಯಕಾವ್ಯ ನಿರ್ಮಿತಿಯಲ್ಲಿ ಹೆಸರು ಪಡೆದ ಕವಿಗಳೂ ಆದ ಎಂ. ಗೋಪಾಲಕೃಷ್ಣ ಅಡಿಗರ ಬಳಿ ಹೋದೆವು. ನಮ್ಮ ಸಮಸ್ಯೆಯನ್ನು ಅವರ ಮುಂದಿಟ್ಟೆವು. ಅವರು ಒಂದು ಕ್ಷಣವೂ ಆಲೋಚಿಸದೆ ನಿರ್ವಿಕಾರ ಭಾವದಿಂದ 'ನಮ್ಮ ನಡುವೆಯೇ ಇರುವ ತ.ರಾ.ಸು. ಅವರನ್ನು ಕರೆದು ತನ್ನಿ' ಎಂದು ಸೂಚಿಸಿದರು. ನಮ್ಮ ಸಮಸ್ಯೆ ಒಂದೇ ಕ್ಷಣದಲ್ಲಿ ಉತ್ತರ ಪಡೆದಿತ್ತು. ನಮಗಾದ ಆನಂದ ಅಷ್ಟಿಷ್ಟಲ್ಲ.

ಅಂದು ಕನ್ನಡ ಸಾಹಿತ್ಯಾಕಾಶದಲ್ಲಿ ಅ.ನ.ಕೃ, ಡಿ.ವಿ.ಜಿ, ಮಾಸ್ತಿ, ಜಿ. ಪಿ. ರಾಜರತ್ನಂ, ಬೇಂದ್ರೆ ಮೊದಲಾದವರು ತಮ್ಮ ಕೃತಿಗಳಿಂದ ದೊಡ್ಡ ಹೆಸರು ಮಾಡಿದ್ದರು. ತ. ರಾ. ಸುಬ್ಬರಾಯರು ಅ.ನ.ಕೃ. ಅವರ ಶಿಷ್ಯರೆನಿಸಿ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಅಧ್ವರ್ಯುಗಳಲ್ಲಿ ಒಬ್ಬರಾಗಿ ತಮ್ಮದೇ ಆದ ಶೈಲಿ, ವಿಚಾರಗಳಿಂದ ಸ್ವತಂತ್ರ ಸ್ಥಾನವನ್ನು ನಿರ್ಮಿಸಿಕೊಂಡಿದ್ದರು. ತ.ರಾ.ಸು. ಭಾಷಣಗಳೂ, ಸಾಹಿತ್ಯ ಕೃತಿಗಳೂ ಜನ ಬಯಸುತ್ತಿದ್ದ ಕಾಲ. ತಮ್ಮ ಎಳೆಯ ವಯಸ್ಸಿನಲ್ಲಿಯೇ ಅ.ನ.ಕೃ. ಜೊತೆಗಿದ್ದರೂ ತನ್ನದೇ ಆದ ಭಾಷಾಸಂಪತ್ತು, ಶೈಲಿಯ ಸೊಬಗು, ವಸ್ತು ವೈವಿಧ್ಯ ಓದುಗರನ್ನು ಅಯಸ್ಕಾಂತದಂತೆ ಸೆಳೆಯುವ ಮಾತಿನ ಮೋಡಿಯಿಂದ ತ.ರಾ.ಸು. ಛಲವಸೆಯನ್ನು ಮೂಡಿಸಿದ್ದರು. ಡಾ|| ಅ.ನ.ಕೃ. ಮತ್ತು ತ.ರಾ.ಸು. ಒಂದೇ ನಾಣ್ಯದ ಎರಡು ಮುಖಗಳಂತಿದ್ದರು, ವೇದಿಕೆಯಲ್ಲಿ ನಿಂತರೆ ಒಬ್ಬರನೊಬ್ಬರು ಮೀರಿಸುವ ಮಾತುಗಾರಿಕೆಯಿತ್ತು.

ಗುರುಗಳ ಮಾತಿನಂತೆ ನಾವು ತ.ರಾ.ಸು. ಅವರ ಮನೆಗೆ ಹೋದೆವು. ಸಿಗರೇಟಿನ ಹೊಗೆಯ ಕುಂಡದಲ್ಲಿ ಸುಬ್ಬರಾಯರು ಕುಳಿತಂತಿತ್ತು, ಅವರು ಸೇದುವ ಸಿಗರೇಟಿನ ಪುಂಖಾನುಪುಂಖ ಹೊಗೆ. ಆ ದಟ್ಟ ಹೊಗೆಯ ಹಿನ್ನೆಲೆಯಲ್ಲಿ ಒಂದು ತೇಜಃಪುಂಜವಾದ ಮುಖಮಂಡಲ. ಕೆದರಿದ ಕೂದಲು. ಆಲೋಚನಾಭಾರದಿಂದ ಸಂಚರಿಸುವ ನೇತ್ರಗಳು ಇಂದಿಗೂ ನನ್ನ ನೆನಪಿನಲ್ಲಿ ಅಚ್ಚಳಿಯದೇ ನಿಂತಿವೆ.

ನಾವು ಶಾರದಾವಿಲಾಸ ಕಾಲೇಜಿನ ವಿದ್ಯಾರ್ಥಿಗಳೆಂದೊಡನೆಯೇ ಅವರಿಗೆ ತಿಳಿದು ಹೋಗಿತ್ತು ನಮ್ಮ ಗುರು ಗೋಪಾಲಕೃಷ್ಣ ಅಡಿಗರು ನಮ್ಮನ್ನು ಕಳಿಸಿದ್ದು ಎಂದು. ಆದರೂ ಪೀಠಿಕೆಯಲ್ಲಿ ನಾವು ಅವರ ಹೆಸರು ಹೇಳಿ ತಾವು ನಮ್ಮ ಕಾರ್ಯಕ್ರಮಕ್ಕೆ ಆಗಮಿಸಿ ನಮಗೆಲ್ಲ ನಾಲ್ಕು ಮಾತು ಹೇಳಬೇಕೆಂದು ಬಿನ್ನವಿಸಿಕೊಂಡೆವು. ಮೀನ-ಮೇಷಗಳನ್ನೆಣಿಸದೆ ಒಪ್ಪಿದರು. ಮಾತಿನಂತೆ ತಾವಾಗಿಯೇ ಬಂದರು.

ನಮ್ಮ ಕಾಲೇಜಿನ ವಿದ್ಯಾರ್ಥಿಗಳಷ್ಟೇ ಅಲ್ಲ ಸುತ್ತಮುತ್ತಲಿನ ಕಾಲೇಜಿನ ವಿದ್ಯಾರ್ಥಿಗಳೂ ಬಂದಿದ್ದರು. ಪ್ರಾಚಾರ್ಯರು, ಅಧ್ಯಾಪಕರು, ಹಿರಿಯರು ಎಲ್ಲರೂ ಬಂದು ಸಭಾಂಗಣ ಕಿಕ್ಕಿರಿದು ತುಂಬಿತ್ತು. ಸುಬ್ಬರಾಯರು ಮಾತಿಗೆ ಎದ್ದು ನಿಂತಕೂಡಲೆ ಸಭೆಯಲ್ಲಿ ಶಾಂತತೆ ಪಸರಿಸಿತು. ಸುಬ್ಬರಾಯರು ತಮ್ಮ ಅಸ್ಖಲಿತ ವಾಗ್ವೈಖರಿಯಿಂದ ಪರಿಪೂರ್ಣ ವಿಚಾರ ಸರಣಿಯಿಂದ, ಗಾರುಡಿಗನಂತೆ ಬೀಸುವ ಮಾತಿನ ಮೋಡಿಯಿಂದ ಪ್ರೇಕ್ಷಕರ ಹೃದಯವನ್ನು ಸೂರೆಮಾಡಿದರು. ಕನ್ನಡ ನಾಡು, ನುಡಿ, ಇತಿಹಾಸ, ಸಂಸ್ಕೃತಿಗಳ ಬಗೆಗಿರುವ ಅವರ ಅಭಿಮಾನ, ಅಧ್ಯಯನಗಳಿಂದ ಸಭೆ ಪ್ರಭಾವಿತವಾಗಿತ್ತು. ಅಂದಿನ ಆ ವಿದ್ವತ್ಪೂರ್ಣ ಭಾಷಣ ನನ್ನ ಕಿವಿಗಳಲ್ಲಿಂದಿಗೂ ಮಾರ್ದನಿಸುತ್ತಿದೆ. ತ.ರಾ.ಸು. ಅವರ ಅಂದಿನ ಭಾಷಣ ನನಗೆ ಸ್ಫೂರ್ತಿಕೇಂದ್ರವಾಯಿತು. ಅವರು ನಿಂತ ನಿಲುವು, ಮಾತಿನ ಮೋಡಿ, ಧಾರಾಕಾರವಾಗಿ ಸುರಿಯುವ ಮಳೆಯಂತಿರುವ ಶಬ್ದ ಸಂಪತ್ತು, ಅವರ ಹಿಂದಿರುವ ಪ್ರಗಲ್ಭ ವಿಚಾರ ವೈಭವ, ಅಂದು ಅವರಿಗೆ ದೊರೆತ ಕರತಾಡನಗಳ ಸುರಿಮಳೆ, ಸಾವಿರಾರು ಬಾಯಿಯಿಂದ ಬಂದ ಪ್ರಶಂಸೆ ನನ್ನನ್ನು ಬಡಿದೆಬ್ಬಿಸಿತು. ನಾನೂ ಒಂದಲ್ಲ ಒಂದು ದಿನ ಹೀಗೆಯೇ ಮಾತಿನ ಮೋಡಿಯಿಂದ ಜನತೆಯ ಹೃದಯವನ್ನು ಗೆಲ್ಲಬೇಕು, ಲಕ್ಷಾಂತರ ಹೃದಯ ಮಂದಿರಗಳಲ್ಲಿ ಶಾಶ್ವತ ಸ್ಥಾನ ಪಡೆಯಬೇಕು, ಮಾತು ಮುತ್ತಿನಂತೆ ಪೋಣಿಸಿದರೆ ಅದೆಷ್ಟು ಪರಿಣಾಮಕಾರಿಯಾಗುತ್ತದೆ. ಜನತೆಯ ಹೃದಯವನ್ನು ತಟ್ಟುತ್ತದೆ, ಮಾತು ಮಲ್ಲಿಗೆಯಂತೆ ಅರಳಬೇಕು ಅವಕ್ಕೆ ಆಳವಾದ ಅಧ್ಯಯನ, ವಿಶಾಲವಾದ ಅನುಭವ, ಜಗತ್ತನ್ನು ನೋಡುವ ಕಣ್ಣು ಪಡೆದು, ಅದನ್ನು ಸಾಧಿಸಿ ಬೆಂಗಳೂರಿನಂಥ ನಗರದಲ್ಲಿ ನಿಂತು ಮಾತಿನಿಂದ ಮನಸ್ಸು ಗೆಲ್ಲುತ್ತೇನೆ ಎಂದು ಮನಸ್ಸು ಒಂದು ನಿರ್ಧಾರಕ್ಕೆ ಬಂದಿತು. ಅಂದಿನಿಂದ ನಾನೂ ಸರಸ್ವತಿಯ ನಿತಾಂತ ಭಕ್ತನಾದೆ.

ಅಂದಿನಿಂದ ನಾನು ಬದುಕು ನೋಡುವ 'ದೃಷ್ಟಿ'ಯೇ ಬದಲಾಯಿತು. ನಾನು ಕಲ್ಪನೆಗಳ ಭಾರದಿಂದ ಜಗ್ಗದೆ ವಾಸ್ತವ ಪ್ರಪಂಚದಲ್ಲಿ ನಿಂತು ನಮ್ಮ ಸುತ್ತಮುತ್ತ

ನಡೆಯುವ ಅನ್ಯಾಯ, ಅನಾಚಾರ, ಭ್ರಷ್ಟಾಚಾರಗಳನ್ನು ನೋಡಿ ಮಾನವನ ನೈತಿಕ ಪತನ ಹೇತು ಕಂಡು ಮರುಗಿದೆ. ವೇದೋಪನಿಷತ್ತುಗಳನ್ನು ಓದಿದೆ. ಪುರಾಣ ಮಹಾಭಾರತ-ರಾಮಾಯಣಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿದೆ. ಅದೇಕೆ; ಡಾ.॥ ಅ.ನ.ಕೃ.. ತ.ರಾ.ಸು.. ಡಿ.ವಿ.ಜಿ., ಮಾಸ್ತಿ ಮೊದಲಾದ ಮಹನೀಯರ ಕೃತಿಗಳನ್ನೆಲ್ಲ ಒಂದೂ ಬಿಡದೆ ಓದಿದೆ. ಕನ್ನಡ ನಾಡು-ನುಡಿಯ ಇತಿಹಾಸ ತಿಳಿದು ಕೊಂಡೆ. ನಮ್ಮ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿದೆ. ಇಂದು ನಾನು ವೇದಿಕೆಯ ಮೇಲೆ ನಿಂತು ನಿತ್ಯ ಸಾವಿರಾರು ಪ್ರೇಕ್ಷಕರ ಹೃದಯವನ್ನು ಗೆದ್ದು ಕೊಳ್ಳಲು ಕಾರಣವಾದ ಆ ಕ್ಷಣ ಅಂದು ತ.ರಾ.ಸು. ನೀಡಿದ ಅಪೂರ್ವ ಭಾಷಣ.

ತ.ರಾ.ಸು. ಇಂದು ಪರಿಪಕ್ವಾವಸ್ಥೆಯಲ್ಲಿದ್ದಾರೆ. ಅವರ ಜ್ಞಾನದ ತೃಷೆ ಇಂದಿಗೂ ಹಿಂಗಿಲ್ಲ. ತಾವು ಕಂಡುಂಡ ಬದುಕಿನ ಸತ್ಯವನ್ನು ಅವರು ತಮ್ಮ ಓದುಗರಿಗೆ ಕೃತಿ ಗಳಿಂದ ನೀಡಿದ್ದಾರೆ. ಅನೇಕ ವರ್ಷಗಳ ನಂತರ ನಮ್ಮ ನಾಟಕ ಕಂಪನಿ ಮೈಸೂರು ಮುಕ್ಕಾಮು ಮಾಡಿತು. ನನ್ನ ಅಂದಿನ ಆಸೆ ಚಿಗುರುತ್ತ ನಡೆದಿತ್ತು. ನನ್ನ ಪೂಜ್ಯ ತಂದೆಯವರು ಹಾಕಿಕೊಟ್ಟ ದಾರಿಯಲ್ಲಿ ನಾನು ನಾಲ್ಕಾರು ಹೆಜ್ಜೆ ಮುಂದೆ ಹೋಗಿದ್ದೆ. ಒಂದು ದಿನ ತ.ರಾ.ಸು. ನನಗೆ ನಮ್ಮ ಥಿಯೇಟರ್ ಬಳಿಯೇ ಭೇಟಿಯಾದರು. "ಏನಪ್ಪ ಸರಸ್ವತಿ ಪುತ್ರ ಹೇಗಿದ್ದಿ"? ಅಂದರು. ಥಟ್ಟನೆ ನನ್ನ ಬಾಯಿಂದ ಬಂದೇ ಬಿಟ್ಟಿತು ಉತ್ತರ. "ನನ್ನ, ಮಗನೇ ಅಂದು ಬಿಟ್ರಲ್ಲಾ ಸ್ವಾಮೀ" ಎಂದೆ. ಒಂದು ನಿಮಿಷ ಇಬ್ಬರೂ ಮೌನ ...... ಕಾರಣ ? ವಿವರ ಅನಗತ್ಯ. ಅನಂತರ ನಗುತ್ತ "ಇಷ್ಟು ಮಾತು ಕಲೀದಿದ್ರೆ ಹಾಗಿದ್ದೋನು ಹೀಗಾಗ್ತಿದ್ಯ" ಎಂದರು. ಕಾರಣ ಅವರು ನನ್ನನ್ನು ಹಾಗೂ ನೋಡಿದ್ದರು. ಈಗ ಹೀಗೂ ನೋಡುತ್ತಿದ್ದಾರೆ. ಆದರೆ ತ.ರಾ.ಸು. ಈ ಮಧ್ಯೆ ತಮ್ಮ ಒಂದೊಂದು ಕೃತಿಗಳಿಂದ ಮೇರುಸದೃಶರಾಗಿ ಬೆಳೆ ದಿದ್ದರು. ಕೀರ್ತಿ-ಕಾಂಚನ ಸಂಪಾದಿಸಿದ್ದರು. ಆದರೂ ಅವರಲ್ಲಿ ಅದೇ ನಗುಮುಖ, ಅದೇ ಸರಳತೆ, ಅದೇ ಆತ್ಮೀಯತೆ, ಅದೇ ಅಭಿಮಾನ, ಅನುಕಂಪ ಇತ್ಯಾದಿ ಎಲ್ಲ ಒಂದೇ. ತ.ರಾ.ಸು. ಸ್ನೇಹಜೀವಿ. ಒಮ್ಮೆ ಕಂಡರೆ ಸಾಕು. ಅಯಸ್ಕಾಂತದಂತೆ ಸೆಳೆದು ಬಿಡುತ್ತಾರೆ. ಮುಂದೆ ಅವರ ನಿಷ್ಕಲ್ಮಷ ಸ್ನೇಹಗಂಗೆಯಲ್ಲಿ ನಲಿದು ಮುಂದುವರಿಯಬೇಕು.

'ಸತ್ಯ' ಎಲ್ಲರಿಗೂ ಅರಿವಾಗುತ್ತದೆ. ಆದರೆ ಎಲ್ಲರೂ ಬಾಯಿ ಬಿಡುವುದಿಲ್ಲ. ಬಾಯಿಬಿಟ್ಟರೆ ತಮ್ಮ ಸ್ಥಾನಮಾನಕ್ಕೇನಾದರೂ ಅಪಾಯ ಬಂದೀತು, ಮಿತ್ರ ಆಪ್ತೇಷ್ಟರ ಅವಕೃಪೆಗೆ ಗುರಿಯಾಗಬೇಕಾದೀತು. ಎಂಬ ಅಳುಕಿನಿಂದ ಕೆಲವರು ಕಂಡ 'ನಗ್ನಸತ್ಯ' ವನ್ನು ನೋಡಿ ಕಣ್ಮುಚ್ಚಿ-ಬಾಯ್‌ಮುಚ್ಚಿ ಕುಳಿತುಕೊಳ್ಳುತ್ತಾರೆ. ಆದರೆ ಕೀರ್ತಿಶೇಷ ಅ.ನ.ಕೃ. ಹಾಗಲ್ಲ. ಅವರು ಕಂಡದ್ದನ್ನು ಕಂಡಂತೆಯೇ ಹೇಳಿ ಬದುಕಿದವರು. ಅವರ ಶಿಷ್ಯ-ಸ್ನೇಹಿತ ಸುಬ್ಬರಾಯರೂ ಅಷ್ಟೇ, ಸತ್ಯವನ್ನು ಯಾರ

ಮುಲಾಜಿಗೂ ಒಳಗಾಗದೆ ಬಿಚ್ಚು ಮನಸ್ಸಿನಿಂದ ಹೇಳುತ್ತಾರೆ, ಅಷ್ಟೇ ಖಾರವಾಗಿ ಬರೆಯುತ್ತಾರೆ. ಇದರಿಂದ ನನಗೆ ತ.ರಾ.ಸು. ಪ್ರಿಯರಾಗುತ್ತಾರೆ.

ತ.ರಾ.ಸು. ಅವರಿಗೆ ಆಯುರಾರೋಗ್ಯ ಭಾಗ್ಯ 'ಶ್ರೀಲಲಿತೆ' ನೀಡಿ ಅವರಿಂದ ಹೆಚ್ಚಿನ ಸೇವೆ ಕನ್ನಡ–ನಾಡು ನುಡಿಗಾಗಲಿ ಎಂದು ಮನಸಾರೆ ಬಯಸುತ್ತೇನೆ. ●

* ಗಾಳಕ್ಕೆ ಸಿಕ್ಕ ಮೀನು, ಬೆಸ್ತನ ಕೈಗೆ ಬರುವುದಕ್ಕೆ ಮುಂಚೆ, ನೀರಿನಲ್ಲೇ ಎಲ್ಲೆಲ್ಲೋ ಹೊಯ್ದಾಡುತ್ತದೆ, ಗಾಳದ ದಾರ ಇದ್ದಷ್ಟು ದೂರವೂ ತುಯ್ದಾಡುತ್ತದೆ.

(ಒಮ್ಮೆ ನಕ್ಕು ನಗು)

ಕನ್ನಡ ಸಿಂಹ

— ಡಾ|| ಮಲ್ಲಿಕಾರ್ಜುನ ಮನಸೂರ

ಕನ್ನಡದ ಕ್ರಿಯಾಶಕ್ತಿ ಕೀರ್ತಿಶೇಷ ಅ.ನ.ಕೃ. ಅವರ ಗರಡಿಯಲ್ಲಿ ಪಳಗಿದ ಪ್ರಗತಿಶೀಲರಲ್ಲಿ ತ ರಾ.ಸು. ಒಬ್ಬರು. ಕನ್ನಡದ ಕೈಂಕರ್ಯ ಕೈಕೊಂಡ ತಳುಕಿನ ವೆಂಕಣ್ಣಯ್ಯನವರ ಮನೆತನದಲ್ಲಿ ಹುಟ್ಟಿದ ತ.ರಾ.ಸು.ಗೆ ಕನ್ನಡ ಅಭಿಮಾನ, ಕನ್ನಡದ ಕಾರ್ಯ ಗೌರವ, ಕರ್ನಾಟಕದ ಸಾಹಿತ್ಯ–ಶಿಲ್ಪ, ಸಂಗೀತಗಳ ಆಳವಾದ ಅಭ್ಯಾಸ, ಪಾಶ್ಚಾತ್ಯ ಸಾಹಿತ್ಯಗಳ ಪರಿಚಯ ಮಾಡಿಕೊಟ್ಟವರು ಅ.ನ.ಕೃಷ್ಣರಾಯರು.— ಈ ಮಾತನ್ನು ತ.ರಾ.ಸು. ಕೃತಜ್ಞತೆಯಿಂದ ತಮ್ಮ ಅನೇಕ ಸಭೆ–ಸಮಾರಂಭಗಳಲ್ಲಿ ಹೇಳುತ್ತಿರುತ್ತಾರೆ.

ತ.ರಾ.ಸು. ಅವರ ಪರಿಚಯ ನನಗೆ ಅ.ನ.ಕೃ. ಅವರ ಮನೆಯಲ್ಲಿ. ಆಗ ನಾನು, ನನ್ನ ಅಣ್ಣ ಬಸವರಾಜ ಮನಸೂರ್, ನಾಡಿಗೇರ ಕೃಷ್ಣರಾಯ, ಎಂ. ರಾಮಮೂರ್ತಿ ಹೀಗೆ ಕನ್ನಡದ ಬಳಗವೆಲ್ಲ ಕೃಷ್ಣರಾಯರ ಬಳಗವಾಗಿದ್ದ ಕಾಲ ಅಥವಾ ಕೃಷ್ಣರಾಯರ ಬಳಗವೆಲ್ಲ ಕನ್ನಡದ ಡಿಂಡಿಮ ಬಾರಿಸುತ್ತಿದ್ದ ಕಾಲ. ನಮ್ಮದೆಲ್ಲ ಆಗ ಸಾಧನೆಯ ಕಾಲ. ಸಾಹಿತಿಗಳು ತಮ್ಮ ಕೃತಿಯ ಮೂಲಕ ಕನ್ನಡಮ್ಮನ ಸೇವೆ ಸಲ್ಲಿಸುತ್ತಿದ್ದರೆ, ನನ್ನಣ್ಣ ರಂಗಭೂಮಿಯಲ್ಲಿ, ನಾನು ಸಂಗೀತ ಕ್ಷೇತ್ರದಲ್ಲಿ, ಎಸ್. ಆರ್. ಸ್ವಾಮಿ, ಎಸ್. ಎನ್. ಸ್ವಾಮಿ ಮೊದಲಾದವರು ಚಿತ್ರಕಲೆಯಲ್ಲಿ ಅಂತೆಯೇ ನೃತ್ಯ, ಶಿಲ್ಪ ಕಲೆಯಲ್ಲಿಯೂ, ರಾಜಕೀಯವಲಯದಲ್ಲಿ, ಸಾಮಾಜಿಕ ಸೀಮೆಯಲ್ಲಿ ಪರಿಣತರಾದವರು ಕೂಡುತ್ತಿದ್ದ, ಕೂಡಿ ಸಾಹಿತ್ಯ–ಸಂಗೀತಾದಿಗಳ ಕುರಿತು ವಿಚಾರ ಮಂಥನ ಮಾಡುತ್ತಿದ್ದ ಕಾಲ ತಾರುಣ್ಯದ ಹೊಸ್ತಿಲಲ್ಲಿ, ಅನೇಕ ಕೆಲಸಗಳನ್ನು ತಲೆಗೆ ಅಂಟಿಸಿಕೊಂಡು ನನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಾಧನೆಯಲ್ಲಿ ತೊಡಗಿದ ಕಾಲದಲ್ಲಿ ನಾನು ತ.ರಾ.ಸು. ಅವರನ್ನು ಕಂಡೆ. ಅಂದಿನಿಂದ ಇಂದಿನವರೆಗೂ ನನಗೆ ತ.ರಾ.ಸು. ಹತ್ತಿರದವರಾಗಿದ್ದಾರೆ. ಆತ್ಮೀಯತೆ ಬೆಳೆಯಿಸಿಕೊಂಡು ಬಂದಿದ್ದಾರೆ. ಅನಂತರ ಅವರು ಅನೇಕಬಾರಿ ಧಾರವಾಡಕ್ಕೆ ಬಂದಿದ್ದಾರೆ. ಧಾರವಾಡ, ಹುಬ್ಬಳ್ಳಿಗೆ ಬಂದಾಗ ಅವರು ನನ್ನ ಮನೆಗೆ ಬರದೆ ಹೋಗುವುದಿಲ್ಲ. ಬಂದಾಗ ಅವರಿಗಾಗಿ ನಾನು ಹಾಡಬೇಕು. ತ.ರಾ.ಸು. ಅವರಿಗೆ ಸಂಗೀತ ಜ್ಞಾನವಿದೆ. ಅವರು ಒಬ್ಬ ಗಾಯಕರಲ್ಲದಿದ್ದರೂ ಅವರಲ್ಲಿ ಗಾಯಕನಿಗೆ ಗೊತ್ತಿರುವ ಸಂಗೀತದ ಲಕ್ಷಣಗಳು ತಿಳಿದಿವೆ. ಅ.ನ.ಕೃ. ಅವರಂತೆ ತ.ರಾ.ಸು. ಅವರಿಗೆ ದಕ್ಷಿಣಾದಿ – ಉತ್ತರಾದಿ ಸಂಗೀತದ ವೈವಿಧ್ಯ – ವೈಶಿಷ್ಟ್ಯ ಗೊತ್ತುಂಟು ಇದೇ ರೀತಿಯಲ್ಲಿ ಮಹಾರಾಷ್ಟ್ರದಲ್ಲಿ ಹಾಸ್ಯ ಸಾಹಿತ್ಯಕ್ಕೊಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟ ನನ್ನ ಮಿತ್ರರಾದ ಪು. ಲ. ದೇಶಪಾಂಡೆ ಯಂಥವರು ಮುಂಬಯಿ ಇಂದ ಇಲ್ಲಿಗೆ ಬಂದು ನನ್ನನ್ನೂ

ಹಾಡಿಸುತ್ತಾರೆ. ಇಂಥ ಒಬ್ಬ ರಸಿಕನಿದ್ದರೆ, ಒಬ್ಬ ಸಹೃದಯನಿದ್ದರೆ, ಒಬ್ಬ ಸಂಗೀತಪ್ರೇಮಿಯಿದ್ದರೆ ನಮಗೆ ಅದು ತುಂಬಿದ ಸಭೆಯಿದ್ದಂತೆ. ಅವರು ಕೇಳಿ ಸಂತೋಷಪಟ್ಟರೆ ನಮ್ಮ ಹುರುಪು ಗರಿಗೆದರುತ್ತದೆ. ಕಲಾವಿದನ ಜೀವನವೇ ಹಾಗೆ–ತನ್ನ ಸಾಧನೆಯನ್ನು ತಿಳಿದುಕೊಳ್ಳುವ ಜನರಿದ್ದರೆ ಬೇರಿನ್ನೇನು ಬೇಕು ? ಹೀಗೆ ಅನೇಕಬಾರಿ ತ.ರಾ.ಸು. ನಮ್ಮಲ್ಲಿಗೆ ಬಂದರು. ನನ್ನನ್ನು ಅಲ್ಲಲ್ಲಿ ಸಂಗೀತ ಕಛೇರಿಗಳಿಗೆ ಆಹ್ವಾನಿಸಿದರು. ಕೆಲವು ಮಿತ್ರರು ನನ್ನ – ಅವರ ಸ್ನೇಹ ಸಾಮೀಪ್ಯವನ್ನು ಗುರುತಿಸಿ "ಸಮಾರಂಭಕ್ಕೆ ತ.ರಾ.ಸು. ಬರುತ್ತಾರೆ, ನೀವೂ ಬರಬೇಕು, ಅವರೇ ಹೇಳಿ ಕಳುಹಿಸಿದ್ದಾರೆ" ಎಂದು, ಅವರ ಬಳಿಹೋಗಿ "ಮಲ್ಲಿಕಾರ್ಜುನ ಮನಸೂರ್ ಬರುತ್ತಾರೆ, ಅವರು ನಿಮ್ಮನ್ನು ಬರಹೇಳಿದ್ದಾರೆ" ಎಂದು ಹೇಳಿ ಒಂದೇ ವೇದಿಕೆಯ ಮೇಲೆ ನಮ್ಮಿಬ್ಬರನ್ನು ಕೂಡಿಸಿದ್ದುಂಟು, ಅಲ್ಲಿ ಅವರದು ಪ್ರಚಂಡ ಭಾಷಣ, ನನ್ನ ಸಂಗೀತ ಸೇವೆ ಕೊನೆಗೆ, ಕೊನೆಗೆ ನಾವಿಬ್ಬರೂ ಸಮಾರಂಭ ಮುಗಿದ ಬಳಿಕ ನಮ್ಮ ರೂಮಿಗೆ ಹೋಗಿ ಗಂಟೆಗಟ್ಟಲೆ ಹರಟಿದ್ದುಂಟು. ಒಬ್ಬರಿಗೊಬ್ಬರು ತಿಳಿದುಕೊಳ್ಳಲು ಪ್ರಯತ್ನಿಸಿದ್ದುಂಟು.

ತ.ರಾ.ಸು. ಭಾಷಣಕ್ಕೆ ನಿಂತರೆ ಮೊದಲ ಮಾತಿನಲ್ಲಿಯೇ ಶ್ರೋತೃಗಳನ್ನು ಮಾಂತ್ರಿಕನಂತೆ ಸೆರೆಹಿಡಿಯುತ್ತಾರೆ. ತಾವು ಮಂಡಿಸಬೇಕಾದ ವಿಷಯವನ್ನು ಹಂತ ಹಂತವಾಗಿ ಮಂಡಿಸುತ್ತಾ ಶ್ರೋತೃಗಳು ಒಂದಿಷ್ಟೂ ಸ್ಥಳ ಬಿಟ್ಟು ಕದಲದಂತೆ ಪ್ರಭಾವ ಬೀರುತ್ತಾರೆ. ಅ.ನ.ಕೃ. ಅವರ ವಾಗ್ವೈಖರಿ ಗಂಗಾಪ್ರವಾಹದಂತೆ ಶಾಂತ–ಸಮೃದ್ಧ. ವಿಚಾರ ಪರಿಪ್ಲುತ. ಆದರೆ ಸುಬ್ಬರಾಯರ ಭಾಷಣ ಜೋಗ ಜಲಪಾತದಂತೆ. ವಾಕ್ಪ್ರಯೋಗಗಳು, ವಿಚಾರ ತುಷಾರಗಳು ಸಿಡಿಯುತ್ತವೆ. ಅಲ್ಲಿ ಕನ್ನಡದ ಕೆಚ್ಚನ್ನು ಕಾಣಬಹುದು. ಕನ್ನಡದ ಸ್ನಿಗ್ಧ ಶೀತಲ ಸೌಂದರ್ಯ ಕಾಣಬಹುದು. ಕನ್ನಡದ ರಮಣೀಯತೆ ಕಾಣಬಹುದು. ಕರ್ನಾಟಕದ ಘನ ಪರಂಪರೆ, ಇತಿಹಾಸ, ಸಂಸ್ಕೃತಿಗಳ ಸಮೀಕ್ಷೆಯನ್ನು ಕಾಣಬಹುದು. ನಾಡು–ನುಡಿಯ ಹಿರಿಮೆ–ಗರಿಮೆಗಳನ್ನು ಗುರುತಿಸಬಹುದು.

ತ.ರಾ.ಸು, ಎಷ್ಟು ಒಳ್ಳೆಯ ಬರೆಹಗಾರರೋ ಅಷ್ಟೇ ಉತ್ತಮ ವಾಗ್ಮಿಗಳು. ತ.ರಾ.ಸು ಓದಿಕೊಂಡಿದ್ದನ್ನು ಅರಗಿಸಿ ಕೊಂಡಿದ್ದಾರೆ. ಚಿಂತನ ಮನನಗಳಿಂದ ತ.ರಾ.ಸು. ಬೆಳೆದಿದ್ದಾರೆ. ಅಂತೆಯೇ ಹಂಸಗೀತೆಯಂತಹ ಒಂದು ಕೃತಿ ಬರೆಯುವುದೇನು ಸಾಮಾನ್ಯ ಮಾತಲ್ಲ. ಅದನ್ನು ಓದುತ್ತಿದ್ದಾಗ ತ.ರಾ.ಸು. ಅವರು ಮಾಡಿದ ಸಂಗೀತದ ಆಳ ಅಧ್ಯಯನದ ಅರಿವು ಆಗುತ್ತದೆ. "ನೃಪತುಂಗ" "ಸಿಡಿಲ ಮೊಗ್ಗು" "ಕೀರ್ತಿ ನಾರಾಯಣ" ಅಥವಾ ಚಿತ್ರದುರ್ಗದ ಕಾದಂಬರಿ ಮಾಲೆಯನ್ನು ಓದಿದಾಗ ಅವರು ಇತಿಹಾಸ ಚಿತ್ರವನ್ನು ಜೀವಂತಗೊಳಿಸಲು ಸಮಗ್ರ ಇತಿಹಾಸವನ್ನು ಎಷ್ಟು ಓದಿ ಮೈಗೂಡಿಸಿಕೊಂಡಿದ್ದಾರೆಂಬುದು ಅರ್ಥವಾಗುತ್ತದೆ. ಅಂದಿನ ಪಾತ್ರಗಳನ್ನು ಜೀವಂತಗೊಳಿಸುವ ಕಲೆ, ಅಂದಿನ ಸಾಮಾಜಿಕ ಸ್ಥಿತಿಯನ್ನು ಸಜೀವ

ಗೊಳಿಸುವ ಕಲೆ, ಅಂದಿನ ಸಾಹಿತ್ಯ, ಸಂಸ್ಕೃತಿ, ಕಲೆಗಳ ದರ್ಶನ ನೀಡುವಂತಹ ಕಲೆಗಾರಿಕೆ ತ.ರಾ.ಸು. ಒಬ್ಬರಿಗೆ ಸಾಧಿಸಿದೆಯೆಂದರೆ ಅತಿಶಯೋಕ್ತಿಯಲ್ಲ. ತ.ರಾ.ಸು. ಒಂದು ವಿಷಯವನ್ನು ಎಷ್ಟು ಆಳವಾಗಿ ಅಭ್ಯಸಿಸುತ್ತಾರೆಂಬುದಕ್ಕೆ ಅವರ 'ಚಕ್ರೇಶ್ವರಿ' ಒಂದು ನಿದರ್ಶನ. ನಾನು ಎಲ್ಲ ಕಾದಂಬರಿಗಳನ್ನು ಓದಿಲ್ಲ. ಆದರೆ ಓದಿದ ಕೆಲವು ಕಾದಂಬರಿಗಳಲ್ಲಿ ತ.ರಾ.ಸು. ಅವರು ಅ.ನ.ಕೃ.ರಿಗಿಂತ ಭಿನ್ನರಾಗಿ ಬೆಳೆದುದು ಗೊತ್ತಾಗುತ್ತದೆ. ಸ್ವತಂತ್ರ ವ್ಯಕ್ತಿತ್ವ ಎದ್ದು ಕಾಣುತ್ತದೆ. ಇಲ್ಲಿ ಯಾರು ದೊಡ್ಡವರು—ಯಾರು ಸಣ್ಣವರು ಎಂಬುದು ಮುಖ್ಯವಲ್ಲ. ಇಬ್ಬರೂ ಅಷ್ಟೇ ದೊಡ್ಡವರು. ತ.ರಾ.ಸು. ಇಷ್ಟು ಎತ್ತರವಾಗಿ ಬೆಳೆಯಲು ಕಾರಣ ಅವರಲ್ಲಿರುವ ಪ್ರಾಮಾಣಿಕತೆ. ತ.ರಾ.ಸು. ಸಿದ್ದವನಹಳ್ಳಿ ಕೃಷ್ಣಶರ್ಮರಲ್ಲಿ ಕೆಲವು ಕಾಲ ಕೆಲಸ ಮಾಡಿದರು. ಸಿದ್ದವನಹಳ್ಳಿ ನಿಜಲಿಂಗಪ್ಪನವರ ನೇತೃತ್ವದಲ್ಲಿ ಚಳವಳಿ ಸೇರಿದರು. ಗುರು–ಹಿರಿಯರರಿಂದ ಅನುಗ್ರಹಿತರಾದರು ಇದೆಲ್ಲವನ್ನು ಪ್ರಾಮಾಣಿಕತೆಯಿಂದ ಒಪ್ಪಿಕೊಳ್ಳುವ ತ.ರಾ.ಸು. ತನ್ನನ್ನು ಬೆಳೆಯಿಸಿದವರನ್ನು ಇಂದಿಗೂ ಮರೆಯುವುದಿಲ್ಲ. ತಾನು ಅ.ನ.ಕೃ. ಶಿಷ್ಯನೆಂಬುದರಲ್ಲಿ ತನಗೆ ಹೆಮ್ಮೆಯಿದೆಯೆಂದು ಅವರು ಇಂದಿಗೂ ಹೇಳುತ್ತಾರೆ. ಅ.ನ.ಕೃ. ಅವರ ಅಪ್ಪಟ ಶಿಷ್ಯ ತ.ರಾ.ಸು. ಎಂಬುದು ಕರ್ನಾಟಕಕ್ಕೆ ಗೊತ್ತಿರುವ ಮಾತು. ಕೃಷ್ಣರಾಯರು, ತ.ರಾ.ಸು. ಇಬ್ಬರೂ ಸಮಾನ ವ್ಯಸನಿಗಳು ಸಮಾನ ಧರ್ಮಿಗಳು. ಇಬ್ಬರೂ ಕನ್ನಡದ ಉಗಿಬಂಡಿಯ ಎರಡು ರೈಲುಕಂಬಿಗಳಂತೆ ಸಮಾನಾಂತರವಾಗಿ ಬೆಳೆದಿದ್ದಾರೆ. ಸ್ವತಂತ್ರವಾಗಿ ಬದುಕಿದ್ದಾರೆ. ಅ.ನ. ಕೃಷ್ಣರಾಯರ ಸಾಹಿತ್ಯ ಸಾಮಾಜಿಕ ಸೇವೆಯನ್ನು ಗುರುತಿಸಿದ, ಗೋವೆಯಲ್ಲಿ ಕನ್ನಡ ಕಹಳೆಯನ್ನೂದಿದ ಶಾ. ಮಂ. ಕೃಷ್ಣರಾಯರು, ತ.ರಾ. ಸುಬ್ಬರಾಯರಿಗೂ ಗೌರವಗ್ರಂಥವನ್ನರ್ಪಿಸುವುದು ಸ್ವಾಗತಾರ್ಹ. ಅರವತ್ತು ತುಂಬಿದ ತ.ರಾ. ಸುಬ್ಬರಾಯರಿಗೆ, ಎಪ್ಪತ್ತು ತುಂಬಿದ ನಾನು, ಅವರು ನೂರು ವರುಷ ಸುಖಿ ಸಮೃದ್ಧಿಯಿಂದ ಬದುಕಿ ಕನ್ನಡ ಸಾರಸ್ವತ ಪ್ರಪಂಚವನ್ನು ಶ್ರೀಮಂತಗೊಳಿಸಲಿ ಎಂದು ಮನಸಾರೆ ಹಾರೈಸುತ್ತೇನೆ.

* ದೇವರು ದೊಡ್ಡವರಲ್ಲಿ ನನಗೆ ನಂಬಿಕೆಯಿದೆ ಎಂದು ನನಗೆ ಆಧುನಿಕ ವಿಜ್ಞಾನದಲ್ಲಿ ಅವರ ಸಾಧನೆಗಳ ವಿಷಯದಲ್ಲಿ ಅಶ್ರದ್ಧೆಯಿಲ್ಲ.

ಸ್ಫೂರ್ತಿ ಚೇತನ

— ಆರ್ಯಾಂಬ ಪಟ್ಟಾಭಿ

ತ್ರಿ.ರಾ.ಸು. ಎಂಬ ಮೂರಕ್ಷರಗಳಿಂದ ಕನ್ನಡ ನಾಡಿನಲ್ಲೆಲ್ಲ ಪರಿಚಿತವಾಗಿರುವ ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್ ಕನ್ನಡ ಕಾದಂಬರಿ ಸಾಹಿತ್ಯದ ಚಿರನೂತನ ಸಚೇತನ ಶಕ್ತಿ. ತ.ರಾ.ಸು. ರವರ ಹೆಸರನ್ನು ಕೇಳದ, ಅವರ ಕಾದಂಬರಿಗಳನ್ನು ಓದದೆ ಇರುವ ಕನ್ನಡಿಗನೇ ಇಲ್ಲವೆಂದು ಹೇಳಬಹುದು. ಕನ್ನಡದ ಹಿರಿಯ ಲೇಖಕರಾದ ತ.ರಾ.ಸು. ಪರಗಿ ಪಸನ ಮಾಡಿರುವ ಕ್ಷೇತ್ರದಲ್ಲಿ ಹಿರಿಯ ಲೇಖಕ ಲೇಖಕಿಯರು ಶ್ರಮಿಸಬೇಕಾಗಿದೆ. ಹೊಸಗನ್ನಡದ ಎಷ್ಟೋ ಲೇಖಕರಿಗೆ ತ.ರಾ.ಸು. ಸ್ಫೂರ್ತಿ ಹಾಗೂ ಶಕ್ತಿ.

ಹದಿನೈದು ವರ್ಷಕ್ಕೂ ಹಿಂದಿನ ಮಾತು, ಅಜ್ಜಿ ಮನೆಗೆಂದು ದಸರಾ ರಜದಲ್ಲಿ ಮೈಸೂರಿಗೆ ಹೋಗಿದ್ದಾಗ ನನಗೆ ತ.ರಾ.ಸು. ಪರಿಚಯವಾಯಿತು. ಅಜ್ಜಿ ಮನೆಯ ಹಿಂಭಾಗದಲ್ಲಿದ್ದ ಪುಟ್ಟ ಮನೆಯಲ್ಲಿ ತ.ರಾ.ಸು. ಪತ್ನಿ ಅಂಬುಜಮ್ಮನವರೊಂದಿಗೆ ವಾಸವಾಗಿದ್ದರು. ಆಗ ನಾನಿನ್ನು ಶಾಲೆಯ ವಿದ್ಯಾರ್ಥಿನಿ, ಲಂಗ ಹಾಕಿಕೊಂಡು ಕುಣಿಯುವ ಬಾಲಿಕೆ. ನನ್ನ ಸಹೋದರಿ, ಕನ್ನಡ ಕಾದಂಬರಿಕಾರ್ತಿ ದಿ|| ತ್ರಿವೇಣಿ ಪದವೀಧರಳಾಗಿದ್ದಳು. ತ. ರಾ. ಸು. ಪುಸ್ತಕಗಳೆಂದರೆ ಅವಳಿಗೆ ಅಚ್ಚುಮೆಚ್ಚು. "ಸಣ್ಣ ಕಥೆಗಳು, ಕಾದಂಬರಿಗಳನ್ನೆಲ್ಲ ತುಂಬ ಚನ್ನಾಗಿ ಬರೀತಾರೆ." ಅಕ್ಕ ಹೇಳಿದ ಮಾತು ಕೇಳಿ ತ.ರಾ.ಸು. ಪುಸ್ತಕಗಳನ್ನು ಓದದಿದ್ದರೂ ಅವರನ್ನು ನೋಡುವ, ಕಂಡು ಮಾತನಾಡುವ ಚಪಲ ನನಗೆ. ಒಂದು ಸಂಜೆ ಕಳ್ಳ ಹೆಜ್ಜೆ ಇಡುತ್ತಾ ತ.ರಾ.ಸು. ಮನೆಗೆ ಹೋದಾಗ ಪುಟ್ಟ ಕೋಣೆಯಲ್ಲಿದ್ದ ಮೇಜಿನ ಮುಂದೆ ಕುಳಿತಿದ್ದ ಸಣಕಲ ವ್ಯಕ್ತಿಯೇ ತ.ರಾ.ಸು. ಎಂದು ತಿಳಿಯಿತು. ಅವರು ತಲೆಬಗ್ಗಿಸಿ ತದೇಕಚಿತ್ತರಾಗಿ ಏನನ್ನೋ ಬರೆಯುತ್ತಿದ್ದರು. ಅವರ ಮುಖದ ಒಂದು ಪಾರ್ಶ್ವ ಮಾತ್ರ ನನಗೆ ಕಾಣಿಸಿತು, ಕೆದರಿದ ಮುಂಗುರುಳು, ತುಂಬಾ ಸರಳವಾದ ಉಡುಪಿನಲ್ಲಿದ್ದ ತ.ರಾ.ಸು. ಆ ಸಂಜೆ, ಆ ಮಬ್ಬುಗತ್ತಲೆಯಲ್ಲಿ ; ನನಗೆ ತಪಸ್ಸಿಗೆ ಕುಳಿತಿರುವ ಯೋಗಿಯಂತೆ ಕಂಡರು. ಅವರಲ್ಲಿ ಒಂದು ವಿಧವಾದ ಪೂಜ್ಯಭಾವ ನನ್ನ ಅಂತರಂಗದಲ್ಲಿ ಉದಯಿಸಿತು. ನನ್ನ ಹೆಜ್ಜೆಯ ಸದ್ದು ಅವರ ಏಕಾಗ್ರತೆಗೆ ಭಂಗ ತಂದಿರಬೇಕು. ಬರೆಯುವುದನ್ನು ನಿಲ್ಲಿಸಿ ಇತ್ತ ತಿರುಗಿ "ಯಾರದು ?" ಎಂದರು.

ಉತ್ತರ ಏನು ಹೇಳಬೇಕೋ ತಿಳಿಯದೆ ನನ್ನ ಅಜ್ಜಿ ಮನೆಗೆ ಓಡಿಬಿಟ್ಟೆ. ತ.ರಾ.ಸು. ಪರಿಚಯ ನನಗಿದೆ. ಅವರು ನಮ್ಮಜ್ಜಿ ಮನೆ ಹಿಂಭಾಗದಲ್ಲಿ ವಾಸವಾಗಿದ್ದಾರೆ ಎಂದು ಗೆಳತಿಯರೊಡನೆ ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದುದು ಈಗಲೂ ನೆನಪಿನಲ್ಲಿ ಉಳಿದಿದೆ. ತ.ರಾ.ಸು ಹೆಚ್ಚು ಮನೆಬಿಟ್ಟು ಹೊರಗೆ ಬರುತ್ತಿರಲಿಲ್ಲ. ಯಾವಾಗಲೂ

ರೂಪಿನ ಬಾಗಿಲು ಹಾಕಿ ಬರೆಯುವುದರಲ್ಲಿ ಪ್ರಯತ್ನಿಸುತ್ತಿದ್ದರು. "ಹಂಸಗೀತೆ" ಕಾದಂಬರಿ ಬಹಳ ಚೆನ್ನಾಗಿ ಬರೆದಿದ್ದಾರೆ ತ.ರಾ.ಸು. ಎಂದು ತ್ರಿವೇಣಿ ಅಜ್ಜಿಗೆ ಹೇಳಿದ ಮಾತು ನನ್ನ ಕಿವಿಯ ಮೇಲೂ ಬಿತ್ತು. ಆಗ ನಾನು ಹೈಸ್ಕೂಲು ವಿದ್ಯಾರ್ಥಿನಿ. ಆ ಕಾದಂಬರಿಯನ್ನು ನನಗೂ ಓದುವ ಮನಸ್ಸಾಯಿತು.

ನಾನು ಓದಿದ ಕನ್ನಡ ಕಾದಂಬರಿಗಳಲ್ಲಿ "ಹಂಸಗೀತೆ" ಹೊಟ್ಟ ಮೊದಲನೆಯದು. ಮೊದಲನೆಯ ಹಾಳೆಯಿಂದ ಕಡೆಯ ಹಾಳೆಯವರೆಗೂ ಒಂದಕ್ಷರ ಬಿಡದಂತೆ ಆ ಕಾದಂಬರಿಯನ್ನು ಓದಿ ಮುಗಿಸಿ ಪುಸ್ತಕ ಕೆಳಗಿಟ್ಟಾಗ ಹೃದಯ ಭಾರವಾಗಿತ್ತು. ಅವರು ಬರೆದ ಹಲವಾರು ಕಾದಂಬರಿಗಳನ್ನು ಓದಿದ ಮೇಲೆ ನಾನೂ ಆಲೋಚನೆಯ ಸುಳಿಗೆ ಸಿಕ್ಕಿ ಬಿದ್ದೆ.

"ತ.ರಾ.ಸು. ರವರಂತೆ ನಾನೂ ಕಥೆ, ಕಾದಂಬರಿಗಳನ್ನು ಬರೆಯಬೇಕು, ಜನಪ್ರಿಯ ಲೇಖಕಿಯಾಗಬೇಕು."

ಎಂದು ತ.ರಾ.ಸು. ಕಾದಂಬರಿಗಳನ್ನು ಓದಿ ಸ್ಫೂರ್ತಿಪಡೆದ ನನ್ನ ಎಳೆಯ ಮನಸ್ಸಿನಲ್ಲಿ ಮೂಡಿಬಂದ ನಿರ್ಧಾರವಿದು. ಅವರು ಲೇಖಕರಾದ್ದು ಹೇಗೆ ?

ಸಾಹಿತ್ಯದ ಗೀಳು ತ.ರಾ.ಸು. ರವರಿಗೆ ವಂಶಪಾರಂಪರ್ಯವಾಗಿ ಬಂದದ್ದು. ಅವರ ಮನೆತನ ಸಾಹಿತಿಗಳ ಮನೆತನ. ಕನ್ನಡ ಆಚಾರ್ಯಪುರುಷ ದಿವಂಗತ ಬಿ. ಎಂ. ಶ್ರೀ ಕಂಠಯ್ಯನವರು ನನಗೆ ದೊಡ್ಡಪ್ಪನವರಾಗಬೇಕು ಎಂದು ಜಂಭದಿಂದ ಹೇಳಿಕೊಳ್ಳಬಲ್ಲೆ. ಚಿಕ್ಕಂದಿನಿಂದ ಪುಸ್ತಕದ ಗೀಳು ಅವರಿಗಿತ್ತೆಂದು ತಿಳಿದಾಗಿನಿಂದ ನಾನು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡೆ.

ಸಾಹಿತ್ಯ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿರುವ ನನಗೆ ತ.ರಾ.ಸು. ಹಿರಿಯಣ್ಣನ ಸ್ಥಾನದಲ್ಲಿ ನಿಂತು ಪ್ರೋತ್ಸಾಹ ನೀಡುತ್ತಿದ್ದಾರೆ. ಅವರ ಕಾದಂಬರಿಗಳು ನನಗೆ ಅಚ್ಚುಮೆಚ್ಚು. ಅದಕ್ಕೆ ಕಾರಣವಿಲ್ಲದೆ ಇಲ್ಲ. ಅವರು ಆಯ್ದುಕೊಳ್ಳುವ ಸಮಸ್ಯೆಗಳು ಅನೇಕ. ಪಾತ್ರನಿರ್ವಹಣೆಯಲ್ಲಿ ಸಿದ್ಧಹಸ್ತರು. ಅಷ್ಟೇ ಅಲ್ಲದೆ ಅವರು ಚಿತ್ರಿಸುವ ಪಾತ್ರಗಳು ಜೀವಂತವಾಗಿ ಕಣ್ಣ ಮುಂದೆ ಬಂದು ನಿಂತು ಓದುಗರೊಂದಿಗೆ ಆತ್ಮೀಯವಾಗಿ ಹೊಂದಿಕೊಳ್ಳುತ್ತವೆ.

ಇತ್ತೀಚೆಗೆ ನಡೆದ ಸಮಾರಂಭವಲ್ಲಿ ತ.ರಾ.ಸು ರವರನ್ನು ನಾನು ಭೇಟಿಯಾದಾಗ ದೂರವಲ್ಲಿ ನಿಂತಿದ್ದ ನನ್ನನ್ನು ನೋಡಿದ ಕೂಡಲೆ ಮುಗುಳ್ನಕ್ಕು ಹತ್ತಿರಕ್ಕೆ ಬಂದು ಮಾತನಾಡಿಸಿದರು. ಬಹಳ ವರ್ಷಗಳ ನಂತರ ಆದ ಭೇಟಿಯದು. ಬಹುಶಃ ಅವರು ನನ್ನನ್ನು ಮರೆತು ಬಿಟ್ಟಿರಬಹುದು ಎಂದುಕೊಂಡಿದ್ದೆ. ಅವರ ನನ್ನ ನಿರೀಕ್ಷೆ ಸುಳ್ಳಾಗಿ ಮನಸ್ಸಿಗೆ ತೃಪ್ತಿಯ ನೆಲೆ ಸಿಕ್ಕಿತು.

ತ.ರಾ.ಸು ಕಾದಂಬರಿಗಳಲ್ಲಿ ಚಿತ್ರಕ್ಕೆ ಬಣ್ಣ ಹಾಕಿದಂತೆಯೇ ಕಂಡು ಬರುವ ವರ್ಣನೆ ಮೆಚ್ಚತಕ್ಕದ್ದು. ಅವರ ಕೃತಿಗಳಲ್ಲಿ ಸಮಗ್ರ ಜೀವನ ದೃಷ್ಟಿಯನ್ನು ಕಾಣಬಹುದು.

ಇದೀಗ ಅರವತ್ತು ತುಂಬಿ ಬದುಕಿನ ಅರ್ಧ ದಾರಿಯಷ್ಟು ನಡೆದು ಬಂದಿರುವ ತ.ರಾ.ಸು. ಸಾಕಷ್ಟು ಸಾಹಿತ್ಯ ಸೇವೆ ಮಾಡಿದ್ದರೂ ಉಳಿದರ್ಧ ಹಾದಿಯಲ್ಲಿ ಅವರು ಮಾಡಬಹುದಾದ ಸಾಹಿತ್ಯಸೇವೆಯ ಬಗ್ಗೆ ಕನ್ನಡಿಗರು ನಿರೀಕ್ಷಿಸ ಬಹುದಾಗಿದೆ. ಇತ್ತೀಚೆಗೆ ಸಿನಿಮಾ ಪ್ರಪಂಚಕ್ಕೆ ಸೇರಿ ಸಾಹಿತ್ಯ ಕ್ಷೇತ್ರದಿಂದ ದೂರವಾಗಿರುವುದು ನನಗೆ ತುಂಬಾ ನಿರಾಶೆಯಾಗಿದೆ. ತ.ರಾ.ಸು. ಅವರಿಂದ ಮಹತ್ವದ ಕೃತಿಗಳನ್ನು ನಿರೀಕ್ಷಿಸಿದ ಕನ್ನಡಿಗರಿಗೆ ನಿರಾಶೆಯಾಗಿರುವುದು ಖಂಡಿತ.

ಬರವಣಿಗೆಯಿಂದಲೇ ಬದುಕಲು ಹೊರಟ ತ.ರಾ.ಸು. ಪ್ರಾರಂಭದಲ್ಲಿ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾದರು. ಅವರ ಹೋರಾಟದ ಬದುಕನ್ನು ನಾನು ಪ್ರತ್ಯಕ್ಷವಾಗಿ ಕಂಡದ್ದುಂಟು. ಅಂತಹ ವಿಷಮ ಪರಿಸ್ಥಿತಿಯಲ್ಲೂ ಅವರು ಹಾದಿಯಲ್ಲಿ ಎದುರಾದ ಅಡೆತಡೆಗಳನ್ನೆಲ್ಲ ದಾಟಿಕೊಂಡು ತಮ್ಮಿಷ್ಟಕ್ಕೆ ತಾವು ಹಿಮ್ಮೆಟ್ಟದೆ ಕೆಲಸಮಾಡಿ ಕೊಂಡು ಬಂದಿದ್ದಾರೆ. ಬದುಕಲು ಮತ್ತೊಂದು ಉದ್ಯೋಗ ಹಿಡಿಯಲಿಲ್ಲ, ಹಿಡಿದ ಲೇಖನಿಯ ಕೈ ಬಿಡಲಿಲ್ಲ. ಹಣದ ಕೊರತೆಯಿದ್ದಾಗಲೂ ಅವರ ಹಸನ್ಮುಖದ ಬೆಳದಿಂಗಳ ಶಾಂತಿಯನ್ನು ನಾನು ಕಂಡಿದ್ದೇನೆ.

ಲೇಖನ ವ್ಯವಸಾಯವನ್ನು ಜೀವನ ವೃತ್ತಿಯಾಗಿಸಿಕೊಂಡು ದುಡಿಯುತ್ತಿರುವ ತ.ರಾ.ಸು. ಅವರ ಲೇಖನಿ ಹರಿತ. ನಾಲಿಗೆ ಚುರುಕು. ಅವರು ನಿರರ್ಗಳವಾಗಿ, ಸ್ವಾರಸ್ಯವಾಗಿ ಎಷ್ಟು ಘಂಟೆ ಬೇಕಾದರೂ ನಿರಾಯಾಸವಾಗಿ ಭಾಷಣ ಮಾಡಬಲ್ಲರು ತ.ರಾ.ಸು. ಅವರಂಥ ಹಿರಿಯ ಚೇತನಗಳ, ಸ್ಫೂರ್ತಿ, ಪ್ರೇರಣೆಗಳು ಕಿರಿಯ ಲೇಖಕರಿಗೆ ಅಗತ್ಯ. ಅವರ ಶೈಲಿ ಸ್ವಯಂ ಸ್ಫೂರ್ತಿಯಿಂದ ಚಿಮ್ಮುವ ಚಿಲುಮೆ, ಅವರ ಶೈಲಿಯಲ್ಲಿ ಕಂಡು ಬರುವ ಶಕ್ತಿ ಹಾಗೂ ತೇಜಸ್ಸನ್ನು ಓದುಗರು ಗುರುತಿಸಬಹುದು.

ಸ್ನೇಹ, ಸೌಜನ್ಯತೆ ತ.ರಾ.ಸು. ಅವರ ಧರ್ಮಗುಣ, ಎಲ್ಲಿ ನನ್ನನ್ನು ಕಂಡರೂ ದೂರದಿಂದಲೇ ಮುಗುಳ್ನಗೆ ಚೆಲ್ಲಿ ಹತ್ತಿರಕ್ಕೆ ಬಂದು ಮಾತನಾಡಿಸಿ ಆತ್ಮೀಯತೆ ಹಾಗೂ ಸ್ನೇಹವನ್ನು ತೋರಿಸುತ್ತಾರೆ. ಇದು ಅವರ ದೊಡ್ಡ ಗುಣ.

ತ.ರಾ.ಸು. ನನಗೆ ಹಿರಿಯಣ್ಣನ ಸ್ಥಾನದಲ್ಲಿದ್ದಾರೆ. ಈ ಆತ್ಮೀಯತೆ, ಅವರ ವ್ಯಕ್ತಿ ಪರಿಚಯ ನನಗೊಂದು ಹೆಮ್ಮೆ.

ಸ್ನೇಹಪ್ರಿಯ

—ಎನ್ಕೆ

1944ರ ಉಡಿಪಿ ಪರ್ಯಾಯದ ಸಮಯ. ಉಡಿಪಿಯಲ್ಲಿ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಲನವೊಂದನ್ನು ಕಳಕುಂದ ಶಿವರಾಯರು ("ನಿರಂಜನ"ರು) ಏರ್ಪಡಿಸಿದ್ದರು. ಶಿವರಾಯರೇ ಲಂಡಚಣ್ಣದಲ್ಲಿ ಓಡಾಡುತ್ತಿದ್ದ ಮೇಲೆ ಎಲ್ಲ ಮೀಸೆ ಮೋಳೆಯದವರ ದರ್ಬಾರು ಇತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಆ ಸಮ್ಮೇಳನಕ್ಕೆ ನನ್ನನ್ನು ಒಂದು ದಿನದ ಕಾರ್ಯಕ್ರಮಕ್ಕೆ ಅತಿಥಿಯೆಂದು ಆಮಂತ್ರಿಸಿದ್ದರು. ಮರು ದಿನದ ಕಾರ್ಯಕಲಾಪಗಳಿಗೆ ಅತಿಥಿಯಾಗಿ ಶ್ರೀ ತ.ರಾ. ಸುಬ್ಬರಾಯರು. ಮೂಡುವ ಚಂದ್ರ, ಮುಳುಗುವ ಸೂರ್ಯನಂತೆ ನಾವು ಅಂದಿನ ಸಂಜೆ ಭೆಟ್ಟಿಯಾದೆವು. ಶಿವರಾಯರೆ ನಮ್ಮ ಪರಿಚಯಮಾಡಿಕೊಟ್ಟರು. ನಾನು ಉಡಿಪಿಯಾತ್ರೆಯೆಂದು ಅನಾಯಾಸವಾಗಿ ದೊರೆತ ಆಮಂತ್ರಣದ ಅವಕಾಶ ಪಡೆದುಕೊಂಡು ಕುಟುಂಬ ಸಮೇತನಾಗಿ ಹೋಗಿದ್ದೆ.

"ನೀವು ಯಾವಾಗ ಬಂದ್ರಿ ?" ಎಂದು ತ.ರಾ.ಸು. ಆತ್ಮೀಯತೆಯಿಂದ ನನ್ನನ್ನು ಕೇಳಿದಾಗ ನಾನು ಉಡಿಪಿಯನ್ನು ಹೇಗೆ ತಲುಪಿದೆ ಎಂಬುದರ ಬಗ್ಗೆ ಪುಟ್ಟ ರಾಮಾಯಣವನ್ನೇ ಹೇಳಬೇಕಾಯಿತು.

"ನೋಡ್ರಿ ತ.ರಾ.ಸು. ಅವ್ರs. ಅನಾಯಾಸ ಉಡಿಪಿ ಅಂದಮ್ಯಾಲ ನಮ್ಮ ಮನೆಯವರು, ನಮ್ಮ ಅತ್ತೆ-ಮಾವ ಉಡಿಪಿ ಯಾತ್ರಾ ಮಾಡ್ಬೇಕೂ ಅಂತ ಆಶಾ ವ್ಯಕ್ತ ಮಾಡಿದ್ರು. ನಾವೆಲ್ಲಾರೂ ಕಡೂರಿನಿಂದ ಬಸ್ ಹತ್ತಿದ್ವಿ. ನಮ್ಗ ಸಿಕ್ಕಿದ್ದು ಮುಲ್ಕಿ ವರೆಗಿನ ಬಸ್ಸು ಮಾತ್ರ. ಮುಂದ ಕನೆಕ್ಕಶನ್ ಸಿಗಬಹುದು ಅಂದ್ರು ಆದರೇನು ನಾವು ಮುಲ್ಕಿ ಮುಟ್ಟಿದಾಗ ಮಧ್ಯರಾತ್ರಿ ಆಗಿ ಹೋಗಿತ್ತು. ಮುಂದೇನದs ಯಾವ ವಾಹನಾನೂs ಇಲ್ಲ. ಕಡೀಕೆ ಚಕ್ಕಡಿ ಮಾಡ್ಕೊಂಡು ಉಡಿಪಿ ಮುಟ್ಟಬೇಕಾದ್ರೆ ರೆಗsಡ ಆತು."

ತ.ರಾ.ಸು. ಎಷ್ಟು ಬಿದ್ದು-ಬಿದ್ದು ನಕ್ಕರೋ ಅಷ್ಟೇ ನಾವು ಪಟ್ಟ ಪಾಡಿಗಾಗಿ ಕಳಕಳಿ ವ್ಯಕ್ತ ಮಾಡಿದರು.

"ಅಂತೂ ಮುಖ್ಯ ಅತಿಥಿಗಳನ್ನು ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಿದ್ಹಾಂಗಾಯ್ತು ಅನ್ನಿ" ಎಂದು ತ.ರಾ.ಸು. ಶಿವರಾಯರ ಮುಂದೆ ಹೇಳಿದಾಗ ನಮ್ಮ ಮಾವನವರು,

"ಅತಿಥಿಗಳಷ್ಟs ಯಾಕ ? ಅತಿಥಿಗಳ ಕುಟುಂಬ, ಅತ್ತಿ-ಮಾವ ಎಲ್ಲಾರ್ದೂ ಮೆರವಣಿಗಿ ಆತು." ಎಂದು ತಮಾಷೆ ಮಾಡಿದಾಗ ತ.ರಾ.ಸು. ಅವರು ನಮ್ಮ ಮನೆಯ ಜನರೆಲ್ಲರ ಜೊತೆಗೆ ಒಂದಾಗಿ ವಿನೋದ ಲಹರಿಯಲ್ಲಿ ಒಂದಾದರು.

ತ.ರಾ.ಸು. ಅವರ ಈ ಆತ್ಮೀಯತೆ, ಈ ಸರಳತೆಗಳು ನನ್ನನ್ನು ಮತ್ತೊಂದು ದಿವಸ ಉಡಿಪಿಯಲ್ಲಿ ಬಂಧಿಸಿ ಹಿಡಿದವು.

ಕೆಲದಿನಗಳ ಹಿಂದೆ ಪ್ರಗತಿಶೀಲ ಸಾಹಿತ್ಯದ ಪ್ರವರ್ತಕರ ಗುಂಪೊಂದು ಧಾರವಾಡಕ್ಕೆ ಬಂದಿತ್ತು – ಅ.ನ.ಕೃ. ಅವರ ನಾಯಕತ್ವದಲ್ಲಿ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ಅವರ ಭಾಷಣಗಳು. ತರುಣರಲ್ಲಿ ತ.ರಾ.ಸು., ಕುಮಾರ ವೆಂಕಣ್ಣ ಆವೇಶದಿಂದ ಮಾತನಾಡಿದ್ದರು. ತ.ರಾ.ಸು. ಅವರನ್ನು ಅಂದೇ ಮೊದಲು ಬಾರಿ ನಾನು ಕಂಡದ್ದು. ಆಗ ಅವರ ಪರಿಚಯ ಮಾತ್ರ ಆಗಿರಲಿಲ್ಲ. ಮುಂದೆ ಸ್ವಲ್ಪ ದಿನಗಳಲ್ಲಿ ಅವರ ಮೊದಲನೆಯ ಕಾದಂಬರಿ "ಮನೆಗೆ ಬಂದ ಮಹಾಲಕ್ಷ್ಮಿ" ಪ್ರಕಟವಾಗಿತ್ತು. ಅವರ ವಿಮರ್ಶೆಯನ್ನೂ ನಾನು ಓದಿದ್ದೆ. ತ.ರಾ.ಸು. ಅವರ ಶೈಲಿ, ಅವರ ವೈಚಾರಿಕ ಪ್ರಗತಿಯನ್ನೂ ಮೆಚ್ಚಿಕೊಂಡಿದ್ದೆ. ಅವರ ಸಣ್ಣ ಕತೆಗಳನ್ನೂ ಓದಿದ್ದೆ. ಉಡಿಪಿಯಲ್ಲಿ ಅವರ ಸಮೀಪದ ಪರಿಚಯವಾದಾಗ ಅದೇ ಹೊಸತಾಗಿ ಪ್ರಕಟವಾಗಿದ್ದ ನನ್ನ ಮೊದಲನೆಯ "ಸಾವಿನ ಉಡಿಯಲ್ಲಿ" ಎಂಬ ಕಾದಂಬರಿಯನ್ನು ಅವರಿಗೆ ಕಾಣಿಕೆಯಾಗಿ ಕೊಟ್ಟಿದ್ದೆ. ಅವರು ತಮ್ಮ ಪ್ರಕಟನೆಯನ್ನೂ ನನಗೆ ಕೊಟ್ಟಿದ್ದರು

ಈ ನಮ್ಮ ಪ್ರಥಮ ಪರಿಚಯ ಅಲ್ಲಿಗೆ ಮುಗಿದಿದ್ದರೂ ತ.ರಾ.ಸು. ವ್ಯಕ್ತಿತ್ವ ನನ್ನ ಒಳಗಣ್ಣ ಮುಂದೆ ಬೆಳೆಯುತ್ತಲೇ ಇತ್ತು. ತ.ರಾ.ಸು. ಕಾದಂಬರಿ ಪ್ರಪಂಚದಲ್ಲಿ ಬಿರುಗಾಳಿಯಂತೆ ಬೀಸಿ ವಾಚಕಲೋಕವನ್ನು ಸೆರೆ ಹಿಡಿದುಕೊಂಡು ಬಿಟ್ಟರು. ಅವರ ಒಂದೊಂದು ಕಾದಂಬರಿಯೂ ನನ್ನ ಮನಸ್ಸಿನಲ್ಲಿ ಲೇಖಕ ತ.ರಾ.ಸು. ಅವರ ವ್ಯಕ್ತಿತ್ವದ ಬಗ್ಗೆ ವಿಶೇಷ ಆಸಕ್ತಿಯನ್ನು ಹೆಚ್ಚಿಸುತ್ತ ಬಂತು. ಅವರ "ಬಿಡುಗಡೆಯ ಬೇಡಿ" ಮತ್ತೊಂದು ಬಗೆಯ ಸಾಮಾಜಿಕ ಕ್ರಾಂತಿಕಾರಕ ವಿಚಾರಗಳನ್ನೊಳಗೊಂಡ ಪ್ರಗತಿ ಪಥದ ಮೈಲಿಗಲ್ಲು. ವೈವಾಹಿಕ ಸಮಸ್ಯೆಯಾಗಲಿ, ವೇಶ್ಯಾ ಸಮಸ್ಯೆಯಾಗಲಿ ತ.ರಾ.ಸು. ಅವರ ಹರಿತವಾದ ಲೇಖನಿಗೆ ಪಕ್ಕಾಗಿ ಸುಕ್ಕು ಬಿಟ್ಟು ಹೋಗುತ್ತಿದ್ದವು. ಮುಂದೆ ಪ್ರಾರಂಭವಾದ ಅವರ ಐತಿಹಾಸಿಕ ಕಾದಂಬರಿ ಸರಣಿ ನನ್ನ ಮನಸ್ಸನ್ನು ಸೂರೆಗೊಂಡವು. "ಕಂಬನಿಯ ಕುಯಿಲು" ತನ್ನ ಮೋಹಕ ಶೈಲಿ, ಮಾರ್ಮಿಕ ಪಾತ್ರ ನಿರೂಪಣೆ, ಕುಲುಂಕಷವಾದ ಐತಿಹಾಸಿಕ ಪ್ರಜ್ಞೆಗಳಿಂದಾಗಿ ನನ್ನನ್ನು ಮುಗ್ಧಗೊಳಿಸಿತು. ತ.ರಾ.ಸು. ಕೆಲವೇ ವರ್ಷಗಳಲ್ಲಿ ಎಷ್ಟು ಎತ್ತರಕ್ಕೆ ಬೆಳೆದು ಬಿಟ್ಟರಲ್ಲಾ ಎಂದು ನನ್ನೊಳಗೆ ನಾನು ನೆನೆದುಕೊಂಡುದೂ ಉಂಟು. ಚಿತ್ರದುರ್ಗವನ್ನೂ ಅಲ್ಲಿಯ ಕೋಟೆ–ಕೊತ್ತಲಗಳನ್ನೂ ಪ್ರತ್ಯಕ್ಷ ನೋಡಿ ಬಂದ ನನಗೆ ಅವರ ಚಿತ್ರದುರ್ಗದ ಕಾದಂಬರಿಗಳು ಕುತೂಹಲಕಾರಿಯೆನಿಸಿದವು.

ಉಡಿಪಿಯಲ್ಲಿ ನಮ್ಮ ಪರಿಚಯವಾದ ಮೇಲೆ ನನ್ನ ಸಂಸಾರನೌಕೆ ಬಿರುಗಾಳಿಗೆ ಅಪ್ಪಳಿಸಿ ಹೋಗಿತ್ತು. ಸ್ಥಿರವಾದ ಒಂದು ವೃತ್ತಿಗೆ ಅಂಟಿಕೊಳ್ಳದೆ ಅಲ್ಲಲ್ಲಿ ಪರದಾಡಬೇಕಾದ

ಪ್ರಸಂಗ ನನ್ನ ಸಾಹಿತ್ಯ ರಚನೆಗೆ ಆತಂಕವೊಡ್ಡಿತ್ತು. ಮುಂದೆ ಎಲ್ಲೆಲ್ಲೊ ಕೆಲಸ ಮಾಡಿ ಆಕಾಶವಾಣಿಗೆ ಅಂಟಿಕೊಂಡಿದ್ದೆ. ತ.ರಾ.ಸು. ಅವರ 'ನೃಪತುಂಗ' 'ಸಿಡಿಲು ಮೊಗ್ಗು' 'ಹಂಸಗೀತೆ'ಗಳನ್ನು ಒಂದೊಂದಾಗಿ ಓದಿದ ಹಾಗೆಲ್ಲಾ ತ.ರಾ.ಸು. ತಮ್ಮ ಕಾದಂಬರಿಯ ಒಂದೊಂದು ವಸ್ತುವಿಗಾಗಿ ಎಷ್ಟೆಷ್ಟು ಅಭ್ಯಾಸ ಮಾಡಿದ್ದಾರೆ. ಎಷ್ಟೆಷ್ಟು ಸುತ್ತಾಡಿದ್ದಾರೆ, ಏನೆಲ್ಲ ಅನುಭವ ಆಹ್ವಾನಿಸಿದ್ದಾರೆ, ಎಂದು ತ.ರಾ.ಸು ಬಗ್ಗೆ ಇನ್ನಷ್ಟು ಕುತೂಹಲ ತಾಳಿದೆ. ಐತಿಹಾಸಿಕ ವಸ್ತುವನ್ನು ಬಳಸುವ ಕಾದಂಬರಿಕಾರ ಮೈಯೆಲ್ಲ ಕಣ್ಣಾಗಿರಬೇಕಾಗುತ್ತದೆ. ಎಲ್ಲಾದರೂ ಒಂದಿಷ್ಟು ಸತ್ಯ, ವಾಸ್ತವತೆಗಳಿಗೆ ದೂರಾದರೆ ಕಾಲಕ್ರಮಕ್ಕೆ ಹೆಚ್ಚು ಕಡಿಮೆಯಾದರೆ 'ಅನೆಕ್ರೊನಿಸಮ್' (Anachronism) ದೋಷಕ್ಕೆ ಗುರಿಯಾಗಬೇಕಾಗುತ್ತದೆ. ತ.ರಾ.ಸು. ಅವರ ಕಣ್ಣು ಈ ನಿಟ್ಟಿನಲ್ಲಿ ಬಹಳ ತೀಕ್ಷ್ಣ. ಅವರ ಐತಿಹಾಸಿಕ ಪ್ರಜ್ಞೆ ಕೂದಲೆಳೆಯಷ್ಟು ಕಲಿತು-ಮುಲತಾಗುವದಿಲ್ಲ. ತ.ರಾ.ಸು. ಅವರ ಈ ಸಿದ್ಧಿಗೆ ಅಚ್ಚರಿ ಪಟ್ಟಿದ್ದೇನೆ.

1960 ರ ಸುಮಾರು ಇರಬೇಕು. ಅವರ "ಬೆಳಕು ತಂದ ಬಾಲಕ" ಬೆಳಕಿಗೆ ಬಂದಿತ್ತು. ಕಾದಂಬರಿಕಾರರ ಬಗ್ಗೆ ಇನ್ನಷ್ಟು ಬೆಳಕು ತಂದಿತ್ತು. ಆಗ ನಾನು ಬೆಂಗಳೂರಿನಲ್ಲಿದ್ದೆ. "ಬೆಳಕು ತಂದ ಬಾಲಕ" ದಲ್ಲಿ ತ.ರಾ.ಸು. ಅವರ ಮತ್ತೊಂದು ಪ್ರಜ್ಞೆ, ಅಷ್ಟೇ ಪ್ರಭುತ್ವದಿಂದ ತಲೆ ಹಾಕಿತ್ತು. ಅದು ಆಧ್ಯಾತ್ಮಿಕ ಪ್ರಜ್ಞೆ. ತ.ರಾ.ಸು ಇಷ್ಟೊಂದು ಗಾತ್ರದ, ಸತ್ವದ ಕಾದಂಬರಿ ಸಾಹಿತ್ಯವನ್ನು ನಿರ್ಮಿಸಲು ಸಾಮರ್ಥ್ಯ ನೀಡಿದ ಪ್ರೇರಕ ಶಕ್ತಿ ಯಾವುದು ಇರಬೇಕು ? ಎಂದು ಆಲೋಚಿಸುತ್ತಿದ್ದಾಗ ಯಾರೋ ಏನೋ ಹೇಳುತ್ತಿದ್ದರು. ತ.ರಾ.ಸು. ಅವರು "ಬೆಳಕು ತಂದ ಬಾಲಕ" ದಲ್ಲಿ ತೋರಿದ ಈ ಪ್ರಜ್ಞೆ ನನ್ನನ್ನಂತೂ ಅಚ್ಚರಿಗೊಳಿಸಿತು. ಆಧ್ಯಾತ್ಮದ ಅನುಷ್ಠಾನ ವಿಲ್ಲದಿದ್ದರೂ, ಆಧ್ಯಾತ್ಮದ ಒಂದು ಜಿಜ್ಞಾಸಾಭಾವ ಅವರಲ್ಲಿ ಇಷ್ಟೊಂದು ಅಮೋಘವಾಗಿ ಬೆಳೆದು ಬಂದ ಬಗ್ಗೆ ಅಭಿಮಾನವನ್ನೂ ತಾಳಿದ್ದೆ.

ಒಂದುದಿನ ಮುಂಜಾನೆ ನಾನು ಮನೆಯಲ್ಲಿ ಆಫೀಸಿನ ಸಿದ್ಧತೆ ನಡೆಸಿದ್ದೆ. ಯಾರೋ ಹೊರಗಿನ ಬಾಗಿಲು ತಟ್ಟಿದರು. ಆಫೀಸಿನ ಗಡಿಬಿಡಿ ವೇಳೆಯಲ್ಲಿ ಅಯುತ ವೇಳೆಗೆ ಯಾರಾದರೂ ಬಂದರೆ ಒಂದಿಷ್ಟು ಬೇಸರ, ನನಗೆ. ಅದೇ ಬೇಸರಭಾವದಿಂದ ಬಾಗಿಲು ತೆರೆದೆ. ಹೊರಗೆ ತುಂತುರು ಮಳೆ. ಗುಂಗುರು ಕೂದಲನ್ನು ಮುಚ್ಚಿದ ಗಾಯುದ ಪಟ್ಟಿ. ಒಂದು ಜುಬ್ಬಾ, ಪೈಜಾಮು ಹವಣಾದ ನಿಲುವಿನ ಸಾದುಗಪ್ಪಿನ, ಹೊಳೆಯುವ ಕಣ್ಣಿನ ವ್ಯಕ್ತಿ. ನೋಡುತ್ತೇನೆ ತ.ರಾ.ಸು. ಪ್ರಸನ್ನತೆ ಮೂಡಿ ಬಂದಿತ್ತು.

"ಇದೇನು ಸುಬ್ಬರಾವ್, ಎಷ್ಟು ವರ್ಷಗಳ ಮ್ಯಾಲ ಭೆಟ್ಟಿ ! ಒಳಗ ಬರ್ರಿ" ಎಂದು ಕೊಂಡು ಒಳಗೆ ಕರೆದುಕೊಂಡು ಹೋದೆ. 15–16 ವರ್ಷಗಳ ನಂತರ ಮತ್ತೊಮ್ಮೆ ಭೆಟ್ಟಿ ಯಾಗಿತ್ತು. ಒಂದೂವರೆ ದಶಕಗಳ ಸುಖ-ದುಃಖಗಳನ್ನು ಹೇಳಿಕೊಳ್ಳಬೇಕು.

ಕಾದಂಬರಿಕಾರ ತ.ರಾ.ಸು. ಅವರ ಬೆಳವಣಿಗೆಯ ಅಭಿಮಾನದ ವಿಷಯವನು ಹೇಳಿಕೊಳ್ಳಬೇಕು. ನನ್ನ ಜೀವನ ನಾಟಕದ ಆಗು ಹೋಗುಗಳನ್ನು ಹೇಳಿಕೊಳ ಬೇಕು. ಅವರಿಗೂ ಅವಸರ ನನಗೂ ಅವಸರ. ಅಷ್ಟರಲ್ಲಿ ಎಲ್ಲ ಕುಶಲವಾರ್ತೆ ಯನ್ನೂ ಮುಗಿಸಿದೆವು. ಈ ಮುಂಚೆ ನಾನೊಮ್ಮೆ ಮೈಸೂರಿಗೆ ಹೋದಾಗ ತ.ರಾ.ಸು. ಅವರನ್ನು "ಚದುರಂಗ"ರ ಮನೆಯಲ್ಲಿ ಕಂಡಿದ್ದೆ. ಆದರೆ ಅದು ಬಹಳ ಕ್ಷಣಿಕವಾಗಿತ್ತು. ಆಮೇಲೆ ಒಂದೆರಡು ಸಲ ತ.ರಾ.ಸು. ಆಕಾಶವಾಣಿಯವರೆಗೂ ಬಂದಿದ್ದರು. ಆದರೆ ಈಗ ನನ್ನ ಮನೆಯ ವರೆಗೂ ಗಾಯಾಳುವಿನಂತೆ ಬಂದಿದ್ದ ತ.ರಾ.ಸು. ಅವರನ್ನು ಕಂಡು 'ಇದೇನು ತಲೆಗೆ' ಎಂದೆ. 'ಇದು ಎಕ್ಸಿಡೆಂಟು' ಎಂದರು. 'ಇಂದಿನ ನಮ್ಮ ಭೇಟಿಯೂ ಒಂದು ಎಕ್ಸಿಡೆಂಟು' ಎಂದೆ. ಕಾರ್ ಎಕ್ಸಿಡೆಂಟಿಗೆ ಒಳಗಾದ ವ್ಯಕ್ತಿ ಈಗ ಇಲ್ಲಿಯ ವರೆಗೂ ಬಂದಿದ್ದ ಅವಸರ ಗೊತ್ತಾಗ ಲಿಲ್ಲ. ವಿಚಾರಿಸಿದೆ. 'ಇಲ್ಲಿ ಡಾ॥ ಮುಗಳಿಯವರು ಬಂದಿದ್ದಾರೆಯೇ?' ಎಂದು ಪ್ರಶ್ನಿಸಿದರು. ಹೌದು ಡಾ॥ ಮುಗಳಿಯವರು ಅಂದು ನಮ್ಮಲ್ಲಿ ಬರಬೇಕಿತ್ತು. ಇನ್ನೂ ಬಂದಿರಲಿಲ್ಲ. ಬರಬಹುದು ಎಂದು ಹೇಳಿದೆ.

ತ.ರಾ.ಸು. ತಮ್ಮ ಪಠ್ಯ ಪುಸ್ತಕದ ವಿಚಾರವಾಗಿ ಬಂದಿದ್ದರೆಂದು ತಿಳಿಯಿತು. ಐವತ್ತು ಕಾದಂಬರಿಗಳ ಕರ್ತೃ ತ.ರಾ.ಸು. ಅವರು ಲೋಕಪ್ರಿಯ ಕಾದಂಬರಿ ಕಾರರು. ಬೇಕಾದಷ್ಟು ಗಳಿಸಿರಬೇಕು ನಿಜ. ಗಳಿಸಿದ್ದೂ ಉಂಟು. ಸಂಸಾರವೆಂಬ ಮೇಲೆ ಎಂತಹ ಲೇಖಕನಾದರೇನು ಸರಸ್ವತಿಯ ಒಕ್ಕಲಿಗೆ ಲಕ್ಷ್ಮಿಯ ಕಟಾಕ್ಷ ಬೇಕಲ್ಲ! ಎನ್ನುಕೊಂಡೆ.

ತ.ರಾ.ಸು. ಅವರಿಗೆ ಲೇಖನವೇ ವ್ಯವಸಾಯ. ಅದುವೆ ಜೀವನವೃತ್ತಿ. ಇಂದು ಕನ್ನಡ ಸಾಹಿತ್ಯ ವ್ಯವಸಾಯ ಲೇಖಕರಿಗೆ ಹೊಟ್ಟೆ ತುಂಬಿಸುವಷ್ಟು ಬೆಳೆದಿದೆ. ಆದರೂ ಕನ್ನಡ ಸಾಹಿತಿ ಲಕ್ಷ್ಮೀಪುತ್ರನಾಗಿಲ್ಲ. ತ.ರಾ.ಸು. ಕೂಡ ಇದಕ್ಕೆ ಹೊರ ತಾಗಿರಲಿಲ್ಲ.

ಉಡಿಪಿಯ ಸಮ್ಮೇಳನದಲ್ಲಿ ಸಂಧಿಸಿದ್ದ ಅದೇ ತ.ರಾ.ಸು. ಅದೇ ವಿನಯ, ಅದೇ ಸೌಜನ್ಯ, ಅದೇ ಆತ್ಮೀಯತೆ. 1960 ರ ನಂತರ ತ.ರಾ.ಸು. ಅವರ ಭೆಟ್ಟಿಯಿಲ್ಲ, ಪತ್ರಿಕೆಗಳ ಮುಖಾಂತರವೆ ಅವರನ್ನು ಕಾಣುತ್ತಿದ್ದೇನೆ, ಇಂದಿಗೂ ನಾನು ತ.ರಾಸು. ಬಗ್ಗೆ ತಾಳಿರುವ ಆತ್ಮೀಯ ಭಾವಕ್ಕೆ ಸಾಕ್ಷಿ ಈ ಸವಿ ಸ್ಮೃತಿಲೇಖನ.

ಪ್ರತಿಭಾಸಂಪನ್ನ

—ಎಸ್. ಆರ್. ನರಸಿಂಹಾಚಾರ್

ಈಗ್ಗೆ ಸುಮಾರು ಮುವತ್ತೈದು ವರ್ಷಗಳ ಹಿಂದಿನ ಮಾತು. ಉತ್ತಮ ಕಾದಂಬರಿಗಾರರೆಂದು ನಾಡಿನಲ್ಲೆಲ್ಲ ಪ್ರಸಿದ್ಧಿಯನ್ನು ಪೋದಿ ಸಕಲರಿಗೂ ಚಿರಪರಿಚಿತರಾಗಿರುವ ಶ್ರೀ ತ.ರಾ.ಸು. ರವರು ಆಗ ಚಿತ್ರದುರ್ಗ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ದೆಶೆಯಲ್ಲಿದ್ದರು. ನಾನೂ ಆಗ ತಾನೇ ಶಿವಮೊಗ್ಗದಿಂದ ವರ್ಗವಾಗಿ ಚಿತ್ರದುರ್ಗ ಪ್ರೌಢಶಾಲೆಯ ಸಹಾಯೋಪಾಧ್ಯಾಯನಾಗಿದ್ದೆ. ಅಂದು ತ.ರಾ.ಸು. ಅವರು ಶಾಲೆಯ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಮೆಚ್ಚಿನ ಟಿ. ಆರ್. ಸುಬ್ಬು ಮಾತ್ರ ಆಗಿದ್ದರು. ಶಾಲೆಯ ಸಮಾರಂಭಗಳಲ್ಲಿ ಅವರದೇ ಮುಂದಾಳತ್ವ. ಉಪನ್ಯಾಸವಾಗಲೀ, ಚರ್ಚಾಕೂಟವಾಗಲೀ ಯಾವ ಚಟುವಟುವಟಿಕೆಯೂ ಅವರಿದ್ದರೇ ಪೂರ್ಣವೆನಿಸುತ್ತಿತ್ತು.

ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ದಿ॥ ಶ್ರೀ ಎನ್. ಎಸ್. ಸುಬ್ಬರಾಯರ ಆದರ, ಉತ್ಸಾಹ, ಉತ್ತೇಜನಗಳ ಪರಿಣಾಮವಾಗಿ ಪ್ರೌಢ ಶಾಲೆಗಳಲ್ಲಿ ಕನ್ನಡ ಮಾಧ್ಯಮ ಬೋಧನೆಗೆ ಉತ್ತಮ ಸಾಧನವೆಂದು ಪ್ರಯೋಗಗಳಿಂದ ದೃಢೀಕರಿಸಲ್ಪಡುತ್ತಿತ್ತು. ಈ ಸಮಯದಲ್ಲಿ ಶಾಲೆಯ ಮುಖ್ಯ ಉಪಾಧ್ಯಾಯರು ಒಂದು ಕನ್ನಡ ಮಾಸ ಪತ್ರಿಕೆಯನ್ನು ಶಾಲೆಯಿಂದ ಹೊರಡಿಸಬೇಕೆಂದು ತೀರ್ಮಾನಿಸಿ ಅದರ ಜವಾಬ್ದಾರಿಯನ್ನು ನನಗೆ ವಹಿಸಿದ್ದರು. ಇದನ್ನು ಸಂತೋಷದಿಂದ ವಹಿಸಿಕೊಂಡೆ. ಆ ದಿನವೇ ಸಂಜೆ ಶ್ರೀ ಸುಬ್ಬರಾಯರಿಗೆ ಈ ವಿಷಯವನ್ನು ತಿಳಿಸಿದೆ. ಅವರೂ ಸಹಾ ಉತ್ಸಾಹದಿಂದ ಪತ್ರಿಕೆಯನ್ನು ಪ್ರಾರಂಭಿಸಲು ತಮ್ಮ ಪೂರ್ಣ ಸಹಕಾರ ಸಹಾನುಭೂತಿಯನ್ನು ನೀಡಲು ಒಪ್ಪಿದರು.

ಸಾಮಾನ್ಯವಾಗಿ ಶ್ರೀಯುತ ಸುಬ್ಬರಾಯರು ಬೆಳಿಗ್ಗೆ ಮತ್ತು ಸಾಯಂಕಾಲ ಹೆಚ್ಚು ಹೊತ್ತು ನನ್ನ ಸಂಗಡ ಪ್ರಚಲಿತ ವಿಷಯಗಳ ಮೇಲೆ ಹರಟುತ್ತಾ ಕಾಲಕಳೆಯುತ್ತಿದ್ದರು. ನಮ್ಮಿಬ್ಬರಲ್ಲಿ ಒಂದು ವಿಧವಾದ ಆತ್ಮೀಯತೆ ಬೆಳೆದು ಬರಲು ಇದೇ ಕಾರಣವಾಯಿತು. ಶಾಲೆಯ ಮಾಸ ಪತ್ರಿಕೆಯ ಕಾರಣದಿಂದ ಇದು ಇನ್ನೂ ವೃದ್ಧಿ ಹೊಂದಿತು.

ಕನ್ನಡದಲ್ಲಿ ಮಾತನಾಡುವುದು, ಬರೆಯುವುದು ಇದು ಅವರಿಗೆ ವಂಶಗತವಾಗಿ ಬಂದ ಸಂಸ್ಕಾರದ ಗುಣವಿಶೇಷ. ನಮ್ಮ ಪತ್ರಿಕೆಯ ಸಂಪಾದಕ ಮಂಡಲಿ ರಚನೆಯಾಯಿತು. ನಾನೇ ಸಂಪಾದಕ. ಶ್ರೀಯುತರೇ ಕಾರ್ಯದರ್ಶಿ. ಶಾಲೆಯ ಕನ್ನಡ ಪಂಡಿತರು ಸಲಹೆಗಾರರು. ವಿದ್ಯಾರ್ಥಿಗಳ ಪೈಕಿ ನಾಲ್ಕು ಜನ ಸದಸ್ಯರು. ಈ ರೀತಿ ವ್ಯವಸ್ಥೆಯಾಯಿತು. ಉಪಾಧ್ಯಾಯರುಗಳನ್ನು, ವಿದ್ಯಾರ್ಥಿಗಳನ್ನು ಲೇಖನ

ಬರೆದು ಕೊಡುವಂತೆ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಒಂದು ಸುತ್ತೋಲೆಯನ್ನು ಕಳುಹಿಸಿದ್ದಾಯಿತು. ಆರಂಭವಾಗುವ ತಾರೀಖು ಇನ್ನೂ ಒಂದು ವಾರವಿದೆ ಎನ್ನುವಾಗ ಮೂರು ಲೇಖನಗಳು ಸಿದ್ಧವಾಯಿತು. ಕನ್ನಡ ಪಂಡಿತರದು ಒಂದು, ಸಂಪಾದಕನದು ಒಂದು, ಕಾರ್ಯದರ್ಶಿಯದು ಒಂದು. ಇದು ನಮಗೆ ಕೊಂಚ ಪೇಚನ್ನುಂಟು ಮಾಡಿತು. ಆಗ ಶ್ರೀ ಸುಬ್ಬರಾಯರ ಉತ್ತೇಜನ ರೂಪವಾದ ದೃಢಸಂಕಲ್ಪ ನಮ್ಮ ಮರ್ಯಾದೆಯನ್ನು ಉಳಿಸಿತು. ಕೇವಲ ಒಂದು ವಾರದಲ್ಲಿ ತಾವೇ 7–8 ಲೇಖನಗಳನ್ನು ಬರೆದರಲ್ಲದೆ, ತಮ್ಮ ಒಡನಾಡಿಗಳನ್ನು ಪ್ರೇರಿಸಿ ಲೇಖನಗಳು. ಕವನಗಳು. ನಗೆಹನಿಗಳು, ಗಾದೆಗಳು ಇವುಗಳನ್ನೂ ಪಡೆದು ತಾವೇ ಇವೆಲ್ಲವನ್ನೂ ಒಂದು ಬೌಂಡು ಪುಸ್ತಕದಲ್ಲಿ ಅಚ್ಚುಕಟ್ಟಾಗಿ ಬರೆದು, ಮುಖ ಪುಟಕ್ಕೆ ಒಂದು ಚಿತ್ರವನ್ನೂ ಸಹ ಬರೆಸಿ ಸಿದ್ಧ ಪಡಿಸಿದರು. ಗೊತ್ತಾದ ತಾರೀಖು ದಿವಸ ಶಾಲೆಯ ಮಾಸ ಪತ್ರಿಕೆ "ಅರುಣ" ಉದಯವಾಯಿತು.

ಶಾಲೆಯ ಮುಖ್ಯ ಉಪಾಧ್ಯಾಯರು ಪತ್ರಿಕೆ ಹೊರ ಬರಲು ಮುಖ್ಯ ಕಾರಣರಾದ ಶ್ರೀಯುತ ಸುಬ್ಬರಾಯರನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಅಂದು ಆರಂಭ ವಾದ ಮಾಸ ಪತ್ರಿಕೆ ಮುಂದುವರಿಯಿತು. ಇತರ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಪಡೆದು ಅವರಿಂದ ಹೆಚ್ಚು ಹೆಚ್ಚು ಲೇಖನಗಳು ಬರಲು ಸಹಾಯವಾಯಿತು.

ಈ ರೀತಿಯಲ್ಲಿ ಶ್ರೀಯುತರ ಹೃದಯಾಂತರಾಳದಿಂದ ಚಿಮ್ಮಿ ಹೊರಬಂದ ಮಾನಸ ಗಂಗೆಯು ಈಗ ರಮ್ಯವಾಗಿ ನಾನಾ ಶಾಖೆಗಳಲ್ಲಿ ಪೂರ್ಣವಾಗಿ ಹರಿದು ಬರುತ್ತಿರು ವುದು ಸಕಲರಿಗೂ ವೇದ್ಯವಾಗಿದೆ. ಶ್ರೀಯುತರು ಬರೆದಿರುವ ಅನೇಕ ಕಾದಂಬರಿಗಳು ಪಠ್ಯಪುಸ್ತಕಗಳಾಗಿವೆ. ಅನೇಕ ಕಾದಂಬರಿಗಳನ್ನು ಆಧರಿಸಿ ಕನ್ನಡ ಹಿಂದೀ ಭಾಷೆಗಳಲ್ಲಿ ಚಲನ ಚಿತ್ರಗಳನ್ನೂ ಸಹ ತೆಗೆದಿರುತ್ತಾರೆ. ಇವರ ಹಂಸಗೀತೆ (ಬಸಂತಬಹಾರ್), ಚಂದವಳಿಯ ತೋಟ, ಚಕ್ರತೀರ್ಥ, ನಾಗರಹಾವು ಇವುಗಳನ್ನು ಓದದಿರುವ, ಚಿತ್ರ ರೂಪದಲ್ಲಿ ನೋಡದಿರುವ ಕನ್ನಡಿಗನೇ ಇಲ್ಲವೆಂದು ಹೇಳಬಹುದು.

ಇತ್ತೀಚೆಗೆ ನಾನು ಸರ್ಕಾರಿ ಕೆಲಸದಿಂದ ನಿವೃತ್ತನಾಗಿ ಮೈಸೂರಿನಲ್ಲಿ ಸಮೀರ ಬೋಧಕ ವಿದ್ಯಾಶಾಲೆಯ ಪ್ರಿನ್ಸಿಪಾಲ್ ಆಗಿದ್ದಾಗ ಶ್ರೀ ಸುಬ್ಬರಾಯರನ್ನು ವಿದ್ಯಾರ್ಥಿ ಸಂಘದ ಪ್ರಾರಂಭ ಭಾಷಣ ಮಾಡಲು ಆಹ್ವಾನಿಸಿದ್ದೆವು. ಆದರದಿಂದ ನಮ್ಮ ಆಹ್ವಾನವನ್ನು ಸ್ವೀಕರಿಸಿದ ಅವರು ಆ ದಿನ ಅಮೋಘ ಭಾಷಣವನ್ನು ಮಾಡಿ ಉಪಾಧ್ಯಾಯ ವೃಂದವನ್ನು, ವಿದ್ಯಾರ್ಥಿ ಸಮೂಹವನ್ನು ಸಂತೋಷದ ಮಡಿಲಲ್ಲಿ ಮುಳುಗಿಸಿದರು. ಆ ದಿನದ ಇವರ ನಡೆ ನುಡಿಗಳಿಂದ ನಮ್ಮ ಕಾಲೇಜಿನ ವಿದ್ಯಾರ್ಥಿ ಗಳು ನನ್ನಲ್ಲಿ ಇಟ್ಟಿದ್ದ ವಿಶ್ವಾಸ ಮತ್ತು ಸದ್ವರ್ತನೆಗಳು ದ್ವಿಗುಣ ಗೊಂಡವು. ನನ್ನ ಸುಬ್ಬರಾಯರ ಮೂವತ್ತೈದು ವರ್ಷಗಳ ಹಿಂದಿನ ಆತ್ಮೀಯತೆ ಇನ್ನೂ ಅಚ್ಚಳಿಯದೆ

ಪ್ರದರ್ಶಿಸಲ್ಪಟ್ಟಿತು. ಇಂಥ ಗುಣ ಸಂಪನ್ನರು, ಉತ್ತಮ ಬರಹಗಾರರು, ಸಮಾಜ ನೇತೃಗಳು ಆದ ಶ್ರೀ ತ.ರಾ.ಸು. ಅವರು ಚಿರಕಾಲ ಬಾಳಲಿ, ಪರಮಾತ್ಮನು ಆಯುರಾರೋಗ್ಯ ಐಶ್ವರ್ಯ ಸಂಪತ್ತುಗಳನ್ನು ದಯಪಾಲಿಸಲಿ; ಅವರ ಕನ್ನಡ ನಾಡಿನ–ನುಡಿಯ ಸೇವೆ ಇನ್ನೂ ಹೆಚ್ಚಲಿ ಎಂದು ಪ್ರಾರ್ಥಿಸುತ್ತೇನೆ. ಹಾಗೂ ಅವರ ಅಭ್ಯುದಯವನ್ನು ನೋಡಿ ಸಂತೋಷ ಪಡುವ ಭಾಗ್ಯ ದೊರೆತುದಕ್ಕಾಗಿ ಹರ್ಷಿಸುತ್ತೇನೆ.

* ನಾನು ದೇವರನ್ನು, ವಿಧಿಶಕ್ತಿಯನ್ನು, ಅದೃಷ್ಟ ವ್ಯಾಪಾರವನ್ನು ನಂಬದ ನಾಸ್ತಿಕನಲ್ಲ. ದೇವರು ದಿಂಡರಲ್ಲಿ ನನಗೆ ನಂಬಿಕೆಯಿದೆ. ಹಬ್ಬಹರಿದಿನಗಳನ್ನು ಶ್ರದ್ಧೆಯಿಂದ ಆಚರಿಸುತ್ತೇನೆ. ದೇವಸ್ಥಾನಗಳಿಗೆ ಹೋಗಿ ಬರುತ್ತೇನೆ. ಗ್ರಹಚಾರದಲ್ಲೂ ನಂಬುತ್ತೇನೆ ಆದರೆ ಹಾಗೆಂದು ಹಗಲಾಗುತ್ತಿದ್ದ ಹಾಗೇ ಆದಿನ ಮಾಡಬೇಕಾದ ಕೆಲಸಕ್ಕೆ ಗ್ರಹಬಲ ಹೇಗಿದೆಯೋ ನೋಡಬೇಕೆಂದು ಪಂಚಾಂಗ ಹಿಡಿದು ಕೂರುವುದಿಲ್ಲ. ಗ್ರಹಗಳ ಕೆಲಸ ಅವಕ್ಕೆ, ನನ್ನ ಕೆಲಸ ನನಗೆ... (ಒಮ್ಮೆ ನಕ್ಕು ನಗು)

ಸಾರ್ಥಕ ಬದುಕಿನ ಸಂಕೇತ

— ವ್ಯಾ. ನಾ. ಭಂಡಾರಕರ

"ಕ್ರಿಯಾಸಿದ್ಧಿ ಸತ್ವೇ ಭವತಿ ಮಹತಾಂನೋಪಕರಣೇ" ಎನ್ನುವ ಆರ್ಯೋಕ್ತಿಗೆ ತ.ರಾ.ಸು. ಅವರ ಬದುಕು ಸಾಕ್ಷಿ. ಅರವತ್ತು ವರುಷಗಳ ತಮ್ಮ ತುಂಬು ಜೀವನವನ್ನು ಸತ್ವ, ಸ್ವಂತಿಕೆಗಳ ಮೂಲಕ ಸಾರ್ಥಕತೆಯ ಕಡೆಗೆ ಕೊಂಡೊಯ್ದವರು ಅವರು. ಎಳೆತನದಲ್ಲಿಯೇ ಹಿರಿಯ ಗುರಿಯನ್ನು ಹೊಂದಿ ಅಚಲ ಶ್ರದ್ಧೆಯಿಂದ ಅವಿರತ ಅದರತ್ತ ನಡೆದು ಅರವತ್ತು ವರ್ಷಗಳನ್ನೂ ಕನ್ನಡಮ್ಮನ ಮಂಗಲ ಸೇವೆ ಯಿಂದ ತುಂಬಿಸಿ ಧನ್ಯವಾದ ಜೀವನ. ಅದು ತ.ರಾ.ಸು. ಅವರಿಗೆ ತೃಪ್ತಿ, ಕನ್ನಡ ಜನತೆಗೆ ಹೆಮ್ಮೆ.

ಕೆಲವು ವರ್ಷಗಳಿಂದ ದೇಹಸ್ವಾಸ್ಥ್ಯ ಕಳೆದುಕೊಂಡಿದ್ದರೂ ಓದುವ ಬಲವನ್ನಾಗಲಿ, ಬರೆಯುವ ಪ್ರವೃತ್ತಿಯನ್ನಾಗಲಿ, ಕನ್ನಡದ ಕುರಿತು ಚಿಂತನೆಯನ್ನಾಗಲಿ ಬಿಟ್ಟವರಲ್ಲ. ಲೋಕದ ಬೆಳಕಿನೆದುರು ಈಗಲೂ ಮುಗುಳು ನಗುತ್ತಿರುವ ಈ ಮಾಗಿದ ಜೀವ ಪಡೆದ ಪರಿಪಕ್ವ ಅನುಭವವು ಅವರ ಲೆಕ್ಕಣಿಕೆಗೆ ದಧೀಚಿಯ ಬೆನ್ನೆಲುಬಾಗಿದೆ.

ಕನ್ನಡ ಲೇಖಕ – ಲೇಖಕಿಯರಲ್ಲಿ ಅನೇಕರು ತಮ್ಮ ಸಾಹಿತ್ಯ ಸೇವೆ ಪ್ರಾರಂಭಿಸಿದ್ದು ಸಣ್ಣ ಕಥೆಗಳ ಮೂಲಕ. ಸುಪ್ರಸಿದ್ಧ ಕಾದಂಬರಿಕಾರರಾಗಿ ಅರಳಿದ ಅ. ನ. ಕೃ., ಬಸವರಾಜ ಕಟ್ಟೀಮನಿ, ಯು. ಆರ್. ಅನಂತ ಮೂರ್ತಿ, ವಾಣಿ, ತ್ರಿವೇಣಿಯರಂತೆ ತ.ರಾ.ಸು. ತಮ್ಮ ಸಾಹಿತ್ಯ ಜೀವನಕ್ಕೆ, ಮೂರ್ತ ಕಲ್ಪಿಸಿದ್ದು ಸಣ್ಣ ಕಥೆಗಾರರಾಗಿ.

ಪ್ರಗತಿಶೀಲ ದೃಷ್ಟಿಕೋನ ಪ್ರಧಾನವಾಗಿ ಕಾಣಿಸಿಕೊಂಡದ್ದು ಸಣ್ಣ ಕಥೆಗಳ ರಂಗದಲ್ಲಿ "ಪ್ರಗತಿಶೀಲ ಚಳವಳಿಯಿಂದ ನಮ್ಮ ಸಾಹಿತ್ಯದ ಮೇಲೆ ಆದ ಪರಿಣಾಮ ಗಣನೀಯವಾದದ್ದು. ಸಾಹಿತ್ಯ ರಚನೆಯ ದೃಷ್ಟಿ ಸ್ವರೂಪಗಳಲ್ಲಿ ಬದಲಾವಣೆ ಯನ್ನು ಅದು ಪ್ರಚೋದಿಸಿತು. ಸಾಹಿತ್ಯದ ವಸ್ತು ನಿಜಜೀವನಕ್ಕೆ ಸಮೀಪ ವಾಯಿತು. ಸಂಭಾಷಣೆಗಳಲ್ಲಿ ಆಡುಮಾತಿನ ಬಳಕೆ ಹೆಚ್ಚಿತು. ಬರವಣಿಗೆ ಚುರುಕಾಯಿತು. ನಿರೂಪಣೆಯಲ್ಲಿ ವಾಸ್ತವಿಕತೆಗೆ ಮಾನ್ಯತೆ ದೊರೆಯಿತು. ದೇಶದಲ್ಲಿದ್ದ ಅತೃಪ್ತ ವಾತಾವರಣ ಸಾಹಿತ್ಯದಲ್ಲಿ ಮೂಡಿ ಬಂತು. ಅವರೆಗೆ ಸ್ಥಳ ಕಾಣದಿದ್ದ ಹೊಸ ಹೊಸ ಸಮಸ್ಯೆಗಳ ವಿವೇಚನೆಗೆ ಪ್ರಾಧಾನ್ಯ ದೊರೆಯಿತು." ಇಂಥ ಪ್ರಗತಿಶೀಲ ಚಳುವಳಿ ಕನ್ನಡದಲ್ಲಿ ಆರಂಭವಾದ ಕಾಲದಲ್ಲಿ ಪ್ರಗತಿಶೀಲ ಸಣ್ಣ ಕಥೆಗಳನ್ನು ಬರೆದ ಅ. ನ. ಕೃಷ್ಣರಾಯ, ಬಸವರಾಜ ಕಟ್ಟೀಮನಿ, ಚದುರಂಗ, ಪಾಟೀಲ ಪುಟ್ಟಪ್ಪ, ಕೋ. ಚೆನ್ನಬಸಪ್ಪ ಮುಂತಾದ ಕಥೆಗಾರರ ಮಾಲಿಕೆಯಲ್ಲಿ ತ.ರಾ.ಸು. ಅವರೂ ಸೇರಿದ್ದಾರೆ.

ಒಂಬತ್ತನೆಯ ವಯಸ್ಸಿನಲ್ಲೇ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಭಾಷಣ ಮಾಡಿದವರು ತ.ರಾ.ಸು. ಇಂದು ಅವರ ಬಾಳ ಬಟ್ಟೆಯಲ್ಲಿ ಸಂವತ್ಸರ ಚಕ್ರವೊಂದು ಉರುಳಿದೆ. ಅಂದಿನಿಂದ ಇಂದಿನವರೆಗೆ ಬದುಕನ್ನು ಪ್ರಜ್ಞಾಪೂರ್ವಕವಾಗಿ ನೋಡಿದ್ದಾರೆ. ತಾವು ಕಂಡ ಉಂಡ ಅನುಭವಗಳನ್ನು ವಿಚಾರದ ಕುಲುಮೆಯಲ್ಲಿ ಪರಿಪಕ್ವಗೊಳಿಸಿದ್ದಾರೆ. ಎಂದೆಂದಿಗೂ ಪ್ರಗತಿಶೀಲ ವಿಚಾರಧಾರೆಯ, ಮನೋಭಾವದ ವ್ಯಕ್ತಿ ತ.ರಾ.ಸು. ಅಂತೆಯೇ ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಅಂದು ಅ.ನ.ಕೃ. ರವರೊಂದಿಗೆ ತ.ರಾ.ಸು. ರವರದು ಸಕ್ರಿಯ ಪಾತ್ರ.

ಇಂದು ಸಾಹಿತ್ಯ ಕ್ಷೇತ್ರದಲ್ಲಿ ರೂಪುಗೊಂಡ ಎಲ್ಲ ವಿಧದ ಬದಲಾವಣೆಗಳನ್ನೂ ಸೂಕ್ಷ್ಮವಾಗಿ ಗಮನಿಸಿದ್ದಾರೆ ತ.ರಾ.ಸು. "ಸಾಹಿತ್ಯ ನಿಂತ ನೀರಲ್ಲ. ಸಮಕಾಲೀನ ಜೀವನ ಸಾಹಿತಿಗಳ ಮೇಲೆ ಪರಿಣಾಮ ಮಾಡಿಯೇ ಮಾಡುತ್ತದೆ. ಹಾಗೆಯೇ ಸಾಹಿತಿಯೂ ಬೆಳೆಯುತ್ತಾ ಯಾವುದೋ ಒಂದು ಘಟ್ಟದಲ್ಲಿ ಬೇರೆ ರೀತಿಯಲ್ಲಿ ಬರೆಯಬೇಕು ಎಂದು ಅವನಿಗೆ ಅನಿಸಲೂ ಬಹುದು. ಆದರೆ ಆಕಾರ ಯಾವುದಾದರೂ ಆಗಲಿ ವೇಷ ಏನಾದರೂ ಬದಲಾಗಲಿ ನನಗೆ, ತಿಳಿದ ಮಟ್ಟಿಗೆ ಸಾಹಿತ್ಯದ ಮೊದಲ ಕೆಲಸ – ಜನರನ್ನು ಮುಟ್ಟಬೇಕು. ಅದು ಅದರ ಮೊದಲ ಗುರಿ. ಹೊಸದು ಕೆಲ ಕಾಲ ಕೆಲವರನ್ನು ಆಕರ್ಷಿಸುತ್ತದೆ. ಅದು ನವೀನತೆಯ ಒಂದು ಮುಖ್ಯ ಗುಣ. ಅಂತಸ್ಸತ್ವ ಇಲ್ಲದಿದ್ದಾಗ ಆ ಆಕರ್ಷಣೆ ಬಹುಬೇಗ ಸತ್ವ ಕಳೆದುಕೊಳ್ಳುತ್ತದೆ. ತನ್ನ ವಿಚಾರದ ಅಭಿವ್ಯಕ್ತಿಗೆ ಸೂಕ್ತ ಮಾಧ್ಯಮವನ್ನು ಆಯ್ದುಕೊಳ್ಳುವುದು ಸಾಹಿತಿಗೇ ಸೇರಿದ ವಿಷಯ. ಆ ಸ್ವಾತಂತ್ರ್ಯ ಅವನಿಗಿದೆ."– ಎನ್ನುತ್ತಾರೆ, ತ.ರಾ.ಸು.

ಐವತ್ತಕ್ಕೂ ಹೆಚ್ಚು ಕಾದಬರಿಗಳನ್ನು ಸೃಷ್ಟಿಸಿ ಕನ್ನಡಮ್ಮನಿಗೆ ಕೊಡುಗೆಯಾಗಿ ನೀಡಿದ ತ.ರಾ.ಸು., ತಮ್ಮ ಸತ್ವಪೂರ್ಣ ಲೇಖನಿಯಿಂದ ಕೆಲವು ಸಣ್ಣ ಕಥೆಗಳನ್ನೂ, ಜೀವನ ಚರಿತ್ರೆಗಳನ್ನೂ ನಾಟಕಗಳನ್ನು ಬರೆದಿದ್ದಾರೆ. ಸಾಹಿತ್ಯ ಸೃಜನೆಯಲ್ಲಿ ತ.ರಾ.ಸು. ಎಷ್ಟು ನಿಸ್ಸೀಮರೋ ಅಷ್ಟೇ ನಿಷ್ಠುರರು, ತಮ್ಮ ವಿಚಾರದ ಅಭಿವ್ಯಕ್ತಿಯಲ್ಲಿ. ಅ.ನ.ಕೃ. ಅವರ ಘನ ವ್ಯಕ್ತಿತ್ವ ಮತ್ತು ಅವರ ಸಾಹಿತ್ಯ ಸೇವೆಯ ಮೇಲೆ ಅಪಾರ ಪ್ರೀತಿ ಗೌರವಗಳನ್ನು ಹೊಂದಿದ ತ.ರಾ.ಸು. ಅವರು, ಇಂದು ಅ.ನ.ಕೃ. ಗೈದ ಸೇವೆಯನ್ನು ಕನ್ನಡಿಗರು ಮರೆತಿರುವುದಕ್ಕಾಗಿ ಖೇದಗೊಳ್ಳುತ್ತಾರೆ. ತನ್ನ ಹಾಗೂ ತನ್ನಂತಹ ಹಲವಾರು ಜನ ಕಾದಂಬರಿಕಾರರ ಸೃಷ್ಟಿಗೆ ಕಾರಣರಾದ ಮತ್ತು ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಬೆಳೆಸಿದ ಆ ಧೀಮಂತ ಸಾಹಿತಿಯನ್ನು ಮರೆತಿರುವುದು ವಿಷಾದನೀಯ ಎನ್ನುತ್ತಾರೆ ತ.ರಾ.ಸು.

ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಅಡಕವಾದ ಮೂಲಭೂತವಾದ ಉದ್ದೇಶಗಳೂ ಇಂದಿನ ಬಂಡಾಯ ಸಾಹಿತ್ಯದ ಉದ್ದೇಶಗಳೂ ಒಂದೇ ಆಗಿವೆ ಎನ್ನುವುದು ತ.ರಾ.ಸು. ಅವರ ಅಭಿಪ್ರಾಯ. ಎಲ್ಲಿಯವರೆಗೆ ದಲಿತರು, ಶೋಷಿತರು ತಮ್ಮ

ಬಗ್ಗೆ ಹಾಡೇ ಸಮತನಾದರು, ಬರೆದರೂ ವೈಜ್ಞಾನಿಕದೃಷ್ಟಿಯ [illegible] ನಿಜವಾದ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಇಷ್ಟಲ್ಲದೆ [illegible] ಆ ವರ್ಗದ ಸಾಹಿತಿಯಾಗುವುದು ಸಾಧ್ಯವಿಲ್ಲ. ಪ್ರಗತಿಯ ಹೊಸ ತಿರುವನ್ನು ನೀಡಬಲ್ಲ ಲೇಖಕರು ಸಮಾಜದ ಎಲ್ಲ ವರ್ಗಗಳಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಬರಬೇಕು. — ಎನ್ನುವುದು ತ.ರಾ.ಸು. ಅವರ ನಿಲುವು.

ತ.ರಾ.ಸು. ಅವರ ವಿಚಾರಗಳು ಸ್ಫಟಿಕದಂತೆ ಸ್ಫುಟ, ಅಲಗಿನಂತೆ ತೀಕ್ಷ್ಣ. ವಿಚಾರಶೀಲರೂ ಅಧ್ಯಯನಶೀಲರೂ ಆದ ತ.ರಾ.ಸು. ತಮ್ಮ ಪ್ರಭಾವೀ ಹಾಗೂ ಸತ್ವಪೂರ್ಣ ಲೇಖನಿಯಿಂದ ಪ್ರಕಾಶಕರನ್ನು ಓದುಗರನ್ನೂ ಸೃಷ್ಟಿ ಮಾಡಿಕೊಂಡವರು. ಇವರಾಗಲಿ, ಅ.ನ.ಕೃಷ್ಣರಾಯರಾಗಲಿ ಬರೆಯಲು ತೊಡಗಿದ ಕಾಲದ ಜಾಯಮಾನವೇ ಅಂತಹುದು. ಅಂದು ಕನ್ನಡದಲ್ಲಿ ಪ್ರಕಾಶಕರಿಗೆ ಓದುಗರಿಗೆ ಬರಗಾಲ. ಅಂತಹ ಕಾಲದಲ್ಲಿಯೂ ಬರವಣಿಗೆಯನ್ನು ವೃತ್ತಿಯೆಂದು ಲೆಕ್ಕಿಸದೆ ಓತಪ್ರೋತವಾದ ತಮ್ಮ ಸಾಹಿತ್ಯ ಪ್ರವೃತ್ತಿಯ ಮೂಲಕ- ಅಂದಿನಿಂದ ಇಂದಿನವರೆಗೆ ಕನ್ನಡಮ್ಮನ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ ತ. ರಾ. ಸು. ಅವರ ಬಾಳು 'ಹೊಳಿದಂಡಿಲಿರುವ ಕರಕೀಯ ಕುಡಿಯಂಗ' ಸದಾ ಹೊಸ ಹಸುರ ಕುಡಿ ತಳೆದು ಬೆಳೆಯಲಿ.

* ಹಾಡು–ಹಾಡುವವನು ಬೇರೆ ಬೇರೆ ಎಂಬ ಭಾವನೆ ಹೋಗಬೇಕು. ಎರಡೂ ಒಂದಾಗಬೇಕು. ನಾನು–ನೀನು ಎಂಬ ದ್ವಂದ್ವ ಇರುವವರೆಗೂ ಜೀವನದಲ್ಲಿ ಸಾಮರಸ ಹೇಗೆ ಸಾಧಿಸುವುದಿಲ್ಲವೋ, ಹಾಗೆ ಸಂಗೀತದಲ್ಲೂ. ಒಂದು ವೇಳೆ ಜೀವನದಲ್ಲಿ ದ್ವಂದ್ವ ಇದ್ದರೂ ನಡೆದೀತು. ಸಮರಸವೇ ಜೀವಾಳವಾದ ಸಂಗೀತದಲ್ಲಿ ಕೂಡದೇ ಕೂಡದು. ತಲ್ಲೀನತೆಯೊಂದೇ ಸಂಗೀತದ ಸಿದ್ಧಿಗೆ ಹಾದಿ, ಹಾಡುತ್ತಿದ್ದೇನೆ ಎನ್ನುವ ಅರಿವು ಹಾಡುವಾಗ ಇರಬಾರದು.

ನನ್ನ ಮಗ

— ಟಿ. ಎಸ್. ರಾಮಸ್ವಾಮಯ್ಯ

ಸುಬ್ಬಣ್ಣ ನನ್ನ ಮೊದಲನೆ ಮಗ. ಆತ ಹುಟ್ಟಿದ್ದು ಹರಿಹರ ತಾಲ್ಲೂಕು ಮಲೆಬೆನ್ನೂರಿನಲ್ಲಿ, 1920 ನೇ ಇಸವಿಯಲ್ಲಿ. ಆಗ ನಾನು ಅಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರನಾಗಿದ್ದೆ. ಅವನು ಹುಟ್ಟಿದ ಹಿಂದಿನ ದಿವಸ ಆ ತಾಲ್ಲೂಕಿನ ಅಮಲ್ದಾರರು ಮಲೆಬೆನ್ನೂರಿನಲ್ಲಿ ಕ್ಯಾಂಪ್ ಮಾಡಿದ್ದರು. ಅವರ ಹೆಸರು ಜಿ. ಶ್ರೀನಿವಾಸ ಅಯ್ಯಂಗಾರ್ ಅಂತ. ಬಹಳ ಒಳ್ಳೆಯವರು. ದೊಡ್ಡ ಜ್ಯೋತಿಷ್ಕರು. ನಮ್ಮ ಸಂಪ್ರದಾಯದ ಜ್ಯೋತಿಷ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದರಲ್ಲದೆ ಕಲ್ಕತ್ತಾದಿಂದ ಪ್ರಕಟವಾಗುತ್ತಿದ್ದ ಜ್ಯೋತಿಶಾಸ್ತ್ರ ಹೆಸರು (ನೆನಪಿಲ್ಲ) ಪತ್ರಿಕೆಯೊಂದನ್ನು ತರಿಸಿಕೊಂಡು ತಮ್ಮ ಅಭ್ಯಾಸವನ್ನು ಪಳಗಿಸಿಕೊಂಡಿದ್ದರು.

ಸುಬ್ಬಣ್ಣ ಹುಟ್ಟಿದ್ದು ಆದಿನ ಬೆಳಗಿನಜಾವ ನಾಲ್ಕು ಗಂಟೆ ಇರಬಹುದು. ನಾನು ಬೆಳಗ್ಗೆ ಸುಮಾರು 8 ಗಂಟೆ ಹೊತ್ತಿಗೆ ಅಮಲ್ದಾರನ್ನು ಕಾಣಲು ಹೋದಾಗ ಅವರು ತುಂಬಾ ಸಂತೋಷ ಭರಿತರಾಗಿದ್ದರು. ನನ್ನನ್ನು ನೋಡಿದವರೇ "ಏನು ಶೇಕ್‌ದಾರ್‍ರೇ, ತುಂಬಾ ಜಂಭ ಬಂದ ಹಾಗಿದೆ. ದಿವಾನ್ ಪದವಿಗೆ ಹೋಗತಕ್ಕ ಮಗ ಹುಟ್ಟಿದ್ದಾನೆ ಅಂತ ಇರಬಹುದು." ಅಂತ ಹೇಳಿದರು. ಸುಬ್ಬಣ್ಣ ಹುಟ್ಟಿದ ವಿಷಯ ಅವರಿಗೆ ಹೇಗೋ ತಿಳಿದು ನಾನು ಹೋಗುವುದರೊಳಗಾಗಿ ಸುಬ್ಬಣ್ಣನ ಜನ್ಮ ಕುಂಡಲಿಯನ್ನು ತಯಾರುಮಾಡಿ ಅವನ ಭವಿಷ್ಯವನ್ನೆಲ್ಲ ಹೇಳಿದರು. ಅವರು ಹೇಳಿದ್ದು, ಅವನು ದೊಡ್ಡ ಪದವಿಗೆ ಏರಬೇಕು ಅಥವಾ ಸಂನ್ಯಾಸಿಯಾಗಬೇಕು. ಅಷ್ಟು ಉತ್ಕೃಷ್ಟ ಜಾತಕ ಎಂದು ಬಣ್ಣಿಸಿದರು. ನನಗೂ ಕೇಳಿ ಸಂತೋಷವಾಯಿತು. ಆ ವರ್ಷವೇ ನನಗೆ ಅಲ್ಲಿಂದ ಹಿರಿಯೂರಿಗೆ ವರ್ಗವಾಯಿತು. ಹುಡುಗನೂ ಸುಂದರನಾಗಿ ಶೈಶವವನ್ನು ಕಳೆದ ನಂತರ ನಾನು ಚಿತ್ರದುರ್ಗಕ್ಕೆ ಬಂದೆ. 1923 ನೇ ಇಸವಿಯಲ್ಲಿ ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಲಾಯರ್ ಕೆಲಸ ಪ್ರಾರಂಭಿಸಿದ್ದೆ. ನಮ್ಮ ತಂದೆ ಸುಬ್ಬಣ್ಣನವರು 1918 ನೇ ಇಸವಿಯಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯಿಂದ ದೈವಾಧೀನರಾದುದರಿಂದ ಅವರ ಹೆಸರನ್ನೇ ನನ್ನ ಮಗನಿಗೆ ಇಟ್ಟೆ. ಚಿಕ್ಕಂದಿನಿಂದಲೂ ಸುಬ್ಬಣ್ಣ ತುಂಬಾ ಚಟುವಟಿಕೆ. ತುಂಟತನ, ಗೆಳೆಯರೊಂದಿಗೆ ತಿರುಗುವುದು ಈ ಹವ್ಯಾಸಗಳಿದ್ದವು. ಆ ಕಾಲದಲ್ಲಿ, ಅಂದರೆ ಸುಬ್ಬಣ್ಣನಿಗೆ ಸುಮಾರು 8 ವರ್ಷ ವಯಸ್ಸಾಗಿದ್ದಾಗ ನಾನು ಈ ಊರಿನ ಎಕ್ಸ್‌ಟೆನ್‌ಷನ್‌ನಲ್ಲಿ ಒಂದು ದೊಡ್ಡ ಮನೆಯನ್ನು ಕಟ್ಟಿ ಅಲ್ಲಿ ವಾಸಮಾಡುತ್ತಿದ್ದೆವು. ನನ್ನ ಪಕ್ಕದ ಮನೆ ಶ್ರೀಮಾನ್ ಎಸ್. ನಿಜಲಿಂಗಪ್ಪನವರದು. ನಮ್ಮ ಮನೆಯವರಿಗೂ ಅವರ ಮನೆಯವರಿಗೂ ತುಂಬಾ ಸ್ನೇಹ. ಅವರಂತೂ ಸುಬ್ಬಣ್ಣನನ್ನು

“ಧ್ರುವ” ಎಂದು ಕರೆಯುತ್ತಿದ್ದರು. ಇವನು ಬೆಳಗಾಗುತ್ತಲೇ ಅವರ ಮನೆಗೆ ಹೋಗಿ ಅವರ ತಾಯಿ ನೀಲಪ್ಪನಿಂದ ಯಥೇಷ್ಟವಾಗಿ ರೊಟ್ಟಿ, ಹಾಲು ತಿಂದುಕೊಂಡು ಬರುತ್ತಿದ್ದ.

ನಮ್ಮ ಮನೆಯ ಉತ್ತರಕ್ಕೆ ದಾರಾಷಾ (ಫಾರ್ಸಿ) ಎಂಬ ಟ್ರೆಜರಿ ಆಫೀಸರ್ ಇದ್ದರು. ಅವರಿಗೆ ಇವನ ಸ್ನೇಹ ಹೇಗಾಯಿತೋ ಗೊತ್ತಿಲ್ಲ. ಅವರಿಗೆ ಸುಬ್ಬಣ್ಣನಲ್ಲಿ ಅತಿಶಯ ಪ್ರೀತಿ. ಸಾಧಾರಣವಾಗಿ ಪ್ರತಿದಿನ ಬೆಳಿಗ್ಗೆ 9 ಗಂಟೆ ಹೊತ್ತಿಗೆ ಅವರ ಬಿಳಿಯ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಮನೆಯ ಹತ್ತಿರ ಬಂದು “ಸುಬ್ಬು” ಎಂದು ಕೂಗುವರು. ಅವನನ್ನು ತಮ್ಮ ಮುಂದೆ ಕೂರಿಸಿಕೊಂಡು ಒಂದು ಸುತ್ತು ವಿಹಾರ ಮಾಡಿಕೊಂಡು ನಂತರ ಮನೆಗೆ ತಂದು ಬಿಡುತ್ತಿದ್ದರು. ನನಗೂ ಸಹ ಅವರ ಪರಿಚಯವಿತ್ತೇ ಹೊರತು, ಅವರಲ್ಲಿ ಗಾಢವಾದ ಸ್ನೇಹವೇನೂ ಇರಲಿಲ್ಲ.

ಬಡಾವಣೆಯಲ್ಲಿ ಎರಡು ಮೂರು ವರ್ಷ ಕಳೆದ ಮೇಲೆ ನಾನು ಬಡಾವಣೆ ಬಿಟ್ಟು ಊರೊಳಗೆ ವಾಸಿಸಲು ಹೋದೆ. ಅಷ್ಟರಲ್ಲಿ ಸುಬ್ಬಣ್ಣನಿಗೆ ನನ್ನ ಪರಮ ಮಿತ್ರರಾದ ಹುಲ್ಲೂರು ಶ್ರೀನಿವಾಸ ಜೋಯಿಸರ ಪರಿಚಯ ವಾಯಿತು. ನಾನೂ-ಅವರು ಸಹ ಅನೇಕ ವರ್ಷಗಳ ಕಾಲ ಈ ಊರಿನ ಬೆಟ್ಟ–ಗುಡ್ಡಗಳನ್ನೆಲ್ಲ ಅವುಗಳಲ್ಲಿನ ಸಂದು ಗೊಂದಿಗಳನ್ನೆಲ್ಲ ತಿರುಗಿ ನೋಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದೆವು. ಚಿಕ್ಕವನಾದ ಸುಬ್ಬಣ್ಣನನ್ನು ಅವರು ಆಗಿಂದಾಗ್ಗೆ ಕರೆದೊಯ್ಯುತ್ತಿದ್ದರು. ಸುಬ್ಬಣ್ಣ ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲ್‌ಗಳ ವಿದ್ಯಾಭ್ಯಾಸವನ್ನು ಈ ಊರಿನಲ್ಲಿಯೇ ಕಳೆದನು. ಅವನಿಗೆ ಓದುವುದಕ್ಕಿಂತಲೂ ಹೆಚ್ಚಾಗಿ ಆಟ–ಪಾಠಗಳು, ಸ್ನೇಹಿತರೊಡನೆ ತಿರುಗಾಟ, ಮನಸ್ಸಿಗೆ ತೋಚಿದ್ದನ್ನು ಬರೆಯುವುದು ಹೀಗೆ ಅವನ ಸಾಹಿತ್ಯದ ಅಭಿಲಾಷೆಯೂ ವ್ಯಕ್ತಗೊಳ್ಳುತ್ತಿತ್ತು. ಬರು ಬರುತ್ತಾ ಅವರಲ್ಲಿ ಅವನ ಅಭಿಲಾಷೆ ಹೆಚ್ಚಾಯಿತು. ಶ್ರೀನಿವಾಸ ಜೋಯಿಸರೊಂದಿಗೆ ಬೆಟ್ಟಗುಡ್ಡಗಳನ್ನೆಲ್ಲ ತಿರುಗಿ–ತಿರುಗಿ, ಅವರಿಂದ ಈ ದುರ್ಗದ ಚರಿತ್ರೆಯನ್ನು ಕೇಳಿ–ಕೇಳಿ ಅಲ್ಲಲ್ಲಿ, ಶಾಸನಗಳನ್ನು ನೋಡಿ ಚಂದ್ರವಳ್ಳಿ, ಧವಳಪ್ಪನ ಗುಡ್ಡ ಒಂದಲ್ಲ, ಎರಡಲ್ಲ ಸುತ್ತಿದ್ದು. ಇದರಿಂದ ಅವನಿಗೆ ದುರ್ಗದ ಇತಿಹಾಸದಲ್ಲಿ ಹೆಚ್ಚಾದ ಆಸಕ್ತಿ. ರಚಿಸಲು ಸ್ಫೂರ್ತಿ ಬಂದಿರಬೇಕು. ಸ್ಕೂಲುಗಳಲ್ಲಿಯೂ ಸಹ ಇವನ ಮೇಷ್ಟರುಗಳು ಇವನು ತನ್ನ ಪಾಠಗಳನ್ನು ಇಷ್ಟು ನಿರ್ಲಕ್ಷಿಸಿದರೂ ಅವನ ವಾಙ್ಮಯ ಜೀವನ ಕಂಡು ಸಂತೋಷಿಸುತ್ತಿದ್ದರು, ಹೊಗಳುತ್ತಿದ್ದರು; ಭುಜತಟ್ಟುತ್ತಿದ್ದರು. ಅವರ ಪೈಕಿ ಸುಬ್ಬಣ್ಣನನ್ನು ಕಂಡರೆ ಅಸಂತೋಷ ಭರಿತರಾಗಿದ್ದವರು — ಒಬ್ಬರೇ, ಅವರು ನಮ್ಮ ಮಾಸಾಭಾವ ಕಾಶಿನಾಥ ಶಾಸ್ತ್ರಿಗಳು. ಅವರು ವೇದಾಧ್ಯಯನ ಸಂಪನ್ನರು, ಸಂಪ್ರದಾಯ ಶರಣರು, ಮತ್ತು ತಮ್ಮ ಸಮಾನ ಯಾರೂ ಪಂಡಿತರಿಲ್ಲವೆಂಬ ಒಂದು ಹೆಮ್ಮೆ ಇವುಗಳಿಂದ ಕೂಡಿದ್ದವರು. ಅವರು ಹೈಸ್ಕೂಲಿನಲ್ಲಿ ಸಂಸ್ಕೃತ ಪಂಡಿತ

ರಾಗಿದ್ದರು. ಯಾವಾಗಲೂ ಸುಬ್ಬಣ್ಣನನ್ನು ತೆಗಳುವುದು, ತಮ್ಮ ಮಕ್ಕಳನ್ನು ಹೊಗಳುವುದು ಅವರ ಅಭ್ಯಾಸ. ಆದರೂ ನನ್ನಲ್ಲಿ ಅವರಿಗೆ ತುಂಬಾ ವಿಶ್ವಾಸ, ಪ್ರೀತಿ. ಸಾಧಾರಣವಾಗಿ ದಿನಕ್ಕೊಂದು ಸಾರಿಯಾದರೂ ಅವರು ಮನೆಗೆ ಬಂದು ಹೋಗುವ ವಾಡಿಕೆ. ಆಕಾಲದಲ್ಲಿ ನಮ್ಮ ಗೃಹಕೃತ್ಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಸುಬ್ಬಣ್ಣನ ವಿಷಯ ಬಂದಾಗ ಅವನ ಮೇಲೆ ಅನೇಕ ದೋಷಾರೋಪಣೆಗಳನ್ನು ತರುತ್ತಿದ್ದರು. ನಾನು ಅವುಗಳನ್ನು ಅಷ್ಟು ಹೆಚ್ಚಾಗಿ ಅಂಟಿಸಿಕೊಳ್ಳದಿದ್ದರೂ, ಒಂದೊಂದು ಸಾರಿ ಬೈಯ್ಯುವುದು, ಅಪರೂಪವಾಗಿ ಹೊಡೆಯುವುದು ಮಾಡುತ್ತಿದ್ದೆ. ಅವನೆಂದೂ ನನಗೆ ಎದುರುತ್ತರ ಕೊಡುತ್ತಿರಲಿಲ್ಲ. ಹೈಸ್ಕೂಲಿನಲ್ಲಿದ್ದಾಗ ಸುಬ್ಬಣ್ಣ ನಾಟಕ, ಸಿನಿಮಾಗಳಿಗೆ ಮಾರು ಹೋಗಿದ್ದ. ನಮ್ಮ ಮಿತ್ರರಾದ ವಾಸುದೇವ ರಾವ್ ಎಂಬವವರು ತಾವೇ ಸ್ವಂತವಾಗಿ 'ಶಾಂತಳಾ' ಎಂಬ ನಾಟಕ ಬರೆದಿದ್ದರು. ಅದನ್ನು ರಂಗಮಂಟಪದಲ್ಲಿ ಪ್ರಾಯೋಗಿಕವಾಗಿ ತರಬೇಕೆಂಬ ದೊಡ್ಡ ಹಂಬಲ ಅವರಿಗೆ, ಕೊನೆಗೂ ಈಗ 'ರೂಪವಾಣಿ' ಚಿತ್ರ ಮಂದಿರ ಆಗಿರುವ ಸ್ಥಳದಲ್ಲಿ ಹಿಂದೆ ನಾಟಕಗಳ ಥಿಯೇಟರು ಇತ್ತು. ಅಲ್ಲಿ ಈ ನಾಟಕವನ್ನು ಅಭಿನಯಿಸಿದ್ದಾಯಿತು. ಅದರಲ್ಲಿ ಸುಬ್ಬಣ್ಣ 'ಶಾಂತಳೆಯ ಪಾತ್ರ ವಹಿಸಿದ್ದ, ನೋಡಿ ಮೆಚ್ಚಿದವರಲ್ಲಿ ನಾನೂ ಒಬ್ಬ. ಗುಬ್ಬಿ ಕಂಪನಿ ಈ ಊರಿಗೆ ಬಂದಾಗ ಅವರ ನಾಟಕಗಳಿಗೆ ಯಾವಾಗಲೂ ಹೋಗುತ್ತಿದ್ದ, ಒಂದು ಸಾರಿ ಆ ಕಂಪೆನಿಯವರು ಇಲ್ಲಿಂದ ಶಿವಮೊಗ್ಗಕ್ಕೆ ಕ್ಯಾಂಪು ಬದಲಾಯಿಸಿದಾಗ ಸುಬ್ಬಣ್ಣ ಹಾಸಿಗೆ ಬಟ್ಟೆ ಕಟ್ಟಿಕೊಂಡು ಶಿವಮೊಗ್ಗಕ್ಕೆ ಅವರೊಡಿಗೆ ಹೋಗೇಬಿಟ್ಟ. ಎಷ್ಟೋ ದಿನಗಳಾದ ಮೇಲೆ ಹಿಂದಕ್ಕೆ ಬಂದ. ಹಾಸಿಗೆ ಬಟ್ಟೆಗಳು ಮಾಯವಾಗಿದ್ದವು.

ಸ್ಕೂಲಿನಲ್ಲಿ ಎಲ್ಲಾ ವಿಷಯಗಳಲ್ಲಿಯೂ ಚೆನ್ನಾಗಿ ನಂಬರ್ ತೆಗೆಯುತ್ತಿದ್ದರೂ ಗಣಿತದಲ್ಲಿ ಮಾತ್ರ ಸೊನ್ನೆ. ಒಂದು ಸಾರಿ ಫೇಲಾದ ಮೇಲೆ ಎರಡನೆ ಬಾರಿಗೆ ಎಸ್ಸೆಸ್ಸೆಲ್ಸಿ ತರಗತಿಯಲ್ಲಿ ತೇರ್ಗಡೆ ಹೊಂದಿದ ಆಕಾಲದಲ್ಲಿ ನನ್ನ ತಮ್ಮ ಚಿ. ರಾ. (ತ. ಸು. ಶಾಮರಾವ್) ಶಾಮಣ್ಣನು ಶಿವಮೊಗ್ಗ ಇಂದತ್ ಕಾಲೇಜ್‌ನಲ್ಲಿ ಲೆಕ್ಚರರ್ ಆಗಿದ್ದನು. ಆತನ ಕೆಳಗೆ ಸ್ವಲ್ಪ ಪಳಗಿ ವಿದ್ಯೆ ಮುಂದು ವರಿಸಲಿ ಎಂಬ ಆಸೆಯಿಂದ ನಾನು ಶಿವಮೊಗ್ಗಕ್ಕೆ ಕಳುಹಿಸಿದೆ. ಅಲ್ಲಿ ಜೂ. ಇಂಟರ್ ಕ್ಲಾಸಿನಲ್ಲಿ ಪಾಸಾದನು. ಅಷ್ಟರಲ್ಲಿ ಶಾಮಣ್ಣನಿಗೆ ಬೇರೆ ಕಡೆ ವರ್ಗವಾಯಿತು. ಈ ಊರಿನಲ್ಲಿ ಆಕಾಲದಲ್ಲಿ ಕಾಲೇಜಿರಲಿಲ್ಲ. ಆದ್ದರಿಂದ ಅವನನ್ನು ತುಮಕೂರು ಕಾಲೇಜಿನಲ್ಲಿ ಸೀನಿಯರ್ ಇಂಟರ್ ಕ್ಲಾಸಿಗೆ ಸೇರಿಸಿ ಗವರ್ನಮೆಂಟ್ ಹಾಸ್ಟೆಲ್ ನಲ್ಲಿದ್ದುಕೊಂಡು ಓದುವಂತೆ ಏರ್ಪಾಡು ಮಾಡಿದೆ. ಬಹುಶಃ ಪರೀಕ್ಷೆಗೆ ಕಟ್ಟಿದ್ದನೋ ಏನೋ ಆ ಕಾಲದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯು ದೇಶದ ದಿಕ್ಕು ದಿಕ್ಕುಗಳಲ್ಲಿಯೂ ಮೊಳಗಿತು. ಅನೇಕ ಸ್ವಾತಂತ್ರ್ಯಪ್ರಿಯರು ಈ ಚಳುವಳಿಯಲ್ಲಿ ಧುಮಿಕಿದರು, ಅದರಲ್ಲಿ ಬಹುಭಾಗದವರು ವಿದ್ಯಾರ್ಥಿಗಳು, ಇದರಲ್ಲಿ

ಸುಬ್ಬಣ್ಣನೂ ಒಬ್ಬ ಮುಂದಾಳುವಾಗಿ ಸಂಗ್ರಾಮದಲ್ಲಿ ಧುಮುಕಿದ್ದ, ರಹಸ್ಯವಾಗಿ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಅಂಚೆ ತಂತಿಗಳನ್ನು ಕತ್ತರಿಸುವುದು ಮುಂತಾದ ಚಟುವಟಿಕೆಗಳಲ್ಲಿ ಪ್ರವೇಶ ಮಾಡಿದ್ದ. ನಾನೊಂದು ದಿನ ಸುಬ್ಬಣ್ಣನನ್ನು ನೋಡಬೇಕೆಂದು ತುಮಕೂರಿಗೆ ಹೋಗಿ ಹಾಸ್ಟಲಿಗೆ ಹೋದೆ, ಅವನು ನನ್ನಲ್ಲಿ ಈ ಯಾವ ವಿಷಯವನ್ನೂ ಹೇಳಲಿಲ್ಲ. ತಿಂಡಿ, ತೀರ್ಥವಾದನಂತರ ನಾವಿಬ್ಬರೂ ಗಾಳಿ ಸಂಚಾರಕ್ಕೆಂದು ರಸ್ತೆಯಲ್ಲಿ ಹೊರಟೆವು. ಸ್ವಲ್ಪದೂರದಲ್ಲಿ ಅಲ್ಲಿ ಡಿ. ಎಸ್. ಪಿ. ಆಗಿದ್ದ ಶ್ರೀ ವೆಂಕಟಪತಿರೆಡ್ಡಿಯವರು ನನ್ನನ್ನು ಗುರ್ತಿಸಿ ಮಾತನಾಡಲು ಬಂದರು. ಸುಬ್ಬಣ್ಣ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲು ತೆಗೆದುಕೊಂಡ ವಿಷಯ ಅವರಿಗೆ ತಿಳಿದಿತ್ತು. ಮಾತಿನ ನಡುವೆ ನಿಮ್ಮ ಹುಡುಗನಿಗೆ ಸ್ವಲ್ಪ ಬುದ್ಧಿ ಹೇಳಿ, ಚಳುವಳಿಯ ಕೆಲಸದಲ್ಲಿ ಕೆಟ್ಟು ಹೋಗುತ್ತಿದ್ದಾನೆ ಎಂದು ಮುಂದಾಗಿ ನನಗೆ ತಿಳಿಸಿದರು.

ಅನಂತರ ನಾನು ಸುಬ್ಬಣ್ಣನನ್ನು ವಿಚಾರಿಸಿದೆ. 'ಇಲ್ಲಣ್ಣ, ಸುಮ್ಮನೆ ಹೀಗೇ ಹೇಳ್ತಾರೆ' ಎಂದು ದಬಾಯಿಸಿದ, ನಾನು ಸಮಾಧಾನ ಮಾಡಿಕೊಂಡು ಹಿಂತಿರುಗಿದೆ. ಇದಾದ ಕೆಲವು ದಿನಗಳಲ್ಲಿಯೇ ಸುಬ್ಬಣ್ಣ ಜೈಲಿಗೆ ಹೋದನೆಂಬ ಸುದ್ದಿ ತಿಳಿಯಿತು. ಅವನ ಸ್ನೇಹಿತರು ಯಾರಿಗೂ ತಿಳಿಯದಂತೆ ಮನೆಗೆ ಬಂದು ತಮ್ಮ ಚಟುವಟಿಕೆಗಳನ್ನು ವಿವರಿಸಿ ಹೋಗುತ್ತಿದ್ದರು. ನನಗೆ ಅಂತರಂಗದಲ್ಲಿ ಈ ಚಳುವಳಿಯ ಬಗ್ಗೆ ಅಭಿಮಾನವಿದ್ದಿತ್ತಾದರೂ ಜೈಲಿಗೆ ಹೋಗುವುದು, ವಿದ್ಯಾಭ್ಯಾಸವನ್ನು ಕಳೆದು ಕೊಳ್ಳುವುದು ಇಷ್ಟವಿರಲಿಲ್ಲ. ಕೆಲವು ತಿಂಗಳುಗಳ ಮೇಲೆ ಸುಬ್ಬಣ್ಣ ಮನೆಗೆ ಬಂದಾಗ ನನ್ನ ಅಭಿಪ್ರಾಯವನ್ನು ತಿಳಿಸಿದೆ. ಆದರೆ ಅಷ್ಟುಹೊತ್ತಿಗೆ ಅವನು ತುಂಬಾ ಮುಂದೆ ಹೋಗಿದ್ದನು. ಇಲ್ಲಿಯೂ ಸಹ ಚಳುವಳಿಗಳಲ್ಲಿ ಭಾಗವಹಿಸಿ ಪುನಃ ಪುನಃ ಜೈಲಿಗೆ ಹೋದನು. ಶ್ರೀಯುತರಾದ ನಿಜಲಿಂಗಪ್ಪನವರು, ಹುಲ್ಲೂರು ಶ್ರೀನಿವಾಸ ಜೋಯಿಸರು ಮೊದಲಾದವರ ಜತೆ ಸೇರಿ ಚಳುವಳಿಯಲ್ಲಿ ಮುಂದೆ ಸಾಗಿದ. ಅಲ್ಲಿಗೆ ಕಾಲೇಜು ವಿದ್ಯಾಭ್ಯಾಸ ನಿಂತುಹೋಯಿತು.

ಈ ಕಾಲದಲ್ಲಿ ಈ ಊರಿನಲ್ಲಿ ತನ್ನ ಸ್ನೇಹಿತನಾದ ಚಿ॥ ಶ್ರೀಧರಮೂರ್ತಿಯೊಂದಿಗೆ ಒಂದು 'ನವೋದಯ' ಎಂಬ ಒಂದು ಪತ್ರಿಕೆಯನ್ನು ಸ್ಥಾಪಿಸಿ, ಪ್ರಕಟಿಸುತ್ತಿದ್ದ. ಆಗಲೇ ವಿಶ್ವಕರ್ಣಾಟಕ. ಮೊದಲಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ. ತಂದೆ – ಮಗನ ಸಂಭಾಷಣೆ ರೂಪದಲ್ಲಿ ದೇಶದ ಆಗು – ಹೋಗುಗಳನ್ನು ಜನರ ಕಣ್ತೆರೆಯುವಂತೆ ಬರೆದು ಪತ್ರಿಕೆಗಳಿಗೆ ಕಳುಹಿಸುತ್ತಿದ್ದ. ಅವನ ಸ್ವಾತಂತ್ರ್ಯಪ್ರೇಮ ಬೆಂಗಳೂರಿನಲ್ಲಿ ಆಗ ಸಿಂಹಗರ್ಜನೆ ಮಾಡುತ್ತಿದ್ದ 'ವಿಶ್ವಕರ್ಣಾಟಕ'ದ ಕಡೆಗೆ ಹೊರಳಿತು. ಅಲ್ಲಿ ಅವನಿಗೆ ಪರಮ ಆಪ್ತರಾದ ಶ್ರೀ ಸಿದ್ದವನಹಳ್ಳಿ ಕೃಷ್ಣ ಶರ್ಮರು ಸಹ ಸಂಪಾದಕರಾಗಿ ಕೆಲಸ ಮಾಡುತ್ತಿದ್ದರು. ತಿ. ತಾ. ಶರ್ಮರ ಆಶ್ರಯದಲ್ಲಿ ಕೆಲಸ ಮಾಡಿದ ಕಾರಣಾಂತರಗಳಿಂದ ಪ್ರಜಾಮತದ ಶ್ರೀಮಾನ್ ಬಿ.

ಎನ್. ಗುಪ್ತರ ಆಶ್ರಯದಲ್ಲಿ ಕೆಲವು ವರ್ಷ ಬರೆಯುತ್ತಿದ್ದ. ಆ ಕಾಲದಲ್ಲಿ ಸುಬ್ಬಣ್ಣನಿಗೆ ವಿವಾಹವಾಯಿತು.

'ಪ್ರಜಾಮತ' ಬಿಟ್ಟನಂತರ ಶ್ರೀ ಎಂ. ಎಸ್. ಚಿಂತಾಮಣಿಯವರ ಜತೆಯಲ್ಲಿ ವಾಹಿನಿಯ ಪತ್ರಿಕೆಯಲ್ಲಿ ಸಹ ಸಂಪಾದಕನಾಗಿ ಕೆಲಸ ಮಾಡಿದ. ವಾಹಿನಿ ಆಫೀಸಿಗೆ ಸೇರಿದಂತೆ ಒಂದು ಸಣ್ಣ ಮನೆ ಇದ್ದು ಅದರಲ್ಲಿ ತನ್ನ ಹೆಂಡತಿಯೊಂದಿಗೆ ವಾಸ ಮಾಡಲು ಪ್ರಾರಂಭಿಸಿದ. ಕೆಲವು ಕಾಲದ ಮೇಲೆ 'ಪ್ರಜಾವಾಣಿ' ಕಾರ್ಯಾಲಯವನ್ನು ಸೇರಿ ಅಲ್ಲಿ sub-editor ಆಗಿದ್ದಂತೆ ನೆನಪಿದೆ.

ಅನಂತರ ಸ್ವಾತಂತ್ರ್ಯಾಭಿಲಾಷೆಯು ಇದೆಲ್ಲವನ್ನೂ ಮೀರಿ ನಿಂತು ತನ್ನ ಸ್ವಂತಕಾಲ ಮೇಲೆ ನಿಲ್ಲಬೇಕೆಂಬ ನಿಶ್ಚಯದಿಂದ ಯಾವ ಆಶ್ರಯವೂ ಇಲ್ಲದೆ ಮೈಸೂರಿಗೆ ಬಂದು ಬರವಣಿಗಾರನಾಗಿಯೇ ಬದುಕನ್ನು ಆರಂಭಿಸಿದ. ಈ ಕಾಲದಲ್ಲಿ ತುಂಬಾ ಕಷ್ಟ–ನಷ್ಟಗಳನ್ನು ಎದುರಿಸಬೇಕಾಗಿತ್ತು. ನಾನೂ ಆಗಿಂದಾಗ್ಗೆ ನೋಡಿಕೊಂಡು ಬರುತ್ತಿದ್ದೆ. ಆ ಕಾಲದಲ್ಲಿ ಸುಬ್ಬಣ್ಣನ ಅಕ್ಕ ಸರೋಜ ಮತ್ತು ಆಕೆಯ ಗಂಡ ಮೈಸೂರಿನಲ್ಲಿದ್ದರು. ಆಕೆಯ ಗಂಡ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಆಗಿದ್ದ. ಆಕೆ ಆಗಿಂದಾಗ್ಗೆ ಸುಬ್ಬಣ್ಣನ ಯೋಗ–ಕ್ಷೇಮವನ್ನು ವಿಚಾರಿಸುತ್ತಿದ್ದಳು. ನಾನು ದೂರದಲ್ಲಿದ್ದುದರಿಂದ ಅವರ ಸಂಸಾರ ತಾಪತ್ರಯಗಳಲ್ಲಿ ಹೆಚ್ಚು ಭಾಗವಹಿಸಲು ಸಾಧ್ಯವಾಗಲಿಲ್ಲ. ಬರಬರುತ್ತಾ ಸುಬ್ಬಣ್ಣ ತನ್ನ ಕಾಲಮೇಲೆ ತಾನು ನಿಂತುಕೊಳ್ಳುವಂತಾದನು. ಅವನಲ್ಲಿದ್ದ ಅಪೂರ್ವವಾದ ಒಂದು ಗುಣವೆಂದರೆ ತನ್ನ ಸಾಹಿತ್ಯಪ್ರೇಮದಿಂದ ಮತ್ತು ತನ್ನ ಸ್ವಾಭಾವಿಕವಾದ ದಾರ್ಶನಿಕದಿಂದ ತನಗಿಂತಲೂ ಹೆಚ್ಚು ವಿದ್ಯಾವಂತರಾದ ದೊಡ್ಡ ದೊಡ್ಡ ಪದವಿಗಳಲ್ಲಿರುವ ಮತ್ತು ದೊಡ್ಡ ದೊಡ್ಡ ಸಾಹಿತಿಗಳ ವಿಶ್ವಾಸ, ಮನ್ನಣೆಗಳನ್ನು ಗಳಿಸಿದ್ದನು. ಇವರಲ್ಲಿ ಶ್ರೀಮಾನ್ ಎನ್. ಹಿರಿಯಣ್ಣಯ್ಯನವರು ಒಬ್ಬರು. ಅವರು ಮೈಸೂರಿನಲ್ಲಿ ರೆವಿನ್ಯೂ ಕಮೀಷನರ್ ಆಗಿದ್ದಾಗ ಒಂದು ದೊಡ್ಡ ಸೈಟ್ ಪಡೆದು ಅದರಲ್ಲಿ ತಮಗಾಗಿಯೇ ಒಂದು ಒಳ್ಳೆಮನೆಯನ್ನು ಕಟ್ಟಿಸಿಕೊಂಡಿದ್ದರು. ಅವರಿಗೂ ಸುಬ್ಬಣ್ಣನಿಗೂ ಭ್ರಾತೃಪ್ರೇಮ, ಅವರಿಗೆ ಬೆಂಗಳೂರಿಗೆ ವರ್ಗವಾಯಿತು. ಅವರು ಬೆಂಗಳೂರಿನಲ್ಲಿಯೇ ಮನೆ ಕಟ್ಟಿಸಬೇಕೆಂಬ ಸಂಕಲ್ಪ ಮಾಡಿ ಈ ಮನೆಯನ್ನು ಮಾರಲು ಇಚ್ಛಿಸಿದರು. ಅವರಿಗೆ ಸುಬ್ಬಣ್ಣನಲ್ಲಿ ಅತ್ಯಂತಪ್ರೇಮ. ಸುಬ್ಬಣ್ಣನಿಗೆ ಆ ಮನೆಯನ್ನು ಕೊಂಡುಕೊಳ್ಳುವ ಆರ್ಥಿಕ ಸಂಪತ್ತು ಇರಲಿಲ್ಲ. ಅವರೂ ತಮ್ಮ ಸುಬ್ಬುವಿಗೆ ಈ ಮನೆಯನ್ನು ಕ್ರಯಕ್ಕೆ ಕೊಡಲು ಸಿದ್ಧರಾದರು. ಮತ್ತ್ಯಾರಾದರೂ ಆಗಿದ್ದರೆ ಈ ಕೊಂಡುಕೊಳ್ಳುವ ಸಾಹಸಕ್ಕೆ ಹೋಗುತ್ತಿರಲಿಲ್ಲ ಅವರೆ ಸುಬ್ಬಣ್ಣನನು ಗಂಡು ಎನೆ. ಪರಸ್ಪರ ಮಾತಾಡಿಕೊಂಡು ಸುಬ್ಬಣ್ಣನಿಗೆ ಅನುಕೂಲ ಒದಗುವಂತೆ ಹಣ ಕೊಡುವಂತೆ ಹೇಳಿ ಮುಂಗಡ ತಾವೆಷ್ಟು ಖರ್ಚು ಮಾಡಿದ್ದರೋ ಅಷ್ಟಕ್ಕೇನೇ ಕ್ರಯ ಮಾಡಿಕೊಟ್ಟರು. ಆ ಕಾಲದಲ್ಲಿ ನಾನೂ ಸಹ ಇದ್ದು ಕ್ರಯ ಕೆಲಸವನ್ನು ಪೂರ್ತಿ

ಗೊಳಿಸಿದೆ. ಈ ಸಂದರ್ಭದಲ್ಲಿ ಶ್ರೀಮಾನ್ ಒರಿಯಣ್ಣನವರನ್ನು ಸ್ಮರಿಸಿಕೊಳ್ಳಬೇಕಾದ್ದು ಬಹಳ ಅವಶ್ಯಕ. ಸುಬ್ಬಣ್ಣ ಈ ಹಣ ತೀರಿಸಿಲಿಕ್ಕಾಗಿ ಸ್ವಲ್ಪ ಕಷ್ಟಪಡಬೇಕಾಯಿತು. ಅಷ್ಟು ಹೊತ್ತಿಗೆ ಸುಬ್ಬಣ್ಣ ಉತ್ತಮ ಕಾದಂಬರಿಕಾರನೆಂದು ಎನಿಸಿಕೊಂಡು ಒಂದು ಕೀರ್ತಿಗಳಿಸಿಕೊಂಡಿದ್ದರಿಂದ, ಮತ್ತು ಶ್ರೀ ಒರಿಯಣ್ಣನವರ ಉದಾರತೆಯಿಂದ ಸಾಲವನ್ನು ಹೇಗೋ ತೀರಿಸಿ ಮನೆಯನ್ನು ತನ್ನ ಸ್ವಂತದ್ದಾಗಿ ಮಾಡಿಕೊಂಡ, ನೆಲೆಯಾದ.

ನನಗೆ ಚಿಕ್ಕಂದಿನಲ್ಲಿ ಸುಬ್ಬಣ್ಣ ನನ್ನಂತೆಯೇ ಒಬ್ಬ ಲಾಯರಾಗಿ ಕೀರ್ತಿಯನ್ನು ಪಡೆಯಬೇಕೆಂಬ ಹುಚ್ಚಾಸೆಯಿತ್ತು. ಬಹುಶಃ ಅವನು ಲಾಯರ್ ವೃತ್ತಿಯನ್ನು ಕೈಗೊಂಡಿದ್ದರೆ ಅದರಲ್ಲಿ ಉತ್ತಮ ಯಶಸ್ಸನ್ನು ಪಡೆಯುತ್ತಿದ್ದ ಎಂಬ ನಂಬಿಕೆಯು ಈಗಲೂ ಇದೆ. ಏಕೆಂದರೆ ಒಬ್ಬ ಲಾಯರಿಗಿರಬೇಕಾದ ಅನೇಕ ಶ್ರೇಷ್ಠಗುಣಗಳು ಅವನಲ್ಲಿದೆ. ಆದರೆ ವಿಧಿಯು ಅವನನ್ನು ಸಾಹಿತ್ಯ ಪ್ರಪಂಚಕ್ಕೆ ಕರೆದೊಯ್ದಿತು. ಅಲ್ಲಿ ಅವನು ಪಡೆಯುವ ಸ್ಥಾನ ಮಾನ, ಕೀರ್ತಿ ಗೌರವಗಳು ನನ್ನ ಆಸೆಯನ್ನು ಇಮ್ಮಡಿಯಾಗುವಂತೆ ಮಾಡಿವೆ. ಸ್ವಂತ ಮಗನ ವಿಷಯವಾಗಿ ಹೆಚ್ಚಾಗಿ ಹೇಳುವುದು ಅಷ್ಟು ಸಮಂಜಸವಲ್ಲವೇನೋ ಎಂದೆನಿಸುತ್ತದೆ, ಆದ್ದರಿಂದ ಇಷ್ಟಕ್ಕೆ ನಿಲ್ಲಿಸುತ್ತೇನೆ. ಎಂದೂ ನಾನು ಅವನನ್ನು ಹೊಗಳಿಸೂ ಇಲ್ಲ, ತಿರಸ್ಕಾರ ಮಾಡಲೂ ಇಲ್ಲ. ಈ ಸಂದರ್ಭದಲ್ಲಿ ಒಬ್ಬ ಕವಿಯ ಹೆಸರು ನೆನಪಾಗುತ್ತದೆ – ಆತ ದೊಡ್ಡ ಕವಿಯಾಗಿ, ಆಗಿನ ಅರಸರಿಂದ ಘನವಾದ ಸನ್ಮಾನಗಳನ್ನು ಪಡೆದು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದಾಗ ತಂದೆಯು ತನ್ನ ಮನೆಯ ಕಿಟಕಿಯ ಸಂದಿನಲ್ಲಿ ನೋಡಿ ಸಂತೋಷ ಪಟ್ಟನಂತೆ. ಆದರೆ ಮನೆಯಲ್ಲಿ ಮಾತ್ರ ಅವನನ್ನು ಎಂದೂ ಹೊಗಳದೆ, ಉದಾಸೀನನಾಗಿರುತ್ತಿದ್ದನಂತೆ.

ಸುಬ್ಬಣ್ಣನಲ್ಲಿ ದೈವ, ಗುರುಗಳು ಇವರಲ್ಲಿ ಅತ್ಯಂತ ಶ್ರದ್ಧಾಭಕ್ತಿಗಳು ಇವೆ, ಹೊರಗೆ ನೋಡುವವರಿಗೆ ಇವು ಸಾಧಾರಣವಾಗಿ ತೋರುವುದಿಲ್ಲವಾದರೂ ನನಗೆ ಅನುಭವವಿರುವಂತೆ ಅವನ ದೈವಭಕ್ತಿ, ಗುರುಭಕ್ತಿಗಳೇ ಅವನ ಉಚ್ಛ್ರಾಯ ಸ್ಥಿತಿಗೆ ಪ್ರಬಲ ಕಾರಣಗಳಾಗಿವೆಯೆಂದು ನಾನು ನಂಬುತ್ತೇನೆ. ಇಂತಹ ಪವಿತ್ರ ಭಾಗ್ಯವು ಅವನ ಜೀವನ ಪರ್ಯಂತ ಅವನಿಗೆ ಲಭಿಸಿ, ಅವನು ಚಿರಾಯುವಾಗಿ ಬಾಳಲಿ ಎಂದು ಹಾರೈಸುತ್ತೇನೆ.

ಮೊದಲ ನೋಟ

— ನೀರಗುಂದ ಕೇಶವಮೂರ್ತಿ ರಾವ್

೧೯೬೨ನೇ ಇಸ್ವಿ – ಹೊಸದುರ್ಗದ ಸಂತೆ ಮೈದಾನದಲ್ಲಿ ಖ್ಯಾತ ಕಾದಂಬರಿಕಾರ, ತ.ರಾ.ಸು. ಮತ್ತು ಪತ್ರಿಕೋದ್ಯೋಗಿ ಬಾ. ಸು. ಕೃಷ್ಣಮೂರ್ತಿಯವರಿಂದ ಭಾಷಣ ವಿತ್ತು. ಸಂದರ್ಭ – ವಿಧಾನಸಭಾ ಚುನಾವಣಾ ಪ್ರಸಾರ ಭಾಷಣ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಸ್ಪರ್ಧಿಸಿದ್ದ ಈ ಕ್ಷೇತ್ರ ರಾಜ್ಯದ ಎಲ್ಲರ ಗಮನವನ್ನು ಸೆಳೆದಿತ್ತು. ಪಿ. ಎಸ್. ಪಿ. ಅಭ್ಯರ್ಥಿ ಪರವಾಗಿ ತಮ್ಮೂರಿನವರೇ ಆದ ನಿಜಲಿಂಗಪ್ಪನವರ ವಿರುದ್ಧ ಭಾಷಣ ಮಾಡಲು ತ.ರಾ.ಸು. ಬಂದಿದ್ದರು. ಸುಮಾರು ಒಂದೂವರೆ ಗಂಟೆಯ ರಾಜಕೀಯ ಭಾಷಣವೂ ನನ್ನನ್ನು ಸೆರೆಹಿಡಿದಿತ್ತು. ಈ ವೇಳೆಗಾಗಲೇ ನಾನು ಅವರ ಹಲವಾರು ಕಾದಂಬರಿಗಳನ್ನು ಓದಿದ್ದೆನಾದರೂ ದರ್ಶನ ಮಾತ್ರ ಆಗಿರಲಿಲ್ಲ. ತ.ರಾ.ಸು. ರವರನ್ನು ನೋಡಬೇಕೆಂಬ ಹಂಬಲ ಮೊತ್ತ ಮೊದಲಿಗೆ ಉಂಟಾದ ಸಂದರ್ಭ ನೆನೆದರೆ ನೆಗಲೂ ಮೈ ಪುಳಕಗೊಳ್ಳುತ್ತದೆ.

ಮೊದಲನೋಟ ೧೯೫೬.

ಎಂ. ಎಸ್. ಪುಟ್ಟಣ್ಣನವರ ಮೊದಲ ಕಾದಂಬರಿ "ಮಾಡಿದ್ದುಣ್ಣೋ ಮಹರಾಯ" ದಿಂದ ಹಿಡಿದು ಅದೆಷ್ಟು ಕಾದಂಬರಿಗಳನ್ನು ಓದಿದ್ದೆ. ಕನ್ನಡದ ಬರಹಗಾರರೆಲ್ಲ ಪುಸ್ತಕಗಳ ಮೂಲಕ ನನಗೆ ಪರಿಚಿತರು. ನನ್ನ ಅಚ್ಚು–ಮೆಚ್ಚಿನ ಲೇಖಕರು ಅ.ನ.ಕೃ. ಆ ಕಾಲದಲ್ಲಿ ನಮ್ಮ ಮನೆಯಲ್ಲಿ ಕೊಂಡು ತರುತ್ತಿದ್ದ ಪುಸ್ತಕಗಳೆಂದರೆ ಅ.ನ.ಕೃ., ತ.ರಾ.ಸು., ಕಟ್ಟೀಮನಿ ಮುಂತಾದವರವು. ಈಗ ವಿಚಾರಿಸಿದರೆ ಪ್ರಗತಿ ಶೀಲ ಸಾಹಿತ್ಯದ ಫಲವೆಂದು ಕಾಣುತ್ತದೆ. ಆಗ ನನಗೆ ಪ್ರಗತಿಯ ಸುಳಿವೂ ಶೀಲದ ಸೋಂಕೂ ತಟ್ಟಿರಲಿಲ್ಲ. ಆಕಸ್ಮಿಕವಾಗಿ ದೊರೆತ ಪುಸ್ತಕ ಅ.ನ.ಕೃ. ಬರೆದಂತಹ ವ್ಯಕ್ತಿ ತ.ರಾ.ಸು. ಏಕೋ ಆ ಪುಸ್ತಕ ನನ್ನನ್ನು ಬಹುವಾಗಿ ಆಕರ್ಷಿಸಿತು. ಹೊದಿಕೆ ಮೇಲಿದ್ದ ಮುಖ ಚಿತ್ರವೂ ಅಷ್ಟೆ. ಒಳಪುಟದತ್ತ ಕಣ್ಣಾಡಿಸಿದೆ. ಮೊದಲ ನೋಟ ದಲ್ಲೇ "ತ.ರಾ.ಸು ಮತ್ತು ಅ.ನ.ಕೃ." ಭಾವಚಿತ್ರ ನನ್ನನ್ನ ಸೆರೆಹಿಡಿಯಿತು. ಅಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸೆಣೆಸಾಡಿ "ಹಲವು ಕಾಳಗದ ಕಲಿ" ಎಂದು ಹೆಸರು ಪಡೆದ ಕೃಷ್ಣರಾಯರು ಮತ್ತು ಅವರ ವ್ಯಕ್ತಿ ಮತ್ತು ಕೃತಿಗಳನ್ನು ಪರಿಚಯ ಮಾಡಿಕೊಟ್ಟ ತ.ರಾ.ಸು. ಅವರನ್ನು ಕಾಣಬೇಕೆಂಬ ಹಂಬಲ ಮನದಲ್ಲಿ ಮೂಡಿಬಂತು. ಆದರೆ ಆ ಪುಸ್ತಕದೊಳಗಿನ ವಿಷಯಕ್ಕೆ ಆ ಕಾಲದಲ್ಲಿ ಹೆಚ್ಚು ಗಮನ ಕೊಟ್ಟಿರಲಿಲ್ಲ. ಇಂದು ಆ ಪುಸ್ತಕ ಹಲವರ ಕೈದಾಟಿ ಹೋದಾಗಲೂ ಪುನಃ ನನ್ನನ್ನೇ ಸೇರುತ್ತಿದೆ. ಪುಸ್ತಕ ವನ್ನು ಓದಿದಾಗಲೆಲ್ಲ ತ.ರಾ.ಸು. ರವರ ಹರಿತವಾದ ಲೇಖನಿಯಲ್ಲಿ ಮೂಡಿ ಬಂದ

ವಿಚಾರಧಾರೆ ಹೊಸದೊಂದು ಕಿರಣವನ್ನು ಬೀರುತ್ತದೆ. ಆ ಕಿರಣದ ಬೆಳಕಿನಲ್ಲಿ ಕೃಷ್ಣರಾಯರ ಸಾಹಿತ್ಯದ ವಿಶ್ವ ರೂಪ ದರ್ಶನವನ್ನು ಕಾಣುತ್ತೇನೆ.

ತ.ರಾ.ಸು. ಮತ್ತು ಅ.ನ.ಕೃ. ರವರನ್ನು ಹಲವಾರು ಸಲ ನೋಡಿದ್ದೇನೆ. (ಒಂದೇ ವೇದಿಕೆಯ ಮೇಲೆ) ತ.ರಾ.ಸು. ರವರ ಬಗ್ಗೆ ನನ್ನ ಅಭಿಮಾನ ಮೂಡಲು ಅವರು ನಮ್ಮ ಜಿಲ್ಲೆಯವರು ; ಅದೂ ಅಲ್ಲದೆ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ತ.ರಾ.ಸು. ಭಾಗವಹಿಸಿ ಹಳ್ಳಿ ಹಳ್ಳಿಗೆ ಹೋಗಿ ಭಾಷಣ ಮಾಡುತ್ತಿದ್ದಾಗ ಪೋಲೀಸರು ಅವರನ್ನು ಹೊತ್ತ ಮೋಟರಿಗೆ ನಮ್ಮ ಊರಿನಲ್ಲಿಯೇ (ಬಾಗೂರು, ಹೊಸದುರ್ಗ ತಾಲ್ಲೂಕು) ಬಂಧಿಸಿ ಸೆರೆ ಮನೆಗೆ ಕೊಂಡೊಯ್ದರಂತೆ! ಇದೂ ಅಲ್ಲದೆ ಅವರ ಚಿತ್ರದುರ್ಗದ ಐತಿಹಾಸಿಕ ಕಾದಂಬರಿ ಮಾಲೆಯನ್ನು ಓದಿದಾಗ ಅದರಲ್ಲಿ ನಮ್ಮೂರಿನ ಇತಿಹಾಸಕ್ಕೆ ಸಂಬಂಧಪಟ್ಟ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಹೀಗಾಗಿ ನನಗೂ ನಮ್ಮೂರಿನ ಇತಿಹಾಸದ ಮೇಲೆ ಆಸಕ್ತಿ ಉಂಟು ಮಾಡಲು ಕಾರಣರಾದ ಮೊದಲ ವ್ಯಕ್ತಿ ತ.ರಾ.ಸು. "ಇತಿಹಾಸ ಬರಡು ಕಗ್ಗವಲ್ಲ ಕಾವ್ಯದಷ್ಟೇ ರುಚಿ" (ಅವರ ಮಾತೆ!) ಎಂಬ ಮಾತು ತ.ರಾ.ಸು. ರವರ ಐತಿಹಾಸಿಕ ಕೃತಿಗಳನ್ನು ಓದಿದಾಗ ಕಂಡು ಬರುತ್ತದೆ.

ನಮ್ಮದೆನ್ನುವ ಅಭಿಮಾನ ಎದುರಿಗಿದ್ದಾಗ ಇರದು. ಅದನ್ನು ಅಗಲಿದಾಗ ಮಾತ್ರ ಅರಿವಾಗುತ್ತದೆ. ನಮ್ಮವರಾದ ತ.ರಾ.ಸು. ಅಂತಹ ಅಭಿಮಾನವನ್ನು ನಮ್ಮಲ್ಲಿ ಮೂಡಿಸಿದ್ದಾರೆ. ತಳುಕಿನ ವೆಂಕಣ್ಣಯ್ಯನವರ ವಂಶದಲ್ಲಿ ಜನಿಸಿದ ತ.ರಾ.ಸು. ಇಂದು ಕನ್ನಡನಾಡಿನಲ್ಲಿ ಚಿತ್ರದುರ್ಗದ ಹೆಸರೆತ್ತಿದರೆ ಅದರೊಂದಿಗೆ ಸರಿಸಮನಾಗಿ ನಿಲ್ಲುವ ಹೆಸರಾಗಿದ್ದಾರೆ.

ಮೊದಲ ನೋಟದಲ್ಲೇ ಸೆರೆಹಿಡಿದ ವ್ಯಕ್ತಿ ನಮ್ಮ ಜಿಲ್ಲೆ – ನಮ್ಮ ಊರಿನವರೇ ಎಂದು ಹೇಳಿ ಕೊಳ್ಳಲು ನನಗೆ ತುಂಬಾ ಸಂತೋಷ !

ಯಜಮಾನರು - ಜೀವನ

— ಅಂಬುಜಾ ತ.ರಾ.ಸು.

ಯಜಮಾನರ ಬಗ್ಗೆ ಹೇಳಬೇಕು —

ಯಜಮಾನರು ಅಂದರೆ ಜೀವನ; ಅವರಿಂದಲೇ ಜೀವನ; ಅವರಿಗಾಗಿಯೇ ಜೀವನ. ಯಜಮಾನರು – ಜೀವನ ಈ ಎರಡೂ ಪದಗಳಿಗೆ ಒಂದೇ ಅರ್ಥ ನನ್ನ ಪಟ್ಟಿಗೆ.

ನನ್ನ ಯಜಮಾನರು – ಮದುವೆಯಾದ ಕೆಲವೇ ತಿಂಗಳಲ್ಲಿ ಜೀವನ ಎಂದರೇನು? ದೇವರು ಎಂದರೇನು ? ಎಂದು ಅರಿತು ಕೊಳ್ಳುವ ಪ್ರಯತ್ನದ ಮಾರ್ಗದಲ್ಲಿ ನನ್ನ ಮನಸ್ಸು ತಿರುಗಲು ಕಾರಣರಾದರು.

ಕಷ್ಟ – ಸುಖಗಳ ಮಾರ್ಗಗಳಲ್ಲಿ ಎಷ್ಟು ವಿಧ ಎಂಬುದನ್ನೆಲ್ಲಾ ಆ ದಾರಿಗಳಲ್ಲಿ ಬಾಳು ಬದುಕಿ ಹೋಗಬೇಕಾದ ಅನಿವಾರ್ಯ ಸ್ಥಿತಿಗಳನ್ನೆದುರಿಸಿದಾಗಲೆಲ್ಲ ಅರಿತು ಕೊಂಡೆನೆಂದು ಕೊಂಡದ್ದೇ ಜೀವನವೇ ?

ಬದುಕಿನ ವಿವಿಧ ಮುಖಗಳನ್ನು ತೋರಿಸಲೆಂದೇ ಬಂದೆರಗಿದ ಕಷ್ಟ – ಕಾರ್ಪಣ್ಯಗಳು; ವಿಧ ವಿಧ ಅನುಭವಗಳ ಮೂಲಕ ಇಡಿಯಾಗಿ ಬದುಕನ್ನು ನೋಡಲು ದಾರಿ ಮಾಡಿಕೊಟ್ಟರು – ಯಜಮಾನರು.

ಯಜಮಾನರ ಮೂಲಕ ವಿವಿಧ ಜನಗಳ ವಿಶಾಲ ಜಗತ್ತು ಪರಿಚಯವಾಯಿತು. ಶ್ರೀ ಸಾಮಾನ್ಯರಿಂದ ಹಿಡಿದು ಸಮಾಜದಲ್ಲಿ ಹೆಸರು ಮಾಡಿದವರವರೆಗೆ, ಕಟು ನಾಸ್ತಿಕರಿಂದ ಹಿಡಿದು ಸಾಧು-ಸತ್ಪುರುಷರವರೆಗೆ, ಈಸಲೆತ್ನಿಸಿ ದಡದಲ್ಲೇ ನಿಂತವರಿಂದ ಹಿಡಿದು ಸಾಗರವನ್ನೇ ಈಜಿ ದಡದಾಟಿ ಹೋಗಿ ಇದರ ಬೆಲೆ ಇಷ್ಟೇ ಎಂದು ಕಂಡು ಕೊಂಡದ್ದಷ್ಟೇ ಅಲ್ಲದೆ ತಾವು ಕಂಡ ಜೀವನ ದರ್ಶನದ ಬೆಳಕನ್ನು ತಮ್ಮ ಬಳಿ ಬಂದವರ ಮೇಲೂ ಬೆಳಗಿಸುವ ಜ್ಯೋತಿ ಸ್ವರೂಪದವರೆಗೆ ನೋಡಿದ ನಾನು ಬೆಳೆಯಲು ಬದುಕಿನಲ್ಲಿ ಏನೇ ಬರಲಿ; ಎಂತಹ ಅಲ್ಲೋಲ-ಕಲ್ಲೋಲವೇ ಉದ್ಭವಿಸಲಿ ಸಾವಿರ ಅಲೆಗಳ ನಡುವಣ ಶಿಲೆಯಂತೆ ಬದುಕನ್ನು ಧೈರ್ಯದಿಂದ ಎದುರಿಸಲು, ಸಮಚಿತ್ತದಿಂದ ಭರಿಸಿರಲು ಸಾಧ್ಯವಾದದ್ದು ಇಂಥ ಸತ್ಸಂಗದ ಕಾರಣದಿಂದ.

ನನ್ನ ದೃಷ್ಟಿಯಲ್ಲಿ "ನನ್ನದು" ಎಂದು ಕೊಳ್ಳುವ ಈ ನನ್ನ ಬದುಕು – ನನ್ನ ಯಜಮಾನರು ಹೀಗಾದರೆ ನಮ್ಮ ಬದುಕನ್ನು ಕಂಡೆವೆಂದುಕೊಳ್ಳುವ ಸುತ್ತಲ ಸಮಾಜದ ಕಣ್ಣಿನಲ್ಲಿ ಕಾಣುವ ನೋಟವೇ ಬೇರೆ.

"ನಿಮಗೇನು ಕಮ್ಮಿ. ಬೇಕಾದ ಹಾಗೆ ಇದೆ. ಕನಸಿನಲ್ಲಿ ಕಂಡದ್ದನ್ನು ನನಸಿನಲ್ಲಿ ತಂದು ನಿಲ್ಲಿಸುವಷ್ಟು ದೊಡ್ಡ ಹೆಸರು ನಿಮ್ಮಂತಹ ಪುಣ್ಯವಂತರು ಇನ್ನ್ಯಾರು ?"

ಇತ್ಯಾದಿ ನುಡಿಯುವವರ ಈ ಮಾತುಗಳಲ್ಲಿ ಅಣಕವಿದೆಯೋ, ಅಸಹನೆಯಿದೆಯೋ, ಅಭಿಮಾನವಿದೆಯೋ, ಹೊಟ್ಟೆಗಿಚ್ಚಿದೆಯೋ — ಯಾವ ಭಾವವಿದೆಯೋ ಯಾರು ಬಲ್ಲರು ?

ಅಂತೂ ನನ್ನದೆಂದು ಕೊಳ್ಳುವ ಬದುಕು – ಯಾರ ನಾಲಗೆಯ ಮೇಲೆ ಬೇಕಾದರೂ ಹೇಗೆ ಬೇಕೆನಿಸಿದರೆ ಹಾಗೆ ಹೊರಳಾಡುವ ಸಾರ್ವಜನಿಕ ವಸ್ತು.

ಸಾರ್ವಜನಿಕ ವಸ್ತು ಎಂದೆ ನಿಜ, ನನಗೆ ನನ್ನ ಯಜಮಾನರು ಹೇಗೆ ಬೇಕೋ ಹಾಗೇ ಸಮಾಜಕ್ಕೂ ನನ್ನ ಯಜಮಾನರಂಥವರು ಬೇಕೇ ಬೇಕು. ಯಜಮಾನರಿಗಂತೂ ಸಮಾಜವೇ ಮನೆ–ಅಲ್ಲ, ಮನೆಗಿಂತ ಹೆಚ್ಚು.

ಸಮಾಜದಲ್ಲಿ ಯಜಮಾನರು ಗಳಿಸಿದ ಈ "ದೊಡ್ಡ ಹೆಸರು" ಏನಿದೆಯೋ ಅದು ನಮಗೇನು ತಂದು ಕೊಟ್ಟಿತೋ–ಬಿಟ್ಟಿತೋ. ಇಷ್ಟಂತೂ ನಿಜ ಹಲವರ ಅಸೂಯೆ, ಅಸಹನೆ, ಆಕ್ರೋಶಕ್ಕೆ ನಮ್ಮ ಬದುಕನ್ನು ಬಲಿಯಾಗಿಸಿ ದಾಸರು ಬದುಕಿನ ಬಗ್ಗೆ ಹಾಡಿದ ಪದಗಳಿಗೆ – ಅನುಭವಜನ್ಯವಾದ ಬದ್ಧಿಗೆ ಅರ್ಥೈಸುವ ಶಕ್ತಿ ತಂದಿತು.

ಎಲ್ಲರೂ ಹೇಳುವಂತೆ, ಎಲ್ಲರಿಗೂ ಕಾಣುವಂತೆ ನಮಗೆ ಮನೆ ಇದೆ, ಯಜಮಾನರಿಗೆ ದೊಡ್ಡ ಹೆಸರಿದೆ, ಸ್ಥಾನ – ಮಾನ ಎಲ್ಲಾ ಇದೆ, ಬಹಿರಾಡಂಬರಕ್ಕೆ ಬೇಕಾದ್ದೆಲ್ಲಾ ಇದೆ.

ಈ ಘಟ್ಟಕ್ಕೆ ತಲುಪುವಷ್ಟಕ್ಕೆ ತೆತ್ತ ಬೆಲೆ, ಅನುಭವಿಸಿದ ಕಷ್ಟ- ನಷ್ಟಗಳು ಎಷ್ಟು ? ಸಾಹಿತಿಗಳ ಲೇಖನಿಯಿಂದ ಮೂಡಿಬಂದ ಪಾತ್ರಗಳ ಕಥೆ ಓದಿ ಕಣ್ಣೀರಿಡುವ ಎಷ್ಟು ಜನ ಸಾಹಿತಿಗಳ ಸಂಸಾರದ ಅಂತರಾಳ ಅರಿಯಲು ಯತ್ನಿಸಿದ್ದಾರೆ ? ಅಷ್ಟು ವಿಶಾಲ ಮನಸ್ಸು ಯಾರಿಗಿದೆ ?

ಇವೆಲ್ಲಾ ಯಾರಿಗೆ ಹೇಳಲಿ ?

ಬಾಯ್ಬಿಟ್ಟು ಹೇಳಿದರೂ ಯಾರು ನಂಬುತ್ತಾರೆ ?
(ಸಂಸಾರಗುಟ್ಟು – ವ್ಯಾಧಿರಟ್ಟು)

ಯಾರು ನಂಬಲಿ-ಬಿಡಲಿ ಅನುಭವಿಸಿದವರಿಗಷ್ಟೇ ಗೊತ್ತು —

"ನಮ್ಮಂತಹವರಿಗೆ ಬೇಕಾದದ್ದೆಲ್ಲಾ ಇದೆ, ಆದರೆ ಯಾವುದು ಮುಖ್ಯ ಬೇಕೋ ಅದೇ ಇಲ್ಲ." — ಎಂದು.

ನೆಮ್ಮದಿಯಿಂದ ಬದುಕಲು ಅವಶ್ಯವಾದ್ದೊಂದನ್ನು ಬಿಟ್ಟು, ಮಿಕ್ಕೆಲ್ಲವನ್ನು ದಯ ಪಾಲಿಸಿ ಹೆಜ್ಜೆ ಹೆಜ್ಜೆಗೂ ಪರೀಕ್ಷೆ ಮಾಡಿದ ಭಗವಂತನಲ್ಲಿ ನನ್ನ ಪ್ರಾರ್ಥನೆಯಿಷ್ಟೆ.

"ಜೀವನದ ವಿವಿಧ ಮುಖಗಳನ್ನು ತೆರೆದು ತೋರಿಸಿದ ನೀನು ಎಷ್ಟು ಕರುಣಾಳು ? ಇನ್ನು ಈ ಜನ್ಮವೆತ್ತದಂತೆ ಕೃಪೆ ಮಾಡು ಇದಕ್ಕಿಂತ ನಿನ್ನಲ್ಲಿ ಬೇರೇನು ಬೇಡಲಿ ?"

— ಹೀಗೆ ಬೇಡುವ ಬುದ್ಧಿಯನ್ನು ತಂದು ಕೊಟ್ಟು ನನ್ನ ಬದುಕನ್ನು ಸಾರ್ಥಕ ಮಾಡಿದ ನನ್ನ ಯಜಮಾನರಿಗೆ ಎಷ್ಟು ಕೃತಜ್ಞತೆಯನ್ನು ಅರ್ಪಿಸಿದರೂ ಸಾಲದು.

ಹೃದಯ ಮಂಥನ

— **ತ. ರಾ. ಸು.**

ಜೀವನದಲ್ಲಿ ಕೆಲವೊಮ್ಮೆ ಹೀಗಾಗುತ್ತದೆ.

ಎಂದೋ ಒಮ್ಮೆ ಯಾವುದೋ ಕಾರಣಕ್ಕಾಗಿ ನೋಡಿದ ನೋಟ ಮೂಡಿದ ಆ ಘಳಿಗೆಯಲ್ಲಿ ಮನಸ್ಸಿನಲ್ಲಿ ಏನೇನೋ ಬಗೆಬಗೆಯ ಭಾವ ತರಂಗಗಳನ್ನು ಮೂಡಿಸುತ್ತದೆ. ಆ ನೋಟ ಕಣ್ಣೆದುರಿನಿಂದ ಮರೆಯಾಗುತ್ತದೆ. ಕಾಲ ಕಳೆದ ಹಾಗೆ ಅಂದು ಮೂಡಿದ ಭಾವನೆಗಳು ಮತಿವಿನಾಳದಲ್ಲಿ ಕರಗಿ ಮಸಕಾಗುತ್ತದೆ. ನೋಡಿದ ನೂರಾರು ನೆನಪುಗಳ ಜಾತ್ರೆಯಲ್ಲಿ ಆ ನೆನಪೂ ಒಂದಾಗಿ ಎಲ್ಲೋ ಅಡಗಿ ಹೋಗುತ್ತದೆ. ಎಷ್ಟೋ ವರ್ಷಗಳ ಬಳಿಕ ಒಮ್ಮೆ ಇದ್ದಕ್ಕಿದ್ದಂತೆ ಹಿಂದೆಂದೋ ನೋಡಿದ ಆ ದೃಶ್ಯದ ನೆನಪು ಇದ್ದಕ್ಕಿದ್ದಹಾಗೆ ಮನಸ್ಸಿನಲ್ಲಿ ಮಿಂಚಿ ಹೊಸ ಅರ್ಥದಲ್ಲಿ ಕಾಣುತ್ತದೆ; ಅಷ್ಟೇ ಅಲ್ಲ – ಬದುಕಿಗೇ ಒಂದು ಹೊಸ ಅರ್ಥವನ್ನು ಕೊಡುತ್ತದೆ.

ಇಂತಹುದೇ ಆ ದೃಶ್ಯ —

ಈಗ ಸುಮಾರು ಆರೇಳು ವರ್ಷಗಳ ಹಿಂದೆ ಇರಬೇಕು. ನನ್ನ ಆರೋಗ್ಯ ಕೆಟ್ಟು ವೈದ್ಯಕೀಯ ಪರೀಕ್ಷೆ, ಚಿಕಿತ್ಸೆಗೆಂದು ಮಣಿಪಾಲಕ್ಕೆ ಹೋಗಿ ಉಡುಪಿಯಲ್ಲಿ ಬಿಡಾರ ಮಾಡಿದ್ದೆ. ಇದ್ದದ್ದು ಹೋಟೆಲಿನಲ್ಲಿಯಾದರೂ ಊಟ – ಉಪಚಾರವೆಲ್ಲ ಉಡುಪಿಯ ಅದಮಾರು ಮಠದ ಶ್ರೀಗಳವರ ಉಸ್ತುವಾರಿಯಲ್ಲೆ ನಡೆಯುತ್ತಿತ್ತು. ಹಾಗಿರುವಾಗ ಒಂದು ದಿನ ಉಡುಪಿಗೆ ಸಮೀಪವಿರುವ ಶ್ರೀಮಧ್ವಾಚಾರ್ಯರ ಜನ್ಮಸ್ಥಳವಾದ ಶ್ರೀಪಾಜಕ ಕ್ಷೇತ್ರವನ್ನು ನೋಡಬೇಕು ಎಂದು ಆಸೆಯಾಯಿತು. ಅದನ್ನು ನೋಡಿಬರಲು ಕಾರಿನ ವ್ಯವಸ್ಥೆಯೂ ಆಯಿತು. ಆ ಕ್ಷೇತ್ರಕ್ಕೆ ಹೋಗುವ ದಾರಿಯಲ್ಲಿ, ಅದರ ಬದಿಯಲ್ಲಿಯೇ ಒಂದು ಎತ್ತರವಾದ, ರಮ್ಯವಾದ ಗುಡ್ಡವಿದೆ. ಗುಡ್ಡದ ಮೇಲೆ ಶ್ರೀದುರ್ಗಾದೇವಿಯ ದೇವಸ್ಥಾನ. ಆ ದೇವಸ್ಥಾನಕ್ಕಿಂತಲೂ ಹೆಚ್ಚಾಗಿ ಆ ಗುಡ್ಡದ ತುದಿಯಿಂದ ಕಾಣುವ ನಿಸರ್ಗ ದೃಶ್ಯ ಬಹುಸುಂದರವಾದದ್ದು ಎಂದು ಮಿತ್ರರು ಹೇಳಿದ್ದರಿಂದ ಅದನ್ನು ನೋಡಲೆಂದೇ ಬೆಟ್ಟವನ್ನು ಹತ್ತಿದೆವು.

ಆ ಗುಡ್ಡದ ತುದಿಯಿಂದ ಕಾಣುವ ನಿಸರ್ಗ ಸೌಭಾಗ್ಯದ ರಮ್ಯತೆಯ ಬಗ್ಗೆ ನನ್ನ ಮಿತ್ರರು ಹೇಳಿದ್ದು ಎಳ್ಳಷ್ಟೂ ಉತ್ಪ್ರೇಕ್ಷೆಯಲ್ಲ ಎನ್ನುವುದು ಗುಡ್ಡದ ತುದಿಯನ್ನು ಏರಿ ನೋಡಿದಾಗ ನನಗನಿಸಿತು.

ಗುಡ್ಡದ ತುದಿಯಲ್ಲಿ ಶ್ರೀ ದುರ್ಗಾದೇವಿಯ ಪೂರ್ವಾಭಿಮುಖವಾದ ಅದರ ಮಹಾದ್ವಾರದ ಬಳಿಯಲ್ಲಿ ನಿಂತು ನೋಡಿದಾಗ ಎದುರಿಗೆ ಮಾಲೆ ಮಾಲೆಯಾಗಿ

ಒಂದಕ್ಕೊಂದು ಸ್ಪರ್ಧಿಸುವಂತೆ ಮೇಲೆದ್ದು ನಿಂತ ಹಲವು ಬಗೆಯ ಬೆಟ್ಟದ ಸಾಲುಗಳು ಪರ್ವತ ಪಂಕ್ತಿ. ತಾನು ದೊಡ್ಡ ಹೋರಾಟದ ಸಾಹಸದಲ್ಲಿದ್ದಾನೆ. ಆಕರ್ಷಕವಾಗಿ ಹಸಿರಿನ ಬಯಲುಗಳನ್ನು, ಭೂಮಿಗಳನ್ನು ಕೆಳಗಿಟ್ಟು ನಿಂತಿದೆ.

ಕಣ್ಣು ತಣಿಯುವಷ್ಟು ಅದನ್ನು ನೋಡಿ ಬಳಿಕ ಸುತ್ತಿ ದೇವಾಲಯದ ಹಿಂಭಾಗಕ್ಕೆ ಬಂದಾಗ ಕಣ್ಣು ಕಾಣಿಸುವಷ್ಟು ದೂರಕ್ಕೂ ಹರಡಿದ್ದ ತೆಳು ಅಲೆಗಳನ್ನು ತುಂಬಿದ್ದ ಅಪಾರವಾದ ಅರಬ್ಬೀ ಸಮುದ್ರ, ದಿಗಂತದಂಚಿನಲ್ಲಿ ಸರಿಯುತ್ತಿದ್ದ ಕಾವು ಕಳೆದುಕೊಂಡ ಕೆಂಪು ಸೂರ್ಯಬಿಂಬ.

ಕಣ್ಣು ದಣಿಯುವಷ್ಟು ಹೊತ್ತೂ ನೋಡಿದೆ.

'ಹೊತ್ತಾಯಿತು' – ಎಂದು ಮಿತ್ರರು ಎಚ್ಚರಿಸಿದ ಮೇಲೆ ಅಲ್ಲಿಂದ ಬಂದು, ದೇವರಿಗೆ ಪೂಜೆ ಮಾಡಿಸಿ ಗುರ್ವಣ್ಣನೀರು ಪಾಜಕ ಕ್ಷೇತ್ರದ ಕಡೆಗೆ ಹೊರಟೆವು.

ಅಂದು ನೋಡಿದಾಗ ಆ ದೃಶ್ಯ ರೋಮಾಂಚಕಾರಿಯಾಗಿತ್ತು. ಕಣ್ಣು ಮುಚ್ಚಿದ್ದು ತುಂಬಿಕೊಂಡು ಹಿಂತಿರುಗಿದ್ದೆ, ಎಷ್ಟೋ ವರ್ಷ ಕಳೆದು ಹೋಯಿತು. ಆ ಕಣ್ಣುಗಳು ಮತ್ತೇನೇನನ್ನೋ ನೋಡಿದುವು. ಹೊಸ ನೋಟಗಳ ಭರದಲ್ಲಿ ಆ ನೋಟ, ಅದರ ಅನುಭವ ಮಸುಕಾಯಿತು.

ದಿನ ಕಳೆಯಿತು, ತಿಂಗಳಾಯಿತು ; ವರ್ಷಗಳುರುಳಿತು.

ಕೆಲವರ್ಷದ ಬಳಿಕ ಎರಡು ಬಾರಿ ಹೃದಯಾಘಾತವಾಗಿ ಬದುಕು ಅನಿಶ್ಚಯ ಎನಿಸುವ ಭಾವನೆ ಮನಸ್ಸಿನಲ್ಲಿ ಮೂಡಿ ಸಾವಿನ ಹೊಸ್ತಿಲ ಬಳಿಯಲ್ಲಿ ನಿಂತು ಇಣುಕುವವರೆಗೆ ನಾನು ಬದುಕಿದ ಇಷ್ಟು ವರ್ಷಗಳ ಬದುಕಿನ ದಿನಗಳ ಬಗ್ಗೆ ಚಿಂತಿಸಿದಾಗ-ಹಾಗೆಯೇ ಅಂದು ನೋಡಿದ ಆ ದೃಶ್ಯ ತಟಕ್ಕನೆ ಕಣ್ಣು ಕೋರೈಸುವಂತೆ ಮನದ ಮುಂದೆ ಮೂಡಿನಿಂತು – ನನ್ನ ಇಡೀ ಬದುಕಿಗೇ ಒಂದು ಸಂಕೇತವಾಗಿ ಕಂಡಿತು.

ಮುಂದೆ —

— ಸಾಹಸವನ್ನು ಕೆಣಕುವ ಪರ್ವತ ಪಂಕ್ತಿ.

ಹಿಂದೆ —

— ಶಾಂತಿಯನ್ನು ನೀಡುವ ಸಾಗರ ವಿಸ್ತಾರ.

ಮಧ್ಯೆ —

— ಶಾಶ್ವತವಾಗಿ ನಿಂತ ಆ ದೇವತಾಮೂರ್ತಿ. ಆ ದೇವತಾಮೂರ್ತಿಗೆ ಬೆನ್ನು ತಿರುಗಿಸಿ ನಿಂತಾಗ ಬಾಳು – ಹೋರಾಟ.

ಆ ದೇವತಾಮೂರ್ತಿಯೇ ಬೆನ್ನಿಗೆ ರಕ್ಷೆಯಾಗಿ ನಿಂತಾಗ —

— ಶಾಂತಿಯ ಮಧುರ ಅಹ್ವಾನ.

ನಾನು ಕಂಡದ್ದು, ಉಂಡದ್ದು, ಅನುಭವಿಸಿದ್ದು ಬದುಕಿದ್ದು — ನನ್ನ ಬದುಕು ಎಲ್ಲವೂ — ಎಲ್ಲಾ ಇಷ್ಟೇ ಅಲ್ಲವೇ ? ಹೌದು, ನನ್ನ ಬಾಳೇ ಅಷ್ಟು — !

ನಾನು ಹುಟ್ಟಿ ಬೆಳೆದದ್ದು – ದೇವರಲ್ಲಿ, ಸಾಧು ಸಂತರಲ್ಲಿ, ಸಾಂಪ್ರದಾಯಿಕ ಮೌಲ್ಯಗಳಲ್ಲಿ ಅಚಲವಾದ ಶ್ರದ್ಧೆಯನ್ನಿರಿಕೊಂಡ ಮನೆತನದಲ್ಲಿ.

ರಾಮಾಯಣವೇ ಸಾಕ್ಷಾತ್ ಶ್ರೀ ರಾಮಚಂದ್ರ ಎಂದು ನಂಬಿದವರು ನನ್ನ ತಂದೆಯವರು, ನನ್ನ ವಂಶದ ಹಿರಿಯರು. ಆ ನಂಬಿಕೆಗೆ ತಕ್ಕಂತೆಯೇ ಮನೆಯ ಜೀವನವೂ. ನಿತ್ಯವೂ ಮನೆಯಲ್ಲಿ ಪೂಜೆ ಪುನಸ್ಕಾರ. ಹಬ್ಬ ಹರಿದಿನಗಳಲ್ಲಿ ಇನ್ನೂ ಹೆಚ್ಚಿನ ಸಂಭ್ರಮ. ಸಾಧು – ಸಂತರಂತೂ ಆಗಾಗ ಬಂದು ಹೋಗುವ ಮನೆ ನಮ್ಮದು.

ನಾನು ಆ ವಾತಾವರಣದ ಒಂದು ಅಂಗವಾಗಿದ್ದೆ. ಆದರೆ ಬೆಳೆಯುತ್ತಾ ಹಂನೆಯಾಜೆಯ ವಾತಾವರಣದ ಕಾವು ನನ್ನ ಮೈ ಮಿದುಳನ್ನು ತಟ್ಟಿದಾಗ ಬೆಳೆಯುತ್ತಾ ನಾನು ಓದಿದ ಮಾರ್ಕ್ಸ್, ಲೆನಿನ್, ರಾಯ್–ಇಂಥವರ ಗ್ರಂಥಗಳ ಪ್ರಭಾವ ನನ್ನ ಮನದ ಮೇಲೆ ಸಂಪ್ರದಾಯಕ್ಕಿಂತ ಹೆಚ್ಚಿನ ಪರಿಣಾಮವನ್ನು ಮೂಡಿಸಿದಾಗ ಮನೆಯವರು ಸತ್ಯ, ಶಾಶ್ವತವೆಂದು ನಂಬಿದ್ದ ಧಾರ್ಮಿಕ ಸಾಮಾಜಿಕ ಮೌಲ್ಯಗಳು ಅರ್ಥಹೀನವಾಗಿ ಕಂಡವು. ನನಗೆ ಅರ್ಥವಾಗದ ಆ ಧಾರ್ಮಿಕ ಶ್ರದ್ಧೆಗಳಿಗಿಂತ ಅಷ್ಟೋ ಇಷ್ಟೋ ಅರ್ಥವಾದ ವಿಜ್ಞಾನ, ಸಾಮಾಜಿಕ ಕ್ರಾಂತಿಯ ಮಾತುಗಳು ಸತ್ಯ ಎನಿಸಿ ಅವುಗಳ ವಿರುದ್ಧ ಸೆಟೆದು ನಿಂತೆ.

ಆಗ ನನಗನಿಸುತ್ತಿತ್ತು —

"ಈ ಸಂಪ್ರದಾಯಗಳ ಉಸಿರು ಕಟ್ಟಿಸುವ ವಾತಾವರಣದಲ್ಲಿ ನಾನು ಬೆಳೆಯಲಾರೆ" ಎಂದು.

ಈ ಭಾವನೆ ನನ್ನ ಬುದ್ಧಿಯನ್ನು ಬೆಳೆಸುವುದಕ್ಕಿಂತ ಹೆಚ್ಚಾಗಿ ಇತರರ ಶ್ರದ್ಧೆಯ ವಿರುದ್ಧ ಹೋರಾಡುವುದೇ ಹೆಚ್ಚಿನ ಮಹತ್ವದ ವಿಷಯ ಎನಿಸಿತು.

ಹುಟ್ಟಿದಂದಿನಿಂದ ನನ್ನದು ಸ್ವೇಚ್ಛಾ ಜೀವನ. ನಾನು ಮುದ್ದಿನಿಂದ ಬೆಳೆಸಿದ ಮಗ. ಎಂತಲೇ ಏನೋ ಬಿಗಿಯಾದ ಕಡಿವಾಣ ಹಾಕುವವರು ಯಾರೂ ಇರಲಿಲ್ಲ. ಲಗಾಮಿಲ್ಲದ ಕಾಡುಕುದುರೆಯಾಗಿ ಸುತ್ತಲ ಸಮಾಜದಲ್ಲಿ ನುಗ್ಗಿದೆ. ನನ್ನ ಒಂಭತ್ತನೆಯ ವಯಸ್ಸಿನಲ್ಲಿ ಇರಬೇಕು – ಅಸ್ಪೃಶ್ಯತಾ ವಿರುದ್ಧ ನಡೆಯುತ್ತಿದ್ದ ಚಳವಳಿಯಲ್ಲಿ ಭಾಗವಹಿಸಿ, ಭಾಷಣಮಾಡಿ 'ಕ್ರಾಂತಿಕಾರ' ಎನಿಸಿಕೊಂಡು ಹೆಮ್ಮೆಯಿಂದ ಬೀಗಿದೆ. ಮುಂದಕ್ಕೂ ಈ ಕ್ರಾಂತಿಯೇ ನನ್ನ ಜೀವನದ ಮಾರ್ಗ ಎಂದು ನಿರ್ಧರಿಸಿದೆ. ಯಾರ ಅನುಭವಕ್ಕಾಗಲಿ, ಹಿತವಚನಕ್ಕಾಗಲಿ, ಶ್ರದ್ಧೆಗಾಗಲಿ ತಲೆ ಬಾಗಿಸುವುದು ಬಂಧನದ ಬದುಕು ಎನಿಸಿತು. ಬೇಡ ಎಂದದ್ದನ್ನು ಮಾಡುವುದೇ ಒಂದು ಬಗೆಯ ಹಿತ, ಹಾಗೆಯೇ ಬೇಡ ಎಂದದ್ದನ್ನು ಸಾಧಿಸುವ ಛಲ – ಪ್ರಾಯಶಃ ನಾನು ಹುಟ್ಟಿದೂರಿನ ಸುತ್ತ ಹರಡಿದ ಬೆಟ್ಟಗಳನ್ನು ಏರಿಳಿಯುವ ದಿನನಿತ್ಯದ

ಜೀವನ ಈ ಸಾಹಸಕ್ಕೆ ಸ್ಫೂರ್ತಿಯಾಯಿತೇನೊ – ಅಂತೂ ಬದುಕು ಆ ದಾರಿ ಹಿಡಿಯಿತು.

ಮನೆಯವರಿಗೆ ಬೇಕಾದ ಶಾಲೆ ನನ್ನ ಪಾಲಿಗೆ ಪಂಜರವಾಯಿತು. ಅವರಿಗೆ ಬೇಕು ಎನಿಸಿದ ಪಠ್ಯ ಪುಸ್ತಕಗಳು ನನ್ನ ಪಾಲಿಗೆ ವಿಷವಾಯಿತು. ಕಥೆ, ಕಾದಂಬರಿಗಳನ್ನು ಓದುವುದು ಹೆಚ್ಚು ಹಿತವಾಯಿತು. ಹಾಗೆಯೇ ಕದ್ದು ಸಿಗರೇಟು ಸೇದುವುದು, ನಾಟಕ ನೋಡುವುದು, ಸಿನಿಮಾ ನೋಡುವುದು, 'ನನಗೆ ಸಲ್ಲ' ಎಂದಂಥವರ ಸ್ನೇಹ ಮಾಡುವುದು, ತಂದೆಯ ಜೇಬಿನಿಂದ ದುಡ್ಡು ಕದ್ದು ಹೇಳದೆ ಕೇಳದೆ ಕಥೆ, ಕಾದಂಬರಿ ಓದುವ ಸಲುವಾಗಿ ಬೇಕಾದ ಊರಿಗೆ ಹೋಗುವುದು ಇದು ನನ್ನ ಜೀವನದ ಖುಷಿಯಾಯಿತು.

ಈ ಹೊತ್ತಿನಲ್ಲಿಯೇ ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯದ ಹೋರಾಟ ನನ್ನ ಜೀವನಕ್ಕೆ ಹೊಸ ತಿರುವನ್ನು ತಂದುಕೊಟ್ಟಿತು. ಮನೆಯವರಿಗೆ ಬೇಡವಾದ ಆ ಜಾಡು ಹಿಡಿದು ಸೆರೆಮನೆಗೂ ಹೋಗಿ ಬಂದೆ. ಈ ಮಧ್ಯದಲ್ಲಿಯೇ ಒಮ್ಮೆ ವಾಚಾಳಿಯಾಗಿದ್ದ ನನ್ನನ್ನು ನನ್ನ ದೊಡ್ಡಪ್ಪನವರಾದ ತ. ಸು. ವೆಂಕಣ್ಣಯ್ಯನವರು "ಮಾತಾಡಿದಷ್ಟು ಸುಲಭವಾಗಿ ಬರೆಯ ಬಲ್ಲೆಯಾ?" ಎಂದು ಕೇಳಿದ್ದೇ ಕಾರಣವಾಗಿ "ಬರೆದು ತೋರಿಸುತ್ತೇನೆ" ಎಂಬ ಛಲವನ್ನು ನನ್ನಲ್ಲಿ ಮೂಡಿಸಿತು.
ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು, ಸಂಪ್ರದಾಯದ ವಿರುದ್ಧ ಸೆಣಸಬೇಕು, ಬರೆದು ತೋರಿಸಬೇಕು. ಅಂತೂ ಯಾರು ಇದನ್ನು ನೀನು ಮಾಡಲಾರೆ ಎಂದರೋ ಅದೆಲ್ಲವನ್ನೂ ಮಾಡಿ ತೋರಿಸಬೇಕು ಎನ್ನುವ ಛಲ, ಆ ಛಲ ಸಾಧನೆಗಾಗಿ ನಿರಂತರ ಹೋರಾಟ. ಇದೇ ನನ್ನ ಬದುಕಾಯಿತು.

ಈ ಹೋರಾಟದ ಹಾದಿಯಲ್ಲೇ ನಡೆದು ನನ್ನ ತಂದೆಯವರ ಕನಸುಗಳೆಲ್ಲಕ್ಕೂ ಕೊಳ್ಳಿ ಇಟ್ಟೆ, ನಾಟಕದವರೊಂದಿಗೂ ಅಲ್ಲಾಡಿದೆ. ಚಳವಳಿಯಲ್ಲಿ ಧುಮುಕಿದೆ. ಸೆರೆಮನೆಯಲ್ಲಿ ರಾಗಿ ಬೀಸಿದೆ. ಓದಿಗೆ ತಿಲಾಂಜಲಿ ಕೊಟ್ಟು ಪತ್ರಿಕೋದ್ಯಮಿಯಾದೆ.
ಈ ವೇಳೆಗೆ ನನ್ನ ಮನೆಯವರೆಲ್ಲ ನನ್ನ ಬಗ್ಗೆ ಯಾವುದೇ ಆಸೆಯನ್ನಿಟ್ಟುಕೊಳ್ಳುವುದರಲ್ಲಿ ಅರ್ಥ ವಿಲ್ಲ ಎಂಬ ತೀರ್ಮಾನಕ್ಕೆ ಬರುವಂತಹ ಪರಿಸ್ಥಿಗೆ ನಾನು ಮುಟ್ಟಿದೆ. 'ಇವನು ಹಾಳಾದ' ಎನ್ನುವುದು ನಾನು ದಿನವೂ ನನ್ನವರಿಂದ ಕೇಳುತ್ತಿದ್ದ ಆಶೀರ್ವಚನ, ಆದರೆ ನಾನು ಮಾತ್ರ ಅದಾವುದಕ್ಕೂ ಜಗ್ಗಲಿಲ್ಲ. ಈ ಬಗೆಯ ಬದುಕು. ನನ್ನ ಹೆಗಲ ಮೇಲೆ ಹೇರಿದ ಬಡತನದ ಬವಣೆಗೂ ಅಂಜಲಿಲ್ಲ.
ಬರೆಯಬೇಕು, ಕ್ರಾಂತಿ ಮಾಡಬೇಕು, ಲೋಕೋದ್ಧಾರ ಮಾಡಬೇಕು–ಬರೀ ಇಂಥ ಕನಸುಗಳೇ ಬಾಳತುಂಬ.

ಈ ಕನಸನ್ನು ನನಸು ಮಾಡಲು ನಾನು ಕೈಗೊಂಡ ವೃತ್ತಿ ಪತ್ರಿಕಾಜೀವನ ಒಂದು ರೀತಿಯಲ್ಲಿ ಪೋಷಕವಾಗಿದ್ದರೂ ಆರಂಭದ ದಿನಗಳ ಬಡತನದ ಬದುಕು ಒಪ್ಪೊತ್ತಿನ

ಊಟ. ಇನ್ನೊಪ್ಪತ್ತು ಪಚ್ಚಬಾಳೆ ಹಣ್ಣು, ಕಡಲೆಕಾಯಿ, ಯಾರೋ ಮಿತ್ರರು ಕೊಡಿಸಿದ ಕಾಫಿ ತಿಂಡಿಯಲ್ಲೇ ಆ ದಿನದ ಹೊಟ್ಟೆಪಾಡು, ಎಲ್ಲೋ ಊಟ, ಎಲ್ಲೋ ನಿದ್ದೆ. ಮನಸ್ಸಿಗೆ ಬಂದತ್ತ ಅಲೆತ, ಮನಸ್ಸು ಒತ್ತು ಕಡಿ ಅಲೆವ ಕಾಡು ಕುದುರೆ. ಏನಾಗುತ್ತಿದ್ದೆನೋ ಏನೋ. ಬಾಳು ಹತ್ತು ದಿಕ್ಕಿನಲ್ಲಿ ಹರಿದು ಹಾಗೇ ಹೇಗೋ ಹಿಂಗಿ ಹೋಗುತ್ತಿತ್ತೋ ಏನೋ,

ಆ ಸಮಯದಲ್ಲಿ ಕ್ರಾಂತಿಯನ್ನು ಬಯಸುತ್ತಿದ್ದ ನನ್ನ ಲೇಖನಿಯ ಮೊನೆಯನ್ನು ಮಸೆದವರು ಶ್ರೀ ಸಿದ್ದವನ ಹಳ್ಳಿ ಕೃಷ್ಣಶರ್ಮರು.

ಪತ್ರಿಕೋದ್ಯಮದ ಕಾಡಲೆತದಲ್ಲಿ ಹೇಗೋ ಹರಿಯುತ್ತಿದ್ದ ನನ್ನ ಬರಹಗಾರನ ಬುದ್ಧಿಗೆ ಒಂದು ಸಾಮಾಜಿಕ ಕ್ರಾಂತಿಯ ಗುರಿಯನ್ನು ತೋರಿಕೊಟ್ಟು ಕಾದಂಬರಿ ಕಾರನಾಗಲು ಬೆನ್ನು ತಟ್ಟಿ ಸ್ಫೂರ್ತಿ ನೀಡಿದ ಹಿರಿಯ ಜೀವ ಡಾ॥ ಅ.ನ.ಕೃ.

ಇವರಿಬ್ಬರ ಜತೆಗೆ ದೇವುಡು ನರಸಿಂಹ ಶಾಸ್ತ್ರಿಗಳು, ಪ. ಕ. ಭಾರದ್ವಾಜರು, ವೀರ ಕೇಸರಿ ಸೀತಾರಾಮ ಶಾಸ್ತ್ರಿಗಳು, ಇಂಥ ದಿಗ್ಗಜಗಳ ಜತೆಗೆ ಸ್ವಚ್ಛಂದವಾಗಿ ಬೆರೆಯುವ ರಸಮಯ ಅವಕಾಶ.

ಸಿದ್ದವನಹಳ್ಳಿ ಕೃಷ್ಣ ಶರ್ಮ, ಅ.ನ.ಕೃ. ನನ್ನ ಬಾಳ ಶಿಲ್ಪಕ್ಕೆ ಒಂದು ರೂಪ ಕೊಟ್ಟ ಇಬ್ಬರು ಕುಶಲ ರೂವಾರಿಗಳು.

ವಾಸ್ತವವಾಗಿ ಕೃಷ್ಣಶರ್ಮರು ಒಂದು ಆಕಾರ ಕೊಟ್ಟ ನನ್ನ ಜೀವಮೂರ್ತಿಗೆ ಕುಸುರಿ ಕೆಲಸ ಮಾಡಿ ಅದನ್ನೊಂದು ವಿಶಿಷ್ಟ ಶಿಲ್ಪವನ್ನಾಗಿ ಮಾಡಿದ ಕೀರ್ತಿ ಅ.ನ.ಕೃ. ಅವರಿಗೇ ಸಲ್ಲಬೇಕು. ನನ್ನ ಬಾಳಿನ ಮೇಲೆ, ನನ್ನ ಚಿಂತನೆಯ ಮೇಲೆ, ಅಭ್ಯಾಸ ಆಳವಾಗಿಸುವುದರ ಮೇಲೆ, ಓದಿದ ಓದನ್ನು ಜೀವನಕ್ಕೆ ಅಳವಡಿಸಿಕೊಂಡು 'ಬದುಕು ಕೇವಲ ವೈಯಕ್ತಿಕ ಸಾಧನೆಯಲ್ಲ, ಒಂದು ಕ್ರಾಂತಿಯ ಅಸ್ತ್ರ' ಎಂಬ ಖಚಿತ ನಂಬಿಕೆಯನ್ನು ಮೂಡಿಸಿದವರು – ಅ.ನ.ಕೃ.

ಈ ನನ್ನ ಬದುಕಿಗೆ ಒಂದು ಸ್ಥಿರ ಸ್ವರೂಪವನ್ನು ಕಲ್ಪಿಸಿದ ಆ ಎರಡು ದೊಡ್ಡ ಜೀವಗಳು ಇಂದಿಲ್ಲ. ಅವರಿಬ್ಬರಿಗೂ ಋಣಿಯಾದ ನಾನು ಮಾತ್ರ ಇದ್ದೇನೆ. ಈಗಲೂ ಅವರಿಬ್ಬರು ನನ್ನ ಕಣ್ಣು ಮುಂದೆ ಇದ್ದಾರೆ. ಅವರಾಡಿದ ಮಾತುಗಳು ಇನ್ನೂ ನನ್ನ ಕಿವಿಯಲ್ಲಿವೆ.

ಆ ಇಬ್ಬರು ನನಗೆ ನೀಡಿದ್ದು ಕ್ರಾಂತಿ ದೀಕ್ಷೆಯನ್ನು; ಇಬ್ಬರು ನನ್ನ ಕೈಗೆ ಕಟ್ಟಿದ್ದು ಕನ್ನಡತನದ ಕಂಕಣವನ್ನು; ಇಬ್ಬರು ನನ್ನ ಲೇಖನಿ ಖಡ್ಗವಾಗಬೇಕು ಎಂದು ಬಯಸಿದರು.

ಅವರಿಬ್ಬರ ಕನಸುಗಳು ಒಂದೇ. ಆದರೆ ಈ ಇಬ್ಬರು ಹಿರಿಯರು ಪಾಠಗಳನ್ನು ಕಲಿಸಿದ ರೀತಿ ಮಾತ್ರ ವಿಭಿನ್ನ.

ಸಿದ್ಧವನಹಳ್ಳಿ ಕೃಷ್ಣಶರ್ಮರದು ಎಷ್ಟು ಕ್ರಾಂತಿಕಾರಿ ಮನೋಭಾವವೋ ಅಷ್ಟೇ ಸಂಪ್ರದಾಯ ಶೀಲವಾದದ್ದು. ಯುವಕರು ಕ್ರಾಂತಿಕಾರಿಗಳಾಗಬೇಕು ಎಂದು ಎಷ್ಟು ಬಯಸುತ್ತಿದ್ದರೋ ಅವರಲ್ಲಿ ಅಷ್ಟೇ ಬಿಟ್ಟಿನ ಶಿಸ್ತು, ವಿಧೇಯತೆಯನ್ನು ಅಪೇಕ್ಷಿಸುತ್ತಿದ್ದರು.

ಅ.ನ.ಕೃ. ಅವರ ರೀತಿ ಅದಲ್ಲ. ತಮ್ಮ ಕನಸನ್ನು ನಮ್ಮ ಮೈಯ ರಕ್ತವನ್ನಾಗಿ ಮಾಡುವ ಕೌಶಲ ಅವರಲ್ಲಿತ್ತು. ಹಾಗೆಂದು ಅವರು ಮತ್ತೊಬ್ಬರು ತಮ್ಮ ಪಡಿಯಚ್ಚಾಗಬೇಕು ಎಂದು ಎಂದೂ ಬಯಸಿದವರಲ್ಲ. ಸ್ವತಃ ಅವರು ತಮ್ಮ ಇಚ್ಛೆ ಬಂದಂತೆ ತಮ್ಮ ಬಾಳನ್ನು ರೂಪಿಸಿಕೊಂಡಿದ್ದರು. ತಮ್ಮ ಪ್ರಭಾವ ವಲಯಕ್ಕೆ ಬಂದವರೂ ಕೂಡ ಅದೇ ರೀತಿ ತಮ್ಮ ವ್ಯಕ್ತಿತ್ವವನ್ನು ತಮ್ಮ ದಾರಿಯಲ್ಲೇ ರೂಪಿಸಿಕೊಳ್ಳಬೇಕು, ಆ ಸ್ವಾತಂತ್ರ್ಯ ಅವರಿಗಿರಬೇಕು ಎನ್ನುವ ಮನೋಭಾವ ಅವರದು. ಅವರು "ಬರಿ" ಎಂದು ಹೇಳುತ್ತಿದ್ದರು. "ಹೀಗೇ ಬರಿ" ಎಂದು ಎಂದೂ ಹೇಳುತ್ತಿರಲಿಲ್ಲ. ಬರೆದದ್ದನ್ನು ಓದಿಸುತ್ತಿದ್ದರು. ತಮಗೆ ಸೇರಿತೇ ಇಲ್ಲವೇ ಸ್ಪಷ್ಟವಾಗಿ ಹೇಳುತ್ತಿದ್ದರು. ಅದರೆ "ಹೀಗೇಕೆ ಬರೆದೆ?" ಎಂದು ಎಂದೂ, ಯಾರನ್ನೂ ಕೇಳಿದವರಲ್ಲ. ತಪ್ಪು ಬರೆದಾಗಲೂ ಮನಸ್ಸು ಮುರಿಯುವ ಕಠೋರತೆ ಅವರಲ್ಲಿ ನಾನು ಎಂದೂ ಕಾಣಲಿಲ್ಲ. ಬರವಣಿಗೆಯ ಬಗ್ಗೆ ಅವರು ಹೇಳುತ್ತಿದ್ದ ಮಾತು ಅಂದೂ, ಇಂದು ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದು ಕೊಂಡಿದೆ. "ಬರೆಯಬೇಕು, ನಮ್ಮ ತೃಪ್ತಿಗಾಗಿ ಬರೆಯಬೇಕು. ಬರೆದ ಬರವಣಿಗೆ ನಮ್ಮ ಮನಸ್ಸಿಗೆ ತೃಪ್ತಿ ಕೊಟ್ಟರೆ ಸಾಕು. ಹತ್ತು ಜನರನ್ನು ಮೆಚ್ಚಿಸುವುದಕ್ಕಾಗಿ ಸಲ್ಲದ ಕಸರತ್ತು ಮಾಡುವುದು ಬರಹಗಾರನ ಲಕ್ಷಣವಲ್ಲ. ಅಷ್ಟೇ ಅಲ್ಲ, ನಾವು ಬರೆದದ್ದೆಲ್ಲ ಶಾಶ್ವತ ಸಾಹಿತ್ಯ ಎಂಬ ಭ್ರಮೆಯನ್ನು ನಾವು ಇಟ್ಟು ಕೊಳ್ಳಬೇಕಾಗಿಲ್ಲ. ಬರೆಯಬೇಕು, ನಮಗೆ ಸರಿ ಎನಿಸಿದ್ದನ್ನು ಬರೆಯಬೇಕು. ಉಳಿದದ್ದು ಉಳಿಯುತ್ತದೆ. ಹೋಗುವುದು ಹೋಗುತ್ತದೆ. ಸಮಕಾಲೀನ ವಿಮರ್ಶೆಯ ಅಂಕುಶಕ್ಕೆ ಎಂದೂ ಹೆದರಬಾರದು. ಕೊನೆಯ ನಿರ್ಣಯ ಮಾಡುವವನು – ಇವತ್ತಿನ ವಿಮರ್ಶಕನಲ್ಲ, ಕಾಲ. ಆದ್ದರಿಂದ ನಿರ್ಭಯವಾಗಿ ಬರಿ".

—ಇದು ಅ.ನ.ಕೃ. ನನಗೊಬ್ಬನಿಗೆ ಹೇಳಿದ ಮಾತಲ್ಲ, ಬರಹಗಾರರಾಗಿ ತಮ್ಮ ಬಳಿಗೆ ಬಂದವರೆಲ್ಲರಿಗೂ ಹೇಳುತ್ತಿದ್ದುದೇ ಇಷ್ಟನ್ನು.

ಎಂತಲೇ ಅವರು ಕೇವಲ ಕಾದಂಬರಿಕಾರರಾಗಿ ಉಳಿಯಲಿಲ್ಲ; ನೂರು ಕಾದಂಬರಿಕಾರರ ನಿರ್ಮಾಪಕರಾದರು. ಪ್ರಾಯಶಃ ಸಮಕಾಲೀನ ಲೇಖಕರ ಮೇಲೆ ಅವರಷ್ಟು ಪ್ರಭಾವವನ್ನು ಬೀರಿದ ಮತ್ತೊಬ್ಬ ವ್ಯಕ್ತಿಯನ್ನು ನಾನು ಕಂಡಿಲ್ಲ. ಅಷ್ಟೇ ಅಲ್ಲ – ಆ ಪ್ರಭಾವದಲ್ಲಿದ್ದ ಸರಳತೆ, ಸಜ್ಜನಿಕೆ, ನಿರ್ಮಾತ್ಸರ್ಯ, ಪ್ರೋತ್ಸಾಹದ ಔದಾರ್ಯ – ಇವುಗಳಿಗೆ ಅವರಿಗೆ ಸರಿಸಾಟಿಯಾದವರನ್ನು ಅಂದೂ ನಾನು ಕಾಣಲಿಲ್ಲ. ಇಂದೂ ನಾನು ಮತ್ತೊಬ್ಬರನ್ನು ಕಾಣುತ್ತಿಲ್ಲ. ಈ ದೃಷ್ಟಿಯಲ್ಲಿ ಅ.ನ.ಕೃ.

ಏಕಮೇವಾದ್ವಿತೀಯರು. ಎಂತಲೇ ನನಗೆ ಅವರ ನಾಯಕತ್ವ ಬಹುಪ್ರಿಯ ವಾಯಿತು. ನನ್ನ ಬಾಳಿನ ಮೇಲೆ ಅವರ ಆ ಪ್ರಭಾವ ಅದ್ವಿತೀಯವಾದುದು. ಅವರು ತೆರವು ಮಾಡಿದ ಸ್ಥಾನವನ್ನು ತುಂಬುವ ಜೀವ ಮತ್ತೊಂದಿಲ್ಲ.

ಅವರು ಮುಂದೆ; ಅವರ ಹಿಂದೆ ನಾವು.

ಪ್ರಗತಿಶೀಲ ಸಾಹಿತ್ಯ ಚಳವಳಿ, ಕನ್ನಡ ಚಳವಳಿಗಳಲ್ಲಿ – ಈ ಚಳವಳಿಗಳಲ್ಲೂ ಹಲವಾರು ಬಗೆಯ ಚಳವಳಿ – ಜೀವನದ ಎಲ್ಲ ಮುಖವನ್ನೂ ದರ್ಶನ ಮಾಡಿಸುವ ಸಾಮರ್ಥ್ಯ ಅವರದು. ಅವರ ಹಿಂದೆ ನುಗ್ಗಿದೆವು. ಕರ್ನಾಟಕವನ್ನೆಲ್ಲಾ ಸುತ್ತಾಡಿದೆವು. ಬಾಳಿನಲ್ಲಿ ಬಂದ ಕಷ್ಟಗಳಾವುವೂ ಕಷ್ಟಗಳೆಂದು ಕಾಣಲಿಲ್ಲ; ಮೂದಲಿಕೆಗಳು ಮೂದಲಿಕೆಗಳಂತೆ ಕಾಣಲಿಲ್ಲ. ಎಲ್ಲವೂ ಜೀವನದ ಒಂದು ಭಾಗ; ಎಲ್ಲವನ್ನೂ ಏಕರುಚಿಯಾಗಿ ಸ್ವೀಕರಿಸಿ ಗೆಲುವಿನಲ್ಲಾಗಲಿ, ಸೋಲಿನಲ್ಲಾಗಲಿ – ಆದರ್ಶದ ಗುರಿಯನ್ನು ಮರೆಯದೆ ಸಾಹಿತ್ಯವನ್ನು ಅವಕ್ಕೆ ಸಾಧನೆಯಾಗಿ ಬಳಸಿಕೊಂಡು ಹೋರಾಡಿದೆವು.

ಆ ಕಾಲ – ಹೋರಾಟದ ಬದುಕು.

ಬದುಕೂ ಹೋರಾಟವಾಗಿತ್ತು – ಆ ಕಾಲದಲ್ಲಿ.

ಕಂಡ ಕಂಡ ಬೆಟ್ಟವನ್ನೆಲ್ಲ ಮೇಲೇರಿದೆವು, ಹತ್ತಿದೆವು, ಎಷ್ಟೋ ಬಾರಿ ಗೆಲುವು ನಮ್ಮದಾಯಿತು, ಬಹಳಷ್ಟು ಬಾರಿ ಮೈಕೈ ನೋವಾಯಿತು. ಆದರೆ ಆ ನೋವು ಮಾತ್ರ ಎಂದೂ ನೋವಾಗಿ ಕಾಣಲಿಲ್ಲ. ಗೆಲುವು ಎಂದೂ ತಲೆತಿರುಗಿಸಲಿಲ್ಲ. ಕ್ರಾಂತಿಯ ಕನಸು - ಎಂದೂ ತನ್ನ ಕಾಂತಿಯನ್ನು ಕಳೆದುಕೊಳ್ಳಲಿಲ್ಲ. ನಿಜಕ್ಕೂ ಎಂಥ ಸುಂದರ ದಿನಗಳು ಅವು. ಆ ಕಾಲದಲ್ಲಿ ನಿಂದನೆಗಳೂ ಎಷ್ಟು ಖುಷಿ ಕೊಡುತ್ತಿದ್ದವು. ಇವತ್ತು ನಾನು ಪಡೆದ ನೂರಾರು ಪ್ರಶಸ್ತಿ ಪತ್ರಗಳು ಖಂಡಿತ ವಾಗಿಯೂ ನನ್ನ ಮನಸ್ಸಿಗೆ ಆ ದಿನ ಅನ್ನಿಸಿಕೊಂಡ ಬೈಗುಳದ ಸುಖಕೊಟ್ಟಿಲ್ಲ.

ಇಂದು ನನಗೆ ಮನೆಯಿದೆ, ಮಡದಿ ಇದ್ದಾಳೆ, ಮಕ್ಕಳಿದ್ದಾರೆ, ಹಾಯಾಗಿ ಮಲಗಲು ಮಂಚವಿದೆ. ಇವತ್ತಿಗಲ್ಲ, ಇನ್ನೊಂದು ತಿಂಗಳಿಗೂ ಜೀವನಕ್ಕೆ ಏನು ಮಾಡಬೇಕು ಎಂದು ಯೋಚನೆ ಮಾಡುವಷ್ಟು ಕಷ್ಟ ಕಾರ್ಪಣ್ಯಗಳಿಲ್ಲ. ಆದರೂ ಆ ಹಳೆಯ ದಿನಗಳಲ್ಲಿ, 'ವಿಶ್ವಕರ್ನಾಟಕ'ದ ಪತ್ರಿಕಾಲಯದಲ್ಲ, 'ಪ್ರಜಾವಾಣಿ'ಯ ಪತ್ರಿಕಾಲ-ಯವಲ್ಲಿ ಪತ್ರಿಕೆಯನ್ನೇ ಹಾಸಿಗೆ ಹೊದ್ದಿಕೆ ಮಾಡಿಕೊಂಡು ಮಲಗಿದ ದಿನಗಳು; ಬೆಂಗಳೂರಿನ ಕೊರೆಯುವ ಚಳಿಯಲ್ಲೂ ತಣ್ಣೀರಿನಲ್ಲಿ ಸ್ನಾನ ಮಾಡಿದ ದಿನಗಳು; ಮಲ್ಲೇಶ್ವರದ ಸಂಪಿಗೆ ರಸ್ತೆಯ ಅಂಗಡಿಯ ಕಟ್ಟೆಯ ಮೇಲೆ ನಿದ್ರೆಮಾಡಿ ಕಳೆದ ರಾತ್ರಿಗಳು; ಕೃಷ್ಣರಾಯರ ಮನೆಯ ವೆರಾಂಡದಲ್ಲಿ ಹರಟೆ ಕೊಚ್ಚುತ್ತಾ ಕಳೆದ ರಾತ್ರಿಗಳು; ಬರೆಯಲು ಮೇಜು ಕುರ್ಚಿಯಿಲ್ಲದೆ ನೆಲವೇ ಕುರ್ಚಿಯಾಗಿ, ಟ್ರಂಕೇ ಮೇಜಾಗಿ, ಸಿಗರೇಟು, ಕಾಫಿಗಳೇ ನಿತ್ಯಾಹಾರವಾಗಿ ಬರೆದ ಆ ದಿನಗಳು; ಮದ್ಯ

ಎಂದರೆ ಹೇಗಿರುತ್ತದೆ ಎಂದೇ ತಿಳಿಯದೆ 'ಇವರು ಹಗಲಿರುಳೂ ಕುಡಿದು ಸೂಳೇಗೇರಿಯಲ್ಲಿ ಸುತ್ತುವ ಜನ' ಎಂದು ಶಹಭಾಸ್‌ಗಿರಿಯನ್ನು ಪಡೆದ ಆ ದಿನಗಳು–ನಿಜವಾಗಿಯೂ ಆ ದಿನಗಳಲ್ಲಿ ನಾನು ಪಟ್ಟಷ್ಟು ಸಂತೋಷವನ್ನು, ನಕ್ಕಷ್ಟು ನಗುವನ್ನು, ಅನುಭವಿಸಿದಷ್ಟು ಉತ್ಸಾಹವನ್ನು, ಬರೆಯಬೇಕು ಎಂಬ ಅತ್ಯುತ್ಕಟ ಉದ್ವೇಗವನ್ನು – ಈ ಸುಖದ ದಿನಗಳು ಎನಿಸಿಕೊಳ್ಳುವ ಕಾಲದಲ್ಲಿ ನಾನು ಕಾಣಲಿಲ್ಲ. ಅದು ಇರುಳೂ ಹೊಳೆವ ಬೆಳಕಿನ ಕಾಲ. ಈಗ–ಹಗಲೂ ಮಬ್ಬು. ಸೋನೆಯ ಮಂಕುಕಾಲ.

ಹೀಗೇಕೆ ?

ಬಹಳಷ್ಟು ವರ್ಷ ಈ ಬಗ್ಗೆ ನಾನು ಯೋಚನೆ ಮಾಡಿರಲಿಲ್ಲ.

ಈಗ–ಸ್ವಾಭಾವಿಕವಾಗಿಯೇ ನನ್ನ ಮೈ ದುರ್ಬಲವಾಗಿದೆ. ಹಲವು ವರ್ಷಗಳ ವ್ಯಾಧಿ ನನ್ನ ಮೈ ಮನಗಳ ಮೇಲೆ ಸಹಜವಾಗಿಯೇ ತನ್ನ ಶಿಥಿಲಗೊಳಿಸುವ ಪರಿಣಾಮ ಬೀರಿದೆ. ಇದೇ ಈ ನೀರಸತನದ ಭಾವನೆಗೆ ಕಾರಣವೇ ?

— ನನ್ನನ್ನೇ ನಾನು ಎಷ್ಟೋ ಬಾರಿ ಪ್ರಶ್ನಿಸಿ ಕೊಂಡಿದ್ದೇನೆ.

ಹಾಗೆಯೇ ನನಗೆ ಬಹಳ ಆಪ್ತರಾಗಿದ್ದ, ಹೃದಯಕ್ಕೆ ಅತ್ಯಂತ ಸನಿಹರಾಗಿದ್ದ, ನೆನಪೂ ನನ್ನಲ್ಲಿ ಜೀವ ಶಕ್ತಿಯನ್ನು ಮೂಡಿಸುತ್ತಿದ್ದ ಅ.ನ.ಕೃ. ಅಂತಹ ಮಿತ್ರರು ನನ್ನ ಪಾಲಿಗೆ ಇಲ್ಲವಾಗಿದ್ದಾರೆ. ಇದೂ ಒಂದು ಕಾರಣವಿರಬಹುದೇ?

ತುಂಬಿದ ಮನೆಯಲ್ಲಿ ಬದುಕಿರುವಾಗಲೂ ಒಂಟಿತನದ ಈ ವಿಷಾದ ಭಾವನೆ ನನ್ನನ್ನೇಕೆ ಕಾಡುತ್ತಿದೆ?

—ಬಹಳ ದಿನ ಈ ವಿಷಾದಛಾಯೆಯ ಬಿರುಗಾಳಿ ನನ್ನ ಹೃದಯವನ್ನು ಕಲಕಿತ್ತು. ಒಮ್ಮೆ ನನ್ನ ಬರಹಗಾರ ಮಿತ್ರರೊಬ್ಬರು 'ಸಾವಿನ ಹೊಸ್ತಿಲ ಮೇಲೆ ನಿಂತಾಗ ಇಂತಹ ಭಾವನೆ ಮೂಡುತ್ತದೆಯೇ?

— ಎಂದು ನೇರವಾಗಿ ಪ್ರಶ್ನೆಯನ್ನು ಕೇಳಿ ನನ್ನನ್ನು ಕೆಣಕಿದ್ದರು.

ಯೋಚಿಸಿದ್ದೆ – ಹೊಯ್ದಾಡಿದ್ದೆ – ಸುಪ್ಪತ್ತಿಗೆಯೂ ಮುಳ್ಳು ಹಾಸಿಗೆಯಾಗಿ ಹೊರಳಾಡಿದ್ದೆ.

ಮಿದುಳು ಕೆಂಡದ ಕೊಂಡವನ್ನು ತುಳಿದಿತ್ತು. ಇದ್ದಕ್ಕಿದ್ದಂತೆಯೇ ಬರಿಗೈಯಾದಂಥ ಈ ಭಾವನೆ ಏಕೆ ?'

ಬರೆಯುವುದರಲ್ಲೂ ಉತ್ಸಾಹ ತಗ್ಗಿತ್ತು. ನಾಲಿಗೆ ಸವಿಯುಣ್ಣುವಾಗಲೂ ಕಹಿಯಾಗಿ, ಹಾಲು ಬೇವಿನ ಹನಿಯಾಗಿ ಬದುಕು ಮತ್ತೊಮ್ಮೆ ಕಾಡುಕುದುರೆಯಾಗುವ ಜಾಡಿನಲ್ಲಿತ್ತು.

ಪ್ರಯತ್ನ ಪಟ್ಟು ನನ್ನನ್ನೇ ನಾನು ಕೇಳಿಕೊಂಡೆ—

"ಹೀಗೇಕಾಯಿತು ?"

ನನ್ನ ಒಳಗನ್ನೇ ನಾನು ತೋಡಿಕೊಂಡು ನೋಡಿದೆ, ಸುತ್ತಲವರನ್ನೂ ನೋಡಿದೆ – ದಿನದಿನವೂ ಕಿವಿಯನ್ನು ಘಟ್ಟಿಸುವ ಈ ಟೊಳ್ಳು ಶಬ್ದ ನನ್ನ ಒಳಗಿನ ಒಳದನಿ ಯೇನೋ ಎಂಬ ಭ್ರಾಂತಿಯೂ ಮೂಡಿತು. ಹೊರಗೆಲ್ಲಿಂದಲಾದರೂ ಬಂದು ಇದು ನನ್ನ ಕಿವಿಯನ್ನು ತಟ್ಟುತ್ತಿದ್ದೆಯೇನೋ; ಕಳೆದ ದಿನಗಳನ್ನೆಲ್ಲ ಮತ್ತೊಮ್ಮೆ ಮೆಲಕು ಹಾಕಿದೆ.

ಆಗ ನನಗನ್ನಿಸಿತು —

ಇದ್ದಕ್ಕಿದ್ದ ಹಾಗೆ ನನ್ನ ಬಾಳು ಜೊಳ್ಳಾಯಿತು– ಎಂದುದಕ್ಕೆ ಕಾರಣ ನನ್ನಲ್ಲಿರಲಿಲ್ಲ.

ಆದರೆ —

ಯಾವ ಮೌಲ್ಯಗಳು ಹೋರಾಟವನ್ನು ಹರ್ಷದ ಹಂದರವಾಗಿಸಿತ್ತೋ ಆ ಮೌಲ್ಯ ಗಳೆಲ್ಲ ಸತ್ತ ಹೆಣಗಳಾಗಿ ಆ ಸ್ಮಶಾನದಲ್ಲಿ ಎಂದೂ ಬೇಯದ ಹೆಣಗಳ ನಂಜು ಹೊಗೆ ಯಲ್ಲಿ ನಾನು ಬದುಕುತ್ತಿದ್ದೆ.

ಕ್ರಾಂತಿಗಾಗಿ ನಾನು ಹೋರಾಡಿದ್ದೆ, ಸ್ವಾತಂತ್ರ್ಯದ ಕನಸು ಕಂಡಿದ್ದೆ. ಅದಕ್ಕಾಗಿ ನನ್ನಿಂದಾದಷ್ಟು ಅಲ್ಪ ತ್ಯಾಗವನ್ನೂ ಮಾಡಿದ್ದೆ.

ಸ್ವಾತಂತ್ರ್ಯ ಬಂದಿತ್ತು —

ಆದರೆ ಯಾವುದಕ್ಕೆ ಸ್ವಾತಂತ್ರ್ಯ ?

ನಾವು ಕನಸು ಕಂಡ ಯಾವ ಮೌಲ್ಯಗಳಿಗೂ ಸ್ವಾತಂತ್ರ್ಯ ಬಂದಿರಲ್ಲಿಲ್ಲ. ಆ ಮೌಲ್ಯ ಗಳನ್ನು ಕೊಂದು, ಅವುಗಳ ಹೆಣವನ್ನು ತಿಂದು ಕೊಬ್ಬೇರಿದ ಪೈಶಾಚಿಕ ಸ್ವೇಚ್ಛೆಗೆ ಮಾತ್ರ ಸ್ವಾತಂತ್ರ್ಯ ಬಂದಿತ್ತು.

ಬಡವರ ಬವಣೆಯ ಬಿಡುಗಡೆಗೆ ನಮ್ಮ ಲೇಖನಿ ಎಂದು ನಾವು ಬರೆದಿದ್ದೆವು. ಭಾಷಣ ಮಾಡಿದ್ದೆವು. ಆದಷ್ಟು ಹೋರಾಡಿದ್ದೆವು.

ಆದರೆ ಈಗ –?

ಅವತ್ತಿನ ಚಿಂದಿಯ ಬಡವ ಇವತ್ತು ಮೂಳೆ ಚಕ್ಕಳದ ಗೂಡು;

ಸ್ವಾತಂತ್ರ್ಯ ಬಂತು—

ಯಾರ ಸ್ವೇಚ್ಛೆಗೋ ಸ್ವಾತಂತ್ರ್ಯ ಬಂತು.

ದುಡಿದವರು ಮಡಿದಿದ್ದರು—

ದುಡಿಯದೆಯೇ ಹಾಯಾಗಿ ಮಲಗಿದ್ದವರ ಮೆರವಣಿಗೆ ಅಡ್ಡ ಪಾಲಕಿಯಲ್ಲಿ ನಡೆ– ದಿತ್ತು ಬೀದಿ ತುಂಬ, ತನ್ನ ಜಯಘೋಷ ತಾನೇ ಮಾಡಿಕೊಳ್ಳುತ್ತಾ.

ಬಡತನಕ್ಕೆ ಮುಕ್ತಿ ಬರಲಿಲ್ಲ–
ಮುಕ್ತಿಗೆ ಬಡತನ ಬಂದಿತ್ತು.
ಸ್ವಾತಂತ್ರ್ಯಕ್ಕೆ ಬೇಡಿ ಬಿದ್ದಿತ್ತು ಸ್ವತಂತ್ರ ಭಾರತದಲ್ಲಿ.
ಕೃತಿಗಿಂತ ಮಾತಿಗೇ ಕಿರೀಟದ ಪರಾಕು.

— ಭಾರತದ ಕಥೆ ಹೀಗೆ, ಇನ್ನು ಕನ್ನಡ ಚಳವಳಿ? ಯಾವ ಕನ್ನಡಕ್ಕಾಗಿ ಮುಧೋಳದಲ್ಲಿ ಅ.ನ.ಕೃ. ಅವರ ಮೇಲೆ ಕಲ್ಲಿನ ಸುರಿಮಳೆಗರೆಯಿತೋ, ಯಾವ ಕನ್ನಡಕ್ಕಾಗಿ ಪೋಲೀಸರ ಲಾಠಿ, ತಮಿಳರು ಎರಚುವ ಮೆಣಸಿನಪುಡಿ, ಅವರ ಬೈಸಿಕಲ್ ಚೈನಿನ ಆಯುಧ – ಎಲ್ಲವೂ ಪ್ರಿಯವಾಗಿತ್ತೋ ಆ ಕನ್ನಡ ಚಳವಳಿ ಇವತ್ತು – ಮುಂದಿನ ಲೂಟಿಗಾಗಿ ಮೀಸಲು.

ಜನರನ್ನು ಲೂಟಿ ಮಾಡಲು, ಮುಂಬರಿಗೆ ಟೋಪಿ ಹಾಕಲು, ಅಷ್ಟೇಕೆ ಭಿಕ್ಷೆ ಬೇಡುವುದಕ್ಕೆ ಮತ್ತೊಂದು ಹೆಸರು ಕನ್ನಡ ಚಳವಳಿ.

ಯಾವ ಮೌಲ್ಯಗಳಿಗಾಗಿ ನಾವು ಬದುಕಬೇಕು ಎಂದು ಬಯಸಿದ್ದೆವೋ ಆ ಮೌಲ್ಯಗಳಿಗೆ ಬೀದಿಯಲ್ಲಿ ವಸ್ತ್ರಾಪಹರಣವಾಗಿತ್ತು.

ಇದನ್ನು ಕಂಡಾಗ ಅನಿಸಿತು —

“ಬದುಕಬೇಕೇಕೆ? – ಎಲ್ಲವೂ ವಿಫಲ !”

ಎಲ್ಲಕ್ಕಿಂತ ಹೆಚ್ಚಾಗಿ ಮನಸ್ಸಿನ ಮೇಲೆ ಅತ್ಯಂತ ಆಘಾತವನ್ನುಂಟು ಮಾಡಿದ್ದು ಈಗ ನಡೆಯುತ್ತಿರುವ ಸ್ನೇಹವೆಂಬ ಹೆಸರಿನ ಕೊಡ – ಕೊಳ್ಳುವ ವ್ಯಾಪಾರೀಮನೋಭಾವ. ಸಾಹಿತ್ಯದಲ್ಲೂ ಇದೇ – ಒಂದು ಲೇಖನ ಬರೆಯಲೂ ಅವರಿವರ ಮರ್ಜಿ ಕಾದು, ಶಹಭಾಸ್‌ಗಿರಿಗೆ ಮೊದಲೇ ದಾರಿ ಸಾಫ್ ಮಾಡಿಕೊಂಡು ಆ ಮೇಲೆ ಕಾಗದದ ಮೇಲೆ ಲೇಖನಿ ಇಡುವ ಭವ್ಯ ವಿಚಾರ ಸ್ವಾತಂತ್ರ್ಯ. ಇಂಥ ಕಾಲದಲ್ಲಿ ಏಕೆ ಬರೆಯಬೇಕು. ?

“ಬರೆದು ಬದುಕಬೇಕಾದರೂ ಯಾಕೆ ?”

ಬಹಳ ದಿನಗಳ ಕಾಲ ರಣ ಪಿಶಾಚಿಯಂತೆ ಕಾಡಿತು – ಈ ಪ್ರಶ್ನೆ.

ಈ ಪ್ರಶ್ನೆಯ ಜೊತೆಗೆ ದ್ವಿತೀಯ ಮಹಾ ಸಮರದ ಕಾಲದಲ್ಲಿ ಹಿಟ್ಲರ್ ನಾಜಿಗಳ ಮೇಲೆ ನಡೆಸಿದ ಮಾನವತೆಯ ಕೊಲೆಯನ್ನು ಕಂಡು ಹೇಸಿ –

“ನಾಳೆಯಾದರೂ ಒಳ್ಳೆಯ ಹಗಲಾಗಬಹುದು”

ಎಂದು ಹೇಳಿ ಆತ್ಮಹತ್ಯೆ ಮಾಡಿಕೊಂಡ ನೋಬಲ್ ಪ್ರಶಸ್ತಿ ವಿಜೇತ ಸ್ಟಿಫನ್ ಜ್ವೈಗ್ ನೆನಪು ಹಗಲಿರುಳೂ ಕಾಡಿತು. ದೇಹದ ವ್ಯಾಧಿಗಿಂತ ಹೆಚ್ಚಾಗಿ ಮಾನವೀಯ ಮೌಲ್ಯಗಳಿಗೆ ಬಡಿದ ರೋಗ ನನ್ನ ಮನಸ್ಸನ್ನು ಕಾಡಿತು.

ಜಾತೀಯತೆಯ ಭೂತ – ಸಾಹಿತ್ಯ ರಂಗದಲ್ಲೂ ತನ್ನ ಕತ್ತು ಹಿಸುಕುವ ಕರಾಳ ಹಸ್ತವನ್ನು ಚಾಚಿದ್ದನ್ನು ಕಂಡು ‘ಬದುಕಿಗಿಂತ ಸಾವು ಸುಂದರ’ ಎನಿಸಿತು; ಮೈಗಿಂತ ಹೆಚ್ಚಾಗಿ ಮನಸ್ಸಿನ ಚೈತನ್ಯ ಉಡುಗಿತು ; ಬದುಕಿಗಿಂತ ಸಾವು ಹೆಚ್ಚು ಪ್ರಿಯವಾಯಿತು “ಎಷ್ಟು ಸುಂದರ – ಸಾಗರದಲ್ಲಿ ಕಾಣುವ ಸೂರ್ಯಾಸ್ತ.”

ಮನಸ್ಸು ಈ ಹೊಯ್ದಾಟದ ಶರಪಂಜರದಲ್ಲಿದ್ದಾಗ, ಆಸ್ಪತ್ರೆಯಲ್ಲಿ ವ್ಯಾಧಿಗ್ರಸ್ತನಾಗಿ ಮಲಗಿದ್ದಾಗ – ಯಾವುದನ್ನು ನಾನು ಕಗ್ಗ ಎಂದು ಜರೆದಿದ್ದೆನೋ, ಹಾದರದ

ಕತೆ ಎಂದು ಪರಿಚಯಿಸಿದ್ದೆನೋ ಆ ರಾಮಾಯಣ, ಮಹಾ ಭಾರತ, ಪುರಾಣಗಳನ್ನು ಓದಿದೆ.

ಹಿಂದೊಮ್ಮೆ ನನ್ನಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳು ಉಪನಿಷತ್ತುಗಳ ಬಗ್ಗೆ ಮೂಡಿಸಿದ ಆಸಕ್ತಿ ಮರುಕಳಿಸಿತು. ಜೊತೆ ಜೊತೆಗೆ ಅಲೆಕ್ಸಿಸ್ ಕ್ಯಾರಲ್, ಯೂಂಗ್ ಮೊದಲಾದ ಆಧುನಿಕ ವಿಜ್ಞಾನಿಗಳ ಗ್ರಂಥಗಳನ್ನೂ ಓದಿದೆ.

ಆಗ ನನಗನ್ನಿಸಿತು – "ಈ ಮೌಲ್ಯಗಳ ಕೊಲೆ ನನ್ನ ಕಾಲಕ್ಕೇ ವಿಶಿಷ್ಟವಾದದ್ದೇನೂ ಅಲ್ಲ. ಎಲ್ಲ ಕಾಲದಲ್ಲೂ ಇದು ನಡೆದದ್ದೇ. ಗಾಂಧಿಗೆ ಗುಂಡು ಹಾಕಿದಂಥ ಜನ–ಏಸುವಿನ ಕಾಲದಲ್ಲೂ ಶಿಲುಬೆಗೆ ಜಡಿಯಲು ಮೊಳೆ, ಸುತ್ತಿಗೆಯನ್ನು ಹಿಡಿದಿದ್ದವರೇ. ಸಾಕ್ರೆಟಿಸ್‌ನಿಗೆ ನಗುನಗುತ್ತಾ ವಿಷ ಕುಡಿಸಿದ ಆಕಾಲದ ಮಹಾತ್ಮರೇ ಈ ಕಾಲದಲ್ಲೂ ಇದ್ದಾರೆ. ಕಾಲ ಬೇರೆ, ದೇಶ ಬೇರೆ. ಹೆಸರು ಬೇರೆ - ಇಷ್ಟೇ. ಈ ಮೌಲ್ಯಗಳ ವಧೆ – ಇದು ಕಾಲಕಾಲಕ್ಕೂ ನಡೆದದ್ದೇ. ಮೌಲ್ಯಗಳ ರಕ್ಷಣೆಗಾಗಿ ಹೋರಾಟವೂ ಅಷ್ಟೇ; ಅದೂ ನಡೆದದ್ದೇ. ಎರಡೂ ಜೊತೆ ಜೊತೆಗೆ ಸಾಗಲೇಬೇಕು. ಸಾವಿನ ಮೆರವಣಿಗೆ ನಡೆಯುತ್ತಲೇ ಇರಬೇಕು; ಅದರ ನಡುವೆ ಹೊಸ ಚಿಗುರು ಮೊಳೆಯುತ್ತಲೇ ಇರಬೇಕು - ಇದೇ ಜೀವನ."

ಹಾಗೆಯೇ – "ಎಲ್ಲಕ್ಕಿಂತ ಹೆಚ್ಚಾಗಿ ಈ ಹಾಲಾಹಲದ ಕಡೆತವ ಮಧ್ಯದಲ್ಲಿಯೂ ನಮ್ಮ ಚಿತ್ತಸ್ಥಿರತೆಯನ್ನು, ನಾವು ನಂಬಿದ ಮೌಲ್ಯಗಳ ಬಗ್ಗೆ ಶ್ರದ್ಧೆಯನ್ನು ಉಳಿಸಿಕೊಂಡು ಬದುಕುವುದೇ ಜೀವನದ ನಿಜವಾದ ಅರ್ಥ"

— ಎನ್ನುವ ಸತ್ಯವೂ ಮನವರಿಕೆಯಾಯಿತು.

ಈ ಹೊತ್ತಿನಲ್ಲಿಯೇ ಹೋರಾಟದ ಸಮಯದಲ್ಲಿ ಅ.ನ.ಕೃ. ಬೆನ್ನೆಲುಬಾಗಿ ನಿಂತಂತೆ, ಇಂದು ಬಾಳು ಕುಸಿಯುತ್ತಿರುವ ಕಾಲದಲ್ಲಿ ಶೃಂಗೇರಿಯ ಶ್ರೀ ಶ್ರೀಗಳವರು ಅಭಯಹಸ್ತವಾಗಿ ಕಂಡರು.

ಬದುಕಿಗೇ ಒಂದು ಅರ್ಥ ಕಾಣಿಸಿ –

'ಬದುಕಿಗೆ ಬದುಕೇ ಬೆಲೆ - ಗೆಲುವು, ಸೋಲು ಎರಡೂ ಅಲ್ಲ,'

— ಎನ್ನುವ ನಿತ್ಯ ಸತ್ಯ ಗೋಚರವಾಯಿತು, ಮತ್ತೆ ಬದುಕು ಸುಂದರವಾಯಿತು; ಶಾಂತವಾಯಿತು.

— ಈ ಭಾವನೆ ಮೂಡಿದಾಗ ಮತ್ತೆ ಅಂದು ನಾನು ಪಾಜಕಕ್ಷೇತ್ರದಲ್ಲಿ ಕಂಡ ಶ್ರೀದುರ್ಗಾ ಮಂದಿರದ ದೃಶ್ಯ ನೆನಪಾಯಿತು.

ಧರ್ಮಕ್ಕೆ ನಾನು ಬೆನ್ನು ತಿರುಗಿಸಿ ನಿಂತಷ್ಟು ದಿವಸವೂ –

ನನ್ನ ಬದುಕು - ಹೋರಾಟದ್ದಾಗಿತ್ತು.

ಧರ್ಮ ನನ್ನ ಬೆನ್ನೆಲುಬಾಗಿ ನಿಂತಾಗ -

ಬದುಕು - ಶಾಂತವಾಗಿ ಕಂಡಿತು.

ಆದರೆ ಎರಡೂ ಅಷ್ಟೇ ಸುಂದರ.

ಈಗ ನನಗನ್ನಿಸುತ್ತಿದೆ –

'ನಾನು ಹಾಯಾಗಿ ಉಸಿರಾಡಬಹುದು.'

ಬರೆಹ

ಇಣುಕುನೋಟ

— ಎಚ್. ಜೆ. ಲಕ್ಕಪ್ಪಗೌಡ

ಅ.ನ.ಕೃ. ಗರಡಿಯಲ್ಲೇ ಸಾಮುಮಾಡಿ ಅಧಿಕ ಜನಪ್ರಿಯತೆಯನ್ನು ಗಳಿಸಿದ ಮತ್ತೊಬ್ಬ ಪ್ರಸಿದ್ಧ ಕಾದಂಬರಿಕಾರರೆಂದರೆ ತ.ರಾ.ಸು ಅವರು. ಆದರೆ ಅವರು ಬಹುಬೇಗ ಗುರುವನ್ನು ಹಿಂದೆ ಹಾಕಿ ಮುಂಚೆನಂತೆ ಮುನ್ನಡೆದರು. ಮೊದ ಮೊದಲಿನ ಕಾದಂಬರಿಗಳಲ್ಲಿ ಅಸಹಜ ಆದರ್ಶವಾದ ಸತ್ವರಹಿತ ಸುಧಾರಣೋತ್ಸಾಹ ಅತಿಯಾದ ಭಾವನಾವಶತೆಗಳ ಅ.ನ.ಕೃ. ಅಚ್ಚು ಕಣ್ಣಿಗೆ ಬಡಿಯುವಂತೆ ಕಾಣಿಸಿಕೊಳ್ಳುತ್ತದೆಯಾದರೂ ಕಾಲಸರಿದಂತೆ ತಮ್ಮದೇ ಆದ ವ್ಯಕ್ತಿತ್ವವನ್ನೂ ಶೈಲಿಯನ್ನೂ ನಿರೂಪಣಾ ನಾವಿನ್ಯತೆಯನ್ನೂ ಅವರು ರೂಪಿಸಿಕೊಂಡರು. ಕಾದಂಬರಿ ಪ್ರಪಂಚದ ನವದಿಗಂತಗಳ ಅನ್ವೇಷಣೆ ಮಾಡಿದರು. ಸಮಕಾಲೀನ ಸಮಾಜದ ವಿವಿಧ ಮುಖಗಳ ಅನಾವರಣ ಮಾಡಿದ್ದಲ್ಲದೆ ಪುರಾಣ ಇತಿಹಾಸಗಳ ಆಳಕ್ಕೂ ಇಳಿದು ಶ್ರದ್ಧೆಯಿಂದ ಅಭ್ಯಸಿಸಿ ಅವುಗಳನ್ನು ತಮ್ಮ ಲೇಖನಿಯಿಂದ ಪುನಃ ಸೃಷ್ಟಿಸಿದರು. ಪ್ರಯೋಗ ಪ್ರಿಯತೆ ತ.ರಾ.ಸು. ಅವರ ರಕ್ತಗುಣ. ಅವರ ಕೃತಿಗಳಲ್ಲಿ ವಿಪುಲವಾದ ವಸ್ತು ವೈವಿಧ್ಯವಿರುವಂತೆಯೇ ತಂತ್ರವೈವಿಧ್ಯವೂ ಇದೆ. ಓದುಗರನ್ನು ಉಸಿರುಗಟ್ಟಿಸುವಂಥ ಓಟದಲ್ಲಿ ಕಥೆ ಹೇಳುವ ಕಲೆ ಅವರಿಗೆ ಸಿದ್ಧಿಸಿದೆ. ಹೊಸಗನ್ನಡದ ಗದ್ಯಶಿಲ್ಪಿಗಳಲ್ಲಿ ತ.ರಾ.ಸು. ಒಬ್ಬರು. ಇದು ತ.ರಾ.ಸು. ಅವರದೇ ಬರೆವಣಿಗೆಯೆಂದು ಖಚಿತವಾಗಿ ಗುರುತಿಸಲು ಸಾಧ್ಯವಾಗುವಷ್ಟು ಮಟ್ಟಿಗೆ ಅವರ ವಿಶಿಷ್ಟತೆಯಿದೆ '† ಅವರ' ಲೇಖನಿ ಹೆಚ್ಚು ಪ್ರಖರ. ಕುಂಚದ ಬಣ್ಣದ ಹೆಚ್ಚಳ. ನಿರೂಪಣೆ ಹೆಚ್ಚು ದಾರುಣ. ಹೇಳಬೇಕಾದುದನ್ನು ಎಷ್ಟು ಬಗೆಯಲ್ಲಿ ಒತ್ತಿ ಹೇಳಿದರೂ ಅವರಿಗೆ ತೃಪ್ತಿಯಿಲ್ಲ. ರಸಾತಳಕ್ಕೆ ಜಿಮ್ಮುವ ಸೀಸದ ಗುಂಡಿನಂತೆ ಮುಂದೆ ಸಾಗಿದಂತೆಲ್ಲ ಅವರ ಲೇಖನಿಗೆ ಹೆಚ್ಚಿನ ವೇಗ ಉದ್ವೇಗ. *ಕೆಲವೇಳೆ ಇದು ಅವಗುಣವೂ ಆಗುತ್ತದೆ. ಸನ್ನಿವೇಶಗಳನ್ನು ಸೋಜ್ವಲವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲ ಶಕ್ತಿ ಅವರಿಗಿದೆ, ಅಂತೆಯೇ ಪಾತ್ರಾಂತರಂಗವನ್ನು ಪ್ರವೇಶಿಸಿ ಅಲ್ಲಿನ ಸೂಕ್ಷ್ಮತಮ ಸಂವೇದನೆಗಳನ್ನು ಅರಿತು ಅರಗಿಸಿಕೊಂಡು ಅವುಗಳನ್ನು ಮರಳಿ ವಿವರ ವಿವರವಾಗಿ ಚಿತ್ರಿಸಬಲ್ಲ ಅಭಿವ್ಯಕ್ತಿಕೌಶಲವೂ ಇದೆ. ಬಿರುಗಾಳಿಯ ವೇಗದಲ್ಲಿ ಓಡುವ ಓಜಸ್ವೀ ಶೈಲಿ. ಹರಿತವಾದ ಮೊನಚಾದ ಸಂಭಾಷಣೆ. ಸಹಜ ಸಜೀವ ಪರಿಸರ ಸೃಷ್ಟಿ. ಸಮರ್ಥ ಪಾತ್ರಕಲ್ಪನೆ ಮತ್ತು ಅಭ್ಯಾಸಪೂರ್ಣವಾದ ವೈಚಾರಿಕತೆ – ಇವು ತ.ರಾ.ಸು. ಕಾದಂಬರಿಗಳ ಪ್ರಧಾನ ಲಕ್ಷಣಗಳಾಗಿವೆ.

---

† ಡಾ. ಹಾ. ಮಾ. ನಾಯಕ 'ಐದು ದಶಕದ ಕನ್ನಡ ಸಾಹಿತ್ಯ' ಸಮೀಕ್ಷೆ (ಪುಟ ೯೩)

* ಎಚ್ಚೆಸ್ಕೆ – 'ಪ್ರತಿಭಾ ಸಂದರ್ಶನ' ಮಯೂರ ಅಕ್ಟೋಬರ್ 1968. (ಪುಟ ೧೫)

ಸುಮಾರು ನಲವತ್ತಕ್ಕಿಂತ ಹೆಚ್ಚು ಕಾದಂಬರಿಗಳನ್ನು ತ.ರಾ.ಸು. ಬರೆದಿದ್ದಾರೆ. ಅವುಗಳಲ್ಲಿ ಕೆಲವಾದರೂ ಒಂದಲ್ಲ ಒಂದು ರೀತಿಯಿಂದ ಗಮನ ಸೆಳೆಯುವ ಕೃತಿಗಳಾಗಿವೆ.

ಹೆಣ್ಣಿನ ಸ್ವಾತಂತ್ರ್ಯದ ಬಯಕೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ 'ಬಿಡುಗಡೆಯ ಹಾಡು" ಒಂದು ಉತ್ತಮ ಕೃತಿ. ಅದರ ತಂತ್ರ ಮೆಚ್ಚುವಂಥದು. "ಮಸಣದ ಹೂವು" ವೇಶ್ಯಾ ಸಮಸ್ಯೆಯ ಬಹು ಮುಖತೆಯನ್ನು ತುಂಬ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಅ.ನ.ಕೃ ಅವರು ಹತ್ತು ಕಾದಂಬರಿಗಳಲ್ಲಿ ಹೇಳಿದ್ದನ್ನು ತ.ರಾ.ಸು. ಒಂದು ಕೃತಿಯಲ್ಲಿ ಹೇಳಿದ್ದಾರೆ. ಅಲ್ಲಿಗಿಂತ ಆಳವೂ, ದಾರುಣವೂ, ಸೂಕ್ಷ್ಮವೂ ಆದ ಹೃದಯವಂತ ಚಿತ್ರಣವಿಲ್ಲಿದೆ. ಅಥವಾ ಬಾಲಕನೊಬ್ಬನ ಕರುಣಾ ಜನಕ ಕಥೆ "ಪುರುಷಾವತಾರ". ನಮ್ಮ ಇಂದಿನ ರಾಜಕೀಯರಂಗದಲ್ಲಿ ತುಂಬಿರುವ ಪರ-ಪೀಡಕ ಸ್ವಾರ್ಥಿ ಪ್ರಘಾರಿಗಳ ಕಾರ್ಯ ರಂಗದ ವಿಷವರ್ತುಲವನ್ನು ಪರಿಚಯಿಸುವ ಶಕ್ತ ಕೃತಿ "ಕಾರ್ಕೋಟಕ". ನಾಗರಿಕ ಸಮಾಜದಲ್ಲಿ ಭದ್ರವಾಗಿ ಬೇರೂರುತ್ತಿರುವ ಅತಿ ಸಂತಾನ ಸಮಸ್ಯೆ, ಪ್ರೇಮದ ಫಲವಾದ ಮಕ್ಕಳನ್ನು ಪಡೆಯದೆಯೇ ಲೈಂಗಿಕ ಭೋಗ ತೃಷೆಯನ್ನು ತಣಿಸಿಕೊಳ್ಳುವ ಆಧುನಿಕ ಮನೋವೃತ್ತಿ ಇವುಗಳ ವಿವಿಧ ಮುಖ ಪರಿಣಾಮಗಳನ್ನು ಸಮರ್ಥಕವಾಗಿ ಕಲಾತ್ಮಕವಾಗಿ ವಿವೇಚಿಸುವ ಸಾರ್ಥಕ ಕೃತಿ "ಬೇಡದ ಮಗು". "ಹಂಸಗೀತೆ" ಸಂಗೀತಗಾರನೊಬ್ಬನ ಬಾಳಿನ ಹಂದರದ ಮೇಲೆ ಮತ್ತು ಇಂದಿನ ಸಂಸ್ಕೃತಿಯನ್ನು ವಿಶಿಷ್ಟ ತಂತ್ರದಲ್ಲಿ ಕುಶಲವಾಗಿ ಮನೋಜ್ಞವಾಗಿ ಚಿತ್ರಿಸುತ್ತದೆ. ಕೃತಿಯಲ್ಲಿ ಬಂದಿರುವ ಚಿತ್ರದುರ್ಗದ ಪರಿಸರ ತುಂಬಾ ಸಹಜವಾಗಿದೆ. ಜೀವಂತವಾಗಿದೆ. ನೆಮ್ಮದಿಯ ನೆಲೆಯಾಗಿ ಭಕ್ತಿ ಗೌರವಗಳ ಬೀಡಾಗಿ ಅತಿಥಿಗಳ ಆಶ್ರಯವಾಗಿ ಇದ್ದ ಕುಟುಂಬವೊಂದು ಸ್ವಾರ್ಥಿಗಳೂ ವಿಘ್ನ ಸಂತೋಷಿಗಳೂ ಕಿಡಿಗೇಡಿಗಳೂ ಆದ ಅನ್ಯರ ಪ್ರವೇಶದಿಂದ ಅಂತಃಕಲಹದ ಅಗ್ನಿಕುಂಡವಾಗಿ ದಹಿಸಿಹೋದ ಕರುಳು ಹಿಂಡುವ ಪರಮ ದಾರುಣ ಚಿತ್ರ "ಚಂದವಳ್ಳಿಯ ತೋಟ". ನೈಜವೂ ಸತ್ವ ಪೂರ್ಣವೂ ಆದ ಗ್ರಾಮ ಪರಿಸರ, ಹರಿತವೂ ಅರ್ಥಪೂರ್ಣವೂ ಭೂವಾಸನಾಯುಕ್ತವೂ ಆದ ಸಂಭಾಷಣೆ, ಪ್ರಮಾಣ ಬದ್ಧವಾಗಿ ಮೂಡಿನಿಂತಿರುವ ಪಾತ್ರಗಳು; ಸಂಯಮ ಪೂರ್ಣವಾದ ನಿರೂಪಣೆ ಇವನ್ನೊಂದು ಉತ್ಕೃಷ್ಟ ಕಾದಂಬರಿಯನ್ನಾಗಿ ಮಾಡಿದೆ. ದೈವನಿಷ್ಠೆ, ವ್ಯಕ್ತಿ ನಿಷ್ಠೆ, ಸಮಾಜ ನಿಷ್ಠೆ ಎಂಬ ಮೂರು ಮುಖಗಳನ್ನು ಪ್ರತಿ ನಿಧಿಸುವ ಕಾದಂಬರಿಗಳು "ಮೊದಲ ನೋಟ", "ಗೃಹ ಪ್ರವೇಶ" ಮತ್ತು "ರಾಜೇಶ್ವರಿ". 'ಕೇದಿಗೆ ವನ' ಮತ್ತು "ಕಣ್ಣು ತೆರೆಯಿತು" ವೈದ್ಯಕೀಯ ಜೀವನದ ಚೌಕಟ್ಟಿನಲ್ಲಿ ಪ್ರೇಮ-ಕಾಮ, ಸೇವೆ - ಸ್ವಾರ್ಥ, ರಾಜಕೀಯಗಳ ಸಂಘರ್ಷಣೆಯನ್ನು ಕುರಿತ ಆಕರ್ಷಕ ಕೃತಿಗಳು. "ನಾಗರಹಾವು" "ಎರಡು ಹೆಣ್ಣು, ಒಂದು ಗಂಡು" ಮತ್ತು "ಸರ್ಪ ಮತ್ಸರ" ತಮ್ಮ ಭಾವೋತ್ಕಟತೆಯಿಂದ ರೋಚಕ ಶೈಲಿಯಿಂದ ರಮ್ಯವಾಗಿವೆ. ಆದರೆ ಸಂಯಮ ಮತ್ತು ವೈಚಾರಿಕತೆಗಳು ಜೊತೆಗೂಡಿದ್ದಲ್ಲಿ ಇವು ಉತ್ತಮ ಮನೋವಿಶ್ಲೇಷಣಾತ್ಮಕ ಕಾದಂಬರಿಗಳಾಗುವ ಸಾಧ್ಯತೆ

ಯಿತ್ತು. ಧರ್ಮ ನಮಗೆ ಆಪದ್ಧರ್ಮವಾಗಿ ಸ್ವಾರ್ಥಸಾಧನವಾಗಿದ್ದು ಅದರ ಪರಿಣಾಮ ಹೇಗೆ ಮನುಷ್ಯನನ್ನು ದುರ್ಬಲ ಗೊಳಿಸುತ್ತದೆ ಎಂಬುದನ್ನು ಕುರಿತ ಕೃತಿ "ಮರಳು ಸೇತುವೆ". ಸಹಜತೆ ಮತ್ತು ಸರಳತೆ ಇದರ ಜೀವಾಳ. ಮಧ್ಯಮವರ್ಗದ ಸಮಾಜದ ಹೆಣ್ಣೊಬ್ಬಳ ಸುಪ್ತ ಆಸೆ ಅಭೀಷ್ಟಗಳ ಸುತ್ತ ಹೆಣೆಯಲಾದ ಪರಿಣಾಮ ಕಾರೀ ಕೃತಿ "ಪಂಜರದ ಪಕ್ಷಿ". ಪ್ರಜ್ಞಾ ಪ್ರವಾಹದ ನೂತನ ತಂತ್ರವನ್ನು ತುಂಬ ಸಮರ್ಥವಾಗಿ ಬಳಸಿಕೊಂಡು ವೈಚಾರಿಕ ಹಿನ್ನೆಲೆಯಲ್ಲಿ ಸಮಸ್ಯೆಯನ್ನು ಪದರ ಪದರವಾಗಿ ಬಿಡಿಸಿ ನೋಡುವ ಈ ಪ್ರಯತ್ನ ನಿಜಕ್ಕೂ ಅಭಿನಂದನೀಯ. 'ಶಿವ ದೈತ್ಯ' ಒಂದು ಉತ್ತಮ ಪ್ರಯತ್ನ. ಮೆಚ್ಚಿ ಬಂದ ಹೆಣ್ಣು ಮನೆಗೆ ಮಂಗಳ ಲಕ್ಷ್ಮಿಯಾಗುವ ಬದಲು ಮಹಾ ಮಾರಿಯಾಗಿ ಕುಟುಂಬದ ವಿನಾಶಕ್ಕೆ ಕಾರಣವಾದ ದುರಂತ ಸಾಂಸಾರಿಕ ಕೃತಿ "ಶುಕ್ರವಾರದ ಲಕ್ಷ್ಮಿ". ಸಹಜವಾಗಿಯೇ ಬಡತನದ ರಾಕ್ಷಸ ದವಡೆಗೆ ಸಿಕ್ಕಿ ಜೀವನ ಇಡೀ ದುಃಖ ಸಂಕಷ್ಟಗಳ ಕೆಂಡದುಂಡೆಗಳನ್ನೇ ನುಂಗಿದ ಪ್ರಥಮಿಕ ಶಾಲಾ ಉಪಾಧ್ಯಾಯನೊಬ್ಬನ ಕುಟುಂಬದ ಹೃದಯ ವಿದ್ರಾವಕ ಚಿತ್ರಣ "ಜಿಂಕೆಯ ಬಲೆ" ಭಾವೋದ್ವೇಗಕ್ಕೆ ಉಪನ್ಯಾಸಕ್ಕೆ ಸುಲಭವಾಗಿ ಎಡೆಗೊಡಬಹುದಾದ ವಸ್ತುವಾದರೂ ತುಂಬಾ ಸಹಜತೆಯಿಂದ ಸಮರ್ಥ ನಿರೂಪಣೆಯಿಂದ ಮನಸೆಳೆಯುತ್ತಿದೆ. ಪ್ರಕೃತಿ ಸಹಜವಾದ ಅದಮ್ಯ ಬಯಕೆ ಮತ್ತು ಪರಿಣಾಮ ಭೀತಿ ಇವುಗಳ ನಡುವೆ ಸಿಕ್ಕಿದ ಆಧುನಿಕ ನಾಗರಿಕ ಯುವಕನೊಬ್ಬನ ಸಮಸ್ಯಾಗ್ರಸ್ತ ಬಾಳಿನ ಸುತ್ತ ನಿರ್ಮಿಸಲಾದ ಕೃತಿಗಳು "ಆಕಸ್ಮಿಕ" ಮತ್ತು "ಅಪರಾಧಿ". ಮಹಾಭಾರತದ ಘಟನೆಯೊಂದನ್ನು ಸಾಂಕೇತಿಕವಾಗಿಟ್ಟುಕೊಂಡು ಮನುಷ್ಯನ ಬಾಳಿನ ಬಹು ಪ್ರಬಲವೃತ್ತಿಯಾದ ಲೈಂಗಿಕತೆಯನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಬರೆದ ಕೃತಿ "ಯಕ್ಷಪ್ರಶ್ನೆ". ಕೃತಿಯ ಸೂಕ್ಷ್ಮವೂ ಹರಿತವೂ ಧ್ವನಿ ಪೂರ್ಣವೂ ಆದ ಶೈಲಿ ತುಂಬ ಮೆಚ್ಚುವಂಥದು. ಮತೋದ್ಧಾರದ ಹೆಸರಿನಲ್ಲಿ ಸ್ವಾರ್ಥದ ಜೊಳ್ಳು ಬೆಳೆಸುವ ಜನರ ಆಚಾರ ವಿಚಾರಗಳಿರುವ ವಿಷಮ ದ್ವಂದ್ವವನ್ನು ಬಣ್ಣಿಸುತ್ತದೆ. "ಎಲ್ಲಾ ಅವನ ಹೆಸರಿನಲ್ಲಿ" ಗ್ರಾಮೋದ್ಧಾರದ ಆದರ್ಶವನ್ನು ನಿಷ್ಠೆಯಿಂದ ಗೆದ್ದು ತನ್ನ ಉದ್ದೇಶದಲ್ಲಿ ಸಫಲವಾದ ಸ್ವಾರಸ್ಯಕಾರೀ ಚಿತ್ರಣ "ಮಾರ್ಗದರ್ಶಿ", "ಭಾಗ್ಯ ಶಿಲ್ಪಿ ಮತ್ತು "ಬೆಳಕಿನ ಬೀದಿ" ಗಳಲ್ಲಿದೆ. ಗ್ರಾಮಜೀವನದ ಬಹು ಮುಖಗಳನ್ನು ತುಂಬ ಸಹಜವಾಗಿ ರಸವತ್ತಾಗಿ ಶಕ್ತಿವತ್ತಾಗಿ ಈ ಕಾದಂಬರಿ ಮಾಲೆ ಬಣ್ಣಿಸುತ್ತದೆ. ಆದರೆ ತ.ರಾ.ಸು. ಕುತೂಹಲ ಕೆರಳುವ ಮನಂಬುಗುವ ಭಾವೋತ್ಕಟತೆಯಿಂದ ಹೇಳುತ್ತಿದ್ದರೂ ಅದನ್ನು ತುಂಡರಿಸಿ ಬೇರೆ ಬೇರೆ ಭಾಗವಾಗಿ ಮಾಡಿ ಹೇಳುವ ಅಪಾಯಕಾರೀ ಚಟವನ್ನೇ ಬೆಳೆಸಿಕೊಂಡಿರುವುದು ರಸಭಂಗಕ್ಕೆ ಒಪ್ಪಂದದ ಪರಿಣಾಮ ಸಾಹಿತ್ಯಕ್ಕೆ ಕಾರಣವಾಗುತ್ತದೆ. 'ಚಕ್ರತೀರ್ಥ' "ಮುಂಜಾವಿನಿಂದ ಮುಂಜಾವು" ಮತ್ತು 'ಚಂದನದ ಗೊಂಬೆ' ಸ್ಮರಣೀಯ ಕೃತಿಗಳು. "ಚಂದನದ ಗೊಂಬೆ" ಯಂತೂ ಸಹಜ ತಂತ್ರದ ಸೊಗಸಿನಿಂದ ಸಂಕೀರ್ಣತೆಯ ಸತ್ವದಿಂದ. ಸಂವಿಧಾನದ ಅರ್ಥ

ಪಂತಿಕೆಯಿಂದ ಸಂಯಮಪೂರ್ಣವೂ ಗಂಭೀರವೂ ಆದ ನಿರೂಪಣೆಯಿಂದ ಮಹತ್ವದ್ದಾಗಿದೆ.

ಕನ್ನಡದ ಹೆಮ್ಮೆಯ ದೊರೆ ನೃಪತುಂಗನನ್ನು ಮತ್ತು ಬೆಳ್ಗೊಳದ ಜಗದ್ಭವ್ಯ ಗೊಮ್ಮಟನನ್ನು ನಿರ್ಮಾಣ ಮಾಡಿಸಿದ ಚಾವುಂಡರಾಯನನ್ನು ಕುರಿತು ಕಾದಂಬರಿಗಳು ತ.ರಾ.ಸು. ಅವರ ಮೌಲಿಕ ಐತಿಹಾಸಿಕ ಕಾದಂಬರಿಗಳಾಗಿವೆ. ಇತಿಹಾಸ ಜೀವದುಂಬಿ ಎದುರು ನಿಲ್ಲುತ್ತದೆ. ಐತಿಹಾಸಿಕ ಕಾದಂಬರಿಗೇ ಹೇಳಿ ಮಾಡಿಸಿದಂತಿರುವ ಓಜೋಪೂರ್ಣವೂ ಅದ್ಭುತ ಶಕ್ತಿ ಸಂಪನ್ನವೂ, ಅತಿಶಯೋಕ್ತಿ ಸಮನ್ವಿತವೂ ನಾಟಕೀಯವೂ ಮೊನಚೂ ಆದ ಅವರ ಶೈಲಿಯಿಂದ ಮೂಡಿಬಂದಿರುವ ಚಿತ್ರದುರ್ಗ ಮತ್ತು ಹೊಯ್ಸಳ ರಾಜ್ಯಗಳ ಇತಿಹಾಸವನ್ನು ಕುರಿತ ಕಾದಂಬರಿಗಳು ತುಂಬ ಜನಪ್ರಿಯತೆಯನ್ನು ಪಡೆದಿವೆ. "ಬೆಳಕು ತಂದ ಬಾಲಕ" ನಚಿಕೇತನನ್ನು ಕುರಿತು ಒಂದು ಕಲಾತ್ಮಕ ಪೌರಾಣಿಕ ಕಾದಂಬರಿ. ನಚಿಕೇತನ ಜ್ಞಾನದಾಹದ ತೀವ್ರತೆ, ಯಮನ ಕಠಿಣ ಪರೀಕ್ಷೆ, ಪೌರಾಣಿಕ ವಾತಾವರಣ ತುಂಬ ಜೀವಂತಾಭಿವ್ಯಕ್ತಿಯನ್ನು ಪಡೆದಿದೆ. ಪ್ರಭುದೇವರನ್ನು ಕುರಿತು "ಅಗ್ನಿರಥ–ಮುಕ್ತಿಪಥ" ಪವಾಡಗಳ ಕಣ್ಣಿನಿಂದ ಕಂಡ, ಐತಿಹಾಸಿಕ ದೃಷ್ಟಿಯಿಲ್ಲದ ನಿಷ್ಪರಿಣಾಮಕಾರಿಯಾದ ಕೃತಿ. ಅತಿಶಯೋಕ್ತಿಯ ದೌರ್ಬಲ್ಯ, ಅತ್ಯುತ್ಕಟತೆ, ಅವಸರದ ಮುಕ್ತಾಯಗಳಿಂದ ತ.ರಾ.ಸು. ಅವರ ಬಹುಕೃತಿಗಳು ನರಳಿದರೂ, ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಕೆಲವಾದರೂ ಉತ್ತಮ ಕಾದಂಬರಿಗಳು ಅವರಿಂದ ನಿರ್ಮಿತವಾಗಿದೆ ಎಂಬುದು ಸಂತಸದ ಸಂಗತಿ.

* ಪ್ರೇಮ ತನ್ನ ಕೃಪೆಗೆ ಪಾತ್ರವಾದ ವ್ಯಕ್ತಿಯನ್ನು ಉದ್ಧಾರ ಮಾಡುತ್ತದೆ, ಕಾಮ ಪಾತಾಳಕ್ಕೆ ತಳ್ಳುತ್ತದೆ. ಒಂದರಲ್ಲಿ ಅರಿವು ಅರಳಿದರೆ ಇನ್ನೊಂದರಲ್ಲಿ ವಿಸ್ಮೃತಿ ಕವಿಯುತ್ತದೆ. ಮೊಗ್ಗನ್ನು ಅರಳಿಸಿ ಜಗತ್ತಿಗೇ ಅದರ ಸೌಂದರ್ಯ ಸುಗಂಧವನ್ನು ನೀಡುವುದು ಪ್ರೇಮ, ಅರಳಿದ ಹೂವನ್ನು ಬಾಡಿಸಿ ಕೊಲ್ಲುವ ಬಿಸಿಲು ಕಾಮ.

ಕತೆಗಾರ ತ.ರಾ.ಸು.

— ಎಲ್. ಎಸ್. ಶೇಷಗಿರಿರಾವ್

ತ್ರ.ರಾ.ಸು. ಕನ್ನಡ ಓದುಗರಿಗೆ ಕಾದಂಬರಿಕಾರರೆಂದೇ ಪರಿಚಿತರಾದವರು. ಅವರು ನಾಲ್ಕು ಸಣ್ಣ ಕತೆಗಳ ಸಂಕಲನಗಳನ್ನೂ ಪ್ರಕಟಿಸಿದ್ದಾರೆ, 'ರೂಪಸಿ' (1946), "ತೊಟ್ಟಿಲು ತೂಗಿತು" (1947), ಗಿರಿಮಲ್ಲಿಗೆಯ ನಂದನವಲ್ಲಿ (1955), ಮತ್ತು "ಇದೇ ನಿಜವಾದ ಸಂಪತ್ತು" (1965) ಸುಮಾರು ಹದಿನೆಂಟು ವರ್ಷಗಳ ಅವಧಿಯಲ್ಲಿ ಹತ್ತೊಂಬತ್ತು ಕತೆಗಳನ್ನು ಬರೆದರೆಂಬುದು ತ.ರಾ.ಸು. ಸಣ್ಣಕತೆಯನ್ನು ತನ್ನ ಮುಖ್ಯ ಮಾಧ್ಯಮವನ್ನಾಗಿ ಪರಿಗಣಿಸಲಿಲ್ಲ, ಎನ್ನುವುದನ್ನು ತೋರಿಸುತ್ತದೆ. ಆದರೆ ಈ ನಾಲ್ಕೇ ಸಂಕಲನಗಳಲ್ಲಿ ಅವರು ಕೆಲವು ಒಳ್ಳೆಯ ಕತೆಗಳನ್ನು ಕೊಟ್ಟಿರುವುದು ಮಾತ್ರವಲ್ಲ, ಈ ಸಂಕಲನಗಳಲ್ಲಿ ಸಾಹಿತಿಯಾಗಿ ಅವರ ಬೆಳವಣಿಗೆಗಳನ್ನು ಗುರುತಿಸಬಹುದು.

'ರೂಪಸಿ'ಯಲ್ಲಿರುವ ಕತೆಗಳೆಲ್ಲ ಹೆಣ್ಣು–ಗಂಡಿನ ಆಕರ್ಷಣೆಯನ್ನೇ ಕುರಿತವು. 'ರೂಪಸಿ' ಕತೆಯಲ್ಲಿ ನಾಯಕ (ಅವನೇ ಕಥೆ ಹೇಳುತ್ತಾನೆ) ಮಂತ್ರವಾದಿ ವೇಲಾ–ಯುಧನನ್ನು 'ಅತ್ಯಂತ ಲಾವಣ್ಯವತಿಯಾದ ಹೆಣ್ಣನ್ನು ಕಳುಹಿಸು' ಎಂದು ಬೇಡಿ ವೇಲಾಯುಧ ಎಚ್ಚರಿಸಿದರೂ ಕೇಳದೆ ಪಡೆಯುತ್ತಾನೆ. ಅವಳಿಗೆ ಸಂಪೂರ್ಣವಾಗಿ ಸೋತು ಮೈಗೆ ಮೈ ಬೆಸೆಯುವಾಗ ವೇಲಾಯುಧ ಎಚ್ಚರಿಸಿ ರೂಪಸಿಯನ್ನು ಓಡಿಸುತ್ತಾನೆ. ಬಹುವರ್ಷಗಳ ನಂತರ ಇವನ್ನು ವಿವರಿಸುವಾಗ 'ಆ ರೂಪಸಿಯನ್ನು ಅನುಭವಿಸಲಾಗದ ಅಸಂತೃಪ್ತಿ ಇನ್ನೂ ತೀರಿಲ್ಲ. ನಾನು ಇಬ್ಬಗೆ–ಯಲ್ಲಿ ನಿರ್ಭಾಗ್ಯ. ಅತ್ತ ವೇಲಾಯುಧನ ಮನಸ್ಸಿಗೂ ತೃಪ್ತಿ ಕೊಡಲಿಲ್ಲ. ಇತ್ತ ಬಯಸಿದ ಹೆಣ್ಣಿನಿಂದ ನಾನೂ ತೃಪ್ತಿ ಪಡೆಯಲಿಲ್ಲ ಎನ್ನುತ್ತಾನೆ. ನೃತ್ಯದ ಅಧ್ಯಾಪಕರಿಗೆ ಮನಸೋತು ನಿರಾಶಳಾದ ಷೋಡಸಿಯ ಕತೆ 'ಏಕೆ ಬರಲಿಲ್ಲ'? ತಾನು ವಶಪಡಿಸಿಕೊಂಡ ಹೆಣ್ಣು ಎಂದೂ ತನ್ನವಳೇ ಎಂಬ ದರ್ಪ ಪ್ರದರ್ಶಿಸಲು ಹೊರಟ ಮುಖಭಂಗಿತನಾದ ನಿರಂಜನ ಗೆಲುವಿನ ಸೋಲಿನ ನಾಯಕ. 'ಮೂರುನಗು' ಕತೆಯಲ್ಲಿ ಕೈಹಿಡಿದ ಹೆಂಡತಿಯನ್ನು ಬಿಟ್ಟು ಬೇರೆ ಥಳುಕಿನ ಹೆಣ್ಣಿಗೆ ಮರುಳಾಗಿ ಮತ್ತೆ ನಾಯಕ ಹೆಂಡತಿಯ ಮನಸ್ಸಿಗೆ ಶಾಂತಿ ಕೊಡುವ ಪ್ರೇಮಕ್ಕೆ ಹಿಂದಿರುಗುತ್ತಾನೆ. 'ಸಾಕ್ಷಾತ್ಕಾರ' ಇಡೀ ಸಂಕಲನದ ಮೂರರಲ್ಲೊಂದು ಭಾಗವನ್ನು ಆಕ್ರಮಿಸಿದೆ. ತಾನು ಬಿಲ್ಲೆನೆಂದು ತಿರಸ್ಕರಿಸಿದ ಸೋದರಮಾವನ ಮಗಳ ಚೆಲುವಿಗೇ ಅವಳ ಮದುವೆಯಾದನಂತರ ಸೋತು ಅವಳು ತನ್ನವಳಾಗದಿದ್ದರೆ ತಾನು ಪ್ರಾಣ ಕಳೆದುಕೊಳ್ಳುವೆನೆಂದು ಹಟಹಿಡಿದು ಅವಳನ್ನು ಬರಮಾಡಿಕೊಂಡು ಅವಳ ಆತ್ಮಹತ್ಯೆಗೆ ಕಾರಣನಾಗುತ್ತಾನೆ ನಾಯಕ. ಅತಿಕಾಮಿಯಾಗಿ 'ಸಿನಿಸಿಸಂ'ನ

ಅಪರಾವತಾರವಾಗಿದ್ದವನು ಮಾನವನಾಗುತ್ತಾನೆ. ಪ್ರೇಮತ್ಯಾಗಗಳ ಬೆಲೆಯನ್ನು ತಿಳಿದುಕೊಳ್ಳುತ್ತಾನೆ.

ಈ ಕತೆಗಳು ಈ ಮಾಧ್ಯಮವನ್ನು ಇನ್ನೂ ಕೈವಶ ಮಾಡಿಕೊಳ್ಳದ ಆದರೆ ಪ್ರತಿಭಾವಂತನಾದ ತರುಣಲೇಖಕನ ಸೃಷ್ಟಿ ಎನ್ನುವುದು ಸುಲಭವಾಗಿ ಕಾಣುತ್ತದೆ. ಪ್ರತಿ ಕತೆಯೂ ತುಂಬಾ ಸ್ವಾರಸ್ಯಕರವಾಗಿ ಪ್ರಾರಂಭವಾಗುತ್ತವೆ. ಓದುವವರ ಕುತೂಹಲವನ್ನು ಉಳಿಸಿಕೊಂಡು ಓದಿಸಿಕೊಂಡು ಹೋಗುತ್ತದೆ ಕತೆ. ಶಬ್ದ ಸಂಪತ್ತು ಸಮೃದ್ಧವಾಗಿದೆ. ಭಾವಗಳನ್ನು ಹೊರಸೆಳೆಯಬಲ್ಲ ಭಾಷೆಯ 'ಇವೊಕೆಟಿವ್' ಶಕ್ತಿಯನ್ನು ಬಳಸಿಕೊಳ್ಳಬಲ್ಲ ಬರಹ ಇದು. ಚಿತ್ರಮಯ ಬರಹ. ಆದರೆ ಕತೆಗಾರನ ಆಸಕ್ತಿ ಮುಖ್ಯವಾಗಿ ಸನ್ನಿವೇಶದಲ್ಲಿ ಒಂದು ಅತ್ಯಂತ ಕುತೂಹಲಕರ ಸನ್ನಿವೇಶದಿಂದ ಪ್ರಾರಂಭವಾಗಿ ಅದನ್ನು ಅರಳಿಸುತ್ತ ಹೋಗುತ್ತದೆ ಕತೆ. ಅದರಲ್ಲಿ ಒಳಗಾದ ಪಾತ್ರಗಳ ಸ್ವಭಾವದ ಸೂಕ್ಷ್ಮ ವೀಕ್ಷಣೆ, ಅವುಗಳ ಮನಸ್ಸಿನ ವ್ಯಾಪಾರದ ವಿಚಿತ್ರ ವೈಖರಿ ಅಥವಾ ಸನ್ನಿವೇಶದ ನೈತಿಕ ಪ್ರಶ್ನೆಗಳು ಇವುಗಳತ್ತ ಕತೆಗಾರನ ಮನಸ್ಸು ಹರಿಯುವುದಿಲ್ಲ. ಬರಹ ಮತ್ತೆ ಮತ್ತೆ ಅತಿ ರುಚಿತವಾಗುತ್ತದೆ. ಮಾದಕತೆಯತ್ತ ಬಾಗುತ್ತದೆ. ಶೃತಿ ಮಾಡಿದ ವೀಣೆ ಅಥವಾ ತಂಬೂರಿಯ ಚಿತ್ರ ಪ್ರತಿ ಕತೆಯಲ್ಲೂ ಸಿದ್ಧವಾಗಿ ಪ್ರತ್ಯಕ್ಷವಾಗುತ್ತದೆ.

ಮಂಜುಳ ನಗೆ, ನಿಶ್ಶಬ್ಧವಾಗಿ ಆದರೆ ಉದ್ವೇಗದಿಂದ ಹರಿಯುವ ಹೆಣ್ಣಿನ ಎದೆ, ನಸುಬೆವರು ಇವೆಲ್ಲ, ವರ್ಣನೆಯಲ್ಲಿ ಸಕಾಲಕ್ಕೆ ಸೇರಿಕೊಳ್ಳುತ್ತವೆ. ಸಂಯಮದ ಬೆಲೆಯನ್ನು ಇನ್ನೂ ಗುರುತಿಸಿದ ಬರಹ ಇದು. ಇದನ್ನು ಸ್ಪಷ್ಟಗೊಳಿಸಿಕೊಳ್ಳಲು 'ರೂಪಸಿ' ಕತೆಯನ್ನು ಇದೇ ವಸ್ತುವನ್ನಾರಿಸಿಕೊಂಡು ಕೀಟ್ಸ್ ಬರೆದ ಲ ಬೆಲ್ ಡೇಮ್ ಸ್ಯಾನ್ಸ ಮರ್ಸಿ' ಕವನದೊಂದಿಗೆ ಹೋಲಿಸಬಹುದು. (ಈ ಕವನ ಬರೆದಾಗ ಕೀಟ್ಸನಿಗೆ 24 ವರ್ಷ) 'ಮೂರು ನಗು'ವಿನಲ್ಲಿ ಥಳುಕಿನ ಹೆಣ್ಣು ಕ್ಯಾಥರಿನ್ ಸುಳಿದು ಹೋಗಿ ಬಿಡುತ್ತಾಳೆ. ಅವಳು ನಾಯಕನನ್ನು ವಶಮಾಡಿಸಿಕೊಳ್ಳಲು ಯತ್ನಿಸುವದೇಕೆ; ಅವಳು ಚಪಲಚಿತ್ತಳೇ ಬೆಲೆವೆಣ್ಣೇ ಏನೂ ತಿಳಿಯುವುದಿಲ್ಲ. ಕಣ್ಣು ಕೋರೈಸುವ ಬೆಳಕಿನ ಬೀದಿ ದೀಪ, ಹಿತವಾದ ಪ್ರಕಾಶದ ಮನೆಯ ದೀಪ ಇವುಗಳ ವೈದೃಶ್ಯವೇ ಕತೆಯ ಹೂರಣ. ಕಡೆಯ ಕತೆಗೆ ಬಂದಾಗ ಕತೆಗಾರರಿಗೆ ಮನುಷ್ಯ ಸ್ವಭಾವದಲ್ಲಿ ಮತ್ತು ಸನ್ನಿವೇಶದ ನೈತಿಕ ಸವಾಲಿನಲ್ಲಿ ಆಸಕ್ತಿ ಇದೆ ಎನ್ನಿಸುತ್ತದೆ. ಇನ್ನೂ ವಾಚಾಳಿತನ ಉಳಿದಿದೆ. ನಾಯಕ ತನ್ನ ಅನುಭವವನ್ನು ಸ್ನೇಹಿತನ ಮುಂದೆ ಹೇಳಿಕೊಳ್ಳುವಾಗಲೂ (ಈ ಹೊತ್ತಿಗೆ ಜೀವನ ಅವನನ್ನು ತಿದ್ದಿದೆ ಸಾಕಷ್ಟು ಪಕ್ವಗೊಳಿಸಿದೆ.) ನಾಟಕೀಯವಾಗಿ ಭಾಷಣ ಬಿಗಿಯುತ್ತಾನೆ. (ಅಂದೇ ವಿಧಿ ನಂಜು ನಗೆ ನಕ್ಕು ದುರಂತ ನಾಟಕಕ್ಕೆ ನಾಂದಿ ಹಾಡಿ, ಎಲ್ಲೋ ತಲೆ ಮರೆಸಿ ಕೊಳ್ಳುತ್ತದೆ... ನಾವೂ ಈ ಅದೃಷ್ಟದ ತೆರೆಗಳ ಮೇಲೆ ಹೊಯ್ದಾಡಿ ಕುಣಿದು ಕುಪ್ಪಳಿಸುತ್ತೇವೆ. ನೊರೆ ಬುರುಗಿನ ವಜ್ರದ ಹನಿಗಳನ್ನು ತೂರಾಡುತ್ತೇವೆ' ಇತ್ಯಾದಿ)

ಸಾಕಷ್ಟು ಭಾವಾತಿರೇಕ ಇಲ್ಲಿದೆ. ಇಷ್ಟಾದರೂ ಇಲ್ಲಿ ಅನುಭವ ವಸ್ತುವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಆಸಕ್ತಿ ಇದೆ. ಮನುಷ್ಯಸ್ವಭಾವದಲ್ಲಿ ಆಸಕ್ತಿ ಇದೆ. (ಪ್ರಣಯದ ಪತ್ರಗಳ ಕಟ್ಟು) 'ನಿಧಾನವಾಗಿ ಸುರುಳಿ ಸುತ್ತಿ ಕಪ್ಪಗಾಗಿ ಉರಿಯ-ಲಾರಂಭಿಸಿತು. ಪಡುವಣ ದಿಕ್ಕಿನ ಕೆಂಡ ಮಾಗಿ ಬಂಗಾರವಾಗುತ್ತಿದ್ದ ಹಾಗೇ ಕೋಟು ತಗುಲಿಸಿಕೊಂಡು ಹೊರಟೆ.' ಇಂತಹ ವರ್ಣನೆಗಳಲ್ಲಿ ಚಿತ್ರ ಮೂಡುವುದಲ್ಲದೆ ವಿವರಗಳು ಕಥೆಯ ಅರ್ಥದತ್ತ ಬಾಗುತ್ತದೆ.

ಈ ಸಂಕಲನವನ್ನು ಓದಿದಾಗ ಹೊಳೆಯುವ ಒಂದು ಕುತೂಹಲಕರ ಅಂಶ ವೆಂದರೆ ಪ್ರಗತಿಶೀಲ ಚಳುವಳಿಯ ಅಧ್ವರ್ಯುಗಳಾಗಿದ್ದ ಅ.ನ.ಕೃ. ಅವರ ಮುನ್ನುಡಿಯ ಹರಕೆಯನ್ನು ಹೊತ್ತ ಅವರ ಪ್ರೀತಿಯ ಶಿಷ್ಯರ ಈ ಕತೆಗಳಲ್ಲಿ ಎಲ್ಲವನ್ನೂ, ಆ ಪಂಥಕ್ಕೆ ಸೇರದಿದ್ದವರೂ ಬರೆಯಬಹುದಾಗಿತ್ತು ಎನ್ನುವುದು – ವಸ್ತುವಿನ ಆಯ್ಕೆಯಲ್ಲಾಗಲಿ ಅದನ್ನು ರೂಪಿಸುವ ರೀತಿಯಲ್ಲಾಗಲಿ ಬೇಪ್ರದು. ಆನಂದ ಮೊದಲಾದವರು ಯಾರಾದರೂ ಬರೆಯಬಹುದಾಗಿದ್ದ ಕತೆಗಳು ಇವು.

ಮೊದಲ ಕತೆ ತೋರಿಸುವಂತೆ ತ.ರಾ.ಸು.ಗೆ ತರ್ಕಾತೀತ ಘಟನೆಗಳಲ್ಲಿ ಆಸಕ್ತಿಯುಂಟು. ಪ್ರಗತಿಶೀಲರ ನಿಲುವಿನ ಒಂದು ವೈಶಿಷ್ಟ್ಯ – ಇದನ್ನು ಆಂತರಿಕ ಅಸಾಂಗತ್ಯ ಎಂದೂ ಕೆಲವರು ಎನ್ನಬಹುದು - ಇಲ್ಲಿ ಕಾಣುತ್ತದೆ. ಸಾಮಾಜಿಕ ಪ್ರಶ್ನೆಗಳ ಪೃಥಕ್ಕರಣೆಯಲ್ಲಿ ತರ್ಕಬದ್ಧರಾಗಿದ್ದ ಪ್ರಗತಿಶೀಲರಲ್ಲಿ ಅ.ನ.ಕೃ. ಅವರೂ ಸೇರಿದಂತೆ ಹಲವರು ಮಾನವಶಕ್ತಿಗೆ ಅತೀತವಾದ ಘಟನೆಗಳಲ್ಲಿ ನಂಬಿಕೆ ಇಟ್ಟವರು.

'ತೊಟ್ಟಿಲು ತೂಗಿತು' ಸಂಕಲನದಲ್ಲೂ ಭಾವಾತಿರೇಕವಿದೆ. ಇದನ್ನು 'ಲೂಸಿಯ ಪ್ರಯಾಣ'ದಲ್ಲಿ ಕಾಣಬಹುದು. ತಾತ - ಮೊಮ್ಮಗಳ ನಡುವಿನ ಪ್ರೀತಿಯ ಸುತ್ತ ಹೆಣೆದ ಕತೆ ಇದು. ಕಡೆಯಲ್ಲಿ ಮಗುವಿನ ಸಾವು ಓದುಗರು ಕಂಬನಿ ಕರೆಯುವಂತೆ ಮಾಡುವುದಕ್ಕಾಗಿಯೇ ಆಗುತ್ತದೆ. ಕಥೆ ವಿಷಾದವನ್ನುಂಟು ಮಾಡುತ್ತದೆ. ಪ್ಯಾಥಟಿಕ್ ಅಷ್ಟು ಗಂಭೀರವಾಗಿ ವಿಚಾರ ಮಾಡುವಂತಹ ಬರಹವಲ್ಲ. ಕಡೆಯ ಕತೆ ಹೆಣ್ಣು–ಮಣ್ಣಿನಲ್ಲಿ ನೆಲವನ್ನು ಹಾದರಗಿತ್ತಿ ಎನ್ನಿಸುವ ಪ್ರಯತ್ನ ಯಶಸ್ವಿಯಲ್ಲ. ನೆಲ-ಹೆಣ್ಣುಗಳ ಹೋಲಿಕೆಯನ್ನು ತೀರ ದೂರ ಎಳೆದಂತೆ ಭಾಸವಾಗುತ್ತದೆ. ಆದರೆ ಈ ಸಂಕಲನ ಜೀವನದಷ್ಟೇ ಅನ್ಯಾಯ ಶೋಷಣೆಗಳ ಅರಿವಿದೆ. ಸನ್ನಿವೇಶದ ನೈತಿಕ ಪ್ರಶ್ನೆಗಳ ಅರಿವಿದೆ. ಕಡೆಯ ಕತೆ ಕತೆಯಾಗಿ ಅಷ್ಟೇನೂ ಯಶಸ್ವಿಯಾಗಿಲ್ಲದಿದ್ದರೂ ಹಳ್ಳಿಯ ಜೀವನದಲ್ಲಿ ಹಾಸುಹೊಕ್ಕಾದ ರೂಪಣೆಯ ಚಿತ್ರಣವಿದೆ. ಸಂಕಲನದ ಒಳ್ಳೆಯ ಕತೆ 'ತೊಟ್ಟಿಲು ತೂಗಿತು'. ಬರಗಾಲದಲ್ಲಿ ಅನಾಥೆಯಾದ ಯುವತಿಯನ್ನು ಕಾಮ ತೃಪ್ತಿಗಾಗಿ ರೇಷನ್ ಅಂಗಡಿಯ ಗುಮಾಸ್ತ ಬಳಸಿಕೊಳ್ಳುತ್ತಾನೆ ಈ ಕತೆಯಲ್ಲಿ. ಇಲ್ಲೂ ಕಡೆಯಲ್ಲಿ ಮಗುವಿನ ಸಾವು ಸನ್ನಿವೇಶದಿಂದ ಆದಷ್ಟು ಕಣ್ಣೀರನ್ನು ಹಿಂಡುವ ಪ್ರಯತ್ನ. ಆದರೂ ಈ ಕತೆ ನಮ್ಮ ಕಣ್ಣ ಮುಂದಿನ ಸನ್ನಿವೇಶದಾಚೆ ಅರ್ಥಗಳತ್ತ ಬಾಗುತ್ತದೆ. ರಹಿಮಾ ಜಾತ್ವಾ ಒಬ್ಬರನ್ನೊಬ್ಬರು

ತುಂಬಾ ಪ್ರೀತಿಸುವ ದಂಪತಿಗಳು ಆದರೆ ಬರಗಾಲದ ಬವಣೆ ತಡೆಯಲಾರದಾಗ ಅಪ್ಪನು ಹೆಂಡತಿಯನ್ನೂ ಮಗುವನ್ನೂ ಬಿಟ್ಟು ಓಡಿ ಹೋಗುತ್ತಾನೆ. (ಈ ಮಾತನ್ನು ಬೇರೆ ವಿವರಣೆ ಇಲ್ಲದೆ ಕತೆಗಾರರು ಹೇಳಿ ಮುಂದೆ ಸಾಗುತ್ತಾರೆನ್ನುವುದು ಇವರ ಹರಿತವನ್ನು ಹೆಚ್ಚಿಸುತ್ತದೆ.) ಪ್ರೀತಿ, ನೀತಿ ಎಲ್ಲ ಎಷ್ಟರ ಮಟ್ಟಿಗೆ ಆರ್ಥಿಕ ಸ್ಥಿತಿಯ ಬಂಧನಕ್ಕೆ ಸಿಕ್ಕಿರುತ್ತದೆ, ಎನ್ನುವುದನ್ನು ಇದು ಸಾರಿ ಹೇಳುತ್ತದೆ. ದೈವದ ಕ್ರೌರ್ಯವನ್ನು ಎರಡೇ ಮಾತಿನಲ್ಲಿ ಸಂಯಮದಿಂದ ಸೂಚಿಸುತ್ತಾರೆ ಕತೆಗಾರರು. "ಜನ ಮುಂದಿನ ವರ್ಷ ದೇವರು ಕಣ್ಣು ತೆಗೆಯಬಹುದು ಎಂದು ಕೊಂಡರು. ಮರುವರ್ಷ ದೇವರು ಕಣ್ಣು ತೆರೆದ - ಉರಿಗಣ್ಣು !" ಕತೆಯ ಪ್ರಾರಂಭದಲ್ಲಿ ಮುಕ್ತಾಯದಲ್ಲಿ ಕಾಣುವ ಫಳ ಫಳ ಹೊಳೆಯುವ ಕಣ್ಣಿನ ಬೆಕ್ಕು ಪರಿಣಾಮಕಾರಿಯಾಗಿದೆ. ಇಡೀ ಕತೆಯಲ್ಲಿ ಬಡತನದ ಬಗ್ಗೆ ಅನುಕಂಪ ಹರಿದಿದೆ.

ತ.ರಾ.ಸು. ಅವರ ಕಥಾ ಸಂಕಲನಗಳಲ್ಲಿ ಅತ್ಯುತ್ತಮವಾದದ್ದು "ಸಿರಿ ಮಲ್ಲಿಗೆಯ ನಂದನದಲ್ಲಿ" ಅವರ ಪ್ರಸಿದ್ಧ ಕತೆ "0-0=0" ಇರುವುದು ಈ ಪುಸ್ತಕದಲ್ಲಿ. ಅವರ ಮೊದಲನೆಯ ಸಂಕಲನದ ವಸ್ತು ಹೆಣ್ಣು ಗಂಡಿನ ಆಕರ್ಷಣೆಯಾದರೆ ಈ ಸಂಕಲನದ ವಸ್ತು ಮನುಷ್ಯನ ನಿಸ್ಸಹಾಯಕತೆ, ಏಕಾಂತತನ. ಸಮಾಜದಲ್ಲಿ, ಜೀವನದಲ್ಲಿ, ರಾಜಕೀಯ ಪಕ್ಷದಲ್ಲಿ. ಮನುಷ್ಯನ ಬಾಳನ್ನು ಆವರಿಸುವ ನಿಸ್ಸಹಾಯಕತೆಯ ಅನುಭವ ಇಲ್ಲಿ ಮತ್ತೆ ಮತ್ತೆ ಆಗುತ್ತದೆ. ಮನುಷ್ಯರ ಒರಟುತನ, ಸಣ್ಣತನ ಈ ಎಲ್ಲ ಕತೆಗಳಲ್ಲಿ ವ್ಯಕ್ತಿಯನ್ನು ಅದುಮಿಡುವ ಕ್ರೂರ ಶಕ್ತಿಯಾಗಿ ಬರುತ್ತದೆ. ಈ ಕತೆಗಳಲ್ಲಿಯೂ ಒಂದು ಸನ್ನಿವೇಶವನ್ನು ಬಿಡಿಸುತ್ತ ಸಾಗುವ ತಂತ್ರವನ್ನು ಕಾಣುತ್ತೇವೆ. ಆದರೆ ಈಗ ಸನ್ನಿವೇಶವಲ್ಲಿಲ್ಲ. ಮನುಷ್ಯ ಸ್ವಭಾವದಲ್ಲಿ ಮತ್ತು ಬಾಳಿನ ಸಂಕೀರ್ಣತೆಯಲ್ಲಿ. 'ಒಂದು ತುಂಡು ಸುದ್ದಿ' ಕೆಲಸ ಸಿಕ್ಕದೆ ಆತ್ಮಹತ್ಯೆ ಮಾಡಿಕೊಂಡವನ ಸುದ್ದಿಯ ಮೂಲಕ ಮನುಷ್ಯ ಸ್ವಭಾವದ ಎಳೆ ಎಳೆಯನ್ನು ಬಿಡಿಸುವ ಪ್ರಯತ್ನ, ಜೊತೆಗೆ ವ್ಯಕ್ತಿಯ ಬದುಕು ಸಾವುಗಳನ್ನು ಹಲವು ಚೌಕಟ್ಟುಗಳಲ್ಲಿಟ್ಟು ಅವಕ್ಕೆ ಸಲ್ಲುವ ಬೆಲೆಗಳನ್ನು ಕಾಣುವ ಪ್ರಯತ್ನ. ಆದುದರಿಂದ ಕತೆಯ ತಂತ್ರ ಕುತೂಹಲಕರವಾಗಿದೆ. ಹಿಂದಿನ ಸಂಕಲನಗಳ ಕತೆಗಳಂತೆ ಇದು ಸರಳವಲ್ಲ. ಹಾಗೆ ನೋಡಿದರೆ ಈ ಸಂಕಲನಕ್ಕೆ ಹೆಸರು ಕೊಟ್ಟ ಕಡೆಯ ಕತೆಯನ್ನು ಬಿಟ್ಟರೆ ಯಾವುದೂ ಸರಳ ಕತೆಯಲ್ಲ. ತರುಣನ ಆತ್ಮಹತ್ಯೆಗೆ ಪತ್ರಿಕಾಲಯದಲ್ಲಿ ಅರ್ಥ ಸಚಿವರ ಅರ್ಥಹೀನ ಸಂಭ್ರಮದ ಭಾಷಣಕ್ಕಿರುವ ಬೆಲೆ ಇಲ್ಲ. ಮುಖ ಪುಟದಲ್ಲಿ ಅರ್ಧ ಕಾಲಂ ಅನ್ನು ಅವರ ಭಾಷಣ ಪಡೆದುಕೊಂಡರೆ ಪುಟ್ಟಣ್ಣನ ಆತ್ಮಹತ್ಯೆ ? ಕಂಪೋಸಿಟರ್ ಸತ್ತಾರ್ ಸಾಬಿಯೇ 'ಅದೇನು ಭಾರಿ ಸುದ್ದಿ ಬಿಡಿ ಸಾರ್, ಕೆಲಸ ಸಿಕ್ಕಲಿಲ್ಲಾಂತ ಆತ್ಮಹತ್ಯೆ ಮಾಡಿಕೊಳ್ಳೋರು ಎಷ್ಟೋ ಜನ' ಎನ್ನುತ್ತಾನೆ. ಮಂತ್ರಿ ಮಂಡಲಕ್ಕೆ ಯಾರು ಸೇರಬಹುದು ಎನ್ನುವ ಊಹಾಪೋಹ ಮುಖ್ಯ, ಆದರೆ ಯುವಕನ ಆತ್ಮಹತ್ಯೆ ? ಅದನ್ನ ಓದೋರು ಯಾರು ಸಾರ್ ? ಪೋಲಿಸ್ ದಫೇದಾರನಿಗೆ ಪುಟ್ಟಣ್ಣ ರಾತ್ರಿ ಆತ್ಮಹತ್ಯೆ ಮಾಡಿಕೊಂಡು ತನ್ನ ನಿದ್ರೆಗೆ

ಭಂಗತಂದನೆಂದು ರೋಷ. ಪುಟ್ಟಣ್ಣನ ತಂದೆ ತಾನು ಹೊಟ್ಟೆ ಬಟ್ಟೆ ಕಟ್ಟಿ ಬೆಳೆಸಿದ ಮಗ ಆತ್ಮಹತ್ಯೆ ಮಾಡಿಕೊಂಡು ಸಂಸಾರವನ್ನು ಹಾಳು ಮಾಡಿದ ಎಂದು ರೋಷ. ತಾಯಿ; ಮಗ ಬದುಕಿದ್ದಾಗ ಪಟ್ಟ ಕಷ್ಟಕಾಗಿ ಕಣ್ಣೀರು ಹಾಕುತ್ತಾಳೆ. ಈ ಕತೆಯಲ್ಲೂ ನಾಟಕೀಯ ಭಾಷಣ ಬಿಗಿಯುವ ಬಯಕೆ ಕಾಣಿಸಿಕೊಳ್ಳುತ್ತದೆ. (ಇಂಗ್ಲಿಷ್ ಪ್ರೊಫೆಸರು.) ಕತೆ ಭಾಷೆಯನ್ನು ಬಳಸುವುದು ಹೋಗಿ ಭಾಷೆಯೇ ಕತೆಯನ್ನು ನಡೆಸುವುದು ಕಾಣುತ್ತದೆ. ನಿಷ್ಠುರ ವಾಸ್ತವಿಕತೆಯ ನಡುವೆ 'ಫ್ಯಾಂಟಸಿ' ತಲೆ ಹಾಕುತ್ತದೆ. ಆದರೂ ಕತೆಯಲ್ಲಿ ಮಾನವೀಯ ಅನುಕಂಪ, ಸಾಮಾಜಿಕ ಪ್ರಜ್ಞೆ ಕೈಹಿಡಿದು ಸಾಗುತ್ತದೆ. ನಮ್ಮ ಕಣ್ಣಿಗೆ ಕಾಣದ, ಆಗಲೇ ಭೂತಕಾಲದ ಪಾಲಲ್ಲಿ ಮಾಯವಾದ ಪುಟ್ಟಣ್ಣನ ಏಕಾಕಿತನ ಹೋರಾಟ ಮೂಡಿ ಬರುತ್ತದೆ. ಕತೆಯನ್ನು ಪತ್ರಿಕಾ ವರದಿಗಾರನೊಬ್ಬ ಹೇಳುವುದರಿಂದ ಕತೆಗಾರರೇ ಪ್ರವೇಶಿಸಿ 'ಕಾಮೆಂಟ್' ಮಾಡುತ್ತಿದ್ದಾರೆ ಎನ್ನಿಸುವುದಿಲ್ಲ. 'ಕಾಮೆಂಟ್'ಗಳಲ್ಲಿ ಸಹಜವಾಗಿ ಕಥೆಯಲ್ಲಿ ಸೇರುತ್ತವೆ.

'೦–೦=೦' ಪ್ರಾಯಶಃ ತ.ರಾ.ಸು. ಅವರ ಬಹು ಶ್ರೇಷ್ಠ ಕತೆ. ಹಿಂದಿನ ಕತೆಗಳ ನಾಟಕೀಯತನ ಇಲ್ಲಿ ಮಾಯವಾಗಿದೆ. ಹಿಂದಿನ ಕತೆಗಳಲ್ಲಿ ಕತೆಗಾರನಿಗೆ ಭಾಷೆಯೇ ಮಾದಕ ವಸ್ತು, ಅದರ ವೈಭವದ ಪ್ರದರ್ಶನದಲ್ಲಿ ಒಂದು ಖುಷಿ. ಯಾವುದನ್ನೂ ಸೂಚ್ಯವಾಗಿ ಹೇಳಲಾರದ ಮಾತುಗಾರಿಕೆ. ಈ ಕತೆ ಬಲು ಚಿಕ್ಕದು. ಸುಮಾರು ಆರು ನೂರೇ ಪದಗಳಲ್ಲಿ ಅವರು ಸಾಧಿಸಿರುವ ಪರಿಣಾಮ ಅಸಾಧಾರಣ.

(ನನಗೆ ಬರೆದ ಪತ್ರ ಒಂದರಲ್ಲಿ ತ.ರಾ.ಸು. ಈ ಕತೆಯ ಬಗ್ಗೆ ಹೇಳಿರುವ ಮಾತುಗಳು ಗಮನಾರ್ಹ ಇದು ಮೊದಲು ಇಂಗ್ಲಿಷಿನಲ್ಲಿ 'ದಿ ವೆಲ್' ಎಂಬ ಹೆಸರಿನಲ್ಲಿ "ಮೈಸಿಡಿಯ" ಪತ್ರಿಕೆಯಲ್ಲಿ ಪ್ರಕಟವಾಯಿತೆಂಬ ಕುತೂಹಲಕಾರಿ ಅಂಶವನ್ನು ಹೇಳಿ ತ.ರಾ.ಸು. "ತಾವು ಟಿ. ಎಸ್. ಎಲಿಯಟ್" ಮೊದಲಾದ ಆಂಗ್ಲಕವಿಗಳ ಸಾಹಿತ್ಯವನ್ನು ಆ ಪತ್ರಿಕೆಯ ಸಂಪಾದಕ ಫಿಲಿಪ್ ಸ್ಪ್ರಾಟರೊಂದಿಗೆ ಚರ್ಚಿಸುತ್ತಿದ್ದುದಾಗಿ ಸ್ಮರಿಸಿದ್ದಾರೆ. ಸ್ವಾತಂತ್ರ್ಯ ಬಂದ ನಂತರ ಭಾರತದ ಹಾದಿಗೆಟ್ಟ ರಾಜಕೀಯದಿಂದ ತಮಗೆ ನಿರಾಸೆ ಕವಿಯಿತೆಂದು ಹೇಳಿ ಹೀಗೆನ್ನುತ್ತಾರೆ, "ಧೈರ್ಯ, ಮೌಲ್ಯ ಇಂಥ ದೊಡ್ಡ ಮಾತುಗಳೆಲ್ಲ ನನ್ನಂಥ ಬಕರಾಗಳನ್ನು ಹಿಡಿಯಲು ಬೀಸಿದ ಬಲೆ ಅನಿಸಿತು. ಇದು ಮನವರಿಕೆಯಾಗಿದ್ದು ನಾನು ನಂಬಿದ ಧ್ಯೇಯಗಳೇ ನನಗೆ ಕೈ ಕೊಟ್ಟಾಗ ಆ ಕಹಿಯೇ ಕಥೆಯಾಗಿ ಮೂಡಿ ಬಂತು.)"

ಈಶಾವಾಸ್ಯದ ಶಾಂತಿ ಮಂತ್ರದ
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ

(ಪೂರ್ಣದಿಂದ ಪೂರ್ಣವನ್ನು ತೆಗೆದಾಗಲೂ ಪೂರ್ಣವೇ ಶೇಷವಾಗಿ ನಿಲ್ಲುತ್ತದೆ) ಎಂಬ ಮಾತುಗಳನ್ನು ಅಣಕವಾಡುತ್ತದೆ. ಈ ಕತೆಯ ಶೀರ್ಷಿಕೆ. ಸಾಪ್ಪ-

ಬದುಕುಗಳು ಕತೆಯಲ್ಲಿ ಹೆಣೆದು ಕೊಂಡಿವೆ. ರಸ್ತೆಯ ಬದಿಯ ಬಾವಿ ಅನಂತವಾದ ರಹಸ್ಯಮಯವಾದ ಬಾಳಿನ ಸಂಕೇತವಾಗುತ್ತದೆ. ಬದುಕುವ ಹಂಬಲದ ತೀವ್ರತೆಯಿಂದ ಪ್ರಾರಂಭವಾಗುವ ಕತೆ ಸಾವಿನ ಆಶ್ರಯದ ಸಮಾಧಾನದಿಂದ ಮುಕ್ತಾಯವಾಗುತ್ತದೆ. ಕತೆಯ ಪ್ರಾರಂಭದಲ್ಲಿ ಕರುವೊಂದು ನೀರಿಗೆ ಬಿದ್ದು ಸಾವಿನೊಡನೆ ಹೋರಾಡುತ್ತದೆ. ತಾಯಿ ಹಸು ಅರಚುತ್ತ ಬಾಲ ಮೇಲೆ ಮಾಡಿ ನೀರಿನ ಅಂಚಿಗೆ ಧಾವಿಸುತ್ತದೆ. ಆದರೆ ನೀರನ್ನು ಕಂಡು ಬೆದರಿ ಹಿಂಜರಿಯುತ್ತದೆ. "ಜೀವಾ ಭದ್ರಾಣಿ ಪಶ್ಯತಿ" ಹತ್ತು ಕೈಗಳು ಕಷ್ಟಪಟ್ಟು ಕರುವನ್ನು ಮೇಲೆಳೆಯುತ್ತದೆ. ತಾಯಿ ಹಸು, ನೆಲಕ್ಕುರುಳಿ ಉದ್ವೇಗ ಪಡುತ್ತಿರುವ ನೀರು ಜಿನುಗುವ, ಕಂಪಿಸುವ ಮೈಯ ಕರುವಿನ ಬಳಿಗೆ ಧಾವಿಸಿ ಮೂಸಿ ನೋಡಿ ನಾಲಿಗೆಯಿಂದ ನೇವರಿಸುತ್ತದೆ. ಹೆಸರಿಲ್ಲದ "ಅವನು" ಸಿಟ್ಟಿನಿಂದ ಹಲ್ಲು ಕಡಿಯುತ್ತಾನೆ. ಬಾವಿಯನ್ನು ಮುಚ್ಚಿಸದೇ ಹಾಗೆಯೇ ಬಿಟ್ಟವರನ್ನು ನೆನಸಿಕೊಂಡು ಯಾರಾದರೂ ಸತ್ತರೆ ಜನರ ಕಣ್ಣು ತೆರೆಯುವುದು ಎಂದು ರೋಸುತ್ತಾನೆ. "ಗುಂಡೇಟಿನಿಂದ, ಶಿಲುಬೆಯ ಮೇಲೆ ವಿಷಕುಡಿದು, ನೀರಿನಲ್ಲಿ........... ಮಾನವನ ಕಣ್ಣು ತೆರೆಸಲು ಮಾನವ ಸಾಯಬೇಕು" ಎಂದು ಮರುಗುತ್ತಾನೆ.

ಅಂದಿನ ಮುಂದಿನ ಭಾಗಗಳಲ್ಲಿ ಅವನ ಜೀವನದ ಪರಿ ಸೂಚಿತವಾಗುತ್ತದೆ. ಅವನು ಬಾವಿಯಂಚಿನಲ್ಲಿ ಪ್ರತಿನಿತ್ಯ ನಡೆಯುತ್ತಾನೆ. ಭೂತ - ವರ್ತಮಾನಗಳು ಸಂಧಿಸುವ ಬಾವಿಯಂಚಿನಲ್ಲಿ ವರ್ತಮಾನವನ್ನು ಭೂತವಾಗಿಸುವ ಬಾವಿಯಂಚಿನಲ್ಲಿ ಆದರ್ಶವಾದಿಯಾದ ಅವನ ಕನಸುಗಳು ವಾಸ್ತವಿಕತೆಯ ಕಹಿಗಳು ಜೋಡಿಯಾಗಿ ನಡೆಯುತ್ತವೆ.

ಐದನೆಯ ಭಾಗ "ಎಲ್ಲರಂತೆ ಅವನು" ಎಂದೇ ಪ್ರಾರಂಭವಾಗುತ್ತದೆ. ಈವರೆಗೆ ಅನಾಮಧೇಯನಾಗಿದ್ದರೂ ವ್ಯಕ್ತಿಯಾಗಿದ್ದ ಅವನು ಎಲ್ಲರ ಪ್ರತಿನಿಧಿಯಾಗುತ್ತಾನೆ. ಅವನ ಬಾಳು ಎಲ್ಲ ಮನುಷ್ಯರ ಬಾಳನ್ನು ಪ್ರತಿನಿಧಿಸುತ್ತದೆ. ಸಮಾಜ ಅರ್ಥವ್ಯವಸ್ಥೆ ಇವುಗಳ ಜೀವರಹಿತ ಚಕ್ರಗಳಲ್ಲಿ ಜೀವವಿರುವ ಅವನು ಸಿಕ್ಕಿಸುತ್ತುತ್ತಾನೆ. ಕ್ರಮೇಣ ಕ್ರೂರಿಯಾಗಿ ಕಂಡ ಬಾವಿಯೇ ಆಕರ್ಷಕವಾಗುತ್ತದೆ. ಯಾರೂ ಏಕೆ ಇದರ ಬಾಯಿಯನ್ನು ಮುಚ್ಚಿಸಲಿಲ್ಲ ಎಂದು ಕುಪಿತಗೊಂಡವನೇ ಅದರ ಬಾಯಿಯ ಹೋಗುತ್ತಾನೆ. ಅದರ ತಣ್ಣೀರೇ ಮನಸ್ಸಿಗೆ ಬೆಚ್ಚಗೆ ಹಿತವಾಗುತ್ತದೆ. "ಬಯಲು ಬಯಲನ್ನೆ ಕೂಡಿ ಕೂಡಿ ಬಯಲಾಗಿತ್ತು".

ಈ ಕತೆಯಲ್ಲಿ ನಿರ್ದಿಷ್ಟ ಘಟನೆಗಳ ಕೊಂಡಿಗಳಿಂದ ನಿರ್ಮಿತವಾದ ಕಥಾವಸ್ತು ಪ್ಲಾಟ್ ಇಲ್ಲ. ಇಲ್ಲಿ ಭಾಷೆ, ಪ್ರತಿಮೆ, ಸಂಕೇತ ಇವುಗಳ ಪಾತ್ರ ವಿಶಿಷ್ಟವಾದದ್ದು. ಮೊದಲು ಬಾವಿಯನ್ನು ಕಂಡಾಗ ಅವನಿಗೆ ಆಕರ್ಷಣೆ ಮೊದಲಿಗೆ ಕಂಡಾಗ ಏನೊಂದು ನಗೆಯಿತ್ತು. ಅನಂತರ ಮನಸ್ಸಿನ ಸಹಜೀವಿಯಾದ (ಆದರೆ ಅವನಂತೆ self consciousness ಇಲ್ಲದ) ಪ್ರಾಣಿಯೊಂದು ಬಾವಿಗೆ ಬೀಳುತ್ತದೆ. ಅದರ

ತಾಯಿ ಸಂಕಟ ಪಡುತ್ತಿದೆ. ಹಸಿರು ಮೇಯುವ ದನಕ್ಕೆ ನೀರು ಕೊಡುವ ಬಾವಿ ಈಗ ಸಾವಿನ ಬಾಯಾಗಿದೆ. ಅವನು "ಅದೃಷ್ಟದ ಬಾವಿ" ಎಂದು ಅದನ್ನು ಕರೆದಿದ್ದ. ಈಗ ಅದು ಮತ್ತೊಂದು ರೀತಿಯಲ್ಲಿ "ಅದೃಷ್ಟದ ಬಾವಿ" ಆಗುತ್ತದೆ. ಅವರ ಒಂದು ಮರಿ ದೃಷ್ಟವೂ ಆಗುತ್ತದೆ. ಜೀವ–ಸಾವುಗಳು ಸಂಧಿಸುವ ಈ ಗಳಿಗೆಯಲ್ಲಿ ವ್ಯಕ್ತಿ–ಸಮಷ್ಟಿಗಳೂ ಸಂಧಿಸುತ್ತವೆ. (ಇಲ್ಲೇ ಅವನಿಗೆ 'ಜೀವಾಭದ್ರಾಣಿ ಪಶ್ಯತಿ' ಎಂಬ ವಾಕ್ಯ ನೆನಪಿಗೆ ಬರುವುದು. ಬಹು ಜನರ ಅನುಭವ ಹೆಪ್ಪುಗಟ್ಟಿರುವ ಈ ವಾಕ್ಯವನ್ನು ಅವನು ನೆನೆದಾಗ ಭೂತ–ವರ್ತಮಾನಗಳು ಸಂಧಿಸುತ್ತವೆ. ವ್ಯಕ್ತಿ ಸಮಸ್ಯೆಗಳೂ ಒಂದು ರೀತಿಯಲ್ಲಿ ಸಂಧಿಸುತ್ತವೆ.) ಮೂರನೆಯ ಭಾಗದಲ್ಲಿ ವ್ಯಕ್ತಿಯ ಜೀವನ ಮುಂದಕ್ಕೆ ಸಾಗುತ್ತದೆ. ಅವನ ಹೋರಾಟವೂ ಪ್ರಾರಂಭವಾಗುತ್ತದೆ. ಈ ಭಾಗದಲ್ಲಿ ಭಯಪಡಿಸುವ ಆಕರ್ಷಿಸುವ ಜೀವನದ ವರ್ಣನೆ ಜೀವನವನ್ನು ಬಾವಿಯೊಡನೆ ಒಂದಾಗಿಸುತ್ತದೆ. ಬಾವಿ ಸಂಕೇತವಾಗುತ್ತದೆ. ಬಾವಿಯಲ್ಲಿ ನೀರು ಕುಡಿಯಲು ಬಾಗಿ ಅದರಲ್ಲಿ ಬಿದ್ದು ಅಳಲಿದ ಕರುವಿನ ಚಿತ್ರವನ್ನು ಆಗಲೇ ಕತೆಗಾರರು ಸ್ಥಾಪಿಸಿದ್ದಾರೆ. ನಾಲ್ಕನೆಯ ಭಾಗದಲ್ಲಿ ಹಿಂದಿನ ಭಾಗದಲ್ಲಿ ಸೂಚಿತವಾದ ಒಲವಿನ ಶಕ್ತಿ ಬೆಳೆಯುತ್ತದೆ. ಆಹಾರ, ನಿದ್ರಾ, ಭಯ ಮೈಥುನಗಳ ಪ್ರಸ್ತಾಪ ಬಯಕೆ ಪಶುವಿನ ವರ್ಣನೆ ಈ ಭಾಗವನ್ನು ಎರಡನೆಯ ಭಾಗದತ್ತ ಬಾಗಿಸುತ್ತದೆ, ಮುಂದಿನ ಭಾಗ ಹಿಂದಿನ ಭಾಗಗಳ ದೃಶ್ಯವನ್ನು ನೆನಪಿಗೆ ತರುತ್ತ ಸಾಗಿ ಎರಡನೆಯ ಭಾಗದಲ್ಲಿನ ಮಾತುಗಳಿಂದ ('ಸಾಯಬೇಕು, ಕಣ್ಣು ತೆರೆಸಬೇಕು') ಮುಕ್ತಾಯವಾಗುತ್ತದೆ. ಜೊತೆಗೆ ಅವನ ಜೀವನದ ಮುಕ್ತಾಯವೂ ಇಲ್ಲಿ ಆಗುತ್ತದೆ, ಕಥೆಯುದ್ದಕ್ಕೂ (ಟಿ. ಎಸ್. ಎಲಿಯಟ್‌ನ ಕವನಗಳಲ್ಲಿನಂತೆಯೆ) ಬೇರೆ ಮೂಲಗಳಿಂದ ಹೆಕ್ಕಿದ ಓದುಗರಿಗೆ ಪರಿಚಿತವಾದ ಮಾತುಗಳು ಉದ್ಧೃತವಾಗುತ್ತವೆ. ('ಜೀವಂ ಭದ್ರಾಣಿ ಪಶ್ಯತಿ' 'ಆಶಾಲಾ ಪರಮಂ ದುಃಖಂ' ನಂಬಿ ಕೆಟ್ಟವರಿಲ್ಲ, ದೇವನಿಹನು ಸ್ವರ್ಗದಲ್ಲಿ. ಎಲ್ಲ ಬಳಿತು ನೆಲವಲ್ಲಿ, ಸಾವಾರ ಕರೆಯುತಿದೆ ಎಂದು ಕೇಳದಿರು, ನಿನ್ನನ್ನೇ ಕರೆಯುತ್ತಿದೆ. ಇತ್ಯಾದಿ) ಇವು ಜೀವನವನ್ನು ಕುರಿತ ಹಲವು ದೃಷ್ಟಿಗಳನ್ನೂ ಬೇರೆ ಬೇರೆ ಯುಗಗಳು ಬೇರೆ ಬೇರೆ ಜೀವನಗಳು ಬದುಕಲು ಕಂಡ ಮಾರ್ಗಗಳನ್ನು ಸೂಚಿಸುತ್ತ ಭೂತ, ವರ್ತಮಾನಗಳನ್ನು ಹೆಣೆಯುತ್ತವೆ ಮತ್ತು 'ಅವನ' ಹಣಗಾಟವನ್ನು ಸಂಕೀರ್ಣಗೊಳಿಸುತ್ತವೆ. ಈ ಒಂದು ಜೀವ ತನ್ನಲ್ಲಿ ಮರೆಯಾದ ಮೇಲೂ ಬಾವಿ ಮೊದಲಿನಂತೆಯೇ ಇದೆ, ಈ ಜೀವ ಮರೆಯಾದ ಮೇಲೂ ವಿಶ್ವದಬಾಳು ಮೊದಲಿನಂತೆ ಉಳಿದಿದೆ. 0–0=0 (ಸೊನ್ನೆ ಪೂರ್ಣತ್ವದ ಸಂಕೇತ. ಹಾಗೆಯೇ ಬೆಲೆಯೇ ಇಲ್ಲದಿರುವುದನ್ನು ಸೂಚಿಸುತ್ತದೆ.)

1948ರಲ್ಲಿ ಈ ಕತೆಯ ಇಂಗ್ಲಿಷ್ ರೂಪ ಪ್ರಕಟವಾಯಿತು, ಮುಂದೆ ನವ್ಯ ಸಾಹಿತ್ಯ ಸ್ವತಂತ್ರ ಭಾರತದಲ್ಲಿ ಬುದ್ಧಿಜೀವಿಗಳು ಅನುಭವಿಸಿದ ನಿರಾಸೆ ನೋವುಗಳು ಈ ಕತೆಯಲ್ಲಿ ಆಗಲೇ ಹೆಪ್ಪುಗಟ್ಟಿದ್ದವು.

'ಇನ್ನೊಂದು ಮುಖ'ದ ಕಥಾವಸ್ತು ಕೆಳುವು. ಒಂದು ಗಳಿಗೆ ಅಪ್ಸರೆಯಾಗಿದ್ದ ಹೆಣ್ಣು ಮರುಗಳಿಗೆ ಭಯಂಕರ ಶವವಾಗುತ್ತಾಳೆ. ಈ ಘಟನೆಗೆ ಅರ್ಥ ತುಂಬಿಕೊಳ್ಳುವುದು ಇದಕ್ಕೆ ಕತೆ ಒದಗಿಸುವ ಕಾರಣದಿಂದ ಈ ಅವರಣವನ್ನು ನಿಸರ್ಗ ಸೃಷ್ಟಿಸುತ್ತದೆ, ಜೊತೆಗೆ ಇನ್ನೊಂದು ಕಾರಿನಲ್ಲಿರುವ ಮನುಷ್ಯರೂ ಸೃಷ್ಟಿಸುತ್ತಾರೆ. ಕ್ರಿಯೆ ನಡೆಯುವುದು ಆಗುಂಬೆಯ ಬಳಿ. ನಿಸರ್ಗದ ಜಗತ್ತು ವಿಶಾಲವಾದ, ಗಂಭೀರವಾದ, ಚೆಲುವಾದ ಜಗತ್ತು. ಇಬ್ಬದಿಯ ಹೆಮ್ಮರಗಳ ಕಾಡು, ಕಣ್ಣು ತಣಿಸುವ ಹಸಿರು, ಉಸಿರನ್ನು ಬಿಗಿ ಹಿಡಿದಿರುವ ಕಂದರದ ಆಳದಲ್ಲಿ ಎಲ್ಲೋ ಕಾಣಿಸುವ ಅಡಕೆಯ ತೋಟಗಳು...ನಿಜವಾಗಿಯೂ ಅಗುಂಬೆಯ ಮಾರ್ಗ ಜೀವಂತ ಕವಿತೆ. ಈ ಬೃಹತ್ತಾದ ಲೋಕದಲ್ಲಿ ಸಾಗುತ್ತಿರುವ ಎರಡು ಕಾರುಗಳು ಒಂದರಲ್ಲಿ ಕತೆ ಹೇಳುವವನು – ಅವನ ಗೆಳೆಯರು, ಇನ್ನೊಂದು ಕಾರಿನಲ್ಲಿ ಸುಂದರಿಯಾದ ಹೆಂಗಸು–ಜೊತೆಗೆ – ಅವರು ಊಹಿಸುವಂತೆ – ಶಾಫರ್. ಮೊದಲ ಕಾರಿನವರು ತಮ್ಮ ನಾಲಿಗೆಯನ್ನು ಹರಿ ಬಿಡುತ್ತಾರೆ, ಆ ಹೆಂಗಸಿನ ವಿಷಯ ಹಗುರವಾಗಿ ಮಾತಾಡುತ್ತಾರೆ, ಕಾರು ನಡೆಸುವ ವಿಶ್ವನಾಥ ಬಹು ಹೊತ್ತು ಹಿಂದಿರುವ ಕಾರಿಗೆ ದಾರಿ ಬಿಡದೆ ಆಟವಾಡುತ್ತಾರೆ. ಅದರಲ್ಲಿರುವವರಿಗೆ ಧೂಳು ಕುಡಿಸುತ್ತಾನೆ ಜೊತೆಗೆ ಪಾಪ–ಪುಣ್ಯಗಳ ಚರ್ಚೆ ಮಾಡುತ್ತಾರೆ. ಈಗಿನವರು ಭೋಗವಾದಿಗಳು ಎಂದು ಒಬ್ಬರೆಂದರೆ 'ಸಾವುಬರಲಿ' ಅದಕ್ಕೆ ಮೊದಲು ಇಲ್ಲಿನದು ಏನಿದೆಯೋ ಅನುಭವಿಸಿ ಬಿಡೋಣ' ಎನ್ನುತ್ತಾರೆ. ಇನ್ನೊಬ್ಬರು ಕೆಲವೇ ಗಳಿಗೆಗಳ ನಂತರ ಒಂದು ಮೈಲಿಗಲ್ಲಿಗೆ ಸುಂದರಿಯ ಕಾರು ಡಿಕ್ಕಿ ಹೊಡೆದಿದ್ದು ಈ ತಂಡ ನೆತ್ತೆರು ಕಾರುವ ಅವಳ ಶವವನ್ನು ನೋಡುತ್ತಾರೆ. ಗೆಳೆಯರಲ್ಲಿ ಒಬ್ಬ ದೇವರು ಪಾಪಿ ಎನ್ನುತ್ತಾನೆ. "ಅದೇ ಘಾಟ್, ಅದೇ ಕಾಡು, ಅದೇ ಜನ–ಆದರೆ ಆಗ ಕಂಡುದು ಇದೇ ಈಗಲೂ ಅದೇ ಮುಖ ಆದರೆ ಎಷ್ಟು ಅಂತರ?"

ಇನ್ನೊಂದು ಮುಖ ಲಾವಣ್ಯವತಿಯದು ಮಾತ್ರವಲ್ಲ. ಒಂದು ಗಳಿಗೆಯ ಹಿಂದೆ ಸೌಂದರ್ಯಕರ ಔತಣವನ್ನಿತ್ತ ಅಗುಂಬೆಯ ಘಟ್ಟ. ಕಾಳ, ಕರಾಳ ದೈತ್ಯನಂತೆ ಮೈ ಚಾಚಿತು.

ಸಾರ್ಥಕ ನಾಟಕೀಯತೆ ಈ ಕತೆಯಲ್ಲಿ ಕಾಣುತ್ತದೆ. ಆಕಸ್ಮಿಕದ ಬಳಕೆಯೂ ಕಲಾತ್ಮಕವಾಗಿದೆ. (ನಾನು ಅಕೆಯನ್ನು ದಾರಿಯಲ್ಲಿ ರೇಗಿಸಿದ್ದೇ ಅಕೆ ಹೆಚ್ಚು ವೇಗದಲ್ಲಿ ದಾರಿ ನೋಡದೆ ಕಾರು ಬಿಡಲು ಕಾರಣವಾಗಿರಬೇಕು ಎನ್ನುತ್ತಾನೆ. ವಿಶ್ವನಾಥ) ಅವನೂ, ಕಥೆ ಹೇಳುವವನೂ ಆಡುವುದು ಒಂದೇ ಮಾತು ಹೀಗಾಗುತ್ತದೆ ಎಂದು ಯಾರಿಗೆ ತಿಳಿದಿತ್ತು ? ಮತ್ತೆ ಇಲ್ಲಿ ಮನಸ್ಸಿನ ಮೇಲೆ ಮುದ್ರೆ ಒತ್ತುವುದು ಮನುಷ್ಯನ ಸಹಾಯ ಹೀನ ಸ್ಥಿತಿ.

ಈ ಎರಡೂ ಕತೆಗಳು (೦–೦ = ೦, ಇನ್ನೊಂದು ಮುಖ) ಸೋಪಾಸನ ಕತೆಗಳಂತೆ ನೈತಿಕ ಪ್ರಶ್ನೆಗಳನ್ನೆತ್ತುವುದಿಲ್ಲ. ಆಳವಾದ ನಿರಾಶೆ ಇವುಗಳ ಕೇಂದ್ರದಲ್ಲಿದೆ.

ಪ್ರಗತಿಶೀಲ ಸಾಹಿತಿಗಳ ಸೃಷ್ಟಿಯಲ್ಲಿ ಇದು ವಿರಳ. ಆದರೆ ಭಾಷೆಯ ಮೂಲಕ ಜೀವನದಲ್ಲಿ ಒಂದು ರೀತಿಯಲ್ಲಿ ನಮ್ಮ ಅನುಭವಕ್ಕೆ ತಂದು ಕೊಡುವುದರಲ್ಲಿ ಇದು ಯಶಸ್ವಿಯಾಗುತ್ತದೆ. (ಮೋಪಾಸನ ಜಗತ್ ಪ್ರಸಿದ್ಧ ಕತೆ 'ದಿನೆಕ್ಲೇಸ್' ನೋಡಿರಿ.) ಮಾನವನ ಸೃಷ್ಟಿ ಅವನ ಪ್ರಯತ್ನ ಇವುಗಳ ಮಿತಿ ಸುತ್ತಲಿನ ಜಗತ್ತಿನ ಅಂತ್ಯ ಇವನ್ನು ನಿಶಿತವಾಗಿ ನಮ್ಮ ಅನುಭವಕ್ಕೆ ತಂದುಕೊಡುವ ಕತೆಗಳು ಇವು. ತ.ರಾ.ಸು. ಅವರ ನಾಲ್ಕನೆಯ ಸಂಕಲನ ಮೂರನೆಯ ಸಂಕಲನ ಪ್ರಕಟವಾದ 10 ವರ್ಷಗಳ ನಂತರ ಹೊರ ಬಿದ್ದಿತು. ಕಳೆದ ಹದಿನೈದು ವರ್ಷಗಳಲ್ಲಿ ಅವರ ಕತೆಗಳ ಸಂಕಲನವನ್ನು ಹೊರ ತಂದಿಲ್ಲ. ಕಾರಣ ಇದೇ ನಿಜವಾದ ಸಂಪತ್ತು ಪುಸ್ತಕದ ಮುನ್ನುಡಿಯಲ್ಲಿದೆ. 'ಕಾದಂಬರಿಯನ್ನು ಬರೆಯುವುದಕ್ಕಿಂತಲೂ ಸಣ್ಣ ಕಥೆಯನ್ನು ಬರೆಯುವುದು ಕಠಿಣವಾದ ಕಲಾಮಾರ್ಗ ಎಂಬ ಸತ್ಯ ನನಗೆ ಗೋಚರಿಸಿದೆ'.

ವಿಷಾದವೇ ತ.ರಾ.ಸು. ಕತೆಗಳ ಸ್ಥಾಯಿಯಾಗಿತ್ತು ಈ ಸಂಕಲನದವರೆಗೆ. 'ಇದೇ ನಿಜವಾದ ಸಂಪತ್ತು'ನಲ್ಲಿ ಸಮಾಧಾನವಿದೆ. ಜೀವನದ ಕಟ್ಟಕಡೆಯ ಮೌಲ್ಯಗಳ ಅನ್ವೇಷಣೆ ಇದೆ ಅಕ್ಷರಶಃ ನಿಜವಾಗಿ ಸ್ವೀಕರಿಸುವಂತಹ ಕತೆಯಲ್ಲ ಇದು. ಭೂಮಿಕಾಣಿಕೆಗಳನ್ನು ಸಂಪಾದಿಸುವುದೇ ಮುಖ್ಯವಲ್ಲ, ಬಾಳಿನಲ್ಲಿ ಇವನ್ನು ಮೀರಿದ ಭಾಗ್ಯವಿದೆ. ಕತೆಯ ಕೊನೆಯಲ್ಲಿ ಮಗನಾಭಾನೇದಿಷ್ಟನಿಗೆ ಹೇಳುತ್ತಾನೆ "ಧನಕನಕಗಳಿಗಿಂತಲೂ ಅದನ್ನು ಉತ್ಪಾದಿಸುವ ಶಕ್ತಿಯನ್ನು ಕೊಡುವ ಜ್ಞಾನವೇ ನಿಜವಾದ ಸಂಪತ್ತು" ಆ ಜ್ಞಾನವನ್ನು ಪಡೆದವನೇ ನಿಜವಾದ ಭಾಗ್ಯವಂತ. ಈ ರಹಸ್ಯವನ್ನು ತಿಳಿಸುವುದೇ ವೇದ. ಅದನ್ನು ತಿಳಿದವನೇ ಬ್ರಾಹ್ಮಣ "ನಾಭಾನೇದಿಷ್ಠನಿಗೆ ಈ ಮಾತುಗಳನ್ನು ಕೇಳಿ ಮೈಯಲ್ಲಿ ದಿವ್ಯವಾದ ಬೆಳಕಿನ ಹೊಳೆ ಹರಿದಂತಾಗುತ್ತದೆ. ನಾಭಾನೇದಿಷ್ಠನ ಮಾತು ನಡತೆ ಎಲ್ಲ ಸುಸಂಸ್ಕೃತವಾದದ್ದು, ಅನುಮಾನವಿಲ್ಲ. ಆದರೆ ಕತೆಯ ಕೊನೆಯಲ್ಲಿ ಬರುವ ಮಾತುಗಳು ಸ್ವಲ್ಪ ಗೊಂದಲವನ್ನುಂಟು ಮಾಡುತ್ತವೆ. ಧನಕನಕಗಳನ್ನು ಉತ್ಪಾದಿಸುವ ಶಕ್ತಿಯನ್ನು ಕೊಡುವ ಜ್ಞಾನವವೇ ನಿಜವಾದ ಸಂಪತ್ತು. ಆ ರಹಸ್ಯವನ್ನು ತಿಳಿಸುವುದೇ ವೇದ ಎಂಬ ಮಾತುಗಳನ್ನು ಒಪ್ಪಿ-ಕೊಳ್ಳಬಹುದೇ? ಗುರು "ಸತ್ಯಾನುಗ್ರಹ ಸಿದ್ಧಿರಸ್ತು, ಧರ್ಮಾನುಗ್ರಹ ಸಿರದ್ಧಿಸ್ತು" ಎಂದು ಹರಸಿದರು ಹರಕೆ ಫಲಿಸಿತು. ಇದು ಧನಕನಕಗಳ ಉತ್ಪಾದನೆಗಾಗಿಯೇ ನಿಜವಾದ ಬ್ರಾಹ್ಮಣ ಧನಕನಕಗಳ ಆಮಿಷವನ್ನು ಮೀರ ಬೇಕಲ್ಲವೇ? ಧರ್ಮವನ್ನು ಮೀರದ ಅರ್ಥ ಸಂಪಾದನೆ ತಪ್ಪಲ್ಲ, ಧರ್ಮದಿಂದ ಗಳಿಸಿದ ಸಂಪತ್ತು ವ್ಯಕ್ತಿಗೂ ಸಮಾಜಕ್ಕೂ ಭಾಗ್ಯ ನಿಜ. ಆದರೆ ಇದು ಜೀವನದ ಪರಮ ಗುರಿ ಆಗಬಲ್ಲದೆ?

ಸಂಕಲನದ ಎರಡನೆಯ ಕತೆ 'ಸಮಯ ಸ್ಫೂರ್ತಿ' ಒಂದೂರಿನಲ್ಲಾದ ಗಲಭೆಯ ಸತ್ಯಾಂಶಗಳ ಶೋಧನೆಯ ಕತೆ, ಕತೆ ಎಂಬ ದೃಷ್ಟಿಯಿಂದ ಕಟ್ಟುನಿಟ್ಟಾಗಿ

ನೋಡಿದರೆ ಇದನ್ನು ಶ್ರೇಷ್ಠ ರಚನೆ ಎನ್ನಲಾಗದಿದ್ದರೂ ಇದು ತುಂಬ ಕುತೂಹಲಕರವಾದ ಬರಹ ಮಾತ್ರವಲ್ಲ, ಮತ್ತೆ ಮತ್ತೆ ಯೋಚನೆಯನ್ನು ಪ್ರಚೋದಿಸುವ ಬರಹ ಎಂದು ಹೇಳಬೇಕು.

ತ.ರಾ.ಸು. ಸಣ್ಣಕತೆಯನ್ನು ತಮ್ಮ ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರೆ ಕನ್ನಡದ ಪ್ರಮುಖ ಕತೆಗಾರರ ಪಂಕ್ತಿಯಲ್ಲಿ ನಿಲ್ಲುತ್ತಿದ್ದರು ಎನ್ನುವುದಕ್ಕೆ 'ತೊಟ್ಟಿಲು ತೂಗಿತು'. 'ಒಂದು ತುಂಡು ಸುದ್ದಿ', '0-0=0', ಇನ್ನೊಂದು ಮುಖ ಇವು ಸಾಕ್ಷಿ. ಪ್ರಾರಂಭದಲ್ಲಿ ಅವರು ಈ ಮಾಧ್ಯಮದ ಮೇಲೆ ಪ್ರಭುತ್ವ ಸಾಧಿಸಲಾಗದಿದ್ದುದಕ್ಕೆ ಒಂದು ಮುಖ್ಯ ಕಾರಣ ಭಾಷೆಯ ಮೋಹ ವಾಚಾಳತೆ, 'ರೆಟರಿಕ್'ನ ಆಕರ್ಷಣೆ, ಎರಡನೆಯದಾಗಿ ಕತೆಗಳಲ್ಲಿ ಅವರು ಸ್ಪಷ್ಟವೂ ಸಮಗ್ರವೂ ಆದ ನೈತಿಕ ಧೋರಣೆಯನ್ನು ತಾಳಲು ಶಕ್ತರಾಗಲಿಲ್ಲ. (ಇದನ್ನು ಕಾದಂಬರಿಗಳಲ್ಲಿ ಸಾಧಿಸಿದರು) ಆದರೆ ಓದುಗರ ಆಸಕ್ತಿಯನ್ನು ಸೆರೆಹಿಡಿದು ಕಡೆಯ ಶಬ್ದದವರೆಗೆ ಕರೆದೊಯ್ಯಬಲ್ಲ ಶಕ್ತಿ ಅವರದು, ತಾಂತ್ರಿಕವಾಗಿ ಮೇಲೆ ಹೆಸರಿಸಿದ ಕಡೆಯ ಮೂರು ಕತೆಗಳು ಗಮನಾರ್ಹ. 'ಒಂದು ತುಂಡು ಸುದ್ದಿ'ಯಲ್ಲಿ ಕತೆಯ ಪರಿಧಿ ವಿಸ್ತಾರವಾಗುತ್ತಹೋಗಿ, ಸತ್ತು ಕತೆಯಲ್ಲಿ ನೇರವಾಗಿ ಕಾಲಿಡುವವನ ಜೀವನ ಬಿಚ್ಚಿಕೊಳ್ಳುವುದು '0-0=0'ಯಲ್ಲಿ ಕ್ರಮೇಣ ಕತೆಯ ಕೇಂದ್ರವಾಗುವುದು ಸಂಕೇತಗಳ ಬಳಕೆ ಇನ್ನೊಂದು ಮುಖದಲ್ಲಿ ಒಂದೇ ಘಟನೆಯಿಂದ ಶರೀರದ ಬಾಹ್ಯ ಸ್ವರೂಪ. ಮನಸ್ಸಿನ ದೃಷ್ಟಿಕೋನ, ನಿಸರ್ಗ ಇವೆಲ್ಲದರ ಮತ್ತೊಂದು ಮುಖದ ಮೇಲೆ ಬೆಳಕು ಹಾಯಿಸುವುದು. ಇವು ವಿಶಿಷ್ಟ ಪ್ರಯೋಗಗಳು. ಮೂರನೆಯದಾಗಿ ಭಾಷೆಯ ಸಂಪನ್ಮೂಲಗಳನ್ನು ಶೋಧಿಸಿ ತೆಗೆದು ಕೆಲವೇ ವಾಕ್ಯಗಳಲ್ಲಿ ಭಾವ–ರಾಗಗಳನ್ನು ಕೆಣಕ ಬಲ್ಲ ಶೈಲಿಯನ್ನು ಸಣ್ಣಕತೆಗೆ ತಂದುಕೊಟ್ಟರು. ಅ.ನ.ಕೃ. ಸಣ್ಣಕತೆಯ ಭಾಷೆಗೆ ಲವಲವಿಕೆಯನ್ನು ತಂದರೆ ತ.ರಾ.ಸು. ಭಾವ ಸಂಪತ್ತನ್ನು ತಂದು ಕೊಟ್ಟರು. ಜೊತೆಗೆ ಕಣ್ಣಿಗೆ ಕಟ್ಟುವ ಚಿತ್ರಗಳನ್ನು ಕೆಲವೇ ಶಬ್ದಗಳಲ್ಲಿ ಸೃಷ್ಟಿಸ ಬಲ್ಲರು. ಹೀಗೆ ಕನ್ನಡ ಸಣ್ಣಕತೆಯ ಭಾಷೆ ಮೂರ್ತತೆಯನ್ನು ಪಡೆಯಿತು. ಕನ್ನಡ ಸಣ್ಣ ಕತೆಗಳ ಸಂಕಲನಗಳಲ್ಲಿ "ಅವರ ಇನ್ನೊಂದು ಮುಖ "0-0=0" ಸ್ಥಾನ ಪಡೆದಿವೆ. ಈ ಮಾಧ್ಯಮವನ್ನು ಅವರು ಇನ್ನಷ್ಟು ಕೃಷಿ ಮಾಡಲಿಲ್ಲವಲ್ಲ ಎಂದು ಖೇದವಾಗುತ್ತದೆ.

ರೂಪಸಿ

—ಟಿ. ಶಾಮಸುಂದರ

ಇಂದು ತ.ರಾ. ಸುಬ್ಬರಾಯರು ಅಂದರೆ ಪ್ರಸಿದ್ಧ ಕಾದಂಬರಿಕಾರರು ಎಂದು ಹೆಚ್ಚಿನ ಜನ ಗುರುತಿಸುತ್ತಾರೆ. ತ.ರಾ.ಸು. ಅವರು ಕಾದಂಬರಿಕಾರರಲ್ಲದೆ ಇತರ ಸಾಹಿತ್ಯ ಪ್ರಕಾರಗಳಲ್ಲೂ ತಮ್ಮ ಸೇವೆ ಸಲ್ಲಿಸಿದ್ದಾರೆಂಬುದು ಅನೇಕರಿಗೆ ತಿಳಿದಿಲ್ಲ. ತ.ರಾ.ಸು. ಅವರು ಪ್ರಸಿದ್ಧ ಸಣ್ಣಕಥೆಗಾರರೂ ಕೂಡ. ಆದರೆ ಹೆಚ್ಚು ಜನರು ಅವರ ಸಣ್ಣಕಥೆಗಳತ್ತ ದೃಷ್ಟಿ ಹರಿಸಿಲ್ಲ. ಈ ಲೇಖನದಲ್ಲಿ ತ.ರಾ.ಸು. ಅವರ "ರೂಪಸಿ" ಕಥಾ ಸಂಗ್ರಹದ ಕಥೆಗಳನ್ನು ಓದುಗರಿಗೆ ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದೆ. ರೂಪಸಿಯ ಕಥೆಗಳು ಸುಮಾರು ಮೂರುವರೆ ದಶಕಗಳ ಹಿಂದೆ ಬರೆದವು. ಇಲ್ಲಿಯ ಕಥೆಗಳು ಅಭ್ಯಾಸದಿಂದ 30 ವರ್ಷಗಳ ಹಿಂದಿನ ತ.ರಾ.ಸು. ಅವರ ಕಥೆಗಾರಿಕೆ ಮತ್ತು ಅಂದು ಕನ್ನಡ ಸಣ್ಣ ಕಥೆಗಳು ಯಾವ ಬಗೆ ಇರುತ್ತಿದ್ದವು ಎಂಬುದರ ಒಂದು ಸ್ಯಾಂಪಲ್ ನಮಗೆ ದೊರಕಿದಂತಾಗುತ್ತದೆ.

ಇಂದಿನ ಗಡಿಬಿಡಿಯ ಜೀವನದಲ್ಲಿ ಕಾಲದ ಅಭಾವವಿರುವ ಸಾಹಿತ್ಯ ಪ್ರೇಮಿಗಳಿಗೆ ಸಣ್ಣ ಕಥೆಗಳು ಮಾತ್ರ ಅವರ ಸಾಹಿತ್ಯ ದಾಹವನ್ನು ತಣಿಸಬಲ್ಲ ಓಯಸಿಸ್ ಇದ್ದಹಾಗೆ. ಚಿಕ್ಕ ಕಥೆಗಳು ಅಂಗೈನಲ್ಲಿ ಆಕಾಶ ತೋರಬಲ್ಲವು. ಇತರ ಸಾಹಿತ್ಯ ಪ್ರಕಾರಗಳಂತೆಯೇ ಸಣ್ಣ ಕಥೆಗಳು ಮಾನವ ಜೀವನದ ನಾನಾಮುಖಗಳ, ವಿವಿಧ ಸ್ವರಗಳ, ಬಗೆಬಗೆಯ ರೀತಿ ನೀತಿಗಳ ದರ್ಶನವನ್ನು ಚೊಕ್ಕದಾಗಿ, ಸಹಜವಾಗಿ ನೀಡಬಲ್ಲವು. ಒಂದು ಮಾತಿನಲ್ಲಿ ಹೇಳುವುದಾದರೆ ಸಣ್ಣಕಥೆಗಳು ನಮಗೆ ವಿಶ್ವ ರೂಪದರ್ಶನ ಮಾಡಿಸಬಲ್ಲವು. ಅದನ್ನು ನೋಡುವ ದೃಷ್ಟಿ ಇರಬೇಕಾದ್ದು ಮುಖ್ಯ.

ರೂಪಸಿ ಕಥಾ ಸಂಕಲನದ ಪ್ರಥಮ ಕಥೆ "ರೂಪಸಿ" ಈ ಕಥೆಯ ಸಾಲುಗಳು ಪ್ರಾರಂಭದಲ್ಲಿ ಪೇಲಾಯುಧ ಯಾರು? ಮೂರು ಗಳಿಗೆಯ ಸುಖ ಬಯಸಿದವರಾರು? ಅದು ಏನು? ಎಂಬ ಕುತೂಹಲ ಕೆರಳಿಸಿ ಓದಿಸಿಕೊಂಡು ಹೋಗುವ ಕಥೆ. ಇವನು ಶ್ರೀಮಂತ ಯುವಕ, ಪೇಲಾಯುಧ ದಿಕ್ಕಿಲ್ಲದ ಬಡವ. ಬಡವನಿಗೆ ಧಾರಾಳವಾಗಿ ಸಹಾಯ ಮಾಡಿದ. ಗೆಳೆಯನ ಉಪಕಾರಕ್ಕೆ ಮನಸೋತ ಪೇಲಾಯುಧ "ನಿನಗೇನು ಬೇಕು ಹೇಳು ನಾನು ಅದನ್ನು ಕೊಡುವೆ" ಎಂದಾಗ ಗೆಳೆಯನಿಗೆ ನಂಬುಗೆ ಬರಲಿಲ್ಲ. ಅವನು ಬೇಕೆಂದೇ ರೂಪಸಿಯನ್ನು ಬೇಡಿದ. ಕೋಟಿ ಕೋಟಿ ಕೊಡುವ ಶಿವನ ಹತ್ತಿರ ಮೂರು ಹಿಡಿ ಬೂದಿಯನ್ನು ಕೇಳಿದಂತಾಗಿತ್ತು ಗೆಳೆಯನ ಅಲ್ಪ ಬಯಕೆ. ಗೆಳೆಯನ ಅಲ್ಪಮತಿ ಮತ್ತು ಕ್ಷಣಿಕ ಬಯಕೆಯನ್ನು ಕಂಡ ಪೇಲಾಯುಧನಿಗೆ ಬೇಸರಿಕೆಯಾಗಿ ಮತ್ತೇನಾದರೂ ಕೇಳುವಂತೆ ಹೇಳಿದರೂ ಅವನು ರೂಪಸಿಯನ್ನೇ ಬೇಡಿದ ಗೆಳೆಯನಿಗೆ ಬಲು ದೊಡ್ಡ ಕಾಣಿಕೆ ಕೊಡಬೇಕೆಂದು ಪೇಲಾ

ಯುಧ ನಿರ್ಧರಿಸಿದ್ದ, ಅವನ ಮಂತ್ರ ಸಿದ್ಧಿ ಅಷ್ಟರ ಮಟ್ಟಿನದಾಗಿತ್ತು. ಅವರೆ ಸ್ನೇಹಿತನ ಬಯಕೆ ಕೂಡು ನಿರಾಶೆಯಾದರೂ ಅವನ್ನು ಈಡೇರಿಸಿದ್ದ. ಗೆಳೆಯ ರೂಪಸಿಯನ್ನು ಕೂಡ ಅವಳ ಮಧುರ ಧ್ವನಿಗೆ, ಮಾಯಾ ಮೋಹಕ ರೂಪಿಗೆ ಮನಸೋತು ವೇಲಾಯುಧ ಹೇಳಿದ್ದ ಎಚ್ಚರಿಕೆಯನ್ನು ಮರೆತು ಮುಂದುವರೆಯಲಿದ್ದ ಸ್ನೇಹಿತನನ್ನು ತಡೆದು ಅವನ ಸರ್ವನಾಶದಿಂದ ಕಾಪಾಡಿದ್ದ ಮಂತ್ರ ಸಿದ್ಧಿ ಪಡೆದಿದ್ದ ವೇಲಾಯುಧ. ಇನೊಂದು ಮಾಂತ್ರಿಕನ ಕಥೆ, ಇವರಲ್ಲಿ ಬರುವ ರೂಪಸಿಯ ವರ್ಣನೆ ನಮಗೆ ಮೋಹಿನಿ, ಅಪ್ಸರೆ ಮತ್ತು ಗಂಧರ್ವ ಕನ್ನಿಕೆಯರನ್ನು ಕಣ್ಣು ಮುಂದೆ ತಂದು ನಿಲ್ಲಿಸಿ ನೂರು ಕಲ್ಪನೆಯನ್ನು ನಮ್ಮಲ್ಲಿ ಪ್ರಚೋದಿಸುವಷ್ಟರ ಮಟ್ಟಿಗೆ ಪ್ರಭಾವವಾಗಿದೆ. ಇದೊಂದು ಸಾಮಾನ್ಯ ಕಥೆಯಾದರೂ ಅದರ ವರ್ಣನೆ ಮತ್ತು ಹೇಳಿರುವ ರೀತಿಯನ್ನು ಗಮನಿಸಬಹುದಾಗಿದೆ.

"ಏಕೆ ಬರಲಿಲ್ಲ?" ರೂಪಸಿಯ ಎರಡನೆಯ ಕಥೆ. ನೃತ್ಯ ಕಲಾವಿದ ಮೂರ್ತಿ ತನ್ನ ಶಿಷ್ಯೆಗೆ ನೃತ್ಯ ಹೇಳಿ ಕೊಡುತ್ತಿರುವುದರಿಂದ ಕಥೆ ಪ್ರಾರಂಭವಾಗುತ್ತದೆ. ಮೂರ್ತಿಯ ಯೌವನ, ಆಕರ್ಷಕ ರೂಪು ಮತ್ತು ಅವನ ವಿದ್ವತ್ತಿಗೆ ಲತಾಳ ಮನಸ್ಸು ಸೋಲುವುದು. ಲತಾ ನೃತ್ಯಭಂಗಿಯನ್ನು ಸರಿಯಾಗಿ ತೋರಿಸದಿದ್ದಾಗ ಮೂರ್ತಿ ಅವಳ ಅಂಗಾಂಗಳನ್ನ ಮುಟ್ಟಿ ತಿದ್ದುತ್ತಿರುವಾಗ ಅವನ ಸ್ಪರ್ಶ ಅವಳಲ್ಲಿ ಉದ್ವಿಗ್ನತೆ ತರುವುದು. ಅವಳ ಮನದ ಸುಪ್ತ ಬಯಕೆ ಕೆದರಿ ಹುಚ್ಚು ಹೊಳೆಯಾಗಿ ಅವಳ ವಿವೇಕವನ್ನೂ ಸಂಯಮವನ್ನೂ ಕೊಚ್ಚಿಕೊಂಡು ಹೋಗುವುದು. ಮೂರ್ತಿ ಮತ್ತೆ ಎಂದಿನಂತೆ ಮಾರನೇದಿನ ಬಂದಾಗ ಲತಾ ಉನ್ಮತ್ತಳಾಗಿ ಅವನ ಎದೆಗೊರಗಿ ಸಲ್ಲದ್ದರ ಬೇಡಿಕೆಯನ್ನು ತೋರಿದ ಅವಳ ಬಾಲಿಶ ವರ್ತನೆ ಕಂಡ ಮೂರ್ತಿ ಮಗುವಿನಂತೆ ಅವಳನ್ನು ಮಲಗಿಸಿ ಹೊರಟು ಹೋಗುವ. ಮೂರ್ತಿಗೆ ಲತಾಳ ಸುಂದರ ದೇಹ ಬೇಕಿರಲಿಲ್ಲ, ಅವಳ ಕಲೆ ಮಾತ್ರ ಅವನನ್ನು ಸೆರೆಹಿಡಿದಿತ್ತು. ಮಾರನೆ ದಿನ ಮೂರ್ತಿ ಒಬ್ಬ ಹುಡುಗನ ಕೈಲಿ ಚೀಟಿ ಬರೆದು ಕಳಿಸಿ ತಾನು ಇನ್ನು ಮೇಲೆ ಬರುವುದಿಲ್ಲ ವೆಂದು ತಿಳಿಸಿದ್ದ. ಲತಾಳ ತಾಯಿ ಅಂದು ಮೂರ್ತಿ ಬರದಿದ್ದಾಗ 'ಮೇಷ್ಟ್ರು ಏಕೆ ಬರಲಿಲ್ಲ?' ಎಂದು ಮಗಳನ್ನು ಕೇಳಿದಾಗ ಲತಾ ಏನು ಉತ್ತರ ಕೊಡಬೇಕೆಂದು ತೋರದೆ ಚಾಟಿ ಏಟು ತಿಂದಂತೆ ಮುಖ ಮುಚ್ಚಿ ಅಳುತ್ತ ಮಲಗುವಳು. ಕಲೆಯ ಆರಾಧಕ ಕಾಮನ ಕೈಗೊಂಬೆಯಾಗಲಾರೆ ಎಂದು ಒಬ್ಬ ಶಿಷ್ಯಳನ್ನು ತಿದ್ದಿ ಅವಳನ್ನು ಎಚ್ಚರಿಸಿದ ಕಥೆಯಿದು. ವರ್ಣನೆಯೇ ಈ ಕಥೆಯ ಮುಖ್ಯ ಬಂಡವಾಳವಾಗಿದ್ದು ಉಳಿದದ್ದು ಸಾಮಾನ್ಯ ವೆನಿಸುವುದು.

"ಗೆಲುವಿನ ಸೋಲು" ರೂಪಸಿ ಸಂಕಲನದ ಮೂರನೆಯ ಕಥೆ. ಇಲ್ಲಿನ ನಿರಂಜನ ಯುವಕ ಕಥೆಗಾರ. ಕಲ್ಪನೆಯಲ್ಲಿ ಕಾಲ ನೂಕುತ್ತಿದ್ದ ಕನಸುಗಾರ. ಕಲ್ಪನೆಯ ಜಗತ್ತಿನಲ್ಲಿ ಒಂದೆರಡು ಘಟನೆ ನಡೆದು ಅವನಿಗೆ ಕಲ್ಪನೆಯನ್ನೇ ನಿಜವೆಂದು ಭ್ರಮಿಸುವಂತಾಗಿತ್ತು. ಕಲಾವಿದರನ್ನು ಗೌರವಿಸುತ್ತಿದ್ದ ಕಾಮಾಕ್ಷಮ್ಮನವರನ್ನು

ತಪ್ಪು ತಿಳಿದು ಅವರನ್ನು ದಾರಿ ತಪ್ಪಿಸಿ ಸುಖಿಸುವ. ನಾನು ಗೆದ್ದೆ ಎಂದು ಬೀಗುತ್ತಿದ್ದ ಇವನಿಗೆ, ಎಚ್ಚರಗೊಂಡ ಕಾಮಾಕ್ಷಮ್ಮ ಕನಸಿನಲ್ಲಿದ್ದವನನ್ನು ಎಚ್ಚರಿಸಿ ಮತ್ತೆ ಮನೆಯ ಕಡೆ ತಲೆ ಹಾಕದಂತೆ ಹೊರ ಹಾಕುತ್ತಾಳೆ. ಸಂಕಲನದ ಸಾಮಾನ್ಯ ಕಥೆಯಾಗಿ ಎಲ್ಲ ರೀತಿಯಲ್ಲೂ ಸೋತಿದೆ ಎನ್ನಬಹುದು. ಅ.ರಾ.ಸೆ. ಅವರ ಈ ಬಗೆಯ ಪ್ರಾರಂಭಿಕ ಬರಹವನ್ನು ಈಗ ಅವರಿಗೆ ಹೋಲಿಸುವಂತೆಯೂ ಇಲ್ಲ. ಕೆಲವರು ಇದು ಅ.ರಾ.ಸೆ. ಅವರು ಬರೆದದ್ದಲ್ಲ ಎನ್ನುವಂತೆಯೇ ಇರುವ ಈ ಕಥೆ ಪ್ರಾರಂಭ ಲೇಖಕನ ಕಥೆಯ ಎಲ್ಲ ಲಕ್ಷಣ ಪಡೆದಿದೆ.

"ಮೂರು ನಗು" ಈ ಸಂಕಲನದ ನಾಲ್ಕನೆ ಕಥೆ. ಕಥಾನಾಯಕ ಶ್ರೀಮಂತರ ಮಗನಾಗಿ ಬೇಗನೆ ಮದುವೆಯಾಗಿದ್ದ. ಸುಂದರ ಹುಡುಗಿ ಸರಸಳ ಜೊತೆ ಹತ್ತು ವರ್ಷ ಸಂಸಾರ ಮಾಡಿದ್ದ. ಒಮ್ಮೆ ಅನಿರೀಕ್ಷಿತವಾಗಿ ಬಾಹ್ಯ ಪ್ರಚೋದನೆಗೆ ಒಳಗಾಗಿ ಹಿಡಿತ ತಪ್ಪಿದ, ವಯಸ್ಸಾಗಿದ್ದ ಹುಡುಗಿ ಅವನಿಗೆ ಮುದುಕಿಯಾಗಿ ಕಂಡಳು ಗಂಡನ ಮನಸ್ಸನ್ನು ಅರಿತ ಸರಸ ನಕ್ಕು ಸುಮ್ಮನಾದಳು. ಕ್ಯಾಥರೀನಳ ಹೊರ ರೂಪಿಗೆ ಮರುಳಾದ ಗಂಡನ ಕಪಟ ನಾಟಕ ತಿಳಿದ ಹೆಂಡತಿ ಸರಸ ಜಾಣೆ ಗಂಡನನ್ನು ಪ್ರತಿಭಟಿಸದೆ ಮತ್ತೊಮ್ಮೆ ನಕ್ಕು ಸುಮ್ಮನಾದಳು. ಕೊನೆಗೊಂದುದಿನ ಅವನಿಗೆ ಕ್ಯಾಥರೀನಳ ಹುಚ್ಚು ಬಿಟ್ಟು ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪದಿಂದ ಹೆಂಡತಿಗೆ ನಿಜ ಹೇಳಿ ಕ್ಷಮೆಯಾಚಿಸಿದಾಗಲೂ ಅವಳು ನಕ್ಕು ಸುಮ್ಮನಾದಾಗ ಅವಳ ನಗುವಿನ ಅರ್ಥ ಅವನಿಗಾಯಿತು. ಮನೆಯ ದೀಪಕ್ಕಿಂತಲೂ ಬೀದಿ ದೀಪದ ಪ್ರಕಾಶ ಹೆಚ್ಚು ಆದರೆ ಆ ಬೀದಿ ದೀಪದ ಬೆಳಕಲ್ಲೇ ಎಷ್ಟು ಹೊತ್ತು ಹೊರಗೇ ಇರಲು ಸಾಧ್ಯ? ಮನೆಯ ಹಿತ–ಮಿತವಾದ ದೀಪದ ಬೆಳಕಿಗೆ ಮತ್ತೆ ಹಿಂದಿರುಗಲೇ ಬೇಕು ಮತ್ತು ಅದರಡಿಯಲ್ಲೇ ಬಾಳಬೇಕು – ಎನ್ನುವ ಸರಸಳ ಮಾತಿನ ಅರ್ಥ ಅವನಿಗಾಯಿತು. ಈ ಕಥೆಯಲ್ಲಿ ಬರುವ ಸರಸ ಸಹನೆಯ ಮೂರ್ತಿಗಾಗಿ, ಮನೆಯ ಹೆಣ್ಣಿನ ಗೌರವ ಘನತೆಯನ್ನು ಎತ್ತಿ ತೋರಿಸಿ ದುರಂತವಾಗುವುದನ್ನು ತಪ್ಪಿಸಿ ಸುಖಾಂತವನ್ನಾಗಿ ಮಾಡಿದ ಬುದ್ಧಿವಂತಿಕೆ ತೋರುತ್ತದೆ.

"**ಸಾಕ್ಷಾತ್ಕಾರ**" ರೂಪಸಿ ಕಥಾಸಂಕಲನದ ಕೊನೆಯ ಮತ್ತು ಉತ್ತಮವಾದ ಒಂದು ಕಥೆ. ಮಿಠಾಯಿಯನ್ನು ಕಂಡು ಆಸೆ ಪಡುವ ಹಸಿವೂ, ಹೆಣ್ಣನ್ನು ಕಂಡು ಬಯಸುವ ಹಸಿವೂ ಒಂದೇ, ಇದಕ್ಕೆ ನಾಚಿಕೆ ಏಕೆ? ಬೇಸರ ಬಂದ ಹೆಣ್ಣಿನ ಕೊರಳಿಗೇ ಜೋತು ಬಿದ್ದು ಬಾಳುವ ಬೇಸರಕ್ಕಿಂತ ಇನ್ನು ಪಾಪವಿದೆಯೆ? ಬಾಡಿ ಬಾಗಿದ ಹೂವನ್ನೇ ಯಾರಾದರೂ ಮುಡಿಯುತ್ತಾರೆಯೆ? ಎನ್ನುವ ಧೋರಣೆಯುಳ್ಳ ಯುವಕ. ತನಗೆ ಬೇಕಾದುದ್ದನ್ನು ಭೋಗಿಸುವುದು ಮಾತ್ರ ಅವನಿಗೆ ಬೇಕಿತ್ತು. ಅವನ ಪ್ರಣಯದಾಟದಿಂದ ವಂಚಿತರಾದರೂ, ಪ್ರಾಣ ಕಳೆದುಕೊಂಡವರೂ ಇದ್ದರು. ಇಷ್ಟಾದರೂ ಅವನು ಪರಿವರ್ತಿತನಾಗಲಿಲ್ಲ. ತನ್ನ ಕೆಟ್ಟ ಚಾಳಿಯನ್ನು ಬಿಡಲಿಲ್ಲ. ಸೋದರ ಮಾವ ಬಂದು ಮಗಳು ಲಲಿತೆಯನ್ನು ಮದುವೆ

ಯಾಗುವಂತೆ ಕೇಳಿದಾಗ ನಿರಾಕರಿಸಿದ್ದ. ಅವರು ಬೇರೆ ಗಂಡನ್ನು ನೋಡಿ ಮಗಳ ಮದುವೆ ಮುಗಿಸಿದರು.

ಮುಂದೆ ಯಾವುದೋ ಕೆಲಸದ ನಿಮಿತ್ತ ಆ ಸೋದರ ಮಾವನ ಮನೆಗೇ ಹೋಗಬೇಕಾಗಿ ಬಂತು. ಸೋದರಮಾವ ತನ್ನ ಹೆಂಡತಿ ತೀರಿ ಹೋದ ಕಾರಣ ಒಬ್ಬನೆ ಇರಲು ಬೇಸತ್ತು ಮಗಳು ಲಲಿತೆಯನ್ನು ಕರೆಸಿಕೊಂಡಿದ್ದ. ಇವನು ಅಲ್ಲಿಯ ವರೆಗೂ ಲಲಿತೆಯನ್ನು ಕಂಡಿರಲಿಲ್ಲ. ಕಂಡಿದ್ದರೂ ಸರಿಯಾಗಿ ನೋಡಿರಲಿಲ್ಲ. ಸೋದರ ಮಾವನೇ "ಇವಳು ಲಲಿತ ನನ್ನ ಮಗಳು" ಎಂದು ಪರಿಚಯ ಮಾಡಿಸಿ ದಾಗ ಇವನು ಪಶ್ಚಾತ್ತಾಪ ಪಡುವಂತಾಯಿತು. ಲಲಿತೆಯ ಸುಂದರ ರೂಪು, ಸುಸಂಸ್ಕೃತ ನಡೆ, ಅವಳ ಮೋಹಕ ಮಧುರ ಧ್ವನಿ ಇವನನ್ನು ಹಂಗಿಸಲಾರಂಭಿಸಿದವು. ತಾನು ಮಾಡಿದ್ದು ತಪ್ಪು ಇಂತಹ ಅಪ್ಸರೆಯಂತಹ ಹೆಣ್ಣನ್ನು ನಾನು ಕಳೆದುಕೊಳ್ಳ ಬಾರದಿತ್ತು. ಆದರೆ ಈಗ ಮಾಡುವುದೇನು. ಈಗ ಅವಳು ಬೇರೊಬ್ಬರ ಸ್ವತ್ತು. ಅವಳನ್ನು ಮುಟ್ಟುವುದಕ್ಕೂ ಅರ್ಹತೆಯಿಲ್ಲ. ಎಂತಹ ತಪ್ಪುಮಾಡಿದೆ. ನನ್ನದಾದ ಈ ಹೆಣ್ಣು ಬೇರೆಯವರಿಗಾಯಿತು. ಈಗ ಆ ಹೆಣ್ಣು ನನಗೆ ಬೇಕು. ಅದು ನನ್ನದೇ ಆಗಿದ್ದು ಈಗ ತಪ್ಪಿಹೋಗಿದೆ ಅಷ್ಟೆ, ಮತ್ತೆ ಅದನ್ನ ನಾನು ಪಡೆಯಲೇ ಬೇಕು. ಅವನ ಹಟ ಮಿತಿ ಮೀರಿತು. "ಪ್ರೀತಿಗೆ ದೇಹದ ಬಯಕೆ ಇರಬಾರದು" ಎಂದು ಲಲಿತ ಎಷ್ಟು ಹೇಳಿದರೂ ಕೇಳಲಿಲ್ಲ. ಕೊನೆಗೆ ಬೇರೆ ದಾರಿ ಕಾಣದೆ ಅವನ ಪ್ರಾಣ ಉಳಿಸಲು ಲಲಿತ ತನ್ನ ದೇಹವನ್ನು ಒಪ್ಪಿಸಬೇಕಾಯಿತು. ಇದರಿಂದ ಅವನು ಬದುಕಿದ, ಆದರೆ ಲಲಿತ ಸತ್ತಳು, "ಊರಿಗೆ ಹೋಗಿ ಹಣ ತೆಗೆದು ಕೊಂಡು ಬರು ತ್ತೇನೆ ನಾವಿಬ್ಬರೂ ಎಲ್ಲಿಗಾದರೂ ದೂರ ಓಡಿ ಹೋಗೋಣ" ಎಂದ ಅವನ ಮಾತಿಗೆ 'ಆಗಲಿ' ಅಂದಳು. ಅದರಂತೆ ಇವನು ಊರಿಗೆ ಹಿಂದಿರುಗಿ ಹಣ ಕೂಡಿಸುತ್ತಿದ್ದಾಗ ಸೋದರ ಮಾವನ ಕಾಗದ ಬಂತು, ಲಲಿತ ನೀರು ಪಾಲಾದಳು ಎಂದು. ಲಲಿತ ನೀರಿಗೆ ಹಾರಿಕೊಂಡು ಸತ್ತಿದ್ದಳು. ಲಲಿತಳ ಬಲಿದಾನ, ತ್ಯಾಗ ಇವನ ಕಣ್ಣು ತೆರೆಸಿತು. ನಿಜವಾದ ಪ್ರೀತಿಯ ಸಾಕ್ಷಾತ್ಕಾರವಾಗಿತ್ತು. ಜೀವನದ ಬೆಲೆ ಗೊತ್ತಾಯಿತು. ಅದುವರೆಗೂ ಇದ್ದ ಅವನು ಸತ್ತು ಮತ್ತೊಬ್ಬ ಅವನಲ್ಲಿ ಹುಟ್ಟಿ ಕೊಂಡಿದ್ದ. ಇವನು ಸಾಕ್ಷಾತ್ಕಾರದಿಂದ ಹೊಸಬನಾಗಿದ್ದ.

ಈ ಕಥೆಯಲ್ಲಿ ಬರುವ ಇತರ ಹೆಣ್ಣುಗಳಲ್ಲಿ ಒಬ್ಬಳು ಸತ್ತರೂ ಇವನಿಗೆ ಆಗೇಕೆ ಜ್ಞಾನೋದಯವಾಗಲಿಲ್ಲ? ಲಲಿತ ಸಾಯುವುದು ಬೇಕಿತ್ತೇ? ಅವನ ಸಾಕ್ಷಾತ್ಕಾರಕ್ಕೆ ಎನ್ನುವ ಅನುಮಾನ ಬರುತ್ತದೆ. ತ.ರಾ.ಸು. ಅವರ ಈ ಕಥಾಸಂಕಲ 1946–47 ರಲ್ಲಿ ಪ್ರಥಮ ಮುದ್ರಣ ಕಂಡು 1975 ರಲ್ಲಿ ಮರು ಮುದ್ರಣ ಕಂಡಿದೆ. ಇಲ್ಲಿನ ಕಥೆಗಳು ತ.ರಾ.ಸು. ಅವರ ಮುವತ್ತು ವರ್ಷಗಳಿಗೂ ಹಿಂದಿನ ಬರಹಗಳಾಗಿರುವುದ ರಿಂದ ಇಂದಿನ ಪಕ್ವವಾದ ಸತ್ವಪೂರ್ಣ ಬರಹದೊಂದಿಗೆ ಹೋಲಿಸಲಾಗದು. ಪ್ರತಿ ಯೊಬ್ಬ ಲೇಖಕನೂ ಪ್ರಥಮ, ಮಧ್ಯಮ, ಘಟ್ಟಗಳನ್ನು ದಾಟಿಯೇ ಮುಂದೆ ಬರ

ಬೇಕಾಗುತ್ತದೆ. ಇಲ್ಲಿನ ಕಥೆಗಳು ತ.ರಾ.ಸು. ಅವರ ಪ್ರಥಮ ಘಟ್ಟದ ಕಥೆಗಳಾಗಿವೆ ಎನ್ನಬಹುದು. ಸಂಕಲನದ ಮೊದಲ ನಾಲ್ಕು ಕಥೆಗಳು ಸಾಮಾನ್ಯವಾದವುಗಳು. ಕೊನೆಯ ಕಥೆ ಸಾಕ್ಷಾತ್ಕಾರದಲ್ಲಿ ಕತೆಗಾರರು ವಿಷಯ ಕುರಿತು ಹೇಳುವ ರೀತಿಯಿಂದ ಅವರ ಸುಧಾರಿಸಿದ ಶೈಲಿ, ಆಕರ್ಷಕ ನಡುಗೆಯಿಂದ ಸಂಕಲನದಲ್ಲಿ ಇದೊಂದು ಉತ್ತಮ ಕಥೆಯಾಗಿದೆ. ವಸ್ತು, ಬೆಳವಣಿಗೆ, ಶೈಲಿ ಎಲ್ಲ ಪಕ್ವವಾಗಿ "ಸಾಕ್ಷಾತ್ಕಾರ" ರೂಪಸಿ ಕಥಾಸಂಕಲನದ ಒಂದು ತುಂಬಿದ ಉತ್ತಮ ಕಥೆಯಾಗಿದೆ.

* ಕಡಲಿನಲ್ಲಿ ಹುಟ್ಟಿದ ಮೋಡ, ಮಳೆಯಾಗಿ. ನದಿಯಾಗಿ. ಲೋಕಕ್ಕೆ ತಂಪು ನೀಡಿ, ಮತ್ತೆ ಹೇಗೆ ಕಡಲನ್ನು ಸೇರುವುದೋ ಕಲಾವಿದನ ಬಾಳೂ ಹಾಗೇ ಆಗಬೇಕು. ದೈವಾನುಗ್ರಹದಿಂದ ಅರಳಿದ ಪ್ರತಿಭಾ ಪುಷ್ಪ. ದೈವಾನುಗ್ರಹ ಕೀಲಕವಾಗಿ ಮಾರ್ಗ ಮಧ್ಯದಲ್ಲಿ ಆದಷ್ಟು ದೈವ ಸೃಷ್ಟಿಯ ಸೇವೆಮಾಡಿ, ಕೊನೆಗೆ ದಿವ್ಯ ಪಾದಗಳಲ್ಲಿ ಲೀನವಾಗಬೇಕು. ದೈವೀಕೃಪೆಯ ಮಂತ್ರದಂಡ ತನ್ನಾವುದೋ ಕಾರ್ಯಕ್ಕಾಗಿ ಅರಸಿದ ಹೂವು ಜನತೆಗೆ ನೀಡುವ ತನ್ನ ಪರಿಮಳಕ್ಕೆ ಸುಂಕ ಕೇಳುತ್ತದೆಯೋ ?

† ನೃಪತುಂಗ

— ದೇ. ಜವರೇಗೌಡ

ಈಗಾಗಲೇ ಅನೇಕ ಕಥೆ–ಕಾದಂಬರಿಗಳನ್ನು ಬರೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಭದ್ರವಾದ ಸ್ಥಾನವನ್ನು ಗಳಿಸಿ ಕನ್ನಡಿಗರೆಲ್ಲರ ಆದರ–ಮನ್ನಣೆಗಳಿಗೆ ಪಾತ್ರರಾಗಿರುವ ಶ್ರೀ ತ.ರಾ. ಸುಬ್ಬರಾಯರ ಮತ್ತೊಂದು ಐತಿಹಾಸಿಕ ಕಾದಂಬರಿಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವುದೊಂದು ಹೆಮ್ಮೆಯ ವಿಷಯ. ಕರ್ನಾಟಕ ಸಾಮ್ರಾಜ್ಯ ರಮಾರಮಣನೂ, ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸರ್ವತೋಮುಖವಾದ ಬೆಳವಣಿಗೆಗೆ ಪ್ರೋತ್ಸಾಹವನ್ನು ಕೊಟ್ಟ ಚಕ್ರವರ್ತಿಗಳಲ್ಲಿ ಮೊದಲಿಗನೂ ರಾಷ್ಟ್ರಕೂಟ ನೃಪತುಂಗನ ಜೀವನ ಕಥೆಯೆಂದರೆ ಕನ್ನಡಿಗನ ಹೆಮ್ಮೆ ನೂರ್ಮಡಿಯಾಗದಿರದು.

ಐತಿಹಾಸಿಕ ಕಾದಂಬರಿಗಳ ರಚನೆ ಸುಲಭವಾದುದಲ್ಲ. ಅಂಥ ಕಾದಂಬರಿ ಕವಿಯ ಸೃಷ್ಟಿ ಶಕ್ತಿಯೂ, ಜೊತೆಗೆ ಸಂಶೋಧನಕಾರನ ತೀಕ್ಷ್ಣಮತಿಯೂ ಅತ್ಯವಶ್ಯಕ. ಕಣ್ಣೆದುರಿನ ಸಮಾಜವನ್ನೂ ವ್ಯಕ್ತಿಗಳನ್ನೂ ಚಿತ್ರಿಸುವುದಕ್ಕಿಂತ ವ್ಯಕ್ತಿಗಳನ್ನು ಚಿತ್ರಿಸುವುದು ಕಷ್ಟಸಾಧ್ಯ. ಆಗಿನ ಕಾಲದ ಸಾಮಾಜಿಕ, ಧಾರ್ಮಿಕ, ರಾಜಿಕ ಮತ್ತು ನೈತಿಕ ವ್ಯವಹಾರ ಸಂಪ್ರದಾಯಗಳನ್ನು, ಜನರ ವೇಷಭೂಷಣ, ಆಚಾರ–ವಿಚಾರ ಭಾವಾನುಭವ, ರುಚಿ ಸಂಸ್ಕಾರಾಭಿರುಚಿಗಳನ್ನು, ಆ ಯುಗದ ಮನೋಧರ್ಮ, ನಡೆವಳಿ, ನುಡಿವಳಿಗಳನ್ನು ಪ್ರಾಕೃತಿಕ ಮತ್ತು ಭೌಗೋಳಿಕ ಸನ್ನಿವೇಶ ವಾತಾವರಣಗಳನ್ನು ಅರಿತುಕೊಳ್ಳುವ ನಿಷ್ಠೆ, ಊಹಿಸಿಕೊಳ್ಳುವ ಶಕ್ತಿ ಕಾದಂಬರಿಕಾರನಿಗಿರಬೇಕು. ಇವುಗಳನ್ನು ಅರಿಯಲು ಸಮಕಾಲೀನವಾದ ಶಾಸನಗಳು, ವೀರಗಲ್ಲು, ಮಾಸ್ತಿಕಲ್ಲುಗಳು, ತಾವು ಶಿಲ್ಪ ಚಿತ್ರಾದಿ ಕಲೆಗಳು, ಗುಡಿಗೋಪುರ ಸತ್ರಗಳು, ಹಳೆಯ ಕಡತಗಳು, ಪ್ರವಾಸಿಗರ ಬರೆಹಗಳು, ದಂತಕಥೆ, ಸ್ಥಳ ಪುರಾಣಗಳು ಲಾವಣಿ–ಗಾದೆಗಳು ಮೊದಲಾದವು ಸಹಾಯಕವಾಗುತ್ತದೆ. ಇಷ್ಟರಿಂದ ಕಾದಂಬರಿಕಾರ ಸ್ಥೂಲರೇಖೆಗಳ ತಡಿಕೆಯನ್ನು ನಿರ್ಮಿಸಿಕೊಂಡು, ತನ್ನ ಪ್ರತಿಭಾ ಚಿತ್ರವನ್ನು ಕಲ್ಪನಾ ಜ್ಯೋತಿಯನ್ನು ಹರಿಸಿ ಜೀವದಾನ ಮಾಡಬೇಕಾಗುತ್ತದೆ. ಆದರೂ ಗತಕಾಲದ ನಿಷ್ಕೃಷ್ಟವೂ, ನಿರ್ದುಷ್ಟವೂ ಶಿಖರವೂ ಆದ ಪ್ರತಿಬಿಂಬವನ್ನು ಪಡೆಯಲು ಸಾಧ್ಯವೇ ಎಂಬ ಸಂದೇಹ ಇದ್ದೇ ಇರುತ್ತದೆ. ಅಂತೂ ವರ್ತಮಾನ ಕಾಲವನ್ನು ಮರೆಸಿ ಓದುಗರಲ್ಲಿ ಭೂತಕಾಲದ ಭ್ರಾಂತಿಯನ್ನುಂಟು ಮಾಡುವ ವಾತಾವರಣವನ್ನು ಕಲ್ಪಿಸುವುದಾದರೆ ಐತಿಹಾಸಿಕ ಕಾದಂಬರಿಕಾರ ಧನ್ಯ.

† ನೂರೆಂಟು ಪುಸ್ತಕಗಳು – ಪು. 136

ಶ್ರೀ ತ. ರಾ. ಸು. ಅವರು ಸಿಕ್ಕಿದಷ್ಟು ಸಾಧನ ಸಂಪತ್ತನ್ನು ಬಳಸಿಕೊಂಡು ಇಂಥ ವಾತಾವರಣವನ್ನು ಯಶಸ್ವಿಯಾಗಿ ಸೃಷ್ಟಿಸಿದ್ದಾರೆ. ಅವರು ನಡೆಸಿರುವ ಸಂಶೋಧನೆಯ ಗುರುತ್ವ, ಮಹತ್ವಗಳನ್ನು ಡಾ. ಶ್ರೀಕಂಠಶಾಸ್ತ್ರಿಗಳಂಥ ಪ್ರಸಿದ್ಧ ಸಂಶೋಧನಕಾರರೇ ಒಪ್ಪಿಕೊಂಡಿದ್ದಾರೆ. ಅವರ ಸಂಶೋಧನೆಯ ಪರಿಣಾಮ-ಪ್ರಭಾವಗಳು ಕಾದಂಬರಿಯ ಪ್ರತಿಯೊಂದು ಪುಟದಲ್ಲಿಯೂ ಪಾತ್ರದಲ್ಲಿಯೂ ಸನ್ನಿವೇಶ ವರ್ಣನೆಯಲ್ಲಿಯೂ, ಮಾತುಕತೆಗಳಲ್ಲಿಯೂ ಎದ್ದು ಕಾಣುತ್ತವೆ. ೯-೧೦ ನೆಯ ಶತಮಾನಗಳ ಸಮಾಜದ ಮನೋಧರ್ಮ, ಜನತೆಯ ಅಭೀಪ್ಸೆ. ಆಸೆ, ಆಕಾಂಕ್ಷೆಗಳು ನಾಡಿನ ಸಂಸ್ಕೃತಿ. ನಾಗರಿಕತೆಗಳು, ಆರ್ಥಿಕ ರಾಜಕೀಯ ಸ್ಥಿತಿಗತಿಗಳು, ಒಟ್ಟಿನಲ್ಲಿ ಇವೆಲ್ಲವನ್ನೊಳಗೊಂಡ ಜನಜೀವನ ಇಲ್ಲಿ ವಿಕಾಸಗೊಂಡಿದೆ.

ಚಾರಿತ್ರಿಕ ಘಟನೆಗಳ ಚೌಕಟ್ಟಿನಲ್ಲಿ ಅವುಗಳಿಗೆ ವಿರೋಧವಾಗದಂತೆ ಅನಿವಾರ್ಯವಾದೆಡೆ ಮಾತ್ರ ಅಗತ್ಯವಾದ ಪಾತ್ರಸನ್ನಿವೇಶಗಳನ್ನು ಕಲ್ಪಿಸಿಕೊಂಡು, ಕಥಾನಾಯಕನ ವ್ಯಕ್ತಿತ್ವವನ್ನೂ ಆ ವ್ಯಕ್ತಿ ಮಹಿಮೆಗೆ ಕಾರಣವಾದ ಶಕ್ತಿ ವಿಶೇಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕತೆಯನ್ನು ಬೆಳೆಸಿದ್ದಾರೆ. ಕತೆಯ ಆರಂಭವೇ ತುಂಬ ನಾಟಕೀಯವಾಗಿದೆ, ಕುತೂಹಲಕಾರಿಯಾಗಿದೆ. ವೆಂಗವಳ್ಳಿಯ ವಿಜಯ, ರಾಜಪುತ್ರನ ಜನನ. ಅವನ ಲಾಲನೆ, ಪಾಲನೆ, ಬಾಲ್ಯದಲ್ಲಿಯ ಅವನ ಉದ್ಭಟತನ ವ್ಯಕ್ತಿಗೊಂಡ ಪ್ರಸಂಗಗಳು, ರಾಣಿ ಲಕ್ಷ್ಮೀದೇವಿಯ ಬಸಿರ ಬಯಕೆಯನ್ನು ಈಡೇರಿಸಲು ರಾಜ ಅವಳನ್ನು ಬನವಾಸಿಗೆ ಕರೆದುಕೊಂಡು ಹೋದದ್ದು ಹೆತ್ತಮಗಳನ್ನು ನೋಡಲು ಹೋಗಿ ರಾಣಿ ತೀರಿಕೊಂಡದ್ದು, ಮಿಹಿರಭೋಜನ ದಾಳಿಯನ್ನೆದುರಿಸುವ ಸಲುವಾಗಿ ಸೇನಾಧಿಪತಿಯನ್ನು ಆರಿಸಿದ ವಿಧಾನ. ಶಂಕರಗಣ ಮಂಗಿ ಜಯಂತಿಪುರ ದಾಟಿ ಬಂದ ಕೃಷ್ಣ ತಂದೆಯ ಮೇಲೆ ಎದುರುಬಿದ್ದದ್ದು, ಕೊನೆಗೆ ರಾಜನಿಗೆ ಜಯ ಲಭಿಸಿ ಕೃಷ್ಣ ರಾಜದ್ರೋಹಿ-ಪ್ರಜಾದ್ರೋಹಿಯೆಂದು ಕಂಡು ಬಂದಾಗ ನೃಪತುಂಗನ ಹೃದಯದಲ್ಲಿ ರಾಜಧರ್ಮ ಪ್ರಜಾಧರ್ಮ ಮತ್ತು ವಿಶ್ವಧರ್ಮಗಳಿಗೆ ನಡೆದ ಹೋರಾಟ, ರಾಜನ ಅಂಗುಲಿದಾನ – ಈ ಒಂದೊಂದು ಸನ್ನಿವೇಶ ಘಟನೆಗಳೂ, ಹೃದಯವನ್ನು ಕರಗಿಸುವಂಥವು. ಅರಳಿಸುವಂಥವು. ಕಾದಂಬರಿಕಾರರು ರಸಸ್ಥಾನಗಳ ರಹಸ್ಯವನ್ನು ಬಲ್ಲರೆಂಬುದಕ್ಕೆ ಇವೇ ಸಾಕ್ಷಿ. ಆದರೆ ಈ ಸನ್ನಿವೇಶ ಘಟನೆಗಳ ಚಿತ್ರಣದಲ್ಲಿ, ಅವುಗಳ ನಿರೂಪಣೆಯಲ್ಲಿ ಅವಸರ ಪ್ರಯತ್ನದಿಂದಾದ ಏನೋ ಅರಕೆ ಕಾಣುವಂತಿದೆ.

ಪಾತ್ರ ರಚನೆಯಲ್ಲಿ ಕಾದಂಬರಿಕಾರರು ಎಲ್ಲಿಯೂ ಔಚಿತ್ಯದ ಎಲ್ಲೆಯನ್ನು ಮೀರಿಲ್ಲ. ಯಾವ ಯಾವ ಪಾತ್ರದ ಅಭಿನಯ ಎಷ್ಟೆಷ್ಟು ಆವಶ್ಯಕವೆಂಬುದನ್ನು ಅವರು ಬಲ್ಲರು. ಐತಿಹಾಸಿಕ ವ್ಯಕ್ತಿಗಳಿಗೂ, ಕಲ್ಪನಾ ವ್ಯಕ್ತಿಗಳಿಗೂ ವೈಷಮ್ಯ ತೋರದ ರೀತಿಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ. ನೃಪತುಂಗ, ಲಕ್ಷ್ಮೀದೇವಿ, ಶಂಕರಸ. ವ್ಯಕ್ತಿತ್ವಗಳು ಸ್ಪಷ್ಟವಾಗಿ ಸಹಜವಾಗಿ ಮೂಡಿವೆ. ಶಂಕರಸ, ಲೋಕಾ

ಚಿತ್ರ ಮತ್ತು ಗುಣಭದ್ರಾಚಾರ್ಯರು ಪೋಷಕ ಪಾತ್ರಗಳಾದರೂ ಅವರ ವ್ಯಕ್ತಿತ್ವ-ದರ್ಶನ ಇನ್ನಷ್ಟು ಓದುಗರಿಗೆ ಲಭಿಸಿದ್ದರೆ ಚೆನ್ನಾಗಿತ್ತು ಎನಿಸುತ್ತದೆ. ಏಕೆಂದರೆ ಸಕ್ಕರೆಯ ತುಣುಕನ್ನು ನಾಲಗೆಗೆ ಸೋಕಿಸಿ ಬಿಟ್ಟಿಟ್ಟಂತಾಗಿದೆ. ಈಗ ಬಹುಶಃ ಈ ಕಾದಂಬರಿಯ ಕಟ್ಟಡದ ಕಿರು ಯೋಜನೆಯಲ್ಲಿ ಇದೆಲ್ಲ ಸಾಧ್ಯವಾಗಲಿಲ್ಲವೆಂದು ಕಾಣುತ್ತದೆ.

ಒಟ್ಟಿನಲ್ಲಿ ನೃಪತುಂಗನ ವಿಷಯದಲ್ಲಿ ಶೋಧನೆ ನಡೆಸಿ ಇತಿಹಾಸದ ದೃಷ್ಟಿಯಿಂದ ಅಮೂಲ್ಯವಾದ ಸಂಗತಿಗಳನ್ನು ದೊರಕಿಸಿ ಮುಂದಿನ ಪೀಳಿಗೆಗೆ ತುಂಬ ಉಪಕಾರ ಮಾಡಿದ್ದಾರೆ, ದಾರಿ ಸಮೆದಿದ್ದಾರೆ. ಕಲೆಯ ದೃಷ್ಟಿಯಿಂದ ಇಲ್ಲಿ ಏನೋ ಅರಕೆ ಇದ್ದಂತೆ ಕಂಡು ಬರುತ್ತದೆ ನಿಜ. ಆದರೆ ಈ ಅರಕೆಯು ಉತ್ತಮಿಕೆಯ ಕುರುಹಾಗಿದೆ. ತಿಂಡಿ ರುಚಿಯಾಗಿದ್ದರೆ ತಾನೆ ಮತ್ತಷ್ಟು ಬೇಕೆನ್ನುವುದು. ಚೆನ್ನಲ್ಲದುದನ್ನು ಯಾರೂ ಮೂಸಿ ನೋಡರು. ಆದುದರಿಂದ ಈ ನೂತನ ರೀತಿಯ ‘ನೃಪತುಂಗ’ ಕಾದಂಬರಿ ಕನ್ನಡಿಗರಿಗೆಲ್ಲ ಒಪ್ಪಾಗುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

* ನಿಜ ವೇದಾಂತವೂ ಅದೇ, ನಾದಾಂತವೂ ಅದೇ. ವಿಚಾರ ಹಾದಿಯಲ್ಲಿ ನಡೆದರೆ ವೇದಾಂತ, ಹಾಡಿನ ದಾರಿಯಲ್ಲಿ ನಡೆದರೆ ನಾದಾಂತ. ಎಲ್ಲದರ ಗುರಿಯೂ ಒಂದೇ ಸಾಕ್ಷಾತ್ಕಾರ. ವೇದ ಬ್ರಹ್ಮ ಎರಡೂ ಒಂದೇ, ಬೇರೆಯಲ್ಲ. ಉಪಾಸನಾ ಮಾರ್ಗ ಬೇರೆ, ಸಿದ್ಧಿ ಒಂದೇ. ಉಪಾಸನೆಗೆ ಅನುಗುಣವಾದ ರೂಪದಲ್ಲಿ ಸತ್ಯ ಸಾಕ್ಷಾತ್ಕಾರವಾಗುತ್ತದೆ.

ಸಣ್ಣ ಕತೆ ಮತ್ತು ಕಲಾತ್ಮಕತೆ

— ವೇಣುಗೋಪಾಲ ಸೊರಬ

"ಸಣ್ಣ ಕತೆ" – ಸಾಹಿತ್ಯ ಪ್ರಕಾರದಲ್ಲೆಲ್ಲ ಅತ್ಯಂತ ಸೂಕ್ಷ್ಮವಾದ ರಚನೆ. ಅಂದರೆ ಇಲ್ಲಿನ ಬಂಧ ಬಹಳ ಪ್ರಮುಖವಾದದ್ದು. ಆದ್ದರಿಂದಲೇ ಯಶಸ್ವಿ ಕತೆಗಾರರು ಸಿಕ್ಕುವುದು ದುರ್ಲಭ.

ತ.ರಾ.ಸು. ರವರು ಕಾದಂಬರಿಕಾರರೆಂದೇ ಬಳಕೆಯಲ್ಲಿದ್ದರೂ ಅವರು ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿರುವುದು ಗಮನಾರ್ಹ. 'ಗಿರಿಮಲ್ಲಿಗೆಯ ನಂದನವಲ್ಲಿ' ಅವರ ಮೂರನೆಯ ಕಥಾ ಸಂಕಲನ, ೧೯೫೫. ರಲ್ಲಿ ಮೊದಲು ಪ್ರಕಟವಾದದ್ದು. ಇಲ್ಲಿನ ಐದು ಕತೆಗಳು ಸಣ್ಣಕತೆಯ ಮಾಧ್ಯಮದಲ್ಲಿ, ಅವರು ಸಿದ್ಧಿಯನ್ನು ಪಡೆಯಲು ನಡೆಸಿದ ಪ್ರಯತ್ನಗಳಾಗಿವೆ, ಎನ್ನಬಹುದು.

ಇಲ್ಲಿನ ಕತೆಗಳಲ್ಲೆಲ್ಲ ಅತ್ಯಂತ ಹಾರ್ದಿಕವಾದ ರೀತಿಯಲ್ಲಿ ಓದುಗನನ್ನು ತಟ್ಟುವ ಕತೆಗಳು–'ರಾಜಾ ಸಾಹೇಬ್' 'ಇನ್ನೊಂದು ಮುಖ'–'ಗಿರಿಮಲ್ಲಿಗೆಯ ನಂದನವಲ್ಲಿ'. ಈ ಕತೆಗಳಲ್ಲಿ ಕಂಡು ಬರುವ ಆರ್ದ್ರತೆ, 'ಒಂದು ತುಂಡು ಸುದ್ದಿ' ಮತ್ತು 'ಎಕ್ಸ್' ಗಳಲ್ಲಿ ಕಂಡು ಬರುವುದಿಲ್ಲ. ಏಕೆಂದರೆ, ಇಲ್ಲಿ ಬರಹಗಾರನಿಗೆ ಮುಖ್ಯವಾಗಿ ಕಾಣುವುದು ಒಂದು ತತ್ವವನ್ನು ಎತ್ತಿ ಹಿಡಿಯುವುದು ಅಥವಾ ವಿರೋಧಿಸುವುದು. 'ಎಕ್ಸ್' ವ್ಯಕ್ತಿಯ ಘಟನೆಯನ್ನು ಎತ್ತಿ ಹಿಡಿಯಲು ಪ್ರಯತ್ನಿಸಿದರೂ ಕೂಡ, ಕತೆಗಾರ ಅಥವಾ ಕತೆಯೇ ಬರುವ ಧ್ವನಿಯನ್ನು ಪ್ರತಿನಿಧಿಸುವವನು, ತತ್ವಕ್ಕೆ ಕೊಟ್ಟಷ್ಟು ಬೆಲೆಯನ್ನು – ವ್ಯಕ್ತಿಯೇ ಮುಖ್ಯ ಎನ್ನುವ ತತ್ವದ ಬೆಲೆಯನ್ನು–ವ್ಯಕ್ತಿಯ ಅವಮಾನ, ನೋವು, ಹಿಂಸೆ– ಇವುಗಳಿಗೆ ಕೊಡುವುದಿಲ್ಲ. ಆದ್ದರಿಂದಲೇ ಲಯಬದ್ಧವಾದ, ತಾರ್ಕಿಕವಾದ ಮಾತು ಕೇವಲ ಒಣ ಘೋಷಣೆಯಾಗಿ, ಆರ್ದ್ರತೆ ಹಿಂದೆ ಸರಿಯುತ್ತದೆ. "ಒಂದು ತುಂಡು ಸುದ್ದಿ" ಯಲ್ಲಿಯೂ ಕೂಡ, ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ ಮತ್ತು ಅವನ ಪರಿವಾರ ಹಾಗೂ ಅವನ ಆತ್ಮಹತ್ಯೆಯನ್ನು ದುರಂತದ ಛಾಯೆಯೇ ಇಲ್ಲದೆ ಅನುಮಾನಿಸುವ ಪೋಲೀಸು, ಪತ್ರಿಕಾ ಸಂಪಾದಕ, ಶಾಸಕ, ಮಂತ್ರಿಗಳು – ಇತ್ಯಾದಿ ಜನತೆ–ಇವರೆಲ್ಲ ಯಾವುದೋ ಒಂದು ತತ್ವಕ್ಕಾಗಿ ಹೋರಾಡುತ್ತಿರುವ ವರದಿಗಾರನ ವ್ಯಕ್ತಿತ್ವದ ಸುತ್ತಲಿನ ಛಾಯೆಗಳಾಗಿ, ಏನನ್ನೂ ಮಾಡದ ಅಂಗದ ವರದಿಗಾರನೇ ಹೆಚ್ಚಿನ ದುರಂತವಾಗಿ ಕಂಡರೆ ಆಶ್ಚರ್ಯವಿಲ್ಲ. ಅಲ್ಲದೆ ಪ್ರಗತಿಶೀಲ ಸೂತ್ರ ಕೆಲವು ತತ್ವಗಳನ್ನಷ್ಟೇ ರೂಪಿಸಬಲ್ಲದೇ ಹೊರತು–ಪರಿಣಾಮವನ್ನುಂಟುಮಾಡದಿದ್ದಲ್ಲಿ ಅದು ಬೇರೆ ಯಾವುದೇ ಸೂತ್ರಕ್ಕಿಂತ ಭಿನ್ನವಾಗಿರಲಾರದು–ಎನ್ನುವುದನ್ನು ಇದು ಎತ್ತಿ ಹಿಡಿಯುತ್ತದೆ. "ರಾಜಾ ಸಾಹೇಬ್" ಕೂಡ, ಬಹಳ ಮಟ್ಟಿಗೆ ಇದೇ ಚೌಕಟ್ಟಿನಲ್ಲಿ ರಚನೆಯಾದದ್ದಾದರೂ, ಕಥಾನಾಯಕನ ವ್ಯಕ್ತಿ

ಚಿತ್ರ ಆಕರ್ಷಕವಾಗಿದ್ದು ಓದುಗನಲ್ಲಿ ವಿಶ್ವಾಸ ಮೂಡಿಸಬಲ್ಲದು, ಆದರೆ ಇಲ್ಲಿನ ಅತ್ಯಂತ ದೊಡ್ಡ ನ್ಯೂನತೆಯೆಂದರೆ ಭಾವಾತಿರೇಕ. ಇದೇ ಮಟ್ಟಿನ ಭಾವಾತಿರೇಕ ಪ್ರದರ್ಶಿಸುವ ಇನ್ನೊಂದು ಕತೆ 'ಇನ್ನೊಂದು ಮುಖ'. ಆದರೂ ಕೂಡ, ಭಾವಾತಿರೇಕಕ್ಕೆ 'ಇನ್ನೊಂದು ಮುಖ' ದಲ್ಲಿ ತಕ್ಕ ಮಟ್ಟಿನ ಸ್ಥಾನವಿದೆ. ಯಾಕೆಂದರೆ, ಇಡೀ ಕತೆಯ ಹಿನ್ನೆಲೆಯೇ ಹೆಣ್ಣಿನ ಮಾದಕ ಸೌಂದರ್ಯ – ಅದರ ಬಗೆಗಿನ ವ್ಯಾಖ್ಯೆ ಇತ್ಯಾದಿ. ಇಲ್ಲಿನ ನಿರೂಪಣಕಾರನ ಭಾವಾತಿರೇಕ ಅಷ್ಟರ ಮಟ್ಟಿಗೆ ಇಡೀ ಬಂಧಕ್ಕೆ ಒಗ್ಗುವಂಥದ್ದು. ಆದರೆ, "ರಾಜಾ ಸಾಹೇಬ್" ನಲ್ಲಿ ಹೀಗಾಗುವುದಿಲ್ಲ. ಅಲ್ಲಿನ ಭಾವಾತಿರೇಕ – ಒಟ್ಟು ಸಮಾಜ ಸುಧಾರಕನದ್ದು. ವಾಸ್ತವಿಕ ಪ್ರಪಂಚದಲ್ಲಿ ಭಾವಾತಿರೇಕದಿಂದ ಕೂಡಿದ ಪ್ರಚಾರಕ, ಸಮಾಜ ಸುಧಾರಕ ಎಷ್ಟು ನಿರುಪಯುಕ್ತನೂ, ಸಮಸ್ಯೆಯೂ ಆಗ ಬಲ್ಲನೋ ಅಂತಹ ಸಂದರ್ಭದಲ್ಲಿ ಕತೆಯೂ ಅದೇ ಜಾಡು ಹಿಡಿಯುತ್ತದೆ.

"ಇನ್ನೊಂದು ಮುಖ" ಭಾವಾತಿರೇಕಕ್ಕೆ ಒಗ್ಗಬಹುದಾದರೂ, ಇಲ್ಲಿ ಸೌಂದರ್ಯವನ್ನು ಒಂದು ಬಾಹ್ಯವಸ್ತು ಎನ್ನುವಂತೆ ಚಿತ್ರಿಸುವುದು ಅಷ್ಟೊಂದು ಕಲಾತ್ಮಕವಾಗಿಲ್ಲ. ಕತೆಯು ಕೊನೆಯಲ್ಲಿ ಈ ಮೋಹಕ ಸೌಂದರ್ಯವನ್ನು ಸೃಷ್ಟಿಸಿ, ಅದು ಯಾವ ಆಸ್ವಾದನೆಗೂ ಸಿಗದಂತೆ ಸಾವಿನ ತೆರೆ ಎಳೆದನಲ್ಲಾ ಆ ನಿಮ್ಮ ದೇವರು – ಅವನು ಪಾಪಿ, ಸೌಂದರ್ಯದ ಆಗರವಾದ ಆಗುಂಬೆಯ ಘಾಟಿಯಲ್ಲಿ ಈ ಸೌಂದರ್ಯಕ್ಕೆ ಸಾವು ತಂದ ಆ ದೇವರು ಪಾಪಿಯೇ, ಅವನು ಸೃಷ್ಟಿಸಿದ ಸೌಂದರ್ಯಕ್ಕೆ ಮುದ್ರಿತ ಮೆಚ್ಚುಗೆ ಕೊಡಬಯಸಿದ ನಾನು ಪಾಪಿಯೇ ಹೇಳಿ–ಎಂದು ಹೇಳುವ ಪಂಡಿತರ ಮಾತು, ಇಡೀ ಕತೆಗೆ ವ್ಯಾಖ್ಯಾನವಾಗಿ, ಕತೆ ಕಲಾತ್ಮಕತೆಯನ್ನು ಸಾಧಿಸುವುದರಲ್ಲಿ ವಿಫಲವಾಗುತ್ತದೆ. ಸೌಂದರ್ಯ ಸ್ಥಾಪನೆಗೆ ಎಷ್ಟು ಬೌದ್ಧಿಕತೆ ಬೇಕೋ ಅದಕ್ಕಿಂತ ಇನ್ನೂ ಮುಂದೆ ಹೋಗಿ, ಬೌದ್ಧಿಕತೆ ಕತೆಯ ಸೌಂದರ್ಯವನ್ನು ನುಂಗಿ ಹಾಕುತ್ತದೆ.

ಈ ದೃಷ್ಟಿಯಿಂದ ನೋಡಿದಾಗ "ಗಿರಿಮಲ್ಲಿಗೆಯ ನಂದನದಲ್ಲಿ" ಇದೀ ಸಂಗ್ರಹದಲ್ಲಿಯೇ ಹೆಚ್ಚಿನ ಕಲಾತ್ಮಕತೆಯನ್ನು ಸಾಧಿಸಿಕೊಂಡು ಯಶಸ್ವಿಯಾಗಿದೆ. ಇಲ್ಲಿನ ಮನೋಜ್ಞ ಸನ್ನಿವೇಶ ಕತೆಯ ದುರಂತಕ್ಕೆ ಬೇಕಾದ ಹಿನ್ನೆಲೆಯನ್ನು ದಾರ್ಶನಿಕವಾಗಿ ಸೃಷ್ಟಿಸುತ್ತದೆ. ಒಬ್ಬಂಟಿಯಾದ ಕಥಾನಾಯಕ, ದೂರದಲ್ಲಿರುವ ಮುಗ್ಧ ಮಡದಿಗೆ ಕಟ್ಟಿ ಕೊಡುವ ಕಾಗದಗಳಲ್ಲಿನ ಗ್ರಾಮೀಣ ಪರಿಸರ ಮತ್ತು ಹೆಡ್ ಮೇಷ್ಟರ ಮನೆಯ ಗೃಹಸ್ಥ ಜೀವನದ ನೈಜ ಚೆಲುವು, ಓದುಗನಲ್ಲಿ ಒಲವನ್ನು ಮೂಡಿಸುತ್ತದೆ. ಅದೇ ಕಾರಣಕ್ಕಾಗಿ ಕತೆಯಲ್ಲಿನ ದುರಂತ ಆಳವಾಗಿ ತಟ್ಟಲು ಕಾರಣವಾಗುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೊಂದಂಶವೇನೆಂದರೆ – ನಿಜವಾದ ದುರಂತವನ್ನು ಅನುಭವಿಸುವುದು. ಹೆಡ್ ಮಾಸ್ಟರಾದರೂ, ಕಥಾನಿರೂಪಣೆ ಮಾಡುವ ಮೇಷ್ಟರು (ಕಥಾ ನಾಯಕ ?) ಅನುಭವಿಸುವ ದುರಂತವೇ ಹೆಚ್ಚು ಆಳವಾದದ್ದು ಯಾಕೆಂದರೆ, ಅವನು ಭಾವಾತ್ಮಕವಾಗಿ ಮೊದಲಿನಿಂದಲೂ ಅವರಲ್ಲಿ ಪಾಲ್ಗೊಳ್ಳುತ್ತಾನೆ. ಒಟ್ಟಿನಲ್ಲಿ ಈ ಕತೆ ಕೊಡುವಂತಹ ತೃಪ್ತಿ ಇಲ್ಲಿನ ಬೇರೆ ಕತೆಗಳು ಕೊಡುವುದಿಲ್ಲ.

೧೯೫೦ – ಕನ್ನಡದಲ್ಲಿ ಪ್ರಗತಿಶೀಲ ಚಳವಳಿ ಬಲಗೊಳ್ಳುತ್ತಿದ್ದ ಕಾಲ. ಇಲ್ಲಿನ ಕತೆಗಳು ಆ ಚಳವಳಿಯ ಕಾಲದಲ್ಲೇ ಬರೆದವು ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಆ ಚಳುವಳಿಯ–ಆಸೂತ್ರದ–ಪಟ್ಟಿ ನೆರಳು 'ಎಕ್ಕ' ಕತೆಯಲ್ಲಿ ಮೂಡಿಬಂದಿರುವಷ್ಟು, ಬೇರೆ ಯಾವುದರಲ್ಲೂ ಬಂದಿಲ್ಲ. ಆದರೆ ಅದರ ಪಟ್ಟಿ ನೆರಳು ಕಲಾತ್ಮಕತೆಗೆ ಪೂರಕವಾಗಿಲ್ಲ ಎನ್ನುವುದು ವಿಷಾದದ ಸಂಗತಿ.

ಕಮ್ಯುನಿಸ್ಟ್ ಹೆಸರಿನಲ್ಲಿ ನಡೆದ ದುರಾಡಳಿತ, ದಬ್ಬಾಳಿಕೆ– ಇವುಗಳನ್ನು ಬಯಲಿಗೆಳೆದು, ವ್ಯಕ್ತಿ ಸ್ವಾತಂತ್ರ್ಯದ ಹರಿಕಾರನಾಗಿ ಶ್ರಮಿಸಲೆಳಸುವ ವ್ಯಕ್ತಿಯ ಬದುಕು ಹೇಗೆ ಶೋಷಣೆಗೆ ಸಿಕ್ಕು ಜರ್ಝರಿತವಾಗುತ್ತದೆನ್ನುವುದನ್ನು ಹೇಳುವುದಕ್ಕೆ ಈಗಿರುವಷ್ಟು ದೀರ್ಘವಾದ ಕಥನ ಬೇಕಾಗಿರಲಿಲ್ಲ. ಈ ದೀರ್ಘತೆ ಕತೆಯ ಐಕ್ಯಕ್ಕೆ ಯಾವುದೇ ರೀತಿಯಿಂದಲೂ ಸಹಾಯಕವಾಗಿಲ್ಲ. ಬದಲಾಗಿ ಡಾಕ್ಯುಮೆಂಟರಿಯಂತೆ, ವರದಿಯಂತೆ ಸಾಗುವ ಈ ಕಥನ ಆ ವ್ಯಕ್ತಿಯ ವೈಯಕ್ತಿಕ ದುರಂತವನ್ನು ಕೇಂದ್ರ ಬಿಂದುವಿನಿಂದ ದೂರಕ್ಕೆ ಚೆಲ್ಲುತ್ತದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಒಂದು ಪ್ರಶ್ನೆ ಎದ್ದುನಿಲ್ಲುತ್ತದೆ– ಸೂತ್ರವೊಂದನ್ನು ಪ್ರಧಾನವಾಗಿ ಇಟ್ಟುಕೊಂಡು ಬರೆದ ಕತೆ 'ಎಕ್ಕ' ಏಕೆ ಬೇಕಾಯಿತು? ಆದರೆ ಅದೇ ಲೌಕಿಕ ಯಾವುದೊಂದು ಸೂತ್ರವನ್ನೂ ಗಮನಿಸದೆ, ಮಾನವೀಯ ಮೌಲ್ಯವನ್ನೇ ಪ್ರಧಾನವಾಗಿ ಚಿತ್ರಿಸುವ 'ಗಿರಿಮಲ್ಲಿಗೆಯ ನಂದನದಲ್ಲಿ' ಹೇಗೆ ಉತ್ತಮಗೊಂಡಿತು? ಇದಕ್ಕೆ ಕಾರಣವೆಂದರೆ, 'ಎಕ್ಕ'ದಲ್ಲಿ ಚಿತ್ರಿತವಾಗಿರುವ ವಂಚನೆ, ಜನಜೀವನ ಹಾಗೂ ಸೂತ್ರ ಕೂಡ, ಬಹಳ ಮಟ್ಟಿಗೆ ಕನ್ನಡದ ಸಂದರ್ಭಕ್ಕೆ ಹೊರತಾದವು. ಅಲ್ಲದೆ, ಇಡೀ ಕತೆಯ ಹಿಂದಿನ ಮನೋಧರ್ಮ ಯಾವುದೋ ಒಂದು ತತ್ವವನ್ನು ಎತ್ತಿ ಹಿಡಿಯುವುದಷ್ಟೇ ಆಗಿದೆ. ಆದ್ದರಿಂದಲೇ ಕತೆ ಫಲಿಸದೆ ಹೋಗಿದೆ. ಮೊದಲನೋಟಕ್ಕೆ ಪ್ರಧಾನವಾಗಿ ಕಂಡು ಬರುವ ತಂತ್ರವಷ್ಟೇ ಪ್ರಧಾನವಾಗಿರುವುದಾದರೂ, ಅದು ಜೊತೆಗೆ ಉಳಿದ ಕತೆಯ ಕೇಂದ್ರದೊಂದಿಗೆ ಸಂಮಿಳಿತವಾಗದೆ ಹೋಗುತ್ತದೆ. 'ಗಿರಿ ಮಲ್ಲಿಗೆಯ ನಂದನದಲ್ಲಿ' ಹೀಗಾಗಿಲ್ಲ ಎನ್ನುವುದರಲ್ಲಿಯೇ ಆ ಕತೆಯ ಫಲಕಾರಿ ಗುಣ ಕಂಡು ಬರುತ್ತದೆ.

ಇದರಿಂದ ದೊರಕುವ ಅಂಶವೆಂದರೆ ಸಣ್ಣ ಕತೆಯೇ ಕಲಾತ್ಮಕತೆ. ಹೊರಗಿನಿಂದ ತಂದು ಸೇರಿಸಬಹುದಾದದ್ದಲ್ಲ, ಅದು ಕತೆಯಲ್ಲಿಯೇ ಹೊರ ಹೊಮ್ಮಬೇಕು. 'ಗಿರಿಮಲ್ಲಿಗೆಯ ನಂದನದಲ್ಲಿ' ಸಂಗ್ರಹದ ಕತೆಗಳು, ಈ ಬಗ್ಗೆ ಓದುಗನಲ್ಲಿ ಜಾಗೃತಿಯುಂಟು ಮಾಡುವುದಾದರೆ, ಅಲ್ಲಿಯೇ ಅವುಗಳ ಸಾರ್ಥಕತೆ ಕಂಡು ಬರುತ್ತದೆ.

ನೃಪತುಂಗ

— ಕೆಳದಿ ಗುಂಡಾಜೋಯಿಸ್

ಒಂದು ತೌಲನಿಕ ಅಧ್ಯಯನ

ತ.ರಾ.ಸು. ಅವರ ನೃಪತುಂಗ ಕೃತಿಯು ಹಲವು ರೀತಿಯಲ್ಲಿ ಐತಿಹಾಸಿಕ ಹಿನ್ನೆಲೆಯನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಆಸಕ್ತಿಯನ್ನು ಕೆರಳಿಸುವ ರೀತಿಯಲ್ಲಿ ರಚಿಸಲ್ಪಟ್ಟಿದೆ.

೬ ನೇ ಪಟಲದಲ್ಲಿ ಕಾವೇರಿಯಿಂದ ಗೋದಾವರಿಗೆ ಹರಡಿದ ರಾಜ್ಯ ಎಂಬುದನ್ನು ಕುಮಾರ ಕೃಷ್ಣನನ್ನು ಕುರಿತು ಸೂಚಿಸುವ ಈ ಸಾಲು — ಇತಿಹಾಸದಲ್ಲಿ ವ್ಯಕ್ತಪಡುವಂತೆ –

"ಕಾವೇರಿಯಿಂದಮಾ ಗೋದಾವರಿ ವರಮಿರ್ಪ ನಾಡದಾ ಕನ್ನಡದೊಳ್" ಎಂದು ಒಂಭತ್ತನೆಯ ಶತಮಾನದ ಕನ್ನಡ ಕಾವ್ಯ "ಕವಿರಾಜ ಮಾರ್ಗ" ಈ ನಾಡಿನ ಐಸಿರಿಯ ಗಡಿ ವ್ಯಾಪ್ತಿಯನ್ನು ಬಣ್ಣಿಸಿದೆ. ಇಂದು ಗೋದೆಯ ದಂಡೆಯಲ್ಲಿ ಕನ್ನಡ ಕಾಣಬರದಿದ್ದರೂ ಹಿಂದೆ ಅಲ್ಲಿಯ ಭಾಷೆ ಕನ್ನಡವೇ ಆಗಿತ್ತೆಂದು ಸೂಚಿಸುವ ಅಸಂಖ್ಯ ಶಾಸನಗಳು ಉಪಲಬ್ಧವಿವೆ. ಕರ್ನಾಟಕದ ಪ್ರಭಾವವು ಒಂದು ವಿಶಿಷ್ಟ ಕಾಲದಲ್ಲಿ ಇಡೀ ಭಾರತದ ರಾಜಕಾರಣದಲ್ಲಿ ಕಾಣುವಂತಾಯಿತು.

ಇದನ್ನು ತ.ರಾ.ಸು. ಅವರು ಕಾದಂಬರಿಯಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ. ಈಚಿನ ಸಂಶೋಧನೆಯಲ್ಲಿಯೂ ಹಾಗೂ ಐತಿಹಾಸಿಕ ಪರಂಪರೆಯಲ್ಲಿಯೂ ತ.ರಾ.ಸು. ರವರ ವಾಸ್ತವಿಕ ಪ್ರಜ್ಞೆಯು ಇಲ್ಲಿ ವ್ಯಕ್ತಪಡುವುದನ್ನು ಗಮನಿಸಬಹುದಾಗಿದೆ.

ಜಿನಸೇನಾಚಾರ್ಯರ ಶಿಷ್ಯರಾದ ನೃಪತುಂಗ ಚಕ್ರವರ್ತಿಗಳಿಗೆ "ಅಹಿಂಸೆ ಸರ್ವಶ್ರೇಷ್ಠವಾದ ಧರ್ಮ" ಎಂದು ಮನವರಿಕೆಯಾಗಿತ್ತು.

ಹಲವು ವಿದ್ವಾಂಸರು ನೃಪತುಂಗನು ಜೈನ ಮತಾವಲಂಬಿಯಾಗಿದ್ದನೆಂದು ತರ್ಕಿಸಿದ್ದಾರೆ. ನೃಪತುಂಗನು ಕೊನೆಯವರೆಗೂ ವೈದಿಕ ಧರ್ಮಾನುಯಾಯಿಯಾಗಿದ್ದರೂ ಜೈನ ಧರ್ಮದ ಬಗ್ಗೆ ಅಪಾರ ಭಕ್ತಿ ಶ್ರದ್ಧೆಯಿಂದ ಕೂಡಿದ್ದನೆಂಬುದೂ ವಿದ್ವಾಂಸರ ಅಭಿಪ್ರಾಯ. ಈತನ ಆಸ್ಥಾನದಲ್ಲಿ "ಹರಿವಂಶ" ಮತ್ತು "ಆದಿಪುರಾಣ" ಎಂಬ ಗ್ರಂಥಗಳ ಕರ್ತೃ ಜಿನಸೇನಾಚಾರ್ಯನು ಅಮೋಘ ವರ್ಷನಿಗೆ ತ.ರಾ.ಸು.ರವರ ನೃಪತುಂಗದಲ್ಲಿ ನಿರೂಪಿಸಿದಂತೆ ಗುರುಸ್ಥಾನದಲ್ಲಿದ್ದುದು ಕಂಡು ಬರುತ್ತದೆ.

೬ನೇ ಪುಟದಲ್ಲಿ ವ್ಯಕ್ತಪಡುವ ಖೇಡ, ಖರ್ವಡ, ಮಡಂಬ, ಪಟ್ಟಣ ದ್ರೋಣಾಮುಖಗಳಿಂದ ಎಂದು ನಿರೂಪಿಸಿದ ಅಂಶವು ವಡ್ಡಾರಾಧನೆಯಲ್ಲಿ ಶಿವಕೋಟಿಲ

ಆಚಾರ್ಯನಿಂದ ಪ್ರಯೋಗಿಸಲ್ಪಟ್ಟ ಪದ ಸಮೂಹಗಳು, ಇವನ್ನು ಇಲ್ಲಿ ಐತಿಹಾಸಿಕವಾಗಿ ತ.ರಾ.ಸು. ಅವರು ಬಳಸಿಕೊಂಡಿರುವುದು ಜಾಣ್ಮೆಯ ಕುರುಹಾಗಿದೆ. ಈ ಕಾದಂಬರಿಯಲ್ಲಿ (ಕಾದಂಬರಿ ವಿನ್ಯಾಸಕ್ಕಿಂತ ಸ್ವಲ್ಪ ಹೆಚ್ಚು ಕಥನ ಚರಿತ್ರೆ ಎಂಬುದಾಗಿಯೇ ಹೇಳಲು ಬರುವಂತೆ) ಒಂದನೇ ಪಟಲದಲ್ಲಿನ ರಾಜಬೀದಿಯ ವರ್ಣನೆಯಲ್ಲಿ ಜನಮನವನ್ನು ಸೆಳೆಯುವ ತುರಗಮೇಳಂಗ, ಗಜಮೇಳಂಗರ ಪದಗಳು, ನಡೆ ನಡೆಯುತ್ತಲೇ ಖಡ್ಗಯುದ್ಧದ ಚಾತುರಿ, ಮೆರೆವ ಇರಿವ ಜೆಡಂಗರು ಎಂಬ ಅಂಶಗಳು ಸಾಹಿತ್ಯೇತಿಹಾಸದ ಮಾರ್ಗದಲ್ಲಿ ನುಸುಳಿಕೊಂಡಿವೆ.

ಕೇವಲ ಚರಿತ್ರೆಯನ್ನೇ ಮುಂದುವರೆಸಿದರೆ ಐತಿಹಾಸಿಕ ಕಥನಾಸಕ್ತಿಯಲ್ಲಿ ಕೊರತೆಯುಂಟಾಗಬಹುದೆಂದು ತರ್ಕಿಸಿ ಅಲ್ಲಲ್ಲಿಯೇ ಸಂಭಾಷಣಾ ರೂಪದಲ್ಲಿ ಘಟನೆಗಳನ್ನು ಚಿತ್ರಿಸಿರುವುದು ಈ ದಿಸೆಯ ಅಧ್ಯಯನ ಶೀಲದಲ್ಲಿ ವಿಶೇಷ ಪ್ರಭಾವವನ್ನು ಬೀರುತ್ತದೆ.

ಆರನೆಯ ಪಟಲದಲ್ಲಿ ನೃಪತುಂಗನು ಇನ್ನೂ ಎಳೆ ಹರೆಯದ ಪ್ರಾಯದವನು ತ.ರಾ.ಸು. ನಿರೂಪಿಸಿದ್ದಾರೆ. ಪ್ರಭೂತವರ್ಷ ಗೋವಿಂದ ಚಕ್ರವರ್ತಿ ರಾಜ್ಯಕ್ಕೆ ಕಂಟಕ ಪ್ರಾಯನಾದ್ದು ರಾಷ್ಟ್ರ ಕೂಟದ ಮೇಲೆ ಬೀಳಲು ಸಮಯ ಕಾಯುತ್ತಿದ್ದರು. ತ.ರಾ.ಸು. ರವರ ಕಾದಂಬರಿಯ ಹಿನ್ನೆಲೆಯಲ್ಲಿ ಇತಿಹಾಸವನ್ನು ಅವಲೋಕಿಸಿದಾಗ ಅಮೋಘವರ್ಷನಿಗೆ ಕನ್ನಡ ನಾಡಿನ ಇತಿಹಾಸದಲ್ಲಿ ತನ್ನದೇ ಆದ ಸ್ಥಾನವಿದೆ. ಗೋವಿಂದರಾಜನೂ ಅಷ್ಟೇ ಅಪ್ರತಿಮ ವೀರನೂ ಆಗಿದ್ದನು. ಇತಿಹಾಸದಲ್ಲಿ ನೋಡಿದಾಗ ಅಮೋಘವರ್ಷ ನೃಪತುಂಗನು ಇನ್ನೂ ಬಾಲಕನೇ ಆಗಿದ್ದನೆಂಬುದು ಕಂಡು ಬರುತ್ತದೆ.

ತ.ರಾ.ಸು. ರವರ ನೃಪತುಂಗದಲ್ಲಿ ಚಕ್ರವರ್ತಿಯ ಕಾವ್ಯ ವಿಹಾರ

ನೃಪತುಂಗ ಚಕ್ರವರ್ತಿಯು ವೈ ರಾಜ್ಯಭಾರದ ಸಹಸ್ರ ಕರ್ಮಗಳಲ್ಲಿ ಬಿಡುವಿಲ್ಲದೆ ನಿರತವಾಗಿದ್ದರೂ, ರಾಜ್ಯಕ್ಕಾಗಿ ಪ್ರಜೆಗಳ ಹಿತ ಚಿಂತನೆಗಾಗಿ ತಮ್ಮ ಪ್ರಾಣ ಪಣ ಒಡ್ಡಿದ್ದರೂ ಧರ್ಮಜಿಜ್ಞಾಸೆಯಲ್ಲಿ ಸಾಹಿತ್ಯ-ಚರ್ಚೆಯಲ್ಲಿ ಕಾಲ ಕಳೆಯಲು ಜೀವ ತುಡಿಯುತ್ತಿದೆ – ಈ ಭಾಗವು ಐತಿಹಾಸಿಕಾವಲೋಕನದಲ್ಲಿ ವಿವಿಧ ಅಂಶಗಳನ್ನು ಯಥಾವತ್ತಾಗಿ ಬಿಂಬಿಸುತ್ತದೆ. ಈತನ ಕಾಲದಲ್ಲಿ ಜಿನಸೇನನು 'ಪಾರ್ಶ್ವಾಭ್ಯುದಯ' ಕಾವ್ಯವನ್ನು ರಚಿಸಿದ್ದಾನೆಂಬುದೂ ಶಾಕಟಾರ್ಯನ 'ಗಣಿತ ಸಾರಸಂಗ್ರಹ' ಮುಂತಾದ ಉದ್ಗ್ರಂಥಗಳು ಈತನ ಕಾಲದವು. ಸ್ವತಹ ವಿದ್ವಾಂಸನಾದ ಈತನೇ 'ಪ್ರಶ್ನೋತ್ತರ ಮಾಲಿಕೆ' ಹಾಗೂ 'ಕವಿರಾಜ ಮಾರ್ಗವನ್ನು ರಚಿಸಿರುವುದನ್ನು ವಿದ್ವಾಂಸರು ಪ್ರತಿಪಾದಿಸುತ್ತಿದ್ದಾರೆ. ತ.ರಾ.ಸು.ರವರು ಚಕ್ರವರ್ತಿಯ ಸನಿಹದಲ್ಲಿಯೇ ಬಂಕರಸನ ಬಾಯಿಯಿಂದ 'ನನಗೆ ಕತ್ತಿಯ ಭಾಷೆ ಅರ್ಥವಾದಂತೆ ಕಾವ್ಯಭಾಷೆ ಅರ್ಥವಾಗುವುದಿಲ್ಲ' ಎಂಬುದಾಗಿ ನುಡಿಸಿದ್ದಾರೆ.

40ನೆಯ ಪುಟದಲ್ಲಿ ಹೇಳಿರುವ ಬನವಾಸಿಯ ಬಂಕರಸರ ಸಂಗತಿಯನ್ನು ಗಂಗರ ವಿರುದ್ಧ ಹೋರಾಡಿದ ರೀತಿಯನ್ನು ಕಾದಂಬರಿಯಲ್ಲಿ ಚಿತ್ರಿಸಿರುವುದು., ಚಿಂತ್ರಪ್ಪಬ್ಬಲಿಪ್ಪಿಯು ಗಂಗಭೂತುಗ ಗುಣದುತ್ತರಂಗನನ್ನು ವರಿಸಿದುದು, 'ಕವಿರಾಜ ಮಾರ್ಗ'ದಲ್ಲಿ ಪರಧರ್ಮೀಯರಿಗೆ ನೋವನ್ನುಂಟು ಮಾಡದಿರಬೇಕಾದುದು ಕಾವ್ಯದ ಅಗತ್ಯವಾದ ಗುಣಗಳಲ್ಲೊಂದು ಎಂಬ ಚಿತ್ರಗಳು ಐತಿಹಾಸಿಕ ಸಂಗತಿಯನ್ನು ಯಥಾವತ್ತಾಗಿ ಚಿತ್ರಿಸಿವೆ.

ಅರಬಿ ಪ್ರವಾಸಿ ಸುಲೇಮಾನ್ ಕುರಿತು ತ.ರಾ.ಸು.

ಕರ್ನಾಟಕಕ್ಕೆ ಅನೇಕ ವಿದೇಶೀಯ ಪ್ರವಾಸಿಗಳು ಆಗಮಿಸಿ ಪ್ರವಾಸೀ ಕಥನಗಳನ್ನು ರೂಪಿಸಿದ್ದಾರೆ. ಇತಿಹಾಸಾಧ್ಯಯನದಲ್ಲಿ ಇದೊಂದು ಮೂಲ ಸಾಮಗ್ರಿಯಾಗಿ ಪರಿಗಣಿಸಲಾಗುತ್ತದೆ. ಹಲವು ಸಂದರ್ಭಗಳಲ್ಲಿ ಇದನ್ನು ರಾಜ-ಕೀಯವಾಗಿಯೂ ಇಲ್ಲಿನ ರಾಜರು ತಮ್ಮ ಭದ್ರತೆಗೆ ಬಳಸಿಕೊಳ್ಳುತ್ತಿದ್ದರು. ತ.ರಾ.ಸು.ರವರು ಪರ್ಶಿಯದಿಂದ ಚೀನಾದವರೆಗೆ ವ್ಯಾಪಿಸಿದ ಕೀರ್ತಿಶಾಲಿ ನೃಪತುಂಗನ ದರ್ಶನ ಮಾಡಲು ಬಂದ ಅರೇಬಿಯಾದ ಪ್ರವಾಸಿಯನ್ನೂ ಕಾದಂಬರಿಯಲ್ಲಿ ಆಹ್ವಾನಿಸಿದ್ದಾರೆ.

ಅರೇಬಿಯಾ ಪ್ರವಾಸಿಯು ಪ್ರವಾಸೀ ಕಥನದಲ್ಲಿ ಓಲಗದ (ಚಕ್ರವರ್ತಿಯ ಓಲಗ ಸಾಲೆಯ) ವರ್ಣನೆಯನ್ನೂ ಬಿಂಬಿಸಿದ್ದಾರೆ.

ಸಾಲಭಂಜಿಕಾಲಂಕೃತವಾದ ಕಮಲಗರ್ಭ ಮೂಡಿ ಬಂದ ನಾಲ್ಕು, 8,12-16 ಕೋಣಗಳ ಬೆಳ್ಳಿಯ ತಗಡಿನಿಂದ ಅಲಂಕೃತವಾದ ಬಗೆಬಗೆಯ ಚಿತ್ರಗೆಲಸದ ಉನ್ನತ ಸ್ತಂಭಪಂಕ್ತಿ. ಜೀವಂತ ಸ್ತ್ರೀಯರೋ ಎಂಬಂತಿರುವ ಉಡ್ಡಾಣ ಭಂಗಿಯಲ್ಲಿರುವ ಅಪ್ಸರಾ ಪ್ರತಿಮೆಗಳು, ಕಂಬದ ಬೋದಿಗೆಗಳಿಂದ ತೂಗುಬಿಟ್ಟ ಮುತ್ತಿನ ಕುಚ್ಚುಗಳು; ಓಲಗ ಸಾಲೆಯ ನಾಲ್ಕು ಭಿತ್ತಿಯ ಮೇಲೂ, ರಾಮಾಯಣ, ಭಾರತ, ಭಾಗವತ ಪುರಾಣ ಕತೆಯನ್ನು ಹಾಡುವ, ಬೆಂಕಿಯ ಬಣ್ಣದಿಂದ ಬರೆಯಲ್ಪಟ್ಟ ಥಳಥಳಿಸುವ, ಈಗಲೋ ಇನ್ನೊಂದು ಘಳಿಗೆಯಲ್ಲೋ ಗೋಡೆಯಿಂದ ಜೀವದಾಳಿ ಎದ್ದು ಬರುವವೇನೋ ಎನ್ನುವಂಥ ಚಿತ್ರಗಳು —

ಮುಂತಾದ ಪ್ರವಾಸೀ ಕಥನವನ್ನು ಜನಸಾಮಾನ್ಯರಿಗೆ ಐತಿಹಾಸಿಕ ಪ್ರಜ್ಞೆಗೆ ಮುಂದೋಡಿಸುವಂತಿದೆ.

ಶಾಸನದಲ್ಲಿ ಕಂಡಂತೆ ನೃಪತುಂಗವನ್ನು ಕುರಿತು ತ.ರಾ.ಸು.

ಇತಿಹಾಸದ ಅಧ್ಯಯನದಲ್ಲಿ ಶಾಸನಗಳೂ ಪ್ರಮುಖ ಪಾತ್ರ ವಹಿಸುತ್ತವೆ.

ಶಾಸನದಲ್ಲಿ ಉಪಲಬ್ಧವಿರುವಂತೆ ಬಿರುದುಗಳ ವರ್ಣನೆಯನ್ನು ತ.ರಾ.ಸು. ರವರು ಸ್ತುತಿ ಪಾಠಕರಿಂದ ಹೀಗೆ ನುಡಿಸಿದ್ದಾರೆ.

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ, ಮಹಾ ರಾಜಾಧಿರಾಜ, ರಾಜ ಪರಮೇಶ್ವರ, ಪರಮ ಭಟ್ಟಾರಕ ಶ್ವೇತಾತಪತ್ರತ್ರಯ ಕಲಶ ಕಾಹಳಕಂಬಿ, ಪಾಳಿಧ್ವಜೋದಂ ಕೇತುಪತಾಕಾಚ್ಛಾದಿತ ದಿಗಂಬರಂ ನಿರ್ಜಿತವೈರಿ ರಿಪುನಿವಹ ಕಾಲದಂಡಂ ದುಷ್ಟಮದ ಭಂಜನಂ ಅಮೋಘರಾಮಂ ಪರಚಕ್ರಪಂಚಾನನಂ ಸುರಾ–ಸುರಮರ್ದನಂ ವೈರಿಭಯಂಕರಂ ಬದ್ಧ ಮನೋಹರಂ ಅಭಿಮಾನಮಂದಿರಂ ರಟ್ಟ ವಂಶೋನ್ನತಂ ಗರುಡಲಾಂಛನಂ ತ್ರಿವಳಿಪರಿಘೋಷಣಂ ಲಟ್ಟಲೂರ ಪುರವ–ರಮೇಶ್ವರಂ ಶ್ರೀಮದಮೋಘವರ್ಷ ನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭೇಂದ್ರಂ..

ಅವಧಾರು ಅವಧಾರು —

ಶಾಸನದ ಬಿರುದಾವಳಿಗಳನ್ನು ಬಳಸಿಕೊಂಡ ರೀತಿ ಕ್ರಮಗಳು ಇತಿಹಾಸಕ್ಕೆ ಪೂರಕವಾಗಿ ಕಾದಂಬರಿಗೆ ಕಳೆ ನೀಡಿವೆ.

ತ.ರಾ.ಸು. ನೃಪತುಂಗದ ಮೌಲ್ಯಮಾಪನ

ಐತಿಹಾಸಿಕ ಮೌಲ್ಯಮಾಪನಗಳ ಸಾಲಿಗೆ ಸೇರಿಸಲು ಅರ್ಹವೆನಿಸಿದ ಈ ಕಾದಂಬರಿಯು ಜನಸಾಮಾನ್ಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಇತಿಹಾಸದ ಅಭಿ–ರುಚಿಯನ್ನುಂಟು ಮಾಡಲು ಸಮರ್ಥವಾಗಿದೆ. ಅರಬಿ ಪ್ರವಾಸಿ ಸುಲೇಮಾನ್ ಸೌದಾಗರನು (ಕ್ರಿ. ಶ. 857) ನೃಪತುಂಗನನ್ನು ಪ್ರಪಂಚದ ನಾಲ್ವರು ಸಮಕಾಲೀನ ಚಕ್ರವರ್ತಿಗಳಲ್ಲೊಬ್ಬನೆಂದು ಕೊಂಡಾಡಿ ಅವನನ್ನು ಕಾನ್‌ಸ್ಟೆಂಟಿನೋಪಲ್ ಸಾರ್ವ–ಭೌಮನೊಡನೆ ಹೋಲಿಸಿದ್ದಾನೆ. ಇವನ್ನು ಕುರಿತಂತೆ ಚಿತ್ರಿಸಿದ ಚಕ್ರವರ್ತಿಯ ಓಲಗಶಾಲೆಯ ಭಾಗವನ್ನು ಅವಲೋಕಿಸಿದಾಗ ಕನ್ನಡದ ಹಿರಿಮೆಯು ಕಿಚ್ಚು ಹೊರ ಹೊಮ್ಮುತ್ತದೆ. ಕನ್ನಡ ತನವು ಹಾಸು ಹೊಕ್ಕಾಗಿ ಪುಟಿದೇಳುತ್ತದೆ.

ಕಾದಂಬರಿಯು ಚಾರಿತ್ರಿಕ, ಸಾಂಸ್ಕೃತಿಕ, ಶಾಸನ, ಪ್ರವಾಸಿಕಥನ, ಹಳಗನ್ನಡದ ಪೂರ್ವೋತ್ತರ ಅವಶೇಷಗಳ ಪೂರ್ಣ ಸಮೀಕ್ಷೆ ಹಾಗೂ ಪದಘಟ್ಟಿಗಳಿಂದ ತ.ರಾ.ಸು. ಇದನ್ನು ನೃಪತುಂಗನ ಚರಿತ್ರೆಗೆ ಕಲ್ಪನಾ ಚಾತುರ್ಯಕ್ಕೆ ಬಲಿಯಾಗದಂತೆ ರೂಪಿಸಿ–ದ್ದಾರೆನ್ನಬಹುದಾಗಿದೆ. ಈ ಕೃತಿಯು ಸಾಮಾನ್ಯರಿಗೂ ನಿಲುಕುವಂತೆ ಸರಳ ವಾಗಿಯೂ ಶೃಂಗಾರ ರಸೋಕ್ತಿಗಳಿಂದಲೂ ಕಥಾನಕವನ್ನು ಮುಂದೋಡಿಸಿಕೊಂಡು ಹೋಗುತ್ತದೆ. ಶಿವಕೋಟ್ಯಾಚಾರ್ಯರ ವಡ್ಡಾರಾಧನೆಯಲ್ಲಿ ಉದ್ಧೃತವಾದ ಈ ಭಾಗವೂ ತುಸು ವಿಶ್ಲೇಷಣಾರ್ಹವಾಗಿವೆ.

ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾ ಮುಖಗಳಿಂದ ಸಾಲುಸಾಲಾಗಿ ನಡೆಯಿತು – ಇದರಲ್ಲಿ ಖೇಡ, ಖರ್ವಡ ಮುಂತಾದವುಗಳನ್ನು

ಖೇಡ = ಅರಿಶಿನ

ಖರ್ವಡ = ಕಾಡಿಗೆ ಧರಿಸಿ

ಮಡಂಬ = ತಾಂಬೂಲದಿಂದ ಕೆಂಪಾದ ಬಾಯಿನ

(ಪತ್ತನ ?) ಪಟ್ಟಣ = ವಿಕಟಭಟ ವೇಷದ ಕನ್ನಡಿಗರ ಸೇನೆ

ಪೊರ್ರೇಣಾಮುಖಿ = ಮದ್ಯಪಾನದಿಂದ ಉದ್ರೇಕಿತವಾದ ಗಂಡಗಜಗಳ

ಘೀಂಕಾರಕ್ಕೆ ಶತ್ರುವಿನ ಎದೆ ಬಿರಿಯುತ್ತಿರಲು.

ಎಂಬಂತೆ ನಿಂತಲ್ಲಿ ನಿಲ್ಲದೆ ಸಾಗಿದ, ಕೆರಳಿದ ಜೇನು – ಹಡೆಯಂಥ ಕನ್ನಡ ಸೇನೆ, ವಿಂಗಿಪಳ್ಳಿಯ ಬಯಲಲ್ಲಿ ಚಾಲುಕ್ಯಸೇನೆಯ ಮೇಲೆ ಎರಗಿತು. ಇದು ಇತಿಹಾಸಾಧ್ಯಯನದಲ್ಲಿ (ಇಂತಹ ಭಾಷಾ ಪ್ರಯೋಗಗಳು) ಕನ್ನಡಿಗರ ವಿಚಾರ ಕ್ರಾಂತಿಯ ಹಿನ್ನೆಲೆಯಲ್ಲಿ ಕೆಚ್ಚನ್ನು ಕಿಡುಗಾಡಿಸುತ್ತವೆನ್ನಬಹುದು.

* ಅನುಭವವೂ ಮಳೆಯ ನೀರಿನಂತೆ. ಅನುಭವ ಆದಾಗ ಮನಸ್ಸಿನ ಮೇಲೆ ಏನೋ ಪರಿಣಾಮವಾಗುತ್ತದೆ. ಕೊಂಚ ಹೊತ್ತಾದ ಮೇಲೆ ಮರೆವಿನಲ್ಲಿ ಅದು ಹೋಗುತ್ತದೆ. ಅದು ಅಷ್ಟು ಪರಿಣಾಮಕಾರಿಯಲ್ಲ. ತಾತ್ಕಾಲಿಕ ಪರಿಣಾಮ ಅದರದು. ಆ ಪರಿಣಾಮ ಚಿರವಾಗಬೇಕಾದರೆ, ಮಳೆಯ ನೀರನ್ನು ಕೆರೆಯಲ್ಲೋ ಬಾವಿಯಲ್ಲೋ ಸಂಗ್ರಹಿಸಿ ಅದು ಹೋಗದಂತೆ ಇಟ್ಟುಕೊಂಡು, ಅಗತ್ಯವಾದಾಗ, ಬೇಕಾದುದಕ್ಕೆ ಬಳಸುವಂತೆ ಅನುಭವವನ್ನು ಸಂಗ್ರಹಿಸಬೇಕು. ಆಗ ಅದು ಪ್ರತಿಭೆಗೆ ಪೋಷಕವಾಗುತ್ತದೆ.

ಶಿಲ್ಪಶ್ರೀ : ಒಂದು ಸಮೀಕ್ಷೆ

—ವಿ. ಜಿ. ಕೃಷ್ಣಮೂರ್ತಿ

ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ತ.ರಾ. ಸುಬ್ಬರಾಯರ ಹೆಸರು ಪ್ರಥಮ ಶ್ರೇಣಿಯ ಲೇಖಕರ ಪಟ್ಟಿಗೆ ಸೇರಿದ್ದು. ಈ ಶತಮಾನದ ಪ್ರಾರಂಭದಲ್ಲಿ ಬಿ. ವೆಂಕಟಾಚಾರ್ಯ ಹಾಗೂ ಗಳಗನಾಥರು ತಮ್ಮ ಕಾದಂಬರಿಗಳಿಂದ ಜನ ಮನವನ್ನು ಸೂರೆಗೊಂಡಂತೆ, 1940ರ ದಶಕದಿಂದ ವಾಚಕರನ್ನು ಆಕರ್ಷಿಸಿದ ಜನಪ್ರಿಯ ಕಾದಂಬರಿಕಾರರಲ್ಲಿ ಅ.ನ.ಕೃ., ತ.ರಾ.ಸು., ಬಸವರಾಜ ಕಟ್ಟೀಮನಿ, ಕೃಷ್ಣಮೂರ್ತಿ ಪುರಾಣಿಕ, ತ್ರಿವೇಣಿ ಮೊದಲಾದವರ ಹೆಸರುಗಳು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಐತಿಹಾಸಿಕ ಕಾದಂಬರಿಗಳನ್ನು ರಚಿಸಿ ಪ್ರಖ್ಯಾತರಾದವರು ತ.ರಾ.ಸು., ಕೊರಟಿ ಶ್ರೀನಿವಾಸರಾವ್, ಹರಕೇಶರಿ ಸೀತಾರಾಮ ಶಾಸ್ತ್ರಿಗಳು. ಮಾ. ನ. ಮೂರ್ತಿ, ಕೆ. ವಿ. ಅಯ್ಯರ್, ವಿ. ಜಿ. ಕೃಷ್ಣಮೂರ್ತಿ, ಸಿ.ಕೆ. ನಾಗರಾಜರಾವ್ ಮೊದಲಾದವರು. ಇತ್ತೀಚೆಗೆ ಐತಿಹಾಸಿಕ ಕಾದಂಬರಿಗಳ ಪ್ರಕಟಣೆ ಕಡಿಮೆಯಾಗಿರುವುದಕ್ಕೆ ಸಾಮಾಜಿಕ ಕಾದಂಬರಿಗಳಿಗಿರುವ ಹೆಚ್ಚಿನ ಬೇಡಿಕೆಯೇ ಕಾರಣವೆಂಬುದು ಪ್ರಕಾಶಕರ ನಿಲುವು. ಐತಿಹಾಸಿಕ ಕಾದಂಬರಿಗಳನ್ನು ರಚಿಸಿದವರು ಕೆಲವರೇ ಆದರೂ ಅವರ ಕೃತಿಗಳು ಸರ್ ವಾಲ್ಟರ್‌ಸ್ಕಾಟ್, ಅಲೆಗ್ಸಾಂಡರ್ ಡುಮಾಸ್, ಬಂಕಿಮ ಚಂದ್ರ – ಇವರ ಶ್ರೇಷ್ಠ ಚಾರಿತ್ರಿಕ ಕಾದಂಬರಿಗಳ ಪಂಕ್ತಿಕ್ಕೆ ಬರುತ್ತವೆ. ತ.ರಾ.ಸು. ಅವರ ಚಾರಿತ್ರಿಕ ಹಿನ್ನೆಲೆಯ ಕಾದಂಬರಿಗಳು ವಸ್ತು, ನಿರೂಪಣೆ, ಪಾತ್ರವೈವಿಧ್ಯ ಹಾಗೂ ಶೈಲಿಗಳಿಗೆ ಪ್ರಸಿದ್ಧ. ತಮ್ಮ ಸೃಜನಾತ್ಮಕ ಶಕ್ತಿ, ವಿದ್ವತ್ತು ಮತ್ತು ಲೇಖನ ವೈಖರಿಗಳಿಂದ ಅವರು ಶ್ರೇಷ್ಠ ಕಾದಂಬರಿಕಾರರೆನಿಸಿಕೊಂಡಿದ್ದಾರೆ. ಕೃತಿ ರಚನೆಗೆ ಅವರಿಗೆ ಉತ್ತೇಜಕ ಶಕ್ತಿ ಅವರ ಮನೆತನಕ್ಕೆ ಸಾಂಪ್ರದಾಯಿಕವಾಗಿ ಬಂದ ಪಾಂಡಿತ್ಯ ಮತ್ತು ಸಂಸ್ಕೃತಿ. ಲೇಖನ ವ್ಯವಸಾಯದಲ್ಲಿ ಅವರು ಪ್ರಕಟಿಸಿಕೊಂಡ ಅಪಾರ ಶ್ರದ್ಧೆಯು ಸಹ ಗಮನೀಯವಾದದ್ದು. ಅ. ನ. ಕೃಷ್ಣರಾಯರ ಪ್ರಭಾವವೂ ಅವರ ಕಾದಂಬರಿ ರಚನೆಗೆ ಉತ್ತೇಜಕವಾಯಿತು. ಅ. ನ. ಕೃ. ಅವರಿಂದ ತಾವು ಪಡೆದ ಸ್ಫೂರ್ತಿಯ ಬಗ್ಗೆ ಅವರು ಹೀಗೆಂದು ಹೇಳುತ್ತಾರೆ. "ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಶ್ರೀ ಅ. ನ. ಕೃಷ್ಣರಾಯರ ಸಾಹಿತ್ಯವನ್ನು ಓದಲು ಆರಂಭಿಸಿದೆ; ಅಂದಿನಿಂದ ಇಂದಿನವರೆಗೂ ಅವರ ಕೃತಿಗಳು ಅಚ್ಚಾದಂತೆಲ್ಲಾ ಒಂದನ್ನೂ ಬಿಡದೆ ಓದಿದೆ." [1] ಬರೆವಣಿಗೆಯಲ್ಲಿ ತಮಗಿರುವ ಆತ್ಮಭರವಸೆಯ ಬಗ್ಗೆ "ನನ್ನ ಸಾಹಿತ್ಯದ ಅನುಭವ, ಅರಿವು ಹೆಚ್ಚಿದಂತೆಲ್ಲಾ, ನನ್ನ ಅಭಿಪ್ರಾಯವು ಒಂದು ನಿಶ್ಚಿತ ರೂಪಕ್ಕೆ ಬಂತು" ಎಂದು

---

1 ತ.ರಾ.ಸು. : ಅ.ನ.ಕೃ. : (ಅ.ನ.ಕೃ. ಅವರ ನಾಟಕ, ಕಥೆ, ಕಾದಂಬರಿ, ಸಾಹಿತ್ಯ, ವ್ಯಕ್ತಿತ್ವಗಳ ರಸ ವಿಮರ್ಶೆ). ಸಾಹಿತ್ಯಾಲಯ, ಚಿತ್ರದುರ್ಗ, 1947. ಮುನ್ನುಡಿ, iii.

ಸುಬ್ಬರಾಯರು ತಿಳಿಸುತ್ತಾರೆ.[2] ರಂ. ಶ್ರೀ ಮುಗಳಿಯವರು 1963 ರಲ್ಲಿ ಬರೆಯುತ್ತಾ, "ಕಳೆದ ಹದಿನೈದು ವರ್ಷಗಳಲ್ಲಿ ವಿಪುಲ ನಿರ್ಮಿತಿಯಿಂದಲೂ, ಬರೆವಣಿಗೆಯ ಮೇಲ್ಮಟ್ಟದಿಂದಲೂ ಹೆಸರಾದವರಲ್ಲಿ ತ. ರಾ. ಸುಬ್ಬರಾಯರೊಬ್ಬರು. ಈ ವರೆಗೆ ಮೂವತ್ತಕ್ಕಿಂತಲೂ ಹೆಚ್ಚು ಕಾದಂಬರಿಗಳು ಪ್ರಕಟವಾಗಿವೆ. ಕಳೆದ 3-4 ವರ್ಷಗಳಲ್ಲಿ 20 ರಷ್ಟು ಬೆಳಕು ಕಂಡಿವೆ. ಒಟ್ಟಿನಲ್ಲಿ ಸಾಮಾಜಿಕ ಕಾದಂಬರಿಗಳ ಸಂಖ್ಯೆ ಹೆಚ್ಚಿದೆ. ಸ್ವಲ್ಪವಾದರೂ, ಅವರು ರಚಿಸಿದ ಕಾದಂಬರಿಗಳಲ್ಲಿ ಅವರ ಗುಣಾತಿಶಯವು ತಲೆದೋರಿದೆ."[3] ಮುಗಳಿಯವರ ಈ ಹೇಳಿಕೆಯ ತರುವಾಯ ತ.ರಾ. ಸುಬ್ಬರಾಯರ ಲೇಖನಿ ಪ್ರಗತಿ ಪಥದಲ್ಲಿ ಸಾಗಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಅವರಿಗೆ ಅಪಾರ ಕೀರ್ತಿಯನ್ನು ಗಳಿಸಿಕೊಟ್ಟಿದೆ. 'ಹಂಸಗೀತೆ', 'ರಕ್ತರಾತ್ರಿ', 'ತಿರುಗುಬಾಣ' ಮೊದಲಾದ ಕಾದಂಬರಿಗಳಲ್ಲಿ ಅವರ ಅದ್ಭುತ ಕಥಾಶಿಲ್ಪ ಎದ್ದು ಕಾಣುತ್ತದೆ. ಕೊರಟಿ ಶ್ರೀನಿವಾಸರಾಯರು ಹೇಳಿರುವಂತೆ, "ಚಿತ್ರದುರ್ಗದ ಇತಿಹಾಸಕ್ಕೇ ಸಂಬಂಧಿಸಿದಂತೆ ಕಾಲ್ಪನಿಕ ವ್ಯಕ್ತಿ ಭೈರವೀ ವೆಂಕಟಸುಬ್ಬಯ್ಯನವರ ಸಂಗೀತ ಜೀವನವನ್ನು 'ಹಂಸಗೀತೆ' ಕಾದಂಬರಿಯಲ್ಲಿ ತ.ರಾ.ಸು. ಅಪೂರ್ವ ತೇಜಸ್ಸಿನಿಂದ ರಚಿಸಿದ್ದಾರೆ. ತನ್ನದೇ ಆದ ವೈಶಿಷ್ಟ್ಯತೆ ಪಡೆದಿರುವ ಆ ಕಾದಂಬರಿ ಕನ್ನಡ ಐತಿಹಾಸಿಕ ಕಾದಂಬರಿಗಳಲ್ಲಿಯೇ ಒಂದು ಧ್ರುವತಾರೆಯಂತಿದೆ."[4]

ಲೇಖಕನು ಬೆಳಕಿಗೆ ಬರಲು ಪ್ರಕಾಶಕರ ನೆರವು ಅಗತ್ಯ. ತ.ರಾ.ಸು. ಅವರ ಕಾದಂಬರಿ ರಚನೆಗೆ ನೆರವಾದವರು ಕರ್ನಾಟಕದ ಹಲವಾರು ಪ್ರಕಾಶಕರೆಂದು ನಾವು ಹೇಳಬೇಕಾಗಿಲ್ಲ. ಮೂವತ್ತಕ್ಕೂ ಹೆಚ್ಚಿನ ಪ್ರಕಾಶಕರು ಅವರ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರಲ್ಲಿ ಕೆಲವರು 1) ನವಸಾಹಿತ್ಯ ಪ್ರಕಾಶನ, ಮೈಸೂರು 2) ಸಾಹಿತ್ಯಾಲಯ, ಚಿತ್ರದುರ್ಗ 3) ಕೆ. ಸೀತಾರಾಮ ಶೆಟ್ಟಿ, ಬೆಂಗಳೂರು 4) ಭಾರತೀ ಪ್ರಕಾಶನ, ಮೈಸೂರು 5) ಗಾಯತ್ರೀ ಪ್ರಕಾಶನ, ಮೈಸೂರು 6) ಪ್ರತಿಭಾ ಪ್ರಕಟನ ಮಂದಿರ 7) ಶಾರದಾ ಪ್ರಕಟಣಾಲಯ, ಬೆಂಗಳೂರು 8) ಈಶ್ ಅಂಡ್ ಕೋ 9) ಕರುಣಾಕರನ್ ಪ್ರಕಾಶನ, ಮೈಸೂರು 10) ವಿದ್ಯಾನಿಧಿ ಪ್ರಕಾಶನ, ಮೈಸೂರು 11) ಪ್ರಸಾದ್ ಪಬ್ಲಿಕೇಷನ್ಸ್, ಮೈಸೂರು 12) ಹಂಸಧ್ವನಿ ಪ್ರಕಾಶನ, ಬೆಂಗಳೂರು 13) ದರ್ಶನ ಪ್ರಕಾಶನ, ಬೆಂಗಳೂರು 14) ತಾ. ಮೊ. ಸ್ಮಾರಕ ಗ್ರಂಥಮಾಲೆ, ಮೈಸೂರು 15) ಮೋಹನ ಪ್ರಕಾಶನ, ಮೈಸೂರು 16) ಎಸ್.ಎಸ್.ಎನ್. ಬುಕ್ ಡಿಪೋ, ಬೆಂಗಳೂರು 17) ನೇತ್ರಾವತಿ ಪ್ರಕಾಶನ, ಮೈಸೂರು 18) ಆನಂದ್ ಬ್ರದರ್ಸ್, ಬೆಂಗಳೂರು 19) ಸುದರ್ಶನ ಪ್ರಕಾಶನ, ತಿಪಟೂರು 20) ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್, ಮೈಸೂರು

---

2 ಅದೇ.

3. ರಂ. ಶ್ರೀ ಮುಗಳಿ : ಕನ್ನಡ ಸಾಹಿತ್ಯದ ಇತಿಹಾಸ, ಸಾಹಿತ್ಯ ಅಕಾಡೆಮಿ ಪರವಾಗಿ ಪ್ರಕಾಶಕರು : ಕಾವ್ಯಾಲಯ, ಮೈಸೂರು. (3ನೇ ಮುದ್ರಣ) 1976, ಪು. 269.

4. ಚಿನ್ನದ ಗರಿ : ಸಂ : ಡಾ|| ಹಾ. ಮಾ. ನಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974 : ಲೇಖನ : ಕನ್ನಡ ಕಾದಂಬರಿಗಳಲ್ಲಿ ಇತಿಹಾಸ - ಕೊರಟಿ ಶ್ರೀನಿವಾಸ ರಾವ್.

21) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು 22) ಸಹನ ಸಾಹಿತ್ಯಮಾಲೆ, ಬೆಂಗಳೂರು 23) ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು 24) ಟಿ. ಕೆ. ಬ್ರದರ್ಸ್, ಬೆಂಗಳೂರು 25) ಪೀಪಲ್ಸ್ ಬುಕ್ ಹೌಸ್. ಮೈಸೂರು 26) ಗೀತಾ ಬುಕ್ ಹೌಸ್, ಮೈಸೂರು 27) ವಿದ್ಯಾಶಂಕರ ಪ್ರಕಾಶನ, ಮೈಸೂರು 28) ಗಂಗಾತರಂಗ, ಮೈಸೂರು 29) ಪ್ರಕಾಶ್ ಪಬ್ಲಿಕೇಷನ್ಸ್, ಮೈಸೂರು. ಇಷ್ಟುಮಂದಿ ಪ್ರಕಾಶಕರು ತ.ರಾ.ಸು. ಅವರ ಕಾದಂಬರಿಗಳನ್ನು ಪ್ರಕಟಿಸುತ್ತಿದ್ದ ಈ ಪ್ರಕಾಶಕರಲ್ಲಿ ಕೆಲವರು ಸಾಮಾನ್ಯ ವಾಚಕರಿಗಾಗಿ ಕಾದಂಬರಿಗಳನ್ನು ಹೊರತಂದಿದ್ದರೆ, ಮತ್ತೆ ಕೆಲವರು ಕಾದಂಬರಿಗಳನ್ನು ಪಠ್ಯಪುಸ್ತಕಗಳನ್ನಾಗಿ ಗೊತ್ತುಪಡಿಸಿ ಅದರಿಂದ ಲಾಭ ಪಡೆದುಕೊಳ್ಳುವ ಆಕಾಂಕ್ಷೆಯನ್ನು ಹೊತ್ತಿದ್ದರು. 1950 ಹಾಗೂ 1960ರ ದಶಕದಲ್ಲಿ ತ.ರಾ.ಸು. ಅವರ ಬರವಣಿಗೆಯನ್ನು ಬೇಡಿದ ಪ್ರಕಾಶಕರಲ್ಲಿ ಕೆಲವರು ಸ್ಕೂಲ್ ಪುಸ್ತಕಗಳ ಮಾರಾಟಗಾರರು. 'ಶಿಲ್ಪಶ್ರೀ'ಯನ್ನು ಪ್ರಕಟಿಸಿದ (1960) ಸೀತಾರಾಮ ಶೆಟ್ಟರು ಆ ಗುಂಪಿಗೆ ಸೇರಿದವರು. "ಈ ಕಾದಂಬರಿಯನ್ನು ಬರೆಯಿಸಿ ಅಚ್ಚು ಮಾಡಿದವರು ಬೆಂಗಳೂರಿನ ಕೆ. ಸೀತಾರಾಮ ಶೆಟ್ಟ"ರು ಎಂದು ತ.ರಾ.ಸು. ಗ್ರಂಥದ ಅರಿಕೆಯಲ್ಲಿ ಹೇಳಿರುತ್ತಾರೆ. ಈ ವಿಷಯವನ್ನು ಗಮನಿಸಿದರೆ, 'ಶಿಲ್ಪಶ್ರೀ' ಕಾದಂಬರಿಯಲ್ಲಿ ವ್ಯಾಸಂಗಕ್ಕೆ ಯುಕ್ತವಾದ ಐತಿಹಾಸಿಕ ವ್ಯಕ್ತಿಯೊಬ್ಬನ ಚಿತ್ರಣವನ್ನು ಸುಬ್ಬರಾಯರು ರಚಿಸಿ ಕೊಟ್ಟಿರುವರೆಂಬ ಅಭಿಪ್ರಾಯ ನಮಗಾಗುತ್ತದೆ. ಅವರು ತಿಳಿಸಿರುವಂತೆ 'ಶಿಲ್ಪಶ್ರೀ' ಚಾವುಂಡರಾಯನ ಜೀವನದ ಆಧಾರದ ಮೇಲೆ ರಚಿತವಾದ ಕಾದಂಬರಿ.[1] ಚಾವುಂಡರಾಯ ಶ್ರವಣಬೆಳಗೊಳದಲ್ಲಿ ಗೊಮ್ಮಟ ಶಿಲ್ಪ ರಚನೆಗೆ ಕಾರಣಕರ್ತ, ಗಂಗರ ಮಂತ್ರಿ ಹಾಗೂ ಮಹಾ ದಂಡನಾಯಕ, ರನ್ನ ಕವಿಗೆ ಆಶ್ರಯವಿತ್ತ ಸಾಹಿತ್ಯ ಪ್ರೇಮಿ, ತ್ರಿಷಷ್ಟಿ ಲಕ್ಷಣ ಮಹಾ ಪುರಾಣವನ್ನು ರಚಿಸಿದ ಕವಿ, ರಾಷ್ಟ್ರಕೂಟ ಹಾಗೂ ಗಂಗರ ಅರಸು ಮನೆತನಗಳಿಗಾಗಿ ಸಮರವೆಸಗಿದ ಮಧ್ಯ ಯುಗದ ಮಹಾಯೋಧ. ಅವನ ಬಗ್ಗೆ ಅವನ ಸ್ವಂತ ಕೃತಿಯಲ್ಲಾಗಲಿ ಅಥವಾ ಶಾಸನಗಳಲ್ಲಾಗಲಿ ಸಿಗುವ ವಸ್ತು ಅತ್ಯಲ್ಪ. ಹೀಗಿರುವಲ್ಲಿ, ದೊರೆತ ಅಲ್ಪ ವಸ್ತುವಿನ ಬಹು ತೆಳುವಾದ ತಡಿಕೆಯನ್ನು ಆಧಾರವಾಗಿಟ್ಟುಕೊಂಡು, ಆತನ ಕಾಲದ ಇತಿಹಾಸದ ಸಾಹಿತ್ಯದ ಅಧ್ಯಯನದಿಂದ ದೊರೆತಷ್ಟು ಪೂರಕಾಂಶಗಳನ್ನು ಕೂಡಿಸಿಕೊಂಡು ನಾನು ಈ ಕಾದಂಬರಿಯನ್ನು ರಚನೆ ಮಾಡಿದ್ದೇನೆ " ಎಂದು ಕಾದಂಬರಿಯ ಅರಿಕೆಯಲ್ಲಿ ಸುಬ್ಬರಾಯರು ಹೇಳಿರುತ್ತಾರೆ.

ತ.ರಾ.ಸು. ರವರು ಶಾಸನಗಳಿಂದ ಹಾಗೂ ಗ್ರಂಥಗಳಿಂದ ಕಾದಂಬರಿಗೆ ಅಳವಡಿಸಿ ಕೊಂಡಿರುವ ಮಾಹಿತಿಗಳು ಈ ರೀತಿ ಇವೆ.—

---

1. ಶಿಲ್ಪಶ್ರೀ : ತ.ರಾ.ಸು : ಪ್ರಕಾಶಕರು ಕೆ. ಸೀತಾರಾಮಶೆಟ್ಟಿ, ಬೆಂಗಳೂರು, 1970, ಅರಿಕೆ. ಪು. V.)

1. ಗಂಗರ ಇತಿಹಾಸ :

I ಮಾರಸಿಂಹ II (ಕ್ರಿ.ಶ. 963-974): ಕರ್ನಾಟಕವನ್ನು ಬಹುಕಾಲ (ಕ್ರಿ.ಶ. 240–1024) ಆಳಿದ ಗಂಗರಲ್ಲಿ ಇವನು 20ನೆಯ ಸಾಮ್ರಾಟ; ಅವನು ರಾಷ್ಟ್ರಕೂಟ IIIನೇ ಕೃಷ್ಣನಿಂದ ಗಂಗವಾಡಿ (ಗಂಗಪಾಡಿ)ಯ ಅರಸನಾಗಿ ರಾಜ್ಯಾಭಿಷಿಕ್ತನಾದದ್ದು (ಕೂಡಲೂರು ತಾಮ್ರ ಶಾಸನ: ಕ್ರಿ. ಶ. 963); ಮಾರಸಿಂಹನು ರಾಷ್ಟ್ರಕೂಟ ಕೃಷ್ಣನೊಂದಿಗೆ ಗುಜರಾತಿಗೆ ದಿಗ್ವಿಜಯಕ್ಕಾಗಿ ಹೊರಟು ಜಯಗಳಿಸಿದ್ದು, ಚಾಲುಕ್ಯ ರಾಜಾದಿತ್ಯನಿಗೆ ಸಿಂಹಸ್ವಪ್ನನಾಗಿದ್ದುದು, ಬಂಕಾಪುರದಲ್ಲಿ ಗುರು ಅಜಿತಸೇನಾಚಾರ್ಯರ ಪಾದದಡಿ ಸಲ್ಲೇಖನವನ್ನಾಚರಿಸಿ ಮೋಕ್ಷ ಹೊಂದಿದ್ದು (E.C. III, pt I, Tn 93); ಮಾರಸಿಂಹನ ಸಾಧನೆಗಳು ಮತ್ತು ಸಲ್ಲೇಖನ (E.C. II, SB 59 (38), E.C. III, pt I. Nj 155 ಮತ್ತು 158 (ಕ್ರಿ. ಪೂ. 970); ಮಾರಸಿಂಹನ ವ್ಯಕ್ತಿತ್ವ (C. Hayavadana Rao, Mysore Gegetteer, Vol II, pt. II, pp. 678–79).

2. ರಾಚಮಲ್ಲ IV, / ರಾಜಮಲ್ಲ ಸತ್ಯವಾಕ್ಯ IV, ಜಗದೇಕ ವೀರ (ಕ್ರಿ.ಶ. 974–984): ಅವನಿಗೆ ಸಂಬಂಧಪಟ್ಟ ಶಾಸನಗಳು (E.C. III, Nj 183, ಕ್ರಿ. ಶ. 977 ಮತ್ತು ಮೈಸೂರು ಪುರಾವಸ್ತು ಇಲಾಖೆಯ ವರದಿ M.A.R. 1916–17, ಪ್ಯಾರಾ 81); ಅವನ ಮಂತ್ರಿ ಚಾಂವುಡರಾಯ (E.C. II, SB 122).

3. ಚಾವುಂಡರಾಯ : ಇವನ ತಂದೆ ಮಹಾಬಲಯ್ಯ (E.C. III, pt I, Tn 69); ಮಗ ಜಿನದೇವಣ್ಣ (E.C. II, SB 121); ಚಾವುಂಡರಾಯನ ಬಿರುದುಗಳು ಮತ್ತು ಅವನ ಸೇವೆ ರಾಚಮಲ್ಲ (ಜಗದೇಕಮಲ್ಲ)ನಲ್ಲಿ (E.C. II, SB 281; E.C. III, pt II, Md 107 ಮತ್ತು 183 : ಕ್ರಿ. ಶ. 977); ಚಾವುಂಡರಾಯ ಇಂದ್ರಗಿರಿಯ ಮೇಲೆ ಗೊಮ್ಮಟ ಮೂರ್ತಿಯನ್ನು ಸ್ಥಾಪಿಸಿದ ವಿಷಯ (E.C. II, SB 175 (76); 176 (77); 179 (75); 234 (85) ಕ್ರಿ.ಶ. 1180; 254 (105) ಕ್ರಿ.ಶ. 1398); ಚಾವುಂಡರಾಯ ಚಂದ್ರಗಿರಿಯಲ್ಲಿ ಚಾವುಂಡರಾಯ ಬಸ್ತಿಯನ್ನು ಕಟ್ಟಿಸಿದ್ದು (E.C. II, SB 122); ಚಾವುಂಡರಾಯ ಮಹಾ ಜೈನ ಧರ್ಮ ಪ್ರಸಾರಕ, ಅವನು ವಿಷ್ಣುವರ್ಧನನ ಮಂತ್ರಿ ಗಂಗರಾಜ, ಹೊಯ್ಸಳ ನರಸಿಂಹನ ಮಂತ್ರಿ ಹುಳ್ಳ – ಇವರಿಗೆ ಸಮ ಎಂಬ ವಿಷಯ (ಹೊಯ್ಸಳರ ಕಾಲದ ಶಾಸನ : E.C. II, SB 345 ಕ್ರಿ.ಶ. 1159); ಚಾವುಂಡರಾಯ ಬ್ರಹ್ಮ ಕ್ಷತ್ರಿಯ ಮತಕ್ಕೆ ಸೇರಿದವನು (E.C. II, SB 281).

2. ರಾಷ್ಟ್ರಕೂಟರ ಇತಿಹಾಸ :

III ನೇ ಕೃಷ್ಣ / ಕನ್ನರ / ಅಕಾಲವರ್ಷ (ಕ್ರಿ. ಶ. 940-966) : ಅವನು ಗಂಗ ರಾಜಕುಮಾರಿ ಗಂಗಮಹಾದೇವಿಯನ್ನು (ಬೂತುಗನ ತಂಗಿಯನ್ನು) ಮದುವೆಯಾದದ್ದು (ಮೈಸೂರು ಶಾಸನ ಇಲಾಖೆಯ ವರದಿ : MER 1908, Appendix B, No.65); ರಾಷ್ಟ್ರಕೂಟರು ಬನವಾಸಿಯನ್ನು ಬೂತುಗನಿಗೆ ಮದುವೆಯ ಬಳುವಳಿಯಾಗಿ ಕೊಟ್ಟದ್ದು (E.C. III, ಮಂಡ್ಯ 41).

III ನೇ ಕೃಷ್ಣನ ತರುವಾಯ ಪಟ್ಟಕ್ಕೆ ಬಂದವನು ಕೊಟ್ಟಿಗ / ನಿತ್ಯವರ್ಷ (ಕ್ರಿ.ಶ. 966–971). ಕೊಟ್ಟಿಗನ ತರುವಾಯ ಸಿಂಹಾಸನವನ್ನೇರಿದ II ನೇ ಕಕ್ಕ ಅಥವಾ ಕಕ್ಕ

ಎರಡನೇ ರಾಷ್ಟ್ರಕೂಟರ ಕೊನೆಯ ಸಾಮ್ರಾಟ (ಕ್ರಿ.ಶ. 972-977). ಚಾಲುಕ್ಯ ತೈಲ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಗೆದ್ದುಕೊಂಡ ಮೇಲೆ ಕೃಷ್ಣನ ಮೊಮ್ಮಗ IV ನೇ ಇಂದ್ರನ (ಕ್ರಿ.ಶ. 982) ರಕ್ಷಣೆ ಗಂಗ ಮಾರಸಿಂಹನ ಮೇಲೆ ಬಿತ್ತು (C. Hayavadana Rao, Mysore Gazatteer, Vol, II, pt 2, pp 759-762) ; ಮಾರಸಿಂಹನು ಇಂದ್ರನಿಗೆ ಪಟ್ಟಾಭಿಷೇಕ ಮಾಡಿಸಿದ್ದು E. C. II, SB 59) ; ಇಂದ್ರನು ನುರಿತ ಅಶ್ವ ಸವಾರ (E. C. II, SB 133) ; ಇಂದ್ರನು ಸಲ್ಲೇಖನವನ್ನು ಆಚರಿಸಿ ಮೃತನಾದದ್ದು (E C. II, SB 133 ; E.C. XII. Si. 27).

3. ಬಾಹುಬಲಿ :

ಬಾಹುಬಲಿ ಮತ್ತು ಭರತೇಶರ ಕಾಳಗ, ಪೌದನ ಪುರದ ವರ್ಣನೆ (E.C. II, SB 234 (85) ಕ್ರಿ.ಶ. 1180).

ತ.ರಾ.ಸು. ಕಾದಂಬರಿಗೆ ಬಳಸಿಕೊಂಡಿರುವ ಗ್ರಂಥಗಳು ಚಾವುಂಡರಾಯ ಪುರಾಣ, ಪಂಪನ ಆದಿಪುರಾಣ ಹಾಗೂ ವಿಕ್ರಮಾರ್ಜುನ ವಿಜಯ, ರನ್ನನ ಅಜಿತನಾಥ ಪುರಾಣ, ನಾಗವರ್ಮನ ಛಂದೋಂಬುಧಿ. ಚಾವುಂಡರಾಯ ಪುರಾಣದಿಂದ ಚಾವುಂಡರಾಯನು ಬ್ರಹ್ಮಕ್ಷತ್ರಿಯ. ಜಿನಭಕ್ತ. ಅವನ ಗುರು ಅಜಿತಸೇನಾಚಾರ್ಯ ಎಂಬ ವಿಷಯಗಳು ತಿಳಿದು ಬರುತ್ತವೆ. ಬಾಹುಬಲಿಗೆ ಸಂಬಂಧಿಸಿದ ವಿಷಯಗಳನ್ನು ಒದಗಿಸುವ ಇತರ ಗ್ರಂಥಗಳು ಹರಿಷೇಣನ ಬೃಹತ್ ಕಥಾ ಕೋಶ (ಸು. ಕ್ರಿ. ಶ. 931) ; ರತ್ನನಂದಿಯ ಭದ್ರಬಾಹು ಚರಿತ (ಸು. ಕ್ರಿ. ಶ. 1450) ; ದೇವಚಂದ್ರನ ರಾಜಾವಳಿ ಕಥೆ (ಸು.1800).

'ಶಿಲ್ಪಶ್ರೀ' ಕಾದಂಬರಿಯಲ್ಲಿ ನಿರೂಪಿತವಾಗಿರುವ ಚಾವುಂಡರಾಯನ ಕಥೆ ಹೀಗಿದೆ: ಚಾವುಂಡರಾಯನ ವೈರಾಗ್ಯ ಮನೋಭಾವನೆಯೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಬಾಹುಬಲಿಯಂತೆ ಯುದ್ಧ ಮತ್ತು ರಕ್ತಪಾತಗಳನ್ನು ನಿಲ್ಲಿಸಿ ತಾನೂ [illegible] ಸಂನ್ಯಾಸವನ್ನು ಪಡೆಯಬಾರದೇಕೆ ಎಂಬ ಮನಸ್ಸು ಅವನದು. ರಾಜ್ಯಕ್ಕಾಗಿ ಭರತ–ಬಾಹುಬಲಿಗಳ ಕಾಳಗ, ಗಂಗ–ರಾಷ್ಟ್ರಕೂಟರ ಮೈತ್ರಿಯಾಗಿ ಪರಿವರ್ತನೆಯಾದುದು–ಇವುಗಳನ್ನು ನೆನೆದು ಇವೆಲ್ಲಾ 'ರಾಜಕಾರಣದ ಕಾಡಿಯ ವಿಕಟಾಟ್ಟಹಾಸದ ಕರಾಳ ವಿಚಿತ್ರತೆ' ಎಂಬ ಅಭಿಪ್ರಾಯಕ್ಕೆ ಅವನು ಬರುತ್ತಾನೆ (ಅಧ್ಯಾಯ 1) ; ಚಾವುಂಡರಾಯನ ನೆನಪುಗಳು : ಅವನಿಗೆ ಇಪ್ಪತ್ತು ವರ್ಷ ವಯಸ್ಸಾಗಿದ್ದಾಗ ಗಂಗಬೂತುಗನಲ್ಲಿ ದಂಡನಾಯಕನಾಗಿದ್ದ ಮಹಾಬಲಯ್ಯನೊಂದಿಗೆ ರಾಷ್ಟ್ರಕೂಟ ರಾಜಧಾನಿ ಮಾನ್ಯಖೇಟಕ್ಕೆ ಹೋಗುವ ಅವಕಾಶ ಅವನಿಗೆ ದೊರಕಿತು. ರಾಷ್ಟ್ರಕೂಟ ಸಾಮ್ರಾಟ 3ನೇ ಕೃಷ್ಣನ ಆಸ್ಥಾನಕ್ಕೆ ಆಗ ಲೆಂಬುಳಪಾಟಕದ ಚಾಲುಕ್ಯ–[illegible] ಅರಿಕೇಸರಿ ತನ್ನ ದಂಡನಾಯಕ ಪಂಪನೊಡನೆ ಬಂದಿದ್ದ. ಸಾಮಂತ ದಂಡನಾಯಕನೇ ಅಲ್ಲದೆ ಮಹಾಕವಿ. ಅವನನ್ನು ನೋಡಬೇಕೆಂಬ ಆಸೆ ಚಾವುಂಡನಿಗೆ, ಪಂಪನು ಪ್ರಾರಂಭದಲ್ಲಿ ತನ್ನ ಕಾವ್ಯಗಳ ಬಗ್ಗೆ ಹೆಮ್ಮೆಪಟ್ಟುಕೊಂಡಿದ್ದವನು. ಬಾಹುಬಲಿಯಂತೆ ಅಹಂಭಾವನೆಯನ್ನು ಬಿಟ್ಟು, ಅರಿಕೇಸರಿಯ ಆಶ್ರಯದಲ್ಲಿ ತನ್ನ ಭೋಗಜೀವನವು ಕಾವ್ಯರಚನೆಗೆ [illegible].

ಪಂಪನು ತನ್ನನ್ನು ನೋಡಲು ಬಂದ ಚಾವುಂಡರಾಯನಿಗೆ ಜಿನಧರ್ಮವನ್ನು ಪಾಲಿಸುವಂತೆ ಬೋಧಿಸಿ ಆಶೀರ್ವದಿಸುತ್ತಾನೆ. ಇದು ಚಾವುಂಡರಾಯನ ಜೀವನದಲ್ಲಿ ಬಹು ಮುಖ್ಯ ಘಟನೆ ಎಂಬುತೆ ತ.ರಾ.ಸು. ಅವರು ವರ್ಣಿಸಿದ್ದಾರೆ. ಪಂಪನು ತಾನು ರಚಿಸಿದ ಎರಡು ಕಾವ್ಯಗಳ ಓಲೆಯ ಪ್ರತಿಗಳನ್ನು ಚಾವುಂಡರಾಯನಿಗೆ ಕೊಡುತ್ತಾನೆ. ಅವು ಚಾವುಂಡರಾಯನ 'ಬಾಳ ಬಟ್ಟೆಯನ್ನು ಬೆಳಗುವ ಯಮಳ ನಂದಾ ದೀವಿಗೆಗಳು.' ವಿಕ್ರಮಾರ್ಜುನ ವಿಜಯವು ಸಾಹಸಮಯ ಜೀವನಕ್ಕೆ ಆದರ್ಶ; ಆದಿಪುರಾಣವು ತ್ಯಾಗ–ವೈರಾಗ್ಯಗಳಿಲ್ಲದೆ ಮಾನವನ ಬಾಳು ಭವ್ಯವಾಗದು ಎಂಬ ನೀತಿಯನ್ನು ಬೋಧಿಸುವ ಮಹಾಕಾವ್ಯ. ಮೊದಲನೆಯದು ಐಹಿಕ ಜೀವನಕ್ಕೆ ದಾರಿ ದೀಪ; ಎರಡನೆಯದು ಪಾರಮಾರ್ಥಿಕ ಜೀವನಕ್ಕೆ ಆಧಾರ. ಒಂದು ಕಾವ್ಯದಲ್ಲಿ ಭೋಗ, ಮತ್ತೊಂದು ಕಾವ್ಯದಲ್ಲಿ ವೈರಾಗ್ಯ. ವೈರಾಗ್ಯವನ್ನು ಬಯಸುವ ಚಾವುಂಡರಾಯನಿಗೆ ಯೋಧ ಜೀವನವನ್ನು ತ್ಯಜಿಸಿ. ಖಡ್ಗಸಂನ್ಯಾಸವನ್ನು ಸ್ವೀಕರಿಸಲು ರಾಜಕಾರಣಗಳಿಂದ ಸಾಧ್ಯವಾಗಿಲ್ಲ. (ಅಧ್ಯಾಯ 2) ಚಾವುಂಡರಾಯನ ತಾಯಿ ಕಾಳಲಾದೇವಿಗೆ ಉತ್ತರ ಭಾರತದ ಪೌದನಪುರದ ಬಾಹುಬಲಿ ವಿಗ್ರಹವನ್ನು ನೋಡಬೇಕೆಂಬ ಆಸೆ. ಅದನ್ನು ತೀರಿಸಲು ಚಾವುಂಡರಾಯನ ಸಂಕಲ್ಪ. ಈ ಮಧ್ಯೆ, ಖಡ್ಗಸಂನ್ಯಾಸವನ್ನು ಪಡೆಯಬೇಕು. ಇದರ ಬಂಧನವನ್ನು ನೀಗಿಕೊಳ್ಳಬೇಕು ಎಂಬ ಬಯಕೆ ಅವನಲ್ಲಿ ಹೆಚ್ಚಾಗಿರುವಲ್ಲಿ, ತಾಯಿಯ ಸಲಹೆಯಂತೆ ಶ್ರವಣಬೆಳಗೊಳಕ್ಕೆ ಹೋಗಿ ಜೈನಗುರು ನೇಮಿಚಂದ್ರಾಚಾರ್ಯರನ್ನು ನೋಡಲು ನಿರ್ಧರಿಸುತ್ತಾನೆ. (ಅಧ್ಯಾಯ 3) ಚಾವುಂಡರಾಯನ ಆಶ್ರಯದಲ್ಲಿರುವ ಕವಿ ರನ್ನನ ವ್ಯಕ್ತಿ ಚಿತ್ರಣ: ಬಂಕಾಪುರದಲ್ಲಿ ಅಜಿತಸೇನಾಚಾರ್ಯರ ಆಶ್ರಯದಲ್ಲಿ ರನ್ನನಿಗೆ ಲಲಿತ ಕೀರ್ತಿ ಪಂಡಿತನಿಂದ ವಿದ್ಯಾಭ್ಯಾಸ; ಆ ತರುವಾಯ ಗಂಗವಾಡಿಯ ಮಂಡಲೇಶ್ವರ ಮಾರಸಿಂಹ ಮತ್ತು ಅವನ ದಂಡನಾಯಕ ಚಾವುಂಡರಾಯನ ದರ್ಶನ. ರನ್ನನು ಆಚಾರ್ಯರ ಅಪ್ಪಣೆಯಂತೆ ಮಾರಸಿಂಹ ಮತ್ತು ಚಾವುಂಡರಾಯರ ಆಶ್ರಯ ಪಡೆದು ತಲವನ ಪುರಕ್ಕೆ ಬರುತ್ತಾನೆ. ರನ್ನ–ಚಾವುಂಡರ ಮೈತ್ರಿ (ಅಧ್ಯಾಯ 4) ರನ್ನ ಮತ್ತು ಚಾವುಂಡರಾಯರ ಶ್ರವಣಬೆಳಗೊಳ ಯಾತ್ರೆ. ಶ್ರವಣಬೆಳಗೊಳದ ವರ್ಣನೆ. ಚಾವುಂಡರಾಯನ ಧರ್ಮಗುರು ನೇಮಿಚಂದ್ರಾಚಾರ್ಯರ ನೆಲೆ ಶ್ರವಣಬೆಳಗೊಳ (ಅಧ್ಯಾಯ 5); ನೇಮಿಚಂದ್ರರನ್ನು ಚಾವುಂಡರಾಯ ಹಾಗೂ ರನ್ನಮಯ್ಯ ಭೇಟಿಮಾಡುತ್ತಾರೆ. ಅವರು ಪ್ರವಚನ ಮಾಡುತ್ತಿರುವ ಆದಿಪುರಾಣದಲ್ಲಿಯ ಬಾಹುಬಲಿಯ ದೀಕ್ಷಾಗ್ರಹಣ ಹಾಗೂ ಅವನಲ್ಲಿ ಕೇವಲೋತ್ಪತ್ತಿಯಾಗುವ ಪ್ರಸಂಗ ಚಾವುಂಡರಾಯನ ಮೇಲೆ ಪ್ರಭಾವ ಬೀರುತ್ತದೆ. ಪೌದನ ಪುರದ ಬಗ್ಗೆ ಆಚಾರ್ಯರು ಮಾಹಿತಿಗಳನ್ನು ತಿಳಿಸಿ, ದಟ್ಟಡವಿ ಬೆಳೆದು ನರಭಕ್ಷಕ ಕುಕ್ಕುಟ ಸರ್ಪಗಳಿರುವ ಕಾರಣ ಚಾವುಂಡರಾಯನೂ, ಅವನ ತಾಯಿ ಕಾಳಲಾದೇವಿಯೂ ಅಲ್ಲಿಗೆ ಹೋಗಲು ಸಾಧ್ಯವಿಲ್ಲವೆನ್ನುತ್ತಾರೆ. ರನ್ನನು ಮಹಾ ಕವಿಯಾಗುವನೆಂಬ ಭವಿಷ್ಯವನ್ನು ಸಹ ಅವರು

ತಿಳಿಸುತ್ತಾರೆ (ಅಧ್ಯಾಯ 6): ಚಾವುಂಡರಾಯನು ಇಂದ್ರಗಿರಿಯ ಮೇಲೆ ಗೊಮ್ಮಟನ ವಿಗ್ರಹವನ್ನು ಸ್ಥಾಪಿಸಲು ನಿರ್ಧರಿಸುತ್ತಾನೆ. ಚಂದ್ರಗಿರಿಯ ಪ್ರಾಚೀನ ಬಸದಿಗಳನ್ನೂ ಹಾಗೂ ಶಿಲಾ ಶಾಸನಗಳನ್ನೂ ನೋಡಲು ಚಾವುಂಡರಾಯ ಹಾಗೂ ರನ್ನ ಹೋಗುತ್ತಾರೆ. ಶಿಲ್ಪವು ಅಪೂರ್ಣವಾಗಿರುವ ಭರತ ಚಕ್ರವರ್ತಿಯ ವಿಗ್ರಹದ ಬಗ್ಗೆ ಚಾವುಂಡ–ರನ್ನರ ಸಂಭಾಷಣೆ. ಚಂದ್ರಗಿರಿಯಿಂದ ಇಂದ್ರಗಿರಿಯ ಮೇಲಿನ ಕೋಡುಗಲ್ಲನ್ನು ನೋಡಿದಾಗ ಚಾವುಂಡರಾಯನಿಗೆ ಬಾಹುಬಲಿಯ ಪ್ರತಿಮಾ ಯೋಗದ ಮೂರ್ತಿ ಪ್ರತ್ಯಕ್ಷವಾದಂತೆ ಕಾಣುತ್ತದೆ (ಅಧ್ಯಾಯ 7); ಶ್ರವಣಬೆಳಗೊಳದಲ್ಲಿ ಚಾವುಂಡರಾಯನ ಸ್ವಪ್ನ. ಬಾಹುಬಲಿಯ ವಿಗ್ರಹದ ದರ್ಶನಕ್ಕಾಗಿ ತಾಯಿಯೊಂದಿಗೆ ಪೌದನಪುರಕ್ಕೆ ಪ್ರಯಾಣ ಹೊರಟಂತೆಯೂ. ಆ ಸಮಯದಲ್ಲಿ ಪದ್ಮಾವತಿಯು ಚಾವುಂಡರಾಯನನ್ನು ಉದ್ದೇಶಿಸಿ, ಪೌದನಪುರದವರೆಗೂ ಹೋಗದೆ ಚಂದ್ರಗಿರಿಯ ಮೇಲೆ ನಿಂತು ಇಂದ್ರಗಿರಿಯ ಶಿಖರಕ್ಕೆ ಬಾಣವನ್ನು ಬಿಟ್ಟರೆ ಅವನಿಗೂ ಮತ್ತು ಅವನ ತಾಯಿಗೂ ಗೊಮ್ಮಟನ ದರ್ಶನವಾಗುವುದೆಂದು ನುಡಿದಂತೆಯೂ ಚಾವುಂಡರಾಯನಿಗೆ ಸ್ವಪ್ನವಾಗುತ್ತದೆ. ಈ ಕನಸನ್ನು ಚಾವುಂಡರಾಯನು ನೇಮಿಚಂದ್ರಾಚಾರ್ಯರಿಗೆ ತಿಳಿಸಲು ಅವರು ಶ್ರವಣಬೆಳಗೊಳದ ಗುಳ್ಳಕಾಯಿ ಅಜ್ಜಿಗೆ ಬೆಟ್ಟದ ಕೋಡುಗಲ್ಲಿನಲ್ಲಿ ಗೊಮ್ಮಟ ಮೂರ್ತಿಯು ಕಾಣಿಸಿಕೊಂಡು, ಅವಳು ದಿನ ದಿನ ಅಲ್ಲಿಗೆ ಹೋಗಿ ಗೊಮ್ಮಟನನ್ನು ಪೂಜಿಸುತ್ತಿರುವಳೆಂದೂ ಹೇಳುತ್ತಾರೆ, (ಅಧ್ಯಾಯ 8); ಚಾವುಂಡರಾಯನು ತಲವನಪುರಕ್ಕೆ ಹಿಂದಿರುಗಿ, ಆದಿಪುರಾಣದಲ್ಲಿ ಚಿತ್ರಿತವಾಗಿರುವ ಪ್ರತಿಮಾ ಯೋಗದ ಬಾಹುಬಲಿಯ ಮೂರ್ತಿಯಂತೆಯೇ ತಾನು ಶಿಲ್ಪಿಸುವ ಗೊಮ್ಮಟನ ವಿಗ್ರಹವು ಸಹ ಇರಬೇಕೆಂದು ನಿರ್ಧರಿಸುತ್ತಾನೆ. ಆದರೆ ರಾಜಕೀಯ ಘಟನೆಗಳು ಅವನ ಸಂಕಲ್ಪಕ್ಕೆ ಭಂಗ ತರುತ್ತವೆ. ಆಗ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ ಪರಮಾರ ಸೀಯಕನ ಧಾಳಿ, ದಳ್ಳುರಿಗಳಿಗೆ ತುತ್ತಾಗಿರುತ್ತದೆ. ಚಾಲುಕ್ಯ ತೈಲನಿಂದ ರಾಷ್ಟ್ರಕೂಟ ಕಕ್ಕನು ಸೋತು ಮೃತನಾಗಿರುತ್ತಾನೆ. ರಾಷ್ಟ್ರಕೂಟರ ಸಾಮಂತನಾದ ನೊಳಂಬಕುಲಾಂತಕ ಮಾರಸಿಂಹನು ಯುದ್ಧದಲ್ಲಿ ಗಾಯಗೊಂಡಿರುತ್ತಾನೆ. ಚಾವುಂಡರಾಯನು ಅವನ ನೆರವಿಗಾಗಿ ಬಂದರೂ ಪ್ರಯೋಜನವಿಲ್ಲದಂತಾಗಿದೆ. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಕಳೆದುಕೊಂಡಿರುವ ಇಂದ್ರನ ರಕ್ಷಣೆ ಈಗ ಚಾವುಂಡರಾಯನ ಮೇಲೆ. ಗಾಯಗೊಂಡಿರುವ ಮಾರಸಿಂಹನು ಸಲ್ಲೇಖನವನ್ನು ಆಚರಿಸಿ ಅಸುವನ್ನು ನೀಗುತ್ತಾನೆ (ಅಧ್ಯಾಯ 10): ಚಾವುಂಡರಾಯನ ಮಾನಸಿಕ ಪರಿವರ್ತನೆ, ವೈರಾಗ್ಯದತ್ತ ಅವನ ಮನಸ್ಸು. ರಾಷ್ಟ್ರಕೂಟದ ಸಾಮ್ರಾಜ್ಯವು ನಶಿಸಿ ಹೋದುದನ್ನೂ, ತನ್ನ ಸ್ವಾಮಿ ಮಾರಸಿಂಹನ ಮರಣವನ್ನೂ ಕಂಡು ಅವನು ದುಃಖಿತನಾಗುತ್ತಾನೆ. ಇಂದ್ರನ ವ್ಯಕ್ತಿತ್ವವು ಸಹ ಇಲ್ಲಿ ನಮಗಾಗುತ್ತದೆ (ಅಧ್ಯಾಯ 11); ರಾಜಕೀಯ ಪರಿಸ್ಥಿತಿಗಳಿಂದ ಪ್ರಾಪ್ತವಾಗಿರುವ ಮಾನಸಿಕ ಒತ್ತಡವನ್ನು ನೀಗಿ ಕೊಳ್ಳಲು ಚಾವುಂಡರಾಯನು ಕಾವ್ಯ ರಚನೆಗೆ ಕೈ ಹಾಕು

ತ್ತಾನೆ. (ಅಧ್ಯಾಯ 12) ತಲವನ ಪುರವಲ್ಲೀ (ತಲಕಾಡು) ವಾಸಿಸುತ್ತಿರುವ ಇಂದ್ರನು ತನ್ನ ಚಿಂತೆಯನ್ನು ಮರೆಯಲು ಚಾವುಂಡರಾಯನೊಡನೆ ಕಂದುಕ ಕ್ರೀಡೆಯನ್ನು (ಪೋಲೊ) ಆಡಲು ತೊಡಗುತ್ತಾನೆ. ಆದರಿಂದಲೂ ಆತನ ವ್ಯಸನವು ದೂರವಾಗುವುದಿಲ್ಲ. ಸಾಮ್ರಾಜ್ಯವನ್ನು ಕಳೆದುಕೊಂಡಿರುವ ಅವನಲ್ಲಿ ಕ್ಲೇಶವು ಹೆಚ್ಚಾಗಿ, ಕೊನೆಗೆ ಶ್ರವಣ ಬೆಳಗೊಳಕ್ಕೆ ಹೋಗಿ ಸಲ್ಲೇಖನದಲ್ಲಿ ಪ್ರಾಣವನ್ನು ತ್ಯಜಿಸಲು ನಿಶ್ಚಯಿಸಿಕೊಳ್ಳುತ್ತಾನೆ. (ಅಧ್ಯಾಯ 13): ಶ್ರವಣಬೆಳಗೊಳಕ್ಕೆ ಚಾವುಂಡರಾಯ, ಇಂದ್ರರ ಪ್ರಯಾಣ ಈ ಸಮಯದಲ್ಲಿ ಕಾಳಲಾದೇವಿ ಗೊಮ್ಮಟನ ವಿಗ್ರಹವನ್ನು ಶಿಲ್ಪಿಸುವ ಬಗ್ಗೆ ಮಗನಾದ ಚಾವುಂಡರಾಯನಿಗೆ ಜ್ಞಾಪಿಸುತ್ತಾಳೆ (ಅಧ್ಯಾಯ 14) ; ಶ್ರವಣಬೆಳಗೊಳದಲ್ಲಿ ಇಂದ್ರನು ರಾಷ್ಟ್ರಕೂಟ ಮಕುಟವನ್ನು ನೇಮಿಚಂದ್ರಾಚಾರ್ಯರ ಪಾದಗಳ ಮುಂದಿಟ್ಟು ಸಲ್ಲೇಖನಕ್ಕೆ ಅನುಮತಿ ಬೇಡುತ್ತಾನೆ (ಅಧ್ಯಾಯ 15) ; ಇಂದ್ರನ ಸಲ್ಲೇಖನ ಅವನ ಕಾಯ ಇಹ ಬಂಧನವನ್ನು ತ್ಯಜಿಸಿ ಕೀರ್ತಿಕಾಯವಾಗುತ್ತದೆ. ಚಾವುಂಡನು ಸಹ ಸಲ್ಲೇಖನಕ್ಕೆ ಅನುಮತಿ ಬೇಡಲು, ಪಂಪಕವಿಯು ಆಶೀರ್ವದಿಸಿ ಹೇಳಿರುವಂತೆ ನೀವು ಕಾವ್ಯ ರಚಿಸಿ ಕೀರ್ತಿ ಪಡೆಯಬೇಕು, "ನೀವು ಬಯಸುತ್ತಿರುವ ಖಡ್ಗಸಂನ್ಯಾಸ ಸ್ವೀಕಾರಕ್ಕಾಗಿ ಖಡ್ಗ ಬಿಸುಟು ಕಂಟವನ್ನು ಹಿಡಿಯಿರಿ" ಎಂದು ನೇಮಿಚಂದ್ರಾಚಾರ್ಯರು ಚಾವುಂಡರಾಯನಿಗೆ ತಿಳಿಸುತ್ತಾರೆ (ಅಧ್ಯಾಯ 16) ; ಚಾವುಂಡರಾಯನು ತನ್ನ ಖಡ್ಗವನ್ನು ಧವಳ ಸರೋವರದಲ್ಲಿ ಬಿಸುಟು, ಹಿಂಸಾತ್ಮಕವಾದ ಯೋಧ ಜೀವನಕ್ಕೆ ಪ್ರತಿಯಾಗಿ ಜಿನ ಧರ್ಮಕ್ಕನುಗುಣವಾದ ಅಹಿಂಸಾ ಜೀವನವನ್ನು ಪ್ರಾರಂಭಿಸುತ್ತಾನೆ. ಖಡ್ಗ ಮುಕ್ತಿಯ ತರುವಾಯ ಅವನ ಕೈ ಕಂಟಕ್ಕೆ ಮೀಸಲು. ಚಾವುಂಡರಾಯನು ಇಂದ್ರಗಿರಿಯ ಶಿಖರಕ್ಕೆ ನಮಸ್ಕರಿಸುವಾಗ ಮಂದಹಾಸ ಬೀರುವ ಬಾಹುಬಲಿ ದೇವನ ದಿವ್ಯ ಮೂರ್ತಿಯು ಆ ಶಿಖರ ಶಿಲೆಯಲ್ಲಿ ಮೂಡಿಬಂದಂತೆ ಅವನಿಗೆ ಗೋಚರವಾಗುವುದು. (ಅಧ್ಯಾಯ 17) ; ಚಾವುಂಡರಾಯನು ತನ್ನ ಕೃತಿಯನ್ನು ಬರೆದು ಮುಗಿಸಿದನೆಂದು ಕೊನೆಯ ಅಧ್ಯಾಯದಲ್ಲಿ ನಮಗೆ ತಿಳಿದು ಬರುತ್ತದೆ (ಅಧ್ಯಾಯ 18). ಪುರಾಣ ರಚನೆ (ಕಾವ್ಯಶಿಲ್ಪ), ಹಾಗೂ ಗೊಮ್ಮಟ ವಿಗ್ರಹದ ರಚನೆ (ಮೂರ್ತಿಶಿಲ್ಪ) ಇವುಗಳಿಂದ ಚಾವುಂಡರಾಯನ ಬಾಳು ಶ್ರೀಮಂತಗೊಳ್ಳುತ್ತದೆ. ಆದ್ದರಿಂದ ಕಾದಂಬರಿಗೆ 'ಶಿಲ್ಪಶ್ರೀ' ಎಂಬ ಹೆಸರು ಯುಕ್ತವೆನಿಸುತ್ತದೆ. ಚಾವುಂಡರಾಯ ಪುರಾಣದ ವಿರಚಿಸಿ ಶಕ ಸಂವತ್ಸರ 900 (ಕ್ರಿ.ಶ. 978)ರಲ್ಲಿ ಇಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಕಾದಂಬರಿಯು ಲೇಖಕನು ತನ್ನ ಪಾತ್ರಗಳೊಂದಿಗೆ ಸೃಷ್ಟಿಸುವ ಪ್ರಪಂಚವನ್ನು ಚಿತ್ರಿಸಿ, ಪಾತ್ರಗಳ ಮೂಲಕ ಬಾಳಿನ ವಿಷಯವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತದೆ ; ಸತ್ಯದ ಬಗ್ಗೆ ವಾಚಕರ ಉತ್ಸಾಹವನ್ನು ಕೆರಳಿಸುತ್ತದೆ. ಅಷ್ಟೇ ಅಲ್ಲ, ಅದು ಪಾತ್ರಗಳ ಅಂತರಿಕ ಸ್ವಭಾವವನ್ನು ವಿಶ್ಲೇಷಿಸಿ ತಿಳಿಸುತ್ತದೆ. ಈ ದೃಷ್ಟಿಯಲ್ಲಿ

"ಶಿಲ್ಪಶ್ರೀ" ಹಲವಾರು ಚಾರಿತ್ರಿಕ ಪಾತ್ರಗಳನ್ನು ಚಿತ್ರಿಸಿ, ಆ ಪಾತ್ರಗಳು ಸಾಧಿಸಿದ ಆದರ್ಶಗಳನ್ನು ನಮ್ಮ ಮುಂದಿಡುತ್ತದೆ. ಹೆನ್ರಿ ಜೇಮ್ಸ್ (1843–1916) ಹೇಳುವಂತೆ, "ಒಂದು ಗ್ರಂಥದ ಮಟ್ಟವು ಅದನ್ನು ರಚಿಸಿದಾತನ ಬೌದ್ಧಿಕ ಮಟ್ಟವನ್ನು ಪ್ರತಿನಿಧಿಸುವುದಾಗಿದೆ. ಉತ್ತಮ ಕಾದಂಬರಿ ಎಂದಿಗೂ ಸತ್ವರಹಿತ ಬುದ್ಧಿಯಿಂದ ಹೊರಡಲಾರದು". 'ಶಿಲ್ಪಶ್ರೀ' ಈ ಹೇಳಿಕೆಯನ್ನು ಸಮರ್ಥಿಸುವಂತಿದೆ: ತ.ರಾ.ಸು. ಅವರ ವಿದ್ವತ್ತು, ರಚನಾ ಕೌಶಲ, ಹೇಳಬೇಕಾದ ವಿಷಯದ ಬಗ್ಗೆ ಅವರು ಮಾಡಿರುವ ಸಂಶೋಧನೆ — ಇವುಗಳೆಲ್ಲಾ ಅವರ ಈ ಕಾದಂಬರಿಯಲ್ಲಿ ವ್ಯಕ್ತವಾಗಿವೆ. ಕಾದಂಬರಿಗೆ ಆರಿಸಿಕೊಳ್ಳುವ ವಸ್ತು, ಪಾತ್ರ, ಘಟನೆ: ಆಖ್ಯಾನ ಸಂಭಾಷಣೆ, ವಿನ್ಯಾಸ, ಭಾಷೆ, ಶೈಲಿ, ತಂತ್ರ – ಇವು ಕಾದಂಬರಿಯ ರಚನೆಯಲ್ಲಿ ಮುಖ್ಯವಾದ ಅಂಶಗಳು. ನುರಿತ ಕಾದಂಬರಿಕಾರರಾದ ಅ.ನ.ಕೃ., ತ.ರಾ.ಸು. ಮೊದಲಾದವರ ರಚನೆಗಳಲ್ಲಿ ಇವುಗಳ ವೈವಿಧ್ಯವನ್ನು ಕಾಣಬಹುದು. "ಶಿಲ್ಪಶ್ರೀ"ಯ ವಸ್ತು, ಕಾದಂಬರಿಕಾರರ ಸಾಹಿತ್ಯ ಹಾಗೂ ಐತಿಹಾಸಿಕ ಅಧ್ಯಯನಗಳಿಂದ ಮೂಡಿ ಬಂದದ್ದು. ಕಾದಂಬರಿಯು ಚಾವುಂಡರಾಯನ ವ್ಯಕ್ತಿಚಿತ್ರಣಕ್ಕೆ, ಅವನ ಕಾವ್ಯ ರಚನೆ ಹಾಗೂ ಶಿಲ್ಪ ರಚನೆಗೆ ಸೀಮಿತವಾದದ್ದು. ಉಳಿದ ಪಾತ್ರಗಳು ಅವನ ಸುತ್ತಲಿದ್ದು ಅವನ ವ್ಯಕ್ತಿತ್ವಕ್ಕೆ ಪೋಷಕವಾಗಿವೆ. ಕಾದಂಬರಿಯ ವಸ್ತುವಿಗೆ ಸಂಬಂಧಪಟ್ಟಂತೆ ಬಾಹ್ಯ ಘಟನೆಗಳಿಗೂ, ಪಾತ್ರಗಳ ಆಂತರಿಕ ಪರಿಸ್ಥಿತಿಗಳಿಗೂ ಒಡನಾಟವಿದೆ. ಇದನ್ನು ತ. ರಾ. ಸುಬ್ಬರಾಯರು ಪಂಪ, ರನ್ನ, ಮಾರಸಿಂಹ, ಇಂದ್ರ ಮತ್ತು ಚಾವುಂಡರಾಯರ ಸಂಬಂಧದಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಬಾಹುಬಲಿಯಂತೆ ತಾನೂ ಇಹದ ಬಂಧನದಿಂದ ಬಿಡಿಸಿಕೊಳ್ಳಬೇಕೆಂಬ ಚಾವುಂಡರಾಯನ ಆಸೆ, ದಂಡ ನಾಯಕ ವೃತ್ತಿಯನ್ನು ಬಿಟ್ಟು ಏಡ್ಗ ಸಂನ್ಯಾಸವನ್ನು ಕೈಗೊಳ್ಳಲು ಸಾಧ್ಯವೇ ಎಂಬ ಅವನ ಶಂಕೆ — ಇವುಗಳ ಕಾರಣದಿಂದ ಅವನಲ್ಲಿ ಉಂಟಾಗುವ ಮಾನಸಿಕ ತಿಕ್ಕಾಟವನ್ನು ಕಾದಂಬರಿಕಾರರು ಗಾಳಿಗೊಡ್ಡಿದ ಸೊಡರ ಕುಡಿಗೆ ಹೋಲಿಸಿರುವ ತಂತ್ರ ಸ್ವಾರಸ್ಯವಾಗಿದೆ.

"ಶಿಲ್ಪಶ್ರೀ" ಕಾದಂಬರಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಕಥಾ ರಚನೆಯಲ್ಲಿ ನ್ಯೂನತೆಗಳಿಲ್ಲದೆಯಿಲ್ಲ ಅನಿಸುತ್ತದೆ. ಕಥೆಯ ಮುನ್ನೋಟಕ್ಕೆ ಅಗತ್ಯವಾದ ಘಟನೆಗಳೇ ಸಾಲದೆ, ಪಾತ್ರಗಳು ಸಾಹಿತ್ಯಕ ಮೌಲ್ಯಗಳನ್ನು ಹಾಗೂ ಧಾರ್ಮಿಕ ಸೂತ್ರಗಳನ್ನು ಚರ್ಚೆಮಾಡುವುದರಲ್ಲಿಯೇ ಕಾಲ ಕಳೆಯುವುದು ಕಂಡು ಬರುತ್ತದೆ. ಹಲವಾರು ವಿಷಯಗಳನ್ನು ಹೊತ್ತ ಕಾದಂಬರಿಗೆ ಕಾರ್ಯೈಕ್ಯತೆ ಮತ್ತು ಚಲನೈಕ್ಯತೆ ಸಾಲದೆ, ಕಥೆಯ ನಡೆಗೆ ಆತಂಕವಿದೆ. ಪಾರೋಕ್ತಿಗೆ (Climax) ಅಗತ್ಯವಾದ ಸನ್ನಿವೇಶಗಳೇ ಇಲ್ಲದೆ ಕಾದಂಬರಿ ನೀರಸವಾಗಿ ಮುಕ್ತಾಯಗೊಳ್ಳುತ್ತದೆ. ರಾಷ್ಟ್ರಕೂಟ ಇಂದ್ರನು ಕಾದಂಬರಿಯ ಮುಕ್ತಾಯ ಘಟ್ಟದಲ್ಲಿ ಬರುವ ಪಾತ್ರ. ರಾಷ್ಟ್ರಕೂಟ ಸಾಮ್ರಾಜ್ಯವು ಅಸ್ತಂಗತವಾಗುವ ಕಾಲದಲ್ಲಿ ಗಂಗ ರಾಜಮಲ್ಲನು

ಅವನಿಗೆ ಆಶ್ರಯ ಕೊಡುವ ಪ್ರಸಂಗವು ಕಾದಂಬರಿಯಲ್ಲಿ ಉಪಕಥೆಯಂತೆ ಕಾಣುತ್ತದೆ.

ಸಾಮಾನ್ಯವಾಗಿ ಕಾದಂಬರಿಯು ವಸ್ತು ಕಾಲವನ್ನು ಸಂಘಟಿಸುತ್ತದೆ. ನಾಟಕಕ್ಕೆ ಅಗತ್ಯವಿರುವಂತೆ ಕಾಲೈಕ್ಯತೆ ಕಾದಂಬರಿಗೂ ಇರಬೇಕು; ಕಾಲವನ್ನು ಅನುಕ್ರಮವಾಗಿ ಜೋಡಿಸಿಕೊಂಡು ಕಥೆ ಸಾಗಬೇಕು. "ಶಿಲ್ಪಶ್ರೀ" ಪ್ರಾಚೀನ ವ್ಯಕ್ತಿಗಳನ್ನು ತಂದುಕೊಂಡು ಐತಿಹಾಸಿಕ ಹಿನ್ನೆಲೆಯಲ್ಲಿ ಘಟನೆಗಳನ್ನು ನಿರೂಪಿಸುವ ಕಾದಂಬರಿ. ಕೆಲವು ಸಂದರ್ಭಗಳಲ್ಲಿ ಪ್ರಸ್ತುತ ಸನ್ನಿವೇಶದಲ್ಲಿ ಆಖ್ಯಾನ ಹಠಾತ್ತನೆ ಹಿಂದಿನ ಘಟನೆಗಳತ್ತ ಹಿಂಚಲಿಸಿ, ತರುವಾಯ ಕಥೆಯನ್ನು ಮುಂದುವರಿಸಿಕೊಂಡು ಹೋಗುವುದೂ ಉಂಟು. 'ಜಾರ್ಜ್ ಎಲಿಯಟ್' (ಮೇರಿ ಆನ್ ಇವಾನ್ಸ್ : 1819-80) ಎಂಬಾಕೆಯ "ಸಿಲಾಸ್ ಮಾರಿನರ್" ಕಾದಂಬರಿಯಲ್ಲಿ ಕಥಾನಾಯಕ ಸಿಲಾಸ್ ಮಗ್ಗದ ಮುಂದೆ ಕುಳಿತು ನೇಯುತ್ತಾ ತನ್ನ ಜೀವನದಲ್ಲಿ ನಡೆದ ಘಟನೆಗಳನ್ನೆಲ್ಲಾ ನೆನೆಸಿಕೊಳ್ಳುತ್ತಾನೆ. ಈ ಹಿಂದಿನ ಘಟನೆಗಳು ಕಥೆಯ ಚಲನೆಗೆ ಪ್ರೋತ್ಸಾಹಕವಾಗಿವೆ. ಈ ತಂತ್ರಕ್ಕೆ Looking Back ಅಥವಾ ತಿರುಗು ನೋಟ ಎಂಬ ಹೆಸರಿದೆ. "ಶಿಲ್ಪಶ್ರೀ" ಕಾದಂಬರಿಯಲ್ಲಿ ಭರತ–ಬಾಹುಬಲಿಗಳ ಯುದ್ಧ; ರಾಷ್ಟ್ರಕೂಟ–ಗಂಗರ ಪ್ರಾರಂಭದ ವೈರ, ತರುವಾಯದ ಮೈತ್ರಿ; ಚಾವುಂಡರಾಯನು ಯುವಕನಾಗಿದ್ದಾಗ ಪಂಪಮಹಾಕವಿಯನ್ನು ಕಂಡ ವಿಷಯ; ರನ್ನನು ಬಂಕಾಪುರದಲ್ಲಿ ವ್ಯಾಸಂಗ ಮುಗಿಸಿ ಗಂಗಮಂಡನಾಯಕ ಮಹಾಬಲಯ್ಯ ಮತ್ತು ಅವನ ಮಗ ಚಾವುಂಡರಾಯ ಇವರ ಆಶ್ರಯವನ್ನು ಪಡೆದುದು—ಇವುಗಳೆಲ್ಲಾ ತಿರುಗುನೋಟದ ತಂತ್ರದಿಂದ ಚಿತ್ರಿತವಾಗಿವೆ. ಈ ಘಟನೆಗಳನ್ನು ಕಾಲೈಕ್ಯತೆಗೆ ನೆರವಾಗುವಂತೆ ಕಾದಂಬರಿಕಾರರು ವಾಚಕರ ಮುಂದೆ ಇಟ್ಟಿಲ್ಲ. ಕಾದಂಬರಿಯ ನಡೆ ಅವಿಚ್ಛಿನ್ನವಾಗಿರಬೇಕು ಮತ್ತು ಕಥೆಯ ನಡೆಗೆ ಸಹಾಯಕವಾದ ಘಟನೆಗಳೆಲ್ಲಾ ಒಂದೇ ವಿಷಯಕ್ಕೆ ಅಥವಾ ಒಂದೇ ಸತ್ಯದರ್ಶನಕ್ಕೆ ಸಂಬಂಧಪಟ್ಟಿರಬೇಕು ಎಂಬ ನಿಯಮವಿದೆ. "ಶಿಲ್ಪಶ್ರೀ" ಕಾದಂಬರಿಯಲ್ಲಿ ಅನೇಕ ಘಟನೆಗಳು ಬಿಡಿಬಿಡಿಯಾಗಿ ವರ್ಣಿತವಾಗಿ, ಪಾತ್ರಗಳ ಸಂಭಾಷಣೆಗಳು ಕಾವ್ಯ ಹಾಗೂ ಧರ್ಮಗಳ ವಿಚಾರವಾಗಿ ಮಾಡಿದ ದೀರ್ಘ ಉಪನ್ಯಾಸಗಳಂತಿವೆ. ಸಂಭಾಷಣೆಗಳು ಕೆಲವು ಕಡೆಗಳಲ್ಲಿ ನಿರ್ದಿಷ್ಟ ವಿಷಯಗಳ ಮೇಲಿನ ಸಮೀಕ್ಷೆಗಳಂತಿವೆ. ಪಾತ್ರಗಳ ಅಭಿಪ್ರಾಯಗಳು ಪ್ರಬಂಧಗಳಂತೆ ಕಂಡು ಬಂದು, ಒಂದು ಪಾತ್ರವು ಸಂಭಾಷಣೆಯಲ್ಲಿ ನಿರತವಾಗಿರುವಾಗ ಮತ್ತೊಂದು ಪಾತ್ರವು ಆಲಿಸುತ್ತಿದೆಯೆಂಬ ಭಾವನೆಯೇ ವಾಚಕರಿಗೆ ಇಲ್ಲದಂತಾಗುತ್ತದೆ. ಉದಾಹರಣೆಗೆ: ಶಾಸ್ತ್ರಾಭ್ಯಾಸದ ಬಗ್ಗೆ ಲಲಿತಕೀರ್ತಿ ಪಂಡಿತ ಮತ್ತು ರನ್ನಮಯ್ಯರ ಸಂಭಾಷಣೆ (ಪು 53-57); ಚಂದ್ರಗಿರಿಯ ಶಾಸನಗಳ ಬಗ್ಗೆ ಚಾವುಂಡ–ರನ್ನರ ಸಂಭಾಷಣೆ (ಪು. 73-74); ಪೌದನ ಪುರಕ್ಕೆ ಹೋಗಬೇಕೆಂಬ ಕಾಳಲಾದೇವಿಯ ಬಯಕೆಯ ಬಗ್ಗೆ ಚಾವುಂಡರಾಯ–ನೇಮಿಚಂದ್ರಾ–

ಚಾರ್ಯರ ಸಂಭಾಷಣೆ (ಪು. 82-85); ಅರ್ಧ ಮುಗಿದಿರುವ ಭರತ ಚಕ್ರವರ್ತಿಯ ವಿಗ್ರಹದ ಬಗ್ಗೆ ಚಾವುಂಡರಾಯನ ಮಾತು (ಪು, 92); ಶ್ರವಣಬೆಳಗೊಳದ ಪವಿತ್ರತೆಯ ವಿಷಯವಾಗಿ ಚಾವುಂಡರಾಯನ ಮಾತುಗಳು (ಪು. 39); ಗುಳ್ಳ-ಕಾಯಿ ಅಜ್ಜಿಯ ಬಗ್ಗೆ ನೇಮಿಚಂದ್ರಾಚಾರ್ಯರ ದೀರ್ಘ ವಿವರಣೆ (ಪು. 104); ಬಾಹುಬಲಿ ವಿಗ್ರಹದ ಕೆತ್ತನೆಯ ವಿಷಯವಾಗಿ ರನ್ನ ನೇಮಿಚಂದ್ರಾಚಾರ್ಯ ಮತ್ತು ಚಾವುಂಡರಾಯರ ಸಂಭಾಷಣೆ (ಪು. 107–19).

ಅಂತೋಣಿ ಟ್ರಾಲಪ್ (1815-82) ತಿಳಿಸುವಂತೆ ಸಂಭಾಷಣೆ ಕಾದಂಬರಿಯಲ್ಲಿ ಅತ್ಯಂತ ಅಪ್ಯಾಯಮಾನವಾದ ಭಾಗ, ಅದು ಮೂಲ ಕಥೆಗೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಸಿರುತ್ತದೆ. ಆದರೆ "ಶಿಲ್ಪಶ್ರೀ" ಕಾದಂಬರಿಯಲ್ಲಿಯ ಸಂಭಾಷಣೆಗಳಲ್ಲಿ ಅನೇಕ ವಿಷಯಗಳು ಬೋಧಪ್ರಧಾನವಾಗಿರುವಂತೆ ಕಾಣುತ್ತವೆ. ಹೀಗೆ, ಅನೇಕ ಐತಿಹಾಸಿಕ ಹಾಗೂ ಸಾಹಿತ್ಯಿಕ ವಿಷಯಗಳ ದಾಖಲೆಗಳುಳ್ಳ "ಶಿಲ್ಪಶ್ರೀ" ಕಾದಂಬರಿಯ ಲಕ್ಷಣವನ್ನು ಹೊಂದಿದೆಯೇ ಎಂಬ ಶಂಕೆ ನಮಗಾಗುತ್ತದೆ. ಚಾವುಂಡರಾಯನ ಗುರಿ ಬಿಟ್ಟ ಸಂನ್ಯಾಸ, ಆ ಬಳಿಕ ಕಾವ್ಯರಚನೆ ಮತ್ತು ಬಾಹುಬಲಿಯ ವಿಗ್ರಹದ ಶಿಲ್ಪವಾಗಿದ್ದು ಈ ವಿಷಯಗಳು ಕಥಾವಸ್ತುವೆನಿಸುವುದಾದರೆ, ಉಳಿದ ಬಿಡಿಬಿಡಿಯಾದ ಘಟನೆಗಳೆಲ್ಲವೂ ಚಾವುಂಡರಾಯನ ಪಾತ್ರಪೋಷಣೆಗೆ ಪೂರಕವೆಂದೇ ನಾವು ಹೇಳಿಕೊಳ್ಳಬೇಕಾಗುವುದು.

ಇಂತಹ ನ್ಯೂನತೆಗಳು ಕಾದಂಬರಿಯಲ್ಲಿ ಕಂಡು ಬಂದರೂ, ತ.ರಾ.ಸು. ಅವರ ಕಥಾಶಿಲ್ಪದ ಸಿರಿವಂತಿಕೆ ನಮ್ಮ ಗಮನಕ್ಕೆ ಬೀಳದೆ ಹೋಗುವುದಿಲ್ಲ. "ಶಿಲ್ಪಶ್ರೀ"ಯಲ್ಲಿ ನಾವು ಕಾಣುವುದು ಘನವಾದ ಪಾತ್ರಗಳನ್ನು, ಅದರಲ್ಲಿ ಪಾತ್ರವೈವಿಧ್ಯ ವಿಪುಲವಾಗಿದೆ. ಕಾದಂಬರಿಯ ಪಾತ್ರಗಳನ್ನು ಕಾದಂಬರಿಯ ಜನ ಎಂದು ಕರೆಯುವುದುಂಟು. ಈ ಕಾದಂಬರಿಯ ಜನ ನಮ್ಮ ಮುಂದೆ ಜೀವಂತವಾಗಿ ಚಲಿಸಿ, ಕಥೆ ಮುಗಿಯುವವರೆಗೂ ನಮ್ಮ ಆಪ್ತರಂತೆ ವರ್ತಿಸುತ್ತಾರೆ. ಐತಿಹಾಸಿಕ ಪಾತ್ರಗಳಾದ ಮಾರಸಿಂಹ, ರಾಚಮಲ್ಲ, ಚಾವುಂಡರಾಯ ಮತ್ತು ಇಂದ್ರ; ಮಹಾ ಕವಿಗಳಾದ ಪಂಪ ಮತ್ತು ರನ್ನ; ಧಾರ್ಮಿಕ ಕ್ಷೇತ್ರದಲ್ಲಿ ಪ್ರಸಿದ್ಧರಾದ ನೇಮಿಚಂದ್ರಾಚಾರ್ಯ —ಇವರೆಲ್ಲರೂ ವಾಚಕರಿಗೆ ಪ್ರಿಯರಾಗಿ, ಕಾದಂಬರಿಯ ಕೊನೆಯವರೆಗೂ ತಮ್ಮ ಪ್ರಭಾವವನ್ನು ಬೀರುತ್ತಾರೆ. ಪಂಪನ ಕಾವ್ಯ ಪ್ರತಿಭೆ, ರಾಷ್ಟ್ರಕೂಟ ಸಾಮ್ರಾಜ್ಯಕ್ಕಾಗಿ ರಣರಂಗದಲ್ಲಿ ಅಸುವ ನೀಗಿದ ಮಾರಸಿಂಹನ ತ್ಯಾಗ; ರಾಷ್ಟ್ರವನ್ನು ಕಟ್ಟಿದ [illegible]; ಚಾವುಂಡರಾಯನ ಧರ್ಮನಿಷ್ಠೆ ಮತ್ತು ಸ್ವಾಮಿನಿಷ್ಠೆ ಇವೆಲ್ಲವೂ ವಾಚಕರನ್ನು ಆಕರ್ಷಿಸುತ್ತವೆ. ಈಗಾಗಲೇ ತಿಳಿಸಿರುವಂತೆ ಕಾದಂಬರಿಕಾರರು ಪಾತ್ರಗಳನ್ನು ಬಾಹ್ಯ ದೃಷ್ಟಿಯಿಂದ ಕಾಣದೆ ಅವುಗಳ ಅಂತರಾತ್ಮವನ್ನು ಸೊಗಸಾಗಿ ವಿಶ್ಲೇಷಿಸಿದ್ದಾರೆ. ಅವರು ಸೃಷ್ಟಿಸಿರುವ ಪುರಾತನ ವ್ಯಕ್ತಿಗಳ ಸಂಭಾಷಣೆಗಳು ವಾಲ್ಟರ್ ಸ್ಯಾವೇಜ್ ಲ್ಯಾಂಡರ್ (1775-1864) ಎಂಬಾತನ

ತನ್ನ Imaginary Conversations ಕಾಲ್ಪನಿಕ ಇಷ್ಟಾಲಾಪಗಳಲ್ಲಿ ಗತಕಾಲದ ಪ್ರಸಿದ್ಧ ವ್ಯಕ್ತಿಗಳನ್ನು ಸಂಭಾಷಣೆಯಲ್ಲಿ ತೊಡಗಿಸಿ ಕಥೆ ಹೇಳಿದಂತೆಯೇ ನಾಟಕೀಯವಾಗಿದೆ.

ತ. ರಾ. ಸುಬ್ಬರಾಯರು ಗದ್ಯಶೈಲಿಗೆ ಪ್ರಸಿದ್ಧರು. ಐತಿಹಾಸಿಕ ಕಾದಂಬರಿಗಳಲ್ಲಂತೂ ಅವರ ಗಂಡು ಗದ್ಯ ಭವ್ಯವಾಗಿ ಪ್ರಕಟಿಸಿಕೊಂಡು ಆಖ್ಯಾನಕ್ಕೆ ಚೇತನವನ್ನು ತುಂಬಿದೆ. ಭಾವನೆಗಳನ್ನು ಮಾತಿಗೆ ಪರಿವರ್ತಿಸಿ ಬರೆಯುವುದು ನಿಜಕ್ಕೂ ಸುಲಭವಾದ ಕೆಲಸವಲ್ಲ. ಸುಬ್ಬರಾಯರ ಆಖ್ಯಾನ ಸಾಮರ್ಥ್ಯ "ಶಿಲ್ಪಶ್ರೀ"ಯಲ್ಲಿ ಕಂಡುಬರುವಂತೆ ಅವರ ಇತರ ಕೃತಿಗಳಲ್ಲಿಯೂ ಪ್ರಕಟವಾಗಿದೆ. ಅವರದು ಸರಳ ಸುಂದರ ಶೈಲಿ. ಶೈಲಿ ಭಾಷೆಯ ಲಕ್ಷಣವೆಂಬುದು ದಿಟ. ಅದು ಕಥೆ ಹೇಳುವವನ ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಅವನ ಅಪಾರ ಜ್ಞಾನ, ಪಾಂಡಿತ್ಯ ಹಾಗೂ ಜೀವನದ ಬಗ್ಗೆ ಅವನ ಕಲ್ಪನೆಗಳು ಅವನ ಶೈಲಿಯಲ್ಲಿ ಪ್ರಕಟವಾಗುತ್ತವೆ. ಆದ್ದರಿಂದಲೇ "ಶೈಲಿಯೆ ವ್ಯಕ್ತಿ" (Style is the Man) ಎನ್ನುವುದು. "ಶಿಲ್ಪಶ್ರೀ"ಯನ್ನು ತೆಗೆದುಕೊಳ್ಳುವುದಾದರೆ ತ.ರಾ.ಸು. ಅವರ ಪೂರ್ವಜ್ಞಾನ–ಇವೆಲ್ಲವೂ ಅವರಲ್ಲಿ ಪ್ರಕಟವಾಗಿರುವುದು ವಾಚಕರ ಗಮನಕ್ಕೆ ಬೀಳುತ್ತದೆ. ರಚನಾ ತಂತ್ರದಲ್ಲಿ ಸಹ ಅವರ ಭಾಷಾಪ್ರಯೋಗ ಹಾಗೂ ಅಭಿಪ್ರಾಯಗಳ ಅಭಿವ್ಯಕ್ತಿ ಗಮನಾರ್ಹವಾಗಿವೆ. ಅವರ ಲೇಖನ ಶೈಲಿ ಮಧ್ಯಯುಗದ ಶಬ್ದ ವೈಖರಿಯನ್ನು ಒದಗಿಸಿದೆ. ಅವರ ವರ್ಣನಾ ವಿಧಾನವು ವೆಂಕಟಾಚಾರ್ಯ ಹಾಗೂ ಗಳಗನಾಥರ ಕಾದಂಬರಿಗಳಲ್ಲಿನ ವರ್ಣನೆಗಳನ್ನು ನೆನಪಿಸುತ್ತವೆ. 3ನೇ ಕೃಷ್ಣನ ತರುವಾಯ ಖೊಟ್ಟಿಗನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಎಷ್ಟು ಕುಗ್ಗಿದ್ದಿತೆಂಬ ಬಗ್ಗೆ ಸುಬ್ಬರಾಯರ ನಿರೂಪಣೆ ಇದಕ್ಕೆ ನಿದರ್ಶನ (ಪು. 30-32). ತನ್ನ ಯೋಧ ಜೀವನಕ್ಕೆ ವಿಶ್ರಾಂತಿಯನ್ನಿತ್ತು ಕಂಟವನ್ನು ಹಿಡಿಯುವ ಸಂದರ್ಭದಲ್ಲಿ ಚಾವುಂಡರಾಯನು ಖಡ್ಗವನ್ನು ಧವಳ ಸರೋವರಕ್ಕೆ ಎಸೆಯುವ ಸನ್ನಿವೇಶವು ಇಂಗ್ಲೆಂಡಿನ ಐತಿಹ್ಯಕಾಲದ ದೊರೆ ಆರ್ಥರನ ವೀರ ಯೋಧರಲ್ಲೊಬ್ಬನಾದ ಸರ್ ಬಿಡೀವರ್ ದೈವದತ್ತವಾದ ಆರ್ಥರನ ಖಡ್ಗವನ್ನು ಸರೋವರಕ್ಕೆ ಎಸೆಯುವ ಸನ್ನಿವೇಶವನ್ನು ನಮಗೆ ನೆನಪಿಸುತ್ತದೆ. "ನಿತ್ಯ ಚಂಚಲೆಯಾದ ರಾಜಲಕ್ಷ್ಮಿಯ ಊಳಿಗದಾಳಾದ ಕರವಾಳವೇ ನಿನಗಿಂದು ಶರಣು. ಅಲ್ಪನಿಗೆ ಹಿರಿಯನೆಂಬ ಭ್ರಮೆ ಬರಿಸಿ. ಮಾನವನನ್ನು ಪಶುವಾಗಿಸಿ, ಹಾಲುಣ್ಣುವ ಹಸುಗೂಸಿಗೆ ನರರಕ್ತ ಪಾನಮಾಡಿಸುವ ಕರಾಳ ಕೂರಸಿಯೇ ನಿನಗೆ ಶರಣು. ಸದಾ ರಕ್ತ ಪಿಪಾಸಿಯಾದ ರಕ್ತಾಂಜರಿಯೇ ನಿನಗೆ ಶರಣು– ಎಂದು ಚಾವುಂಡರಾಯನು ಖಡ್ಗವನ್ನು ಎಸೆದು ಸರೋವರದ ಆಳದೊಳಕ್ಕೆ ಅದನ್ನು ಮುಳುಗಿಸುವ ದೃಶ್ಯದ ವರ್ಣನೆ ಅಮೋಘವಾಗಿದೆ.

ಕೃತಿಯಲ್ಲಿ ಕೃತಿಕಾರನ ವ್ಯಕ್ತಿತ್ವವು ಪ್ರಕಟವಾಗುವುದು ಸಾಮಾನ್ಯ. ಅಂತೆಯೇ "ಶಿಲ್ಪಶ್ರೀ"ಯಲ್ಲಿ ತ.ರಾ.ಸು. ಅವರ ವ್ಯಕ್ತಿತ್ವವು ಪ್ರಕಟವಾಗಿರುವುದನ್ನು ನಾವು

ಗಮನಿಸಬಹುದು. ಅವರದು ಸಾಹಿತ್ಯಕ್ಕೆ ಮೀಸಲಾದ ಜೀವನ. ಅದಕ್ಕೆ ಹಿರಿದ ಪರಿಸರ ಅವರ ಮನೆತನಕ್ಕೆ ಅನುಚಾನವಾಗಿ ಬಂದ ಪಾಂಡಿತ್ಯ ಮತ್ತು ಸಂಸ್ಕಾರ. ಹತ್ತನೆಯ ಶತಮಾನದ ಕನ್ನಡ ಕಾವ್ಯಕ್ಷೇತ್ರದಲ್ಲಿ ಪ್ರಸಿದ್ಧನಾದ ಆದಿಕವಿ ಪಂಪನ ಕಾವ್ಯಗಳನ್ನು ಅವರು ತಮ್ಮ ಕಥೆಗೆ ಅನುಗುಣವಾಗಿರುವಂತೆ ಬಳಸಿಕೊಂಡಿದ್ದಾರೆ. ಚಾವುಂಡರಾಯನು ತನ್ನ ಜಿನ ಧರ್ಮ ಪ್ರಚಾರ ಕಾರ್ಯದಲ್ಲಿ ಪಂಪನ ಕಾವ್ಯಗಳಿಂದ ಪ್ರಭಾವಿತನಾಗುವಂತೆ ಚಿತ್ರಿಸುವುದರಲ್ಲಿ ಕಾದಂಬರಿಕಾರರು ಪಂಪನ ಕೃತಿಗಳ ಬಗ್ಗೆ ತಮ್ಮ ಪಾಂಡಿತ್ಯವನ್ನು ಪ್ರಕಟಿಸಿದ್ದಾರೆ. ಶಾಸನಗಳ ಸಂಶೋಧನೆಯಲ್ಲಿ ಆಸಕ್ತರಾದ ಅವರು ಶ್ರವಣ ಬೆಳಗೊಳ ಹಾಗೂ ಕರ್ನಾಟಕದ ಇನ್ನಿತರ ಕಡೆಗಳ ಶಾಸನಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿರುವ ವಿಷಯವು ಕಾದಂಬರಿಯಲ್ಲಿ ಎದ್ದು ಕಾಣುತ್ತದೆ. ಅವರನ್ನು ಯೌವನದಲ್ಲಿ ನೋಡಿದವರಿಗೆ ಅವರ ವ್ಯಕ್ತಿ ಚಿತ್ರಣವು ಕಾದಂಬರಿಯಲ್ಲಿರುವುದು ಕಾಣದೆ ಹೋಗುವುದಿಲ್ಲ. ಬಿರುಜವ್ವನದಲ್ಲಿ ವಿದ್ಯಾರ್ಥಿಯಾಗಿರುವ ರನ್ನನ ರೂಪವು ಸುಬ್ಬರಾಯರ ಪ್ರಾಯದ ರೂಪವನ್ನೇ ಹೋಲುವಂತಿದೆ "ಆ ಗಡುಸಾದ ಬರಟು ಶಿಲೆಯಲ್ಲಿ ಸುಂದರವಾಗಿ ನಿರ್ಮಿಸಿದಂತಿದ್ದ ಗಂಡು ಮುಖ. ವಿಶಾಲವಾದ ಫಾಲ. ನೀಳವಾದ ತುದಿಯಲ್ಲಿ ನಸುಬಾಗಿದ ಮೊನೆಚಾದ ಮೂಗು, ಹೊತ್ತಿಸಿದ ದೀವಿಗೆಗಳಂತೆ ಉರಿಯುತ್ತಿದ್ದ ಕಣ್ಣುಗಳು, ನೋಡುವವರಿಗೆ ಸವಾಲು ಹಾಕುವಂತೆ ಕೊಂಚ ಮುಂದುಬ್ಬಿದ ಗಲ್ಲಗಳಲ್ಲಿ ಪ್ರಚಂಡ ಆತ್ಮ ವಿಶ್ವಾಸವೇ ಜೀವವಾಗಿ ಕಳಕಳಿಸುತ್ತಿರುವಂತೆ ಕಂಡು, "ಇದು ಮಹತ್ಕಾರ್ಯ ಸಾಧಿಸುವ ಲಕ್ಷಣವುಳ್ಳ ಮುಖ" ಎಂಬ ಅಜಿತಸೇನಾಚಾರ್ಯರ ಅಭಿಪ್ರಾಯವು ಯುವಕ ತ.ರಾ. ಸುಬ್ಬರಾಯರ ರೂಪಕ್ಕೆ ಅನ್ವಯವಾಗುವಂತಿದೆ.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ತ.ರಾ.ಸು. ತಮ್ಮದೇ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಅವರ ಸಾಮಾಜಿಕ ಕಾದಂಬರಿಗಳಷ್ಟೇ ಅವರ ಐತಿಹಾಸಿಕ ಕಾದಂಬರಿಗಳೂ ಸಹ ಜೀವನದ ಅನೇಕ ಸಮಸ್ಯೆಗಳನ್ನು ಪರಾಮರ್ಶಿಸಿ ಸತ್ಯಾನ್ವೇಷಣೆಯ ಮೂಲಕ ಬಾಳ ಪಥಕ್ಕೆ ದೀವಟಿಗೆಯನ್ನು ಹಿಡಿದು ಮಾರ್ಗ ದರ್ಶನ ನೀಡುತ್ತವೆ. ವಾಸ್ತವಿಕವಾಗಿ "ಶಿಲ್ಪಶ್ರೀ" ಕನ್ನಡ ಐತಿಹಾಸಿಕ ಕಾದಂಬರಿಗಳ ಶ್ರೇಣಿಗೆ ಅವರು ನೀಡಿರುವ ಅಮೂಲ್ಯ ಕೊಡುಗೆ.

ಶಿಲ್ಪಶ್ರೀ

— ಸೀತಾರಾಮ ಜಾಗೀರದಾರ್

"ಶಿಲ್ಪಶ್ರೀ" ಶ್ರವಣಬೆಳಗೊಳದಲ್ಲಿ ಸುಮಾರು ಕ್ರಿ. ಶ. 982ರ ಎಡಬಲದಲ್ಲಿ ನಿರ್ಮಾಣಗೊಂಡ ಭವ್ಯ ಕಲಾಕೃತಿ ಗೊಮ್ಮಟೇಶ್ವರನ ಉದಯದ ಕುರಿತು ರಚಿಸಲಾದ ಐತಿಹಾಸಿಕ ಕಾದಂಬರಿ. ಈ ಕಲಾ ಕೃತಿಗೆ ಕಾರಣಕರ್ತ – ಚಾವುಂಡರಾಯ. ಆ ಮಹಾನ್ ಶಿಲ್ಪದ ಸೃಷ್ಟಿಗೆ ಆತನೇ ಕಾರಣವೆಂಬುದನ್ನು ಗೊಮ್ಮಟೇಶ್ವರ ಸ್ವಾಮಿಯ ಪಾದಗಳ ಬಳಿಯಲ್ಲಿರುವ ಮೂರು ಶಾಸನಗಳು ಸಾರುತ್ತಿವೆ.

1. ಶ್ರೀ ಚಾವುಣ್ಡರಾಜಂ ಮಾಡಿಸಿದಂ
2. ಶ್ರೀ ಚಾವುಣ್ಡರಾಜನ್ ಶೆಯವಿತ್ತಾನ್
3. ಶ್ರೀ ಚಾವುಣ್ಡರಾಜೇಂ ಕರವಿಯಲೇಂ

—ಇವು ಇಂದಿಗೂ ಸಾಕ್ಷಿಯಾಗಿವೆ.[1] ತ.ರಾ.ಸು. ಅವರ ಈ ಕೃತಿ, ಈಗಾಗಲೆ ಸಾಕಷ್ಟು ಜನಪ್ರಿಯ ಕೃತಿಯಾಗಿದೆಯೆನ್ನುವುದೂ ಮೂರನೆಯ ಮುದ್ರಣದಿಂದ ನಮಗೆ ಸುವಿದಿತ. ಕರ್ನಾಟಕದಲ್ಲಿ ಒಂದು ಕೃತಿ ಮೂರನೆಯ ಮುದ್ರಣ ಕಾಣಬೇಕಾದರೆ ಅದು ಸಾಮಾನ್ಯ ಸಂಗತಿಯಲ್ಲ. 1960, 1963 ಮತ್ತು 1977 ಹೀಗೆ ಮುದ್ರಣ ಪುನರ್ಮುದ್ರಣ ಕೇವಲ ಹದಿನೇಳು ವರ್ಷದಲ್ಲಿ ನಡೆದಿದೆ. ಲೇಖಕರು ಸೂಚಿಸಿರುವ ಹಾಗೆ ಚಾವುಂಡರಾಯ "ಕರ್ನಾಟಕದ ಇತಿಹಾಸದಲ್ಲಿ ತನ್ನ ಕಲಿತನದಿಂದ ಕಲಾಪ್ರೇಮದಿಂದ, ಸಾಹಿತ್ಯ ರಚನೆಯಿಂದ[2] ಶಾಶ್ವತ ಸ್ಥಾನವನ್ನು ಗಳಿಸಿದ ಹಿರಿಯ ವ್ಯಕ್ತಿ, ಕರ್ನಾಟಕದ ಇತಿಹಾಸದ, ಸಾಹಿತ್ಯದ, ಸುವರ್ಣಯುಗದಲ್ಲಿ ಬಾಳಿದ ದೊಡ್ಡ ಜೀವ, ರಾಷ್ಟ್ರಕೂಟ – ಗಂಗ – ಅರಸು ಮನೆತನಗಳಿಗೆ ತನ್ನ ಖಡ್ಗದಿಂದ ಸೇವೆಯನ್ನು ಸಲ್ಲಿಸಿ ಹತ್ತಾರು ಬಿರುದುಗಳನ್ನು ಗಳಿಸಿದಾತ, ರನ್ನ ಮಹಾಕವಿಗಳಿಗೆ ಆಶ್ರಯವನ್ನಿತ್ತು ಅವನಿಂದ ಕೀರ್ತಿತನಾದ ಸಾರ್ಥಕ ಜೀವಿ. ಈ ಮಹಾನ್‌ವ್ಯಕ್ತಿ ಮಾಡಿಸಿದ ಪ್ರಥಿತ ಯಶೋಮೂರ್ತಿ ಗೊಮ್ಮಟೇಶ್ವರನ ವಿಗ್ರಹದ ಕೀರ್ತಿ, ಅಂದಿನಿಂದ ಇಂದಿಗೂ ಅಕ್ಷಯಸಂಪದವಾಗಿ – ಪ್ರಪಂಚದ ಆ ಅಂಚಿನಿಂದ ಈ ಅಂಚಿನ

---

1. Ep. Cor. Vol. II No. 272, 273 and 277 (1973 - Ed.)
2. "ತ್ರಿಷಷ್ಟಿಲಕ್ಷಣ ಮಹಾ ಪುರಾಣಂ" ಎಂಬ ಪದ್ಯಗ್ರಂಥವನ್ನು ಚಾವುಂಡರಾಯನು ಬರೆದಿದ್ದಾನೆ. 'ಚಾವುಂಡರಾಯ ಪುರಾಣಂ' ಎಂದೇ ಇದು ಪ್ರಸಿದ್ಧ.

   "ಚಾರಿತ್ರಸಾರ" ಎಂಬ ಸಂಸ್ಕೃತ ಗ್ರಂಥವೊಂದು ಚಾವುಂಡರಾಯನಿಂದ ಬರೆಯಲ್ಪಟ್ಟಿದೆ. ಇದರ ಮುಗಿತಾಯದ ಗದ್ಯ ತ್ರಿ. ಷ. ಲ. ಮ. ಗ್ರಂಥದ ಕೊನೆಯ ಗದ್ಯದ (ಅ.ಟಿ. 5) ರೀತಿಯಲ್ಲೇ ಇದೆ.

ನಡೆಗೆ ವಿಸ್ತಾರವಾಗಿ ಬಿಚ್ಚಿಕೊಂಡ ಕಲ್ಪಲತೆಯಾಗಿದೆ. ಈ ಸಂಗತಿಯನ್ನು ನಿರೂಪಿಸುವ ಕೃತಿ 'ಶಿಲ್ಪಶ್ರೀ' ಕಾದಂಬರಿಯನ್ನು ಅದರಲ್ಲಿಯ ಸಾಹಿತ್ಯದ ಹಾಗೂ ಚಾರಿತ್ರಿಕ ಅಂಶಗಳನ್ನು ಅನುಸರಿಸಿ ಎರಡು ಭಾಗಗಳನ್ನಾಗಿ ವಿಭಜಿಸಿ ವಿಶ್ಲೇಷಿಸ ಬಹುದು.

I

ಕಾದಂಬರಿ ಆರಂಭವಾಗುವುದು ಆಶ್ಚರ್ಯದ ಮೂಲಕ - ಅದ್ಭುತರಸದ ಪ್ರವಾಹದಿಂದ. ಈ ಪ್ರವಾಹ, ಪಂಪ ಮಹಾಕವಿಯ 'ಆದಿಪುರಾಣಂ' ಎಂಬ ಕನ್ನಡ ಸಾಹಿತ್ಯದ ಮೇರುಕೃತಿ ಶೃಂಗದಿಂದ ಹುಟ್ಟಿಕೊಂಡು ಗದ್ಯದ ಪಾತ್ರೆಯಲ್ಲಿ ಹರಿದಿದೆ. ಉತ್ಕಟತೆಯು ಹೆಚ್ಚಾದಾಗ (ಓದುವ ಹೃದಯದಲ್ಲಿ ರಸವಂತಿ ಅಧಿಕವಾದ ಸಂದರ್ಭದಲ್ಲಿ) ಕವಿತೆಗಳು ಯಥಾವತ್ತಾಗಿ ಮೂಡಿವೆ.3 ಬಾಹುಬಲಿಯ ಸಂಪೂರ್ಣ ಚರಿತ್ರೆಯನ್ನು ನಿರೂಪಿಸಿ, ಪಂಪನ ಕಾವ್ಯದ ಆ ಭಾಗವು ಚಾವುಂಡರಾಯನ ಹೃದಯದಲ್ಲಿ ಬೇರೂರಿ ನಿಂತುದನ್ನು ವಿವರಿಸಿ. ಅವನೆ ಇಂದಿಗೂ ಆಕಾಶವನ್ನು ತಬ್ಬುತ್ತಿದೆಯೋ ಏನೋ ಎನ್ನುವಂತೆ ಬಹುದೂರದಿಂದಲೇ ಪ್ರಭಾವಿಸಿಕೊಳ್ಳುವ ಬಳಿಯಲ್ಲಿ ಕಂಗೊಳಿಸುತ್ತಿರುವ ಬೃಹತ್ಕಲಾಕೃತಿ ಶಿಲಾಪ್ರತಿಮೆಗೆ ಜೀವದಾಯಿ ಒಂದು ಸಂಗತಿಯನ್ನು ಸೊಗಸಾಗಿ ರಚಿಸಿರುವುದು ಒಂದು ವಿನೂತನ ಸೃಷ್ಟಿಯಾಗಿದೆ, ಗೊಮ್ಮಟೇಶ್ವರನ ನಿರ್ಮಾಣದ ಕತೆಯು, ಉಪಲಬ್ಧ ಸಾಮಗ್ರಿ - ತುಂಬ ತೆಳುವಾದ ಹಾಗೂ ಅತ್ಯಲ್ಪವಾದುದರ4 ಆಧಾರದ ಮೇಲೆ 24 ಪ್ರಕರಣಗಳಲ್ಲಿ ಮತ್ತು 239 ಪುಟಗಳಲ್ಲಿ ಹರಸಿಕೊಂಡು ನಿಂತಿದೆ (1977 ರ ಮುದ್ರಣ.)

"ಶಿಲ್ಪಶ್ರೀ" ಹೆಸರೇ ಸೂಚಿಸುವಂತೆ ಗೊಮ್ಮಟೇಶ್ವರನ ವಿಗ್ರಹದ ಸೃಷ್ಟಿಯ ಸುತ್ತ ಈ ಕಾದಂಬರಿಯ ಕಥಾ ಪ್ರಪಂಚ ಹಬ್ಬಿಕೊಂಡಿರುವುದು. ಗೊಮ್ಮಟೇಶ್ವರನನ್ನು ಮೂಡಿಸಿದಾತ "ಚಾವುಂಡರಾಯ" ಎಂಬುದು ಲೋಕಪ್ರಸಿದ್ಧ ಸಂಗತಿಯಾಗಿರುವುದರಿಂದ ಅತನೇ ಕಾದಂಬರಿನಾಯಕ. ಮಿಕ್ಕವರು ಸಹಾಯಕ ಪಾತ್ರಗಳು. ಚಾವುಂಡರಾಯ ಅತನ ತಂದೆ ಮಹಾಬಲಯ್ಯ, ಪಂಪ, ರನ್ನ, ನೇಮಿಚಂದ್ರ - ಸಿದ್ಧಾಂತ ಚಕ್ರವರ್ತಿಗಳು, ಅಜಿತ ಸೇನಾಚಾರ್ಯರು, ಲಲಿತ ಕೀರ್ತಿ ಪಂಡಿತರು.

---

3. ಪದ್ಯಗಳನ್ನು ಉದ್ಧರಿಸುವಲ್ಲಿ ಅನೇಕ ಅಚ್ಚಿನ ದೋಷಗಳು ಉಳಿದಿವೆ. ಪು. 3, 5. 17 (1970) "ವಿಕ್ರಮಾರ್ಜುನ ವಿಜಯಂ" ಗ್ರಂಥದ ಕೊನೆಯ ಆಶ್ವಾಸದ ಪದ್ಯವನ್ನು (14-50) ಆರಂಭದ ಪದ್ಯವೆಂದು ಬರೆಯಲಾಗಿದೆ. ಈ ತಿರುವುಮುರುವು ಪತ್ತೆಗೆ ನೋಡಿ. ಪು.

4. ಪೂರ್ವೋಕ್ತ ಶಾಸನಗಳ ಜೊತೆಗೆ ನೇಮಿಚಂದ್ರಾಚಾರ್ಯರ 'ಗೊಮ್ಮಟಸಾರ' ಕೃತಿಯಲ್ಲಿನ ಪದ್ಯ "ಗೊಮ್ಮಟ ಸಂಗ್ರಹಸುತ್ತಂ। ಗೊಮ್ಮಟಸಿಹರುವರಿ ಗೊಮ್ಮಟ ಜಿಣೋಯ। ಗೊಮ್ಮಟರಾಯ ವಿಣಿಮ್ಮಿಯ। ದಕ್ಷಿಣ ಕುಕ್ಕುಟ ಜಿಣೋ ಜಯದು॥"
— ಇವು ಸಮಕಾಲೀನ ದಾಖಲೆಗಳು,

ಮಾರಸಿಂಹ, ರಾಜಮಲ್ಲ, ನಾಲ್ಕನೆಯ ಇಂದ್ರ, ಚಾವುಂಡರಾಯನ ತಾಯಿ ಕಾಳಲ ದೇವಿ, ಪದ್ಮಬ್ಬೆ ಹಾಗೂ ರೂವಾರಿ ಭರತೋಜ – ಇವರು ಕಾದಂಬರಿಯಲ್ಲಿ ವಿಶೇಷ ಸ್ಥಾನವನ್ನು ಪಡೆದ ಪಾತ್ರಗಳು. ಇನ್ನೂ ಕೆಲ "ಎಕ್‌ಸ್ಟ್ರಾ" ಪಾತ್ರಗಳೂ ಇವೆ.

ಚಾವುಂಡರಾಯನ ಪಾತ್ರ ಗ್ರಂಥದ ಆರಂಭದಿಂದ ಹಿಡಿದು 'ಬಿರಿದು, ಗಳಿತ ವಾಗಿ. ದಳ ಬಿದ್ದು ಹೋದ ವೃದ್ಧ ಪುಷ್ಪ'ದ ಅವಸ್ಥೆಯವರೆಗೂ ಮೂಡಿ ನಿಂತಿದೆ. ಇದರಲ್ಲಿ ಪೂರ್ವ ಭಾಗವೆಲ್ಲ ಪ್ರಜ್ಞಾಪ್ರವಾಹ ತಂತ್ರದ ಮೂಲಕ ಮೂಡಿದೆ. ಆತ ಗಂಗ ದೊರೆಗಳ ಅತ್ಯಂತ ನಂಬಿಗಸ್ತ ವ್ಯಕ್ತಿ. ಮಾರಸಿಂಹನು ಹೇಳುವ "ಇಂದು ದೇವ, ಇಂದಿನಿಂದ ಇವರೇ ನಿನ್ನ ಕೋಟೆ, ಕತ್ತಿ, ಸಿಂಹಾಸನ, ಸಕಲ ವೈಭವ" ಎಂಬಲ್ಲಿ ಇದು ಸುವ್ಯಕ್ತ. ಗುರುಹಿರಿಯರಲ್ಲಿ ಆದರವುಳ್ಳ ವ್ಯಕ್ತಿ. ಗುರುಭಕ್ತಿಯಲ್ಲಿ ಅಪಾರ ಶ್ರದ್ಧೆಯುಳ್ಳವರು. ಇಂದ್ರ ಚಕ್ರವರ್ತಿಯ ಮರಣದಲ್ಲಿ ತಾನೂ ಏಗ್ಗ ಸಂನ್ಯಾಸ ಮಾಡಿ ಸಲ್ಲೇಖನ ವ್ರತದಿಂದ ಮರಣ ಅಪ್ಪಬೇಕೆಂದು ಬಯಸಿದರೂ ಆಚಾರ್ಯರು "ಹಿಂದೊಮ್ಮೆ ನೀವೆ ನಮಗೆ ಪಂಪದೇವರು, ನಿಮ್ಮನ್ನು ನಿಮ್ಮ ಬಾಳು ಭವ್ಯವಾಗಲಿ ಭವ್ಯ ಕೃತಿ ಸೃಷ್ಟಿಯಿಂದ ನಿಮ್ಮ ಬಾಳು ಧನ್ಯವಾಗಲಿ ಎಂಬುದಾಗಿ ಹರಸಿದ್ದರು ಎಂದು ಹೇಳಲಿಲ್ಲವೇ ? ಆ ಕವಿ ಕೃಪೆ ನಿಮ್ಮನ್ನು ಕಾಪಾಡುತ್ತಿರುವಾಗ ಬಾಳು ವಿಫಲವಾಯಿತೆಂದು ಉಮ್ಮಳಿಸುವುದೇಕೆ? ಬಾಳಿನಲ್ಲಿ ಏನೂ ಉಳಿಯಲಿಲ್ಲ ವೆಂದು ಚಿಂತಿಸುವುದೇಕೆ? ರನ್ನಮಯ್ಯನವರು, ನೀವೇನೋ ಪುರಾಣ ರಚನೆ ಮಾಡು ತ್ತಿದ್ದೀರ ಎಂದು ಹೇಳಿದರು. ಆ ಕಾರ್ಯ ಮುಗಿಯ ಬೇಡವೇ ? ಅದಕ್ಕಿಂತ ಮಿಗಿಲಾಗಿ ಪದ್ಮಾವತೀ ದೇವಿಯರು ನಿಮಗೆ ಸ್ವಪ್ನದಲ್ಲಿ ನೀಡಿದ ಆದೇಶ ಬಾಹುಬಲಿ ದೇವನ ಶಿಲ್ಪಕೃತಿ ನಿರ್ಮಾಣದಿಂದ ಪೂರ್ಣವಾಗಬೇಡವೇ ? ಅಂಥ ಮಹತ್ಕಾರ್ಯ ಗಳನ್ನು ಮುಂದಿಟ್ಟುಕೊಂಡು ನನಗಿನ್ನೇನು ಉಳಿದಿದೆ? ಎಂದು ಮತಿವಿಕಳನಂತೆ ಕೇಳುತ್ತೀರಲ್ಲಾ ಗೊಮ್ಮಟರಾಯಾ" ಎಂದು ಎಚ್ಚರಿಸಿದಾಗ "ನಿಜ, ನಿಜ, ಗುರು ದೇವಾ. ನನಗೆಂಥ ಕಾವಳ ಕವಿದಿತ್ತು" ಎನ್ನುತ್ತಾನೆ. ಆ ಕಾರ್ಯಗಳನ್ನು ಮಾಡಲು ಸಿದ್ಧನಾಗುತ್ತಾನೆ.

ತ.ರಾ.ಸು. ಅವರು ಇಲ್ಲಿ ಮಾಡಿಕೊಂಡಿರುವ ಒಂದು ದೊಡ್ಡ ಬದಲಾವಣೆ ತುಂಬ ಸೊಗಸಾಗಿಯೇ ಬಂದಿದೆ. ಅದೆಂದರೆ ಚಾವುಂಡರಾಯನು ವಸ್ತುತಃ ಪುರಾಣ ರಚಿಸಿದ್ದು ಅಜಿತ ಸೇನ ಭಟ್ಟಾರಕರ ಶಿಷ್ಯನಾಗಿಯೆಂಬುದನ್ನು[5] ನೇಮಿಚಂದ್ರರ ಆಶೀರ್ವಾದ ಮೂಲಕ ಎಂಬುದು. ಕಾದಂಬರಿಯಲ್ಲಿ ಈ ಕೃತಿ ನಿರ್ಮಾಣಕ್ಕೆ ಅಜಿತ

---

5. ಚಾವುಂಡರಾಯನ ಪುರಾಣದಲ್ಲಿ ಬರುವ ಮುಗಿತಾಯದ ಗದ್ಯ "ಇದು ಸಕಲ ಶಾಸ್ತ್ರ ಸಂಪನ್ನ ಶ್ರೀ ಮದಜಿತಸೇನ ಭಟ್ಟಾರಕ ಚರಣ ಕಮಲ ಚಂಚರೀಕಂ ಧರ್ಮವಿಜಯ ಶ್ರೀ ಮಚ್ಚಾವುಂಡರಾಜ ವಿರಚಿತ ತ್ರಿಷಷ್ಟಿ ಲಕ್ಷಣ ಮಹಾಪುರಾಣ" ಎಂಬ ವಾಕ್ಯ ಸಂದೋಹವನ್ನು ನೋಡಿ.

ನೇಸರ ಕಾಣಿಕೆ ಏನೆಂಬುದು ಕಿಂಚಿತ್ತೂ ಇಲ್ಲ. ಇದು ಕಾದಂಬರಿಗೆ ಉಚಿತವಾದ ಮಾರ್ಪಾಟು ಅಷ್ಟೇ; ಚಾರಿತ್ರಿಕ ಸತ್ಯವಲ್ಲ.

ಗೊಮ್ಮಟಮೂರ್ತಿಯ ನಿರ್ಮಾಣ ಕಾದಂಬರಿಯ ಜೀವಾಳ. ಅದನ್ನು ಕಾಲ್ಪನಿಕ ವ್ಯಕ್ತಿ ಭರತೇಶನ ಮೂಲಕ ಮಾಡಿಸಿರುವುದು ನಿಜವಾದರೂ ಪೌದನಪುರದಲ್ಲಿ ಬಾಹುಬಲಿಯ ವಿಗ್ರಹವನ್ನು ಮೊದಲು ಮಾಡಿಸಿದ ವ್ಯಕ್ತಿ ಭರತ ಚಕ್ರವರ್ತಿ ಆ ಭರತ ಚಕ್ರವರ್ತಿಯ ಅಂಶವೇ ಚಾವುಂಡರಾಯನ ಮುಂದೆ ಮತ್ತೆ ಭರತೇಶನ ಮೂಲಕ ಮೂರ್ತಿ ನಿಂತು ಭವ್ಯ ಕಲಾಕೃತಿಯನ್ನು ನಿರ್ಮಿಸಿ ಪೂರ್ಣವಾಗಿದೆ. 'ಓದುಗರಿಗೆ ಆ ಒಂದು ಸಂಕೇತ. ಕೃತಿಯಲ್ಲಿ ವ್ಯಕ್ತವಾಗಿದ್ದರೂ ಧ್ವನಿಸಿ ಪಾಯವಾಗುತ್ತದೆ. ಅಜ್ಞಾತ ರಸದ ಕಲ್ಪನೆಯಲ್ಲಿ ಆರಂಭವಾದ ಕಾದಂಬರಿ ಚಾವುಂಡರಾಯನ ಹಸ್ತದಿಂದಲೇ ಆ ಮಹಾನ್ ಮೂರ್ತಿಯ ಶಿಲಾ ಪ್ರತಿಮೆಗೆ ಮಹಾ ಮಸ್ತಕಾಭಿಷೇಕವನ್ನು ಮಾಡಿಸುವಲ್ಲಿ ಮುಕ್ತಾಯವಾಗುತ್ತದೆ. ಆತನ ವ್ಯಕ್ತಿತ್ವ, ಆತ್ಮ ಮೆಚ್ಚುವಂತೆ ತೃಪ್ತಿಕರ ಕೃತಿಗೈದುದು, ಸರ್ವರು ಮೆಚ್ಚುವಂತಹುದು.

ಚಾವುಂಡರಾಯನ ತರುವಾಯ ಕಾದಂಬರಿಯಲ್ಲಿ ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡ ವ್ಯಕ್ತಿ – ರನ್ನಮಯ್ಯ. ಜಂಬುಖಂಡಿ ಎಪ್ಪತ್ತರ ಮುಧೋಳದಲ್ಲಿ ಹುಟ್ಟಿ ಗಂಗ ಮಂಡಲದಲ್ಲಿ ಅರಳಿ ನಿಂತ ಪ್ರಚಂಡ ಆತ್ಮವಿಶ್ವಾಸವುಳ್ಳ 'ಸಿಡಿಲಚಕ್ಕೆ'. 'ಅಸ್ಪೃತಪರಿಯುದ ಹಾಗಿರೋ, ಅಲ್ಪದಲ್ಲಿ ತೃಪ್ತಿ ಪಡದ ವ್ಯಕ್ತಿ. ಪಂಪಾರ ಹೊತ್ತು ಎಲ್ಲಾದರೂ ಇದ್ದು ಹೊಟ್ಟೆ ಹೊರೆದುಕೊಂಡು ಬಿದ್ದು ಹೋಗುವವನಲ್ಲವೆಂಬ ಭಾವನೆ ಅವನ ಹೃದಯದಲ್ಲಿ ನೆಲೆಯೂರಿ ನಿಂತಿತ್ತು. ಹುಟ್ಟು, ಸ್ಥಿತಿ, ಪರಿಸರಗಳು ಹೇರಿದ ಎಲ್ಲ ಶೃಂಖಲೆಗಳನ್ನೂ ಕಡಿದೊಡೆದು, ಸಾಹಿತ್ಯ ಶೃಂಗವನ್ನೇರಿ ಮೆರೆಯಬೇಕೆಂಬ ವೀರ ಶಾರದೋಪಾಸಕ. ಚಾವುಂಡರಾಯ ಸಮರಧುರಂಧರನಾಗಿಯೂ ಸಾಹಿತ್ಯ ವನವಿಹಾರಿ, ರನ್ನ ಸಾಹಿತ್ಯ ವನವಿಹಾರಿಯಾಗಿಯೂ ಸಮರಧುರಂಧರ. ಅವನ ಕಾವ್ಯಗಳಲ್ಲಿ ಪಾತ್ರ ಪಾತ್ರಗಳಲ್ಲಿ ರಣದ ಕೋಲಾಹಲ, ಅವುಗಳ ಅಂತರಂಗದ ಅಂತರಾಳದಲ್ಲಿ ರನ್ನನ ಪ್ರತಿಭೆ ಕುಣಿಯುತ್ತದೆ.

ಮಿಕ್ಕ ಪಾತ್ರಗಳು ಕಾದಂಬರಿಗೆ ತಕ್ಕಹಾಗೆ ಬಂದಿವೆ. ಕಾದಂಬರಿಯ ಗುರಿ ಚಾವುಂಡರಾಯನ ವ್ಯಕ್ತಿತ್ವವನ್ನು ಪುನಾ ರಚಿಸಿಕೊಡುವುದು. ಶೈಲಿಯ ದೃಷ್ಟಿಯಿಂದ ಇದು, ತ.ರಾ.ಸು. ಅವರ ಇತರ ಐತಿಹಾಸಿಕ ಕಾದಂಬರಿಗಳಿಂದ ಅಂತಹ ಅತ್ಯಂತ ಭಿನ್ನ ಬಗೆಯದ್ದಲ್ಲ; ನೃಪತುಂಗ, ಸಿಡಿಲಮೊಗ್ಗು ಮತ್ತು ಚಿತ್ರ ದುರ್ಗದ ಇತಿಹಾಸಕ್ಕೆ ಸಂಬಂಧಪಟ್ಟ ಕಾದಂಬರಿ ಮಾಲೆಯಂತೆಯೆ ಉತ್ಕಟತೆಯಿಂದ ತುಂಬಿ ತುಳುಕಿವೆ. ಪ್ರಾಯಶಃ ಈ ಗುಣವನ್ನು ತ.ರಾ.ಸು. ಅವರ ಎಲ್ಲ ಕಾದಂಬರಿಗಳಲ್ಲೂ ನಾವು ಕಾಣಬಹುದು. ಪ್ರತಿಭೆ, ಶಾಸ್ತ್ರ, ಕಾವ್ಯಾಭ್ಯಾಸ ಮತ್ತು ಜೀವನಾನುಭವಗಳಿಂದ ಕಾವ್ಯರಥ; ಅನುಭವವೇ ಆ ರಥದ ತೇಜಿ – ಎಂಬ ಲಲಿತ ಕೀರ್ತಿ ಪಂಡಿತರ

ವಾಕ್ಯಗಳ ಮೂಲಕ ತಮ್ಮ ಕಾವ್ಯ ಮೀಮಾಂಸೆಯ ನಿಲವನ್ನು ಸೂಚಿಸಿದ್ದಾರೆ; ತ.ರಾ.ಸು.–ಇಲ್ಲಿ.

ಚಾರಿತ್ರಕ ವಿಮರ್ಶೆ, ಒಂದು ಕೃತಿಯಲ್ಲಿ ಅದು ನಿರ್ಮಾಣವಾದ ಕಾಲವನ್ನು ಹಾಗೂ ಅದು ನಿರೂಪಿಸಿದ ಘಟನೆಗಳನ್ನು ಅವಲಂಬಿಸುತ್ತದೆ. 'ಶಿಲ್ಪಶ್ರೀ' ಕ್ರಿ.ಶ. 1960ರಲ್ಲಿ ಬರೆಯಲ್ಪಟ್ಟ ಕೃತಿ ಆದುದರಿಂದ. ಆ ಸಮಯಕ್ಕೆ ಪ್ರಚಲಿತವಿದ್ದ ಧೋರಣೆಗಳನ್ನು ಅವಲಂಬಿಸಿ ರಚಿತಗೊಂಡುದು ಸಹಜ ಹಾಗೂ ಸ್ವಾಭಾವಿಕ. ಯಾವುದೇ ಒಂದು ಸೌಧ – ಬುನಾದಿ ಭದ್ರವಿದ್ದರೆ ಬಹಳ ಕಾಲ ನಿಲ್ಲಬಲ್ಲದು; ಇಲ್ಲದಿದ್ದರೆ ಬಾಗಿ ಬೀಳುವುದು ಸಹಜ. ಹಾಗಾಗಿದೆ 'ಶಿಲ್ಪಶ್ರೀ' ಕಾದಂಬರಿಯ ಕಟ್ಟಡ. ಟಿ. ನರಸೀಪುರ ತಾಲೂಕಿನ ಆಲುಗೋಡ ಗ್ರಾಮದ ಶಾಸನದಲ್ಲಿ ಬರುವ (Ep. Cax. Vol. V Tn 312) ಮಾಬಲಯ್ಯನ ಮಗ "ಚಾವುಂಡ" ಮತ್ತು "ಚಾವುಂಡರಾಯ" ಇವರಿಬ್ಬರೂ ಏಕ ವ್ಯಕ್ತಿಗಳೆಂದು ಹೇಳಲು ಎಲ್ಲೂ ಆಧಾರವಿಲ್ಲ. ಮೊದಲನೆಯ ವ್ಯಕ್ತಿ ಬ್ರಾಹ್ಮಣ; ಎರಡನೆಯ ವ್ಯಕ್ತಿ ಬ್ರಹ್ಮಕ್ಷತ್ರಿಯ. ಬ್ರಹ್ಮ ಕ್ಷತ್ರಿಯನಾಗಿದ್ದ ನಮ್ಮ ನಾಯಕ ಚಾವುಂಡರಾಯ ಬ್ರಾಹ್ಮಣನಾದುದಕ್ಕೆ ಸಾಕ್ಷಿ ಯಿಲ್ಲದಾಗ ಏಕೀಕರಿಸಿದುದು ಸರಿಯಲ್ಲ. ರಾಷ್ಟ್ರಕೂಟ ಚಕ್ರವರ್ತಿ ನಾಲ್ಕನೆಯ ಇಂದ್ರನು ಸಮಾಧಿ ವಿಧಿಯಿಂದ ಮರಣವನ್ನಪ್ಪಿದುದು ಹೇಮಾವತಿಯಲ್ಲಿ, ಶ್ರವಣ ಬೆಳಗೊಳದಲ್ಲಲ್ಲ. ಪಂಪಕವಿಯು ದಂಡನಾಯಕ ಆಗಿದ್ದಿಲ್ಲವೆನ್ನುವುದು ಈಗ ಆತನ ತಮ್ಮ ಜಿನವಲ್ಲಭನ ಶಾಸನದಿಂದ ಸುಸ್ಪಷ್ಟ.[6] ಪಂಪನು ಸಂನ್ಯಾಸಿಯಾಗಿದ್ದ ನೆನ್ನುವುದು ಜೈನಪ್ರಕ್ರಿಯೆ ತಿಳಿದವರಿಗೆ ಆದಿಪುರಾಣದ ಪದ್ಯ :

ಮುನಿಜನದೋದಿಸಿದೋಜೆಯಾ
ಳನುವದಿಪ್ಪುವಿದೊಂದೆ ಕೊಂಡಕುಂದಾನ್ವಯನಂ
ದನವನಶುಕಮೊಂದೆನಗಿನಿ
ಸನುಗ್ರಹಂಗೆಯ್ಗೆ ಕರಣದಿಂ ಮುನಿನಿವಹಂ ॥ [7]—

ಎಂಬುದರಿಂದ ಸ್ಫಟಿಕ ಶಲಾಕೆಯಷ್ಟು ಸ್ಪಷ್ಟ. ಗಣ, ಗಚ್ಛ, ಅನ್ವಯ – ಇವು ಯಾವೊಬ್ಬ ಸಾಮಾನ್ಯ ಕೌಟುಂಬಿಕ ವ್ಯಕ್ತಿಗೂ ಜೊತೆಯಾಗಿ ಬರಲು ಸಾಧ್ಯವಿಲ್ಲ. ಅವು ಜೈನ ಗುರು ಪರಂಪರೆಗೆ ಸಂಬಂಧಪಟ್ಟ ಶಬ್ದಾವಲಿ. ಈ ಸಂಬಂಧದಲ್ಲಿ ದಿವಂಗತ ಡಾ. ಎ.ಎನ್. ಉಪಾಧ್ಯೆ ಅವರಿಂದಲೇ ಸ್ಪಷ್ಟೀಕರಣ ನಾನು ಪಡೆದಿದ್ದೇನೆ. ಪಂಪನ 'ವಿಕ್ರಮಾರ್ಜುನ ವಿಜಯಂ' ಗ್ರಂಥದಿಂದ ಐದು ಪದ್ಯಗಳನ್ನು ಎತ್ತಿ–

---

6. (ಅ) 1967ರ ಮಾರ್ಚ್ ತಿಂಗಳದ ತೆಲುಗುಪತ್ರಿಕೆ ಭಾರತಿ, ಪು. 10–23.
(ಆ) ಪ್ರಬುದ್ಧ ಕರ್ಣಾಟಕ, ಸಂ. 50, ಸಂ. 3, ಪು. 23-41.
(ಇ) ಪ್ರಬುದ್ಧ ಕರ್ಣಾಟಕ, ಸಂ. 53, ಸಂ. 4, ಪು. 73–83.

7. 'ಆದಿಪುರಾಣ' ಆಶ್ವಾಸ – 1, ಪದ್ಯ – 14.

ಕೊಟ್ಟಿರುವ ಕಟ್ಟಿಗೇನಹಳ್ಳಿಗದ ಶಾಸನದಿಂದ[8] ಇಮ್ಮಡಿ ಅರಿಕೇಸರಿಯ ಕಾಲಕ್ಕೆ ಬೋಧನದಲ್ಲಿ ಆ ಚಾಳುಕ್ಯ ರಾಜರಿದ್ದರೆಂಬುದು ಮತ್ತು ಲೆಂಬುಳಪಾಟಕದಲ್ಲಿ ವೆಂಬುದು ಖಚಿತವಾಗಿ ತಿಳಿಯಬರದಿರುವುದರಿಂದ ಕಾದಂಬರಿಯಲ್ಲಿನ ಈ ವಿವರಣೆಗಳು ಸಮ್ಮತವಾಗುತ್ತವೆ.

ಇಂದ್ರ ಚಕ್ರವರ್ತಿಯ ಮರಣವನ್ನು ನಿರ್ದೇಶಿಸಿರುವ ಹೇಮಾವತಿ ಶಾಸನ ಇಂತಿದೆ :9

1 ಉಪ್ಪುವಾಳಮೊಳ್ಪೆಸರೆಂಬುದೆ ಬಿ
2 ದ್ದಂ ಮುನ್ನಲ್ಲಿ ಕಡುಪಿನೊಳ್ ಬಹು
3 ವಿಧದಿಂದುದ್ದವಟಿಮೆಟಿ³ದುಮಃ
4 ರಿರಂ ಬಿಳ್ದಮನಲ್ ಬಲಳ್ದ ಪೊ
5 ಜ ಗನೆಟಿ³ವ ಬೆಡಂಗಂ॥
6 ಎಜಕಮೆಲ್ಲದೆ ಪೊಲ್ಲದಾಗೆಬಿ
7 ಗಿ ದೊರೆಕಾಣ್ಕೆಕೊಳ್ವತೆಜನಲ್ಲ
8 ದೆನೆಜಿ³ಯೆ ಬರಲ್ ತಕ್ಕಡಿ
9 ಯಲ್ಲಿ ಬಿಸುಟಲ್ಲಿಯು ಬಿಸ
10 ಅಜಿ³ದೆಯೆಲ್ಲ ಪಜಿ³ಯನಾ
11 ದಿದ್ದೆಮುರಿವಲ್ಲಿ ಕಡುಪಿನೊಳ್
12 ಮಂಗಿದಂ ಯಿಲ್ಲಿಲ್ಲಿಯು ಬಿನ್ನ
13 ಣವನ್ನೆಜಿ³ಯೆ ಕಲ್ಪದೆ ಭೀ.
14 ಕರ ಬೀ ರನಂ ಗಿಡಗಳಾಭರಣ
15 ನಂ ನೆಡಿಕಲ್ಲ ಅಸುವನುಂ
16 ಕೂಸುವನುಂ ಬೀಸುವನುಂ ಗಡಾ
17 ಯೆಸೆಗಟ್ಟಿ ತಕ್ಕಡಿಯೊಳ್
18 ನಂತ್ರಾಸದೆಯಕ್ಕುಂ ಕಜೆಯುಂ
19 ಬೀ ಸುಂದೆಯು ಬಿದ್ದೆ ಮೆಟಿ³

8. ಕರ್ನಾಟಕ ಭಾರತಿ, ಸಂಪುಟ — 8, ಸಂ. 2, ಪು. 131 — 141.

9. Ep. Cor. Vol XII (BLR) ಶಿರಾ ತಾಲ್ಲೂಕು — 27, ಪು. 267 — ಈ ಶಾಸನ, ದೈಸಂಪ ಸರಿಯಾಗಿ ಪ್ರಕಟಿಸಲಾಗಿಲ್ಲ. ಇದು ಶಾಸನದ ಕೊನೆಯ ಭಾಗ. ಅನೇಕ ತಪ್ಪುಗಳು ಇಲ್ಲಿವೆ. ಪೂರ್ವಪದ ಸಂಗತಿಯಿಂದಲೇ ಸತ್ಯ ಈ ಶಾಸನ ಕಳೆದು ಹೋಗಿದೆ. ಇದರ ಅಭ್ಯಾಸಕ್ಕಾಗಿ ನಾನು ಹೇಮಾವತಿ ಹೋಗಿದ್ದೆ. ಪ್ರಸ್ತುತ ಪೇಂಗೊಳ್ಳದ್ದರಿಂದ ಸಂಪೂರ್ಣ. ನೋಡಿ :Ep. Cor. Vol. II (1973) No. 163, pp. 106 – 110, ಪಶ್ಚಿಮ ಮುಖದೊಂದಿಗೆ ಹೋಲಿಸಿ.

20 ಗುಮೆಟಿ೩ವಬೆಡೆಂಗಂ ಏಜಿ
21 ಗಲಜಿಯದೆಮೆಣ್ಬು ಕಪ್ಪುಗುಬ್ದ
22 ಬರಲಣಮಜಿಯದೆ ತಪ್ಪಂ ಪಿ
23 ನ್ದಂ ತೆಜನನಜಿಯದೆ ಭಾಗಮು
24 ನಿಕ್ಕಿಯುಂ ಮೂಜಡೆಗಲ್ಲದೆ ಕಟ್ಬಾಡಿ
25 ಯುಂ ಮುಜಿಯೆ ಪಾಯಿಸಿದನ
26 ರೆಯುಂ ಕೊನ್ದು ಧರೆಗೆಡೆ ತೆಗೆ ಗೆಡೆ
27 ಯಿವನೆನಿಸದೆ ನೆಜಿಯೆ ಕ
28 ಡು ಜಾಣನೆನಿಸಲ್ಕೆ ಬಕ್ಕುಮೆ ಗೆ
29 ಡೆಗಳಾಭರಣನಂ ಕಲ್ಲದನ್ನಂ॥
30 ಕಾಲಾಳಕಯ್ಗ್ಗಳ ತುರಗದ ಕಾಲ್ಗ
31 ಳ ತಿಣೆವುಗಳೊಳಲ್ಲಿ ಬಂಜಿಸು
32 ತೆಟಿಗುಂ ಗೆಲ್ಗುಮೆನೆ ನೆಗಬ್ದದಾ
33 ಗ್ಗ್ಗದೆ ಗೆಲ್ಗುಮೆ ಬಣೆದಲ್ಲಿ ಕೀರ್ತ್ತಿನಾ
34 ರಾಯಣನಂ॥ ವಸಧಿ ನಭೋನಿ
35 ಧಿ ಪ್ರಮಿತಿ ಸಂಖ್ಯೆ ಶಕಾವನಿ
36 ಪಾಳಕಾಳಮಂ ನೆನೆಯಿಸೆ ಚಿತ್ರ
37 ಭಾನು ಪರಿವರ್ತ್ತಿಸೆ ಚೈತ್ರ ಸಿತೇತ
38 ರಾಷ್ಟಮೀ ದಿನಯುತ ಭೌಮವಾರದೊ
39 ಳನಾಕುಳ ಚಿತ್ತದೆನೋನ್ತು ತಳ್ದಿದಂ
40 ಜನನುತನಿನ್ದ್ರರಾಜನವಿಳಾದು
41 ರರಾಜಮಹಾವಿಭೂತಿಯಂ॥

ವಿಷಯ ಇಷ್ಟು ಸ್ಪಷ್ಟವಿರುವಾಗ ರೈಸ ಮೊದಲಾದವರ ಹೇಳಿಕೆಗಳನ್ನು ನಂಬುವುದು ಸರಿಯಲ್ಲ.[10] ಈ ಕಾರಣದಿಂದ ಕಾದಂಬರಿಯಲ್ಲಿನ ಚಾರಿತ್ರಿಕ ಸಂಗತಿ ಸಟೆಯಾಗುತ್ತದೆ.

"ಶಿಲ್ಪಶ್ರೀ" ಈಗ ಒಂದು ಐತಿಹಾಸಿಕ Fiction; ಇನ್ನು ಮುಂದೆ ಕೇವಲ Fiction.

---

10. ಮೂಲಶಾಸನ ಇದುವೆ ಆಗಿದ್ದು ಶ್ರವಣಬೆಳಗೊಳದಲ್ಲಿರುವುದು ವಸ್ತುತಃ "ಪರೋಕ್ಷ ವಿನಯ" ಸಂದರ್ಭದ ಶಾಸನ. ಜೈನಧರ್ಮದ ಪ್ರಕ್ರಿಯೆಗಳನ್ನು ಬಲ್ಲವರಿಗೆ ಇದು ಹೊಸ ಸಂಗತಿಯಲ್ಲ. ಶ್ರವಣಬೆಳಗೊಳದಲ್ಲಿ ಅನೇಕ ಪರೋಕ್ಷ ವಿನಯದ ನಿಷಧಿ ಶಾಸನಗಳನ್ನು ಕಾಣಬಹುದು. ಉದಾಹರಣೆಗೆ [illegible] ಸನ್ಯಸನ ವಿಧಿಯಿಂದ ಸ್ವರ್ಗವಾಸಿಗಳಾದ ಭಾನುಕೀರ್ತಿಗಳ ಬಗೆಗಿರುವ ಶ್ರವಣಬೆಳಗೊಳದ ನಿಷಧಿಶಾಸನವನ್ನು ಸ್ಮರಿಸಿಕೊಳ್ಳಬಹುದು. ನೋಡಿ: Ep. Cor. Vol. II (973) No. 81, pp. 63. . ಇದರಂತೆಯೇ ಬಂಕಾಪುರದಲ್ಲಿ ಮುಡಿಪ ಹೊಂದಿದ ಮಾರಸಿಂಹನ ನಿಷಧಿಯ ಶಾಸನವನ್ನೂ ಸ್ಮರಿಸಿಕೊಳ್ಳಬಹುದು. ಕನ್ನಡಭಾಷೆ, ಚರಿತ್ರೆ ಇತ್ಯಾದಿಗಳಲ್ಲಿನ ಸತ್ಯ ವಿಷಯ ತಿಳಿಯದವರು ತಪ್ಪು ತಪ್ಪಾಗಿ ಬರೆದಿದ್ದಾರೆ. ನಮಗೆ ಸತ್ಯ ಮುಖ್ಯ.

ತ.ರಾ.ಸು. ಐತಿಹಾಸಿಕ ಕಾದಂಬರಿಗಳು

— ದಿಗಂಬರ ಜೋಶಿ

ಕನ್ನಡದಲ್ಲಿ ಪ್ರಗತಿಶೀಲ ಚಳುವಳಿಯ ಫಲವಾಗಿ ಬೆಳಕಿಗೆ ಬಂದ ಸಾಹಿತಿಗಳಲ್ಲಿ ತ. ರಾ. ಸುಬ್ಬರಾಯರು ಅಗ್ರಗಣ್ಯರು. ಅ. ನ. ಕೃಷ್ಣರಾಯರಿಂದ ಪ್ರಭಾವಿತರಾಗಿ ಅವರಿಂದ ಸ್ಫೂರ್ತಿ ಪಡೆದು; ಅವರ ಶೈಲಿಯನ್ನೆ ಆತ್ಮಸಾತ್ ಮಾಡಿಕೊಂಡರೂ ಸ್ವತಂತ್ರ ವ್ಯಕ್ತಿತ್ವವನ್ನು ಮೆರೆದಿದ್ದಾರೆ; ಅವರಿಗಿಂತಲೂ ಹೆಚ್ಚು ಸಮರ್ಥ ಬರಹಗಾರರೆಂದು ಪ್ರಸಿದ್ಧಿ ಪಡೆದಿದ್ದಾರೆ. ಕತೆ ಕಾದಂಬರಿ ಜೀವನ ಚರಿತ್ರೆ ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ಕೃಷಿಗೈದಿದ್ದರೂ ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಕಾದಂಬರಿಕಾರರೆಂದೇ ಪ್ರಸಿದ್ಧರಾಗಿದ್ದಾರೆ. ಸಾಮಾಜಿಕ. ರಾಜಕೀಯ, ಐತಿಹಾಸಿಕ, ಧಾರ್ಮಿಕ ಮುಂತಾಗಿ ವಿವಿಧ ವಿಷಯಗಳ ಮೇಲೆ ಕಾದಂಬರಿಗಳನ್ನು ಬರೆದಿದ್ದರೂ ಅವರ ನಿಜವಾದ ಪ್ರತಿಭೆ ಅರಳಿರುವುದು ಐತಿಹಾಸಿಕ ಕಾದಂಬರಿಗಳಲ್ಲಿಯೇ. ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳು ವಿಷಯ ವೈವಿಧ್ಯದಿಂದ ಕೂಡಿರುವುದಲ್ಲದೆ, ತಮ್ಮ ಆಕರ್ಷಕ ಶೈಲಿಯಿಂದಲೂ ಜನಮೆಚ್ಚುಗೆಯನ್ನು ಗಳಿಸಿವೆ. ತ.ರಾ.ಸು. ಅವರನ್ನು ಗೌರವಿಸುತ್ತಿರುವ ಈ ಸಂದರ್ಭದಲ್ಲಿ ಅವರ ಐತಿಹಾಸಿಕ ಕಾದಂಬರಿಗಳ ವಿಹಂಗಾವಲೋಕನ ಮಾತ್ರ ಈ ಲೇಖನದ ಉದ್ದೇಶವಾಗಿದೆ; ವಿಸ್ತಾರವಾದ ವಿಮರ್ಶೆ ಅಥವಾ ಪರಿಚಯವಲ್ಲ. ಸಂಕ್ಷಿಪ್ತತೆಯೇ ಈ ಲೇಖನದ ಗುರಿ.

ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಬರೆಯುವವರಿಗೆ ವಿಷಯ ವೈವಿಧ್ಯತೆಗೇನೂ ಕೊರತೆಯಿಲ್ಲ. ಕರ್ನಾಟಕದ ರಾಜ ಮನೆತನಗಳನ್ನೆ ತೆಗೆದುಕೊಂಡರೂ - ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು. ವಿಜಯನಗರದ ಅರಸರು, ಬಿದನೂರು ಚಿತ್ರದುರ್ಗಗಳ ಪಾಳೆಯಗಾರರು, ಕಿತ್ತೂರು ಮೈಸೂರುಗಳ ಸಂಸ್ಥಾನಿಕರು — ಅವರ ಏಳು–ಬೀಳು, ರಾಜ ವೈಭವ, ಸಾಹಿತ್ಯ ಕಲೆಗಳ ಪ್ರೇಮ. ಅವರು ವೀರಾವೇಶದಿಂದ ಹೋರಾಡಿದ ಯುದ್ಧ ಪ್ರಸಂಗಗಳು ಇವುಗಳನ್ನು ಉಪಯೋಗಿಸಿ ವೈವಿಧ್ಯಮಯವಾದ ರೋಚಕವಾದ ಕಾದಂಬರಿಗಳನ್ನು ರಚಿಸಬಹುದು. ತ.ರಾ.ಸು. ಇವುಗಳ ಉಪಯೋಗವನ್ನು ಚೆನ್ನಾಗಿಯೇ ಮಾಡಿಕೊಂಡಿದ್ದಾರೆ. ಅವರು ಗಂಗರು. ಹೊಯ್ಸಳರು. ರಾಷ್ಟ್ರಕೂಟರ ಬಗೆಗೆ ಕಾದಂಬರಿಗಳನ್ನು ರಚಿಸಿದ್ದಾರೆ. ಚಿತ್ರದುರ್ಗದ ಪಾಳೆಯಗಾರರನ್ನು ಕುರಿತ ಅವರ ಕಾದಂಬರಿಗಳಂತೂ ವೈಶಿಷ್ಟ್ಯಪೂರ್ಣವಾಗಿದ್ದು ಕನ್ನಡದ ಐತಿ-ಹಾಸಿಕ ಕಾದಂಬರಿಗಳಲ್ಲಿ ಉನ್ನತ ಸ್ಥಾನವನ್ನು ಪಡೆದಿವೆ.

ಐತಿ-ಹಾಸಿಕ ಕಾದಂಬರಿಗಳನ್ನು ಬರೆಯುವವರು ವಿವಿಧ ಆಕರಗಳನ್ನು ಅವಲಂಬಿಸಬೇಕಾಗುತ್ತದೆ.— ಆಗಿನ ಕಾಲದ ಕಾಗದ ಪತ್ರಗಳು. ತಾಮ್ರ ಪಟಗಳು, ಶಿಲಾ ಶಾಸನಗಳು, ಸಾಹಿತ್ಯ–ಕಲಾಕೃತಿಗಳು, ವೇಷ ಭೂಷಣಗಳು, ಪರದೇಶೀ ಪ್ರವಾಸಿಗರು ಬರೆದಿಟ್ಟ ವರ್ಣನೆಗಳು - ಇವೆಲ್ಲ ಐತಿ-ಹಾಸಿಕ-ಕಾದಂಬರಿಗೆ ಆಕರಗಳು. ತ.ರಾ.ಸು. ಅವರ ಮುನ್ನುಡಿಗಳನ್ನು ಗಮನಿಸಿದರೆ ಅವರು ಹೆಚ್ಚಾಗಿ ತಮ್ಮ ಕಾದಂಬರಿಗಳಿಗೆ ಶಿಲಾ ಶಾಸನಗಳನ್ನೇ ಅವಲಂಬಿಸಿರುವುದು ಕಂಡು ಬರುತ್ತದೆ. "ಶಾಸನಗಳಲ್ಲಿ ಎಳೆ ಎಳೆಯಾಗಿ ಕಂಡು ಬರುವುದಕ್ಕೆ ಒಂದು ಸುಸ್ಪಷ್ಟರೂಪವನ್ನು ಕೊಡಲು ಮಾತ್ರ ನಾನು ಪ್ರಯತ್ನ ಪಟ್ಟಿದ್ದೇನೆ. ನನ್ನ ಕಲ್ಪನೆ ಉಚ್ಛೃಂಖಲ ವೃತ್ತಿಯನ್ನು ಅನುಸರಿಸಲು ಅವಷ್ಟು ಮಟ್ಟಿಗೂ ಎಡೆಕೊಟ್ಟಿಲ್ಲ". ಎಂದು ಒಂದು ಕಾದಂಬರಿಯಲ್ಲಿ ಬರೆದಿದ್ದಾರೆ. ಈ ರೀತಿಯೇ ಅವರ ಎಲ್ಲ ಐತಿಹಾಸಿಕ ಕಾದಂಬರಿಗಳನ್ನು ಬರೆಯುವ ಲೇಖಕ ಸಮರ್ಥ ಬರಹಗಾರನಾಗಿರಬೇಕು ಅಂದರೆ ಅವನಿಂದ ಜೀವಂತ ಕೃತಿ- ನಿರ್ಮಾಣವಾಗುತ್ತದೆ. ಇಲ್ಲದಿದ್ದರೆ ಅದು ಕೇವಲ ವರದಿಯಾಗುತ್ತದೆ. ಕೊರಟಿ ಶ್ರೀನಿವಾಸ ರಾಯರು ಒಂದು ಕಡೆಗೆ ಹೀಗೆ ಹೇಳುತ್ತಾರೆ. "ಲೇಖಕನು ಮೊದಲು ತಾನು ಬರೆಯಬೇಕೆಂದಿರುವ ಐತಿ-ಹಾಸಿಕ ಸಾಮಗ್ರಿಯನ್ನು ವಿಷಯ ಸಂಗ್ರಹಣೆಯನ್ನು ಹಲವು ಆಕರಗಳಿಂದ ಮಾಡಿಕೊಳ್ಳಬೇಕು. ಅನಂತರ ಅದನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವುದು ಹೇಗೆಂದು ತಿಳಿದಿರಬೇಕು. ಕಡೆಯದಾಗಿ ಅಂತಹ ನಿರ್ಜೀವ ವಸ್ತುಗಳಿಗೆ ಜೀವ ತುಂಬಿ ಅವುಗಳ ಹಂದರದಿಂದ ಗತಕಾಲದ ಜನಜೀವನವನ್ನು ಯಥಾರ್ಥವನ್ನಾಗಿ, ಜೀವಂತವಾಗಿ, ರಸಮಯವಾಗಿ, ಕಲಾತ್ಮಕವಾಗಿ ಮೂಡಿಸುವಂತಹ ಚತುರ ಶಿಲ್ಪಿ, ಪ್ರತಿಭಾ ಸಂಪನ್ನ ಲೇಖಕ ಅವನಾಗಿರಬೇಕು. ಆಗ ಮಾತ್ರ ಯುಗಧರ್ಮವನ್ನು ಪ್ರತಿಬಿಂಬಿಸಬಲ್ಲ ಜೀವಂತ ಸಾಹಿತ್ಯ ಕೃತಿ ಐತಿಹಾಸಿಕ ಕಾದಂಬರಿ-ಅವನಿಂದ ಸೃಷ್ಟಿಯಾದೀತು. ಇಲ್ಲದಿದ್ದರೆ ಅವನು ಕೇವಲ ವರದಿಗಾರ-ನಾಗುತ್ತಾನೆ ಅಷ್ಟೆ." ತ.ರಾ.ಸು. ಕೇವಲ ವರದಿಗಾರನಾಗದೆ ಯುಗಧರ್ಮವನ್ನು ಪ್ರತಿಬಿಂಬಿಸಬಲ್ಲ ಜೀವಂತ ಕೃತಿಗಳನ್ನೇ ಕನ್ನಡಮ್ಮನಿಗೆ ಅರ್ಪಿಸಿದ್ದಾರೆ ಎಂಬುದು ಅವರ ಯಾವ ಐತಿಹಾಸಿಕ ಕಾದಂಬರಿಯನ್ನು ನೋಡಿದರೂ ಕಂಡು ಬರುತ್ತದೆ.

ಇಷ್ಟು ಪೀಠಿಕೆಯ ನಂತರ ಈಗ ಅವರ ಕಾದಂಬರಿಗಳನ್ನು ಒಂದೊಂದನ್ನಾಗಿ ನೋಡುವಾ. ರಾಷ್ಟ್ರಕೂಟರ ಪ್ರಸಿದ್ಧ ದೊರೆ ಅಮೋಘವರ್ಷ ನೃಪತುಂಗ ಅವನ ಹೆಸರು ಇತಿ-ಹಾಸದಲ್ಲಿ ಚಿರಸ್ಥಾಯಿಯಾಗಿದೆ. ಅವನನ್ನು ಕುರಿತು ತ.ರಾ.ಸು. ರಚಿಸಿರುವ ಕಾದಂಬರಿ 'ನೃಪತುಂಗ'. ಮೇಲೆ ಹೇಳಿದಂತೆ. ಶಾಸನದ ಆಧಾರದ ಮೇಲೆಯೇ ಈ ಕಾದಂಬರಿಯನ್ನು ರಚಿಸಿದ್ದಾರೆ. ನೃಪತುಂಗನನ್ನು ಆದರ್ಶದೊರೆ. ಆದರ್ಶ ತಂದೆ. ಆದರ್ಶ ಪತಿ, ಆದರ್ಶ ಮಾನವನನ್ನಾಗಿ ಚಿತ್ರಿಸಲು ಪ್ರಯತ್ನಿಸಿದ್ದಾರೆ. ಆತನ ಪ್ರಜಾ ವಾತ್ಸಲ್ಯ. ವಿದ್ಯಾಪಕ್ಷಪಾತ, ನ್ಯಾಯ ನಿಷ್ಠೆಗಳು ಪೀಡಿಸುತ್ತಿದ್ದಾಗ ಅವರ ಪರಿಹಾರಕ್ಕೆಂದು ದೊರೆ ತನ್ನ ಶಿರವನ್ನೇ ಕೊಲ್ಲಾಪುರದ ಮಹಾಲಕ್ಷ್ಮಿಗೆ

ಅರ್ಪಿಸುವುದು ಅದ್ಭುತವಾಗಿದೆ. ತನ್ನ ಮಗನೇ ರಾಷ್ಟ್ರದ್ರೋಹಿಯೆಂದು ಸಿದ್ಧವಾದಾಗ ಅವನು ನೀಡುವ ತೀರ್ಪೂ ಅಷ್ಟೇ ಅದ್ಭುತವಾಗಿದೆ. ಒಟ್ಟಿನಲ್ಲಿ ತ.ರಾ.ಸು. ಅವರ ಅತ್ಯುತ್ತಮ ಕಾದಂಬರಿಗಳಲ್ಲಿ ಇದೂ ಒಂದು.

ಹೊಯ್ಸಳ ಅರಸರಲ್ಲಿ ವಿಷ್ಣುವರ್ಧನ ಅತ್ಯಂತ ಪ್ರಸಿದ್ಧ ದೊರೆ, ಆತನನ್ನು ಕುರಿತು 'ಹೊಯ್ಸಳೇಶ್ವರ ವಿಷ್ಣುವರ್ಧನ' ಎಂಬ ಬೃಹತ್ ಕಾದಂಬರಿಯನ್ನು ಬರೆಯುವ ವಿಚಾರ ತ.ರಾ.ಸು. ಅವರದು. ಅದು ಏಕೋ ಸಾಧ್ಯವಾಗದೆ ಆತನನ್ನು ಕುರಿತು ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ಒಂದು ಸಿಡಿಲಮೊಗ್ಗು' ಮತ್ತೊಂದು 'ಕೀರ್ತಿನಾರಾಯಣ'. ವಿಷ್ಣುವರ್ಧನನ ತಂದೆ ಎರೆಯಂಗ ದೇವನು ಬಳ್ಳಿಗಾವೆಗೆ ಬಂದಿದ್ದಾಗ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನ ಧೂರ್ತ ತಂತ್ರಕ್ಕೆ ಬಲಿಯಾಗಿ ತನ್ನ ಗಂಗ ರಾಜ್ಯವನ್ನು ಕಳೆದುಕೊಂಡದ್ದು ಸಿಡಿಲಮೊಗ್ಗು' ಕಾದಂಬರಿಗೆ ವಿಷಯವಾದರೆ, 'ಕೀರ್ತಿನಾರಾಯಣ' ಕಾದಂಬರಿಗೆ ವಿಷ್ಣುವರ್ಧನನ ತಲಕಾಡು ದಂಡಯಾತ್ರೆ ವಿಷಯವಾಗಿದೆ. ಈ ಎರಡೂ ಕಾದಂಬರಿಗಳಲ್ಲಿ ಹಲವಾರು ದೋಷಗಳಿದ್ದಾಗ್ಯೂ ವಿಷ್ಣುವರ್ಧನನ ಪಾತ್ರವು ಉಜ್ವಲವಾಗಿ ಮೂಡಿ ಬಂದಿದೆ. 'ಸಿಡಿಲ ಮೊಗ್ಗಿನಲ್ಲಿ ಇತಿಹಾಸವನ್ನು ವಿಕೃತ ಗೊಳಿಸಿದ್ದಾರೆ' ಎಂಬ ಟೀಕೆಯಿದ್ದರೆ ಕೀರ್ತಿ ನಾರಾಯಣದಲ್ಲಿ 'ಆಕಾಶ ದರ್ಶಿ' ಎಂಬ ಟೆಲಿಸ್ಕೋಪಿನ ವರ್ಣನೆ, ಯುದ್ಧದಲ್ಲಿ ಆಧುನಿಕ ಟ್ಯಾಂಕುಗಳನ್ನು ಹೋಲುವ ರಣಯಂತ್ರದ ಬಳಕೆ ಆಭಾಸವನ್ನು ಸೃಷ್ಟಿಸಿವೆ' ಎಂಬ ಟೀಕೆಯೂ ಇದೆ.

ಗಂಗ ರಾಜರಲ್ಲಿ ಮಂತ್ರಿಯೂ ಸ್ವತಃ ಸಾಹಿತಿಯೂ ಆಗಿದ್ದ ಚಾವುಂಡರಾಯನು ಸಾಹಿತ್ಯ ಕಲೆಗಳಿಗೆ ಆಶ್ರಯದಾತ-ನಾಗಿದ್ದನು. ಆತನ ಜೀವನವನ್ನು ಕುರಿತ-ಕಾದಂಬರಿಯೇ 'ಶಿಲ್ಪಶ್ರೀ'. ಅಲ್ಪ ವಸ್ತುವಿನ ಮೇಲೆ ಬೃಹತ್ ಕಾದಂಬರಿಯನ್ನು ರಚಿಸಲು ಹೋಗಿ ಎಡವಿದ್ದಾರೆ. ಪಂಪ ರನ್ನರ ಕಾವ್ಯ ಭಾಗಗಳನ್ನು ಅತಿಯಾಗಿ ತುಂಬಿದ್ದಾರೆ ಕಾದಂಬರಿಯಲ್ಲಿ. ಶೈಲಿಯಲ್ಲಿಯೂ ಕೃತಕತೆ ಕಾಣಿಸಿಕೊಂಡಿದೆ. ಆದರೂ ಚಾವುಂಡರಾಯನ ವ್ಯಕ್ತಿತ್ವ ಅತ್ಯಂತ ಸ್ಫುಟವಾಗಿ ಮೂಡಿ ಬಂದಿದೆ.

ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಅತ್ಯಂತ-ವೈಶಿಷ್ಟ್ಯಪೂರ್ಣ ಕಾದಂಬರಿಗಳು. ಪಾಳೆಯಗಾರರಲ್ಲೆಲ್ಲ ಚಿತ್ರದುರ್ಗದ ನಾಯಕರ ಮನೆತನ ಅತ್ಯಂತ ವೈಭವ ಪೂರ್ಣವಾದುದೂ, ಕ್ಷಾತ್ರ ತೇಜಕ್ಕೆ ಹೆಸರಾದುದೂ ಆಗಿದೆ. ಅದನ್ನು ಅಷ್ಟೇ ಪ್ರಧಾನ ರೀತಿಯಾಗಿ ಚಿತ್ರಿಸುವ ಹತ್ತು ಕಾದಂಬರಿಗಳನ್ನು, ಅದನ್ನು ಅಷ್ಟೇ ಪ್ರಭಾವಶಾಲಿಯಾಗಿ ಚಿತ್ರಿಸುವ ಹತ್ತು ಕಾದಂಬರಿಗಳನ್ನು ತ.ರಾ.ಸು. ಬರೆದಿದ್ದಾರೆ. 'ಕಂಬನಿಯ ಕುಯಿಲು, ರಾಜ್ಯದಾಹ. ರಕ್ತರಾತ್ರಿ, ತಿರುಗುಬಾಣ, ಹೊಸ ಹಗಲು, ವಿಜಯೋತ್ಸವ ಭಾಗ-೧ ಮತ್ತು ೨, ಕಸ್ತೂರಿ ಕಂಕಣ, ಭಾಗ-೧ ಮತ್ತು ೨, ಹಾಗೂ ಮಸಣಗೀತೆ' ಇವೇ ಆ ಹತ್ತು ಕಾದಂಬರಿಗಳು. ಈ ಕಾದಂಬರಿಗಳಲ್ಲಿ 'ಆ ಕಾಲದ ದುಷ್ಟ ರಾಜಕೀಯ ಇತಿಹಾಸ, ದ್ರೋಹ ಸ್ವಾರ್ಥ ಪರರುಗಳ ಕತೆ. ಸ್ವಾಮಿ ನಿಷ್ಠೆ,

ದೈವ ಭಕ್ತಿ, ಪ್ರಜಾವಾತ್ಸಲ್ಯಗಳ ಭವ್ಯವಾದ ನಿರೂಪಣೆಯಿದೆ.' (ಕೊ.ಶ್ರೀ). 'ಇವುಗಳ ಕಥಾ ರಚನೆಯಲ್ಲಿ ಮತ್ತು ಪಾತ್ರ ಸೃಷ್ಟಿಯಲ್ಲಿ ಭೂತಕಾಲವನ್ನು ವರ್ತಮಾನ ಕಾಲದಲ್ಲಿ ತಂದು ನಿಲ್ಲಿಸುವ ಕಲ್ಪನಾ ಶಕ್ತಿ ಅಸಾಮಾನ್ಯವಾಗಿದೆ'. (ರಂ.ಶ್ರೀ.ಮು.)

ಚಿತ್ರದುರ್ಗ ಇತಿಹಾಸಕ್ಕೆ ಸಂಬಂಧ ಪಟ್ಟುದಾದರೂ ತ.ರಾ.ಸು. ಅವರ ಉತ್ಕೃಷ್ಟ ಕಾದಂಬರಿ 'ಹಂಸಗೀತೆಯ ಬಗ್ಗೆ ಪ್ರತ್ಯೇಕವಾಗಿಯೇ ಹೇಳಬೇಕು. ಭೈರವಿ ವೆಂಕಟ ಸುಬ್ಬಯ್ಯನೆಂಬ ಕಾಲ್ಪನಿಕ ಸಂಗೀತಗಾರನ ಸುತ್ತ ಈ ಕಾದಂಬರಿಯನ್ನು ಹೆಣೆಯಲಾಗಿದೆ. ಇತಿಹಾಸಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗದ ಕೊನೆಯ ಪಾಳೆಯ ಗಾರರ ಉಲ್ಲೇಖ, ದುರ್ಗವನ್ನು ವಶಪಡಿಸಿಕೊಂಡ ಹೈದರಾಲಿ ಟಿಪ್ಪುಸುಲ್ತಾನರ ಉಲ್ಲೇಖಗಳನ್ನು ಬಿಟ್ಟರೆ ಐತಿಹಾಸಿಕ ಅಂಶಗಳು ಕಡಿಮೆಯೆಂದೇ ಹೇಳಬೇಕು. ಆದರೂ ಆಗಿನ ಕಾಲದ ಜನಜೀವನ, ಆವರ ಸತ್ಯಸಂಧತೆ, ದೈವಭಕ್ತಿ, ಮಾತಿಗೆ ತಪ್ಪದ ನಡೆ-ನುಡಿ ಇವೆಲ್ಲ ಮನೋಜ್ಞವಾಗಿ ಮೂಡಿ ಬಂದಿವೆ. ಈ ಕಾದಂಬರಿಯ ಶ್ರೇಷ್ಠತೆ ಅಡಗಿರುವುದು ಕತೆಯನ್ನು ಹೇಳುವ ತಂತ್ರದಲ್ಲಿ. 'ಸಾಮಾಜಿಕ ಸನ್ನಿವೇಶ ವೊಂದರಲ್ಲಿ ಇತಿಹಾಸದ ಎಳೆಗಳನ್ನು ಹುಡುಕಿ ತೆಗೆದು ವ್ಯಕ್ತಿಯನ್ನು ಬಲ್ಲವಲವರಿಂದ ಆತನ ಚರಿತ್ರೆಯನ್ನು ಹೇಳಿಸಿರುವ ವಿಶಿಷ್ಟ ತಂತ್ರವು ಈ ಕಾದಂಬರಿಯಲ್ಲಿ ನೂತನ ವಾಗಿದೆ. ಒಟ್ಟಿನಲ್ಲಿ ಯಶಸ್ವಿಯಾಗಿದೆ (ಮುಗಳಿ). "ಸಂಗೀತಗಾರನೊಬ್ಬನ ಬಾಳಿನ ಹಂದರದ ಮೇಲೆ ಹಿಂದಿನ ಮತ್ತು ಇಂದಿನ ಸಂಸ್ಕೃತಿಯನ್ನು ನಾನಿಲ್ಲಿ ಚಿತ್ರಿಸ-ಲೆಳಸಿದ್ದೇನೆ" ಎಂಬ ಲೇಖಕರ ಮಾತೂ ಸತ್ಯವಾಗಿದೆ. ಆದರೂ ವೆಂಕಟಸುಬ್ಬಯ್ಯ "ಶೃಂಗಾರ ಜೀವನದ ನಿರೂಪಣೆಯಲ್ಲಿ ಮಾತ್ರ ಅತ್ಯುಕ್ತಿ ಅತಿ-ರೇಕಗಳಿಗೆ ಎಡೆ ದೊರೆತಿದೆ" ಎಂಬ ತಕರಾರೂ ಇದೆ. ಒಟ್ಟಿನಲ್ಲಿ "ತನ್ನದೇ ಆದ ವೈಶಿಷ್ಟತೆ ಪಡೆ ದಿರುವ ಈ ಕಾದಂಬರಿ ಕನ್ನಡದ ಐತಿಹಾಸಿಕ ಕಾದಂಬರಿಗಳಲ್ಲಿಯೇ ಒಂದು ಧ್ರುವತಾರೆ ಯಂತಿದೆ" (ಶ್ರೀನಿವಾಸರಾವ್ ಕೊರಟಿ), ಈ ಕಾದಂಬರಿ ಹಿಂದಿ ಮತ್ತು ಕನ್ನಡಗಳಲ್ಲಿ ಚಲನ ಚಿತ್ರವಾಗಿ ಜನ ಮೆಚ್ಚುಗೆಯನ್ನೂ ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿದೆ.

ವಸ್ತು, ಪಾತ್ರ, ಸನ್ನಿವೇಶ, ಸಂಭಾಷಣೆ, ಶೈಲಿ ಇವು ಐದು ಕಾದಂಬರಿಯ ಪಂಚ ಪ್ರಾಣಗಳು, ಎಂದು ಹಾ. ಮಾ. ನಾಯಕ ಒಂದೆಡೆ ಹೇಳಿದ್ದಾರೆ. ತ.ರಾ.ಸು. ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆಯಿರುವಂತೆ ಎಚ್ಚರಿಕೆ ವಹಿಸಿದ್ದಾರೆ. ಐತಿಹಾಸಿಕ ಕಾದಂಬರಿ ಎಂದೊಡನೆ ಕೇವಲ ವೀರ ಜೀವನವನ್ನು ಚಿತ್ರಿಸುವುದಲ್ಲ; ಇತರ ಅಂಶ ಗಳೂ ಅಷ್ಟೇ ಮಹತ್ವದವು. ಇಲ್ಲದಿದ್ದರೆ ಎಲ್ಲ ಕಾದಂಬರಿಗಳು ಏಕತಾನತೆಯನ್ನು ಹೊಂದಿ, ಓದುಗರಿಗೆ ಬೇಸರವನ್ನುಂಟು ಮಾಡುತ್ತವೆ. ತ.ರಾ.ಸು. ಅವರ ಕಾದಂಬರಿಗಳಲ್ಲಿ ವೀರ ಜೀವನ ಜೊತೆಗೆ ಸಾಹಿತ್ಯ, ಕಲೆ, ಸಂಸ್ಕೃತಿ ಇವೂ ಸಮ್ಮಿಳಿತ ಗೊಂಡು ಓದುಗರನ್ನು ಸಾಮಾಜಿಕ ಕಾದಂಬರಿಗಳಂತೆಯೇ ರಂಜಿಸುತ್ತವೆ. ಅವರ ಆಯ್ಕೆಯನ್ನು ನೋಡಿ–ಆವರ್ತ ದೊರೆ ನೃಪತುಂಗ, ಭವ್ಯ ಗೊಮ್ಮಟನನ್ನು ಜಗತ್ತಿಗೆ

ನಿಡಿದ ಚಾವುಂಡರಾಯ, ಚಿಕ್ಕಂದಿನಿಂದಲೂ ವೀರಶ್ರೀಯನ್ನೇ ಮೆರೆದ ವಿಷ್ಣು ವರ್ಧನ– ಹೀಗೆ ದಕ್ಷಿಣದ ಐತಿಹ್ಯದಲ್ಲಿ ಮಹತ್ತೆ ಕಂಡು ಬರುತ್ತದೆ.

ಪಾತ್ರಗಳ ಸೃಷ್ಟಿಯಲ್ಲಿಯೂ ತ.ರಾ.ಸು. ಅವರ ಚಾಣಾಕ್ಷತೆ ಎದ್ದು ಕಾಣುತ್ತದೆ. 'ತ.ರಾ.ಸು. ಕಡೆಯುವ ಪಾತ್ರಗಳು ಯಾವಾಗಲೂ ಜೀವಂತವಾಗಿ- ರುತ್ತವೆ. ಗತಕಾಲಕ್ಕೆ ಹೋಗಿ ಅಲ್ಲಿನ ಪಾತ್ರಗಳನ್ನು ಕಲ್ಪಿಸಬೇಕಾಗಿ ಬಂದಾಗಲೂ ಅವಕ್ಕೆ ಅವರು ರಕ್ತಮಾಂಸಗಳನ್ನು ತುಂಬ ಬಲ್ಲರು" (ಹಾ.ಮಾ. ನಾಯಕ). 'ಸಿಡಿಲ ಮೊಗ್ಗು'ನಲ್ಲಿ ಬರುವ ವಿಷ್ಣುವರ್ಧನನ ಪಾತ್ರವನ್ನೇ ನೋಡಬಹುದು. ಆತನ ಧೀರೋದಾತ್ತ ಸ್ವಭಾವದ ಪರಿಚಯ ಪ್ರಾರಂಭದಲ್ಲಿಯೇ ಆಗುತ್ತದೆ. ಚಕ್ರವರ್ತಿಗಳ ವಿಷಯದಲ್ಲಿ ಆತನಿಗೆ ಅಸಮಾಧಾನವಾಗುವಂತಹ ಘಟನೆಗಳು ಒಂದರ ಹಿಂದೊಂದು ನಡೆದು ಅದೇ ಮುಂದಿನ ವಿರಸಕ್ಕೆ ಕಾರಣವಾಗುತ್ತದೆ. ವಿಷ್ಣುವರ್ಧನನಿಗೆ ತನ್ನ ರೋಗಿಷ್ಟ ಅಣ್ಣನ ಬಗೆಗಿದ್ದ ಅನುಕಂಪ, ಚಕ್ರವರ್ತಿಗಳ ಬಗೆಗಿದ್ದ ಅಸಮಾಧಾನ; ಗುರುಹಿರಿಯರಲ್ಲಿದ್ದ ಭಯ ಭಕ್ತಿ, ಮುಕುಟ ಧರಿಸಿದ ತಲೆ ಯಾರಿಗೂ ಬಾಗದಂತೆ ಬಾಳಬೇಕೆಂಬ ಅವನ ಜೀವನಾದರ್ಶ ಬಹು ಚೆನ್ನಾಗಿ ಚಿತ್ರಿತವಾಗಿವೆ.

ಸನ್ನಿವೇಶಗಳ ನಿರ್ಮಾಣದಲ್ಲಿಯೂ ತ.ರಾ.ಸು. ಅವರ ಕೈಚಳಕವನ್ನು ನಾವು ಕಾಣಬಹುದು. ಹಲವಾರು ಸಂದರ್ಭಗಳಲ್ಲಿ ತ.ರಾ.ಸು. ಅತ್ಯಂತ ನಾಟ್ಯಪೂರ್ಣ ಸನ್ನಿವೇಶಗಳನ್ನು ನೀಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಎರಡು ಸನ್ನಿವೇಶ ಗಳನ್ನು ನೋಡಬಹುದು. 'ನೃಪತುಂಗ' ಕಾದಂಬರಿಯಲ್ಲಿ ಚಕ್ರವರ್ತಿಗಳು ರಾಜ ಕುಮಾರ ಕೃಷ್ಣನಿಗೆ ರಾಷ್ಟ್ರದ್ರೋಹಕ್ಕಾಗಿ ಮರಣ ದಂಡನೆಯ ತೀರ್ಪು ನೀಡುವ ಸಂದರ್ಭ. ಇಡೀ ಸಭೆಗೆ ಸಭೆಯೇ ಮೂಕ ವಿಸ್ಮಿತವಾಗಿರುವಾಗ ರಾಜ ಕುಮಾರಿಯೊಬ್ಬಳ ಪ್ರವೇಶ ಸಭೆಯ ಚಿತ್ರವನ್ನೇ ಬದಲಿಸುತ್ತದೆ. ಅತ್ಯಂತ ನಾಟ್ಯ ಪೂರ್ಣವಾಗಿ ಮರಣದಂಡನೆಯ ಶಿಕ್ಷೆಯನ್ನು ಕ್ಷಮಾದಾನದಲ್ಲಿ ಪರ್ಯವಸಾನ ಗೊಳಿಸುತ್ತದೆ, ಮತ್ತು ಅಷ್ಟೇ ಪರಿಣಾಮಕಾರಿಯೂ ಆಗಿದೆ. ಇಂಥದೆ ಮತ್ತೊಂದು ಸನ್ನಿವೇಶ: 'ಹಂಸಗೀತೆ'ಯಲ್ಲಿ ಪೂಜಾರಿ ವೀರಭದ್ರಾಚಾರಿ ಪಾಳೆಯಗಾರರಿಗೆ ಅರ್ಪಿಸುವ ದೇವರ ನಿರ್ಮಾಲ್ಯದಲ್ಲಿ ದೊರೆತ ಕೂದಲೆಳೆಯನ್ನು ಶಿವನ ಜಡೆಯ ಕೂದಲು ಎಂದು ಸಾಧಿಸಿ ಅದನ್ನು ಸತ್ಯಗೊಳಿಸಿದ ಸಂದರ್ಭ. ಪಾಳೆಯಗಾರರು ರಾತ್ರಿ ಊರೊಳಗಿನ ಎಲ್ಲ ದೇವಸ್ಥಾನಗಳಿಗೂ ಭೇಟಿಯಿತ್ತು ಮಂಗಳಾರತಿ ಮಾಡಿಸಿ ಪ್ರಸಾದ ಸ್ವೀಕರಿಸುವ ಪದ್ಧತಿ. ಅವರು ಹೊರಟರೆಂದರೆ ಅರಮನೆಯ ನಗಾರಿ ಬಾರಿಸಿ ದೊರೆಗಳ ಆಗಮನ ಸೂಚಿಸುತ್ತದೆ. ಪೂಜಾರಿಗಳು ಸಿದ್ಧವಾಗಿರಬೇಕೆಂಬ ಎಚ್ಚರಿಕೆ ಅದು. ಒಂದು ದಿನ ಬೆಳಗಿನ ಜಾವದಾದರೂ ನಗಾರಿ ಬಾರಿಸಲಿಲ್ಲ. ದಾರಿಕಾಯ್ದು ಬೇಸತ್ತ ವೀರಭದ್ರಾಚಾರಿ ದೇವರ ನಿರ್ಮಾಲ್ಯದ ಹೂವುಗಳನ್ನು ಒಯ್ದು ತನ್ನ ಉಪಪತ್ನಿಗೆ ಮುಡಿಸುತ್ತಾನೆ. ಇನ್ನು ಮಲಗಬೇಕು ಎನ್ನುವಷ್ಟರಲ್ಲಿ ನಗಾರಿಯ ಸಪ್ಪಳ ಕೇಳಿ ಬರುತ್ತದೆ. ಲಗುಬಗೆಯಿಂದ ಮೇಲೆದ್ದು ತಲೆಯಲ್ಲಿದ್ದ

ಹೂವುಗಳನ್ನು ಕಿತ್ತುಕೊಂಡು ದೇವಸ್ಥಾನಕ್ಕೆ ಓಡುತ್ತಾನೆ. ಆ ಹೂವಿನ ಜೊತೆಗೆ ಅವಳ ತಲೆಗೂದಲೊಂದು ಸೇರಿಕೊಳ್ಳುತ್ತದೆ. ಅರಿವಿಲ್ಲದ ಪೂಜಾರಿ ಹೂವನ್ನು ದೊರೆಗಳಿಗೆ ಅರ್ಪಿಸಿದಾಗ ಕೂದಲು ಅವರ ಕಣ್ಣಿಗೆ ಬೀಳುತ್ತದೆ. ಪರಿಸ್ಥಿತಿಯ ಅರಿವಾಗಿ ಅವರು ಕ್ರುದ್ಧರಾಗುತ್ತಾರೆ. ಶಿವನ ಜಡೆಯ ಕೂದಲೆಂದು ಪೂಜಾರಿ ಸುಳ್ಳನ್ನು ಸಾಧಿಸುತ್ತಾನೆ. ದೊರೆಗಳು ಪರೀಕ್ಷೆಗೆ ಸಿದ್ಧರಾಗುತ್ತಾರೆ. ಎಲ್ಲೆಡೆ ಭೀತಿಯ ವಾತಾವರಣ ನಿರ್ಮಾಣವಾಗುತ್ತದೆ. ಮರುದಿನದ ಪೂಜೆಯ ವೇಳೆಗೆ ಶಿವನಿಗೆ ನಿಜವಾಗಿ ಜಡೆಯಿದೆಯೋ ಎಂಬುದನ್ನು ಪರೀಕ್ಷಿಸಲು ದೊರೆಗಳು ಬರುತ್ತಾರೆ. ವೀರಭದ್ರಾಚಾರಿ ಗುಡಿಯ ಬಾಗಿಲು ಹಾಕಿಕೊಂಡು ಕೂತು ಬಿಡುತ್ತಾನೆ. ವೆಂಕಟಸುಬ್ಬಯ್ಯನವರು ಪರೀಕ್ಷೆ ಬೇಡವೆಂದರೂ ದೊರೆಗಳು ಕೇಳುವುದಿಲ್ಲ. ವೆಂಕಟಸುಬ್ಬಯ್ಯನವರಿಗೂ ಸಿಟ್ಟು ಬರುತ್ತದೆ. ದೊರೆಗಳನ್ನು ದೇವಸ್ಥಾನದೊಳಕ್ಕೆ ಕರೆದೊಯ್ದು ತಾವೇ ಸ್ವತಃ ಶಿವಲಿಂಗದ ಮೇಲೆ ಕೈಯಾಡಿಸಿ ಶಿವನ ಜಡೆಯನ್ನು ಕಿತ್ತು ದೊರೆಯ ಕೈಯಲ್ಲಿಡುತ್ತಾರೆ. ಶಿವಲಿಂಗದಿಂದ ರಕ್ತದ ಹೊಳೆ ಹರಿಯುತ್ತದೆ. ಮೈನವಿರೇಳಿಸುವ ಈ ಸನ್ನಿವೇಶವನ್ನು ಓದುವಾಗ ಓದುಗನ ಎದೆಯೂ ಭಯದಿಂದ ಕಂಪಿಸುತ್ತದೆ. ತ.ರಾ.ಸು. ಅವರ ಸಾಮರ್ಥ್ಯವನ್ನು ಅರಿಯಲು ಈ ಎರಡು ಉದಾಹರಣೆಗಳು ಸಾಕೆನಿಸುತ್ತವೆ.

ತ.ರಾ.ಸು. ಅವರ ಸಂಭಾಷಣೆಗಳ ಬಗೆಗೆ ಹೆಚ್ಚಿಗೆ ಹೇಳುವುದೇ ಬೇಡ, ಸಂಭಾಷಣೆ ಅವರ ಕತೆಗಳ ಜೀವಾಳ. ಸಂಭಾಷಣೆಗಳ ಮೂಲಕವೇ ಕತೆಯನ್ನು ಮುಂದುವರೆಸಿಕೊಂಡು ಹೋಗುವ ಅವರ ಶೈಲಿ ಅದ್ಭುತವಾಗಿದೆ. ಅನೇಕ ವೇಳೆ ಅವರ ಸಂಭಾಷಣೆಗಳು ಸ್ವತಂತ್ರ ನಾಟಕಗಳಾಗುವಷ್ಟು ಸಾಮರ್ಥ್ಯ ಪಡೆದಿವೆ. ಉದಾಹರಣೆಗೆ ಈ ಕೆಲವು ಸಂದರ್ಭಗಳನ್ನು ನೋಡಬಹುದು. 'ನೃಪತುಂಗ' ಕಾದಂಬರಿಯಲ್ಲಿ ರಾಜಕುಮಾರ ಕೃಷ್ಣನ ಅಪರಾಧದ ವಿಚಾರಣೆಯ ಸಂದರ್ಭ; "ಸಿಡಿಲು ಮೊಗ್ಗು" ಕಾದಂಬರಿಯಲ್ಲಿ ಬರುವ ವಿಷ್ಣುವರ್ಧನ ಎರೆಯಂಗ ದೇವರ ಸಂಭಾಷಣೆ, ವಿಷ್ಣುವರ್ಧನ ಏಚಲಾದೇವಿಯರ ಸಂಭಾಷಣೆ, ಹಂಸಗೀತೆಯಲ್ಲಿ ಬರುವ ವೆಂಕಟಸುಬ್ಬಯ್ಯ ಹಾಗೂ ಚಂದ್ರಾಸಾನಿ, ವೆಂಕಟಸುಬ್ಬಯ್ಯನ ಸೋದರ ಮಾವ ಮತ್ತು ಚಂದ್ರಾಸಾನಿ ಇವರ ಸಂಭಾಷಣೆ, ವಿಜಯೋತ್ಸವದ ಎರಡನೇ ಭಾಗವಂತೂ ಪೂರ್ಣ ಸಂಭಾಷಣೆಗಳಿಂದಲೇ ತುಂಬಿದೆ.

ತ.ರಾ.ಸು. ಅವರ ಶೈಲಿ ಒಂದು ದ್ರಾಕ್ಷಾಪಾಕ, ಅದು ಸರಳವೂ ಸುಂದರವೂ ಆಕರ್ಷಕವೂ ಆಗಿದೆ. ಆದರೂ ಕೆಲವೊಮ್ಮೆ ಕೃತಕವೂ ಕ್ಲಿಷ್ಟವೂ ಆಗಿ ಕತೆಯ ಓಟಕ್ಕೆ ತಡೆ ಹಾಕುತ್ತದೆ, ರಸಾಭಾಸವನ್ನುಂಟುಮಾಡುತ್ತದೆ. ಅವರ "ಶಿಲ್ಪಶ್ರೀ" ಕಾದಂಬರಿ ಇದಕ್ಕೊಂದು ಉದಾಹರಣೆ. ಇತಿಹಾಸಕಾಲದ ಜನಜೀವನದ ಅರಿವು ಅವರಿಗೆ ನಿಚ್ಚಳವಾಗಿದ್ದುದರಿಂದ ಅವರ ಭಾಷೆ ಪ್ರೌಢವೂ ಆವೇಶಯುಕ್ತವೂ ಆಗಿದೆ. ಐತಿಹಾಸಿಕ ವಾತಾವರಣವನ್ನು ನಿರ್ಮಿಸುವಲ್ಲಿ, ವರ್ಣನೆಗಳಲ್ಲಿ ಅವರು ಭಾಷೆಯನ್ನು

ಸಮರ್ಥವಾಗಿಯೇ ಮಾಡಿಸಿಕೊಂಡಿದ್ದಾರೆ. ಅವರ ವರ್ಣನೆಯ ಕೆಲವು ಸ್ಯಾಂಪಲ್ಲುಗಳನ್ನು ನೋಡಬಹುದು.

ಸ್ತ್ರೀ ವರ್ಣನೆ —

೧) ಹಂಸಗೀತೆಯ ಚಂದ್ರಾಸಾನಿ – "ಕೇದಿಗೆಯ ಕಾಂತಿಯುಳ್ಳ ಗುಲಾಬಿಯ ಹೊಳಪನ್ನು ಬೆರೆಸಿದ ದಂತವಲ್ಲಿ ಕೆತ್ತಿದ ಮೈ, ಬಯಕೆಯ ಹೂ ಅರಳಿಸುತ್ತ ಚೆಲುವ ಚಂದುಟಿ. ಚಂದುಟಿಗೆ ತೋರು ಬೆರಳಂತೆ ರಂಜಿಸುವ ಎಸಳಾದ ನಾಸಿಕ, ಯೌವ್ವನ ಭಾರದಿಂದ ಮತ್ತವಾಗಿ, ಕಾಮ ಕಾಂತಿಯಿಂದ ಉಜ್ವಲವಾಗಿ, ಮಸೆದ ಮಿಂಚಿನ ಅಲಗಿನಂತೆ, ಬಿಳಿ ನೈದಿಲೆಯ ತೋಳಲ್ಲಿ ಸೆರೆಸಿಕ್ಕ ದುಂಬಿಯಂತೆ ಸಂಚಲಿಸುವ ಚಂಚಲ ನೇತ್ರ ......ಅವಳ ತುಟಿಯ ಹವಳದ ತೊಟ್ಟಿಲಿನಲ್ಲಿ ಕೋಟಿರಾಗಗಳ ಸಂಮೋಹಕತೆ ಮಲಗಿ ಕೈಬೀಸಿ ಕರೆದಂತೆ ಕೇಳಿಸಿತು ವೆಂಕಟ ಸುಬ್ಬಯ್ಯನವರಿಗೆ.

೨) ಸಿಡಿಲ ಮೊಗ್ಗಿನ ಶಾಂತಲೆ— "ಒಳಗೆ ಹರಿವ ರಕ್ತದ ಕಾಂತಿಯಿಂದ ಅರುಣ ವರ್ಣವಾಗಿ, ತೊಳೆದ ಕನ್ನಡಿಯಂತೆ ಥಳಥಳಿಸುವ ಕಪೋಲಗಳು, ಹವಳದ ಬಣ್ಣದ ತುಂಬು ತುಟಿಗಳು, ಮಿಂಚಿನ ಮರಿಗಳೆರಡನ್ನು ನೀರಿನಲ್ಲಿ ಸೆರೆಯಿಟ್ಟಂತೆ ಥಳಥಳಿಸುವ ಕಣ್ಣುಗಳು, ಆ ಕಣ್ಣು ತುಟಿಗಳ ಮಧ್ಯೆ ಸೌಂದರ್ಯ ಸೇತುವಿನಂತೆ ರಂಜಿಸುವ ಎಸಳಾದ ನಾಸಿಕ" ಶಾಂತಲೆಗಿದ್ದುವಂತೆ.

ನಿಸರ್ಗ ವರ್ಣನೆ —

೧) ಸೂರ್ಯೋದಯದ ದೃಶ್ಯ – ಇರುಳ ಜೇಟದಿಂದ ಬಳಲಿ, ಮುಂಜಾವಿನ ಚಳಿಗಾಳಿಗೆ ಮೈದೆರೆಯಲಾಸೆಯಿಲ್ಲದೆ, ಹರಿತ ಶ್ಯಾಮಲ ವರ್ಣದ ಉಣ್ಣೆ ಹೊದಿಕೆಯಲ್ಲಿ ಮಲಗಿದ ಸಹ್ಯಾದ್ರಿ ವನಲಕ್ಷ್ಮಿಯನ್ನು, ಆಕೆಯ ಸುತ್ತಲೂ ಕವಿದ ಹೇಮಂತ ಋತುವಿನ ದಟ್ಟವಾದ ಮಂಜಿನ ಬಿಳಿದೆರೆಯನ್ನು ಓಸರಿಸಿ, ಸುವರ್ಣಾರುಣ ವರ್ಣೋಜ್ವಲ ಕಿರಣಾಂಗುಲಿಯಿಂದ ನೇವರಿಸಿ ಎಚ್ಚರಿಸಿದನು – ಸೂರ್ಯನಾರಾಯಣ.

ಅರೆನಿದ್ದೆಯಲ್ಲಿ ಪ್ರಿಯತಮನ ಕರೆ ಕೇಳಿ ಪುಲಕಿತ ಗಾತ್ರಳಾದ ನಲ್ಲೆಯಂತಾಯಿತು, ಪ್ರಭಾತ ಸಮಯದ ತಂಗಾಳಿ ಸೂಸಿದ ಬನವಾಸಿಯ ಬನ.

ನಿದ್ರಾಮಗ್ನ ಪ್ರೇಯಸಿಯನ್ನು "ಹಗಲಾಯಿತು ಏಳು" ಎಂದು ಪ್ರೇಮ ಮಧುರವಾಗಿ ಕರೆವ ಇನಿಯನ ಕೋಮಲ ಕಂಠದಂತೆ "ಕುಹೂ–ಕುಹೂ" ಎಂದು ಕುಕಿಲಿತು ಮಾವಿನ ಮರದ ಹಸಿರು ಗೋಪುರದಲ್ಲಿ ಕುಳಿತ ಕೋಗಿಲೆಯ ಕಲ ಕಂಠ.

ಸೂರ್ಯೋದಯದ ಮಂಗಲ ವಾರ್ತೆಯನ್ನು ಲೋಕಕ್ಕೆ ಸಾರುವ ಪ್ರಭಾತ ವಾದ್ಯರವದಂತೆ, ಉದಯ ರಾಗವನ್ನು ಹಾಡುವ ಗಾಯಕರಂತೆ, ನುಡಿವ ಕೋಟ್ಯಂತರ ಹಕ್ಕಿಗಳ ಉಲಿಯನ್ನು ಕೇಳಿ, ಕಣ್ತೆರೆದಳು ವಿಪಿನ ಶ್ರೀರಮಣಿ" (ಸಿಡಿಲ ಮೊಗ್ಗು).

ಗ್ರಂಥ ಋಣ

೧) ಕನ್ನಡ ಸಾಹಿತ್ಯದ ಇತಿಹಾಸ – ಡಾ. ರಂ. ಶ್ರೀ. ಮುಗಳಿ ೨) ಯುಗ-ಧರ್ಮ ಹಾಗೂ ಸಾಹಿತ್ಯ ದರ್ಶನ – ಶ್ರೀ ಕೀರ್ತಿನಾಥ ಕುರ್ತಕೋಟಿ ೩) "ಚಿನ್ನದ ಗರಿ" – ಕನ್ನಡ ಕಾದಂಬರಿಗಳಲ್ಲಿ ಇತಿಹಾಸ – ಶ್ರೀ ಕೊರಟಿ ಶ್ರೀನಿವಾಸ ರಾವ್ ೪) "ಸಲ್ಲಾಪ" – ತ.ರಾ.ಸು. ಅರ್ಥವಾದಿ – ಡಾ. ಹಾ. ಮಾ. ನಾಯಕ.

ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳು

೧) ನೃಪತುಂಗ ೨) ಶಿಲ್ಪಶ್ರೀ ೩) ಸಿಡಿಲ ಮೊಗ್ಗು ೪) ಕೀರ್ತಿ ನಾರಾಯಣ ೫) ಕಂಬನಿಯ ಕುಯಿಲು ೬) ರಾಜ್ಯದಾಹ ೭) ರಕ್ತ ರಾತ್ರಿ ೮) ತಿರುಗು ಬಾಣ ೯) ಹೊಸ ಹಗಲು ೧೦) ವಿಜಯೋತ್ಸವ ಭಾಗ-೧ ಮತ್ತು ೨. ೧೧) ಕಸ್ತೂರಿ ಕಂಕಣ ಭಾಗ ೧-೨. ೧೨) ಹಂಸಗೀತೆ.

ಮೂರು ಐತಿಹಾಸಿಕ ಕಾದಂಬರಿಗಳು

— ಶಂ. ಗು. ಬಿರಾದಾರ

ಕೆಲವು ದಶಮಾನಗಳ ಹಿಂದೆ ಕಾದಂಬರಿಗಳಿಗೊಂದು ಸುವರ್ಣಕಾಲ. [illegible] ಪುಟ್ಟಪ್ಪ, ಅ. ನ. ಕೃ., ತ. ರಾ. ಸು., ಕೃಷ್ಣಮೂರ್ತಿ ಪುರಾಣಿಕ, ಶಿವರಾಮ ಕಾರಂತ, ಬಸವರಾಜ ಕಟ್ಟೀಮನಿ, ನಿರಂಜನ, ಬೀಚಿ, ಶ್ರೀಮತಿಯರಾದ ತ್ರಿವೇಣಿ, ಎಂ. ಕೆ. ಇಂದಿರಾ ಮೊದಲಾದ ಖ್ಯಾತ ಕಾದಂಬರಿಕಾರರು ತಮ್ಮ ಕಾದಂಬರಿಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು. ಈ ಸಮೃದ್ಧ ಕೃಷಿಯಲ್ಲಿ ಸಾಮಾಜಿಕ ಕಾದಂಬರಿಗಳೇ ಅಧಿಕ ಸಂಖ್ಯೆಯಲ್ಲಿ ಹೊರ ಬಂದವು. ತಮ್ಮ ಶಕ್ತಿಯುತ ಬರವಣಿಗೆಯಿಂದ ಓದುಗರನ್ನು ಆಕರ್ಷಿಸಿದ ತ.ರಾ.ಸು. ಅವರು ಸಾಮಾಜಿಕ ಕಾದಂಬರಿಗಳೊಂದಿಗೆ ಐತಿಹಾಸಿಕ ಕಾದಂಬರಿಗಳನ್ನು ನೀಡಿ ಸಾಹಿತ್ಯ ಕ್ಷೇತ್ರವನ್ನು ಸಂತುಷ್ಟಗೊಳಿಸಿದರು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದವುಗಳೇ ಅಧಿಕ. ಅವರ ಸಮಗ್ರ ಕಾದಂಬರಿಗಳ ಬಗೆಗೆ ಸಮೀಕ್ಷಿಸದೆ ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗು ಬಾಣ (ಭಾಗ–೧, ಭಾಗ–೨) ಈ ಮೂರು ಕತೆಗಳ ಸಾಮಾನ್ಯ ಪರಿಚಯವನ್ನು ಮಾಡಿಕೊಡುವ ಸಾಹಸ ಮಾಡಿದ್ದೇನೆ.

ಸುಮಾರು ಮೂರು ನೂರು ವರ್ಷಗಳಾಚೆ ಚಿತ್ರದುರ್ಗದ ಪಾಳೆಯಗಾರ ಮದಕರಿನಾಯಕರ ನಿಧನದ ನಂತರ ಸಿಂಹಾಸನಕ್ಕಾಗಿ ನಡೆದ ಜಗಳದ ದಾರುಣಕತೆ –ಕಂಬನಿಯ ಕುಯಿಲು. ಮದಕರಿನಾಯಕರ ತಮ್ಮನಾದ ಅಣ್ಣನ ಮಕ್ಕಳಾದ ಲಿಂಗಣ್ಣ ನಾಯಕರು ಹಾಗೂ ಚಿಕ್ಕನಾಯಕರಿಗೆ ನ್ಯಾಯವಾಗಿ ಪಟ್ಟ ಸಲ್ಲಬೇಕೆಂದು ಸೇನೆಯ ಮುಖ್ಯಸ್ಥರಾದ ದಳವಾಯಿ ದೇವಣ್ಣ. ಮುದ್ದಣ್ಣರು ವಾದಿಸಿದರೆ ಗತಿಸಿದ ರಾಜರ ಇಚ್ಛೆಯಂತೆ ಕಿರಿಯ ರಾಣಿ ಗೌರವ್ವನಾಗತಿಯ ತಮ್ಮ ಓಬಣ್ಣನಾಯಕನನ್ನೇ ಪಟ್ಟಕ್ಕೆ ತರಬೇಕೆಂದು ಓಬವ್ವನಾಗತಿ, ಭರಮಪ್ಪನವರು ಮಂತ್ರಾಲೋಚನೆ ನಡೆಸಿ ಅದನ್ನು ಸಾಧಿಸಿದರಾದರೂ ರಕ್ತಪಿಪಾಸುವಾದ ದಳವಾಯಿ ಮುದ್ದಣ್ಣನ ಕುತಂತ್ರದ ಮುಂದೆ ಅವರ ಮುತ್ಸದ್ದಿತನ ಮಣ್ಣುಪಾಲಾಗುತ್ತದೆ. ಓಬಣ್ಣನ ಕೊಲೆಯಿಂದಾಗಿ ಚಿತ್ರದುರ್ಗದ ಕೋಟೆಯಲ್ಲಿ ರಕ್ತದ ಕೋಡಿ ಹರಿಯುತ್ತದೆ. ಈ ಜಗಳದಲ್ಲಿ ಪ್ರೀತಿಯ ಆಗರವಾಗಿದ್ದ ಮನೆತನವೊಂದು ಛಿದ್ರವಾಗುತ್ತದೆ. ಅರಸನ ಅಂಗರಕ್ಷಕನಾಗಿದ್ದ ಕಸ್ತೂರಿ ನಾಯಕ, ಸೇನೆಯಲ್ಲಿ ಸರದಾರನಾಗಿದ್ದ ತಮ್ಮ ಹಿರಣ್ಣನಾಯಕರಲ್ಲಿ ವಿರಸವುಂಟಾಗಿ ಸೋದರ [illegible] ವ್ಯರ್ಥವಾದಂತಾದೆ. ಹಿರಣ್ಣನಿಗೆ ಬುದ್ಧಿ ಬರುವುದಿಲ್ಲ. ಅಣ್ಣನ [illegible] ಕಸ್ತೂರಿ ಕಂಡ ಕಂಬನಿಯ ಕುಯಿಲಿಗೆ [illegible]ತ್ತದೆ.

[illegible] ನಾಡಿನ ಐತಿಹಾಸಿಕ ಘಟನೆಯನ್ನೇ ಸುಸಂಬದ್ಧವಾಗಿ ವಿಸ್ತರಿಸಿ ಸತ್ಯಕ್ಕೆ ಅಪಚಾರವಾಗದಂತೆ ಪಾತ್ರಗಳನ್ನು ಸಂಯೋಜಿಸಿ ಕಲ್ಪನೆಯ

ಸುಳುಹು ಹೊಳಹುಗಳಿಂದ ರೋಚಕಗೊಳಿಸಿ, ಓದುಗರನ್ನು ಅಂದಿನ ಐತಿಹಾಸಿಕ ಪರಿಸರಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ ಲೇಖಕರು.

ಮದಕರಿ ನಾಯಕರ ಮರಣದ ನಂತರ ಅವರ ಅಣ್ಣನ ಹಿರಿಯ ಮಗನಾದ ಲಿಂಗಣ್ಣ ನಾಯಕನು ಪಟ್ಟಕ್ಕೆ ಬರಬೇಕಾದುದು ನ್ಯಾಯ ಸಮ್ಮತವಾದ ಮಾತೆಂದು ಬಹು ಜನರ ನಂಬಿಕೆ. ಯಾಕೆಂದರೆ ಮೂರನೆಯ ಮಗನಾದ ಮದಕರಿನಾಯಕನು ಔರಸಪುತ್ರ ಸರ್ಜಾರಂಗನ ಹಿರಿಯ ಮಗ ಲಿಂಗಣ್ಣ ನಾಯಕನನ್ನು ಬದಿಗೊತ್ತಿ ಪಟ್ಟಕ್ಕೆ ಬಂದಾಗಲೇ ಜನರಲ್ಲಿ ಅಸಂತೋಷವುಂಟಾಗಿತ್ತು. ಆದರೆ ಆ ಪರಿಸ್ಥಿತಿಯಲ್ಲಿ ಶತೃಗಳಿಂದ ದುರ್ಗವನ್ನು ರಕ್ಷಿಸುವಲ್ಲಿ ಚಿಕ್ಕವನಾದ ಲಿಂಗಣ್ಣ ನಾಯಕರಿಗಿಂತಲೂ ಮದಕರಿನಾಯಕರೇ ಯೋಗ್ಯನೆಂಬ ಭಾವನೆಯಿಂದ ಜನರು ಸಮ್ಮತಿ ಸೂಚಿಸಿದ್ದರು. ಆದರೆ ಮದಕರಿನಾಯಕರು ಮಕ್ಕಳಿಲ್ಲದೆ ಮರಣವನ್ನಪ್ಪಿದಾಗ ಮತ್ತೆ ಸಿಂಹಾಸನದ ಸಮಸ್ಯೆ ತಲೆ ಎತ್ತಿತು.

ಪಟ್ಟದ ವಿಷಯದಲ್ಲಿ ಮದಕರಿ ನಾಯಕರು ಯಾವ ವ್ಯವಸ್ಥೆ ಮಾಡಿರದಿದ್ದರೂ, ಅವರ ಮನಸ್ಸಿನಲ್ಲೇನಿತ್ತೆಂಬುದನ್ನು ಕಿರಿಯರಾಣಿ ಗೌರವ್ವನಾಗತಿ ಮಾತ್ರ ಬಲ್ಲವಳಾಗಿದ್ದಳು. ಆದರೆ ಅದನ್ನವಳು ಆಡುವಂತಿರಲಿಲ್ಲ. ತನ್ನ ಸೋದರನ ಮಗ ಓಬಣ್ಣ ನಾಯಕನಿಗೆ ಪಟ್ಟವಾಗಬೇಕೆಂದು ಆಕೆ ಹಟ ಹಿಡಿದಿದ್ದರೆ ಅದು ಸ್ವಾರ್ಥಸಾಧನೆಯ ಮಾತೆಂದು ಜನ ಆಡಿಕೊಳ್ಳುವಂತಾಗುತ್ತಿತ್ತು. ಅದನ್ನರಿತೇ ಆಕೆ ದುರ್ಗದ ಹಿರಿಯನಾದ, ಹಿತಚಿಂತಕನಾದ ಭುವನಪ್ಪನನ್ನು ಬರಮಾಡಿಕೊಂಡು ಮದಕರಿನಾಯಕರ ಮನೋಗತವನ್ನು ಅರುಹಿದಳು. ರಾಜಸೇವಾಸಕ್ತರಾದ ಭುವನಪ್ಪನವರು ಮದಕರಿನಾಯಕರ ಆಶೆಯನ್ನು ಈಡೇರಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಹಿರಿಯ ರಾಣಿ ಓಬವ್ವನಾಗತಿಯಿಂದ ಇದು ಸಾಧ್ಯವೆಂದು ಬಗೆದ ಅವರು ಅವಳ ಮನವೊಲಿಸುವಲ್ಲಿ ಯಶಸ್ವಿಯಾದರು. ಓಬಣ್ಣ ನಾಯಕರನ್ನು ಪಟ್ಟಕ್ಕೆ ತರುವಲ್ಲಿ ಭುವನಪ್ಪ ನಾಯಕರಲ್ಲಿ ಇನ್ನೂ ಒಂದು ಕಾರಣವಿತ್ತು. ಲಿಂಗಣ್ಣ ನಾಯಕರು ಪಟ್ಟಕ್ಕೆ ಬಂದರೆ ನಾಡಿನ ಮುಖ್ಯಸ್ಥರಾದ ದಳವಾಯಿ ದೇಸಣ್ಣ–ಮುದ್ದಣ್ಣನ ಕೈ ಮೇಲಾಗುವುದೆಂಬ ಭಾವನೆ ಬಲವಾಗಿತ್ತು. ಇದನ್ನರಿತೇ ಭುವನಪ್ಪನಾಯಕರು ಓಬಣ್ಣನಾಯಕರನ್ನು ಪಟ್ಟಕ್ಕೆ ತರುವ ಪ್ರಯತ್ನದಲ್ಲಿ ತೊಡಗಿ ಸಫಲರಾದರು. ಹಿರಿಯರಾಣಿ ಓಬವ್ವನಾಗತಿಯೆಂಬಾಕೆ ಜನರಿಗೆ ಎಲ್ಲಿಲ್ಲದ ಭಕ್ತಿ-ಗೌರವ. ಅಷ್ಟೊಂದು ದೊಡ್ಡ ಹೃದಯ ಅವರದು. ಅಂತೆಯೇ ಲಿಂಗಣ್ಣನಾಯಕನು ಆ ತಾಯಿಯ ಬಯಕೆಯಂತೆ ರಾಜ್ಯ ತ್ಯಾಗ ಮಾಡಲು ಮುಂದಾದನು. ಇದು ಬಹುಜನರಿಗೆ ಸಮ್ಮತವೆನಿಸಿದರೂ ದಳವಾಯಿ ಮುದ್ದಣ್ಣನ ಹೃದಯದಲ್ಲಿ ಜ್ವಾಲೆಯನ್ನು ಹೊತ್ತಿಸಿತು. ತನ್ನ ಕಾರ್ಯ ಸಾಧನೆಗೆ ಅಡ್ಡ ಬಂದ ದಳವಾಯಿ ದೇಸಣ್ಣನ ತಲೆಹಾರಿಸಿದ. ಗುಪ್ತನಾಗಿದ್ದುಕೊಂಡೇ ಕುತಂತ್ರದಿಂದ ಓಬವ್ವನಾಗತಿಯ ಮನವೊಲಿಸಿ ಓಲಗ ನೆರೆಯಿಸಲು ಒಪ್ಪಿಸಿದ. ಸದಾ ಒಳಿತನ್ನೇ ಕಾಣುವ ದೃಷ್ಟಿಯುಳ್ಳ ರಾಣಿ ಓಬವ್ವ

ನಾಗತಿಯ ಸಾತ್ವಿಕತೆಯ ಸದುಪಯೋಗಪಡಿಸಿಕೊಂಡು ಹಿಲಗನಲ್ಲಿಯೇ ಯುವ ರಾಜ ಓಬಣ್ಣ ನಾಯಕನ ಕೊಲೆಮಾಡಿ ರಕ್ತದಕೋಡಿ ಹರಿಸಿ, ಚಿಕ್ಕಣ್ಣ ನಾಯಕನಿಗೆ ಪಟ್ಟ ಕಟ್ಟಿ ತನ್ನ ಸರ್ವಾಧಿಕಾರವನ್ನು ಮೆರೆಯಿಸಿದ ಕಥೆಯನ್ನು ಅತ್ಯಂತ ಕುತೂಹಲ ಕಾರಿಯಾಗಿ ಚಿತ್ರಿಸಿದ್ದಾರೆ.

ಈ ಕಾದಂಬರಿಯಲ್ಲಿಯ ಪ್ರತಿಯೊಂದು ಘಟನೆಯೂ ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿದೆ. ಮದಕರಿ ನಾಯಕನ ಸಾವಿನ ಶೋಕದ ಸನ್ನಿವೇಶ, ಗೌರವ್ವನಾಗತಿಯ ದುಃಖದ ಜೊತೆಗೆ ಭವಿಷ್ಯ ಚಿಂತನೆಯ ದೂರಾಲೋಚನೆ, ಭುವನಪ್ಪ ನಾಯಕರ ಮಂತ್ರಾಲೋಚನೆ, ಓಬವ್ವನಾಗತಿಯ ಸಾತ್ವಿಕ ರೀತಿಯ ಕಾರ್ಯಸಾಧನೆ, ಲಿಂಗಣ್ಣ ನಾಯಕರ ತ್ಯಾಗದ ಹಿರಿಮೆ, ದೇಸಣ್ಣ ನಾಯಕರ ರಾಜಭಕ್ತಿ, ಮುದ್ದಣ್ಣ ನಾಯಕರ ಕುಟಿಲ ಹಿಂಸಾತ್ಮಕ ಕಾರಸ್ಥಾನ, ಕಸ್ತೂರಿ ನಾಯಕರ (ಸ್ವಾಮಿನಿಷ್ಠೆ) ರಾಜನಿಷ್ಠೆ, ಗಿರಿಜೆಯ ಕರ್ತವ್ಯ ಪ್ರಜ್ಞೆ, ವೀರಣ್ಣನ ಅಧಿಕಾರ ಮೋಹ... ಎಲ್ಲವೂ ಪರಿಣಾಮ ಕಾರಿಯಾಗಿ ಚಿತ್ರಿಸಲ್ಪಟ್ಟಿದೆ. ಪ್ರತಿಯೊಂದು ಪಾತ್ರವೂ ತನ್ನದೇ ಆದ ವ್ಯಕ್ತಿತ್ವದಿಂದ ಓದುಗರ ಹೃದಯವನ್ನು ಸೆರೆಹಿಡಿಯುತ್ತದೆ.

ಹಿರಿಯ ನಾಗತಿ, ಕಿರಿಯ ನಾಗತಿಯರ ಮಾತು ರೀತಿ ನೀತಿಗಳನ್ನರಿತಾಗ ಅವರಲ್ಲಿ ಗೌರವಾದರಗಳು ತಾನಾಗಿಯೇ ಉದಿಸುತ್ತವೆ.

"ಆಕೆಯಂ ಮಾತು ಗಡುಸೇ ವಿನಾ, ಚಿತ್ತ ಕನ್ನಡಿಯಷ್ಟು ನಿರ್ಮಲ" ಎಂದು ಗೌರವ್ವನಾಗತಿಯ ಕುರಿತು ಓಬವ್ವನಾಗತಿ ಹೇಳಿದ ಮಾತನ್ನು ಸ್ಮರಿಸಿಕೊಂಡಾಗ ಗೌರವ್ವನಾಗತಿಯ ಹಿರಿಮೆಯ ಅರಿವಾಗುತ್ತದೆ.

"ಅಕ್ಕ ನೀನು ಈ ಲೋಕದ ಹೆಣ್ಣಲ್ಲ, ದೇವತಾ ಸ್ತ್ರೀ" ಗೌರವ್ವನಾಗತಿ ಮಾಡಿದ ಮಾತು ಓಬವ್ವನಾಗತಿಯ ವ್ಯಕ್ತಿತ್ವವನ್ನು ಚೆನ್ನಾಗಿ ಬಿಂಬಿಸುತ್ತದೆ. ಸಾತ್ವಿಕತೆ ಪ್ರಜಾವಾತ್ಸಲ್ಯ, ಅಹಿಂಸೆಯಲ್ಲಿರುವ ಅಚಲ ಶ್ರದ್ಧೆಗಳಿಂದಾಗಿ ಸಕಲರಿಗೂ ಪೂಜ್ಯಳು. ಆದರೇನು ? ಮುದ್ದಣ್ಣನಂತಹ ಪೈಶಾಚಿಕ ವ್ಯಕ್ತಿಯ ಹಿಂಸಾಪ್ರಿಯ ವ್ಯಕ್ತಿಯ ಕುತಂತ್ರದಿಂದಾಗಿ ನೊಂದು ಮರಣವನ್ನಪ್ಪಬೇಕಾಗಿ ಬಂದ ಸನ್ನಿವೇಶ ಎಲ್ಲರ ಮನ ಕಲಕುವಂತಹದು. ರಾಣಿಗೆ ಒಪ್ಪುವ ಘನತೆ ಗೌರವಗಳನ್ನು ಪ್ರತಿಮಾತಿನಲ್ಲಿಯೂ ಕಾಣುತ್ತೇವೆ. ನಾಗತಿಯ ಘನವ್ಯಕ್ತಿತ್ವ ಎದ್ದು ಕಾಣುವಂತೆ ಚಿತ್ರಿಸಲಾಗಿದೆ.

ಭುವನಪ್ಪನವರು ಪ್ರಧಾನ ಅಮಾತ್ಯರಾಗದೆ ಇದ್ದರೂ ಅವರು ದುರ್ಗದ ಸಕಲರಿಗೂ ಆದರಣೀಯರು. ಅವರ ಕಳಂಕರಹಿತ ಜೀವನ, ಅಪಾರ ರಾಜನಿಷ್ಠೆ, ನಿಸ್ವಾರ್ಥ ಸೇವೆಗಳಿಂದಾಗಿ ಎಲ್ಲರ ಗೌರವಾದರಗಳಿಗೆ ಪಾತ್ರರಾದವರು. ಅಳಿದ ನಾಯಕರ ಆಸೆಯನ್ನು ನೆರವೇರಿಸುವುದಕ್ಕಾಗಿ ಇವರು ಓಬಣ್ಣ ನಾಯಕರನ್ನು ಪಟ್ಟಕ್ಕೆ ತರುವ ಯತ್ನದಲ್ಲಿ ಸಫಲರಾಗುತ್ತಾರೆ. ಆದರೆ ಇವರು ಅತಿ ರಾಜನಿಷ್ಠೆಗೆ ಒಳಗಾಗುತ್ತಾರಲ್ಲದೆ ರಾಜ್ಯದ ಪ್ರತಿಷ್ಠೆಗೆ ಬದ್ಧರಾದಂತೆ ಕಾಣುವುದಿಲ್ಲ. ಲಿಂಗಣ್ಣ ನಾಯಕನಿಗೆ ಪಟ್ಟ ಸಲ್ಲ

ಬೇಕೆಂಬ ಮಾತು ನ್ಯಾಯಸಮ್ಮತವಾಗಿತ್ತು. ಅದಕ್ಕೆ ತಕ್ಕಂತೆ ಲಿಂಗಣ್ಣ ನಾಯಕರೂ ಶೂರ, ಧೀರ, ತ್ಯಾಗವೀರ, ಅಂಥವನನ್ನೆ ಪಟ್ಟಕ್ಕೆ ಕೂಡ್ರಿಸಿದರೆ ರಾಜ್ಯದ ಘನತೆ ಹೆಚ್ಚಬಹುದಾಗಿತ್ತು. ಅದನ್ನುಳಿದು, ಏನೂ ಅರಿಯದ ಮುಗ್ಧಜೀವಿ ಓಬಣ್ಣ ನಾಯಕನನ್ನು ಪಟ್ಟಕ್ಕೆ ತರುವಲ್ಲಿ ನೆರವಾದುದು ಮುಂದಣ ದುರಂತಕ್ಕೆ ಆಹ್ವಾನ ನೀಡಿದಂತಾಯ್ತು. ಲಿಂಗಣ್ಣ ನಾಯಕರು ಪಟ್ಟಕ್ಕೆ ಬಂದರೆ ದಳವಾಯಿಗಳ ಕೈ ಮೇಲಾಗುವುದೆಂಬ ಶಂಕೆ ಇವರಿಗೆ ಬಲವಾಗಿರಬೇಕು, ಅಂತೆಯೆ ಲಿಂಗಣ್ಣ ನಾಯಕರಿಂದ ಮಾತು ತೆಗೆದುಕೊಂಡು ತಮ್ಮ ಮಾರ್ಗವನ್ನು ನಿರಾತಂಕಗೊಳಿಸಿಕೊಳ್ಳಲು ಯತ್ನಿಸಿದ್ದಾರೆ. ಆದರೇನು ? ಆತಂಕ ಅವಿತುಕೊಂಡು ಇವರ ಕತ್ತು ಹಿಚುಕುತ್ತಿದೆ. ಭುವನಪ್ಪನವರು ಕೊನೆಯವರೆಗೆ ರಾಜನಿಷ್ಠರಾಗಿಯೇ ಹೋರಾಡಿ ಪ್ರಾಣ ನೀಗುತ್ತಾರೆ. ಅವರ ಕೊನೆ ಅತ್ಯಂತ ಕರುಣಾಮಯವಾಯಿತು.

ದೇಸಣ್ಣ-ಮುದ್ದಣ್ಣರು ಸೇನೆಯ ಮುಖ್ಯಸ್ಥರು. ಇಬ್ಬರ ಗುರಿ ಓಂದೇ ಆದರೂ ದಾರಿಮಾತ್ರ ಬೇರೆ ಬೇರೆ. ಲಿಂಗಣ್ಣ ನಾಯಕನನ್ನು ಪಟ್ಟಕ್ಕೆ ತರುವಲ್ಲಿ ಇಬ್ಬರದೂ ಒಂದೇ ಅಭಿಪ್ರಾಯ. ಆದರೆ ಹಿಂಸೆಯ ಮಾರ್ಗ ದೇಸಣ್ಣನಿಗೆ ಸಲ್ಲದು. ಲಿಂಗಣ್ಣ ನಾಯಕನೇ ತನ್ನ ಪಟ್ಟವನ್ನು ಓಬಣ್ಣ ನಾಯಕನಿಗೆ ಒಪ್ಪಿಸಿದ ಮೇಲೆ ನಾನೇಕೆ ಆ ಬಗ್ಗೆ ಯೋಚಿಸಬೇಕು ? ದಳವಾಯಿಗಳನ್ನು ಗೌರವದಿಂದ ಕಂಡರೆ ಸಾಕು. ರಾಜನಿಷ್ಠರಾಗಿಯೇ ನಾವು ಬಾಳಬೇಕು ಎಂಬ ವಿಚಾರ ದೇಸಣ್ಣನದು. ಅವನ ಈ ನಿಷ್ಠೆಯೇ ಮಾರಕವಾಗಿ ಪರಿಣಮಿಸುತ್ತದೆ.

ಆದರೆ ಮುದ್ದಣ್ಣನ ವಿಚಾರ ಬೇರೆ. ಎಲ್ಲರ ತಲೆಗಳು ಉರುಳಿದರೂ ಚಿಂತೆಯಿಲ್ಲ. ಲಿಂಗಣ್ಣ ನಾಯಕನನ್ನು ಇಲ್ಲವೆ ಅವನ ಸೋದರ ಚಿಕ್ಕಣ್ಣ ನಾಯಕನನ್ನು ಪಟ್ಟಕ್ಕೆ ತರಲೇಬೇಕು ಎಂಬ ಛಲ ಅವನದು. ಇಲ್ಲಿ ಲಿಂಗಣ್ಣ ನಾಯಕನನ್ನು ಪಟ್ಟಕ್ಕೆ ತರುವದು ನ್ಯಾಯಸಮ್ಮತವೆನ್ನುವ ವಿಚಾರಕ್ಕಿಂತ ಸೇನೆಯ ಸರ್ವಾಧಿಕಾರತ್ವವನ್ನು ಸ್ಥಾಪಿಸಿ ತನ್ನ ರಾಕ್ಷಸೀಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವುದು ಮುಖ್ಯ ಉದ್ದೇಶವಾಗಿತ್ತು. ಅವನ ಕ್ರೂರತೆಯ ಕರಾಳ ವ್ಯಕ್ತಿತ್ವವನ್ನು ಅತ್ಯಂತ ಪರಿಣಾಮ-ಕಾರಿಯಾಗಿ ಚಿತ್ರಿಸಲಾಗಿದೆ.

ಹೆತ್ತ ತಾಯಿಗಿಂತಲೂ ಅಧಿಕ ವಾತ್ಸಲ್ಯ ತೋರುತ್ತಿದ್ದ ರಾಣಿ ಓಬವ್ವನಾಗತಿಯ ಆಸೆಯನ್ನು ನೆರವೇರಿಸಿಕೊಡುವಲ್ಲಿ ತನ್ನ ಸಿಂಹಾಸನವನ್ನೇ ತ್ಯಾಗಮಾಡಿದ ಲಿಂಗಣ್ಣನ ಮಾತೃಪ್ರೇಮ ಅಸಾಮಾನ್ಯ. ಅವನ ಶರೀರ ಸೌಷ್ಠವ, ಗಂಡೆದೆ, ವೀರತ್ವ ಇವೆಲ್ಲವು-ಗಳಿಗಿಂತ ಮಿಗಿಲಾದ ತ್ಯಾಗ ಓದುಗರ ಹೃದಯವನ್ನು ಸೂರೆಗೊಳ್ಳುತ್ತವೆ.

ಕಸ್ತೂರಿ ನಾಯಕ ವೀರಣ್ಣರು ಅತ್ಯಂತ ಪ್ರೀತಿಯ ಸೋದರರು. ಆದರೆ ಅವರ ಆಶೋತ್ತರಗಳಿಂದಾಗಿ ಈರ್ವರೂ ವಿಮುಖರಾಗುತ್ತಾರೆ. ಅರಸರ ಅಂಗರಕ್ಷನಾಗಿದ್ದ ಕಸ್ತೂರಿ ನಾಯಕ ಆ ಕಾರ್ಯವನ್ನು ದಕ್ಷತೆಯಿಂದ ಮಾಡಿದನಾದರೂ

ಓಬಣ್ಣ ನಾಯಕರನ್ನು ಉಳಿಸಿಕೊಳ್ಳುವಲ್ಲಿ ಸಮರ್ಥನಾಗಲಿಲ್ಲ. ಆ ತಪ್ಪಿಗಾಗಿ ತನ್ನ ಖಡ್ಗದಿಂದ ಇರಿದುಕೊಂಡು ಸ್ವಾಮಿನಿಷ್ಠೆಯನ್ನು ತೋರುತ್ತಾನೆ.

ವೀರಣ್ಣ ದಂಡಿನ ಸೇನಾಧಿಪತ್ಯದ ಆಸೆಯಿಂದಾಗಿ ದುಷ್ಟಣ್ಣನ ಕುಟಿಲಕಾರ-ಸ್ಥಾನದಲ್ಲಿ ಪಾಲುಗೊಳ್ಳುತ್ತಾನೆ. ಅದಕ್ಕಾಗಿ ತನ್ನ ಧರ್ಮಪತ್ನಿ ಗೌರವ್ವಳ ಹಿತೋಪ-ದೇಶವನ್ನು ಕಡೆಗಣಿಸುತ್ತಾನೆ. ದುಷ್ಟಣ್ಣನ ದುಷ್ಕೃತ್ಯ ಗೊತ್ತಾಗುವಷ್ಟರಲ್ಲಿ ಕಾಲ ಮಿಂಚಿರುತ್ತದೆ, ಪ್ರೀತಿ–ವಾತ್ಸಲ್ಯಗಳ ಆಗರವಾಗಿದ್ದ ಮನೆ ನೆಲಸಮವಾಗು-ತ್ತದೆ. ಕಸ್ತೂರಿ ನಾಯಕ, ವೀರಣ್ಣರ ಸೋದರ ವಾತ್ಸಲ್ಯ, ಅತ್ತಿಗೆ ಗಂಗಮ್ಮನು ವೀರಣ್ಣನ ಬಗೆಗೆ ತೋರುವ ಮಮತೆ ಸುಂದರ ಸಾಗರದಲ್ಲಿ ಬೀಸಿದ ವಿರಸದ ಹೊಗೆ, ಬಿರಿದ ಕುಬಸ ಕಾದಂಬರಿಗೆ ಕಳೆ ತಂದಿದೆ. ಗೌರವ್ವ ವೀರಣ್ಣನನ್ನು ಮನಸಾರೆ ಪ್ರೀತಿಸುತ್ತಿದ್ದಳಾದರೂ ರಾಜನಿವಾಸದ ಗೌಪ್ಯವನ್ನು ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗುತ್ತಾಳೆ. ಒಂದೆಡೆ ಸತಿಯಾಗಲಿರುವ ಪ್ರೀತಿಯ ಮನದನ್ನ ವೀರಣ್ಣ ಇನ್ನೊಂದೆಡೆ ತಾಯಿಗಿಂತಲೂ ಮಿಗಿಲಾದ ಹೃದಯಮಂದಿರದ ದೇವತೆ ಓಬವ್ವ ಇಂತಹ ದಾರುಣ ಪ್ರಸಂಗದಲ್ಲಿಯೂ ಗೌರವ್ವ ತನ್ನ ಕರ್ತವ್ಯ ಪ್ರಜ್ಞೆಯನ್ನು ಉಳಿಸಿ ಕೊಳ್ಳುತ್ತಾಳೆ. ಓಬವ್ವನಾಗತಿಗಾಗಿ ಎಂಥ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಈಕೆಯ ಬಗೆಗೆ ಓದುಗರಲ್ಲಿ ಅನುಕಂಪವುಂಟಾಗುತ್ತದೆ.

ಇಲ್ಲಿ ಬರುವ ಪಾತ್ರಗಳೆಲ್ಲಾ ಸಜೀವವಾಗಿವೆ. ಅವರವರ ಧೋರಣೆಗೆ ಅನುಗುಣವಾಗಿವೆ. ಇದರ ಹಿನ್ನೆಲೆಯಲ್ಲಿ ಆ ಕಾಲದ ಸಂಸ್ಕೃತಿ–ಸಂಸ್ಕಾರಗಳು ವ್ಯಕ್ತವಾಗುತ್ತವೆ. ರಾಜಕೀಯದ ಹಿನ್ನೆಲೆಯಲ್ಲಿ ಸಾಮಾಜಿಕ ಜೀವನದಲ್ಲಿ ಕಾಣುವ ಸ್ವಾಮಿನಿಷ್ಠೆ, ಕರ್ತವ್ಯ ಪ್ರಜ್ಞೆ, ತ್ಯಾಗ–ಗೌರವಾದರಗಳು ಎದ್ದುಕಾಣುತ್ತವೆ. ಶೈಲಿಯಲ್ಲಿ ಸಂಭಾಷಣೆಗೆ ಪ್ರಾಧಾನ್ಯವಿದೆ. ವ್ಯಕ್ತಿಗಳ ಮನೋಗತವನ್ನು ಅವರ ಮಾತುಗಳಿಂದ ಅರಿತುಕೊಳ್ಳುತ್ತೇವೆ. ಸೊಗಸಾದ ಸಂಭಾಷಣೆಯಿಂದ ಕಥೆಗೆ ಕಳೆ ಕಟ್ಟಿದೆ. ಭಾಷೆ–ನೇರ ಹಾಗೂ ಸರಳ. ಅಂದಿನ ಐತಿಹಾಸಿಕ ಪರಂಪರೆಯನ್ನು ಚೆನ್ನಾಗಿ ಬಿಂಬಿಸಲು ಸಮರ್ಥವಾಗಿದೆ. ಅಲ್ಲಲ್ಲಿ ಬರುವ ಮುತ್ತಿನಂತಹ ಮಾತುಗಳನ್ನು ಮೆಲುಕು ಹಾಕಬಹುದು.

“ಕರ್ತವ್ಯದಿದಿರು ಸ್ವರ್ಗದ ಬದುಕಿಗೂ ತಲೆವಾಗಬೇಕು”
‘ಕಲ್ಲು ಮಾತಾಡಬೇಕೆಂದರೆ ಕೊಡಲಿಯ ಪೆಟ್ಟು ಬೀಳಬೇಕು”
“ಗಡಿಗೆ ತಾನಾಗಿಯೇ ದೊಣ್ಣೆಗೆ ಮುದ್ದು ಕೊಡಲು ಹೋಗುವಂತೆ”
“ತ್ರಿಬಲವೆಂಬ ಕೋಡುಗಲ್ಲಿಗೆ ತಲೆಘಟ್ಟಿಸಿ ಬದುಕಿದವರುಂಟೇ ಅಕ್ಕಾ?”
“ಹಣತೆ ಎಷ್ಟು ಉರಿದರೂ ಸೂರ್ಯನಿಗೆ ಸಮವೇ ?”
“ಕಲ್ಲಿಗೆ ಕಲ್ಲಿನ ತೂಕವಿದ್ದರೆ, ಹೂವಿಗೆ ಹೂವಿನ ತೂಕವಿದ್ದೇ ಇರುತ್ತದೆ”
ನಂಟೂ ಕಡಿದುಕೊಳ್ಳಬಾರದು ಗಂಟೂ ಕಳೆದುಕೊಳ್ಳಬಾರದು.

ಯುದ್ಧದಿಂದ ಕತ್ತಿಯಿಂದಲೇ ಮನನವಾದ ಮಾತು ಎಂದೂ ಶಾಶ್ವತವಾಗುವುದಿಲ್ಲ.
ಕರ್ತವ್ಯ ಭ್ರಷ್ಟರ ಸಂಹಾರ ದೇವತಾ ಪೂಜೆಯಷ್ಟೇ ಪವಿತ್ರವಾದ ಕರ್ತವ್ಯ.

ಇಂತಹ ನುಡಿಮುತ್ತುಗಳು ಕಾದಂಬರಿಯ ಉದ್ದಕ್ಕೂ ಚೆಲ್ಲುವರಿದಿವೆ. ಸಂಭಾಷಣೆಯ ಶೈಲಿಗೆ ಮೆರಗುತಂದಿದೆ.

ಐತಿಹಾಸಿಕ ವಿವರಗಳು ಕಡಿಮೆ ಕಲ್ಪನೆಯನ್ನು ಧಾರಾಳವಾಗಿ ಬೆರೆಸಿ ಕಥೆ ಹೆಣೆದಿದ್ದೇನೆ ಎಂದು ಲೇಖಕರೇ ಹೇಳುವಂತೆ ಇಲ್ಲಿ ಐತಿಹಾಸಿಕ ಪ್ರಾಮುಖ್ಯತೆಗೆ ಆದ್ಯತೆಯಿಲ್ಲವೆನಿಸದು. ಆದರೂ ನಡೆದ ಘಟನೆಗೆ ಭಂಗ ಬಾರದಂತೆ ಪಾತ್ರಗಳನ್ನು ಕೂಡಿಸಿಕೊಂಡು ಕಥೆಗೆ ಕಳೆ ತಂದಿದ್ದಾರೆ. ವಾಸ್ತವ ಘಟನೆಗಳ ಆದಿ – ಅಂತ್ಯಗಳ ಚಾರಿತ್ರಿಕ ಹಿನ್ನೆಲೆಯಲ್ಲಿ ಅವುಗಳಿಗೆ ಪೋಷಕವಾಗುವಂತೆ ರೋಚಕ ಸನ್ನಿವೇಶಗಳನ್ನು ರೂಪಿಸಿಕೊಂಡು ಪಾತ್ರಗಳ ಗುಣ – ಸ್ವಭಾವಗಳಿಗೆ ತಕ್ಕಂತೆ ಅವರ ನಡೆಯನ್ನು ನುಡಿಯನ್ನು ಚಿತ್ರಿಸಿ ಕೃತಿಯನ್ನು ಚಿತ್ತಾಕರ್ಷಕವನ್ನಾಗಿ ಮಾಡಿದ್ದಾರೆ.

೨ ರಕ್ತರಾತ್ರಿ

ದೇಸಣ್ಣ, ಓಬಣ್ಣನಾಯಕ, ವೀರಣ್ಣನ ಕೊಲೆ, ಓಬವ್ವನಾಗತಿ, ಕಸ್ತೂರಿ ನಾಯಕರ ಆತ್ಮಹತ್ಯೆ, ಭುವನಪ್ಪನವರ ದುರ್ಮರಣ ಇವುಗಳೊಂದಿಗೆ ಕಂಬನಿಯ ಕುಯಿಲು ಪರಿಸಮಾಪ್ತಿಯಾದರೆ, ಲಿಂಗಣ್ಣನಾಯಕರನ್ನು ಪಟ್ಟಕ್ಕೆ ತರಲು ನಡೆದ ಪ್ರಯತ್ನದೊಂದಿಗೆ ರಕ್ತರಾತ್ರಿಯ ಅಧ್ಯಾಯ ಪ್ರಾರಂಭವಾಗುತ್ತದೆ. ಓಬಣ್ಣನ ತರುವಾಯ ಸರ್ವಾಧಿಕಾರಿಯಾದ ಮುದ್ದಣ್ಣ ತಾನೇ ಪಟ್ಟಾಧಿಕಾರಿಯಾಗಬೇಕೆಂಬ ಬಯಕೆಯನ್ನಿರಿಸಿಕೊಂಡಿದ್ದ. ಆದರೆ ಲಿಂಗಣ್ಣನಾಯಕನಿರುವವರೆಗೆ ಅದು ಸಾಧ್ಯವಾಗದ ಮಾತು ಎಂದು ಅವನಿಗೆ ತೋರಿತು. ಅದಕ್ಕೆ ತಕ್ಕಂತೆ ಜನತೆಯಲ್ಲಿ ಮೂಡಿದ ಅಸಂತೋಷವೂ ಪ್ರಕಟವಾದುದನ್ನು ಪ್ರತ್ಯಕ್ಷ ಕಾಣಬೇಕಾಗಿ ಬಂತು. ಗೋಪಾಲಪುರದ ಗೌಡನಂತಹ ನಿರ್ಭಯ ವ್ಯಕ್ತಿಗಳು ಜನಮನದ ಆಶೋತ್ತರಗಳನ್ನು ಮುದ್ದಣ್ಣನ ಮುಂದೆ ಸ್ಪಷ್ಟಪಡಿಸಿದಾಗ ಮುದ್ದಣ್ಣನಿಗೆ ಬೇರೆ ದಾರಿಯೇ ಕಾಣಲಿಲ್ಲ. ಪರಶುರಾಮಪ್ಪ, ಭರಮಣ್ಣನವರು ಈ ವಿಷಯದಲ್ಲಿ ನಿರಾಸಕ್ತನಾದ ಲಿಂಗಣ್ಣನ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉಗ್ರ ಚನ್ನವೀರಸ್ವಾಮಿಗಳ ನೆರವಿನೊಂದಿಗೆ ಮಲ್ಲವ್ವನಾಗತಿಯನ್ನು ಮುಂದೆ ಮಾಡಿಕೊಂಡು ಮುದ್ದಣ್ಣನ ಮುಂದೆ ತಮ್ಮ ಬೇಡಿಕೆಯನ್ನು ಮಂಡಿಸುತ್ತಾರೆ. ಬೇರೆ ದಾರಿ ಕಾಣದ ಮುದ್ದಣ್ಣ – ಲಿಂಗಣ್ಣನಾಯಕರನ್ನು ಪಟ್ಟಕ್ಕೆ ತರಲು ಒಪ್ಪುತ್ತಾನೆ. ಆದರೆ ಜಾಣ್ಮೆಯಿಂದ ತಾನೇ ಪ್ರಧಾನಿಯಾಗಿ ಅಧಿಕಾರ ಸೂತ್ರವನ್ನು ತನ್ನ ಕೈಯಲ್ಲಿಯೇ ಉಳಿಸಿಕೊಳ್ಳುತ್ತಾನೆ.

ತನ್ನ ತಮ್ಮಂದಿರಿಂದ ಅರಮನೆಯ ಮುತ್ತಿಗೆಹಾಕಿಸಿಯೂ ದೊರೆ ಮದಕರಿ ಲಿಂಗಣ್ಣನಾಯಕನನ್ನು ಅರಮನೆಯಲ್ಲಿಯೇ ಸೆರೆಯನ್ನಿಟ್ಟಿರುವಂತೆ ಮಾಡುತ್ತಾನೆ. ಮುದ್ದಣ್ಣನ ಒಪ್ಪಿಗೆಯಿಲ್ಲದೆ ಮಲ್ಲವ್ವನಾಗತಿ ಪರಶುರಾಮಪ್ಪ ಮೊದಲಾದ ಹಿತಚಿಂತಕರು ಸಹ ಲಿಂಗಣ್ಣನ ಭೇಟಿಗೆ ಅವಕಾಶ ಸಿಕ್ಕದಂತಾಗುತ್ತದೆ. ಮತ್ತೆ ತಿಮ್ಮಣ್ಣನಾಯಕನ ವಂಶಕ್ಕೆ ಕೇಡಾಗಬಾರದೆಂದು ಬಯಸಿ ಲಿಂಗಣ್ಣನಾಯಕನಿಗೆ ಹೆಣ್ಣೊಂದನ್ನು ಜೊತೆಮಾಡಬೇಕೆಂದು ಪರಶುರಾಮಪ್ಪ ಮೊದಲಾದ ಹಿತೈಷಿಗಳ ಆಲೋಚನೆ ನಡೆಯುತ್ತದೆ. ತಾನು ಅರಮನೆಯಲ್ಲಿಯೇ ಬಂಧಿಯಾಗಿದ್ದೇನೆಂಬ ಅರಿವು ಲಿಂಗಣ್ಣನಿಗೆ ಮೂಡಿದರೂ ಅದರಿಂದ ಪಾರಾಗುವ ದಾರಿ ತೋರದಾಗುತ್ತದೆ. ಮುದ್ದಣ್ಣ ಹೂಡಿದ ಕುತಂತ್ರದ ಚಕ್ರವ್ಯೂಹ ಕೋಟೆಯಲ್ಲಿ ಸಿಕ್ಕಿ ಒಂಟಿಯಾಗಿ ಹೋರಾಡಿ ಸೆರೆ ಸಿಕ್ಕಬೇಕಾದ ದಾರುಣ ಸ್ಥಿತಿ ಒದಗುತ್ತದೆ. ಮುದ್ದಣ್ಣನ ಚಿತ್ರಹಿಂಸೆಯಿಂದಾಗಿ ಲಿಂಗಣ್ಣನಾಯಕನ ತಲೆಯುರುಳಿ ಮತ್ತೆ ತಿಮ್ಮಣ್ಣನಾಯಕನ ವಂಶ ಕೊನೆಗೊಳ್ಳುತ್ತದೆ. ಇದು ಈ ಕಾದಂಬರಿಯ ಕಥಾವಸ್ತು.

ಲಿಂಗಣ್ಣನಾಯಕನ ಪಂಜರದ ಬದುಕು, ಅಪಮೃತ್ಯು, ನಾಗತಿಯ ನೆರಳಾಗಿ ತಿರುಗಿದ ಗಿರಿಜೆಯ ದುಷ್ಟ ಸಾಹಸ, ಪರಶುರಾಮಪ್ಪ ಭರಮಣ್ಣರ ದಿಟ್ಟಹೋರಾಟದ ಸ್ಪಷ್ಟಚಿತ್ರ, ಉಗ್ರಚನ್ನವೀರ ಸ್ವಾಮಿಗಳ ಧರ್ಮ ಪ್ರಜ್ಞೆಯೊಂದಿಗೆ ದುರ್ಗದ ಶುಭಚಿಂತನೆ, ಮಲ್ಲವ್ವನಾಗತಿಯ ಆತ್ಮಹತ್ಯೆ, ದೊರೆಕೆ ನಾಯಕನ ಅಚಲ ಭಕ್ತಿ, ಮುದ್ದಣ್ಣನ ಕ್ರೂರ ಸಂಚು, ಅವನ ತಮ್ಮಂದಿರ ರಕ್ತದಾಹ ಇವೆಲ್ಲಾ ಓದುಗರ ಹೃದಯವನ್ನು ಕಲಕುತ್ತವೆ.

ಕಂಬನಿಯ ಕುಯಿಲಿನಲ್ಲಿ ಲಿಂಗಣ್ಣನಾಯಕನ ಕೆಚ್ಚು, ಸ್ಥೈರ್ಯ, ಧೈರ್ಯ, ತ್ಯಾಗಗಳು ಎದ್ದುಕಂಡರೆ, ರಕ್ತರಾತ್ರಿಯಲ್ಲಿ ನಿರಾಶೆ, ಅಸಹಾಯಕತೆಗಳು ಗೋಚರಿಸುತ್ತವೆ, ಹೆತ್ತ ತಾಯಿಗಿಂತಲೂ ಮಿಗಿಲಾದ ಓಬವ್ವನಾಗತಿಯ ಅಪಮೃತ್ಯು ಓಬಣ್ಣನ ಕೊಲೆಯಿಂದಾಗಿ ಅವನಿಗೆ ಬದುಕಿನ ಬಗೆಗೆ, ಜಿಗುಪ್ಸೆಯುಂಟಾಗುತ್ತದೆ.

ಪರಶುರಾಮಪ್ಪ. ಭರಮಣ್ಣ ಗಿರಿಜೆ ಮೊದಲಾದ ಹಿತೈಷಿಗಳ ಪ್ರೇರಣೆಯಿಂದ ಪಟ್ಟಾಧಿಕಾರವಹಿಸಿಕೊಂಡರೂ ಅದರಲ್ಲಿ ಆಸಕ್ತಿ ಅಷ್ಟಾಗಿ ತೋರುವುದಿಲ್ಲ. ಧೂರ್ತನಾದ ಮುದ್ದಣ್ಣ ಹೆಣೆದ ಜಾಲದಲ್ಲಿ ಸಿಕ್ಕು ಚಡಪಡಿಸಬೇಕಾಗುತ್ತದೆ. ಅದನ್ನು ಹರಿದೊಗೆಯಬೇಕೆನ್ನುವಾಗಲೇ ತಲೆ ಉರುಳುತ್ತದೆ. ಲಿಂಗಣ್ಣನಾಯಕನ ಕೊನೆಯ ದೃಶ್ಯ ಮನಮಿಡಿಯುವಂತಿದೆ.

ಮುದ್ದಣ್ಣ ತನ್ನ ಹಿಂಸಾಕೃತ್ಯದಲ್ಲಿ ಮುನ್ನಡೆಯನ್ನು ಸಾಧಿಸಿದ್ದಾನೆ. ಎಂಥ ಹೇಯ ಕೃತ್ಯ ಮಾಡಲು ಹೇಸದ ಮುದ್ದಣ್ಣನು ಅದನ್ನು ಮರೆಮಾಚುವಲ್ಲಿ ಜಾಣತನ ತೋರಿದ್ದಾನೆ. ಕ್ರೂರ ಕೃತ್ಯಗಳನ್ನೆಸಗುವಲ್ಲಿ ಬಳಸಿದಷ್ಟೇ ಜನತೆಯ ಆಶೋತ್ತರಗಳನ್ನು ಅರಿತು ಕೊಳ್ಳುವಲ್ಲಿ ನಿಪುಣನು. ಆದರೇನು. ಅವನ ದುಷ್ಕೃತ್ಯಗಳ ಪರಿಣಾಮ

ಜನತೆಯ ಮೇಲಾಗಲು ಬಹುಕಾಲ ಕಾಯಬೇಕಾಯಿತು. ಆದರೂ ಆ ಮಾರ್ಗದಲ್ಲೇ ಸಾಗಿ ತನ್ನ ದುರಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಲಿಂಗಣ್ಣನಾಯಕನ ಕೊಲೆಯಿಂದ ತನ್ನ ಮಾರ್ಗ ಸುಲಭವಾಯಿತೆಂದು ಭಾವಿಸಿದ ಮುದ್ದಣ್ಣನ ರಾಕ್ಷಸೀಮಹತ್ವಾಕಾಂಕ್ಷೆಯು ಕ್ರೂರನೋಟ ಓದುಗರ ಹೃದಯವನ್ನು ಇರಿಯುವುದು.

ಪರಶುರಾಮಪ್ಪ - ಭೀಮಪ್ಪನವರಿಗೆ ತಕ್ಕ ಮಗ. ಲಿಂಗಣ್ಣನಾಯಕರನ್ನು ಪಟ್ಟಕ್ಕೆ ತರುವಲ್ಲಿ ಅವನು ಮಾಡಿದ ಪ್ರಯತ್ನ ಸ್ಮರಣೀಯ. ಈ ಕಾರಣಕ್ಕಾಗಿ ಮಹಾಮಂತ್ರಿ ಪದವಿಯನ್ನು ತ್ಯಾಗಮಾಡಿ, ದುರ್ಗದ ಹಿತವೇ ಅವನಿಗೆ ಮುಖ್ಯ. ಈ ಬಗೆಯ ತ್ಯಾಗವೇ ಮುದ್ದಣ್ಣನ ಕಾರಸ್ಥಾನಕ್ಕೆ ಅನುಕೂಲವಾಗಿ ಪರಿಣಮಿಸಿತು. ಭರಮಣ್ಣನೊಡನೆ ಬಂಧನದಲ್ಲಿರಬೇಕಾಯಿತು.

ತನ್ನ ತಂದೆಯ ಕತ್ತನ್ನು ಹಾರಿಸಿದ ಮುದ್ದಣ್ಣನ ಕೊಲೆಗಾಗಿ ಹಾತೊರೆಯುತ್ತಿದ್ದ ಭರಮಣ್ಣನ ವ್ಯಕ್ತಿತ್ವ ಚೆನ್ನಾಗಿ ಮೂಡಿ ಬಂದಿದೆ. ಗಿರಿಜೆ ನಾಗತಿಯ ನೆರಳಾಗಿ ಗುಪ್ತವಾಹಿನಿಯಂತೆ ಅಲ್ಲಲ್ಲಿ ಕಾಣಿಸಿಕೊಂಡು ಮರೆಯಾಗುತ್ತಾಳೆ. ಆದರೂ ಮರೆಯಲ್ಲಿ ನಿಂತು ಜನಜಾಗೃತಿಯ ಕಾರ್ಯಮಾಡಿದ ಆಕೆಯ ಸಹನೆ ಮೆಚ್ಚುವಂತಹದು.

ಉಗ್ರ ಜನ್ನವೀರ ಸ್ವಾಮಿಗಳ ಘನವ್ಯಕ್ತಿತ್ವ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಮುದ್ದಣ್ಣನ ಕ್ರೂರ ಕೃತ್ಯಗಳಿಗೆ ಹೆದರದೆ ದುರ್ಗದ ಹಿತರಕ್ಷಣೆಗಾಗಿ ಸಹಕರಿಸಿದುದು ಅವರ ಧರ್ಮಪ್ರಜ್ಞೆಯ ದ್ಯೋತಕವಾಗಿದೆ. ಅವರ ಧರ್ಮದ ವಿಶಾಲ ತತ್ವಗಳು ಸಕಲರ ಮೆಚ್ಚುಗೆಗೆ ಪಾತ್ರವಾಗುವಂತಹವು. 'ಕೇವಲ ನುಡಿಯುವವರಲ್ಲ, ನಡೆಯುವವರು ಎಂಬುದನ್ನು ತೋರಿಸಿಕೊಟ್ಟು ಓದುಗರಿಗೆ ಪೂಜ್ಯರಾಗಿದ್ದಾರೆ.

ಮಲ್ಲಪ್ಪನಾಗತಿ, ಗೋಪಾಲಪುರಗೌಡ, ಮುದ್ದಣ್ಣನ ಸೋದರರು ಮೊದಲಾದವರ ಪಾತ್ರ ಚಿತ್ರಣ ಅವರ ವ್ಯಕ್ತಿತ್ವಕ್ಕೆ ತಕ್ಕಂತೆ ಮೂಡಿಬಂದಿದೆ.

ಇಲ್ಲಿಯೂ ಸಂಭಾಷಣೆಯ ಶೈಲಿಯೇ ಧಾರಾಳವಾಗಿ ಹರಿದಿದೆ. ಶೈಲಿ ಸತ್ವಯುತವಾಗಿದೆ.

ಜನಜೀವನದಲ್ಲಿ ನ್ಯಾಯಕ್ಕೆ ಪ್ರಾಧಾನ್ಯವಿದೆ. ತಮ್ಮ ಒಡೆಯನಿಗಾಗಿ ಎಂಥ ತ್ಯಾಗಕ್ಕೂ ಸಿದ್ಧರು. ದಾಸಿ, ಗೋಪಾಲಪುರದ ಗೌಡ ಮೊದಲಾದವರ ದಿಟ್ಟ ನಿಲುವು ಅಚಲನಿರ್ಧಾರ ಅಂದಿನ ಜನಸಾಮಾನ್ಯರ ಮನೋಧರ್ಮದ ಸಂಕೇತಗಳಾಗಿವೆ. ಮುದ್ದಣ್ಣನ ಕರಾಳ ಕೃತ್ಯದ ವಿರುದ್ಧ ಜನ ಕ್ರಾಂತಿಯಾಗಬಹುದಾಗಿದ್ದರೂ ಅವನ ಧೂರ್ತತನದ ಪರಿಣಾಮವಾಗಿ ಕ್ರಾಂತಿಯ ದಳ್ಳುರಿಗೆ ಅವಕಾಶ ಸಿಕ್ಕದಂತಾಗುತ್ತದೆ. ಅಂದಾಗ ಜನತಂತ್ರದ ಒಲವು ಆಕಾಂಕ್ಷೆಗಳನ್ನರಿತುಕೊಂಡ ಮುದ್ದಣ್ಣ ಪರಿಸ್ಥಿತಿಗೆ

ತಕ್ಕಂತೆ ನಟನೆ ಮಾಡಿ ತನ್ನ ಕುಕೃತ್ಯಗಳನ್ನು ಮರೆಮಾಚಿಕೊಳ್ಳುವಲ್ಲಿ ಸಫಲನಾಗುತ್ತಾನೆ. ಆದರೂ ಈ ದಳ್ಳುರಿಯು ಸುಪ್ತ ಕಿಡಿ ಒಳಗೊಳಗೇ ಹೊತ್ತಿಕೊಳ್ಳದೆ ಇರುವುದಿಲ್ಲ. ಪೈಶಾಚಿಕ ಶಕ್ತಿಗೆ ಗೆಲುವಾಗುತ್ತದೆ, ಮಾನವೀಯತೆ ಮಣ್ಣು ಪಾಲಾಗುತ್ತದೆ ರಕ್ತರಾತ್ರಿಯಲ್ಲಿ.

೩. ತಿರುಗು ಬಾಣ

ಹೆಸರೇ ಸೂಚಿಸುವಂತೆ ತನ್ನ ಅಮಾನುಷ ಕೃತ್ಯಗಳಿಂದ ರಾಕ್ಷಸೀ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವಲ್ಲಿ ರಾಜನಿಷ್ಠರ ರಕ್ತದೋಕುಳಿಯಾಡಿದ ಮುದ್ದಣ್ಣನಿಗೆ ತಿರುಗಿದ ದಾರುಣಸ್ಥಿತಿಯ ರೋಮಾಂಚಕ ಕಥೆ ಇಲ್ಲಿ ಚಿತ್ರಿತವಾಗಿದೆ. ಕಂಬನಿಯ ಕುಯಿಲಿನಿಂದ ಆರಂಭವಾದ ಕಥೆಗೆ ಇಲ್ಲಿ ವಿರಾಮ ಸಿಕ್ಕುತ್ತದೆ. ಓದುಗರ ಅಸಂತೋಷಗೊಂಡ ಮನಸ್ಸಿಗೆ ತೃಪ್ತಿಯ ನಿಟ್ಟುಸಿರು ಬಿಟ್ಟಂತಾಗುತ್ತದೆ.

ಲಿಂಗಣ್ಣನಾಯಕನ ಕೊಲೆಯಾಗಿ ಈ ವಂಶ ನಿರ್ಮೂಲನದೊಂದಿಗೆ ದುರ್ಗದ ಆಧಿಪತ್ಯ ವಹಿಸಿ ಕೊಳ್ಳುವಲ್ಲಿ ಸರ್ವಾಧಿಕಾರಿ ಮುದ್ದಣ್ಣನ ದಾರಿ ಸರಳವಾಗುತ್ತದೆ. ಸೇನೆ ಕೈಯಲ್ಲಿದೆ, ಎದುರಾಳಿಗಳಾದ ಪರಶುರಾಮಪ್ಪ, ಭರಮಣ್ಣ ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಇನ್ನು ಯಾವ ತರದ ಭೀತಿ ? ಎಂದೆನಿಸಿದರೂ ಮುದ್ದಣ್ಣನ ಮನದಾಳದಲ್ಲಿ ಚಿಂತೆ-ಭೀತಿಗಳ ಭೂತ ಕುಣಿದಾಡುತ್ತಿವೆ. ಅದಕ್ಕಾಗಿಯೇ ಅವನು ಕಾವಲು ಪಡೆಯನ್ನು ಸ್ವತಃ ಪರಿಶೀಲಿಸಿ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ವಿಧಿಸಿ ಬಲ ಪಡಿಸುತ್ತಾನೆ. ತಮ್ಮಂದಿರನ್ನು ಸಂಶಯ ದೃಷ್ಟಿಯಿಂದ ಕಂಡು ಅವರಿಗೂ ಬೇಹುಗಾರರನ್ನು ನೇಮಿಸುತ್ತಾನೆ. ದುರ್ಗದ ಪಟ್ಟಾಧಿಕಾರ ಸರಳವಾಗಬೇಕಾದರೆ ಭರಮಣ್ಣ, ಪರಶುರಾಮಪ್ಪನವರನ್ನು ಒಲಿಸಿ ಕೊಳ್ಳಬೇಕೆಂದು ಆ ದಿಸೆಯಲ್ಲಿ ಪ್ರಯತ್ನಿಸಿ ವಿಫಲನಾಗುತ್ತಾನೆ. ಸೇನೆಯ ಚಿನ್ನಯ್ಯ, ಗಿರಿಜೆಯರ ಸಾಹಸದ ಫಲವಾಗಿ ಗೌಡರೆಲ್ಲ ಒಂದಾಗುತ್ತಾರೆ. ಪರಶುರಾಮಪ್ಪ–ಭರಮಣ್ಣರನ್ನು ಸೆರೆಯಿಂದ ಮುಕ್ತ ಮಾಡುತ್ತಾರೆ. ಕುಪಿತನಾದ ಮುದ್ದಣ್ಣ ಅವರ ಶೋಧನೆಗಾಗಿ ಸೇನೆಯೊಂದಿಗೆ ಹೋಗಿ ಗೋಪಾಲ ಪುರದ ಗೌಡನ ಕೊಲೆ ಮಾಡುತ್ತಾನೆ. ಏನಾದರೂ ಪರಶುರಾಮಪ್ಪ, ಭರಮಣ್ಣರ ಸುಳಿವು ಸಿಕ್ಕದಂತಾಗುತ್ತದೆ. ಇಂತಹ ಸ್ಥಿತಿಯಲ್ಲಿ ದುರ್ಗದ ದೊರೆಯಾಗುವುದು ಒಳ್ಳೆಯದಲ್ಲವೆಂದು ಭಾವಿಸಿ, ಶಿಶು ಸಮುದ್ರದ ರಂಗಪ್ಪನಾಯಕನಿಗೆ ಪಟ್ಟಗಟ್ಟಿ ತನ್ನ ಸರ್ವಾಧಿಕಾರತ್ವವನ್ನು ಬಲಪಡಿಸುವ ಯೋಜನೆ ಹಾಕುತ್ತಾನೆ. ಅದಕ್ಕಾಗಿ ಮಲ್ಲಪ್ಪನಾಗತಿಯನ್ನು ಕಂಡು ರಂಗಪ್ಪನಾಯಕರನ್ನು ದತ್ತು ಸ್ವೀಕಾರ ಮಾಡುವಂತೆ ಆಜ್ಞೆ ಮಾಡುತ್ತಾನೆ. ಪಾಪ ಮಲ್ಲಪ್ಪನಾಗತಿ ಕಂಗಾಲಾಗಿ ವಿಷಪಾನ ಮಾಡಿ ಮರಣವನ್ನಪ್ಪುತ್ತಾಳೆ. ಮುದ್ದಣ ಉಗ್ರ ಚನ್ನವೀರಸ್ವಾಮಿಗಳಿಗೆ ದುರ್ಗದಿಂದ ಹೊರಡಲು ಆಜ್ಞೆ ಮಾಡಿ ಅವರನ್ನು ಸೆರೆ ಹಿಡಿಯುವ ಹೊಂಚು ಹಾಕುತ್ತಾನೆ. ಆದರೆ ಚಿನ್ನಯ್ಯನ ಸುಳಿವಿನ

ಮೇರೆಗೆ ಭರಮಣ್ಣ ಜಟ್ಟಿಗಳ ಸಹಾಯದಿಂದ ಸ್ವಾಮಿಗಳನ್ನು ಮುದ್ದಣ್ಣನ ಕಾವಲುಗಾರರಿಂದ ಮುಕ್ತಗೊಳಿಸಿ ತಮ್ಮೆಡೆಗೆ ಸಾಗಿಸುತ್ತಾರೆ. ಇದು ಮುದ್ದಣ್ಣನಿಗೆ ದೊಡ್ಡ ಪೆಟ್ಟು ಕೊಟ್ಟಂತಾಗುತ್ತದೆ. ರಂಗಪ್ಪ ನಾಯಕರನ್ನು ಪಟ್ಟಕ್ಕೆ ಕಟ್ಟುವಲ್ಲಿ ಗೌಡರನ್ನೆಲ್ಲಾ ಒಪ್ಪಿಸಲು ಅವರ ಸಭೆ ಕರೆಯುತ್ತಾನೆ. ಆದರೆ ಗೌಡರ ಒಗ್ಗಟ್ಟಿನಿಂದ ಅದೂ ಕೂಡ ಸಾಧಿಸಿದಂತಾಗುತ್ತದೆ. ಪ್ರತಿ ಹಳ್ಳಿಯಲ್ಲಿಯೂ ಗರಡಿ ಮನೆಯಲ್ಲಿ ಮಲ್ಲರು ಯುದ್ಧದ ಕಸರತ್ತುಗಳನ್ನು ಕಲಿಯುತ್ತಾರೆ. ಹಳ್ಳಿ ಹಳ್ಳಿಗಳಲ್ಲಿ ದಳವಾಯಿಯ ವಿರುದ್ಧ ಜನಸೇನೆ ಸಿದ್ಧವಾಗುತ್ತದೆ. ಏನಾದರೂ ಮುದ್ದಣ್ಣ, ರಂಗಣ್ಣನಾಯಕನನ್ನು ಪಟ್ಟಕ್ಕೆ ಕೂಡ್ರಿಸುವ ತನ್ನ ಛಲ ಬಿಡುವುದಿಲ್ಲ. ಯುದ್ಧದ ಕಾಲದ ಕಟ್ಟು ಪಾಡುಗಳೊಂದಿಗೆ ಪಟ್ಟಾಭಿಷೇಕೋತ್ಸವದ ಏರ್ಪಾಡು ಮಾಡುತ್ತಾನೆ. ಆ ರೀತಿ ಎಲ್ಲ ಗೌಡ ಸಾಮಂತರಿಗೂ ಕರೆಯೋಲೆಗಳನ್ನು ಕಳಿಸುತ್ತಾನೆ. ಆದರೆ ಗೌಡರೆಲ್ಲಾ ಪಟ್ಟಗಾಣಿಕೆ ಕೊಡುವುದಿಲ್ಲವೆಂದು ಹೇಳಿ ಕಳಿಸುತ್ತಾರೆ. ಇಂಥ ಸಮಯದಲ್ಲಿ ಭಂಡಾರದಲ್ಲಿ ಹಣವೂ ಸಾಕಷ್ಟಿಲ್ಲವೆಂಬುದು ಗೊತ್ತಾಗುತ್ತದೆ. ಅದಕ್ಕಾಗಿ ಪಟ್ಟಣಶೆಟ್ಟರನ್ನು ಕರೆಯಿಸಿ ಪೀಡಿಸಿ ಕೊಳ್ಳೆ ಮಾಡುತ್ತಾನೆ. ಆದರೂ ಪ್ರಯೋಜನವಿಲ್ಲದಾಗುತ್ತದೆ. ಇದರಿಂದ ಜನ ಮತ್ತಷ್ಟು ರೋಸಿ ಹೋಗುತ್ತಾರೆ. ಇಂಥವರಲ್ಲಿ ರಂಗಪ್ಪನಾಯಕರ ಪಟ್ಟಾಭಿಷೇಕ ಸೈನಿಕ ಕಾವಲಿನಲ್ಲಿ ನಡೆದು ಹೋಗುತ್ತದೆ. ರಂಗಪ್ಪನಾಯಕ ಹೆಸರಿಗೆ ಮಾತ್ರ ದೊರೆ ಎಲ್ಲವೂ ಮುದ್ದಣ ಅವರ ತಮ್ಮಂದಿರ ಆಳ್ವಿಕೆಯೇ. ರಂಗಪ್ಪನಾಯಕ ಮುದ್ದಣ್ಣನಿಗೆ ಈ ವಿಷಯವಾಗಿ ಹೇಳಿದರೂ ಪ್ರಯೋಜನವಾಗುವುದಿಲ್ಲ. ರಾಜಾಜ್ಞೆಯನ್ನು ಧಿಕ್ಕರಿಸಿದ ಹಳ್ಳಿಗಳ ಗೌಡರನ್ನು ಸೆರೆಹಿಡಿದು ತರಲು ಸೇನೆಯ ತುಕಡಿಗಳನ್ನು ಮುದ್ದಣ್ಣ ಕಳುಹಿಸಿದ. ಆದರೆ ದಾರಿಯಲ್ಲೇ ಹಳ್ಳಿಗರ ದಂಡು ಸೈನಿಕರನ್ನು ಕೊಲೆಮಾಡಿ ಅವರ ತಲೆಗಳನ್ನೇ ಪಟ್ಟಗಾಣಿಕೆ ಎಂದು ಕಳಿಸಿಕೊಟ್ಟರು. ಕೆಲವೆಡೆ ಸೈನಿಕರೇ ತಮ್ಮ ಮುಂದಾಳುಗಳಿಗೆ ತಿರುಗಿ ಬಿದ್ದರು ಗಿರಿಜೆಯ ತಂತ್ರದಿಂದ ರಾಯಣ್ಣನಂತಹವರೂ ಸೆರೆಸಿಕ್ಕು ಒದ್ದಾಡಿದರು. ಮುದ್ದಣ್ಣನ ಆಪ್ತನಂತಿದ್ದ ದಾಸನಾಯಕನಿಗೂ ಪಶ್ಚಾತ್ತಾಪವಾಗಿ ಜನರ ಪಿತೂರಿಗಳಲ್ಲಿ ಮುಖ್ಯ ಪಾತ್ರ ವಹಿಸಿದನು. ನೂರು ಚಿಂತೆ ನೂರು ಭೀತಿಗಳಿಂದ ಕೂಡಿದ ಮುದ್ದಣ್ಣನಿಗೆ ನಾಗತಿಯ ನೆರಳಾಗಿ ಗಿರಿಜೆ ಕಾಡಿದಳು. ಪರುಶುರಾಮಪ್ಪ, ಭರಮಣ್ಣನವರ ಮನೆಯ ಹೆಂಗಸರು ಮಕ್ಕಳನ್ನು ಸೆರೆಯಲ್ಲಿರಿಸಿ ಅವರನ್ನು ಉಳಿಸಿ ಕೊಳ್ಳುವುದಾದರೆ ಶರಣಾಗತರಾಗಬೇಕೆಂದು ಮುದ್ದಣ್ಣ ತಿಳಿಸಿದ. ಅದೊಂದು ರಾತ್ರಿ ಕಳೆದರೆ ಅವರೆಲ್ಲರ ಶಿರಚ್ಛೇದನ ಮಾಡುವುದಾಗಿ ಸಾರಿದ. ಈ ಸಮಯದಲ್ಲಿ ದಾಸನಾಯಕ ಮುಖ್ಯ ಪಾತ್ರವಹಿಸಿ ಕೋಟೆಯ ಕಾವಲನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಆಯಕಟ್ಟಿನ ಸ್ಥಳಗಳಲ್ಲಿ ತನ್ನವರನ್ನು ನೇಮಿಸುತ್ತಾನೆ. ವಿರೂಪಾಕ್ಷ ಜೋಯಿಸರ ಸಹಾಯದಿಂದ ಪರಶುರಾಮಪ್ಪನವರ ಸೈನಿಕರು ದುರ್ಗವನ್ನು ಸೇರುವಂತೆ ಮಾಡುತ್ತಾನೆ. ಅನಾಯಾಸ ಕೋಟೆ ಪರಶುರಾಮನ ವಶವಾಗುತ್ತದೆ. ಹಂಚಿಕೆಯಿಂದ ಚಿಕ್ಕಣ್ಣನನ್ನು ಬಂಧಿಸುತ್ತಾರೆ. ಭರಮಣ್ಣ ಸ್ವತಃ ಮುದ್ದಣ್ಣನ ಭೆಟ್ಟಿಗೆ ಬರುತ್ತಾನೆ. ಮುದ್ದಣ್ಣ ತನ್ನ ಬೇಟೆ ಸಿಕ್ಕಿ

ತೆಂದು ಸೂಚಿಸ ಹೊರಡುತ್ತಾನೆ. ಆದರೆ ದಾಸನಾಯಕ ಹೆಣೆದ ಜಾಲದಲ್ಲಿ ಮುದ್ದಣ್ಣ ಸಿಕ್ಕ. ಭರಮಣ್ಣನನ್ನು ಹಿಂಸಿಸುತ್ತಿರುವಾಗಲೇ ಗಿರಿಜೆಯ ಕತ್ತಿಯೇಟಿನಿಂದ ಕೈ ಕಳೆದುಕೊಂಡು ಸೆರೆಯಾಳಾಗುತ್ತಾನೆ. ಇದು ನನ್ನ ಬೇಟೆ ನನ್ನ ಬೇಟೆಯೆಂದು ಭರಮಣ್ಣ ಗಿರಿಜೆಯರು ಮುದ್ದಣ್ಣನತ್ತ ನುಗ್ಗುತ್ತಾರೆ. ಗಿರಿಜೆ ಅವನ ನಾಲಿಗೆಯನ್ನು ಕತ್ತರಿಸಿ ಮುಖಕ್ಕೆ ಉಗುಳಿ ಅವನನ್ನು ಎಳೆದೊಯ್ಯುವಂತೆ ಚನ್ನಯ್ಯನಿಗೆ ಹೇಳುತ್ತಾಳೆ. ಮುದ್ದಣ್ಣ ಮಾಡಿದ ನೂರು ಹಿಂಸಾ ಕೃತ್ಯಗಳ ಫಲ ಅನುಭವಿಸುವಂತೆ ಅವನನ್ನು ಹಾಗೂ ಅವನ ಸೋದರರನ್ನು ಚಿರತೆಗಳಿಂದ ಹಿಂಸಿಸಿ ಕೊಲ್ಲಿಸುತ್ತಾರೆ. ಅವರ ಹೆಣಗಳನ್ನು ಹದ್ದು ಕಾಗೆಗಳಿಗೆ ಆಹಾರವಾಗುವಂತೆ ಹುಣಸೆ ಮರಕ್ಕೆ ತೂಗು ಹಾಕುತ್ತಾರೆ. ಸಾವಿರಾರು ಜನ ಬಂದು ನೋಡಿ ಶಪಿಸಿ ಹೋದರು. ಸ್ವಾಮಿಗಳು ತಮ್ಮ ಕರ್ತವ್ಯ ಪೂರೈಸಿತೆಂದು ಯಾತ್ರೆಗೆ ಹೊರಡುತ್ತಾರೆ. ಗಿರಿಜೆಯೂ ಅವರೊಡನೆ ತೆರಳುತ್ತಾಳೆ. ದುರ್ಗವನ್ನು ಕವಿದ ಕರಾಳ ರಾತ್ರಿ ಕಳೆದು ಹೊಸ ಹಗಲು ಉದಯಿಸುತ್ತದೆ—ಇದು ಕಥಾ ಸಾರಾಂಶ.

ಲಿಂಗಣ್ಣ ನಾಯಕರನ್ನು ಕೊಲೆ ಮಾಡಿ ತನ್ನ ಪಟ್ಟಾಧಿಕಾರದ ದಾರಿ ಸರಳ ಮಾಡಿಕೊಂಡಿದ್ದರೂ ಮುದ್ದಣ್ಣನಿಗೆ ಶಾಂತಿ–ಸಮಾಧಾನಗಳಿರಲಿಲ್ಲ. ಅವನಿಗೆ ಏನೋ ಚಿಂತೆ–ಏನೋ ಭೀತಿ ಎಂಥ ಕ್ರೂರಕಾರ್ಯಕ್ಕೂ ಹೇಸದ ಧೂರ್ತತನಕ್ಕೆ ಹೆಸರಾದ ಮುದ್ದಣ್ಣನಿಗೆ ತಿರುಗು ಬಾಣ ಪ್ರಾರಂಭವಾಗುತ್ತದೆ. ಅವನ ಯಾವ ತಂತ್ರಗಳೂ ಫಲಕಾರಿಯಾಗುವುದಿಲ್ಲ. ಕಂಬನಿಯ ಕುಯಿಲು, ರಕ್ತರಾತ್ರಿಗಳಲ್ಲಿ ತೋರಿಬಂದ ಅವನ ಅಟ್ಟಹಾಸ ಅಬ್ಬರಗಳೊಡಗೂಡಿದ ಪೈಶಾಚಿಕ ಕೃತ್ಯಗಳು ಇಲ್ಲಿಯೂ ಮುಂದುವರಿದರೂ ಅವುಗಳಿಗೆ ಪ್ರತೀಕಾರ ದಕ್ಕುತ್ತದೆ. ತನ್ನ ನೆರಳೇ ತನಗೆ ವೈರಿಯಂತೆ ಕಾಣುತ್ತದೆ. ಕಡೆಗೆ ತಾನು ಹೆಣೆದ ಬಲೆಯಲ್ಲಿ ತಾನೆ ಬಿದ್ದು ಒದ್ದಾಡಿ ಪ್ರಾಣ ನೀಗಬೇಕಾಗುತ್ತದೆ. ಹಲವಾರು ಕೊಲೆಗಳ ಪಾತಕನು ಅನುಭವಿಸಬೇಕಾಗುತ್ತದೆ. ಅವನ ಸಾವಿಗೆ ಹಾಗೂ ಅವನ ತಮ್ಮಂದಿರ ಸಾವಿಗೆ ಯಾರೂ ಕನಿಕರ ಪಡುವುದಿಲ್ಲ. ಶಪಿಸಿ ಉಗುಳುವಂತಾಗುತ್ತದೆ. ಓದುಗರೂ ತೃಪ್ತಿಯ ಉಸಿರು ಬಿಡುವಂತಾಗುತ್ತದೆ. ಮುದ್ದಣ್ಣನ ಮಾನಸಿಕ ವಿಪ್ಲವ ಇಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಅವನ ಕುಕೃತ್ಯಗಳಿಗೆ ತಕ್ಕಂತೆ ಅಂತ್ಯವಾಗಿದೆ.

ಭರಮಣ್ಣ ಹಿಂದಿನಂತೆ ಭರಮಣ್ಣನಾಗಿಯೇ ಇದ್ದರೆ, ಪರಶುರಾಮಪ್ಪನಲ್ಲಿ ಪರಿವರ್ತನೆ ಕಂಡುಬರುತ್ತದೆ. ನ್ಯಾಯ–ನೀತಿ, ಶಾಂತಿಯ ಮಾತು ಹೇಳುವವನು ಮುದ್ದಣ್ಣನ ಕುತಂತ್ರಗಳಿಂದಾಗಿ ಬದಲಾವಣೆ ಹೊಂದುತ್ತಾನೆ. ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಭರಮಣ್ಣನ ಮಾತಿಗೆ ಬೆಲೆ ಕೊಡುತ್ತಾನೆ. ಮುದ್ದಣ್ಣನ ಧೂರ್ತತನಕ್ಕೆ ಪ್ರತಿಯಾಗಿ ಹೊಸ ತಂತ್ರಗಳನ್ನು ಯೋಚಿಸುತ್ತಾನೆ. ತಂತ್ರ ಸಫಲವಾಗುತ್ತದೆ. ಕೋಟೆ ವಶವಾಗಿ ಮುದ್ದಣ್ಣನನ್ನು ಸೆರೆ ಹಿಡಿಯಲು ಸಾಧ್ಯವಾಗುತ್ತದೆ. ತನ್ನ ಕಾರ್ಯ ಸಾಧನೆಯಲ್ಲಿ ಪರಶುರಾಮಪ್ಪನಿಗೆ ತುಂಬು ವಿಶ್ವಾಸ.

ಗಿರಿಜೆಯ ಪಾತ್ರ ತುಂಬ ಹಿರಿದು. ಅವಳು ಆಗಾಗ ಕಾಣಿಸಿಕೊಂಡರೂ, ಜನಜಾಗೃತಿಗಾಗಿ ಕೈಗೊಂಡ ಅವಳ ಕಾರ್ಯ ಮಹತ್ವದ್ದು. ಅವಳು ನಾಗತಿಯ ನೆರಳಾಗಿ ಮಿಂಚಿನ ಸಂಚಾರ ಮಾಡುತ್ತಾಳೆ. ಎಲ್ಲರಲ್ಲಿ ಕೆಚ್ಚನ್ನು, ಅಭಿಮಾನವನ್ನು ತುಂಬುತ್ತಾಳೆ. ಗಾಳಿಯಲ್ಲಿ ಗಾಳಿಯಾಗಿ, ಕತ್ತಲಲ್ಲಿ ಕತ್ತಲಾಗಿ ಎತ್ತಲೋ ಅಲೆಯುತ್ತಾಳೆ. ಅಂತೆಯೇ ಆಕೆ ನಾನು ಮನುಷ್ಯಳಲ್ಲ ಎಂದು ಹೇಳಿದ ಮಾತು ಸತ್ಯವೆನಿಸುತ್ತದೆ. ಆದರೂ ಆಕೆಯ ಯೋಜನೆ, ಪ್ರಯತ್ನ ಸಫಲವಾಗುತ್ತದೆ. ಬಯಕೆ ಈಡೇರುತ್ತದೆ. ತನ್ನ ಪ್ರತಿಜ್ಞೆಯಂತೆ ಮುದ್ದಣ್ಣ ಅವರ ಸೋದರರನ್ನು ಚಿತ್ರಹಿಂಸೆಯಿಂದಲೇ ಕೊಲೆ ಮಾಡಿ ತೃಪ್ತಿ ಪಡುತ್ತಾಳೆ. ಇಲ್ಲಿಗೆ ಆಕೆಯ ಬದುಕಿನ ಅಭಿಲಾಷೆ ಪೂರೈಸಿತು. ತನ್ನ ಈ ಪಾಪದ ಬದುಕನ್ನು ತೊಳೆದುಕೊಳ್ಳುವುದಕ್ಕಾಗಿ ಗುರುಗಳ ಸೇವೆ ಮಾಡಲು ಹೊರಡುತ್ತಾಳೆ.

ದಾಸನಾಯಕನ ಹಾಗೂ ಅವನ ಸೇನೆಯ ಹೃದಯ ಪರಿವರ್ತನೆ ಮಾಡಿದ ಗೌಡ ಮುದ್ದಣ್ಣನನ್ನು ಎದುರಿಸಿ ಪ್ರಾಣಾರ್ಪಣೆ ಮಾಡಿದ ಗೋಪಾಲ ಪುರದ ಗೌಡ, ಸೇನೆಯಲ್ಲಿದ್ದುಕೊಂಡು ಮುದ್ದಣ್ಣನ ಸಮಾಚಾರವನ್ನು ಪರಶುರಾಮಪ್ಪನಿಗೆ ತಲುಪಿಸುವ ಗುಪ್ತಚಾರನಂತೆ ಕಾರ್ಯ ಮಾಡಿದ. ಚನ್ನಯ್ಯ ಎಂಥ ಸಂದರ್ಭದಲ್ಲಿಯೂ ಹೆದರದೆ, ಶರಣ ಮಾರ್ಗಹಿಡಿದು ಸಾಗಿದ. ಉಗ್ರ ಚನ್ನವೀರ ಸ್ವಾಮಿಗಳು, ಹೇಸಿಗೆ ಕಾರ್ಯ ಮಾಡಲು ಒಪ್ಪದೆ, ಆತ್ಮಹತ್ಯೆ ಮಾಡಿಕೊಂಡ ಮಲ್ಲಪ್ಪನಾಗತಿ ನಾಡಗೌಡರ ಮುಖಂಡನಾಗಿ ಮುದ್ದಣ್ಣನ ಕಾರ್ಯಸಾಧನೆಗೆ ಅಡ್ಡಬಂದ ಮಲ್ಲಭಟರ ಹಳ್ಳಿಯ ಗೌಡ, ವರ್ತಕರನ್ನು ಎಚ್ಚರಿಸಿ ಒಂದುಗೂಡಿಸಿ ಪರಶುರಾಮಪ್ಪನವರಿಗೆ ಹಣದ ಸಹಾಯ ಸಲ್ಲಿಸಿದ, ವಿರೂಪಾಕ್ಷ ಜೋಯಿಸರು, ಮುಂತಾದ ಪಾತ್ರಗಳು ಓದುಗರ ಮನದಲ್ಲಿ ಅಚ್ಚಳಿಯದೆ ಉಳಿಯುವುವು. ಈ ಎಲ್ಲರ ತ್ಯಾಗ, ಬಲಿದಾನ-ಹೋರಾಟಗಳ ಫಲವಾಗಿಯೇ ಮುದ್ದಣ್ಣನಂತಹ ಮಹಾ ಧೂರ್ತ, ನರಪಿಶಾಚಿಯ ಕೊಲೆಯಾಗಿ ದುರ್ಗದ ವಿಮೋಚನೆಯಾಯಿತು.

ಈ ಐತಿಹಾಸಿಕ ಘಟನೆಗಳ ಹಿನ್ನೆಲೆಯಲ್ಲಿ ಅಂದಿನ ಸಾಮಾಜಿಕ ಜೀವನದ ಚಿತ್ರಣ ಸೊಗಸಾಗಿ ಮೂಡಿ ಬಂದಿದೆ. ಜನ ಒಡೆಯನಲ್ಲಿ ಇಟ್ಟ ಭಕ್ತಿ, ವಿಶ್ವಾಸ ಅಚಲ. ನಂಬಿದ ಜನ ತಮ್ಮ ಪ್ರಾಣವನ್ನು ಕೊಟ್ಟರಲ್ಲದೆ ವಿಶ್ವಾಸ ದ್ರೋಹ ಮಾಡಲಾರರು ; ಕ್ರೌರ್ಯ ದಬ್ಬಾಳಿಕೆಯನ್ನು ಎದುರಿಸುವ ಎಂಥ ತ್ಯಾಗಕ್ಕೂ ಸಿದ್ಧರು. ಅಂತೆಯೇ ಪಾಳೆಯಗಾರನಾದ ಸರ್ವಾಧಿಕಾರಿ ಮುದ್ದಣ್ಣನ ಮಹಾ ಸೇನೆಯನ್ನು ಕೂಡ ಮಣ್ಣು ಮುಕ್ಕಿಸಿ, ನ್ಯಾಯ ನೀತಿಗೆ ಜಯ ತಂದು ಕೊಟ್ಟರು. ನಂಬಿದರೆ ಅವರಿಗಾಗಿ ಪ್ರಾಣ ಕೊಡುವವರು, ಅವಿಶ್ವಾಸ ವ್ಯಕ್ತಪಡಿಸಿದರೆ ಪ್ರಾಣ ಹಿಂಡುವವರು. ದುರ್ಗದ ಕಲ್ಯಾಣವೇ ಪ್ರತಿಯೊಬ್ಬ ಪ್ರಜೆಯ ಗುರಿ. ಆ ಕಾರ್ಯಕ್ಕಾಗಿ ಏನೆಲ್ಲವನ್ನು ತ್ಯಾಗಮಾಡಲು ಸಿದ್ಧರು. ಈ ಬಗೆಯ ಚಿತ್ರಣ ಕಾದಂಬರಿಯುದ್ದಕ್ಕೂ ಚೆಲ್ಲುವರಿದಿದೆ.

ಚಿತ್ರದುರ್ಗದ ಐತಿಹಾಸಿಕ ಕಾದಂಬರಿ ಮಾಲೆಯಲ್ಲಿ ಈ ಮೂರು ಹೊತ್ತಗೆಗಳು ಒಂದಕ್ಕೊಂದು ಪೂರಕವಾದವುಗಳು. ಮೂರನ್ನು ಓದಿದಾಗಲೇ ಒಂದು ಘಟ್ಟವನ್ನು ತಲುಪಿದಂತಾಗುತ್ತದೆ. ಕಂಬನಿಯ ಕುಯಿಲು, ರಕ್ತರಾತ್ರಿಗಳಲ್ಲಿ ಕರಾಳ ಕ್ರೂರತೆಯ ಕೈ ಮೇಲಾದರೆ ತಿರುಗು ಬಾಣದಲ್ಲಿ ನ್ಯಾಯಕ್ಕೆ ನೀತಿಗೆ ಗೆಲುವಾಗುತ್ತದೆ. ಈ ಐತಿಹಾಸಿಕ ಸತ್ಯವನ್ನು ಶ್ರೀ ತ.ರಾ.ಸು. ಅವರು ತಮ್ಮ ಶಕ್ತಿಯುತ ಲೇಖನಿಯಿಂದ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಪಾತ್ರಗಳ ಸ್ವಭಾವಕ್ಕೆ ತಕ್ಕಂತೆ ಅವರ ನಡೆ–ನುಡಿಗಳನ್ನು ಮೇಳೈಸಿ ಕಥೆಗೆ ಕಳೆ ಕಟ್ಟಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಸೊಗಸಾದ ಸಂಭಾಷಣೆ, ಸಂದರ್ಭಕ್ಕೆ ತಕ್ಕಂತೆ ಗಾದೆ ಮಾತುಗಳ ಬಳಕೆ, ಸರಳ ನಿರೂಪಣೆ ಓದುಗರ ಮನಸ್ಸನ್ನು ಆಕರ್ಷಿಸುತ್ತದೆ.

ಚಿತ್ರದುರ್ಗದ ಚಾರಿತ್ರಿಕ ಕಾದಂಬರಿಗಳ ಶೈಲಿ

—ಗುಂಡ್ಮಿ ಚಂದ್ರಶೇಖರ ಐತಾಳ

೧

ಹೊಸಗನ್ನಡದ ಕಾದಂಬರಿಕಾರರ ಶ್ರೇಣಿಯಲ್ಲಿ ಶ್ರೀ ತ.ರಾ.ಸು. ಅವರ ಹೆಸರು ಅಗ್ರಪಂಕ್ತಿಯಲ್ಲಿ ಅಲಂಕೃತವಾಗಿದೆ. ಇದಕ್ಕೆ ಅವರು ಬರೆದ ಕಾದಂಬರಿಗಳ ಸಂಖ್ಯೆಯಾಗಲಿ, ಅವರು ಬರೆದ ಕಾದಂಬರಿಗಳ ಬಾಹ್ಯ ಆಕರ್ಷಣೆಯಾಗಲೀ ಕಾರಣವಲ್ಲ. ತ.ರಾ.ಸು. ಅವರು ಯಾವ ಜಾತಿಯ ಕಾದಂಬರಿಯನ್ನು ಬರೆದರೂ, ಅದು ಸಾಮಾಜಿಕವಾಗಿರಲಿ ಅಥವಾ ಐತಿಹಾಸಿಕವಾಗಿರಲಿ, ಅವರು ಆ ಕಾದಂಬರಿಯ ವಸ್ತುವನ್ನು ಕುರಿತು ಆಳವಾದ ಅಧ್ಯಯನವನ್ನು ಮಾಡುತ್ತಾರೆ, ಅದನ್ನು ಕುರಿತು ಚಿಂತನೆ ನಡೆಯಿಸುತ್ತಾರೆ. ಈ ಮಾತನ್ನು ಅವರ ಸಾಮಾಜಿಕ ಕಾದಂಬರಿಗಳಿಗೆ ಅನ್ವಯಿಸುವುದಕ್ಕಿಂತ ಅತಿಶಯವಾಗಿ ಅವರ ಚಾರಿತ್ರಿಕ ಕಾದಂಬರಿಗಳಿಗೆ ವಿಶೇಷವಾಗಿ ಅನ್ವಯಿಸಬಹುದು ಶ್ರವಣಬೆಳಗೊಳದ ಗೊಮ್ಮಟೇಶ್ವರನನ್ನು ಕುರಿತ ಅವರ "ಶಿಲ್ಪಶ್ರೀ" ಕಾದಂಬರಿಯನ್ನು ಓದಿದರೆ ಈ ಮಾತಿನ ಯಥಾರ್ಥತೆ ಯಾರಿಗಾದರೂ ಅರಿವಾಗುವುದು. ಚಾವುಂಡರಾಯ, ರನ್ನರ ಕಾಲದ ಎಂದರೆ ಹತ್ತನೆಯ ಶತಮಾನದ ಮುಖ್ಯ ಶಿಲಾಶಾಸನ ಸಾಹಿತ್ಯಗಳನ್ನೂ, ಆ ಕಾಲದ ಇತರ ಹಳಗನ್ನಡ ಕಾವ್ಯಗಳನ್ನೂ ಓದಿಕೊಂಡು ಇತಿಹಾಸದ ಚಿತ್ರಗಳಿಗೆ ಕಾದಂಬರಿಕಾರರು ಕಲ್ಪನೆಯ ಚಿನ್ನದ ಮೆರುಗನ್ನು ಹಾಕಿದ್ದಾರೆ. ಹೀಗೆ "ಶಿಲ್ಪಶ್ರೀ" ಕಾದಂಬರಿ ಶ್ರವಣ ಬೆಳಗೊಳದ ಗೊಮ್ಮಟೇಶ್ವರನಷ್ಟೇ ಭವ್ಯ ಸುಂದರವಾಗಿ ಮೈದಾಳಿದೆ. ಹಾಗೆಯೇ ಸಾಮಾಜಿಕ ಕಾದಂಬರಿಗಳಲ್ಲೂ ಈ ಭವ್ಯತೆ ತ.ರಾ.ಸು. ಅವರ "ಹಂಸಗೀತೆ" ಯಲ್ಲಿ ಕಂಡು ಬರುತ್ತದೆ. ಸಂಗೀತ ಕಲೆಯ ಒಳ ಹೊರಗನ್ನು ಸಾಕ್ಷಾತ್ ಸೂಕ್ಷ್ಮ ತರವಾದ ಅದರ ವಿರಿಳಿತಗಳನ್ನು ಆ ಕಲೆಯ ಎತ್ತರ ಬಿತ್ತರಗಳನ್ನೂ ದಸಿಬುಸಿಗಳನ್ನೂ, ಸಾರಸರ್ವಸ್ವವನ್ನೂ ತ.ರಾ.ಸು. ಅವರು ಅರಿಸಿಕೊಂಡು "ಹಂಸಗೀತೆ" ಯಲ್ಲಿ ಎರಕ ಹೊಯ್ದಿದ್ದಾರೆ. ಒಬ್ಬ ಶ್ರೇಷ್ಠ ಸಂಗೀತಗಾರನು ತನ್ನ ಕಲೆಯಲ್ಲಿ ಪ್ರಾವೀಣ್ಯ ಸಿದ್ಧಿಗಳನ್ನು ಪಡೆಯಲು ಎಂಥ ತಪಸ್ಸು, ಸಾಧನೆಗಳು ಆವಶ್ಯಕವೋ ಇದಕ್ಕೆ ಅದೇ ತಪಸ್ಸು ಸಾಧನೆಗಳು ಬೇಕು. ಆ ಕ್ಷೇತ್ರದ ಸಂಪೂರ್ಣ ಪರಿಜ್ಞಾನ, ಲೋಕಾನುಭವಗಳ ಜೊತೆಗೆ ಅವುಗಳನ್ನು ಹೊಸದೆಂಬಂತೆ ಸೃಷ್ಟಿಸುವ ಪ್ರತಿಭೆ ಕಾದಂಬರಿಕಾರನಿಗೆ ಆವಶ್ಯಕ ಹೀಗೆ ತ.ರಾ.ಸು. ಅವರ ಸಾಮಾಜಿಕ ಕಾದಂಬರಿಗಳಲ್ಲಿ ಅವರ "ಹಂಸಗೀತೆ" 'Masterpiece' ಎನ್ನಬಹುದು. ಅವರ ಚಾರಿತ್ರಿಕ ಕಾದಂಬರಿಗಳಲ್ಲಿ ಚಿತ್ರದುರ್ಗದ ಪಾಳೆಯಗಾರರನ್ನು ಕುರಿತ ಕಾದಂಬರಿ ಮಾಲೆ ಅವರ 'Masterpiece' ಎನ್ನಬಹುದು. ಅವು ತ.ರಾ.ಸು. ಅವರು ಕನ್ನಡ ನಾಡು

ನುಡಿಗಳಿಗೆ. ಆ ದೃಷ್ಟಿಯಿಂದ ನೋಡಿದರೆ ಸಾಹಿತ್ಯಕ್ಕೆ ಇವರ ವಿಶಿಷ್ಟವೂ ಅಮೂಲ್ಯವೂ ಆದ ಕೃತಿರತ್ನಗಳಾಗಿವೆ.

ಚಿತ್ರದುರ್ಗದ ಐತಿಹಾಸಿಕ ಕಾದಂಬರಿ ಮಾಲೆಗೆ ತ.ರಾ.ಸು. ಅವರು ಆಧಾರ ಕೊಂಡ ಮೂಲಗ್ರಂಥಗಳು ಎರಡು. ಶ್ರೀ ಎಂ. ಎಸ್. ಪುಟ್ಟಣ್ಣನವರ 'ಚಿತ್ರದುರ್ಗದ ಪಾಳೆಯಗಾರರು' ಎಂಬ ಗ್ರಂಥವು. 'ಚಿತ್ರದುರ್ಗದ ಬಖೈರು' ಎಂಬಲ್ಲಿ ಸಿಕ್ಕುವ ದಾಖಲೆಗಳೂ ಚಿತ್ರದುರ್ಗದ ಪಾಳೆಯಗಾರರ ಸಂಪೂರ್ಣ ಮಾಹಿತಿಯನ್ನು ದೊರಕಿಸ [illegible] ಈ ಕಾದಂಬರಿ ಮಾಲೆಗೆ [illegible] ಎಂದು ಕಾದಂಬರಿಕಾರರು ಅವರ ಕಾದಂಬರಿಗಳ ಮುನ್ನುಡಿಯಲ್ಲಿ ಹೇಳಿದ್ದಾರೆ. ಈ ಮೂಲಸಾಮಗ್ರಿಯ ಜೊತೆಗೆ ತ.ರಾ.ಸು. ಅವರು ತಮ್ಮ ಪ್ರತಿಭೆಯ ಬಲದಿಂದ [illegible] ಪಾತ್ರ ವೈವಿಧ್ಯದ [illegible] ಅರಳಿಸಿದ್ದಾರೆ. ಐತಿಹಾಸಿಕ ಕಾದಂಬರಿಯನ್ನು ಬರೆಯುವುದು ಬಹಳ ಕಠಿಣವಾದ ಕಾರ್ಯ. ಸಾಮಾಜಿಕ ಕಾದಂಬರಿಯನ್ನು ಬರೆಯುವುದರಲ್ಲಿ ಆ ಸ್ವಾತಂತ್ರ್ಯ ಇರದು. ಐತಿಹಾಸಿಕ ಕಾದಂಬರಿಕಾರನು ಚರಿತ್ರೆಯ ನಿಯಮಗಳಿಗೂ, ದೊರೆಯುವ ಕಲ್ಪನೆಗಳಿಗೂ ಇತಿಹಾಸದ ಆಧಾರಗಳಿಗೆ ಬದ್ಧನಾಗಿರಬೇಕು. ಈಗಿನ ಚಿತ್ರದುರ್ಗದಲ್ಲಿ ಅವಕ್ಕೆ ಆಧಾರಗಳು ಸಿಕ್ಕುವುದಿಲ್ಲ. ದೊರೆತರೂ ಕಾಲದಿಂದ ಬಂದು [illegible] ಸಾಕ್ಷ್ಯ ಮತ್ತು ಸಾಧನಗಳು ನಾಶವಾಗಿರಬಹುದು. ಹೀಗೆ, ಐತಿಹಾಸಿಕ ಕಾದಂಬರಿಗಳನ್ನು ಬರೆಯುವಾಗ ಕಾದಂಬರಿಕಾರನು ಬಹಳ ಎಚ್ಚರಿಕೆ ವಹಿಸಬೇಕಾದುದು ಸಹಜ. ತ.ರಾ.ಸು. ಅವರು ತಮ್ಮ ಚಿತ್ರದುರ್ಗದ ಕಾದಂಬರಿ ಮಾಲೆಯನ್ನು ಅತ್ಯಂತ [illegible] ಕೃತಿಗಳನ್ನಾಗಿಸಿದ್ದಾರೆ. [illegible] ಹಾಗೂ [illegible], [illegible] ಐತಿಹಾಸಿಕ ಪಾತ್ರಗಳನ್ನು ಸಮರ್ಥವಾಗಿ ಬಳಸಿಕೊಂಡು ಪ್ರತಿಭಾಪೂರ್ಣವಾಗಿ ಬರೆದಿದ್ದಾರೆ.

೨

ತ.ರಾ.ಸು. ಅವರು ಚಿತ್ರದುರ್ಗದ ಐತಿಹಾಸಿಕ ಕಾದಂಬರಿ ಮಾಲೆಯಲ್ಲಿ ಬರೆದ ಕಾದಂಬರಿಗಳು ಅವುಗಳ ಕಥೆಯ ಕಾಲಮಾನದ [illegible] ಅನುಕ್ರಮವಾಗಿ ಹೀಗಿವೆ :

೧. ಕಂಬನಿಯ ಕುಯಿಲು
೨. ರಾಜ್ಯದಾಹ
೩. ರಕ್ತರಾತ್ರಿ
೪. ತಿರುಗುಬಾಣ
೫. ಹೊಸ ಹಗಲು
೬. ವಿಜಯೋತ್ಸವ : ಭಾಗ–೧

೭. ವಿಜಯೋತ್ಸವ : ಭಾಗ-೨
೮. ಕಸ್ತೂರಿ ಕಂಕಣ : ಭಾಗ-೧
೯. ಕಸ್ತೂರಿ ಕಂಕಣ : ಭಾಗ-೨

ಇವುಗಳಲ್ಲಿ 'ವಿಜಯೋತ್ಸವ'ದ ಕಥೆಗೂ 'ಕಸ್ತೂರಿ ಕಂಕಣ'ದ ಕಥೆಗೂ ಪರಸ್ಪರ ಸಂಬಂಧವಾಗಲಿ, ಹೊಂದಾಣಿಕೆಯಾಗಲಿ ಕಾಣುವುದಿಲ್ಲ. 'ವಿಜಯೋತ್ಸವ'ದ ವರೆಗೆ ಕಾದಂಬರಿಗಳ ಕಥೆ ಒಂದೇ ಸಮನೆ ಒಂದರ ಬೆನ್ನಿಗೊಂದು ಸುದೀರ್ಘವಾಗಿ ಮುಂದುವರಿಯುತ್ತದೆ. 'ವಿಜಯೋತ್ಸವ'ದ ವಸ್ತುವಿಗೂ 'ಕಸ್ತೂರಿ ಕಂಕಣ'ದ ವಸ್ತುವಿಗೂ ಮಧ್ಯೆ ಎಷ್ಟು ತಲೆಮಾರುಗಳು ಆಗಿಹೋಗಿವೆ. 'ವಿಜಯೋತ್ಸವ'ದ ಪಾಳೆಯಗಾರರಿಗೂ 'ಕಸ್ತೂರಿ ಕಂಕಣ'ದ ಕಸ್ತೂರಿ ರಂಗಪ್ಪನಾಯಕನಿಗೂ ಪರಸ್ಪರ ಸಂಬಂಧವೇನು—ಎಂಬ ಕಥೆಯ ಗೊಂದಲ ಇಲ್ಲಿ ಹುಟ್ಟಿ ಹೋಗಿ ಓದುಗರನ್ನು ನಿರಾಶೆಪಡಿಸುತ್ತದೆ. ಕಸ್ತೂರಿ ರಂಗಪ್ಪನಾಯಕನು ಬಿಚ್ಚುಗತ್ತಿ ಭರಮಪ್ಪನಾಯಕನ ಮಗನೇ, ಮೊಮ್ಮಗನೇ, ಮರಿಮಗನೇ; ಆ ಕಾದಂಬರಿಯ ವಸ್ತುವಿಗೂ, ಈ ಕಾದಂಬರಿಯ ಕಥೆಗೂ ನಡುವೆ ಕಾಲಮಾನದ ಅಂತರವೇನು ಎಂಬ ವಿಚಾರಗಳನ್ನು ಕಾದಂಬರಿಕಾರರು ಸ್ಪಷ್ಟ ಪಡಿಸುವುದಿಲ್ಲ. 'ಕಂಬನಿಯ ಕುಯಿಲು' 'ರಕ್ತರಾತ್ರಿ'ಗಳ ಮಧ್ಯದ ಗೊಂದಲವನ್ನು ಮುಂದೆ 'ರಾಜ್ಯದಾಹ' ಎಂಬ ಕಾದಂಬರಿಯಿಂದ ತುಂಬಿಕೊಟ್ಟಿರುವಂತೆ, ಇನ್ನಾದರೂ ತ.ರಾ.ಸು. ಅವರು ಈ ಒಂದು ಮುಖ್ಯವಾದ ಕೊರತೆಯನ್ನು ತುಂಬಿಕೊಡ ಬಲ್ಲರು ಎಂದು ನಾವು ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತೇವೆ. ಮೇಲೆ ಕಾಣಿಸಿದ ಈ ಕಾದಂಬರಿ ಮಾಲೆಯ ಅನುಕ್ರಮ ಕಥೆಯ ಅನುಕ್ರಮವೇ ವಿನಾ ಅವು ಪ್ರಕಟವಾದ ಕಾಲಾನುಕ್ರಮವಲ್ಲ. ಯಾರಾದರೂ ಪ್ರಕಾಶಕರು ಈ ಕಾದಂಬರಿ ಮಾಲೆಯನ್ನು ಒಂದೆರಡು ಸಂಪುಟಗಳಲ್ಲಿ ಪ್ರಕಟಿಸಿದರೆ, ಓದುಗರಿಗೂ, ಅಧ್ಯಯನಾಕಾಂಕ್ಷಿಗಳಿಗೆ ಬಹಳ ಉಪಕಾರವಾಗುವುದು. ಅಧ್ಯಯನಾಕಾಂಕ್ಷಿಗಳಿಗೆ ಈ ಕಾದಂಬರಿಗಳನ್ನೆಲ್ಲ ಒಟ್ಟಿಗೆ ಅನುಕ್ರಮವಾಗಿ ಸಂಪಾದಿಸಿ ಜೋಡಿಸಿ ಸಂಗ್ರಹಿಸಿಕೊಳ್ಳುವುದೇ ಒಂದು ದೊಡ್ಡ ಸಾಹಸ ಕಾರ್ಯವಾಗುತ್ತದೆ. ಒಂದು ಪುಸ್ತಕ ಭಂಡಾರದಲ್ಲಿ ಈ ಸಮಗ್ರ ಕಾದಂಬರಿ ಮಾಲೆಯ ಎಲ್ಲ ಕೃತಿಗಳು ಒಟ್ಟಿಗೆ ಸಿಕ್ಕಿದರೆ ಓದುಗನ ಪುಣ್ಯ ಎಂದು ಹೇಳಬೇಕು. ತ.ರಾ.ಸು. ಅವರ ಅಭಿಮಾನಿ ಪ್ರಕಾಶಕರು ಇನ್ನಾದರೂ ಅವರ ಸಾಮಾಜಿಕ ಕಾದಂಬರಿಗಳನ್ನು ಒಂದೆರಡು ಸಂಪುಟಗಳಲ್ಲೂ, ಐತಿಹಾಸಿಕ ಕಾದಂಬರಿಗಳನ್ನು ಕೆಲವು ಸಂಪುಟಗಳಲ್ಲೂ ಪ್ರಕಟಿಸಿದರೆ ಮಹೋಪಕಾರ ಮಾಡಿದಂತಾಗುವುದು. ನಾವು ಇಲ್ಲಿ ಚಿತ್ರದುರ್ಗದ ಚಾರಿತ್ರಿಕ ಕಾದಂಬರಿ ಮಾಲೆಯ ಶೈಲಿಯನ್ನು ಕುರಿತು ಮಾತ್ರ ನಾಲ್ಕು ಮಾತುಗಳನ್ನು ಪ್ರಸ್ತಾಪಿಸಬಯಸುತ್ತೇವೆ.

೩

ತ.ರಾ.ಸು. ಅವರ ಚಿತ್ರದುರ್ಗದ ಚಾರಿತ್ರಿಕ ಕಾದಂಬರಿ ಮಾಲೆಯನ್ನು ಓದುತ್ತಿದ್ದರೆ ಅವರು ಚಿತ್ರದುರ್ಗದ [illegible], ಅಂಗುಲ ಅಂಗುಲವನ್ನೂ

ಮಾತನಾಡಿಸಿದ್ದಾರೆ ಎನ್ನಿಸುತ್ತದೆ. ಅಲ್ಲಿಯ ಕೋಟೆ ಕೊತ್ತಲಗಳೂ, ಕಾವಲ ಬತೇರಿಗಳೂ, ಗುಡಿ ಗೋಪುರಗಳೂ, ಅರಮನೆ ಗುರುಮನೆಗಳೂ, ಬಂಡೆ ಬಂಡೆಗಳೂ ಹೊಂಡ ಹೊಂಡಗಳೂ ತಮ್ಮ ಇತಿಹಾಸವನ್ನು ಇಲ್ಲಿ ಬಿಚ್ಚಿ ಹೇಳುತ್ತವೆ. ತ.ರಾ.ಸು. ಅವರು ಇಲ್ಲೆಲ್ಲ ಅವುಗಳೊಡನೆ ಆತ್ಮೀಯವಾಗಿ ಒಡನಾಡಿ ಮಾತನಾಡಿಸಿದ್ದಾರೆ ಎಂಬುದಕ್ಕೆ ಅವರು ಇಲ್ಲಿ ನಿರೂಪಿಸಿದ ಆ ಚಿತ್ರಗಳ ಸುರುಳಿಯೇ ಸಾಕ್ಷಿ. ಇಲ್ಲಿಯ ಪಾತ್ರಗಳೆಲ್ಲ ಜೀವಂತ ವ್ಯಕ್ತಿಗಳಾಗಿ ಆ ಕಾಲದ ವೇಷ ಭೂಷಣ, ರೀತಿ ನೀತಿ, ನಡೆ ನುಡಿಗಳೊಂದಿಗೆ ನಮ್ಮ ಕಣ್ಣೆದುರು ಬಂದು ನಿಲ್ಲುತ್ತಾರೆ. ಈ ತಾದಾತ್ಮ್ಯ ಸಾಧ್ಯವಾಗುವುದು ಸುಲಭವಲ್ಲ. ಇದರ ಹಿಂದೆ ಕಾದಂಬರಿಕಾರರ ಆಳವಾದ ಅಧ್ಯಯನದ ಶ್ರಮ ಕಾಣಿಸುತ್ತದೆ, ಕಲಾತ್ಮಕವಾಗಿ ಅವುಗಳನ್ನು ಪ್ರತಿಪಾದಿಸಿದ ಕಾದಂಬರಿಕಾರರ ಪ್ರತಿಭೆ ಮಿಂಚುತ್ತದೆ, ಕಾದಂಬರಿಕಾರರ ಶ್ರಮ ಸಾರ್ಥಕವೆನ್ನಿಸಿ ಅವರೇರಿದ ಎತ್ತರದ ಸಿದ್ಧಿಗೆ ನಮ್ಮ ಮನಸ್ಸು ಮಾರು ಹೋಗುತ್ತದೆ.

ತ.ರಾ.ಸು. ಅವರ ಕಾದಂಬರಿ ಶೈಲಿ ತೀರಾ ಸಾಮಾನ್ಯ ಓದುಗರನ್ನು ಬಿಡದೆ, ತೀರ ಅಸಮಾನ್ಯ ಸಹೃದಯರನ್ನು ಮಾತ್ರ ಹಿಡಿಯದೆ, ಸರ್ವರಿಗೂ ಆಪ್ಯಾಯಮಾನವಾದ ಒಂದು ವಿಶಿಷ್ಟತೆಯನ್ನು ಪಡೆದಿದೆ. ತ.ರಾ.ಸು. ಅವರದು ಸಮನ್ವಯ ಶೈಲಿ, ಸುವರ್ಣ ಮಾಧ್ಯಮ. ಕನ್ನಡ ಭಾಷೆಯು ಒಂದು ಸರ್ವಸಮ್ಮತವಾದ, ಹಿತವಾದ ಓಜಸ್ಸಿನಿಂದ ಇಲ್ಲಿ ಪ್ರವಹಿಸುತ್ತದೆ. ಅದರ ಬಗೆ ಬಗೆಯ ಸ್ವರೂಪಗಳನ್ನು ಇಲ್ಲಿ ನಾವು ನೋಡೋಣ.

೪

ಮದಕರಿನಾಯಕನ ಮರಣದಿಂದ ಆರಂಭವಾಗುತ್ತದೆ ಚಿತ್ರದುರ್ಗದ ಪಾಳೆಯಗಾರರನ್ನು ಕುರಿತ ಕಾದಂಬರಿ ಮಾಲೆ. ಅದರಿಂದ ಉದ್ಭವವಾದ ರಾಜಕೀಯ ಗೊಂದಲದ ಚಿತ್ರಣ "ಕಂಬನಿಯ ಕುಯಿಲು" ಕಾದಂಬರಿಯಲ್ಲಿ ತುಂಬಿದೆ. ಮೃತ್ಯು–ಶಯ್ಯೆಯ ಬಳಿ ಇದ್ದ ಮದಕರಿನಾಯಕನ ಮೂವತ್ತು ಮಂದಿ ನಾಗತಿಯರು ಹೀಗಿದ್ದರಂತೆ ಅವನನ್ನು ನೆಚ್ಚಿ ಕೈಹಿಡಿದ ಮೂವತ್ತು ಮಂದಿ ನಾಗತಿಯರು ಕತ್ತರಿಸಿದ ಹೂಮಾಲೆಯ ತುಂಡುಗಳಂತೆ, ದುಃಖದ ಭಾರಕ್ಕೆ ಕಾಲು ಕುಸಿದಲ್ಲಲ್ಲಿ ಕೆಡೆದಿದ್ದರು. ರಾಜಕೀಯದ ಸೂಕ್ಷ್ಮವನ್ನು "ಇದು ಒಳಸಂಚುಗಳ ಮುಳ್ಳು ಪೊದರುಗಳ ನಡುವೆ ಬೆಳೆದ ಹೂವು ಎಂತಲೇ ಇದರ ಮೇಲೆ ಕೂಡಲು ಮೈಯೆಲ್ಲಾ ಕಣ್ಣಿದ್ದರೂ ಸಾಲದು" ಎಂಬ ಮಾತಿನಲ್ಲಿ ಎರಕ ಹೊಯ್ದಿದ್ದಾರೆ. ಇಡಿಯ ಕಾದಂಬರಿ ಮಾಲೆಯ ವಸ್ತುವನ್ನು ಒಂದು ವಾಕ್ಯದಲ್ಲಿ ಅಳೆದ ರೀತಿ, ಅಂಗೈಯಲ್ಲಿ ಅಂಬುಧಿಯನ್ನು ಹಿಡಿದ ಹಾಗಿದೆ, ನೋಡಿರಿ. "ರಕ್ತದಲ್ಲಿ ಕಟ್ಟಿದ ಕೋಟೆ ರಕ್ತದಲ್ಲಿ ಮುಳುಗುತ್ತದೆ. ಕತ್ತಿಯಲ್ಲೇ ಬಿತ್ತಿದುದು ಕತ್ತಿಯಲ್ಲೇ ಕೊಯಿಲಾಗುತ್ತದೆ." ಪಟ್ಟದ ಮಹಿಷಿ ಓಬವ್ವನಾಗತಿಯನ್ನು ರಾಜಕೀಯಕ್ಕೆ ಎಳೆಯುವಾಗ ಅದರ ಹಿಂದಿನ ಚಿತ್ರವನ್ನು ಕಾದಂಬರಿಕಾರರು. "ಬಹು ಸುಂದರವಾದ ವಸ್ತುವೊಂದನ್ನು ಅನಿವಾರ್ಯ

ವಾಗಿ ಕೆಡಿಸುವಾಗ ಉಂಟಾಗುವ ವ್ಯಥೆ ಅವರನ್ನು ಕಲಕಿತ." ಎನ್ನುತ್ತಾರೆ. ಆ ವ್ಯಕ್ತಿತ್ವವನ್ನು ಭಾಷೆಯ ಪಂಜರದಲ್ಲಿ ಹಿಡಿದಿಟ್ಟ ರೀತಿ ಇದು. "ತಾಯಿ, ನಿಮ್ಮಂಥವರು ಈ ನೆಲದ ಮೇಲೆ ಇರುವವರೆಗೂ ಈ ದುರ್ಗದ ಕೋಟೆಯ ಒಂದು ಕಲ್ಲೂ ಕದಲುವುದಿಲ್ಲ." ಮದಕರಿನಾಯಕರ ನಾಗತಿಯರು ಸಹಗಮನ ಮಾಡಿದಾಗ "ಮಾಸತಿಯರ ಕೀರ್ತಿಯನ್ನು ಸಹಸ್ರ ತೋಳುಗಳನ್ನೆತ್ತಿ ಸಾರುವವನಂತೆ ಅಗ್ನಿದೇವ ಉರಿಯುತ್ತಿದ್ದ" ನಂತೆ.

ರಾಯಣ್ಣ ದಳವಾಯಿಯ ರೂಕ್ಷ ವ್ಯಕ್ತಿತ್ವವಿದು: "ಚೂಪಾದ ಮೂಗಿನ ಕೋಲು ಮುಖದಲ್ಲಿ, ಎಲ್ಲೋ ಆಳದಲ್ಲಿ ಹೊಳೆಯುವ ಕಣ್ಣುಗಳನ್ನು ನೋಡಿದಾಗ, ನೋಡಿದವರಿಗೆ ಮೈಮೇಲೆ ಜರಿಪರಿದಂತಾಗುತ್ತದೆ. ಕೊನೆಯಲ್ಲಿ ಕೊಂಚ ಬಾಗಿದ ತಳುವಾದ ಮೂಗು ಇದಿರು ನಿಂತವರ ಎದೆಯನ್ನು ಬಗೆದು ಇಣುಕಿ ನೋಡುವಂತಿದ್ದರೆ, ಕಣ್ಣನೋಟದ ತೀಕ್ಷ್ಣತೆ ಉಕ್ಕಿನ ತಗಡನ್ನಾದರೂ ಕತ್ತರಿಸುವಷ್ಟು ಹರಿತವಾದುದು." "ಕಲ್ಲು ಮಾತಾಡಬೇಕೆಂದರೆ ಕೊಡತಿಯ ಪೆಟ್ಟು ಬೀಳಬೇಕು" ಎಂಬ ಮಾತಿನಲ್ಲಿ ಧ್ವನಿ ಅಪಾರವಾದುದು. "ನಾಯಕರನ್ನು ಆಳಿ-ದಂತೆಯೇ ರಾಜ್ಯವನ್ನು ಆಳುವುದಕ್ಕೆ ಹೋಗುತ್ತಾಳೆ ಗಡಿಗೆ ತಾನಾಗಿಯೇ ದೊಣ್ಣೆಗೆ ಮುದ್ದು ಕೊಡಲು ಹೋಗುವಂತೆ" ಎಂಬಲ್ಲಿ ಹೆಂಗಸರಿಗೆ ರಾಜಕೀಯ ತರವಲ್ಲ ಎಂಬುದನ್ನು ಪ್ರಭಾವ ಪೂರ್ಣವಾಗಿ ಹೇಳಿದ್ದಾರೆ. ಕಿರಿಯ ರಾಣಿಯ ಅವಸರ ಪ್ರವೃತ್ತಿಯನ್ನು, "ಇನಗ್ನ ಕಾದಹಾಲು, ಆರಿದರೆ ತಾನೇ ಹಿತವಾಗುತ್ತದೆ" ಎಂದು ಅಳೆದಿದ್ದಾರೆ. ಈ ಸಂಭಾಷಣೆಯ ಸೊಬಗನ್ನು ನೋಡಿರಿ.

"ಅಕ್ಕ ನೀನು ಈ ಲೋಕದ ಹೆಣ್ಣಲ್ಲ, ದೇವತಾಸ್ತ್ರೀ"

"-ಹಾಗೆಲ್ಲಾ ಅಸಂಬದ್ಧವಾಗಿ ಹೊಗಳಬಾರದು. ನಾನೊಂದು ಮುರುಕು ಕನ್ನಡಿ ಚೂರು ಬಿಸಿಲು ಬಿದ್ದರೆ ಅಷ್ಟು ಹೊಳೆಯುತ್ತೇನೆ. ಅಷ್ಟು ಮಾತ್ರಕ್ಕೆ ನನ್ನನ್ನೇ ಸೂರ್ಯ ಎಂದು ಬಿಟ್ಟರೆ, ಎಲ್ಲಿಯಾದರೂ ಉಂಟೆ ...."

ಓಬವ್ವನಾಗತಿಯ ವ್ಯಕ್ತಿತ್ವದ ಇನ್ನೊಂದು ಮುಖವಿದು 'ಅಂತೂ ನಿನ್ನ ಹುಬ್ಬು ಗಂಟಾದರೆ, ಭೂಮಿ ನಡುಗಿದಂತಾಗುತ್ತದೆ ನನಗೆ." ರಾಜನೀತಿಯ ಒಳಮರ್ಮವನ್ನು ಕೇಳಿರಿ. "ಯಾವ ಮಾತನ್ನು ಅಷ್ಟು ಸುಲಭ ಅಂದು ಕೊಳ್ಳಬಾರದು, ಲಿಂಗಣ್ಣ, ಕಲ್ಲಿಗೆ ಕಲ್ಲಿನ ತೂಕವಿದ್ದರೆ ಹೂವಿಗೂ ಹೂವಿನ ತೂಕವಿದ್ದೇ ಇರುತ್ತದೆ. ಆದ್ದರಿಂದ ಎಲ್ಲಕ್ಕೂ ತೂಕವಿದೆ ಎಂದು ಅರಿತು ಕೊಂಡು ನಡೆಯುವುದು ಒಳಿತು."

ದಳವಾಯಿ ಮುದ್ದಣ್ಣನ ಪಾಶವೀ ವ್ಯಕ್ತಿತ್ವವನ್ನು ರೂಪಿಸಿದ ರೀತಿ ಇದು. "ಹುಲ್ಲೆಯ ಮರಿಯನ್ನು ಸಾಕಿ ಬೆಳೆಸಿ, ದೊಡ್ಡದು ಮಾಡಿ, ತಾನೇ ಅದರ ಮೇಲೆ ತನ್ನ ಬೇಟೆಯ ನಾಯಿಯನ್ನು ಛೂ ಬಿಟ್ಟು ನೋಡಿ, ಸಂತೋಷ ಪಡುತ್ತಾನೆ.

ಒಂದು ದಿನ ಅದನ್ನು ನೋಡಿದೆ. ಬೇಸಿಗೆಯಾಯಿತು." ಅವನ ಕ್ರೌರ್ಯದ ಮುಖ ಹೇಗಿತ್ತು? "ಕನ್ನಡಿಯ ಪ್ರತಿಬಿಂಬದಲ್ಲಿ ಉಗ್ರವಾಗಿ ಕೆಂಪ ಕಾರುತ್ತಿದ್ದ ಕಣ್ಣುಗಳನ್ನು ಕಂಡು ಆತನೇ ಒಂದು ಹೆಜ್ಜೆ ಹಿಮ್ಮೆಟ್ಟಿದ."

ಓಬವ್ವ ನಾಗತಿಯರ ಅಂತಃಪುರದ ಕಾವಲುಗಾರ "ಏನಾದರಾಗಲಿ. ಪ್ರಾಣ ಕೊಟ್ಟಾದರೂ ನಾಗತಿಯನ್ನು ಅವರಿಂದ ರಕ್ಷಿಸಬೇಕೆಂದು ನಿರ್ಧಾರ ಮಾಡಿ ಆ ಧೀರ ನಿರ್ಧಾರವೇ ಮಾನವಾಕೃತಿಯನ್ನು ತಳೆದಂತೆ ಅಂತಃಪುರದ ಬಾಗಿಲಿನಲ್ಲಿ ಕಾವಲು ನಿಂತ ಕಸ್ತೂರಿನಾಯಕ" ರಾಜನೀತಿಯನ್ನು ಕುರಿತ ಸೂತ್ರಪ್ರಾಯವಾದ ಮಾತನ್ನು ಹಿರಿಯರಾಣಿ ಲಿಂಗಣ್ಣನಾಯಕನಿಗೆ ಹೇಳುವಾಗ ಆ ಮಾತು ಮುಂದೆ ಸತ್ಯವಾಗುವುದನ್ನು ನಾವು ಕಾಣುತ್ತೇವೆ, "ಹನಿಹನಿಯಾಗಿ ಬಿದ್ದರೂ ನೀರು ಕಡೆಗೊಂದು ದಿನ ಕೋಡುಗಲ್ಲನ್ನೇ ಕವಲಿಸುವಂತೆ, ಲೋಕದ ಮಾತು ನಿನ್ನ ನಂಬಿಕೆಯನ್ನು ಕೆಡಿಸಬಹುದು."

ಓಬವ್ವನಾಗತಿಯ ಅಸಹಾಯ ಸ್ಥಿತಿಯನ್ನು ಈ ಮಾತು ಎಷ್ಟು ಸಮರ್ಥವಾಗಿ ಹೇಳುತ್ತದೆ ನೋಡಿರಿ, "ಬೇಕಿಯ ಮೇಲೆ ಬಿದ್ದ ಕೈಕಾಲು ಕಟ್ಟಿದ ಪಶು ಅಸಹಾಯ ಸ್ಥಿತಿಯಲ್ಲಿ ನರಳುವ ಧ್ವನಿಯಲ್ಲಿ ಹೇಳಿದಳು ನಾಗತಿ." ವೀರಣ್ಣ ಗಿರಿಜೆಯರ ಪ್ರಣಯವನ್ನು ಕುರಿತು ಕಾದಂಬರಿಕಾರರು ಹೇಳಿದ ಮಾತು ಎಲ್ಲ ಪ್ರಣಯಗಳಲ್ಲೂ ಸರ್ವಸಾಮಾನ್ಯ. "ಬಂಡಿಗೆ ಸೋಲಲಿಲ್ಲ, ದಾಳಿಗೆ ಸೋಲಲಿಲ್ಲ—ಹುಡುಗೀ ಕಣ್ಣಿಗೆ ಸೋತುಬಿಟ್ಟ ಗಂಡು ಭಂಟ" ಇದು ಜನಪದ ಪ್ರಣಯ ಕಥೆಗಳಲ್ಲಿ ಬರುವ ವರ್ಣನೆಯ ರೀತಿಯಲ್ಲಿದೆ. ಹೀಗೆ ಉದ್ಗರಿಸಿದವರೂ ಹಳ್ಳಿಯವರೇ. ಕಸ್ತೂರಿ ನಾಯಕ ವೀರಣ್ಣರೆಂಬ ಅಣ್ಣತಮ್ಮ ಗಂಗವ್ವ ಗಿರಿಜೆಯರೆಂಬ ಅವರ ಮನದನ್ನೆಯರ ಪ್ರೀತಿಯ ದಾಂಪತ್ಯ ಚಿತ್ರ ಈ ಕಾದಂಬರಿಯಲ್ಲಿ ಇಡಿಯಾಗಿ ಉದ್ಧರಿಸಬೇಕೆಂಬಷ್ಟು ಸೊಗಸಾಗಿ ಮೂಡಿದೆ. ಪ್ರೇಮ ಸಾಮ್ರಾಜ್ಯದ ಈ ಸುಮಧುರ ಸಂಭಾಷಣೆಯನ್ನು ಕೇಳಿರಿ: "ಅದನ್ನೇ ಸಂಸಾರದಲ್ಲಿ ಜಾಣತನ ಅನ್ನೋದು. ನಂಟೂ ಕಡಿದು ಕೊಳ್ಳಬಾರದು, ಗಂಟೂ ಕಳೆದು ಕೊಳ್ಳಬಾರದು. ಹತ್ತು ಕುದುರೆ ಕಟ್ಟಿದ ರಥ ನಡೆಸುತ್ತಾರೆ, ನೋಡು, ಹಾಗೆ ನಡೆಸಬೇಕು ಸಂಸಾರಾನ. ಈ ಕುದುರೆಗಳನ್ನೆಲ್ಲಾ ಒಟ್ಟಿಗೆ ಒಂದೇ ದಿಕ್ಕಿನಲ್ಲಿ ನಡೆಸುವ ಲಗಾಮು ಇದೆಯಲ್ಲ ಅದು ಬಲವಾಗಿರಬೇಕು......." "ಎಲ್ಲಿದೆ ಅಂಥ ಲಗಾಮು?" "ಪ್ರೀತಿಯೇ, ವಿಶ್ವಾಸವೇ ಆ ಲಗಾಮು ವೀರಣ್ಣ. ಚಾಟಿ ಏಟಿನ ಮೇಲೆ ಓಡೋ ಕುದುರೆ ಎಂದಿದ್ದರೂ ಧಣಿಯನ್ನ ಕೆಡವಿ ಹಾಕುವುದು ಖಂಡಿತ. ಅದೇ ಪ್ರೀತಿಗೆ ಒಗ್ಗಿದ ಕುದುರೆಯಾದರೆ, ತಾನು ಬಿದ್ದರೂ ನಿನ್ನನ್ನು ಬೀಳಿಸುವುದಿಲ್ಲ......." "ಹಾಗಾದರೆ ಹೆಣ್ಣನ್ನು ಹೊಗಳಲೇ ಬಾರದು ಅನ್ನುತ್ತೀಯಾ?" "ಯಾಕೆ ಹೊಗಳಬೇಕು – ಆದರೆ ಅದಕ್ಕೆ ಸಮಯ ಬಂದಾಗ, ಅದು ಹೇಗಿರಬೇಕು ಗೊತ್ತೆ ವೀರಣ್ಣ? ಅಂಥಾ ಹೊಗಳಿಕೆ ಎಂದು ಬಂದೀತೋ ಎಂದು ಕಾಯುತ್ತಿರಬೇಕು. ಅದು ಅಗ್ಗದ ಸರಕಾಗಬಾರದು. ವರ್ಷಕ್ಕೊಂದು ಬಾರಿ

ಬಿಡುವ ಹೂವಿನ ಹಾಗಿದ್ದರೆ ಆ ಕಾಲ ಎಂದು ಬಂದೀತೋ ಎಂದು ಕಾಯುತ್ತೇವೆ. ಎಷ್ಟು ಬೆಲೆಯಾದರೂ ಕೊಟ್ಟು ಕೊಳ್ಳುತ್ತೇವೆ. ಹಾಗಿರಬೇಕು ಹೊಗಳಿಕೆ. ಎಲ್ಲಿ ಹೊಗಳ ಬೇಕು, ಎಲ್ಲಿ ಹೊಗಳ ಬಾರದು ಎನ್ನುವುದನ್ನು ಕಲಿಯುವುದು ಬಹಳ ಕಷ್ಟ ವೀರಣ್ಣ."

"ಈ ಕಷ್ಟದ ವಿದ್ಯವನ್ನೆಲ್ಲ ನೀನೆಲ್ಲಿ ಕಲಿತೆ ಅತ್ತಿಗೆ?.........."ಹೂ. ಮುತ್ತಿ–ನ್ನಾರು ಅವರೇ. ಹೆಂಗಸೇನು ಕನ್ನಡಿ ಇದ್ದ ಹಾಗೆ ಬಿಸಿಲಿದ್ದರೆ ಬಿಸಿಲು, ಕತ್ತಲಿದ್ದರೆ ಕತ್ತಲನ್ನು ಬಿಂಬಿಸುತ್ತದೆ. ಅವರಲ್ಲಿ ಬೆಳಕು ಕತ್ತಲನ್ನು ಕಾಣಿಸುವವರೆಲ್ಲಾ ಅವರೇ". ಈ ಕಾದಂಬರಿಯ ನೂರು–ನಾಲ್ಕನೆಯ ಪ್ರಕರಣಗಳಿಡೀ ಇಂಥ ಗೃಹಿಣೀ ಸೂಕ್ತಿತೆಯಿಂದ ತುಂಬಿದೆ, ಹಾಗಾದರೆ ಗೃಹಸ್ಥ ಸಂಹಿತೆ ಯಾವುದು ಎಂಬುದಕ್ಕೂ ಅಲ್ಲಿ ಉತ್ತರವುಂಟು "ಗಂಗಾ, ನಿನಗೆ ಹೊರಗೆ ದುಡಿಯುವ ಗಂಡಸರ ಬುದ್ಧಿ ಅರ್ಥವಾಗಿಲ್ಲ. ಅದು ಹತ್ತು ಕಡೆಯ ಗಾಳಿಗೆ ಒಡ್ಡಿದ ಸೊಡರು" ಎಂಬ ಮಾತು ಸೇವಕ ವೃತ್ತಿಯ ಕಷ್ಟದ ಮಹಾರಾಶಿಯನ್ನೇ ಅಳೆಯುತ್ತದೆ. ಇಲ್ಲಿಯ ಗೃಹಿಣಿಯರಾದ ಗಂಗವ್ವ - ಗಿರಿಜೆಯರು ದಳವಾಯಿ ಮುದ್ದಣ್ಣನ ನಿರಂಕುಶ ರಾಜ್ಯಭಾರದ ಇತಿಶ್ರೀಗೆ ಸ್ಫೂರ್ತಿ ಶಕ್ತಿಯಾಗುತ್ತಾರೆ. ಅವನ ಅನ್ಯಾಯದ ಹತ್ತಿಯ ಗಿರಿಗೆ ಹೊತ್ತಿಸಿದ ಬೆಂಕಿಯ ಕಿಡಿಗಳಾಗುತ್ತಾರೆ.

ಇಬ್ಬರು ದೇಸಣ್ಣ ಮುದ್ದಣ್ಣರೆಂಬ ದಳವಾಯಿಗಳೊಳಗೆ ನಡೆದ ಶಾಂತಿ ಯುದ್ಧಗಳ ಬಗೆಗೆ ಪಂಸಿದ ಅಭಿಪ್ರಾಯದ ಕಿಡಿಗಳ ತೀಕ್ಷ್ಣತೆಯನ್ನು ನೋಡಿರಿ – "ಸತ್ಯದ ಮಾರ್ಗ ಬಹು ವಿಚಿತ್ರ ಮುದ್ದಣ್ಣ. ನನಗೆ ಕಂಡದ್ದು ನನಗೆ ಸತ್ಯ. ನಿನಗೆ ಕಂಡದ್ದು ನಿನಗೆ ಸತ್ಯ. ಈ ಎರಡರಲ್ಲಿ ಯಾವುದು ಸರಿ? ಈ ಎರಡು ಸತ್ಯಗಳ ತಿಕ್ಕಾಟದಲ್ಲಿ ಸತ್ಯ ಉದ್ಧಾರವಾಗುವುದಿಲ್ಲ. ಅವರ ಹೆಸರಿನಲ್ಲಿ ಜನರ, ಅದರಲ್ಲೂ ಹೆಚ್ಚಾಗಿ ನಿರಪರಾಧಿಗಳ ರಕ್ತಪಾತವಾಗುತ್ತದೆ. ಅಂಥ ರಕ್ತಪಾತಕ್ಕೆ ನಾನು ಹೆದರುತ್ತೇನೆ. ನಿರಪರಾಧಿಗಳ ರಕ್ತ, ಕಣ್ಣೀರು ಏಳೇಳು ಜನ್ಮಕ್ಕೂ ಬೆನ್ನಟ್ಟಿ ಬರುವ ಭಯಂಕರ ಪಾಪ, ಮುದ್ದಣ್ಣ."

"ರಕ್ತಪಾತವೆಂದರೆ, ಯುದ್ಧದಲ್ಲೇ ಮೈ ಸವೆಸಿದ ದಳವಾಯಿಗಳಿಗೂ ದಿಗಿಲೇ?"

"ನಿಜ. ನನಗೆ ದಿಗಿಲು. ದಳವಾಯಿಯಾದವರಿಂದಲೇ, ರಕ್ತವೃಷ್ಟಿ ಕರೆವ ರಣದಲ್ಲಿ ಮೈ ಸವೆದವರಿಂದಲೇ ನನಗಿಷ್ಟು ದಿಗಿಲು. ರಕ್ತದ ಬೆಲೆ ಏನೆಂಬುದು ಬೇರೆಯವರಿಗೆ ತಿಳಿಯುವುದು ಅಸಾಧ್ಯ ಮುದ್ದಣ್ಣ. ಆದರೆ ನನಗೆ, ನಿನಗೆ ಗೊತ್ತು. ರಕ್ತದಲ್ಲಿ ಬಿತ್ತಿದ ಬೆಳೆಯನ್ನು ಕಂಬನಿಯ ಕಾಲುವೆ ಹರಿಸಿ ಬೆಳೆಸಬೇಕಾಗುವುದು ಎಂಬುದು ಬೇರೆಯವರಿಗೆ ಕಾಣದಿರಬಹುದು... ಊಹು. ಯುದ್ಧದಿಂದ, ಶಕ್ತಿಯಿಂದ ತೀರ್ಮಾನವಾದ ಮಾತು, ಎಂದೂ ಶಾಶ್ವತವಾಗುವುದಿಲ್ಲ.... ಆದರೆ ಇಂದು ಪರರ ಮೈಯಿಂದ ಸುರಿವ ನೆತ್ತರು, ನಾಳೆ ನಮ್ಮ ಮೈಯಿಂದ ಸುರಿವ ನೆತ್ತರಿಗೆ ಮುನ್ನುಡಿ."

ದಳವಾಯಿ ಮುದ್ದಣ್ಣನ ಕಪಟ ವ್ಯಕ್ತಿತ್ವದ ಬೂದಿ ಮುಚ್ಚಿದ ಕೆಂಡದ ನಗುವು ಹೇಗಿತ್ತು ? "ಆ ನಗುವಿನ ಉಗ್ರತೆಗೆ, ಭಾವನೆಯನ್ನು ಹೊತ್ತ ತೇಗದ ಜಂತೆಗಳೂ ನಡುಗಿದುವು."

ಆ ಕಾಲದ ಪ್ರಧಾನರ ಮನೆ ಹೇಗಿತ್ತು ? "ಸುವರ್ಣ ವರ್ಣದಿಂದ ರಚಿತವಾದ ಆ ಚಿತ್ರಗಳು ಹಜಾರದಲ್ಲಿ ಹಚ್ಚಿದ ನಸುಗತ್ತಲಲ್ಲೂ ಥಳ ಥಳಿಸುತ್ತಿದ್ದುವು." ಚಿತ್ರದುರ್ಗದ ಮಹಾಪ್ರಧಾನರಾದ ಭುವನಪ್ಪನವರು ತನ್ನ ಮಗನಿಗೆ ಪ್ರಧಾನಿ ಪಟ್ಟ ತಪ್ಪುವುದೆಂದು ಅಳುಕಲಿಲ್ಲ. ಬ್ರಾಹ್ಮಣನಾಗಿ ಹುಟ್ಟಿರುವುದೇ ಅವನ ಪ್ರಧಾನಿ ಪಟ್ಟ. ಅದನ್ನು ಯಾರೂ ಕಿತ್ತು ಕೊಳ್ಳುವುದು ಸಾಧ್ಯವಿಲ್ಲ. ಎನ್ನುತ್ತಾನೆ. "ನಮ್ಮ ತಂದೆ ನನಗೆ ಪ್ರಧಾನಿ ಪಟ್ಟ ತಪ್ಪಿಸಿದ ಎಂದು ಕೊಳ್ಳಬಹುದು ಅವನು. ಆದರೆ ಅವನಿಗೆ ದೇವರು ಕೊಟ್ಟ ಪದವಿಯನ್ನು ಯಾರು ತಪ್ಪಿಸಲು ಸಾಧ್ಯ ಹೇಸಣ್ಣ ? ಹೇಗೂ ಅವನಿಗೆ ಪ್ರಧಾನಿ ಪಟ್ಟಕ್ಕಿಂತ ಹಿರಿದಾದ ಪಟ್ಟ ಕೊಟ್ಟಿದಾನೆ ಭೂತನಾಥೇಶ್ವರ. ಆ ಅಧಿಕಾರ ನಡಸು ಎಂದು ಹೇಳುತ್ತೇನೆ."

"ಏನು ಅಧಿಕಾರ ?"

"ಬ್ರಾಹ್ಮಣ ಜನ್ಮದಿಂದ ಬಂದ ದೊಡ್ಡ ಪದವಿ. ದೊರೆ, ಪ್ರಧಾನಿ ದೊಡ್ಡವರು ನಿಜ. ಆದರೆ ಅವರನ್ನೂ ಹರಸುವ ಅಧಿಕಾರ, ಕರ್ಮಬ್ರಾಹ್ಮಣನಾದ ಬ್ರಾಹ್ಮಣನಿಗಿದೆ. ಯಜ್ಞೇಶ್ವರನ ಆರಾಧನೆ ಮಾಡುವ ಪದವಿ ಯಾರಿಗಿದೆ ಹೇಳಿ ?"

ಕಸ್ತೂರಿನಾಯಕನ ಸ್ವಾಮಿ ಭಕ್ತಿಯನ್ನೂ, ಸೇವಾ ನಿಷ್ಠೆಯನ್ನೂ ಕಾದಂಬರಿಕಾರರು ಇನ್ನಿಲ್ಲದ ಶಕ್ತಿಯಿಂದ ಪ್ರತಿಪಾದಿಸಿದ್ದಾರೆ. "ಪಾದ ಸೇವಕನಲ್ಲಿ ಏಕೋ ತಾಯಿಯವರಿಗೆ ಇಂದು ನಂಬಿಕೆ ಬರುವಂತಿಲ್ಲ. ಅದಕ್ಕೇ ಮತ್ತೆ ಮತ್ತೆ ಪರೀಕ್ಷೆ ಮಾಡುತ್ತಿದ್ದೀರಿ. ಆಯಿತು, ತಮ್ಮ ಚಿತ್ತ. ಕೈಯಲ್ಲಿ ಹಾಲು ಕೊಟ್ಟಿದ್ದೀರ. ಇದು ಬರೀ ಹಾಲಲ್ಲ, ನನ್ನ ತಾಯಿಯ ಮೊಲೆಹಾಲು ಎಂದು ತಿಳಿದು ಈ ಅಮೃತದ ಸಾಕ್ಷಿಯಾಗಿ ಹೇಳುತ್ತೇನೆ–ನನ್ನ ಜೀವವಿರುವವರೆಗೆ, ಅವರ ಜೀವ ನನ್ನ ಜೀವವೆಂದು ತಿಳಿದು ಸೇವೆ ಮಾಡುತ್ತೇನೆ. ಅದಕ್ಕೆ ತಪ್ಪಿದ ದಿನ ತಾಯಿಯವರ ಪಾದಕ್ಕೆ ನನ್ನ ತಲೆ ಒಪ್ಪಿಸುತ್ತೇನೆ. ಇದಕ್ಕೆ ಸೂರ್ಯ ಚಂದ್ರರೇ ಸಾಕ್ಷಿ." ಎಂದು ಹೇಳಿ ಕಸ್ತೂರಿನಾಯಕ ಒಂದೇ ಬಾರಿಗೆ ಬಟ್ಟಲಿನಲ್ಲಿದ್ದ ಹಾಲನ್ನೆಲ್ಲಾ ಕುಡಿದು ಹೇಳಿದ.

"ಹಾಲು ಕೊಟ್ಟು ಪರೀಕ್ಷಿಸಿದಿರಿ ತಾಯಿ. ಇನ್ನು ಬೇಕಾದರೆ ಹಾಲಾ ಹಲವನ್ನೂ ಕೊಟ್ಟು ಈ ನಾಯಿಯನ್ನು ಪರೀಕ್ಷಿಸಿ ನೋಡಬಹುದು."

ಲಿಂಗಣ್ಣನ ವೀರಾವೇಶದ ಮಾತು ಒಂದೊಂದೂ ಗುಂಡಿನಷ್ಟೇ ತೂಕವಾದುದು ಎಂಬುದನ್ನು ನೋಡಿರಿ : "ನಿನ್ನದು ಹುಚ್ಚು ಭೀತಿ ಚಿಕ್ಕಮ್ಮ. ಸೈನಿಕರೆಂದರೇನು ಸ್ವರ್ಗದಿಂದ ಇಳಿದು ಬಂದವರೇ? ಒಳ್ಳೆಯ ಮಾತಿಗೆ ದಾರಿಗೆ ಬಂದರೆ ಸರಿ. ಇಲ್ಲ

ವಾಪರೆ ಗದ್ದಲ ಮಾಡುವ ನಾಲ್ಕು ಜನರನ್ನು ತೋಪಿನ ಬಾಯಿಗೆ ಕಟ್ಟಿ ಹಾರಿಸಿದರೆ, ಉಳಿದವರು ಹಲ್ಲು ಕಿತ್ತ ಹಾವುಗಳಂತೆ ದಾರಿಗೆ ಬರುತ್ತಾರೆ."

ಯುದ್ಧ, ಕ್ರಾಂತಿ, ರಕ್ತ ಪಾತಗಳ ಬಗೆಗೆ ಜನ ಸಾಮಾನ್ಯರ ದೃಷ್ಟಿಯೇನೆಂಬುದನ್ನು ನೋಡಿರಿ: "........ಹೇಗಿದ್ದ ಹೆಂಗುಸು ಹೇಗಾಗಿ ಹೋದಳು. ನನಗೊಂದೊಂದು ಸಲ ಅನ್ನಿಸುತ್ತೆ, ಪೂಜಾರಯ್ಯ; ಈ ಅರಮನೆ, ರಾಜ್ಯ, ಕೋಶ ಎಲ್ಲಾ ಎಕ್ಕ ಹುಟ್ಟಿ ಹೋಗೋವರೆಗೂ ನನ್ನ ನಿನ್ನಂಥವರು ಹಾಯಾಗಿ ಬದುಕೋದಕ್ಕಾಗುವುದಿಲ್ಲ. ಯಾರೇನು ಈ ಭೂಮೀನ ತಲೇ ಮೇಲೆ ಹಾಕಿಕೊಂಡು ಹೋಗ್ತಾರಾ? ರಾಮ, ಕೃಷ್ಣ ನಂಥೋರೆ ಈಗಿಲ್ಲ. ಅಶ್ವಮೇಧ ಮಾಡಿದ ಧರ್ಮರಾಯನ ರಾಜ್ಯಾನೇ ಶಾಶ್ವತವಾಗಿ ಉಳಿಯಲಿಲ್ಲ......ತನ್ನ ಹುಂಚ್ಚಿನ ಉರಲು ಯಾರ ಯಾರ ಕುತ್ತಿಗೆಗೋ ಎಳೆಯೋದೇನು ಚಂದ? ಅವರಿಗೆ ರಾಜ್ಯ ಬೇಕಾದರೆ ಅವರು ಸಾಯಲಿ. ಅದು ಬಿಟ್ಟು, ಊರೆಲ್ಲಾ ಸತ್ತು ರಾಜ್ಯ ನನಗಾಗಲಿ ಅಂದರೆ ಯಾವ ದೇವರು ಒಪ್ಪೋ ಮಾತು ಪೂಜಾರಯ್ಯಾ?" "ರಾಮದೇವರ ಹೆಂಡತೀನ ರಾವಣ ಕದ್ದು ಕೊಂಡು ಹೋದಾಂತ ಹೆಂಡರು ಮಕ್ಕಳೂ ಇಲ್ಲದ ಹನುಮಂತ ಸಮುದ್ರ ಹಾರಿದ. ಬಾಲಕ್ಕೆ ಬೆಂಕಿ ಹಚ್ಚಿಸಿಕೊಂಡು ಊರೆಲ್ಲಾ ಅಲೆದ. ಪರಮಾತ್ಮನ ಆಟಾನೇ ಹಂಗೆ ಪಾಪಯ್ಯ. ಹತ್ತು ಕಿತ್ತು ಒಂದು ಕಟ್ಟುತ್ತಾನೆ, ನೂರು ಕೊಂದು ಒಂದನ್ನು ಬದುಕಿಸ್ತಾನೆ. ಅವನಾಟಕ್ಕೆ ಯಾರು ಬೇಡಾನ್ನೋಕೆ ಆಗ್ತದೆ ಹೇಳು."

ಗಂಗವ್ವನ ವ್ಯಕ್ತಿತ್ವವಿದು: "ಅತ್ತಿಗೆ, ನಿನ್ನ ಮಾತು ಇಂದು ನರಕವಿದ್ದಲ್ಲಿ ಸ್ವರ್ಗವನ್ನು ಸೃಜಿಸಿದೆ........ ಕಾಡುಕುದುರೆಯನ್ನು ಪಳಗಿಸುವ ಶಕ್ತಿ ನಿನ್ನ ಮಾತು ಗಳಿಗಿದೆ. ಗಂಗಾ, ಕಲ್ಲನ್ನು ಬಂಗಾರವಾಗಿ ಮಾಡುವ ಸಿದ್ಧಜಲ ನಿನ್ನ ಮಮತೆ "ತಟ್ಟೆ ಇಟ್ಟು ಬಡಿಸಿದೀನಿ ಪದಾರ್ಥ ಆರಿಹೋಗ್ತದೆ" ಎಂದಳು. "ನೋಡ್ದಾ ಅಪ್ಪಯ್ಯ. ಮುದುಕಾ, ನಿನ್ನ ಬುಡುಬುಡುಕೆ ಮುಚ್ಚು ಎಂತ ಎಷ್ಟು ನಯವಾಗಿ ಹೇಳ್ತದೆ ಈ ಹೆಣ್ಣು!"

ಅರಮನೆಯ ಚಾಕರಿ, ಪ್ರಭುಸೇವೆ ಎಂಥ ಅಲ್ಪದ್ದು ಎಂಬುದನ್ನು ಈ ಕಾದಂಬರಿಕಾರರು ಹೀಗೆ ಹೇಳಿದ್ದಾರೆ:

"ಈ ಅರಮನೆ ಚಾಕರಿ ಬೇಡಾಂತ ಹೇಳಲಿಲ್ಲವೆ? ಈ ಚಾಕರೀಲಿ ಏನಿದೆ ಅಪ್ಪಯ್ಯ? ಎಷ್ಟು ಸೇವೆ ಮಾಡಿದರೆ ತಾನೆ ಏನು ಕೊಟ್ಟಾರು ಅರಮನೆಯೋರು. ಮೆಚ್ಚಿಂದರೆ ಬಂಗಾರ ಕೊಟ್ಟಾರು. ಆದ್ರೆ ಬಂಗಾರ ತಿಂದು ಬದುಕಿದೋರು ಎಲ್ಲಿ ದ್ದಾರೆ? ಎಷ್ಟು ಜೇರೆ ಜೇರೆ ಕಡೆ ದುಡಿದರೂ ಮನುಷ್ಯ ಭೂಮಿತಾಯಿ ಕೊಟ್ಟಿದ್ದು ಉಂಡೇಬದುಕಬೇಕು, ಅಲ್ಲವಾ? ಅದಕ್ಕೆ ನಾನು ಹೇಳೋದು ಅವರಿದ್ದರ ಚಾಕರಿ ಮಾಡೋಕ್ಕಿಂತ ಈ ಭೂಮಿತಾಯಿ ಸೇವೆ ಮಾಡಿದರೆ ಮನುಷ್ಯ ಕೆಡೋಕಿಲ್ಲಾಂತ."

"ನೋಡು ಅದು ಎಷ್ಟೆಂದರೂ ಧಣೀಸೇವೆ. ಅದು ಆಡಿದರೆ ಅರಗಿಳಿ, ಕಾಡಿದರೆ ಘಟಸರ್ಪ. ಆದರೆ ಭೂತಾಯಿ ಸೇವೆ ಹಾಗಲ್ಲ. ಎಷ್ಟೆಂದರೂ ತಾಯಿ.

ಮಾರು ಹೆಚ್ಚು ಮಾರು ಕಡಿಮೆ ಅವರೂ ಮಾತಾಡಾಕಿಲ್ಲ. ಒಪ್ಪತ್ತು ಊಟ ಹಿಟ್ಟು ಕೂಳಿಗಿದ್ರೂ ಮುಚ್ಚಿ ಕೊಳ್ಳೋಕಿಲ್ಲ. ನಂಬಿದ ಹೊಟ್ಟೆ, ಮೋಸ ಮಾಡಾಂಗಿಲ್ಲ. ಸೇವೆ ಮಾಡಿದರೆ, ಕೊಡೋದರಲ್ಲಿ ಬೇರೆಯೋರ ಹಾಗ ಚೌಕಾಸಿ ಮಾಡ್ತಾರೆಯೇ ನಮ್ಮಪ್ಪ. ನೀನು ತಿಂದು ಸಾಕಾದರೆ, ಊರಿಗೆಲ್ಲಾ ಕೊಡುವಷ್ಟು ಕೊಡ್ತಾರೆ. ಇಂಥ ಧಣಿಯನ ಮರೆತು ಕಮ್ಮೋರ ಗಾಳಿಗೆ ಕಣ್ಣು ಕೊಟ್ರೆ ಏನು ಬಂತು ಹೇಳು.'

೫

'ರಾಜ್ಯದಾಹ' ಈ ಕಾದಂಬರಿ ಪ್ರಾರಂಭಿಸಿ ಎರಡು ವರ್ಷದಲ್ಲಿ. ಚಿತ್ರದುರ್ಗದ ಸ್ಥಿತಿ ಆಗ ಹೇಗಿತ್ತು ಎಂಬುದು ಕಾದಂಬರಿಯ ಆರಂಭದಲ್ಲೇ ಬರುತ್ತದೆ. 'ಮನಸ್ಸಿನ ಆಡಬಯಸಿದ ಮಾತುಗಳನ್ನು ಆಡಲು ಮಾತ್ರ ಯಾರ ನಾಲಗೆಗೂ ಬಲವಿರಲಿಲ್ಲ. ಹುತ್ತದಿಂದ ಹೊರ ಬರಲೆಳಸಿದ ಹಾವು ಒಳಗೇ ಹೆದರಿ, ಹೆಡೆ ಮುಚ್ಚಿ ಮುದುರಿ ಕೊಳ್ಳುವಂತೆ ಮಾಡುವ ಹಾವಾಡಿಗರ ಕೈಯ ಗರುಡ ಮುದ್ರಿಕೆಯಂತೆ, ನಗರದ ಬೀದಿಬೀದಿಗಳಲ್ಲಿ ಸುತ್ತುತ್ತಿದ್ದ ಅಶ್ವಾರೋಹಿ ಸೈನಿಕರ ಕೈಯ ಬಿಚ್ಚುಗತ್ತಿಗಳು, ಕೋಟೆಯ ಅಂಬುಗಂಡಿಗಳಿಂದ ಇಣುಕಿನ ಕೋವಿಗಳು, ನಗರದ ನಾಗರಿಕರಲ್ಲಿ ಮೂಡಿಸಿದ ಭೀತಿಯ ಕಡಿವಾಣ ಬಿಗಿದಿದ್ದುವು.'

ಗಿರಿಜವ್ವೆಯ ಮಾತಿನ ಧಾರವನ್ನು, ಅವರ ಆಳ ಅಂತರಂಗಗಳನ್ನು ಆಲಿಸಿದವ–ರಾರು. ಕಾದಂಬರಿಕಾರರು ಅವನ್ನು ಅರಿತ ಮಾನವಂತರನ್ನು ನೋಡಿರಿ. 'ಮರಕ್ಕ.......ಅಪ್ಪಯ್ಯ, ನನಗಾದದ್ದೆಲ್ಲಾ ಮರಕ್ಕೆ ಬಂದಿದ್ರೆ, ಅದೂ ಸುಟ್ಟು ಬೂದಿಯಾಗೋದು. ನನ್ನದು ಭಂಡಜೀವ ಅದಕ್ಕೇ ಇನ್ನೂ ಉಳಿದಿದೆ.'

ಮುದ್ದಣ್ಣನು ಮಾಡಿದ ರಕ್ತಕ್ರಾಂತಿಗೆ ಕಾರಣವನ್ನು ಅವನ ಬಾಯಿಯಿಂದಲೇ ಹೇಳಿಸಿದ್ದಾರೆ, ಕಾದಂಬರಿಕಾರರು: 'ಚಿತ್ರದುರ್ಗದ ರಾಜ್ಯ ನಾನು ಬಯಸಿದ ದೇವ್ರು. ಇದು ನನ್ನದಾಗಬೇಕು, ನನ್ನದೇ ಆಗಬೇಕು. ಯಾರೊಂದಿಗೂ ಇದನ್ನು ಹಂಚಿ ಉಣ್ಣುವ ಯೋಚನೆ ನನಗಿಲ್ಲ.' ಚಿತ್ರದುರ್ಗದ ಈ ಸ್ಥಿತಿಯಲ್ಲಿ ಪ್ರಧಾನರೂ, ಮಂತ್ರಿಗಳೂ ಯಾರೂ ಏನೂ ಮಾಡುವಂತಿರಲಿಲ್ಲ. 'ಸುತ್ತಲೂ ಎಣ್ಣೆಯಲ್ಲಿ ತೊಯ್ದು ಬಟ್ಟೆ ಇರುವಾಗ, ಕಿಡಿಯೊಂದಿಗೂ ಹೆದರಬೇಕಲ್ಲವೇ? ದುರ್ಗದ ಸ್ಥಿತಿ ಈಗ ಹಾಗಾಗಿದೆ. ಸುತ್ತ ಇರುವುದೇನು – ಅದು ಎಣ್ಣೆಯ ಬಟ್ಟೆಯಾದರೆ ನಾವು ತೊಟ್ಟದ್ದು ಒಣ ಹುಲ್ಲಿನ ಅಂಗಿಯಾಗಿದೆ.'

ದಳವಾಯಿ ಮುದ್ದಣ್ಣನ ಯುದ್ಧ ತಂತ್ರದ ಸಾಮರ್ಥ್ಯವನ್ನು ತಿಳಿಯಬೇಕಾದರೆ ಈ ಕಾದಂಬರಿಯ ಅಂತ್ಯದಲ್ಲಿ ಬರುವ ಯುದ್ಧ ಸನ್ನಿವೇಶವನ್ನು ನೋಡಬೇಕು. ಹಂಪೇರ್ ಖಾನನ ಸೇನೆ ಆರು ಸಹಸ್ರ ಕುದುರೆ, ಹನ್ನೆರಡು ಸಾವಿರ ಕಾಲ್ದಳ. ದುರ್ಗದ ಸೇನೆ ಅರ್ಧದಷ್ಟೂ ಇರಲಿಲ್ಲ. ಮುದ್ದಣ್ಣ ನರಭಕ್ಷಕ ವ್ಯಾಘ್ರದಂತೆ ಅವರ ಮೇಲೆ

ಬಿಟ್ಟು ಗೂಳಿಗಳ ಕೊಂಬುಗಳಿಗೆ ಪಂಜವನ್ನು ಕಟ್ಟಿ ಇರುಳ ಕಾಳಗ ಮಾಡಿ ಅವರನ್ನು ಗೆದ್ದ. "ಅಂದಿನ ರಾಕ್ಷಸ ಕಾಳಗದಲ್ಲಿ ದುರ್ಗವನ್ನು ಕಬಳಿಸಲು ಬಂದ ಯವನ ಸೇನೆ, ಕೆಂಡವನ್ನು ಸಕ್ಕರೆಯೆಂದು ಭ್ರಮಿಸಿದ ಕಟ್ಟಿರುವೆಗಳ ತಂಡದಂತಾಯಿತು."

೬

ಚಿತ್ರದುರ್ಗದ ಇತಿಹಾಸವನ್ನು ಕುರಿತು ಬರೆದ ಕಾದಂಬರಿ ಮಾಲೆಯಲ್ಲಿ ಮೂರನೆಯದು 'ರಕ್ತರಾತ್ರಿ'. ಇದರಲ್ಲಿ ಲಿಂಗಣ್ಣನಾಯಕನ ಪಟ್ಟಾಭಿಷೇಕಕ್ಕೆ ಪ್ರಯತ್ನ ನಡೆದು ಅವನ ಕೊಲೆಯಲ್ಲಿ ಅಂತ್ಯವಾಗುತ್ತದೆ. ಗರಿಜೆ ಇದರಲ್ಲಿ ಸೇಡಿನ ಕಿಡಿಯಾಗಿ ಚಿತ್ರದುರ್ಗದ ದುರ್ಗಿಯಾಗುತ್ತಾಳೆ ದಳವಾಯಿ ಮುದ್ದಣ್ಣ ಇನ್ನಷ್ಟು ಸರ್ವಾಧಿಕಾರಿಯಾಗಿ ವಿಜೃಂಭಿಸುತ್ತಾನೆ. "ಈ ಹನ್ನೆರಡು ವರ್ಷಗಳಲ್ಲಿ ಮುಪ್ಪು ಮೈಯೇರಿದ ಲಿಂಗಣ್ಣನಾಯಕನನ್ನು ನೋಡಿದ ಮುದ್ದಣ್ಣನ ನೋಟದಲ್ಲಿ, ಮಾರಾಟಕ್ಕೆ ಬಂದ ಕುರಿಯನ್ನು ನೋಡುವ ಕಟುಕನ ನೋಟವಿತ್ತು. ಲಿಂಗಣ್ಣ ನಾಯಕನು ನೋಡಿದ ನೋಟ – ಮೊದಲೇ ದರ್ಪೋದ್ಧತನಾಗಿದ್ದ ದಳವಾಯಿಯ ಮೊಗದಲ್ಲಿ ಇಂದು ಮೆರೆಯುತ್ತಿರುವ ಸರ್ವಾಧಿಕಾರದ ಉಗ್ರಕಳೆಯನ್ನು; ಇದರ ಬೆಲೆ ಎಷ್ಟು ಎಂದು ತೂಕಮಾಡುತ್ತಿತ್ತು." ಇಲ್ಲಿ ಈ ಕಾದಂಬರಿಯಲ್ಲಿ ಎರಡು ಮಹಾ ಪಾತ್ರಗಳ ದೃಷ್ಟಿಯುದ್ಧವಿದೆ. ಮುದ್ದಣ್ಣನಲ್ಲಿ ತನ್ನನ್ನು ತಿರಸ್ಕರಿಸಿದವರ ಬಗೆಗೆ ಎಂಥ ದ್ವೇಷವಿದೆ ಎಂಬುದರ ಚಿತ್ರ ಹೀಗೆ ಬಂದಿದೆ: "ಮುಷ್ಟಿಯಲ್ಲಿ ಆ ವಿಭೂತಿಯನ್ನು ಹಿಡಿದು ಮಠದಿಂದ ಹೊರಬಿದ್ದ ಮುದ್ದಣ್ಣ ತನಗಾಗಿ ಬಂದು, ಮಠದ ಹೊರ ಬಾಗಿಲ ಬಳಿ ಕಾದಿದ್ದ ಮೇನಾದೊಳಗೆ ಕುಳಿತು, ಗುರುಗಳು ಕೊಟ್ಟ ವಿಭೂತಿಯನ್ನು ಗಾಳಿಗೆ ಊದಿ 'ನಮಗೆ ಇದಿರಾದವರ ಗತಿಯೂ ಇಷ್ಟೆ.' ಎಂದು ತನಗೆತಾನೆ ಹಲ್ಲು ಕಡಿಯುತ್ತ ಹೇಳಿಕೊಂಡ,"

ಮಠದ ಗುರುಗಳು ಲಿಂಗಣ್ಣನಾಯಕನಿಗೆ ಹೇಳಿದ "ರಕ್ತದ ಬೆಂಕಿ ರಕ್ತದ ನೀರಿನಿಂದ ಆರುವುದಿಲ್ಲ" ಎಂಬುದು ಈ ಕಾದಂಬರಿ ಮಾಲೆಯ ಕೃತಿ. ಇದರ ಸಂಗೀತವೆಲ್ಲ ರಕ್ತಪಾತ, ಪ್ರಪಾತಗಳಲ್ಲಿ ಪರ್ಯವಸಾನವಾಗುತ್ತದೆ. ಲಿಂಗಣ್ಣನಾಯಕನ ವ್ಯಕ್ತಿತ್ವವನ್ನು ಅಳೆದ ಗುರುವಿನ ಮಾತು ಕೇಳಿರಿ: "ಅದರ ರೀತಿ ಒಳ್ಳೆಯದು. ಅದು ಬೆಳೆಯಬೇಕೆಂದರೆ ಸದಾ ಆಲಂಬನವೊಂದಿರಲೇ ಬೇಕು. ತನ್ನ ದಾರಿಯಲ್ಲಿ ತಾನೇ ಬೆಳೆದು ನಿಲ್ಲುವ ಚೈತನ್ಯ ಅದಕ್ಕಾಗುವುದಿಲ್ಲ. ಸಸ್ಯ ಜಾತಿಯಲ್ಲಿ ಅದಕ್ಕೂ ಬೆಲೆ ಇರಬಹುದೇನೋ! ಮನುಷ್ಯವರ್ಗದಲ್ಲಿ ಅಂಥವಕ್ಕೆ ತುಂಬಾ ಕಡಿಮೆ ಬೆಲೆ."

ಲಿಂಗಣ್ಣನಾಯಕನಿಗೆ ಪಟ್ಟಗಟ್ಟಿದ ಮೇಲೆ ಅವನನ್ನು ತನ್ನ ಬುಟ್ಟಿಯಲ್ಲಿಟ್ಟು ಕೊಳ್ಳಬೇಕೆಂದಿದ್ದ ಮುದ್ದಣ್ಣ ಸುಂದರ ಸ್ತ್ರೀಯ ಅಸ್ತ್ರವನ್ನು ಅವನ ಮೇಲೆ ಪ್ರಯೋಗಿಸುತ್ತಾನೆ. ಆ ಸ್ತ್ರೀ ಹೇಗೆ? "ದಾಸಣ್ಣ ಆಕೆಯ ಮುಖವನ್ನು ಕವಿದಿದ್ದ ಅವಗುಂಠನವನ್ನು ಓಸರಿಸಿದ. ನಾಯಕ ಕಣ್ಣರಳಿಸಿ ನೋಡಿದ – ಒಂದು ಗಳಿಗೆ

ಅವನ ಕಣ್ಣಿದಿರು ಮಿಂಚು ಕೋರೈಸಿದಂತಾಯಿತು. ಎದುರು ನಿಂತ ಲಾವಣ್ಯ ಮೂರ್ತಿಯನ್ನು ಕಂಡು... ಅದರೆ ಈ ಬಗೆಯ ಸೌಂದರ್ಯವನ್ನು ಮಾತ್ರ ಅತ ಎಂದೂ ಕಂಡಿರಲಿಲ್ಲ. ನಾಯಕನ ಎದುರಿಗೆ ನಿಂತದ್ದು ಬರೀ ಸೌಂದರ್ಯವೇ ಅಲ್ಲ– ಅಷ್ಟು ದೂರದಲ್ಲಿದ್ದರೂ, ಬರೀ ವಾಸನೆಯಿಂದಲೇ ಮತ್ತೇರಿಸುವ ಮದ್ಯದಂತಿತ್ತು ಆ ರೂಪ ವೈಭವ... ಆಕೆ ಹೆಣ್ಣಲ್ಲ, ವಿಲಾಸದ ಜಲಪಾತ, ರೂಪದ ಎದೆಯೂ ಅದರಿದುರು ಉರುಳಿ ಬೀಳದೆ ನಿಲ್ಲಲಾರದು ಎನಿಸಿತು... ರತಿಕೇಳಿಯ ಜೀವಂತ ಆಹ್ವಾನದಂತಿದ್ದ ಆ ರೂಪಾಗ್ನಿಯ ಎದುರಿನಲ್ಲಿ ನಾಯಕನ ಮನಸ್ಸು ಮೇಣದ ಬೊಂಬೆಯಂತಾಯಿತು.”

ಈ ಕಾದಂಬರಿಯ ಸಂಭಾಷಣೆಯ ಸಿಡಿಲುಗಳ ಸಂಘಟ್ಟಣೆಯನ್ನು ಕೇಳುವಿರಾ? “ಹಾಗೆಂದು ತಲೆಹೋಗುವಾಗ ಶಿವ ಕಾಯುವುದಿಲ್ಲ.” “ಶಿವ ಕಾಯಲಾಗದ ತಲೆಯನ್ನು ನೀವು ಕಾಯುವುದು ಸಾಧ್ಯವೇ ?”

ದಳವಾಯಿ ಮುದ್ದಣ್ಣನ ನೀಚಕೃತ್ಯದ ಪರಾಕಾಷ್ಠೆಯಿದು : “ಹೋರಾಡುವವರ ಗುಂಪಿನಿಂದ ಅಷ್ಟು ದೂರ ನಿಂತ ಮುದ್ದಣ್ಣ ತನ್ನ ಬಳಿಯಲ್ಲಿದ್ದ ದಾಸಣ್ಣನಿಗೆ ಕಣ್ಣು ಸನ್ನೆ ಮಾಡಿದ. ದಾಸಣ್ಣ ಗುಂಪಿನಲ್ಲಿ ನುಸುಳಿ, ನಾಯಕನ ಹಿಂಭಾಗ ಸೇರಿ, ಹೊತ್ತು ಕಾಯುತ್ತ ನಿಂತು, ನಾಯಕನ ಬೆನ್ನು ತನ್ನತ್ತ ತಿರುಗಿದಾಗ, ಗುರಿಯಿಟ್ಟು ನಾಯಕನ ಕತ್ತಿ ಹಿಡಿದ ತೋಳಿಗೆ ಕತ್ತಿಯಿಂದ ಹೊಡೆದ.”

ಆದರೂ ಲಿಂಗಣ್ಣನಾಯಕನ ಕಟ್ಟಕಡೆಯ ವೀರವಾಕ್ಯವಿದು : “ಅದರೆ ನೀನೂ ಯೋಧ, ಸಿಪಾಯಿಯಾಗಿದ್ದವನು. ವೀರ ಬಯಸುವ ಮರಣ ಎಂಥದೆಂದು ನಿನಗೆ ಗೊತ್ತಿದೆ. ನೀನು ನನ್ನ ಸಾವು ಬಯಸುತ್ತೀಯ ಎಂಬುದನ್ನು ನಾನು ಬಲ್ಲೆ. ಆ ತೃಪ್ತಿ ನಿನಗಾಗುವುದು. ಆದರೆ ನನ್ನ ಮೈಯನ್ನು ಬಿಗಿದ ಕಟ್ಟು ಬಿಚ್ಚಿ ಒಂದು ಕತ್ತಿ ಕೊಡು. ನಿನ್ನ ಸೈನಿಕರನ್ನು ನನ್ನ ಮೇಲೆ ಬಿಡು. ಅಷ್ಟೇ ನಾನು ಕೇಳುವುದು.”

೭

ನಾಲ್ಕನೆಯದು ‘ತಿರುಗುಬಾಣ’ ದಳವಾಯಿ ಮುದ್ದಣ್ಣನನ್ನು ಮಣ್ಣು ಮುಕ್ಕಿಸಿದ ಚಿತ್ರದುರ್ಗದ ರುದ್ರಮನೋಹರ ಇತಿಹಾಸವಿದು. “ಸತಿಯ ಸಂಹಾರವಾಗಿ ವೀರ ಭದ್ರಾವತಾರವಾಗುತ್ತದೆ” ಎಂಬ ಮಠದ ಗುರುಗಳ ಘೋಷಣೆ ಪ್ರತಿಧ್ವನಿಸುತ್ತದೆ ಕಾದಂಬರಿಯ ಆದಿಭಾಗವಾದ ಅಂತ್ಯದ ಆರಂಭ’ ಎಂಬುದರಲ್ಲಿ. ಲಿಂಗಣ್ಣನಾಯಕನ ಕೊಲೆಯ ಸುದ್ದಿ ಕೇಳಿ ಅವನ ಅಭಿಮಾನಿಗಳು ಹೇಗಿದ್ದರು ? “ಕೊಂಚ ಕಿಡಿ ಸೋಕಿದರೂ ಸಿಡಿಯಲು, ಆಸ್ಫೋಟಕಗಳಂತೆ ಕುಳಿತಿದ್ದರು.” ಲಿಂಗಣ್ಣನಾಯಕನ ಕೊಲೆಯಿಂದ ಗಿರಿಜೆಯ ಪ್ರತಿಕ್ರಿಯೆಯೇನು ? “ನಾಯಕರು ಸತ್ತದ್ದನ್ನು ಕೇಳಿ, ನೂರು ಪರ್ವದ ಮುಪ್ಪು ಬಡಿದಂತಿತ್ತು ಅವಳ ಧ್ವನಿಗೆ... ನಜರು ಮುಜರೆ... ದಳವಾಯಿಗೆ... ನನ್ನ ಹೆಣವೂ ಅವನಿಗೆ ನಜರುಮುಜರೆ ಮಾಡುವುದಿಲ್ಲ. ಅದೂ

ಅವನ ಮುಖಕ್ಕೆ ಉಗಿಯುತ್ತದೆ." ಲಿಂಗಣ್ಣನಾಯಕನನ್ನು ಕೊಂದ ಮುದ್ದಣ್ಣನ ಪರಿಸ್ಥಿತಿಯೇನು ? "ಮುದ್ದಣ್ಣನ ಮನಸ್ಸಿಗೆ ಶಾಂತಿಯಿಲ್ಲ... ಏನೋ ಭೀತಿ. ಭೂತದ ಮನೆಯೊಳಗೆ ಪ್ರವೇಶಿಸಿದ ಹೇಡಿ, ತನ್ನ ಹೆಜ್ಜೆ ಸಪ್ಪಳಕ್ಕೇ ಹೆದರಿ, ಅತ್ತಿತ್ತ ನೋಡುವಂತಾಗಿದೆ ಅವನ ಗತಿ." "ನಾಯಕರನ್ನು ಕೊಂದು ಅರಮನೆಯನ್ನು ವಶಪಡಿಸಿಕೊಂಡ ನಾವು ಮದ್ದಿನ ಉಗ್ರಾಣದ ಮೇಲೆ ಕುಳಿತು ಬೆಂಕಿಯೊಡನೆ ಸರಸ ವಾಡುತ್ತಿದ್ದೇವೆ" ಎಂಬ ಸತ್ಯವನ್ನು ಅವನು ಕಾಣುತ್ತಾನೆ. ಅಲ್ಲದೆ, "ನಮ್ಮ ಸೆರೆಯಲ್ಲಿ ಒಬ್ಬ ಪರಶುರಾಮಪ್ಪ ಸತ್ತರೆ, ಅವನಿಗೆ ಪ್ರತಿಯಾಗಿ ದೇಶದಲ್ಲಿ ಸಾವಿರ ಜನ ಪರಶುರಾಮಪ್ಪರು ಹುಟ್ಟಿಕೊಳ್ಳುತ್ತಾರೆ. ಒಬ್ಬ ಭರಮಣ್ಣನ ಕತ್ತಿಗೆ ಬದಲಾಗಿ, ಕೋಟಿ ಕತ್ತಿಗಳು ನಮ್ಮ ವಿರುದ್ಧ ಒರಿದು ನಿಲ್ಲುತ್ತವೆ" ಎಂಬ ಅರಿವೂ ಮುದ್ದಣ್ಣನಿಗಿದೆ.

ಪರಶುರಾಮಪ್ಪನ ಮನಸ್ಸು ಪರಿವರ್ತಿಸಿತೋ ಎಂದು ನೋಡಲು ಬಂದ ಮುದ್ದಣ್ಣನನ್ನು ಪರಶುರಾಮಪ್ಪ ಹೀಗೆ ಅಣಕವಾಡುತ್ತಾನೆ: "ನೀವು ಸರ್ವಾಧಿಕಾರಿ ಗಳು ಎಂಬುದು ನಮಗಂತೂ ನೆನಪಿಲ್ಲ. ನಮಗದನ್ನು ಜ್ಞಾಪಿಸಿದ ನಿಮಗೇ ಮರೆತು ಹೋಯಿತೇ ? ಬಂದ ಕೆಲಸವಾಗಿದ್ದರೆ ಹೋಗಬಹುದು. ಅಥವಾ ಹೇಗೂ ಇದು ತಮ್ಮದೇ ಮನೆ, ಚಿತ್ತ ಬಂದಷ್ಟು ಹೊತ್ತು ಇರಬಹುದು."

ಪ್ರಜೆಯಾದ ಗೌಡನೊಬ್ಬನ ಬಾಯಿಯಿಂದ ಪೌರುಷದ ಕಿಡಿ ಸಿಡಿಯುವುದನ್ನು ನೋಡಿರಿ : "ದಳವಾಯಿಗಳೇ–ಸ್ನೇಹಿತರಂತೆ ಬಂದವರನ್ನು ಅಪ್ಪಳಿಸುವ ವಿದ್ಯೆ ನಿಮಗೆ ಕರಗತವಾಗಿದೆ. ಪೌರುಷವಿದ್ದರೆ ಕತ್ತಿ ಹಿಡಿದು ಬನ್ನಿ." "ನಿಮ್ಮಂಥ ಕುನ್ನಿಗಳ ಮೇಲೆ ಕೈ ಎತ್ತುವಷ್ಟು ಹೀನ ಸ್ಥಿತಿಗೆ ನಮ್ಮ ಕತ್ತಿ ಇನ್ನೂ ಇಳಿದಿಲ್ಲ ಗೌಡರೇ. ಆ ಒಣ ಪೌರುಷ ಬಿಡಿ." "ನಿಜ, ನಿಜ. ನಿಶ್ಶಸ್ತ್ರರಾಗಿದ್ದವರನ್ನು ಕೊಂದೇ ನಿಮಗೂ ಅಭ್ಯಾಸ." ಮರುಕ್ಷಣ ಗೌಡನನ್ನು ಸುತ್ತುವರಿದ ಸೈನಿಕರು ಕೊಂದರು. ಆದರೆ ಅವನ ಸಿಡಿಲಿನ ನುಡಿ ಚಿತ್ರದುರ್ಗದ ಬಂಡೆ ಬಂಡೆಯಲ್ಲೂ ಪ್ರತಿಧ್ವನಿಸುತ್ತಲೇ ಇತ್ತು. ಅದರ ಆಘಾತದಿಂದ ದಳವಾಯಿ ಎಂದೂ ಚೇತರಿಸಿ ಕೊಳ್ಳಲಾಗಲಿಲ್ಲ. ಇದರಿಂದ "ಶಾಂತವಾಗಿದ್ದ ಹಳ್ಳಿ ಬೆಂಕಿ ಸೋಕಿದ ಇರುವೆಯ ಗೂಡಿನಂತಾಗಿ ಅಲ್ಲಿಯ ಗದ್ದಲ ಸುತ್ತಲ ಹತ್ತು ಮೈಲುಗಳಿಗೆ ಹರಡಿತು. ......ಹಳ್ಳಿಗೆ ಆದದ್ದು ದಳವಾಯಿಗಳ ಮನೆಗೂ ಆಗುವ ದಿನ ದೂರವಿಲ್ಲ."

ದಳವಾಯಿ ಮುದ್ದಣ್ಣ ಸ್ವಾಮಿಗಳನ್ನೂ ಸಾಯಿಸುವುದಕ್ಕೆ ಹೇಸದವನು. ಆದರೆ ಸ್ವಾಮಿಗಳು ಅವನಿಗೆ ಹೆದರಲಿಲ್ಲ. ಸ್ವಾಮಿಗಳ ಕೆಚ್ಚಿನ ನುಡಿ ಕಿಡಿಗಳು ವೀರರಿಗೆ ಸ್ಫೂರ್ತಿಯನ್ನು ಕೊಡುವಂಥವು. "ಅದೇ ದಳವಾಯಿಗಳ ಇಷ್ಟವಾದರೆ ಈಗಲೂ ಹಾಗೆ ಮಾಡಬಹುದು. ಶಿವಭಕ್ತ ಸಾವಿಗಂಜುವುದಿಲ್ಲ, ದಳವಾಯಿಗಳೇ. ನಮ್ಮ ಪಾಲಿಗೆ ಸಾವು ಶಿವನ ಕರೆ. ಸಾವಿಗೆ ಹೆದರುವವರು, ತಮ್ಮ ಜೀವವೆಲ್ಲಿ ಹೋಗುತ್ತದೋ ಎಂಬ ಹೆದರಿಕೆಯಿಂದ ಪರರ ಕೊಲೆಗೆ ಧಾವಿಸುತ್ತಾರೆ. ಹಾಗಲ್ಲದೆ,

ಸಾವಿನ ಭೀತಿ ಇಲ್ಲದವರು ತಾವು ಸಾಯಲೂ ಹೆದರುವುದಿಲ್ಲ. ಪರರ ಕೊಲೆಗೂ ಆತುರ ಪಡುವುದಿಲ್ಲ. ಆದುದರಿಂದ ನಮಗೆ ಸಾವಿನ ಭೀತಿ ತೋರಿಸಬೇಡಿ, ದಳವಾಯಿಗಳೇ. ಹಾಗೇ ಮಾಡುವುದೇ ತಮ್ಮ ಇಚ್ಛೆಯಾದರೆ ತಮ್ಮ ಕತ್ತಿಯಷ್ಟೇ ನಮ್ಮ ತಲೆಯೂ ಸಿದ್ಧವಾಗಿದೆ."

ಗಿರಿಜವ್ವೆಯಿಂದ ದಳವಾಯಿ ಮುದ್ದಣ್ಣನ ಧೈರ್ಯದ ಕೋಟೆಯು ಬಿರುಕು ಬೀಳುತ್ತದೆ. ಅವಳು ಜನರಲ್ಲಿ ಪೌರುಷವನ್ನು ತುಂಬುತ್ತಾಳೆ: "ನೀವು ಗಂಡಸರಾದರೆ ಹೂ ಎನ್ನಿ, ಇಲ್ಲವಾದರೆ ಕೈಗೆ ಬಳೆ ತೊಟ್ಟುಕೊಂಡು 'ನಾವು ಹೆಂಗಸರು; ಗಂಡಸರನ್ನು ಬೇರೆ ಕಡೆ ಹುಡುಕಿ' ಎಂದು ಹೇಳಿ" ಎನ್ನುತ್ತಾಳೆ. "ಏನಾಗದಿದ್ದರೂ ನೀವು ನಮ್ಮ ಪಕ್ಷದಲ್ಲಿದ್ದೀರ ಎಂಬುದು ಅವನಿಗೆ ತಿಳಿದರೂ ಸಾಕು. ತನಗೆ ಯಾರೂ ಎದುರಿಲ್ಲ ಎಂದು ಮೆರೆಯುತ್ತಿರುವ ಅವನ ಹೃದಯದಲ್ಲಿ ಹೆದರಿಕೆ ಹುಟ್ಟಿದರೂ ಸಾಕು. ಅದೇ ಅವನ ಕೋಟೆಯಲ್ಲಿ ದೊಡ್ಡ ಬಿರುಕಾಗುತ್ತದೆ......."

ಗಿರಿಜವ್ವೆ ರಾತ್ರಿ ಒಬ್ಬಳೇ ತಿರುಗುತ್ತಿರುವುದನ್ನು ಕಂಡು ಯಾರಾದರೂ ಜತೆಗೆ ಬೇಕೇ ಎಂದು ಗೌಡರು ಕೇಳಿದಾಗ ಅವಳು ಹೀಗೆ ಹೇಳುತ್ತಾಳೆ : "ಊಹೂ – ನನಗೆ ಕತ್ತಲಿನ ಹೆದರಿಕೆಯಿಲ್ಲ ಗೌಡರೇ. ಓಬಣ್ಣನಾಯಕರ ಕೊಲೆಯಾದ ದಿನದಿಂದ ನನ್ನ ಪಾಲಿಗೆ ಹಗಲು ಕತ್ತಲಾಗಿ, ಕತ್ತಲೇ ಹಗಲಾಗಿದೆ......ಯಾರ ಜೊತೆಗಾದರೂ ಹೋದರೇ ಹೆಚ್ಚು ಹೆದರಿಕೆ. ಒಂಟಿ ಇದ್ದರೆ ಯಾರ ಭಯವೂ ಇಲ್ಲ......" ಹೀಗೆ ಗಿರಿಜವ್ವೆ ದಳವಾಯಿ ಮುದ್ದಣ್ಣನ ರಕ್ತ ಕುಡಿಯಲು ಬಿಚ್ಚು ಗತ್ತಿಯಾಗಿ ತಿರುಗಿದಳು.

ಈಗ ಮುದ್ದಣ್ಣನ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಕಾದಂಬರಿಕಾರರು ಒಂದು ವಾಕ್ಯದಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ : "ಸುತ್ತಲೂ ಬೇಟೆಗಾರರಟ್ಟಿ ಬಂದು ಮೂಲೆ ಸೇರಿದ ಕಾಡ ಪಶುವಿನಂತಾಗಿತ್ತು ಮುದ್ದಣ್ಣನ ಸ್ಥಿತಿ."

ಮಲ್ಲಭಟರ ಹಳ್ಳಿಯ ಗೌಡನಿಗೂ, ಸರ್ವಾಧಿಕಾರಿ ಮುದ್ದಣ್ಣನಿಗೂ ನಡೆದ ಹೋರಾಟ ಚಿರಸ್ಮರಣೀಯವಾದುದು. ದಾಸನಾಯಕನ ನೇತೃತ್ವದಲ್ಲಿ ಮಲ್ಲಭಟರ ಹಳ್ಳಿಗೆ ಸೈನ್ಯ ಬಂದರೆ ಅಲ್ಲಿ ಯಾವ ಗಂಡಸೂ ಇರಲಿಲ್ಲ. ಅವನ ಹೆಂಡತಿ ಮಾತ್ರ ಇದ್ದಳು. ದಾಸನಾಯಕನ ರೋಷದ ಕಿಚ್ಚಿಗೆ ಅವಳು ವಾತ್ಸಲ್ಯದ ತಣ್ಣೀರೆರೆದಳು : "ಸರ್ವಾಧಿಕಾರಿಗಳಿಗೆ ಕೊಡ ಬೇಕಾದ ಉತ್ತರವನ್ನು ಗೌಡರು ಕೊಡುತ್ತಾರೆ. ಈಗ ನಿಮ್ಮ ಸಿಟ್ಟು ತೀರಿದ್ದರೆ, ಕಾಲು ತೊಳೆದುಕೊಳ್ಳಿ, ಗೌಡರು ಬರುವುದು ಹೊತ್ತಾಗಬಹುದು. ಊಟಕ್ಕಾದರೂ ಮಾಡಿಸುತ್ತೇನೆ." ಆ ಮಾತನ್ನು ಕೇಳಿ ಸೈನಿಕರ ಕಣ್ಣಲ್ಲಿಯೂ ನೀರಾಡಿತು. "ದುರ್ಗದಿಂದ ಸೇನೆ ಬರುತ್ತೆ ಅನ್ನೋ ಮಾತು ಕೇಳಿ ಗೌಡರೂ ರೇಗಿದ್ದರು. ಅವರಿಗೂ ಅದೇ ಮಾತು ಹೇಳ್ದೆ, ಬರೋ ಸೇನೆಯೋರೇನೂ ನಮ್ಮ ವೈರಿಗಳಲ್ಲ. ನಮ್ಮ ದುರ್ಗದೋರೇ, ನಮ್ಮ ಅಣ್ಣ ತಮ್ಮಂದಿರಿದ್ದ ಹಾಗೆ. ನೀವಿಬ್ಬರೂ ಜಗಳ ಆಡೋದು ಯಾಕೆ? ನೀವು ಸತ್ತರೂ ನಮಗೆ ದುಃಖ ತಪ್ಪಿದ್ದಲ್ಲ. ಸೈನ್ಯದೋರು ಸತ್ತರೂ ನಮಗೆ ದುಃಖ ತಪ್ಪಿದ್ದಲ್ಲ. ಅದಕ್ಕೇ ಆ ಮಾತೇ ಬೇಡಾ

ಅಂದೆ...ನೀವು ನಮ್ಮ ಹಳ್ಳಿಯೋರಲ್ಲ. ಆದ್ರೆ ನಮ್ಮ ಹಳ್ಳಿ ಹುಡುಗರೂ ಸೇನೇಲಿಲ್ವಾ? ......ಹೋಳಿಗೆ ಪಾಯಸ ಮಾಡಸ್ತೀನಿ. ನೀ ತಿಂದು ನಗ್ತಾ ನಗ್ತಾ ಮಾತು ಮುಗಿಸಿ ಅಂದೆ. 'ಆಯ್ತು. ಆ ಮಾತಾಡಿ ನನ್ನ ಕೈ ಕಟ್ಟಿ ಬಿಟ್ಟೆ, ಈ ಮಾತು ಸೇನೆಯೋರಿಗೆ ಹೇಳಿ ಉಳುಕೊ. ಆ ಮ್ಯಾಲೆ ಮುಂದಿನ ಮಾತು' ಅಂದ್ರು. ಏನಣ್ಣಾ ನಾನ್ಹೇಳಿದ್ದು ತಪ್ಪಾ? ಸೈನ್ಯಕ್ಕೆ ಸೇರ್ಬುಟ್ರೆ ನೀವು ಮನುಷ್ಯರೇ ಅಲ್ವಾ?" ಗೌಡರ ತಲೆ ತಗೆದುಕೊಂಡು ಹೋಗಲು ಬಂದ ಸೈನ್ಯ ಈ ಮಾತೃ ವಾತ್ಸಲ್ಯದ ಅಮೃತವನ್ನುಂಡು ಮುದ್ದಣ್ಣನ ಮೇಲೆ ತಿರುಗಿ ಬಿತ್ತು. ಹೀಗೆ ಹಳ್ಳಿ ಹಳ್ಳಿಗಳೇ ಮುದ್ದಣ್ಣನ ಸರ್ವಶಕ್ತಿಯನ್ನು ಸುಡುವ ಕೊಳ್ಳಿಗಳಾದವು.

ಪರಶುರಾಮಪ್ಪ, ಭರಮಣ್ಣ, ಗಿರಿಜವ್ವೆ, ಭುಗಿಲೆದ್ದ ಹಳ್ಳಿಗಳ ದ್ವೇಷದ ಕೊಳ್ಳಿ – ಇವುಗಳ ಮುಂದೆ ದಳವಾಯಿಯ ಆಟ ನಡೆಯಲಿಲ್ಲ. ಭರಮಣ್ಣ ದಾಸನಾಯಕರನ್ನು ತನ್ನ ಬೇಟೆ ನಾಯಿಯ ಬಾಯಿಗೆ ಕೊಡಬೇಕೆಂದಿದ್ದ ಮುದ್ದಣ್ಣ. ತೈಲ ಚಿತ್ರದ ಹಿಂದೆ ಅಡಗಿದ್ದ ಗಿರಿಜವ್ವೆ ಬೇಟೆ ನಾಯಿಯನ್ನು ಕೊಂದಳು. ಮುದ್ದಣ್ಣನ ಕೈ ಕತ್ತರಿಸಿದಳು, ತನ್ನ ಸೇಡನ್ನು ತೀರಿಸಿಕೊಂಡಳು. ಅವನ ಬೇಟೆಯ ನಾಯಿಗಳಿಗೇ ಅವನನ್ನೂ, ಅವನ ತಮ್ಮಂದಿರನ್ನೂ ಆಹುತಿ ಕೊಟ್ಟು ತೃಪ್ತಳಾದಳು. ಅವರ ಹೆಣಗಳನ್ನು ಹುಣಿಸೆಯ ಮರಕ್ಕೆ ನೇತಾಡಿಸಿ ಹಗೆ ತೀರಿಸಿ ನಗೆಯಾಡಿದಳು. ಅಂತು, ದಳವಾಯಿಯಾಗಿ ಅನೇಕ ಪಾಳೆಯಗಾರರನ್ನು ಮಣ್ಣು ಮುಕ್ಕಿಸಿದ ಮುದ್ದಣ್ಣ ಒಂದು ಹೆಣ್ಣಿನ ಸೇಡಿಗೆ ಬಲಿಯಾಗ ಬೇಕಾಯಿತು.

೮

'ಹೊಸಹಗಲು' – ಎಂಬುದು ಚಿತ್ರದುರ್ಗದ ಚಾರಿತ್ರಿಕ ಕಾದಂಬರಿ ಮಾಲೆಯ ಮಧ್ಯಮಣಿ. ಆ ಒಂಬತ್ತು ಕಾದಂಬರಿಗಳಲ್ಲಿ ಇದು ಐದನೆಯದು, ಇದರ ಹಿಂದೆ ನಾಲ್ಕು, ಮುಂದೆ ನಾಲ್ಕು. ಚಿತ್ರದುರ್ಗದ ಪಾಳೆಯಗಾರರ ಇತಿಹಾಸದಲ್ಲಿ ಸುವರ್ಣ ಯುಗ ಆರಂಭವಾದ ಕಾಲದ ಕಾದಂಬರಿಯಿದು. ಆ ವೈಭವವೇನು, ಅದಕ್ಕೆ ಕಾರಣ ವೇನು, ಆ ಕಾಲದ ಪಾಳೆಯಗಾರನಾರು, ಅವನ ಗುಣಗಣವೇನು, ಪರಾಕ್ರಮ ವೇನು, ಎಂಬುದೆಲ್ಲ ಪುಂಖಾನುಪುಂಖವಾಗಿ ಇಲ್ಲಿ ಕಾದಂಬರಿಕಾರರ ಲೇಖನಿಯಿಂದ ಹೊರ ಹೊಮ್ಮುತ್ತದೆ. ಕಾಳ್ಗಿಚ್ಚು ಸಂಪೂರ್ಣವಾಗಿ ಕಾಡನ್ನು ತಿಂದಮೇಲೆ ಅಲ್ಲಿ ಅವಕಾಶವಾಗುತ್ತದೆ. ಹಾಗೆಯೇ ಮುದ್ದಣ್ಣನ ಸರ್ವಾಧಿಕಾರದ ಕಿಚ್ಚು ಸರ್ವ ವನ್ನು ಧ್ವಂಸ ಮಾಡಿದ ಮೇಲೆ ಚಿತ್ರದುರ್ಗದ ಆಡಳಿತದಲ್ಲಿ ಹೊಸ ರಕ್ತ ಬಂತು, ಅದಕ್ಕೆ ಹೊಸ ಚೈತನ್ಯ ತಂದಿತು. ಹಳ್ಳಿಯ ಜನರ ಪ್ರೀತಿ, ನಿಷ್ಠೆ, ಐಶ್ವರ್ಯಗಳು ರಾಜನ ಅರಮನೆಯ ಕಡೆಗೆ ಹರಿದುವು, 'ಹೊಸ ಹಗಲು' ಮೂಡಿತು. ಈ ಹಿಂದಿನ ಕಾದಂಬರಿಗಳಲ್ಲಿ ಕಾಣುವುದು ವಿನಾಶೋನ್ಮುಖ ಉಲ್ಕೆಯ ಕಣ್ಣು ಕೋರೈಸುವ ಬೆಳಕು; ಇಲ್ಲಿನದು ದೇಶಕ್ಕೆ ಬೆಳಕು ನೀಡ ಹೊರಟ ದೀಪದ ಪ್ರಶಾಂತ ಕಾಂತಿ.

ಮುದ್ದಣ್ಣನಂತೆ ಭರಮಪ್ಪನಾಯಕ ರಕ್ತಕ್ಕೆ ಹಸಿದ ಹೆಬ್ಬುಲಿಯಲ್ಲ.' ಚಿತ್ರದುರ್ಗದ ಕೀರ್ತಿಯನ್ನು ಹಿರಿಮೆಯ ಶಿಖರಕ್ಕೆ ಏರಿಸಿದಾತ.

ವೈಶಾಖಮಾಸದ ಬಿಸಿಲು ಮಳೆಗರೆದ ಭೂಮಿಯ ಬಣ್ಣನೆಯಿಂದ ಕಾದಂಬರಿ ಆರಂಭಿಸುತ್ತದೆ. ಎರೆಯ ನೆಲದಲ್ಲಿ ಬೆಳೆದ ಎಕ್ಕದ ಗಿಡಗಳು ಬೂದಿ ಬಣ್ಣದ ಎಲೆ. ಹೂವುಗಳನ್ನರಳಿಸಿ, ಗಿಡದಂತೆ ಕಾಣದೆ ಆ ಬೆಂದ ಭೂಮಿಯು, ಹೆಪ್ಪುಗಟ್ಟಿದ ನಿಟ್ಟುಸಿರಿನಂತಿದ್ದವು. ಎಂಬ ಬಣ್ಣನೆ ಕೇವಲ ವರ್ಣನೆಯಲ್ಲೇ ಮುಗಿಯದೆ ಅದು ಚಿತ್ರದುರ್ಗದ ಗತಕಾಲದ ಇತಿಹಾಸಕ್ಕೆ ಸಂಕೇತನೆಂಬಂತಿದೆ.

ಭರಮಪ್ಪನಾಯಕ ಕುರಿಮಂದೆಯನ್ನು ಕಾಯುತ್ತಿದ್ದರೂ ಅವನಲ್ಲಿ ರಾಜ ಲಕ್ಷಣವಿತ್ತು, ದೇಶದ ಬಗೆಗೆ ಪ್ರೀತಿಯಿತ್ತು. ತಾನು ರಾಜನಾಗಬೇಕೆಂಬ ಆಸೆಯಿತ್ತು ಎಂಬುದನ್ನು ಕಾದಂಬರಿಕಾರರು ಹೀಗೆ ಚಿತ್ರಿಸಿದ್ದಾರೆ. 'ಕಾಯುವ ಕುರಿಯ ಮಂದೆಯನ್ನೇ ಶತ್ರುಸೇನೆಯನ್ನಾಗಿ ಭಾವಿಸಿ, ಕುರಿಯನ್ನು ಕಾಯಲು ತನ್ನೊಂದಿಗೆ ಕರೆತಂದ ನಾಯಿಗಳನ್ನೇ ತನ್ನ ಸೇನೆಯನ್ನಾಗಿ ಮಾಡಿಕೊಂಡು, ಸಮರ ತಂತ್ರವನ್ನು ಹೂಡುವನು. ಅಲ್ಲಿ ಆಯಾಸದಿಂದ ಮರದ ನೆರಳಲ್ಲಿ ಮಲಗಿದವನಿಗೆ ಸ್ವಪ್ನ ಮೂಡಬೇಕೇ? ಅದೇ ಕನಸು ತಾನು ಚಕ್ರವರ್ತಿಯಾಗುವೆನೆಂಬ ಕನಸು. ತನಗೆ ಕೊಡೆಯಾಗಿ ಹಿಡಿದ ನೆರಳು ಹಾವಿನ ಹೆಡೆ. ಮಲಗಿಕೋ ಹೆದರಿಕೆಯೇ? ದುರ್ಗದ ಚಕ್ರವರ್ತಿಯಾಗಬೇಕೆಂದು ಬಯಸುವವನಿಗೆ, ಹಾವಿನ ಹೆಡೆಯ ನೆರಳಿನಲ್ಲಿ ಮಲಗಲು ಭಯವೆ. ಸಿಂಹಾಸನದ ಮೇಲೆ ಬಿಚ್ಚಿದ ಶ್ವೇತಛತ್ರವೂ ಇದೇ ಹೆಡೆಯ ನೆರಳಲ್ಲವೇ? ಅದರ ಭಯವಿಲ್ಲವಾದರೆ, ಇದರ ಭಯವೇಕೆ? ಮಲಗು ನನ್ನನ್ನು ನಂಬಿ ಮಲಗು ನಿನ್ನ ಬಯಕೆ ತೀರುವುದು. ಈ ಕನಸು ನನಸಾಯಿತು. ಭರಮಪ್ಪನಾಯಕ ಚಿತ್ರದುರ್ಗದ ಚಕ್ರವರ್ತಿಯಾದ.

ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಅವನ ರಾಜಗುರುವಾಗುವರು. ಪರಶುರಾಮಪ್ಪನವರು ಪ್ರಧಾನಿಯಾಗುವರು, ಭರಮಣ್ಣ ದಳವಾಯಿಯಾಗುವನು. ಸ್ವಾಮಿಗಳ ಉಪದೇಶ ನಾಯಕನಿಗೆ ಹಿತವಾಗಿತ್ತು. ಅವರ ಧ್ವನಿ ದುರ್ಗದ ಅರಮನೆಯಲ್ಲಿ ಭರಮಣ್ಣ ಕೈಯಾಡಿಸಿ ಬಿಚ್ಚಿದ ಮಖಮಲಿನಂತೆ ಮೃದುವಾಗಿತ್ತು. ಅಂತು ಬಿಚ್ಚುಗತ್ತಿಯ ಭರಮಪ್ಪನಾಯಕ ದುರ್ಗದ ದೊರೆಯಾದ. ಅವನ ಕತ್ತಿ ಎಂದೂ ಅವನ ಒರೆಯನ್ನು ಸೇರಲಿಲ್ಲ. ಶಾಂತಿ ಸಮೃದ್ಧಿ ವೈಭವಗಳನ್ನು ಕಾಣಲಿಕ್ಕಾಗಿ. ಅದು ಕಾಳಗಗಳ ಕಾಲ. ದೊರೆ ಖಡ್ಗ ಹಿಡಿದು ಕಾದಾಡಿದ ಅದರಿಂದ ಮೂಡಿದ ಶಾಂತಿಯ ಕಾಲದಲ್ಲಿ ಕೆರೆ ಕಾಲುವೆ ಛತ್ರ ಗುಡಿ ಗೋಪುರ ಕೋಟೆಕೊತ್ತಲಗಳನ್ನು ಕಟ್ಟಿಸಿದ. ಹೀಗೆ ಅವನ ಕಾಲ ಸುವರ್ಣಯುಗವಾಯಿತು.

ಆದರೆ ಅವನು ದೊರೆಯಾಗುವ ವರೆಗೆ ಸುತ್ತಮುತ್ತಲಿನ ಪಾಳೆಯಗಾರರೆಲ್ಲ ಚಿತ್ರದುರ್ಗವನ್ನು ನುಂಗಲು ಕಾದಿದ್ದರು. "ದೊರೆ ಇಲ್ಲದ ರಾಜ್ಯವೆಂದರೇ ಅಷ್ಟು ಭರಮಣ್ಣ, ಗಂಡನಿಲ್ಲದ ಹೆಣ್ಣಿನ ಹಾಗೆ." ರಾಜ್ಯ ಸ್ವೀಕಾರದ ಹೊಣೆ ಹೊತ್ತದು

ಎಂಬುದನ್ನು ಹೀಗೆ ಹೇಳಿದ್ದಾರೆ. "ರಾಜ್ಯ ಸ್ವೀಕಾರವೂ ಒಂದು ದೃಷ್ಟಿಯಲ್ಲಿ ಸಂನ್ಯಾಸ ಸ್ವೀಕಾರವಿದ್ದಂತೆಯೇ. ಸಂನ್ಯಾಸಿಯಾದವನಿಗೆ, ಆ ಆಶ್ರಮ ಪ್ರಾಪ್ತವಾದ ಮೇಲೆ, ತನ್ನ ಪೂರ್ವಾಶ್ರಮದ ಬಾಂಧವ್ಯ ಎಲ್ಲವೂ ತೊಲಗಿ ಹೋಗಿ, ಅತನ ಪಾಲಿಗೆ ತಂದೆ ತಾಯಿ, ನಂಟರು ಇಷ್ಟರು ಯಾರೂ ಇಲ್ಲದ ಹಾಗಾಗುತ್ತಾರೋ, ದೊರೆಯಾದವನಿಗೂ ಅಷ್ಟೇ, ಈ ಬಂಧನಗಳಾವುವೂ ಇರುವುದಿಲ್ಲ." ದುರ್ಗದ ದೊರೆಯಾಗಲು ಭರಮಪ್ಪನನ್ನು ಅವನ ತಂದೆ ಕೇಳಿದಾಗ ಅವನದು ಅವನ ಬಿಚ್ಚುಗತ್ತಿಯಷ್ಟೇ ಬಿಚ್ಚು ಮನಸ್ಸು. "ದುರ್ಗದ ಅಧಿಪತಿಯಾಗಲು ನನಗೆ ಇಚ್ಛೆ ಇದೆ. ಅ ದುರ್ಗಕ್ಕಾಗಿ ನನ್ನ ತಲೆಯನ್ನು ಕೊಡಬಲ್ಲೆ. ಆದರೆ ದಳವಾಯಿಗಳ ಕೈಗೊಂಬೆಯಾಗಿ ಬದುಕುವುದು ಸಾಯುವುದು ನನಗೆ ಒಪ್ಪಿಗೆಯಿಲ್ಲ. ಅಂಥ ರಾಜ್ಯಕ್ಕಿಂತ ನನ್ನ ಕುರಿ ಮೇಯಿಸುವ ಬಯಲೇ ಮೇಲು."

ಅವನು ದುರ್ಗದ ದೊರೆಯಾಗಿ ತನ್ನ ಮನೆಯನ್ನು ಬಿಟ್ಟು ಹೊರಟ ಸನ್ನಿವೇಶದಲ್ಲಿ ಅವನ ಕುರಿಕಾಯುವ ನಾಯಿಯನ್ನು ಆ ಸಂಭ್ರಮದಲ್ಲಿ ಯಾರೂ ನೆನಪಿಸಿಕೊಳ್ಳಲಿಲ್ಲ. ಆದರೂ ಆ ನಾಯಿ ಅವನನ್ನು ಮರೆಯಲಿಲ್ಲ. ಅದು ಅವನನ್ನು ಹುಡುಕಿಕೊಂಡು ಯಾರು ತಡೆದರೂ ಓಡೋಡಿ ಬಂತು. ಯಾರನ್ನು ಬಿಟ್ಟರೂ ಅದನ್ನು ಬಿಡಲಾಗಲಿಲ್ಲ ಭರಮಪ್ಪನಾಯಕನಿಗೆ : "ನಿನ್ನ ನಾನು ಮರೆತರೂ ನೀನು ನನ್ನ ಮರೀಲಿಲ್ಲ ರಾಮು." ಎಂಬಂತಾಯಿತು.

ಭರಮಪ್ಪನಾಯಕನಿಗೆ ದೊರೆತನದ ಕಷ್ಟದ ಅರಿವಾಯಿತು. ಅದಕ್ಕೆ ಅಷ್ಟೆಲ್ಲ ತಯಾರಿ ಬೇಕು ಎಂದು ಅವನು ಅರಿತಿರಲಿಲ್ಲ. ಪ್ರಧಾನಿಗಳಿಂದ ಅವರ ನಿಜವನ್ನು ಅರಿತನು. "ನಿಜ. ಇದಕ್ಕಿಂತ ಕಷ್ಟದ ಕೆಲಸ ಬೇರೊಂದಿಲ್ಲ. ಆಳುವವನಿಗಿಂತ, ಆಳಿನ ಕೆಲಸ ಸುಲಭ ; ನಿಜ. ಆದರೆ ಕಷ್ಟಕ್ಕೆ ಹೆದರುವುದು ಪುರುಷ ಲಕ್ಷಣವಲ್ಲ. ಅರಸುತನ ಸುಖದ ಸುಪ್ಪತ್ತಿಗೆಯಲ್ಲ, ಗಂಡಂತನದ, ಸಾಹಸದ ಮಲ್ಲಸಾಲೆ, ತಮ್ಮಲ್ಲಿ ಅಂಥ ಸಾಹಸವಿದೆ ಎಂದು ನಾನು ನಂಬಿದ್ದೇನೆ." ದುರ್ಗದ ದೊರೆಯ ಪಟ್ಟಾಭಿಷೇಕದ ಬಣ್ಣನೆ ಇನ್ನಿಲ್ಲವೆಂಬಂತೆ ಈ ಕಾದಂಬರಿಯಲ್ಲಿ ಬರುತ್ತದೆ. ಆದರೆ ಆ ಸಂಧರ್ಭದಲ್ಲಿ ದೇಶಕ್ಕೆ ದೊರೆಯನ್ನು ದಾನ ಮಾಡಿದ ಅವನ ತಂದೆ ತಾಯಿಗಳ ಪ್ರಸ್ತಾವವನ್ನು ಕಾದಂಬರಿಕಾರರು ಮಾಡಿಲ್ಲ. ಅವರ ಒಂದು ಸಂಭ್ರಮನ್ನೋ, ಸಂತಸವನ್ನೋ ಬಣ್ಣಿಸುವ ಸನ್ನಿವೇಶವನ್ನು ತಂದಿದ್ದರೆ ಈ ಪ್ರಕರಣ ಇನ್ನಷ್ಟು ಸುಂದರವಾಗುತ್ತಿತ್ತು.

ಚಿತ್ರದುರ್ಗದ ಕೋಟೆಯ ಕಲ್ಲು ಸಡಿಲಿಸುವ ಪ್ರಯತ್ನಗಳು ನಡೆಯುತ್ತವೆ. ಅವನ್ನು ಬುದ್ಧಿವಂತಿಕೆಯಿಂದ ನಿವಾರಿಸುವವನು ಭರಮಪ್ಪನಾಯಕ. ದೊರೆ, ಪ್ರಧಾನಿ ದಳವಾಯಿ – ಎಂಬುದು ತ್ರಿಕೋಣ ಶಕ್ತಿ. ಇವು ಮೂರು ಸೇರಿದರೆ ತ್ರಿಕೋಣ ಪೂರ್ಣ, ಅಲ್ಲದಿದ್ದರೆ ಬರಿಯ ಕೋಣ. ಭರಮಪ್ಪನಾಯಕನ ರಾಜ್ಯ ಭಾರದಲ್ಲಿ

ಈ ಮೂರೂ ಶಕ್ತಿಗಳು ಒಂದರೊಡನೊಂದು ಹೊಂದಿಕೊಂಡು ಕೆಲಸ ಮಾಡಿದುದರಿಂದ ಸುವರ್ಣಯುಗ ಕಾಣುವುದು ಸಾಧ್ಯವಾಯಿತು. "ಕೋಟೆಯ ಒಂದೊಂದು ಕಲ್ಲೂ ಒಬ್ಬೊಬ್ಬ ಸೈನಿಕರ ಜೀವ ತಿಂದು ಶತ್ರುಗಳ ರಕ್ತದ ಕೆಸರಿನಲ್ಲಿ ನಿಂತಿತ್ತು." ಎಂಬ ವರ್ಣನೆ ಯಥಾವತ್ತಾದುದು.

ಭರಮಪ್ಪನಾಯಕನಿಗೆ ಒಮ್ಮೆ ಯುದ್ಧದಲ್ಲಿ ಸೋಲಾದಾಗ ಅವನ ಮನಸ್ಸು ಅಶಾಂತವಾಗಿ ಅವನು ಜ್ವರದಿಂದ ಕುದಿದ, ಹತಾಶನಾದ. ಆಗ ಅರ್ಜುನನಿಗೆ ಶ್ರೀ ಕೃಷ್ಣ ಗೀತೋಪದೇಶ ಮಾಡಿದಂತೆ, ಇಲ್ಲಿ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಭರಮಪ್ಪನಾಯಕನ ಕರ್ತವ್ಯ ಪ್ರಜ್ಞೆಯನ್ನು ಚುಚ್ಚಿ ಅವನು ಮತ್ತೆ ಚೈತನ್ಯ ತಾಳುವಂತೆ ಮಾಡುತ್ತಾರೆ, ಇದು ಈ ಕಾದಂಬರಿಯ ಭಗವದ್ಗೀತೆ. "ಗಾಳಿ ಬೀಸಿದಾಗ, ಗಿಡವಲ್ಲಿ ಹೊಯ್ದಾಡುವುದು ಯಾವುದು ? ರೆಂಬೆಗಳೋ, ಕಾಂಡವೋ ?"

'ರೆಂಬೆಗಳು' ಭರಮಣ್ಣನಾಯಕ ಉತ್ತರಕೊಟ್ಟ.

"ಅಷ್ಟಾದರೂ ತಿಳಿದಿದೆಯಲ್ಲ – ಹೋಗಲಿ. ಈಗ ಇನ್ನೊಂದು ಪ್ರಶ್ನೆ. ಪ್ರಧಾನಿಗಳೇ ಇದಕ್ಕೆ ನೀವು ಉತ್ತರ ಕೊಡಿ."

"ಅಪ್ಪಣೆಯಾಗಬೇಕು" ಪರಶುರಾಮಪ್ಪ ಕೇಳಿದ.

"ಒಂದು ವೇಳೆ ಬಲವಾದ ಗಾಳಿ ಬೀಸಿದಾಗ, ರೆಂಬೆಗಳ ಜೊತೆಯಲ್ಲಿ ಕಾಂಡವೂ ಹೊಯ್ದಾಡಿದರೆ ಏನಾಗುತ್ತದೆ ?"

"ಕಾಂಡವೂ ಹೊಯ್ದಾಡಿದರೆ ಬೇರು ಸಡಿಲವಾಗಿ ಮರವೇ ಬೀಳುತ್ತದೆ."

"ಪ್ರಧಾನಿಗಳ ಮಾತನ್ನು ಕೇಳಿದೆಯಾ ಭರಮಣ್ಣ – ಅದು ನಿಜ. ಈ ರಾಜ್ಯವೆನ್ನುವುದು ಒಂದು ವೃಕ್ಷ. ಈ ವೃಕ್ಷದಲ್ಲಿ ಸೈನಿಕರು, ಮಂತ್ರಿಗಳು ಎಲ್ಲರೂ ರೆಂಬೆಗಳಿದ್ದ ಹಾಗೆ, ದೊರೆ ಈ ಮರದ ಕಾಂಡ, ಪ್ರಜೆಗಳೇ ಬೇರುಗಳು. ಗಾಳಿ ಬೀಸಿದಾಗ ರೆಂಬೆಗಳು ಹೊಯ್ದಾಡುವಂತೆ ದೇಶಕ್ಕೆ ಏನೋ ಒಂದು ವಿಪತ್ತು ಬಂದಾಗ ಸೇನೆ, ಮಂತ್ರಿಗಳು, ಆಳಿಗದವರು ಎಲ್ಲರೂ ಹೊಯ್ದಾಡುತ್ತಾರೆ. ಆ ಹೊತ್ತಿನಲ್ಲಿ ಕಾಂಡ ಬಲವಾಗಿ ನಿಂತರೆ ಗಿಡ ಉಳಿಯುತ್ತದೆ. ಇಲ್ಲವಾದರೆ ಮರ ಉರುಳುವುದಷ್ಟೇ ಅಲ್ಲ, ಅಷ್ಟುಕಾಲ ಮರವನ್ನು ಕಾಪಾಡಿದ ಬೇರೂ ಬಿಸಿಲಿಗೆ ಸಿಕ್ಕಿ ಬಾಡುತ್ತದೆ..."

"ಸೋಲು ಫಲದ ವೃಕ್ಷವನ್ನು ಬೆಳೆಸುವ ಜಲವಾಗಬೇಕು. ಒಂದು ಸಲವಲ್ಲ, ಹತ್ತುಸಲ ಸೋತರೂ ಹನ್ನೊಂದನೆಯ ಸಲ ಗೆಲುವು ನನ್ನದೇ ಎಂಬ ಆತ್ಮ ವಿಶ್ವಾಸವಿದ್ದವನಿಗೇ ಈ ಭೂಮಿ ದಕ್ಕುವುದು ಭರಮಣ್ಣ... ನೀನು ಈಗ ಹಿಡಿದಿರುವುದು ಕುರಿಕಾಯುವ ಕೋಲಲ್ಲ, ರಾಜ್ಯವನ್ನು ಕಾಯುವ ಖಡ್ಗ, ನೆನಪಿರಲಿ." ಈ ಸಕಾಲ ಉಪದೇಶ ಭರಮಪ್ಪನಾಯಕನ ಸ್ನಾಯುವನ್ನು ಉಕ್ಕಾಗಿಸಿದಂತೆ ಮನಸ್ಸನ್ನೂ ಉಕ್ಕಾಗಿಸುತ್ತದೆ.

೯

ಮುಂದಿನ ಕಾದಂಬರಿಯಾದ 'ವಿಜಯೋತ್ಸವ'ದ ಎರಡು ಭಾಗಗಳಲ್ಲಿ ಸೀರ್ಯದ ದಿವಾನನ ಹವಣಿಕೆ, ಬಿಚ್ಚುಗತ್ತಿ ಭರಮಪ್ಪನಾಯಕನ ಧೈರ್ಯ ಸಾಹಸಗಳು, ಪ್ರಧಾನಿ ಪರಶುರಾಮಪ್ಪನವರ ಸಮಯೋಚಿತ ರಾಜತಂತ್ರ, ಫ್ರೆಂಚ್ ಇಂಜಿನಿಯರ್ ಜಾನ್ ಡ್ಯೂಪ್ರೋರೋನ ತಾಂತ್ರಿಕ ಸಹಕಾರ, ಗಾಯಕಿ ಸುಂದರಿ ಮೆಹರ್‌ಬಾನುವಿನ ನಿಷ್ಕಲ್ಮಷ ಹೃದಯ, ಗಂಧರ್ವಗಾನ – ಇವುಗಳು ಕಣ್ಣಿಗೆ ಕಟ್ಟಿದಂತೆ ಪ್ರತ್ಯಕ್ಷ ವಾಗುತ್ತವೆ. ಮೆಹರ್‌ಬಾನುವಿನ ಅನುಪಮ ಸೌಂದರ್ಯದ ಪರಿಣಾಮವನ್ನುಬಣ್ಣಿಸಿದ ಬಗೆ ನೋಡಿರಿ : "ಆಕೆಯ ಹೆಸರು ನೆನಪಿಗೆ ಬಂದಾಗಲೇ ಇಷ್ಟು ಉಕ್ಕುವ ಉದ್ರೇಕವನ್ನು ಆಕೆಯ ಮುಖವನ್ನು ನೋಡಿದ ಬಳಿಕ ಹತೋಟಿಯಲ್ಲಿರಿಸುವುದು ಸಾಧ್ಯವಿಲ್ಲ ಎಂದು ಹೆದರಿ, ಜುಲ್‌ಫಿಕರ್ ಖಾನ್ ಮೆಹರಳನ್ನು ನೋಡುವ ಪ್ರಯತ್ನ ಮಾಡಿರಲಿಲ್ಲ. ಆಕೆಯ ಮುಖ ದರ್ಶನ ಮಾಡುವುದಿರಲಿ ಆದಷ್ಟುಮಟ್ಟಿಗೂ ಆಕೆಯ ಧ್ವನಿಯೂ ತನ್ನ ಕಿವಿಗೆ ಬೀಳದಷ್ಟು ದೂರವಲ್ಲಿರಲು ಯತ್ನಿಸುತ್ತಿದ್ದ. ಒಂದೆರಡು ಬಾರಿ ಆಕೆಯೇ ಕಾಣಬೇಕೆಂದು ಹೇಳಿ ಕಳಿಸಿದಾಗ ಬೇರಾವುದೋ ನೆಪ ಹೇಳಿ ತಪ್ಪಿಸಿಕೊಂಡಿದ್ದ. ನೋಡಬೇಕು, ನೋಡಬೇಕು ಎಂದು ಯಾರನ್ನು ಕಾಣಲು ಕಣ್ಣುಗಳು ಕಾತರಿಸುತ್ತಿದ್ದುವೋ, ಅದೇ ವ್ಯಕ್ತಿ ತಾನಾಗಿಯೇ ಹೇಳಿ ಕಳಿಸಿದಾಗಲೂ ಹೋಗಲಾರದಿದ್ದ ವಿಷಮ ಪರಿಸ್ಥಿತಿಯಲ್ಲಿ, ಜುಲ್‌ಫಿಕರ್ ಖಾನನಿಗೆ ಹುಚ್ಚು ಹಿಡಿದಂತಾಗುತಿತ್ತು.

ಮೆಹರ್‌ಬಾನು ಇಲ್ಲದ ವೇಳೆ, ಅವಳು ಅವನ ಕಣ್ಣಿಗೆ ಬೀಳದ ವೇಳೆ "ಮಧುರವಾದ ದ್ರಾಕ್ಷಾರಸವೂ ಅವನ ನಾಲಗೆಗೆ ಆ ದಿನ ಕಹಿಯಾಗಿತ್ತು." ಎನ್ನುತ್ತಾರೆ ಕಾದಂಬರಿಕಾರರು. ಜುಲ್‌ಫಿಕರ್ ಖಾನನಿಗೆ ಭರಮಪ್ಪನಾಯಕನು ಹೇಳಿ ಕಳುಹಿಸಿದ ಆತ್ಮಗೌರವದ ಮಾತುಗಳು 'ನಯವಾದರೂ, ಮಖಮಲ್ಲಿನ ಗೌಸಿನೊಳಗೆ ಹುದುಗಿಸಿದ ವ್ಯಾಘ್ರನಖದಂತಿದ್ದುವು.' ಮೆಹರ್ ಬಾನುವಿನ ಆ ಅನುಪಮ ಸೌಂದರ್ಯದ ಬಗೆಗೆ ಜುಲ್‌ಫಿಕರ್ ಖಾನ್ ಇಟ್ಟ ಪ್ರೀತಿಯ ರೀತಿಯಿದು: 'ಒಂದು ಸಾರಿ–ಒಂದೇ ಒಂದುಸಾರಿ........ ನಿಮ್ಮನ್ನು ನಾನು ನಿಮ್ಮ ಹೆಸರು ಹಿಡಿದು ಕರೆಯಬಹುದೇ?'

'ಅಮ್ಮ... ...' ಆ ಅನಿರೀಕ್ಷಿತ ಬೇಡಿಕೆಯಿಂದ ಚಕಿತಳಾಗಿ ಕೇಳಿದಳು ಮೆಹರ್‌ಬಾನು.

'ಮೆಹರ್! ತೆಗೆದುಕೊ - ಇದು ಹೂವಲ್ಲ, ನನ್ನ ಹೃದಯ !'

ಮರಾಠರ ಕ್ರೌರ್ಯವನ್ನು ಅನುಭವಿಸಿ ತನ್ನ ಸರ್ವಸ್ವವನ್ನು ಕಳೆದುಕೊಂಡ ಫ್ರೆಂಚ್ ಇಂಜಿನಿಯರ್ ಜಾನ್ ಡ್ಯೂಪ್ರೋರೋನ ಬಾಯಿಯಲ್ಲಿ ಆ ಅನುಭವವನ್ನು ಕೇಳಬೇಕು : "ಮಿಡತೆಯ ದಂಡು ಬಿದ್ದ ಹೊಲ ನೀವು ನೋಡಿದ್ದೀರಾ?" ಇಹೂ

ಪಂಜಾಬಿನಲ್ಲಿ ನಾನು ನೋಡಿದ್ದೇನೆ. ಆ ಹುಳುಗಳ ದಂಡು ಬಿದ್ದ ಭೂಮಿಯಲ್ಲಿ ಒಂದೇ ಗಳಿಗೆಯಲ್ಲಿ ಹಸಿರು ಎಂಬುದು ಏನಿದ್ದರೂ ನಿರ್ನಾಮವಾಗಿ, ಬೆಳೆ ತುಂಬಿ ಕಳಕಳಿಸುತ್ತಿದ್ದ ಭೂಮಿ ಮರಳುಗಾಡಾಗಿ ಹೋಗುತ್ತದೆ. ಆ ಸಣ್ಣ ಹುಳುಗಳು ಇಷ್ಟು ವಿನಾಶ ಮಾಡಬಹುದೆಂದು ಊಹಿಸುವುದೂ ಅಸಾಧ್ಯ. ಮರಾಠರು ನುಗ್ಗಿದ ಸೀಮೆಯೂ ಹಾಗೇ ಆಗುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಮರಾಠಾ ಸೈನಿಕರು ಬರೀ ಧನವಂತರನ್ನು ಲೂಟಿ ಮಾಡಿದರೆ, ಚಿಂತೆಯಿಲ್ಲ ಎನ್ನಬಹುದಾಗಿತ್ತು. ಆದರೆ ಅವರು ಹಾಗೆ ಮಾಡುವುದಿಲ್ಲ. ಅಷ್ಟೇ ಅಲ್ಲ, ತಾವು ಸುಲಿಗೆ ಮಾಡಿದ ಬಳಿಕ, ಹೊರಲಾಗದೆ ಏನಾದರೂ ಉಳಿದಿದ್ದರೆ ಅದಕ್ಕೂ ಬೆಂಕಿ ಹಚ್ಚಿ ಹೋಗುತ್ತಾರೆ. ಕಾಡಿನಲ್ಲಿ ಹುಲಿ, ಬೇಟೆಯಾಡಿದ ಪ್ರಾಣಿಯಲ್ಲಿ ಏನಾದರೂ ಮಾಂಸ ಮಿಕ್ಕರೆ, ಅದನ್ನು ಬೇರೆಯವರು ತಿನ್ನದ ಹಾಗೆ ಹಾಳು ಮಾಡುವುದಿಲ್ಲ, ನಾಳೆಗಿರಲಿ ಎಂದು ಇಟ್ಟು ಹೋಗುತ್ತದೆ. ಅದು ತೀರುವವರೆಗೂ ಮತ್ತೊಂದು ಪ್ರಾಣಿಯನ್ನು ಕೊಲ್ಲುವುದಿಲ್ಲ. ಆದರೆ ಮರಾಠಾ ಸೈನಿಕರು ಆ ಹುಲಿಗಿಂತಲೂ ಕ್ರೂರ ಜಂತುಗಳು. ಅವರಲ್ಲಿ ಅನಾವಶ್ಯಕ ಕ್ರೌರ್ಯವೇ ಹೆಚ್ಚು ... ಸ್ವಂತ ಅನುಭವವಾಗದೆ, ಯಾರೂ ಯಾವುದನ್ನೂ ಸತ್ಯವೆಂದು ನಂಬುವುದಿಲ್ಲ."

ಪ್ರಧಾನಿ ಪರಶುರಾಮಪ್ಪನವರಿಗೂ, ಮೆಹರ್‌ಬಾನುವಿಗೂ ನಡೆದ ಸಂಭಾಷಣೆಯಲ್ಲಿ ಅವರಿಬ್ಬರ ಪರಸ್ಪರ ಸಾಮರ್ಥ್ಯ ಸೊಗಸಾಗಿ ಅಭಿವ್ಯಕ್ತವಾಗಿದೆ. "......ಎಲ್ಲ ಕಡೆಯೂ ಅಷ್ಟೆ – ನಮ್ಮ ಸೇವೆಗೆ ಪ್ರತಿಫಲ – ಸಿಟ್ಟು, ಅಸಮಾಧಾನ. ನಮ್ಮ ಪಾಲಿಗೆ ಒಳ್ಳೆಯ ಮಾತಾಡುವವರು ಒಬ್ಬರೂ ಇಲ್ಲ." "ನಿಮಗೆ ಒಳ್ಳೆಯ ಮಾತಾಡುವವರು ಒಬ್ಬರೂ ಇಲ್ಲದಿರಬಹುದು. ಆದರೆ ಉರಿಗೆಂಡವನ್ನು ಹಿಮ ಶೀತಲವಾಗಿ ಮಾಡುವ ಶಕ್ತಿ ನಿಮ್ಮ ನಾಲಗೆಗಿದೆ ವಜೀರ್‌ಸಾಹೇಬ್. ಈ ದುರ್ಗಕ್ಕೆ ಕೋಟೆ, ಕೊತ್ತಲವಿರುವುದು ವ್ಯರ್ಥ." "ಏಕೆ ? " "ದುರ್ಗದ ರಕ್ಷಣೆಗೆ ನಿಮ್ಮ ನಾಲಗೆಯೊಂದೇ ಸಾಕು. ಹತ್ತು ಕೋಟಿ ಸೈನ್ಯ ಕತ್ತಿ ಹಿಡಿದು ಬಂದರೂ, ಮಾತಿನಲ್ಲೇ, ಅವರ ಕೈಯಲ್ಲೇ 'ನಾವು ದಂಡೆತ್ತಿ ಬಂದುದು ತಪ್ಪಾಯಿತು' ಎನ್ನಿಸಿ, ಹಿಂದಕ್ಕೆ ಕಳಿಸುತ್ತೀರ"... "ಈ ಹುಡುಗಿ ಶುದ್ಧ ಸಮ್ಮೋಹನಾಸ್ತ್ರ." !

ಮೆಹರ್‌ಬಾನುವಿನ ಸಂಗೀತದ ಸೌಂದರ್ಯವೇನು. ಭರಮಪ್ಪನಾಯಕನ ಮಾತಿನಲ್ಲಿ ಅದು ಹೀಗೆ ಒಡಮೂಡಿದೆ. "ಇಂದು ನಾವು ಕೇಳಿದ ಸಂಗೀತಕ್ಕೆ ಸಂಭಾವನೆಯಾಗಿ ಒಂದು ಸಾಮ್ರಾಜ್ಯವನ್ನೇ ಕೊಟ್ಟರೂ ಸಾಲದು. ಅದೂ ಈ ದೈವೀಕಲೆಗೆ ಯುಕ್ತವಾದ ಉಡುಗೊರೆಯಾಗಲಾರದು." ಕಲೆಗೆ ನಿಜವಾದ ಬಹುಮಾನವೇನು ಎಂಬುದನ್ನು ಮೆಹರ್‌ಬಾನು ಹೀಗೆ ಹೇಳುತ್ತಾಳೆ : ಜಹಾಪನಾ, ಕಲಿತ ಕಲೆಗೆ ಉಡುಗೊರೆ ಬಯಸುವವನು, ತೆಗೆದುಕೊಳ್ಳುವವನು ಮನುಷ್ಯ. ಆದರೆ ಕಲೆ ಯಾವ ಬೆಲೆಯನ್ನೂ ಬಹುಮಾನವನ್ನೂ ಬಯಸುವುದಿಲ್ಲ ಖಾವಂದ್, ಅದು ಕೇಳುವುದು ಎರಡು ಹನಿ ಆನಂದಾಶ್ರು."

ಜಾನ್ ಡ್ಯೂಪೋರೋನ ಪ್ರಣಯ ಕಥೆ ರೋಮಾಂಚಕಾರಿ : "ಎಲ್ಲಿ ರೋಸಿ, ನೋಡೋಣ ನಿನ್ನ ಕತ್ತಿನಲ್ಲಿರುವ ಶಿಲುಬೆ ಮುರಿದ್ದೋ, ಲೋಪವೋ? ಎಂದು ನೆಪ ಮಾಡಿಕೊಂಡು, ಅವಳ ಧೃಡ ವಕ್ಷಃಸ್ಥಲದ ಮೇಲೆ ಕೈಯಾಡಿಸಿದ ನೆನಪು."

ಸಂಗೀತ ಕಲೆಯ ಬೆಲೆಯನ್ನು ಎಲ್ಲರೂ ಅರಿಯುವುದು ಸಾಧ್ಯವಿಲ್ಲ. "ಸಂಗೀತವೆಂದರೇನು ? ಚೀಲಕ್ಕಿಷ್ಟು ಎಂದು ತೂಗುವ ಹುಣಿಸೆ ಹಣ್ಣಲ್ಲ." ಮೆಹರ್ ಬಾನುವಿನ ಧ್ವನಿಯನ್ನು ಕೇಳಿರಿ : "ಹೂವಿನೆಸಳಿನ ಸ್ಪರ್ಶದಷ್ಟು ಕೋಮಲವಾದ ಧ್ವನಿಯಿಂದ ಕರೆದಳು ಮೆಹರ್‌ಬಾನು." ಬದುಕಿನ ಸೂಕ್ಷ್ಮರೂಕ್ಷತೆ ಎಂಥದು ಎಂಬುದನ್ನು ಅಳೆಯುವ ಪ್ರಯತ್ನವಿದು : "ನಿಜ, ನಿಜ, ಮಗಳೇ ಈ ಬದುಕು, ಹುಲಿಯ ಬಾಲವನ್ನು ಹಿಡಿದವರ ಹಾಗೆ ; ಎಷ್ಟು ಎಚ್ಚರವಾಗಿದ್ದರೂ ಸಾಲದು."

ಪ್ರಧಾನಿಗಳ ಸಾಮರ್ಥ್ಯ ಎಂಥದು ಎಂಬುದನ್ನು ಈ ಮಾತು ಸೆರೆ ಹಿಡಿಯುತ್ತದೆ. "ಪ್ರಧಾನಿಗಳಲ್ಲಿ ವಸಿಷ್ಠರ ಧರ್ಮ ಗುಣವಿದೆ, ಚಾಣಕ್ಯನ ಕೌಶಲತೆಯಿದೆ."

ತನಗೆ ಅನ್ಯಾಯ ಮಾಡಿದ ಮರಾಠ ಸರದಾರನನ್ನು ಕೊಲ್ಲುವುದು ಜಾನ್ ಡ್ಯೂಪೋರೋನ ಬಯಕೆಯಾಗಿತ್ತು. ಅದನ್ನು ದೊರೆ ಭರಮಪ್ಪನಾಯಕನಿಗೆ ನಿವೇದಿಸಿ ಕೊಳ್ಳುತ್ತಾನೆ. ಅವರಿಬ್ಬರ ಸ್ನೇಹದ ಬಂಧದ ಚೆಂದವನ್ನು ಕಾದಂಬರಿಕಾರರು ಈ ವಾಕ್ಯದಲ್ಲಿ ಹಿಡಿದಿಟ್ಟಿದ್ದಾರೆ : "ನಮ್ಮ ಸೇನೆಗೆ ಸೋಲಾದರೂ ಚಿಂತೆಯಿಲ್ಲ, ನಿನ್ನ ಪ್ರತಿಜ್ಞೆ ಪೂರ್ಣವಾಗಲಿ" ಜಾನ್ ಮತ್ತು ಮೆಹರ್‌ಬಾನು ಅವರ ಪ್ರೇಮ ಸಾಮ್ರಾಜ್ಯದ ಇಣುಕು ನೋಟವನ್ನು ಈ ಸಂಭಾಷಣೆಯಲ್ಲಿ ಅನುಭವಿಸಬಹುದು : "ಜಾನ್...ಅವಳನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು, ಅವಳ ಮುಖವನ್ನು. ತನ್ನ ಎದೆಗೆ ಒತ್ತಿಕೊಂಡು, ಅವಳ ತುಂಬುದೋಳನ್ನು ನಯವಾಗಿ ನೇವರಿಸುತ್ತಾ ಹೇಳಿದ —

"ನನ್ನ ಬಾಳಿನ ಘೋರ ದುರಂತ ಯಾವುದು ಗೊತ್ತೆ ಮೆಹರ್ ?"

"ಯಾವುದು ?"

"ಯಾರನ್ನು ನಾನು, ಈ ಜಗತ್ತಿನಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ಪ್ರೀತಿಸುತ್ತೇನೋ, ಅವರಿಗಾಗಿ ಏನನ್ನೂ ಮಾಡಲಾಗದಿರುವುದು ನನ್ನ ಜೀವನದ ಮಹಾದೌರ್ಭಾಗ್ಯ.... ನೀನಿಂದು ನನಗೆ ನೀಡಿರುವುದು ಕೇವಲ ಪ್ರೇಮದಾನವಲ್ಲ, ಮೆಹರ್, ಜೀವದಾನ." ತಮ್ಮಿಬ್ಬರ ಪ್ರಣಯ ಪ್ರಪಂಚಕ್ಕೆ ಅಡ್ಡವಾದ ಯುದ್ಧವನ್ನು ಮೆಹರ್‌ಬಾನ್ ಹೀಗೆ ಶಪಿಸಿದಳು ; ಇದು ಇಡೀ ಮಾನವ ಜನಾಂಗದ ಬಯಕೆಯಾಗಿದೆ : "ಹಾಳಾಗಲಿ, ಈ ಯುದ್ಧ. ಮಾರಿ ಹಾಳಾಗಲಿ ; ದೇವಾ, ನಿನ್ನ ಸೃಷ್ಟಿಯ ಸೌಂದರ್ಯವೆಲ್ಲವನ್ನೂ ವಿನಾಶಗೊಳಿಸುವ ಸಮರದ ಶನಿಮುಷ್ಟಿಯಿಂದ ಈ ಜಗತ್ತನ್ನು ಮುಕ್ತಗೊಳಿಸು."

೧೦

ಚಿತ್ರದುರ್ಗದ ಚಾರಿತ್ರಿಕ ಕಾದಂಬರಿ ಮಾಲೆಯ ಕೊನೆಯ ಕೃತಿ 'ಕಸ್ತೂರಿ ಕಂಕಣ' ಎಂಬ ಕಾದಂಬರಿಯ ಎರಡು ಭಾಗಗಳು. ಇಷ್ಟರವರೆಗೆ ಈ ಕಾದಂಬರಿ ಮಾಲೆಯಲ್ಲಿ ಮುಂದುವರಿದ ಕಥೆ ಇಲ್ಲಿ ಇದ್ದಕ್ಕಿದ್ದಂತೆ ಸಂಬಂಧ ತಪ್ಪಿ. ಈತ ಯಾವ್ರು, ಏನು ಎಂಬುವನ್ನು ತಿಳಿಯದ ಓದುಗ ಕಕ್ಕಾಬಿಕ್ಕಿಯಾಗುತ್ತಾನೆ. ಇವರಲ್ಲಿ ಕಸ್ತೂರಿ ರಂಗಪ್ಪ ನಾಯಕರ ಧೀರೋದಾತ್ತ ಪಾತ್ರ ಚಿತ್ರಣ ಬಂದರೂ 'ವಿಜಯೋತ್ಸವ'ದ ಬಿಚ್ಚುಗತ್ತಿ ಭರಮಪ್ಪ ನಾಯಕನಿಗೂ, ಇವನಿಗೂ ಇರುವ ಸಂಬಂಧವೇನು ಎಂಬುದನ್ನು ಕಾದಂಬರಿಕಾರರು ಸ್ಪಷ್ಟಪಡಿಸಿಲ್ಲ. ಎಲ್ಲೋ, ಹೌದೋ ಅಲ್ಲವೋ ಎಂಬ ಹಾಗೆ ಒಂದು ಕಡೆ ಭರಮಪ್ಪನಾಯಕ ತನ್ನ ಮಗನನ್ನು 'ಮದಕರಿ' ಎಂದು ಹೆಸರು ಹೇಳಿ ಕರೆಯುವ ಸನ್ನಿವೇಶದಿಂದ ಕಸ್ತೂರಿ ರಂಗಪ್ಪ ನಾಯಕನನ್ನು 'ಮದಕರಿ'ಯ ಮಗ – ಎಂದರೆ ಭರಮಪ್ಪನಾಯಕನ ಮೊಮ್ಮಗನೆಂದು ಊಹಿಸಬೇಕಾಗುತ್ತದೆ. ಕಾದಂಬರಿಯಲ್ಲಿಯೂ ಕಲ್ಪನೆಯೇ ಮೇಲುಗೈಯಾಗಿ ಇತಿಹಾಸದ ಅಂಶ ಬಹಳ ಕಡಿಮೆ ಎನ್ನಿಸುತ್ತದೆ. ಇಲ್ಲಿ ವರ್ಣಿತವಾದ ರಾಜಕಾರಣದ ತಂತ್ರ, ಕೌಶಲ್ಯ, ಚಾಣಾಕ್ಷತೆಯನ್ನೂ, ಯುದ್ಧತಂತ್ರಗಳನ್ನೂ ಮೆಚ್ಚಬಹುದು. ಆದರೂ ಇವುಗಳಲ್ಲಿ ಸತ್ಯ ಎಷ್ಟು ಎಂಬ ಬಗೆಗೆ ಮನಸ್ಸು ಚಿಂತಿಸತೊಡಗುತ್ತದೆ. ಈ ಎರಡು ಕಾದಂಬರಿಗಳಲ್ಲಿ ಬರುವ ಕೆಂಚಣ್ಣನಾಯಕನ ಹಾಗೂ ಅವನ ಹೆಂಡತಿ ಹನುಮವ್ವ ನಾಗತಿಯರ ಪಾತ್ರಗಳು ಬಹಳ ಉದಾತ್ತವಾಗಿಯೂ, ಉತ್ತಮವಾಗಿಯೂ ಚಿತ್ರಿತವಾಗಿವೆ. ನಿಷ್ಠೆಯೊಂದಿದ್ದರೆ ಪ್ರಜೆಯೊಬ್ಬನಿಂದ ಒಂದು ರಾಜ್ಯ ಹೇಗೆ ಉಳಿಯ ಬಲ್ಲುದೆಂಬುದನ್ನು ಇಲ್ಲಿ ಕೆಂಚಣ್ಣನ ಮೂಲಕ ಹೇಳಲಾಗಿದೆ. ಸೀರ್ಯಕ್ಕೂ, ಚಿತ್ರದುರ್ಗಕ್ಕೂ ಹೊತ್ತಿದ ದ್ವೇಷದ ಕಿಡಿಯ ಕತೆ ಇಲ್ಲಿ ವರ್ಣಿತವಾಗಿದೆ.

"ಅರಮನೆಯ ಜನರೆಂದರೆ ಜನತೆಯ ತ್ಯಾಗದಿಂದ ನಿರ್ಮಿತವಾದ ಗೂಡಿನಲ್ಲಿ ತಾನೂ ಕ್ಷೇಮವಾಗಿ ಬದುಕುವ ಸರ್ಪಗಳಲ್ಲ" ಎಂಬ ಈ ಕಾದಂಬರಿಯ ಕಸ್ತೂರಿ ರಂಗಪ್ಪನಾಯಕನಂಥವರು ಬಹಳವಿಲ್ಲ. ನಾನು ಕೆಟ್ಟರೂ ರಾಜ್ಯ ಉಳಿಯಲಿ ಎನ್ನುವ ಅರಸರು, ಪಂಜು ಹಿಡಿದು ಹುಡುಕಿದರೆ ತಾನೇ, ಈ ದೇಶದಲ್ಲಿ ಎಷ್ಟು ಕೋಟಿಗೊಬ್ಬರು ಸಿಗುತ್ತಾರೆ, ಹೇಳಿ. ಎಲ್ಲಾ ಊರು ಸುಟ್ಟು ಆ ಉರಿಯಲ್ಲಿ ತಮ್ಮ ಮನೆಯ ದೀಪ ಹೊತ್ತಿಸಿಕೊಳ್ಳುವ ಪುಣ್ಯಾತ್ಮರೇ ! ಅದಕ್ಕಾಗೇ ಇಂಥ ಅರಸರ ಕೂದಲು ಕೊಂಕದಂತೆ, ವಿನಾಕಾರಣ ಒಂದು ಹನಿ ಕಣ್ಣೀರು ಬೀಳದಂತೆ, ನಾವು ಪ್ರಾಣ ಪಣತೊಟ್ಟು ನೋಡಿಕೊಳ್ಳಬೇಕಾಗಿದೆ." ಎಂಬ ದಳವಾಯಿ ದೇಸಣ್ಣನ ಮಾತು ಕಸ್ತೂರಿ ರಂಗಪ್ಪನಾಯಕ ಎಂಬುವನ್ನು ಶಕ್ತಿಪೂರ್ಣವಾಗಿ ಹೇಳುತ್ತದೆ.

ಇಲ್ಲಿ ಬರುವ ಬ್ರಾಹ್ಮಣಧರ್ಮ ನಿಷ್ಠ ಯಜ್ಞನಾರಾಯಣ ಶಾಸ್ತ್ರಿಯ ಪಾತ್ರ–ದಲ್ಲಿಯೂ, ಅವನಾಡುವ ಕಟಿನುಡಿಗಳಲ್ಲಿಯೂ ವ್ಯಕ್ತವಾಗಿದೆ; "ನೀವು ರಾಜಕಾರಣ

ಗಳು, ನಿಮಗೆ ರಾಜಕೀಯ ದೊಡ್ಡದು; ನಾನು ಜೋಯಿಸ-ನನಗೆ ಶಾಸ್ತ್ರದೊಡ್ಡದು. "ನನ್ನ ಉದ್ದಕ್ಕೆ ಹಣಸುರಿದು' ಹತ್ತು ಹಳ್ಳಿಯ ಉಂಬಳಿ ಹಾಕಿಕೊಟ್ಟರೂ ಶಾಸ್ತ್ರ ವ್ಯಭಿಚಾರದ ಈ ಕೆಲಸ ನನ್ನಿಂದ ಸಾಧ್ಯವಿಲ್ಲ." "ದೇವರಿಗಿಂತ, ಶಾಸ್ತ್ರಕ್ಕಿಂತ ಬ್ರಾಹ್ಮಣನಿಗೆ ದೊರೆ ದೊಡ್ಡವನಲ್ಲ." "ಅರಸರು ಆಡಿದರೆ ಅರಗಿಳಿ, ಕಾಡಿದರೆ ಕಾಳಿಂಗ ಸರ್ಪ" ಎಂದು ಜೋಯಿಸರನ್ನು, ಹೆದರಿಸುತ್ತಾರೆ. ಅದಕ್ಕೂ ಅವರು ಜಗ್ಗುವುದಿಲ್ಲ, ಆ ಮದುವೆಯಾದರೆ, "ಈ ಮನೆಯ ಪಾಲಿಗೆ ದುರ್ಗದ ರಾಜ-ಕುಮಾರಿ ಸೊಸೆಯಾಗುವುದಿಲ್ಲ: ಈ ಮನೆತನದಲ್ಲಿ ರಕ್ತದ ಹೊಳೆ ಹರಿಸುವ ರಣದುರ್ಗಿಯಾಗುತ್ತಾಳೆ" ಎಂಬ ಸತ್ಯವೇ ಜೋಯಿಸರು ಆ ಮದುವೆಯನ್ನು ತಡೆಯುವಂತೆ ಮಾಡುತ್ತದೆ. ಆದರೇನು, ವೆಂಕಪ್ಪಯ್ಯನೆಂಬ ದಮನಕನು ಸುಳ್ಳು ಜಾತಕ ಸೃಷ್ಟಿಸಿ ಮದುವೆ ನಡೆದು ಹೋಗುವಂತೆ ತಂತ್ರ ನಡೆಯುತ್ತದೆ. ಸತ್ಯ ಸರಳ; ಸುಳ್ಳು ಬದುಕಲು ಸಾವಿರ ಕಣ್ಣುಗಳಿದ್ದರೂ ಸಾಲದು ಎಂಬುದು ಇಲ್ಲಿ ಗೊತ್ತಾ-ಗುತ್ತದೆ.

"ಪರರ ಊಳಿಗಕ್ಕಿಂತ ದೊಡ್ಡ ಮೈಲಿಗೆ ಬ್ರಾಹ್ಮಣನ ಪಾಲಿಗಿದೆಯೇ ?" ಎಂಬುದನ್ನು ಜೋಯಿಸರು ಕಟುವಾಗಿ ಅನುಭವಿಸುತ್ತಾರೆ. ಹಣದ ದಾಹದಿಂದ ಮಾಡಬಾರದ ಕೆಲಸ ಮಾಡುವ ಚಂದ್ರಶೇಖರ ಶಾಸ್ತ್ರಿಯನ್ನು ಹೀಗೆ ಹೀಯಾಳಿ ಸಿದ್ದಾರೆ: "ಹಣದ ದಾಹ! ಹಣ ಯಾರಿಗೆ ಬೇಡ. ಮನುಷ್ಯನಾಗಿ ಹುಟ್ಟಿ, ಬೆನ್ನಿಗೆ ಹೊಟ್ಟೆ ಕಟ್ಟಿಕೊಂಡವರೆಲ್ಲರಿಗೂ ಹಣ ಬೇಕೇ ಬೇಕು. ಸಂಸಾರಿಗಂತೂ ಅದು ಇದ್ದದ್ದೂ ಅವಶ್ಯಕ. ಆದರೆ ಹೊಟ್ಟೆಗೆ ಎಷ್ಟೇ ಹಸಿವಾದರೂ ಬಾಯಿಂದ ಊಟ ಮಾಡಬೇಕಲ್ಲದೆ, ಕಣ್ಣಿನಲ್ಲಿ ತುರುಕಿ ಕೊಳ್ಳಲಾಗುತ್ತದೆಯೇ ?"

ಸುಬ್ಬರಾಯಶಾಸ್ತ್ರಿ ಹಣದ ದಾಹವಿಲ್ಲದ ನಿಸ್ಪೃಹ ವಿಪ್ರ. "ಹುಲಿಗೆ ನರರಕ್ತದ ರುಚಿ ತೋರಿಸಬಾರದಂತೆ.... ಹಾಗೇ ಬಡವನಿಗೆ ಹಣದ ರುಚಿಯನ್ನು ಕಲಿಸಬಾರದು, ಪ್ರಭು: ಅದರಿಂದ ನಿಮಗಿಂತ ಹೆಚ್ಚಾಗಿ ನಮಗೇ ಕೇಡು. ತಾವು ನನ್ನಲ್ಲಿ ನಂಬಿಕೆ ಇರಿಸುವ ವಿಶ್ವಾಸ ತೋರಿದಿರಿ, ನನಗೆ ಅದಕ್ಕೆ ಅರ್ಹನಾಗಲು ಅವಕಾಶ ಕೊಡಿ. ಸ್ನೇಹ – ವಿಶ್ವಾಸ ಮಾರಾಟದ ವಸ್ತುವಾಗಬಾರದು."

ಸುಳ್ಳು ಜಾತಕ ಸೃಷ್ಟಿಸಿದ ಚಂದ್ರಶೇಖರ ಶಾಸ್ತ್ರಿಯ ಪಾತ್ರವನ್ನು "ಕಾಲಿನಲ್ಲಿ ಮುರಿದ ಮುಳ್ಳಿಟ್ಟುಕೊಂಡು ಕುಣಿಯಲು ಹೊರಟಹಾಗಿದೆ" ಎಂದೊಂದು ಮಾತಿನಲ್ಲಿ ಕಂಡರಿಸಿದ್ದಾರೆ; ಕಾದಂಬರಿಕಾರರು. ಅದನಿಗೆ, "ಯಾವುದು ಏನಾದರೂ ಮನುಷ್ಯನಿಗಿಂತ ಕೆಟ್ಟಪ್ರಾಣಿ ಬೇರೊಂದಿಲ್ಲ" ಎಂಬ ಸತ್ಯ ಸಾಕ್ಷಾತ್ಕಾರವಾಗುತ್ತದೆ.

ಚಿತ್ರದುರ್ಗದ ರಕ್ಷಣೆಗಾಗಿ ಕೆಂಚಣ್ಣನಾಯಕ ಬದ್ಧಕಂಕಣನಾಗಿ ಕವಚ ಶಿರಸ್ತ್ರಾಣಗಳನ್ನು ಹಸುಮಪ್ವನಾಗತಿಯಿಂದ ತೊಡಿಸಿಕೊಳ್ಳುವಾಗ "ಈ ಹೂವಿಗೇ ಸಿಡಿಲು ಬಡಿಯಬೇಕೇ" ಎಂದು ಸಂಕಟಪಡುತ್ತಾನೆ. ಆದರೂ ಕರ್ತವ್ಯವಿಮುಖ ನಾಗುವುದಿಲ್ಲ.

ಚಿತ್ರದುರ್ಗದ ಬೇಡ ಪಡೆಯ ಮೀಸಲು ಬಲವನ್ನು ತ.ರಾ.ಸು. ಅವರು ಕಣ್ಣಿಂದ ಕಂಡ ಹಾಗೆ ಚಿತ್ರಿಸಿದ್ದಾರೆ. ಇದು ಅವರ ಕಾದಂಬರಿ ಮಾಲಿಕೆಯ ಅತ್ಯಂತ ಅಪೂರ್ವವಾದ ವರ್ಣನೆ. ನಾವು ಬೇಡ ಪಡೆಯ ಬಗೆಗೆ ಕೇಳಿದ್ದೇವೆಯೋ ವಿನಾ ಅವರ ಸ್ವರೂಪವನ್ನು ಕಂಡವರಲ್ಲ, ಅದರ ಬಣ್ಣನೆಯನ್ನು ಲೇಖಕರ ಮಾತುಗಳಲ್ಲಿಯೇ ಕೇಳಿರಿ "ಆ ಎರಡು ಸಾವಿರ ಜನರಲ್ಲೈಕಿ ಒಬ್ಬೊಬ್ಬರೂ ಆರಿಸಿದ ಆಳುಗಳು; ಕಗ್ಗೊಲೆಯಲ್ಲಿ ಪರಿಣತರಾಗಿ, ಹಲವಾರು ಯುದ್ಧಗಳಲ್ಲಿ ಹುರುಪಡಿಯಾದ ಯೋಧರು. ಆ ಬೇಡಪಡೆಯ ಹೆಸರು ಕೇಳಿದರೇ, ಕಿರಿಹೃದಯಕ್ಕೇ ಸಿಂಹಸ್ವಪ್ನವಾಗುವಂಥ ಕಡುಗಲಿಗಳು; ಹತ್ತಾರು ಸಮರಗಳಲ್ಲಿ ಆ ಪಡೆಯನ್ನು ಉಪಯೋಗಿಸಿದ್ದ ನಾಯಕರಿಗೆ ಈ ಪಡೆಯನ್ನು ಬಿಡುವುದು ಪಾರಿವಾಳದ ಮುಂದೆಗೆ ಡೇಗೆಗಳನ್ನು ಬಿಟ್ಟಹಾಗೆ ಎಂಬುದು ತಿಳಿದಿತ್ತು. ಅವರು ಒಬ್ಬೊಬ್ಬರೂ ಒಮ್ಮೆ ರಕ್ತದರ್ಶನವಾಗುತ್ತಿದ್ದ ಹಾಗೆ, ರಣೋನ್ಮಾದದಿಂದ ಮದಿಸುತ್ತಿದ್ದ ಕಲಿಗಳು. ರಕ್ತಸ್ನಾನ, ಶವಪೀಠಾರೋಹಣವೆಂದರೆ ಹಬ್ಬದ ಔತಣದ ಹಾಗೆ ಹಿಗ್ಗುವವರು. ಆ ಪಡೆಯ ಇದಿರು ಎಂಥ ಕೋಟೆಯೂ ಮೇಣದ ಗೊಂಬೆ; ಎಂಥ ಸೇನೆಯೂ ಚಿಗರೆಯ ಹಿಂಡು. ಎಂದೂ ಸೋಲರಿಯದ, ಶತ್ರುವಿಗೆ ಎಂದೂ ಬೆನ್ನು ತೋರಿಸದ, ಒಬ್ಬ ನಾಲ್ಕಾಳಿಗೆ ಸಮನಾದ ಯೋಧಪಡೆ; ಅದು-ದುರ್ಗದ ಬೇಡಪಡೆ. ಹತ್ತುದಿನವಾದರೂ ಸರಿಯೇ, ಹಗಲಿರುಳೂ ಕಾದಾಡುತ್ತಾ, ಬೆನ್ನಿಗೆ ಕಟ್ಟಿದ ರೊಟ್ಟಿಯನ್ನು ನೆತ್ತರುಗೈಯಲ್ಲಿ ಹಿಡಿದು ತಿನ್ನುತ್ತಲೇ, ಶತ್ರು ಶಿರವನ್ನು ತರಿವ, ಆಯಾಸವೆಂಬುದನ್ನೇ ಕಾಣದ ನಿತ್ಯೋತ್ಸಾಹಿಗಳ ದಳ, ಉಳಿದೆಲ್ಲ ಬಲವೂ ವಿಫಲವಾದಾಗ ಬಳಸುವ ಬ್ರಹ್ಮಾಸ್ತ್ರದಂಥ ಮೀಸಲು ಬಲ ಕ್ಷಾತ್ರದ ಕೆಚ್ಚು ಕಿಚ್ಚುಗಳ ನೆಲದಲ್ಲಿ ಬದುಕಿದ ತ.ರಾ.ಸು. ಅವರ ಲೇಖನಿಯಿಂದ ಮಾತ್ರ ಬರುವುದು ಸಾಧ್ಯವೆಂಬಷ್ಟು ವಿಶಿಷ್ಟವಾಗಿದೆ.

ಈ ಬೇಡ ಪಡೆಯನ್ನು ನಡೆಸಿದ ನಾಯಕನ ಆಣತಿಯೂ ಅಷ್ಟೇ ವೀರವತ್ತಾದುದು "ನಮ್ಮ ಸೇನೆಯಲ್ಲಿ ಗೆದ್ದ ಕಲಿಗಳು, ಇಲ್ಲವೇ ಸತ್ತ ಹೆಣ – ಇಂಥವರಲ್ಲದೆ ಬೇರೆ ಯಾರೂ ಇರಕೂಡದು. ಬೆನ್ನಲ್ಲಿ ಗಾಯಗೊಂಡು ಸತ್ತವನ ಹೆಣ ಹದ್ದು, ನಾಯಿಗೆ ಊಟ. ಎಷ್ಟೆಷ್ಟು ತಲೆ ತಂದರೆ ತಲೆ ಗೊಂದರಂತೆ ಅಷ್ಟು ಹೊನ್ನು ನಾಳೆ ಹಗಲಿನ ಊಟ ಹಿರಿಯೂರಿನ ಅರಮನೆಯಲ್ಲಿ ಇದು ನಮ್ಮ ಕಟ್ಟಾಣತಿ, ಇದು ನಮ್ಮ ಶಪಥ .... ಅವರ ಆಣತಿಯನ್ನು ನೆರವೇರಿಸುವ, ಅವರ ಶಪಥವನ್ನು ಪರಿಪಾಲಿಸುವ ವೀರ ನಿರ್ಧಾರ; ಒಬ್ಬೊಬ್ಬ ಸೈನಿಕನ ಮೊಗದಲ್ಲಿ ಮೂಡಿ, ಆ ಮುಖಗಳು ಮೃತ್ಯುದೇವಿ ಧರಿಸಿದ ಸಾವಿರ ಮಾನವ ಮುಖವಾಡಗಳಂತೆ ಕಂಡವು.

ಈ ಯಮನಾಳುಗಳಿಗೆ ಸೇನಾನಾಯಕನ ಆಜ್ಞೆಯೇನು? "ಸೇನೆ ಬಿಚ್ಚಿದ ಬೀಸಣಿಗೆಯ ಹಾಗೆ ಹರಡಿಕೊಳ್ಳಲಿ" !

ಹನುಮಪ್ಪನಾಗತಿಯ ಕೈಯ ಕಂಕಣಗಳನ್ನು ಕಸ್ತೂರಿ ರಂಗಪ್ಪನಾಯಕನು ಉಳಿಸಿದುದರಿಂದ ಈ ಕಾದಂಬರಿಗೆ 'ಕಸ್ತೂರಿ ಕಂಕಣ' ಎಂಬ ಹೆಸರು. ಅದು

ಕಾದಂಬರಿಯು ಕೊನೆಗೆ ಮಾತ್ರ ತಿಳಿಯುತ್ತದೆ. ಇಲ್ಲಿಯ ಕೆಂಚಣ್ಣನಾಯಕ ಹನುಮವ್ವನಾಗತಿಯರ ಪಾತ್ರಗಳು ಈ ಕಾದಂಬರಿಯ ಹೃದಯ, ತಿರುಳು— ರಸಗಟ್ಟಿ.

೧೧

ಈ ಕಾದಂಬರಿ ಮಾಲೆಯಲ್ಲಿ ತುಂಬ ಪರಿಣಾಮಕಾರಿಯಾಗಿ ಮೂಡಿದ ಇನ್ನೊಂದು ಅಂಶ ಲಾವಣಿಗಳನ್ನು ಇಲ್ಲಿಯ ಹಿನ್ನೆಲೆಯಾಗಿ ಬಳಸಿಕೊಂಡಿರುವುದು. ಗಿರಿಜವ್ವೆ ಹೇಳುವ ಲಾವಣಿಗಳ ತುಂಡು ರಸದ ಕವಳವಾಗಿ ಐತಿಹಾಸಿಕ ಹಿನ್ನೆಲೆಯನ್ನು ಕಣ್ಣಿಗೆ ಕಟ್ಟುವಂತೆ ಹಿಡಿದಿಡುತ್ತವೆ. ಈ ಭಾಗಗಳನ್ನು ಗದ್ಯದಲ್ಲಿ ಎಷ್ಟೇ ವಿವರಿಸಿದ್ದರೂ ನೀರಸವಾಗುತ್ತಿದ್ದುವು ಇವು ವೀರ ಕರುಣಗಳ ಮಡುಗಳಾಗಿ ನಮ್ಮೆದುರು ಯುದ್ಧದ, ಘೋರ ಪರಿಣಾಮಗಳ ಪ್ರತ್ಯಕ್ಷವಾಗುತ್ತವೆ :

ಗಂಡಸರೆಲ್ಲಾ ಗಾಳಿ ಆದ್ರು
ಹೆಂಗಸರೆಲ್ಲಾ ಮುಂಡೇರಾದ್ರು
ಇನ್ನು ಯಾಕೆ ಬಡೀತೀಯಾ ರಣಡೋಲ
ನಿಟ್ಟುಸಿರೊಂದೆ ಉಳಿದಿರೋದು ಭೂಮಿಮ್ಯಾಲ.

* * *

ಇದ್ದೋರೆಲ್ಲಾ ಪ್ರೇತವಾದ್ರು
ಸತ್ತೋರೆಲ್ಲಾ ಭೂತವಾದ್ರು
ಇನ್ನು ಯಾಕೆ ಬಡೀತೀಯೋ ರಣಡೋಲ
ನಿಟ್ಟುಸಿರೊಂದೆ ಉಳಿದಿರೋದು ಭೂಮಿಮ್ಯಾಲ.

* * *

ದಂಡೇಕೆ ಗುಂಡೇಕೆ ದುರ್ಗಕ್ಕೆ ಬಿರುಗಣ್ಣೆ ಸಾಕು.

* * *

ಮೀಸೆ ತಿರುವಿ ಬಂದೋರೆಲ್ಲಾ ಕಾಸೆಕಿತ್ತು ಓಡಿದ್ರಲ್ಲೋ !

ಬಿಚ್ಚುಗತ್ತಿ ಭರಮಪ್ಪನಾಯಕನ ಕಾಲದಲ್ಲಿ ಚಿತ್ರದುರ್ಗ ಅದರ ಸುವರ್ಣ ಯುಗವನ್ನು ಕಂಡಿತು ಎಂಬ ಚಿತ್ರವನ್ನು ಮನೋಹರವಾಗಿ ಈ ಲಾವಣಿ ಹಾಡುತ್ತದೆ.

ಬಾರೋ ಬಾರಣ್ಣ ಬಾರೋ
ಮೆರುಗಾದ ಸಿಂಗಾರ
ನೋಡೋಕೆ ಕಣ್ಣು ಸಾಲದಲ್ಲೋ ॥
ಬೆಳ್ಳಿಯ ಕೋಟೆ ಬಂಗಾರದ ಬುರುಜು

ಒಳ್ಳೊಳ್ಳೆ ಪಚ್ಚೆ ತೆನೆಗಳು ॥
ಒಳ್ಳೊಳ್ಳೆ ಪಚ್ಚೆ ತೆನೆಗಳು ಕೋಟೆಗೆ
ಅಲ್ಲಲ್ಲಿ ಮುತ್ತಿನ ಮಹಾದ್ವಾರ ॥
ಸುತ್ತಲೂ ಸುಳಿಗೋಟೆ ಮಧ್ಯದಿ ಪೇಟೆಯು
ಮುತ್ತು ಮಾಣಿಕ್ಯದ ವ್ಯಾಪಾರ
ಮುತ್ತು ಮಾಣಿಕ್ಯದ ವ್ಯಾಪಾರ ಮುರುಗದಿ
ಕೊಸರಿಗೆ ಕೊಟ್ಟರೋ ಬಂಗಾರ !
ಎಂಟೆಂಟು ಆನೆ ಮೇಲೆಂಟು ಕುದುರೆ
ಗಂಟೆಯ ಸರಗೆಜ್ಜೆ ಕಾಲಿಗೆ ॥
ಗಂಟೆಯ ಸರಗೆಜ್ಜೆ ತೇರಿನ ಗಾಲಿಗೆ
ಎಂಟೆಂಟು ಕಲಶ ಹೊಳೆದಾವು ॥
ಸುತ್ತಲು ಭಂಟರು ಮಧ್ಯದಿ ಸಂಟರು
ತೇರಿನ ಒಳಗೆ ಮನೆಗಾರ
ತೇರಿನ ಒಳಗೆ ಮನೆಗಾರ ನಾಯಕ
ಸಾವಿರ ಕುದುರೆ ಸರದಾರ ॥
ಮುತ್ತಿನ ಚಪ್ಪರ ಬಾಳೆಯ ಸಾಲ್ಕಂಬ
ಗಾಳೀಲಿ ಗಂಧ ಕಸ್ತೂರಿ
ಗಾಳೀಲಿ ಗಂಧ ಕಸ್ತೂರಿ ಪರಿಮಳ
ದೊರೆರಾಯ ಬರುವ ದಾರೀಲಿ ॥
ಮುತ್ತೀನ ಆರತಿ ರತ್ನದ ಆರತಿ
ಚಿತ್ತಾರ ಚೆಲುವೇರೋ ॥
ಚಿತ್ತಾರ ಚೆಲುವೇರು ಎತ್ತ್ಯಾರೊ ಆರತಿ
ಮುತ್ತು ಬಂಗಾರ ಉಡಿ ತುಂಬ ॥
ಮುರುಗಾದ ದೊರೆಗಿಲ್ಲ ಸರಿಯಾದ ಲೋಕದಿ
ದುರುಗಾದ ಉಚ್ಚಂಗಿ ಮಹತಾಯಿ
ದುರುಗಾದ ಉಚ್ಚಂಗಿ ಮಹತಾಯಿ ಲೋಕಕೆ
ಮಚ್ಚರ ಪಟ್ಟರೆ ಹೋಗು ನಷ್ಟ ॥

೧೨

ತ.ರಾ ಸು. ಅವರ ಶೈಲಿಯ ಗುಣಗಳನ್ನೆಲ್ಲ ಮೇಲೆ ಸಾಕಷ್ಟು ಸಾಧಾರವಾಗಿ ನಿರೂಪಿಸಲಾಗಿದೆ. ಅವರ ಶೈಲಿಯ ಪ್ರಧಾನ ದೋಷವನ್ನೂ ಇಲ್ಲಿ ಹೇಳಬೇಕಾಗಿದೆ. ಅವರ ಈ ಕಾದಂಬರಿ ಮಾಲೆಯಲ್ಲಿ ಅನೇಕ ಗಾದೆಯ ಮಾತುಗಳೂ, ಸೂಕ್ತಿಗಳೂ ಪುನರುಕ್ತವಾಗುತ್ತವೆ. ಅವು ಎಷ್ಟೇ ಚೆನ್ನಾಗಿದ್ದರೂ ಮತ್ತೊಮ್ಮೆ ಬಂದಾಗ ಬೇಸರ ತರಿಸುತ್ತವೆ. ನಮ್ಮ ಕನ್ನಡವಲ್ಲಿ ಬೇರೆ ಮಾತುಗಳಿಗೆ ದಾರಿದ್ರ್ಯವೇ ಎನ್ನಿಸುತ್ತವೆ. ಅಂಥ ಪುನರುಕ್ತವಾದ ಭಾಗಗಳಿವು: "ತಾವು ಪಾದದಿಂದ ತೋರಿ-

ಸಿದುದನ್ನು ನೆತ್ತಿಯಲ್ಲಿ ಹೊತ್ತು ನಡೆಸುತ್ತೇನೆ." "ಎಳ್ಳುಕಾಳು, ಮುಳ್ಳುಮೊನೆ-ಯಷ್ಟೂ ಆ ಎಚ್ಚರಿಕೆ ಸಡಿಲವಾಗಬಾರದು." "ರಾಮನಿಗೆ ರಾಜ್ಯವಾದರೂ, ಬಡವನಿಗೆ ರಾಗಿ ಬೀಸೋದು ತಪ್ಪೋಲ್ಲ." "ದುರ್ದಾನ ತೆಗೆದುಕೊಂಡವನಂತೆ ಹೊರಟುಹೋದ". 'ನನ್ನ ಕೈಯಾರ ದಳವಾಯಿಯ ದೇಹವನ್ನು ಚೂರುಚೂರಾಗಿ ಕತ್ತರಿಸಿ ಅವನ ಬೇಟೆಯ ನಾಯಿಗಳಿಗೇ ಉಣಬಡಿಸುವವರೆಗೂ ನಾನು ಸಾಯು ವುದಿಲ್ಲ." "ಯಜ್ಞಕುಂಡದಲ್ಲಿ ಸತಿಯ ಪ್ರಾಣಾರ್ಪಣವಾಯಿತು. ಇನ್ನು ವೀರ ಭದ್ರಾವತಾರದ ವೇಳೆ" "ನಾಯಿ ಬೊಗಳಿದರೆ ಆಕಾಶ ಉದುರುತ್ತವೆಯೇ ?" "ಆನೇ ಜಾತ್ರೇಲಿ ಇರುವೆ ಸತ್ತಿತು" "ಕಬ್ಬಿಣ ಕುಟ್ಟೋತಾವು ನೊಣಕ್ಕೇನು ಕೆಲಸ?" "ಹನುಮಂತರಾಯ ಹಗ್ಗತಿಂದರೆ ಪೂಜಾರಯ್ಯನಿಗೆ ಶ್ಯಾವಿಗೆ ಸಿಗುತ್ತದೆಯೇ?" "ಹೃದಯವನ್ನು ಇರಿಯಲು ಎತ್ತಿದ ಸುರಿಗೆಯಂತೆ ಅವಳ ಕೈಬೆರಳು ಅವಸತ್ತ ಹಾಯ್ದಿತ್ತು." "ಮಿಂಚು ಮುಟ್ಟಿದಂತಾಗಿ"--ಇತ್ಯಾದಿ.

೧೩

ಈ ಕಾದಂಬರಿ ಮಾಲೆಯನ್ನು ಓದಿದ ಮೇಲೆ ಒಂದು ಪಾಳೆಯಗಾರರ ಮನೆ-ತನದಲ್ಲಿ ರಾಜ್ಯಭಾರಕ್ಕಾಗಿ ಇಷ್ಟೆಲ್ಲ ರಕ್ತಪಾತ, ದ್ವೇಷ, ಮತ್ಸರ, ಹಟ ಅಟಮಟಿ ಸಿರುವಾಗ ನಮ್ಮ ದೇಶದ ಇತರ ರಾಜ್ಯಗಳಲ್ಲಿ ಏನೆಲ್ಲ ನಡೆದಿರಬಹುದು ಎಂಬ ಕಲ್ಪನೆ ಮನಸ್ಸಿನಲ್ಲಿ ಮೂಡುತ್ತದೆ. 'ಮಾನವನಿಗೆ ಇನ್ನು ಯುದ್ಧ ಬೇಡ, ಮಾನವೀಯತೆಯ ಯಜ್ಞ ಕೂಡದು ಎಂಬ ಬುದ್ಧಿ ಯಾವಾಗ ಬರುವುದೋ ಏನೋ ಎಂಬಂತಾಗುತ್ತದೆ. ಸೈನ್ಯ, ಸೈನ್ಯಾಡಳಿತ, ನಿರಂಕುಶ ಪ್ರಭುತ್ವ, ಮಾನವನ ಪಾಶವೀಕೃತ್ಯಗಳ ಬಗೆಗೆ ಜುಗುಪ್ಸೆ ತಾಳಿ ಅದು ಇನ್ನೆಂದೂ ಲೋಕದಲ್ಲಿ ಮರುಕಳಿಸದಿರಲಿ ಎಂಬಂತಾಗುತ್ತದೆ ಆದರೇನು, ಮರುಕಳಿಸುವುದೇ ಇತಿಹಾಸದ ಲಕ್ಷಣವೋ ಏನೋ! ಎರಡೆರಡು ಬಾರಿ ಜಾಗತಿಕ ಯುದ್ಧಗಳೇ ನಡೆದು ಮಾನವನ ರಕ್ತಪಿಪಾಸೆ ವಿಜೃಂಭಿಸಿತು. ಬಾಂಗ್ಲಾದಲ್ಲಿ ರಾಜ್ಯಕ್ರಾಂತಿಯಾಗಿ ಬಂಗಾಳ ಆಘಾತ ರಕ್ತದಿಂದ ಕೆಂಪಾಯಿತು. ಮಾನವ ದಾನವನಾದ; ಹಗೆಹೊಗೆಯೆಬ್ಬಿಸಿತು; ಮಾನವೀಯತೆ ಮರೆಯಾಯಿತು. ಭಾರತ ದಲ್ಲಿಯೂ ತುರ್ತುಪರಿಸ್ಥಿತಿಯ ಕರಾಳದಿನಗಳಲ್ಲಿ ನಿರಪರಾಧಿಗಳ ಚಿತ್ರಹಿಂಸೆ ನಡೆಯಿತು. ಇವಕ್ಕೆಲ್ಲ ಕೊನೆಯೆಲ್ಲಿ?--ಎಂಬ ಭಾವ ಮನಸ್ಸನ್ನೆಲ್ಲ ಮುತ್ತಿ ನಾವು ವಿಚಾರಪರರಾಗುವಂತೆ ಮಾಡುತ್ತದೆ.

ತ.ರಾ.ಸು. ಅವರ ಚಿತ್ರದುರ್ಗದ ಚಾರಿತ್ರಿಕ ಕಾದಂಬರಿಗಳು ಅವರು ಈ ಪ್ರಕಾರದಲ್ಲಿ ಸಿದ್ಧಹಸ್ತರು ಎಂಬುದನ್ನು ಸಾರುತ್ತವೆ. ಅವರ ಇಲ್ಲಿಯ ಶೈಲಿ ಗತಕಾಲದ ಚಿತ್ರವನ್ನು ಕಂಡರಿಸಲು ಸಮರ್ಥವಾಗಿದೆ ಎಂಬುದನ್ನು ಸಾಧಿಸಿದೆ. ಅವರ ಹಂಬಲದಂತೆ ಅವರ ವೀರಶೈಲಿಯ ಲೇಖನಿಯಿಂದ ಕರ್ನಾಟಕದ ಗತವೈಭವ ಚಾರಿತ್ರಿಕ ಮಾಲೆಯಾಗಿ ಮೂಡಲಿ; ಕರ್ನಾಟಕದ ಸಮಗ್ರ ವೀರಗಾಥೆ ಅವರ ಸಮರ್ಥ ಶೈಲಿಯಲ್ಲಿ ಬೆಳಕಿಗೆ ಬರಲಿ ಎಂದು ನಾವು ಹಾರೈಸೋಣ.

ಐತಿಹಾಸಿಕ ಕಾದಂಬರಿಗಳಲ್ಲಿ ವೀರ ರಸ

— ಡಾ|| ವಿ. ಎಸ್. ಎಸ್. ಆಚಾರ್ಯ

ತ್ರ. ರಾ. ಸುಬ್ಬರಾಯರು ಕನ್ನಡ ನಾಡಿನ ಒಬ್ಬ ಪ್ರತಿಭಾನ್ವಿತ ಸಾಹಿತಿ. ಪ್ರಸಿದ್ಧ ಸಾಹಿತಿಗಳೂ ಪ್ರಾಧ್ಯಾಪಕರೂ ಆಗಿದ್ದ ತಳುಕಿನ ವೆಂಕಣ್ಣಯ್ಯನವರ ಮನೆತನಕ್ಕೆ ಸೇರಿದವರು. ಚಿಕ್ಕಂದಿನಿಂದಲೇ ಸಾಹಿತ್ಯಶಕ್ತಿಯ ಸ್ಫೋಟ. ಇವರ ಕಾದಂಬರಿಗಳು ಜನಪ್ರಿಯವಾಗಿವೆ. ಕೆಲವು ಚಲನ ಚಿತ್ರಗಳಾಗಿ ಬಂದಿವೆ. ಕನ್ನಡದಲ್ಲಿ ಚಾರಿತ್ರಿಕ ಕಾದಂಬರಿಗಳು ಕಡಿಮೆ. ಸಾಮಾಜಿಕ ಕಾದಂಬರಿಗಳು ಮತ್ತು ಅಗ್ಗದ ಜನಪ್ರಿಯತೆಯನ್ನು ಗಳಿಸುವ ಗುರಿಯುಳ್ಳ ಕಾದಂಬರಿಗಳೇ ಹೆಚ್ಚು. ವೀರಕೇಸರಿ. ಶ್ರೀನಿವಾಸರಾವ್ ಕೊರಟಿ, ಮ. ನ. ಮೂರ್ತಿ, ಮಾಸ್ತಿ ಮುಂತಾದ ಕೆಲವೇ ಸಾಹಿತಿಗಳು ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ. ಸುಬ್ಬರಾಯರು ಚಿತ್ರದುರ್ಗದಲ್ಲಿ ವಿದ್ಯಾಭ್ಯಾಸ ಮಾಡಿದವರು. ಅಲ್ಲಿಯ ಕೋಟೆ ಕೊತ್ತಲ ಇತ್ಯಾದಿಗಳ ಪರಿಚಯ ಚೆನ್ನಾಗಿದೆ. ಮಲ್ಲೂರು ಶ್ರೀನಿವಾಸ ಜೋಯಿಸರು, ದೇವುಡು ಮತ್ತು ನನ್ನ ಗುರುಗಳಾದ ಡಾ. ಎಸ್. ಶ್ರೀಕಂಠಶಾಸ್ತ್ರಿಗಳ ಪ್ರಭಾವ ಬೇರೆ. ಇದರಿಂದ ಪ್ರಚೋದಿತರಾಗಿ ಇತಿಹಾಸಕ್ಕೆ ಸಂಬಂಧಿಸಿದ ಮೂಲಾಧಾರಗಳನ್ನು ಸಂಶೋಧಿಸಿ ದೊರಕಿದ ಸ್ವಲ್ಪ ವಿಷಯವನ್ನೇ ಆಧಾರವಾಗಿಟ್ಟುಕೊಂಡು ಶ್ರೇಷ್ಠ ಕಾದಂಬರಿಗಳನ್ನು ರಚಿಸಿದ್ದಾರೆ. ಕಾದಂಬರಿಯನ್ನು ಚಿತ್ರಿಸಲು ಬೇಕಾಗುವ ಎಲ್ಲಾ ಐತಿಹಾಸಿಕಾಂಶಗಳು ದೊರಕದಿದ್ದರೂ ಆಳಿದ ರಾಜರು, ಸಾಮಂತರು, ನಾಯಕರು ಮತ್ತು ಮುಖ್ಯ ಘಟನೆಗಳ ವಿಚಾರ ಮಾತ್ರ ದೊರಕುತ್ತವೆ. ಇವು ವಾಸ್ತವಿಕೆಗೆ ಆಧಾರವಷ್ಟೆ, ಇಷ್ಟು ಕಡಿಮೆಯಾದ ಅಂಶಗಳನ್ನೇ ತೆಗೆದುಕೊಂಡು ಅವುಗಳ ಸುತ್ತಲೂ ಸನ್ನಿವೇಶಕ್ಕೆ ತಕ್ಕಂತೆ ಸುಂದರವಾದ ಹೃದಯಂಗಮವಾದ ಕಾದಂಬರಿಗಳನ್ನು ರಚಿಸಿರುವುದು ಲೇಖಕರ ಪ್ರತಿಭಾ ಶಕ್ತಿಯ ಪ್ರತೀಕ.

ಕಾದಂಬರಿ ಎಂದರೆ ಅದರ ಚೌಕಟ್ಟು, ವಸ್ತು, ವಸ್ತುವಿನ ಸುತ್ತ ಹೆಣೆದಿರುವ ಕಥೆ, ಕಥೆಯ ನಿರಾತಂಕವಾದ ಸಹಜವಾದ ಬೆಳವಣಿಗೆ ಮತ್ತು ಓಟ ಅವಕ್ಕೆ ಪೋಷಕವಾದ ಘಟನೆಗಳು, ಸನ್ನಿವೇಶಗಳು, ಕಥಾನಕ, ಪಾತ್ರ ನಿರೂಪಣೆ, ಕಥೆಯಲ್ಲಿ ಒಕ್ಕೂಟ ಮತ್ತು ಸಮರಸವಾದ ಓಟ, ಜೀವಂತವಾದ ದೃಶ್ಯಗಳು, ಹೃದಯಂಗಮವಾದ ಶೈಲಿ ಇವೆಲ್ಲ ಇರಬೇಕಲ್ಲವೆ? ಇವಲ್ಲದೆ ಕಾದಂಬರಿಕಾರನು ವಿಶಾಲವಾಗಿ ವಸ್ತುವನ್ನು ಅರಿಸಿ ತನ್ನದೇ ಆದ ವಿಶೇಷ ಪ್ರತಿಭೆಯನ್ನು ತೋರಬೇಕು. ಕಥೆಯು ವಾಸ್ತವವಾಗಿರಬೇಕು. ಓದುಗನಲ್ಲಿ ಆಸಕ್ತಿಯನ್ನು ನೆಟ್ಟು. ಉತ್ಸುಕತೆಯನ್ನು ಉಂಟು ಮಾಡುವಂತಿರಬೇಕು. ಪುಸ್ತಕವನ್ನು ಪೂರ್ತಿ ಓದದೆ ಎದ್ದು ಹೋಗದಂತೆ ಹಿಡಿದು ಕೂರಿಸುವಂತಿರಬೇಕು. ಘಟನೆಗಳ ಉಪಯೋಗದ ರೀತಿಯಲ್ಲಿ ವೈವಿಧ್ಯ,

ಅವರಲ್ಲಿ ಬರುವ ವ್ಯಕ್ತಿಗಳಲ್ಲಿ ಭಿನ್ನವಾದ ವ್ಯಕ್ತಿತ್ವದ ಚಿತ್ರಣ, ಓದುಗನ ಮನಸ್ಸನ್ನು ಸೂಜಿಗಲ್ಲಿನಂತೆ ಸೆಳೆದುಕೊಳ್ಳುವ ಸತ್ವ, ಘಟನೆಗಳ ಪುನರಾವರ್ತನೆಯಿಲ್ಲದಿರುವಿಕೆ, ನಾಟಕತೆ, ಚೆನ್ನಾಗಿ, ಮೊನಚಾಗಿ, ನೇರವಾಗಿ, ಅರ್ಥವತ್ತಾಗಿ, ರಸವತ್ತಾಗಿ, ಕವಲಾಯವಾಗಿ ಹೇಳಿಕೊಂಡು ಹೋಗುವ ಶೈಲಿ, ಭಾವನೆಗಳಿಗೆ, ಸನ್ನಿವೇಶಕ್ಕೆ, ವ್ಯಕ್ತಿತ್ವಕ್ಕೆ ತಕ್ಕ ಶಬ್ದಗಳ ಸುಂದರವಾದ ತಡೆಯಿಲ್ಲದ ಸಹಜವಾದ ಜೋಡಣೆ ಇತ್ಯಾದಿಗಳೆಲ್ಲಾ ಇರಬೇಕಲ್ಲವೆ ? ಪ್ರಸ್ತುತ ಸುಬ್ಬರಾಯರ ಕೆಲವು ಕಾದಂಬರಿಗಳನ್ನು ಅವಲೋಕಿಸಿ ಈ ಅಂಶಗಳನ್ನು ಹೇಗೆ ಸಾಧಿಸಿದ್ದಾರೆ ಎಂಬುವನ್ನು ತಿಳಿಯಬಹುದು. ಅವರು ಬರೆದಿರುವ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಕಾದಂಬರಿಗಳು ಮತ್ತು ಸಿಡಿಲಮೊಗ್ಗು, ನೃಪತುಂಗ ಮುಂತಾದುವು ಪ್ರಸಿದ್ಧ ಐತಿಹಾಸಿಕ ಕಾದಂಬರಿಗಳಾಗಿವೆ. ಕಾದಂಬರಿಗಳನ್ನು ಹಲವು ಬಗೆಯಾಗಿ ವರ್ಗೀಕರಿಸಬಹುದು. ಎಷ್ಟು ಸಲ ಓದಿದರೂ ಮತ್ತೊಂದು ಸಲ ಓದಬೇಕು ಎನ್ನಿಸುವಂತಹವು ಕೆಲವು ; ಕೆಲವು ಒಂದೆರಡು ಸಲ ಓದಿ ಸಂತೋಷಪಡುವಂತಹವು, ಕೆಲವು ಬೇರೇನೂ ಕೆಲಸವಿಲ್ಲದಿದ್ದಾಗ ಓದಿ ಮರೆಯುವಂತಹ ಬೇಸರ ಕಳೆಯಲು ಒಂದು ಸಾಧನವಾದ ಪತ್ತೇದಾರಿ ಕಾದಂಬರಿಗಳು. ಸುಬ್ಬರಾಯರ ಐತಿಹಾಸಿಕ ಕಾದಂಬರಿಗಳು ಮೊದಲನೆಯ ವರ್ಗಕ್ಕೆ ಸೇರಿದುವು ಇವು ಆಬಾಲ ವೃದ್ಧರಾದಿಯಾಗಿ ಎಲ್ಲರ ಮನಸ್ಸನ್ನೂ ಸೂರೆಗೊಳ್ಳುವಂತಹವು. ಇವುಗಳನ್ನು ನಾನು ಹಲವು ಬಾರಿ ಓದಿದ್ದೇನೆ. ಕೆಲವು ಕಾದಂಬರಿಗಳಲ್ಲಿ ವೀರ ರಸವನ್ನು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ನಿರೂಪಿಸಲಾಗಿದೆ ಎಂಬುವನ್ನು ಪರಿಶೀಲಿಸೋಣ.

ರಸವೆಂದರೆ ಸಾರ, ತಿರುಳು. ವಿಭಾವಾನು ಭಾವವ್ಯಭಿಚಾರಿ ಸಂಯೋಗಾದ್ರಸ ನಿಷ್ಪತ್ತಿ :—ವಿಭಾವ ಅನುಭಾವ ವ್ಯಭಿಚಾರಿ ಭಾವಗಳ ಸಂಯೋಗದಿಂದ ರಸ ನಿಷ್ಪತ್ತಿಯಾಗುತ್ತದೆ ಎಂಬುದು ಭರತಮುನಿಯ ಸೂತ್ರ. ಇದರ ಅನುಭವವು ರುಚಿಯಾದ ಭೋಜನವನ್ನು ಸವಿಯುವಂತೆಯೇ ಭಾವುಕರು ಅನುಭವ ಹೊಂದುತ್ತಾರೆ. ಇದು ಸರಿಯಾದ ಪದ ಪ್ರಯೋಗಗಳಿಂದ ನಮ್ಮ ಮನಸ್ಸಿನ ಕಲ್ಪನೆಯ ತೆರೆಯ ಮೇಲೆ ಉಂಟಾಗುವ ಚಿತ್ರಣ. ಉಪಮಾನ, ಉಪಮೇಯ, ಸಾಮ್ಯ, ಅಲಂಕಾರ, ಪದ ಪುಂಜಗಳಿಂದ, ಮೊನಚಾದ ಶಕ್ತಿಯುತವಾದ ವರ್ಣನೆಯಿಂದ ನಮ್ಮ ಕಲ್ಪನೆಯಲ್ಲಿ ಮೂಡಿ ಬರುವ ವಾಸ್ತವಿಕೆಯ ಪ್ರತಿಬಿಂಬ. ಇದರಿಂದ ಹೃದಯದಲ್ಲಿ ತಕ್ಕ ಭಾವಸ್ಫುರಣವಾಗಿ ಅನುಭವ ಉಂಟಾಗುತ್ತದೆ. ಇದೇ ರಸ, ರುಚಿ. ಇದನ್ನು ಸಹೃದಯನು ಕಾವ್ಯಾದಿಗಳಿಂದ ಅನುಭವಿಸುತ್ತಾನೆ. ಮಕ್ಕಳು ತಮ್ಮ ಆಟದ ಸಾಮಾನುಗಳಿಂದ ಆಟವಾಡಿ ಸವಿ ಪಡೆಯುವಂತೆಯೇ ರಸಿಕನು ಕಾವ್ಯಾದಿಗಳಲ್ಲಿ ನಿರೂಪಿಸಲಾಗಿರುವ ರಸಗಳ ಸವಿ ಪಡೆಯುತ್ತಾನೆ. ನವ ರಸಗಳಲ್ಲಿ ವೀರ ರಸವು ಒಂದು ಪ್ರಮುಖ ರಸ. ಪ್ರತಾಪ, ವಿನಯ, ದೃಢ ನಿಶ್ಚಯ, ಸತ್ವ, ಮೋಹ, ವಿಷಾದರಾಹಿತ್ಯ, ನಯ, ವಿಸ್ಮಯ, ಶೌರ್ಯ ಇತ್ಯಾದಿಗಳಿಂದ ಪುಷ್ಟಗೊಂಡು ಉತ್ಸಾಹವನ್ನು ಮೂಲವಾಗಿ

ಒಳಗೊಂಡು ಭಾವುಕರ ಚಿತ್ತವನ್ನು ವಿಸ್ತರಿಸುವ ರಸವು ವೀರರಸ. ಇದರಲ್ಲಿ ದಯಾವೀರ, ಯುದ್ಧವೀರ, ದಾನವೀರ, ಗುಣವೀರ ಎಂಬುದೇ ಮುಂತಾದ ಹಲವು ವಿಧಗಳಿವೆ. ಇಂತಹ ರಸವು ತ.ರಾ.ಸು. ಅವರ ಐತಿಹಾಸಿಕವಾದ ರಕ್ತರಾತ್ರಿ, ತಿರುಗುಬಾಣ, ಸಿಡಿಲಮೊಗ್ಗು ಮುಂತಾದ ಕಾದಂಬರಿಗಳಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ಪರಿಶೀಲಿಸೋಣ.

ಟಿಪ್ಪುವಿನ ಕಾಲದಲ್ಲಿ ಮುಕ್ತಾಯವಾದ ಚಿತ್ರದುರ್ಗದ ಪಾಳೆಯಗಾರರ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳೆಲ್ಲವೂ ರುದ್ರ ಮನೋಹರವಾಗಿವೆ. ಇಮ್ಮಡಿ ಮದಕರಿನಾಯಕನ ಅವಸಾನದ ನಂತರ ಅವನ ಇಚ್ಛೆಯಂತೆ ಕಿರಿಯ ನಾಗತಿಯ ತಮ್ಮನಾದ ಓಬಣ್ಣನಾಯಕನನ್ನು ಪ್ರಧಾನಿ ಭರಮಪ್ಪ ಮುಂತಾದ ಹಿತೈಷಿಗಳ ಇಚ್ಛೆಯಂತೆ ಪಟ್ಟಕ್ಕೆ ತಂದು ತನ್ನ ವಂಶ ಪಾರಂಪರ್ಯವಾದ ಹಕ್ಕನ್ನು ಸಂತೋಷದಿಂದ ಬಿಟ್ಟು ಕೊಟ್ಟು ಲಿಂಗಣ್ಣನಾಯಕನು ಪ್ರಧಾನಿಯಾದನು. ಇದು ಅವನ ಸಾತ್ವಿಕ ಔದಾರ್ಯ. ಹಿರಿಯ ದಳವಾಯಿ ದೇಸಣ್ಣನು ತನ್ನ ವಿರೋಧಿಯೆಂದು ತಿಳಿದ ನಂತರ ಮೊದಲಿನಿಂದ ಸರ್ವಾಧಿಕಾರಿಯಾಗಲು ಹಂಬಲಿಸಿ ಹವಣಿಸುತ್ತಿದ್ದ ಮುದ್ದಣ್ಣನು ದೇಸಣ್ಣನನ್ನು ಕೊಲೆ ಮಾಡಿ, ನಂತರ ಅನಿರೀಕ್ಷಿತವಾಗಿ ಓಬಣ್ಣನಾಯಕನನ್ನು ಆಸ್ಥಾನದಲ್ಲೇ ಕೊಲೆ ಮಾಡಿದ. ಹಿರಿಯ ನಾಗತಿ ಆತ್ಮಹತ್ಯೆ ಮಾಡಿಕೊಂಡಳು, ಲಿಂಗಣ್ಣನಾಯಕ ಅತ್ಯಂತ ದುಃಖ ಭರಿತನಾಗಿ 12 ವರ್ಷಗಳ ಕಾಲ ನಿಷ್ಕ್ರಿಯನಾಗಿದ್ದ. ಇವನ ತಮ್ಮ ಚಿಕ್ಕಣ್ಣನಾಯಕನು ಮುದ್ದಣ್ಣನ ಕೈಗೊಂಬೆಯಾಗಿ ನಾಯಕನಾಗಿ ಗಂಡು ಸಂತಾನವಿಲ್ಲದೆ ಮರಣ ಹೊಂದಿದ ನಂತರ ಪುನಃ ಕಿರೀಟ ಲಿಂಗಣ್ಣನಾಯಕನನ್ನು ಅರಸಿ ಬಂದಿತು. ದುರ್ಗದ ಹಿತೈಷಿಗಳ ಒತ್ತಾಯಕ್ಕೆ ಮಣಿಯಬೇಕಾಯಿತು. ಅವನ ಮನಸ್ಸು ನಿರಾಶೆಯಿಂದ ಹೆಪ್ಪು ಕಟ್ಟಿತ್ತು. ಹಿರಿಯ ನಾಗತಿಯ ದಾಸಿಯಾಗಿದ್ದ ಗಿರಿಜೆಯ ಮಾತನ್ನು ಕೇಳಿ ಲಿಂಗಣ್ಣನ ಕ್ರೋಧವು ಕೆರಳಿತು. ಅವನ ಕ್ಷಾತ್ರವು ಮರುಕಳಿಸಿತು. "ಇಂದಿನಿಂದ ನಾನಲ್ಲ, ಅವನು ಎಚ್ಚರವಾಗಿರಬೇಕಾದ ದಿನ ಗಿರಿಜಾ. ಅವನ ಸಾವು ಸಮೀಪಿಸಿದೆ. ಇಂದು ನನ್ನ ಕೈಗೆ ಕತ್ತಿ ಇತ್ತು ದಾರಿ ತೋರಿಸಿದೆ ಗಿರಿಜಾ, ಇಂದಿನಿಂದ ಸೇಡುತೀರಿಸಲು ಬದುಕುತ್ತೇನೆ" ಎಂದು ಗುಡುಗಿದ. ಇದೇ ವಿಧವಾದ ಪೌರುಷದ ಮಾತುಗಳನ್ನು ಅಂತಹ ಉಗ್ರ ಚನ್ನವೀರಸ್ವಾಮಿಯು ಮುಂದೆಯೂ ಆಡಿದ. ನಂತರ ಇಮ್ಮಡಿ ಮದಕರಿನಾಯಕನೆಂದು ಪಟ್ಟಾಭಿಷಿಕ್ತನಾಗುತ್ತಾನೆ. ಆದರೆ ನಿಜವಾದ ಪ್ರಭು ರಕ್ತದಾಹ, ಅಧಿಕಾರ ಲಾಲಸೆಯುಳ್ಳ ತುಂಬಿದ ಬಿತ್ತರಿಗಾರ ದಳವಾಯಿ ಮುದ್ದಣ್ಣ. ನಾಯಕನ ಮಾತು ಅರಮನೆಯಲ್ಲಿ ಕೂಡ ನಡೆಯದಂತಾಯಿತು. ಮುದ್ದಣ್ಣನ ತಮ್ಮ ಕಾರ್ಯಭಾರಿ ಚಿಕ್ಕಣ್ಣನು ತನ್ನ ಆಜ್ಞೆಯನ್ನು ಧಿಕ್ಕರಿಸಿದಾಗ ನಾಯಕನು ಅವನ ಕೆನ್ನೆಗೆ ಹೊಡೆದು ಅವನನ್ನು ಕೆಲಸದಿಂದ ತೆಗೆದು ಹಾಕುತ್ತಾನೆ. ಇದು ಎಷ್ಟು ವಿಕೋಪಕ್ಕೆ ಹೋಗಬಹುದೆಂಬುದನ್ನು ಊಹಿಸುವುದಿಲ್ಲ. ಈ ಸನ್ನಿವೇಶದಲ್ಲಿ ನಾಯಕನ ಮಾತುಗಳಿಂದ

ಅವನು ಒಬ್ಬ ಧೀರ, ವೀರ ಪುರುಷ ಎಂಬುದು ಮನವರಿಕೆಯಾಗುತ್ತದೆ. ಅವನು ಕೆರಳಿದ ಹುಲಿಯಾಗಿದ್ದ. ಅದರೆ ಅವನಲ್ಲಿ ಕಂಡು ಬರುವುದು ಸಾತ್ವಿಕ ವೀರ ರಸ. ಔದಾರ್ಯದ ಉರುಳಲ್ಲಿ ಸಿಕ್ಕಿ ದುರಂತದ ಸಾವಿಗೆ ಬಲಿಯಾದ ಮುದ್ದಣ್ಣನ ಪಾತ್ರ ವೆಲ್ಲವೂ ಕ್ಷುದ್ರವಾದ ರೌದ್ರ ರಸದಿಂದ ಕೂಡಿದೆ. ರಕ್ತ ರಾತ್ರಿಯನ್ನು ಓದಿದ ನಂತರ ನಮ್ಮಲ್ಲಿ ನಿಲ್ಲುವುದು ಆ ಘೋರವಾದ ಪೈಶಾಚಿ, ಕೊಲೆ, ಕಟುಕ ತನದಿಂದ ಚೆಲ್ಲಿದ ಭಯಂಕರವಾದ ಪ್ರಮಿತಿಮಿರುವಂತಹ ರಕ್ತದ ಕೆಂಪು. ಲಿಂಗಣ್ಣನಾಯಕನ ಬಗೆ ಅನುಕಂಪ: ಮುದ್ದಣ್ಣನ ಬಗ್ಗೆ ಯಾವಾಗ ಇವನ ಅನ್ಯಾಯಗಳಿಗೆ ಸರಿಯಾದ ಶಿಕ್ಷೆಯಾಗುತ್ತದೆ ಎಂಬ ಕ್ರೋಧದ ಕಾತುರ.

ಕಥಾನಕವು 'ತಿರುಗುಬಾಣ'ದಲ್ಲಿ ಮುಂದುವರಿಯುತ್ತದೆ. ಎಲ್ಲರ ಹೃದಯ ದಲ್ಲೂ ಪ್ರತೀಕಾರದ ತೃಷೆಯ ದಾವಾಗ್ನಿ. ನಾನಾ ಹಳ್ಳಿಗಳ ಗೌಡರಲ್ಲಿ ಸುಪ್ತವಾಗಿದ್ದ ವೀರತ್ವದ ಕೆರಳುವಿಕೆ. ಇದು ಎಲ್ಲಾ ಗೌಡರಲ್ಲೂ ಒಂದೇ ಕಾಲದಲ್ಲಿ ಕೆರಳುವುದಿಲ್ಲ. ಗೋಪಾಲಪುರದ ಗೌಡನ ಧೀರೋದಾತ್ತ ನಡವಳಿಕೆ, ಮೆಚ್ಚಿ ಕೊಳ್ಳುವ ಎದೆಗಾರಿಕೆ, ಓದುಗರ ಮನಸ್ಸನ್ನು ಸೂರೆ ಗೊಳ್ಳುತ್ತದೆ. ಅವನ ಕೊಲೆಯಾದ ನಂತರ ಮುದ್ದಣ್ಣನ ಸೈನಿಕರು ಹಳ್ಳಿಗರ ಮನೆಗಳನ್ನು ಧಾಳಿ ಮಾಡಿ ಅನ್ಯಾಯವೆಸಗಿದ ನಂತರ ಕೆಲವರ ಕ್ರೋಧ ಕೆರಳುತ್ತದೆ. ಗೌಡರನ್ನೆಲ್ಲಾ ತುಂಬಾ ಹುಷಾರಾಗಿ ಕೆಲಸ ಮಾಡುವಂತೆ ಮಾರ್ಗದರ್ಶನ ಮಾಡಿದ ಗಿರಿಜಳೂ ವೀರ ರಮಣಿಯೇ. “ಭಯ...ನನಗೆ...ಭಯ? ನನ್ನ ಭಯದ ಕಾಲ ಎಂದೋ ತೀರಿ ಹೋಯಿತು ಚಿನ್ನಯ್ಯ. ಈಗ ಭಯ ಪಡ ಬೇಕಾದವನು ಒಬ್ಬನೇ—ದಳವಾಯಿ ನಾಯಿ” ಎಂಬ ಉಗ್ರ ನಿರ್ಧಾರದ ಮಾತು ವೀರ ರಮಣಿಯ ಮಾತು. ಸೆರೆಮನೆಯಲ್ಲಿ ಸರಪಣಿಗಳಿಂದ ಬಿಗಿಯಲ್ಪಟ್ಟಿದ್ದರೂ ನಿಸ್ಸಹಾಯಕ ಸ್ಥಿತಿಯಲ್ಲಿದ್ದರೂ ದಳವಾಯಿ ಭರಮಣ್ಣ ಮತ್ತೊಬ್ಬ ವೀರ ಪುರುಷ. ಆದರೆ ಅವನದು ಪ್ರತೀಕಾರದ ಆತುರದ ಕ್ರೋಧ. ಪರಶುರಾಮಪ್ಪ ಸಾತ್ವಿಕನಾದರೂ ಅವನ ಬಾಯಲ್ಲೂ ದೃಢತೆಯಿಂದ ಕೂಡಿದ ವೀರ ಪುರುಷನ ಮಾತುಗಳು ಬಂದು ಓದುಗರ ಮೆಚ್ಚುಗೆಯನ್ನು ಗೆಲ್ಲುವಂತಹವು. ಸೆರೆ ಮನೆಗೆ ಬಂದ ಮುದ್ದಣ್ಣ ಸ್ನೇಹದ ಮಾತು ತೆಗೆದಾಗ “ಪರಶುರಾಮಪ್ಪನ ಮಾತುಗಳನ್ನು ಕೇಳಿ.” ಒಂದೇ ದಾರಿ—ಇಲ್ಲ ನಿನ್ನ ತಲೆ ಉರುಳುವುದು, ಇಲ್ಲದೇ ನನ್ನ ತಲೆ ಉರುಳುವುದು. ಅದು ಒಂದೇ ದಾರಿ ಮುದ್ದಣ್ಣ. ನಾಯಕರ ಕೊಲೆಯ ಪ್ರತೀಕಾರ ತೀರಿದ ಬಳಿಕ ಮತ್ತೆ ಈ ಸಿಂಹಾಸನಕ್ಕೆ ಯಾರು ಎನ್ನುವ ಮಾತು. ನಾಯಕರ ಕೊಲೆಯ ರಕ್ತ ಪಾತದಿಂದ ಕಳಂಕಿತವಾದ ಪಿಶಾಚಿ ಹಸ್ತವನ್ನು ಸ್ನೇಹ ಹಸ್ತವಾಗಿ ಸ್ವೀಕರಿಸುವ ಯೋಚನೆ, ಈ ಜನ್ಮದಲ್ಲೇ, ಅಲ್ಲ, ಇನ್ನು ಮೂರು ಮೂರು ಜನುಮದಲ್ಲೂ ಸಾಧ್ಯವಿಲ್ಲ” ಇದು ಸಾತ್ವಿಕ ವ್ಯಕ್ತಿಯು ಕೆರಳಿದ ಸತ್ವಶಾಲಿಯಾದ ವೀರೋಚಿತವಾದ ಮಾತು. ಹಾಗೆಯೇ ಗೌಡರೆಲ್ಲರನ್ನೂ ಹುರಿದುಂಬಿಸಿ ಮುಂದಾಗಲು ನಿಂತ ಬೈರಪ್ಪ ಮತ್ತು ಗೋಪಾಲಪುರದ ಗೌಡನ ನೋಟದಿಂದಲೂ ವೀರ ರಸಮಯವಾದ ಮಾತುಗಳನ್ನಾಡಿಸಿ ಕಾದಂಬರಿಕಾರರು ವೀರ

ರಸವನ್ನು ಕೆರಳಿಸುವುದರಲ್ಲಿ ಸಫಲರಾಗಿದ್ದಾರೆ. ಈ ಕಾದಂಬರಿಯ ಮುಕ್ತಾಯ ಘಟ್ಟದಲ್ಲಿ ಮುದ್ದಣ್ಣನನ್ನು ಶಿಕ್ಷಿಸಿ ಅಂತ್ಯ ಗೊಳಿಸುವ ಸನ್ನಿವೇಶ, ಗಿರಿಜೆಯ ಪ್ರತೀಕಾರದ ಭೀಕರ ರಕ್ತದಾಹವು ವೀರನಾದ ಭರಮಣ್ಣನನ್ನು ಮಾತನಾಡಲು ಶಕ್ತಿ ಇಲ್ಲದಂತೆ ದಿಗ್ಭ್ರಾಂತನನ್ನಾಗಿ ಮಾಡುತ್ತದೆ. ಇಲ್ಲಿ ಭೋರ್ಗರೆಯುವುದು ಅಸಹನೀಯ ರೌದ್ರ, ಭಯಾನಕಗಳು. ಎಷ್ಟೋ ಕಾಲದವರೆಗೆ ಮನಸ್ಸಿನಲ್ಲಿ ಉಳಿಯುವ ಭೀಕರ ಚಿತ್ರಗಳು.

'ಸಿಡಿಲಮೊಗ್ಗು' ಎಂಬ ಕಾದಂಬರಿಯು ಹೊಯ್ಸಳ ದೊರೆಗಳಲ್ಲಿ ಪ್ರಸಿದ್ಧನಾದ ವಿಷ್ಣುವರ್ಧನನು ರಾಜಕುಮಾರನಾಗಿದ್ದ ಅವಸ್ಥೆಯ ಚಿತ್ರವನ್ನು ಕೊಡುತ್ತದೆ. ವಿಷ್ಣುವರ್ಧನನು 1106 ರಿಂದ 1142ರವರೆಗೆ ಆಳಿ ಹೊಯ್ಸಳ ಸಾಮ್ರಾಜ್ಯದ ಸ್ಥಾಪಕನಾದನು. ಹೊಯ್ಸಳರು ಕಲ್ಯಾಣಿಯ ಚಾಳುಕ್ಯ ಚಕ್ರವರ್ತಿಗಳ ಮಹಾ ಮಂಡಲೇಶ್ವರರಾಗಿದ್ದರು. ಚಕ್ರವರ್ತಿ ವಿಕ್ರಮಾದಿತ್ಯನ ಆಜ್ಞೆಯಂತೆ ಬಿಟ್ಟಿಗ, ಅವನ ತಂದೆ ಎರೆಯಂಗ, ತಾತ ವಿನಯಾದಿತ್ಯ, ತಾಯಿ ಏಚಲಾದೇವಿ, ಅಣ್ಣ ಉದಯಾದಿತ್ಯ ಎಲ್ಲರೂ ಬಳ್ಳಿಗಾವೆಗೆ ಪ್ರಯಾಣ ಬೆಳೆಸುತ್ತಾರೆ. ಬಳ್ಳಿಗಾವೆಯಲ್ಲಿ ಚಕ್ರವರ್ತಿಯ ಓಲಗದಲ್ಲಿ ವಿಕ್ರಮಾದಿತ್ಯನ ಬಿಟ್ಟಿಗೆಯಂಥ ಪ್ರಧಾನಿ ಕಾಳಿದಾಸಯ್ಯನಿಂದ ಕುಮಾರ ಬಿಟ್ಟಿಗನ ಅಭಿಮಾನದ ಭಂಗದ ಮಾತು ನಂತರ ವಿನಯಾದಿತ್ಯನ ಮಂಡಲಾಧೀಶ್ವರ ಪದವಿಯನ್ನು ತೆಗೆದುಹಾಕಿದ್ದು. ಎರೆಯಂಗನು ಕತ್ತಿಯನ್ನು ಚಕ್ರವರ್ತಿಗೆ ಒಪ್ಪಿಸಿ ಬನವಾಸಿಯನ್ನು ಬಿಟ್ಟು ಹೋದುದು—ಇಷ್ಟೇ ಮುಖ್ಯ ವಿಷಯಗಳ ಸುತ್ತ ಹೃದಯಂಗಮವಾದ ಘಟನೆಗಳು ಮತ್ತು ಸನ್ನಿವೇಶಗಳನ್ನು ಸೃಷ್ಟಿಸಿ ಓದುಗರ ಮನಸ್ಸಿನಲ್ಲಿ ನಿಲ್ಲುವಂತೆ ವಿಷ್ಣುವರ್ಧನನ ವ್ಯಕ್ತಿತ್ವವನ್ನು ಚಿತ್ರಿಸಲಾಗಿದೆ. ಬೆಳೆಯುವ ಪೈರು ಮೊಳಕೆಯಲ್ಲೇ ಎಂಬಂತೆ ಮುಂದೆ ಬೆಳೆಯುವ ವೀರ ಪುರುಷನ ಲಕ್ಷಣಗಳು ಪ್ರತಿ ಮಾತಿನಲ್ಲೂ, ಧೋರಣೆಯಲ್ಲೂ, ನಡವಳಿಕೆಯಲ್ಲೂ ಕಂಡು ಬರುತ್ತವೆ. ಬಳ್ಳಿಗಾವೆಗೆ ಪ್ರಯಾಣ ಮಾಡುವಾಗ ದಾರಿಯಲ್ಲಿ ಅಣ್ಣ ಉದಯಾದಿತ್ಯನಿಗೆ ಜ್ವರ ಬರುತ್ತದೆ. ಸೊಸೆ ಊರಿಗೆ ಹಿಂತಿರುಗೋಣವೆಂದು ಮಾತು ಬಂದು ಚಕ್ರವರ್ತಿಯ ಬಗ್ಗೆ ಒಂದು ಬಗೆಯ ಅಸಮಾಧಾನವು ಅಂಕುರವಾಗುತ್ತದೆ. "ಇನ್ನೊಬ್ಬರ ಕಷ್ಟ ಸುಖ ಅರ್ಥವಾಗದಷ್ಟು ಮೈ ಮನಸ್ಸು ಮರಗಟ್ಟಿ ಹೋಗಿರುತ್ತದೆಯೋ ಚಕ್ರವರ್ತಿ ಎನಿಸಿಕೊಂಡವರಿಗೆ" ಎನ್ನುತ್ತಾನೆ. ಮಹಾಮಂಡಲೇಶ್ವರನು ಚಕ್ರವರ್ತಿಯ ದಾಸ ಎಂಬ ಭಾವನೆಯನ್ನಂತೂ ಅವನಿಂದ ಸಹಿಸಲು ಸಾಧ್ಯವಾಗುವುದಿಲ್ಲ. ಪ್ರಯಾಣದ ಆಯಾಸ ಕಳೆಯಲು ವಿಶ್ರಾಂತಿ ತೆಗೆದುಕೊಳ್ಳಲು ಅವಕಾಶವಿಲ್ಲದಂತೆ ತಾತ, ತಂದೆಗೆ ಚಕ್ರವರ್ತಿಯ ಬಿಡಾರಕ್ಕೆ ಬರಬೇಕೆಂಬ ಸುದ್ದಿ ವಿಷ್ಣುವರ್ಧನನ ಅಸಮಾಧಾನ ಹೆಚ್ಚಲು ಮತ್ತಷ್ಟು ಕಾರಣ. "ಊಟ, ನಿದ್ರೆ, ವಿಶ್ರಾಂತಿಗಳಿಗೂ ಕೊಡದ ವಿಶ್ವಾಸ ಇದೆಂಥದು, ಅಜ್ಜ, ನಿಂತರು, ಅಪ್ಪರು ಎನ್ನುವ ವಿಶ್ವಾಸವಿಲ್ಲದೆ ಪ್ರಯಾಣದಿಂದ ದಣಿದು ಬಂದ ನಮ್ಮನ್ನು ಚಕ್ರವರ್ತಿಗಳೇ ಇಲ್ಲಿಸುವರೆಗೂ ಹಾವ

ಬೆಳೆಯಿಸಿ ಬಂದು ಕ್ಷೇಮವೇ ಬಂದು ವಿಚಾರಿಸಿಕೊಂಡು ಹೋಗಿದ್ದರೆ ಮಾತ ಬಾರದ ಕೆಲಸ ಮಾಡಿದ ಹಾಗಾಗುತ್ತಿತ್ತೆ?" ಎಂದು ಅಜ್ಜನೊಡನೆ ತನ್ನ ಮನಸ್ಸಿನ ಅಸಮಾಧಾನವನ್ನು ವ್ಯಕ್ತಗೊಳಿಸುತ್ತಾನೆ. ಇದು ಅವನ ಸಹಜವಾದ ಮಾನವೀಯತೆಯನ್ನು ಪ್ರಕಾಶಗೊಳಿಸುತ್ತದೆ. ಹೀಗೆ ಬೆಳೆಯುತ್ತಿದ್ದ ಕೆಚ್ಚು ಚಕ್ರವರ್ತಿಯ ಓಲಗಶಾಲೆಯಲ್ಲಿ ಹೊರಸಿಡಿಯುತ್ತದೆ. ಓಲಗ ಶಾಲೆಯ ಗುಡಾರಕ್ಕೆ ಬಂದ ತಾತ ಹೋಗಿ ಚಕ್ರವರ್ತಿಯ ಬಳಿಸಾರಿ, ಸೊಂಟದವರೆಗೂ ಬಗ್ಗಿಸಿ ನಮಸ್ಕರಿಸುತ್ತಾರೆ. ಇದನ್ನು ನೋಡಿ ಏಕೋ ಅವನಿಗೆ ಕರುಳಿನಲ್ಲಿ ಕೊಳ್ಳಿಯಾಡಿಸಿದಂತಾಯಿತು. ಅವನಿಗೆ ಯಾವುದೋ ವಿದ್ಯುದಾಳಿಯನ್ನು ಸೋಕಿದಂತಾಯಿತು. ಅವನ ಗಂಡುತನ, ವೀರತ್ವ ಕೆರಳಿತು. ತನ್ನ ಹಿರಿಯರಂತೆ ತಲೆಬಾಗದೆ ಸೆಟೆದು ನಿಂತಿದ್ದನು. ಚಕ್ರವರ್ತಿ ಇವನು ಯಾರೆಂದು ಕೇಳಿದ ನಂತರ ತಂದೆಯ ಸೂಚನೆಯಂತೆ ತಲೆಬಾಗಿದ ಅಲ್ಲದೆ ಮಣಿದ, ಇದನ್ನು ಗಮನಿಸಿದ ಕಿಡಿಗೇಡಿ ಪ್ರಧಾನಿ ಕಾಳಿದಾಸಯ್ಯನು "ನಿಮ್ಮ ಕುಮಾರರಿಗೆ ಉಳಿದ ಶಾಸ್ತ್ರಗಳನ್ನು ಕಲಿಸಿದಂತೆಯೇ ಗುರುಗಳು ವಿನಯವನ್ನು ಅಷ್ಟು ಚೆನ್ನಾಗಿ ಉಪದೇಶ ಮಾಡಬೇಕೆಂದು ಹೇಳಿ" ಎಂದು ಎಲ್ಲರ ಮುಂದೆ ಹೇಳಿದ. ಇದು ಬಿಟ್ಟಿಗನ ಅಭಿಮಾನಕ್ಕೆ ಚಾವಟಿ ಏಟಾಯಿತು. ಅಭಿಮಾನ ಭಂಗವನ್ನು ಸಹಿಸಲು ಆ ಯುವಕ ವೀರನಿಗೆ ಸಾಧ್ಯವಾಗಲಿಲ್ಲ. ವ್ಯಂಗ್ಯದ ಧ್ವನಿಯಲ್ಲಿ "ಯಾರಿಗೆ ಏನು ಕಲಿಸಬೇಕೆಂದು ನಮ್ಮ ಗುರುಗಳಿಗೆ ತಿಳಿದಿದೆ. "ವಿನಯ"ವನ್ನು ಕಲಿಯಲು ನಾವು ಬೌದ್ಧ ಸಂನ್ಯಾಸಿಗಳಲ್ಲ. ಕ್ಷತ್ರಿಯರು ಆದುದರಿಂದ ನಮಗದನ್ನು ಕಲಿಸುವ ಅಗತ್ಯವಿಲ್ಲವೆಂದೇ ಗುರುಗಳು ನಮಗೆ ಅದನ್ನು ಹೇಳಿಕೊಟ್ಟಿಲ್ಲ" ಎಂದು ಅಳುಕದೆ ಪ್ರತಿ ಮಾತಿನ ಚಾವಟಿಯಿಂದ ಗುರಿತಪ್ಪದೆ ಏಟು ಬೀರಿದ. ಅವನ ವೀರತ್ವದ ಸಿಡಿಲು ಸಭೆಗೆ ಬಡಿಯಿತು, ತನ್ನ ಅಜ್ಜ ಅಪ್ಪಾಜಿ ಇಬ್ಬರಿಗೂ ನೋಯಿಸಿದಂತಾಯಿತಲ್ಲಾ ಎಂಬ ಯೋಚನೆ ಬಂದರೂ ಚಕ್ರವರ್ತಿಯ ವಿಶ್ವಾಸ ಉಳಿದರೆ ಉಳಿಯಲಿ, ಹೋದರೆ ಹೋಗಲಿ, ಹೊಯ್ಸಳರು ಯಾರಿಂದಲೂ ಅಪಮಾನ ಸಹಿಸುವವರಲ್ಲ ಎಂಬ ಕೀರ್ತಿ ಉಳಿಯಿತು, ಎಂಬ ವೀರ ಪುರುಷತ್ವದ ಸ್ವಾಭಿಮಾನ ತಲೆ ಎತ್ತಿ ನಿಂತಿತು. ಮುಂದೇನಾಗುವುದೋ ಎಂಬ ಹೆದರಿಕೆ ಎಲ್ಲರನ್ನೂ ಆವರಿಸಿದರೆ ಅರಸಾಗಿ ಬದುಕಿದರೆ ಚಕ್ರವರ್ತಿಯಾಗಿ ಯಾರೊಬ್ಬರಿಗೂ ಮಣಿಯದೆ ಬಾಳಬೇಕು ಎನ್ನುವ ಹೆಬ್ಬಯಕೆ ಚಿಗುರೊಡೆದು ಚಕ್ರವರ್ತಿಯ ಬಳಿ ಕ್ಷಮೆ ಯಾಚಿಸುವುದು ಸಾಧ್ಯವಿಲ್ಲ ಎಂದು ನಿರ್ಧರಿಸಿದ ಈ ಸನ್ನಿವೇಶವು ಧೀರೋದಾತ್ತ ಎದೆಗಾರಿಕೆಯ ಕುಮಾರ ಬಿಟ್ಟಿಗನ ವ್ಯಕ್ತಿಗೌರವ ಚಿತ್ರವನ್ನು ಓದುಗರಲ್ಲಿ ನಿಲಿಸಿ ಅವನ ಬಗ್ಗೆ ಹೆಮ್ಮೆ ಉಂಟು ಮಾಡುತ್ತದೆ. ಪ್ರಧಾನಿಗಾದರೋ ಹೊಯ್ಸಳರ ಸ್ವಪೌರುಷದ ಬೆಂಬಲದಿಂದ ಚಕ್ರವರ್ತಿಯ ವಿಶ್ವಾಸ ಹೆಚ್ಚುತ್ತಿರುವ ಬಗ್ಗೆ ಸಂಶಯದ ಹೊಗೆ ಎದ್ದಿತು. ಅವರ ಗಂಗವಾಡಿಯ ಅಧಿಕಾರವನ್ನು ತಪ್ಪಿಸಲು ಚಕ್ರವರ್ತಿಗೆ ಸಲಹೆ ನೀಡುವ ಪಿತೂರಿಯನ್ನು ಮಾಡಿದನು.

ಮತ್ತೊಂದು ಸನ್ನಿವೇಶದಲ್ಲಿ ಬಿಟ್ಟಿಗನ ವೀರತ್ವವು ಪ್ರಕಾಶಿಸುವುದನ್ನು ಗಮನಿಸೋಣ. ಇವನ ತಾಯಿಗೆ ವಿಷಯ ತಿಳಿದು ಕಣ್ಣೀರಿಡುತ್ತಾಳೆ. ಅವನ್ನು ನೋಡಿ ಹೇಳುತ್ತಾನೆ "ನಿಮ್ಮ ಕಣ್ಣೀರಿನ ಹನಿಹನಿಗೂ ನಮ್ಮ ವಿರೋಧಿಗಳ ರಕ್ತದ ಹೊಳೆಯನ್ನೇ ಹರಿಸಿ, ನಿಮ್ಮ ಮುಖದ ಕಂಬನಿಯ ಕರೆಯನ್ನು ತೊಳೆಯಬಲ್ಲ ಶಕ್ತಿ ನಮ್ಮ ತೋಳುಗಳಲ್ಲಿದೆ. ಆದರೆ ಈ ದಿನ ನಿಮ್ಮ ಪಾದ ಮುಟ್ಟಿ ಶಪಥ ಮಾಡುತ್ತೇನೆ: ತಾಯಿ ಇಂದು ನಿಮಗೆ ಅಪಮಾನ ಮಾಡಿದ ಸಾಮ್ರಾಟರ ಸೊಕ್ಕನ್ನು ಮುರಿಯದಿದ್ದರೆ ನಾನು ವಿಷ್ಣುವರ್ಧನನಲ್ಲ. ಇಂದು ತಮ್ಮ ಪದವಿಯ ದುರಹಂಕಾರದಿಂದ ಬೀಗುತ್ತಿರುವವರು ನಮ್ಮ ಹೆಸರು ಕೇಳಿ ನಡುಗಿ ತಲೆಮರೆಸಿ ಕೊಳ್ಳುವಂತೆ ಮಾಡದಿದ್ದರೆ ನಾನು ವೀರ ಹೊಯ್ಸಳ ಸಂತಾನವಲ್ಲ. ಇಗೋ, ಈ ಕಠಾರಿಕಾಳಿಯ ಸಾಕ್ಷಿಯಾಗಿ ಹೇಳುತ್ತೇನೆ– ಇಂದು ನಿಮಗಾದ ಮಂಡಲಾಧಿಪತ್ಯದ ನಷ್ಟಕ್ಕಾಗಿ, ನೂರು ಮಂಡಲಾಧೀಶ್ವರರನ್ನು ಹೆಡೆಮುರಿ ಕಟ್ಟಿ ಬಿಗಿದು ತಂದು ನಿಮ್ಮ ಚರಣದಲ್ಲಿ ಕೆಡಹಿ ಇಂದಾದ ಅಪಮಾನವನ್ನು ತೀರಿಸುತ್ತೇನೆ. ನೀವು ಹಡೆದಿರುವುದು ಹೇಡಿ ಹುಳುವನ್ನಲ್ಲ, ಗಂಡು ಮಗುವನ್ನು". ಇವು ವೀರೋಚಿತವಾದ, ಕೆರಳಿದ ಕೆಚ್ಚಿನ, ಗಾಂಭೀರ್ಯವನ್ನು ಮೀರದ ಸತ್ವವೀರನ ಮಾತುಗಳು. ಸತ್ವವುಳ್ಳ ಕ್ಷತ್ರಿಯ ವೀರನ ಧೀರತನ, ಪೌರುಷದ ಕ್ರೋಧಾನಲದ ಕಿಡಿಗಳು.

ಈ ಮಾತುಗಳನ್ನಾಡುತ್ತಿದ್ದಾಗ ಹೆಗ್ಗಡೆಯ ಮಗಳು ಶಾಂತಲೆ ರಾಣಿ ಏಚಲಾದೇವಿಯ ಕೊಠಡಿಯ ಬಳಿಗೆ ಬರುತ್ತಾಳೆ. ಒಳಗಿನಿಂದ ಕೆರಳಿದ ಪುರುಷ ಧ್ವನಿ ಕೇಳಿ ಬರುತ್ತದೆ. ಹೇಳಿ ಕಳುಹಿಸಲು ಯಾರೂ ಇಲ್ಲದೆ ಏನು ಮಾಡಲು ತೋರದೆ ಅಲ್ಲೇ ನಿಲ್ಲುತ್ತಾಳೆ, ಹೊರಗೆ ಬಂದ ವಿಷ್ಣುವರ್ಧನ ಇವಳನ್ನು ನೋಡಿ ಯಾರೋ ಗೂಢಚಾರಿಣಿ ಇರಬೇಕೆಂದು ಅವಳ ಕೈಹಿಡಿದು ಕತ್ತಿಯನ್ನು ಹಿಡಿದು 'ಯಾರು ಹೇಳು, ಹೊಂಚುಹಾಕಿ ಮಾತು ಕೇಳಿರುವುದಕ್ಕಾಗಿ ಶಿಕ್ಷಿಸುತ್ತೇನೆ' ಎಂದು ಗರ್ಜಿಸುತ್ತಾನೆ. ಏನೆಂದು ಹೊರ ಬಂದು ನೋಡಿದ ಏಚಲಾದೇವಿಯು ಮಗನಿಗೆ ಶಾಂತಲೆ ಯಾರೆಂದು ತಿಳಿಸಿ ಬುದ್ಧಿ ಹೇಳುತ್ತಾಳೆ, ಕೂಡಲೇ ಆ ವೀರಕುವರ ನಾಚಿ ತಾಯಿಯಲ್ಲಿ ಅಪರಾಧಕ್ಷಮಾಪಣೆ ಮಾಡಿ ಹೊರಟು ಹೋಗುತ್ತಾನೆ. ಶಾಂತಲೆಯಲ್ಲಿ ವೀರ ಯುವಕನಿಗೆ ಸಹಜವಾದ ಪ್ರೇಮಾಂಕುರವಾಗುತ್ತದೆ. ಇದು ವೀರಪುರುಷನ ವ್ಯಕ್ತಿತ್ವದ ಹೃದಯವಂತಿಕೆಯ ಮತ್ತೊಂದು ಮುಖ.

ತಂದೆ ಎರೆಯಂಗನೊಡನೆ ಸಂಭಾಷಣೆ ನಡೆಯುತ್ತದೆ. ಕಳೆದುಕೊಂಡ ಅಧಿಕಾರ ಪದವಿಯನ್ನು ಮತ್ತೆ ಗಳಿಸುವ ಯೋಜನೆ ಮಾಡುತ್ತಾರೆ. ತಪ್ಪಿಗೆ ಮಗನು ಕಾರಣನಲ್ಲ ಎಂದು ಎರೆಯಂಗ ಹೇಳಿದಾಗ "ಗಳಿಸುವ ದಾರಿ ಇದ್ದೇ ತೀರಬೇಕು. ಈ ಕಲಂಕದ ಕೆಸರಿನಲ್ಲಿಯೇ ಕೊಳೆತು ಹೋಗುವ ಕೊಚ್ಚೆಯ ಹುಳುವಲ್ಲ ಹೊಯ್ಸಳವಂಶ. ಹಾಗೇ ಈ ಅಪಮಾನಕ್ಕೆ ಯಾರು ಕಾರಣವೆಂದು ಹೇಳಿ, ಅವರ

ತಲೆಯನ್ನು ತಂದು ನಿಮ್ಮ ಮಗನಾದದ್ದು ಸಾರ್ಥಕವಾಯಿತು ಎನಿಸುತ್ತೇನೆ" ಎನ್ನುತ್ತಾನೆ ಬಿಟ್ಟಿಗ.

ಎರೆಯಂಗನು ಬೇಗನೆ ಬನವಾಸಿಯನ್ನು ಬಿಟ್ಟುಹೋಗಲು ನಿರ್ಧರಿಸಿ ಚಕ್ರವರ್ತಿಗೆ ತಿಳಿಸಲು ಹೋದ. ಚಕ್ರವರ್ತಿ ಕುಳಿತುಕೊಳ್ಳಿ ಎಂದರೂ ಕೂಡಲಿಲ್ಲ. "ಹೊಯ್ಸಳರು ತಮ್ಮ ಮಿತ್ರರಲ್ಲದಿರಬಹುದು. ಆದರೆ ಎಂದೂ ಶತ್ರುಗಳಾಗಿರಲಿಲ್ಲ ಮುಂದೂ ಶತ್ರುಗಳಾಗುವುದಿಲ್ಲ. ಆ ಮಾತಿಗೆ ಗುರುತಾಗಿ ಇದನ್ನು ಒಪ್ಪಿಸಿಕೊಳ್ಳ ಬೇಕು" ಎಂದು ಸೊಂಟದಲ್ಲಿ ಕಟ್ಟಿಕೊಂಡಿದ್ದ ಕತ್ತಿಯನ್ನು ಬಿಚ್ಚಿ ವಿಕ್ರಮಾದಿತ್ಯನ ಮುಂದಿಟ್ಟು ಚಕ್ರವರ್ತಿ ಕೂಗಿದರೂ ತಿರುಗಿ ನೋಡದೆ ಹೊರಟು ಹೋದ. ಇಲ್ಲಿ ತಂದೆ ಮತ್ತು ಮಗನ ವ್ಯಕ್ತಿತ್ವದ ಸ್ಪಷ್ಟ ವ್ಯತ್ಯಾಸ ಕಂಡು ಬರುತ್ತದೆ. ಇಬ್ಬರೂ ವೀರ ಕ್ಷತ್ರಿಯರು. ತಂದೆ ಸಿಡಿಲಾದರೆ ಮಗ ಅದರ ಮೊಗ್ಗು. ಎರೆಯಂಗನು ವಿಕ್ರಮಾದಿತ್ಯನಲ್ಲಿ ಅಚಲವಾದ ರಾಜಭಕ್ತಿಯುಳ್ಳವನು. ಅವನಿಗೆ ಅಪಮಾನವಾದರೂ ವಿದ್ರೋಹ ಅವನ ಬಳಿ ಸುಳಿಯಲಿಲ್ಲ. ಅವನು ನಿಷ್ಠಾವಂತನಾದ ವೀರ ಕ್ಷತ್ರಿಯ ನಂತೆ ವರ್ತಿಸಿದ.

ಕೊನೆಯಲ್ಲಿ ಎರೆಯಂಗ, ಬಿಟ್ಟಿಗ ಮುಂತಾದ ಹೊಯ್ಸಳ ಮನೆತನದವರೆಲ್ಲರೂ ಬಳ್ಳಿಗಾವೆಯನ್ನು ಬಿಟ್ಟು ತೆರಳುವ ಸನ್ನಿವೇಶ, ದಾರಿ ಕಳುಹಿಸಲು ಬಂದ ಮಾರಸಿಂಗ ಹೆಗ್ಗಡೆಗೆ ಹೇಳುತ್ತಾನೆ. ಬಿಟ್ಟಿಗ "ಬರುತ್ತೇನೆ, ಹೆಗ್ಗಡೆಗಳೇ ಮತ್ತೆ ಬಂದೇ ಬರುತ್ತೇವೆ. ಅತ್ತುಹಿಂತಿರುಗುವುದಕ್ಕಲ್ಲ ಗೆದ್ದು ಆಳುವುದಕ್ಕೆ" ಇದು ಮೆಚ್ಚಿಕೊಳ್ಳುವ ಹೆಮ್ಮೆ ಪಡುವ ಗಂಡುಗಲಿಯ ಕೆಚ್ಚಿನ ಪೌರುಷದ ಮಾತು. ಇದು ಮುಂದೆ ಹೇಗೆ ನಿಜವಾಯಿತೆಂಬುದು ಐತಿಹಾಸಿಕ ಸತ್ಯ. ಕಾದಂಬರಿಕಾರರು ವ್ಯಕ್ತಿಗಳಿಂದ ಅವರ ವ್ಯಕ್ತಿತ್ವಕ್ಕೆ ತಕ್ಕ ತಮ್ಮ ಮೊನಚಾದ ಶೈಲಿಯ ವೀರ ರಸಜನಕವಾದ ಮಾತನ್ನಾಡಿಸಿ ಓದುಗರ ಭಾವುಕತೆಯನ್ನು ಕೆರಳಿಸುವುದರಲ್ಲಿ ಸಫಲರಾಗಿದ್ದಾರೆ. ಓದುಗರ ಮನಸ್ಸನ್ನು ಪರಿಪಾಕಗೊಳಿಸುವುದು ಸಾಹಿತ್ಯದ ಮುಖ್ಯಕಾರ್ಯ. ಲೇಖಕನು ಸೃಷ್ಟಿ ಸಿರುವ ಸನ್ನಿವೇಶಗಳಲ್ಲಿ ತಾನೇ ಇರುವಂತೆ ಅನುಭವಮಾಡಿ ಮುಖ್ಯ ಪಾತ್ರಗಳೊಡನೆ ತಾನು ಐಕ್ಯಹೊಂದಿ ತಾದಾತ್ಮ್ಯವನ್ನು ಓದುಗನು ಪಡೆದು ಮಾತಿನ ಮಾಯೆಯಾದ ರಸದ ಆಕ್ರಮಣಕ್ಕೆ ಸಿಕ್ಕಿ ಅನುಭವ ಪಡೆಯುತ್ತಾನೆ. ಇಂತಹ ಅನುಭವ ಉಂಟು ಮಾಡುವುದರಲ್ಲಿ ತ.ರಾ.ಸು.ರವರ ಲೇಖನಿಯ ವಾಕ್ಪ್ರವಾಹವು ಶಕ್ತಿಯುತವಾಗಿದೆ.

ಐತಿಹಾಸಿಕ ಕಾದಂಬರಿ ತ್ರಯಗಳಲ್ಲಿಯ ಸ್ತ್ರೀಪಾತ್ರ

ಪ್ರೊ|| ಕಾವೇರಿ ಅಂಬಿ

ಕಾದಂಬರಿಯಲ್ಲಿ ಘಟನೆಗಳಷ್ಟು ಪ್ರಾಮುಖ್ಯತೆಯುಳ್ಳವುಗಳೇ ಪಾತ್ರಗಳೂ ಅಷ್ಟೇ ಏಕೆ ಒಂದು ತೂಕ ಹೆಚ್ಚೆನ್ನುವಷ್ಟು ಪ್ರಾಮುಖ್ಯತೆ ಇದೆ. ಪಾತ್ರವಿಲ್ಲದೆ ಘಟನೆಯಿಲ್ಲ ಘಟನೆಯ ಮೂಲಭೂತವಾದ ವಸ್ತು ಪಾತ್ರದೃಷ್ಟಿಯಿಂದಲೂ ಅಭ್ಯಸಿಸಿದಾಗ ಅರಿವಾಗುವುದು ಪಾತ್ರವೇ ಕಾದಂಬರಿಯ ಅಡಿಪಾಯ ಅಂತೆಯೇ ಕಥಾನಕದಲ್ಲಿ ಪಾತ್ರಗಳು, ಘಟನೆಗಳು ಎಂಬ ಮುಖ್ಯವಾದ ಎರಡು ಅಂಗಗಳು ಎಂದು ಹೇಳಬಹುದು.

ಐತಿಹಾಸಿಕ ಕಾದಂಬರಿಗಳಲ್ಲಿ ಅಂಥ ವ್ಯಕ್ತಿಗಳು ಆಗಿ ಹೋಗಿದ್ದಾರೆ. ಅವರು ಕಟ್ಟಿದ ಸಾಮ್ರಾಜ್ಯದ ಏಳುಬೀಳುಗಳು ಘಟನೆಗಳಾಗಿವೆ. ಇಂಥ ಕಾದಂಬರಿಗಳಲ್ಲಿ ಆಗಿಹೋದ ಘಟನೆಗಳ ಜೊತೆ ಕೆಲವು ಕಡೆಗೆ ಕಾಲ್ಪನಿಕ ಪಾತ್ರಗಳ ನಿರೂಪಣೆ ನಿಯೋಜನೆಗಳಷ್ಟೇ ಪಾತ್ರಗಳ ಆಯ್ಕೆ, ಕೆಲವು ಕಡೆಗೆ ಕಾಲ್ಪನಿಕ ಪಾತ್ರಗಳ ಸೃಷ್ಟಿ ಮುಖ್ಯವಾಗಿದೆ, ಐತಿಹಾಸಿಕ ಕಾದಂಬರಿಗಳಲ್ಲಿಯೂ ವಾಸ್ತವಿಕತೆಯ ನಿರೂಪಣೆ ಅತಿ ಕಠಿಣವಾದ ಸಾಧನೆ. ಈ ಸಾಧನೆ ಎಲ್ಲರಿಗೂ ಸಾಧ್ಯವಿಲ್ಲ. ಇದಕ್ಕೆ ಅಪಾರ ಅನುಭವ ಬೇಕು (ಉಳಿದವರ) ಅನ್ಯರ ಸಮಸ್ಯೆಗಳನ್ನು ತನ್ನದಾಗಿಸಿಕೊಳ್ಳುವ ಸಹಾನುಭೂತಿ ಬೇಕು. ಜೊತೆಗೆ ಈ ಸಮಸ್ಯೆಗಳನ್ನು ಅರಿತುಕೊಳ್ಳುವ ತೀಕ್ಷ್ಣನೋಟ ಬೇಕು. ಒಟ್ಟಿನ ಮೇಲೆ ಕ್ಷ (X ray) ಕಿರಣಗಳ ದೃಷ್ಟಿ ಬರಬೇಕು.

ಕಾದಂಬರಿಯಲ್ಲಿ ಬರುವ ಘಟನೆಗಳು ವಾಸ್ತವಿಕತೆಯಿಂದ ತುಂಬಿಕೊಂಡಿರಬೇಕು. ಘಟನೆಗಳಿಗೆ ಮೂಲ ಚೇತನಗಳೆಂದರೆ ಪಾತ್ರಗಳು ಅಂತೆಯೇ ಘಟನೆಗಳಿಗೆ ವಾಸ್ತವಿಕತೆ ಬರಲು ಪಾತ್ರಗಳಲ್ಲಿಯೂ ವಾಸ್ತವಿಕತೆ ಉಂಟಾಗುತ್ತದೆ. ಪ್ರತಿಯೊಂದು ಪಾತ್ರವೂ ರಕ್ತ ಮಾಂಸ ತುಂಬಿಕೊಂಡು ಉಸಿರಾಡುವ ವ್ಯಕ್ತಿಯಾಗಿರಬೇಕು ಜೀವಂತವಾಗಿ ಕಣ್ಮುಂದೆ ನಿಲ್ಲಬೇಕು.

ಕಾದಂಬರಿಕಾರ ಬರಿಯ (ಕೇವಲ) ಶಬ್ದಗಳಿಂದ ವ್ಯಕ್ತಿಗಳನ್ನು ನಮ್ಮ ಮುಂದೆ ನಿಲ್ಲಿಸಿದರೂ ಈ ವ್ಯಕ್ತಿಗಳು ಬರಿಯ ಮಾತನಾಡುವ ಓಡಾಡುವ ಯಂತ್ರಗಳಂತಾಗಲೀ. ಕಾದಂಬರಿಕಾರನ ಕೈಚಳಕದಿಂದ ಓಡಾಡುವ ಗೊಂಬೆಗಳಂತಾಗಲಿ, ಆಗಿರಕೂಡದು, ಪ್ರತಿಯೊಂದು ಪಾತ್ರಕ್ಕೂ ತನ್ನದೇ ಆದ ವ್ಯಕ್ತಿತ್ವ. ವೈಶಿಷ್ಟ್ಯ ಇರಬೇಕು. ಜೀವಂತ ಪಾತ್ರಗಳು ಎಂದೂ ಕಾದಂಬರಿಕಾರ ಹೇಳಿದ ಹಾಗೆ ಕುಣಿಯುವುದಿಲ್ಲ.

ತ.ರಾ.ಸು. ಅವರು ಇಂದಿನ ನಮ್ಮ ಕಾದಂಬರಿಕಾರರಲ್ಲಿ ಅಗ್ರಗಣ್ಯರು. ಇವರು ಸೃಷ್ಟಿಸಿದ ಐತಿಹಾಸಿಕ ಕಾದಂಬರಿಗಳಲ್ಲಿಯ ಅನೇಕ ಪಾತ್ರಗಳು ತಮ್ಮ ವ್ಯಕ್ತಿ ವೈಶಿಷ್ಟ್ಯದಿಂದ ಓದುಗರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತವೆ. ಇವರು ಪಾತ್ರ

ನಿರ್ವಹಣೆಯಲ್ಲಿ ಸಿದ್ಧಹಸ್ತರೆಂದೇ ಹೇಳಬೇಕು. ಇವರು ಕಡೆಯುವ ಪಾತ್ರಗಳು ಯಾವಾಗಲೂ ಜೀವಂತವಾಗಿರುತ್ತದೆ. ಐತಿಹಾಸಿಕ ಕಾದಂಬರಿಗಳಲ್ಲಿ ಕೆಲವು ಸಲ ಗತಕಾಲಕ್ಕೆ ಹೋಗಿ ಅಲ್ಲಿನ ಪಾತ್ರಗಳನ್ನು ಕಲ್ಪಿಸಬೇಕಾಗಿ ಬಂದಾಗಲೂ ಇವರು ಅದಕ್ಕೆ ರಕ್ತ ಮಾಂಸಗಳನ್ನು ತುಂಬ ಬಲ್ಲರು. ತ.ರಾ.ಸು. ಅವರಿಗೆ ಅನುಭವ ವೈಶಾಲ್ಯವಿದೆ, ಎನ್ನುವುದಕ್ಕೆ ಅವರ ಕಾದಂಬರಿಗಳಲ್ಲಿ ಬರುವ ಪಾತ್ರಗಳ ವಿಭಿನ್ನತೆ ಹಾಗೂ ಘಟನೆಗಳ ವೈವಿಧ್ಯವೇ ಸಾಕ್ಷಿಯಾಗಿದೆ.

ತ.ರಾ.ಸು. ಅವರು ಸುಮಾರು ೧೬ ಐತಿಹಾಸಿಕ ಕಾದಂಬರಿಗಳನ್ನು ಬರೆದಿ-ದ್ದಾರೆ. ಅವುಗಳಲ್ಲಿ ಚಿತ್ರದುರ್ಗದ ಐತಿಹ್ಯವನ್ನು ಸಾರುವುದೇ ಹೆಚ್ಚು, 'ಕಂಬನಿಯ ಕುಯಿಲು' 'ರಕ್ತ ರಾತ್ರಿ' 'ತಿರುಗು ಬಾಣ' 'ಕಸ್ತೂರಿ ಕಂಕಣ' ಭಾಗ ೧, ಮತ್ತು ೨ ಅಲ್ಲದೆ 'ಹಂಸಗೀತೆ' ಇವು ಚಿತ್ರದುರ್ಗದ ಘಟನೆಗಳನ್ನು ಒಳಗೊಂಡಿವೆ. "ಸಿಡಿಲ ಮೊಗ್ಗು" ಹೊಯ್ಸಳರಿಗೆ ಸಂಬಂಧ ಪಟ್ಟುದಾದರೆ 'ನೃಪತುಂಗ' ರಾಷ್ಟ್ರಕೂಟ ದೊರೆಯ ಜೀವನದ ಸುಂದರ ಚಿತ್ರಣವಾಗಿದೆ. ಕನ್ನಡ ನಾಡಿನವರಿಗೆ ರೋಮಾಂಚನ ವಾಗುವಂತೆ ಈ ಎಲ್ಲ ಕಾದಂಬರಿಗಳು ಚಿತ್ರಿತವಾಗಿದೆ.

ಕಂಬನಿಯ ಕುಯಿಲು—

ಸುಮಾರು ಮೂರು ಶತಮಾನಗಳ ಹಿಂದೆ ಚಿತ್ರದುರ್ಗದ ಪಾಳೆಯಗಾರರಾದ ಮದಕರಿನಾಯಕರು ಗಂಡು ಸಂತಾನವಿಲ್ಲದೆ ಸ್ವರ್ಗವಾಸಿಗಳಾದಾಗ ಉಂಟಾದ ಸಂದಿಗ್ಧ ಸಮಯವನ್ನು ಕಥಾವಸ್ತುವನ್ನಾಗಿ ಆರಿಸಿಕೊಂಡು ತ.ರಾ.ಸು. ಅವರು ಈ ಕೃತಿಯನ್ನು ತಮ್ಮ ಕಲ್ಪನೆಯ ಕುಂಚದಿಂದ ಮೂರ್ತಿಮಂತಾಗಿಸಿದ್ದಾರೆ.

ಕಂಬನಿಯ ಕುಯಿಲು ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಬೆರಳು ಮೇಲೆ ಎಣಿಸುವಷ್ಟು. ಆರಂಭದಲ್ಲಿ ಅರಸರನ್ನು (ನೆಚ್ಚಿ) ಕೈ ಹಿಡಿದ ನಾಗತಿಯರು ಮೂವತ್ತು ಮಂದಿ ಎಂದು ಹೇಳಿದರೂ ಅವರಲ್ಲಿ ತ.ರಾ.ಸು. ನಮಗೆ ನಿಕಟ ಪರಿಚಯ ಮಾಡಿಸುವುದು ಇಬ್ಬರನ್ನೇ, ಒಬ್ಬಳು ಮದಕರಿನಾಯಕರನ್ನು ಪ್ರಥಮ ಬಾರಿಗೆ ಕೈ ಹಿಡಿದು ಅವರ ಹೃದಯ ಸಿಂಹಾಸನವನ್ನೇರಿದ ಗೌರವ್ವನಾಗತಿ. ಇನ್ನುಳಿದವರೆಂದರೆ ಗಿರಿಜೆ ಹಾಗೂ ಗಂಗಾ ಇವರು ಒಬ್ಬನನ್ನೇ ಕೈ ಹಿಡಿಯದಿದ್ದರೂ ಒಂದೇ ಮನೆಯ ಇಬ್ಬರು ಅಣ್ಣತಮ್ಮಂದಿರ ಮನ ಮೆಚ್ಚಿಸಿದ ಸ್ತ್ರೀಯರು. ಹುಚ್ಚಿ ಹನುಮವ್ವನ ಪಾತ್ರವೊಂದು.

ಗೌರವ್ವನಾಗತಿ ಮದಕರಿ ನಾಯಕರನ್ನು ಕೊನೆಯಲ್ಲಿ ಲಗ್ನವಾಗಿದ್ದರೂ ಲೇಖಕರ ತಂತ್ರನಾವೀನ್ಯತೆಯಿಂದಾಗಿ ಅವಳದೇ ನಮಗೆ ಪ್ರಥಮ ಬಾರಿಗೆ ಪರಿಚಯ ವಾಗುತ್ತದೆ, ಮದಕರಿನಾಯಕರ ಮರಣ ಸಂಭವಿಸಿದ ದುರ್ಭರ ಸನ್ನಿವೇಶದಲ್ಲಿ ಹೆಣ್ಣು ಮಕ್ಕಳೆಲ್ಲ ದುಃಖಾತಿಶಯದಿಂದ ಗೋಗರೆಯುವಾಗ ರಾಜಕೀಯ ವ್ಯವ-ಹಾರಿಕ ಪ್ರಜ್ಞೆ ಕಾಯ್ದು ಕೊಂಡ ಹೆಣ್ಣೆಂದರೆ ಗೌರವ್ವನಾಗತಿಯೇ ನಾಯಕರ

ಅಂತ್ಯ ಸಂಸ್ಕಾರ ಆಗುವಷ್ಟರಲ್ಲಿ ಪಟ್ಟ ಯಾರಿಗಾಗಬೇಕೆಂಬುದನ್ನು ನಿರ್ಧರಿಸ ಬೇಕೆಂದು ಒತ್ತಾಯಿಸುತ್ತಾಳೆ. ಅಷ್ಟೇ ಅಲ್ಲ "ಪ್ರಭುಗಳ ಮನಸ್ಸಿನಲ್ಲಿ ಏನಿತ್ತು ಎನ್ನುವುದು ಅವರ ಅಂತರಂಗವನ್ನು ಅರಿತವರೆಲ್ಲರಿಗೂ ತಿಳಿದಿದೆ. ಈಗಲೂ ದೊರೆಗಳ ಮನಸನ್ನು ತಿಳಿದವರು ನಿಸ್ಸಂಕೋಚವಾಗಿ ಮಾತನಾಡಬೇಕು" ಎಂದು ಕೇಳಿಕೊಳ್ಳುವಳು.

ಇದೇ ಸಂದರ್ಭದಲ್ಲಿ ಹಿರಿಯನಾಗತಿ, ನಾಯಕರ ಪಟ್ಟದರಾಣಿ, ಬಾಣದ ಮನೆ ಓಬವ್ವನಾಗತಿ ಅಲ್ಲಿದ್ದರೂ ಅವಳಾಡುವ ಮಾತಿಗೂ ಗೌರವ್ವನಾಗತಿಯ ಮಾತಿಗೂ ಅಜಗಜಾಂತರ. 'ಸೂರ್ಯ ಮುಳುಗಿದ ಮೇಲೆ ಬೆಳಕಿನ ಚಿಂತೆಯೇಕೆ?' ಎಂದು ಹಿರಿಯನಾಗತಿ ಹೇಳಿ, 'ಆಳುವವರು ಆಳಿಸಿ ಕೊಳ್ಳುವವರು ಅಳ್ವಿಕೆಯ ಯೋಜನೆ ಮಾಡಲಿ' ಎನ್ನುವಳು. ಈ ಮಾತುಗಳಿಂದ ಹಿರಿಯನಾಗತಿ ರಾಜಕೀಯ ದಿಂದ ಎಷ್ಟು ಅಲಿಪ್ತಳಿದ್ದಾಳೆಂಬುದು ತಿಳಿದು ಬರುತ್ತದೆ. ನಾಯಕರ ಪಾರ್ಥಿವ ಶರೀರದ ಸಮೀಪ ಕುಳಿತಾಗ ಪಟ್ಟದ ಕುರಿತು ಬಿರುಸು ಚರ್ಚೆ ಆರಂಭವಾಗಲು ಹಿರಿಯನಾಗತಿ ಅಲ್ಲಿಂದ ಎದ್ದು ಹೋಗುವಳು. ಉಳಿದ ನಾಗತಿಯರೂ ಅವಳನ್ನು ಹಿಂಬಾಲಿಸುವರು. ಆದರೆ ಗೌರವ್ವನಾಗತಿ ಆ ಎಲ್ಲ ಪುರುಷರ ಮಧ್ಯದಲ್ಲಿ ತಾನು ಕುಳಿತು ನಾಯಕರ ಅಂತರಾರ್ಥ ಏನಿತ್ತೆಂಬುದನ್ನು ತಿಳಿಸುತ್ತಾಳೆ. "ತಮ್ಮ ಸಂತಾನಕ್ಕೆ ಸಿಂಹಾಸನ ಪ್ರಾಪ್ತವಾಗಬೇಕೆಂಬ ಬಯಕೆ ಪ್ರಭುಗಳಿಗಿತ್ತು........ಕಡೆಗೆ ಅದಕ್ಕೆಂದೇ ಓಬಣ್ಣನಾಯಕನನ್ನು ಸಾಕಿದರು ಎಂದು ಬಿಡಿಸಿ ಹೇಳುವಳು.

ಶವದ ಎದುರು ಇದೆಲ್ಲ ಯಾಕೆ ಎಂದು ಮಂತ್ರಿಗಳು ಮಾನ್ಯರು ವಿಚಾರ ಮಾಡಿ ಇದರ ಇತ್ಯರ್ಥವನ್ನು ಮುಂದೂಡಿದಾಗ ಶವ ಸಂಸ್ಕಾರ ಮೊದಲಾದ ವಿಧಿಗಳು ನಡೆಯುತ್ತವೆ.

ಗೌರವ್ವನಾಗತಿ ಹಾಗೆ ಎಲ್ಲರೆದುರು ಹೇಳಿದರೂ ಅವಳ ಅಂತರ್ಯದಲ್ಲಿ ಪಶ್ಚಾತ್ತಾಪ ಮೂಡುತ್ತದೆ. ನಾಯಕರ ಬಯಕೆಯನ್ನು ಈಡೇರಿಸಲೆಂದೇ ತಾನು ಹಾಗೆ ನಡೆದು ಕೊಂಡುದಾಗಿ ಹೇಳುವಲ್ಲಿ ಅವಳ ಅಂತರಂಗ ಸ್ಪಷ್ಟವಾಗಿ ಕಾಣುತ್ತದೆ.

ಗೌರವ್ವನಾಗತಿಯ ರೂಪಕ್ಕೆ ಮೋಹಿಸಿ ಕೊನೆಗಾಲದಲ್ಲಿ ನಾಯಕರು ಮದುವೆಯಾಗಿದ್ದರು ಒಂದು ದಿನವೂ ಅವಳನ್ನು ಅಗಲಿ ಇರುತ್ತಿರಲಿಲ್ಲ. ಅವರಿಗೆ ಸಂತಾನದ ಚಿಂತೆ ಬಾಧಿಸುತ್ತಿದ್ದಂತೆಯೇ ಗೌರವ್ವನಾಗತಿಗೂ ನಾಯಕರ ನಂತರ ರಾಜ್ಯಕ್ಕೆ ದಿಕ್ಕು ಯಾರು ಎಂಬ ಚಿಂತೆ ಬಾಧಿಸುತ್ತಿತ್ತು. ಸಮಯ ಸಾಧಿಸಿ ಆ ಮಾತನ್ನು ನಾಯಕರ ಮುಂದಿಟ್ಟಾಗ ಅವರು ಓಬಣ್ಣನಾಯಕ ಗೌರವ್ವನ ಸಹೋದರ ನನ್ನು ತಂದು ಸಾಕುವ ನಿರ್ಧಾರ ಮಾಡಿದರು. ಆಗಲೇ ಗೌರವ್ವನಾಗತಿ ವಿರೋಧಿಸಿದ್ದೂ ಉಂಟು. ಬರ್ಜರಿ ನಾಯಕರ ಮಕ್ಕಳನ್ನೇ ರಾಜ್ಯಕ್ಕೆ ತಂದು ಕೊಳ್ಳಲು ಸೂಚಿಸಿದಳು. ಆದರೆ ನಾಯಕರು "ಸಿಂಹಾಸನವೆಂದರೆ ಏನೆಂದು ತಿಳಿದು ಕೊಂಡಿದ್ದೀಯ ಗೌರಾ,

ಇದು ಒಳಸಂಚುಗಳ ಮುಳ್ಳು ಪೊದರುಗಳ ನಡುವೆ ಬೆಳೆದ ಹೂವು, ಎಂತಲೇ ಇದರ ಮೇಲೆ ಕೂಡಲು ಮೈಯೆಲ್ಲಾ ಕಣ್ಣಿದ್ದರೂ ಸಾಲದು" ಎಂದು ತಿಳಿಸಿ ಹೇಳಿ ಲಿಂಗಣ್ಣ ನಾಯಕನನ್ನು ಪಟ್ಟ ಗಟ್ಟಿದರೆ ದಳವಾಯಿಗಳ ರಾಜ್ಯವಾಗುತ್ತದೆಂದು (ಗ್ರಹಿಸಿಪ್ಪರು). ಹೇಳಿದ್ದರು.

ಗೌರವ್ವನಾಗತಿ ಮಂತ್ರಿ ಭುವನಪ್ಪನವರನ್ನು ಕರೆಸಿ ಮುಂದಿನ ಯೋಜನೆಗೆ ತೊಡಗಿದಾಗ, ದತ್ತು ಸ್ವೀಕಾರವನ್ನು ಹಿರಿಯ ನಾಗತಿ ಓಬವ್ವನೇ ಮಾಡಿಕೊಳ್ಳಬೇಕು. ದೊರೆಗಳ ಪಟ್ಟಮಹಿಷಿ ಅವಳಾದುದರಿಂದ ಅವಳಿಗೆ ಮಾತ್ರ ಅಧಿಕಾರವಿದೆಯೆಂದು ಮಂತ್ರಿ ಭುವನಪ್ಪನವರು ತಿಳಿಸುತ್ತಾರೆ. ಹಿರಿಯನಾಗತಿ ಈಗಾಗಲೇ ಸಹ ಗಮನಕ್ಕೆ ಸಿದ್ಧತೆ ಮಾಡಿ ಕೊಳ್ಳುತ್ತಿದ್ದಳು. ಅವಳನ್ನು ಅದರಿಂದ ತಡೆದು ನಿಲ್ಲಿಸುವ ಕಾರ್ಯವನ್ನು ಗೌರವ್ವನಾಗತಿಯ ಹೇಳಿಕೆಯಿಂದಾಗಿ ಮಂತ್ರಿ ಭುವನಪ್ಪನವರು ಒಪ್ಪಿಕೊಳ್ಳುತ್ತಾರೆ.

ಗೌರವ್ವನಾಗತಿಯನ್ನು ಲೇಖಕರು ಓಬವ್ವನಾಗತಿಯ ಅಂತಃಪುರಕ್ಕೆ ಮೊದಲ ಬಾರಿ ಹಾಗೂ ಅದೇ ಕೊನೆಯ ಬಾರಿಗೆ ಕರೆದು ತಂದು ಅವಳ ಅಂತರ್ಯವನ್ನು ಬಿಚ್ಚಿ ತೋರಿಸಿದ್ದಾರೆ ತನ್ನ ಸವತಿ ಹಿರಿಯನಾಗತಿಯನ್ನು ಗೌರವ್ವ "ಅಕ್ಕ ನೀನು ಈ ಲೋಕದ ಹೆಣ್ಣಲ್ಲ, ದೇವತಾಸ್ತ್ರೀ" ಎಂದು ಹೊಗಳುವದಲ್ಲದೆ ಜನ್ಮ ಜನ್ಮಕ್ಕೂ ಅವಳಿಗೆ ತಂಗಿಯಾಗಿ ಹುಟ್ಟುವ ಭಾಗ್ಯವನ್ನು ಆಶೀರ್ವದಿಸಲು ಬೇಡಿ ಕೊಳ್ಳುತ್ತಾಳೆ. ಇವಳು ತನ್ನ ಹೆಗಲ ಮೇಲಿರುವ ಭಾರವನ್ನು ನ್ಯಾಯವಾಗಿ ಹೊರ ಬೇಕಾದ ಹಿರಿಯನಾಗತಿಯ ಮೇಲೆ ಹೊರಿಸಿ ಅವಳನ್ನು ಕರ್ತವ್ಯ ಜಾಗೃತಳನ್ನಾಗಿ ಮಾಡಿ, ತಾನು (ಮಾಡಿದ) ತಪ್ಪಿಗಾಗಿ ಕ್ಷಮೆಯಾಚಿಸಿ, ಅವಳ ಬದಲಾಗಿ ತಾನು ಸತಿ ಹೋಗುವುದನ್ನು ನೋಡಿ ದರೆ ಗೌರವ್ವೆಯ ಕುರಿತು ನಮ್ಮಲ್ಲಿ ಅತ್ಯಂತ ಆದರ, ಅಭಿಮಾನಗಳು ಒಡಮೂಡದೆ ಇರಲಾರವು.

ಆರಂಭದ ಅವಳ ಧೈರ್ಯ, ಸಾಹಸ, ನಿಷ್ಠುರ ಮಾತುಗಳು ಅವಳ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದೆ. ನಾಯಕರಿರುವಾಗಿನಿಂದ ಅವಳು ತೋರಿಸಿದ ರಾಜಕೀಯ ಅಭಿರುಚಿ, ಸಮಸ್ಯೆಗಳಿಗೆ ಅವಳು ಹುಡುಕುವ ಪರಿಹಾರ ಇವೆಲ್ಲ ಅವಳ ಚಾಣಾಕ್ಷತೆ ಯನ್ನು ಎತ್ತಿ ತೋರಿಸುತ್ತವೆ. ಅವಳ ಸಹಗಮನ ಓದುಗರನ್ನು ದುಃಖಕ್ಕೀಡು ಮಾಡುತ್ತದೆ.

ಇನ್ನು ಓಬವ್ವನಾಗತಿಯ ಗುಣ ಸ್ವಭಾವಗಳನ್ನು ನೋಡಿದರೆ ಅವಳು ಮೊದ ಮೊದಲು ರಾಜಕೀಯದಿಂದ ನಿರ್ಲಿಪ್ತಳಾಗಿದ್ದು ಕೇವಲ ಪೂಜೆಯಲ್ಲಿ ನಿರತಳಾಗಿರು ವಳು. ಮೊದಲ ಭಾಗದಲ್ಲೇ "ನಾವು ದೊರೆಗಳು ಕೊಟ್ಟ ಅರಿಷಿಣ ಕುಂಕುಮ ಸೂರೆ ಮಾಡುವ ಚಿಂತೆ ಮಾಡೋಣ" ಎನ್ನುವಲ್ಲಿ ಅವಳ ಜೀವನ ದೃಷ್ಟಿ ಕೋನವನ್ನು ನಾವು ಅರಿತು ಕೊಳ್ಳುತ್ತೇವೆ. ನಾಯಕರ ನಂತರ ಯಾರು? ಎಂಬ ಸಂದಿಗ್ಧತೆ ಹರಡಿರುವಾಗ ಯಾವುದನ್ನೂ ಲಕ್ಷ್ಯಕ್ಕೆ ತರದೆ ಪೂಜಾ ಮಂದಿರದಲ್ಲಿಯೇ ಉಳಿದು ಸಹಗಮನಕ್ಕೆ ಸಿದ್ಧತೆ ಮಾಡಿಕೊಳ್ಳುವಳು. ಅವಳ ಮಾತಿನಲ್ಲಿ ಅತಿ ಆದರ್ಶವನ್ನು

ಕಾಣುತ್ತೇವೆ. ಧಾರಣೀಯ ಪರಂಪರೆಯಲ್ಲಿ ಅವಳ ಪಾತ್ರ ಚಿತ್ರಿತವಾಗಿದೆ. "ಕಮಲವಿದ್ದ ಹಾಗೆ; ನಮ್ಮ ಬಾಳಲ್ಲಿ ಸೂರ್ಯ ಮುಳುಗಿದರೆ ಇದರ ಕಥೆಯೂ ಮುಗಿದಂತೆಯೇ" ಎಂದು ತನ್ನ ಜೀವನ ಸೂರ್ಯ ಮದಕರಿನಾಯಕರ ಮರಣಾನಂತರ ತಾನಿನ್ನು ಉಳಿಯುವಾರದೆಂದು ಮಂತ್ರಿ ಭುವನಪ್ಪನವರು ತನ್ನನ್ನು ಕಾಣಲು ಬಂದಾಗ ಹೇಳುವಳು. ಗೌರವ್ವನಾಗತಿ ತನ್ನನ್ನು ಕಾಣಲು ಬಂದಾಗ "ನಾನೊಂದು ಮುರುಕು (ಒಡೆದ) ಕನ್ನಡಿ ಚೂರು. ಬಿಸಿಲು ಬಿದ್ದರೆ ಅಷ್ಟು ಹೊಳೆಯುತ್ತೇನೆ. ಅಷ್ಟು ಮಾತ್ರಕ್ಕೆ ನನ್ನನ್ನೇ ಸೂರ್ಯವೆಂದು ಬಿಟ್ಟರೆ, ಎಲ್ಲಿಯಾದರೂ ಉಂಟೆ?" ಎಂಬ ಮಾತುಗಳಿಂದ ಅವಳ ಪಾತ್ರದ ಸ್ಪಷ್ಟ ಕಲ್ಪನೆ ನಮಗಾಗುತ್ತದೆ.

ಓಬವ್ವನಾಗತಿ(ಯವರು) ಇಂಥ ಸಂಪ್ರದಾಯದವಳಾಗಿರುವಾಗ ಭುವನಪ್ಪನವರ ಮಾತಿನಿಂದ ಅವಳು ಸಹಗಮನ ಮಾಡಲಾರದೇ ಉಳಿದುದೇ ಆಶ್ಚರ್ಯವೆನಿಸುತ್ತದೆ. ಆದರೆ ಲೇಖಕರು ಕಥಾ ಸಂವಿಧಾನಕ್ಕೆ ಪೋಷಕವಾಗುವ ರೀತಿಯಲ್ಲಿ ಓಬವ್ವನಾಗತಿಯನ್ನುಳಿಸಿ ಗೌರವ್ವನಾಗತಿಯನ್ನು ಸಹಗಮನ ಮಾಡಿಸಿದ್ದಾರೆ. (ಐತಿಹಾಸಿಕ ಘಟನೆಗಳು ಹಾಗೆ ನಡೆದಿರಲೂ ಬಹುದು) ಆದರೆ ಕಾದಂಬರಿಯಲ್ಲಿ ಬರುವ ಮುಂದಿನ ಸನ್ನಿವೇಶಗಳಲ್ಲಿ ಗೌರವ್ವನಾಗತಿ ಇದ್ದಿದ್ದರೆ...ಅನ್ನಿಸದೆ ಇರುವುದಿಲ್ಲ. ಗೌರವ್ವನಾಗತಿಯಲ್ಲಿರುವ ಖಂಡಿತವಾದಿತ್ವ, ಧೈರ್ಯ ಓಬವ್ವನಾಗತಿಯಲ್ಲಿಲ್ಲ ಎಂಬುದು ಮೇಲು ನೋಟಕ್ಕೇ ಹೊಳೆಯುತ್ತದೆ. ಹೀಗಾಗಿ ಓಬವ್ವನಾಗತಿ ಆದರ್ಶದ ಸಾಕಾರ ಮೂರ್ತಿಯಾಗಿದ್ದಾಳೆ. ನಾಯಕರ ಮೇಲೆ ಪ್ರೀತಿಯಿದ್ದರೂ, ಅವರ ಸಮೀಪವಿದ್ದೂ ಅವರನ್ನು ಅರಿತು ಕೊಂಡಿಲ್ಲ.

ಭುವನಪ್ಪನವರ ಹಾಗೂ ಗೌರವ್ವನಾಗತಿಯ ಇಚ್ಛೆಯ ಮೇರೆಗೆ ಓಬವ್ವನಾಗತಿ ಜೀವದಿಂದುಳಿಯುತ್ತಾಳೆ. ಲಿಂಗಣ್ಣನನ್ನು ತನ್ನ ಮಾತಿನ ಚಾತುರ್ಯದಿಂದ, ತನ್ನ ಮೇಲೆ ಅವನಿಟ್ಟ ಭಕ್ತಿ, ಪ್ರೀತಿಯಿಂದಾಗಿ ಕುಂತಿ ಕರ್ಣನಿಗೆ ಮರಳಿ ಬಾಣವನ್ನು ತೊಡದಿರೆಂದು ಕೇಳಿಕೊಂಡಂತೆ, ಲಿಂಗಣ್ಣನ ಪಾಲಿಗೆ ಬಂದಿದ್ದ ರಾಜ್ಯವನ್ನು ಬಿಟ್ಟು ಕೊಡಲು ಕೇಳಿ ಕೊಂಡಂತೆ, ಲಿಂಗಣ್ಣನ ಪಾಲಿಗೆ ಬಂದಿದ್ದ ರಾಜ್ಯವನ್ನು ಬಿಟ್ಟು ಕೊಡಲು ಕೇಳಿ ಕೊಳ್ಳುವಳು. ಲಿಂಗಣ್ಣನಿಗೆ ತಾನು ಒಂದು ಕಡೆ, ರಾಜ್ಯ ಇನ್ನೊಂದು ಕಡೆ, ಇವರಲ್ಲಿ ಬೇಕಾದದ್ದು ಯಾವುದು? ಎಂದಾಗ ಅನಿವಾರ್ಯವಾಗಿ ಲಿಂಗಣ್ಣ ಅವಳನ್ನೇ ಆರಿಸಿ ಕೊಳ್ಳುವನು. ತಾನೊಂದು ಬಿದಿರು ತುಂಡು ಎಂದೂ ನಾಯಕರ ಇಚ್ಛೆ ತನ್ನನ್ನು ಹೀಗೆ ನುಡಿಸುತ್ತದೆ ಎಂದೂ ತಿಳಿಸುವಳು. ಅವಳ ಒಂದೊಂದು ಮಾತು ಅವಳ ಕರ್ತವ್ಯ ನಿಷ್ಠೆಯನ್ನು ಎತ್ತಿ ತೋರಿಸುತ್ತವೆ.

"ನಾನು ನಿಷ್ಠುರ ಕರ್ತವ್ಯದ ಬಂಧಿ ಲಿಂಗಣ್ಣ, ನನ್ನ ಹೃದಯವೇನೇ ಹೇಳಿದರೂ ಕರ್ತವ್ಯ ತೋರಿದ ಪಥದಿಂದ ವಿಮುಖಳಾಗಲಾರೆ" ಎಂಬಲ್ಲಿ ಅವಳ ಮನಸ್ಸನ್ನು ಅರಿಯಬಹುದು. ಆದರೂ ಅವಳು ಕರ್ತವ್ಯದ ಜೊತೆಗೆ ತನ್ನ ಹೃದಯವನ್ನು (ಮನಸ್ಸನ್ನು) ಹೊಂದಿಸಿ ಕೊಂಡು ಹೋದುದನ್ನು ಈ ಮೇಲಿನ ಘಟನೆಗಳಿಂದ

ಕಾಣುತ್ತೇವೆ. ಅವಳಲ್ಲಿ ಓಬಣ್ಣ (ಸವತಿಯ ಮಮ್ಮ)ನ ಕುರಿತು ಯಾವುದೇ ಬೇರೆ ಭಾವನೆ ಬಳಿ ಸುಳಿಯುವುದೂ ಇಲ್ಲ. ಲಿಂಗಣ್ಣನನ್ನು ಆತ್ಮಾರ್ಪಣೆಗೆ ಹಚ್ಚಿದ ಶ್ರೇಯಸ್ಸು ಅವಳಿಗೇ ಸಲ್ಲುತ್ತದೆ.

ಅರಮನೆಯ ಓಲಗ ಶಾಲೆಯನ್ನು ಓಬವ್ವನಾಗತಿ ಅವಗುಂಠನವತಿಯಾಗಿಯೇ ಪ್ರವೇಶಿಸುತ್ತಾಳೆ. ಆದರೆ ಸಂದರ್ಭ ಬಂದಾಗ ಮಾತಿಗೂ ತೊಡಗುತ್ತಾಳೆ. ಸಭೆಯಲ್ಲಿ ಉಂಟಾದ ವಿವಾದವು ಲಿಂಗಣ್ಣನಿಂದ ನಾಗತಿ ಮೊದಲೇ ವಚನ ತೆಗೆದು ಕೊಂಡದ್ದರಿಂದಲೋ ಏನೋ ಸಭೆಯಲ್ಲಿ ಲಿಂಗಣ್ಣನ ವಿವರಣೆಯಿಂದ ಮುಕ್ತಾಯವಾಗುತ್ತದೆ. "ಈ ಸಿಂಹಾಸನ ಓಬಣ್ಣನಾಯಕರದು" ಎಂದು ಲಿಂಗಣ್ಣನೇ ಸಾರಿ ಹೇಳುವನು. ಅವನನ್ನು ಜನ ಹೊಗಳುತ್ತಾರೆ. ಬೆಟ್ಟದಂತೆ ಬಂದ ಸಮಸ್ಯೆ ಮಂಜಿನಂತೆ ಕರಗಿ ಹೋಗುತ್ತದೆ. ಆದರೆ ಇದರ ಹಿಂದೆ ಇರುವ ನಾಗತಿಯ ಹೃದಯವನ್ನು ಬಗೆದು ನೋಡುವವರೇ ಇಲ್ಲವೆನಿಸುತ್ತದೆ. ಲಿಂಗಣ್ಣ, ಭುವನಪ್ಪನವರ ಹೊರತಾಗಿ ಅವಳ ಹೃದಯವನ್ನು ಅರಿತವರಿಲ್ಲ.

ಓಬಣ್ಣನಾಯಕನನ್ನು ರಕ್ಷಿಸುವ ಸಲುವಾಗಿ ಗಿರಿಜೆಯನ್ನು ನೇಮಿಸುವಾಗ, ಕಸ್ತೂರಿನಾಯಕನೆಂಬ ಮೈಗಾವಲ ಸೈನಿಕನನ್ನು ಆರಿಸಿಕೊಳ್ಳುವಾಗ, ನಾಗತಿ ಮಾಡುವ ಪರೀಕ್ಷೆ, ಅವಳು ನಡೆದುಕೊಂಡ ರೀತಿ ಅವಳ ಜಾಣಾಕ್ಷತನವನ್ನು ಸಾರಿ ಹೇಳುತ್ತವೆ.

ಓಬಣ್ಣನನ್ನು ದತ್ತು ತೆಗೆದುಕೊಂಡು ಪಟ್ಟಗಟ್ಟುವ ಕಾರ್ಯ ಮುಗಿಸಿದ ಮೇಲೆ ಸೈನಿಕರಿಗೆ ಕೊಡ ಬೇಕಾದ ಒಂದು ತಿಂಗಳದಷ್ಟು ಸಂಬಳದ ಪಟ್ಟ ಕಾಣಿಕೆ ಕೊಡಲು ಆಗದೆ ಇರುವಾಗ, ಭಂಡಾರ ಬರಿದಾಗಿದೆಯೆಂದು ಹೇಳುವುದಕ್ಕೂ ನಾಗತಿ ಸಿದ್ಧವಾಗುತ್ತಾಳೆ. ಇಲ್ಲಿ ನಾಗತಿಯ ಮುಗ್ಧತೆ ಎದ್ದು ತೋರುತ್ತದೆ. ಮಂತ್ರಿ ಭುವನಪ್ಪನವರು ಹಾಗೆ ಸತ್ಯ ಸಂಗತಿ ಹೇಳಿದರೆ ಸೈನಿಕರು ಬಂಡಾಯವೇಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಎಂದು. ಮುನ್ಸೂಚನೆ ನೀಡುವರು ಆದರೂ ದುರ್ಗದ ಸೈನಿಕರೆಲ್ಲ ಗುಂಪು ಕಟ್ಟಿಕೊಂಡು ಬಂದು ಅರಮನೆಯ ಮುಂದೆ ನೆರೆದು ಘೋಷಿಸ ತೊಡಗಿದರು. "ನಾವು ನಾಯಕರನ್ನು ನೋಡಬೇಕು" ಎಂದು ಸೈನಿಕರು ಆರ್ಭಟಿಸಿದಾಗ ಮಂತ್ರಿ ಲಿಂಗಣ್ಣನು ಓಡಿ ಬರುವನು ಆದರೆ ಈ ಸಂದರ್ಭದಲ್ಲಿ ನಾಗತಿ ನಡೆದುಕೊಂಡ ರೀತಿ ತೀರ ಸಾಮಾನ್ಯ ಹೆಣ್ಣಿನಂತೆ ಎನಿಸುತ್ತದೆ. ಸಮಯ ಬಂದಾಗ ಚಂಡಿಯಾಗುವ ಶಕ್ತಿ ಅವಳಲ್ಲಿಲ್ಲ. ದುಃಖಿಸುತ್ತಾ ಪೂಜಾಲಯದಲ್ಲಿ ವಿಗ್ರಹದ ಮುಂದೆ ಕೆಡೆದಿರುವುದನ್ನು ನೋಡಿದರೆ ನಾಗತಿಯ ಬಗ್ಗೆ ನಮಗೆ ನಿರಾಶೆ ಮೂಡುತ್ತದೆ. ಅವಳು ಖಡ್ಗ ಹಿಡಿದು ಹೊರಗೆ ಹೋಗದಿದ್ದರೂ ಧೈರ್ಯ ತಳೆದು ನಿಲ್ಲುವಷ್ಟೂ ಇಲ್ಲವೆಂದ ಮೇಲೆ ರಾಜ ಮಾತೆಗೆ ಇರಬೇಕಾದ ಧೈರ್ಯ, ಸಾಹಸ ಅವಳಲ್ಲಿ ಕಿಂಚಿತ್ತೂ ಇಲ್ಲವೆನಿಸುತ್ತದೆ.

ಲಿಂಗಣ್ಣನಾಯಕ ಸೈನಿಕರೆದುರು ಹೊರಟಾಗ ಅವಳು ಹೊಂದುವ ಅಧೈರ್ಯ ಓದುಗರನ್ನೂ ಆಶ್ಚರ್ಯಗೊಳಿಸುತ್ತದೆ. ಅವಳಾಡುವ ಮಾತಿನಲ್ಲಿ ಮಾತ್ರ ಸತ್ವ ಎದ್ದು

ಕಾಣುತ್ತದೆ. "ಸೈನಿಕರ ಅತೃಪ್ತಿ ಸೆರಗಿನಲ್ಲಿ ಕಟ್ಟಿಕೊಂಡ ಬೆಂಕಿ, ಲಿಂಗಣ್ಣ. ರಕ್ತದಲ್ಲಿ ಕೈ ಮೈ ಮುಳುಗಿಸಿದ ಜನ ಅವರು ಹಾವಿನೊಂದಿಗೆ ಸರಸವಾಡಿದಂತೆ ಅವರ ಸ್ನೇಹ ಅವರು ಮುನಿದಿದ್ದಾರೆಂದೇ ನನಗಷ್ಟು ಭೀತಿ". ಇಲ್ಲಿ ರಾಜನೀತಿಯಲ್ಲಿ ಅವಿವೇಕ ನ್ಯಾಯ ಎಷ್ಟು ಅಪಾಯಕಾರಿಯಾಗಿರುತ್ತದೆಂಬುದಕ್ಕೆ ಸತ್ಯ ನಿದರ್ಶನವಿದೆ.

ಲಿಂಗಣ್ಣ ಸೈನಿಕರೆದುರು ಹೋದಾಗ ಮಾತೃ ಹೃದಯದ ವಾತ್ಸಲ್ಯ ತುಂಬಿದ ಓಬವ್ವನಾಗತಿಯೂ ಅಲ್ಲಿಯೇ ಹೋಗಿ ಮರೆಯಲ್ಲಿ ನಿಲ್ಲುತ್ತಾಳೆ. ಪರಿಸ್ಥಿತಿ ಲಿಂಗಣ್ಣನ ಹಿಡಿತಕ್ಕೆ ಬಾರದಿರುವುದನ್ನು ತಿಳಿದು ವಿಪರೀತಕ್ಕೆ ಹೋಗುವ ಮುನ್ನವೇ ಗಿರಿಜವ್ವೆಯನ್ನು ಕರೆದುಕೊಂಡು ತಾನೇ ಅವರೆದುರು ಕಾಣಿಸಿಕೊಳ್ಳುತ್ತಾಳೆ. ಸೈನಿಕರನ್ನು ಉದ್ದೇಶಿಸಿ ಅವಳಾಡಿದ ಮಾತು ರಾಜಕೀಯ ಬಿಕ್ಕಟ್ಟನ್ನು ಪರಿಹರಿಸುವಂಥದು ಆಗದಿದ್ದರೂ ಅಲ್ಲಿ ಸರಳತೆ ಎದ್ದು ಕಾಣುತ್ತದೆ, ಯಾವುದನ್ನು ಭುವನಪ್ಪ ತಿಳಿಸಲು ನಿರಾಕರಿಸಿದ್ದನೋ ಅದನ್ನೇ ನಾಗತಿ ತಿಳಿಸಿಬಿಡುವಳು. (ಭಂಡಾರ ಬರಿದಾಗಿದೆ ಎಂಬ ವಿಷಯವನ್ನು) ಅವಳು ರಾಜಕೀಯ ತಂತ್ರದಲ್ಲಿ ನೈಪುಣ್ಯತೆ ಪಡೆದ ಸ್ತ್ರೀಯಲ್ಲ ಎಂಬುದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಂದರ್ಭದಿಂದ ನಾಗತಿಯ ಬಿಚ್ಚು ಹೃದಯದ ಪರಿಶುದ್ಧತೆ, ನೇರ ನಡೆನುಡಿ ಸ್ಪಷ್ಟವಾಗಿ ಕಂಡು ಬರುತ್ತವೆ.

ಇದೇ ಸಂದರ್ಭ ದಳವಾಯಿ ದೇವಣ್ಣನ ಕೊಲೆಗೆ ಕಾರಣೀಭೂತವಾಗುತ್ತದೆ. ಮುದ್ದಣ್ಣನನ್ನು ಹಿಡಿಯಲು ಸಾರಿದ ರಾಜಾಜ್ಞೆಯನ್ನು ಚಿಕ್ಕಣ್ಣ ಹಿಂತೆಗೆದುಕೊಳ್ಳಲು ಸಂಧಾನ ನಡೆಸಿದಾಗ ತನ್ನ ತಮ್ಮನನ್ನೇ ಲಿಂಗಣ್ಣ ಶಂಕಿಸುವನು. ಅದೇನು ಫಿತೂರಿ ಇದೆಯೋ, ಅವರ ಮನಸ್ಸಿನಲ್ಲಿ ಎಂಥ ಕುತಂತ್ರದ ಕಾಳಸರ್ಪ ಹುದುಗಿದೆಯೋ ಎಂದು ಚಿಂತಿಸುತ್ತಾನೆ, ಆದರೆ ಸರಳ ಜೀವಿ ಓಬವ್ವನಾಗತಿ "ಸಂಶಯದ ಬುದ್ಧಿ ಒಳಿತಲ್ಲ. ಅದು ಹಸುಮಗುವಿನ ನಗೆಯಲ್ಲೂ ಕುತ್ಸಿತವನ್ನು ಕಾಣುವಂತೆ ಮಾಡುತ್ತದೆ" ಎಂದು ಚಿಕ್ಕಣ್ಣನನ್ನು ಹಸುಗೂಸೆಂದು ನಂಬುತ್ತಾಳೆ. ಅದೇ ಎಂಥ ಅನಾಹುತಕ್ಕೆ ಕಾರಣವಾಗುತ್ತದೆ. ಎಂಬುದನ್ನು ಓದುಗರು ಅರಿಯುವರು. ಎಲ್ಲವನ್ನೂ ದೈವದ ಮೇಲೆ ಭಾರ ಹಾಕಿ ನಡೆದುಕೊಂಡ ನಾಗತಿಗೆ ಇಂಥ ದುರ್ಭರ ಸನ್ನಿವೇಶವನ್ನು ಎದುರಿಸುವ ಪ್ರಸಂಗ ಬರುತ್ತದೆ. ಅಂತೆಯೇ ಓಬಣ್ಣನಾಯಕನ ಕೊಲೆಯಾದ ನಂತರ ಅವಳು ತನ್ನ ಪ್ರಾಣವನ್ನು ಇಡಗೆ ಭಾವಿಯಲ್ಲಿ ಹಾರಿಕೊಂಡು ಬಿಡುವಳು.

ಸಾವಿನ ಪ್ರಸಂಗದಲ್ಲಿಯೂ ಅವಳ ಕೋಮಲ ಸ್ವಭಾವ ಎದ್ದು ಕಾಣುವುದು. ಅವಳು ಬದುಕಿ ಉಳಿದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೋ ಎಂದು ಅನಿಸಿದರೂ ನಾಗತಿ ಒಬ್ಬ ಸಾಮಾನ್ಯ ಸ್ತ್ರೀಯಂತೆ ಭಾವಿ ಹಾರಿ ಪ್ರಾಣತ್ಯಾಗ ಮಾಡಿದ್ದರಿಂದ ಅವಳ ಪಾತ್ರ ಭುವನಪ್ಪನವರ ಹೇಳಿಕೆಯಂತೆ ನಡೆದುಕೊಂಡ ಸೂತ್ರದ ಗೊಂಬೆಯಂತಾಗಿದೆ. ಅವಳು ಅಂಥ ಮಹತ್ವದ ಸ್ಥಾನದಲ್ಲಿದ್ದರೂ ತನ್ನ ತನದ ಜಾಗೃತಿ ಕಡಿಮೆಯೆಂದೇ ಹೇಳಬೇಕು.

ಇನ್ನುಳಿದ ಪಾತ್ರಗಳಾದ ಗಿರಿಜಾ, ಗಂಗಾ ಹಾಗೂ ಹನುಮವ್ವ ಇವು ಸಾಮಾನ್ಯ ಪಾತ್ರಗಳಾದರೂ ತಮ್ಮತನವನ್ನು ಮೆರೆದಿವೆ. ಗಿರಿಜಾ ಅರಮನೆಯಲ್ಲಿ ಅಂತಃಪುರದ ಹಿರಿಯ ನಾಗತಿ ಓಬ್ಬವ್ವನ ದಾಸಿಯಾಗಿದ್ದು ಅವಳ ಪ್ರೀತಿಗೆ ಪಾತ್ರಳಾಗಿದ್ದಾಳೆ. ಪೂಜಾರಿ ಭೀಮಪ್ಪನ ಏಕಮೇವ ಪುತ್ರಿ, ಕಸ್ತೂರಿನಾಯಕನ ಸಹೋದರ ವೀರಣ್ಣನಿಗೆ ಗೊತ್ತಾದ ಹೆಣ್ಣು. ಓಬಣ್ಣನಾಯಕನನ್ನು ರಕ್ಷಿಸಲು ನಾಗತಿ ಇವಳಿಗೆ ಹೇಳಿದಾಗ "ಇಂಥ ಪ್ರಸಂಗದಲ್ಲಿ ಕಾವಲು ಕಾಯಲು ಹೆಣ್ಣಿಗಿಂತ ಬಲಶಾಲಿಯಾದ ಗಂಡು ಮೇಲು" ಎಂದು ಸೂಚಿಸುವಲ್ಲಿ ಅವಳ ಮುಂಧೋರಣೆ ಮೆಚ್ಚುವಂತಹದು, ಸೈನಿಕರು ಬಂದು ಪಟ್ಟಗಾಣಿಕೆಗಾಗಿ ಗಲಾಟೆ ಮಾಡುವಾಗ ಬಿಚ್ಚುಗತ್ತಿ ಹಿಡಿದು ಗಿರಿಜೆ ವೀರ ಸೈನಿಕಳಾಗಿ ಕಾಣಿಸುತ್ತಾಳೆ. ಓಬವ್ವನಾಗತಿಯ ಜೊತೆಗೆ ಸೈನಿಕರ ಎದುರು ಹೋಗಿ ನಿಂತು ಒಬ್ಬ ಸಾಮಾನ್ಯ ಹೆಣ್ಣಾದರೂ ವೀರಾವೇಶ ತುಂಬಿ ಮಾತನಾಡುವಲ್ಲಿ ಅವಳ ಶೌರ್ಯವನ್ನು ಕಂಡು ಓದುಗರು ಪುಲಕಿತರಾಗುವರು.

ವೀರಣ್ಣನಲ್ಲಿ ಅವಳಿಗೆ ಪ್ರೀತಿಯಿದ್ದರೂ ತನ್ನ ನಿಷ್ಠೆಗೆ, ಸ್ವಾಮಿಗೆ ಆ ಪ್ರೀತಿ ಅಡ್ಡ ಬರುವುದೆಂದು ತಿಳಿದು ಬಂದಾಗ ಅವನಿಂದ ದೂರವಾಗಿರಲು ಇಚ್ಛಿಸುತ್ತಾಳೆ. "ಸರಿ ಹಾಗಾದರೆ ನಮ್ಮಿಬ್ಬರದೂ ಕವಲುದಾರಿ" ಎಂದು ತಿಳಿಸಿ ನಿರ್ಗಮಿಸುವಳು. ಇಂಥ ನಿಷ್ಠೆಯ ಸೇವಕ ಸೇವೆಗೆ ಸಿಕ್ಕರೂ ದ್ರೋಹಿಗಳ ಜಾಲದಿಂದಾಗಿ ಓಬಣ್ಣ ನಾಯಕನನ್ನು ಉಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.

ಕಂಬನಿಯ ಕುಯಿಲಿನ ಮುಂದಿನ ಭಾಗ ರಕ್ತರಾತ್ರಿಯ ಚೇತನಮೂರ್ತಿ, ಪ್ರೇರಣಾಶಕ್ತಿಯಾಗಿ ನಿಲ್ಲುವ ಗಿರಿಜೆ ಇಲ್ಲಿ ಆ ಎಲ್ಲ ಮೂಲ ಗುಣಗಳನ್ನು ಹೊಂದಿ ನಿಂತಿದ್ದಾಳೆ.

ಗಂಗಾ ಅಂದಿನ ಸಮಾಜದಲ್ಲಿಯ ಶ್ರೇಷ್ಠ, ಆದರ್ಶ ಗೃಹಿಣಿಯಂತೆ ಮೂಡಿ ಬಂದಿದ್ದಾಳೆ. ಸಾಮಾನ್ಯ ಮನೆತನದ ಸ್ತ್ರೀಯಾದರೂ ಗಂಡನು ಬರುವವರೆಗೆ ಊಟ ಮೊದಲಾದವುಗಳಿಗೆ ದಾರಿ ಕಾಯುವುದು, ಮೈದುನ ವೀರಣ್ಣ, ಮಾವ ಪಾಪಯ್ಯನನ್ನು ಆತ್ಮೀಯತೆಯಿಂದ ಕಾಣುವುದು ಈ ಎಲ್ಲ ಗುಣಗಳು ಗಂಗಾ ಪಾತ್ರವನ್ನು ಎತ್ತರಕ್ಕೊಯ್ಯುತ್ತವೆ.

ಗಿರಿಜೆ ಗಂಗೆಯರು ಮಧ್ಯಮ ವರ್ಗದ ಹೆಂಗಳೆಯರಾದರೂ ಉಚ್ಚತರದ ಸಂಸ್ಕೃತಿಯ ಕುರುಹಾಗಿದ್ದಾರೆ.

ಹುಚ್ಚಿ ಹನುಮವ್ವನ ಪಾತ್ರವನ್ನು ಸಾಂಕೇತಿಕತೆಗಾಗಿ ಚಿತ್ರಿಸಿದ್ದಾರೋ ಎನ್ನುವಂತಿದೆ. ಮುಂದಾಗುವುದನ್ನು ವಿಧಿ ಅವಳ ಬಾಯಿಂದ ಆಡಿಸುತ್ತದೆ. ಅವಳ ದುರ್ಭರ ಸ್ಥಿತಿಯನ್ನು ನೋಡಲಾರದೆ ಪೂಜಾರಿ ಭೀಮಪ್ಪ ತನ್ನ ಮಗಳ ಜೊತೆಗೆ ಅವಳನ್ನು ತಂದು ಸಾಕಿಕೊಂಡಿರುತ್ತಾನೆ. ಹುಚ್ಚಿ ಹನುಮವ್ವ ಕೊನೆಯ ಭಾಗದಲ್ಲಿ ಆಡುವ ಮಾತುಗಳು ಹೆಚ್ಚು ಮನನೀಯವಾಗಿವೆ.

ರಕ್ತರಾತ್ರಿ

ರಕ್ತರಾತ್ರಿಯ ಆರಂಭದ ಭಾಗವೇ ನಾಗತಿಯ ನೆರಳು ಮತ್ತು ಉತ್ಸುಕತೆಯೊಂದಿಗೆ ಮೊದಲಾಗುತ್ತದೆ. ನಾಗತಿಯೇ ಘಾತಕಳಾಗಿದ್ದಳೋ ಎಂದು ಕಾದಂಬರಿಯಲ್ಲಿಯ ಕೆಲವು ಪಾತ್ರಗಳಿಗೆ ಭೀತಿ ಆವರಿಸುವಂತೆ ಕೆಲವು ಬಾರಿ ಓದುಗರಿಗೂ ಅನಿಸುತ್ತದೆ. ಆದರೆ ದುರ್ಗದ ರಾಜಕೀಯದಿಂದ ಬಹಳ ಸರಿಸಿ ೧೨ ವರ್ಷಗಳವರೆಗೆ ದೂರವುಳಿದ ಲಿಂಗಣ್ಣನಾಯಕನನ್ನು ಮತ್ತೆ ಪಟ್ಟಕ್ಕೆ ಒಪ್ಪಿಸುವ ಕೆಲಸವನ್ನು ನಾಗತಿಯ ನೆರಳಿನ ಭ್ರಮೆ ಹುಟ್ಟಿಸುವ ಗಿರಿಜವ್ವೆಯೇ ಮಾಡುತ್ತಾಳೆ. ಅವಳು ಲಿಂಗಣ್ಣನಾಯಕನನ್ನು ಭೇಟಿಯಾಗಿ ಹಿಂದಿನ ಕಥೆಯನ್ನೆಲ್ಲ ನೆನಪು ಮಾಡಿಕೊಟ್ಟು ಕೊನೆಗೆ ಪ್ರತಿಕೊಳ್ಳಲು ಸೇಡಿನ ಕಿಡಿ ಹೊತ್ತಿಸುತ್ತಾಳೆ. ಕಸ್ತೂರಿ ನಾಯಕನ ಬಿಡ್ಡವನ್ನು ತನ್ನಲ್ಲಿ ನೋಂದಿದ ಅವಳು ಅವರಿಂದ ದಳವಾಯಿ ಮುದ್ದಣ್ಣನ ತಲೆ ತೆಗೆಯಲು ಸಂಧಿ ಕಾಯುತ್ತಿರುತ್ತಾಳೆ.

ಆದರೆ ಲಿಂಗಣ್ಣನಾಯಕ ತನ್ನ ಚಿಕ್ಕಪ್ಪನ ಮಾತನ್ನು ಜ್ಞಾಪಿಸಿಕೊಂಡನು. "ಹಿಂಸೆ ರಕ್ತಬೀಜಾಸುರನ ರಕ್ತವಿದ್ದಂತೆ. ಒಂದು ಹನಿ ರಕ್ತ ಬಿದ್ದಲ್ಲಿ ಮತ್ತೆ ನೂರು ಹಿಂಸೆ ಉದ್ಭವವಾಗುತ್ತದೆ" ಅಂತೆಯೇ ಅವನ ಮನಸ್ಸು ಹಿಂಸೆಗೆ ಆಗದಲು ಹಿಂದೇಟು ಹಾಕುತ್ತಿತ್ತು. ಗಿರಿಜೆಯ ಸಕಾಲಿಕವಾದ ಎಚ್ಚರಿಕೆಯ ಮಾತುಗಳನ್ನು "ಇದು ಕೂಡದು ನಾಯಕರೇ, ನೀವೇ ಸೇಡಿನ ಕತ್ತಿ ಹಿಡಿದು ನಿಲ್ಲಬೇಕು. ನಿಮ್ಮೊಳಗಿರ ಹೃದಯದಲ್ಲಿ ದಹಿಸುತ್ತಿರುವ ಪ್ರತೀಕಾರ ತೃಷೆ ಮುದ್ದಣ್ಣನ ರಕ್ತ ಸೇಚನದಿಂದ ಶಾಂತವಾಗಬೇಕು" ಎಂದು ಹೇಳಿ ಆತನಿಗೆ ತನ್ನ ಉಡಿಯಲ್ಲಿ ಮುಚ್ಚಿಕೊಂಡಿದ್ದ ಕತ್ತಿಯನ್ನು ಕೊಡುತ್ತಾಳೆ ಅಂಥ ಸೇಡಿನ ಕತ್ತಿಯನ್ನು ಹಿಡಿದು ನಿಲ್ಲುವ ಭಾರವನ್ನು ಹೊರಲು ಲಿಂಗಣ್ಣ ಗಿರಿಜವ್ವೆಯಿಂದಾಗಿ ಒಪ್ಪಿಕೊಳ್ಳುತ್ತಾನೆ.

ಹೀಗೆ ೧೨ ವರ್ಷಗಳವರೆಗೆ ಚಿತ್ರದುರ್ಗದ ಪಟ್ಟಕ್ಕೆ ತಮ್ಮ ಹಂಗಿಸುವವರು, ಧರ್ಮ ಪಕ್ಷಪಾತಿಗಳು ಬರದೆ ಇದ್ದುದರಿಂದ ದುಃಖಿಯಾಗಿ ತಿರುಗುತ್ತಿದ್ದ ಗಿರಿಜವ್ವೆಗೆ ಈಗ ವಿಧಾಯಕ ಕಾರ್ಯಗಳಲ್ಲಿ ತೊಡಗಲು ಸಾಧ್ಯವಾಗುತ್ತದೆ. ಗಿರಿಜೆಯ ಬಾಯಿಂದ ಬಂದ ಮಾತುಗಳು ಸ್ವಲ್ಪ ಪ್ರೌಢವಾಗಿ, ಹರಿತವಾಗಿ ಕಾಣಿಸುತ್ತವೆ. ಅ.ರಾ.ಸು. ಅವರು ತಮ್ಮ ಕಲ್ಪನೆಯಲ್ಲಿ ಆ ಹೆಣ್ಣಿನ ಪಾತ್ರದ ಮುಖಾಂತರ ಏನನ್ನು ಬಿಟ್ಟಿದ್ದಾರೆಂದು ಅನಿಸುತ್ತದೆ. ಲಿಂಗಣ್ಣನಾಯಕನನ್ನು ಒಪ್ಪಿಸಿ ಆದಷ್ಟು ಬೇಗ ರಾಜ್ಯದೊಳಕ್ಕೆ ಬರುವುದಾಗಿ ಹೇಳಿ ಅವಳು ಮರೆಯಾಗುತ್ತಾಳೆ ಆಮೇಲೆ ಉಗ್ರ ಚೆನ್ನವೀರದೇವ ಸ್ವಾಮಿಗಳು, ಮುದ್ದಣ್ಣನಾಗತಿ, ಭರಮಣ್ಣ ಹಾಗೂ [illegible] ಇಚ್ಛೆಯಂತೆ ಲಿಂಗಣ್ಣನಾಯಕ ರಾಜ್ಯವನ್ನು ಒಪ್ಪಿಸಿಕೊಳ್ಳುತ್ತಾನೆ. ಆಗ ಗಿರಿಜವ್ವೆಯು ಬಹು ದೂರ ಉಳಿದಂತೆ ಭಾಸವಾಗುತ್ತದೆ.

ಗಿರಿಜವ್ವೆ ಬುದ್ಧಿವಂತಳಾಗಿದ್ದಳೋ, ನಾಗತಿಯ ನೆರಳಾಗಿದ್ದಳೋ [illegible]. ಆದರೆ ಗಿರಿಜವ್ವೆಯ [illegible] ಕಾದಂಬರಿಯ [illegible] ಭಾಗವಲ್ಲ.

ಇವಳು ಹಳ್ಳಿ ಹಳ್ಳಿಗಳಲ್ಲಿ ಅಪಪ್ರಚಾರ ಮಾಡುತ್ತಾಳೆ. ಅವಳನ್ನು ಹುಡುಕಿ ಚಿಕ್ಕಣ್ಣ (ಮುದ್ದಣ್ಣನ ಸಹೋದರ) ನಿರಾಶನಾಗಿದ್ದಾನೆ. ಏನಾದರೂ ಮಾಡಿ ಅವಳ ಪತ್ತೆ ಹಚ್ಚಿ, ಅವಳ ಸಂಚನ್ನು ಬಯಲಿಗೆಳೆಯಬೇಕೆನ್ನುವನು.

ಒಂದು ದಿನ ಮುದ್ದಣ್ಣ, ಚಿಕ್ಕಣ್ಣ ಆಂತರಿಕ ವಿಷಯವನ್ನು ಮಾತಾಡುತ್ತಿದ್ದರು. ಆಗ ವಾತಾಯನದತ್ತ ನೋಡಿದರೆ ಹೊರಗೆ ಹರಡಿದ ಕತ್ತಲಿನಲ್ಲಿ ಸ್ಪಷ್ಟವಾಗಿ ಮುಖ ಕಾಣಿಸದ ಕೆದರಿದ ಕೂದಲು ಹರಡಿದ, ನೋಡಿದ ಕೂಡಲೆ ಭೀತಿ ಕವಿಸುವ ಹೆಣ್ಣು ಮೊಗವೊಂದು, ಅವರನ್ನೇ ತಿನ್ನುವಂತೆ ಇಣಿಕಿ ನೋಡುತ್ತಿತ್ತು. ಅವರು "ಯಾರು ನೀನು" ಎಂದು ಕೇಳಲು "ನಾನೇ, ನಾನೇ ನಿನ್ನ ಸಾವು" ಎಂದು ಆಸ್ಫೋಧ್ವನಿ ಮರುಗಳಿಗೆಯೇ ನಕ್ಕು ಹೇಳುತ್ತದೆ. ತಾನು ಅವನು ಕೊಂದ ನಾಗತಿಯ ನೆರಳು ಎಂದು ಹೇಳುವಳು. ಅವಳು ಹುಚ್ಚಿ ಎಂದು ಹಿಡಿಯಲು ಪ್ರಯತ್ನಿಸಿ ವಿಫಲರಾಗುವರು.

ಇನ್ನೊಂದು ಸಲ ಲಿಂಗಣ್ಣನಾಯಕನು ಓಬ್ಬವ್ವನಾಗತಿಯ ಸಮಾಧಿಯ ಬಳಿಗೆ ಪ್ರತಿ ನಿತ್ಯದಂತೆ ಹೊರಡುವನು. ಆ ದಿನ ಅವನು ಬೆಂಗಾವಲ ಸೈನಿಕರಿಗೆಲ್ಲ ಬೇಡ ಎಂದೂ ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳಲು ಸಮರ್ಥನಿರುವುದಾಗಿ ತಿಳಿಸಿ ತಟ್ಟೆ ಹಿಡಿಯುವ ಓರ್ವ ದಾಸಿಯೊಂದಿಗೆ ಸಮಾಧಿಯ ಬಳಿಗೆ ಹೋಗುವನು. ಆಗ ಅಲ್ಲಿ ಕುಳಿತ ಅವನನ್ನು ದಾಸಿ ಭೀತಸ್ವರದಲ್ಲಿ 'ಪ್ರಭೂ...ಪ್ರಭೂ' ಎಂದು ಕೂಗಿ ಭೀತಿವಶಳಾಗಿ ನಡುಗುತ್ತಿದ್ದ ಅವಳು ಮಾತನಾಡಲೂ ಆಗದೆ ಅಷ್ಟು ದೂರದ ಮಾವಿನ ಮರದಡಿಯಲ್ಲಿ ಚಲಿಸದೆ ನಿಂತ, ಬಿಳಿಯ ಬಣ್ಣದ ಬಟ್ಟೆ ಧರಿಸಿದಂಥ ಮನುಷ್ಯಾಕೃತಿಯತ್ತ ಕೈ ತೋರಿಸುವಳು. ಆಗ ನಾಯಕನು ಅದು ಯಾರಿರಬೇಕೆಂದು ನೋಡಿಯೇ ಬಿಡುವುದಾಗಿ ಹೇಳಿ ಮರದ ಕೆಳಗೆ ನಿಂತಿದ್ದಾಕೆಯ ಸಮೀಪಕ್ಕೆ ಹೋಗುವನು. ಆಗ ಅವನಿಗೇ ಅಚ್ಚರಿಯಾಗುವಂತೆ ಅವಳು ಗಿರಿಜೆಯಾಗಿದ್ದಳು.

ಕಸ್ತೂರಿನಾಯಕನ ದಂಪತಿ ಗೌರವ್ವೆಯ ತಮ್ಮ, ದೊರೆ ನಾಯಕನು ತನ್ನ ಭಾವನು ತನ್ನ ತಲೆಯನ್ನು ಕತ್ತಿಗೆ ಕೊಟ್ಟ ನಂತರದಲ್ಲಿ ಅಕ್ಕನ ಸಾವು ಕಂಡು ಅದಕ್ಕೆ ಪ್ರತೀಕಾರ ಮಾಡಲು ಅರಮನೆಯ ಊಳಿಗಕ್ಕೆ ಸೇರಿರುತ್ತಾನೆ. ಅವನು ಲಿಂಗಣ್ಣ ನಾಯಕರಿಗೆ ಗಿರಿಜೆಯ ಕುರಿತು ಹೇಳುವ ಮಾತುಗಳು ಮನನೀಯವಾಗಿವೆ. "ಗಿರಿಜವ್ವೆಯೇ ಆ ಹೆಣ್ಣಿನ ಮುಂದೆ ನಮ್ಮಂಥ ಗಂಡಸರು ಹುಲ್ಲುಕಡ್ಡಿ. ಆ ಎದೆಗಾರಿಕೆ ನಮಗೆ ಸಾಧ್ಯವಿಲ್ಲ." ಪ್ರಧಾನಿಗಳ ಮನೆಗೇ ನುಗ್ಗಿ ಅವರನ್ನು ಬೆದರಿಸಿ ಅವರ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿದವಳಂತೆ, ಅಷ್ಟೇ ಅಲ್ಲ ದಳವಾಯಿಗಳ ವಿರುದ್ಧ ಹಳ್ಳಿಯ ಜನರನ್ನು ಎತ್ತಿ ಕಟ್ಟಿದಾಕೆ ಗಿರಿಜೆಯೇ ಎಂದು ತಿಳಿದುದರಿಂದಲೇ ಅವರಿಗೆ ಅವಳ ಮೇಲೆ ಅಷ್ಟು ರಚ್ಚು ಇದೆ ಎಂದು ದೊರೆ ನಾಯಕ ತಿಳಿಸುತ್ತಾನೆ.

ಹೀಗೆ ಭೂತವೆಂದು ಜನರೆಲ್ಲ ಹೆದರುವ ಈ ಅವತಾರ ಏಕೆಂದು ಲಿಂಗಣ್ಣ ನಾಯಕ ಕೇಳಲು ಅವಳು "ಸದ್ಯಕ್ಕೆ ಇದೊಂದೇ ಅವತಾರವೇ ನನಗೆ ಉಳಿದಿರುವುದು"

ಎಂದು ಕಪಿ ನಿರಾಶೆಯ ಧ್ವನಿಯಲ್ಲಿ ತಿಳಿಸುವಳು. ಮತ್ತೆ ಲಿಂಗಣ್ಣನಾಯಕ ಕಾರಣ ಕೇಳಲು ಅವಳು ಆಡಿದ ಆ ಮಾತಿನಲ್ಲಿ ಹೆಚ್ಚು ಸ್ಪಷ್ಟವಾದಿತ್ವವಿದೆ ಆದರ್ಶವ್ಯಕ್ತಿಯಾಗಿ ಚಿತ್ರಿತವಾದ ಗಿರಿಜೆಯ ಖಂಡಿತವಾದಿತ್ವವೂ ಗೋಚರಿಸುತ್ತದೆ. ಅವಳು "ನೀವು ಬದುಕಿದವರನ್ನು ಸತ್ತವರನ್ನು ಎಲ್ಲರನ್ನು ಮರೆತು ದಳವಾಯಿಯ ಕೈ ಗೊಂಬೆಯಾದ ಮೇಲೆ ನಾವು ಬದುಕಿದ್ದೂ ಪ್ರೇತಗಳಾಗದೆ ಮತ್ತೇನು ಮಾಡುವುದು? ಬದುಕಿದವರಂತೆ ಬೆಳಕಿನಲ್ಲಿ ಓಡಾಡಲು ದಳವಾಯಿಗಳ ಹೆದರಿಕೆ. ನಾಯಕರ ರಕ್ಷಣೆ ತಪ್ಪಿದ ನಮಗೆ ಈ ಇರುಳು ಬದುಕೊಂದೇ ಉಳಿದಿರುವುದು" ಎಂದು ಲಿಂಗಣ್ಣನಾಯಕನನ್ನು ಜಾಗೃತನನ್ನಾಗಿ ಮಾಡಿ "ದಳವಾಯಿಯ ವಿಷಯದಲ್ಲಿ ಎಚ್ಚರವಾಗಿರಿ. ನೀವು ಪಟ್ಟಕ್ಕೆ ಬಾರದ್ದು ಏಕೆ ಎಂದು ಮರೆಯಬೇಡಿ. ಸೇಡನ್ನು ನೀವು ಮರೆತರೂ ಮುದ್ದಣ್ಣ ಮರೆತಿಲ್ಲ. ಹೊತ್ತು ಕಾಯುತ್ತಿದ್ದಾನೆ. ಅವನನ್ನು ನೀವು ಅಂಕೆಯಲ್ಲಿಡದೆ ಹೋದರೆ ನಿಮ್ಮ ನೆತ್ತಿಗೇ ಆಪತ್ತು ಕವಿಯುತ್ತದೆ" ಎಂದು ವಿವರಗಳನ್ನೆಲ್ಲ ತಿಳಿಸುತ್ತಾಳೆ. ಅಲ್ಲದೆ ಅಂಗರಕ್ಷರರಲ್ಲಿ ಹೊರೆ ನಾಯಕನೆಂಬುವವನು ತಮ್ಮ ಕಡೆಯವನೆಂದು ಹೇಳುವಳು. ವೇಗವಾಗಿ ನಡೆದು ಕತ್ತಲಲ್ಲಿ ಕರಗಿ ಹೋಗುವಳು. ಗಿರಿಜೆಯ ಜೀವನ ಅಸಾಮಾನ್ಯವೆನಿಸುತ್ತದೆ. ರಾಷ್ಟ್ರಕ್ಕಾಗಿ, ರಾಜ್ಯ ಭಕ್ತಿಗಾಗಿ ಎಂಥೆಂಥ ಜೀವಿಗಳು ತಮ್ಮನ್ನು ಎಷ್ಟು ರೀತಿಯಿಂದ ಬಲಿದಾನ ಮಾಡಿದ್ದಾರೆಂಬುದನ್ನು ತ.ರಾ.ಸು. ತುಂಬ ಮನದಟ್ಟಾಗಿ ಚಿತ್ರಿಸಿದ್ದಾರೆ.

ರಕ್ತರಾತ್ರಿಯಲ್ಲಿ ಮತ್ತೊಂದು ಸ್ತ್ರೀಪಾತ್ರವೆಂದರೆ ಲಿಂಗಣ್ಣನಾಯಕನನ್ನು ಸ್ತ್ರೀ ವ್ಯಾಮೋಹದಲ್ಲಿ ತೊಡಗಿಸಬೇಕೆಂದು ಸಜ್ಜೆ ಮನೆಗೆ ರಾತ್ರಿಯಲ್ಲಿ ಮಿಂಚು ಕೋರೈಸಿದಂತಾಗುವ ಹೆಣ್ಣು ಮಗಳೊಬ್ಬಳನ್ನು ಕಳಿಸುತ್ತಾನೆ ಉಡುಗೊರೆಯಾಗಿ ಐತಿಹಾಸಿಕ ಘಟನೆಗಳಿಂದ ಇಡಿಕಿರಿದ ಈ ಕಾದಂಬರಿಯಲ್ಲಿ ತ.ರಾ.ಸು. ಅವರಿಗೆ ಎಲ್ಲಿಯೂ ಸ್ತ್ರೀ ಅಂಗಾಂಗಗಳ ವರ್ಣನೆಗೆ ಅವಕಾಶವಿಲ್ಲವಾದರೂ ಇಲ್ಲಿ ಇವಳ ವರ್ಣನೆ ಬಂದಿದೆ. "ಆದರೆ ಈ ಬಗೆಯ ಸೌಂದರ್ಯವನ್ನು ಮಾತ್ರ ಆತ ಎಂದಿಗೂ ಕಂಡಿರಲಿಲ್ಲ. ನಾಯಕನ ಎದುರಿಗೆ ನಿಂತದ್ದು ಬರೀ ಸೌಂದರ್ಯವೇ ಅಲ್ಲ ಅಷ್ಟು ದೂರದಲ್ಲಿದ್ದರೂ ಬರಿ ವಾಸನೆಯಿಂದಲೇ ಮತ್ತೇರಿಸುವ ಮದ್ಯದಂತಿತ್ತು. ಆ ರೂಪ ವೈಭವ ಆ ಮುಖ ಆ ಕಣ್ಣು ನೀಳ ಕೇಶರಾಶಿ, ಉಟ್ಟ ಬಹು ನವಿರಾದ ಬಟ್ಟೆಯೊಳಗಿನಿಂದ, ಆ ಅರೆ ಮರೆಯಿಂದ ಮತ್ತಷ್ಟು ಉಜ್ವಲವಾಗಿ ಕಾಣುವ ಅಂಗ ಸೌಷ್ಠವ, ನಸು ಕೆಂಪು ಹಣೆಯ ಮೇಲಾಡುವ ಕುರುಳ ಕುಡಿಯಿಂದ, ಹರಳಿನ ಕಾಲುಂಗರ ಧರಿಸಿದ, ಅಲತ್ತಿಗೆಯ ಬಣ್ಣದಿಂದ ಕೆಂಪಾದ ಪಾದದಲ್ಲಿನವರೆಗೆ ಎದೆಗೆಡಿಸುವ ಮನೋಹರ ಕಲಾಕೃತಿ ಆಕೆ ಹೆಣ್ಣಲ್ಲ, ವಿಲಾಸದ ಜಲಪಾತ ಯಾವ ಎದೆಯೂ ಅದರಿದಿರು ಉರುಳಿ ಬೀಳದೆ ನಿಲ್ಲಲಾರದು ಎನಿಸಿತು. ತನ್ನೆದುರು, ತನ್ನ ಅಂಗ ಸೌಷ್ಠವನ್ನು ಮತ್ತಷ್ಟು ಕೆರಳಿಸುವ ರೀತಿಯಲ್ಲಿ, ಕಾಣಿಸುವ ಭಂಗಿಯಲ್ಲಿ ನಿಂತ ಆ ಹೆಣ್ಣನ್ನು ನೋಡಿ ಲಿಂಗಣ್ಣನಾಯಕನ ಮನಸ್ಸು ರತಿ ಕೇಳಿಯ ಜೀವಂತ ಆಹ್ವಾನದಂತಿದ್ದ ಆ ರೂಪಾಗ್ನಿಯ

ಎದುರಿನಲ್ಲಿ ಮೇಣದ ಬೊಂಬೆ ಯಂತಾಯಿತು." ಆದರೆ ಒಂದು ಗಳಿಗೆ ಮಾತ್ರ ಈ ವಿಸ್ಮೃತಿ ಮರುಕ್ಷಣದಲ್ಲಿ ಎಚ್ಚೆತ್ತ ಲಿಂಗಣ್ಣನಾಯಕ ಮುದ್ದಣ್ಣನಿಗೆ ತಾನು ಪ್ರಧಾನಿ ಪಟ್ಟವನ್ನು ಕೊಟ್ಟದ್ದು ರಾಜ್ಯವಾಳಲು ವಿನಃ ನಾಯಕರ ತಲೆ ಒಡೆಯ-ಲಿಕ್ಕಲ್ಲ ಎಂದು ಹೇಳಿದ್ದು ತಿಳಿಸುವಲ್ಲಿ ಇಂಥ ಹೆಣ್ಣುಗಳನ್ನು ಗಂಡಸರ ತಲೆ ಒಡೆಯುವ ಸಲುವಾಗಿ ಬಳಸುತ್ತಾರೆಂದು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾನೆ. ಅಷ್ಟೇ ಅಲ್ಲ ಬಂದವಳನ್ನು ತಾಯಿ ಎಂದು ಸಂಬೋಧಿಸಿ ಅವಳಿಗೆ ಉಪದೇಶಪರ ಮಾತುಗಳನ್ನು ಆಡುತ್ತಾನೆ. "ದೇವರು ನಿಮಗೆ ಯುಕ್ತ ಹಸ್ತದಿಂದ ಸೌಂದರ್ಯವನ್ನು ನೀಡಿದ್ದಾನೆ. ಈ ರೂಪವನ್ನು ಯಾವ ಆಮಿಷಕ್ಕೂ ಬಲಿಯಾಗಿ ನಾಯಿ ಕೊರಳ ಹೂ ಮಾಲೆಯನ್ನಾಗಿ ಮಾಡಬೇಡ" ಎಂದು ತಿಳಿ ಹೇಳಲು ಅವಳು ಹೆದರಿ ಬಂದುದರಿಂದ ಅವಳು ನಮಸ್ಕರಿಸುವಾಗ ದುಃಖದ ಕಣ್ಣೀರು ಲಿಂಗಣ್ಣನ ಪಾದದ ಮೇಲೆ ಬೀಳುತ್ತವೆ. ಈ ಸಂದರ್ಭ ಲಿಂಗಣ್ಣನ ಪಾತ್ರವನ್ನು ಎತ್ತರಕ್ಕೆ ಒಯ್ದಿದೆ. ಇಲ್ಲಿ ಬರುವ ಹೆಣ್ಣು ಸಾಮಾನ್ಯ ಸ್ತ್ರೀ ಯಾದರೂ ಅಂದಿನ ಜೀವನದಲ್ಲಿ ರೂಪವಂತ ಸ್ತ್ರೀಯರ ಪಾಡು ಹೇಗಿತ್ತೆಂಬುದಕ್ಕೆ ನೇರ ನಿದರ್ಶನವಾಗಿ ನಿಂತಿದೆ.

ಇನ್ನೊಂದು ಚಿಕ್ಕ ಸ್ತ್ರೀ ಪಾತ್ರವೆಂದರೆ ಲಿಂಗಣ್ಣನ ಸೆಜ್ಜೆ ಊಳಿಗದ ದಾಸಿಯದು. ಈ ದಾಸಿಯನ್ನು ಮುದ್ದಣ್ಣ ರೋಷೋನ್ಮತ್ತನಾಗಿ ನೆಲಮನೆಯ ಕಂಬಕ್ಕೆ ಬಿಗಿದು ಚಾಟಿಯ ಏಟಿನಿಂದ ಮೈಯಲ್ಲೆಲ್ಲಾ ನೆತ್ತರು ಬಸಿಯುವ ಹಾಗೆ ಬಡಿದು "ನಾಯಿ, ಬಾಯಿ ಬಿಡುತ್ತೀಯೋ ಇಲ್ಲವೆ ನಿನ್ನ ನಾಲಿಗೆಯನ್ನೇ ಸೀಳಬೇಕೊ?" ಎಂದು ಕೇಳಿದರೂ ಅವಳು ಬಾಯಿ ಬಿಡಲಿಲ್ಲ ದಾಸಣ್ಣನೆಂಬ ಸೇವಕನಿಂದ ಮತ್ತೆ ಅವಳಿಗೆ ಬಿಗಿದ ಚಾವಟಿಯಿಂದಾಗಿ ಅವಳ ದೇಹ ಭಾಗದಲ್ಲಿ ಅಷ್ಟು ಉದ್ದಕ್ಕೂ ಕಪ್ಪನೆಯ ಬಾಸುಂಡೆ ಮೂಡಿ ಚಾವಟಿಯ ಗಂಟುಗಳು ಚರ್ಮವನ್ನು ಹರಿದು ಎಡೆಯಲ್ಲಿ ಹನಿ ಹನಿಯಾಗಿ ನೆತ್ತರು ಬಸಿಯಿತು. ಅವಳ ಬಾಯಿ ಬಿಡಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಅವಳು "ನಾಯಕರ ಉಪ್ಪಿಗೆ ನಾನು ದ್ರೋಹ ಬಗೆಯುವುದಿಲ್ಲ" ಎಂದು ಏನು ಕೇಳಿದರೂ ತನಗೆ ಗೊತ್ತಿಲ್ಲವೆಂದೇ ಹೇಳುವಳು. ಆಗ ಅತಿ ರೊಚ್ಚಿಗೆದ್ದ ಮುದ್ದಣ್ಣ ದಾಸಣ್ಣನಿಗೆ ಅವಳ ಮೇಲೆ ಬೇಟೆ ನಾಯಿ ಬಿಡಲು ತಿಳಿಸುವನು ಹೀಗೆ ಅವಳ ದೇಹ ನಾಯಿಪಾಲಾದರೂ ಅವಳು ರಹಸ್ಯವನ್ನು ಬಯಲು ಮಾಡದಿರುವುದನ್ನು ನೋಡಿದರೆ ಅವಳ ಸ್ವಾಮಿ ಭಕ್ತಿ ಪರಾಕಾಷ್ಠೆಯನ್ನು ಮುಟ್ಟಿದೆ ಎನ್ನಬೇಕು. ಹೀಗೆ ಸಾಮಾನ್ಯ ದಾಸಿಯಾದರೂ ಪ್ರಾಣ ತೆತ್ತು ಸ್ವಾಮಿ ಭಕ್ತಿಯನ್ನು ಮೆರೆದಿದ್ದಾಳೆ.

ಮಲ್ಲವ್ವನಾಗತಿ

ಹಟ್ಟಿ ಮಲ್ಲವ್ವನಾಗತಿ ಚಿಕ್ಕಣ್ಣನಾಯಕನ ಮಡದಿ ಅವರು ಇರುವಾಗಲೇ ಒಮ್ಮೆ ಪಡೆದ ಶಿವದೀಕ್ಷೆಯನ್ನು ನಾಯಕರು ಚಂಚಲ ಚಿತ್ತರಾದುದರಿಂದ ಅವರು ತ್ಯಜಿಸಿದರೂ ಇವಳು ಧರ್ಮವನ್ನು ಬಲಿಗೊಡಲು ಸಿದ್ಧಳಾಗಲಿಲ್ಲ. ಹೀಗಾಗಿ

ಇವಳು ನಾಯಕನ ಕೋಪಕ್ಕೆ ಗುರಿಯಾಗಿ ಅರಮನೆಯಿಂದ ದೂರಾದರೂ ಗುರು ಮನೆಗೆ (ಮಠಕ್ಕೆ) ಸಮೀಪವಾಗಿ ಬೇರೆ ಗೃಹದಲ್ಲಿ ವಾಸಮಾಡಬೇಕಾಗಿ ಬಂದಿತು.

ಚಿಕ್ಕಣ್ಣನಾಯಕರ ಮರಣಾನಂತರದಲ್ಲಿ ಅಪರ ಮುಖ್ಯ ರಾಣಿಯರೆಲ್ಲ ಸಹ–ಗಮನ ಮಾಡಿದರೂ ಮಲ್ಲಮ್ಮನಾಗತಿ ಒಬ್ಬಳು ಹಾಗೆ ಉಳಿದು ಕೊಂಡಿದ್ದಳು. ಪಟ್ಟಕ್ಕೆ ರಂಗಣ್ಣನಾಯಕನನ್ನೇ ತರಬೇಕೆಂದು ಹೇಳುವ ಅಧಿಕಾರ ಅವಳಿಗೆ ಮಾತ್ರ ಇರುತ್ತದೆ ಎಂದು ಆತ ಪರಶುರಾಮಪ್ಪ ಅವಳನ್ನು ಕಾಣಲು ಅವಳ ಅರಮನೆಗೆ ಬಂದರೂ ಅವಳು ಕಲ್ಲಿಮಠಕ್ಕೆ ಹೋದುದರಿಂದ ಅಲ್ಲಿಗೇ ಹೋಗಿ ಇದ್ದ ಸಂಗತಿಯನ್ನು ಸ್ವಾಮಿಗಳ ಮುಖಾಂತರ ಅವಳಿಗೆ ತಿಳಿಸುತ್ತಾನೆ. ನಾಗತಿ ಆಡುವ ಮೊದಲ ಮಾತಿನಿಂದಲೇ ಅವಳ ಸಾಂಪ್ರದಾಯಿಕ ಮನೋಭಾವನೆಯನ್ನು ಅರಿತು ಕೊಳ್ಳುತ್ತೇವೆ. "ನಮ್ಮ ಮನೆಯಲ್ಲೇ ಕಂಡಿದ್ದರೂ ಆಗುತ್ತಿದಿತ್ತು" ಎಂದು ನಾಗತಿ ಅಂದಾಗ ಗುರುಗಳು–"ಅದಕ್ಕೇನು ಅರಮನೆಯ ಮಾತು, ಗುರು ಮನೆಯಲ್ಲಿ ನಡೆಯಬಾರದೆ?" ನಾಗತಿ "ನಡೆದರೆ ತಪ್ಪೇನೂ ಇಲ್ಲ ಬುದ್ಧಿ ಆದರೆ ಸ್ನಾನದ ಮನೆಯಲ್ಲೂ ಮೈ ಕೊಳೆಯಾಗಬೇಕೆ?" ಸ್ವಾಮಿಗಳ ಸಲಹೆಯಂತೆ ಮಠದಲ್ಲಿಯೇ ಆಲೋಚನಾ ಸಭೆ ಏರ್ಪಡಿಸುತ್ತಾಳೆ.

ಪರಶುರಾಮಪ್ಪ ಮಲ್ಲಮ್ಮನಾಗತಿಯನ್ನು ಗುರುಮನೆಯಲ್ಲಿ ಕಾಣಲು ಬಂದಾಗ ಅವನ ನೆತ್ತಿಯ ಮೇಲೆ ತನ್ನ ಅಸಮಾಧಾನದ ಮಳೆಗರೆಯುತ್ತಾಳೆ. ತಿರುಗಿ ತನ್ನ ಅರಮನೆಗೆ ಬಂದ ಮೇಲೆ ಬಹುದಿನಗಳಿಂದ ತನ್ನ ಹೃದಯದಲ್ಲಿ ಹುದುಗಿ ಹೊರಗೆ ಬರಲು ಅವಕಾಶವಿಲ್ಲದೆ ಹೊಗೆಯಾಡುತ್ತಿದ್ದ ಅಸಮಾಧಾನವನ್ನು ಗಳಿಗೆಯ ಉದ್ರೇಕಕ್ಕೆ ವಶಳಾಗಿ ಕಿಚ್ಚಿನಂತೆ ಅದನ್ನು ಕಾರಿ ಬಂದು ತನ್ನ ಚಿತ್ತಕ್ಕೂ ಸಮಾಧಾನ ವಿಲ್ಲದೆ ಪರಿತಪಿಸುತ್ತಾಳೆ. ತಾನು ಮಾಡಿದ್ದು ಸರಿಯಾಗಲಿಲ್ಲ. ಯಾರೋ (ನಾಯಕ) ಮಾಡಿದ ತಪ್ಪಿಗೆ ಪರಶುರಾಮಪ್ಪನಿಗೆ ಯಾಕೆ ಈ ಶಿಕ್ಷೆ? ಎಂದು ಅವಳ ಮನಸ್ಸು ಯೋಚಿಸುತ್ತಿತ್ತು. ಉಳಿದೆಲ್ಲ ಭಾವನೆಗಳಿಗಿಂತ ಪರಶಿವನ ಅವತಾರವೆಂದು ಬಗೆದ ಗುರುಗಳ ಮಾತಿಗೂ ತಾನು ಬೆಲೆ ಕೊಡಲಿಲ್ಲವಲ್ಲ ಎಂದು ಅವಳ ಮನಸ್ಸು (ಆ. ರೀತಿಯ) ಹೊಯ್ದಾಟಕ್ಕೆ ಸಿಲುಕಿ ಬಳಲಿ ಹೋಗುತ್ತದೆ. ತಾನು ತಕ್ಷಣ ಗುರುಗಳನ್ನು ಕಂಡು ಕ್ಷಮೆಯಾಚಿಸಬೇಕೆಂದೂ ಯೋಚಿಸುವಳು. ಆದರೆ ಅದು ಗುರುಗಳ ವಿಶ್ರಾಂತಿ ವೇಳೆಯಾದುದರಿಂದ ಸಂಜೆಗೆ ಹೋಗಲು ನಿರ್ಧರಿಸುವಳು.

ಮಲ್ಲಮ್ಮನಾಗತಿ ಕಂಡ ಕನಸು ಮುಂದಿನ ಘಟನೆಗಳಿಗೆ ಕನ್ನಡಿ ಹಿಡಿಯುತ್ತದೆ. ಕನಸಿನಲ್ಲಿ ಒಬ್ಬಳೇ ಗುರುಗಳನ್ನು ಕಾಣಲು ಹೊರಡುವಳು ಯಾರೋ ಕರೆದಂತಾಗುತ್ತದೆ. ಕ್ಷೀಣ ಧ್ವನಿ ಕೇಳಿಸುತ್ತದೆ. ಆ ಕೂಗಿನ ವ್ಯಕ್ತಿ ನೀರಿಗೆ ಹಾರುತ್ತದೆ. ಎರಡು ರೂಪಗಳು ನೀರಿನಲ್ಲಿ ಕಾಣಿಸುತ್ತದೆ. ಒಂದು ಓಬವ್ವನಾಗತಿಯದು ಇನ್ನೊಂದು ಓಬಣ್ಣನಾಯಕನದು ಓಬವ್ವನಾಗತಿ ಇವಳನ್ನು ಕರೆಯುತ್ತಾಳೆ. ಮಲ್ಲಮ್ಮ

ನಾಗತಿ "ಇಲ್ಲ ನಾನು ಬರುವುದಿಲ್ಲ" ಎಂದು ಚೀರುತ್ತ ಹಿಂತಿರುಗುವಳು ಹೀಗೆ ಕನಸು ಬೀಳುತ್ತದೆ.

ಇಂಥ ಕನಸನ್ನು ಕೂಡ ಮಲ್ಲವ್ವನಾಗತಿಯು ಸ್ತ್ರೈ ಬಿವರುತ್ತಾಳೆ. ಭಯದಿಂದ ಚೀರಿದಾಗ ದಾಸಿ ಬಂದು ಏಕೆಂದು ಕಾರಣ ಕೇಳುವಳು. ಆಗ ಅವಳು ಕನಸಿನ ಕುರಿತು ಹೇಳುವಳು. ಬೇಗ ಸ್ನಾನಮಾಡಿಕೊಂಡು ಗುರುಗಳನ್ನು ಕಾಣಲು ಹೊರಡುವಳು.

ಗುರುಗಳ ಕಡೆಗೆ ಹೋದಾಗ ಅವರು "ಇದೇನು ಸುದ್ದಿ ಕಳಿಸದೇ ಬಂದಿರಲ್ಲಾ" ಎಂದು ಚಕಿತರಾಗಿ ಕೇಳುವರು. ಅವಕ್ಕೆ ಅವಳು ತಾನು ಬೆಳಿಗ್ಗೆ ನಡೆದು ಕೊಂಡ ರೀತಿಯಿಂದ ಮನಸ್ಸಿಗೆ ಹಿಂಸೆಯಾಗಿದೆಯೆಂದೂ ಅವರನ್ನು ಕಂಡು ಕ್ಷಮಾಪಣೆ ಕೇಳುವವರೆಗೆ ತನಗೆ ಸಮಾಧಾನವಾಗುವಂತಿರಲಿಲ್ಲವೆಂದೂ ತಿಳಿಸುವಳು. ಇಲ್ಲಿ ಮಲ್ಲವ್ವನಾಗತಿಯ ನಯ, ವಿನಯ, ಭಕ್ತಿ ಭಾವಗಳು ಎದ್ದು ಕಾಣುತ್ತವೆ.

ಆಗ ಗುರುಗಳು ಮಲ್ಲವ್ವನಾಗತಿಯನ್ನು ಪರಶುರಾಮಪ್ಪನವರಲ್ಲಿ ಕ್ಷಮಾಪಣೆ ಕೇಳಲು ಸೂಚಿಸುವರು. ಮಲ್ಲವ್ವನಾಗತಿಯ ಅಭಿಮಾನ ಹೆಡೆಎತ್ತಿ ನಿಲ್ಲುತ್ತದೆ. ಪರಶುರಾಮಪ್ಪನಲ್ಲಿ ತಾನು ಕ್ಷಮೆ ಕೇಳಬೇಕೆ? ಎಂಬುದು ಅವಳಿಗೆ ಸಮಸ್ಯೆಯಾಗಿ ನಿಲ್ಲುತ್ತದೆ. ಗುರುಗಳ ಹಿತೋಪದೇಶದಿಂದ ಅವಳಿಗೆ ನಾಚಿಕೆಯೆನಿಸಿ ಅವರ ಅಪ್ಪಣೆ ಯಂತೆ ನಡೆಯಲು ಒಪ್ಪಿಕೊಳ್ಳುವಳು.

ದುರ್ಗದ ಸಿಂಹಾಸನಕ್ಕೆ ಮುಂದೆ ಯಾರು ಅಧಿಕಾರಿಯಾಗಬೇಕೆಂಬುದನ್ನು ಮಲ್ಲವ್ವನಾಗತಿಯನ್ನು ಕೇಳಲು ಪರುಶುರಾಮಪ್ಪ ಬಂದಿದ್ದನೆಂಬುದನ್ನು ತಿಳಿದ ನಾಗತಿ "ತನಗೂ ಅದಕ್ಕೂ ಏನು ಸಂಬಂಧ" ಎನ್ನುವಲ್ಲಿ ಅವಳು ರಾಜಕೀಯದಿಂದ ಎಷ್ಟು ದೂರವಿದ್ದಾಳೆ ಎಂಬುದು ತಿಳಿಯುತ್ತದೆ. ಗುರುಗಳೇ ಹೇಳಿದಂತೆ ಅವಳು ತಾನು ನಾಗತಿಯೆಂಬುದನ್ನು ಮರೆತಂತಿದೆ ಎನ್ನಿಸುತ್ತದೆ.

ದಳವಾಯಿ ಮುದ್ದಣ್ಣನಿಗೆ "ಬೇಗ ಈ ಸಿಂಹಾಸನಾಧಿಕಾರದ ಪ್ರಶ್ನೆಯನ್ನು ಇತ್ಯರ್ಥಮಾಡಿ, ನಾಯಕರ ಬಳಿಕ ಇಂಥವರು ಪಟ್ಟಕ್ಕೆ ಬರುವುದು ಒಳಿತು" ಎಂದು ಹೇಳಬೇಕೆಂದು ಗುರುಗಳು ತಿಳಿಸಿದಾಗ ಅವಳು ಗಾಬರಿಯಾಗುವಳು. ದಳವಾಯಿ ಮುದ್ದಣ್ಣನೆಂದರೆ ಅವಳ ಅಭಿಪ್ರಾಯದಲ್ಲಿ "ಮನುಷ್ಯನಲ್ಲ ಪಿಶಾಚಿ. ಯಾರ ತಲೆ ತೆಗೆಯಲೂ ಹೇಸುವವನಲ್ಲ ಮತ್ತದಲ್ಲಿರುವ ಹಾವು"

ದಳವಾಯಿ ಮುದ್ದಣ್ಣನ ಹೆಸರು ಕೇಳಿ ಹೆದರಿದ ನಾಗತಿಯನ್ನು ಕಂಡು ಗುರುಗಳು ಅವಳು ಅಷ್ಟು ಹೆದರುವದು ತಪ್ಪೆಂದೂ ದುಷ್ಟರನ್ನು ಕಂಡರೆ ದೂರ ಇರುವುದು ಎಲ್ಲ ಕಾಲದಲ್ಲೂ ಸತ್ಯವಲ್ಲವೆಂದು ಉಪದೇಶಿಸಿ ಕಲ್ಯಾಣದ ಕ್ರಾಂತಿಯ ನೆನಪು ಮಾಡಿ ಕೊಡುತ್ತಾರೆ. ದುಷ್ಟರನ್ನು ಋಜು ಮಾರ್ಗಕ್ಕೆ ತರಲು ಪ್ರಯತ್ನಿಸ ಬೇಕೆಂದು ಹೇಳುವರು.

ನಾಗತಿಗೆ ತಾನು ಈ ಪಟ್ಟದಿಂದ ದೂರವಿದ್ದರೇನೆ ಚೆನ್ನಾಗಿರುತ್ತಿತ್ತು ಅನ್ನಿಸದೆ ಇರುವುದಿಲ್ಲ. ಗುರುಗಳಿಗೆ ತನ್ನ ಕನಸನ್ನು ಹೇಳುತ್ತಾಳೆ. ಆದರೆ ಗುರುಗಳು ಕನಸಿನ ಅರ್ಥ ಬಿಡಿಸಿ ಹೇಳಿದರೂ ಒಗಟಿನಂತೆ ಇಡುವರು. ನಾಗತಿ ಮುದ್ದಣ್ಣನಿಗೆ ಹೇಳಲು ಒಪ್ಪಿಕೊಂಡು ಅಲ್ಲಿಂದ ಹೊರಡುವಳು.

ಮಠದ ಸಭಾ ಗೃಹದಲ್ಲಿ ಆಲೋಚನಾ ಸಭೆ ನೆರವೇರುತ್ತದೆ. ಪರಶುರಾಮಪ್ಪ ದಳವಾಯಿ ಭರಮಣ್ಣ ಕುಳಿತುಕೊಂಡು ದಳವಾಯಿ ಮುದ್ದಣ್ಣ ಬರುವ ದಾರಿಯನ್ನೇ ಕಾಯುತ್ತಿದ್ದರು. ಅಲ್ಲಿಯೇ ದೂರದಲ್ಲಿದ್ದ ಪೀಠದ ಮೇಲೆ ನಾಗತಿ ಅವಗುಂಠನವತಿಯಾಗಿ ಕುಳಿತು ಕೊಂಡಿದ್ದಳು. ಅಲ್ಲಿಗೆ ಸ್ವಾಮಿಗಳೂ ಬರುತ್ತಾರೆ. ಮುದ್ದಣ್ಣನೂ ಬರುವನು. ಗುರುಗಳಿಗೆ ಕಾಣಿಕೆ ಅರ್ಪಿಸಿ ಕುಳಿತು ಕೊಳ್ಳುವನು ಗುರುಗಳು ಕಾಣಿಕೆಯನ್ನು ಹಿಂತಿರುಗಿಸುವರು.

ದಳವಾಯಿ ಮುದ್ದಣ್ಣ ಕಪಟ ತನದಿಂದ ತಾಯಿಯಂತೆ ಮಲ್ಲವ್ವನಾಗತಿ ಇದ್ದಾಳೆ. ತನಗೆ ಯಾವ ಸಂಕೋಚವಿಲ್ಲದೆ ಹೀಗೆ ಮಾಡಬೇಕು ಎಂದು ಹೇಳಿ ಕಳುಹಿಸಿದ್ದರೂ ತಾನು ಹಾಗೆ ಮಾಡಬಹುದಾಗಿತ್ತು ಎಂದು ತನಗೆ ನಾಗತಿಯ ಬಗ್ಗೆ ಇರುವ ವಿಶ್ವಾಸವನ್ನು ವ್ಯಕ್ತಪಡಿಸುವನು. ಈ ಸಭೆಯಲ್ಲಿ ನಾಗತಿ ಕೊನೆಗೂ ಧೈರ್ಯ ಮಾಡಿ ಮುದ್ದಣ್ಣನ ಮುಂದೆ ತನ್ನ ಮೈದುನ ಲಿಂಗಣ್ಣನಾಯಕನನ್ನು ಸಿಂಹಾಸನಕ್ಕೆ ತರಬೇಕೆಂದು ಹೇಳುವಳು.

ಮುಂದೆ ಅಶ್ವಯುಜ ಮಹರ್ನವಮಿಯಂದು ಪಟ್ಟಾಭಿಷೇಕವಾಗಿ ಲಿಂಗಣ್ಣ ನಾಯಕರು ಮುಮ್ಮಡಿ ಮದಕರಿನಾಯಕರೆಂದು ದುರ್ಗದ ಒಡೆಯರಾದರು. ಆದರೇನು ? ನಾಗತಿಯನ್ನು ಪಟ್ಟಾಭಿಷೇಕದ ಕಾಲದಲ್ಲಿ ಯಾರೂ ಮಾತನಾಡಿಸಲಿಲ್ಲ. ಲಿಂಗಣ್ಣನಾಯಕನೂ ಪಟ್ಟಾಭಿಷೇಕವಾದಮೇಲೆ ಬಂದು ಕಾಣಲಿಲ್ಲ. ಅಷ್ಟೇ ಅಲ್ಲ ಇವಳನ್ನು ಅಲ್ಲಿಗೆ ಕರೆಸಿ ಕೊಳ್ಳಲೂ ಇಲ್ಲ. ಹೀಗಾಗಿ ನಾಗತಿಯ ಮನಸ್ಸು ಕೆರಳುತ್ತದೆ. ತನ್ನ ಹೇಳಿಕೆಯಿಂದಾಗಿಯೇ ಲಿಂಗಣ್ಣನಾಯಕನಿಗೆ ಪಟ್ಟ ದೊರೆಯಿತೆಂದು ಅವಳು ಭಾವಿಸುತ್ತಾಳೆ. ಲಿಂಗಣ್ಣನಾಯಕನು ಅರಸನಾದ ಮೇಲೆ ತಾನು ಅರಮನೆಯಲ್ಲಿ ಹಿರಿಯ ಹೆಂಗಸಾಗಿ ಓಡಾಡಬೇಕೆಂದು ಎಲ್ಲ ಹೆಣ್ಣು ಮಕ್ಕಳಂತೆ ನಾಗತಿಯೂ ಬಯಸಿದುದರಿಂದ ಅವಳು ಸಹಜ ಸ್ತ್ರೀಯರ ಸಾಲಿಗೆ ಸೇರುವಳು. ಚಿಕ್ಕಣ್ಣನಾಯಕನ ಕಾಲದಲ್ಲಿ ಸ್ವಲ್ಪ ದಿನ ಅನುಭವಿಸಿ ಬಳಿಕ ತಪ್ಪಿ ಹೋದ ಅರಮನೆಯ ಜೀವನದ ಬಯಕೆ ಅವಳಲ್ಲಿ ಮತ್ತೆ ಚಿಗುರುವುದರಿಂದಲೇ ಲಿಂಗಣ್ಣನಾಯಕರು ಸಮರ್ಥನ ವ್ಯಕ್ತಿಯಾಗಿ ರಾಜ್ಯಭಾರ ಮಾಡಬೇಕಾದರೆ ಅವನಿಗೆ ಮದುವೆಯಾಗಬೇಕೆಂದು ಗುರುಗಳಾದ ಉಗ್ರ ಚನ್ನವೀರಸ್ವಾಮಿಗಳು ಹಾಗೂ ಪರಶುರಾಮಪ್ಪ ಭಾವಿಸುವರು. ಈ ಲಗ್ನದ ವಿಷಯವನ್ನು ನಾಗತಿಯ ಕಡೆಯಿಂದ ಲಿಂಗಣ್ಣನಿಗೆ ಹೇಳಿಸಬೇಕೆಂದು ವಿಚಾರ ಮಾಡುತ್ತಾರೆ. ಅವಳೂ ಒಪ್ಪುತ್ತಾಳೆ. ಏಕೆಂದರೆ ತನ್ನ ಮಾತನ್ನು ಕೇಳುವ, ನಾಯಕನನ್ನು ಹತೋಟಿಯಲ್ಲಿಟ್ಟು ಕೊಳ್ಳ ಬಲ್ಲಂಥ ತನ್ನ ಕಡೆಯ ಹುಡುಗಿಯೊಬ್ಬಳನ್ನು

ತಂದು ನಾಯಕನಿಗೆ ವಿವಾಹ ಮಾಡಿದರೆ, ಆ ಮೂಲಕವಾದರೂ ತಾನು ಮತ್ತೆ ಅರಮನೆಯಲ್ಲಿ ಹಿರಿಯನಾಗತಿ ಪಟ್ಟಕ್ಕೆ ಹತ್ತಿ ಹತ್ತು ಜನ ತನ್ನ ಮಾತು ಕೇಳುವಂತೆ ಮಾಡಬಹುದು ಎಂದು ಕೊಳ್ಳುತ್ತಾಳೆ. ಈ ಸಂದರ್ಭದಿಂದ ನಾಗತಿ ನಮಗೆ ಬಹು ಸ್ವಾರ್ಥಿಯಂತೆ ಕಾಣುವಳು.

ಗುರುಗಳು ನಾಯಕರ ಮದುವೆಯ ವಿಷಯದಲ್ಲಿ ನಾಗತಿಗೆ ಹೆಚ್ಚಿನ ಲಕ್ಷ್ಯ ತೆಗೆದುಕೊಳ್ಳಬೇಕೆಂದು ಹೇಳಿದಾಗ ನಾಗತಿ ಗುರುಗಳ ಮುಂದೆ ಬಹು ದಿನಗಳಿಂದ ತನ್ನ ಮನಸ್ಸಿನಲ್ಲಿ ಸಂಗ್ರಹಿಸಿಟ್ಟುಕೊಂಡುದನ್ನು ದ್ವೇಷದಿಂದ ಹೇಳುವಳು ಅದೇ ಲಿಂಗಣ್ಣನಾಯಕನು ಪಟ್ಟಕ್ಕೆ ಬಂದ ಮೇಲೆ ತನ್ನನ್ನೂ ಗುರುಗಳನ್ನೂ ಅಲಕ್ಷಿಸಿದುದು. ಮೊದಲಾದುದೆಲ್ಲವನ್ನು ಪಟ್ಟಾಭಿಷೇಕ ಕಾಲದಲ್ಲಿ ತಮ್ಮನ್ನು ಅರಮನೆಗೆ ಕರೆಸಿ ಪಾದಪೂಜೆ ಮಾಡಬಹುದಾಗಿತ್ತು. ಹಿಂದಿನ ನಾಯಕರ ಕಾಲದಲ್ಲಿ ನಿಮಗೆ ಅಷ್ಟು ದಿನ ನಡೆದು ನಿಂತು ಹೋದ ರಾಜ ಮರ್ಯಾದೆಗಳನ್ನೆಲ್ಲಾ ಮತ್ತೆ ನಡೆಸ ಬಹುದಾಗಿತ್ತು "ಇಷ್ಟು ನೀವು ಅವರ ಸಲುವಾಗಿ ದುಡಿದುದಕ್ಕೆ ಆ ಉಪಕಾರವನ್ನಾದರೂ ನೆನೆಸಿಕೊಂಡರೆ ನಾಯಕರು ? ಅದೆಲ್ಲಾ ಹೋಗಲಿ, ನಿಮ್ಮ ಅನುಗ್ರಹ, ಆಶೀರ್ವಾದದಿಂದ ಪಟ್ಟಕ್ಕೆ ಬಂದ ಮೇಲೆ ಇತ್ತ ಕಡೆಗೆ ಒಂದು ಬಾರಿಯಾದರೂ ತಲೆ ಹಾಕಿಲ್ಲ. ನೀವು ಬದುಕಿದ್ದೀರಾ ಇಲ್ಲವೆ, ? ಎಂದು ನೋಡಿ ಮಾತನಾಡಿಸಲೂ ಇಲ್ಲ. ಬಂದು ಮಾತನಾಡಿಸಿದ್ದರೆ ಮುತ್ತು ಸುರಿದು ಹೋಗುತ್ತಿತ್ತೇ ? ಇಂಥ ಉಪಕಾರ ಸ್ಮರಣೆ ಇಲ್ಲದವರಿಗಾಗಿ ತಾವೇಕೆ ವೃಥಾ ಬಳಲುತ್ತೀರಿ ದುರ್ಗದ ಚಿಂತೆ ಮಾಡಲು ನೀವು ರಾಜ ಗುರುಗಳೂ ಅಲ್ಲ, ನಿಮಗೂ ಅವರಿಗೂ ಯಾವ ಬಾಂಧವ್ಯವೂ ಇಲ್ಲ." ಎಂದು ಕ್ಷಣದ ಕೋಪಕ್ಕೆ ತುತ್ತಾಗಿ ಏನೇನೋ ಹರಟುವಳು. ಆಗ ಗುರುಗಳು ಹೇಳುವ ಉಪದೇಶದ ಮಾತುಗಳು ಬಹು ದೀರ್ಘವೆನಿಸಿದರೂ ತ.ರಾ.ಸು. ಅವರು ಗುರುಗಳ ಬಾಯಿಂದ ವೀರಶೈವ ಧರ್ಮದ ತಿರುಳೇನು ಎಂಬುದನ್ನು ಬಹು ಅರ್ಥವತ್ತಾಗಿ ಹೇಳಿಸಿದ್ದಾರೆ. ಹಾಗೂ ನಾಗತಿಯ ಹೃದಯವನ್ನು ತೆರೆದು ತೋರಿಸಿದ್ದಾರೆ.

"ಧರ್ಮ ಎಂದರೆ ಮಾರು ಕಟ್ಟೆಯಲ್ಲ. ಗುರು ವ್ಯಾಪಾರಿಯಲ್ಲ. ಧರ್ಮ ಜನಕ್ಕೆ ದಾರಿ ತೋರುವ ದೀಪ ಯಾವದೋ ಕುರುಡು ದಾರಿಯಲ್ಲಿ ನಡೆಯಿಸುವ ಕಣ್ಣು ಕಪಟವಲ್ಲ. ಸಕಲಲೋಕಕ್ಕೆ ಶ್ರೇಯೋಭಿಲಾಷಿಯಾದ ಈ ಕಲ್ಯಾಣ ಜ್ಯೋತಿಯನ್ನು ನಮ್ಮ ಪಂಥಕ್ಕೆ ಬರದವರನ್ನು ಸುಡುವ .ಚಿತಾಗ್ನಿಯಾಗಿ ಮಾಡುವ, ಸತ್ತವರನ್ನು ಬದುಕಿಸುವ ಅಮೃತಕ್ಕೆ ಸ್ವಾರ್ಥದ ನಂಜು ಬೆರೆಸಿ, ಲೋಕಮಾರಕವಾದ ಹಾಲಾಹಲವನ್ನಾಗಿ ಮಾಡುವ ಅಂಥ ಬುದ್ಧಿಯೊಂದನ್ನೇ ನೀನು ವೀರಶೈವ ಧರ್ಮ ನಂಬಿ ಕಲಿತದ್ದು! ಶರಣನೆಂದರೆ ಏನೆಂದು ಕೊಂಡೆ ? ಸ್ವಾರ್ಥದ ಗಾಣವಾಡಿಸುವ ಗಾಣಿಗ ಎಂದು ಕೊಂಡೆಯಾ ? ಶರಣ, ಗಂಧದ ಕೊರಡಿದ್ದಂತೆ ತಾನು ತೇಯ್ದುಕೊಂಡು ಲೋಕಕ್ಕೆ ಕಂಪನೀಡಬೇಕು. ಕಬ್ಬಿನಂತೆ ತಾನು ಹಿಂಡಿಕೊಂಡು ಲೋಕಕ್ಕೆ ಸುಧೆ-ಯುಣಿಸಬೇಕು. ಲಿಂಗದೀಕ್ಷೆ ಈ ಪವಿತ್ರವ್ರತದ ರತ್ನ ಕಂಕಣ. ದಯವೇ ಧರ್ಮದ

ಮೂಲಪಯ್ಯ ಎಂದು ಸಾರಿ. ವೀರಶೈವ ಧರ್ಮಕ್ಕೆ ರತ್ನ ಸಿಂಹಾಸನವನ್ನು ಸ್ಥಾಪಿಸಿದ ಬಸವಣ್ಣನವರನ್ನು ನಿನ್ನ ಸ್ವಾರ್ಥದ ಫಲಾಫಲವನ್ನು ತೂಗುವ ತಕ್ಕಡಿಯನ್ನಾಗಿ ಮಾಡಬೇಡ. ಸಾಧ್ಯವಿದ್ದರೆ ಅವರನ್ನು ಗುರುಗಳು ಎಂದುಕೊಂಡ ನೀನು ಅವರ ಮಟ್ಟಕ್ಕೆ ಏರಬೇಕು. ಆ ಶಕ್ತಿ ಇಲ್ಲದಿದ್ದರೆ ಆ ದಿವ್ಯಾತ್ಮಗಳನ್ನು ನಿನ್ನ ಅಲ್ಪ ತನದ ಮಟ್ಟಕ್ಕಿಳಿಸಿ, ಅವರ ಶಿಷ್ಯಳೆಂದು ಹೇಳಿಕೊಂಡು ಅವರಿಗೆ ಅಪಮಾನ ಮಾಡಬೇಡ. ಸ್ವಾರ್ಥದ ಪಶು ಮೇಯ್ದುಕೊಳ್ಳುವ ಹುಲ್ಲುಗಾವಲಲ್ಲ ಧರ್ಮ. ಈ ಧರ್ಮ ದೀಕ್ಷಾ ಬದ್ಧರಾದವರು ಏನು ಮಾಡಿದರೂ ಶಿವ ಮೆಚ್ಚಲಿ ಎಂದು ಮಾಡಬೇಕು, ನುಡಿಯ ಬೇಕೇ ಹೊರತು, ಇದರಲ್ಲಿ ನಮಗೇನು ಸಿಕ್ಕೀತು ಎಂದು ಕಂಡವರ ಚಿನ್ನವನ್ನು ಒರೆ-ಗಲ್ಲಿಗೇ ಉಜ್ಜಿಕೊಂಡು ಗುಂಜಿ ತೂಕದ ಚಿನ್ನಗಳಿಸುವ ಚಿನಿವಾರ ಬದ್ಧಿಗೆ ಇಲ್ಲಿ ಎಡೆಯಿಲ್ಲ. ನಿನ್ನ ಹಾಗೆ ನಾವೂ ಆಡಿದರೆ ನಾಳೆ ಈ ಧರ್ಮ ರಸಾತಳಕ್ಕಿಳಿದು ಹೋದೀತು. ಶಿವ ತಂದೆ ಪ್ರಕ್ಷುಬ್ಧನಾಗಿ, ರುದ್ರನಾಗಿ. ನಮ್ಮ ನಿಮ್ಮ ಎಲ್ಲರ ತಲೆಯನ್ನು ಚೆಂಡಾಡಿಯಾನು. ಇಂದಿಗೆ ಇಂಥ ಮಾತು ಬಿಡು"

ಗುರುಗಳ ಮಾತಿನಿಂದ ನಾಗತಿಯು ಎಂಥ ಸ್ವಾರ್ಥದ ಸಾಮಾನ್ಯ ಹೆಣ್ಣಾಗಿದ್ದ ಳೆಂಬುದು ತಿಳಿಯುತ್ತದೆ. ಮುಂದೆ ಗುರುಗಳ ವಾಣಿ ಸತ್ಯವಾದದ್ದನ್ನು ಕಾಣುತ್ತೇವೆ. ಇಲ್ಲಿಂದ ಮುಂದೆ ತ.ರಾ.ಸು. ಅವರ ಕಾದಂಬರಿ ತಂತ್ರ ಪೂರ್ಣ ಫಲಿಸುವದನ್ನು ಕಾಣಬಹುದು. ನಾಗತಿ ತನ್ನದು ಮಹಾಪರಾಧವಾಯಿತೆಂದು ಒಪ್ಪಿಕೊಳ್ಳುವುದು ಅವಳ ಗುರುವಿನಲ್ಲಿದ್ದ ಮುಗ್ಧ ಭಕ್ತಿಗೆ ನಿದರ್ಶನವಾಗಿದೆ. ಅದೂ ಕೂಡ ಸನ್ನಿವೇಶ ಪರಿಸರದಿಂದ ಬಂದುದೇವಿನಃ ಆತ್ಮಕವಾದುದಲ್ಲವೆಂದು ಹೇಳಬಹುದು.

ಮತ್ತೆ ಗುರುಗಳು "ಪರ ಕೊಲ್ವೊಡೆ ಪರ ಕಾಯ್ವನೇ," ನಾನು ಮಾಡು ತ್ತೇನೆ ಎಂಬ ಭ್ರಮೆಯನ್ನು ಬಿಡು. 'ಎನ್ನ ಕಾಯುವ ನಿನ್ನ ದಂಡಿಗೇನು ಮಾಡಯ್ಯ' ಎಂದು ಆತ ನುಡಿಸಿದ ಹಾಗೆ ನುಡಿ" ಎಂದಾಗ ಅವಳು ತಾನು ಅವರಿಗೆ ತಕ್ಕ ಶಿಷ್ಯಳಾಗಲಿಲ್ಲವೆಂದು ನುಡಿಯುವಲ್ಲಿ ಅವಳಿಗೂ ತಿಳುವಳಿಕೆ, ಅರಿವು ಮೂಡಿದೆ ಎಂದು ಭಾವಿಸಬಹುದು.

ಅಂತೆಯೇ ಅವಳು ಗುರುಗಳ ಮಾತಿನಂತೆ ಲಗ್ನದ ವಿಷಯವನ್ನೆತ್ತುವ ಸಲುವಾಗಿ ಲಿಂಗಣ್ಣನಾಯಕನನ್ನು ಭೆಟ್ಟಿಯಾಗಲು ಹೋಗವಳು. ಆದರೆ ಅರಮನೆಯ ರಾಯಭಾರಿ ಚಿಕ್ಕಣನಿಂದ ಮೊದಲೇ ನಾಯಕರಿಂದ ಭೆಟ್ಟಿಗೆ ಅನು-ಮತಿಯನ್ನು ಪಡೆದು ಹೊತ್ತುಗೊತ್ತು ಮಾಡಿಕೊಳ್ಳದೆ ಯಾರೂ ಅವರನ್ನು ಕಾಣು ವಂತಿಲ್ಲವೆಂದು ತಿಳಿದು ಅವಳು ಹೆಡೆತುಳಿದ ಸರ್ಪದಂತೆ ಸಿಡಿದೇಳುವಳು. ಈ ಆಜ್ಞೆ ಪ್ರಧಾನಿಗಳಿಂದ ಬಂದುದೆಂದು ಕೇಳಿ ತಿಳಿದಾಗ ಅವಳ ಪ್ರತಿಕ್ರಿಯೆಯನ್ನು ನೋಡಬೇಕು. "ಈ ಆಜ್ಞೆ ಉಳಿದವರಿಗಿರಬಹುದು. ಆದರೆ ನಮಗೂ ಇದು ಅನ್ವಯಿಸುತ್ತದೆಯೇ?" ಎಂದು ಕೇಳುವಲ್ಲಿ ತಾನು ದುರ್ಗದ ಹಿರಿಯ ನಾಗತಿ ತನಗಾವ ಕಟ್ಟುಕಟ್ಟಳೆಗಳು ಬೇಕಿಲ್ಲ ಎಂಬುದೇ ಅವಳ ಭಾವನೆಯಾಗಿದೆ. ಚಿಕ್ಕಣ್ಣ ಅವಳು

ಯಾವ ಕೆಲಸಕ್ಕಾಗಿ ಬಂದಿರುವುದಾಗಿ ತಿಳಿಸಿದರೆ ಅವನ್ನು ಪ್ರಧಾನಿ ಮುದ್ದಣ್ಣನಿಗೆ ತಿಳಿಸಿ ಅಪ್ಪಣೆ ಕೊಡಿಸುವುದಾಗಿ ಹೇಳಲು ಅವಳ ನೆತ್ತರು ಕುದಿಯುತ್ತದೆ. ಅವಳು ನೇರವಾಗಿ ಮೇಣೆಯನ್ನು ಪ್ರಧಾನಿಗಳ ಮನೆಗೆ ಕೊಂಡೊಯ್ಯಲು ತಿಳಿಸುವಳು.

ಮುದ್ದಣ್ಣ ನಾಗತಿಗೆ ಮುಜುರೆ ಮಾಡಿ ಅವಳನ್ನು ತನ್ನ ಕಪಟನಾಟಕವಾಡಿ ಗೌರವಿಸುತ್ತಾನೆ. "ಸುದ್ದಿ ತಿಳಿಸಿದ್ದರೆ ನಾನೇ ತಮ್ಮ ಮನೆಯವರೆವಿಗೂ ಬಂದು ತಮ್ಮ ದರ್ಶನ ಪಡೆಯುತ್ತಿದ್ದ ತಮಗೆ ವಿನಾಕಾರಣ ತುಂಬಾ ತೊಂದರೆಯಾಯಿತು" ಎಂದಾಗ ಇವಳು ತನ್ನ ಮನದಲ್ಲಿದ್ದ ಕ್ರೋಧವನ್ನು ಮಾತಿನ ವ್ಯಂಗ್ಯದಿಂದ ವ್ಯಕ್ತ ಪಡಿಸುತ್ತಾಳೆ.

ಮುದ್ದಣ್ಣನು "ತಾಯಿ. ತಮಗೆ ಇಂದಿನ ರಾಜಕಾರಣ, ನಮ್ಮ ಹೊಣೆಗಾರಿಕೆ ತಿಳಿಯದು. ವಿಶೇಷ ಪರಿಸ್ಥಿತಿಗೆ ಅನುಸರಿಸಿ ನಾವೂ ವಿಶೇಷ ಆಜ್ಞೆ ಹೊರಡಿಸ ಬೇಕಾಗುತ್ತದೆ. ಹೊರಡಿಸಿ ಕೆಟ್ಟ ಹೆಸರೂ ಹೊರಬೇಕಾಗುತ್ತದೆ." ಎಂದಾಗ ಮುದ್ದಣ್ಣನು ವಿನಯದಿಂದ ಎಚ್ಚರ ತಪ್ಪದೆ ಹೇಳಿದಳೆಂದು ಕಾದಂಬರಿಕಾರರು ತಿಳಿಸಿದರೂ ನಾಗತಿ ತನ್ನ ಗುಟ್ಟನ್ನು ಹೇಳಿ ಬಿಡುವಳು. ತಾನು ಲಿಂಗಣ್ಣನಾಯಕನಿಗೆ ಮದುವೆಯನ್ನಾದರೂ ಮಾಡಿ ಕೊಳ್ಳಿ ಎಂದು ಹೇಳಲು ಬಂದಿರುವುದಾಗಿ ತಿಳಿಸುವಲ್ಲಿ ಅವಳಿಗೆ ರಾಜ ಕಾರಣ ಏನೂ ತಿಳಿದಿಲ್ಲ ಅನಿಸುತ್ತದೆ. ಯಾಕಂದರೆ ಈ ಸುದ್ದಿ ತಿಳಿದ ಮುದ್ದಣ್ಣ ಲಿಂಗಣ್ಣನಾಯಕನನ್ನು ಚಾರಿತ್ರ್ಯಹೀನನ್ನಾಗಿ ಮಾಡಲು ಏರ್ಪಾಡು ಮಾಡುತ್ತಾನೆ.

ಮಲ್ಲಪ್ಪನಾಗತಿ ಪರುಶುರಾಮಪ್ಪನವರ ಜೊತೆಗೆ ಮಾತನಾಡುವಾಗ ಆಗಲಿ ಗುರುಗಳ ಜೊತೆಗಿನ ಮಾತುಗಳನ್ನು ನೋಡಿದರಾಗಲಿ, ಮುದ್ದಣ್ಣನ ಜೊತೆಗೆ ಮಾತನಾಡುವುದನ್ನು ಕೇಳಿದರಾಗಲಿ ಅವಳ ಧೀರು ಸ್ವಭಾವ ತಿಳಿಯುತ್ತದೆ. ಗುರುಗಳು ಒಂದು ಸಲ "ನೀರಿನಲ್ಲಿ ಬಿದ್ದ ಸಕ್ಕರೆಯ ಗೊಂಬೆ ಕರಗುವುದಿಲ್ಲ ಎಂದರೆ ಕೇಳುವವರು ಯಾರು ?" ಎಂಬಲ್ಲಿ ಮಲ್ಲಪನಾಗತಿ ನೀರಿನಲ್ಲಿ ಬಿದ್ದ ಸಕ್ಕರೆಯ ಗೊಂಬೆಯಂತೆ, ರಾಜಕೀಯದಲ್ಲಿ ಬಿದ್ದ ಮಲ್ಲಪ್ಪನಾಗತಿ ತನ್ನ ಪೂರ್ಣಾಕೃತಿಯನ್ನೆಲ್ಲ ಕಳೆದು ಕೊಂಡರೂ ಆತ್ಮತ್ಯಾಗದ ಸಿಹಿಯನ್ನು ಮಾತ್ರ ಉಳಿಸಿದ್ದಾಳೆ.

ತಿರುಗು ಬಾಣ

– ಮುದ್ದಣ್ಣನು ಗುರುಗಳ ಮಠಕ್ಕೆ ಕಾವಲು ಇರಿಸುತ್ತಾನೆ. ಅವಕ್ಕೆ ಏಕೆ ಕಾವಲು ಇರಿಸಿರುವುದಾಗಿ ಕೇಳಲು ಪರಶುರಾಮಪ್ಪ ಹಾಗೂ ದಳವಾಯಿ ಭರಮಣ್ಣ ಮುದ್ದಣ್ಣನನ್ನು ಕಾಣಲು ಹೋಗುವರು ಆಗ ಅವರ ಬಂಧನವಾಗುತ್ತದೆ. ಇವರನ್ನು ಏಕೆ ಬಂಧಿಸಿದೆ ಎಂದು ಕೇಳಿದ ಲಿಂಗಣ್ಣನಾಯಕನನ್ನೂ ಪ್ರಧಾನಿ ಮುದ್ದಣ್ಣ ಕ್ರೂರ ರೀತಿಯಿಂದ ಅನೇಕ ಹಿಂಸೆಗಳನ್ನು ಕೊಟ್ಟು ಕೊಲ್ಲುತ್ತಾನೆ.

ರಾಜಕೀಯದಲ್ಲಿ ಆಸಕ್ತರಾದ ಆದರೆ ಬಂಧನದ ಹೊರಗೆ ಉಳಿದ ವ್ಯಕ್ತಿ ಗಳೆಂದರೆ ಮಠದ ಗುರುಗಳು, ಮಲ್ಲಪ್ಪನಾಗತಿ ಹಾಗೂ ಗಿರಿಜವ್ವ. ಗುರುಗಳು ಹಾಗೂ

ಮಲ್ಲವ್ವನಾಗತಿ ಇರುವ ಸ್ಥಳಗಳ ಮೇಲೆ ಕಾವಲು ಇತ್ತು. ರಾಜಕೀಯದಲ್ಲಿ ಕುತಂತ್ರಿಯಾದ ಮುದ್ದಣ್ಣ ಈಗ ಮಲ್ಲವ್ವನಾಗತಿಯ ಮನೆಯ ಮೇಲಿನ ಕಾವಲು ತೆಗೆಯಿಸಿ ಅವರ ಮೇಲೆ ಬೇಹುಗಾರರನ್ನು ನೇಮಿಸುತ್ತಾನೆ. ನಾಗತಿ ಮತ್ತೆ ಒಳಹೋಗಬೇಕೆಂದರೂ ತನ್ನ ಅಪ್ಪಣೆ ಪಡೆಯಲು ತಿಳಿಸು ಎಂದು ದಾಸನಾಯಕನಿಗೆ ಅಪ್ಪಣೆ ಮಾಡುವನು.

ಮಂತ್ರಿ ಮುದ್ದಣ್ಣನು ಬಂಧಿತರಾದ ಪರಶುರಾಮಪ್ಪ ಹಾಗೂ ಭರಮಣ್ಣರನ್ನು ಕಂಡು ಅವರು ತನ್ನ ಸ್ನೇಹ ಸಂಧಾನಕ್ಕೆ ಹಸ್ತ ಚಾಚುವರೋ ಹೇಗೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತಾನೆ. ಅವರು ನಿರಾಕರಿಸಿದಾಗ "ಬದುಕುವಾಸೆ ಅವರಿಗೂ ಇಲ್ಲ, ಅವರನ್ನು ಉಳಿಸುವಾಸೆ ನನಗೂ ಇಲ್ಲ" ಎಂದು ದಾಸನಾಯಕನ ಮುಂದೆ ಹೇಳುವುದನ್ನು ಚನ್ನಯ್ಯನೆಂಬ ಲಿಂಗಣ್ಣನ ಅಂಗರಕ್ಷಕ ಪಡೆಯಲ್ಲಿದ್ದ ಸೇವಕನೊಬ್ಬನು ಕೇಳಿ ಗಿರಿಜೆಗೆ ಈ ಸುದ್ದಿ ತಿಳಿಸುವನು ಆಗ ಗಿರಿಜೆ ಅವರನ್ನು ಬಂಧನ ಮುಕ್ತರನ್ನಾಗಿ ಮಾಡಲು ಯೋಚಿಸುವಳು.

ಮುದ್ದಣ್ಣನು ವಿಷ ಸಮುದ್ರದ ರಂಗಪ್ಪನಾಯಕನನ್ನು ಪಟ್ಟಕ್ಕೆ ಕೂಡ್ರಿಸಬೇಕೆಂದು ಚಿಕ್ಕಣ್ಣನನ್ನು ಕಳಿಸಿ ಅವನನ್ನು ಕರೆಸಿ ಕೊಳ್ಳುವನು ರಂಗಪ್ಪನಾಯಕನು ಇನ್ನು ಮೇಲೆ ದುರ್ಗಕ್ಕೆ ದೊರೆ ಯಾರು ಎಂಬುದನ್ನು ನಿರ್ಧರಿಸುವ ಸಲುವಾಗಿ ಕೇಳಿ ತಿಳಿಯಲು ಮಲ್ಲವ್ವನಾಗತಿ ಇದ್ದಾಳೆಂದು ಮುದ್ದಣ್ಣನಿಗೆ ನೆನಪು ಮಾಡಿ ಕೊಡುವನು.

ಗಿರಿಜವ್ವೆಯ ಯೋಜನೆಯಿಂದಾಗಿ ಮುದ್ದಣ್ಣನ ಸೆರೆಯಲ್ಲಿದ್ದ ಪರಶುರಾಮಪ್ಪ ಹಾಗೂ ದಳವಾಯಿ ಭರಮಣ್ಣ ಇಬ್ಬರೂ ಪಾರಾಗುತ್ತಾರೆ. ಈ ಸುದ್ದಿ ತಿಳಿದ ಮುದ್ದಣ್ಣ ಅವರ ಜಾಡು ಹಿಡಿದು ಹೋಗಿ ತಿಳಿಯಲು ತಮ್ಮ ರಾಯಣ್ಣನನ್ನು ಕಳಿಸುತ್ತಾನೆ. ಅವನು ಗೋಪಾಲಪುರದವರೆಗೆ ಹೋಗಿ ಅಲ್ಲಿ ತನಗೆ ಸಂದೇಹವಿದೆಯೆಂದು ಸೈನ್ಯವನ್ನು ಕಾವಲಿರಿಸಿ ಆ ಸುದ್ದಿ ತಿಳಿಸಲು ಮುದ್ದಣ್ಣನಲ್ಲಿಗೆ ಬರುತ್ತಾನೆ. ಆಗ ಸ್ವತಃ ಮುದ್ದಣ್ಣನೇ ಅಲ್ಲಿಗೆ ಬರುತ್ತಾನೆ. ಆದರೆ ಗೋಪಾಲಪುರದ ಗೌಡ ತನ್ನ ಅಭಿಮಾನಕ್ಕೆ ಭಂಗ ಉಂಟಾದುದರಿಂದ ಊರ ಗೌಡಿಕೆಯನ್ನು ನಡೆಸಿಕೊಡಲು ಅವಕಾಶ ಕೊಡಬೇಕು ಇಲ್ಲವಾದರೆ ಗೌಡಿಕೆಯನ್ನೇ ತಿರುಗಿ ತಗೆದು ಕೊಳ್ಳಬೇಕೆಂದು ಹಟ ಹಿಡಿಯುತ್ತಾನೆ. ಇಬ್ಬರಿಗೂ ವಿರಸವುಂಟಾಗಿ ಗೌಡನ ಮೇಲಿನ ಸಂಶಯದಿಂದ ಅವನನ್ನು ಮುದ್ದಣ್ಣ ಕೊಂದು ಊರನ್ನು ಶೋಧಿಸಲು ಹಚ್ಚುವನು ಆದರೆ ಎಲ್ಲಿಯೂ ಅವರ ಸುಳಿವು ಸಿಗದೆ ಇರಲು ತಿರುಗಿ ಅರಮನೆಗೆ ಬರುವನು ಆಗ ರಂಗಪ್ಪನಾಯಕನನ್ನು ಕರೆಸಿಕೊಂಡು ಸಿಂಹಾಸನವನ್ನು ಏರಬೇಕಾದರೆ ತಾನು ಹೇಳಿದ ಹಾಗೆಯೇ ಕೇಳಬೇಕೆಂದು ಹೆದರಿಸುತ್ತಾನೆ. ಆದರೆ ರಂಗಪ್ಪನಾಯಕನು "ಬಾ ಎಂದಾಗ ಬಂದು. ಹೋಗು ಎಂದಾಗ ಹೋಗುವುದಕ್ಕೆ ನಾನು ನಿಮ್ಮ ಮನೆಯ ನಾಯಿಯಲ್ಲ." ಎಂದು ದೇಟಾಕು ವಹಿಸಿದರೂ, ಹಾಗೆ ಹೇಳಬೇಕೆಂದೆನಿಸಿದಾಗ ದುರ್ಗಕ್ಕೆ ಬಂದ ಬಳಿಕ ಕೇಳಿದ ಓಬಣ್ಣನಾಯಕ, ಲಿಂಗಣ್ಣನಾಯಕರ ಕೊಲೆಯ ವಿವರ ನೆನಪಾಗಿ ಮೈ ಚಳಿ

ಗಾಳಿಗೆ ಸಿಲುಕಿದಂತೆ ಕಂಪಿಸುತ್ತದೆ, ಹಾಗೇ ಎದ್ದು ನಿಂತು ತನ್ನತ್ತ ನೋಡದ ಮುದ್ದಣ್ಣನಿಗೆ ವಂದಿಸಿ ಹೊರಟು ಹೋಗುವನು.

ಆಗ ಚಿಕ್ಕಣ್ಣ, ಮುದ್ದಣ್ಣನ ಸಹೋದರ ಅಲ್ಲಿಗೆ ಬಂದನು. "ರಂಗಪ್ಪನಾಯಕನನ್ನು ಸ್ನೇಹಿತನನ್ನಾಗಿ ಮಾಡಿಕೋ" ಎಂದು ಮುದ್ದಣ್ಣನು ಅವನಿಗೆ ಹೇಳುವನು. ಅವನ ಆಪ್ತತ್ವಗಳಿಸಲು ಲಿಂಗಣ್ಣನಾಯಕರಿಗೆ ಉಡುಗೊರೆಯಾಗಿ ಕಳಿಸಿದ ಹುಡುಗಿಯನ್ನು ರಂಗಪ್ಪನಾಯಕರಲ್ಲಿಗೆ ಕಳಿಸಲು ತಿಳಿಸುವನು. ಹಾಗೂ ತಾನು ಮಲ್ಲವ್ವನಾಗತಿಯ ಮನೆಯಲ್ಲಿರುವುದಾಗಿ ಹೇಳುವನು.

ಮಲ್ಲವ್ವನಾಗತಿಯ ಮರಣಾನಂತರದಲ್ಲಿ ಗುರುಗಳನ್ನು ಗಡಿಪಾರು ಮಾಡುವಾಗ ಅವರನ್ನು ಪಿತೂರಿಯಿಂದ ಕರೆತರಲು ಗಿರಿಜವ್ವೆ ಯೋಚಿಸುತ್ತಾಳೆ. ಅಲ್ಲದೆ ಗೋಪಾಲಪುರದ ಗೌಡರನ್ನು ಮುದ್ದಣ್ಣ ಕೆಡವಿ ಕೊಂಬ ಮೇಲೆ ಮತ್ತೆ ಎಲ್ಲ ಗೌಡರನ್ನು ಕೂಡಿಸಿ ಮಲ್ಲಭಟರಹಳ್ಳಿಯ ಗೌಡರನ್ನು ಅವರಿಗೆ ನಾಯಕರನ್ನಾಗಿಸಿ ಗಿರಿಜವ್ವೆ ಸಂಘಟನೆಗೆ ತೊಡಗುತ್ತಾಳೆ. ಅವಳು ಆಡುವ ಮಾತುಗಳು ನಿಷ್ಠುರವೆನಿಸಿದರೂ ಸತ್ಯವಾದುವು "ಗಂಡಸರಾದರೆ ಹೂ ಎನ್ನಿ ಇಲ್ಲವಾದರೆ ಕೈಗೆ ಬಳೆ ಇಟ್ಟು......ಗಂಡಸರನ್ನ ಬೇರೆ ಕಡೆ ಹುಡುಕಿರಿ ಎಂದು ತಿಳಿಸಿರಿ" ಎಂದು ಕರ್ಕಶವಾಗಿಯೇ ಕೇಳುವಳು. ಅವಳು ಮುದ್ದಣ್ಣನ ಜನರನ್ನು ಹೆದರಿಸುವ ಬಗೆಯನ್ನು ವಿವರಿಸುವಳು. "ನಾಲ್ಕು ತಲೆ ಉರುಳಿಸಿದರೆ, ಉಳಿದವರೆಲ್ಲರೂ ರಕ್ತವನ್ನು ಕಂಡು ಗರ ಬಡಿದವರಂತೆ ಕುಳಿತುಕೊಳ್ಳುತ್ತಾರೆಂದು ತಿಳಿದೇ ಇಷ್ಟು ಮೆರೆಯುತ್ತಿದ್ದಾನೆ." ಎಂದಾಗ ಮಲ್ಲಭಟರಹಳ್ಳಿಯ ಗೌಡರಾದ ಭೈರಪ್ಪನವರು "ಅಸ್ತ್ರ ಶಸ್ತ್ರವಿಲ್ಲದ ನಮ್ಮಂಥ ಜನರಿಂದ ಏನಾದೀತು ?" ಎಂದು ಪ್ರಶ್ನೆ ಕೇಳಲು "ಏನಾಗದಿದ್ದರೂ ನೀವು ನಮ್ಮ ಪಕ್ಷದಲ್ಲಿದ್ದೀರ ಎಂಬುದು ಅವನಿಗೆ ತಿಳಿದರೂ ಸಾಕು, ತನಗೆ ಯಾರೂ ಎದುರಿಲ್ಲವೆಂದು ಮೆರೆಯುತ್ತಿರುವ ಅವನ ಎದೆಯಲ್ಲಿ ಹೆದರಿಕೆ ಹುಟ್ಟಿದರೂ ಸಾಕು ಅದೇ ಅವನ ಕೋಟೆಯಲ್ಲಿ ಬಿರುಕಾಗುತ್ತದೆ. ಹೊತ್ತು ಬಂದಾಗ ನೀವು ಆಯಾತು ಹೇಳಬೇಕು" ಎನ್ನುತ್ತಾಳೆ ಗಿರಿಜವ್ವೆ.

ಹೀಗೆ ಗಿರಿಜವ್ವೆಯ ವಿಚಾರ ಉದ್ಬೋಧಿತ, ಬಹು ತರ್ಕಬದ್ಧ. ಆದರೆ ಈ ತರ್ಕಸರಣಿ ನಿಜ ಜೀವನದಲ್ಲಿ ಫಲಕಾರಿಯಾಗಬಲ್ಲದೆ ? ಅವಳ ಗಂಡು ವ್ಯಕ್ತಿತ್ವ ಯಾರನ್ನೂ ನಾಚಿಸುವಂತಹದು. "ಒಳ್ಳೆ ನಡು ರಾತ್ರಿ ಹೊತ್ತು. ಇಂಥಾ ಹೊತ್ತಿನಾಗೆ ಒಬ್ಬಳೇ ಎಲ್ಲಿಗೆ ಹೋಗ್ತಿ ಇರು, ಬೆಳಿಗ್ಗೆ ಎದ್ದು ಹೋಗುವೆಯಂತೆ" ಎಂದು ಗೌಡರು ಅಂದಾಗ ಅವಳು "ಊಹೂ ನನಗೆ ಕತ್ತಲಿನ ಹೆದರಿಕೆಯಿಲ್ಲ ಗೌಡರೇ. ಓಬಣ್ಣನಾಯಕರ ಕೊಲೆಯಾದ ದಿನದಿಂದ ನನ್ನ ಪಾಲಿಗೆ ಹಗಲು ಕತ್ತಲಾಗಿ ಕತ್ತಲೇ ಹಗಲಾಗಿದೆ" ಎನ್ನುವಳು. ಗೌಡರು "ಅಷ್ಟು ಹೋಗಲೇ ಬೇಕಂದ್ರೆ ಇರು, ಜೊತೆಗೆ ಯಾರನ್ನಾದರೂ ಕಳಿಸುತ್ತೀನಿ" ಎಂದಾಗ ಗಿರಿಜವ್ವೆ "ಯಾರ ಜೊತೆಗಾದರೂ ಹೋದರೇ ಹೆಚ್ಚು ಹೆದರಿಕೆ. ಒಂಟಿ ಇದ್ದರೆ ಯಾರ ಭಯವೂ ಇಲ್ಲ" ಎಂದು

ಹೇಳುವಲ್ಲಿ ಅವಳ ಅತುಲ ಧೈರ್ಯ ಹಾಗೂ ಸಾಹಸಗಳು ಕಲ್ಪನೆಗೂ ಎಟುಕದೆ
ಹೋಗುತ್ತವೆ.

ಮುದ್ದಣ್ಣನ ಅಪ್ಪಣೆಯಂತೆ ಚಿಕ್ಕಣ್ಣ ನಾಡಗೌಡರುಗಳಲ್ಲಿ ಮುಖ್ಯರಾದವರೆ
ಲ್ಲರಿಗೂ ರಾಯಸಗಳನ್ನು ಬರೆಸಿ ಕಳುಹಿಸಲು ಎಲ್ಲರಿಗೆ ತಮ್ಮನ್ನು ಕರೆಸಿದ ಸಂದರ್ಭ
ದುರ್ಗದ ಸಿಂಹಾಸನವನ್ನು ಮುಂದೆ ಯಾರು ಏರಬೇಕೆನ್ನುವ ವಿಷಯದಲ್ಲಿ ಚರ್ಚೆ
ಮಾಡುವದಕ್ಕಾಗಿಯೇ ಎಂಬುದು ಅರ್ಥವಾಗುತ್ತದೆ. ಅಂತೆಯೇ ಎಲ್ಲರೂ ಕೂಡಿ
ಏನೂ ಮಾಡಬೇಕೆಂದು ಭೈರಪ್ಪಗೌಡನ ಹಿರಿತನದಲ್ಲಿ ಚರ್ಚಿಸುತ್ತಾರೆ. ಹಿಂದೆ
ಭರಮಣ್ಣ ಹಾಗೂ ಪರಶುರಾಮಪ್ಪ ಅವಿತುಕೊಂಡು ಆ ಮಾತುಗಳನ್ನು ಕೇಳಿ ಜನ
ತಮ್ಮ ಕಡೆಗಿದೆಯೆಂದು ತಿಳಿಯುವರು. ಆ ಮೇಲೆ ಭೈರಪ್ಪಗೌಡರನ್ನು ಕುರಿತು
ಭರಮಣ್ಣ "ನಿಮ್ಮದೇನು ಬಯಕೆ ಗೌಡರೇ" ಎಂದಾಗ ಗೌಡರು "ನಮ್ಮಂಥ ಗಂಡಸ್ರೆಲ್ಲಾ
ಹೊಟ್ಟೆಗೆ ಉಂಡು ಮಲಗಿರೋವಾಗ ಆ ಹೆಣ್ಣು ಮಗಳು ಹಗಲೂ ರಾತ್ರಿ ಎನ್ನದೆ
ಕಾಡು ಮೇಡು ಅಲೆಯೋದು ತಪ್ಪಿ, ನೀವು ಇಂಥಾ ಬಲದಾಗಿರೋದು ತಪ್ಪಿ
ಮೊದಲಿದ್ದಂಗಾದ್ರೆ ಸಾಕು" ಎಂದು ಕಳಕಳಿಯಿಂದ ಹೇಳುವಲ್ಲಿ ಗಿರಿಜವ್ವೆಯ ಕುರಿತು
ನಾಡ ಹಿರಿಯರಲ್ಲಿದ್ದ ಅಂತಃ ಕರುಣೆಯ ಅಭಿಪ್ರಾಯ ವ್ಯಕ್ತವಾಗುತ್ತದೆ.

ರಾಯಸದಂತೆ ಎಲ್ಲ ಗೌಡರುಗಳು ದಳವಾಯಿ ಮುದ್ದಣ್ಣನ ಸಭೆಗೆ ಹೋಗು
ತ್ತಾರೆ ಆಗ "ಕಸ್ತೂರಿ ರಂಗಪ್ಪನಾಯಕರ ಮಗಳಾದ ಸೂರ್ಯಕಾಂತವ್ವನವರ ಮಕ್ಕಳು
ರಂಗಪ್ಪನಾಯಕರು ಈ ಸಿಂಹಾಸನವನ್ನು ಅಲಂಕರಿಸಿದರೆ ಮತ್ತೇ ವಂಶದವರೇ
ಸಿಂಹಾಸನವನ್ನೇರಿದಂತಾಗುತ್ತದೆ ಎಂದು ನಮ್ಮ ಅಭಿಪ್ರಾಯ" ಎಂದು ಮುದ್ದಣ್ಣ
ಅವನನ್ನೇ ಅರಸನನ್ನಾಗಿ ಮಾಡಲು ನಿರ್ಧರಿಸಿಯೇ ಹೇಳುವನು. ಆದರೆ ಎಲ್ಲ ಗೌಡರ
ಪರವಾಗಿ ಭೈರಪ್ಪನು ಯಾರು ಅರಸರಾಗಬೇಕೆಂಬುದನ್ನು ವಂಶ ಪಾರಂಪರ್ಯವಾಗಿ
ಪ್ರಧಾನಿ ಪಟ್ಟವನ್ನು ನಡೆಸಿಕೊಂಡು ಬಂದ ಭುವನಪ್ಪನವರ ಮಕ್ಕಳು ಪರಶುರಾಮಪ್ಪ
ನವರೇ ಹೇಳಬೇಕು ಎಂದು ಆಕ್ಷೇಪಣೆ ಎತ್ತುವನು. ಅದಕ್ಕೆ ಬೆಂಬಲ ಇದೆ ಎಂದು
ಬೆಸ್ತೂರಿನ ಗೌಡನು ತಿಳಿಸುವನು. ಹೀಗಾಗಿ ಮುದ್ದಣ್ಣ, ಗೌಡರೆಲ್ಲ ಹೋಗುವಾಗ
ಭೈರಪ್ಪ ಗೌಡನನ್ನು ಕರೆಸುವನು ಅವನಿಂದ "ಪರುಶುರಾಪ್ಪ, ಭರಮಣ್ಣರ ವಿಚಾರ
ಏನಾದರೂ ತಿಳಿದಿದೆಯೋ?" ಎಂದು ಕೇಳುವನು ಅಲ್ಲದೆ "ಗಿರಿಜವ್ವೆ ಎನ್ನುವ ಹುಚ್ಚಿ
ಊರೂರು ಸುತ್ತುತ್ತಿರುವಳಂತೆ ನಮ್ಮ; ಮೇಲೆ ದ್ವೇಷವನ್ನು ಹೆಚ್ಚಿಸುತ್ತ, ಅವಳ
ವಿಚಾರವೂ ನಿಮಗೆ ತಿಳಿಯದೆ?" ಎಂದು ಕೇಳುವಲ್ಲಿ ಗಿರಿಜವ್ವೆ ಲೋಕದ ಕಣ್ಣಿಗೆ
ಹುಚ್ಚಿಯಂತೆ ವೇಷ ಹಾಕಿಕೊಂಡು, ನಾಗತಿಯ ನೆರಳಾಗಿ ಸುಳಿದು, ರಾಜಕೀಯದ
ಬಿಕ್ಕಟ್ಟು ಬಿಡಿಸಿ ತನ್ನ ಸೇಡನ್ನು ತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದಳು
ಎಂಬುದು ವಿದಿತವಾಗುತ್ತದೆ.

ರಂಗಪ್ಪನಾಯಕನನ್ನು ಪಟ್ಟಗಟ್ಟಲು ಪಟ್ಟಗಾಣಿಕೆ ಒಪ್ಪಿಸಬೇಕೆಂದು ಕಳಿಸಿದ
ರಾಯಸಕ್ಕೆ ಕಾಣಿಕೆಯೂ ಬರಲಿಲ್ಲ ಯಾವ ಗೌಡರೂ ಸಮಾರಂಭಕ್ಕೆ ಆಗಮಿಸಲಿಲ್ಲ.

ಆದರೂ ರಂಗಪ್ಪನಾಯಕನನ್ನು ಮುದ್ದಣ್ಣ ಅವಸರದಿಂದ ಜಿಪ್ದು ಗಟ್ಟಿ ಬಿಟ್ಟನು. ಹೆಸರಿಗೆ ಮಾತ್ರ ಅವನು ನಾಯಕ ಆದರೆ ಮುದ್ದಣ್ಣನನ್ನು ಕೇಳದೆ ಏನು ಮಾಡು ವಂತಿರಲಿಲ್ಲ.

ರಾಜಾಜ್ಞೆಯನ್ನು ಧಿಕ್ಕರಿಸಿದ ಅಪರಾಧಕ್ಕಾಗಿ, ಆ ಅಪರಾಧವನ್ನು ಮಾಡಿದ ಗೌಡರನ್ನೆಲ್ಲ ಸೆರೆ ಹಿಡಿಯಲು, ಆ ಹಳ್ಳಿಗಳಿಂದ ಪಟ್ಟಿಕಾಣಿಕೆಯನ್ನೂ ಅಪ್ಪಣೆ ಯಾದಾಗ ಅವನ್ನು ತಂದು ಒಪ್ಪಿಸದಿದ್ದ ಅಪರಾಧಕ್ಕಾಗಿ ದಂಡವನ್ನು ವಸೂಲು ಮಾಡಲು ದುರ್ಗದ ಸೇನೆಯೇ ಬರುವುದೆಂಬುದನ್ನು ಚಿನ್ನಯ್ಯನಿಂದ ತಿಳಿದ ಗಿರಿಜೆ ಕೆಣಕಿದ ಕಾಳಿಯಂತಾದಳು "ದುರ್ಗದಿಂದ ಬಂದ ಸೇನೆ ಹೆಸರು ಹೇಳಲು ಕೂಡಾ ಒಬ್ಬರೂ ಉಳಿಯದಂತೆ ನಾಶವಾಗಬೇಕು. ಜನರ ರಕ್ತ ಕುಡಿದುಕುಡಿದು ಕೊಬ್ಬಿದ ಈ ಕುನ್ನಿಗಳು ಒಬ್ಬರೂ ಉಳಿಯಬಾರದು" ಎಂದು ಅವಳು ಹಟ ಹಿಡಿಯುವಳು ಮುದ್ದಣ್ಣನ ತಲೆಯನ್ನು ತೆಗೆಯಲು ಪರಶುರಾಮಪ್ಪ. ಭರಮಣ್ಣ ನಾ ಮುಂದು ತಾ ಮುಂದು ಎಂದು ತವಕಿಸುತ್ತಿರುವಾಗ ಗಿರಿಜವ್ವೆ "ಆದರೆ ಅದು ನನಗೆ ಮೀಸಲು ನಿಮಗಾರಿಗೂ ದಕ್ಕುವುದಿಲ್ಲ" ಎಂದು ದೃಢ ವಿಶ್ವಾಸದಿಂದ ಹೇಳುವಲ್ಲಿ ಅವಳ ಕೆಚ್ಚನ್ನೂ ಆತ್ಮವಿಶ್ವಾಸವನ್ನೂ ಕಾಣುತ್ತೇವೆ.

ದುರ್ಗದವರನ್ನು ಎದುರಿಸುವಲ್ಲಿ ಎಲ್ಲರ ಜೊತೆಗೆ ತನ್ನ ಒಪ್ಪಿಗೆ ಸೂಚಿಸುವಳು ಆದರೆ ಮುದ್ದಣ್ಣನ ತಲೆಯೊಂದು ತನಗೆ ಬೇಕಾಗಿರುವುದಾಗಿಯೂ ಆ ಕಾಲದಲ್ಲಿ ಯಾರೂ ತನಗೆ ಅಡ್ಡಿ ಬರಕೂಡದೆಂದು ಕೇಳಿಕೊಳ್ಳಲು "ಮುದ್ದಣ್ಣ, ಗಿರಿಜವ್ವೆಯ ಬೇಟೆ" ಎಂದು ಎಲ್ಲರೂ ಒಪ್ಪಿಕೊಳ್ಳುವರು. ಇಲ್ಲಿ ಗಿರಿಜವ್ವೆ ಮುದ್ದಣ್ಣನಂಥ ಖಳನಾಯಕನನ್ನು ಎದುರಿಸುವಷ್ಟು ಶಕ್ತಿಶಾಲಿನಿಯೆ? ಎಂಬ ಸಂದೇಹ ಮೂಡಿದರೂ ಅವಳ ಮನಸ್ಸಿನ ಶಕ್ತಿ ಕಂಡು ಸಂತಸವೂ ಆಗುತ್ತದೆ. ಹೆಣ್ಣು ಚಂಡಿಯಾದರೆ ಇಂಥ ಸಹಸ್ರ ತಲೆಗಳನ್ನು ತೆಗೆಯಬಲ್ಲಳೇನೋ !

ಗಾಣದಾಳು ಗೌಡನ ತಲೆ ತೆಗೆದುಕೊಂಡೇ ದುರ್ಗಕ್ಕೆ ಪ್ರವೇಶ ಮಾಡ ಬೇಕೆಂಬ ಛಲದಿಂದ ರಾಯಣ್ಣ ಅಕ್ಕಪಕ್ಕದ ಹಳ್ಳಿಗಳಿಗೆ ಸೈನ್ಯವನ್ನು ವಿಂಗಡಿಸಿ ಕಳಿಸು ತ್ತಾನೆ. ಮಾರ್ಗ ಮಧ್ಯದಲ್ಲಿ ರಾಯಣ್ಣನಿದ್ದ ಗುಂಪಿಗೆ ಒಬ್ಬ ಗಾಡಿಯವನು ದೊರಕು ವನು ಅವನು ಗಾಡಿಯಲ್ಲಿ ಸೇಂದಿ ತುಂಬಿಸಿದ್ದಾನೆ ಗಾಣದಾಳು ಗೌಡರು ಎಲ್ಲಿಗೆ ಹೋಗಿದ್ದಾರೆ ಎಂದು ಕೇಳಿದ ಅವರಿಗೆ ಇಲ್ಲಿಂದ ೧೫, ೨೦ ಮೈಲು ದೂರದ ಅಣಜಿಗೆ ಹೋಗಿರಬೇಕೆಂದೂ, ಕಾರಣ ಆಗೌಡ್ರೂ ಈ ಗೌಡ್ರೂ ನೆಂಟರು ಎಂದು ತಿಳಿಸಿ ಸೈನಿಕರಿಗೆ ಹೆಂಡವನ್ನು ಕೊಡುವನು ರಾಯಣ್ಣನೂ ಕುಡಿಯುವನು. ಹೀಗೆ ಅವರೆಲ್ಲ ಕುಡಿದು ಮಲಗಲು ಗಾಡಿಯವನು ಹೊಲವನ್ನು ಮೇಯಲು ಬಂದ ಹಕ್ಕಿಗಳನ್ನು ಓಡಿಸುವಂತೆ 'ಕೇಹೂ' ಎಂದು ಕೂಗಿ ಕೇಕೆ ಹಾಕಲು ಅದುವರೆಗೂ ನಿರ್ಜನ ವಾಗಿದ್ದ ತೋಟದಿಂದ ನೆಲಬಗೆದು ಹೊರಬಂದಂತೆ ಹಳ್ಳಿಗರು ಬಂದು ಕುಡಿದು

ಮೈ ಮರೆತು ನಿದ್ರಿಸುತ್ತಿರುವ ಸೈನಿಕರನ್ನು ಹೆಡೆ ಮುರಿ ಕಟ್ಟಿ ಅವರ ಕುದುರೆ ಜನ್ನುಗಳಿಗೆ ಬಿಗಿದ ಕುದುರೆಗಳನ್ನು ಗಿರಿಜೆಯಲ್ಲಿಗೆ ಹೊಡೆದುಕೊಂಡು ಹೋಗುವರು.

ಹೀಗೆ ದಳವಾಯಿಯ ದೊಡ್ಡ ತಮ್ಮ ರಾಯಣ್ಣನಂಥ ಭಾರಿ ಮಿಕವನ್ನು ತಮ್ಮ ಬಲೆಗೆ ಹಾಕಿಕೊಂಡುದನ್ನು ಕೇಳಿ ಗಿರಿಜೆಗೆ ಒಂದು ಬಗೆಯ ಭಯಂಕರ ತೃಪ್ತಿಯುಂಟಾಗುತ್ತದೆ. ಹೀಗೆ ದುರ್ಗದ ಸೇನೆಯನ್ನು ಎದುರಿಸಲು ಅನೇಕ ಉಪಾಯಗಳನ್ನು, ಗಿರಿಜವ್ವೆಯೇ ಹೂಡುತ್ತಾಳೆ.

ರಾಯಣ್ಣನ ಬಂಧನದ ನಂತರ ಪರಶುರಾಮಪ್ಪ ಹಾಗೂ ಭರಮಣ್ಣನ ಮನೆಯ ಹೆಂಗಸರು ಮಕ್ಕಳನ್ನು ಬಂಧಿಸಿದ ಮುದ್ದಣ್ಣನಿಗೆ ಅನೇಕ ಚಿಂತೆಗಳಿಂದಾಗಿ ರಾತ್ರಿ ನಿದ್ದೆ ಹತ್ತುವುದಿಲ್ಲ. ಕಾವಲಿನವರನ್ನು ಪರೀಕ್ಷಿಸಲು ಮಧ್ಯರಾತ್ರಿ ಹೊರಟಾಗ ದಾಗೆ ಕೆದರಿದ ತಲೆಯನ್ನು ಪರಿವೇಶದಂತೆ ಆವರಿಸಿದ, ಬಿಚ್ಚಿದ ಕೂದಲನ್ನು ನೋಡಿ ಮುದ್ದಣ್ಣ ಚಕಿತನಾಗುವನು ಅವಳನ್ನು ಹಿಡಿಯಲು ಪ್ರಯತ್ನಿಸುವನು, ಆದರೆ ನೋಡುತ್ತಿದ್ದ ಹಾಗೇ ಅವಳು ಚೀರಿ ಓಡುವಳು. ಅವಳು ಕೊಳದ ಬಂಡೆಗಲ್ಲೊಂದರ ಮೇಲೆ ನಿಂತುದನ್ನು ದೂರದಿಂದ ಕಂಡಾಗ "ನಿಲ್ಲು, ಯಾರು ನೀನು?" ಎಂದು ಪ್ರಶ್ನಿಸಲು "ನಾನು, ನಾನು ನಾಗತಿಯ ನೆರಳು ನಿನ್ನ ಕತ್ತಿನ ಉರುಳು" ಎಂದು ವಿಕಾರವಾದ ಧ್ವನಿಯಲ್ಲಿ ಚೀರಿ ಹೇಳಿ ಕಿಲ ಕಿಲ ನಗುತ್ತ, ಬಂಡೆಯಿಂದ ನೀರೊಳಗೆ ಧುಮುಕಿದಳು.

ಈ ಹೆಣ್ಣು ಹೇಳಿದ ಮಾತು, ಆ ಮಾತಿನ ವಿಕಾರ ಧ್ವನಿ, ಅವಕ್ಕಿಂತಲೂ ವಿಕಾರವಾದ ನಗುವನ್ನು ಕೇಳಿ ಮುದ್ದಣ್ಣನ ಕಾಲ ಬಲ ಉಡುಗಿ ಹೋಗುತ್ತದೆ. ಈ ಹೆಣ್ಣು ಬೇರೆ ಯಾರೂ ಆಗಿರದೆ ಗಿರಿಜೆ ಎಂದು ಓದುಗರು ಈಗ ಮಾತ್ರ ಊಹಿಸಲು ಸಾಧ್ಯವಿದೆ. ಹೀಗೆ ವೈರಿಯನ್ನು ಸದೆ ಬಡಿಯಲು ಭೂತವಾಗಿ, ಗಾಳಿಯಾಗಿ, ಬೆಂಕಿಯಾಗಿ, ಗಿರಿಜೆ ಪ್ರಯತ್ನಿಸಿದ್ದಾಳೆ.

ಅವಳು ಎಲ್ಲಿ ಹೋದಳೆಂದು ಸೈನಿಕರನ್ನು ಕೇಳಿದಾಗ ಒಬ್ಬ ಸೈನಿಕ, ಓಬವ್ವ ನಾಗತಿಯರು ಗೋಪಾಲಸ್ವಾಮಿಯ ಹೊಂಡದಲ್ಲಿ ಮುಳುಗಿ ಸತ್ತಾಗಿನಿಂದ, ಅಳುತ್ತಾ ನಗುತ್ತಾ ಅಲೆದಾಡುವ ಹೆಣ್ಣು ಭೂತವೊಂದನ್ನು ದುರ್ಗದಲ್ಲಿ ಎಷ್ಟೋ ಜನ ನೋಡಿರುವುದಾಗಿಯೂ, ಮುದ್ದಣ್ಣ ನೋಡಿದುದು ಅದೇ ಭೂತವೇ ಇರಬೇಕೆಂದೂ ಹೇಳುವನು, ಆದರೆ ಮುದ್ದಣ್ಣನಿಗೆ ಆ ಮಾತಿನಲ್ಲಿ ನಂಬಿಕೆಯಾಗಲಿಲ್ಲ.

ದುರ್ಗವನ್ನೆಲ್ಲಾ ಜಾಲಾಡಿದರೂ ಸರಿಯೆ, ಅವಳು ಈ ಬಾರಿ ದುರ್ಗದಿಂದ ತಪ್ಪಿಸಿಕೊಂಡು ಹೋಗಕೂಡದು. ಜೀವಂತವಾಗಿಯೋ, ಹೆಣವಾಗಿಯೋ, ಅಂತೂ ಅವಳು ಸಿಗಬೇಕು. ಎಂದು ಮುದ್ದಣ್ಣನು ದಾಸನಾಯಕನಿಗೆ ಗಿರಿಜೆಯನ್ನು ಸೆರೆ ಹಿಡಿಯಲು ಅಪ್ಪಣೆ ಮಾಡುವನು.

ಆದರೆ ಗಿರಿಜೆ ಚಿಕ್ಕಣ್ಣನಿಗೆ ರಾಯಣ್ಣ ಹೇಳಿಕಳಿಸಿದ್ದಾನೆಂದು ಒಬ್ಬ ಸೈನಿಕನಿಂದ ಮುದ್ರೆಯುಂಗುರ ಕಳಿಸಿ ಅವನನ್ನು ಶೃಂಗಾರವನಕ್ಕೆ ಕರೆಸುವಳು ಅವನು ದಾರಿಯಲ್ಲಿ

ಬರುತ್ತಿರುವಾಗಲೆ ಅವನ ಬಾಯನ್ನು ಅದುಮಿ ಹೆಡೆಮುರಿ ಬಿಗಿದು ಹೊತ್ತು ಕೊಂಡು ಮರೆಯಾಗುವಳು. ಹೀಗೆ ಮುದ್ದಣ್ಣನ ಸೋದರರನ್ನು ಒಬ್ಬೊಬ್ಬರನ್ನಾಗಿ ಹಿಡಿದು ಅವನ ಬಲವನ್ನು ಹಿಂಗಿಸುವಳು.

ದಾಸನಾಯಕನ ಫಿತೂರಿಯಿಂದಾಗಿ ಭರಮಣ್ಣನು ಮುದ್ದಣ್ಣನ ಎದುರಿಗೆ ಬಂಧಿಯಂತೆ ಹೋಗುವನು. ಆದರೆ ಈ ಸುಳಿವು ಮುದ್ದಣ್ಣನಿಗೆ ಸಂಶಯಕ್ಕೆಡೆ ಕೊಟ್ಟುದರಿಂದ ಅವನು ತಮ್ಮನನ್ನು (ಚಿಕ್ಕಣ್ಣನನ್ನು) ತನ್ನ ಸಹಾಯಕ್ಕೆ ಅಡಗಿಸಿ ಕುಳ್ಳಿರಿಸಿಕೊಂಡು ತನ್ನನ್ನು ಕಾಣಲು ಬಂದ ಭರಮಣ್ಣನನ್ನು ತೀರಿಸಬೇಕೆಂದು ಯೋಜಿಸಿರುತ್ತಾನೆ. ಮುದ್ದಣ್ಣ ಭರಮಣ್ಣರ ಮಧ್ಯವಲ್ಲಿದ್ದ ಚಿಕ್ಕಣ್ಣನನ್ನು ಮುದ್ದಣ್ಣ ಕರೆದಾಗ "ಇಗೋ ಇಲ್ಲಿದ್ದಾನೆ ನಿನ್ನ ಚಿಕ್ಕಣ್ಣ" ಎಂದು ಗಿರಿಜೆ ಹೇಳುವಳು. ಈ ಸನ್ನಿವೇಶದಲ್ಲಿ ಗಿರಿಜೆ ಅಲ್ಲಿಗೆ ಬರುವ ವಿಧಾನವಿಲ್ಲ. ಆದುದರಿಂದ ಈ ಸನ್ನಿವೇಶ ವಾಸ್ತವವೆನಿಸುವುದಿಲ್ಲ. ಆದರೂ ರಾಜಕೀಯದಲ್ಲಿ ಇಂಥ ಘಟನೆಗಳಿಗೆ ಕೊರತೆ ಇಲ್ಲ. ಚಿಕ್ಕಣ್ಣನನ್ನು ಕೊಂದ ಗಿರಿಜೆ ಕತ್ತಿಯನ್ನು ಹಿಡಿದು ನಿಂತಿರುವಳು ಮುದ್ದಣ್ಣನ ಬೇಟೆಗೆ ತೊಡಗುವಳು. ಮುದ್ದಣ್ಣನನ್ನು ಅಣಕಿಸಿ, ಹಂಗಿಸಿ, ಅನೇಕ ಮಾತುಗಳನ್ನು ಆಡುವಳು, ಅವನನ್ನು ಚಿತ್ರಹಿಂಸೆ ಗೊಳಿಸುತ್ತಾಳೆ. ಆಗ ಭರಮಣ್ಣ ಹಾಗೆ ಮಾಡದೆ ಒಂದೇ ಏಟಿಗೆ ಕೊಲ್ಲಲು ಹೇಳುವನು. ಆದರೆ ಗಿರಿಜೆ ದಳವಾಯಿ ಭರಮಣ್ಣನಿಗೆ ಅಂಥ ಘೋರವನ್ನು ನೋಡಲಿಕ್ಕಾಗದೆಂದು ಅವನನ್ನು ಅಲ್ಲಿಂದ ಎಳೆದೊಯ್ಯುವು ದಾಗಿ ಹೇಳುವುದು ಅವಳ ಧೈರ್ಯವನ್ನು ತಿಳಿಸಿದರೂ ಅವಾಸ್ತವವೆನಿಸುತ್ತದೆ.

ಅವಳಿಗೆ ರಕ್ತದಾಹವಿದೆ ಎಂದಾಗ ಓಬಣ್ಣನಾಯಕ ಲಿಂಗಣ್ಣನಾಯಕರನ್ನು ಕೊಂದ ರೀತಿಯನ್ನು ಜ್ಞಾಪಕದಲ್ಲಿರಿಸಿಕೊಂಡ ಅವಳು ತನ್ನ ಸೇಡು ತೀರಿಸಿಕೊಳ್ಳುವ ವರೆಗೆ ತನ್ನ ಜೀವಕ್ಕೆ ಶಾಂತಿ ಇಲ್ಲವೆಂದು ಹೇಳಿಕೊಂಡು ಮುದ್ದಣ್ಣನನ್ನು ಎಳೆದು ಕೊಂಡು ಹೋಗುವಳು.

ಗಿರಿಜೆಯ ಅಪ್ಪಣೆಯಂತೆ ಮುದ್ದಣ್ಣ ಹಾಗೂ ಅವನ ಮೂವರು ತಮ್ಮಂದಿರನ್ನು ನಗರದ ರಾಜಬೀದಿಗಳಲ್ಲಿ ಮೆರೆಸಿ ಅಪಮಾನಗೊಳಿಸುವರು. ಸಿದ್ದಣ್ಣನ ಬಾಗಿಲ ಮುಂದಲ ಬಯಲಿನಲ್ಲಿ ಅವರ ಮೇಲೆ ಹಸಿದ ಚಿರತೆಗಳನ್ನು ಬಿಡಿಸುತ್ತಾಳೆ. ಅಳಿದುಳಿದ ಶರೀರಗಳನ್ನು ಹದ್ದು ಕಾಗೆಗಳಿಗೆ ಆಹಾರವಾಗಿ ಕೋಟೆಬಂಡೆಯ ಹುಣಸೆ ಮರಕ್ಕೆ ತೂಗಹಾಕಿಸುತ್ತಾಳೆ.

"ಹೇದ ಮೆಲೂಸೇಡೆ?" ಎಂದು ಪರುಶುರಾಮಪ್ಪ ಕೇಳಿದಾಗ ತನ್ನ ತಾಯಿ ಓಬವ್ವ ನಾಗತಿಗೆ ನೀರಿನಲ್ಲಿ ಅಪಮೃತ್ಯುವನ್ನು ತಂದ ಅವನಿಗೆ ಶವಸಂಸ್ಕಾರವೂ ಆಗಕೂಡದೆಂದು ತಿಳಿಸಿ ದುರ್ಗದ ಪವಿತ್ರ ನೆಲವನ್ನು ರಾಜವಧೆಯ ರಕ್ತಪಾತದಿಂದ ಕಲಂಕಿತಗೊಳಿಸಿದ ಪಾಪಿಗಳ ರಕ್ತದಿಂದ ಆ ಕಲಂಕವನ್ನು ತೊಳೆದು ಮುಗಿದ ಮೇಲೆ ತನ್ನ ಕೆಲಸವಾಯಿತೆಂದು ಸ್ವಾಮಿಗಳ ಸೇವೆಯಲ್ಲಿ ಉಳಿದಾಯುಷ್ಯವನ್ನು ಕಳೆದು

ಅದೆಷ್ಟು ಈ ಕೋಟೆಯ ಪಾಪ ತೊಳೆದು ಕೊಳ್ಳುವುದಾಗಿ ಹೇಳಿ ಅವಳು ಸ್ವಾಮಿಗಳ ಜೊತೆಗೆ ಪ್ರಯಾಣಕ್ಕೆ ಹೊರಡುವಳು.

ಹೀಗೆ ಗಿರಿಜೆ ನೂರಾರು ಕಾದಂಬರಿಗಳ ಒಂದು ಕೊಂಡಿಯಂತೆ ಕೇಂದ್ರವ್ಯಕ್ತಿಯಾಗಿದ್ದಾಳೆ. ಅವಳು ನಿಷ್ಕಾಮವಂತ ಸೇವಕ, ಶ್ರೇಷ್ಠ ಸತಿ, ದೀರ್ಘ ಪ್ರಯತ್ನವಾದಿ ಕಷ್ಟನಷ್ಟಗಳನ್ನು ಎದುರಿಸುವಲ್ಲಿ ಕಠಿಣ. ಅತುಲ ಧೈರ್ಯವನ್ನು ಸಾಧಿಸಿ, ಗುರಿ ಮುಟ್ಟುವಲ್ಲಿ ಯಶಸ್ವೀ ಸ್ತ್ರೀಯಾಗಿದ್ದಾಳೆ. ಇದೆಲ್ಲವನ್ನು ಸ್ವಾಮಿಭಕ್ತಿಗಾಗಿ ಮಾಡಿದ ಗಿರಿಜೆಯ ಪಾತ್ರ ಕೆಲವು ಅಸಹಜ ಸನ್ನಿವೇಶ, ಘಟನೆಗಳನ್ನು ಒಳಗೊಂಡಿದ್ದರೂ ಅಮರವಾಗಿ ನಿಂತಿದೆ, ನಿಲ್ಲುತ್ತದೆ.

ಮಲ್ಲವ್ವ ನಾಗತಿ—

ಗೋಪಾಲಪುರದ ಗೌಡನ ಕೊಲೆಯ ನಂತರದಲ್ಲಿ ರಂಗಪ್ಪನಾಯಕನ ಚಾರಿತ್ರ ವಧೆಗಾಗಿ ಲಿಂಗಣ್ಣನಾಯಕನಿಗೆ ತಿಳಿಸಿದ ಹುಡುಗಿಯನ್ನೇ ತಿಳಿಸಲು ಏರ್ಪಾಡು ಮಾಡಲು ತಮ್ಮ ಚಿಕ್ಕಣ್ಣನಿಗೆ ಹೇಳಿ ತಾನು ಮಲ್ಲವ್ವ ನಾಗತಿಯಲ್ಲಿಗೆ ಮುದ್ದಣ್ಣನು ಬರುತ್ತಾನೆ.

ಮೊದಲಿನಿಂದಲೂ ರಾಜಕೀಯದಿಂದ ದೂರನಿಂತ ನಾಗತಿ ಯಾವ ವಿಚಾರವನ್ನೂ ತಲೆಗೆ ಹಾಕಿಕೊಳ್ಳದೆ ಮಧ್ಯಾಹ್ನದ ಬಿಸಿಲಿಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ದಾಸಿಯು ಸರ್ವಾಧಿಕಾರಿಯಾದ ಮುದ್ದಣ್ಣ ಬಂದುದನ್ನು ತಿಳಿಸಲು ಅವಳು ಬೆಚ್ಚಿ ಬೀಳುವಳು. ಇಲ್ಲಿ ನಾಗತಿಯ ಭೀರು ಸ್ವಭಾವ ಎದ್ದು ತೋರುತ್ತದೆ. ದಾಸಿಯನ್ನು ಕಾರಣ ಕೇಳಿದಾಗ ಅವಳು ಅದು ತನಗೆ ತಿಳಿಯದೆಂದೂ ಜರೂರಾಗಿ ಭೆಟ್ಟಿಯಾಗ ಬೇಕೆಂದೂ ಹೇಳುವಳು.

ಮಲ್ಲವ್ವನಾಗತಿ "ಶಿವಾ, ಇದು ಮತ್ತಾವ ವಿಪತ್ತಿಗೆ ಸೂಚನೆ?" ಎಂದು ಮೊರೆದುಕೊಳ್ಳುವ ವೇಳೆಗೆ ಪರಿವಾರ ಕಂಡುಕೊಂಡು ಮುದ್ದಣ್ಣನನ್ನು ಕಾಣುವಳು. ಅವನು ನಾಗತಿಯ ಕುಶಲ ಸಮಾಚಾರ ಕೇಳುವನು. ಅತಿ ವಿನಯವನ್ನು ನಟಿಸುವನು. ಇದರಿಂದ ಮಲ್ಲವ್ವ ನಾಗತಿಗೆ ಸಮಾಧಾನದ ಬದಲು ಮತ್ತಷ್ಟು ಭೀತಿ ಹೆಚ್ಚುತ್ತದೆ. ಆಗ ಮುದ್ದಣ್ಣನು "ಈ ದಿನ, ನಾಯಕರಾದೂ ಇಲ್ಲದ ಹೊತ್ತಿನಲ್ಲಿ ದುರ್ಗದ ಅಧಿಕಾರವೇ ತಮ್ಮದು ನಾವೆಲ್ಲ ಎಷ್ಟೆಂದರೂ ತಮ್ಮ ಆಳುಗಳು ನಮ್ಮ ಆಳಿಗ ತಮ್ಮ ಚಿತ್ತಕ್ಕೆ ಬಂದಿತೇ ಇಲ್ಲವೇ ಎಂಬುದನ್ನು ಅಪ್ಪಣೆ ಮಾಡಬೇಕು. ಏನೋ ಗದ್ದಲದಲ್ಲಿದ್ದುದರಿಂದ ಮೊದಲೇ ತಮ್ಮನ್ನು ಬಂದು ಕಾಣಬೇಕೆಂದು ಮನಸ್ಸು ಎಷ್ಟು ಹಾತೊರೆಯುತ್ತಿದ್ದರೂ ಕಾಣಲಾಗಲಿಲ್ಲ ಕ್ಷಮಿಸಬೇಕು" ಎಂದು ಮುದ್ದಣ್ಣನಾಡಿದ ಮಾತು ಕೇಳಿದರೆ ನಾಗತಿಯ ಅಧಿಕಾರ ವ್ಯಾಪ್ತಿ ಎಷ್ಟಾಗಿದೆ ಎಂದು ತಿಳಿದು ಬರುತ್ತದೆ. ಸಮರ್ಥಶಾಲಿಯಾದವರಾಗಿದ್ದರೆ ಆಡಳಿತವನ್ನೇ ತಮ್ಮ ಕೈಯಲ್ಲಿ ತೆಗೆದುಕೊಳ್ಳಬಹುದಾಗಿತ್ತು. ಆದರೆ ಈ ಮಾತು ಕೇಳಿ ನಾಗತಿಗೆ ಅನಿರೀಕ್ಷಿತವಾಗಿ

ಕೆಂಡವನ್ನು ಮುಟ್ಟಿದ ಹಾಗಾಯಿತೆಂದು ಲೇಖಕರು ತಿಳಿಸುವಲ್ಲಿ ನಾಗತಿಯು ಅರಸು ಮನೆತನದಲ್ಲಿ ಹುಟ್ಟಿದರೂ ಪಾಳೆಯಗಾರರನ್ನು ಕೈಹಿಡಿದಿದ್ದರೂ ಅಂಥ ಶೌರ್ಯ, ಅವಳಲ್ಲಿ ಮೂಡಿ ಬರಲಿಲ್ಲವೆಂದು ತೋರುತ್ತದೆ.

ಮುದ್ದಣ್ಣನಿಗೆ ಕ್ಷಮಾಪಣೆಯ ಕಾರಣ ಕೇಳುವರು, ಅವನು ಅದಕ್ಕೆ ತನ್ನಿಂದಾದ ಅವಿನಯಕ್ಕಾಗಿ ಎಂದು ಹೇಳುವನೇ ವಿನಃ ವಿವರ ತಿಳಿಸುವುದಿಲ್ಲ. ಆಗ ನಾಗತಿ "ಆದಾಯಿತು. ಅವಿನಯ, ಅಪಚಾರ, ಅಪಮಾನಗಳನ್ನು ನುಂಗಿಕೊಂಡು ಬದುಕಲೆಂದೇ ಹುಟ್ಟಿರುವವರು ನಾವು "ಎಂದು ಹೇಳುವಲ್ಲಿ ಅವಳು ತನ್ನ ಜೀವನದಲ್ಲಿ ಎದುರಿಸಿದ, (ಸಹಿಸಿದ) ಕಷ್ಟನಷ್ಟಗಳ ಸ್ಪಷ್ಟ ಚಿತ್ರಣವಿದೆ. ಮುದ್ದಣ್ಣ ಬಂದ ಕಾರಣವನ್ನು ಕೇಳುವಳು. ಆಗ ಅವನು "ದುರ್ಗದ ರಾಜ್ಯಭಾರದ ಹೊಣೆಗಾರಿಕೆಯನ್ನು ನಿರ್ವಹಿಸುವ ಕಾರ್ಯದಲ್ಲಿ ತಾವು ದೊಡ್ಡವರಾಗಿ ನಮಗೆ ದಾರಿ ತೋರಿಸಬೇಕು" ಎಂದೂ "ಈಗ ಬಂದಿರುವ ಸಮಸ್ಯೆಯನ್ನು ಬಗೆಹರಿಸಬೇಕು" ಎಂದು ತಿಳಿಸಿದಾಗ ಅದೇನು ಸಮಸ್ಯೆ ತನಗೆ ಅರ್ಥವಾಗಲಿಲ್ಲವೆಂದುಸುರುತ್ತಾಳೆ. ನಾಗತಿ ಆಗ ಪುನಃ ದಳವಾಯಿ ಮುದ್ದಣ್ಣ ಬಿಚ್ಚು ಮಾತಿನಿಂದ "ಈಗ ಮತ್ತೊಮ್ಮೆ ದುರ್ಗದ ಸಿಂಹಾಸನಾಧಿಪತಿಗಳು ಯಾರಾಗಬೇಕು ಎಂಬ ಸಮಸ್ಯೆ ಉದ್ಭವಿಸಿದೆ. ಸಿಂಹಾಸನ ಬಹುಕಾಲ ಬರಿದಾಗಿ ಉಳಿಯುವುದು ಸೂಕ್ತವಲ್ಲವೆಂಬುದನ್ನು ನಿಮಗೆ ನಾನು ಹೇಳಬೇಕಾದುದಿಲ್ಲ. ದುರ್ಗದಲ್ಲಿರುವ ದೊಡ್ಡ ತಲೆ ನೀವು ಆದುದರಿಂದ ನೀವೇ ದಾರಿ ತೋರ ಬೇಕು" ಎಂದು ಕೇಳಿ ಕೊಳ್ಳಲು ಅವಳು ಸ್ಪಷ್ಟವಾಗಿ ತನಗೆ ರಾಜ-ಕೀಯವೆಲ್ಲ ಬೇಡವೆಂದೂ ಅದನ್ನು ತನಗೆ ಸುತ್ತ ಬೇಡವೆಂದೂ ತಿಳಿಸುವಳು.

ಆದರೆ ಮುದ್ದಣ್ಣ "ಈಗ ತಾವು ರಾಜಕೀಯಕ್ಕೆ ಮನಸ್ಸು ಕೊಡದೆ ಬೇರೆ ದಾರಿಯೇ ಇಲ್ಲವೆಂದೂ ಇಂದಿನ ಪರಿಸ್ಥಿತಿಯೇ ಹಾಗಿದೆ" ಎಂದೂ ಹೇಳುವನಲ್ಲದೆ ವಿಷ ಸಮುದ್ರದ ರಂಗಪ್ಪನಾಯಕನನ್ನು ದುರ್ಗದ ಅಧಿಕಾರಿಯನ್ನಾಗಿ ಮಾಡಲು ಮುಹೂರ್ತ ನಿರ್ಧರಿಸುವುದಾಗಿಯೂ ಅರಮನೆಯ ಪುರೋಹಿತರನ್ನು ಕರೆದುಕೊಂಡು ಬರುವುದಾಗಿಯೂ ಹೇಳಿ ಅಲ್ಲಿಂದ ತೆರಳುವನು.

ನಾಗತಿ ರಂಗಪ್ಪನಾಯಕನ ನಡತೆ ಚೆನ್ನಾಗಿಲ್ಲವೆಂದೂ ಸೂರ್ಯಕಾಂತಪ್ಪನವರ ಮಕ್ಕಳಾದ ರಂಗಪ್ಪನಾಯಕನ ಪೂರ್ವಜರು ದುರ್ಗದವರ ವಿರೋಧಿಗಳಾದ ಹರಪನಹಳ್ಳಿಯವರ ಜೊತೆಗೆ ಸ್ನೇಹ ಬೆಳೆಸಿದವರೆಂದೂ ಅಂಥವರು ದುರ್ಗದ ಸಿಂಹಾಸನ-ವನ್ನೇರಬಹುದೆ? ಎಂದು ಅನೇಕ ಆಕ್ಷೇಪಣೆಗಳನ್ನೆತ್ತುವಳು ಆದರೆ ಮುದ್ದಣ್ಣನು ತಾನೆಲ್ಲ ಪೂರ್ವಾಪರ ವಿಚಾರ ಮಾಡಿರುವುದಾಗಿಯೂ ಇದು ತುಂಬ ಅವಸರದ ವಿಷಯವೆಂದೂ ತನ್ನ ಶತೃಗಳಾದ ಪರಶುರಾಮಪ್ಪ ಭರಮಣ್ಣ ಅವರಿಗೆ ಅನುಕೂಲವಾಗಲು ಅವಕಾಶ ಕೊಡಬಾರದೆಂದೂ ಹೇಳುವಾಗ "ನಮ್ಮ ಶತೃಗಳು ದುರ್ಗದ ಶತೃಗಳೆಂದೇ ನಮ್ಮ ಭಾವನೆ. ನಾನು ಬೇರೆ, ದುರ್ಗ ಬೇರೆ ಎಂಬ ಭಾವನೆ

ನಮಗಿಲ್ಲ." ಎನ್ನುವಲ್ಲಿ ತನ್ನ ಸರ್ವಾಧಿಕಾರವನ್ನು ಹೇಗೆ ನಾಗತಿಯ ಮುಂದೆ ವ್ಯಕ್ತ ಪಡಿಸುವನೆಂಬುದು ತಿಳಿದು ಬರುತ್ತದೆ.

ಇದೇ ತಕ್ಕ ಸಮಯವೆಂದು ಯೋಚಿಸಿ ನಾಗತಿ ಮುದ್ದಣ್ಣನಿಂದ ಗುರು ಮಠಕ್ಕೆ ಹೋಗಲು ಅಪ್ಪಣೆ ಪಡೆದು ಕೊಳ್ಳುವಳು. ಆದರೆ "ಗುರುಗಳನ್ನು ಮತ್ತೆ ರಾಜಕೀಯಕ್ಕೆ ಎಳೆಯಲು ಯತ್ನಿಸಬೇಡಿ ಅದು ಕ್ಷೇಮವಲ್ಲ ಅಷ್ಟೇ" ಎಂದು ಸೂಚನೆ ನೀಡಿ ತೆರಳುವನು.

ಮಲ್ಲಿಪ್ಪನಾಗತಿ ತನಗೆ ಜೀವನದಲ್ಲಿ ಸಮಸ್ಯೆ ಎದುರಾದಾಗ ಉಗ್ರಜಪ್ಪಯ್ಯರ ಸ್ವಾಮಿಗಳನ್ನು ಕಂಡು ಅದಕ್ಕೆ ತಕ್ಕ ಮಾರ್ಗದರ್ಶನ ದೊರಕಿಸಿಕೊಳ್ಳುವುದು ವಾಡಿಕೆ. ಗುರುಗಳ ಮಾರ್ಗದರ್ಶನದಲ್ಲಿ ಅವಳಿಗೆ ಅಪಾರ ನಂಬಿಕೆ. ಅಂತೆಯೇ ಈಗ ಮತ್ತೆ ಗುರುಗಳ ಮಠಕ್ಕೆ ಬರುವಳು. ಮುದ್ದಣ್ಣ ಬಂದ ವಿಷಯವನ್ನು ತಿಳಿಸಿ ಅವನ ಹೇಳಿಕೆಯನ್ನು ವಿವರಿಸುವಳು. ಅದಕ್ಕೆ ತಾನೇನು ಮಾಡಬೇಕೆಂದು ಕೇಳುವಳು. ಆಗ ಗುರುಗಳು ಬಹು ಮಾರ್ಮಿಕವಾದ ಮಾತುಗಳನ್ನು ಆಡುವರು "ನಾನು ಹೇಳಬೇಕೆ? ನಿನ್ನ ದಾರಿ ಏನೆಂದು ನಿನಗೆ ತಿಳಿಯುವುದಿಲ್ಲವೆ?" ನಾಗತಿ "ಊಹು ನನಗೇನೂ ತೋಚುವುದಿಲ್ಲ' ನನ್ನ ಬುದ್ಧಿಗೆ ಕತ್ತಲು ಕವಿದಿದೆ. ಎಂದಾಗ ಗುರುಗಳು ಅದನ್ನು ನಾನು ಬಲ್ಲೆ ಮಗಳೇ ಇದು ಎಂಥವರ ಬುದ್ಧಿಗೂ ಕತ್ತಲು ಕವಿಸುವ ಹೊತ್ತು ನನ್ನನ್ನು ಕೇಳಬೇಡ. ನಿನ್ನೊಳಗೆ ಹುದುಗಿರುವ ಶಿವನನ್ನೇ ಕೇಳು "ಏನು ಮಾಡಲಿ" ಎಂದು. ಆತ ಹೇಳಿದ ಹಾಗೆ ಮಾಡು ಎಂದು ಕಾದಂಬರಿಕಾರರು ಗುರುಗಳಿಂದ ಹೇಳಿಸಿರುವುದ–ರಲ್ಲಿ ಪ್ರತಿಯೊಬ್ಬರೂ ಆತ್ಮ ಶೋಧನೆಗೆ ತೊಡಗಬೇಕೆಂದು ಹೇಳಿದಂತಿದೆ. ತನ್ನನ್ನು ನಂಬಿಕೊಂಡು ಸಾಗಬೇಕೆಂಬ ಸೂಚನೆ ಇಲ್ಲಿದೆ. ಅಲ್ಲದೆ ಗುರುಗಳು ಹಿಂದೊಮ್ಮೆ ನಾಗತಿಗೆ ಹೇಳಿದ ವಿಷಯಗಳನ್ನೆತ್ತಿ ಅವಳು ಚುಚ್ಚು ಮಾತನಾಡುವುದರಿಂದ ಅವರಿಗೆ ಆ ಸಂದರ್ಭ ಎಷ್ಟು ನೋವನ್ನುಂಟುಮಾಡಿದೆ ಎಂಬುದನ್ನು ಈ ಪ್ರಸಂಗ ಎತ್ತಿ ತೋರಿಸುತ್ತದೆ. "ಹಿಂದೊಮ್ಮೆ ನಾನು ಹೇಳಿದುದು ನಿನಗೆ ಕಷ್ಟಕ್ಕೆ ದಾರಿಯಾಯಿತು ಆದುದರಿಂದ ನಿನ್ನ ದಾರಿ ಏನೆಂಬುದನ್ನು ನೀನೇ ನಿಶ್ಚಯಿಸಿಕೋ" ಎಂದು ಸ್ವಲ್ಪ ನಿಷ್ಠುರವಾಗಿಯೇ ಹೇಳಿದಾಗ ನಾಗತಿ "ಈ ಹೊತ್ತಿನಲ್ಲಿ ನೀವೂ ನನ್ನ ಕೈ ಬಿಡಬೇಡಿ ತಂದೆ" ಎಂದು ಆರ್ತಳಾಗಿ ಬೇಡಿಕೊಳ್ಳುವಳು.

ಆಗ ಗುರುಗಳು "ಶರಣನಿಗೆ ಮರಣವಾದರೂ ಸತ್ಯಕ್ಕೆ ನ್ಯಾಯಕ್ಕೆ ಧರ್ಮಕ್ಕೆ ಚ್ಯುತಿ ಬರಬಾರದು. ಶರಣನ ಬದುಕೇ ಸತ್ಯ, ಸತ್ಯವೆಂಬುದೇ ಶರಣ" ಎಂದು ಶಿವಯೋಗಿ ಅಪ್ಪಣೆ ಕೊಡಿಸಿದ್ದಾರೆ. ನಾನು ಹೇಳುವುದೂ ಅಷ್ಟೇ ಭೀತಿಪರಳಾಗಿ ಧರ್ಮಮಾರ್ಗ ಬಿಡಬೇಡ ಭಯಕ್ಕೆ ಸೋತು ಅಧರ್ಮಕ್ಕೆ ಸಹಾಯಕಳಾಗಬೇಡ." ಎಂದು ಉಪದೇಶಿಸುತ್ತಾರೆ. ತನ್ನ ಪಾಪದ ಫಲವಾಗಿ ಇಂಥ ಪರೀಕ್ಷೆ ತನಗೆ ಬಂದಿದೆಯೆಂದು ನಾಗತಿ ವ್ಯಕ್ತ ಪಡಿಸಿದಾಗ "ಅದು ಪಾಪದ ಫಲವಲ್ಲ ಶರಣ ಪುಣ್ಯಗಳಿಸುವ ರೀತಿ ಇದು ಶರಣನ ಚಿತ್ತದಲ್ಲಿ ಕಾಯದ ಹಂಗು ಎಷ್ಟು ಉಳಿದಿದೆ ಎಂದು ಶಿವ ಪರೀಕ್ಷಿಸುವ

ರೀತಿ ಮಗಳೇ" ಎಂದು ಹೇಳಲು ನಾಗತಿಗೆ ಉತ್ತರ ಸಿಗುತ್ತದೆ. ಅವಳು ಏನೋ ಸಮಾಧಾನ ಮಾಡಿಕೊಂಡು ಗುರುಗಳ ಅಪ್ಪಣೆ ಪಡೆದುಕೊಂಡು ಹಿಂತಿರುಗುವಳು.

ಮುದ್ದಣ್ಣ ಮರುದಿನ ನಾಗತಿಯನ್ನು ಕಾಣಲು ಬಂದಾಗ "ಅವರು ವಿಷಪಾನ ಮಾಡಿ ಮೃತರಾದರು" ಎಂದು ನಾಗತಿಯ ಸಜ್ಜೆಯ ದಾಸಿ ಹೇಳುವಳು. ನಾಗತಿಯ ಸಾವು ಮುದ್ದಣ್ಣನ ಎಲ್ಲ ಯೋಜನೆಗಳನ್ನು ತಲೆ ಕೆಳಗು ಮಾಡುತ್ತದೆ. ಯಾವುದರಿಂದ ತನ್ನ ಉದ್ದೇಶ ಸಾಧನೆ ಸುಲಭವಾಗಬಹುದೆಂದು ಭಾವಿಸಿದ್ದನೋ, ಯಾವುದು ತನ್ನ ಕೈಯೊಳಗಿನ ಮಾತೆಂದು ನಂಬಿದ್ದನೋ ಅದು ದೂರವಾಗಿ ಸುಲಭವೆಂದು ಭಾವಿಸಿದ ಕೆಲಸ ಅಷ್ಟೇ ಕಷ್ಟವೆಂದು ಕಾಣಿಸ ತೊಡಗಿತು.

ಹೀಗೆ ನಾಗತಿಯು ತನ್ನ ಜೀವನದಲ್ಲಿ ಸತ್ಯ ನಿಷ್ಠೆಯನ್ನು ಪರೀಕ್ಷಿಸುವ ಅವಕಾಶ ವನ್ನೇ ಮುದ್ದಣ್ಣನಿಗೆ ಕೊಡದೆ ಪ್ರಾಣಾರ್ಪಣೆ ಮಾಡಿದಳು. ಒಂದು ದೃಷ್ಟಿಯಿಂದ ಆತ್ಮ ಹತ್ಯೆ ಹೇಡಿಗಳ ಲಕ್ಷಣವೆನಿಸಿದರೂ ಇನ್ನೊಂದು ದೃಷ್ಟಿಯಲ್ಲಿ ಪಾಪಿಗಳ, ದುಷ್ಟರ ಹಿಂಸೆಗೊಳಗಾಗುವುದಕ್ಕಿಂತ ಸಾಯುವುದೇ ಮೇಲು ಅಲ್ಲವೆ? ಅಂತೆಯೇ ಆದಿನ ಪತಿವ್ರತಾ ಸ್ತ್ರೀಯರು ಗಂಡನ ಮರಣಾನಂತರದಲ್ಲಿ ತಾವೂ ಸತಿ ಹೋಗು ತ್ತಿದ್ದರು ಈ ಚಿತ್ರದುರ್ಗದ ಅನೇಕ ನಾಗತಿಯರಿಗೆ ಸಹಜ ಸಾವು ಇಲ್ಲವೆಂದೇ ಹೇಳಬೇಕು. ಗಂಡನಿಗಾಗಿ ಸತಿ ಹೋಗುವುದು ಇಲ್ಲವೆ ರಾಜ್ಯಕ್ಕಾಗಿ ಪ್ರಾಣಾರ್ಪಣೆ.

ಮುದ್ದಣ್ಣನಿಂದ ನಾಗತಿಯ ಆತ್ಮಹತ್ಯೆಯ ಸುದ್ದಿಯನ್ನು ಕೇಳಿದ ಉಗ್ರ ಚೆನ್ನವೀರಸ್ವಾಮಿಗಳಿಗೆ ಮಿಂಚು ಸೋಂಕಿದಂತಾಗುತ್ತದೆ. "ನಾಗತಿಯರು ಆತ್ಮ ಹತ್ಯೆ ಮಾಡಿಕೊಂಡರೆ? ಅದು ಮತ್ತಷ್ಟು ದುಃಖದ ಸುದ್ದಿ" ಎನ್ನುತ್ತಾರೆ ಸ್ವಾಮಿಗಳು. ಇಲ್ಲಿ ತಮ್ಮ ಧರ್ಮೋಪದೇಶ, ಅವಳು ಬಾಳಿನಲ್ಲಿ ಸಮಸ್ಯೆಗಳನ್ನು ಎದುರಿಸಲು ಸಮರ್ಥವಾಗಲಿಲ್ಲವಲ್ಲ ಎಂಬ ಭಾವವೂ ಒಡ ಮೂಡುತ್ತದೆ. ನಾಗತಿಯ ಆತ್ಮ ಹತ್ಯೆ ಸ್ವಾಮಿಗಳಿಂದ ಪ್ರೇರಿತವಾದುದು ಎಂದು, ರಾಜಕೀಯಕ್ಕಿಳಿದ ಸ್ವಾಮಿಗಳನ್ನು ದಳವಾಯಿ ಮುದ್ದಣ್ಣ ದುರ್ಗಬಿಡಿಸಿ ಗಡಿಪಾರು ಮಾಡಿಸಲು ಅಪ್ಪಣೆ ಕೊಡುತ್ತಾನೆ.

ಹೀಗೆ ಮಲ್ಲವ್ವನಾಗತಿಯ ಪಾತ್ರ ಮೊದ ಮೊದಲು ಸಪ್ಪೆಯಾಗಿ, ಸ್ವಾರ್ಥದ ರೇಖೆ ಹೊಂದಿಕೊಂಡುದಾಗಿ ಅನಿಸಿದರೂ ಕೊನೆಯಲ್ಲಿ ಚೊಕ್ಕ ಚಿನ್ನವಾಗಿ ಬೆಳಗಿದೆ. ಓಬವ್ವನಾಗತಿಯ ಪಾತ್ರಕ್ಕೂ ಇವಳ ಪಾತ್ರಕ್ಕೂ ತುಂಬ ಹೋಲಿಕೆ ಇದೆ. ಇಬ್ಬರೂ ಆರಂಭದಲ್ಲಿ ರಾಜಕೀಯದಿಂದ ದೂರವಿದ್ದರೂ ಓಬವ್ವನಾಗತಿ ಮಂತ್ರಿ ಭುವನಪ್ಪ ನವರ ಹೇಳಿಕೆಯಿಂದಾಗಿ ರಾಜಕೀಯಕ್ಕೆ ಇಳಿದರೆ, ಮಲ್ಲವ್ವನಾಗತಿ ಆ ಮಂತ್ರಿಯ ಮಗ ಪರಶುರಾಮ ಮಂತ್ರಿಯ ಅಭಿಪ್ರಾಯದ ಮೇರೆಗೆ ರಾಜಕೀಯದಲ್ಲಿ ಪ್ರವೇಶಿಸುತ್ತಾಳೆ. ಅಂಥ ಧೈರ್ಯವಾಗಲೀ ಚಾಣಾಕ್ಷತನವಾಗಲೀ ಇಬ್ಬರಲ್ಲೂ ಇಲ್ಲದೆ ಇದ್ದುದರಿಂದ ಒಂದು ರೀತಿಯ ಅಲಿಪ್ತತೆಯಿಂದಲೇ ಇಬ್ಬರೂ ವರ್ತಿಸುತ್ತಾರೆ. ಕೊನೆ ಯಲ್ಲಿ ಇಬ್ಬರೂ ಆತ್ಮ ಹತ್ಯೆ ಮಾಡಿ ಕೊಳ್ಳುತ್ತಾರೆ. ಒಬ್ಬಳು ನೀರಿಗೆ ಮುಳುಗಿದರೆ,

ಇನ್ನೊಬ್ಬಳು ವಿಷಪ್ರಾಶನ ಮಾಡುವುದುಂಟು. ಹೀಗೆ ರಾಜಕೀಯದಲ್ಲಿ ಅಭಿರುಚಿ ಇಲ್ಲದಿದ್ದರೂ ಇನ್ನೊಬ್ಬರ ಹೇಳಿಕೆಯಿಂದ ರಾಜಕೀಯಕ್ಕೆ ಇಳಿದು ಪ್ರಾಣಾರ್ಪಣ ಮಾಡಿ ಕೊಳ್ಳುವ ಈ ಮೂರು ಅಂಶಗಳಲ್ಲಿ ಓಬವ್ವನಾಗತಿಗೂ ಮಲ್ಲವ್ವನಾಗತಿಗೂ ತುಂಬ ಸಾಮ್ಯವಿದೆ. ಅತ್ತೆಗೆ ತಕ್ಕ ಸೊಸೆ ಎಂದು ಹೇಳ ಬಹುದೇನೊ! ಹೀಗೆ ತಮ್ಮ ತನವನ್ನು ಅತಿ ಕಡಿಮೆ ಮೆರೆದ ಸೂತ್ರದ ಗೊಂಬೆಗಳಂತೆ ವರ್ತಿಸಿದ ಈ ಇಬ್ಬರೂ ನಾಗತಿಯರು ಮುಗ್ಧತೆ, ಪ್ರಾಣಾರ್ಪಣೆ ವಿಷಯ ಬಿಟ್ಟರೆ ಓದುಗರ ಮನಸ್ಸಿನಲ್ಲುಳಿಯಲಾರರು. ದುರ್ಗದ ಇತಿಹಾಸವನ್ನು ತಿಳಿಸುವ ತಿರುಗುಬಾಣ ಕಾದಂಬರಿಯ ಕೊನೆಯ ಭಾಗದಲ್ಲಿ ಬರುವ (ಬಹುತರವಾಗಿ) ಕೊನೆಯ ಸ್ತ್ರೀಪಾತ್ರವೆಂದರೆ ಮಲ್ಲಭಟರ ಹಳ್ಳಿಯ ಭರಮಣ್ಣ ಗೌಡರ ಹೆಂಡತಿಯದು. ಅವಳು, ಬಂದ ಸೈನಿಕರ ಮನಃ ಪರಿವರ್ತನೆ ಮಾಡಿ ಮುದ್ದಣ್ಣನ ಆಪ್ತನಾದ ದಾಸನಾಯಕನನ್ನೇ ಪ್ರತಿಭಟಿಸಲು ಹಚ್ಚುತ್ತಾಳೆ.

ಸೈನಿಕರು ಬೇರೆ ಯಾರೂ ಆಗಿರದೆ ತಮ್ಮ ಅಣ್ಣ ತಮ್ಮಂದಿರೆಂದು ಒಳ್ಳೆಯ ಮಾತುಗಳನ್ನಾಡಿ ಕೊಲ್ಲ ಬಂದವರಿಗೆ ಊಟ ಬಡಿಸುವದಾಗಿ ಹೇಳಿದಾಗ ಅವರ ಮನಸ್ಸು ಕರಗುತ್ತದೆ. ಈ ಮಾನಸಿಕ ಪರಿವರ್ತನೆಗೆ ದಾಸನಾಯಕ ಬೇಗ ಅಳವಡದಿದ್ದರೂ ಅವನಿಗೆ ತನ್ನ ಕಡೆಯ ಸೈನಿಕರೆಲ್ಲ ಗೌಡತಿಯ ಕಡೆಗಾದುದನ್ನು ಕಂಡು ಉಸಿರುಕಟ್ಟಿದಂತಾಗುತ್ತದೆ. ಹೀಗಾಗಿ ಎಲ್ಲ ಸೈನಿಕರನ್ನು ಅವನು ತಾನೂ ಹಿಂಬಾಲಿಸಬೇಕಾಗುತ್ತದೆ.

ಈ ಸಂದರ್ಭದಲ್ಲಿ ಗೌಡತಿ ತನ್ನ ಹಳ್ಳಿಗೆ ಬಂದ ಸೇನೆಯನ್ನು ತಾನೊಬ್ಬಳೇ ಎದುರಿಸಿ ಧೈರ್ಯದಿಂದ ದಾಸನಾಯಕನ ಏದು, ಒದೆತಗಳನ್ನು ತಿಂದು, ಗೌಡರು ಊರಲ್ಲಿಲ್ಲ ಎಂಬ ಸುದ್ದಿ ತಿಳಿಸಿ ಅವರು ಬರುವವರೆಗೆ ಊಟ ಮಾಡಬಹುದೆಂದು ಹೇಳುವಳು. "ಸೈನ್ಯಕ್ಕೆ ಸೇರ್ಬುಟ್ರೆ ನೀವು ಮನುಷ್ಯರೇ ಅಲ್ವಾ ?" ಎಂದು ಕೇಳುವ ಮಾತು ಸಾರ್ವಕಾಲಿಕವಾದುದು.

ಸೈನಿಕರಿಗೆ ಊಟಕ್ಕೆ ಕೊಡುತ್ತ, ಗೌಡರಿಗೂ ತನಗೂ ಆದ ಮಾತು ಕತೆಗಳನ್ನು ವಿವರಿಸುತ್ತ ಗೌಡತಿ "ಸೇನೇಲಿರೊ ಹಳ್ಳಿ ಮಕ್ಕಳು ದಳವಾಯಿ ತಲೆ ಉಳಿಸಾಕಿಲ್ಲ ಅವರನ್ನು ಒಳ್ಳೆ ತಾಯಿಂದಿರೆ ಹಡೆದಿರೋದು" ಎಂದು ಅವರ ಬಗ್ಗೆ ಅಭಿಮಾನದ ಮಾತುಗಳನ್ನಾಡಿ ಅವರಿಗೆ ನ್ಯಾಯಾನ್ಯಾಯಗಳ ಕುರಿತು ತಿಳಿಸುವಳು. ಊಟಕ್ಕೆ ಹೋಳಿಗೆ ಹಾಲು. ದಾಸನಾಯಕನೂ ಊಟಕ್ಕೆ ಕುಳಿತಾಗ ಎದ್ದು ಗೌಡತಿಯ ಕಾಲು ಹಿಡಿದು ಕ್ಷಮೆ ಕೇಳುವನು. ಈ ಮನಃ ಪರಿವರ್ತನೆಯ ಸಂದರ್ಭ ಪವಾಡ ಸದೃಶವೆನಿಸುತ್ತದೆ, ಸೈನಿಕರಿಗೆ. ಓದುಗರಿಗೂ ಹಾಗೆ ಭಾವನೆ ಬಾರದಿರದು.

ಮಲ್ಲಭಟರ ಹಳ್ಳಿಯಲ್ಲಿ ಅಷ್ಟು ಹೀಗಾದರೆ ಉಳಿದ ಹಳ್ಳಿಗಳ ಕಥೆಯೇ ಬೇರೆ ತೆರನಾಗಿತ್ತು. ಸೈನಿಕರು ಸ್ನೇಹ ವಿಶ್ವಾಸದ ಮಾತುಗಳಿಗೆ ವಶರಾಗದೆ ಮರೆತು

ನಿಂತರು. ಹಳ್ಳಿಯಲ್ಲಿ ಗಂಡಸರನ್ನು ಕಾಣದೆ ಹೆಚ್ಚಾಗಿ ಹೆಂಗಸರು ಕಂಡುದು ಅವರಿಗೆ ತಮ್ಮ ಕೆಲಸ ಮತ್ತಷ್ಟು ಸುಲಭವಾಯಿತು ಎಂತಲೇ ತೋರಿತು.

ಗಾಣದಾಳು ಗ್ರಾಮಕ್ಕೆ ಬಂದ ಸೈನಿಕರು ವಿಶ್ವಾಸದಿಂದ ಬಂದ ಹೆಂಗಸರ ಮೈಮೇಲಿನ ಒಡವೆಗಳಿಗೇ ಕೈ ಹಾಕಿದರು. ಅಡ್ಡ ಬಂದವನನ್ನು ಕತ್ತರಿಸಿದರು. ಕಣ್ಣಿಗೆ ಚಲುವಾಗಿ ಕಂಡ ಹೆಂಗಸರನ್ನು ಕೆಡಿಸಿದರು. ಹೀಗೆ ದುರ್ಗಕ್ಕೆ ಅನೇಕ ಸಾಮಾನ್ಯ ಹೆಂಗಳೆಯರ ಬಲಿದಾನವೂ ಆಯಿತು.

ಗುಡ್ಡಗಳಲ್ಲಿ ಅವಿತು ಕೊಂಡು ಕುಳಿತ ಗಾಣದಾಳು ಹಳ್ಳಿಯ ಗಂಡಸರು ಎಲ್ಲ ಸೈನಿಕರನ್ನು ಕತ್ತಲಾದ ಮೇಲೆ ಹಿಂತಿರುಗುವಾಗ ಕಲ್ಲು ಬೀಸಿ ತಡೆದು, ಬೆಳೆಯನ್ನು ಕೊಯ್ಯುವಂತೆ ಸೈನಿಕರ ತಲೆಗಳನ್ನು ಕುಡುಗೋಲು, ಕೊಡಲಿಗಳಿಂದ ತರಿದು, ಹೆಣಗಳ ಬಣವೆಯೊಟ್ಟಿದರು. ಆ ರುಂಡಗಳನ್ನೆಲ್ಲ ದಳವಾಯಿಗೆ ಪಟ್ಟಗಾಣಿಕೆಯೆಂದು ಕೊಡಲು ಗರಡಿಯ ಯಜಮಾನ ಕೆಲವರನ್ನು ಕಳಿಸುತ್ತಾನೆ.

ಸೈನಿಕರನ್ನು ಪ್ರತಿಭಟಿಸಿ ಮಾರಿಗೆ ಬಲಿಕೊಟ್ಟಂತೆ ಜನರನ್ನು ಬಲಿ ಕೊಡುವುದರಲ್ಲಿ ಏನೂ ಅರ್ಥವಿಲ್ಲವೆಂದು ಪರಶುರಾಮಪ್ಪ ಭರಮಣ್ಣ ಗೌಡರಿಗೆ ಹೇಳುವಾಗ ಚಿನ್ನಯ್ಯ ಬಂದು ಅವರ ಮನೆಯ ಜನರನ್ನು ಮುದ್ದಣ್ಣ ಬಂಧಿಸಿರುವುದಾಗಿ ತಿಳಿಸುವನು.

ಗಾಣದಾಳು ಹಳ್ಳಿಯ ಮರ್ದನಕ್ಕೆ ರಾಮಣ್ಣನ ಮುಖಂಡತ್ವದಲ್ಲಿ ಮತ್ತೆ ಸೇನೆ ಬರುತ್ತದೆ. ಆದರೆ ಅವನ ನಿರೀಕ್ಷೆಯಂತಾಗಲಿಲ್ಲ. ಪೌರುಷ ಕೊಚ್ಚಿಕೊಂಡು ಬಂದ ಅವನನ್ನು ನಿರ್ಜನವಾದ ಗ್ರಾಮ, ಬರಿದಾದ ಮನೆಗಳು ನೋಡಿ, ಅಣಕಿಸಿ ನಕ್ಕಂತಾಯಿತು. ಆದರೆ ತನ್ನ ದುಷ್ಟ ಬುದ್ಧಿ ಬಿಡದೆ ಬರಿದಾದ ಹಳ್ಳಿಯ ಒಂದು ಮನೆಯೂ ಉಳಿಯದಂತೆ ನೆಲಸಮ ಮಾಡಲು ಅಪ್ಪಣೆ ಮಾಡುತ್ತಾನೆ.

ಹೀಗೆ ಚಿತ್ರದುರ್ಗದ ಇತಿಹಾಸದಲ್ಲಿ ರಾಜಮನೆತನದ ಹೆಂಗಳೆಯರಷ್ಟೇ ಬಲಿಯಾಗದೇ ಸಾಮಾನ್ಯ ಸ್ತ್ರೀಯರೂ ಅನೇಕ ಜನ ತಮ್ಮ ಪ್ರಾಣಾರ್ಪಣೆ ಮಾಡಿದ್ದಾರೆ. ದುರ್ಗದ ಇತಿಹಾಸದಲ್ಲಿ ಈ ದುರ್ಗಿಯರ ಪಾತ್ರ ಬಹು ಹಿರಿದೆಂದೇ ಹೇಳಬೇಕು.

ಶೈಲಿಯ ಸೊಬಗು

— ಸುಂದರರಾಜ್

ಒಂದು ಸಾಹಿತ್ಯ ಕೃತಿಯ ನಿರ್ಮಾಣಕ್ಕೆ ಸಾಹಿತಿ ತನ್ನ ಭಾವನೆಗಳನ್ನು ಅಭಿವ್ಯಕ್ತ ಗೊಳಿಸಲು ಮಾಧ್ಯಮವನ್ನು ಭಾಷೆಯಲ್ಲಿ ಯಾವ ವಿಧವಾಗಿ ಪ್ರಕಟ ಪಡಿಸುವನೋ ಅದನ್ನು ಅವನ ಶೈಲಿ ಎನ್ನಬಹುದು. ಈ ಶೈಲಿಯ ಬಗ್ಗೆ ಬಹಳವಾಗಿ ವಿಚಾರ ಮಾಡಿದ್ದಾರೆ. 'ಆಲೋಚನೆಯ ಉಡಿಗೆಯೇ ಶೈಲಿ'-ಅದು ಎಷ್ಟು ಸೂಕ್ತವಾದುದೋ ಅಷ್ಟು ಸಭ್ಯತೆ. "ಆಲೋಚನೆಗೆ ಸಾಕಷ್ಟು ಸಮರ್ಪಕ ಭಾಷೆಯನ್ನು ತೊಡಿಸುವ ಸಮಾರಂಭವೇ ಶೈಲಿ" ಎಂದು ಹೇಳಿದ್ದಾರೆ. ಯಾವುದೇ ವಿಚಾರವನ್ನಾಗಲೀ, ಭಾವನೆಯನ್ನಾಗಲೀ ಲೇಖಕ ಭಾಷೆಯ ಮೂಲಕ ನಿರೂಪಿಸುತ್ತಾನೆ. ಈ ಭಾಷೆ ಲೇಖಕರಲ್ಲಿ ಭಿನ್ನವಾಗಿರಬಹುದು. ಇದೇ ರೀತಿ ಶೈಲಿಯಲ್ಲಿಯೂ ಸಹ ಭಿನ್ನತೆಯನ್ನು ಕಾಣಬಹುದು. ಕೆಲವರು ಹಿಂದಿನ ಲೇಖಕರ ಶೈಲಿಯನ್ನೇ ಬಳಸಬಹುದು. ಮತ್ತೆ ಕೆಲವರು ತಮ್ಮದೇ ಆದ ಶೈಲಿಯನ್ನು ನಿರ್ಮಿಸಿಕೊಳ್ಳಬಹುದು. ಉತ್ತಮ ಲೇಖಕನಿಗೆ ತನ್ನದೇ ಆದ ಒಂದು ಭಾಷಾ ಸಾಮರ್ಥ್ಯ ಇರುತ್ತದೆ. ವಸ್ತು, ಪಾತ್ರಕ್ಕೆ ತಕ್ಕಂತೆ ಸುವ್ಯವಸ್ಥಿತವಾದ ಪದ ಜೋಡಣೆಯಿಂದ ಆಕರ್ಷಿಸುತ್ತಾನೆ. ಓದುಗರ ಮನಸೆಳೆಯುತ್ತಾನೆ. ನಿಜವಾದ ಪ್ರತಿಭಾವಂತ ಲೇಖಕ ಎಲ್ಲ ಪ್ರಸಂಗಗಳಲ್ಲಿಯೂ, ಎಲ್ಲ ಸನ್ನಿವೇಶಗಳಲ್ಲಿಯೂ ಒಂದೇ ರೀತಿಯಾಗಿ ಬರೆಯಲಿಚ್ಛಿಸುವುದೇ ಇಲ್ಲ. ತನ್ನ ಸ್ವಸಾಮರ್ಥ್ಯದಿಂದ ರಚಿಸಿದ ಶೈಲಿ ವಸ್ತು ಮತ್ತು ಸನ್ನಿವೇಶಕ್ಕೆ ತಕ್ಕಂತೆ ಭಿನ್ನವಾಗಿರುತ್ತದೆ.

ಭಾಷೆ ಹಾಗೂ ಶೈಲಿಯಲ್ಲಿ ತನ್ನ ತನವನ್ನುಳಿಸಿಕೊಂಡಿರುವವರು ಕೆಲವೇ ಬರಹಗಾರರು. ಅಂತಹವರಲ್ಲಿ ತ.ರಾ.ಸು. ಒಬ್ಬರು. ಇವರ ಭಾಷೆಯ ಮೋಡಿ ಎಂತಹವರನ್ನೂ ಚಕಿತರನ್ನಾಗಿಸುತ್ತದೆ. ಸಾವಿರಾರು ಗ್ರಂಥಗಳನ್ನು ಓದಿ ಅರಗಿಸಿಕೊಂಡ ಅಧ್ಯಯನ ಶೀಲರು. ವಿಷಯ ಅಲ್ಪವಾದರೂ ಭಾಷೆಯ ಕಟ್ಟಡದಲ್ಲಿ ಭವ್ಯವಾಗಿಸುವ ಕಲೆ ಇವರದು. ಚಿತ್ರಮಯವಾದ ಭಾಷೆ. ಕಣ್ಣಿಗೆ ಕಟ್ಟುವಂತೆ ನೋಟವನ್ನಾಗಲಿ, ಚಿತ್ರವನ್ನಾಗಲಿ, ವ್ಯಕ್ತಿಗಳನ್ನಾಗಲಿ ಚಿತ್ರಿಸಬಲ್ಲರು.

ತ.ರಾ.ಸು. ಶೈಲಿಯ ಮೇಲೆ ಅನ್ಯ ಲೇಖಕರ ಪ್ರಭಾವ ಆಗಿರುವುದುಂಟು. ಅವರಿಗೆ ಅ.ನ.ಕೃ. ರವರಲ್ಲಿ ಮೆಚ್ಚುಗೆ ಬಹಳ. ಪ್ರಾರಂಭದ ಕಾದಂಬರಿಗಳಲ್ಲಿ ಅ.ನ.ಕೃ. ರವರನ್ನೇ ಅನುಸರಿಸಿದರು. 'ಮಸಣದ ಹೂವು' ಮತ್ತು 'ಬಿಡುಗಡೆಯ ಬೇಡಿ' ಅ.ನ.ಕೃ. ರೀತಿಯನ್ನು ಹೆಚ್ಚು ಸ್ಪಷ್ಟಪಡಿಸುವುವು. ಅ.ನ.ಕೃ. ರವರದು ಸರಳವಾದ ಶೈಲಿ. ಅವರ ಎಲ್ಲ ಕಾದಂಬರಿಗಳಲ್ಲಿ ಬಳಸುವ ಭಾಷೆ ಒಂದೇ ರೀತಿಯದು. ಕಾದಂಬರಿಯನ್ನು ಓದಿ ಇದು ಇಂಥವರೇ ಬರೆದದ್ದೆಂದು ಗುರುತಿಸಬಹುದು.

ತ.ರಾ.ಸು. ರವರದು ಇದಕ್ಕಿಂತ ತುಸು ಭಿನ್ನ. ಇವರದು ಸಾಲಂಕೃತ ಶೈಲಿ. ಒಂದು ವಸ್ತುವನ್ನು ರೂಪಿಸುವಾಗ ವಿವರಗಳೊಂದಿಗೆ ವರ್ಣಿಸಬೇಕೆಂಬುದು ಇವರ ಅಭಿಲಾಷೆ. ಅಪಾರವಾದ ಪದ ಸಂಪತ್ತು ಇವರದು. ಕಲ್ಪನೆಯ ಚಟುವಟಿಕೆ ಬಲು ಹೆಚ್ಚು. ವಾಕ್ಯಸರಣಿಯ ಓಟ ಅತಿ ವೇಗ. ಇವರಿಗೆ ವಸ್ತುವಿಗಿಂತ ಶೈಲಿ ಎಂದಿಗೂ ಕೀಳಲ್ಲ. ಎರಡಕ್ಕೂ ಚಿತ್ರವನ್ನು ಸರಿಸಮವಾಗಿಯೇ ಕೊಡುತ್ತಾರೆ. ಇದೇ ಇವರ ಜಾಣ್ಮೆ.

ಇವರ ಪ್ರಾರಂಭದ ಕಾದಂಬರಿಗಳಲ್ಲಿ ಆವೇಶ ಹೆಚ್ಚು. ಇದೇ ಅವರ ಕತೆಗೆ ವೇಗವನ್ನೂ, ಪಾತ್ರಗಳಿಗೆ ಜೀವಂತ ತನವನ್ನೂ ತಂದು ಕೊಟ್ಟಿದೆ. ಇವರ ಕಾದಂಬರಿಗಳನ್ನು ಬಾಯಿತೆರೆದೇ ಓದಬೇಕಾಗುತ್ತದೆ. ಇವರ ಕಥೆಗಳಲ್ಲಿ ವೈವಿಧ್ಯವಿದೆ, ಕಲೆಯಿದೆ. 0-0=0 ಒಂದು ಅಪೂರ್ವ ಕಥೆ. ಕಥಾಂಶವೇ ಇಲ್ಲ ಎನ್ನಬಹುದಾದ ಈ ರಚನೆಯಲ್ಲಿ ಪ್ರತಿಮೆಗಳಿಂದ ಕಥೆಯನ್ನು ಬೆಳೆಸಿದ್ದಾರೆ. 'ಎರಡು ಮುಖ' ತ.ರಾ.ಸು. ಕಲಾವಂತಿಕೆಗೆ ಸಾಕ್ಷಿಯಾಗಿದೆ. ಬರಹದಲ್ಲಿ ರಸದ ಬಗ್ಗೆ ಹರಿಸುವ ಜಾಣ್ಮೆ ತ.ರಾ.ಸು. ರವರದು. ಪ್ರಗತಿ ಶೀಲ ಸಾಹಿತ್ಯ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ತ.ರಾ.ಸು. ಆರಂಭದಲ್ಲಿಯೇ 0-0=0 ಎಂಬ ಕಥೆಯನ್ನು 'ನನ್ನ ಅವತಾರ' ಎಂಬ ಕವನವನ್ನು 'ಬಿಡುಗಡೆಯ ಬೇಡಿ' ಎಂಬ ಕಾದಂಬರಿಯನ್ನು ಬರೆದು ನವ್ಯತೆಯ ಪ್ರಯೋಗ ಮಾಡಿದ್ದಾರೆ.

'ಮನೆಗೆ ಬಂದ ಮಹಾಲಕ್ಷ್ಮಿ' ಇವರ ಮೊಟ್ಟ ಮೊದಲ ಕಾದಂಬರಿ. ಇದೊಂದು ಮನೋ ವೈಜ್ಞಾನಿಕ ಕಾದಂಬರಿ. ಇವರ ನಿರೂಪಣೆ ತುಂಬ ಹೃದ್ಯ ವಾಗಿದೆ. ಪ್ರಭಾವವಾಗಿದೆ. ಇಡೀ ಕುಟುಂಬವೊಂದರ ಚಿತ್ರವನ್ನು ಸ್ಪಷ್ಟವಾಗಿ ತೇದಿದ್ದಾರೆ. ಇವರ ಎರಡನೆಯ ಕಾದಂಬರಿ 'ರಕ್ತ ತರ್ಪಣ'. ಸ್ವಾತಂತ್ರ್ಯ ಹೋರಾಟ ಗಾರನೊಬ್ಬನ ಹಾಗೂ ಒಂದು ಗ್ರಾಮದ ವಾಸ್ತವ ಚಿತ್ರಣ ಇಲ್ಲಿದೆ. ಸ್ವತಃ ಸ್ವಾತಂತ್ರ್ಯ ಹೋರಾಟಗಾರರಾದ ತ.ರಾ.ಸು. ರವರು ಈ ಪಾತ್ರವನ್ನು ಚಿತ್ರಿಸು ವುದರಲ್ಲಿ ಯಶಸ್ವಿಯಾಗಿದ್ದಾರೆ. ಪ್ರಪಂಚ ಜ್ಞಾನ, ಗ್ರಂಥ ಜ್ಞಾನ ಎರಡೂ ಸಾಕಷ್ಟಿ ರುವ ತ.ರಾ.ಸು. ರವರಿಗೆ ಯಾವುದೇ ಪಾತ್ರವನ್ನಾದಾದರೂ ಸಂಪೂರ್ಣವಾಗಿ ಚಿತ್ರಿಸದಿದ್ದಲ್ಲಿ ತೃಪ್ತಿಯಿಲ್ಲ. 'ಮುಂಜಾವಿನಿಂದ ಮುಂಜಾವು' ಇದೊಂದು ಅಪೂರ್ವ ಕಾದಂಬರಿ. ಪತ್ರಿಕೋದ್ಯೋಗಿ, ಸಾಮಾನ್ಯ ನೌಕರ ಹಾಗೂ ಪುರುಷಾವತಾರದಲ್ಲಿ ಬರುವ ಭಿಕ್ಷುಕರ ಬಾಳನ್ನು ಕರುಳು ಮಿಡಿಯುವಂತೆ ಚಿತ್ರಿಸಿದ್ದಾರೆ. ಯಾರ ಬಾಳನ್ನಾದರೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸ ಬಲ್ಲ ಕಲಾ ಕೌಶಲ ತ.ರಾ.ಸು. ರವರದು. ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ಇಡೀ ಪಂಗಡದ ಕಷ್ಟ ಕಾರ್ಪಣ್ಯ ಕಂದಿತ ಗಳನ್ನು ಸ್ಪಷ್ಟವಾಗಿ ಚಿತ್ರಿಸಬಲ್ಲರು.

ಇವರ ಕಾದಂಬರಿಗಳಲ್ಲಿ ಬರುವ ಪಾತ್ರಗಳು, ಸನ್ನಿವೇಶಗಳು ಸ್ಪಷ್ಟವಾಗಿ ಓದುಗರ ಮುಂದೆ ಜೀವಂತವಾಗಿ ಮೂಡಿ ಬರುತ್ತವೆ ಇಲ್ಲಿ ಬರುವ ಸಂಭಾಷಣೆಯೇ

ಒಂದು ಅಪೂರ್ವ ದೃಶ್ಯವನ್ನು ಓದುಗನ ಮುಂದೆ ಸೃಷ್ಟಿಸುತ್ತದೆ.

'ನಾಗರಹಾವು,' 'ಎರಡು ಹೆಣ್ಣು ಒಂದು ಗಂಡು,' 'ಸರ್ಪಮತ್ಸರ' ಈ ಸರಣಿಯಲ್ಲಿ ಬಳಸಿರುವ ಭಾಷೆ ಆವೇಶ ಪೂರಿತವಾದದ್ದು. ಓದುತ್ತಿದ್ದಂತೆಯೇ ನಾಟಕದ ದೃಶ್ಯವನ್ನು ನೋಡುತ್ತಿರುವ ಅನುಭವವಾಗುತ್ತದೆ. ಇದರ ನಾಯಕನಾಗಿ ಬರುವ ಪಾತ್ರ ರಾಮಾಚಾರಿ, ಯುವಕ, ರಾಜಸ ಗುಣವೇ ಪ್ರಧಾನವಾಗಿ ಉಳ್ಳ ಈ ಯುವಕನ ಪಾತ್ರದ ತುಂಬಾ ಆವೇಶದಿಂದಲೇ ಧ್ವನಿಸುತ್ತದೆ. ತ.ರಾ.ಸು. ರವರಿಗೆ ಎಲ್ಲ ಸನ್ನಿವೇಶಕ್ಕಿಂತಲೂ ಪ್ರಣಯ ಪ್ರಸಂಗ ಮತ್ತು ರೌದ್ರತೆಯನ್ನು ಚಿತ್ರಿಸುವಾಗಲಂತೂ ಎಲ್ಲಿಲ್ಲದ ತನ್ಮಯತೆ, ಇದರ ತುಂಬ ಸೇಡಿನ ಮನೋಭಾವನೆಯನ್ನು ಜಲಂತವಾಗಿ ಮೂಡಿಸಿದ್ದಾರೆ ರಾಜ್ಯಕ್ಕಾಗಿ, ರಕ್ತಕ್ಕಾಗಿ, ಹಾತೊರೆಯುವ ಈ ಪಾತ್ರಗಳಿಗೆ ತ.ರಾ.ಸು. ಜೀವಕಳೆ ತುಂಬಿದ್ದಾರೆ. ತ.ರಾ.ಸು. ತಮ್ಮ ಶೈಲಿಯನ್ನು ಸಾಮಾಜಿಕ ಕಾದಂಬರಿಗಳಿಗಿಂತ ಇತಿಹಾಸಿಕ ಕಾದಂಬರಿಗಳಲ್ಲಿ ಚೆನ್ನಾಗಿ ದುಡಿಸಿ ಕೊಂಡಿದ್ದಾರೆ.

ಆರಂಭದಲ್ಲಿ ತ.ರಾ.ಸು ತಮ್ಮ ಕೃತಿಗಳಲ್ಲಿ ಸನ್ನಿವೇಶಗಳನ್ನು ವರ್ಣಿಸಿದುದಿದೆ. ಆದರೆ ಮುಂದೆ ಈ ಪ್ರಮಾಣ ಸ್ಪಷ್ಟವಾಗಿ ಕಡಿಮೆಯಾಗುತ್ತಾ ಬಂತು. ಸಂಭಾಷಣಾ ಚಾತುರ್ಯದಿಂದಲೇ ಕಥೆ ಓಡುತ್ತದೆ. ಅವರು ಬಳಸುವ ಭಾಷೆಯಲ್ಲೇ ವ್ಯಕ್ತಿಯ ಗುಣಾವ ಗುಣಗಳ ಅರಿವಾಗುತ್ತದೆ. ಅಪಾರವಾದ ಅರ್ಥವನ್ನು ಕೊಡುವ ಅವರ ಶೈಲಿಯ ಸಾಮರ್ಥ್ಯ ಅಸಾಧಾರಣವಾದುದು. ಪಾತ್ರದ ಪರಿಚಯವಿಲ್ಲದೆಯೇ ಅವರ ಸಂಭಾಷಣೆಯನ್ನು ಕೇಳಿಯೇ ಪಾತ್ರವನ್ನು ಗುರುತಿಸಬಹುದು.

ಉದಾಹರಣೆಗೆ :

"ಬೆತ್ತಗಿತ್ತ ಎಲ್ಲ ಕಟ್ಟಿಟ್ಬುಡಿಸಾರ್, ಅದನ್ನೆಲ್ಲ ನಿಮ್ಮ ಹುಡುಗರನ್ನು ಹೊಡೆಯೋಕೆ ಇಟ್ಟುಕೊಳ್ಳಿ, ಇವತ್ತಿನಿಂದ ನನ್ನ ತಂಟೆಗೆ ಬರಬೇಡಿ. ಹ್ಯಾಗೂ ನನ್ನ ಡಿಸ್ಮಿಸ್ ಮಾಡ್ತೀನಿ ಅಂದಿದೀರಾ. ಕೈ ಎತ್ತಿದರೆ ನಾನೂ ಒಂದು ಕೈ ನೋಡಿಯೇ ಬಿಡ್ತೀನಿ.ನಿನ್ನೆ ಸುಮ್ನಿದ್ದೆ ಅಂತ ಇವತ್ತು ಜೋರ್ ಮಾಡೋಕೆ ಬರ್ಬೇಡಿ (ನಾಗರಹಾವು)

ಇವು ರಾಮಾಚಾರಿಯ ಔದ್ಧತ್ಯದ ಮಾತುಗಳಾದರೆ

"ಇರಲಿ ಇರಲಿ........ನಮ್ಮನ್ನು ಎದುರಿಸಿ ಬದುಕಬಹುದು ಎಂದು ಅವರು ತಿಳಿದಿದ್ದರೆ, ನಮ್ಮ ಲೆಕ್ಕವಲ್ಲ, ಅವರ ಲೆಕ್ಕವೇ ತಪ್ಪುತ್ತದೆಂದು ತೋರಿಸಿ ಕೊಡುತ್ತೇನೆ. ಮುದ್ದಣ್ಣನ ಕೈಯ ಕತ್ತಿ ಇನ್ನೂ ಹರಿತವಾಗಿದೆ ಎಂದು ತೋರಿಸಿ ಕೊಡದೆ, ಅವರಿಗೆ ಬುದ್ಧಿ ಬರುವಂತಿಲ್ಲ. ನಮ್ಮ ಕ್ರೋಧದ ಅಗ್ನಿಗೆ ಬಿದ್ದು ಸಾಯಲು ಎಷ್ಟು ಹುಳುಗಳು ಸಿದ್ಧವಾಗಿವೆಯೋ ನಾನೂ ನೋಡಿಯೇಬಿಡುತ್ತೇನೆ" (ತಿರುಗುಬಾಣ)

ಎನ್ನುವಲ್ಲಿ ಮುದ್ದಣ್ಣನ ಕ್ರೌರ್ಯವನ್ನೂ, ಹಾಗೂ

"ಸೌಂದರ್ಯದ ಮುಡಿಯೇರಿಯೋ, ಭಗವಂತನ ಪಾದ ಸೇರಿಯೋ ಪುನೀತವಾಗ ಬೇಕಾದ ಹೂವು ಭೋಗದ ಕಾವಿಗೆ ಸಿಕ್ಕಿ ಮಡಿಯ ಬೇಕೇ? ಎಂಥ ದುರಂತ ಆ ಹೂವಿನ ಮನಸ್ಸಿಗೆ ಎಷ್ಟು ನೋವಾಗ ಬೇಡ ದಿನವೂ ಹೀಗೆ ಹೂವು ಬಾಡಿ ಸುತ್ತೀಯ ಚಂದ್ರಾ" ಎನ್ನುವಲ್ಲಿ ವೆಂಕಟಸುಬ್ಬಯ್ಯನ ನಿಷ್ಕಲ್ಮ ಪ್ರೇಮವನ್ನು ಕಾಣಬಹುದು. (ಹಂಸಗೀತೆ)

ಶೃತಿ ಮಾಡಿಟ್ಟ ವೀಣೆಯ ಮೇಲೆ ವೈಣಿಕ ಬೆರಳಾಡಿಸಿದಾಗ ರಾಗಾಲಾಪದೊಂದಿಗೆ ಎಳೆ ಎಳೆಯುವ ತರಂಗಗಳು ಏರಿಳಿತದಂತೆ 'ಹಂಸಗೀತೆ'ಯ ಸಂಗೀತದ ಮಧುರತೆ ಓದುಗನ ಮನಸ್ಸನ್ನಾ ಕರ್ಷಿಸುತ್ತದೆ.

'ಓ, ಎಂಥ ಮನೋಹರ ಧ್ವನಿ! ಜೇನುತುಪ್ಪವನ್ನು ಎಳೆ ಎಳೆಯಾಗಿ ನಾಲಗೆಯ ಮೇಲೆ ಬಿಟ್ಟಂತಿದೆ ಅದರ ಮಾಧುರ್ಯ, ಎಷ್ಟು ಮಾಧುರ್ಯವೋ, ಅಷ್ಟೇ ಖಚಿತವಾದ ಸ್ವರ ಸಂಚಾರ, ಮಧುರತೆಯಷ್ಟೇ ಗಂಭೀರತೆ ಬಯಲಿನಲ್ಲಿ ಹರಿವ ಆಳವೂ ಅಷ್ಟೇ ವಿಶಾಲವೂ ಆದ ನದಿಯಂತೆ ಗಂಭೀರ ಗತಿಯಲ್ಲಿ ಹರಿಯುತ್ತಿದೆ. ಹತ್ತಾರು ಪರಿಜನರ ಗೌರವವನ್ನು ಗಂಭೀರವಾಗಿ ಸ್ವೀಕರಿಸುತ್ತಾ ಕಣ್ಣ ಕೊನೆಯಲ್ಲಿ ಹೊಳೆವ ನೋಟದಿಂದ ತನ್ನ ತೃಪ್ತಿಯನ್ನು ಬೆಳಕಾಗಿ ತುಳುಕಿಸುತ್ತಾ ಹಂಸ ಗಮನದಿಂದ ನಡೆವ ದಿವ್ಯ ಸೌಂದರ್ಯಶಾಲಿನಿಯಾದ ಮಹಾ ರಾಜ್ಞಿಯಂತೆ, ಮನೋಹರ ಮಂದಗಮನದಿಂದ ನಡೆಯುತ್ತಿದೆ. ರಾಗ ಏರು ಇಳುವಿನಲ್ಲೂ ವಕ್ರ ಸಂಚಾರದಲ್ಲೂ ಕೊಂಕಾಗದ, ನಡೆ ಚಲಿಸದ ಲಾಘವದ ಚತುರತೆ ಕಾಣುತ್ತಿದೆ.. ....

ಹಂಸಗೀತೆ ಪುಟ ೮೩

ತ.ರಾ.ಸು ರವರ ನಿರರ್ಗಳವಾದ ಶೈಲಿಯನ್ನು ಇಲ್ಲಿ ಕಾಣಬಹುದು. ಇಲ್ಲಿ ಬರುವ ಒಂದೊಂದು ಸಂಗೀತದ ಅಲೆಯೂ ವೆಂಕಟಸುಬ್ಬಯ್ಯನ ಹೃದಯದಾಳವನ್ನು ಮುಟ್ಟುವ ರೀತಿಯಲ್ಲಿ ಇಲ್ಲಿ ಬರುವ ಪದ ಜೋಡಣೆ ಓದುಗರ ಮನಸ್ಸನ್ನು ತಲ್ಲೀನಗೊಳಿಸುತ್ತದೆ. ತ.ರಾ.ಸು. ರವರ ಭಾಷಾ ಶ್ರೀಮಂತಿಕೆಗೆ ಮೇಲಿನದು ನಿದರ್ಶನವಾಗಿದೆ.

ಪಾಂಡಿತ್ಯವನ್ನು ಅನುಭವದ ಮೂಸೆಯಲ್ಲಿ ಬಡಿಯುವ ಕಮ್ಮಟಗಾರ ತ.ರಾ.ಸು. ಇವರು ಬಹುಶ್ರುತರು ಅಂದರೆ ಅನೇಕ ಭಾಷೆಗಳ ಮೇಲೆ ಹಿಡಿತವುಳ್ಳವರು. ಇವರು ಸಾಕಷ್ಟು ಮಟ್ಟಿಗೆ ಇಂಗ್ಲೀಷ್ ಹಾಗೂ ಹಿಂದಿ ಮತ್ತು ಸಂಸ್ಕೃತದ ಶಬ್ದಗಳನ್ನು ತಮ್ಮ ಕಾದಂಬರಿಯಲ್ಲಿ ಬಳಸಿದ್ದಾರೆ. ಈ ರೀತಿಯ ಪರಭಾಷಾ ಗಾದೆಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಮಧ್ಯೆ ಮಧ್ಯೆ ಉಚಿತವಾಗಿ ತಂದಿರುವುದರಿಂದ ಓದುಗರಿಗೆ ಕುತೂಹಲವುಂಟಾತ್ತದೆ. ಮರಳು ಸೇತುವೆ, ಮುಂತಾದ ಕಾದಂಬರಿಗಳ ಕಥಾ ವಸ್ತು ಒಂದೊಂದು ಸಂಸ್ಕೃತ ಶ್ಲೋಕದ ಆಧಾರದ ಮೇಲೆ ರಚಿಸಲ್ಪಟ್ಟವು.

ಆಯಾ ಪಾತ್ರಗಳಿಗೆ ಸರಿಯಾಗಿ ಅವರು ಪ್ರಯೋಗಿಸುವ ವಿಶಿಷ್ಟ ನುಡಿಗಟ್ಟುಗಳು ತ.ರಾ.ಸು. ಶೈಲಿಯ ಒಂದು ಸಂಕೇತ.

ಬಡವನ ಹೆಂಡತಿ ಬೇಲಿಹೂವು
ಆಡಿದರೆ ಅರಗಿಳಿ ಕಾಡಿದರೆ ನಾಗರ

ಎಲೆ ಬಳಿಯೋ ಗುಂಡಾ ಅಂದರೆ ಉಂಡೋರೆಷ್ಟು ಮಾದಿ ಹಾಗೆ ಹೊಸಲಾದ ಅರ್ಥ ಪೂರ್ಣ ವಾಕ್ಯಗಳು ಓದುಗರಿಗೆ ತುಂಬಾ ಹಿಡಿಸುವಂತಿವೆ. ಇಲ್ಲಿನ ನುಡಿಗಟ್ಟುಗಳಿಂದ ತ.ರಾ.ಸು. ಲೋಕದ ಬದುಕಿಗೆ ಎಷ್ಟು ಹತ್ತಿರವಾಗುತ್ತಾರೆ ಎಂಬುದು ಸ್ವಯಂ ವೇದ್ಯವಾದುದು,

ತ.ರಾ.ಸು.ರವರ ಭಾಷೆಯಲ್ಲಿ ಹಾಸು ಹೊಕ್ಕಾಗಿರುವ ಉಕ್ತಿವೈವಿಧ್ಯ ಚೇತೋಹಾರಿಯಾದುದು. ರಸಿಕವಳವಾದುದು ಹಾಗೂ ದೇದೀಪ್ಯಮಾನವಾದುದು. ಆ ಉಕ್ತಿ ವೈಚಿತ್ರ್ಯದ ಚಿತ್ರ ಮುಖ್ಯವಾಗಿ. ಅವರು ಉಪಯೋಗಿಸಿದ ಉಪಮೆಗಳು ಮತ್ತು ರೂಪಕಗಳಿಂದ ತ.ರಾ.ಸು. ಅವರಿಗೆ ಸಹಜವೂ ಸಿದ್ಧವೂ ಎನಿಸುತ್ತದೆ. ಅವರ ಒಂದೊಂದು ಉಪಮೆಗಳೇ ಇದಕ್ಕೆ ಸಾಕ್ಷಿ.

೧. ಒಣಗಿದ ಮರದಂತೆ ಬರೀ ಮೂಳೆಯಾದ ಈ ಮೈಯಲ್ಲಿ ಆ ರಸದ ಚೆಲುವು ಎಲ್ಲಿ ಅಡಗಿರಬಹುದು ಎಂಬಲ್ಲಿ ವರ್ಣನಾ ಶಕ್ತಿಯನ್ನೂ
೨. ಜೋಯಿಸರ ಹೊಟ್ಟೆಯಲ್ಲಿ ವಸಂತ ಹುಟ್ಟಿದೆಯೋ ಕಪ್ಪಿನ ಹೊಟ್ಟೆಯಲ್ಲಿ ಸೂಲಂಗಿ ಹುಟ್ಟಿದ ಹಾಗೆ ಎನ್ನುವಲ್ಲಿ ಲೋಕಾನುಭವವನ್ನೂ
3. ಕುಪಿಸುವ ಮಾತು ವಿದ್ಯುಲ್ಲತೆಯಂತಾಯ್ತು ಎಂಬಲ್ಲಿ ರೂಪಕ ಶಕ್ತಿಯನ್ನೂ.
೪. ಬರಡಾದ ಮರದಲ್ಲಿ ಅರಳಿದ ಮುತ್ತುಗದ ಹೂಗಳು ಕೆನ್ನಾಲಗೆಯನ್ನು ಚಾಚಿದಂತೆ ಇವೆಯಂತೆ ಈ ವನದಲ್ಲಿ ಉಕ್ತಿರಮ್ಯತೆಯನ್ನೂ ಕಾಣಬಹುದು.

ಇವರ ರೂಪಕ ನಿರ್ಮಾಣ ಭಾವ ಪ್ರಪುಷ್ಟಿಯನ್ನು ಹೆಚ್ಚಿಸಲು ಸಹಕಾರಿಗಳಾಗಿವೆ. ಸಹಜ ಚಿತ್ರ ಕಂಗೊಳಿಸುವಂತೆ ಮಾಡಲು ಮುಂದಾಗಿವೆ. ಮುಳ್ಳಿನ ಮಂಚ, ಆಸೆಯ ಪ್ರೀತ, ಚಿಂತೆಯಗೆದ್ದಲುಗೂಡು, ನೋವಿನ ಚಕ್ರ. ಮೌನದ ಶೃಂಕಲೆ. ಪ್ರೇಮದ ಬೆಳಕು, ಶಾಂತಿಯ ಬೆಳದಿಂಗಳು ಈ ರೀತಿಯ ರೂಪಕಗಳು ಅವರ ಕಾದಂಬರಿಯ ತುಂಬಾ ನೂರಾರು ಲಭಿಸುತ್ತವೆ.

ತ.ರಾ.ಸು. ಕಾದಂಬರಿಗಳಲ್ಲಿ ಮೂಡಿಬರುವ ಸಾಮಾಜಿಕ ಪ್ರಜ್ಞೆಯನ್ನು ನೋಡಬೇಕು. ಮಾನವೀಯ ಸಮಸ್ಯೆಗಳನ್ನು ಎತ್ತಿಕೊಂಡು ತೊಳೆತೊಳೆಯಾಗಿ ಬಿಡಿಸುತ್ತಾರೆ. ವಾಸ್ತವ ಜೀವನದ ಸತ್ಯ ದರ್ಶನವನ್ನು ಮೂಡಿಸುವ ಜಾಣ್ಮೆಯಲ್ಲಿ ತ.ರಾ.ಸು. ರವರದು ಪಳಗಿದ ಕೈ.

“ಆಸ್ಪತ್ರೆ ಔಸ್ಧ ಕುಡಿದು ಬದುಕಿದೋರ್ನ್ಯಾರು. ನಮ್ಮಂಥೋರ್ನ ಕಾಪ್ರೆ ಬರೀ ನೀರೊಯ್ತಾರೆ. ಅದೂ ಜೈಕೊಂಡು. ಆ ಔಸ್ಧ ಕುಡಿದೋನು ಖಂಡಿತ

ಉಳಿಯಾಕಿಲ್ಲ. ಅಲ್ಲಿ ಒಳ್ಳೆ ಹೆಸ್ರ ಕೊಡೋದೆಲ್ಲಾ ಕಾರ್ನದಲ್ಲಿ ಬಂದೋರ್ಗೆ, ರೋಪ್ನಾಗಿ ಬಟ್ಟೆ ಹಾಕ್ಕೊಂಡು ಬಂದೋರ್ಗೇನೆ. ಇಲ್ದೆ ಓದ್ರೆ ಬಾಗ್ಲು ಕಾಯ್ಬೇಕು. ಇಲ್ಲಾ ಕಪಿ ನೀರು ಕುಡಿದು ಸಾಯಬೇಕು ನಮ್ಮ ಕುಪ್ಪ ಸತ್ತಂಗೆ" (ಪುರುಷಾವತಾರ)

ಕರುಳು ಹಿಂಡುವಂತಹ ಈ ಸನ್ನಿವೇಶಗಳಲ್ಲಿ ತ.ರಾ.ಸು. ರವರು ತಮ್ಮದೇ ಆದ ಭಾಷೆಯಲ್ಲಿ ಸಮಾಜದಲ್ಲಿ ಕಂಡು ಬರುವ ನೈಜ ಘಟನೆಗೆ ಸಿಡಿದೆದ್ದು ನುಡಿದ ಉಕ್ತಿಗಳಾಗಿವೆ. ಇವು ಪ್ರಾದೇಶಿಕ ಭಾಷೆಯ ಅನುಭವದ ಘಾಡತೆಯನ್ನ ಪ್ರತಿ-ಬಿಂಬಿಸುತ್ತವೆ.

ತ.ರಾ.ಸು. ರವರ ಪಾತ್ರ ಚಿತ್ರಣವನ್ನು ನೋಡಬೇಕು. ಪಾತ್ರದ ಒಳ-ಹೊರಗುಗಳೆರಡನ್ನು ಚಿತ್ರಿಸುವಲ್ಲಿ ಬಾಹ್ಯ ಮತ್ತು ಆಂತರ್ಯದ ಅರಿವು ಓದುಗನಿಗೆ ಸ್ಪಷ್ಟವಾಗಿ ಇಡೀ ಪಾತ್ರ ಅವನ ಕಣ್ಣ ಮುಂದೆ ನಿಂತಂತಾಗುತ್ತದೆ. ಶಿಲ್ಪಿ ಕಡೆದ ವಿಗ್ರಹದಂತಹ ಅಚ್ಚುಕಟ್ಟುತನ ಅವರಲ್ಲಿ ಕಂಡು ಬರುತ್ತವೆ. "ಸಿಡಿಲ ಮೊಗ್ಗು"ವಿನಲ್ಲಿ ಮೂಡಿಸಿರುವ ಶಾಂತಲೆಯ ಚಿತ್ರವನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು.

"ಕುಶಲ ಶಿಲ್ಪಿ ರೂಪಲಕ್ಷ್ಮಿಯನ್ನು ಕುರಿತು ತಪಸ್ಸುಮಾಡಿ, ಆ ಆರಾಧನೆಯಿಂದ ಪುಟಗೊಂಡ ತನ್ನ ಪ್ರತಿಭೆಯೆಲ್ಲವನ್ನೂ ಸೃಷ್ಟಿಸಿದಷ್ಟು ಕಮನೀಯವಾಗಿತ್ತು ಶಾಂತಲೆಯ ಮುಖ. ಒಳಗೆ ಹರಿವ ರಕ್ತದ ಕಾಂತಿಯಿಂದ ಅರುಣ ವರ್ಣವಾಗಿ, ತೊಳೆದ ಕನ್ನಡಿಯಂತೆ ಥಳಥಳಿಸುವ ಕಪೋಲಗಳು, ಹವಳದ ಬಣ್ಣದ ತುಂಬು ತುಟಿಗಳು, ಮಿಂಚಿನ ಮರಿಗಳೆರಡನ್ನೂ ನೀರಿನಲ್ಲಿ ಸೆರೆಯಿಟ್ಟಂತೆ ಥಳಥಳಿಸುವ ಕಣ್ಣುಗಳು. ಆ ಕಣ್ಣು ತುಟಿಗಳ ಮಧ್ಯೆ, ಸೌಂದರ್ಯ ಸೇತುವಿನಂತೆ ರಂಜಿಸುವ ಎಸಳಾದ ನಾಸಿಕ, ಇಗೋ ಈಕೆಯ ಸೌಂದರ್ಯವೆಲ್ಲ ಇಲ್ಲಿದೆ' ಎಂದು ಬೊಟ್ಟಿಟ್ಟು ತೋರಿಸಿದಂತ ಮುಂಬಲೆಯ ಅಳಕಾವಳಿಯಿಂದಲಂಕೃತವಾದ ದಂತದ ಫಲಕದ, ಹಣೆಯ ಮೇಲಿಟ್ಟ ಸಣ್ಣ ಬೊಟ್ಟು ಒಂದೊಂದೂ ದೇವಿಯ ಕಣ್ಣಲ್ಲಿ ಬಿಂಬಿಸಿ ಹೃದಯವನ್ನು ಗೆದ್ದು ಸೆರೆಹಿಡಿದುವು". ಸಿಡಿಲಮೊಗ್ಗು

ಈ ರೀತಿಯ ರಸಪತ್ತಾದ ಶೈಲಿಯಲ್ಲಿ ಪಾತ್ರವನ್ನು ಸಂಪೂರ್ಣವಾಗಿ ಬಿಡಿಸು-ತ್ತಾರೆ. ಒಂದೊಂದು ಅಂಗಗಳ ಚಲನ ವಲನಗಳನ್ನೂ ಸ್ಪಷ್ಟವಾಗಿ ಚಿತ್ರಿಸುತ್ತಾರೆ. ಇದೇ ರೀತಿ ನಿಸರ್ಗದ ವರ್ಣನೆಯನ್ನೂ ಅಷ್ಟೆ ಸಿಡಿಲ ಮೊಗ್ಗುವಿನ ಪ್ರಾರಂಭದಲ್ಲಿ ಬರುವ ನಿಸರ್ಗದ ವರ್ಣನೆ ಮನಮೋಹಕವಾದದ್ದು. ಸೂರ್ಯ ನಾರಾಯಣನ ಉದಯದಿಂದ ಹಿಡಿದು ಆ ಬನದ ಗಿಡಮರಗಳ, ಪಕ್ಷಿಗಳ ವರ್ಣನೆಯನ್ನು ಓದುತ್ತಿದ್ದಂತೆಯೇ ಇಡೀ ಬನವನ್ನೇ ನೋಡಿದಷ್ಟು ಆನಂದ ಉಂಟಾಗುತ್ತದೆ ಓದುಗನಿಗೆ.

ಉತ್ಕಟತೆ ತ.ರಾ.ಸು. ಅಂಗದಲ್ಲಿ ರಕ್ತದಂತೆ ಚಲಿಸುತ್ತದೆ. ಈ ಆವೇಶ ಅವರ ಕತೆಗೆ ವೇಗವನ್ನೂ, ಜೀವಂತ ತನವನ್ನೂ ತಂದುಕೊಟ್ಟಿದೆ. ಅವರು

ಜೀವನವನ್ನು ಕೆಚ್ಚಿನಿಂದ ನೋಡಿದ್ದಾರೆ. 'ನಾಗರಹಾವು' ಕಾದಂಬರಿ ಅವರ ಎಲ್ಲ ಗುಣಗಳನ್ನೂ ಪ್ರತಿಬಿಂಬಿಸುತ್ತದೆ. ಸೇಡಿನ ಕಿಡಿಯಾಗಿ ವರ್ತಿಸುವ ರಾಮಾಚಾರಿಯ ಮುಂದೆ ಸಂಯಮದ ಮೂರ್ತಿಯಾದ ಚಾಮಯ್ಯ ಮೇಷ್ಟ್ರ ಚಿತ್ರವನ್ನು ತಂದಿದ್ದಾರೆ. ಅಲ್ಲಿ ಬರುವ ವರದರಾಜು, ಅಲಮೇಲು, ಮಾರ್ಗರೇಟ್ ಇಂತಹ ಪಾತ್ರಗಳು ಕಥೆಯನ್ನು ಯಶಸ್ವಿಯಾಗಿಸಲು ಸಹಾಯಕವಾಗಿವೆ.

'ಇಂದಿನಿಂದ ಬೇಕಾದ್ದಾಗಲೀ, ನಿನ್ನನ್ನು ಭೋಗಿಸದೆ ಬಿಡುವುದಿಲ್ಲ. ಮೇರಿಯಮ್ಮ---ನೀನೇ ಈ ಮಾತಿಗೆ ಸಾಕ್ಷಿ'. ಎನ್ನುವಲ್ಲಿ ಪ್ರತೀಕಾರದ ಉತ್ಕಟತೆಯನ್ನೂ, 'ನೆನಪಿರಲಿ ಮಾರ್ಗರೆಟ್ ಹಾವಿಗೆ ಹನ್ನೆರಡು ವರ್ಷ ಈ ರಾಮಾಚಾರೀಗೆ ಇಪ್ಪತ್ನಾಲ್ಕು ವರ್ಷ' ಎನ್ನುವಲ್ಲಿ ರಾಮಾಚಾರಿಯ ಕೆಚ್ಚನ್ನೂ,

'ಸಂತೈಸಲಾಗದ ದುಃಖದಲ್ಲಿ ಕೊಚ್ಚಿಹೋದ ತಾಯಿ, ತಂದೆಯ ಸಾವಿನ ಸುದ್ದಿ ಕೇಳಿ, ತನ್ನ ಕಡೆ ಹರಿದು ಬರುವ ಹಾವನ್ನು ಕಂಡು, ಹಾರಲಾರದೆ ಹೆದರಿ ರೆಕ್ಕೆ ಬಲಿಯದ ಗುಬ್ಬಚ್ಚಿಯಂತೆ ಕುಳಿತ ತಮ್ಮಂದಿರು.—

ಎನ್ನುವಲ್ಲಿ ದುಃಖದ ತೀವ್ರತೆ ಮತ್ತು ಅಸಹಾಯಕತೆಯನ್ನು ಪ್ರತಿ ಬಿಂಬಿಸುವಲ್ಲಿ ಬಳಸುವ ಭಾಷೆ ಆ ಪಾತ್ರಗಳಿಗೆ ತಕ್ಕಂತಹ ಮೆರುಗನ್ನು ಕೊಟ್ಟುಕೊಂಡು ಬಂದಿವೆ.

ತ.ರಾ.ಸು. ಬರಿಯ ಶೈಲಿಯಲ್ಲಿ ಮಾತ್ರವೇ ಕಲೆಗಾರರಲ್ಲ. ತಂತ್ರದಲ್ಲಿಯೂ ಕಲೆಗಾರರು. ಅನೇಕ ನವ್ಯತೆಯ ಪ್ರಯೋಗಗಳನ್ನು ಮಾಡಿದ್ದಾರೆ. ಹೊಸ ಹೊಸ ತಂತ್ರಗಳನ್ನು ಬಳಸಿದ್ದಾರೆ. 'ಬಿಡುಗಡೆಯ ಬೇಡಿ'ಯಲ್ಲಿ ಪ್ರಜ್ಞಾ ಪ್ರವಾಹಿ ತಂತ್ರವನ್ನು ಅಳವಡಿಸಿಕೊಂಡಿದ್ದಾರೆ. ಮನಸ್ಸಿನ ಆಂದೋಳನದ ಚಿತ್ರವನ್ನು ವರ್ಣನೆಯಿಲ್ಲದೆ ಹಾಗೆಯೇ ಮಾತಿನಲ್ಲಿ ಹಿಡಿದಿಟ್ಟಿದ್ದಾರೆ.

ಏಳು, ಮಲಗು, ರೈಲು, ಆಫೀಸು, ಲಿಫ್ಟ್,
ಟೈಪರೇಟರು, ಗಡಿಯಾರ, ಕ್ಯಾಲೆಂಡರು, ಟೆಲಿಫೋನು–
೧೦೦, ೭೫ ಫ್ಲಸ್ ೨೫ =೧೦೦
ನಾನು ಬಿಡುಗಡೆ ಬಯಸಿ ಬಂದ ಹೆಣ್ಣು. (ಬಿಡುಗಡೆಯ ಬೇಡಿ)

ಇಲ್ಲಿ ಮನಸ್ಸಿನ ಯೋಚನಾಲಹರಿಯನ್ನು ಹಾಗೆಯೇ ಮಾತಿನಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಈ ಬಗೆಯ ಕಾದಂಬರಿ ಮನಸ್ಸಿನ ವ್ಯಾಪಾರವನ್ನು ಹೆಚ್ಚು ವಾಸ್ತವವಾಗಿ ನಮ್ಮ ಅನುಭವಕ್ಕೆ ತಂದು ಕೊಡುತ್ತವೆ. ಈ ಕಾದಂಬರಿಯಲ್ಲಿ ಬಿಡುಗಡೆಯನ್ನು ಬಯಸುವ ಹೆಣ್ಣಿನ ಹೋರಾಟ ಹೊರೆಗಳು ನಿರೂಪಿತವಾಗುತ್ತವೆ.

ತ.ರಾ.ಸು. ರವರು ಕಥೆಯನ್ನು ಬೆಳೆಸುವ ರೀತಿ, ಅಲ್ಲಿ ಬರುವ ಘಟನೆಗಳು, ಘಟನೆಗಳಿಗೆ ತಕ್ಕಂತೆ ಅಲ್ಲಿನ ವರ್ಣನೆ ಮತ್ತು ಅವರಲ್ಲಿ ಅಡಕವಾಗಿರುವ ಸಾಮಾಜಿಕ ಮೌಲ್ಯಗಳು ಹಾಗೂ ಅದು ಓದುಗನ ಮೇಲೆ ಬೀರುವ ಪರಿಣಾಮವನ್ನು ಗಮನಿಸ

ಬೇಕು. ತ.ರಾ.ಸು. ರವರು ಪ್ರಗತಿ ಶೀಲ ಪಂಥಕ್ಕೆ ಸೇರಿದವರು. ಅ.ನ.ಕೃ. ರವರ ಒಡನಾಡಿಗಳು. ಸಮಾಜದಲ್ಲಿ ಕಂಡು ಬರುವ ಅನೇಕ ನ್ಯೂನತೆಗಳನ್ನು ಹಾಗೂ ಅದಕ್ಕೆ ಪರಿಹಾರೋಪಾಯವನ್ನು ಕೂಡ ವ್ಯಕ್ತ ಪಡಿಸಿದ್ದಾರೆ. ಕಾದಂಬರಿಗಳಲ್ಲಿ ಆ ಕಥೆಗೆ ಸಂಬಂಧಿಸದಂತಹ ಘಟನೆಗಳನ್ನು ತಂದಿದ್ದರೂ ಕೂಡ ಅದರಲ್ಲಿ ಒಂದೊಂದು ರೀತಿಯ ಮೌಲ್ಯಗಳನ್ನು ಕಾಣಬಹುದು. ಅವರ ಮುಂಜಾವಿನಿಂದ ಮುಂಜಾವು ಕಾದಂಬರಿಯಲ್ಲಿ ಒಬ್ಬ ಪತ್ರಿಕೋದ್ಯೋಗಿಯ ಮೂಲಕ ಒಬ್ಬ ಸಾಮಾನ್ಯ ನೌಕರನ ಸ್ಥಿತಿಗತಿಗಳನ್ನು ಹಾಗೂ ಅವನ ಪರಿಸ್ಥಿತಿಯನ್ನು ಮುಂದುವರೆಸುತ್ತಾ ಅನೇಕ ಘಟನೆಗಳನ್ನು ಅಲ್ಲಿ ನಿರೂಪಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಅಲ್ಲಿ 'ಪುರುಷಾವತಾರ' ಕಾದಂಬರಿಗೆ ಕಾರಣವಾದ ತಿರುಪೆಯ ಹುಡುಗರನ್ನು ನೋಡುವುದು ಅದಕ್ಕೆ ಪರಿಹಾರೋಪಾಯವಾಗಿ ಆ ಪತ್ರಿಕಾ ಕರ್ತ ಅದನ್ನು ಪತ್ರಿಕೆಯಲ್ಲಿ ಬರೆದುದು ಅದರ ಪರಿಣಾಮವಾಗಿ ಭಿಕ್ಷುಕರಿಗೆ ಇದ್ದ ಸ್ಥಳವೂ ದೊರಕದೆ ಅಲ್ಲಿಂದ ದೂರವಾಗಿ ಮಗು ಸಾವನ್ನಪ್ಪುವುದು, ಹಾಗೂ ಜೂಜಿನ ರೂಪದಲ್ಲಿ ನಡೆಯುವ ಮೋಸದ ಪ್ರಕರಣಗಳು, ಮತ್ತು ಯುವಕ ಯುವತಿಯ ನಡುವೆ ಪೋಲೀಸರ ದುರ್ವರ್ತನೆ ಇವೆಲ್ಲವನ್ನೂ ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಅನುಭವದ ಪ್ರೌಢತೆಯನ್ನು ಮನೋವೇದ್ಯವಾಗಿಸುವ ರೀತಿ ಸ್ಮರಿಸುವಂಥಾದ್ದು. ಜೀವನದಲ್ಲಿ ಕಂಡು ಬರುವ ನೋವನ್ನು ಯಥಾವತ್ತಾಗಿ ಕೆಲವೇ ಪದಗಳಲ್ಲಿ ಅಪಾರವಾದ ಅರ್ಥ ಬರುವಂತೆ ಚಿತ್ರಿಸುವ ಕೌಶಲ ತ.ರಾ.ಸು. ರವರದು. ಈ ಕಾದಂಬರಿಯಲ್ಲಿ ಬರುವ ಈ ದೃಶ್ಯವನ್ನು ನೋಡಬಹುದು.

"ದಿನಕ್ಕೆ ಎಂಟು ಘಂಟೆಯ ಕಾಲ ಕತ್ತೆಯ ಹಾಗೆ ದುಡಿದರೂ ಬೆಲ್ಲೂ ಕೇಳಿದ ಮಗುವಿಗೆ ಹೆಂಡತಿಯ ಮೊಲೆಯನ್ನೇ ಬೆಲ್ಲೂ ಎಂದು ತೋರಿಸುವಂಥ ಬಡತನ ಬಡಿದ ಈ ಬಡಪಾಯಿಗಳ ಪಾಲಿಗೆ ಜಗತ್ತಿನ ಕಂಬನಿ ಬತ್ತಿ ಹೋಗಿದೆಯೆ"

(ಮುಂಜಾವಿನಿಂದ ಮುಂಜಾವು)

ಎಂಬಲ್ಲಿ ಸ್ವತಃ ಪತ್ರಿಕೋದ್ಯಮದಲ್ಲಿ ದುಡಿದು ಅನುಭವಿಸಿದ ಯಾತನೆ, ಸಾಮಾನ್ಯ ನೌಕರನೊಬ್ಬನ ಸ್ಥಿತಿಗತಿಯ ಅರಿವಿನ ಜೊತೆಗೆ ನೋವಿನಲ್ಲೂ ಸಹ ರಸಿಕತನದ ಮೋಡಿಯನ್ನು ಕಾಣಬಹುದು.

'ಪುರುಷಾವತಾರ' ಕಾದಂಬರಿಯಲ್ಲಿ ನೋಡುವುದಾದರೆ ಅಲ್ಲಿನ ಭಿಕ್ಷುರ ಪರಿಸ್ಥಿತಿ, ಸಮಾಜ ಅವರ ಬಗ್ಗೆ ಯಾವ ಬಗೆಯ ಅನುಕಂಪವನ್ನೂ ತೋರಿಸದೆ ಅವರನ್ನು ದೂರ ಮಾಡುವುದನ್ನೂ ಅವರು ಹೊಟ್ಟೆಗಿಲ್ಲದೆ ಎಂಜಲು ಎಲೆಯನ್ನು ನೋಡುತ್ತಿದ್ದರೂ, ಅದರಿಂದಲೂ ದೂರ ಮಾಡಬೇಕೆಂದು ಇಚ್ಛಿಸುವ ಜನ, ಹಾಗೂ ಖಾಯಿಲೆಯಿಂದ ನರಳುತ್ತಿರುವ ಇಂತಹ ಬಡಪಾಯಿಗಳಿಗೆ ವೈದ್ಯನೊಬ್ಬನಿಂದುಂಟಾದ ಅಸೌಪಚಾರಿಕ ಪರಿಸ್ಥಿತಿಯನ್ನು ಸ್ಪಷ್ಟವಾಗಿ ವ್ಯಕ್ತ ಪಡಿಸಿದ್ದಾರೆ. ಪ್ರಾಣಿದಯಾ ಸಂಘ, ಗಳನ್ನು ಸ್ಥಾಪಿಸಿ, ಪ್ರಾಣಿಗಳ ಬಗ್ಗೆ ಕಠೋರ ವರ್ತನೆಯನ್ನು ತಡೆಯಲು ಶಾಸನಗಳನ್ನು

ನಿರ್ಮಾಣ ಮಾಡಿ, ಧನ್ಯರೆಂದು ಕೊಳ್ಳುವ ಜನ ಮಾನವರ ಬಗ್ಗೆಯೇ ಎಂತಹ ಪಾಶವೀ ತಾತ್ಸಾರದ ಧೋರಣೆಯನ್ನು ತಳೆದಿದ್ದಾರೆ ಎಂಬುದರ ಸಜೀವ ದೃಷ್ಟಾಂತದೊಂದಿಗೆ ಖಂಡಿಸಿದ್ದಾರೆ. ಇಂಥ ಅತೃಪ್ತ ಜೀವಿಗಳನ್ನು ಮರೆತು, ನೂತನ ಸಮಾಜ ನಿರ್ಮಿಸಲು ಯತ್ನಿಸಿದರೆ, ಆ ಪ್ರಯತ್ನ, ತಳ ಸೋಸದೆ ಗೆದ್ದಲು ಹುತ್ತದ ಮೇಲೆ ಮನೆ ಕಟ್ಟಿದಂತಾಗುವುದು ಖಂಡಿತ ಎಂದು ಎಚ್ಚರಿಸಿದ್ದಾರೆ. ಇವು ತ.ರಾ.ಸು. ರವರ ಗುಂಡು ಶೈಲಿಯ ಕಿಡಿ ನುಡಿಗಳಾಗಿವೆ. ಸಮಾಜದ ಓರೆ ಕೋರೆಗಳನ್ನು ತಿದ್ದುವ ಒರೆಗಲ್ಲಾಗಿವೆ.

ಐತಿಹಾಸಿಕ ಕಾದಂಬರಿಗಳನ್ನು ಕಲಾಪೂರ್ಣವಾಗಿ ರಸವತ್ತಾಗಿ, ಕುತೂಹಲ ಕೆರಳುವಂತಹ ತಂತ್ರವನ್ನು ಬಳಸಿ ಬರೆದವರಲ್ಲಿ ತ.ರಾ.ಸು. ಅಗ್ರಗಣ್ಯರು. ಚಿತ್ರ–ದುರ್ಗದ ಇತಿಹಾಸ ಇವರ ಕೈಯಲ್ಲಿ ರಸದುಂದುಭಿಯಂತೆ ಮೊಳಗುತ್ತದೆ. ಸಿಕ್ಕಿರುವ ಕೆಲವೇ ಸಾಲುಗಳ ಸತ್ಯ ಸಂಗತಿಗಳ ಹಿನ್ನೆಲೆಯಲ್ಲಿ ತಮ್ಮ ತಂತ್ರ ಕೌಶಲ್ಯದಿಂದ ಅದಕ್ಕೊಂದು ರುಚಿಯನ್ನು ತಂದಿದ್ದಾರೆ. ಯೋಗ್ಯ ಸನ್ನಿವೇಶ ನಿರ್ಮಾಣದಲ್ಲಿ ಸಂಭಾಷಣಾ ಚಾತುರ್ಯದಲ್ಲಿ ಇವರ ಪ್ರತಿಭೆ ವ್ಯಕ್ತವಾಗುತ್ತದೆ.

ಚಿತ್ರದುರ್ಗದ ನಾಯಕರ ಕಾಲದ ಆಗುಹೋಗುಗಳು, ದೈವ ದುರ್ದೈವಗಳು ಉದ್ದಕ್ಕೂ ಹಬ್ಬಿಕೊಂಡಿವೆ. ವರ್ಣನೆ ವಾತಾವರಣ, ಪಾತ್ರಸೃಷ್ಟಿಗಳಲ್ಲಿ ತ.ರಾ.ಸು. ವೀರಜೀವನದ ರಕ್ತವನ್ನು ಹರಿಸಿದ್ದಾರೆ. ಚಿತ್ರದುರ್ಗದಲ್ಲಿ ಕೋಟೆ ಕೊತ್ತಳಗಳು. ಅರಮನೆ–ದೇವಾಲಯಗಳು, ವೈಭವದಿಂದ ತುಂಬಿದ ಬೀದಿಗಳ ವಿವರಗಳೊಂದಿಗೆ ಆ ಕಾಲದ ವರ್ಣಪ್ರಪಂಚ ಪ್ರತ್ಯಕ್ಷವಾಗುತ್ತದೆ. ಸಿದ್ಧರ ಶಾಪಾನುಗ್ರಹಗಳಿಗೆ ಈಡಾದ ದುರ್ಗದ ಸಿಂಹಾಸನ ಕ್ಷೇತ್ರ, ರಕ್ತಪಿಪಾಸೆ ಹಾಗೂ ಮಹಾಕಾವ್ಯದಲ್ಲಿರುವ ವೀರರಂತಿರುವ ಯೋಧರು ಇವೆಲ್ಲ ವರ್ಣರಾಜಿತವಾಗಿ ಮೂಡಿ ಬಂದಿವೆ. ಈ ವರ್ಣ ವೈಭವ ನಿಜವಾಗಿಯೂ ಕಣ್ಣುಕುಕ್ಕಿಸುವಂತಹವು. ಸಿಕ್ಕಿರುವ ಕೆಲವೇ ಐತಿಹಾಸಿಕ ಘಟನೆಗಳಿಗೆ ತಮ್ಮ ಕಲ್ಪನೆಯ ಪ್ರಭಾವದಿಂದ ಇಂತಹ ಶ್ರೇಷ್ಠ ಕಾದಂಬರಿಗಳನ್ನು ರಚಿಸುವ ಶಕ್ತಿ ತ.ರಾ.ಸು. ರವರೊಬ್ಬರಿಗೇ ಒಲಿದು ಬಂದಿದೆ ಎಂದರೆ ತಪ್ಪಾಗಲಾರದು. ಈ ಕಾದಂಬರಿ ಸಾಮಾಜಿಕ, ರಾಜಕೀಯ ಹಾಗೂ ಐತಿಹಾಸಿಕ ಪ್ರಜ್ಞೆಯೊಂದಿಗೆ ವಿಜೃಂಭಿಸುತ್ತದೆ.

ತ.ರಾ.ಸು. ರವರ ಪ್ರತಿಭೆಯ ಕುಲುಮೆಯಲ್ಲಿ ಕರಗಿಸಿ ಎರಕಹೊಯ್ದ ಕಾದಂಬರಿ ಹಂಸಗೀತೆ. ಎಲ್ಲ ರೀತಿಯಿಂದಲೂ ಶ್ರೇಷ್ಠವಾದುದು. ದುರ್ಗದ ಒಂದೊಂದು ಕಲ್ಲಿನಿಂದಲೂ ಒಂದೊಂದು ಕಥೆಯನ್ನು ಹೇಳಿಸಬಲ್ಲರು. ಅವಶ್ಯಕತೆ ಅಷ್ಟಾಗಿ ಇಲ್ಲದಿದ್ದರೂ 'ತಲೆ ಹೊಯಿಕ ವೀರಣ್ಣನ ಕಲ್ಲು' ಎಂಬ ಐತಿಹ್ಯವನ್ನು ಇಲ್ಲಿ ತಂದಿದ್ದಾರೆ. ಈ ಕಲ್ಲೇ ಕಾಣಿಕೆಯಾಗಿ ಕೊಟ್ಟ ಮಹಾನುಭಾವ ವೀರಣ್ಣಜ್ಜನ ಕಥೆಗೆ ಸಾಕ್ಷಿಯಾಗಿದೆ ಹಂಸಗೀತೆಯಲ್ಲಿ ತ.ರಾ.ಸು.ರವರು ಕೇವಲ ಸಂಗೀತಗಾರ–ನೊಬ್ಬನನ್ನು ಚಿತ್ರಿಸಿಲ್ಲ. "ಸಂಗೀತಗಾರನ ಬಾಳಿನ ಹಂದರದ ಮೇಲೆ ಹಿಂದಿನ

ಮತ್ತು ಇಂದಿನ ಸಂಸ್ಕೃತಿಯನ್ನು ನಾನಿಲ್ಲ ಚಿತ್ರಿಸಲೆಳಸಿದ್ದೇನೆ. ಇದರಲ್ಲಿ ಬರುವ ಎಲ್ಲ ಪಾತ್ರಗಳೂ ಕಲ್ಪನಾ ಸೃಷ್ಟಿ, ಯಾವ ಜೀವಂತ ವ್ಯಕ್ತಿಯನ್ನು ದೃಷ್ಟಿಯಲ್ಲಿಟ್ಟು- ಕೊಂಡು ರಚಿತವಾದುದಲ್ಲ. ರಾಗಸಾಕ್ಷಾತ್ಕಾರ, ರಾಗವನ್ನು ಒತ್ತೆಯಿಡುವುದು, ಹೂವಿನಿಂದ ಪಾಠ ಕಲಿಯುವುದು-ಇವು ನಾನು ಕೇಳಿದ ಹಿರಿಯರ ಕಥೆಗಳಿಂದ ಪ್ರೇರೇಪಿತ" ಎಂದಿದ್ದಾರೆ. ಲೇಖಕರು.

ಚಿತ್ರದುರ್ಗದ ಗಂಡು ಮೆಟ್ಟಿನ ಸಂಗೀತಗಾರ, ಕೋಟಿ ಬಿದ್ದರೂ ಟೀಪುವನ್ನು ಪ್ರತಿಭಟಿಸಿ, ನನ್ನ ನಾಲಗೆಯು ಭೀತಿಗೆ ತಾಯಿಯನ್ನು ಸುಲ್ತಾನನ ಭೋಗದ ಹೆಣ್ಣಾಗಿ ಮಾಡಲಾರೆನೆಂದು ತನ್ನ ನಾಲಗೆಯನ್ನು ದೇವಿಗೇ ಅರ್ಪಿಸಿ ತನ್ನ ಪ್ರತಿ- ಭಟನೆಯ ಫಲದಿಂದ ಟೀಪುವಿನ ಹೃದಯವನ್ನು ಸೋಲಿಸಿದ ಮಹಾನುಭಾವನ ಕಥೆ.

ನಾಯಕ ಪಾತ್ರದಲ್ಲಿ ಬರುವ ಅನೇಕ ಏರು ಪೇರುಗಳನ್ನು ಇಲ್ಲಿ ವಾಸ್ತವವಾಗಿ ಚಿತ್ರಿಸಿದ್ದಾರೆ. ಗುರುವನ್ನೇ ಸೋಲಿಸಿದ ವೆಂಕಟಸುಬ್ಬಯ್ಯ ಭೈರಾಗಿಯೊಬ್ಬನಿಂದ ವಿದ್ಯಾಭ್ಯಾಸ ಕಲಿಯಲು ಹೊರಟಾಗ ಪಟ್ಟಶ್ರಮ, ಕಲಿತ ಮೇಲೆ ಯೌವ್ವನ, ಕೀರ್ತಿ ಒಬ್ಬ ವ್ಯಕ್ತಿ ಯಾವ ರೀತಿ ಮದೋನ್ಮತ್ತನಾಗುತ್ತಾನೆ. ಎಂಬುದನ್ನ ವ್ಯಕ್ತ ಪಡಿಸಿದ್ದಾರೆ. ಚಂದ್ರಾ ಎಂಬ ಎರಡಕ್ಷರದಲ್ಲಿ ಕಂಡ ಮಧುರತೆಯನ್ನೂ ಹಾಗೂ ಶೃಂಗಾರ ವರ್ಣನೆಯನ್ನು ತಂದಿದ್ದಾರೆ. ಕಾಮುವಕೈ ಗೊಂಬೆಯಾದವಳನ್ನು ಪ್ರೇಮ ಪೂಜಾರಿಯಾಗಿ ಮಾರ್ಪಡಿಸಿದ್ದಾರೆ. ಒಂದು ಸಾವಿರ ವರಹಕ್ಕಾಗಿ ಪ್ರೀತಿಯ ಎರಡು ರಾಗಗಳನ್ನು ಒತ್ತೆ ಇಟ್ಟುದೂ, ವೇಶ್ಯಾಗೃಹದ ವರ್ಣನೆ, ಹೂವಿನಂತಹ ನಿನ್ನನ್ನು ಹೇಗೆ ನಲುಗಿಸಲಿ ಎಂಬ ಜಂತೆಯಿಂದ ತೊಳಲಾಡುವುದರ ಜೊತೆಗೆ ಸೂಳೆಯ ಪ್ರೇಮಕ್ಕೆ ಸುಳ್ಳಿನ ಬೆಲೆ ಕೊಟ್ಟವರು ನೀವು ಎಂದು ದುಃಖಿಸಿ ಅವರಿಗಾಗಿ ತನ್ನ ಪ್ರಾಣವನ್ನೇ ಕಾಣಿಕೆಯಾಗಿ ಅರ್ಪಿಸಿದ ಚಂದ್ರಸಾನಿಯ ಕಥೆ ಹೃದಯಂಗಮ- ವಾಗಿದೆ. ಇಲ್ಲಿ ಬರುವ ಮೂರು ಹಂತಗಳಲ್ಲಿ ಮೊದಲನೆಯ ಅಂದರೆ ಬಾಲ್ಯದಲ್ಲಿ ಕಲಿಯುವ ಸಂಗೀತದ ಮಧುರತೆಯೊಂದಿಗೆ ಕಥೆ ಝೇಂಕರಿಸುತ್ತದೆ. ಎರಡನೆಯ ಹಂತದಲ್ಲಿ ಚಂದ್ರಾಸಾನಿಯೊಡನೆ ಸೇರುವ ಆತುರದಿಂದುಂಟಾದ ಆವೇಶವೂ ಹಾಗೂ ಕೊನೆಯ ಹಂತದಲ್ಲಿ ದೇವಿಗೆ ತನ್ನೆಲ್ಲ ಸರ್ವಸ್ವವನ್ನೂ ಅರ್ಪಿಸಿ, ತನ್ನ ದೇವಿಗೆ ಅಪಚಾರ ಮಾಡಲಾರೆನೆಂದು ನಾಲಗೆಯನ್ನು ಅರ್ಪಿಸುವ ಸನ್ನಿವೇಶಗಳು ಓದುಗರ ಮನಸ್ಸನ್ನು ಸೂರೆಗೊಳ್ಳುತ್ತವೆ ಹಾಗೂ ಲೇಖಕರ ಉತ್ತಮ ಕಥಾನಿರೂಪಣೆಗೆ ಇದೊಂದು ಮೈಲಿಗಲ್ಲಾಗಿದೆ.

ಅತಿಶಯೋಕ್ತಿಯ ಆವೇಶಕ್ಕೂ ಬಗ್ಗದ ತ.ರಾ.ಸು. ರವರು ಯಾವುದೇ ಪಾತ್ರವನ್ನಾಗಲೀ, ಸನ್ನಿವೇಶವನ್ನಾಗಲೀ ಸಂಪೂರ್ಣವಾಗಿ ಚಿತ್ರಿಸಬಲ್ಲರು. ಒಟ್ಟಿನಲ್ಲಿ ಅವರ ಭಾಷಾಶೈಲಿ ಅವರಿಗೆ ಸಂಪೂರ್ಣವಾಗಿ ಒಲಿದು ಬಂದಿದೆ. ಆದು ಅವರ ಭಾವಕ್ಕೆ, ಕಲ್ಪಕತೆಗೆ ಮೂರ್ತ ಸ್ವರೂಪವನ್ನು ಕೊಡುವಲ್ಲಿ ಯಶಸ್ವಿಯಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ವಿದ್ಯಾರಣ್ಯ ಮತ್ತು ಕ್ರಿಯಾಶಕ್ತಿ ವಿದ್ಯಾರಣ್ಯ ಒಂದು ಐತಿಹಾಸಿಕ ನೋಟ

— ವಿ. ಜಿ. ಕೃಷ್ಣ ಮೂರ್ತಿ

ಕರ್ನಾಟಕ ಹೈ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ವೇದವೇದಾಂತ ವಿದ್ಯಾವಾಚಸ್ಪತಿ ಶ್ರೀ ಟಿ. ಎನ್. ಮಲ್ಲಪ್ಪನವರು ಶೃಂಗೇರಿಯ ಮಠದ ಬಗ್ಗೆ ಹಾಗೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಗ್ಗೆ ಕ್ವಾರ್ಟರ್ಲಿ ಜನರಲ್ ಆಫ್ ದಿ ಮಿಥಿಕ್ ಸೊಸೈಟಿ (1969–70 ರ ತ್ರೈಮಾಸಿಕ ಸಂಚಿಕೆಗಳು) ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ತ್ರೈಮಾಸಿಕ ಪತ್ರಿಕೆಯಲ್ಲಿ ಕೆಲವು ಸಂಶೋಧನ ಲೇಖನಗಳನ್ನು ಬರೆದು ಕ್ರಿಯಾಶಕ್ತಿ ಎಂಬ ಶೈವ ಗುರುವೇ ವಿದ್ಯಾರಣ್ಯರೆಂಬ ಸಿದ್ಧಾಂತವನ್ನು ಮಂಡಿಸಿದರು. ಆ ಲೇಖನಗಳಿಗೆ ಉತ್ತರವಾಗಿ ತ. ರಾ. ಸುಬ್ಬರಾಯರು "ಕ್ರಿಯಾಶಕ್ತಿ ವಿದ್ಯಾರಣ್ಯ ಒಂದು ಕಟ್ಟು ಕಥೆಯ ಸಮೀಕ್ಷೆ" ಎಂಬ ಲೇಖನವನ್ನು ಪ್ರಕಟಿಸಿ ಕ್ರಿಯಾಶಕ್ತಿಗೂ ವಿದ್ಯಾರಣ್ಯರಿಗೂ ಯಾವ ಸಂಬಂಧವೂ ಇಲ್ಲ, ಶೃಂಗೇರಿಯ ಅದ್ವೈತ ಪೀಠ ಯಾವ ಕಾಲದಲ್ಲಿಯೂ ಶಿವಾಚಾರಗಳಿಗೆ ಒಳಗಾಗಿರಲಿಲ್ಲ ಎಂಬುದನ್ನು ತಿಳಿಸಿದ್ದಾರೆ. ತ. ರಾ. ಸುಬ್ಬರಾಯರ ಸಮೀಕ್ಷೆಯ ಬಗ್ಗೆ ವಿಮರ್ಶನ ನೋಟವನ್ನು ಹರಿಸುವುದೇ ಈ ಲೇಖನದ ಉದ್ದೇಶ.

ಪ್ರಾಚೀನ ಹಾಗೂ ಮಧ್ಯಯುಗದ ಇತಿಹಾಸ, ಅದರಲ್ಲಿಯೂ ಭಾರತೀಯ ಇತಿಹಾಸ, ಪೌರಾಣಿಕ, ಜಾನಪದೀಯ ಹಾಗೂ ಐತಿಹ್ಯ ವಿಷಯಗಳಿಂದ ಕೂಡಿದ್ದು ವಾಸ್ತವಿಕ ವಿಷಯಗಳನ್ನು ಸಂಗ್ರಹಿಸುವ ಇತಿಹಾಸಕಾರರಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಐತಿಹಾಸಿಕ ಸಿದ್ಧಾಂತಗಳಿಗೆ ಶಾಸನ, ಸಮಕಾಲೀನ ಸಾಹಿತ್ಯ ಹಾಗೂ ಪ್ರವಾಸಿಗರ ಬರಹಗಳಲ್ಲಿ ದೊರಕುವ ಮಾಹಿತಿಗಳೇ ಪ್ರಧಾನ ಆಧಾರಗಳು. ಇವುಗಳ ನೆರವಿನಿಂದ ಬರೆದ ಇತಿಹಾಸವನ್ನು ತರುವಾಯದ ತಲೆಮಾರಿನ ಸಂಶೋಧಕರು ತಿದ್ದಿರುವುದೂ ಉಂಟು. ಇತಿಹಾಸಕಾರರೇ ತಮ್ಮ ಅಭಿಪ್ರಾಯಗಳನ್ನು ಮಾರ್ಪಡಿಸಿಕೊಂಡಿರುವ ಸಂದರ್ಭಗಳೂ ಇವೆ. ಪುರಾವಸ್ತು ಹಾಗೂ ಇತಿಹಾಸ ತಜ್ಞರು ಜಾಗರೂಕತೆಯಿಂದ ಸಿದ್ಧಾಂತಗಳನ್ನು ಮಂಡಿಸಬೇಕಾಗಿರುವುದರಿಂದ ಅವರದು ಗುರುತರವಾದ ಹೊಣೆ. ಶ್ರೀಯುತ ಮಲ್ಲಪ್ಪನವರು ಸಂಶೋಧನೆಗಳನ್ನು ನಡೆಸಿ "ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀಪಾದ – ವಿಜಯನಗರದ ಸಾಮ್ರಾಜ್ಯ ಸ್ಥಾಪಕ" ಎಂಬ ಲೇಖನವನ್ನು ಬರೆದು ಪ್ರಕಟಿಸಿದರು. ಈ ಲೇಖನವು (1) ಶೃಂಗೇರಿ ಮಠದ ಧಾರ್ಮಿಕ ಪರಂಪರೆಯೇನು. (2) ವಿದ್ಯಾರಣ್ಯರು ಯಾರು?, (3) ಮಲ್ಲಪ್ಪನವರು ತಿಳಿಸುವ ಕ್ರಿಯಾಶಕ್ತಿ ವಿದ್ಯಾರಣ್ಯರು ಯಾರು? ಎಂಬ ಸಮಸ್ಯೆಗಳನ್ನು ತಂದಿರುವ ಕಾರಣ ಅವುಗಳ ಬಗ್ಗೆ ತ. ರಾ. ಸುಬ್ಬರಾಯರು ತಮ್ಮ ಅಭಿಪ್ರಾಯ

ಗಳನ್ನು ತಮ್ಮ ಸಮೀಕ್ಷೆಯನ್ನೊಳಗೊಂಡ ಕಿರುಹೊತ್ತಿಗೆಯಲ್ಲಿ ಪ್ರಕಟಿಸಿದ್ದಾರೆ. ಈ ಸಂಬಂಧದಲ್ಲಿ ನಾವು ಕೆಲವು ಐತಿಹಾಸಿಕ ಮಾಹಿತಿಗಳನ್ನು ಗಮನಿಸುವುದು ಸೂಕ್ತವೆನಿಸುತ್ತವೆ.

೧ ವಿಜಯನಗರ ಸ್ಥಾಪನೆ

ಕಂಪಿಲಿ ಮತ್ತು ಹೊಯ್ಸಳ ರಾಜಧಾನಿ ದೋರಸಮುದ್ರ ಇವೆರಡೂ 1327 ರಲ್ಲಿ ಮಹಮದ್ ತೊಗಲಕನ ಸೈನ್ಯದಿಂದ ನಾಶಗೊಂಡ ಮೇಲೆ ಹೊಯ್ಸಳ ಮುಮ್ಮಡಿ ವೀರ ಬಲ್ಲಾಳನು (1292-1343) ರಾಜ್ಯವನ್ನು ಮತ್ತೆ ಸಂಘಟಿಸಲು ಪ್ರಯತ್ನಿಸಿದ: ಸ್ಥಿರವಾದ ನೆಲೆಯಿಲ್ಲದೆ 1318 ರಲ್ಲಿ ಅರುಣಸಮುದ್ರ,[1] 1319 ರಲ್ಲಿ ದೋರಸಮುದ್ರ[2] 1328 ರಲ್ಲಿ ಅಣ್ಣಾಮಲೈ[3] 1331 ರಲ್ಲಿ ಅರುಣಸಮುದ್ರ,[4] 1333 ರಲ್ಲಿ ಹೊಸಪಟ್ಟ,[5] 1334 ರಲ್ಲಿ ಮತ್ತೆ ದೋರಸಮುದ್ರ[6] ಹೀಗೆ ಹಲವಾರು ಸ್ಥಳಗಳನ್ನು ತನ್ನ ನೆಲೆವೀಡುಗಳನ್ನಾಗಿ ಮಾಡಿ ಕೊಂಡು 1343 ರಲ್ಲಿ ಮಧುರೆಯ ಸುಲ್ತಾನ ಗಯಾಸುದ್ದೀನನ ಮೋಸಕ್ಕೊಳಗಾದ ಅವನ ಮರಣ ಅತ್ಯಂತ ದಾರುಣವಾದದ್ದು. ಆಗ ಅವನಿಗೆ ವಯಸ್ಸು ೮೦. ಅವನ ಮರಣ ವಾರ್ತೆ ತಲುಪಿದ ಮೇಲೆ 1343 ರಲ್ಲಿ ಅವನ ಮಗ IV ನೇ ವೀರಬಲ್ಲಾಳ ವಿರೂಪಾಕ್ಷ ವಿರೂಪಾಕ್ಷಪುರದಲ್ಲಿ ಪಟ್ಟಾಭಿಷಿಕ್ತನಾದ.[7] ಹೀಗೆ IV ನೇ ಬಲ್ಲಾಳನು ಅಳಿದುಳಿದ ಹೊಯ್ಸಳ ರಾಜ್ಯದ ಅರಸನಾಗಿ ಪಟ್ಟಾಭಿಷಿಕ್ತನಾಗುವುದಕ್ಕೆ ಆರು ವರ್ಷಗಳ ಹಿಂದೆಯೇ ವಿಜಯನಗರವು ಸ್ಥಾಪನೆಯಾಗಿ I ನೇ ಹರಿಹರ ವಿಜಯನಗರದ ಪ್ರಥಮ ಸಾಮ್ರಾಟನಾಗಿದ್ದ (1336) ಈ ಕಾರಣಗಳಿಂದ ಹೊಯ್ಸಳ ಮುಮ್ಮಡಿ ವೀರ ಬಲ್ಲಾಳನು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಎಂಬುದರಲ್ಲಿ ಯಾವ ಸತ್ಯಾಂಶವೂ ಇಲ್ಲ. ಹೊಯ್ಸಳ ಇತಿಹಾಸ ಸಂಶೋಧಕ ಡೆರೆಟ್ ಅವರ ಅಭಿಪ್ರಾಯವಿದು :

In 1336 the city of Vijayanagar was fonded. A new dynasty stepped into the shoes of Kampila Deva. The erroneous belief that Ballala himself founded that city, naming it after his son called Vijaya, was based upon the

---

1 EC IX Cp. 73 (A D 1318)
2 EC IX Cp. 12 (A D 1319)
3 EC IX Db. 14, Dv. I and 60, Ht. 124 (A D 1328)
4 EC IX Cp. 71 (A D 1331)
5 EC IX Nl. 9 (A D 1333)
6 EC IX Cp. 7 (A D 1334)
7 EC VI Chikmagalur, 105 (A D 1343)

faulty tradition found in Channabasaveshvara Sadbhakti Kalagnana and picked by Firishta. 8

ವಿಜಯನಗರ ಸಾಮ್ರಾಜ್ಯವನ್ನು ಹಕ್ಕ ಬುಕ್ಕರು ವಿದ್ಯಾರಣ್ಯರ ನೆರವಿನಿಂದ ಸ್ಥಾಪಿಸಿದರು ಎಂಬುದು ಐತಿಹಾಸಿಕವಾಗಿ ಅಂಗೀಕೃತವಾದ ವಿಷಯ. ವಿದ್ಯೆಯನ್ನೇ ಅರಣ್ಯದಂತೆ ವ್ಯಾಪಕವಾಗಿ ಹೊಂದಿದ್ದ ಮಾಧವ ಎಂಬುವವರು ವಿದ್ಯಾರಣ್ಯ ಎಂಬ ಅಭಿದಾನವನ್ನು ಹೊಂದಿದ್ದರು.[9] ಈ ಮಾಧವ (ವಿದ್ಯಾರಣ್ಯ) ಶಂಕರಾಚಾರ್ಯರ ಅದ್ವೈತ ಪಂಥಕ್ಕೆ ಸೇರಿದವರು; ಶೃಂಗೇರಿಯ ಜಗದ್ಗುರುಗಳಾಗಿದ್ದವರು. ಅವರ ಕಾಲದಲ್ಲಿ ಶೃಂಗೇರಿಯ ಮಠದವರು ಜಂಗಮ ಹಾಗೂ ಜೈನರ ಪ್ರಾಬಲ್ಯಕ್ಕೆ, ಮಹಮದೀಯರ ದಾಳಿಗಳಿಗೂ ಹೆದರಿ ಸಂಗಮ ಸಹೋದರರಾದ ಹಕ್ಕ–ಬುಕ್ಕರಿಂದ ವೈದಿಕ ಧರ್ಮವನ್ನು ರಕ್ಷಿಸಬಲ್ಲ ಸಾಮ್ರಾಜ್ಯವನ್ನು ಸ್ಥಾಪಿಸಲು ಮಠದ ಬೊಕ್ಕಸವನ್ನು ವೆಚ್ಚಮಾಡಿದುದಲ್ಲದೆ ಈ ದಿಸೆಯಲ್ಲಿ ಜನರ ಬೆಂಬಲವನ್ನು ಸಹ ಪಡೆದುಕೊಂಡಿರಬಹುದು.[10] ವಿದ್ಯಾರಣ್ಯರು ತಮ್ಮ 36ನೇ ವಯಸ್ಸಿನಲ್ಲಿ (ಕಿ. ಶ. 1331 ರಲ್ಲಿ) ಶೃಂಗೇರಿಯ ಗುರುಗಳಾಗಿ, 1386 ರ ವರೆಗೆ ಜೀವಂತರಾಗಿದ್ದರು. ಅವರ ಸಹೋದರ ಸಾಯಣಾಚಾರ್ಯರು ಹಲವಾರು ಧರ್ಮ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿದ್ದರು. "ವಿದ್ಯಾರಣ್ಯ ಸಿಕ್ಕಾ" (ಬಹುಶಃ 'ವಿದ್ಯಾರಣ್ಯ ಕಾಲಜ್ಞಾನ') ಗ್ರಂಥದ ಆಧಾರದ ಮೇಲೆ, ಕ್ರಿ. ಶ. 1336 ರಲ್ಲಿ ವಿದ್ಯಾನಗರವನ್ನು (ವಿಜಯನಗರ) ಸ್ಥಾಪಿಸಲು ವಿದ್ಯಾರಣ್ಯರು ಹಕ್ಕ-ಬುಕ್ಕರಿಗೆ ನೆರವು ನೀಡಿದರೆಂದು ಹ್ಯಾಮಿಲ್ಟನ್ ಬುಖನಾನ್ ಸಹ ತಿಳಿಸುತ್ತಾರೆ.[11]

ವಿದ್ಯಾರಣ್ಯರು ರಾಜ್ಯ ಸ್ಥಾಪಿಸಲು ನೆರವು ನೀಡಿದ ಹಕ್ಕ (ಹರಿಹರ) ಮತ್ತು ಬುಕ್ಕರು ಸಂಗಮನ ಪುತ್ರರೆಂದು ಶಾಸನಗಳಿಂದ ತಿಳಿದು ಬರುವುದಾದರೂ ಅವರ ಪ್ರಾರಂಭ ಜೀವನದ ಬಗ್ಗೆ ನಿಚಿತವಾದ ಮಾಹಿತಿಗಳು ಸಿಗುವುದಿಲ್ಲ. ಹೊಯ್ಸಳ II ನೇ ನರಸಿಂಹನ ಕಾಲದಲ್ಲಿ (1220–1235) ಅಪ್ಪಾಯದ ಹರಿಹರ ಅಥವಾ ಹರಿಹರನೆಂಬ ದಂಡನಾಯಕನು ಸೇವುಣರ ಸೈನ್ಯವನ್ನು ಸೋಲಿಸಿದ.[12] ಈ ಹರಿಹರನನ್ನು ಬಿಟ್ಟರೆ ಒಂದು ಶತಮಾನದ ತರುವಾಯ ನಮಗೆ ಕಾಣುವ ಹರಿಹರ 1336 ರಲ್ಲಿ ವಿಜಯನಗರವನ್ನು ಸ್ಥಾಪಿಸಿದ ಸಂಗಮನ ಪುತ್ರ ಹರಿಹರ. ಹೊಯ್ಸಳರ

8 Derret J. Juncan M: The Hoysalas, Oxford Univercity. Press, 1957, Chapter 6, Sec. 9.

9 B L Rice, Mysore, Vol. I, Archibald Constable and Company, London, 1897, p 344.

10 Ibid. p 345

11 Buchanan, Hamilton, Journey from Madras through Mysore, Canara and Malabar, Vol. III, pp. 110–115.

12 EC III, pt I, Maddur 121.

ಕೊನೆಯ ಅರಸ ಮುಮ್ಮಡಿ ಬಲ್ಲಾಳನ ಆಸ್ಥಾನದಲ್ಲಿ ಪೆರುಮಾಳೆ ದಂಡನಾಯಕ, ಪೆರುಮಾಳೆಯ ಮಗ ಮಾಧವ ದಂಡನಾಯಕ, ಮಾಧವನ ಮಗ ಕೇತಯ್ಯ ದಂಡನಾಯಕ ಹಾಗೂ ಬಲ್ಲಾಳನ ಅಳಿಯನಾದ ಮಾಚಯ್ಯ ದಂಡನಾಯಕ—ಇವರ ಹೊರತು ಹರಿಹರನೆಂಬ ದಂಡನಾಯಕನು ಸೇವೆ ಸಲ್ಲಿಸುತ್ತಿರಲಿಲ್ಲ. ಮುಮ್ಮಡಿ ವೀರಬಲ್ಲಾಳನ ಕಾಲದಲ್ಲಿ (ಸು. 1300 ರಲ್ಲಿ) ಆನೆ ಗೊಂದಿಯ ಭಾಗದಲ್ಲಿದ್ದ ಸಂಗಮ ಮತ್ತು ಅವನ ಪತ್ನಿ ಕಾಮಾಂಬಿಕೆಯ ಐವರು ಪುತ್ರರು ಹರಿಹರ I, ಕಂಪಣ I, ಬುಕ್ಕ I, ಮಾರಪ್ಪ ಮತ್ತು ಮುದ್ದಪ್ಪ ಎಂದು ಕೆಲವು ಶಾಸನಗಳು ತಿಳಿಸುತ್ತವೆ.[13] ಹರಿಹರ ಮತ್ತು ಬುಕ್ಕರು ಈ ಸಹೋದರರಲ್ಲಿ ಪ್ರಸಿದ್ಧರು. ತುರುಷ್ಕರಿಂದ ದಕ್ಷಿಣ ಭಾರತಕ್ಕೆ ವಿಪತ್ತು ಒದಗಿದ್ದಾಗ ಬಲಶಾಲಿಗಳಾದ ಹರಿಹರ ಬುಕ್ಕರೊಡನೆ ಹೊಯ್ಸಳ ಮುಮ್ಮಡಿ ವೀರಬಲ್ಲಾಳನೂ, ಸೇವುಣರೂ ಸಂಘಟಿಸಿಕೊಂಡು ಮಹಮ್ಮದೀಯರ ದಂಡನ್ನು ಮುಂದೆ ಬಾರದಂತೆ ತಡೆಯಲು ಪ್ರಯತ್ನಿಸಿದರು. ಈ ಪ್ರಯತ್ನಕ್ಕೆ ಮುಂಚೆ ಹರಿಹರ–ಬುಕ್ಕರು ತುಂಗಭದ್ರಾ ತೀರದಲ್ಲಿ ರಾಜ್ಯ ಕಟ್ಟಿದ ಬಗ್ಗೆ ಮಹಮ್ಮದೀಯ ಇತಿಹಾಸಕಾರರ ಬರಹಗಳೂ, ಜನ ಅನೂಚಾನವಾಗಿ ಅಂಗೀಕರಿಸಿಕೊಂಡು ಬಂದಿರುವ ನಂಬಿಕೆಗಳೂ ಅನೇಕವಿವೆ :

ಮುಸಲ್ಮಾನ ಇತಿಹಾಸಕಾರ ಬರಾನಿ (Barauni) ತಿಳಿಸುವುದಿಷ್ಟು: ಆಂಧ್ರ ಭಾಗದ ಓರಗಲ್ಲನ್ನು ಗೆದ್ದು ಕೊಂಡ ಮೇಲೆ ಮಹಮದ್ ತೊಗಲಕನು ಅಲ್ಲಿನ ಮಂಡಲಾಧಿಕಾರಿಯಾಗಿ ನೇಮಿಸಿದ್ದ ಮಾಲಿಕ್‌ಮಕ್ಬುಲ್ ಎಂಬಾತನನ್ನು ಕನ್ಯಾನಾಯಕ ಓಡಿಸಿದ. ಅದನ್ನು ತಿಳಿದು ಮಹಮದ್ ತೊಗಲಕನು, ತಾನು ಮತಾಂತರಗೊಳಿಸಿ ದೆಹಲಿಗೆ ಕರೆದುಕೊಂಡು ಹೋಗಿದ್ದ ಕನ್ಯಾನಾಯಕನ ಬಂಧುವೊಬ್ಬನನ್ನು ಕನ್ಯಾನಾಯಕನ ದಂಗೆಯನ್ನಡಗಿಸಲು ಕಳುಹಿಸಿದ. ಕನ್ಯಾನಾಯಕನ ಬಂಧು ಕನ್ಯಾನಾಯಕನ ಪಕ್ಷವನ್ನು ಸೇರಿ, ಕಂಪಿಲಿ ಆನೆಗೊಂದಿ ಪ್ರದೇಶದಲ್ಲಿ ಮುಸಲ್ಮಾನರ ಹಾವಳಿಯನ್ನು ಅಡಗಿಸಿ ಅಲ್ಲಿನ ಮಂಡಲಾಧಿಕಾರಿ ಮಾಲಿಕ್ ಮಹಮದನನ್ನು ಅಟ್ಟಿದ. ಅರೇಬಿಯಾದ ಪ್ರವಾಸಿಗ ಇಬಿನ್ ಬಟೂಟಾ ಕೆಲವು ಕಾಲ ದೆಹಲಿಯಲ್ಲಿ ತೊಗಲಕನ ಆಸ್ಥಾನದಲ್ಲಿದ್ದು ದಕ್ಷಿಣ ಭಾರತದಲ್ಲಿ ತಿರುಗಿದವನು. ಅವನು ಕೊಟ್ಟಿರುವ ಮಾಹಿತಿಗಳ ಪ್ರಕಾರ ಕಂಪಿಲಿಯು ಪತನಗೊಂಡ ಮೇಲೆ ಖಂಡೇರಾಯ ಕಂಪಿಲನ ಹನ್ನೊಂದು ಮಂದಿ ಮಕ್ಕಳನ್ನು ತೊಗಲಕನು ದೆಹಲಿಗೆ ಕರೆದುಕೊಂಡು ಹೋಗಿ ಮತಾಂತರಗೊಳಿಸಿದ. ಅವರಲ್ಲಿ ಇಬ್ಬರನ್ನು ಕಂಪಿಲಿಯ ಪ್ರದೇಶದ ಮಂಡಲಾಧಿಕಾರಿಗಳನ್ನಾಗಿ ನೇಮಿಸಿ ಕಳುಹಿಸಲು, ಅವರಿಬ್ಬರೂ ತೊಗಲಕನ ಅಧಿಕಾರದಿಂದ ಕಳಚಿಕೊಂಡು ಕಂಪಿಲಿಯ ಪ್ರದೇಶದಲ್ಲಿ ರಾಜ್ಯವನ್ನು ಕಟ್ಟಿದರು.[14] ಇಸಾಮಿ ಎಂಬ ಮತ್ತೊಬ್ಬ ಚರಿತ್ರಕಾರನು ಸಹ ಇಂಥ ವಾದವನ್ನೇ ಮುಂದಿಡುತ್ತಾನೆ. ಮುಸಲ್ಮಾನ ಇತಿಹಾಸಕಾರರ ದಾಖಲೆ

13 EC X, Bagepalli 70 ; Mulabagal 158 ; Goribidanur 56.
14 Sewell, Robert, A Forgotten Empire, 2nd Edn, p 17.

ಗಳನ್ನು ನಾವು ಪಾತ್ರವೆಂದು ಅಂಗೀಕರಿಸುವಂತಿಲ್ಲ. ಮತಾಂತರಗೊಂಡ ಹಿಂದೂಗಳು ಮರಳಿ ಹಿಂದೂ ಧರ್ಮಕ್ಕೆ ಬಂದು ದಕ್ಷಿಣ ಭಾರತದಲ್ಲಿ ರಾಜ್ಯ ಕಟ್ಟಿದರೆಂದು ಅವರು ಕೊಡುವ ಹೇಳಿಕೆಗಳನ್ನು ನಾವು ಕೈಬಿಡಬೇಕಾಗಿದೆ. ದೆಹಲಿಯ ಸುಲ್ತಾನನು ಕಳುಹಿಸಿದ ವ್ಯಕ್ತಿಗಳೇ ಹರಿಹರ ಬುಕ್ಕರೆಂದು ನಂಬುವುದಂತೂ ಹಾಸ್ಯಾಸ್ಪದವಾದ ವಿಷಯ, ಏಕೆಂದರೆ. ಸಂಗಮನ ಪುತ್ರರು ಆ ಕಾಲದಲ್ಲಿ ದಕ್ಷಿಣ ಭಾರತವನ್ನು ರಕ್ಷಿಸಲು ಹೊಯ್ಸಳ, ಸೇವುಣ ಅರಸರೊಡನೆ ಕೂಡಿಕೊಂಡಿದ್ದುದಲ್ಲದೆ, ಪರಸ್ಪರ ವಿವಾಹ ಸಂಬಂಧವನ್ನು ಸಹ ಬೆಳೆಸಿಕೊಂಡಿದ್ದರು.[15]

ಹರಿಹರ ಬುಕ್ಕರ ಬಗ್ಗೆ ತೆಲುಗುವಾದವೊಂದು ಸಹ ಇದೆ: ಹರಿಹರ ಮತ್ತು ಬುಕ್ಕರು ಓರಗಲ್ಲಿನ ಕಾಕತೀಯ ಅರಸ ಪ್ರತಾಪರುದ್ರದೇವನ ಆಸ್ಥಾನದಲ್ಲಿ ಕ್ರಮವಾಗಿ ಮಂತ್ರಿ ಮತ್ತು ಬೊಕ್ಕಸಾಧಿಕಾರಿಗಳಾಗಿದ್ದವರು. ಓರಗಲ್ಲು (ವಾರಂಗಲ್) ದೆಹಲಿಯ ಸುಲ್ತಾನನಿಂದ ನಾಶಗೊಂಡಮೇಲೆ ಅವರಿಬ್ಬರೂ ಕಂಪಿಲಿಯತ್ತ ಸಾಗಿ, ಕಂಪಿಲಿಯ ಕಂಪಿಲರಾಯನ ದಂಡನಾಯಕರಾದರು. ಕಂಪಿಲಿಯ ಪತನದಲ್ಲಿ ಶತ್ರುಗಳಿಗೆ ಸಿಕ್ಕಿದ ಅವರು ದೆಹಲಿಗೆ ಹೋಗಿ ಸುಲ್ತಾನನ ಸೇವೆಯಲ್ಲಿದ್ದರು. ಸ್ವಲ್ಪ ಕಾಲದ ಮೇಲೆ ಸುಲ್ತಾನನು ಅವರನ್ನು ಕಂಪಿಲಿಯ ಮಾಂಡಲಿಕರನ್ನಾಗಿ ನೇಮಿಸಿ ಕಳುಹಿಸಿದಾಗ ಅವರು ಸುಲ್ತಾನನ ಅಧಿಕಾರವನ್ನು ನಿರಾಕರಿಸಿ ಸ್ವತಂತ್ರರಾಗಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಈ ವಿಷಯಗಳು "ರಾಜಕಾಲ ನಿರ್ಣಯ," ಮತ್ತು ಇತರ ಗ್ರಂಥಗಳಲ್ಲಿ ಸಿಕ್ಕಿವೆ.[16]

ಆದರೆ, ಈ ಹೇಳಿಕೆಗಳೆಲ್ಲವನ್ನೂ ಐತಿಹಾಸಿಕ ಮಾಹಿತಿಗಳಿಗೆ ದೂರವಾದ ಕಟ್ಟುಕಥೆಗಳೆಂದು ಬಿಡಬೇಕಾಗುತ್ತದೆ. ಕರ್ನಾಟಕದ ಶಾಸನಗಳಲ್ಲಿ ಹರಿಹರ–ಬುಕ್ಕ ಸಹೋದರರನ್ನು ಸಂಗಮನ ಪುತ್ರರೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಅವರು ಯಾದವ ಕುಲಕ್ಕೆ ಸೇರಿದವರು. ಬಾಗೇಪಲ್ಲಿಯ 1336 ರ ಬೆಸ್ತರಹಳ್ಳಿ ತಾಮ್ರ ಶಾಸನವು I ನೇ ಹರಿಹರನು ಕುಂಜರ ಕೋಣದಲ್ಲಿ (ಆನೆಗೊಂದಿ) ಆಳುತ್ತಿದ್ದು, ವಿದ್ಯಾರಣ್ಯರ ಮಾರ್ಗದರ್ಶನದಿಂದ ವಿಜಯನಗರವನ್ನು ಸ್ಥಾಪಿಸಿದನೆಂದು ತಿಳಿಸುತ್ತದೆ.[17] ಇದೇ ರೀತಿ ಕ್ರಿ. ಶ. 1336 ರ ನೆಲ್ಲೂರು 15 ನೇ ಶಾಸನವು ಸಹ (ಕಾಪಲೂರು ತಾಮ್ರ ಶಾಸನ) ಹರಿಹರನ ರಾಜಧಾನಿ ಕುಂಜರ ಕೋಣವೆಂದೂ, ವಿದ್ಯಾರಣ್ಯರ ಸೂಚನೆಯಂತೆ ಅವನು ವಿದ್ಯಾನಗರವನ್ನು ಸ್ಥಾಪಿಸಿ ಅಲ್ಲಿ ಪಟ್ಟಾಭಿಷಿಕ್ತನಾದನೆಂದೂ ತಿಳಿಸುತ್ತದೆ. ಈ ಆಧಾರಗಳಿಂದ ಹರಿಹರನು ಹೊರಗಿನಿಂದ ಬಂದವನಲ್ಲ, ಕನ್ನಡ ಸೀಮೆಯಲ್ಲಿಯೇ

15 C. Hayavadana Rao, Myscre Gezetteer, Vol. II, pt 3, p 1421.

16 P. B. Desai, The Rise and Growth of Vijayanagar, in "Karnataka Through the Ages" p 530.

17 EC X, Bagepalli 70. A D 1336.

ಇದ್ದು ರಾಜ್ಯವನ್ನು ಕಟ್ಟಿದವನು ಎಂಬುದು ವ್ಯರ್ಥವಾಗುತ್ತದೆ. ಬಿ. ಎಲ್. ರೈಸ್ ಅವರು ಹರಿಹರ ಬುಕ್ಕರು ಚಂದ್ರವಂಶದ ಯಾದವ ಕುಲದ ಸಂಗಮನ ಪುತ್ರರೆಂದು ತಿಳಿಸಿ ವಿಜಯನಗರದ ಅರಸರ ಬಗ್ಗೆ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ :

"The earliest of the inscriptions of the Vijayanagar kings are bound north and west of Mysore, and they were probably Mysoreans in origin and fendatories of the Hoysalas" [18]

೨. ವಿದ್ಯಾರಣ್ಯ

ಈ ಮುಂದೆ ಉಲ್ಲೇಖಿಸಿರುವಂತೆ ಶೃಂಗೇರಿ ಮಠದ ಗುರುಪರಂಪರೆಯಲ್ಲಿ ವಿದ್ಯಾರಣ್ಯರ ಸ್ಥಾನ ಹನ್ನೆರಡನೆಯದು—

10	ವಿದ್ಯಾಶಂಕರಸ್ವಾಮಿ	......	1228 – 1333
11	ಭಾರತೀ ಕೃಷ್ಣ ತೀರ್ಥ	......	1328 – 1380
12	ವಿದ್ಯಾರಣ್ಯ	......	1331 – 1386
13	ಚಂದ್ರಶೇಖರ ಭಾರತಿ	......	1368 – 1389

‘ವಿದ್ಯಾರಣ್ಯ ಕಾಲಜ್ಞಾನ’ ಭಾರತೀ ಕೃಷ್ಣತೀರ್ಥರ ಆದೇಶದ ಮೇರೆಗೆ ರಚಿತವಾಯಿತೆಂದು ತಿಳಿದು ಬರುತ್ತದೆ. ಈ ಕಾಲಜ್ಞಾನದ ಪ್ರಕಾರ ವಿದ್ಯಾಶಂಕರ (ವಿದ್ಯಾತೀರ್ಥ) ಸ್ವಾಮಿಗಳ ಶಿಷ್ಯರು. ಶಂಕರಾಚಾರ್ಯರ ಅನುಯಾಯಿಗಳೆಂದು ವಿದ್ಯಾರಣ್ಯರು ಹೇಳಿಕೊಂಡಿದ್ದಾರೆ. ವಿದ್ಯಾರಣ್ಯರು ಕಾಶಿಗೆ ಹೋಗಿ ವ್ಯಾಸಮುನಿಯನ್ನು ಕಂಡು ತಾವು ರಚಿಸಿದ ವೇದಭಾಷ್ಯವನ್ನು ಪರಿಷ್ಕರಿಸಿಕೊಂಡು ತರುವಾಯ ಹಂಪೆಯ ವಿರೂಪಾಕ್ಷಸ್ವಾಮಿಯ ಸೇವೆಗೆಂದು ಬರಲು, ಅಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳನಿಂದ ಸೋತು ಹಿಂತಿರುಗಿದ್ದ ಹರಿಹರ ಬುಕ್ಕರು ಅವರನ್ನು ಕಂಡು, ಅವರ ನೆರವಿನಿಂದ ವಿಜಯನಗರವನ್ನು ಸ್ಥಾಪಿಸಿದರು. ವಿದ್ಯಾರಣ್ಯ ಕಾಲದಲ್ಲಿ ಈ ವಿಷಯಗಳೊಂದಿಗೆ ವಿಜಯನಗರ ಸಾಮ್ರಾಜ್ಯವು ಎಷ್ಟು ಕಾಲ ಬಾಳಿ ಬರುತ್ತದೆ ಎಂಬ ವಿಷಯವಿದೆ : ಮೊದಲ ಮೂವರು ಅರಸರು (Iನೇ ಹರಿಹರ, Iನೇ ಬುಕ್ಕ ಮತ್ತು IIನೇ ಹರಿಹರ) ವಿದ್ಯಾರಣ್ಯರ ಮಾರ್ಗದರ್ಶನದಿಂದ ರಾಜ್ಯಭಾರ ಮಾಡಿದರು. ಮೊದಲ ಹದಿಮೂರು ಮಂದಿ ಅರಸರು ವಿರೂಪಾಕ್ಷನನ್ನು ಪೂಜಿಸುತ್ತಾ, “ವಿದ್ಯಾರಣ್ಯ ಮತ್ತು ಅವರ ಶಿಷ್ಯ ಕ್ರಿಯಾಶಕ್ತಿ ಗುರುಗಳಲ್ಲಿ ಅಪಾರ ಭಕ್ತಿಯಿಟ್ಟಿದ್ದರು”. [19]

ವಿದ್ಯಾರಣ್ಯರು ಭಾರದ್ವಾಜ ಗೋತ್ರಕ್ಕೆ ಸೇರಿದವರು. ಮಾಯಣ ಮತ್ತು ಶ್ರೀಮತಿ (ಶ್ರೀಮಾಯಿ) ಎಂಬ ದಂಪತಿಗಳ ಮಕ್ಕಳಲ್ಲಿ ವಿದ್ಯಾರಣ್ಯರೇ ಹಿರಿಯವರು.

---

18 B. L. Rice, op Cit., p 345.

19 MAR, 1932, p 105.

ಅವರಿಗೆ ಮಾಧವ ಎಂಬ ಹೆಸರಿತ್ತು. ಇನ್ನಿಬ್ಬರು ಮಕ್ಕಳು ಸಾಯಣ ಮತ್ತು ಭೋಗನಾಥ. ಸಾಯಣರ ಮೂರು ಮಕ್ಕಳಲ್ಲಿ ನಡುಕಲ ಮಗನ ಹೆಸರು ಮಾಯಣ ಅಥವಾ ಮಾಧವ. ಚರಿತ್ರಕಾರರು ವಿದ್ಯಾರಣ್ಯರನ್ನು ಭಾರಧ್ವಾಜ ಮಾಧವ ಅಥವಾ ಮಾಯಣ ಮಾಧವ ಎಂದೂ, ಸಾಯಣರ ಮಗನನ್ನು ಸಾಯಣ ಮಾಧವ ಎಂದೂ ಕರೆದಿದ್ದಾರೆ. 20 ಶೃಂಗೇರಿಯ ಮಠದಲ್ಲಿ ಪರಂಪರಾಗತವಾಗಿ ತಿಳಿದು ಬಂದಿರುವಂತೆ, ವಿದ್ಯಾರಣ್ಯರ ಸಹೋದರ ಭೋಗನಾಥರು ವಿದ್ಯಾರಣ್ಯರಿಗೆ ಓಂದೆಯೇ ಸಂನ್ಯಾಸವನ್ನು ಸ್ವೀಕರಿಸಿ ಭಾರತೀ ಕೃಷ್ಣತೀರ್ಥ ಎಂಬ ಹೆಸರನ್ನು ತಾಳಿದರು. 21 ವಿದ್ಯಾರಣ್ಯರ ಸಮಕಾಲೀನನಾದ ಮಾಧವ ಮಂತ್ರಿ ಅಥವಾ ಮಾದರಸಪೊಡೆಯ ಆರಗದ ಮಂಡಲಾಧಿಕಾರಿಯಾಗಿದ್ದ. ಅವನದು ಶೈವಮತ; ಕ್ರಿಯಾಶಕ್ತಿ ಆವನ ಗುರುಗಳು. ಅವನು ಆಂಗೀರಸ ಗೋತ್ರದವನು; ಚಾವುಂಡ ಭಟ್ಟ ಮತ್ತು ಮಾಚಾಂಬಿಕೆಯ ಮಗ. ಅವನನ್ನು ಚಾವುಂಡ ಮಾಧವ ಅಥವಾ ಆಂಗೀರಸ ಮಾಧವ ಎಂದು ಕರೆಯಲಾಗಿದೆ. 22 ಈ ಮೂವರು ಮಾಧವರಿದ್ದರೆಂದು ಪ್ರಾರಂಭದಲ್ಲಿ ಶಾಸನ ಸಂಶೋಧಕರಿಗೆ ಹಾಗೂ ಚರಿತ್ರಕಾರರಿಗೆ ತಿಳಿದಿರಲಿಲ್ಲವಾಗಿ ಆ ಬಗ್ಗೆ ಒಂದಷ್ಟು ಗೊಂದಲವಾಗಿದೆ:

ಆರ್. ನರಸಿಂಹಾಚಾರ್ಯರು, ಭಾರದ್ವಾಜ ಮಾಧವರೇ, ವಿದ್ಯಾರಣ್ಯರಿರಬಹುದೆಂದು ವ್ಯಕ್ತಪಡಿಸಲು, ಅವರನ್ನು ಖಂಡಿಸಿ ವೆಂಕಟಸುಬ್ಬಯ್ಯನವರು ವಿಜಯನಗರದ ಅರಸರ ಗುರುಗಳಾಗಿದ್ದ ಕ್ರಿಯಾಶಕ್ತಿ ಮುನಿಗಳೇ ವಿದ್ಯಾರಣ್ಯರಾಗಿರಬಹುದೆಂದು ಊಹಿಸಲು ಕಾರಣಗಳಿವೆ ಎಂದರು. 23 ಎ. ಸುಬ್ರಹ್ಮಣ್ಯ ಐಯರ್ ಅವರು ಮಾಧವ ಮಂತ್ರಿಯೇ ವಿದ್ಯಾರಣ್ಯರೆಂದು ಅಭಿಪ್ರಾಯ ಪಟ್ಟರು.24 ವಿಜಯನಗರದ ಸ್ಥಾಪನೆಯಲ್ಲಿ ಹರಿಹರ ಬುಕ್ಕರಿಗೆ ವಿದ್ಯಾರಣ್ಯರು ನೆರವು ನೀಡಿದ್ದರೂ, ವಿಜಯನಗರದ ಅರಸರ ಕುಲಗುರು ಕಾಶೀವಿಲಾಸ ಕ್ರಿಯಾಶಕ್ತಿಯೇ ಹೊರತು ವಿದ್ಯಾರಣ್ಯರಲ್ಲ ಎಂದು ಸಾಲ್ತೊರೆಯವರು ಹೇಳುತ್ತಾರೆ. ಶೃಂಗೇರಿ ಮಠದ ತಾಮ್ರ ಶಾಸನಗಳಲ್ಲಿ ಕೆಲವು ಕೃತಕವೆಂಬ ಅಭಿಪ್ರಾಯವನ್ನು ಫಾದರ್ ಹೆರಾಸ್ ತಾಳಿದ್ದರು. ಅವರ ಹೇಳಿಕೆಯ ಪ್ರಕಾರ ಒಬ್ಬಾನೊಬ್ಬ ಶೃಂಗೇರಿಯ ಗುರುಗಳು ವಿಜಯನಗರ ಸಂಸ್ಥಾನವನ್ನು ಸ್ಥಾಪಿಸಿದರು. ಅವರೇ ತಾವು ವಿದ್ಯಾರಣ್ಯರೆಂದು ದೃಢಪಡಿಸಿಕೊಳ್ಳುವುದಕ್ಕಾಗಿ ಅನೇಕ ತಾಮ್ರ ಶಾಸನಗಳನ್ನು ಕೃತಕವಾಗಿ ನಿರ್ಮಿಸಿ

20 Hayavadana Rao, C. Mysore Gezetteer, Vol. II, pt 3 pp 1442-44.

21 MAR 1909.

22 Hayavadana Rao, C. op. Cit., p 1442.

23 Quarterly Journal of the Mythic Society, Vol. VIII, 4.

24 ಆರ್. ಚಕ್ರವರ್ತಿ, 'ಕ್ರಿಯಾಶಕ್ತಿ ವಿದ್ಯಾರಣ್ಯ ವಿಮರ್ಶೆ', 1977 p 9.

ವರು, ಶೃಂಗೇರಿಯ ಕೆಲವು ಶಾಸನಗಳು ಕೃತಕವೆಂದು ಫ್ಲೀಟ್, ಡಾ॥ ವೆಂಕಟ ಸುಬ್ಬಯ್ಯ ಮತ್ತು ಆರ್. ನರಸಿಂಹಾಚಾರ್ಯ ಇವರೆಲ್ಲಾ ಒಪ್ಪುತ್ತಾರೆ. ಆದರೆ ಎಂ. ಎಚ್. ಕೃಷ್ಣ ಅವರು ಫಾದರ್ ಹೆರಾಸ್ ಅವರ ಅಭಿಪ್ರಾಯನ್ನು ಸ್ವೀಕರಿಸದೆ ಜನಜನಿತವಾದ ಕಥೆಗಳಲ್ಲಿ ವಿದ್ಯಾರಣ್ಯರೇ ವಿಜಯನಗರ ಸ್ಥಾಪಕರೆಂದು ಪ್ರಚಾರ ವಾಗಿದ್ದರೂ, ವಿದ್ಯಾರಣ್ಯರಿಗೆ ಹಿಂದೆ ಇದ್ದ ವಿದ್ಯಾತೀರ್ಥರೇ (ಶೃಂಗೇರಿ ಗುರು ಪರಂ ಪರೆಯಲ್ಲಿ ೧೦ ನೇ ಗುರುಗಳಾದ ವಿದ್ಯಾ ಶಂಕರ ಸ್ವಾಮಿಗಳು) ವಿಜಯನಗರ ರಾಜ್ಯ ಸ್ಥಾಪನೆಗೆ ಕಾರಣರು ಎಂದಿದ್ದಾರೆ. ಶೃಂಗೇರಿ 1 (ಕ್ರಿ.ಶ. 1346) ಮತ್ತು ಕೊಪ್ಪ 30 (ಕ್ರಿ. ಶ. 1378) ರ ಶಾಸನಗಳಲ್ಲಿ ವಿದ್ಯಾರಣ್ಯರನ್ನು ಭಾರತೀ ತೀರ್ಥ ಶ್ರೀಪಾದ ಮತ್ತು ವಿದ್ಯಾರಣ್ಯ ಶ್ರೀಪಾದ ಎಂದು ಕರೆಯಲಾಗಿದೆ. ವಿದ್ಯಾರಣ್ಯರು ಶೃಂಗೇರಿಯಲ್ಲಿ ತಮ್ಮ ಗುರುಗಳಾದ ವಿದ್ಯಾ ಶಂಕರ ಸ್ವಾಮಿಗಳ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ.

ನಾಲ್ಕನೆಯ ಮೈಸೂರು ಯುದ್ಧ ಮುಗಿದ ಮಾರನೆಯ ವರ್ಷವೇ (1800) ಶೃಂಗೇರಿಯ ಭಾಗಗಳಲ್ಲಿ ಸಂಚರಿಸಿದ ಹ್ಯಾಮಿಲ್ಟನ್ ಬುಚನಾನ್ ಎಂಬಾತನು ತನಗೆ ದೊರೆತ "ವಿದ್ಯಾರಣ್ಯ ಸಿಕ್ಕಾ" ಎಂಬ ಗ್ರಂಥದ ಆದಾರದ ಮೇಲೆ, ವಿದ್ಯಾನಗರ ವನ್ನು (ವಿಜಯನಗರ) ಸ್ಥಾಪಿಸಲು ವಿದ್ಯಾರಣ್ಯರು ಹರಿಹರ–ಬುಕ್ಕರಿಗೆ ನೆರವು ನೀಡಿ ದನೆಂದು ತಿಳಿಸುತ್ತಾನೆ.[25] ಬಹುಶಃ, ಈ ಗ್ರಂಥವು ವಿದ್ಯಾರಣ್ಯ ಕಾಲಜ್ಞಾನ ಇರ ಲಾರದು.

ವಿದ್ಯಾರಣ್ಯರು ತಮ್ಮ 36ನೇ ವಯಸ್ಸಿನಲ್ಲಿ (ಕ್ರಿ.ಶ. 1331ರಲ್ಲಿ) ಶೃಂಗೇರಿಯ ಗುರುಗಳಾಗಿ, 1386 ರ ವರೆಗೆ ಜೀವಂತರಾಗಿದ್ದರು. ಶೃಂಗೇರಿಯ ಕಡತ ವೊಂದರಲ್ಲಿ ವಿದ್ಯಾರಣ್ಯರು ಹಂಪೆಯಲ್ಲಿ ಕಾಲವಾಗಿ ಅವರ ಸಮಾಧಿ ಅಲ್ಲಿಯ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿ ಸ್ಥಾಪನೆ ಗೊಂಡಿತು ಎಂಬ ವಿಷಯ ವಿದೆ.[26] II ನೇ ಹರಿಹರನು ಅವರ ಪುಣ್ಯಸ್ಮರಣೆಗಾಗಿ ಶೃಂಗೇರಿ ತಾಲ್ಲೂಕಿನ ವಿದ್ಯಾ ರಣ್ಯಪುರ ಅಗ್ರಹಾರವನ್ನು ಸ್ಥಾಪಿಸಿದ. ಅಲ್ಲಿ ವಿದ್ಯಾಶಂಕರ ಗುಡಿಯೊಂದಿದೆ.

೩. ಕ್ರಿಯಾಶಕ್ತಿ

ಕ್ರಿಯಾಶಕ್ತಿ ಎಂಬ ಮುನಿ ಕಾಳಾಮುಖ ಅಥವಾ ಪಾಶುಪತ ಶೈವ ಪಂಥದ ಗುರು. ಶ್ರೀಯುತ ಮಲ್ಲಪ್ಪನವರು ತಿಳಿಸುವ ಕ್ರಿಯಾಶಕ್ತಿ ಗುರುಗಳು ಈ ಪಂಥದ ವರು. ಬಿ. ಎಲ್. ರೈಸ್ ಅವರ ಅಭಿಪ್ರಾಯದಲ್ಲಿ ಬ್ರಾಹ್ಮಣಧರ್ಮ, ವಿಶಿಷ್ಟವಾಗಿ ಲಿಂಗರೂಪದಲ್ಲಿ ಶಿವನ ಪೂಜೆ, ಕ್ರಿ. ಶ. 1ನೇ ಶತಮಾನದಲ್ಲಿಯೇ ಕರ್ನಾಟಕದಲ್ಲಿ

25 Buchanan, Hamilton : Journey from Madras through Mysore, Canara and Malabar, Vol. III, pp 110-115.

26 MAR, 1916, para 97.

ರೂಢಿಗೆ ಬಂದಿತು.[27] 3ನೇ ಶತಮಾನದಲ್ಲಿ ಕದಂಬ ತ್ರಿನೇತ್ರನು ಶಿಕಾರಿಪುರ ತಾಲ್ಲೂಕು ತಾಳಗುಂದದಲ್ಲಿ ಬ್ರಾಹ್ಮಣ ಕುಳಗಳು ನೆಲೆ ನಿಲ್ಲುವಂತೆ ಮಾಡಿದ. ಕಾಳಾಮುಖ ಶೈವರ ಪ್ರಭಾವ ಕರ್ನಾಟಕದಲ್ಲಿ ಪ್ರಾರಂಭವಾದದ್ದು 11ನೇ ಶತಮಾನದಲ್ಲಿ. ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆಯಲ್ಲಿಯ ದಕ್ಷಿಣ ಕೇದಾರೇಶ್ವರ ದೇವಾಲಯಕ್ಕೆ ಸೇರಿದ ಕೋಡಿ ಮಠದ ಗುರುಗಳು ಕಾಳಾಮುಖ ಪಂಥದ ಗುರುಗಳಾಗಿದ್ದರು. ಅವರಲ್ಲಿ ಕೇದಾರಶಕ್ತಿ. ಶ್ರೀಕಂಠ. ಸೋಮೇಶ್ವರ ಇವರ ಕಾಲ ಕ್ರಿ. ಶ. 1903 ರಿಂದ 1113, ಸೋಮೇಶ್ವರರ ಶಿಷ್ಯ ಗೌತಮರ ಕಾಲ 1129 ರಿಂದ 1149, ಗೌತಮರ ಶಿಷ್ಯ ವಾಮಶಕ್ತಿ ಗುರುಗಳ ಕಾಲ 1156 - 1193. ವಾಮಶಕ್ತಿ ಗುರುಗಳ ತರುವಾಯ ಗುರುಪೀಠಕ್ಕೆ ಬಂದವರು ಜ್ಞಾನಶಕ್ತಿ. ಈ ಗುರುಪರಂಪರೆಯಲ್ಲದೆ ಕೇದಾರ ಶಕ್ತಿಗಳೆಂಬ ಗುರುಗಳಿಂದ ಪ್ರಾರಂಭವಾದ ಮತ್ತೊಂದು ಪರಂಪರೆ ಇದ್ದಿತು. ಕೇದಾರ ಶಕ್ತಿಯವರ ಶಿಷ್ಯ ರುದ್ರಾಭರಣರು. ರುದ್ರಾಭರಣರ ತರುವಾಯ ಗುರು-ಗಳಾದವರು ವಾಲ್ಮೀಕಿ (1078) ಕೋಡಿ ಮಠ ವಿದ್ಯಾ ಕೇಂದ್ರವಾಗಿದ್ದುದಲ್ಲದೆ ವೈದ್ಯಕೀಯ ಸೇವೆಯೂ ಅಲ್ಲಿ ಸಲ್ಲುತ್ತಿತ್ತು. ಪಾಂಡವರು ಸ್ಥಾಪಿಸಿದರೆಂದು ಹೇಳಲಾದ ಬಳಗಾವಿಯ ಪಂಚಲಿಂಗ ದೇವಾಲಯಕ್ಕೆ ಸೇರಿದಂತೆ ಕ್ರಿ. ಶ. 1036 ರಲ್ಲಿ ಕಾಳಾಮುಖ ಬ್ರಹ್ಮಚಾರಿಸ್ಥಾನವೆಂಬ ಮಠವಿತ್ತು. ಪಾಶುಪತ ಕಾಳಾಮುಖ ಶೈವ ಪಂಥವನ್ನು ಸ್ಥಾಪಿಸಿದ ಲಕುಲೀಶ್ವರರು ಅದರ ಗುರು. ಅವರ ಸಿದ್ಧಾಂತಗಳಿಗೆ ಲಕುಲಸಿದ್ಧಾಂತವೆಂಬ ಹೆಸರು. ಹಯವದನರಾಯರು ಈ ಪಂಥದ ಬಗ್ಗೆ ಈ ರೀತಿ ಹೇಳಿದ್ದಾರೆ.

"Lakulishvara, the founder of Pasupata sect belonged to the Lata country and has been assigned by Dr. Buhler to the 11th Century A. D. The Lakula of the Mysore inscriptions belongs to the period between 1154 and 1156 A. D, and is generally mentioned in connection with the Kalamukha sect, who are not unknown to other parts of Southern India as well."[28]

ಶಾಸನಗಳ ಆಧಾರದ ಮೇಲೆ ಕ್ರಿಯಾಶಕ್ತಿಗಳೆಂಬ ಹಲವರು ಗುರುಗಳ ಜೀವನ ಕಾಲ ಧಾರ್ಮಿಕ ಪ್ರಭಾವದಿಂದ ಅವರಿಗಿದ್ದ ರಾಜಾಶ್ರಯ ವಿವರಗಳನ್ನು ಕೊಡಲಾಗಿದೆ ಈ ವಿಶ್ಲೇಷಣೆಯಿಂದ 12 ನೇ ಶತಮಾನದಿಂದ 15 ನೇ ಶತಮಾನದವರೆಗೆ ನಮಗೆ ಮೂವರು ಕ್ರಿಯಾಶಕ್ತಿಗಳು ಶಾಸನಗಳಲ್ಲಿ ಕಂಡು ಬರುತ್ತಾರೆ. ಆ ತರುವಾಯ, ಅಂದರೆ ವಿಜಯನಗರದ II ನೇ ದೇವರಾಯನ (1423-1446) ತರುವಾಯ,

---

27 Hayavadana Rao, C. Mysore Gazetter, Vol I, p 282.

28 Ibid, p 282.

ವಿಜಯನಗರ ಸಾಮ್ರಾಜ್ಯದಲ್ಲಿ ವೀರಶೈವ ಮತ್ತು ವೈಷ್ಣವ ಮತಗಳ ಪ್ರಭಾವದಿಂದ ಕಾಳಾಮುಖ ಗುರುಗಳ ಪ್ರಭಾವ ವಿಜಯನಗರದ ಸಾಮ್ರಾಟರ ಮೇಲೆ ಇಲ್ಲದಂತಾಯಿತು.

I ನೇ ಕ್ರಿಯಾಶಕ್ತಿ (12 ನೇ ಶತಮಾನ: ಹೊಯ್ಸಳ ವಿಷ್ಣುವರ್ಧನನ ಕಾಲ) :

ಕ್ರಿ. ಶ. 1117 : ಚಾಲುಕ್ಯ ತ್ರಿಭುವನಮಲ್ಲನ ಮಂತ್ರಿ ಗೋವಿಂದನು ಬನವಾಸಿಯ ಮಂಡಲಾಧಿಕಾರಿಯಾಗಿದ್ದಾಗ ಕಾಳಾಮುಖ ಗುರು ಕ್ರಿಯಾಶಕ್ತಿಯವರ ಶಿಷ್ಯ ರುದ್ರಶಕ್ತಿಗೆ ದತ್ತಿಗಳನ್ನು ನೀಡಲಾಯಿತು (ಎಫಿ. ಕ. ಶಿಕಾರಿಪುರ 316, ಕ್ರಿ. ಶ. 1117).

II ನೇ ಕ್ರಿಯಾಶಕ್ತಿ (12 ನೇ ಶತಮಾನ : ಹೊಯ್ಸಳ II ನೇ ಬಲ್ಲಾಳನ ಕಾಲ).

ಕ್ರಿ. ಶ. 1188 : ಅರಸೀಕೆರೆಯ ವೀರಬಲ್ಲಾಳೇಶ್ವರ ದೇವಸ್ಥಾನವನ್ನು ಸ್ಥಾಪಿಸುವಾಗ IIನೇ ಬಲ್ಲಾಳನು ಶೈವಗುರು ಕ್ರಿಯಾಶಕ್ತಿ ಪಂಡಿತನಿಗೆ ದತ್ತಿಗಳನ್ನು ನೀಡಿದ (MAR 1928 p32 and 114).

III ನೇ ಕ್ರಿಯಾಶಕ್ತಿ (14 ನೇ ಶತಮಾನ : ವಿಜಯನಗರದ ಸಂಗಮ ಸಂತತಿಯ ಸಾಮ್ರಾಟರ ಕಾಲ) : (ಅ) ಅಂಗೀರಸ ಗೋತ್ರದ ಮಾಧವ ಮಂತ್ರಿಯ ಗುರುಗಳು ಕಾಶೀವಿಲಾಸ ಕ್ರಿಯಾಶಕ್ತಿ ಎಫಿ. ಕ. ಸೊರಬ 375, ಕ್ರಿ. ಶ. 1347) ; (ಆ) ಮಾಧವ ಮಂತ್ರಿ ತನ್ನ ಗುರು ಕಾಶೀವಿಲಾಸ ಕ್ರಿಯಾಶಕ್ತಿ ಅವರ ಸಮ್ಮುಖದಲ್ಲಿ ಒಂದು ವರ್ಷಕಾಲ ಪಾಶುಪತ ವ್ರತಮಾಡಿ ವಿದ್ಯೇಶ್ವರಪುರವನ್ನು ಬ್ರಾಹ್ಮಣರಿಗೆ ದಾನಮಾಡಿದ (ಎಫಿ. ಕ. VIII, ಶಿಕಾರಿಪುರ 281, ಕ್ರಿ. ಶ. 1368) ; (ಇ) ಕ್ರಿಯಾಶಕ್ತ್ಯಾಚಾರ್ಯ ಗುರು (ಎಫಿ. ಕ. ಚನ್ನರಾಯಪಟ್ಟಣ 258, ಕ್ರಿ. ಶ. 1378) ; (ಈ) ರಾಜಗುರು ಪಿತಾಮಹ ವಾಣೀವಿಲಾಸ ಕ್ರಿಯಾಶಕ್ತಿ (ಗದುಗಿನ ಶಾಸನ : (ARSI, 1924-25) ; (ಉ) II ನೇ ಹರಿಹರನು (1376-1404) ಕ್ರಿಯಾಶಕ್ತಿ ಗುರುಗಳ ಮತ್ತು ವಿದ್ಯಾರಣ್ಯರ ಧರ್ಮ ಸಿದ್ಧಾಂತಗಳನ್ನು ಆಸಕ್ತಿಯಿಂದ ಕೇಳಿದನೆಂಬ ವಿಷಯವು 1384 ರ ಹೊಸಪಳ್ಳಿ ಶಾಸನದಲ್ಲಿದೆ. ಅದರಲ್ಲಿರುವ ಮಾತು "ಮುಖಾನು ಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀಚರಣಾನಾಂ......" (JBHS, 1928 vol I, No 2, p. p. 121-123). ಶೃಂಗೇರಿ ಜಗದ್ಗುರು ವಿದ್ಯಾರಣ್ಯರು II ನೇ ಹರಿಹರನ ಆಡಳಿತ ಕಾಲದಲ್ಲಿ ಜೀವಂತರಾಗಿದ್ದು 1386 ರಲ್ಲಿ ಕಾಲವಾದರೆಂಬುದನ್ನು ನಾವು ಇಲ್ಲಿ ಗಮನಿಸಬೇಕು. ಕ್ರಿಯಾಶಕ್ತಿ ಗುರುಗಳ ಮರಣ ಮುಳಬಾಗಿಲು ಶಾಸನದ ಪ್ರಕಾರ 1388 ರಲ್ಲಿ ಕ್ರಿಯಾಶಕ್ತಿ ಗುರುಗಳು ಕಾಲವಾದರು. ಅವರ ಪುಣ್ಯ ಸ್ಮರಣೆಗಾಗಿ ಬುಕ್ಕನು ಕಮ್ಮಾಯಿಪಲ್ಲಿ ಗ್ರಾಮದಲ್ಲಿ ವಿದ್ಯಾಶಂಕರ ದೇವಾಲಯವನ್ನು ಕಟ್ಟಿಸಿದ, (ಎಫಿ. ಕ. ಮುಳಬಾಗಿಲು 11, ಕ್ರಿ. ಶ. 1389),

IV ನೇ ಕ್ರಿಯಾಶಕ್ತಿ: (14 ನೇ ಶತಮಾನದ ತುದಿ ಮತ್ತು 15 ನೇ ಶತಮಾನ : ವಿಜಯನಗರದ ಸಂಗಮ ಸಂತತಿಯ ಅರಸರ ಕಾಲ) : (ಅ) ರಾಜರಾಜಗುರು ಪಿತಾಮಹ ಕ್ರಿಯಾಶಕ್ತಿ ದೇವ ಎಂಬ ಗುರು ಸ್ವಯಂಭುವ ತ್ರಿಯಂಬಕ ದೇವನ ಆರಾಧಕರು (MAR, 1912 p. 47) ; (ಆ) ಕ್ರಿಯಾಶಕ್ತಿ ಗುರುಮುನೀಶ್ವರ (ಎಫಿ. ಕ. VI, ಕೊಪ್ಪ 52 ಕ್ರಿ. ಶ. 1403, ; VIII ತೀರ್ಥಹಳ್ಳಿ 133) ; (ಇ) I ನೇ ದೇವರಾಯನಿಗೆ (1406-1422) ಕ್ರಿಯಾಶಕ್ತಿ ಗುರುಗಳ ಅನುಗ್ರಹದಿಂದ ಜ್ಞಾನೋದಯ ಮಾತ್ರವಲ್ಲದೆ ಸಾರ್ವಭೌಮತ್ವವೂ ಪ್ರಾಪ್ತವಾಯಿತು. ಕ್ರಿಯಾಶಕ್ತಿ ಗುರುಗಳು ಯಜುರ್ವೇದಿಗಳು, ಅವರದು ಕಶ್ಯಪಗೋತ್ರ ಎಫಿ. ಕ. ದಾವಣಗೆರೆ 23, ಕ್ರಿ. ಶ. (1410) ; ವಿಜಯಭೂಪತಿ (III ನೇ ಬುಕ್ಕನು

ಯುವರಾಜನಾಗಿದ್ದಾಗ ಶೈವಗುರು ಕಾಶೀನಾಥ ಕ್ರಿಯಾಶಕ್ತಿಗಳ ಗೌರವಾರ್ಥವಾಗಿ ಕ್ರಿಯಾಶಕ್ತಿ ಪುರವನ್ನು ಸ್ಥಾಪಿಸಿದ (ಎಪಿ. ಇಂಡಿಕಾ XIV, ದಂಡೇಪಲ್ಲಿ ತಾಮ್ರಶಾಸನ, ಕ್ರಿ. ಶ. 1410, ಪುಟ 68); (ಈ) II ನೇ ದೇವರಾಯನು (1423–1446) ಗುಂಡ್ಲುಪೇಟೆ ತಾಲ್ಲೂಕು ಚೇಕಿಯೂರ್ ಹಳ್ಳಿಗೆ ಕ್ರಿಯಾಶಕ್ತಿಪುರವೆಂದು ಹೆಸರಿಟ್ಟು ಅದನ್ನು ಬ್ರಾಹ್ಮಣರಿಗೆ ದಾನಮಾಡಿದ. ದಾನ ಪತ್ರದಲ್ಲಿ ದೊರೆಯ ಗುರು ಕಶ್ಯಪಗೋತ್ರದ, ಯಜುಶ್ಯಾಖೆಯ ಭೂಪಾಲರಾದ ಕ್ರಿಯಾಶಕ್ತಿ (MAR, 1941, p. 3. ಶಾಸನದ ಕಾಲ 1429); (ಊ) ಚಂದ್ರಭೂಷಣ ಕ್ರಿಯಾಶಕ್ತಿ (ARSI, 1931. ಶಾಸನದ ಕಾಲ 1431).

ಹೀಗೆ ಕಾಳಾಮುಖ ಅಥವಾ ಪಾಶುಪತ ಪಂಥದ ಶೈವಗುರುಗಳಲ್ಲಿ ಕೇದಾರ ಶಕ್ತಿ, ವಾಮಶಕ್ತಿ. ಜ್ಞಾನಶಕ್ತಿ. ಕ್ರಿಯಾಶಕ್ತಿ ಹೆಸರಿನ ಮುಂದೆ ಕಾಣುವ "ಕಾಶೀ ವಿಲಾಸ" 'ಭುವನ ಗುರು' "ರಾಜಗುರು ಪಿತಾಮಹ ವಾಣೀ ವಿಲಾಸ" "ಶ್ರೀಮದ್ ರಾಜ ಗುರು ಮಹಾ ಮಂಡಲಾಚಾರ್ಯ ವಾಣೀವಿಲಾಸ" "ಚಂದ್ರ ಭೂಷಣ" ಶಬ್ದ ಗಳೆಲ್ಲಾ ಕ್ರಿಯಾಶಕ್ತಿ ಗುರುಗಳ ಹೆಸರಿಗೆ ಜೋಡಿಸಿರುವ ವಿಶೇಷ ಬಿರುದುಗಳೆಂದು ತೋರುವುವು. ಈ ದೃಷ್ಟಿಯಿಂದ "ವಿದ್ಯಾರಣ್ಯ" ಎಂಬುದು ಭಾರದ್ವಾಜ ಗೋತ್ರದ ಮಾಯಣ ಮಾಧವರ ಪಾಂಡಿತ್ಯಕ್ಕಾಗಿ ವಹಿಸಿದ ಬಿರುದಾಗಿರಬಹುದೆಂದು ಹೇಳ ಬಹುದು. ಬಿ. ಎಸ್. ರೈಸ್ ಅವರು ವಿದ್ಯಾರಣ್ಯರ ಸಂಬಂಧದಲ್ಲಿ, 'the celebrated scholar Madhava, surnamed Vidyaranya or forest of learning' ಎಂದಿದ್ದಾರೆ.[29] ಆಧುನಿಕ ಪಂಡಿತರಿಗೆ 'ವಿದ್ಯಾವಾಚಸ್ಪತಿ' 'ವಿದ್ಯಾಸಾಗರ' 'ವಿದ್ಯಾ ಭೂಷಣ ಇತ್ಯಾದಿ ಬಿರುದುಗಳಿರುವಂತೆ, 14ನೇ ಶತಮಾನದಲ್ಲಿ ಸಹ ವಿದ್ಯೆಯನ್ನು ಅರಣ್ಯದಂತೆ ವ್ಯಾಪಕವಾಗಿ ಹೊಂದಿದ್ದ ಪಂಡಿತೋತ್ತಮರಿಗೆ 'ವಿದ್ಯಾರಣ್ಯ' ಎಂಬ ಬಿರುದು ಇತ್ತು ಎಂದು ಹೇಳಿರುವಾಗ, ಕ್ರಿಯಾಶಕ್ತಿ ಗುರುಗಳ ಅಪಾರ ಪಾಂಡಿತ್ಯಕ್ಕಾಗಿ ಅವರಿಗೆ 'ವಿದ್ಯಾರಣ್ಯ ಕ್ರಿಯಾಶಕ್ತಿ' ಎಂಬ ಹೆಸರನ್ನು ಪಡೆದಿದ್ದರು ಎಂಬುದಕ್ಕೆ ನಮಗೆ ಸಾಕ್ಷ್ಯಗಳಿಲ್ಲ.

ಕೆಲವು ವಿದ್ವಾಂಸರು ವಿದ್ಯಾರಣ್ಯರೇ ಕ್ರಿಯಾಶಕ್ತಿ ಗುರುಗಳೆಂದು ಹೇಳಲು ಹೋಗಿದ್ದಾರೆ. ಕ್ರಿ. ಶ. 1384 ರ ಹೊಸಪಳ್ಳಿ ಶಾಸನವು II ನೇ ಹರಿಹರನು ಹಾಗೂ ವಿದ್ಯಾರಣ್ಯರ ಧರ್ಮಸಿದ್ಧಾಂತಗಳನ್ನು ಆಸಕ್ತಿಯಿಂದ ಕೇಳಿದನೆಂದು ತಿಳಿಸುತ್ತದೆ. ಆ ಶಾಸನದಲ್ಲಿ ಕಂಡುಬರುವ "ಮಹಾನುಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀಚರಣಾನಾಂ ಉಪದೇಶೇನ ಜನಿತ" ಎಂಬ ಮಾತುಗಳಿಗೆ ಸಂಬಂಧಿಸಿ ದಂತೆ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು ಕ್ರಿಯಾಶಕ್ತಿ ಮತ್ತು ವಿದ್ಯಾರಣ್ಯ ಎಂದು ಅರ್ಥಮಾಡಿ ಅವರಿಬ್ಬರೂ ಪ್ರತ್ಯೇಕ ವ್ಯಕ್ತಿಗಳೆಂದು ತಿಳಿಸುತ್ತಾರೆ. ಡಾ॥ ಜಿ. ಎಸ್. ಗಾಯ್ ಅವರು ಸಹ ಆ ಶಾಸನವನ್ನು ಕುಲಂಕಷವಾಗಿ ಓದಿ 'ಮಹಾನುಭಾವಾನಾಂ ಕ್ರಿಯಾಶಕ್ತಿ, ವಿದ್ಯಾರಣ್ಯ ಶ್ರೀ ಚರಣಾನಾಂ ಉಪದೇಶ ಜನಿತ ತತ್ವ ಪ್ರಕಾಶಕೇನ" ಎಂದು ಶಾಸನದ ಶುದ್ಧ ಪಾಠವನ್ನು ಕೊಟ್ಟು ಕ್ರಿಯಾಶಕ್ತಿ

---

29 Rice, B.L ; op Cit, p 344.

ಮತ್ತು ವಿದ್ಯಾರಣ್ಯರೂ ಬೇರೆ ಬೇರೆ ವ್ಯಕ್ತಿಗಳೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ.[30] ಈಗಾಗಲೇ ತಿಳಿಸಿರುವಂತೆ ಕ್ರಿಯಾಶಕ್ತಿ ಗುರುಗಳು ಕಾಲವಾದಾಗ II ನೇ ಬುಕ್ಕನು ಅವರ ಸ್ಮರಣಾರ್ಥವಾಗಿ ಮುಳಬಾಗಿಲು ತಾಲ್ಲೂಕು ಕಮ್ಮಾಯಿ ಪಲ್ಲಿಯಲ್ಲಿ ವಿದ್ಯಾಶಂಕರ ಎಂಬ ಅಂಕಿತನಾಮವಿರುವುದರಿಂದ ಹಾಗೂ ವಿದ್ಯಾಶಂಕರರು ವಿದ್ಯಾರಣ್ಯರ ಗುರುಗಳಾಗಿದ್ದುದರಿಂದ, ಕ್ರಿಯಾಶಕ್ತಿ ಮತ್ತು ವಿದ್ಯಾರಣ್ಯ ಇಬ್ಬರೂ ಒಬ್ಬವ್ಯಕ್ತಿಯೇ ಇರಬಹುದೆಂದು ಆರ್. ನರಸಿಂಹಾಚಾರ್ಯರು ಶಂಕೆ ಪಟ್ಟರು. ಆದರೆ ಡಾ॥ ಎಂ. ವೆಂಕಟಸುಬ್ಬಯ್ಯನವರು ರಾಜಗುರು ಕ್ರಿಯಾಶಕ್ತಿಯೇ ವಿದ್ಯಾರಣ್ಯರೆಂದು ತೀರ್ಮಾನಿಸಿದ್ದರು.[31] ಇದೇ ಮುಳಬಾಗಿಲು ಶಾಸನದ ಆಧಾರದ ಮೇಲೆ ಎಂ. ಎಚ್. ಕೃಷ್ಣ ಅವರು, ಕ್ರಿಯಾಶಕ್ತಿ ಗುರುಗಳ ಸ್ಮರಣಾರ್ಥವಾಗಿ ವಿದ್ಯಾಶಂಕರ ಗುಡಿಯನ್ನು ಕಟ್ಟಿಸಿರುವ ಕಾರಣ, ಕ್ರಿಯಾಶಕ್ತಿಯೇ ಶೃಂಗೇರಿಯ ಜಗದ್ಗುರು ವಿದ್ಯಾಶಂಕರರೆಂದು ಭಾವಿಸಿ, "ಶ್ರೀವಿದ್ಯಾತೀರ್ಥರು ವಿದ್ಯಾಶಂಕರರಲ್ಲ, ವಿದ್ಯಾಶಂಕರರು ಕ್ರಿ. ಶ. 1388 ರಲ್ಲಿ ನಿಧನರಾದರು" ಎಂದಿದ್ದಾರೆ.[32]

ವಿದ್ಯಾರಣ್ಯರ ಮತ್ತು ಅವರ ಹಿಂದಿನ ಇಬ್ಬರು ಶೃಂಗೇರಿ ಗುರುಗಳ ವಿವರಗಳು ಹೀಗಿವೆ--

ಜಗದ್ಗುರುಗಳ ಹೆಸರು ಮತ್ತು ಗುರುಸ್ಥಾನದ ಕ್ರಮಾಂಕ	ಸ್ವಾಮಿಗಳ ಉಪನಾಮಗಳು	ಅವರ ಕಾಲ (ಕ್ರಿ. ಶ.)
10 ವಿದ್ಯಾಶಂಕರ ಆಚಾರ್ಯ	ವಿದ್ಯಾತೀರ್ಥ, ವಿದ್ಯಾತೀರ್ಥೇಶ. (ಮಹೇಶ್ವರನ ಅವತಾರ)	೧೨೨೮ – ೧೩೩೩
11 ಭಾರತೀ ಕೃಷ್ಣತೀರ್ಥ (ಇವರು ವಿದ್ಯಾರಣ್ಯರ ತಮ್ಮ ಎಂದು ಹೇಳಲಾಗಿದೆ.)	ಭಾರತೀ ತೀರ್ಥ (ಶಂಕರ ಹಾಗೂ ಶೃಂಗೇರಿ ಮಠದ ಕಡತಗಳ ರೀತ್ಯಾ)	೧೩೨೮ – ೧೩೮೦
12 ವಿದ್ಯಾರಣ್ಯ (ಸಾಯಣ ಮಾಧವ)	ಭಾರತೀ ತೀರ್ಥ ಶ್ರೀಪಾದ, ವಿದ್ಯಾತೀರ್ಥ (ಶೃಂಗೇರಿ ಶಾ ೧, ಕ್ರಿ. ಶ. ೧೩೪೬, ಮೈಸೂರು ಗೆಜಿಟೀರ್ V, ಪುಟ ೧೧೭೯)	೧೩೩೧ – ೧೩೮೬

ಶೃಂಗೇರಿಯ ಗುರುಗಳಾದ ವಿದ್ಯಾಶಂಕರ, ಭಾರತೀ ಕೃಷ್ಣತೀರ್ಥ ಮತ್ತು ವಿದ್ಯಾರಣ್ಯ — ಈ ಮೂವರೂ ವಿಜಯನಗರದ I ನೇ ಹರಿಹರನ ಕಾಲದಲ್ಲಿ

30 ಆರ್. ಚಕ್ರವರ್ತಿ, ಅದೇಗ್ರಂಥ, ಅನುಬಂಧ 3, ಪುಟ iv.

31 Q J M S, Bangalore, Vol. VIII, No. 2 (1917).

32 MAR, 1932.

ಜೀವಿತರಾಗಿದ್ದರು. ವಿದ್ಯಾರಣ್ಯ ಮತ್ತು ಅವರ ತಮ್ಮ ಸಾಯಣಾಚಾರ್ಯರು ವಿದ್ಯಾಶಂಕರ ಸ್ವಾಮಿಗಳ ಶಿಷ್ಯರು. ಅವರು ತಮ್ಮ ಕೃತಿಗಳಲ್ಲಿ ವಿದ್ಯಾಶಂಕರರು ಮಹೇಶ್ವರನ ಅವತಾರವೆಂದು ಹೇಳಿಕೊಂಡಿದ್ದಾರೆ.[33]

ಎಂ. ಎಚ್. ಕೃಷ್ಣ ಅವರು 1932 ರ ಮೈಸೂರು ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ (MAR) ವರದಿಯಲ್ಲಿ "ವಿದ್ಯಾರಣ್ಯ ಕಾಲಜ್ಞಾನ" ವನ್ನು ಪರಿಶೀಲಿಸುವಾಗ ಅವರಲ್ಲಿರುವ "ವಿಜಯನಗರದ ಅರಸರಲ್ಲಿ ಮೊದಲು ವಿದ್ಯಾರಣ್ಯರ ಅನುಗ್ರಹದಿಂದ ರಾಜ್ಯವಾಳಿದರು. ಮೊದಲ ಹದಿಮೂರು ಮಂದಿ ಅರಸರು ಹಂಪೆಯ ವಿರೂಪಾಕ್ಷ ದೇವರ ಭಕ್ತರು. ಈ ಹದಿಮೂರು ಮಂದಿ ಅರಸರು ವಿದ್ಯಾರಣ್ಯರಿಗೂ ಮತ್ತು ಅವರ ಶಿಷ್ಯ ಕ್ರಿಯಾಶಕ್ತಿಗೂ ಅಪಾರ ಗೌರವ ತೋರುತ್ತಿದ್ದರು" ಎಂಬ ಹೇಳಿಕೆಯನ್ನು ಗಮನಿಸಿ ಕ್ರಿಯಾಶಕ್ತಿಯ ಬಗ್ಗೆ ತಾವು ಕೊಟ್ಟಿರುವ ಅಡಿ ಟಿಪ್ಪಣಿಯಲ್ಲಿ ಈ ರೀತಿ ಹೇಳಿದ್ದಾರೆ: "ಕ್ರಿಯಾಶಕ್ತಿ ಗುರುಗಳು ಕಾಳಾಮುಖ ಪಂಥದ ಶೈವಗುರು. ಅವರು ತನ್ನ ಗುರುವೆಂದು ಚಂದ್ರಗುತ್ತಿಯ ಮಾಧವ ಮಂತ್ರಿ ಹೇಳುತ್ತಾನೆ. (MAR 1929. p 172, ಶಾಸನದ ಕಾಲ 1347), ಎಪಿಗ್ರಾಫಿಯಾ ಇಂಡಿಕಾ XIV ಶಾಸನ ಸಂಪುಟದ 1410 ರ ನಂದೇಪಲ್ಲಿ ತಾಮ್ರ ಶಾಸನದ ಕಾಲದವರೆಗೂ ಕ್ರಿಯಾಶಕ್ತಿ ಗುರು ಹರಿಹರ, ಮುದ್ದದಂಡೇಶ, ವಿಠ್ಠಣ್ಣೊಡೆಯ, ವಿಜಯಭೂಪತಿ ಮೊದಲಾದವರಿಗೆ ಗುರುವಾಗಿದ್ದರೆಂದು ಶಾಸನಗಳು ತಿಳಿಸುತ್ತವೆ. ಬಹುಶಃ ಈ ಕಾಲದಲ್ಲಿ ಒಂದೇ ಹೆಸರಿನ ಇಬ್ಬರು ಗುರುಗಳಿದ್ದಂತೆ ತೋರುತ್ತದೆ." ಎಂ. ಎಚ್. ಕೃಷ್ಣ ಅವರು ಊಹಿಸಿರುವಂತೆ ವಿಜಯನಗರದ ಸಂಗಮ ಅರಸರ ಕಾಲದಲ್ಲಿ ಇಬ್ಬರು ಕ್ರಿಯಾಶಕ್ತಿ ಗುರುಗಳಿದ್ದರೆಂಬುದನ್ನು ಈ ಲೇಖನದಲ್ಲಿ ಈಗಾಗಲೇ ವ್ಯಕ್ತಪಡಿಸಲಾಗಿದೆ.

ಶ್ರೀಯುತ ಮಲ್ಲಪ್ಪನವರು ಮಂಚಬಾಗಲು ಶಾಸನವನ್ನೇ ಆಧಾರವಾಗಿಟ್ಟು ಕೊಂಡು ಕ್ರಿಯಾಶಕ್ತಿ ಗುರುಗಳಿಗೆ ವಿದ್ಯಾಶಂಕರ ಎಂಬ ಹೆಸರಿದ್ದಿತೆಂದೂ, ಶೃಂಗೇರಿಯ ವಿದ್ಯಾಶಂಕರ ದೇವಾಲಯವು ಕ್ರಿಯಾಶಕ್ತಿ ಗುರುಗಳ ಸ್ಮಾರಕವೆಂದೂ, ಕ್ರಿಯಾಶಕ್ತಿ ಶೃಂಗೇರಿಯ ಭಾರತೀ ತೀರ್ಥರ ತರುವಾಯ ಯೋಗ ಸಮಾಧಿಯಲ್ಲಿದ್ದರೆಂದೂ ಸಾಧಿಸಲು ಹೊರಟಿರು. ಇಲ್ಲಿ ಶ್ರೀ ಮಲ್ಲಪ್ಪನವರು ಶೃಂಗೇರಿ ಗುರುಗಳ ಕಾಲವನ್ನೇ ಅದಲು ಬದಲು ಮಾಡಿ ಕ್ರಿಯಾಶಕ್ತಿಯವರನ್ನು ಶೃಂಗೇರಿಯ ಗುರು ಪರಂಪರೆಯಲ್ಲಿ ಭಾರತೀತೀರ್ಥರ ತರುವಾಯ, ವಿದ್ಯಾರಣ್ಯರಿಗೆ ಬದಲಾಗಿ ಸೇರಿಸಲು ಪ್ರಯತ್ನಿಸಿದ್ದಾರೆ. ಇದು, ಒಂದು ರೀತಿಯಲ್ಲಿ ಧಾರ್ಮಿಕ 'ಫೋರ್ಜರಿ' ಅಥವಾ ಕೃತಕೀಕರಣ ಎನಿಸಿ ಕೊಳ್ಳಬಹುದು.

ಮಾಧವ ಎಂಬ ಹೆಸರನ್ನು ಹೊಂದಿದ್ದ ಶೃಂಗೇರಿಯ ಗುರು ವಿದ್ಯಾರಣ್ಯ, ಬನವಾಸಿಯ ಮಂಡಲೇಶ್ವರ ಮಾಧವ ಮಂತ್ರಿ ಮತ್ತು ವಿಜಯನಗರದ ರಾಜಧಾನಿ

33 MAR, 1907-8, para 54-55.

ಯಲ್ಲಿ ರಾಜಗುರುವಾಗಿದ್ದ ಕ್ರಿಯಾಶಕ್ತಿ ಗುರು ಇವರೆಲ್ಲರೂ ಪ್ರತ್ಯೇಕ ವ್ಯಕ್ತಿಗಳೆಂಬುದಕೆ ನಮಗೆ ಶಾಸನಗಳ ಆಧಾರವಿದೆ :

ವಿದ್ಯಾರಣ್ಯ (ಮಾಧವ)	ಮಾಧವ ಮಂತ್ರಿ	ಕ್ರಿಯಾಶಕ್ತಿ
೧. ತಂದೆ : ಮಾಯಣ ೨. ತಾಯಿ : ಶ್ರೀಮತಿ ಅಥವಾ ಶ್ರೀಮಾಯಿ ೩. ಮತ : ಅದ್ವೈತ ೪. ಗೋತ್ರ : ಭಾರದ್ವಾಜ ೫. ಗುರು : ವಿದ್ಯಾಶಂಕರ ಅಥವಾ ವಿದ್ಯಾತೀರ್ಥ ೬. ಮರಣ : ಕ್ರಿ.ಶ. ೧೩೮೬ (C.H. Rao, Mysore Gazetteer Vol III, pt 3 P. 1438)	೧. ತಂದೆ : ಚಾವುಂಡ ಭಟ್ಟ ೨. ತಾಯಿ : ಮಾಚಾಂಬಿಕೆ ೩. ಮತ : ಶೈವ ಬ್ರಾಹ್ಮಣ ೪. ಗೋತ್ರ : ಅಂಗೀರಸ ೫. ಗುರು : ಕಾಶೀವಿಲಾಸ ಕ್ರಿಯಾಶಕ್ತಿ ಎಂಬ ಕಾಳಾ ಮುಖ ಗುರು ೬ ಮರಣ .... (J.B.RAS IX, 1228, M.G, Vol II, Pl 3, 1442)	೧. ತಂದೆ .... ೨. ತಾಯಿ.......... .... ೩. ಮತ : ಕಾಳಮುಖ ಶುದ್ಧ ಶೈವ ೪. ಗೋತ್ರ: ಕಶ್ಯಪ, ಯಜುಶ್ಶಾಖೆ (MAR ೧೯೪೨ P. ೩) ೫. ಗುರು .... ೬. ಮರಣ ಕ್ರಿ.ಶ. 1388 (E.C. V Mb. 11, AD 1389)

ಪಣಜೆಯ ಶಾಸನದಲ್ಲಿ (ಕ್ರಿ. ಶ. 1391) ಮಾಧವಮಂತ್ರಿ ತನ್ನ ತಾಯಿಯ ಹೆಸರಿನಲ್ಲಿ ಮಂಚಲಾಪುರ ಅಗ್ರಹಾರವನ್ನು ಮತ್ತು ಮಂಚಲ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ದಾನವತ್ತಿಗಳನ್ನು ನೀಡಿದ. ಈ ಶಾಸನದಲ್ಲಿ ಅವನ ತಂದೆ ತಾಯಿಗಳ ಹೆಸರು ಚೌಂಡಿಭಟ್ಟ ಮತ್ತು ಮಾಚಾಂಬಿಕೆ ಎಂದು ಸರಿಯಾಗಿಯೇ ಇದೆ. ಆದರೆ, ಶಾಸನ ಬರೆದವನ ಅಜ್ಞಾನದಿಂದ ಈ ಶಾಸನದಲ್ಲಿ ಮಾಧವಮಂತ್ರಿಯು ತನ್ನ ಗುರುವಾದ ಕ್ರಿಯಾಶಕ್ತಿಯನ್ನು ಪ್ರಾರ್ಥಿಸದೆ, "ಓಂ ಶ್ರೀ ವಿದ್ಯಾರಣ್ಯ ಗುರುಭ್ಯೋನಮಃ" ಎಂದು ಪ್ರಾರ್ಥಿಸುವಂತೆಯೂ, ಮಾಧವಮಂತ್ರಿಯ ಗೋತ್ರ (ವಿದ್ಯಾರಣ್ಯರ ಗೋತ್ರವಾದ) ಭಾರದ್ವಾಜ ಗೋತ್ರವೆಂದೂ ಲಿಖಿತವಾಗಿದೆ. ಈ ತಪ್ಪನ್ನು ಡಾ॥ ಜಿ. ಎಸ್. ಗಾಯ್ ಅವರು ತೋರಿಸಿದ್ದಾರೆ.[34]

ಈ ಎಲ್ಲ ಮಾಹಿತಿಗಳನ್ನು ಪರಿಗಣಿಸಿದಾಗ, ಶೃಂಗೇರಿ ಮಠದ ದಾಖಲೆಗಳ ಪ್ರಕಾರ 1333–1386 ರ ನಡುವೆ ಜಗದ್ಗುರುಗಳಾಗಿದ್ದ ವಿದ್ಯಾರಣ್ಯರೂ ಮತ್ತು ಶಾಸನಗಳಲ್ಲಿ 1347 ರಿಂದ 1389ರ ವರೆಗೆ ಕಂಡು ಬರುವ ಕ್ರಿಯಾಶಕ್ತಿ (ಕಾಶೀವಿಲಾಸ ಕ್ರಿಯಾಶಕ್ತಿ) ಗುರುಗಳೂ ಪ್ರತ್ಯೇಕ ಸಂಪ್ರದಾಯದವರು ಹಾಗೂ ಪ್ರತ್ಯೇಕ ವ್ಯಕ್ತಿಗಳು ಎಂದು ಸ್ಪಷ್ಟವಾಗುತ್ತದೆ. ವಿದ್ಯಾರಣ್ಯರು ಶೃಂಗೇರಿಯ

34 ಆರ್ ಚಕ್ರವರ್ತಿ, ಅದೇಗ್ರಂಥ, ಅನುಬಂಧ 3, ಪು V.

ಆಧ್ಯಾತ್ಮಿಕ ವಿಚಾರಗಳಿಗೆ ಗಮನಕೊಟ್ಟ ಅದ್ವೈತ ಗುರು. ಕಾಶೀವಿಲಾಸ ಕ್ರಿಯಾಶಕ್ತಿ ರಾಜಗುರುಗಳಾಗಿ, ರಾಜಧಾನಿ ವಿಜಯನಗರದಲ್ಲಿದ್ದುಕೊಂಡು ವಿಜಯನಗರದ ಅರಸರ ಲೌಕಿಕ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಮಾರ್ಗದರ್ಶನ ಮಾಡುತ್ತಿದ್ದ ಶೈವಗುರು.

೪ ಶೃಂಗೇರಿ

ಹಿಂದೆ ವಿಭಾಂಡಕ ಮುನಿ ಹಾಗೂ ಅವರ ಪುತ್ರ ಋಷ್ಯಶೃಂಗರ ತಪೋವನವಾಗಿದ್ದ ಶೃಂಗಗಿರಿಯು (ಶೃಂಗೇರಿಯು) ಪ್ರದೇಶದಲ್ಲಿ ಹರಿಯುವ ತುಂಗಾತೀರದಲ್ಲಿ ಭಗವತ್ಪಾದ ಶ್ರೀ ಶಂಕರಾಚಾರ್ಯರು 8 ನೇ ಶತಮಾನದಲ್ಲಿ ಶಾರದೆಯನ್ನು ಪ್ರತಿಷ್ಠಾಪಿಸಿ, ಅದ್ವೈತ ಪೀಠವನ್ನು ಸ್ಥಾಪಿಸಿದರು. ಶೃಂಗೇರಿಯ ಪೀಠದ ಹೆಸರು ಶಾರದಾಪೀಠ; ದೈವ ವರಾಹಸ್ವಾಮಿ; ದೇವತೆ ಶಾರದೆ; ಸಂಪ್ರದಾಯ ಯಜುರ್; ಮಹಾವಾಕ್ಯ ಅಹಂ ಬ್ರಹ್ಮಾಸ್ಮಿ; ಪವಿತ್ರಕ್ಷೇತ್ರ ರಾಮಕ್ಷೇತ್ರ; ಪವಿತ್ರತೀರ್ಥ ತುಂಗಭದ್ರಾ; ಸ್ವಾಮಿಗಳ ಸನ್ಯಾಸ ಚೈತನ್ಯಬ್ರಹ್ಮಚರ್ಯ; ಸ್ವಾಮಿಗಳ ಉಪನಾಮಗಳು ಸರಸ್ವತಿ, ಪೂರಿ, ಭಾರತಿ, ಅರಣ್ಯ, ತೀರ್ಥ, ಗಿರಿ ಮತ್ತು ಆಶ್ರಮ.[35]

ಶಂಕರಾಚಾರ್ಯರ ಬಗ್ಗೆ ಜಾನ್ ಡಾಸನ್ ಈ ರೀತಿ ಹೇಳಿದ್ದಾರೆ—

'He established several maths or monastries for the teaching and preservation of his doctrines. Some of these still remain. The chief one is at Sringagiri or Sringeri on the Western Ghauts, and it has supreme control of the smartha sect.[36]

ಶೃಂಗೇರಿ ಜಗದ್ಗುರುಗಳ ಪರಂಪರೆ ನೇರವಾಗಿ ಶ್ರೀ ಶಂಕರಾಚಾರ್ಯರಿಂದಲೇ ಪ್ರಾರಂಭವಾಗುತ್ತದೆ. ಅವರು ತಮ್ಮ ಪ್ರವಾಸ ಕಾಲದಲ್ಲಿ ಬದರಿ ಕ್ಷೇತ್ರದಲ್ಲಿ ಕಾಲವಾದರೆಂದು ಹೇಳುತ್ತಾರೆ. ಆದರೆ ಶೃಂಗೇರಿಯಲ್ಲಿ ಅವರು ಇಹದಿಂದ ಕಣ್ಮರೆಯಾದರೆಂದು ಹೇಳಲಾದ ಸ್ಥಳದಲ್ಲಿ ಅವರ ಪ್ರತಿಷ್ಠಾಪಿತವಾಗಿರುವ ಪೂಜಾಮಂದಿರವಿದೆ. ಶೃಂಗೇರಿಯ ಶಾರದಾ ಪೀಠಕ್ಕೆ ಸಂಬಂಧಿಸಿದಂತೆ 14 ನೇ ಶತಮಾನದ ಮಧ್ಯ ಭಾಗದವರೆಗೆ ಕಟ್ಟಡದ ರೂಪದಲ್ಲಿ ಮಠವಿರಲಿಲ್ಲವೆಂದು ತೋರುತ್ತದೆ. ಮಠ ಎಂದರೆ ನಮ್ಮ ಕಲ್ಪನೆಗೆ ಬರುವುದು ಸಂನ್ಯಾಸ ಜೀವನಕ್ಕೆ ಹಾಗೂ ಬ್ರಹ್ಮಚಾರಿಗಳ ವ್ಯಾಸಂಗಕ್ಕೆ ಯುಕ್ತವಾದ ವಿವಿಕ್ತ ಸ್ಥಳ. ವಿದ್ಯಾರಣ್ಯರು ವಿಜಯನಗರವನ್ನು ಸ್ಥಾಪಿಸಲು ಹಕ್ಕಬುಕ್ಕರಿಗೆ ನೆರವು ನೀಡುವವರೆಗೆ ಶೃಂಗೇರಿಯ ಅದ್ವೈತ ಪೀಠದ ವ್ಯವಹಾರಗಳೆಲ್ಲಾ ಸಂನ್ಯಾಸಾಶ್ರಮಕ್ಕೆ ಯೋಗ್ಯವಾದ ಪರ್ಣ ಕುಟೀರಗಳಲ್ಲಿಯೇ ನಡೆಯುತ್ತಿದ್ದಂತೆ

---

35 Hayavadana Rao, C, op Cit, Vol-V, p 1175.

36 Dowson John, A Classical Dictionary of Hindu Mythology and Religion, Kegan Paul, Trench, Trubner Co, London, 1928, p 279.

ಕಾಣುವುದು. ರವಿವರ್ಮನು ಚಿತ್ರಿಸಿರುವ ಶಂಕರಾಚಾರ್ಯರ ಚಿತ್ರದ ಹಿನ್ನೆಲೆಯಲ್ಲಿ ಸಹ ಪರ್ಣಕುಟೀರವು ಇರುವುದನ್ನು ಗಮನಿಸಬಹುದು. ಶೃಂಗೇರಿಯ ಧರ್ಮಪೀಠವನ್ನು ಶಂಕರಾಚಾರ್ಯರು ಸ್ಥಾಪಿಸಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರಕ್ಕೆ ಕೃತಜ್ಞನಾಗಿ I ನೇ ಹರಿಹರ ಕ್ರಿ. ಶ. 1346 ರಲ್ಲಿ ಶೃಂಗೇರಿಯಲ್ಲಿ ಮಠವನ್ನು ಕಟ್ಟಿಸಿದನು ಎಂಬುದಕ್ಕೆ ಶಾಸನ ಆಧಾರವಿದೆ.[37] ವಿದ್ಯಾಶಂಕರ ಗುಡಿಯು ಬಹುಧಾನ್ಯ ಸಂವತ್ಸರ ಶಕ 1260 ರಲ್ಲಿ (ಕಿ. ಶ. 1338) ಸ್ಥಾಪಿತವಾಯಿತೆಂಬ ಪ್ರತೀತಿ ಇದೆ.

ಶೃಂಗೇರಿ ಮಠದ ವಯಸ್ಸು ಎಷ್ಟೆಂಬ ಬಗ್ಗೆ ಪಂಡಿತರು ಮತ್ತು ಇತಿಹಾಸಕಾರರು ಅಭಿಪ್ರಾಯಗಳನ್ನು ಮಂಡಿಸಿರುವುದುಂಟು. ಶೃಂಗೇರಿ ಮಠ ಮತ್ತು ತುಂಗಭದ್ರಾ ಸಂಗಮ ಸ್ಥಳದಲ್ಲಿರುವ ಕೂಡಲಿ ಮಠ (ಕೂಡ್ಲಿ ಶ್ರಿಂಗೇರಿ ಮಠ)—ಇವುಗಳಲ್ಲಿ ಯಾವುದು ಮೊದಲು ಸ್ಥಾಪಿತವಾಯಿತು ಎಂಬ ವಿಷಯದಲ್ಲಿಯೂ ವಿವಾದಗಳಿವೆ. ಇತ್ತೀಚೆಗೆ, ಶೃಂಗೇರಿ ಮಠ ಶಂಕರಾಚಾರ್ಯರಿಂದ ಸ್ಥಾಪಿತವಾದುದಲ್ಲ, 16 ನೇ ಶತಮಾನದವರೆಗೆ ಅಲ್ಲಿ ಜಂಗಮ ಸಂಪ್ರದಾಯವಿತ್ತು ಎಂಬ ಅಭಿಪ್ರಾಯವನ್ನು ಪಂಡಿತ ಟಿ. ಎಸ್. ಮಲ್ಲಪ್ಪನವರು ಮಂಡಿಸಿದ್ದಾರೆ. ಮೈಸೂರು ಪುರಾವಸ್ತು ಶೋಧನ ಇಲಾಖೆಯ ವರದಿಯ ಪ್ರಕಾರ "ಶಾಸನಗಳು ಹಾಗೂ ಇತರ ದಾಖಲೆಗಳು ಶೃಂಗೇರಿಯ ಮಠ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸ್ಥಾಪಿತವಾಯಿತು ಎಂದು ತಿಳಿಸುತ್ತವೆ ; ಶಿವಮೊಗ್ಗ ಶಾಸನ 81 ರ ಪ್ರಕಾರ ಕೂಡ್ಲಿ ಮಠವನ್ನು ಅಮ್ಮಾಜಿ ಸ್ವಾಮಿಗಳು (ನರಸಿಂಹಭಾರತಿ : ಕಿ. ಶ. 1546–1586) ಸ್ಥಾಪಿಸಿದರು" ಎಂದು ತಿಳಿದುಬರುತ್ತದೆ.[38]

ವಿಜಯನಗರದ ಸಂಗಮ ಸಂತತಿಯ ಸಾಮ್ರಾಟರು ಶೃಂಗೇರಿಯ ಮಠದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿ, ಅನೇಕ ರೀತಿ ಅದಕ್ಕೆ ನೆರವು ನೀಡಿದ್ದಾರೆ. ಶೃಂಗೇರಿಯ ಅರಸರು ಶೈವಮತವನ್ನು ಆಚರಿಸಿ "ವಿರೂಪಾಕ್ಷ" ಎಂದು ಸಹಿಮಾಡುತ್ತಿದ್ದರೂ, ಶೃಂಗೇರಿಯ ಅದ್ವೈತ ಮಠದ ಬಗ್ಗೆ ಉದಾಸೀನರಾಗಿರಲಿಲ್ಲ. ರಾಜಗುರು ಕ್ರಿಯಾಶಕ್ತಿ ಅವರ ಪ್ರಭಾವ ತನ್ನ ಮೇಲೆ ಅಧಿಕವಾಗಿದ್ದರೂ, ಅವರ ಅನುಮತಿಯ ಮೇಲೆ II ನೇ ಬುಕ್ಕನು (II ನೇ ಹರಿಹರನ ಮಗ) ಯುವರಾಜನಾಗಿದ್ದಾಗ ಕ್ರಿ ಶ. 1339 ರಲ್ಲಿ ಶೃಂಗೇರಿ ಮಠಕ್ಕೆ ವೃತ್ತಿಗಳನ್ನು ನೀಡಿದ್ದಾನೆ.[39] ಶೃಂಗೇರಿ ಮಠದ ಬಗ್ಗೆ ಇಷ್ಟು ನಿಷ್ಠುರವಾದ ನಿಲುವನ್ನು ಹೊಂದಿದ್ದ ಕ್ರಿಯಾಶಕ್ತಿ ಶೃಂಗೇರಿಯ ಗುರುಗಳಾಗಿರಲಿಲ್ಲವೆಂಬುದಕ್ಕೆ ಇದು ನಿದರ್ಶನ. ವಿಜಯನಗರದ I ನೇ ದೇವರಾಜನ ಕಾಲದ ಕ್ರಿ. ಶ.

---

37 EC VI Sringeri 11, A D 1652 ; Sringeri I, A D 1346.

38 MAR, 1945 pp 81-82

39 Dr. H. M. Nagaraj, Kasivilasa Kriyasakti, in the Journal of Historical Studies, (Mysore University, 1972), p 63.

1416 ರ ಶೃಂಗೇರಿ 29 ನೇ ಶಾಸನದಲ್ಲಿ ಶೃಂಗೇರಿ ಗುರುಗಳ ಪರಂಪರೆ ಸೂಚಿತವಾಗಿದೆ. II ನೇ ದೇವರಾಯನು (1423–1446) ಎಲ್ಲ ಮತಗಳನ್ನೂ ಒಂದೇ ರೀತಿಯಲ್ಲಿ ಕಂಡನು. ಎಲ್ಲ ಮತಗಳ ಪಂಡಿತರನ್ನೂ ತನ್ನ ಆಸ್ಥಾನದಲ್ಲಿ ಗೌರವಿಸಿದ. ಶ್ರೀನಾಥ, ಲಕ್ಷ್ಮೀಶ ಮತ್ತು ಚಾಮರಸ ಇವರೆಲ್ಲರೂ ಅವನ ನೆಚ್ಚಿನ ಕವಿಗಳು. ಅವನು ಮುಸಲ್ಮಾನರ ನಮಾಜಿಗೆ ತನ್ನ ಆಸ್ಥಾನದಲ್ಲಿ ಕುರಾನು ಗ್ರಂಥವನ್ನು ಇರಿಸಿದ್ದನೆಂದು ಪರ್ಷಿಯಾದ ರಾಯಭಾರಿ ರಜಾಕ್ ತಿಳಿಸುತ್ತಾನೆ. II ನೇ ದೇವರಾಯನು ಶೈವ ಮತದವನೆಂದು ಹೇಳಲಾಗಿದೆಯೋ ಹೊರತು ವೀರಶೈವನಲ್ಲ.

16 ನೇ ಶತಮಾನದ ತಾಳಿಕೋಟೆ ಯುದ್ಧದ ತರುವಾಯ ದೂರದ ಪೆನುಕೊಂಡ ಮತ್ತು ಚಂದ್ರಗಿರಿಗಳಲ್ಲಿ ನೆಲೆಸಿದ ವಿಜಯನಗರದ ಅರಸರಿಗೆ ಶೃಂಗೇರಿಯ ಸಂಪರ್ಕ ಕಡಿಮೆಯಾಯಿತು. ವಿಜಯನಗರದ ಸದಾಶಿವನ ಕಾಲದಲ್ಲಿ ಸ್ಥಾಪಿತವಾದ ಕೆಳದಿ ರಾಜ್ಯದ ನಾಯಕರು ಶಿವಭಕ್ತರಾದರೂ ಶೃಂಗೇರಿಯ ಅದ್ವೈತ ಮಠಕ್ಕೆ ಗೌರವ ಸಲ್ಲಿಸುತ್ತಾ ಅದಕ್ಕೆ ರಕ್ಷಣೆ ನೀಡಿದ್ದಾರೆ. ಕ್ರಿ. ಶ. 1618 ರಲ್ಲಿ ಕೆಳದಿಯ ಸದಾಶಿವ ನಾಯಕನ ಮೊಮ್ಮಗ ವೆಂಕಟಪ್ಪನಾಯಕನು ಶಿಥಿಲಾವಸ್ಥೆಯಲ್ಲಿದ್ದ "ಶೃಂಗೇರಿಯ ಪುನಃಪ್ರತಿಷ್ಠೆ ಮಾಡಿಸಿ ಶೃಂಗೇರಿಯ ಅಭಿನವ ನರಸಿಂಹಭಾರತೀ ಸ್ವಾಮಿಗಳು ಯೋಗ ಪಟ್ಟವನ್ನಾಳುವ ಸಮಯದಲ್ಲಿ" ಕೆಲವು ದತ್ತಿಗಳನ್ನು ನೀಡಿದ್ದಾನೆ.[40] ಕೆಳದಿಯ ಶಿವಪ್ಪನಾಯಕನು ಕ್ರಿ. ಶ. 1652 ರಲ್ಲಿ ಶೃಂಗೇರಿ ಮಠಕ್ಕೆ ದತ್ತಿಗಳನ್ನು ನೀಡಿದ್ದಾನೆ.[41] I ನೇ ಸೋಮಶೇಖರನಾಯಕನು ನವ ನರಸಿಂಹಭಾರತಿಯವರಿಗೆ ನಿಂತು ಹೋಗಿದ್ದ ಕೆಲವು ದತ್ತಿಗಳನ್ನು ಪುನರ್ವ್ಯವಸ್ಥೆಗೊಳಿಸಿ ಕೊಟ್ಟಿದ್ದಾನೆ.[42] ಶೃಂಗೇರಿಯ ಜಗದ್ಗುರು ಸಚ್ಚಿದಾನಂದ ಭಾರತೀಯವರ ಆರೋಗ್ಯ ಕೆಟ್ಟಿದ್ದ ಕಾಲದಲ್ಲಿ (1739) ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದ ಕೆಳದಿಯ II ನೇ ಬಸಪ್ಪನಾಯಕನಿಗೆ (1739–1754) ಪತ್ರ ಬರೆದಿರುತ್ತಾರೆ. ಶೃಂಗೇರಿ ಮಠ ಮರಾಠರ ಧಾಳಿಗಳಿಗೆ ತುತ್ತಾಗಿದ್ದಾಗ ಅದರ ರಕ್ಷಣೆಗೆ ನೆರವು ನೀಡಿದವರು ಕೆಳದಿಯ ನಾಯಕರು. ಹೀಗೆ ಶೃಂಗೇರಿಯ ಇತಿಹಾಸದಲ್ಲಿ ಶೈವರಾಗಿದ್ದು ತರುವಾಯ ವೈಷ್ಣವ ಮತವನ್ನಾಚರಿಸಿದ ವಿಜಯನಗರದ ಅರಸರು, ಹಾಗೂ ವೀರಶೈವರಾದ ಕೆಳದಿಯ ನಾಯಕರೂ ಶೃಂಗೇರಿ ಮಠದ ರಕ್ಷಣೆಗೆ ನಿಂತಿದ್ದುದು ಕರ್ನಾಟಕದ ಧರ್ಮೇತಿಹಾಸದಲ್ಲಿ ಪ್ರಶಂಸನೀಯ ವಿಷಯವಾಗಿದೆ. ಅವರು ಶೃಂಗೇರಿ ಮಠವನ್ನು ಶುದ್ಧ ಶೈವ ಮಠವನ್ನಾಗಿ, ಇಲ್ಲವೇ ವೀರಶೈವ ಮಠವನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಿಲ್ಲ. ಅಲ್ಲದೆ,

---

40 EC VI, Sringeri 5, A D 1621.

41 EC VI, Sringeri 11 and 13 (A D 1652).

42 EC VII, Shimoga 81, A D 1668.

ಹಿಂದೂ ಧರ್ಮರಕ್ಷಣೆಗಾಗಿಯೇ ಸ್ಥಾಪಿತವಾದ ವಿಜಯನಗರದ ಸಾಮ್ರಾಟರು ಅಂತಹ ಕೆಲಸಗಳಿಗೆ ಅವಕಾಶ ಕೊಡಲಿಲ್ಲ.

೫

ಹೀಗಿರುವಲ್ಲಿ, ವಿಜಯನಗರದ ರಾಜಧಾನಿಯಲ್ಲಿ ರಾಜಗುರುಗಳಾಗಿದ್ದ ಕ್ರಿಯಾಶಕ್ತಿ ಗುರುಗಳನ್ನು ವಿದ್ಯಾರಣ್ಯರೆಂದು ಕರೆದು, ಅವರೇ ಶೃಂಗೇರಿ ಮಠದ ಪೀಠಾಧಿಪತಿಗಳೆಂದೂ ಅವರಿಂದಲೇ ವಿಜಯನಗರ ಸ್ಥಾಪನೆಯಾಯಿತೆಂದೂ ಸಮರ್ಥಿಸಲು ಹೋಗುವುದು ಸಲ್ಲದ ಮಾತು. ಶೃಂಗೇರಿ ಮಠವು ರೇವಣಾರಸಿದ್ಧರ ಜಂಗಮ ಸಂಪ್ರದಾಯವನ್ನು 16ನೇ ಶತಮಾನದವರೆಗೂ ಅನುಸರಿಸುತ್ತಿತ್ತು ಎಂಬ ಮಾತುಗಳಲ್ಲಿ ಸಹ ಯಾವ ಹುರುಳೂ ಇಲ್ಲ. ಅದ್ವೈತ ಮತದ ಸ್ಥಾಪಕರಾದ ಶ್ರೀ ಶಂಕರಾಚಾರ್ಯರು ನಿರ್ಗುಣ ಬ್ರಹ್ಮೋಪಾಸನೆಯನ್ನು ಮಾತ್ರವೇ ಪ್ರತಿಪಾದಿಸಿದ್ದಾರೆ, ಸಗುಣೋಪಾಸನೆ ಅವರ ಸಂಪ್ರದಾಯಕ್ಕೆ ವಿರುದ್ಧ, ಆದ್ದರಿಂದ ಶೃಂಗೇರಿ ಪೀಠದಲ್ಲಿ ಚಂದ್ರಮೌಳೀಶ್ವರ, ರತ್ನಗರ್ಭ ಗಣಪತಿ, ಶಾರದಾ ಮತ್ತು ಶ್ರೀ ಚಕ್ರಗಳನ್ನು ನಿತ್ಯವೂ ಆರಾಧಿಸುವುದರಿಂದ ಶೃಂಗೇರಿ ಮಠವು ಶಂಕರಾಚಾರ್ಯರ ಅದ್ವೈತ ಮತಕ್ಕೆ ಸೇರಿದ ಮಠವಲ್ಲ ಎಂಬುದು ಮಲ್ಲಪ್ಪನವರ ಸಂಜಿಕೆ. ಶಂಕರಾಚಾರ್ಯರು ಧರ್ಮಸುಧಾರಕರೆಂದು ಖ್ಯಾತಿ ಪಡೆದವರು, ಪ್ರಸಿದ್ಧ ವೇದಾಂತಿಗಳು, ದಾರ್ಶನಿಕರು. ಅವರು ಶಿವ, ವಿಷ್ಣು, ಕೃಷ್ಣ, ಸೂರ್ಯ, ಶಕ್ತಿ, ಗಣಪತಿ ಹಾಗೂ ಭೈರವಾದಿ ದೇವತೆಗಳೆಲ್ಲರೂ ಪೂಜಾರ್ಹರೆಂದು ಬೋಧಿಸಿ ವೈದಿಕ ಪೂಜಾ ಪದ್ಧತಿಗಳನ್ನು ತಂದವರು. ತ.ರಾ. ಸುಬ್ಬರಾಯರು ಹೇಳುವಂತೆ "ಅದ್ವೈತ ಸಿದ್ಧಾಂತ ವೈದಿಕ ಪೂಜಾಪದ್ಧತಿ, ಸಕಲ ದೇವತೋಪಾಸನೆಗಳ ಭದ್ರ ತಳಹದಿಯ ಮೇಲೆ ಹಿಂದೂ ಧರ್ಮವನ್ನು ಸಮನ್ವಯಗೊಳಿಸಿದ ಅಮೋಘ ಸಾಧನೆ ಶಂಕರಾಚಾರ್ಯರದು."[43] ಶೃಂಗೇರಿಯಲ್ಲಿ ಪೂಜೆಗೊಳ್ಳುತ್ತಿರುವ ಚಂದ್ರಮೌಳೀಶ್ವರ ಲಿಂಗವನ್ನು ಶೃಂಗೇರಿಯ ಆಚಾರ್ಯರಿಗೆ ರೇವಣಸಿದ್ಧರು ಕೊಟ್ಟರು, ಆದ್ದರಿಂದ ಶೃಂಗೇರಿಯ ಆಚಾರ್ಯರು ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದ ಜಂಗಮರು ಎಂಬುದು ದಿವಂಗತ ಟಿ. ಎಸ್. ಮಲ್ಲಪ್ಪನವರ ಸಿದ್ಧಾಂತ.[44] ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ಚತುರ್ಮಠಗಳಲ್ಲಿಯೂ ಚಂದ್ರಮೌಳೀಶ್ವರ ಲಿಂಗಾರ್ಚನೆ ಇದೆ ಶೃಂಗೇರಿಯ ಮಠಕ್ಕೆ ಮಾತ್ರವೇ ಅದು ಸೀಮಿತವಲ್ಲ. ಮಲ್ಲಪ್ಪನವರು ಹೊಸಪಳ್ಳಿ ಶಾಸನದಲ್ಲಿರುವ "ಮಹಾನುಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀಚರಣಾನಾಂ" ಎಂಬುದನ್ನು ಕ್ರಿಯಾಶಕ್ತಿ ಮತ್ತು ವಿದ್ಯಾರಣ್ಯ ಎಂದು ಬಿಡಿಸಿ

---

43 ತ.ರಾ.ಸು. ಅದೇಗ್ರಂಥ, ಪು. 54.

44 ಈ ಲೇಖನವನ್ನು ನಾನು ತಯಾರಿಸುತ್ತಿದ್ದ ಕಾಲದಲ್ಲಿ ಶ್ರೀ ಟಿ. ಎಸ್. ಮಲ್ಲಪ್ಪನವರು 16-12-1980 ರಲ್ಲಿ ಶಿವೈಕ್ಯರಾದರು.

ಓದವೆ "ಕ್ರಿಯಾಶಕ್ತಿ ವಿದ್ಯಾರಣ್ಯ" ಎಂದು ಅರ್ಥಮಾಡಿಕೊಂಡು ಕ್ರಿಯಾಶಕ್ತಿ ಎಂಬ ಗುರುವನ್ನು ಸೃಷ್ಟಿಸಿದ್ದಾರೆ. ಈ ವ್ಯಕ್ತಿ "ಭ್ರಮಾಜನಿತ ಭೂತವಲ್ಲದೆ, ಐತಿಹಾಸಿಕ ವ್ಯಕ್ತಿಯೂ ಅಲ್ಲ, ಐತಿಹಾಸಿಕ ಸತ್ಯವೂ ಅಲ್ಲ" ಎಂದು ತ.ರಾ.ಸು. ಕಟುವಾಗಿ ನುಡಿದಿದ್ದಾರೆ. ಐತಿಹಾಸಿಕ ಸಂಶೋಧನೆಗಳಲ್ಲಿ ಸಂಶೋಧಕರು ತಪ್ಪು ನಿರ್ಣಯಗಳಿಗೆ ಬರುವುದು ವಿಶೇಷವೇನಲ್ಲ. ಕ್ರಿಯಾಶಕ್ತಿಗಳೆಂಬ ಶೈವ ಗುರುಗಳ ಬೋಧನೆ, ಶೃಂಗೇರಿ ಗುರುಗಳ ಮಾರ್ಗದರ್ಶನ ಇವೆರಡರ ಬಗ್ಗೆ ವಿಜಯನಗರದ ಸಾಮ್ರಾಟರಿಗೆ ಒಂದೇ ಬಗೆಯ ಮನ್ನಣೆ ಇದ್ದಿತೆಂಬುದನ್ನು ನಾವು ಮರೆಯಬಾರದು.

ಮೃತ್ಯುಸಿಂಹಾಸನ

— ಆರ್. ಕೆ. ಹೊನ್ನೆಗುಂಡಿ, ಬಿ. ಎ. ಬಿ ಎಡ್.,

ನಾಟಕದ ಉದ್ದೇಶ ಕೇವಲ ಮನರಂಜನೆಯಲ್ಲ. ಅದು ಬದುಕಿನ ಪ್ರತಿಕೃತಿ. ಅದು ಬದುಕಿನ ನಿಜಬಿಂಬ. ಬದುಕಿನಲ್ಲಿ ಕಾಣುವ ವ್ಯಕ್ತಿಗಳು ಅವರ ಸ್ವಭಾವಗುಣ ಧರ್ಮಗಳು ನಾಟಕದಲ್ಲಿ ಕಾಣುವಂತಾಗಬೇಕು. ಆಗ ಆ ನಾಟಕ ಪೌರಾಣಿಕವಿರಲಿ, ಐತಿಹಾಸಿಕ, ಸಾಮಾಜಿಕವಿರಲಿ ಪ್ರೇಕ್ಷಕನನ್ನು ತಟ್ಟುತ್ತದೆ–ಮುಟ್ಟುತ್ತದೆ.

ತ.ರಾ.ಸು. ಅವರ ಜನಪ್ರಿಯ ಐತಿಹಾಸಿಕ ಕಾದಂಬರಿಗಳಾದ ಕಂಬನಿಯ ಕುಯಿಲು 'ರಕ್ತರಾತ್ರಿ' 'ತಿರುಗುಬಾಣ' ಚಿತ್ರದುರ್ಗದ ಇತಿಹಾಸವನ್ನು ವರ್ಣರಂಜಿತವಾಗಿ ಚಿತ್ರಿಸಿವೆ. ಅಲ್ಲಿನ ವೈವಿಧ್ಯಮಯವಾದ ಜೀವನ–ವ್ಯಕ್ತಿಗಳು ಓದುಗನನ್ನು ಸೆರೆ ಹಿಡಿದಿವೆ. ಇವುಗಳಲ್ಲಿ 'ರಕ್ತರಾತ್ರಿ' ಸೇಡಿನ ಪರಾಕಾಷ್ಠತೆಯ ಚಿತ್ರಣ ನೀಡುತ್ತದೆ. ರಕ್ತರಾತ್ರಿಯನ್ನಾಧರಿಸಿ ಬರೆದ 'ಮೃತ್ಯುಸಿಂಹಾಸನ' ಒಂದು ನಾಟಕ.

ಸು. 14–15ನೇ ಶತಮಾನದಲ್ಲಿ ಚಿತ್ರದುರ್ಗದಲ್ಲಿ ಮಂತ್ರಿ ಮನೆತನದವರು ಪಾಳೆಯಗಾರರಾಗಿದ್ದಾಗ ತಿಮ್ಮಣ್ಣನಾಯಕನೆಂಬ ಮೂಲ ಪುರುಷನ ಮೂರನೆಯ ತಲೆಮಾರಿನ ಕಸ್ತೂರಿ ರಂಗಪ್ಪನಾಯಕರಿಗೆ ಸರ್ಜೆರಾಯರು, ಕುಮಾರಪ್ಪ, ಮದಕರಿ ನಾಯಕ ಎಂಬ ಮೂವರು ಮಕ್ಕಳು. ಕಸ್ತೂರಿ ರಂಗಪ್ಪನ ತರುವಾಯ ಸರ್ಜೆರಾಯ, ಕುಮಾರಪ್ಪ ದೈವಾಧೀನರಾದುದರಿಂದ ಮದಕರಿನಾಯಕ ಪಟ್ಟಕ್ಕೆ ಬಂದ. ಸರ್ಜೆರಾಯರಿಗೆ ಲಿಂಗಣ್ಣನಾಯಕ, ಚಿಕ್ಕಣ್ಣನಾಯಕ ಎಂಬ ಇಬ್ಬರು ಮಕ್ಕಳು. ಮದಕರಿ ನಾಯಕನ ಆಳ್ವಿಕೆ ಜನಾದರಣೀಯವಾದರೂ ಅವನಿಗೆ ಗಂಡು ಸಂತಾನವಿಲ್ಲದ ಪ್ರಯುಕ್ತ ಪಟ್ಟಕ್ಕೆ ಯಾರು ಅರ್ಹರು ಎಂಬ ವಾದ ವಿವಾದಕ್ಕೆಡೆಕೊಟ್ಟಿತು. ಮದಕರಿ ನಾಯಕನ ಸಾಕುಮಗ ಓಬಣ್ಣನಾಯಕ ಪಟ್ಟಕ್ಕೆ ಬರಬೇಕೆಂದು ಪ್ರಧಾನಿ ಭುವನಪ್ಪನವರು, ದಳವಾಯಿ ದೇಸಣ್ಣನವರ ಅಭಿಪ್ರಾಯವಾದರೆ ಲಿಂಗಣ್ಣನಾಯಕರು ಪಟ್ಟಕ್ಕೆ ಬರುವುದುಚಿತವೆಂದು ದಳವಾಯಿ ಮುದ್ದಣ್ಣನ ವಾದ. ಹಿರಿಯನಾಗತಿ ಗೌರವ್ವ ಅದೇ ಕಾರಣವನ್ನೊಡ್ಡಿ ಸಹಗಮನಗೈಯುತ್ತಾಳೆ. ಭುವನಪ್ಪನವರು ಓಬಣ್ಣನಾಯಕನನ್ನೇ ಪಟ್ಟಕ್ಕೆ ತಂದು ಪ್ರಧಾನಿ ಪಟ್ಟವನ್ನು ಲಿಂಗಣ್ಣನಾಯಕರಿಗೆ ಬಿಟ್ಟುಕೊಟ್ಟರು. ತನ್ನ ವಾದ ಫಲಿಸದಿದ್ದುದಕ್ಕಾಗಿ ಮುದ್ದಣ್ಣನಾಯಕ ಸಿಂಹಾಸನದ ಮೇಲೆ ಕೂತಿದ್ದ ಓಬಣ್ಣನಾಯಕನಿಗೆ ಮುಜುರೆ ಮಾಡುವ ನೆಪದಲ್ಲಿ ಕೊಲೆಗೈಯುತ್ತಾನೆ. ಮುದ್ದಣ್ಣನ ಬಳಿಯೇ ಸೈನ್ಯಬಲವೆಲ್ಲವಿರುವುದರಿಂದ ಅವನಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ಓಬಣ್ಣನ ಹಿರಿಯನಾಗತಿ ನೀರುಪಾಲಾಗುತ್ತಾಳೆ. ದಳವಾಯಿ ದೇಸಣ್ಣನನ್ನೂ ಯಮಸದನಕ್ಕಟ್ಟಿದ ಭುವನಪ್ಪನವರು ಆತ್ಮಹತ್ಯೆ ಮಾಡಿಕೊಂಡರು. ಲಿಂಗಣ್ಣನಾಯಕ ವಿರಕ್ತನಾದುದರಿಂದ ಚಿಕ್ಕಣ್ಣನನ್ನು ಪಟ್ಟಕ್ಕೆ ತಂದು ತಾನೇ ಸರ್ವಾಧಿಕಾರಿಯಾದ

ಮುದ್ದಣ್ಣ ಹನ್ನೆರಡು ವರುಷಗಳನಂತರ ಚಿಕ್ಕಣ್ಣನಾಯಕರೂ ಮೃತ್ಯುವಶರಾಗಲು ಮತ್ತೆ ವಂಶಕ್ಕೆ ಲಿಂಗಣ್ಣನಾಯಕರೊಬ್ಬರೇ ಉಳಿದರು.

ಮುದ್ದಣ್ಣನಿಗೆ ತಾನು ಹೇಳಿದಂತೆಯೇ ಅರಸು ನಡೆಯಬೇಕೆಂಬ ಚಾಪಲ್ಯವಿತ್ತು. ಲಿಂಗಣ್ಣನಾಯಕರು ತಮ್ಮ ದಾರಿಗೆ ಬರುವುದಿಲ್ಲವೆಂಬ ಸಂದೇಹ. ಈ ಮಧ್ಯೆ ಭುವನಪ್ಪನವರ ಮಗ ಪರಶುರಾಮಪ್ಪ, ದೇವಣ್ಣನ ಮಗ ಭರಮಣ್ಣ ತಂತ್ರಮಾಡಿ ಲಿಂಗಣ್ಣನಾಯಕರನ್ನೇ ಪಟ್ಟಕ್ಕೆ ತರಲು ಯತ್ನಿಸುತ್ತಾರೆ.

ಕಲ್ಲು ಮಠದ ಉಗ್ರಚನ್ನವೀರ ಸ್ವಾಮಿಗಳ ಪ್ರಯತ್ನದ ಫಲವಾಗಿ ಲಿಂಗಣ್ಣ ಪಟ್ಟಕ್ಕೆ ಬಂದಿದ್ದರೂ ದಳವಾಯಿ ಮುದ್ದಣ್ಣನ ಕೈಗೊಂಬೆಯಾಗಿ ಉಳಿಯುತ್ತಾನೆ. ಕೊನೆಗೆ ಮುದ್ದಣ್ಣನ ಕಾರಸ್ಥಾನ ತಿಳಿದು ಪ್ರತಿಭಟಿಸಲು ಮುಂದಾಗಿ ತಾನೇ ಆ ಷಡ್‌ಯಂತ್ರದಲ್ಲಿ ಸಿಲುಕಿ ಬಲಿಯಾಗುತ್ತಾನೆ. ಇದು ಈ ನಾಟಕದ ಕಥಾವಸ್ತು.

ಸನ್ನಿವೇಶಕ್ಕೆ ತಕ್ಕ ಮಾತುಗಳು ನಾಟಕದ ಓಟವನ್ನು ಮುನ್ನಡೆಸುತ್ತವೆ. ಒಂದೊಂದು ಪಾತ್ರಗಳು ತಮ್ಮ ವೈಶಿಷ್ಟ್ಯಮಯವಾದ ವ್ಯಕ್ತಿತ್ವದಿಂದ ಓದುಗರ ಚಿತ್ತ ಭಿತ್ತಿಯಲ್ಲಿ ನಿಲ್ಲುತ್ತವೆ.

'ಮೃತ್ಯುಸಿಂಹಾಸನ' ಎಂಬುದು ಅರ್ಥಪೂರ್ಣ ತಲೆ ಬರೆಹ ಈ ಸಿಂಹಾಸನವನ್ನೇರಿದವರು. ಒಂದಲ್ಲ ಒಂದು ಕಾರಣದಿಂದ ಮೃತ್ಯುವಶರಾಗುತ್ತಾರೆ. ಸಿಂಹಾಸನ ಏರುವುದೇ ಮೃತ್ಯುವಿನ ಬಾಯಿಯಲ್ಲಿ ಹೋಗಿ ಬಿದ್ದಂತೆ. ವೈಭವದಲ್ಲಿ ಮೆರೆದ ಚಿತ್ರದುರ್ಗ ಕುಟಿಲಕಾರಸ್ಥಾನಕ್ಕೆ ಬಲಿಯಾಗಿ ದುರಂತಮಯವಾಗುತ್ತದೆ.

'ದರ್ಪ ಮಾತ್ಸರ್ಯ ಭೂಯಿಷ್ಠೋ ಮಾಯಾಛದ್ಮ ಪರಾಯಣ
ಧೀರೋದ್ಧತ ಸ್ತ್ವಹಂಕಾರೀ ಚಲಶ್ಚಂಡೋ ವಿಕತ್ಥನ :'

–ದಶರೂಪಕದಲ್ಲಿ ವರ್ಣಿತವಾದ ಧೀರೋದಾತ್ತನಾಯಕ ಲಕ್ಷಣ. ಈ ನಾಟಕದ ನಾಯಕ ಮುದ್ದಣ್ಣ. ಸ್ವಾರ್ಥಿ, ಹಿಂಸಾಕಾಂಕ್ಷಿ, ಕುಟಿಲಕಾರಸ್ಥಾನಿಯಾದ ಮುದ್ದಣ್ಣ ಸ್ವಜನ, ಪರಜನ, ಗುರು – ಹಿರಿಯರೆಂಬ ಭೇದವೆಣಿಸದೆ ತನ್ನ ಅಧಿಕಾರ ದರ್ಪದಿಂದ ಸರ್ವನಾಶಕ್ಕೆ ಸಿದ್ಧನಾಗುತ್ತಾನೆ. "ನನ್ನ ಕಾರ್ಯಸಾಧನೆಗೆ ಇಡೀ ದುರ್ಗವೇ ನಾಶವಾದರೂ ಅದನ್ನು ಸಾಧಿಸುತ್ತೇನೆ" ಎಂಬ ಅವನ ಮಾತೇ ಆತನ ಪೂರ್ಣ ವ್ಯಕ್ತಿತ್ವ ಸಾರುತ್ತದೆ.

"ಸಿಂಹಾಸನ ಸೂಳೆ ಯಾರಿಗೆ ಬೇಕಾದರೂ ಸ್ಥಾನ ಕೊಡುತ್ತದೆ" ಎನ್ನುವ ಲಿಂಗಣ್ಣನಾಯಕನ ಮನೋಧರ್ಮ ಈ ಒಂದೇ ಮಾತಿನಿಂದ ವ್ಯಕ್ತವಾಗುತ್ತದೆ. ಆತ ವಿರಕ್ತ ಮನೋಭಾವದವನು. ಸಿಂಹಾಸನಕ್ಕಾಗಿ ಆಸೆಪಟ್ಟವನಲ್ಲ, "ಬಲಿಷ್ಠ ದ್ವೇಷ, ಮೋಸ, ಸಾಮರ್ಥ್ಯ. ರಕ್ತ ಪಾತದಲ್ಲಿ ಮಿಂದುಬಂದ ಸಿಂಹಾಸನ ರಕ್ತ ಸಿಂಚಿತ. ಅದು ಯಾರನ್ನು ಹೇಗೆ ಬಲಿಗೊಳ್ಳುತ್ತದೆಯೆನ್ನುವುದೇ ಅರಿಯದು"

—ಕಂಬನಿಯ ಕುಯಿಲು, ನಲ್ಲಿ ದಾಸಣ್ಣ ಮುದ್ದಣ್ಣನಿಗೆ ಹೇಳಿದ ಮಾತು ನಾಟಕ ದುದ್ದಕ್ಕೂ ಧ್ವನಿಸಿದೆ.

'ರಕ್ತವಲ್ಲಿ ಬಿತ್ತಿದ ಬೆಳೆಯನ್ನು ಕಂಬನಿಯ ಕಾಲುವೆ ಹರಿಸಿ ಬೆಳೆಸ ಬೇಕಾಗುವುದು'

'ಇಂದು ಪರರ ಮೈಯಿಂದ ಸುರಿದ ರಕ್ತ ನಮ್ಮ ಮೈಯಿಂದ ಸುರಿಯುವ ನೆತ್ತರಿಗೆ ಮುನ್ನುಡಿ."

—ನಾಟಕದುದ್ದಕ್ಕೂ ಇಂಥ ಕೂರಲಗಿನಂಥ ಸಂಭಾಷಣೆಗಳು—ನಾಟಕದ ಬಂಧವನ್ನು ಬಿಗಿಗೊಳಿಸಿವೆ.

ಲಿಂಗಣ್ಣನಾದರೂ ಪಟ್ಟಕ್ಕೆ ಬಂದುದು ಸೇಡು ತೀರಿಸಿ ಕೊಳ್ಳಲು ದೇಸಣ್ಣ, ಭುವನಪ್ಪ, ಓಬಣ್ಣ, ಇವರ ಅಂತ್ಯಕ್ಕೆ ಕಾರಣರಾದವರ ರಕ್ತವನ್ನು ಅವರಿಗೆ ಕುಡಿಸಲು. ಶಾಂತಿ, ದಯೆ, ಅಭಿವೃದ್ಧಿಗಲ್ಲ ಎಂದಾಗ ಸೇಡಿಗೆ ಸೇಡೇ ಉತ್ತರವೇ ಎನಿಸುತ್ತದೆ.

ಸೇಡಿನ ಕಿಡಿಯಾಗಿ ಸಿಡಿದವಳು ಗಿರಿಜೆ. ಅವಳು ಮುದ್ದಣ್ಣನ ಪಾಲಿನ ಮೃತ್ಯು ದೇವತೆ. ಊಳಿಗದಲ್ಲಿದ್ದ ಗಿರಿಜಾ ವೀರಣ್ಣನನ್ನು ಮದುವೆಯಾಗಬಯಸಿದಳು. ಆದರೆ ಮುದ್ದಣ್ಣನ ಕಾರಸ್ಥಾನದಿಂದ ವೀರಣ್ಣ ಕೊಲೆಯಾದ. ಗಿರಿಜೆ ಸಿಂಹಿಣಿಯಾಗಿ ಮುದ್ದಣ್ಣನ ಮೇಲೆ ಸೇಡು ತೀರಿಸಿಕೊಳ್ಳಲು ಸಂಚು ಹೂಡುತ್ತ ತಿರುಗುತ್ತಾಳೆ. ಒಲಿದರೆ ನಾರಿ ಮುನಿದರೆ ಮಾರಿಯೆಂಬ ಮಾತಿಗೆ ನಿದರ್ಶನ ಗಿರಿಜೆ.

ನೀವು ಸೇಡನ್ನು ಮರೆತರೂ ಅವನು ಮರೆತಿಲ್ಲ. ಕೊನೆಗೆ ನಿಮಗೇ ಆಪತ್ತು ಬಂದೀತು. ಎಂದು ಲಿಂಗಣ್ಣನನ್ನು ಎಚ್ಚರಿಸದಿದ್ದರೆ ಲಿಂಗಣ್ಣ ಮುದ್ದಣ್ಣನ ಕೈಗೊಂಬೆ ಯಾಗಿಯೇ ಉಳಿಯುತ್ತಿದ್ದ.

'ಸೇಡು, ರಕ್ತಪಾತ, ಹಿಂಸೆ, ದ್ವೇಷಗಳಿಗೆ ನಮ್ಮ ಹರಕೆಗಳಿಲ್ಲ ಲಿಂಗಣ್ಣ. ರಕ್ತದ ಬೆಂಕಿ ರಕ್ತದಿಂದ ಆರುವುದಿಲ್ಲ.' ಎಂಬುದು ಟಾಲಸ್ಟಾಯ್ ಅವರ ಅಹಿಂಸಾವಾದ ಎತ್ತಿತೋರಿಸುತ್ತದೆ.

ಗುರುಗಳು ಚಿತ್ರದುರ್ಗ ಹಿತೈಷಿಗಳು. 'ಶಿವ ಕಾಯದ ತಲೆಯನ್ನು ಯಾರೂ ಕಾಯರು' ಎಂದು ಮುದ್ದಣ್ಣನಿಗೆ ಉಪದೇಶಿಸುವಾಗ 'ದೈವಾಧೀನಂ ಜಗತ್‌ಸರ್ವಂ' ಎಂಬ ಆಧ್ಯಾತ್ಮಿಕ ಸಿದ್ಧಾಂತ ಒಡೆದು ಮೂಡುತ್ತದೆ ಉದಾರ ಚರಿತಾನಾಂ ವಸುಧೈವ ಕುಟುಂಬಕಂ' ಎಂಬುದುಸ್ವಾಮಿಗಳ ಪಾತ್ರಕ್ಕೆ ಒಪ್ಪುವ ಮಾತು.

ನಾಟಕದಲ್ಲಿ ಸೇಡು, ರೊಚ್ಚು, ಕುಟಿಲಕಾರಸ್ಥಾನ, ಮೊದಲಾದುವುಗಳೇ ಪ್ರಾಧಾನವಾಗಿ ಪಾತ್ರಗಳು ದುಷ್ಟ ಹೇತು ಸಂಕೇತವಾಗುವಾಗುತ್ತವೆ. ಇಂಥ ದೊಡ್ಡ ನಾಟಕದಲ್ಲಿ ಎಲ್ಲಿಯೂ ಹಾಸ್ಯದ ಸೆಳೆಮಿಂಚು ಕೂಡ ಮೂಡುವುದಿಲ್ಲ. ಆದ್ದರಿಂದ

ಓದುಗನಂತೆ ಪ್ರೇಕ್ಷಕ ಕೂಡ ಅನೇಕಬಾರಿ ಏಕತಾನತೆಯಿಂದ ಬಳಲಿ ಬಿಡುವನು. ಶೃಂಗಾರಕ್ಕೆ ಆಸ್ಪದವಿಲ್ಲದ ನಾಟಕ ಇದು.

'ತಿರುಗುಬಾಣ' ವನ್ನಾಧರಿಸಿ ಸ್ವಾರ್ಥಿಗಳಿಗೆ, ದುಷ್ಟರಿಗೆ ಕೊನೆಗೆ ದೈವೀ ಶಿಕ್ಷೆಯಾದರೂ ಇದೆಯೆಂದು ಸೂಚಿಸುವ ಮುದ್ದಣ್ಣನನ್ನು ಬಂಧಿಸಿ ಅವಸಾನಗೊಳಿಸುವ ಒಂದು ದೃಶ್ಯ ನಾಟಕಕ್ಕಿದ್ದರೆ ಚೆನ್ನಾಗಿತ್ತು. ಗಿರಿಜೆಯ ನಿಷ್ಠೆ, ಪ್ರಯತ್ನ ನಾಟಕದಂತ್ಯದಲ್ಲಿ ಬಂದಿದ್ದರೆ ನಾಟಕ ಇನ್ನೂ ಕಳೆಕಟ್ಟುತ್ತಿತ್ತು. ನಾಟಕದ ಸೂತ್ರದಂತೆ ಕೊಲೆ, ರಕ್ತಪಾತಗಳು ರಂಗಸ್ಥಳದಲ್ಲಿ ಕಾಣಿಸಬಾರದು ಎಂದು ಚಿನ್ನ – ದೊನ್ನನ ಮೌಖಿಕ ಕಥೆಯು ಮುನ್ನಡೆಯುವಂತೆ ಮಾಡಿದ ತಂತ್ರ ಶ್ಲಾಘನೀಯ.

ಈ ನಾಟಕದ ಸಂಭಾಷಣೆಗಳು ನಾಟಕವನ್ನು ರೂಪಿಸುತ್ತವೆ. ಪಾತ್ರಗಳನ್ನು ಪೋಷಿಸುತ್ತವೆ. ಆದರೂ 'ಜ್ವಾಲಾ'ದಲ್ಲಿ ಕಾಣುವ ಹರಿತವಾದ ಸಂಭಾಷಣೆಗಳು ಇಲ್ಲಿ ಇಲ್ಲ.

ನಾಲ್ಕು x ನಾಲ್ಕು = ಒಂದು

—ಡಾ|| ಎಂ. ರಾಮಕೃಷ್ಣ

ಈ ಕಾದಂಬರಿಯ ಶೀರ್ಷಿಕೆ ಓದುಗರ ಕುತೂಹಲವನ್ನು ಕೆರಳಿಸಿ ಆಕರ್ಷಿ-ಸುತ್ತದೆ. ಇದೇ ಲೇಖಕರ ಇತರ ಕಾದಂಬರಿಗಳನ್ನು ಓದಿರುವ ಸಹೃದಯರು ಈ ಕೃತಿಯಲ್ಲಿ ವೈಶಿಷ್ಟ್ಯವನ್ನು ಕಾಣುವುದರಲ್ಲಿ ಸಂದೇಹವಿಲ್ಲ. ಸಾಮಾನ್ಯ ಓದುಗರು ಈ ಕಾದಂಬರಿಯನ್ನು ಒಂದೇ ಪಟ್ಟದ ತೀವ್ರಾಸಕ್ತಿಯಿಂದ ಓದುತ್ತಾರೆಂದು, ಅನುಭವಿಸುತ್ತಾರೆಂದು ಭಾವಿಸುವುದು ಕಷ್ಟವಾಗುತ್ತದೆ. ವೀರ, ಶೃಂಗಾರ, ಕರುಣ ಮುಂತಾದ ರಸಗಳನ್ನು ಅನುಭವಿಸುವುದು ಸುಲಭವಾಗಿರುವಂತೆ, ಈ ಕಾದಂಬರಿಯು ಸರ್ವ ರಸನಿರಪೇಕ್ಷತೆಯನ್ನು ತಿಳಿದು ಕೊಳ್ಳುವುದು ಕಷ್ಟವೇ ಸರಿ. ಒಂದು ಕೃತಿಯ ವಸ್ತುವು ಅದರ ರಸ, ಸ್ವರೂಪಗಳನ್ನು ನಿರ್ಣಯಿಸುತ್ತದೆನ್ನುವುದನ್ನು ತಿಳಿದಿರುವವರು ಈ ಕಾದಂಬರಿಯನ್ನು ಆಸಕ್ತಿಯಿಂದ ಓದಬಲ್ಲರು. ವರ್ಣ್ಯ ಮತ್ತು ವರ್ಣನೆಗಳು ಎಷ್ಟೆಷ್ಟು ಸಾಮೀಪ್ಯವನ್ನು ಪಡೆದುಕೊಂಡು ಸಾಯುಜ್ಯವನ್ನು ಸಾಧಿಸಲು ಶಕ್ತವಾಗುತ್ತವೆಯೋ ಅಷ್ಟಷ್ಟು ಶ್ರೇಷ್ಟತೆಯು ಕೃತಿಗೆ ಲಭಿಸುತ್ತದೆ. ಭಾವ ಮತ್ತು ಶಬ್ದಗಳ ಹೊಂದಾಣಿಕೆಯೂ ಅಷ್ಟೇ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತದೆ.

ಈ ಕಾದಂಬರಿಯ ವಸ್ತುವೆಂದರೆ ಸತ್ಯಕಾಮ ಜಾಬಾಲಿಯ ಸಾಧನೆ ಮತ್ತು ಸಿದ್ಧಿ. ಆತನ ಸಾಧನೆಯು ಯಾವುದೇ ಸಾಮಾಜಿಕ, ರಾಜಕೀಯ ಕಲೆ ಮುಂತಾದ ಕ್ಷೇತ್ರಗಳಲ್ಲಿ ನಡೆಯುವಂತಹುದಲ್ಲ ಅವನೇ ಅವನ ಸಾಧನೆಯ ಕ್ಷೇತ್ರವಾಗಿದ್ದಾನೆ. ಸತ್ಯಕಾಮ ಜಾಬಾಲಿಯು ಬ್ರಹ್ಮಜ್ಞಾನವನ್ನು ಪಡೆದುದು ಮಾತ್ರವಲ್ಲದೆ ಅದನ್ನು ಸಾಕ್ಷಾತ್ಕರಿಸಿಕೊಂಡ ಅಪೂರ್ವ ವಿಧಾನವನ್ನು ಇಲ್ಲಿ ನಿರೂಪಿಸಲಾಗಿದೆ. ಈ ಕಾದಂಬ-ರಿಯು "ಜಬಲಾ ಉವಾಚ" "ಗೌತಮ ಹಾರಿದ್ರುಮತ ಉವಾಚ" "ಸತ್ಯಕಾಮ ಉವಾಚ" "ದೃಷ್ಟ್ವಾ ತೃಪ್ಯಂತಿ" ಎಂಬ ನಾಲ್ಕು ಪಾದಗಳಿಂದ (ಭಾಗ) ಕೂಡಿದೆ. ಪ್ರಾರಂಭದಲ್ಲಿ ಉದ್ಘಾಟನಾಕಾರ್ಯ ಸೂಚನಾವಿಧಿಯಂತೆ "ಅನಂತದ ಆದಿಯಲ್ಲಿ ...." ಎಂಬ ನಾಲ್ಕು ಪುಟದ ಬರವಣಿಗೆ ಕಂಡು ಬರುತ್ತದೆ.

ಮೊದಲನೆಯ ಪಾದವಾದ "ಜಬಲಾ ಉವಾಚ" ದಲ್ಲಿ ಜಬಲಾ ಎಂಬಾಕೆಯು ತನ್ನ ವಿಚಾರವನ್ನು ಹೇಳುತ್ತಾ ಹೋಗುತ್ತಾಳೆ. ಅರಣ್ಯದ ಒಂದು ಭಾಗದಲ್ಲಿ ನೆಲ ಫಲ ಭಾಗ್ಯವನ್ನುಳ್ಳ ಕಡೆ ಕೆಲವು ಗುಡಿಸಲುಗಳ ಪೈಕಿ ಜಬಲಾಳ ತಂದೆ ತಾಯಿಯರದೂ ಒಂದು ಪಕ್ಕದ ರಾಜ್ಯದ ಅರಸನ ಸೈನಿಕರು ಉನ್ಮತ್ತರಾಗಿ ಗುಡಿಸಲುವಾಸಿಗಳ ಮೇಲೆ ಆಕ್ರಮಣ ನಡೆಸಿ ಜನರನ್ನು ಸೆರೆ ಹಿಡಿದು ರಾಜಧಾನಿಗೆ ಕೊಂಡೊಯ್ಯುತ್ತಾರೆ. ಜಬಾಲಾ ಏಕಾಂಗಿಯಾಗಿ ಅರಮನೆಯ ದಾಸಿಯಂತೆ ಬದುಕಬೇಕಾಗುತ್ತದೆ. ಅರಸನು ಒಮ್ಮೆ ಯಜ್ಞವನ್ನು ಮಾಡುವ ಸಂದರ್ಭದಲ್ಲಿ ದಾನ ಕೊಡಬೇಕಾದಾಗ ಗೋವುಗಳ

ಜತೆಗೆ ದಾಸಿಯರನ್ನೂ ವಿಪ್ರೋತ್ತಮರಿಗೆ ನೀಡುತ್ತಾನೆ. ಒಬ್ಬ ವಿಪ್ರೋತ್ತಮರಿಗೆ ದೊರೆತ ದಾಸಿಯರಲ್ಲಿ ಜಬಾಲ ಒಬ್ಬಳು. ಅರಮನೆಯ ದಾಸಿಯಾಗಿ ಜೀವಿಸುವುದಕ್ಕಿಂತ ವಿಪ್ರೋತ್ತಮನ ಮನೆಯಲ್ಲಿ ಅತಿಥಿ ಶಾಲೆಯ ಪರಿಚಾರಿಕೆ ಯಾಗಿರುವುದು ಉತ್ತಮವೆಂದು ಭಾವಿಸುತ್ತಾಳೆ. ಅವಳ ಭಾವನೆಯು ಹುಸಿಯಾಗದೆ ಗೃಹಪತಿ ಮತ್ತು ಗೃಹಸ್ವಾಮಿನಿ ಇಬ್ಬರೂ ಅವಳ ಮನಸ್ಸಿಗೆ ಹಿತವಾಗುವಂತೆ ನಡೆದು ಕೊಳ್ಳುತ್ತಾರೆ. ಜಬಲಾ ಹಲವು ಹೊಸ ವಿಷಯಗಳನ್ನು ಗ್ರಹಿಸುತ್ತಾಳೆ. ಅವಳು, ತನ್ನ ಮನಸ್ಸು, ಬುದ್ಧಿ ಶಕ್ತಿಗಳು ಅವಕಾಶ ಕೊಟ್ಟಷ್ಟನ್ನು ಗ್ರಹಿಸುತ್ತಾಳೆ. ಗೃಹಪತಿ ಮತ್ತು ಸ್ವಾಮಿನಿ ಇಬ್ಬರೂ ಕೊಟ್ಟ ಸಲುಗೆಯನ್ನ ದುರುಪಯೋಗ ಪಡಿಸಿಕೊಳ್ಳದೆ ತನ್ನ ಸ್ಥಾನವನ್ನರಿತು ನಡೆದು ಕೊಳ್ಳುತ್ತಾಳೆ. ಕರ್ತವ್ಯದೃಷ್ಟಿಯನ್ನು ಯಾವಾಗಲೂ ಕಡೆಗಣಿಸದೆ ಅತಿಥಿಗಳ ಸೇವೆಯನ್ನು ಮಾಡುತ್ತಿರುವ ಜಬಾಲ ಒಂದು ಸಲ ಉಭಯ ಸಂಕಟಕ್ಕೆ ಗುರಿಯಾಗಿ, "ಧರ್ಮವನ್ನು ಮೀರದೆ" ಗರ್ಭಿಣಿಯಾಗ ಬೇಕಾಗುತ್ತದೆ. ಅದಕ್ಕೆ ಕಾರಣರಾದ ಅತಿಥಿ ಋಷಿಯೊಬ್ಬರು ಸತ್ಯವನ್ನು ಬಿಡಬೇಡವೆಂದು ಬೋಧಿಸಿ ಹೊರಟು ಹೋಗುತ್ತಾರೆ. ಆಕೆಗೆ ಹುಟ್ಟಿದ ಮಗನನ್ನು ಸತ್ಯಕಾಮನೆಂಬ ಹೆಸರಿನಿಂದ ಕರೆದು, ಅಕ್ಷರಾಭ್ಯಾಸ ಮಾಡಿಸಿ, ಗುರುಕುಲವಾಸಕ್ಕೆ ಕಳುಹಿಸಲು ಗೃಹಪತಿಗಳು ತೀರ್ಮಾನಿಸುತ್ತಾರೆ.

ಎರಡನೆಯ ಪಾದವಾದ "ಗೌತಮ ಹಾರಿದ್ರುಮತ ಉಪಾಜ"ದಲ್ಲಿ ಗುರುಗಳಾದ ಗೌತಮ ಹಾರಿದ್ರುಮತರು ತಮ್ಮ ಅನುಭವಗಳನ್ನು ನಿರೂಪಿಸುತ್ತಾರೆ. ಒಂದು ದಿನ ಅವರು ಸ್ನಾನ ಮಾಡುತ್ತಿದ್ದ ಹೊಳೆ ಬತ್ತುತ್ತಿರುವಂತೆ, ಅಗ್ನಿಕಾರ್ಯ ಮಾಡುವ ಯಜ್ಞಕುಂಡದಲ್ಲಿ ಅಗ್ನಿಜ್ವಾಲೆಗಳು ತೇಜೋಹೀನವಾದಂತೆ, ಗೋವುಗಳು ಕೃಶವಾದಂತೆ ತೋರಿಬಂದು ಚಿಂತಾಮಗ್ನರಾಗುತ್ತಾರೆ. ಅದಕ್ಕೆ ಸೂಕ್ತವಾದ ಕಾರಣವು ಹೊಳೆಯುವುದೇ ಇಲ್ಲ. ಆಚಾರ್ಯ ಪಿಪ್ಪಲಾದ, ಆಚಾರ್ಯ ಅಂಗೀರಸ, ಆಚಾರ್ಯ ಉಪಮನ್ಯು, ಆಚಾರ್ಯ ಚಾಕ್ರಾಯಣ. ಎಂಬ ನಾಲ್ಕು ಜನ ಆಚಾರ್ಯರು ಗೌತಮ ಹಾರಿದ್ರುಮತರ ಆಶ್ರಮಕ್ಕೆ ಬಂದು ಮಹತ್ವಪೂರ್ಣ ವಿಚಾರವೊಂದನ್ನು ಚರ್ಚಿಸುತ್ತಾರೆ. 'ಬ್ರಾಹ್ಮಣ' ಎಂದರೆ ಯಾರು, ವೇದಗಳನ್ನು ಓದುವ ಕೇಳುವ ಹಕ್ಕು ಎಲ್ಲರಿಗೂ ಇದೆಯೆ, ಕಾಲ ಕೆಡುತ್ತಿದೆಯೆ ಮುಂತಾದ ಪ್ರಶ್ನೆಗಳನ್ನು ಕುರಿತು ವಾಗ್ವಾದ ನಡೆಯುತ್ತದೆ. ಈ ಮೂರೂ ಪ್ರಶ್ನೆಗಳ ಇತ್ಯರ್ಥವನ್ನು ಎಲ್ಲರೂ ಗೌತಮ ಹಾರಿದ್ರುಮತರ ತಲೆಗೆ ಕಟ್ಟುತ್ತಾರೆ. ಆದರೆ ಗುರುಗಳಿಗೆ ಈ ವಿಚಿತ್ರವನ್ನು ಕಂಡು ಆಶ್ಚರ್ಯ ಉಂಟಾಗುತ್ತದೆ. ತಮ್ಮ ಪ್ರಶ್ನೆಗೆ ಉತ್ತರ ಕೊಡುವ ಬದಲು ಇನ್ನೊಂದು ವಿಚಾರವನ್ನು ಚರ್ಚಿಸಿ ಅವರ ಪರಿಹಾರಕ್ಕೆ ಹಾರಿದ್ರುಮತರನ್ನೇ ನಿರೀಕ್ಷಿಸುವುದು ಕಂಡು ಬರುತ್ತದೆ. ಆಚಾರ್ಯರು ಹೊರಟುಹೋದ ನಂತರ ಸತ್ಯಕಾಮ ಅಂತೇವಾಸಿಯಾಗಲು ಆಗಮಿಸುತ್ತಾನೆ. ಹಾರಿದ್ರುಮತರು ಅವನಿಗೆ ಪ್ರಶ್ನೆಗಳನ್ನು ಹಾಕಿ ಉತ್ತರವನ್ನು ತರುವಂತೆ ಹೇಳಿ ಹಿಂದಕ್ಕೆ ಕಳಿಸುತ್ತಾರೆ.

ಮೂರನೆಯ ಪಾದವಾದ 'ಸತ್ಯಕಾಮ ಉವಾಚ'ದಲ್ಲಿ ಸತ್ಯಕಾಮನು ತಾಯಿಯ ಪತ್ನಿರದಿಂದ ಹಿಂದಿರುಗುವುದರಿಂದ ಪ್ರಾರಂಭಿಸಿ ಆತನು ಬ್ರಹ್ಮ ಜ್ಞಾನಿಯಾಗುವ ವರೆಗಿನ ಜೀವನದ ವಿವರಣೆಯಿದೆ. ಬಾಲಕನು ಗುರುಗಳಿಗೆ ಸತ್ಯವನ್ನೇ ಹೇಳಿ ಸಂತೋಷ ಪಡಿಸುತ್ತಾನೆ. ಗುರುಗಳು ಆತನನ್ನು ಮೆಚ್ಚಿಕೊಂಡು ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಇದರಿಂದ ಸತ್ಯಕಾಮನಿಗೆ ಉಂಟಾದ ಸಂತೋಷವು ಬಹುಕಾಲ ಉಳಿಯಲಿಲ್ಲ. ಗುರುಗಳು ತನ್ನನ್ನು ಕಂಡರೆ ಉದಾಸೀನರಾಗಿದ್ದಾರೆಂದು ಭಾವಿಸಿ ಅಲ್ಲಿಂದ ಎತ್ತಲೋ ಹೊರಟು ಹೋಗಲು ತೀರ್ಮಾನಿಸಿ ಕೊಂಚದೂರ ಹೋಗುವಷ್ಟರಲ್ಲಿ ಗುರುಗಳೇ ಆತನನ್ನು ಕರೆತಂದು ತಮ್ಮ ಶಿಕ್ಷಣವಿಧಾನವನ್ನು ತಿಳಿಸುತ್ತಾರೆ. ಅನಂತರ ಸತ್ಯಕಾಮ ನಿಗೆ ನಾಲ್ಕು ನೂರು ಹಸುಗಳ ಜವಾಬ್ದಾರಿಯನ್ನು ಹೊರಿಸಿದಾಗ ಆತನು ಅತ್ಯುತ್ಸಾಹ ದಿಂದ ಅವುಗಳನ್ನು ಸಾವಿರ ಮಾಡಿ ತರುತ್ತೇನೆ ಎಂದು ಘೋಷಿಸುತ್ತಾನೆ. ಆ ದಿನ ಆಶ್ರಮವನ್ನು ಬಿಟ್ಟು ಹಸುಗಳೊಡನೆ ಅರಣ್ಯ ಸೇರುತ್ತಾನೆ, ಅರಣ್ಯದಲ್ಲಿ ಆತನಿಗೆ ಜಾನಕಿ ಆಯಸ್ಥೂಣರ ಭೇಟಿಯಾಗಿ 'ಶ್ರೀಮಂಥಕರ್ಮ'ದ ರಹಸ್ಯವನ್ನು ತಿಳಿಯು ತ್ತಾನೆ. ತತ್ಪರಿಣಾಮವಾಗಿ ಆವಿರ್ಭವಿಸಿದ ವೃಷಭವು ಹಸುಗಳ ಸಂಖ್ಯಾ ವೃದ್ಧಿಗೆ ಕಾರಣವಾಗುವಂತೆಯೇ ಸತ್ಯಕಾಮನ ಸಾಧನೆ ವೃದ್ಧಿಗೂ ಕಾರಣವಾಗುತ್ತದೆ. ವೃಷಭವು ಬ್ರಹ್ಮದ ಪ್ರಥಮ ಪಾದವನ್ನು ತಿಳಿಸಿಕೊಟ್ಟು "ಪ್ರಕಾಶವಾನ್" ಎಂದು ಕರೆದು ವಾಯುವಿನಲ್ಲಿಯೇ ಲೀನವಾಗುತ್ತದೆ. ಅಗ್ನಿಯು ಪ್ರತ್ಯಕ್ಷವಾಗಿ ಬ್ರಹ್ಮದ ಎರಡನೆ ಪಾದವನ್ನು ತಿಳಿಸಿಕೊಟ್ಟು, ಅದು ಮನೋಗೋಚರವಾದುದೆಂದೂ 'ಅನಂತವಾನ್' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆಯೆಂದೂ ತಿಳಿಸಿ ಮರೆಯಾಗು ತ್ತದೆ ಮುಂದಿನ ಪಾದವನ್ನು ಅಂದರೆ ಬ್ರಹ್ಮದ ತೃತೀಯ ಪಾದವನ್ನು ಹಂಸವು ತಿಳಿಸಿಕೊಟ್ಟು 'ಜ್ಯೋತಿಷ್ಮಾನ್' ಎಂದು ಕರೆದು ಕಣ್ಮರೆಯಾಗುತ್ತದೆ. ಇನ್ನು ಉಳಿದ ನಾಲ್ಕನೆಯ ಪಾದವನ್ನು ಮುದ್ಗ ಪಕ್ಷಿಯು ತಿಳಿಸಿ 'ಆಯತನವಾನ್' ಎಂದು ಹೇಳಿ ಮಾಯವಾಗುತ್ತದೆ. ಇದಕ್ಕಿಂತ ಮೊದಲು ಸತ್ಯಕಾಮನಿಗೆ ಪಂಚ ಭೂತಗಳ ಸಾಕ್ಷಾತ್ಕಾರವಾಗಿರುತ್ತದೆ. ಈ ಉಪದೇಶವು ಮುಗಿದೊಡನೆ ಆತನು ಸಾವಿರ ಹಸು ಗಳೊಡನೆ ಮರು ಪ್ರಯಾಣವನ್ನು ಕೈ ಕೊಳ್ಳುತ್ತಾನೆ.

ನಾಲ್ಕನೇ ಪಾದವಾದ "ವೃಷ್ಟ್ವಾ ತೃಪ್ಯಂತಿ" ಭಾಗದಲ್ಲಿ ಸತ್ಯಕಾಮನಿಗೆ ಬ್ರಹ್ಮಪೂಜೆ ನಡೆಯುತ್ತದೆ. ಪಿಪ್ಪಲಾದ, ಅಂಗೀರಸ, ಚಾಕ್ರಾಯಣ, ಔಪಮನ್ಯು ಮುಂತಾದವರು ಮೊದಲೇ ಬಂದು ಸೇರಿದ್ದಾರೆ. ಹಾರಿದ್ರುಮತರಿಗೆ ಮೊದಲು ಅವರೆಲ್ಲರೂ ಬಂದ ಕಾರಣ ತಿಳಿಯುವುದಿಲ್ಲ. ಸತ್ಯಕಾಮನು ಆಶ್ರಮಕ್ಕೆ ಬಂದ ನಂತರ ಸುದ್ದಿಯು ಎಲ್ಲ ಕಡೆಯೂ ಹಬ್ಬುತ್ತದೆ. ಚಾಕ್ರಾಯಣರೇ ಪುರೋಹಿತರಾಗಿ ಪೂಜೆಯನ್ನು ಸಾಂಗವಾಗಿ ನೆರವೇರಿಸುತ್ತಾರೆ. ಜಬಲಾ ಅದನ್ನು ನೋಡಿ ಧನ್ಯ ಳಾಗುತ್ತಾಳೆ. ಇದಿಷ್ಟು ಕಥಾ ಭಾಗದ ವಿವರಣೆ. ಈ ಕಾದಂಬರಿಯ ಲೇಖಕರು ಕಥನ ಕಲೆಯಲ್ಲಿ ನುರಿತವರು. ಸತ್ಯಕಾಮ ಜಾಬಾಲಿಗೆ ಸಂಬಂಧಿಸಿದ ಅಲ್ಪಪ್ರಮಾಣದ

ಕಥೆಯನ್ನು ತಮ್ಮ ಕಲ್ಪನೆಯಲ್ಲಿ ವಿಸ್ತರಿಸಿ, ಪ್ರತಿಭೆಯಲ್ಲಿ ಸಂಸ್ಕರಿಸಿ, ಅಭಿವ್ಯಕ್ತಿಯಲ್ಲಿ ಯಶಸ್ವಿಗಳಾಗಿದ್ದಾರೆ. ಇಲ್ಲಿ ನಾಲ್ಕು x ನಾಲ್ಕು ಎನ್ನುವುದೇನು ಎಂಬ ವಿಚಾರ ಕೆಲವರಿಗೆ ಒಂದೇ ಓದಿಗೆ ಹೊಳೆಯದೆ ಹೋಗುವ ಸಂಭವವುಂಟು. ಮೊದಲನೇ 'ನಾಲ್ಕು'- ಬ್ರಹ್ಮದ ನಾಲ್ಕು ಪಾದಗಳನ್ನು ಸೂಚಿಸುತ್ತದೆ. ಅನಂತರದ 'ನಾಲ್ಕು' ಎನ್ನುವುದು ಮೊದಲು ಸೂಚಿತವಾದ ಬ್ರಹ್ಮದ ಒಂದೊಂದು ಪಾದದಲ್ಲಿಯೂ ಸಮಾನವಾಗಿರುವ ನಾಲ್ಕು ಕಲೆಗಳನ್ನು ಸೂಚಿಸುತ್ತದೆ. ನಾಲ್ಕು x ನಾಲ್ಕು = ಹದಿನಾರು ಕಲೆಗಳು ಆಗಬೇಕು. ಆದರೆ ಅವೆಲ್ಲವೂ ಸೇರಿಯೇ ಒಂದು ಜೀವ (ಜೀವಾತ್ಮ) ಅಸ್ತಿತ್ವಕ್ಕೆ ಬರುವಂತಾಗಿದೆ. ಬ್ರಹ್ಮದ ಪ್ರಥಮ ಪಾದದ ನಾಲ್ಕು ಕಲೆಗಳೆಂದರೆ ದಿಕ್‌ಸ್ವರೂಪಿಯಾದ 'ಪ್ರಕಾಶವಾನ್' ಎನ್ನಿಸಿಕೊಳ್ಳುವ, ದೃಗಿಂದ್ರಿಯ ವಿಷಯವಾದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳು. ಬ್ರಹ್ಮದ ಎರಡನೆಯ ಪಾದದ ನಾಲ್ಕು ಕಲೆಗಳೆಂದರೆ, ಮನೋಗೋಚರವಾದ 'ಅನಂತವಾನ್' ಎಂದು ಉಕ್ತವಾದ ಪೃಥ್ವಿ, ಅಂತರಿಕ್ಷ, ದ್ಯುಲೋಕ, ಸಮುದ್ರ. ಬ್ರಹ್ಮದ ಮೂರನೇ ಪಾದದ ನಾಲ್ಕು ಕಲೆಗಳೆಂದರೆ ಬೆಳಕಿನ ದ್ಯೋತಕವಾದ, 'ಜ್ಯೋತಿಷ್ಮಾನ್' ಎಂದು ಹೇಳಲಾದ ಅಗ್ನಿ, ವಿದ್ಯುತ್, ಚಂದ್ರ, ಸೂರ್ಯ. ಇನ್ನು ಬ್ರಹ್ಮದ ನಾಲ್ಕನೇ ಪಾದದ ನಾಲ್ಕು ಕಲೆಗಳೆಂದರೆ 'ಆಯತನವಾನ್' ಎನ್ನಿಸಿಕೊಳ್ಳುವ, ಮೇಲೆ ಹೇಳಲಾದ ಮೂರು ಪಾದಗಳನ್ನು ಗಮನಿಸುವ, ಗ್ರಹಿಸುವ, ಕಣ್ಣು, ಕಿವಿ, ಮನಸ್ಸು, ಪ್ರಾಣ. 'ಆಯತನವಾನ್' ಇಲ್ಲದೆ ಪ್ರಕಾಶವಾನ್, ಅನಂತವಾನ್, ಜ್ಯೋತಿಷ್ಮಾನ್ ಇವು ಮೂರೂ ಇದ್ದೂ ಇಲ್ಲದಂತೆ. ಬ್ರಹ್ಮದ ನಾಲ್ಕುಪಾದಗಳೂ ಸೇರಿ ಒಂದು 'ಘಟ'ವಾಗುವ ಸತ್ಯವನ್ನು ಈ ಕಾದಂಬರಿಯ ಶೀರ್ಷಿಕೆ ಸೂಚಿಸುತ್ತದೆ. ಈ ವಿಶ್ಲೇಷಣೆಯು ಜನಾಂಗಾತೀತವೂ, ಜಾತ್ಯಾತೀತವೂ ಆಗಿದ್ದು ಮನುಷ್ಯರೆಲ್ಲರನ್ನೂ ಒಳಗೊಳ್ಳುತ್ತದೆ. ಮತವಾಗಲೀ, ಭಾಷೆಯಾಗಲೀ ಯಾವ ಲೆಕ್ಕಕ್ಕೂ ಇಲ್ಲವೆನ್ನುವುದನ್ನು ಗಮನಿಸಬೇಕು. ಯಾವ ಸತ್ಯವು ಎಲ್ಲರಿಗೂ ಒಂದೇ ಆಗಿರುತ್ತದೋ, ಯಾವುದನ್ನು ಯಾರು ಬೇಕಾದರೂ ಪ್ರಯೋಗ ಪೂರ್ವಕವಾಗಿ ಜಾಹೀರು ಪಡಿಸಬಹುದೋ, ಯಾವುದು ವೈಯಕ್ತಿಕ ಅಭಿಪ್ರಾಯ ನಿರಪೇಕ್ಷವೋ ಅದನ್ನು 'ವೈಜ್ಞಾನಿಕ ಸತ್ಯ'ವೆಂದು ಕರೆಯುಲಾಗುತ್ತದಲ್ಲವೆ? ಅದೇ ರೀತಿ ಯಾರು ಬೇಕಾದರೂ ಅನ್ವಯಿಸಿಕೊಂಡು ಸಾಧನಾ ಪೂರ್ವಕವಾಗಿ ಕಂಡುಕೊಳ್ಳಬಹುದಾದ ಸತ್ಯವನ್ನು ಒಳಗೊಂಡ ಈ ಜ್ಞಾನವನ್ನು 'ಹೋಲಿ ಸೈನ್ಸ್' (Holi Sejence) ಎಂದು ಕರೆದರೆ ತಪ್ಪಾಗುವುದಿಲ್ಲ. ಅದರಿಂದಲೇ ಉಪನಿಷತ್ತುಗಳನ್ನು ಶುದ್ಧ ತತ್ವಜ್ಞಾನವೆಂದು ಕರೆಯುವುದು. ಉಪನಿಷತ್ತುಗಳಲ್ಲಿ ನಿರೂಪಿತವಾದ, ನಿರ್ದೇಶಿತವಾದ ಸತ್ಯ ಸಾಕ್ಷಾತ್ಕಾರ ವಿಧಾನವು ಅಮೆರಿಕನರಿಗೂ ಅನ್ವಯಿಸುತ್ತದೆ, ನೀಗ್ರೋಗಳಿಗೂ ಅನ್ವಯಿಸುತ್ತದೆ. ಯಾವ ಸಂದರ್ಭದಲ್ಲಿಯೂ, ಪರಿಸೀಮಿತ ಅಂತಃಕರಣಗಳಿಂದಲೇ ಸತ್ಯ ಸಾಕ್ಷಾತ್ಕಾರವಾಗುತ್ತದೆಂದು ಉಪನಿಷತ್ ಹೇಳುವುದಿಲ್ಲ. ಅಥವಾ ಇಂಥಿಂಥ ವ್ಯಕ್ತಿಯನ್ನು ನಂಬಿದರೆ ಗುರುವನ್ನು, ಸತ್ಯವನ್ನು ಕಂಡುಕೊಳ್ಳಬಹುದು ಎಂಬ ಮಧ್ಯವರ್ತಿ ವಿಚಾರವನ್ನು

ಹೇಳುವುದಿಲ್ಲ. 'ಉದ್ಧರೇದಾತ್ಮನಾತ್ಮಾನಂ' ಎನ್ನುವುದು ಅವರ ನಿಷ್ಠುರ ಸತ್ಯಪೂರ್ಣ ತೀರ್ಮಾನ. ಹಣ, ಅಧಿಕಾರಗಳು ಚೌಕಾಶಿ ಮಾಡಲಾಗುವ ತರಲೆ ವಿಷಯವಲ್ಲ. ಜೀವಾತ್ಮವು ವಾಸನೆಗಳನ್ನು ಅನುಸರಿಸಿ ಲೋಕವ್ಯವಹಾರದಲ್ಲಿ ತೊಡಗುತ್ತದೆ. ಕಷ್ಟ ಸಂಕಟಗಳನ್ನೂ, ಅಲ್ಪಸುಖವನ್ನೂ, ಸುಖಾಭಾಸವನ್ನೂ ಅನುಭವಿಸುತ್ತದೆ. (ಹಾಗೆ ನೋಡಿದರೆ ಅನುಭವಿಸುವುದೂ ಅದಲ್ಲ) ವಾಸನೆಗಳ ಪ್ರಭಾವವು ಸಾಧನೆಯಿಂದ ಕಡಿಮೆಯಾದಂತೆಲ್ಲ ಚಿತ್ತಶುದ್ಧಿಯು ಲಭಿಸುತ್ತದೆ. ಚಿತ್ತವು ಶುದ್ಧವಾಗುತ್ತಾ ಹೋದಂತೆಲ್ಲ ತಾನೇತಾನಾಗಿ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಅಂದರೆ ತನ್ನ ನಿಜ ವಾದ ಸ್ವರೂಪವೇನು ಎನ್ನುವುದು ತಿಳಿಯುತ್ತದೆ. ಇದನ್ನೇ ದೈವಸಾಕ್ಷಾತ್ಕಾರ ಎಂದೂ ಕರೆಯಬಹುದು. ನಮ್ಮಿಂದ ಹೊರಗೆ ಏನೋ ಕಾಣಿಸುವುದು ಎಂಬ ಭ್ರಮೆಗೆ ಒಳಗಾಗಿ ನಡೆದುಕೊಳ್ಳುವವರೂ ಇಲ್ಲದಿಲ್ಲ. ಮನಸ್ಸಲ್ಲ, ಬುದ್ಧಿಯಲ್ಲ, ಪಂಚಭೂತಗಳಲ್ಲ ಎಂದು ತಿಳಿದುಕೊಂಡು, ತನ್ನನ್ನು ತಾನು (ಶುದ್ಧ) ಬ್ರಹ್ಮವೆಂದು ಅರಿಯುವುದು ಸಿದ್ಧಿಯ ಲಕ್ಷಣವಾಗಿದೆ. ಇಂತಹ ಜ್ಞಾನವನ್ನು ಪಡೆಯಲು, ಅನುಭವಪೂರ್ವಕವಾಗಿ ತಿಳಿಯಲು ದಾಸೀಪುತ್ರನಾದರೇನು, ಜಾರ ಪುತ್ರನಾದರೇನು. ಮುಖ್ಯವಾಗಿ ಬೇಕಾದುದು ಶ್ರದ್ಧೆ ಮತ್ತು ನಿರಂತರ ಪ್ರಯತ್ನ. ಈ ಸತ್ಯವಾದ ವಿಷಯವನ್ನು ಲೇಖಕರು ಎರಡನೇ ಪಾದದಲ್ಲಿ (ಗೌತಮಂ ಹರಿದ್ರುಮತ ಉವಾಚ) ನಿರೂಪಿಸಿದ್ದಾರೆ. ಪಿಪ್ಪಲಾದ, ಅಂಗೀರಸ ಇಬ್ಬರು ಒಂದು ಪಕ್ಷವಾದರೆ, ಔಪಮನ್ಯು, ಚಾಕ್ರಾಯಣರು ಇನ್ನೊಂದು ಪಕ್ಷದಲ್ಲಿ ನಿಂತು ವಾದಿಸುವುದನ್ನು ಲೇಖ ಕರು ನಿರ್ಲಿಪ್ತರಾಗಿ 'ಅನುವಾದಿ'ಸಿದ್ದಾರೆ. ಅಷ್ಟರ ಮಟ್ಟಿಗೆ ಲೇಖಕರು 'ವ್ಯಕ್ತಿತ್ವ ನಿರಸನ ತತ್ವ'ವನ್ನು ಅನುಸರಿಸುವುದರಲ್ಲಿ ಯಶಸ್ವಿಗಳಾಗಿದ್ದಾರೆ. ಚಾಕ್ರಾಯಣರು

> 'ಈಚೆಗೆ ಬ್ರಾಹ್ಮಣನಲ್ಲದವನು ಒಬ್ಬ ಬಂದು ನಮಗೆ ವೇದಾಧ್ಯಯನ ಮಾಡಿಸಿ ಎಂದು ಕೇಳಿದ – ನಿಮಗೆ ಆ ಅಧಿಕಾರವಿಲ್ಲವೆಂದೆ' (91)

ಎನ್ನುವುದಲ್ಲದೆ 'ಹುಟ್ಟೇ ನಿರ್ಣಾಯಕ' (92) ಎಂಬ ತೀರ್ಪನ್ನೂ ನೀಡುತ್ತಾರೆ. ಅವರು ಪುನಃ ಮುಂದುವರಿದು

> ಇಂದಿನ ದಸ್ಯುಗಳಿಗೂ, ದಾಸರಿಗೂ, ಜಾರ ಜಾತರಿಗೂ ಅನ್ವಯಿಸಿ ಇವರಿಗೂ ವೇದಾಧ್ಯಯನದ ಅಧಿಕಾರವಿದೆ ಎಂದು ಹೇಳಿದರೆ ಆಗ ವೇದಜ್ಞಾನಕ್ಕೆ, ವೇದಾಧ್ಯಯನಕ್ಕೆ ಬೆಲೆ ಬಂದೀತೆ' (95)

ಎಂದು ಪ್ರಶ್ನಿಸುತ್ತಾರೆ. ಔಪಮನ್ಯುವೂ ಇದೇ ಧಾಟಿಯಲ್ಲಿ ವಾದಿಸುತ್ತಾರೆ. ಆದರೆ ಪಿಪ್ಪಲಾದ, ಅಂಗೀರಸರು ಚಾಕ್ರಾಯಣರ ವಾದವನ್ನು ಒಪ್ಪುವುದಿಲ್ಲ. ಪಿಪ್ಪಲಾದರು ಅಂದು ವೇದ ಪುರುಷನ ಮುಖಸಂಜಾತರಾದ ಬ್ರಾಹ್ಮಣರಿಗೇ, ಅವರ ಗೋತ್ರೋ ದ್ಭವರಿಗೇ ಮೀಸಲಾಗಿದ್ದ ವೇದಾಧ್ಯಯನವನ್ನು ಇಂದೂ ಅವರಿಗೇ ಮೀಸಲಾದದ್ದು ಎಂದು ಹೇಳಿದರೆ ಕಾಲ, ದೇಶ, ವಸ್ತುಗಳ ಯಾಂತ್ರಿಕ ಪರಿಮಿತಿಗೆ ಸೀಮಿತವಾಗದ ಜ್ಞಾನವನ್ನು ನಾವೇ ಪಂಜರ ಪಕ್ಷಿಯನ್ನಾಗಿ ಮಾಡಿದಂತಾಗುವುದಿಲ್ಲವೆ (96) ……

ಎಲ್ಲ ದೇವತೆಗಳಿಗೂ ದೇವತೆಯಾದ ಬ್ರಹ್ಮವನ್ನು ಜನ ಅರ್ಥಮಾಡಿಕೊಳ್ಳಲಿ. ಇಷ್ಟು ಸುಲಭ ಮಾಡಿದರಾದರೂ ಹೆಚ್ಚು ಜನ ಜ್ಞಾನ ಸಂಪನ್ನರಾಗಬಹುದು, ಬ್ರಹ್ಮನಿಷ್ಠರಾಗಬಹುದು......ಇದು ಅಪರಾಧವೇ ? ದೈವದ್ರೋಹವೇ ? ವೇದದ್ರೋಹವೇ ? (98) ಎಂದು ವಾದಿಸಿದವರು, ಅನಂತರ ಕೆಳಕ್ಕೆ ಇಳಿದವರಂತೆ, ಜಾರಿಬಿದ್ದಿರುವವರಂತೆ:

> ಹುಟ್ಟಿನಿಂದ ಬ್ರಾಹ್ಮಣರಲ್ಲದವರಿಗೂ ವೇದಾಧ್ಯಯನ ಬೇಡ, ಜ್ಞಾನೋಪಾಸನೆಗಾದರೂ ಅವಕಾಶವಿದ್ದು ವೇದ ಸಂರಕ್ಷಣೆಯಾಗಲಿ ಎಂದು ಪ್ರಯತ್ನಪಡುತ್ತಿದ್ದೇವೆ’ (99)

ಎನ್ನುವುದು ಓದುಗರನ್ನು ಬೇಸರಪಡಿಸುತ್ತದೆ. ಪಿಪ್ಪಲಾದರೂ ಸಹ ಸಮಯ ಸಾಧಕರಾದರಲ್ಲ ಎಂದು ಚಿಂತಿಸುವಂತಾಗುತ್ತದೆ. ಇಪ್ಪತ್ತನೆಯ ಶತಮಾನದ ಮುಕ್ತ ವಾತಾವರಣದ ಓದುಗನಿಗೆ ಇದು ಆಶ್ಚರ್ಯವೆನ್ನಿಸುತ್ತದೆ. ಬ್ರಾಹ್ಮಣ ಬ್ರಾಹ್ಮಣರಲ್ಲದವರ. ಮುಂತಾದ ವಿಚಾರಗಳೇ ಶುದ್ಧ ತತ್ತ್ವಜ್ಞಾನದಿಂದ ಬಹುದೂರದಲ್ಲಿರಬೇಕು ಪ್ರಾಚೀನ ಕಾಲಕ್ಕೆ ಸಂಬಂಧಿಸಿದ ವಿಷಯವೆಂದು ವಿನಾಯ್ತಿಕೊಡಲು ಇಚ್ಛಿಸುವವರೂ ಸಹ ‘ಹಳೆಯದಾದರೂ, ಇಂದಿನ ಬೌದ್ಧಿಕ ಸಮ್ಮತಿಯನ್ನು ಪರಿಗಣಿಸಬೇಕು’ ಎಂಬುದನ್ನು ಮರೆಯುವಂತಿಲ್ಲ. ‘ಬ್ರಾಹ್ಮಣನಾಗಬೇಕು, ದಾಸೀಪುತ್ರನೂ ಬ್ರಾಹ್ಮಣನಾಗಬಹುದು’ ಮುಂತಾದ ವಾದಗಳು ಉದಾರವಾಗಿ ಕಂಡರೂ ಅಂತಹ ವಾದಗಳ ಬುಡದಲ್ಲಿ ಇರುವ ಧೋರಣೆಯೇ ಅನಾರೋಗ್ಯಕರವಾದುದು. ಒಳಗೊಳಗೆ ಬ್ರಾಹ್ಮಣನು ಶ್ರೇಷ್ಠನೆಂದು ಸಮರ್ಥಿಸಿಕೊಳ್ಳುವ ಯುಕ್ತಿಯೊಂದು ಕೆಲಸ ಮಾಡುತ್ತಿರುತ್ತದೆ. ಏಕೆಂದರೆ ಬ್ರಹ್ಮಜ್ಞಾನ ಪಡೆದವನು ಬ್ರಾಹ್ಮಣ ಎಂಬ ಸುಸಂಗತ ಅರ್ಥವನ್ನು ಓದುಗರು ಗ್ರಹಿಸದೆ ಹೋಗುವ ಸಾಧ್ಯತೆಯೇ ಹೆಚ್ಚು. ಆಧುನಿಕ ಯುಗಕ್ಕೆ ಅಂತಹ ರಾಜಿ ಸೂತ್ರವು ಸಮಂಜಸವೆನಿಸುವುದಿಲ್ಲ. ವರ್ಣ, ಜಾತಿಗಳು ಉಳಿದುಕೊಂಡೇ ಇರುತ್ತವೆ. ಕೆಲವು ವ್ಯಕ್ತಿಗಳು ತಮ್ಮ ಸಾಧನೆಯಿಂದ ಮತಾಂತರ ಹೊಂದಿದಂತಾಗುತ್ತದೆ. ಇಡೀ ಸಮುದಾಯ ಪುನಃ ಕತ್ತಲಿನಲ್ಲಿಯೇ ಇರುವಂತಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಕೇವಲ ವರ್ಣವಿಚಾರವೇ ಎತ್ತೆತ್ತಲೋ ಓದುಗರನ್ನು ಎಳೆದೊಯ್ದು ಕಟ್ಟಕಡೆಗೆ ಶುದ್ಧ ಜ್ಞಾನಕ್ಕೆ ಅವರು ಎರವಾಗಬೇಕಾಗುತ್ತದೆ. ಹಲವಾರು ಓದುಗರು ಈ ಅಧ್ಯಾಯದಲ್ಲಿ ಬರುವ ಪಿಪ್ಪಲಾದರ ವಾದವನ್ನು ಓದಿ ರೋಮಾಂಚನಗೊಂಡಿರಬಹುದು, ಅದರ ‘ಕ್ಯಾಥೋಲಿಸಿಟಿ’ಯನ್ನು ಕೊಂಡಾಡಬಹುದು. ಕೆಲವರಾದರೂ ಮನಸ್ಸಿನಲ್ಲಿ ‘ಆ ಋಷಿಗಳ ಜಾತಿಯೇ ವಿಚಿತ್ರ ಮೂಲಗಳಿಂದ ಬಂದಿರುವುದರಿಂದ ಏನನ್ನು ಬೇಕಾದರೂ ಹೇಳಬಹುದು’ ಅಂದುಕೊಂಡಿರಬಹುದು. ಭಾಷೆಗೂ ದೈವತ್ವಕ್ಕೂ ಗಂಟು ಹಾಕುವ ಸ್ವಭಾವದವರೂ ಇರಬಹುದು. ಆದರೆ ವಾದದಲ್ಲಿ ಕಂಡುಬರುವ, ಅಂದಿಗೆ ‘ಅದ್ಭುತ ಉದಾರ’ವೆನ್ನಬಹುದಾದುದೂ ಇಂದಿಗೆ ಕಳಪೆಯೆನ್ನಿಸಿ ಬಿಡುತ್ತದೆ. ಏಕೆಂದರೆ ಕಾದಂಬರಿಯು ಹೇಗೆ ವ್ಯಾಖ್ಯಾನ ಮಾಡುತ್ತದೆ ಎನ್ನುವುದು ಬಹಳ ಮುಖ್ಯವಾದುದು. ಹಳೆಯ ತಪ್ಪನ್ನು

ಕಲಾತ್ಮಕವಾಗಿ ಅಭಿವ್ಯಕ್ತಿಸಿದರೆ ಸಾಲದು. ಆದ್ದರಿಂದ ಕಾದಂಬರಿಯಲ್ಲಿ ಅಲ್ಲಲ್ಲಿ ಬರುವ ವಿಪ್ರೋತ್ತಮ, ವಿಪ್ರಶ್ರೇಷ್ಠ, ಬ್ರಾಹ್ಮಣ ಮೊದಲಾದ ಶಬ್ದಗಳು ಕೆಲವ ರನ್ನಾದರೂ ವಿಮುಖರನ್ನಾಗಿಸುತ್ತವೆ. ಬ್ರಹ್ಮಜ್ಞಾನಿಯೂ ಆಗಮೋಕ್ತ ವಿಧಾನ ದಲ್ಲಿ ಪೂಜಿಸಲ್ಪಡುವ ವಿಚಾರವೂ ಇಂದಿನ ವೈಜ್ಞಾನಿಕ ಮತಿಗೆ ಇಷ್ಟವಾಗದೆ ಹೋಗುತ್ತದೆ. ಬ್ರಹ್ಮವು ವೈಜ್ಞಾನಿಕ ಸತ್ಯ (Scientific truth). ಅದನ್ನು ಕಂಡುಕೊಳ್ಳುವವನೂ ವಿಜ್ಞಾನಿಯೇ. ಅದಕ್ಕೆ ರಹಸ್ಯಾತ್ಮಕ, ಅನುಮಾನ- ಪೋಷಕ, ಮತವರ್ಗ ಪ್ರೇರಿತ ಅಂಶಗಳು ಅನಗತ್ಯವಾಗುತ್ತವೆ. ಲೇಖಕರು ಇನ್ನೂ ನಿರ್ಲಿಪ್ತರಾಗಿ, ಬೌದ್ಧಿಕ ಎಚ್ಚರದಲ್ಲಿ ಸಮಕಾಲೀನತೆಯನ್ನು ಒಳಗೊಳ್ಳಬಹುದಾ ಗಿತ್ತು. ಇಲ್ಲಿ ಕಂಡುಬರುವ ಔದಾರ್ಯವೆನ್ನುವುದು ಬಡವರ ಮೇಲೆ ಶ್ರೀಮಂತರು ಹೊಂದಬಹುದಾದ ಧಾಟಿಯಲ್ಲಿದೆ. ಆದರೆ ಯಾವ ಬಡವರಿಂದ ಆ ಶ್ರೀಮಂತನು ಶ್ರೀಮಂತನಾಗಿದ್ದಾನೆಯೋ ಅಂತಹ ಬಡವರು ಜಾಗೃತರಾಗುವವರೆಗೆ ಮಾತ್ರ ಅವನು ನೆಮ್ಮದಿಯಿಂದಿರಬಹುದು. ಆದ್ದರಿಂದ ಗಾಂಧಿ ವಿಚಾರ ಪ್ರೇರಿತ ಬಿರ್ಲಾ ಅವರು ಸಾವಿರಾರು ಮಂದಿಗೆ ದಾನ ಮಾಡಿದಷ್ಟರಿಂದಲೇ ಧನ್ಯರಾಗಿರಬಹುದು. ಅಂತಹ ಸಹಾನುಭೂತಿ ನೈಜವಾದುದಾದರೂ, ಶ್ಲಾಘನೀಯವೆಂದು ಕಂಡು ಬಂದರೂ ಬಿರ್ಲಾರು ಬಡವರ ಜತೆ ಕುಳಿತು ಊಟ ಮಾಡಲು ಬರಲಾರರು. ನಿಮಗಾಗಿ ದೇವಸ್ಥಾನ, ಬಾವಿ, ಕೇರಿ, ಸ್ಕೂಲು, ಸೊಸೈಟಿ ಎಂದು ಹರಿಜನರಿಗೆ ಪ್ರತ್ಯೇಕವಾಗಿ ಒದಗಿಸುವ ಸರ್ಕಾರ ಸಹಾನುಭೂತಿ ಹೊಂದಿದ್ದರೂ ಅದರ ಕಾರ್ಯವು ಮೂಲಭೂತವಾದ ದುರಭಿಪ್ರಾಯದಿಂದ ಪ್ರಚೋದಿತವಾದುದಲ್ಲವೆ? 'ನಮ್ಮ ಬಾವಿಯಿಂದಲೇ ನೀರು ಸೇದಿಕೊಳ್ಳಿ' ಎನ್ನದ ಊರಿನ ಪಟೇಲರು 'ನಿಮಗಾಗಿ ನನ್ನ ಸ್ವಂತ ಖರ್ಚಿನಲ್ಲಿ ಬಾವಿ ತೆಗೆಸುತ್ತೇನೆ ಎನ್ನುವುದರ ಹಿಂದೆ ಇರುವ ಕುತಂತ್ರವನ್ನು ಉತ್ತಮ ಸಾಹಿತಿ ಗಮನಿಸುತ್ತಾನೆ. ಅದೇ ರೀತಿ ಪಿಪ್ಪಲಾದರ ವಾದವೂ ಇಲ್ಲಿ ಕೇಳಿಬರುತ್ತದೆ. ಆದ್ದರಿಂದ ಸಮಾಜಾಯಿಷಿ ನೀಡುವ ಪ್ರಯತ್ನವನ್ನು ಬಿಟ್ಟು 'ಮಾನವ ಜನಾಂಗ'ವೆಂಬ ಒಂದೇ ಬುನಾದಿಯ ಮೇಲೆ ಕಾದಂಬರಿಯ ವಸ್ತು ಸಂಯೋಜಿತವಾಗಿದ್ದರೆ ಅದರ ಬೆಲೆ ಬಹಳ ಹೆಚ್ಚುತ್ತಿತ್ತು. ಯಾವ ಶಬ್ದ, ಮಾತು ಗಳಿಂದ ಅನುಮಾನಗಳು ಹುಟ್ಟಬಹುದೋ ಅಂತಹ ಶಬ್ದ, ಮಾತುಗಳನ್ನು ಕೈಬಿಟ್ಟರೆ ದೋಷವೇನು. ? ಸತ್ಯಕಾಮನು ದಾಸೀಪುತ್ರನಾಗಿ ಹುಟ್ಟಿ ಬೆಳೆದು ಪ್ರಸಿದ್ಧನಾದಾಗ ಅವನನ್ನು ಹೇಗಾದರೂ ಮಾಡಿ ಬ್ರಾಹ್ಮಣವರ್ಗಕ್ಕೆ ಸೇರಿಸಿಕೊಳ್ಳುವ ಪ್ರಯತ್ನದ ವಾಸನೆ ಕೆಲವರಿಗೆ ತೋರುವ ಸಾಧ್ಯತೆಯಿದೆ. ಆತನ ಗುರುಗಳಾದ ಗೌತಮ ಹಾರಿ ದ್ರುಮತರು ಸತ್ಯಕಾಮನನ್ನು ಕುರಿತು 'ನಿನಗೆ ಉಪದೇಶ ಮಾಡಿದವರು ಯಾರು' ಎಂದು ಕೇಳಿದಾಗ ಮಾತುಗಳ ಮಧ್ಯೆ ಹೊರಬಂದ ವಿಚಾರವೆಂದರೆ 'ಜಾನಕಿ ಆಯಸ್ಥೂಣರು' ಸತ್ಯಕಾಮನ ತಂದೆ ಎಂಬುದು ಜಾನಕಿ ಆಯಸ್ಥೂಣರು ಬ್ರಾಹ್ಮಣ ರಲ್ಲದಿದ್ದರೂ ದೊಡ್ಡ ಋಷಿಯಾದರೂ ಸಾಕು ಎನ್ನುವ ಅಭಿಪ್ರಾಯವಿರಬಹುದೆ. ?

ಸತ್ಯಕಾಮನು ಎಲ್ಲಿಯೋ ಶ್ರಮಜೀವಿಯಾಗಿ ಬದುಕುತ್ತಿದ್ದರೆ ಜಾನಕಿ ಅಂಥ ಸ್ಥೂಣರ ಪ್ರಶ್ನೆಯೇ ಏಳುತ್ತಿರಲಿಲ್ಲ. ಪ್ರಸಿದ್ಧರಾದವರ ಬಂಧುಗಳೆಂದು ಹೇಳಿಕೊಂಡು ಸಾಮಾಜಿಕ, ಭಾವನಾತ್ಮಕ ಪ್ರತಿಷ್ಠೆಯನ್ನು ಪಡೆಯುವುದು ಮಾನವ ಸಹಜವಾದುದು. ಅದರೆ ಸತ್ಯಕಾಮನ ತಂದೆ ಬ್ರಾಹ್ಮಣರೇ ಅಥವಾ ಪ್ರಸಿದ್ಧ ಋಷಿಗಳೇ ಇರಬೇಕು ಎಂದು ಊಹಿಸಿ. ಅದರಿಂದಲೇ ಪ್ರಸಿದ್ಧನಾದನು ಎಂಬ ತೀರ್ಪು, ಸಮಾಧಾನ ಹೊರ ಬರುವುದಾದರೆ ನಿರ್ಲಿಪ್ತ ಸಹೃದಯನ ಮನಸ್ಸಿಗೆ ಆಘಾತವಾಗುತ್ತದೆ. ಸ್ವಾಮಿಗಳೊಬ್ಬರ ವ್ಯಕ್ತಿತ್ವ, ವಾಗ್ಝರಿಗೆ ಮಾರುಹೋಗಿ ವಿದೇಶದಿಂದ ಅವರನ್ನು ಹಿಂಬಾಲಿಸಿ ಬಂದ ವಿದೇಶೀ ಭಕ್ತನೊಬ್ಬನಿಗೆ, ಒಂದು ದಿನ ಅದೇ ಸ್ವಾಮಿಗಳು ಅಸ್ಪೃಶ್ಯನೊಬ್ಬನು ಕೊಟ್ಟ ಆಹಾರವನ್ನು ಸ್ವೀಕರಿಸದೆ ಹೋದ ದೃಶ್ಯ ಕಂಡಾಗ, ಎಂತಹ ಭಾವನೆ ಮೂಡಿರಬಹುದೋ, ಅಂತಹುದೇ ಭಾವನೆ ಸತ್ಯಕಾಮನ ತಂದೆಯನ್ನು ಗುರುತಿಸುವುದನ್ನು ಕಂಡಾಗ ಮೂಡುತ್ತದೆ. ನಿರುಪಾಧಿಕ ವಸ್ತುವಿಗೆ ಉಪಾಧಿಗಳ ಹಂಗೇಕೆ ?

ಇನ್ನೊಂದು ವಿಚಾರವೆಂದರೆ ಇಂತಹ ವಸ್ತುವನ್ನು ಹೊಂದಿರುವ ಕೃತಿಯಲ್ಲಿ ಪರಂಪರಾಗತ ಕುಂದಾಚಾರದ ನುಡಿಗಳು, ಪವಾಡ ಸದೃಶ ಘಟನೆಗಳು. ಪುರಾಣ ಸಹಜ ವಿವರಣೆಗಳು ಶೋಭಿಸುವುದಿಲ್ಲ. ಏಕೆಂದರೆ ಇಂದಿನ ಒಂದು ಕಾದಂಬರಿ ಸಮಕಾಲೀನತೆಯಿಂದ ಸ್ಪಂದಿಸಬೇಕು. ಪ್ರಾಚೀನವಾದುದನ್ನೂ ಇಂದಿನ ಮತಿ ಒಪ್ಪುವಂತೆ ನಿರೂಪಿಸುವ ಇಚ್ಛೆ ಮತ್ತು ಶಕ್ತಿ ಬೇಕಾಗುತ್ತವೆ. ಯಾವ ವಿಷಯವನ್ನಾದರೂ ಅಂದಂದಿನ ಭಾಷೆ ಮತ್ತು ಭಾವನೆಗಳಲ್ಲಿ ಹೇಳಬೇಕಾಗುತ್ತದೆ. ಈಗಾಗಲೇ ಜನರಿಗೆ ಧಾರ್ಮಿಕ ಗ್ರಂಥಗಳ ಬಗ್ಗೆ ಗೌರವ ಹೋಗುತ್ತಿದೆ. ಅಂದ ಮೇಲೆ 'ಕ್ಲೀಷೆ'ಯನ್ನೇ ಬಳಸುತ್ತಿದ್ದರೆ ಗುಟುಕು ಜೀವವೂ ಇಲ್ಲವಾಗುತ್ತದೆ.

ಉದಾಹರಣೆಗೆ :

> ನಾನೀಗ ಹೇಳಲಿರುವುದು ಅಘಮರ್ಷಣ ಸೂಕ್ತ. ಈ ಮಂತ್ರ ಜಲದಿಂದ ಪ್ರೋಕ್ಷಿತನಾದವನು ಅಶ್ವಮೇಧಯಾಗ ಮಾಡಿ ಅವಭೃತ ಸ್ನಾನದಿಂದ ಯಾವ ಪುಣ್ಯವನ್ನು ಪಡೆಯುತ್ತಾನೆಯೋ ಅದನ್ನು ಪಡೆಯುತ್ತಾನೆ. (116)

ಕೆಲವು ಕವಿಗಳು ತಮ್ಮ ಕಾವ್ಯಗಳ ಕೊನೆಯಲ್ಲಿ ಫಲಶ್ರುತಿ ಹೇಳಿದಂತೆ ಇಲ್ಲಿಯೂ ಕೇಳಿಬರುತ್ತದೆ. ಮಂತ್ರಪಠನ, ಮಂತ್ರಜಲ, ಜಲಪಾನ ಮುಂತಾದುವು ತಮ್ಮಷ್ಟಕ್ಕೆ ಏನನ್ನೂ ಮಾಡಲಾರವು. ಮನನಕ್ಕೆ ಯೋಗ್ಯವಾದುದು ಮಂತ್ರ. ಅದನ್ನು ಬಿಟ್ಟು ಹೊರಗಿನ ಸಿಪ್ಪೆಯನ್ನೇ ಹಿಡಿದುಕೊಂಡರೆ ಪ್ರಯೋಜನವೇನು.

ಇನ್ನೊಂದು ಕಡೆ ಹೀಗಿವೆ :

> ಪುತ್ರಾಪೇಕ್ಷಿಗಳಾದ ಮನುಷ್ಯರು ಅದಕ್ಕಾಗಿ ಮಾಡಬೇಕಾದ 'ಶ್ರೀಮಂಥಕರ್ಮ' ಎನ್ನುವ ಕರ್ಮವೊಂದು ಹೇಳಲ್ಪಟ್ಟಿದೆ. ಆ ಕರ್ಮವನ್ನು ಮಾಡಿ ಆ ಜಲದಿಂದ ಒಣಗಿದ ಮೋಟು ಮರದ ಮೇಲೆ

ಚಿಮುಕಿಸಿದರೂ ಕೊಂಬೆಗಳು ಹುಟ್ಟುತ್ತವೆ, ಎಲೆಗಳು ಚಿಗುರುತ್ತವೆ ಎನ್ನುವುದು ಆ ಕರ್ಮಫಲ.' (180)

'ಅದನ್ನು ತನ್ನ ಪುತ್ರನಲ್ಲದವನಿಗೆ, ಅಥವಾ ಶಿಷ್ಯನಲ್ಲದವನಿಗೆ ಉಪದೇಶಿಸಕೂಡದು ಎಂದಿದೆ.' (180)

'ಮಂತ್ರ ಹೇಳಿದಾಗ ವೃಷಭ ಕಾಣಿಸಿಕೊಂಡಿತು.' (185)

'ನಿನಗೆ ಅದೃಷ್ಟವಿದ್ದರೆ ಮಂತ್ರಪ್ರಾಣನಾದ ದೇವತೆಗಳ ದರ್ಶನವೂ ಆಗಬಹುದು' (45)

'ಅವನು ನಡೆದು ಬರುವ ದಾರಿಯಲ್ಲಿ ಆ ಬಳ್ಳಿಗಳು ತಾವೇ ಹೂ ಚೆಲ್ಲುತ್ತಿವೆ' (229)

ಇಂತಹ ವಾಕ್ಯಗಳು ಮೊದಲೇ ಕಂದಾಚಾರಿಗಳಾದ ಮೂಢರನ್ನು, ಅವರು ಯಾರೇ ಆಗಿರಲಿ, ಭಾವನಾವಶರನ್ನಾಗಿಸಿ ಕಣ್ಣೀರು ತರಿಸಬಹುದು. ವೇದ ಮಂತ್ರಗಳನ್ನು ಕೇಳಿಸಿಕೊಂಡರೆ ಪಾಪ ತಟ್ಟುವುದಿಲ್ಲವೆಂದು ಗೃಹಪತಿಯಿಂದ ತಿಳಿದ ಜಬಾಲಿ 'ನಾನಿಂದು ಕೃತಾರ್ಥಳಾದೆ' ಎಂದು ಅಡ್ಡಬೀಳುತ್ತಾಳೆ. ಇಂತಹ ಭಾವುಕತೆಯಿಂದ ಏನೂ ಲಾಭವಾಗದು. ಕಡುಸಂಪ್ರದಾಯನಿಷ್ಠರು ಬೇಸರ ಪಡಬಹುದು (ಕೆಟ್ಟ) ಸಹಾನುಭೂತಿಯುಳ್ಳವರು ಅದ್ಭುತವೆಂದು ಕೂಗಬಹುದು, ಆಧುನಿಕ ವ್ಯಗ್ರಪಂಥಿ 'ವೇದಗಳನ್ನೇ ಬಿಸಾಡು' ಎಂದು ಸಿಪ್ಪೆಯೊಡನೆ ಹಣ್ಣನ್ನೇ ಎಸೆಯುವ ಕಾರ್ಯಕ್ಕೆ ಕೈ ಹಾಕಬಹುದು. ನಮಗೆ ಹಳೆಯದರ ನಿರೂಪಣೆಗೆ ಬದಲು ಹೊಸದರ್ಶನ ಬೇಕು. ಹೊಸದರ್ಶನ ನಮ್ಮ 'ಭಾಷೆ'ಯಲ್ಲಿರಬೇಕು. ವೇಷ, ಭೂಷಣ, ಮನೆ ಮುಂತಾದುವುಗಳ ಬಗ್ಗೆ ನವೀನಾಭಿರುಚಿಹೊಂದಿರುವ ಮನುಷ್ಯ ನವೀನ ರೀತಿಯ ಅಭಿವ್ಯಕ್ತಿಯನ್ನೂ ಬಯಸುತ್ತಾನೆ. ವಿದೇಶೀ ಕಾರಿನಲ್ಲಿ ಓಡಾಡುವ ಸ್ವಾಮಿ, ಬಾಬಾಗಳು 'ನಾವು ಇಚ್ಛಿಸಿದರೆ ಈಗಳಿಗೆಯಲ್ಲಿಯೇ ಇಲ್ಲಿಂದ ನೂರು ಮೈಲು ದೂರದ ಸ್ಥಳದಲ್ಲಿ ಕಾಣಿಸಿಕೊಳ್ಳಬಲ್ಲೆವು' ಎಂದು ಭಾಷಣ ಮಾಡಿ, ಅನಂತರ ಅದೇ ಕಾರಿನಲ್ಲಿ ಕುಳಿತು ಪ್ರಯಾಣ ಮಾಡಿದರೆ ಏನನ್ನಿಸುತ್ತದೆಯೋ, ಅಂತಹ ಅನಿಸಿಕೆ ಮೇಲಿನ ವಾಕ್ಯಗಳನ್ನು ಓದಿದಾಗ ಮೂಡುತ್ತದೆ. ಸಾಧಕನಿಗೆ ಯಾವ ಹೊರಗಿನ ದರ್ಶನವೂ ಆಗುವುದಿಲ್ಲ, ಏನಿದ್ದರೂ ಅನುಭವೈಕಗಮ್ಯ. ನಾವು ಪಡೆದುಕೊಂಡ ಸತ್ಯ ಸಾಕ್ಷಾತ್ಕಾರವನ್ನೂ ಸಹ ಇತರರಿಗೆ ಸಾಬೀತುಮಾಡಿ ತೋರಿಸಲಾರೆವು. 'ಶ್ರೀಮಂಥಕರ್ಮ'ವನ್ನು ಮಾಡಿದರೆ ಮಕ್ಕಳಾಗುವುದಾದರೆ, ಇಂದೂ ಸಹ ನೂರಾರು ಗಂಡಹೆಂಡಿರು ಏಕೆ ಸಂತಾನಹೀನರಾಗಿ ಉಳಿದಿದ್ದಾರೆ. ಅವರು ತೀರ್ಥಯಾತ್ರೆ, ವ್ರತಗಳು, ಜಗದ್ಗುರುಪೂಜೆ, ಹುಂಡಿ ಸಮರ್ಪಣೆ ಮುಂತಾದುವುಗಳನ್ನು ಯಥೇಚ್ಛವಾಗಿ ಮಾಡಿದರೂ ಏಕೆ ಮಕ್ಕಳಾಗುವುದಿಲ್ಲ. ದೈಹಿಕ ದೋಷವನ್ನು ಯಾವ ಮಂತ್ರವೂ ಸರಿಪಡಿಸಲಾಗದೆಂದು ಹೇಳಿದರೆ ಮಂತ್ರಕ್ಕೆ ಅಪಮಾನವಾಗಲಾರದು. ಏನೆಂದರೆ ಮಂತ್ರವಿರುವುದು ಸತ್ಯವನ್ನು ಕುರಿತು ಮನನ ಮಾಡುವುದಕ್ಕಾಗಿ. ಜನರು ಲಂಚಕೊಟ್ಟು ಕೊಟ್ಟು "ದೇವರು" ಎಂಬ ವ್ಯಕ್ತಿ

ಯನ್ನು ಕಲ್ಪಿಸಿಕೊಂಡು, ಆತನಿಗೂ ಲಂಚಕೊಡುವುದರಲ್ಲಿ ಹಗಲಿರುಳೂ ತೊಡಗಿದ್ದಾರೆನ್ನುವುದು ಈ ದೇಶದ ಚಿಂತಾಜನಕ ಸ್ಥಿತಿಯನ್ನು ಸೂಚಿಸುತ್ತದೆ. ಉಪನಿಷತ್ತುಗಳ ನಚಿಕೇತನಾಗಲೀ, ಸತ್ಯಕಾಮನಾಗಲೀ, ರೈಕ್ವನಾಗಲೀ ತಮ್ಮ ನಿಜವಾದ ರೂಪದಲ್ಲಿ ನಮಗೆ ಕಾಣಿಸದಂತೆ ಮಾಡಿರುವವರು ನಮ್ಮ ಅಧೋಗತಿಗೆ ಕಾರಣರಾಗಿದ್ದಾರೆ. ಇಂತಹ ಅಪಾಯವನ್ನು ಕಂಡ ಲೇಖಕರು ಈ ಕಾದಂಬರಿಯಲ್ಲಿ ಒಳ್ಳೆಯ ಪ್ರಯತ್ನ ಮಾಡಿದ್ದರೂ, ಸುಳಿಗಳಿಂದ ಪಾರಾಗಲಾರದೆ ಸಿಕ್ಕಿ ಬಿದ್ದು ಓದುಗರನ್ನು ಸರ್ವೋತ್ತಮ ನೆಲೆಗಟ್ಟಿಗೆ ಕೊಂಡೊಯ್ದು ಮುಟ್ಟಿಸಲಾರದೆ ಹೋಗಿದ್ದಾರೆ. ಕಾದಂಬರಿ ಹಲವಾರು ಗುಣಗಳಿಂದ ಕೂಡಿಲ್ಲವೆಂದು ಹೇಳುತ್ತಿಲ್ಲ. ಸಾಹಿತ್ಯಕ ಲಕ್ಷಣಗಳು ಖಂಡಿತವಾಗಿಯೂ ಇವೆ. ಉಪನಿಷತ್ತಿನ ವಾಣಿಯೂ ಇದೆ. ವಾಣಿ ನಾಗವೇಣಿಗೆ ಸೋತಿತೆಂಬಂತೆ ಕಂದಾಚಾರದ ಮಾತುಗಳು, ಅವತ್ತಿನ ನಂಬಿಕೆಗಳಿಗೆ ಅನುಗುಣವಾದ ಧೋರಣೆ, ರಾಜಿ ಮನೋಭಾವ ಮುಂತಾದುವು ಈ ಕಾದಂಬರಿಯನ್ನು ಕಲುಷಿತಗೊಳಿಸಿವೆ. ಅದ್ದರಿಂದ ಒಮ್ಮೆ ಅನುಮಾನ ಸಹೃದಯನ ಮನಸ್ಸನ್ನು ತಟ್ಟಿತೆಂದರೆ, ಕಾದಂಬರಿಯಲ್ಲಿ ಬರುವ ಕೆಲವು ಸುಧಾರಣ ಪ್ರಯತ್ನಗಳು ಚತುರ್ನಾದವಾದಿಯ ತಂತ್ರದಂತೆ ಕಂಡು ಬಿಡುತ್ತವೆ. ಇಲ್ಲಿ ಲೇಖಕರ ಪ್ರಯತ್ನದಲ್ಲಿ ದೋಷವನ್ನು ಹುಡುಕುತ್ತಿಲ್ಲ, ಕೃತಿಯಲ್ಲಿ ಕಂಡು ಬರುವ ಇಂತಹ ಅಂಶಗಳನ್ನು ಗುರುತಿಸುವ ಪ್ರಯತ್ನವಷ್ಟೆ. ಬ್ರಾಹ್ಮಣ ಯಾರು, ಶ್ರೇಷ್ಠರು ಯಾರು, ಶೂದ್ರನು ಏಕೆ ಕನಿಷ್ಠ, ಮನುಸ್ಮೃತಿಯಲ್ಲಿ ತಪ್ಪಿಲ್ಲವೆ, ಮುಂತಾದುವು ಇಂದು ವಿಜ್ಞಾನದ ಬೆಳಕಿನಲ್ಲಿ ವಾದಕ್ಕೂ ವಿಷಯಗಳಾಗದೆ ದೌಡಾಯಿಸಿವೆ. ಅಂತಹವುಗಳನ್ನು ಕಾದಂಬರಿಯಲ್ಲಿ ಚರ್ಚಿಸಿ ಸ್ಥಾಪಿಸಬೇಕಾದುದಾದರೂ ಯಾವುದನ್ನು. ?

ಕಡೆಯದಾಗಿ, ಸತ್ಯಕಾಮನು ಹಸುಗಳನ್ನು ಮೇಯಿಸುವುದರಲ್ಲಿ ಮಗ್ನನಾಗಿದ್ದುದು ಕರ್ಮಯೋಗದ ಸಂಕೇತವೇ ಎಂಬುದು ಸ್ಪಷ್ಟವಾಗಿಲ್ಲ. ಆತನ ಸಾಧನೆಯ ಮಾರ್ಗ ಯಾವುದು. ವಾಸನಾಕ್ಷಯ ಹೇಗಾಯಿತು. ಮನಸ್ಸು + ಬುದ್ಧಿ (ಚಿತ್ತ) ಎರಡೂ ಶುದ್ಧವಾದದ್ದು ಹೇಗೆ, ಶುದ್ಧ ಚಿತ್ತ ಬ್ರಹ್ಮದಲ್ಲಿ ಲೀನವಾಯಿತೆ, ಮುಂತಾದ ವಿಚಾರಗಳನ್ನು ಕಾದಂಬರಿ ತಿಳಿಸುವುದಿಲ್ಲ. ಯಾಂತ್ರಿಕವಾಗಿ ಯಜ್ಞಕುಂಡವನ್ನು ಜೀವಂತವಾಗಿಡುವಷ್ಟರಿಂದಲೇ ಎಲ್ಲವೂ ಸಾಧ್ಯವಾಗುತ್ತದೆಯೇ ? ದಾಸೀಪುತ್ರ, ಜಾರಪುತ್ರನಾದವನು ಬ್ರಹ್ಮನಿಷ್ಠನಾದನೆಂದು ಹೇಳುವುದೇ ಒಂದು ದೊಡ್ಡ ವಿಷಯವಾಯಿತೆ? ಬ್ರಹ್ಮಜ್ಞಾನಿಯಾಗುವುದಕ್ಕೂ ಬ್ರಹ್ಮನಿಷ್ಠನಾಗುವುದಕ್ಕೂ ವ್ಯತ್ಯಾಸವಿದೆ; ಹಾಗಾದರೆ ಸತ್ಯಕಾಮನು ಬ್ರಹ್ಮಜ್ಞಾನಿಯಾಗದೆ ಬ್ರಹ್ಮನಿಷ್ಠನಾದನೆಂದು ಹೇಳೋಣವೇ (Experience ಮತ್ತು Expression ಇದ್ದಂತೆ) ಕೆಲವೊಮ್ಮೆ ಕಾರ್ಯವನ್ನು ಸಾಧಿಸಿದವನು ತನ್ನ ಸಾಧನೆಯ ಬಗ್ಗೆ ಅಶ್ಚರ್ಯಸೂಚಿಸುತ್ತಾ ಹೇಗೆ ಸಾಧ್ಯವಾಯಿತೋ ತಿಳಿಯೆನು ಎಂಬಂತೆ ಸತ್ಯಕಾಮನಿಗೆ ಧಿಡೀರ್ ಅನುಭೂತಿಯು ಸಾಧ್ಯವಾದುದು ಹೇಗೆಂಬುದು ಸಹೃದಯರ ಗಮನಕ್ಕೆ ಬರುವ ಪ್ರಶ್ನೆಯಾಗುತ್ತದೆ. ರಾಜಕೀಯ ಕ್ಷೇತ್ರ

ದಲ್ಲಿ ಆಗಾಗ್ಗೆ 'ಹರಿಜನ ಮುಖ್ಯಮಂತ್ರಿಯಾಗಲಿ, ಹರಿಜನ ಪ್ರಧಾನಿಯಾಗಲಿ, ರಾಷ್ಟ್ರಪತಿಯಾಗಲಿ ಎಂದು ಜಗತ್ ಭವ್ಯ ಘಟನೆಯೆಂಬಂತೆ ಭಾವಿಸುವವರುಂಟು. ಸತ್ಯಕಾಮನನ್ನು ಹಾಗೆ ಒಂದು ಉನ್ನತ ಪದವಿಗೇರಿಸಿ ನಮ್ಮ ಔದಾರ್ಯವನ್ನು ಪ್ರಕಟಿಸಬೇಕಾದ ಅವಶ್ಯಕತೆಯಿಲ್ಲ, ಸಾಧನೆಯಿಂದ ಅರ್ಹತೆಗಳಿಸಿ ಅಧಿಕಾರ ಪಡೆಯಲು ಮುಕ್ತವಾದ ಅವಕಾಶವಿರುವಂತೆ ಮಾಡಬೇಕಾದುದೇ ನಿಜವಾದ ಮನುಷ್ಯಧರ್ಮ. ವರ್ಣವ್ಯವಸ್ಥೆಯ ವಿಚಾರವನ್ನು ಬಿಟ್ಟು, ಪವಾಡ ಸದೃಶಘಟನೆಗಳನ್ನು ತಿರಸ್ಕರಿಸಿ ಪುರಾಣ ಸಹಜ ಹೇಳಿಕೆಗಳನ್ನು ತ್ಯಜಿಸಿ ಶುದ್ಧ ವೈಜ್ಞಾನಿಕ ಮಾರ್ಗವನ್ನು ಅನುಸರಿಸಿ ಸತ್ಯಕಾಮನ ಸಾಧನೆ, ಸಿದ್ಧಿಗಳನ್ನು ನಿರೂಪಿಸಿದ್ದರೆ ಕೃತಿಯ ಮೌಲ್ಯ ಹೆಚ್ಚುತ್ತಿತ್ತೆಂದು ಭಾವಿಸಿದ್ದೇನೆ.

ನಾನು ಮೆಚ್ಚಿದ ಕಾದಂಬರಿ : ಕೇದಗೆವನ

— ಡಾ|| ಎಸ್. ಎಂ. ವೃಷಭೇಂದ್ರಸ್ವಾಮಿ

ತ.ರಾ.ಸು. ಅವರ ಕೃತಿ ಎಂದಕೂಡಲೇ, ಕಾವ್ಯಮಯ ಶೈಲಿ, ಸಮಾಜದ ಸಮಸ್ಯೆಗಳ ಸಮಷ್ಟಿದೃಷ್ಟಿ, ಮನೋವಿಶ್ಲೇಷಣೆ, ತಂತ್ರನಾವೀನ್ಯತೆಗಳನ್ನೇ ಹಾರೈಸಿ ಓಡುತ್ತದೆ ನನ್ನ ಮನಸ್ಸು. ಕನ್ನಡ ಗದ್ಯದ ನಿಜವಾದ ಹೃದಯವನ್ನು ಹಿಡಿದು ಬೇಕಾದಂತೆ ಪಳಗಿಸಿಕೊಂಡ ಕಮ್ಮಿಕೈ ಅವರದು. ಕನ್ನಡ ನುಡಿಯ ಕಂಪು, ಗಾಂಭೀರ್ಯ, ಗಾರುಡಿಗಳಿಗೆತ್ತಿದ್ದ ಕನ್ನಡಿ ತ.ರಾ.ಸು. ಅವರ ಶೈಲಿ. ಕಥೆಗಳನ್ನು ಹೇಳುವ ಕಾದಂಬರಿಗಳು ಕನ್ನಡದಲ್ಲಿ ಬೇಕಾದಷ್ಟಿವೆ. ಅವರೆ ಸಿಕ್ಕುಬಿದ್ದ ಸಮಸ್ಯೆಗಳನ್ನು ಎತ್ತಿಕೊಂಡು, ಹಿಂಜಿ, ಸಮಷ್ಟಿ ದೃಷ್ಟಿಯಿಂದ ವೀಕ್ಷಿಸಿ, ತಲಸ್ಪರ್ಶಿಯಾದ ವಿಮರ್ಶೆಮಾಡಿ, ಹೌದೆನ್ನುವಂತೆ ರಚಿತವಾದ ಕಾದಂಬರಿಗಳು ಅತಿ ವಿರಳ, ಅಂಥ ಕೃತಿರಚನೆಯ ಅಪೂರ್ವಶಕ್ತಿ ತ.ರಾ.ಸು. ಅವರಿಗಿದೆ. ಮನೋವಿಶ್ಲೇಷಣೆಯನ್ನು ಹಾಸುಹೊಕ್ಕಾಗಿ ತಂದು, ಪಾತ್ರಗಳ ಮನಸ್ಸಿನ ಪದರು ಪದರುಗಳನ್ನು ನಯವಾಗಿ, ನವಿರಾಗಿ ಬಿಡಿಸಿ ತೋರಿಸುವ ವೈಜ್ಞಾನಿಕ ಬುದ್ಧಿಮತ್ತೆ ಅವರಿಗಿದೆ. ಕನ್ನಡ ಕಾದಂಬರಿ ಪ್ರಪಂಚದಲ್ಲಿ, ಇಂಗ್ಲಿಷ್ ಸಾಹಿತ್ಯದಲ್ಲಿ ಕಂಡುಬರುವ ಎಲ್ಲ ತಂತ್ರಗಳನ್ನೂ ತಮ್ಮದೇ ಆದ ತಂತ್ರದಿಂದ ತಂದುಕೊಂಡು, ಹೊಂದಿಸಿಕೊಂಡು, ಮೋಹಕ ಕೃತಿರಚನೆ ಮಾಡಿದ ಕೀರ್ತಿ ತ.ರಾ.ಸು. ಅವರದು. ಇತ್ತೀಚಿಗಿನ ಅವರ ಕೃತಿಗಳು ಮೇಲಿನ ಗುಣಕಥನಕ್ಕೆ ಸಾಕ್ಷಿ ಹೇಳುತ್ತವೆ. 'ಕೇದಗೆವನ' ಅಷ್ಟೊಂದು ಯಶಸ್ವಿ ಕೃತಿಯಲ್ಲದಿದ್ದರೂ ಸೊಗಸಾಗಿ, ಬೋಧಪ್ರದವಾಗಿ, ವಿವರಣಾತ್ಮಕವಾಗಿ ಚಿತ್ರಿಸಿರುವ ಕೃತಿ. ಇಲ್ಲಿನ ಸಮಸ್ಯೆ ಒಬ್ಬ ವ್ಯಕ್ತಿಯ ಸಮಸ್ಯೆಯಾಗಿರುವುದಲ್ಲದೆ, ಸಮಾಜದ ಸಮಸ್ಯೆಯಲ್ಲ. ಕಾರಣ, 'ಮಸಣದ ಹೂ' ವಿನಲ್ಲಿ ಕಂಡ ಸಾರ್ವತ್ರಿಕ ಸಮಸ್ಯೆಯ ಚಿತ್ರಣ ಇಲ್ಲಿ ಕಾಣದಿರುವುದು ಅನಿವಾರ್ಯ.

ಕಾದಂಬರಿಗೆ [illegible] ಅಲ್ಲಿನ ಕಥೆ ಅಥವಾ ವಸ್ತು. [illegible] ಒಂದು ಹಳ್ಳಿಯ ಶೆಟ್ಟಿಯ ಮಗನಾಗಿ ಹುಟ್ಟಿದ ರಾಜಶೇಖರ, ತಂದೆತಾಯಿಯರ ಮುದ್ದಿನ ಮುದ್ದೆಯಾಗಿ ಬೆಳೆದು, ವಿದ್ಯಾಭ್ಯಾಸಕ್ಕೆ ತೊಡಗುತ್ತಾನೆ. ಬೆಂಗಳೂರಿನಲ್ಲಿ ಇಂಟರ್ ಪರೀಕ್ಷೆ ಮುಗಿಸಿ 'ಯಾರದೋ ಕನಸು ಯಾರದೋ ಬಯಕೆ, ಮತ್ತಾರದೋ ಹೆಬ್ಬಯಕೆ' ತೀರಿಸಲು ಮೆಡಿಕಲ್ ಕಾಲೇಜು ಸೇರುತ್ತಾನೆ. ರಾಜಶೇಖರ ಏಕಾಂತ-ಜೀವಿ, ಅಥವಾ ನಿರುಪದ್ರವ ವ್ಯಕ್ತಿ. ಮೆಡಿಕಲ್ ಕಾಲೇಜಿನಲ್ಲಿರುವ ನೂರಾರು ಜಾರುವ ದಾರಿಗಳನ್ನು ತುಳಿಯದೆ, ಆದರ್ಶವತೇರನ್ನೇರುವ, ಗೋಪುರ ಕಟ್ಟಿ-ಕೊಳ್ಳುತ್ತಾನೆ. ವಿದ್ಯಾರ್ಥಿ ಗೆಳೆಯ ಶ್ರೀಧರನ ಆಸೆ, ಡಾ|| ನಂಬಿಯಾರರ ಹಿತ ವಚನ [illegible] ಹೆಬ್ಬಯಕೆ—ಇವು ರಾಜಶೇಖರನ ಆದರ್ಶವನ್ನು ರೂಪಿಸಿದ

ಶಕ್ತಿಗಳು. ಪುಸ್ತಕದ ಕ್ರಿಮಿಯಾಗಿದ್ದವನಿಗೆ, ಕಾತ್ಯಾಯಿನಿ ಎಂಬ ವಿದ್ಯಾರ್ಥಿನಿಯ ಒಲವಿನ ಕ್ರಿಮಿ, ಅವನ ಮೆದುಳನ್ನು ತೂತು ಮಾಡಿತು. ಒಲವೆಂಬ ಗಾಳಿಪಟದ ಬಾಲಂಗೋಚಿ ಹಿಡಿದು ಗಾಳಿಯಲ್ಲಿ ಹಾರಾಡಲು ಹೊರಟ. ರಾಜಕೀಯದಿಂದ ದೂರವಾಗಿರಲು ಹೊರಟ ರಾಜಶೇಖರನಿಗೆ ರಾಜಕೀಯವೇ ನರನಾಡಿಗಳಾಗಿರುವ ಕಾತ್ಯಾಯಿನಿ ದೊರೆತಳು. ಯೌವನದ ಆದರ್ಶದ 'ಮ್ಯಾನಿಯಾ' ರೋಗಿಗಳಾದ ರಾಜ, ಕಾತ್ಯಾಯಿನಿಯರು, ಅನಿವಾರ್ಯವಾಗಿ ಒಂದು ದಿನ ಅಗಲಬೇಕಾಯಿತು. ಈ ಒಲವೆಂಬ ಕಾಮನ ಬಿಲ್ಲಿಗೆ ಮರುಳಾದ ರಾಜ; ತಂದೆಯಿಂದ ದೂರವಾದ, ಮನಸ್ಸು ಮಾಡಿದ್ದರೆ ಕುಬೇರನ ಅಳಿಯನಾಗಬಹುದಾಗಿದ್ದುದನ್ನೂ ಕಾಲಿನಿಂದ ದೂಡಿದ ಆದರ್ಶ ಸಾಧನೆ (?) ಗಾಗಿ ಸರ್ವತ್ಯಾಗಕ್ಕೂ ಸಿದ್ಧನಾದ. ಈ ನವ ಪ್ರಣಯಿಗಳ ಜೀವನ ಆದರ್ಶಗಳಿಗೆ ಧ್ರುವಗಳ ಅಂತರ. ಇದು ಕಾದಂಬರಿಯ ತಡಿಕೆ.

ಇಲ್ಲಿ ರಾಜ ಮತ್ತು ಕಾತ್ಯಾಯಿನಿಯರೇ ಮುಖ್ಯ ಪಾತ್ರಗಳು. ಉಳಿದೆಲ್ಲ ಪರಿಪೋಷಕ ಪಾತ್ರಗಳು. ರಾಜನ ಜೀವನವನ್ನು ಸಾದ್ಯಂತವಾಗಿ ಚಿತ್ರಿಸಿದ್ದಾರೆ. ಇಂದಿನ ಸಮಾಜದ ಅನಿರ್ದಿಷ್ಟ ಆದರ್ಶದ ಬಿಸಿಲುಗುದುರೆಯನ್ನು ಏರಿಹೋಗುವ ನೂರಾರು ತರುಣರ ಸಜೀವ ಪ್ರತೀಕ ಈ ರಾಜ ಜೀವನದಲ್ಲಿ ಬರುವ ಅನಿವಾರ್ಯ ಸಮಸ್ಯೆಗಳಿದಿರು ನಿರ್ವೀರ್ಯನಾಗಿ ಬೇರೊಬ್ಬರನ್ನು ಕಾದು ಕುಳಿತುಕೊಳ್ಳಬೇಕಾದ ಸ್ಥಿತಿ ರಾಜನ ಹುಟ್ಟು ಮತ್ತು ಬೆಳವಣಿಗೆಯಲ್ಲೇ ಅಡಗಿದೆ. ಕಷ್ಟಗಳಿಗೆ ಮೈಯೊಡ್ಡಿದವನಲ್ಲ; ಬೇಲಿಯ ರಕ್ಷೆಯಲ್ಲಿ ಬೆಳೆದ ಬಾಳೆಯಗಿಡ ಅವನು. ಬೇಲಿ ತೆರೆದಾಗ ಪ್ರತಿಯೊಂದು ಕಿರುಗಾಳಿ ಬಿರುಗಾಳಿಗಳಿಗೂ ಜಡಪಡಿಸಿದವನು. ಕಾರಣ ಅವನ ಅನಿರ್ದಿಷ್ಟತೆ, ನಿರ್ವೀರ್ಯತೆ ಸಹಜವಾದುದು. ಕಾತ್ಯಾಯಿನಿ ನಮ್ಮ ಸಮಾಜದಲ್ಲಿ ಅಪರೂಪವಾಗಿ ಕಾಣಬಹುದಾದ ಹೆಣ್ಣು. ಕಮ್ಯೂನಿಸಂ ತಲೆಗೇರಿಸಿಕೊಂಡ ಅವಳು ಮೆಡಿಕಲ್ ಕಾಲೇಜಿಗೆ ಏಕೆ ಬಂದಳೋ ತಿಳಿಯದು. ಜೊತೆಗೆ 'ಕಮ್ಯೂನಿಸಂ' ಅವಳಿಗೆ ಹೇಗೆ, ಏಕೆ ಹಿಡಿಯಿತೆಂಬುದರ ಸ್ಪಷ್ಟ ಸೂಚನೆಯಿಲ್ಲ. ಅವಳ ಮನೆಯವರಿಗೂ ಅವಳಿಗೂ ಇದ್ದ ಸಂಬಂಧವೂ ವಿಚಿತ್ರವಾದುದು. ಕಾತ್ಯಾಯಿನಿ ತಾನು ಸ್ವತಂತ್ರಳೆಂದು ತಿಳಿದು 'ಗಂಡಾ' ದವಳು. ವರ್ಗಕಲಹದ ಬಗ್ಗೆ ಧಾರಾಳವಾಗಿ ಮಾತನಾಡುತ್ತಿದ್ದಳಲ್ಲದೆ, ಆ ಬಗ್ಗೆ ಯಾವ ಕೃತಿಯನ್ನೂ ಕೈಕೊಂಡಂತೆ ಕಾಣಲಿಲ್ಲ. ಅಥವಾ ಕೈಕೊಳ್ಳಬಹುದಾದ ಮಾರ್ಗದ ಸೂಚನೆಯೂ ಇಲ್ಲ. ಕಮ್ಯೂನಿಸ್ಟರು ಒಪ್ಪಲಾರದ ಪ್ರೇಮದ ಶಾಶ್ವತತೆಯನ್ನು ಮಾತ್ರ ಒಪ್ಪಿದಂತೆ ನಟಿಸುವವಳು; ಅದನ್ನು ಹೇಗೆ ಸಾಧಿಸುತ್ತಾಳೋ ನೋಡಬೇಕು. ರಾಜನ ಗೆಳೆಯ ಶ್ರೀಧರ ಇತರರ ಮನಮೆಚ್ಚುವಂತೆ ಬೋಧನೆ ಮಾಡುತ್ತಿದ್ದನಲ್ಲದೆ, ಏನು ಸಾಧನೆ ಮಾಡಿದನೋ ತಿಳಿಯದು. ಗಾಳಿಗೊಡ್ಡಿದ ತರಗೆಲೆಯಾಗಿದ್ದಾನೆ ಅಷ್ಟೇ. ಉಳಿದ ಪಾತ್ರಗಳು ತಮ್ಮ ಕೆಲಸ ತಾವು ಮಟ್ಟಸವಾಗಿ ಮುಗಿಸಿವೆ.

ಇಲ್ಲಿನ ತಂತ್ರ, ಹಲವು ತಂತ್ರಗಳನ್ನೊಳಗೊಂಡ ಏಕತಂತ್ರ. ರಾಜ ಮೆಡಿಕಲ್ ಕಾಲೇಜು ಸೇರಿದಾಗ ಪ್ರಾರಂಭವಾಗಿ ಅವನ ಹಿಂದಿನ ಜೀವನವನ್ನು ಪೂರ್ವಸ್ಮೃತಿ ತಂತ್ರದಲ್ಲಿಯೂ. ಮೆಡಿಕಲ್ ಕಾಲೇಜಿನ ಜೀವನದ ಕೆಲವಂಶಗಳನ್ನು ಓಲೆ ಪಾರೋಕೆಗಳ ತಂತ್ರದಲ್ಲಿಯೂ, ರಾಜ ಮತ್ತು ಕಾತ್ಯಾಯಿನಿಯರ ಸಂಬಂಧವ ಸಂಗತಿಯನ್ನು ದಿನಚರಿ ಹಾಗೂ ಆತ್ಮವೃತ್ತದ ತಂತ್ರದಲ್ಲಿಯೂ ಸೆಯ್ದಿದ್ದಾರೆ. ಈ ತಂತ್ರವೈವಿಧ್ಯ ಮನೋವಿಶ್ಲೇಷಣೆಗೂ, ಕಥೆಯ ತರಂಗಿತ ಓಟಕ್ಕೂ ಸಹಾಯ-ಕಾರಿಯಾಗಿದೆ. ಒಮ್ಮೊಮ್ಮೆ ಈ ತಂತ್ರ ವೈವಿಧ್ಯ ಹಾಡಿಗಿಂತ ಅಭಿನಯ ಜಾಸ್ತಿ ಎನ್ನುವಂತಾಗಿದೆ. ಪಾತ್ರಗಳು ಬಹುದೀರ್ಘ; ದಿನಚರಿ 'ವರ್ಷಚರಿ'ಯಾಗಿದೆ.

ತ.ರಾ.ಸು. ಚಿತ್ರಿಸಲಿರುವ 'ಜೀವನದ ಆದರ್ಶ'ವೇನು ಎಂಬುದಕ್ಕೆ ಇಲ್ಲಿ ಉತ್ತರ ದೊರೆಯದು. ಈ ಭಾಗದಲ್ಲಿ ಸಮಸ್ಯೆ ಅರಳಿದೆ, ಬರೆಯಲಾಗವುದೆಂದು ತಿಳಿಸಿರುವ ಮುಂದಿನ ಭಾಗದಲ್ಲಿ ಹೇಗೆ ಹಣ್ಣಾಗುವುದೋ ನೋಡಬೇಕು.

ಇಲ್ಲಿನ ಭಾಷಾ ಶೈಲಿಯ ಬಗ್ಗೆ ಒಂದು ಮಾತು ಹೇಳಬೇಕು. ಎಂದಿನ ಪಾದರಸ ಗತಿಯಿದೆ. ಅಲ್ಲಲ್ಲಿ ಬರುವ ವರ್ಣನೆಗಳು ಕವಿಹೃದಯದ ಉತ್ಕಂದ ಗಳಾಗಿವೆ. ಮನೋವಿಶ್ಲೇಷಣೆ ಸಮರ್ಪಕವಾಗಿದೆ. ಒಂದು ದೃಷ್ಟಿಯಿಂದ ಈ ವಿಶ್ಲೇಷಣೆ ಯೋಗ್ಯವೆನಿಸಿದರೂ, ಓದುಗರ ಊಹೆಗೇ ಬಿಟ್ಟು. ಕಲಾತ್ಮಕವಾಗಿ ಮಾಡಬಹುದಾದ ಭಾಗಗಳನ್ನು ವಿಶದೀಕರಿಸಿದಾಗ, ಓದುಗನ ಕಲ್ಪನೆ ಐಸ್‌ಕ್ರೀಮ್ ತಿಂದ ನಾಲಿಗೆಯಂತಾಗುವ ಸಂಭವವಿದೆ. ಕಲೆ ವಿವರಣಾತ್ಮಕವಾಗಿರುವುದಕ್ಕಿಂತ ಸೂಚ್ಯವಾಗಿದ್ದರೆ ಮೇಲು, ಯೋಗ್ಯ, 'ಕೇದಗೆವನ' ಎಂಬ ಹೆಸರು ಧ್ವನಿಪೂರ್ಣ ವಾಗಿ ಸಾರ್ಥಕವಾಗಿ ಬಂದಿದೆ. ಸಿಗರೇಟಿನ ಹೊಗೆಯಿಂದ ಪ್ರಾರಂಭವಾಗಿ ಸಿಗರೇಟಿನ ಹೊಗೆಯಲ್ಲಿ ಅಂತ್ಯವಾಗುವುದರಲ್ಲಿ ಏನಾದರೂ ಧ್ವನಿ ಇದ್ದೀತೆ? ಅಥವಾ ಆಕಸ್ಮಿಕವೆ? ಕಾಲೇಜ್, ಹಾಸ್ಟಲುಗಳು ಜಾತೀಯ ಜಗಳದ ಚಿತ್ರಣ ಇನ್ನಷ್ಟು ರೌದ್ರವಾಗಿರಬೇಕು ಎನಿಸುತ್ತದೆ.

ಹೀಗೆ ವಸ್ತು, ಪಾತ್ರ, ತಂತ್ರ, ಜೀವನದ ಆದರ್ಶ, ಈ ಕೋನಗಳಿಂದ ವೀಕ್ಷಿಸಿದಾಗ 'ಕೇದಗೆವನ" ಒಂದು ಕಾದಂಬರಿ' ಅದಕ್ಕಾಗಿಯೇ ನನಗದು ಮೆಚ್ಚಿನ ಕೃತಿ.

ಎರಡು ಕಾದಂಬರಿಗಳು

— ಡಾ|| ಸಾ. ಶಿ. ಮರುಳಯ್ಯ

ಒಂದು: ಜೀತದ ಜೀವ;
ಮತ್ತೊಂದು – ಅಗ್ನಿರಥ – ಮುಕ್ತಿಪಥ.

ಎರಡೂ ಕಾದಂಬರಿಗಳನ್ನು ಒಟ್ಟಿಗೇ ಪರಿಚಯಿಸುವಲ್ಲಿ ಔಚಿತ್ಯವೇನೂ ಇಲ್ಲ. ಒಂದು ಭೂಮಿ ಮತ್ತೊಂದು ಆಕಾಶ. ಒಂದರ ನಾಯಕ ಜೀತದಾಳು ಮತ್ತೊಂದರ ನಾಯಕ ದೇವನಾಳು. ಇವೆರಡರಲ್ಲಿ ಸಾದೃಶ್ಯಕ್ಕಿಂತಲೂ ವೈದೃಶಗಳೇ ಬಹಳ. ವಸ್ತು, ವಿನ್ಯಾಸ, ಉದ್ದೇಶ, ಪರಿಣಾಮ ಎಲ್ಲವೂ ಬೇರೆ ಬೇರೆ. ಎರಡನ್ನೂ ಬರೆದ ಕೈ ಒಂದೇ ಎಂಬುದಷ್ಟೇ ಇವುಗಳಲ್ಲಿನ ಸಾಮ್ಯತೆ. ಪರಿಣತ ಹಸ್ತ ಹೇಗೆ ಪರಿಣಾಮಕಾರಿಯಾಗಿ ನಿರೂಪಿಸಬಲ್ಲದು ಎಂಬುದಕ್ಕೆ ಇವೆರಡೂ ನಿಂತ ಸಾಕ್ಷಿ. ಅಂದಾಕ್ಷಣಕ್ಕೇ ವಿಶಿಷ್ಟ ವಿಮರ್ಶೆ ನೀಡುವುದೂ ಈ ಲೇಖನದ ಉದ್ದೇಶವಲ್ಲ. ಪರಿಚಯ, ಕೇವಲ ಕಿರು ಪರಿಚಯ ಅಷ್ಟೆ.

ಜೀತದ ಜೀವ :

ಒಂದು ಸರಳ ಸಾಧಾರಣ ಸಾಮಾಜಿಕ ಕಾದಂಬರಿ. ಕಥೆಯ ಹಂದರ ಇದು:– ಜೋಗೇನಳ್ಳಿ ಬಡ ಪಾಲ ತನ್ನ ಮಗ ಓಬನನ್ನು ಕರೆತಂದು ಜೀತಕ್ಕಿಡುತ್ತಾನೆ. ನಗರದಲ್ಲಿದ್ದ ವೀರಭದ್ರಯ್ಯನ ಮನೆಯಲ್ಲಿ "ತಿಂಗಳಿಗಾರು ರೂಪಾಯಿ ಸಂಬಳ. ಎರಡೊತ್ತು ಊಟ, ವರ್ಷಕ್ಕೆ ಎರಡು ಜೊತೆ ಬಟ್ಟೆ ಕೊಡ್ತೀನಿ. ಸಂಬಳದ ದುಡ್ನ ಸಾಲಕ್ಕೆ ಮುರೇ ಹಾಕಿಕೊಳ್ತೀನಿ." ಮಾತುಕತೆ ನಡೆಯಿತು. ಮಗನನ್ನು ಕಳುಹಿಸುವಾಗ ಹೆಂಡತಿ ತಕರಾರು– '...ಹೆತ್ತೊಟ್ಟೆ ನಂದು ನಿಂಗೇನು ? ಜೀತಾ ಮಾಡಾಕೆ ಹಡೆದಿದ್ನಾ ಮಾರಾಜನಂತಾ ಮಗನ್ನ'—

'ಮಾರಾಜನ್ನ ಹಡೆದಿದ್ರೆ ನನ್ಗ್ಯಾಕೆ ಈ ಗಾಸಾರ—' ಇತ್ಯಾದಿ ಮಾತುಕತೆ ನಡೆದಿತ್ತು. ಆದರೆ ವಿಧಿಯಿಲ್ಲ. ಮಾಡಿದ ಸಾಲ ತೀರಿಸಲಿಕ್ಕೆ ಮಗ ಆಳಾಗಿ ದುಡಿಯಬೇಕು ಐದು ವರ್ಷಕಾಲ.

ಹಳ್ಳಿಮುಕ್ಕ ಓಬನಿಗೆ ಎಲ್ಲವೂ ಹೊಸದು. ನಗರದ ನಾಗರಿಕ ಜೀವನವನ್ನೇ ಕಂಡರಿಯದ ಮುಗ್ಧ. "ನಾಲಕ್ಕು ದಿನಾ ಆದರೆ ಪಳಗತಾನೆ. ಏನೋ ಓಬಾ, ಹೇಳಿದ ಕೆಲಸ ಮಾಡಿಕೊಂಡಿರ್ತೀಯೋ ?" —ಅಂತಾ ವೀರಭದ್ರಯ್ಯ ಕೇಳಿದಾಗ ಓಬ ಮಂಕಾಗಿ ಅವರಾಡುವ ಮಾತು ಕೇಳುತ್ತಿದ್ದ, ಕುರಿಯ ವ್ಯಾಪಾರವಾಗುತ್ತಿದ್ದಾಗ ಕುರಿ ಏನು ಹೇಳೀತು; ಓಬ ಏನೂ ಉತ್ತರ ಕೊಡಲಿಲ್ಲ.

ಅಪ್ಪ ಅಮ್ಮರ ವಾತ್ಸಲ್ಯದ ವಾತಾವರಣದಿಂದ ಹೊರಬಂದ ಓಬಾ ಹೊಸ ಸ್ಥಳದಲ್ಲಿ ಹೊಂದಿಕೊಳ್ಳುವುದು ಕಷ್ಟವೇ ಆಗುತ್ತೆ. ಆದರೆ ಅವನಿಗೆ ಆಸರೆಯಾಗಿ-

ದ್ದವನು ತನ್ನ ತಾಯಿಯನ್ನೇ ಮರೆಸಿದ ಮಮತೆ ಮೂರ್ತಿ ಅಂದರೆ ವೀರಭದ್ರಯ್ಯನ ಹೆಂಡತಿ ನೀಲಮ್ಮ. ಮಕ್ಕಳಿಲ್ಲದ ಆಕೆ ಅವನನ್ನು ಮಗನಂತೆ ಕಾಣುತ್ತಾಳೆ. ಸಲಹಿ ಕೊಳ್ಳುತ್ತಾಳೆ. ಆದರೆ ಅವರ ಮನೆಯಲ್ಲಿ ಮೊದಲೇ ಸೇರಿಕೊಂಡಿದ್ದ ಅಡುಗೆಯವಳು ಶಾಂತವೀರನಿಂದ ಮನೆ ಗೊಂದಲದ ಗೂಡಾಗುತ್ತದೆ. ಶಾಂತವೀರನಿಗೆ ವಿನಾ ಕಾರಣ ಕೋಪ ಈ ಹಳ್ಳೀ ಹುಡುಗನ ಬಗೆಗೆ. ಅಮ್ಮಾವರಿಂದ ಬಯ್ಯುತ್ತಾನೆ ಇದು ಕಾರಣದಿಂದ ಅವನನ್ನು ತುಂಬಾ ದ್ವೇಷಿಸಿ ಕಡೆಗೆ ಮನೆಯ ಅಶಾಂತಿ, ಅನಾಹುತಗಳಿಗೆ ಕಾರಣನಾಗುತ್ತಾನೆ. ಶಾಂತವೀರ ಒಂದು ದಿನ ಓಬನನ್ನು ಪೇಟೆ ಅಂಗಡಿಗೆ ಸಾಮಾನು ತರಲು ಕಳುಹಿಸುತ್ತಾನೆ. ಹುಡುಗ ಕಷ್ಟಪಟ್ಟು ಹುಡುಕುತ್ತಾನೆ. ಆಗ ಅವನಿಗೆ ನಗರದ ಕಿರುಪರಿಚಯ ಆಗುತ್ತೆ—ಹಗ್ಗ ಇಲ್ಲ, ಬಾವಿ ಇಲ್ಲ ಕೊಳಾಯಿನಲ್ಲಿ ಬರುತ್ತೆ ನೀರು–ಎಣ್ಣೆ ಇಲ್ಲ. ಬತ್ತಿ ಇಲ್ಲ, ಗುಂಡಿ ಒತ್ತಿದರೆ ಉರಿಯುತ್ತೆ ದೀಪ. ಹಾಡೋನಿಲ್ಲ ಬಾರಿಸೋನಿಲ್ಲ, ತನಗೆ ಹಾಡುತ್ತೆ ಪೆಟ್ಟಿಗೆ — ತಿಂಡಿ ಹೋಟಲು. ಮನೆಗಳ ಮೇಲೆ ಹತ್ತಿನಿಂತ ಮನೆಗಳು, ಕಾರು ಮೋಟಾರುಗಳ ಓಡಾಟ, ಜನದ ಗಡಿಬಿಡಿ — ಎಲ್ಲವೂ ಭ್ರಮೆ ಹುಟ್ಟಿಸುತ್ತವೆ ಅವನಲ್ಲಿ. ನಗರದರ್ಶನ ಮಾಡಿಸು ಓಬನಿಗೆ ಎಂದು ಅಮ್ಮಾವ್ರು ಹೇಳಿದರೂ ಕೇಳದ ಶಾಂತವೀರನ ಮೇಲೆ ರೇಗಾಟ ನಡೆದು ಮನೆಯಲ್ಲಿ ಎರಡು ಪಕ್ಷಗಳು— ಒಂದು ಯಜಮಾನ ವೀರಭದ್ರಯ್ಯ ಮತ್ತು ಶಾಂತವೀರ, ಇನ್ನೊಂದು ಯಜಮಾನಿ ನೀಲಮ್ಮ ಮತ್ತು ಓಬ— ಹೀಗಾಗಿ ಒಂದು ಸಣ್ಣ ಕಾರಣಕ್ಕಾಗಿ ಓಬ ಹಾಗೂ ನೀಲಮ್ಮ ಏಟು ತಿನ್ನುತ್ತಾರೆ, ವೀರಭದ್ರಯ್ಯನಿಂದ. ಮನೆ—ಶಾಂತಿ ಹಾಳಾಗುತ್ತೆ. ಇಷ್ಟಕ್ಕೂ ಮೂಲಕಾರಣ ಓಬನೇ ಎಂಬ ನಿರ್ಧಾರಕ್ಕೆ ಬರುತ್ತಾನೆ ವೀರಭದ್ರಯ್ಯ.

ಒಂದು ದಿನ ಹೆಂಡತಿ ನೀಲಾ ತನ್ನ ತೌರಿಗೆ ಹೋಗಬೇಕಾದಾಗ ವೀರಭದ್ರಯ್ಯ ಸಂತೋಷದಿಂದ ಕಳುಹಿಸಿ, ಹೆಂಡತಿಯ ಆಸರೆ, ಅನುರಾಗ ಇವುಗಳಿಂದ ದೂರನಾಗುತ್ತಾನೆ. ಅಷ್ಟರಲ್ಲಿ ಆ ಊರಿಗೆ ಶ್ರೀ ಬಸವರಾಜಾ ಕೃಪಾ ಪೋಷಿತ ನಾಟಕ ಕಂಪನಿ— ಹೀರೋಯಿನ್ ಶಾಂತಾಬಾಯಿ. ಕಂಪೆನಿ ಮಾಲೀಕ ಬಸವರಾಜಪ್ಪ ವೀರಭದ್ರಯ್ಯನವರನ್ನು ಸೆಳೆದು ಶಾಂತಾಬಾಯಿ ಬುಟ್ಟಿಗೆ ಹಾಕುತ್ತಾನೆ. ಐದುನೂರು ರೂಪಾಯಿಗಳಿಗೆ ಆಸೆಪಟ್ಟು ಧರ್ಮಪತ್ನಿಗೆ ದ್ರೋಹ ಮಾಡಿದೆ ಎಂದು ಪಶ್ಚಾತ್ತಾಪದಲ್ಲಿ ದಹಿಸಿ ಹೋಗುತ್ತಾನೆ ವೀರಭದ್ರಯ್ಯ.

ತಾಯಿಯಾಗಿದ್ದ ವಾತ್ಸಲ್ಯಮಯಿ ನೀಲಮ್ಮನ ಆಶ್ರಯ ತಪ್ಪಿದ ಓಬನಿಗೆ ವೀರಭದ್ರಯ್ಯನಿಂದ ಮತ್ತೊಂದು ದಿನ ಏಟು ಬೀಳುತ್ತದೆ. ಅಂದೇ ಅವನು ಮನೆ ಬಿಟ್ಟು ಹೊರಟುಹೋಗುತ್ತಾನೆ ತನ್ನ ಗಂಟು ಮೂಟೆಯೊಂದಿಗೆ. ಅಷ್ಟಿಗೆ ಮುಕ್ತಾಯವಾಗುತ್ತದೆ ಕಾದಂಬರಿ.

ವೀರಭದ್ರಯ್ಯ ಕಡು ಬಡುವ. ಚಿಕ್ಕಂದಿನಲ್ಲಿ ಬೇರೊಬ್ಬರ ಅಂಗಡಿಯಲ್ಲಿ ಗುಮಾಸ್ತನಾಗಿದ್ದವನು. ಅದರೆ ಅಂಗಡಿ ಯಜಮಾನರು ಹುಡುಗನಿಗೆ ಸ್ವಾವಲಂಬನೆ ಕಲಿಸಲು ಇಚ್ಛಿಸಿ ಸ್ವತಂತ್ರ ಜೀವನ ಸಾಗಿಸುವಂತೆ ಹೇಳಿ ಸ್ವಲ್ಪ ಬಂಡವಾಳ ಕೊಟ್ಟು ಗಿರಾಕಿಗಳನ್ನು ಹೊಂದಿಸಿಕೊಟ್ಟು ಬೇರೆ ಮಳಿಗೆ ತೆಗೆಸುತ್ತಾರೆ. ಚುರುಕು ಬುದ್ಧಿಯ ವೀರಭದ್ರಯ್ಯ ಮೇಲೆ ಬರುತ್ತಾನೆ. ಗಣ್ಯನಾಗುತ್ತಾನೆ. ಆದರೆ ಈ ಮಧ್ಯೆ ಕೆಟ್ಟ ಹೆಂಗಸಿನ ಸಹವಾಸಕ್ಕೆ ಬಿದ್ದು ಅರೋಗ್ಯ ಕೆಡಿಸಿಕೊಂಡಿರುತ್ತಾನೆ. ಮತ್ತೆ ಅಕೆಲಸಕ್ಕೆ ಹೋಗಬಾರದು ಅನ್ನಿಸಿರುತ್ತ. ನೀಲಮ್ಮನನ್ನು ಲಗ್ನವಾದ ಮೇಲೆ ಅವಳಿಗೊಂದು ವಿಚಿತ್ರ ಮಗು ಹುಟ್ಟಿ, ಆಪರೇಷನ್ ಮಾಡಿತೆಗೆದು ತಾಯಿಯನ್ನು ಉಳಿಸಬೇಕಾಗುತ್ತದೆ. ಅದರೆ ನೀಲಮ್ಮನಿಗೆ ಮುಂದೆ ಮಕ್ಕಳಾಗುವ ಸಂಭವವೇ ಇಲ್ಲವಾಗುತ್ತದೆ. ಇದರಿಂದ ನೀಲಮ್ಮನಿಗೆ ಓಬನನ್ನು ಕಂಡರೆ ಸಹಜವಾದ ವಾತ್ಸಲ್ಯ ಮೂಡುತ್ತದೆ.

ಮಂನಶ್ಶಾಸ್ತ್ರೀಯವಾದ ವಿನ್ಯಾಸ ರೂಪಗೊಂಡಿದೆ ಇಲ್ಲಿ. ಜೀತ ಪದ್ಧತಿಯ ದೈತ್ಯರೂಪು ಇಲ್ಲಿ ಕಾಣಿಸುವುದಿಲ್ಲ. ಸಣ್ಣ ಕಥೆ ಒಂದು ಕಾದಂಬರಿಯಾಗಿದೆ ಅನ್ನಿಸುತ್ತೆ. ಕಾದಂಬರಿ—

ದೊಡ್ಡದಲ್ಲ. ಚಿತ್ರ ದಟ್ಟವಾಗಿ ಮೂಡಿಲ್ಲ. ಓಬನ ಪಾತ್ರಕ್ಕೆ ಪೂರ್ಣತೆ ಸಿಕ್ಕಿಲ್ಲ. ಕೇವಲ 5-6 ಪಾತ್ರಗಳಲ್ಲಿ ನಾಟಕ ಮುಗಿಯುತ್ತದೆ. ಏಕಾಂಕ ಇದು, ಅನೇಕಾಂಕ ಅಲ್ಲ. ನೀಲಮ್ಮ ವೀರಭದ್ರಯ್ಯ ಇವರ ವರ್ತನೆ, ಪರಿವರ್ತನೆಗಳು ವೈಜ್ಞಾನಿಕವಾಗಿ ಇವೆ. ಮನಶ್ಶಾಸ್ತ್ರಕ್ಕೆ ಕಾದಂಬರಿಕಾರ ಅಂಟಿಕೊಂಡಿದ್ದುದರಿಂದಲೇ ಕಲೆಯ ಪಾಕ ಕೆಟ್ಟಿದೆ ಎನ್ನಬಹುದು. ಮನಶ್ಶಾಸ್ತ್ರಕ್ಕೆ ಮೀರಿದ ಒಂದು ಮಾನವೀಯ ಧರ್ಮ ಇದೆ. ಅವರ ಕಡೆಗೆ ಕಣ್ಣು ಮುಚ್ಚಿರುವುದು ಕಾದಂಬರಿ ಕೊರತೆಗೆ ಕಾರಣವಾಗಿದೆ. ಜೀತಪದ್ಧತಿ ವಿಷಯದಲ್ಲಿ ಅನುಭವ ಬೇಕು.

ಅಗ್ನಿರಥ – ಮುಕ್ತಿಪಥ

ಅಪರೋಕ್ಷ ಜ್ಞಾನಿ ವಿರಾಗಿ ಅಲ್ಲಮಪ್ರಭುವಿನ ಅಧ್ಯಾತ್ಮ ಜೀವನಕ್ಕೆ ಸಂಬಂಧಿಸಿದ ಕಥೆ. ಈ ಕಾದಂಬರಿಯ ವಸ್ತು. ಅಲ್ಲಮಪ್ರಭು ಕೇವಲ ವೀರಶೈವ ಧಾರ್ಮಿಕ ಗುರುವಷ್ಟೇ ಅಲ್ಲ, ಕನ್ನಡಿಗರ ಕುಲಗುರು. ಅವನ ವಚನಗಳು ಸಕಲ ಧರ್ಮಸಾರ, ಅವನ ಕಾಲ – ದೇಶ, ಮತಾತೀತಜ್ಞಾನ. ಅಧ್ಯಾತ್ಮಿಕ ಸ್ತರದಲ್ಲಿ ಬಹು ಎತ್ತರಕ್ಕೇರಿದ್ದ ವ್ಯಕ್ತಿ. ಭಕ್ತಿ, ಜ್ಞಾನ, ವೈರಾಗ್ಯಗಳಲ್ಲಿ ವ್ಯೋಮ ಮೂರುತಿ. ಇಂತಹ ಮಹಾ ಚೇತನದ ಲೀಲಾರೂಪಿಯ ಜೀವನ ಕಲಾತ್ಮಕವಾಗಿ ಕಂಡರಿಸಲ್ಪಟ್ಟಿದೆ ಇಲ್ಲಿ.

ನಾಗರಬಂಡದ ಬಳ್ಳಿಗಾವೆ ಅಲ್ಲಮನ ಮಟ್ಟೂರು. ಅರಸು ಮಕ್ಕಳಿಗೆ ನೃತ್ಯಕಲಿಸುತ್ತಿದ್ದ ನಿರಹಂಕಾರಯ್ಯನ ಮಗ. ಆದರೆ ಕುಲ ಕಸುಬಿಗೆ ಮಗ ಅಂಟಿಕೊಳ್ಳಲಿಲ್ಲ. ನಾಗಾವಾಸದ ಅಧಿಪತ್ಯಕ್ಕೆ ಬೇಕಾದ ಶಿಕ್ಷಣ ಅವನಿಗೆ ಇಷ್ಟವಾಗಲಿಲ್ಲ. ವೇದವೇದಾಂತಗಳನ್ನು ಅಭ್ಯಾಸ ಮಾಡಿ ಸಕಲ ವಿದ್ಯಾಪಾರಂಗತನಾದ. ಅಷ್ಟೇ ವೈರಾಗ್ಯ ಮೂರ್ತಿಯೂ ಆದ. ಲೌಕಿಕ ವ್ಯಾಮೋಹ ಅವನನ್ನು ಸೆಳೆಯಲಾಗಲಿಲ್ಲ. ಕೆಸರಿಗಂಟದ ಈ ಜೀವ ಅರಸುಗುವರಿ ಮಾಯೆಯನ್ನು ಧಿಕ್ಕರಿಸಿ ವಿಶ್ವ ಪರ್ಯಟನದಲ್ಲಿ ತೊಡಗಿತು.

ಹಾದಿಯಲ್ಲಿ ಸಿಕ್ಕಿದ ತೋಟಗಾರ ಗೊಗ್ಗಯ್ಯನಿಗೆ 'ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ, ಭ್ರಾಂತಿ ಬೇರನ್ನು ಅಗೆದು ಕಳೆದು ಬ್ರಹ್ಮಬೀಜವ ಬಿತ್ತಿ ಪಡೆವ ಫಲದ ಪರಿಯನ್ನು ವಿವರಿಸುತ್ತಾನೆ. ಗೊಗ್ಗಯ್ಯ ನಿರ್ಮಿಸಿದ ಸಾಧಾರಣ ತೋಟಗಾರಿಕೆ ಅಧ್ಯಾತ್ಮದತ್ತ ತಿರುಗುವಂತೆ ಮಾಡುತ್ತಾನೆ.

ಮುಂದೆ ಅಗಲಿದ ಅಣ್ಣನಿಗಾಗಿ ಅಳುತ್ತಿದ್ದ ಮುಕ್ತಾಯಿ ಕಾಣಸಿಗುತ್ತಾಳೆ. ಲಿಂಗೈಕ್ಯನಾದ ಅಣ್ಣನಿಗಾಗಿ ಕಣ್ಣೀರಿಡುವುದು ಶ್ರೇಯಸ್ಕರವಲ್ಲ. ಅಲ್ಲದೆ ಶಿವ ಬೇರೆ, ಜೀವ ಬೇರೆ ಎಂಬ ದ್ವಂದ್ವವನ್ನಳಿದು ಜ್ಞಾನಿಯಾಗಬೇಕು ಎಂಬ ತತ್ವೋಪದೇಶವಿತ್ತು ಪ್ರಭು ಹಾದಿಯುದ್ದಕ್ಕೂ ಮೌಢ್ಯವನ್ನು ಖಂಡಿಸಿ ಸೊನ್ನಲಿಗೆಯಲ್ಲಿ ಸಿದ್ಧರಾಮನನ್ನು ಸಂದರ್ಶಿಸುತ್ತಾನೆ. ಸಿದ್ಧರಾಮ ಅಲ್ಲಿ ಕೆರೆಯ ನಿರ್ಮಾಣ ಕಾರ್ಯದಲ್ಲಿ ತೊಡಗಿರುತ್ತಾನೆ. ಅವನ ಲೌಕಿಕ ಮೋಹವನ್ನು ದೂರಮಾಡಿ ಪ್ರಭು ಅವನನ್ನು ಒಡಗೂಡಿಕೊಂಡು ಕಲ್ಯಾಣಕ್ಕೆ ಹೋಗುತ್ತಾನೆ. ಕಲ್ಯಾಣದಲ್ಲಿ ಬಸವ ದರ್ಶವಾಗುತ್ತದೆ. ಅನುಭವ ಮಂಟಪದಲ್ಲಿ ಶೂನ್ಯ ಪೀಠದ ಅಧ್ಯಕ್ಷನಾಗುತ್ತಾನೆ. ಅನುಭವ ಗೋಷ್ಠಿ ನಡೆಸಿ ಕಡೆಗೆ ಕದಳಿಯಲ್ಲಿ ಬಯಲಾಗುತ್ತಾನೆ.

ವಸ್ತು ವಿನ್ಯಾಸದಲ್ಲಿ ವೈವಿಧ್ಯವೇನೂ ಇಲ್ಲ. ಹರಿಹರ ಚಾಮರಸರ ಹೆಜ್ಜೆಗಳಲ್ಲಿ ಹೆಜ್ಜೆ ಇಟ್ಟು ನಡೆದಿದ್ದಾರೆ ಕಾದಂಬರಿಕಾರರು. ಆದರೆ ಕಲ್ಯಾಣದ ಹಂಬಲ ಅಣ್ಣನನ್ನು ಕಾಣುವ ಹಂಬಲ ತೀವ್ರವಾದುದನ್ನು ತುಂಬಾ ಕಲಾತ್ಮಕವಾಗಿ ನಿರೂಪಿಸಿದ್ದಾರೆ. ಅಲ್ಲಮ ಪ್ರಭುವಿನ ವ್ಯಕ್ತಿತ್ವ, ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಅಣ್ಣ – ಅಕ್ಕ ಇವರ ವಚನಗಳರಿತ ಅಲ್ಲಮನ ವಚನಗಳು ತ.ರಾ.ಸು.ರವರ ಮೇಲೆ ವಿಶೇಷ ಪ್ರಭಾವ ಬೀರಿವೆ. ಔಚಿತ್ಯಪೂರ್ಣವಾಗಿ ಅವು ಬಳಕೆಯಾಗಿವೆ ಕಾದಂಬರಿಯಲ್ಲಿ. ಕೃತಿಗೆ ಮುನ್ನುಡಿ ಬರೆಯುತ್ತಾ ಕಾದಂಬರಿಕಾರರು ಹೀಗೆ ಹೇಳಿದ್ದಾರೆ :

'ಅಲ್ಲಮಪ್ರಭು ಕೇವಲ ವೀರಶೈವ ಧಾರ್ಮಿಕ ಗುರುವಷ್ಟೇ ಅಲ್ಲ, ಕನ್ನಡಿಗರ ಕುಲಗುರು. ಆತನ ವಚನಗಳು ಸಕಲ ಧರ್ಮಸಾರ. ಆತನ [illegible]

ಮತಾತೀತ ಜ್ಞಾನದೀವಿಗೆ ಎಂಬುದು ಅರಿವಾಗಿ ಅಭಿಮಾನದೊಂದಿಗೆ ಅರಿವೂ ಬೆಳೆದು, ಪ್ರಭುದೇವರಲ್ಲಿ ನನ್ನ ಭಕ್ತಿ ಅಚಲವಾಯಿತು. ಅಂದಿನಿಂದ ಇಂದಿನವರೆಗೂ ಅದೇ ಭಾವನೆ ಉಳಿದು. ಬೆಳೆದು ಬಂದಿದೆ......... ಅಲ್ಲಮಪ್ರಭುವಿನಂತೆ ಎಲ್ಲ ಕಾಲಕ್ಕೂ ಜ್ಞಾನದ ಗುರುವಾಗಿ ನಿಲ್ಲಬಲ್ಲಂತಹ ವ್ಯಕ್ತಿತ್ವದ ಬಗ್ಗೆ ಇತಿಹಾಸ ಬಹಳ ಗೌಣ. ಅವನ ಬಾಳು ಕಾಲದ ಸೃಷ್ಟಿಯಲ್ಲ; ಸಹಜಶಕ್ತಿಯಿಂದ ವಿಕಸಿಸುವ ವ್ಯಕ್ತಿತ್ವದ ಪವಾಡ. ಅದನ್ನೇ ಈ ಕಾದಂಬರೀ ರೂಪದ ವ್ಯಕ್ತಿ ಚಿತ್ರಣದಲ್ಲಿ ಚಿತ್ರಿಸಲು ಯತ್ನಿಸಿದ್ದೇನೆ. ಈ ಪ್ರಯತ್ನದಲ್ಲಿ ನನಗೆ ಎಷ್ಟರಮಟ್ಟಿನ ಸಾರ್ಥಕತೆ ಲಭ್ಯವಾಗಿದೆಯೋ ನಾನು ಹೇಳಲಾರೆ. ಅದು ವಾಚಕರು. ವಿಮರ್ಶಕರು ಹೇಳ ಬೇಕಾದ ಮಾತು.

ಹೌದು, ಹೇಳಬೇಕಾದ್ದನ್ನು ಹೇಳಿಯಾಯಿತು. ●

ಚಕ್ರತೀರ್ಥ

—**ರವಿ ಉಪಾಧ್ಯ.** ಎಂ. ಎ.

ಕನಸು ನನಸಾಗದಂತೆ ಪ್ರಯತ್ನಿಸುವ ಕಾಶೀಪತಯ್ಯನಿಗೆ ಅದರ ಬಯಕೆಯಾಗಿ ಅವನು ಕನಸು ಕಾಣುತ್ತಿದ್ದಂತೆ ಅದರಿಂದ ವಂಚಿತನಾಗುತ್ತ ಒಂದೆರಡು ಜೀವಿಗಳ ನಷ್ಟದೊಂದಿಗೆ ಮೂರ್ನಾಲ್ಕು ಜೀವಿಗಳ ಒಳಬೇಗುದಿ 'ಚಕ್ರತೀರ್ಥ'ದ ಕಥಾವಸ್ತು. ಮೂವರ ಕನಸುಗಳಲ್ಲಿ ಹಂಚಿ ಹೋಗಿರುವ ಕಥಾವಸ್ತು ದೈನಂದಿನ ಗತಿಯಲ್ಲಿ ಘಟಿಸುವಂಥದ್ದು. ಸಾಮಾನ್ಯ ಓದುಗನ ನಿರೀಕ್ಷೆ ಪ್ರತಿಯೊಂದರ ಕೊನೆ. ಏಕಸೂತ್ರತೆ ಪ್ರಾರಂಭದಿಂದ ಅಂತ್ಯದವರೆಗೂ.

ನರಸೀಪುರದ ಗೌಡತೀ ಠೀವಿಯ ಕಾಶೀಪತಯ್ಯನ ಪುತ್ರಿ, ಕಮಲಮ್ಮ. ಕಂಟ್ರಾಕ್ಟರ್ ಶ್ರೀನಿವಾಸಯ್ಯನ ಧರ್ಮಪತ್ನಿಯಾದಾಗಿನಿಂದ ಮುಡುಕುತೊರೆ ಈಕೆಯ ವಾಸಸ್ಥಾನ.

ಬೆಚ್ಚನೆಯ ಮನೆಯಾಗೆ
ವೆಚ್ಚಕ್ಕೆ ಹೊನ್ನಾಗೆ
ಇಚ್ಛೆಯರಿವಾ ಸತಿಯಾಗೆ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ —

ಎಂಬುದಕ್ಕೆ ಸ್ವಲ್ಪವೂ ವ್ಯತಿರಿಕ್ತವಾಗದ ಗಂಡನ ಸಂಸಾರದಲ್ಲಿ ಈಕೆಗೆ ಇನ್ನೆರಡು ಹೆಮ್ಮೆಯ ಕಣ್ಣುಗಳು ಬಂದದ್ದು ಮುದ್ದು ಚಿನ್ನದಂಥದ ಮಗಳು, ಲಲಿತಳಿಂದ. ತನ್ನ ಮಾತೇ ಸರಿಯೆನ್ನುವ ಇವಳ ಮಾತಿಗೆ ಸೋತು ಶ್ರೀನಿವಾಸಯ್ಯ ಮಾವ ಕಾಶೀಪತಯ್ಯನನ್ನು ಮಗಳ ಸಂಬಂಧದಲ್ಲಿ ಭೆಟ್ಟಿಯಾಗುತ್ತಾನೆ ; ಅಪಮಾನಿತಗೊಳ್ಳುತ್ತಾನೆ. ಹೀಗಾದಾಗ್ಯೂ ಕಮಲಮ್ಮನಿಗೆ ದಾರಿಯಿಲ್ಲದಿಲ್ಲ. ಅದು ಅಮ್ಮನಿಂದ ಅಪ್ಪನನ್ನು ಒಪ್ಪಿಸುವಿಕೆ. ಆದರೆ ಅಮ್ಮನ ಆಕಸ್ಮಿಕ ನಿಧನ ಮನೇಚ್ಛೆಗೊಂಡು ಬರೆ, ಇಲ್ಲಿಂದ ಯಾಂತ್ರಿಕಗೊಳ್ಳುವ ಕಮಲಮ್ಮನ ಬಾಳಿನಲ್ಲಿ ಯಾವ ಹೊತ್ತಿನಲ್ಲೂ ಆಸರೆಯಾಗುತ್ತಿದ್ದ ಗಂಡನೂ ಸಾವನ್ನಪ್ಪಿದಾಗ ಯಾವುದೂ ಬೇಡ. ಬೇಕಾದದ್ದು "ನಾನು ಹೋದ ಮೇಲೆ ಲಲಿತಾನ ಬೀದಿಲಿದ್ದ ಭಿಕಾರಿಗೆ ಕೊಟ್ರೂ ಸರಿಯೆ... ಚಿದಂಬರನಿಗೆ ಕೊಡ ಬೇಡ....ಇಷ್ಟೆ..." ಎಂಬ ಗಂಡನ ಮಾತನ್ನು ನಡೆಸಿಕೊಡುವುದೊಂದೇ. ಈಗ ತಾನೇನೋ, ತನ್ನ ಮಗಳೇನೋ ; ಮನೆಯೇನೋ. ಅಪ್ಪ ಕಾಶೀಪತಯ್ಯನೊಂದಿಗೆ ಅಷ್ಟಕ್ಕಷ್ಟೆ. ಈ ಅಷ್ಟಕಷ್ಟನ್ನೂ ಕಡೆದುಕೊಳ್ಳೋಣವೆಂದರೆ ತನ್ನ ಸುತ್ತ ಅವನಾಗಿಯೆ ಹೆಣೆದುಕೊಂಡ ವ್ಯವಹಾರವೊಂದಿತ್ತು. ಮೇಲಾಗಿ ಅವನು ಮತ್ತಾರೂ ಅಲ್ಲವಲ್ಲಾ, ತಂದೆ! ಎಲ್ಲರೂ ಕಾಶೀಪತಯ್ಯನಂತೆಯೇ ಇರುತ್ತಾರೆಯೆ ? ದುಡ್ಡು ಸಿಕ್ಕರೂ ಅದರ ಸದುಪಯೋಗವನ್ನು ಪಡೆದುಕೊಳ್ಳುತ್ತ ತುತ್ತಿನ ಚೀಲಕ್ಕೆ ಶ್ರಮಿಸಿದವರನ್ನೂ ಕಾತುರ

ದೀಪ ಕಾಣಬಯಸುವ, ಆಪತ್ಬಂಧುಗಳ ಹಿತಾಸಕ್ತ ಚಿಂತಕರಾಗಬಯಸುವ ಶಿವರಾಮಶಾಸ್ತ್ರಿಯಂಥವರೂ ಇರುತ್ತಾರೆ. ಇಂಥವರನ್ನು ಕಂಡರೆ ಕಮಲಮ್ಮನಿಗೆ ಎಲ್ಲಿಲ್ಲದ ಅಕ್ಕರೆ, ಅಭಿಮಾನ. ಅವರಾತಿಥ್ಯಕ್ಕೇನೂ ಕೊರತೆಯಿಲ್ಲ. ಮನಸ್ಸು ಹಗುರಾಗುವುದೂ ಇಲ್ಲಿಯೇ. ಶಿವರಾಮಶಾಸ್ತ್ರಿಯ ಜಾಣತನದಿಂದಾಗಿ ಕಾಶೀಪತಯ್ಯನ ಆಟ ನಡೆಯದಂತಾದಾಗ ಕೊನೆಯ ಉಪಾಯವಾಗಿ ಚಿದಂಬರನ ಆಗಮನ ಕಮಲಮ್ಮನಲ್ಲಿಗೆ. ಅಂಕಿತದ ವಾತಾವರಣದಲ್ಲಿ ಬೆಳೆದಿದ್ದ ಚಿದಂಬರನಿಗೆ ಕಮಲಮ್ಮ ಅನಿರ್ಬಂಧಿಯಾಗುತ್ತಾಳೆ; ತಾಯಿತ್ವದ ಸಿಹಿಯನ್ನುಣಿಸುತ್ತಾಳೆ. ಆದರೆ ಲಲಿತ – ಚಿದಂಬರರ ಕಲೆತ ಕೆಲೆತಗಳ ಸಂದರ್ಭದ ಮೇಲಕಿನಲ್ಲಿ ಬಯಕೆ–ವಿಫಲತೆ-, ಸಿಟ್ಟು - ಸಂತೋಷಗಳ ಸುಳಿಯಲ್ಲಿ ಒದ್ದಾಡಿ ದಿನದಿನಕ್ಕೂ ಹಣ್ಣಾಗುತ್ತಾಳೆ. ಆದರೂ ತಾಳ್ಮೆಯ ಮೂರ್ತಿಯಾಗುತ್ತಾಳೆ. ಸಮಯ ಸಾಧಿಸಿಕೊಂಡು ಕಾಶೀಪತಯ್ಯ ಬರುವ ಕಾಲವಿದ್ದು ಇಷ್ಟರಲ್ಲಿಯೆ ನಂಜನಗೂಡಿನವರು ಲಲಿತಳನ್ನು ನೋಡಿಕೊಂಡು ಹೋಗಿಪ್ಪಾರೆ. ಚಿದಂಬರ ತಳಮಳದಲ್ಲಿ ಒಬ್ಬಂಟಿತನವನ್ನು ಅನುಭವಿಸುತ್ತಿದ್ದಾನೆ. ಸಹನೆ ಮೀರಿದಾಗ ಕಮಲಮ್ಮನಿಗೆ ನಿಷ್ಠುರ ಮಾತುಗಳೂ ಗೊತ್ತಿಲ್ಲದಿಲ್ಲ. ಸೊಸೆಯನ್ನಾಗಿಸಿಕೊಳ್ಳುವ ಇಂಗಿತದಿಂದ ಕಾಶೀಪತಯ್ಯನ 'ಆಗ-ಈಗ' ಎಂಬ ಮಾತಿಗೆ ಉತ್ತರವೀಯುವ "ಅವರಿದ್ದಾಗ ನಮ್ಮ ಸಂಬಂಧ ನಿಮಗೆ ಬೇಕಾಗಿರಲಿಲ್ಲ – ಅದಕ್ಕೆ ಕಾರಣ ನಾವು ಬಡವರಾಗಿದ್ದುದು. ಈಗ ನಾವು ಬಡವರಲ್ಲ. ತಕ್ಕ ಮಟ್ಟಿಗಿದ್ದೀವಿ. ಲಲಿತನ್ನ ಬೇರೆ ಕಡೆ ಕೊಟ್ಟರೆ, ಈ ಆಸ್ತಿ ಎಲ್ಲಾ ಕಂಡವರ ಪಾಲಾಗುತ್ತೆ ಅಂತ ಅಲ್ಲವೇ ನೀನೀಗ ಆ - ಮದುವೆ ಆಗ್ಲಿ ಅನ್ನಾತ ಇರೋದು...." ಎಂಬ ಮಾತುಗಳನ್ನು ಗಮನಿಸಬೇಕು. ಚಿದಂಬರನಿಂದ ಮಗಳ ಗುಟ್ಟು ಬಯಲಾದಾಗಲೂ ಅಷ್ಟೇ. ಸಿಟ್ಟು ಶಮನಗೊಳ್ಳುತ್ತಿದ್ದಂತೆಯೆ ಚಕ್ರತೀರ್ಥಕ್ಕೆ ಲಲಿತ ಆಹುತಿಯಾದ ಸುದ್ದಿ. ಈಗಂತೂ ಕಮಲಮ್ಮ ಹಣೆ ಹಣೆ ಗಟ್ಟಿಸಿಕೊಂಡು ಹೊಟ್ಟೆ ಹೊರೆಯುತ್ತ ಹಲಬುತ್ತಾಳೆ. ನಾಳೆಯಲ್ಲಿಯ ಆಸೆಗಾಗಿ ಹಂಬಲಿಸಿದರೂ ಅದರ ನಿರಾಶೆಯಲ್ಲಿ ಗಂಡನ ಮಾತನ್ನುಳಿಸಿಕೊಳ್ಳುವ ಪಾತ್ರವಿದು.

ಕಾಶೀಪತಯ್ಯ, ಕಮಲಮ್ಮನ ಅಪ್ಪ ಶ್ರೀನಿವಾಸಯ್ಯನಿಗೆ ಮಾವ. ಇವನೊಂದು 'ತರಹಾ' ಮನುಷ್ಯ. ರುಬಾಬಿನ ಇವನನ್ನು 'ಧೋರಣೆ ಮನುಷ್ಯ' ಎಂದುಕೊಂಡು ತಿರುಮಕೊಡಲು ಸರಸೀಪುರದ ಜನ ಯಾವಾಗಲೂ ಇವನಿಂದ ಮಾರು ಮಾರು ದೂರ. ಕಾಶೀಪತಯ್ಯ ಹೀಗಿರುವುದಕ್ಕೆ ಕಾರಣ ಅವನ ಶ್ರೀಮಂತಿಕೆಯಲ್ಲ, ಬಂಡಿಗಟ್ಟಲೆ ಭತ್ತವನ್ನು ಮನೆಕಾಣಿಸುವ ಜಮೀನು. ಹೊರಗೆ ಹೇಗೋ ಹಾಗೇ ಇವನು ಮನೆಯಲ್ಲೂ. ಮುದ್ದು ಕೊಟ್ಟು ಮಾತನಾಡಿಸಬೇಕು ಅಷ್ಟು ಶ್ರೀಮದ್ಗಾಂಭೀರ್ಯ. ಇದ್ದೊಬ್ಬ ಮಗನೊಟ್ಟಿಗೂ, ದಾರಿತಪ್ಪಿ ಬರುವ ಮಗಳನ್ನು ಕಂಡರೂ ಅಷ್ಟೇ. ಮೊಮ್ಮಗಳನ್ನು ಮಗನಿಗೆ ತಂದುಕೊಳ್ಳುವ ವಿಷಯದಲ್ಲಿ ಕಾಶೀಪತಯ್ಯನಿಗೆ ನಖಶಿಖಾಂತ ನಿರಾಸಕ್ತಿ. ಕಾರಣ, ಅಳಿಯನಿಗಿಲ್ಲ ತನ್ನಾಕೆಯಷ್ಟು ಆಸ್ತಿ. ಅದೇ ಸ್ಥಿತ್ಯಂತರದಲ್ಲಿ ಘಾಯಿದೆ ಗೋಚರಿಸಿದಾಗ ಕಮಲಮ್ಮನಲ್ಲಿ ಮುಟ್ಟಿಗೆಯಲ್ಲಿ ಜೀವ ಹಿಡಿದು

ಕೊಂಡು ಯೋಚಿಸುವಂತಾಗುತ್ತಾನೆ. ! ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬುದನ್ನು ಖರೆಯಾಗಿಸಲು ಹೋಗಿ ತಕ್ಕಮಟ್ಟಿಗಿನ ಮಗಳ ಸ್ಥಿತಿಯೆದುರು ತನ್ನ ಸಣ್ಣತನದ ಪ್ರದರ್ಶನವನ್ನೀಯುವ ಪಾತ್ರ ಕಾಶೀಪತಯ್ಯನದು.

ಕಮಲಮ್ಮನ ತಮ್ಮ ಚಿದಂಬರ ಕಾಶೀಪತಯ್ಯನ ಮಗ. ಚಿದಂಬರನನ್ನು ಮಗಳಲ್ಲಿಗೆ ಕಳಿಸುವುದೇ ಏಕೈಕ ಉಪಾಯವಾಗಿ ಹಾಗೆ ಕಾಶೀಪತಯ್ಯ ಮಾಡಿದಾಗ ಇವನ ಆಗಮನ ಮುದುಕುತ್ತೊರೆಗೆ. ತಾಯಿತ್ವದಿಂದ ವಂಚಿತನಾಗಿದ್ದರೂ ತನ್ನ ಸಹಜ ಸೌಜನ್ಯ, ಔದಾರ್ಯಗಳಿಂದಾಗಿ ಅದನ್ನು ಇಲ್ಲಿ ಕಮಲಮ್ಮನಿಂದ ಪಡೆದುಕೊಳ್ಳುತ್ತಾನೆ. ಆದರೆ ಅಸಹಜ ವಾತಾವರಣದಲ್ಲಿ ಬೆಳೆದಿದ್ದ ಇವನಿಗೆ ಅವರೊಂದಿಗೆ ಬಹು ಬೇಗ ಹೊಂದಿಕೊಳ್ಳುವುದಾಗುವುದಿಲ್ಲ. ಹೀಗಿರುತ್ತಲೆ ಇವನ ಒಡನಾಟ ಲಲಿತಳೊಂದಿಗೆ ಪ್ರಾರಂಭಗೊಂಡು ಹಂತ ಹಂತದಲ್ಲಿ ಅದು ಅವರನ್ನು ಬೇರ್ಪಡಿಸದಷ್ಟು ಘನಿತಗೊಳ್ಳುತ್ತದೆ. ಇದು ಕಮಲಮ್ಮನಿಗೆ ಗೊತ್ತಾದರೂ ಅವಳಲ್ಲಿಯ ಅವ್ಯಕ್ತ ಅನುಮಾನ-ಸಮಾಧಾನ, ಮುನಿಸು-ಹೊಂಗನಸುಗಳಿಗೆ ಚಿದಂಬರ ಮುಗ್ಧ. ಇವನ ಗುರಿ ಒಂದೇ ಒಂದು. ಅದು ಲಲಿತಳೊಂದಿಗಿನ ಶಾಶ್ವತ ಮಿಲನ. ಬಯಸಿದ್ದೆಲ್ಲ ಘಟಿಸಿದರೆ ಬಾಳು ಬಂಗಾರವಾದೀತು. ಇವನ ದುರ್ದೈವ, ಲಲಿತಳನ್ನು ಕಳೆದುಕೊಳ್ಳುತ್ತಾನೆ. ಆದರೂ ಇವನ ಪುಣ್ಯವೆನ್ನಬೇಕು, ದೈಹಿಕವಾಗಿ ಲಲಿತ ಇವನಿಂದ ದೂರ ಸರಿದರೂ ಪವಿತ್ರ ಪ್ರೇಮ ಸಾಕ್ಷಿಯಾಗಿ ಅವಳು ಎಂದೆಂದಿಗೂ ಇವನ ಹೃದಯದಲ್ಲೇ ಉಳಿಯುವಂಥವಳಾಗುತ್ತಾಳೆ. ಮುಗ್ಧತೆಯಲ್ಲಿ ಸೋಲು-ಗೆಲುವನ್ನು ಕಂಡುಕೊಳ್ಳುವ ಪಾತ್ರವಿದು.

ಲಲಿತ, ಶ್ರೀನಿವಾಸಯ್ಯ, ಕಮಲಮ್ಮನವರ ಏಕಮಾತ್ರ ಪುತ್ರಿ. ಇವಳೊಂದು ವೇಳೆ ಹುಟ್ಟದೆ ಹೋಗಿದ್ದರೆ ಕಮಲಮ್ಮನಿಗೆ ಕನಸೇ ಬೀಳುತ್ತಿರಲಿಲ್ಲ, ಕಾದಂಬರಿಯೂ ನಿರ್ಮಾಣಗೊಳ್ಳುತ್ತಿರಲಿಲ್ಲ. 'ಲಲಿತಳಿಗೆ ಇದಿಲ್ಲಾ' ಎಂಬಂತಾಗಬಾರದೆಂಬುದು ಇವಳ ಹೆತ್ತವರ ಧ್ಯೇಯವಾಗಿರಬೇಕಾದರೆ ಲಲಿತಳ ಅಸ್ತಿತ್ವ ಅದೆಷ್ಟು ಪ್ರಿಯವಾದದ್ದೆಂಬುದರ ಕಲ್ಪನೆ ನಮಗಾಗುವುದು. ಮತ್ತೊಂದು, ಲಲಿತ ಲಾವಣ್ಯಮಯಿ. ಅಂದ ಮೇಲೆ ಕೇಳಬೇಕೆ, ಇವಳೇ ಒಂದು ಆಸ್ತಿ - ಆಹಾರ. ಮನೆಯಲ್ಲಿ ಏನಾದರೂ ಚಕಮಕಿ ಎದ್ದಿದ್ದರೆ ಅದಕ್ಕೂ ಮೂಲ ಲಲಿತಳೇ. ಸವಲತ್ತು–ಸೌಲಭ್ಯಗಳ ವಾತಾವರಣದಲ್ಲಿ ಬೆಳೆದ ಲಲಿತಳಿಗೆ ತಂದೆ ಇಲ್ಲದಾಗ್ಯೂ ಅಮ್ಮನ ಬೆಚ್ಚನೆಯ ಮಡಿಲು ಅವಳ ಕೊರಗು ಕೊರತೆಗಳನ್ನು ಹಿಂಸಿಸುವಲ್ಲಿ ಸಹಕಾರಿಯಾಗುತ್ತದೆ. ಬರೀ ಮಾವನಾಗಿದ್ದ ಚಿದಂಬರ ಅಮ್ಮನಲ್ಲಿಗೆ ಬಂದು ಹೀಗೆ ಹಳಬನಾಗುತ್ತಿರುವಾಗ ಅವನ ಸಂಗದಲ್ಲಿ ಲಲಿತ ತನ್ನನ್ನು ತಾ ಮೈಮರೆಯುವ ಸಂದರ್ಭ. ಆದರೆ ತಾಯಿಯಿಂದ ಈ ಸಂಬಂಧಕ್ಕೆ ಪ್ರತಿಕೂಲದ ಮಾತು ಬಂದಾಗ ತನ್ನಿಂದಾದ ಗೋಳಿನ ಅರಿವಿನಲ್ಲಿ ಈಕೆ- ಚಕ್ರತೀರ್ಥದ ಪಾಲಾಗುತ್ತಾಳೆ. ಆಸೆಪಟ್ಟರೂ ತನ್ನತನದ ಪ್ರಜ್ಞೆಯಿಂದ ಅದನ್ನು ದೇಹದಾಚೆಗೆ ಪ್ರಾರ್ಥೈಸುವ ಪಾತ್ರವಿದು.

ಕಮಲಮ್ಮ, ಕಾಶೀಪತಯ್ಯ, ಚಿದಂಬರ, ಲಲಿತ ಇವರುಗಳಿಗೆ ಪೋಷಕರಾಗಿ ಸ್ವಾಭಿಮಾನಿ ಶ್ರೀನಿವಾಸಯ್ಯ, ಕರ್ತವ್ಯನಿಷ್ಠ ಆರ್ದ್ರಹೃದಯಿ ಶಿವರಾಮಶಾಸ್ತ್ರಿ,

ಧೋರಣಾ ವಿರೋಧಿ ಸರಸ್ವತಮ್ಮ, ವ್ಯವಹಾರ ದುಷ್ಟತನದ ಪರವಾದಿ ಕಾಳಿಂಗ ರಾಯರು ನಮ್ಮ ಗಮನ ಸೆಳೆಯುತ್ತಾರೆ.

ಅಂಥಾ ಪರಿಸರದಲ್ಲಿ ಅಂಥಾ ಪಾತ್ರಗಳ ಜನನವಾಗುತ್ತಿರುತ್ತದೆ. 'ಬೇಕು'ಗಳ ಹಿನ್ನೆಲೆಯಲ್ಲಿಯೂ ತಾಯ್ತಂದೆಗಳ ಪ್ರಯತ್ನಪೂರ್ವಕ ಸಹಜ ವಾತಾವರಣದಲ್ಲಿ ಬೆಳೆದ ಲಲಿತ ಚೂಟಿಯಾಗಿದ್ದಾಳೆ. ತನ್ನಿಂದಾದ ನಷ್ಟಕ್ಕೆ ತಾನು ತುಂಬಬೇಕಾದುದರ ತಿಳಿವೂ ಅವಳಿಗಿದೆ. ಅಪ್ಪನಂತೆ- ಮಗ, ಚಿದಂಬರ. ಅಸಹಜ ವಾತಾವರಣದಲ್ಲಿ ಬೆಳೆದಿದ್ದು ಇವನಿಗೆ ಅಕ್ಕನ ಸಾನ್ನಿಧ್ಯದಲ್ಲಿ ತಾಯ್ತನದ ಸಿಹಿ ಸಿಕ್ಕರೂ ಹೆಜ್ಜೆ ಹೆಜ್ಜೆಗೂ ಭಿಡೆಮಾಡಿಕೊಳ್ಳುತ್ತಾರೆ. 'ಹ್ಞೂಂ, ಹ್ಞಾಂ' ಗಳಷ್ಟೇ ಇವನ ಮಾತುಗಳು, ಸ್ವಭಾವ ಜನ್ಯ ಮುಗ್ಧತೆಯಿಂದಾಗಿ ಜಯಕೆಯ ವಿಫಲತೆಯಲ್ಲೂ ಪಾಲುಗಾರ. ಕಮಲಮ್ಮ. ಬೆನ್ನಿಗೆ ಒಬ್ಬನೇ ಒಬ್ಬ ತಮ್ಮನನ್ನು ಕಟ್ಟಿಕೊಂಡು ಬಂದವಳು. ಇದ್ದೊಬ್ಬ ಮಗಳನ್ನು ಅವನಿಗೊಪ್ಪಿಸುವ ಕನಸೇ ಕನಸು ಇವಳದು. ಕಮಲಮ್ಮನ ಸ್ಥಾನದಲ್ಲಿದ್ದವರಿಗೆ ಇಂಥ ವಿಚಾರ ಅಸ್ವಾಭಾವಿಕವೇನಲ್ಲ. ಅಸಮ್ಮತಿಯಿದ್ದ ಗಂಡನಿಂದಲೂ ಬೇಕಾಗಿದ್ದ ವಾತಾವರಣಕ್ಕೆ ಕಿಟಕಿಗಳು ತೆರೆದಾಗ ಉಸಿರಾಟ ಇಮ್ಮಡಿ. ಇದಕ್ಕೆ ಅನುಗುಣದ ತಾಯಿ ಸರಸ್ವತಮ್ಮನಿದ್ದರೇನು ? ಉ ಳಿ ದ ದ್ದೂ ಸುರುಳಿತಗೊಳ್ಳಬೇಡವೆ ? ಶ್ರೀನಿವಾಸಯ್ಯ ಹೇಳಿಕೇಳಿ ಸ್ವಾಭಿಮಾನಿ. ಆದರೆ ಪಂಚಪ್ರಾಣದಂತಹ ಹೆಂಡತಿಯ ದುಂಬಾಲಕ್ಕೆ ಬೆಲೆ ಕೊಟ್ಟು ತನ್ನ ಸಹಜ ವಿಚಾರಕ್ಕೆ ಬಾಹಿರನಾಗುತ್ತಾನೆ. ಅದೇ ಮರಣಾಸನ್ನನಾದಾಗ ಬದಲಾಗುತ್ತಾನೆ. ಅದು ಅವನ ತಪ್ಪಲ್ಲ. ಪರಿಸ್ಥಿತಿ ಅವನನ್ನು ಹಾಗೆ ಮಾಡಿಸುತ್ತದೆ. ಕಾಶೀಪತಯ್ಯ ಧೋರಣಾತ್ರಿಯ. ಪ್ರತಿಯೊಂದಕ್ಕೂ ಗಣಿತ. ಸ್ನೇಹ-ಸಂಬಂಧದಲ್ಲೂ ಅಷ್ಟೇ. ಒಂದು ವೇಳೆ ಲಾಭ ತಟ್ಟುವಂತಿದ್ದರೆ ಹೊರಬಿದ್ದ ಮಾತನ್ನೂ ಹಿಂದಕ್ಕೆ ತೆಗೆದುಕೊಳ್ಳುವವ. ಇದಕ್ಕೆಲ್ಲ ಬೇಕಾಗುವ ವಾತಾವರಣ ಇವನ ಸುತ್ತಮುತ್ತ. ಅದರ ನಿರ್ಮಾಣಕ್ಕೆ ಯಾರೂ ದುಡಿಯಬೇಕಿಲ್ಲ. ಅದು ಸ್ವಯಂಸಿದ್ಧ. ಶಿವರಾಮಶಾಸ್ತ್ರಿ, ಒಬ್ಬರಿಂದ ಉಪಕಾರವನ್ನು ಹೊಂದಿದವ. ಇವನಿಗೇನೋ ಪ್ರತ್ಯುಪಕಾರದ ಕರ್ತವ್ಯ ಮುಖ್ಯ. ಆದರೆ ಹೆಂಡತಿಗೇನು ? ಆದರೂ ಪಂಕಜಮ್ಮಳಿಗೆ ಗಂಡನ ವ್ಯವಹಾರ ನಿಷ್ಠೆಯಲ್ಲಿ ಶ್ರದ್ಧೆಯಿದೆ. ಶಿವರಾಮಶಾಸ್ತ್ರಿ ತಯಾರಿಸಿಕೊಂಡ ವಾತಾವರಣ ಇದಕ್ಕಿದೆಯಲ್ಲವೇ ? ಮಗಳಂತೆ - ಸರಸ್ವತಮ್ಮಳಿಗೂ ಆಶೆಯಿದೆ. ಆದರೆ ಗಂಡನ ಬಿಗುವಿನ ವಾತಾವರಣ ಇದಕ್ಕೆ ಹಿಂಕಿ ಹಾಕದ ಗೋಡೆ ಲಲಿತ–ಚಿದಂಬರರು ಒಂದೇ ಛತ್ತಿನ ಕೆಳಗಡೆ ಬಂದಾಗ ಪರಸ್ಪರ ಪ್ರೇಮಕ್ಕೊಂದು ಅವಕಾಶ. ದ್ವಂದ್ವದಲ್ಲಿದ್ದ ಕಮಲಮ್ಮಳ ಅಸಹಾಯಕತೆ ಮನೆಯಲ್ಲಿ ವ್ಯಾಪಿಸಿದಾಗ ಪ್ರೇಮದಮೊಗ್ಗು ಹೂವಾಗು ವುದರಲ್ಲಿ ತಡವಿಲ್ಲ. ಆದದ್ದು ಮಾತ್ರ ದೇಹದಾಚೆ. ಕಾದಂಬರಿಯ ಸಾರ್ಥಕ್ಯಕ್ಕೂ ಇದರದೇ ಅವಶ್ಯಕತೆ.

ಸನ್ನಿವೇಶಗಳಲ್ಲಿ ಚಕ್ರತೀರ್ಥದ ಸನ್ನಿವೇಶವಂತೂ ಅರ್ಥಪೂರ್ಣ. ಹಾಗೆಯೇ ಕೃತಿಗೂ 'ಚಕ್ರತೀರ್ಥ' ವೆಂಬುದು ಔಚಿತ್ಯಪೂರ್ಣ. ಅವರವುಗಳ ಕನಸಿನ ಭಂಗಕ್ಕೆ ಚಕ್ರತೀರ್ಥ ಒಂದು ಸಮರ್ಪಕ ಸಂಕೇತ,

ವೈಭವ ಗತವೈಭವಗಳ ಪುಟಗಳಲ್ಲಿ ಹೆಚ್ಚಾಗಿ ಓಡಾಡಿದ ಕಣ್ಣುಗಳಿಗೆ ಬರಿ ಅದರ ಉದ್ದಗಲದ ಚಿತ್ರಣವಷ್ಟೆ ಸಾಲದು. ಒಮ್ಮೊಮ್ಮೆ ಅದರ ಗುನುಗೂ ಬೇಕು. ಏನೋ ದಿಬ್ಬದ ಮೇಲೆ ಕೂತು ಯಾರಾದರೂ ಅದನ್ನೂ ಇನ್ನೊಬ್ಬರಿಗೆ ಹೇಳುವಂತಾಗಬೇಕು. ಇಂಥ ಸಂದರ್ಭವೊಂದು ಈ ಕಾದಂಬರಿಗೂ ದೊರೆತಾಗಿಲ್ಲ. ತಲಕಾಡು ಮರಳುಗಾಡು ಹೇಗಾಯಿತೆಂಬುದನ್ನು ಜನಾಂಗದ ಕಿರಿತಲೆಗೆ ವಿವರಿಸುವುದನ್ನು ಜ್ಞಾಪಿಸಿ ಕೊಂಡರೆ ಸಾಕು.

ಕಾದಂಬರಿಯಲ್ಲಿ ವಾಸ್ತವಿಕತೆಯ ಪಾಲೆಷ್ಟು? ಸಮಾಜದಲ್ಲಿಯ ನೋವು ನಲಿವುಗಳಿಗೆ ಕಣ್ದೆರೆದು ಮನದಲ್ಲಿ ಅದರ ಸತ್ಯತೆಯು ತೀವ್ರಗೊಂಡಾಗ ಕಾದಂಬರಿಯು ರಚಿತಗೊಂಡಿದೆ. ಕಮಲಮ್ಮನಂಥವರು, ಕಾಶೀಪತಯ್ಯನಂಥವರು ಇಂದಿಗೂ ಕಾಣಲು ಸಿಗುತ್ತಾರೆ. ಸಂಪ್ರದಾಯಸ್ಥರಲ್ಲಿರುವ ಇವರು ಶಹರೀ ಜೀವನದಲ್ಲಿ ವಿರಳ. ಸಿನಿ-ಮಾಧ್ಯಮದಿಂದ ದರ್ಶಿಸಲ್ಪಡುವುದಕ್ಕೆ ಕಾದಂಬರಿಯು ಪೂರಕವಾಗಿದ್ದು ಇವರ ಸಾಕ್ಷವೂ ನಮಗೆ ಆಗಲೆ ಪಳಕಾಗಿದೆಯಲ್ಲವೆ. ?

ಸಂಭಾಷಣಾ ತಂತ್ರದೊಂದಿಗೆ ಬಿಚ್ಚಿಕೊಳ್ಳುವ ಕಥೆಯಲ್ಲಿ ಪಾತ್ರಗಳ ಪರಿಚಯವೂ ಏಕಮುಖವಾಗಿ ಸಾಗುತ್ತದೆ. ಕಡೆಯ ದುರಂತದೆದುರು ಪಾತ್ರಗಳ ಮೌನದಲ್ಲಿ ಕಥೆಯ ಮುಕ್ತಾಯ. ಕಥೆಯಲ್ಲಿ ಕುತೂಹಲವಿದ್ದರೂ ಓದುಗರ ನಿರೀಕ್ಷಾ ಮಟ್ಟದಲ್ಲಿ ಸುಳಿಯುವಂಥದ್ದೇನಲ್ಲ. ಸಿನಿ 'ಫಾರ್ಮುಲ್' ಗೆ ಇದು ಮತ್ತಷ್ಟು ಒಳ್ಳೆಯದು.

ಪರಸ್ಪರ ಸ್ವಾಭಿಮಾನಿಯ ವಾದವಿರಲಿ, ಸೆಟೆಗೊಂಡ ಬಿಗುಮಾನವಿರಲಿ, ವಂಚನೆಯ ಜಾಲವಿರಲಿ, ಮುಗುಡ-ದುಮ್ಮಾನವಿರಲಿ, ಸರಸ-ಸಲ್ಲಾಪವಿರಲಿ ಇಂಥಲ್ಲೆಲ್ಲ ಸಂಭಾಷಣೆ ಹಿತಮಿತವಾದದ್ದು. ಮಾತಿಗೆ ತಕ್ಕ ಮಾತನ್ನು ಹೊಸೆಯುವ ಚಾಣಾಕ್ಷ್ಯ ಲೇಖಕರಿಗಿದೆ.

ಕಥನಶೈಲಿ ಲೇಖಕರಿಗೆ ಒಗ್ಗಿದ್ದು ಅದಕ್ಕೆ ಅವರದೇ ಆದ ವೇಗವಿದೆ. ಗ್ರಾಂಥಿಕ ಶೈಲಿಯ ಮಧ್ಯೆ ಬಂದೋಬಸ್ತು, ನಿಖಾಲಸಾ, ರೀತ್ಯಾ ಮೊದಲಾದ ಜಾಯಮಾತ್ರಿನ ಬಳಕೆಯೂ ಲೇಖಕರಿಗೆ ಗೊತ್ತಿದೆ. ಹಾಗೆಯೇ ಆಲೋಚನೆಗೆ ಆಸ್ಪದವೀಯುವ ಗಾದೆಗಳ ಉಪಯೋಗವೂ. ಉದಾ : 'ಹಾಲು ಸಕ್ಕರೆ ಒಂದೆ, ಬೆರಸಿದ ಬಟ್ಟಲು ಮಾತ್ರ ಯಾವತ್ತಿದ್ರೂ ಬೇರೆ.'

'ಕನಸಿನ ಲಾಭ ಮೌನನಷ್ಟ' ಎಂಬಂತಿರುವ 'ಚಕ್ರತೀರ್ಥ' ತ.ರಾ.ಸು. ಅವರ ಒಂದು ಯಶಸ್ವೀ ಸಾಮಾಜಿಕ ಕಾದಂಬರಿ.

‘ಹಂಸಗೀತೆ’ ಒಂದು ವಿವೇಚನೆ

— ಎನ್. ಎಸ್. ತಾರಾನಾಥ್

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಆರಂಭವಾದಾಗ ಬಿ. ವೆಂಕಟಾಚಾರ್ ಹಾಗೂ ಗಳಗನಾಥರು ಪ್ರಧಾನ ಪಾತ್ರ ವಹಿಸಿ ಆ ಪ್ರಕಾರವನ್ನು ರೂಢಿಸಲು ಹಾಗೂ ಆರೂಢಿಸಲು ಪ್ರಯತ್ನಿಸಿ ಸಫಲರಾದರೆಂಬುದನ್ನು ಯಾರೂ ಒಪ್ಪಿಕೊಳ್ಳುವಂತಹ ಮಾತು, ೧೮೯೯ರಲ್ಲಿಯೇ ಗುಲ್ವಾಡಿ ವೆಂಕಟರಾಯರು ಒಂದು ಸಾಮಾಜಿಕ ಕಾದಂಬರಿಯನ್ನು ಬರೆದರಾದರೂ ನಮ್ಮ ಜನರ ಮನಸ್ಸಿಗೆ ಅದು ಅಷ್ಟಾಗಿ ಒಗ್ಗಲಿಲ್ಲವೆನ್ನಬಹುದು. ಅವರ ಬದಲು ಗಳಗನಾಥರ ಹಾಗೂ ವೆಂಕಟಾಚಾರ್ಯರ ಐತಿಹಾಸಿಕ ಕಾದಂಬರಿಗಳು ಜನರನ್ನು ಪ್ರಕರ್ಷವಾಗಿ ಆಕರ್ಷಿಸಿದುವು. ಇವರಿಬ್ಬರೂ ಬಂಕಿಮಚಂದ್ರ ಹಾಗೂ ಹರಿನಾರಾಯಣ ಆಪ್ಟೆಯವರಿಂದ ತೀವ್ರವಾಗಿ ಅನುಕ್ರಮವಾಗಿ ಪ್ರಭಾವಿತರಾಗಿ ಕಾದಂಬರಿ ಮನ್ವಂತರವನ್ನು ಕನ್ನಡದಲ್ಲಿ ಪ್ರಾರಂಭಿಸಿದರು. ವೆಂಕಟಾಚಾರ್ಯರ ಕೃತಿಗಳಲ್ಲಿ ಅದಮ್ಯ ಕುತೂಹಲ, ಮರವಟ್ಟುಗೊಳಿಸುವ ಚಳಕ ಚಮತ್ಕಾರಗಳು ಕಾಣಬಂದರೂ ಅವರದು ತೇಜೋಮಯವಾದ ಸಂಸ್ಕೃತ ಭೂಯಿಷ್ಠ ಶೈಲಿ; ಪ್ರಕೃತಿ ಹಾಗೂ ಸ್ತ್ರೀ ವರ್ಣನೆಗಳು ಕಣ್ಣು ಕುಕ್ಕುವ ಶಬ್ದ ಪ್ರೌಢಿಮೆಯಿಂದ ಕೂಡಿದ್ದು ಅದ್ಭುತ ಆಡಂಬರಕ್ಕೆ ದ್ಯೋತಕವಾಗಿದೆ. ಆದರೆ ಗಳಗನಾಥರದು ಸರಳತೆಗೆ ಹತ್ತಿರವಾಗುವ ಶೈಲಿ; ಅಲ್ಲದೆ ಅವರು ತಮ್ಮ ಭಾಷಾ ಬಳಕೆಯಲ್ಲಿ ಆಡುನುಡಿಯನ್ನು ಹದಹಾಳತಗಳೊಡನೆ ಬಳಸುತ್ತಿದ್ದರು, ಎಂತಲೇ ‘ಮರಾಠರ ಅಭ್ಯುದಯ’ ‘ಕನ್ನಡಿಗರ ಕರ್ಮಕಥೆ’ ಮುಂತಾದ ಅನುವಾದ ಕೃತಿಗಳಲ್ಲಿ ಹೆಚ್ಚು ಯಶಸ್ಸನ್ನು ಜನಪ್ರಿಯತೆಯನ್ನು ಗಳಿಸಿದರು. ಇದಕ್ಕೆ ಗಳಗನಾಥರು ಮೊದಲಿಗೆ ಕೆಲವೊಂದು ಮರಾಠರ ಕಾದಂಬರಿಗಳನ್ನು ಅನುವಾದಿಸುವ ಇಲ್ಲವೇ ರೂಪಾಂತರಿಸುವ ಹವಣಿನಲ್ಲಿ ಕುದುರಿಸಿಕೊಂಡಿದ್ದ ಶೈಲಿಯೂ ಕಾರಣವಿದ್ದಿರಬಹುದು. ಆದರೆ ಗಳಗನಾಥರು ಸ್ವತಂತ್ರ ಕನ್ನಡ ಐತಿಹಾಸಿಕ ಕಾದಂಬರಿಗಳನ್ನು ರಚಿಸಲು ಪ್ರಯತ್ನಿಸಿದಾಗ ವಿಫಲರಾದರು ಎಂಬುದು ಗಮನಾರ್ಹವಾದ ಅಂಶ. ಇದಕ್ಕೆ ಅವರು ಆಪ್ಟೆಯವರಿಂದ ದಟ್ಟವಾಗಿ ಪ್ರಭಾವಿತರಾದುದೇ ಪ್ರಮುಖ ಕಾರಣ ಎನಿಸುತ್ತದೆ. ಆಪ್ಟೆಯವರು ತಮ್ಮ ಕಾದಂಬರಿಗಳಲ್ಲಿ ತಂದ ಮರಾಠರ ಇತಿಹಾಸ ಅನಾದಿ ಎನ್ನುವಷ್ಟು ಪ್ರಾಚೀನವಾಗದೆ, ತಕ್ಕ ಮಟ್ಟಿಗೆ ಇತ್ತೀಚಿನದಾಗಿದ್ದುದರಿಂದ ಅವರಿಗೆ ಆ ಹಳಗಾಲವನ್ನು ಅಂದಿನ ನಡೆನುಡಿಗಳಿಗೆ, ದೃಷ್ಟಿಧೋರಣೆಗಳಿಗೆ ಸರಿಹೊಂದುವಂತೆ ಚಿತ್ರಿಸುವುದು ಕಷ್ಟಕರವಾಗಲಿಲ್ಲ. ಅಲ್ಲದೆ ಅವರು ಐತಿಹಾಸಿಕ ವಿವರಗಳನ್ನು ಪರಿಸ್ಫುಟವಾಗಿ, ಉಚಿತವಾಗಿ ಬಿತ್ತರಿಸುವುದಕ್ಕಿಂತ ಮರಾಠರ ಸಾಹಸ ಕೃತ್ಯಗಳನ್ನು ರಂಜನೀಯವಾಗಿ ಬಣ್ಣಿಸುತ್ತಿದ್ದರು. ಆದರೆ ಕನ್ನಡ ಐತಿಹಾಸಿಕ ಕಾದಂಬರಿಗಳಲ್ಲಿ ಘಟನೆಗಳ ಪ್ರಾಮುಖ್ಯ, ಐತಿಹಾಸಿಕಾಂಶಗಳ ಖಚಿತತೆ ಹಾಗೂ

ಪಾತ್ರಗಳ ನಡವಳಿಕೆ ಪ್ರಧಾನವಾಗಿತ್ತು. ಗಳಗನಾಥರೋ ಬಹುಮಟ್ಟಿಗೆ ಆಪ್ಟೆಯವರ ಶೈಲಿಯನ್ನೇ ಸಂಭ್ರಮದಲ್ಲಿ ಸಲೀಸಾಗಿ ಅಪ್ಪುಮಾಡಿಕೊಂಡುದರಿಂದ ಅವರಿಗೆ ನಮ್ಮ ಕನ್ನಡ ಐತಿಹಾಸಿಕ ಕಾದಂಬರಿಗಳ ಗತ ಇತಿಹಾಸಕಾಲದ ರೂಢಿ ನಡವಳಿಕೆಗಳನ್ನು ರೇಖಿಸಲಾಗಲೀ, ಅಂದಿನ ವಾತಾವರಣಕ್ಕೆ ತಕ್ಕಂತೆ ಘಟನೆಗಳನ್ನು ರೂಪಿಸಲಾಗಲಿ ಸಾಧ್ಯವಾಗಲಿಲ್ಲ. ಅಲ್ಲದೆ ತಕ್ಕಮಟ್ಟಿಗೆ ಹಳೆಯದು ಎನ್ನುವ ಐತಿಹಾಸಿಕ ವಸ್ತುವನ್ನೇ ಅವರು ಆಯ್ದುಕೊಂಡುದರಿಂದ, ಇತಿಹಾಸದ ಸರಿಸಮಗ್ರ ಸಂಶೋಧನೆ ನಮ್ಮಲ್ಲಿ ಇನ್ನೂ ಜರುಗಿರಲಿಲ್ಲವಾದ್ದರಿಂದ ಅವರು ಆ ಹಳಗಾಲವನ್ನು ಊಹಿಸಲಾಗಲೀ, ಪರಿಭಾವಿಸಲಾಗಲಿ ಸಮರ್ಥರಾಗಲಿಲ್ಲವೆನ್ನಬಹುದು.

ವೆಂಕಟಾಚಾರ್ಯರ ಹಾಗೂ ಗಳಗನಾಥರ ಕಾಲವಾದ ಅನಂತರ ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳು ವಿಪುಲವಾಗಿ ನಿರ್ಮಿತವಾಗಲಿಲ್ಲ ಎನ್ನಬಹುದು. ಸಾಮಾಜಿಕ ಕಾದಂಬರಿಗಳು ಓದುಗರ ಅಭಿರುಚಿಯ ಸಂಸ್ಕಾರವನ್ನು ದೀಪ್ತಗೊಳಿಸುತ್ತ ಬಂದುದೇ ಅಲ್ಲದೆ ಪುಂಖಾನುಪುಂಖವಾಗಿ ರಚಿತವಾಗತೊಡಗಿದವು ; ಆ ಕಾರಣದಿಂದ ಐತಿಹಾಸಿಕ ಕಾದಂಬರಿಗಳ ರಚನೆ ಬಹುಮಟ್ಟಿಗೆ ಕಡಿಮೆಯಾಯಿತು. ಆದರೆ ಇಂತಹ ಅರಕೆಯ ಕಾಲದಲ್ಲಿಯೂ ಆನಂದಕಂದ ಹಾಗೂ ದೇವುಡುರವರು ಕೆಲವು ಕಾದಂಬರಿಗಳನ್ನು ರಚಿಸಿದರು. ಈ ದೃಷ್ಟಿಯಿಂದ ಆನಂದಕಂದರ ‘ರಾಜಯೋಗಿ’ ಹಾಗೂ ದೇವುಡುರವರ ‘ಮಯೂರ’ ಗಮನಾರ್ಹವಾದುವು. ಇವು ಗಳಗನಾಥರ ಕಾದಂಬರಿಗಳಿಗಿಂತ ಉತ್ತಮವಾದವು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಕಾದಂಬರಿಗಳು ಇತಿಹಾಸದ ದಾಖಲೆಗೆ ಹಾಗೂ ಪುರಾವೆಗಳಿಗೆ ಎಲ್ಲಿ ಆತಂಕ ಒದಗುತ್ತದೋ ಎಂಬ ಎಚ್ಚರ ದೃಷ್ಟಿಯನ್ನೇ ತಕ್ಕಮಟ್ಟಿಗೆ ನಿಗದಲ್ಲಿಟ್ಟಿರುವುದರಿಂದ, ಭಾವನೆಗಳ ಪೃಥಕ್ಕರಣಕ್ಕೆ ಹೆಚ್ಚು ಅವಕಾಶವಿಲ್ಲದಾಗಿ ಇಕ್ಕಟ್ಟಿನ ದಾರಿಯಲ್ಲಿ ನಡೆದಂತೆ ಭಾಸವಾಗುತ್ತದೆ. ಕಲ್ಪಿತಪಾತ್ರಗಳು ಕಥಾಸೂತ್ರದಲ್ಲಿ ಕೋದುಕೊಂಡಿಲ್ಲದಿರುವುದು ಒಂದು ಅರಕೆ ಎನಿಸುವಷ್ಟರಮಟ್ಟಿಗೆ ಗಮನಾರ್ಹವಾಗಿದೆ.[1]

ಬಹುಮಟ್ಟಿಗೆ ಈ ಅರೆಕೊರೆಗಳೆಲ್ಲ ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಮೊತ್ತ ಮೊದಲಿಗೆ ಮಾಯವಾಗಿ, ಅವು ತುಂಬಿಕೊಂಡು ನಿಂತವು ಎಂದೆನಿಸುತ್ತದೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ; ಕನ್ನಡ ಕಾದಂಬರಿಗಳು ಎಂ. ಎಸ್. ಪುಟ್ಟಣ್ಣ, ಕೆರೂರು, ಅ.ನ.ಕೃ. ಮುಂತಾದವರಿಂದ ನಯನುಣುಪುಗಳನ್ನು, ಖಚಿತ ಸ್ವರೂಪವನ್ನು, ನಿರೂಪಣೆಯ ಸುಗಮತೆಯನ್ನು ಪಡೆದುಕೊಂಡಿದ್ದುವು. ಇತಿಹಾಸವನ್ನು ಕುರಿತಂತೆ ನಮ್ಮಲ್ಲಿ ಸಂಶೋಧನೆ ಆಗುತ್ತಲಿತ್ತು; ಆಗಿತ್ತು. ಅಲ್ಲದೆ ಎಲ್ಲಕ್ಕಿಂತಲೂ ಮುಖ್ಯವಾಗಿ ತ.ರಾ.ಸು. ಹಲವಾರು ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ರಚಿಸಿ ತಮ್ಮ ಒರವಣಿಗೆಯನ್ನು ಕುದುರಿಸಿಕೊಂಡಿದ್ದರು; ಹಾಗೂ ಕಾದಂಬರಿಯ ರಚನೆಯಲ್ಲಿ ಒಂದು

1 ಇಲ್ಲಿನ ವರೆಗಿನ ವಿವೇಚನೆಯಲ್ಲಿ ಕೆಲವೊಂದು ಅಂಶಗಳನ್ನು ಕುರ್ತಕೋಟಿಯವರ ‘ನಡೆದು ಬಂದ ದಾರಿ’ಯಿಂದ ಆರಿಸಿಕೊಳ್ಳಲಾಗಿದೆ.

ಅಚ್ಚುಕಟ್ಟುತನವನ್ನು ನಿರ್ವಹಿಸಬಲ್ಲ ಶಕ್ತಿಯನ್ನು ಪಡೆದುಕೊಂಡಿದ್ದರು. ಆದ್ದರಿಂದಲೇ ಅವರಿಗೆ ಐತಿಹಾಸಿಕ ಕಾದಂಬರಿಗಳಲ್ಲಿ ಗತಕಾಲದ ಸಹಜ ಸ್ವಾಭಾವಿಕವಾದ ಜೀವಂತ ಚಿತ್ರವನ್ನು ತರುವುದು ಅಸಾಧ್ಯವೆನಿಸಲಿಲ್ಲ; ಮತ್ತು ಇತಿಹಾಸದ ರೋಚಕ ಪ್ರಪಂಚ ವನ್ನು ಕಣ್ಣುಕುಕ್ಕುವಂತೆ ತರಬಲ್ಲ ಶಕ್ತಿ ಅವರಿಗೆ ಬಹು ಸುಲಭವಾಗಿ ಕರಗತವಾಯಿತು. ಆದ್ದರಿಂದಲೇ ತ.ರಾ.ಸು. ಐತಿಹಾಸಿಕ ಕಾದಂಬರಿಗಳ ರಚನೆಯಲ್ಲಿ ವಿಶಿಷ್ಟತೆಯನ್ನು ದಕ್ಕಿಸಿಕೊಳ್ಳಲು ಸಾಧ್ಯವಾಯಿತು ಎಂದು ಎನಿಸುತ್ತದೆ.

ತ.ರಾ.ಸು. ಅವರ 'ಹಂಸಗೀತೆ'ಯಲ್ಲಿ ಈ ವಿಶಿಷ್ಟ ಅಂಶಗಳು ಮಡುಗಟ್ಟಿ ನಿಂತಿವೆ. ಆದರೆ ಇದು ಅವರ ಇತರ ಐತಿಹಾಸಿಕ ಕಾದಂಬರಿಗಳಿಂದ ಹಾಗೂ ಸಾಮಾ ಜಿಕ ಕಾದಂಬರಿಗಳಿಂದ ವಿಭಿನ್ನವಾಗಿ ವಿಶಿಷ್ಟವಾಗಿ ನಿಲ್ಲುತ್ತದೆ. ಏಕೆಂದರೆ ತ.ರಾ.ಸು., ಅ.ನ.ಕೃ. ರವರ ಭಾವನಾಪರತೆಯ ಸಂಪ್ರದಾಯದಲ್ಲಿ ಹುಟ್ಟಿ ಬಂದವರು; ಹಾಗೂ ಅವರ ದಾರಿಯಲ್ಲಿಯೇ ಮುಂದುವರಿದವರು. ಅವರ ಮೊದಲ ಕಾದಂಬರಿಗಳು ಅ.ನ.ಕೃ.ರವರ ಹಾದಿಯನ್ನೇ ಅನುಸರಿಸಿ ನಡೆದವಾದರೂ ಅನಂತರದವು ಬದುಕನ್ನು ರೊಚ್ಚಿನಿಂದ ಹಾಗೂ ಆವೇಶದ ದೃಷ್ಟಿಯಿಂದ ನೋಡಿದವುಗಳಾಗಿವೆ. ಈ ಬಗೆಯ ಕಾದಂಬರಿಗಳಲ್ಲಿ ತ.ರಾ.ಸು. ಜೀವನದ ತಲ್ಲಣ ತಳಮಳಗಳನ್ನು, ಆವೇಶ ಆಕ್ರೋಶ ಗಳನ್ನು ತೀವ್ರವಾದ ರೊಚ್ಚಿನಿಂದ ಹಾಗೂ ಸೇಡಿನ ದೃಷ್ಟಿಯಿಂದ ಚಿತ್ರಿಸಿದ್ದಾರೆ; ಮತ್ತು ಜನಜೀವನದ ದಾರುಣ ಮುಖಗಳನ್ನು ರಾಜಸಕಳೆಯೊಂದಿಗೆ ಅತೀವ ದ್ವೇಷದಿಂದ ರೇಖಿಸಿದ್ದಾರೆ. ಅವರ ಒಳತೋಟಿಯ ಕುದಿತ ಅವರ ಸಾಮಾಜಿಕ ಹಾಗೂ ಇತರ ಐತಿಹಾಸಿಕ ಕಾದಂಬರಿಗಳಲ್ಲಿ ಲಾವಾಕಣಗಳಂತೆ ಸಿಡಿದಾಡಿವೆ. ಈ ಉತ್ಕಟತೆಗೆ ಹಾಗೂ ರಭಸ ಪ್ರವೃತ್ತಿಗೆ ಅವರ ಭಾವನೆಗಳು ತೀವ್ರವಾಗಿ ಹೊಯ್ದಾ ಡುತ್ತ ತಳಮಳಗೊಳ್ಳುತ್ತವೆ. ಈ ದಿಸೆಯಲ್ಲಿ "ತ.ರಾ.ಸು. ಜೀವನವನ್ನು ಕಂಡೊಡನೆ ರಣಗರ್ಜನೆಯನ್ನು ಕೇಳಿದ ಯುದ್ಧದ ಕುದುರೆಯಂತೆ ಉತ್ಸುಕರಾಗಿ ಬಿಡುತ್ತಾರೆ...... ಉತ್ಕಟತೆ ಎಂಬುದು ತ.ರಾ.ಸು. ಸಾಹಿತ್ಯದ ಅಂಗದಲ್ಲಿ ರಕ್ತದಂತೆ ಚಲಿಸುತ್ತದೆ" ಎಂಬ ಹೇಳಿಯನ್ನು ಒಪ್ಪಬಹುದಾಗಿದೆ.[2] ಇದಕ್ಕೆ ತ.ರಾ.ಸು. ಅವರ ಶೈಲಿಯಲ್ಲಿನ ಬೀಸುಬಿರುಸುಗಳು ಕೂಡ ಇಂಬುಕೊಡುತ್ತವೆ. ತ.ರಾ.ಸು. ಸಾಮಾಜಿಕ ಕಾದಂಬರಿ ಗಳಲ್ಲಿ ತೋರಿದ ಈ ಉದ್ವಿಗ್ನ ಮನೋಭಾವವೇ ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಕೂಡ ಪ್ರತಿಫಲಿಸಿರುವುದು ಗಮನಾರ್ಹ. ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ರಚಿತವಾಗಿರುವ ಅವರ 'ಹೊಸಹಗಲು' 'ತಿರುಗುಬಾಣ' 'ರಕ್ತರಾತ್ರಿ' 'ಕಂಬನಿಯ ಕುಯಿಲು' ಮುಂತಾದವುಗಳಲ್ಲಿ ವೀರ ಜೀವನದ ಅದ್ದೂರಿ ಪ್ರಪಂಚ ಅದಮ್ಯ ಉತ್ಸಾಹ ಉದ್ರೇಕಗಳಿಂದ, ಎಲ್ಲೆಮೀರಿದ ತಲ್ಲಣದಿಂದ ಬಣ್ಣ ಬಣ್ಣವಾಗಿ ಕಣ್ಣು ಕೋರೈಸುವಂತೆ ಚಿತ್ರಿವಾಗಿದೆ. ಇವರ ಸಾಮಾಜಿಕ ಹಾಗೂ ಮೇಲೆ ಉಲ್ಲೇಖಿಸಿರುವ ಐತಿಹಾಸಿಕ ಕಾದಂಬರಿಗಳ ಪಾತ್ರಗಳು ಜೀವಂತಿಕೆಯನ್ನು ಮೈಗೂಡಿಸಿಕೊಂಡಿದ್ದರೂ,

2. 'ಯುಗಧರ್ಮ ಹಾಗೂ ಸಾಹಿತ್ಯದರ್ಶನ,' ಕುರ್ತಕೋಟಿ, ಪು. ೧೯೯.

ಅಬ್ಬರದ ಅತಿರೇಕತೆಯಲ್ಲಿ ಅಳ್ಳಕವಾಗುತ್ತ ಬರುವುದರಿಂದ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತ ಬರುತ್ತವೆ. ಆದರೆ ಪಾತ್ರಗಳ ರೂಪಕಲ್ಪನೆ ಹಾಗೂ ಬೆಳವಣಿಗೆಯಲ್ಲಿ ಅ.ನ.ಕೃ. ಅವರಲ್ಲಿನ ಕೃತಕತೆ, ವಿಸಂಗತಿ, ಅಸಹಜತೆ ಮುಂತಾದ ಅರಕೆಗಳು ಇಲ್ಲಿ ಕಾಣದ, ಇವು ಅವಕ್ಕಿಂತ ಹೆಚ್ಚು ಸಹಜ ಹಾಗೂ ಸುಸಂಬದ್ಧವಾಗಿವೆ.

ಈ ದೃಷ್ಟಿಯಿಂದ ನೋಡಿದಾಗ ಅವರ 'ಹಂಸಗೀತೆ' ಬಹಳ ತೂಕವುಳ್ಳ ವಿಶಿಷ್ಟ ಕೃತಿಯಾಗಿದೆ. ಇಲ್ಲಿ ಅವರ ಉಳಿದ ಕಾದಂಬರಿಗಳಲ್ಲಿ ಕಾಣಬರುವ ಉದ್ರೇಕ ಚಿತ್ರ ಗರಿಷ್ಠವಾಗಿ ಪಾತ್ರವಹಿಸದೆ, ತುಸುಮಟ್ಟಿನ ಸ್ವಸ್ಥತೆಯನ್ನು ಪಡೆದುಕೊಂಡು ಪ್ರಕಟಿತವಾಗಿರುವುದು ಕಾಣಬರುತ್ತದೆ. ಬದುಕನ್ನು ಸ್ವಲ್ಪವಾಗಿಯಾದರೂ ತಾಳ್ಮೆಯಿಂದ ಒಳಹೊಕ್ಕು ನೋಡಲು ಪ್ರಯತ್ನಿಸಿರುವ ತ.ರಾ.ಸು. ಇಲ್ಲಿ ತಮ್ಮ ಉಳಿದ ಕಾದಂಬರಿಗಳಲ್ಲಿನ ಭಾಷೆಯ ಜೋರನ್ನು, ಢಾಳುತನವನ್ನು ತರದೆ, ಇಡಿಯಾಗಿಯೋ ಕಣ್ಸೆಳೆಯುವಂಥ ಹದ ಹಾಗೂ ಶಾಂತತೆಯನ್ನು ಪ್ರದರ್ಶಿಸಿರುವುದು ಗಮನೀಯವಾಗಿದೆ. ಉಳಿದ ಕಾದಂಬರಿಗಳಲ್ಲಿ ಕಾಣಬರುವ ಅವಸರದ ನಿರ್ಮಿತಿ ಹಾಗೂ ಧಾವಂತ ಇಲ್ಲಿ ಮಾಯವಾಗಿದೆ. ಆದರೆ ಪ್ರಸುಪ್ತವಾಗಿರುವ ಉತ್ಕಟತೆ ಅಲ್ಲಲ್ಲಿ ಪುಟಿಯುವುದರಿಂದ ಒಂದು ಬಗೆಯ ಹೊಯ್ದಾಟ ಹಾಗೂ ತಾಕಲಾಟ ಅಲ್ಲಲ್ಲಿ ಕಾಣಬರುತ್ತದೆ. ಇದು ಪಾತ್ರಗಳಿಗೆ ಜೀವಂತಿಕೆಯನ್ನು, ಕತೆಗೆ ವೇಗದ ಓಟವನ್ನು, ಕಥನವಿನ್ಯಾಸಕ್ಕೆ ರೋಚಕತೆಯ ಕೌತೂಹಲಿಕೆಯನ್ನು ಸರಬರಾಜು ಮಾಡುತ್ತವೆ. ಆದ್ದರಿಂದಲೇ 'ಹಂಸಗೀತೆ' ಎಲ್ಲಿಯೂ ಯಾವ ಬಗೆಯ ಅಡ್ಡಿ ಆತಂಕಗಳಿಗೂ ಒಳಗಾಗದೆ ತನ್ನ ಗಮ್ಯವನ್ನು ಸಮತೋಲನ ರೂಪದಲ್ಲಿ ಮುಟ್ಟುತ್ತದೆ. ಓದುಗನನ್ನು ನಿರಾತಂಕವಾಗಿ ಓದಿಸಿಕೊಂಡು ಹೋಗುತ್ತದೆ.

'ಹಂಸಗೀತೆ'ಯಲ್ಲಿ ಚಿತ್ರದುರ್ಗದ ನಾಯಕರ ಕಾಲಕ್ಕೆ ಸೇರಿದ ಸಂಗೀತಗಾರ ವೆಂಕಟಸುಬ್ಬಯ್ಯನ ಕತೆ ನಿರೂಪಿಸಲ್ಪಟ್ಟಿದೆ. ಈ ಕಾದಂಬರಿ, ಘಟನಾ ಪ್ರಧಾನ ಕಾದಂಬರಿಯಾಗಿದ್ದರೂ, ವೆಂಕಟಸುಬ್ಬಯ್ಯನೇ ಕೇಂದ್ರಪಾತ್ರವಾಗಿದ್ದು ಅವನ ದುರಂತ ಕಥೆ ರಂಜನೀಯ ರೀತಿಯಲ್ಲಿ ಬಿತ್ತರಿಸಲ್ಪಟ್ಟಿದೆ. ಈ ಪಾತ್ರದ ಜೀವದ್ರವ್ಯ ಚಿತ್ರದುರ್ಗದ ರೋಮಾಂಚಕ ಐತಿಹಾಸಿಕ ನೆಲಗಟ್ಟಿನಲ್ಲಿರುವುದರಿಂದ ಹಾಗೂ ತ.ರಾ.ಸು. ರವರ ಭಾವಾವೇಶ ಅಭಿವ್ಯಕ್ತಿಯೇ ಕಾದಂಬರಿಯ ಅಂತಃಸತ್ವವಾಗಿರುವುದರಿಂದ ಅಲ್ಲಲ್ಲಿ ಕಥನ ವಿನ್ಯಾಸ ಹಾಗೂ ಪಾತ್ರ, ತವಕಪೂರಿತವಾಗಿ ತಾಕಲಾಡಿವೆ. ಈ ಕಾದಂಬರಿಯಲ್ಲಿ ವೆಂಕಟಸುಬ್ಬಯ್ಯನವರ ಜೀವನದ ಆಗುಹೋಗುಗಳು ಒಂದು ಮಗ್ಗುಲಾದರೆ, ಅದನ್ನು ಪೋಷಿಸಲು ಬರುವ ರೋಮಾಂಚಕ ಭಾವೋನ್ಮೀಲನ ಐತಿಹಾಸಿಕಾಂಶಗಳು ಮತ್ತೊಂದು ಮಗ್ಗುಲಾಗಿದೆ. ಆದ್ದರಿಂದಲೇ ಕಾದಂಬರಿಯ ಕಥಾನಕವು ದ್ವಿಮುಖಿಯಾಗಿದೆ.

ಪಾತ್ರದ ರೂಪವನ್ನು ತ.ರಾ.ಸು. ಉಚಿತವಾಗಿ ಹಾಗೂ ಲೀಲಾಜಾಲವಾಗಿ ಮೂಡಿಸಬಲ್ಲರು ಎಂಬುದಕ್ಕೆ ವೆಂಕಟಸುಬ್ಬಯ್ಯನವರ ಪಾತ್ರದ ಚಿತ್ರಣವೇ

ಸಹಜತೆ ಹಾಗೂ ಕ್ರಮಬದ್ಧತೆ ಉತ್ತಮ ನಿದರ್ಶನವಾಗಿದೆ. ಬಾಲ್ಯದಿಂದಲೂ ಸಂಗೀತದ ಬಗ್ಗೆ ಅಪಾರವಾದ ಆಸಕ್ತಿ ಹಾಗೂ ತೀವ್ರ ಅಭಿಮಾನವನ್ನು ತೋರುವ ವೆಂಕಟಸುಬ್ಬಯನ ಪಾತ್ರವನ್ನು ಹಂತಹಂತವಾಗಿ ಚಿತ್ರಿಸಿದ್ದಾರೆ. ಬಾಲ್ಯದಲ್ಲಿನ ಅವರ ವರ್ತನೆಗಳು ಈ ರೀತಿ ಚಿತ್ರಣಗೊಂಡಿವೆ :

"ಕಸ್ತೂರಿ ರಂಗಾಚಾರ್ಯರ ಹತ್ತಿರ ಪಾಠ ಕಲಿಯಲು ಹೋಗುತ್ತಿದ್ದ ವೆಂಕಟಸುಬ್ಬ ಶಾಲೆಯಲ್ಲಿ ಅನ್ಯಮನಸ್ಕತೆಯಿಂದ ಇರುತ್ತಿದ್ದನಾದರೂ, ಬಾಯಿ ಪಾಠ ಒಪ್ಪಿಸು ಎಂದರೆ ಅದನ್ನು ಮಾತ್ರ ರಾಗವಾಗಿ, ಕಿವಿಗಿಂಪಾಗುವಂತೆ, ಕೇಳುವವರ ಮನಸ್ಸು ಸೆರೆಯಾಗುವಂತೆ, ಜೇನು ಸುರಿವಂತೆ, ಹೇಳುತ್ತಿದ್ದ. ಆದರೆ ಹೇಳಹೇಳುತ್ತಲೇ, ಬೀದಿಯಲ್ಲಿ ಹಸು ಕೂಗಿದರೆ, ದೇವಾಲಯದ ಇದುರಿನ ಅಷ್ವತ್ಥವೃಕ್ಷದ ಎಲೆಗಳು ಗಾಳಿಯಲ್ಲಿ ಗೆಜ್ಜೆಯಲುಗಿಸಿದಂತೆ, ಸದು ಮಾಡಿದರೆ, ಯಾವುದಾದರೂ ಹಕ್ಕಿ ಕುಕಿಲಿದರೆ, ದೇವಾಲಯದ ಗಂಟೆ ಗಂಭೀರವಾಗಿ ಮೊಳಗಿದರೆ, ಆ ಸದ್ದು ಕೇಳಲೆಂದೇ ಕಿವಿದೆರೆದು ನಿಂತಿದ್ದಂತೆ, ಹೇಳುತ್ತಿದ್ದುದನ್ನು ಮರೆತು ಹೊರಗಿನಿಂದ ಬಂದ ನಾದದಲ್ಲಿ ಲೀನವಾಗಿಬಿಡುತ್ತಿದ್ದ"

(ಹಂಸಗೀತೆ ಪು. ೫೪)

"ಎಲ್ಲಾದರೂ ಯಾರಾದ್ರೂ ಸಂಗೀತ ಹೇಳ್ತಾ ಇದ್ರೆ ಕೇಳೋದಿರಲಿ. ಜೇನು ಜುಂಯ್ ಅಂದರೆ, ದುಂಬಿ ಹಾರ್‍ತಾ ಇದ್ರೆ. ನೀರು ಸದ್ದು ಮಾಡ್ತಾ ಇದ್ರೆ ಅದನ್ನೇ ಕೇಳ್ತಾ ಮೈ ಮರ್‍ತು ಬಿಡ್ತಾ ಇದ್ನಂತೆ...ಹತ್ತು ಹನ್ನೆರಡು ವರ್ಷದ ಹುಡುಗ ದುರ್ಗದಲ್ಲಿರಲಿ, ಇಪ್ಪತ್ತು ಮೈಲಿ ಸುತ್ತಿನಲ್ಲಿ ಎಲ್ಲಾದರೂ ಸಂಗೀತಾನೋ, ನಾಟಕಾನೋ ಇದೆ ಅಂದ್ರೆ ಸರಿ ಮನೇಲಿ ಹೇಳದೆ ಕೇಳದೆ ಎದ್ದು ಬಿಡೋನು"

(ಹಂಸಗೀತೆ ಪು. ೭೨)

ಈ ಎರಡು ವಿವರಗಳಲ್ಲಿ ಅವನಲ್ಲಿ ಯಾವ ರೀತಿ ಸಂಗೀತವನ್ನು ಕಲಿಯಬೇಕೆಂಬ ಆಸೆ ಆಕಾಂಕ್ಷೆಗಳು ಪ್ರಸುಪ್ತವಾಗಿದ್ದುವು, ಪ್ರಬಲವಾಗಿದ್ದುವು ಎಂಬುದನ್ನು ಸೂಚಿಸಿದೆ. ಇವುಗಳಲ್ಲಿ ಅವನು ರಾಗವಾಗಿ ಬಾಯಿಪಾಠ ಒಪ್ಪಿಸುತ್ತಲಿದ್ದುದು, ಸಂಗೀತ ಕೇಳಲು ಓಡಿಹೋಗುತ್ತಿದ್ದುದು ಸಹಜವಾಗಿದೆ; ನೀರು ಸದ್ದು ಮಾಡುವಾಗ, ಜೇನು ಜುಂಯ್ ಅಂದ್ರೆ, ದೇವಾಲಯದ ಗಂಟೆ ಹೊಡೆದರೆ ಅದರಲ್ಲಿ ಲೀನನಾಗುತ್ತಿದ್ದ ಎಂಬುದರಲ್ಲಿ ಸ್ವಲ್ಪವಾದರೂ ಭಾವುಕತೆಯ ಬಣ್ಣವಿದೆ. ಆದರೂ ಇದು ಅವನ ಪಾತ್ರರಚನೆಯ ದೃಷ್ಟಿಯಿಂದ ಗಮನಾರ್ಹ ಎಂದೇ ಹೇಳಬಹುದು. ಮೊದಲಿನ 'ಸಹಜ ಆಸೆ'ಯ ಆಶಯಕ್ಕೆ ಕೋಗಿಲೆ ಹಾಡಿನ ಕಥೆಯಿಂದ ಇನ್ನಷ್ಟು ಒತ್ತುಕೊಡಲ್ಪಟ್ಟಿದೆ. ಆದರೆ ಅದೇ ಅವನು ತಿರುಮಲಯ್ಯನಿಂದ ವಿದ್ಯೆ ಕಲಿತು, ಅವನನ್ನು ಸೋಲಿಸುವಾಗ ದೇವರ ಆಶೀರ್ವಾದದ ಬಲದಿಂದ 'ಹಿಂದೆಂದೂ ಮುಂದೆಂದೂ ಹಾಡದಂಥ ಪೂರ್ವಿಕಲ್ಯಾಣಿ ಯಲ್ಲಿ ಹಾಡುವುದು' ಅನಂತಯ್ಯನ ಜೊತೆ ಮಾತನಾಡುವಾಗ ಮುಗಿಲಿನಿಂದ ಗಾನ

ಧಾರೆ ಸುರಿಯುತ್ತಿದೆ ಎಂದು ಅಂದುಕೊಳ್ಳುವುದು, ತಂದೆ ಜ್ಯೋತಿಷ್ಯ ಹೇಳಿಕೊಡುವಾಗ ನಕ್ಷತ್ರ, ಗ್ರಹಗಳು ಸಂಗೀತ ಪ್ರಪಂಚವನ್ನು ನಿರ್ಮಿಸುತ್ತಿದೆ ಎಂದುಕೊಳ್ಳುವುದು ಎಂಬಲ್ಲೆಲ್ಲಾ ಭಾವಾವೇಶದ ರಂಗು ಚೆನ್ನಾಗಿಯೇ ಮೆತ್ತಿಕೊಂಡಿದೆ. ಇದರಿಂದ ವೆಂಕಟಸುಬ್ಬಯ್ಯ ಒಬ್ಬ 'ದೊಡ್ಡ ಸಂಗೀತಗಾರ' ಎಂಬುದನ್ನು ಭಾಸವಾಗಿಸಲು ಪ್ರಯತ್ನಿಸಿದೆ. ಅವರೆ ಸದಾನಂದ ಬುವಾನ ಹತ್ತಿರ ವೆಂಕಟಸುಬ್ಬಯ್ಯ ಸಂಗೀತ ಪಾಠ ಕಲಿಯಲು ಮಾಡುವ ವಿಶ್ವ ಪ್ರಯತ್ನ, ಸಂಗೀತದ ಬಗ್ಗೆ ಅವನಿಗಿರುವ ಅಚಲಪ್ರೇಮವನ್ನು ಹಾಗೂ ಆಸಕ್ತಿಯನ್ನು ದ್ಯೋತಿಸುತ್ತದೆ ಎನ್ನಬಹುದು. ಇಲ್ಲೆಲ್ಲಾ ತ.ರಾ.ಸು. ಸಂಗೀತದ ಮುಖೇನ ವೆಂಕಟಸುಬ್ಬಯ್ಯನ ವ್ಯಕ್ತಿತ್ವವನ್ನು ರೂಪಿಸಲು ಹಾಗೂ ದೀಪಿಸಲು ಪ್ರಯತ್ನಿಸುತ್ತಾರೆ; ಮತ್ತೆ ಸಂಗೀತದ ಬಗ್ಗೆ ಇರತಕ್ಕ ವೆಂಕಟಸುಬ್ಬಯ್ಯನ ಕಳಕಳಿಯನ್ನು ಅತಿಶಯೋಕ್ತಿಯಾಗಿಸುತ್ತ ಭಾವಾತಿರೇಕತೆಯನ್ನು ಮೆರೆಯುತ್ತಾರೆ. ಸಂಗೀತವನ್ನು ವೆಂಕಟಸುಬ್ಬಯ್ಯನವರ ಪಾತ್ರದ ಬೆಳವಣಿಗೆಗೆ ವ್ಯಕ್ತಿತ್ವದ ನಿರ್ದೇಶನದ ಅಭಿವ್ಯಂಜಕತೆಗೆ ಬರುವಂತೆ ದುಡಿಸಿಕೊಳ್ಳುತ್ತಾರೆ ಎಂದು ಎನಿಸುತ್ತದೆ. ರಾಗವನ್ನು ಅವರು ಸಾಕ್ಷಾತ್ಕರಿಸಿಕೊಳ್ಳುವುದು, ಮನುಷ್ಯನಿಗಾಗಿ ಹಾಡುವುದಿಲ್ಲ ಎಂಬ ತನ್ನ ಪ್ರತಿಜ್ಞೆಗೆ ಎದುರಾಗಿ ಉನ್ಮತ್ತ ಟೀಪೂವಿನ ಅರಮನೆಯಲ್ಲಿ ಹಾಡಿದರೆ ಎಲ್ಲಿ ತನ್ನ 'ನಾದದೇವಿ'ಗೆ ಅಪಮಾನ ಒದಗುತ್ತದೆಯೋ ಎಂದು ತಹತಹಿಸಿ ಹಾಡದಿರುವುದು, ನಾಲಗೆಯನ್ನು ಕತ್ತರಿಸಿಕೊಳ್ಳುವ ಮಟ್ಟಕ್ಕೆ ಹೋಗುವುದು, ಸಾಯುವವರೆಗೂ ನಾಲಗೆ ಹೋಗಿದ್ದರೂ ಮೂಗಿನಲ್ಲೇ ಕೇವಲ ಉಚ್ಛ್ವಾಸ ನಿಶ್ವಾಸಗಳಿಂದ ಹಾಡುತ್ತಿದ್ದುದು ಇಲ್ಲೆಲ್ಲ ಸಂಗೀತದ ಮುಖೇನವೇ ಅವರ ಪಾತ್ರವನ್ನು ನಿರ್ಧರಿಸುವ ರಿವಾಜು ಎದ್ದು ಕಾಣುತ್ತದೆ.

ವೆಂಕಟಸುಬ್ಬಯ್ಯನವರ ಮನೋಧರ್ಮವನ್ನು ಕುರಿತಂತೆ ಇಲ್ಲಿ ಹೇಳುವುದು ಆವಶ್ಯಕ ಎನಿಸುತ್ತದೆ. ಬಾಲ್ಯದಿಂದಲೂ ಹಠ, ಅಭಿಮಾನ, ಸ್ವಾಭಿಮಾನ, ನ್ಯಾಯನಿಷ್ಠುರಪ್ರವೃತ್ತಿ, ದುಡುಕುತನ ಈ ಬಗೆಯ ರಾಜಸಗುಣಗಳ ಪ್ರತೀಕವಾಗಿ ಅವರ ಬೆಳವಣಿಗೆ ಸಾಗುತ್ತದೆ. ಕಲಿಸುವ ಸಂಗೀತವಿದ್ವಾಂಸರ ಹತ್ತಿರ ಮೊಂಡುಹೂಡಿ ಬಂಡುಗಾರಿಕೆ ಮಾಡುವುದು ಇದನ್ನು ಸಮರ್ಥಿಸಿವರೂ, ಗುರುಗಳಾದ ತಿರುಮಲಯ್ಯನವರನ್ನು ಎದುರಿಸಿ ಸಂಗೀತದಲ್ಲಿ ಹಾಡಿ ಸೋಲಿಸುವುದೇ ಇದನ್ನು ಸ್ಫುಟಗೊಳಿಸುವುದು. ಈ ಪ್ರಸಂಗ ವೆಂಕಟಸುಬ್ಬಯ್ಯನವರ ಅಭಿಮಾನ ಹಾಗೂ ಹಠಮಾರಿತನವನ್ನು ದ್ಯೋತಿಸಿದರೆ, ಸದಾನಂದ ಬುವಾನ ಬಳಿ ಪರದಾಡಿ ಸ್ವಸಾಮರ್ಥ್ಯದಿಂದ ಹಾಗೂ ಅತ್ಯಂತ ಅಭಿಮಾನದಿಂದ ಸಂಗೀತ ಕಲಿಯುವುದು ಛಲ ಹಾಗೂ ನಿಷ್ಠೆಯನ್ನು ಎತ್ತಿ ತೋರಿಸುತ್ತದೆ. ಈ ರೀತಿಯಲ್ಲಿ ಏನು ಮಾಡಲೂ ಭೀತನಾಗದೆ, ಧೀರನಿರ್ಧಾರದಿಂದ ನಿಲ್ಲುವ ವೆಂಕಟಸುಬ್ಬಯ್ಯನವರನ್ನು ಕಾದಂಬರಿಯ ದೃಷ್ಟಿಯಿಂದ ನೋಡಿದಾಗ 'ನಾಲಗೆಯನ್ನು ಕತ್ತರಿಸಿಕೊಳ್ಳಲು ಏರುವ ವ್ಯಕ್ತಿ' ಎಂದು ನಿರ್ಧರಿಸಬಹುದು. ರಾಗವನ್ನು ಒಪ್ಪಿ ಹಾಡುವ ಪ್ರಸಂಗ ಬರುವ ಮುಂದೆ ತನ್ನ ಸಫಲವಾದ ಸನ್ನಾಹ ಎಂದು

ಆ ಪಾತ್ರಕ್ಕೆ ಎನಿಸುವುದರಲ್ಲಿ ಆಶ್ಚರ್ಯವಿಲ್ಲ. ವೆಂಕಟಸುಬ್ಬಯ್ಯನವರಲ್ಲಿ ಮಾನವೀಯುವಾದ ಸಹಜ ಭಾವನೆಗಳು ಕೂಡ ಇದ್ದುವು ಎಂಬುದು ಗಮನಾರ್ಹವಾಗಿದೆ. ಸಾಧಕರಾಗಿದ್ದು ಸದಾನಂದ ಬುವಾನ ಬಳಿ ಸಂಗೀತ ಕಲಿಯುತ್ತಲಿದ್ದಾಗ ಹೆಣ್ಣನ್ನು ಕಂಡು ಆಕರ್ಷಿತರಾಗುವುದು, ಬುವಾನ ಪತ್ನಿರ ವಿದ್ಯೆ ಕಲಿತು ಊರಿಗೆ ಹಿಂತಿರುಗಿದ ಅನಂತರ ಅಹಮಿಕೆಯ ಬಳುಕಿನಿಂದ ಮೆಟ್ಟಿ ಮೆರೆಯುವುದು, ಸ್ವಾಮಿಗಳ ಶಿಷ್ಯನಿಂದ ಸೋತಾಗ ಆತ್ಮಹತ್ಯೆ ಮಾಡಿಕೊಳ್ಳಲೆತ್ನಿಸುವುದು, ಚಂದ್ರಸಾನಿಯ ಪ್ರಣಯಪ್ರೇಮಕ್ಕೆ ಕಾಮಾತುರರಾಗಿ ಕಾತರದಿಂದ ಕುದಿಯುವುದು ಮುಂತಾದ ಕಡೆಗಳಲ್ಲಿ ಅವರಂತರಂಗದ ಹುಯ್ಲು ತುಮುಲಗಳಂ ಸ್ಪಷ್ಟವಾಗಿ ಒಡಮೂಡಿವೆ.

ಅನಂತಯ್ಯ, ವೀರಣ್ಣಜ್ಜ, ಚಂದ್ರಾಸಾನಿ, ಸದಾನಂದ ಬುವಾ ಮುಂತಾದ ಪಾತ್ರಗಳು ಗೌಣವಾಗಿದ್ದು ವೇದಿಕೆಯ ಮೇಲೆ ಬಂದು ಮೊಗ ತೋರಿಸಿ ತಮ್ಮ ಕೆಲಸ ಮುಗಿದ ಅನಂತರ ಮರೆಯಾಗುವ ನಾಟಕದ ಪಾತ್ರಗಳಂತೆ ಗೋಚರವಾಗಿ ಅಮುಖ್ಯ ಎನ್ನುವಂತೆ ಭಾಸವಾದರೂ ಸಂಗತಿಗಳನ್ನು ಸರ ಪೋಣಿಸಲೋಸುಗ ಬಂದು ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರಿಂದ ಕೂಡ ನಮ್ಮ ಮನಸೆಳೆಯುತ್ತವೆ.

ಈ ಕಾದಂಬರಿಯಲ್ಲಿ ಎದ್ದು ಕಾಣುವ ಒಂದು ಪ್ರಸ್ಫುಟವಾದ ಅಂಶವೆಂದರೆ ಅದರ ತಂತ್ರಬದ್ಧ ನಿರೂಪಣೆ, ಇಲ್ಲಿ ಕಾದಂಬರಿಕಾರರು ಅನ್ವೇಷಕ ಪಾತ್ರವಹಿಸುತ್ತಾರೆ[3]. ಈ ಒಂದು ತಂತ್ರದಿಂದ ಇಡೀ ಕಾದಂಬರಿಯ ಕಥೆ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಇದು ಓದುಗನ ಮನದಲ್ಲಿ ಒಂದು ಬಗೆಯ ಅದಮ್ಯ ಕುತೂಹಲವನ್ನು ಹುಟ್ಟಿಸಲು ಸಹಾಯಕವಾಗಿರುವಂತೆ, ಕಾದಂಬರಿಗೆ ಒಂದು ಮೆರುಗನ್ನು ಕೂಡ ಕೊಡುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ಸಾರ್ಥಕವಾಗಿದೆ ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ. ಒಂದೆರಡು ಶಂಕೆಗಳು ಕೂಡ ಹುಟ್ಟುತ್ತವೆ. ವೀರಣ್ಣಜ್ಜ ತಲೆಯನ್ನು ಬಲಿಕೊಡುವಾಗ ಒಬ್ಬನೇ ದೇವರನ್ನು ಪ್ರಾರ್ಥಿಸಿಕೊಂಡು ಮಾತನಾಡುವುದು, ಸದಾನಂದ ಬುವಾನ ಬಳಿ ವೆಂಕಟಸುಬ್ಬಯ್ಯ ಸಂಗೀತವನ್ನು ಕಲಿಯುವಾಗ ಸಂಗೀತ ಮೀಮಾಂಸೆಯನ್ನು ನಡೆಸುವುದು ಮುಂತಾದವನ್ನು ಮುರುಘೇಂದ್ರಪ್ಪ ಹಾಗೂ ಚಿನ್ನಪ್ಪನವರು ಹೆಚ್ಚು ಖಚಿತ ದನಿಯಲ್ಲಿ ಹಾಗೂ ಸ್ಫುಟವಾಗಿ ನಿರೂಪಿಸುವುದು ಈ ತಂತ್ರಕ್ಕೆ ಹೊರಗೆ ನಿಲ್ಲುತ್ತದೆ ಎನಿಸುತ್ತದೆ. ಆದರೆ ಈ ತಂತ್ರವೇ ಕಾದಂಬರಿಗೆ ಒಂದು ಶಿಲ್ಪವನ್ನು ರೂಪಿಸಿ ಕೊಡುತ್ತದೆ, ಎಂಬುದನ್ನು ಮರೆಯುವಂತಿಲ್ಲ; ಮತ್ತು ಈ ತಂತ್ರ ಇಲ್ಲದಿದ್ದಲ್ಲಿ, ವೆಂಕಟಸುಬ್ಬಯ್ಯನವರ ಕಥೆ ತ.ರಾ.ಸು.ರವರಿಂದ ಕಾದಂಬರಿಕಾರರಾಗಿ ನಿರೂಪಿಸಲ್ಪಟ್ಟಿದ್ದಲ್ಲಿ ಇನ್ನಷ್ಟು ಭಾವಾ

---

3. ಈ ಬಗೆಯ ಅನ್ವೇಷಕ ಪಾತ್ರವನ್ನು ಕಾರಂತರು ಎಂಟು ವರ್ಷಗಳ ಅನಂತರ 'ಅಳಿದ ಮೇಲೆ, ಕಾದಂಬರಿಯಲ್ಲಿ ವಹಿಸಿದ್ದಾರೆ. ಆದರೆ ಅಲ್ಲಿನ ಅರ್ಥಪೂರ್ಣತೆ ಮತ್ತು ಯಶಸ್ಸು 'ಹಂಸಗೀತೆ'ಯಲ್ಲಿ ಕಾಣಬರುವುದಿಲ್ಲವೆಂಬುದು ಗಮನಾರ್ಹ ಅಂಶ.

ವೇಶದ ಢಾಳುತನದಲ್ಲಿ ಕೆತ್ತಲ್ಪಡುತ್ತಿತ್ತು ಎಂದೆನಿಸುತ್ತದೆ. ಈ ಬಗೆಯ ತಂತ್ರ, ನವೀನವಾಗಿದ್ದು ಓದುಗನನ್ನು ಆಕರ್ಷಿಸುತ್ತದೆ.

ತ.ರಾ.ಸು.ರವರು ಕಾದಂಬರಿಯ ಮುನ್ನುಡಿಯಲ್ಲಿ "ಸಂಗೀತಗಾರನೊಬ್ಬನ ಬಾಳಿನ ಹಂದರದ ಮೇಲೆ ಹಿಂದಿನ ಮತ್ತು ಇಂದಿನ ಸಂಸ್ಕೃತಿಯನ್ನು ಚಿತ್ರಿಸಲೆಳಸಿದ್ದೇನೆ" ಎಂದು ಹೇಳಿರುವುದು[4] ಕಾದಂಬರಿಯ ಬೆಳವಣಿಗೆ ಹಾಗೂ ಆಶಯಗಳನ್ನು ಸ್ಪಷ್ಟಪಡಿಸುವಂತೆ ಈ ತಂತ್ರಕ್ಕೆ ಕೂಡ ನಿಮಿತ್ತವಾಗಿ ನಿಂತಿದೆ. ಆದರೆ ತ.ರಾ.ಸು. ಇಲ್ಲಿ ಪೂರ್ವಗ್ರಹಪೀಡಿತರಾಗಿ ಹಿಂದಿನ ಸಂಸ್ಕೃತಿಯನ್ನು ಘನವಾದುದು ಎಂದೂ, ಇಂದಿನ ಸಂಸ್ಕೃತಿಯನ್ನು ಜೊಳ್ಳು ಎಂದೂ ಒಪ್ಪಿಕೊಂಡು ವ್ಯವಹರಿಸುವುದು ಕಂಡುಬರುತ್ತದೆ. ಆದರೆ ಈ ಸಾಂಸ್ಕೃತಿಕ ಭಿನ್ನತೆಯನ್ನು ಅವರು ನಿರೂಪಕರಾಗಿ ಕಾದಂಬರಿಯಲ್ಲಿ ಪ್ರವೇಶಿಸಿ, ವೆಂಕಟಸುಬ್ಬಯ್ಯನವರ ಬಾಳಪಕಳೆಗಳನ್ನು ಅನ್ವೇಷಿಸುತ್ತ ಹೊರಡುವಲ್ಲಿ ಸಿಗತಕ್ಕ ಪ್ರತಿವಕ್ತೃ (Informent)ಗಳಿಂದ ಹೇಳಿಸುತ್ತಾರೆಯೇ ಹೊರತು ಅವನ್ನು ಎಲ್ಲಿಯೂ ಸ್ಫುಟವಾಗಿ ಸ್ಪಷ್ಟೀಕರಿಸುವುದಿಲ್ಲ. ಪ್ರತಿಯೊಬ್ಬರಿಂದಲೂ ವಿಷಯಗಳನ್ನು ಹೊರಡಿಸುವ ಪ್ರಯತ್ನದಲ್ಲಿ ಅವರು ಹಿಂದಿನವರಿಗೆ ಮತ್ತು ಇಂದಿನವರಿಗೆ ನೀಡತಕ್ಕ ಹೋಲಿಕೆ ವ್ಯತ್ಯಾಸಗಳ ಮಾತುಗಳಷ್ಟೇ ಎರಡೂ ಸಂಸ್ಕೃತಿಗಳನ್ನು ಹರಡುತ್ತದೆ ಎಂದು ತ.ರಾ.ಸು. ನಂಬಿಕೊಂಡಿದ್ದಾರೆ. ಆದರೆ ವಾಸ್ತವಿಕವಾಗಿ ಎಲ್ಲೂ ಎರಡು ಸಂಸ್ಕೃತಿಗಳನ್ನು ಸ್ಪಷ್ಟವಾಗಿ, ಮುಖಾಮುಖಿಯಾಗಿ ನಿಲ್ಲುವಂತೆ ಮಾಡಿಲ್ಲ–ಇಲ್ಲವೇ ಪ್ರತ್ಯೇಕವಾಗಿ ಪರಿಚಯ ಮಾಡಿಕೊಟ್ಟಿಲ್ಲ.

> "ಮಾತು, ಬಡಾಯಿ ಎಲ್ಲ ಈ ಕಾಲದ ಜನಕ್ಕೆ.... ಈಗಿನ ಹಾಗೆ ಆಗಿನವರು ದೇವರಿಗೆ, ದೊರೆಗೆ ಎರಡು ಬಗೆದು ಬದುಕುವ ಜನವಲ್ಲ. ಈಗ ಬಿಡಿ, ಬೇರೆಲ್ಲೂ ಹಿಟ್ಟು ಕಾಣದ ಜನ, ಹಾಳುಗುಡಿ ದೇವರಿಗೆ ಗಂಟು ಬೀಳುತ್ತಾರೆ. ದೇವರಿಗೆ ಇಡೋ ನಾಮಾನ ಜನಕ್ಕೆ ಇಟ್ಟು ಹೊಟ್ಟೆ ಹೊರೆಯುತ್ತಾರೆ."
>
> "ಈಗೇನಿದೆ–ಅಂಥ ಗುರುವೂ ಇಲ್ಲ, ಅಂಥ ಶಿಷ್ಯರೂ ಇಲ್ಲ. ಹೊಟ್ಟೆ ಪಾಡಿನ ವಿದ್ಯೆ; ಹೊಟ್ಟೆಪಾಡಿಗಾಗಿ ಕಲಿಸೋದು; ಹೊಟ್ಟೆಪಾಡಿಗಾಗಿ ಕಲಿಯೋರು...ಈ ಶಾಲೆ, ಈ ಪಾಠ, ಈ ಮೇಷ್ಟರು ಎಲ್ಲಾ ಈಗಿನ ಜನಕ್ಕೆ ಕಾಲ ಕಸ...ಅಮರ ಕಲಿಸೋರಿಗೆ ಅರಮನೇಲಿ ಮರ್ಯಾದೆ ಇದ್ದ ಕಾಲ ಇತ್ತು. ಈಗ ನೀನು ಯಾವ ಊರ ಗೌಡ ಅಂತ ಕೇಳೋರು ದಿಕ್ಕಿಲ್ಲ."
>
> (ಹಂಸಗೀತೆ ಪು. ೫೯, ೪೫)
>
> "ನಮ್ಮ ಕಾಲ್ಕೆ ಒಬ್ಬ ಧಣೀನ ನೆಚ್ಕೊಂಡು ತಾಳಿ ಕಟ್ಟಿಸಿಕೊಳ್ದೆ ಇದ್ರೂ ಹೆಂಡ್ತಿ ಹಂಗೆ ಇರ್ತಾ ಇದ್ವಿ. ಅವ್ರೂ ಹಂಗೆ ಸಾಕೋರು. ಈಗೇನದೆ? ಬಂದೋರ್ಗೆಲ್ಲಾ ಬಾಳ್ವೆ ಮಾಡಿದ್ರೂ ಒಪ್ಪೊತ್ತಿನ ಕೂಳು ಬೇಯಾಕಿಲ್ಲ. ಕಾಸು ವಿಷಾ ಆಗದೇ. ಬದುಕಿನ ಬಾಳಲ್ಲ-ಸತ್ತ ಸಾವಲ್ಲ" (ಹಂಸಗೀತೆ ಪು. ೧೯೭)

4. 'ಹಂಸಗೀತೆ' ಮುನ್ನುಡಿ.

ಇದರಲ್ಲಿ ಮೊದಲನೆಯದನ್ನು ಅರ್ಜಕರಾದ ಮುರುಘೇಂದ್ರಪ್ಪ, ಮೋಷ್ಟರು ಗೋಪಾಲಾಚಾರ್ಯ ಮತ್ತು ಮೂರನೆಯದನ್ನು ವೇಶ್ಯೆ ಪುಟ್ಟತಾಯಮ್ಮ ಹೇಳುತ್ತಾರೆ. ಈ ಬಗೆಯ ಮಾತನ್ನೇ ಚಿನ್ನಪ್ಪ ಹಾಗೂ ಕಾದಂಬರಿಕಾರರು ಕೊನೆಯಲ್ಲಿ ಹೇಳುತ್ತಾರೆ. ಇಲ್ಲೆಲ್ಲಾ ಹಿಂದಿನ ಜನ ಬಾಳಿ ಬದುಕಿದ ಪ್ರಶಂಸೆ ಹಾಗೂ ಇಂದಿನವರನ್ನು ಕುರಿತು ಟೀಕೆ ಮಾತ್ರ ಕಾಣಬರುತ್ತದೆ. ಆದರೆ ಈ ಬಗೆಯ ಮಾತುಗಳಷ್ಟೇ ಸಂಸ್ಕೃತಿಯನ್ನು ಸಂಪೂರ್ಣ ಪರಿಚಯಿಸಿಕೊಡುತ್ತದೆ ಎಂಬುದನ್ನು ಒಪ್ಪಿಕೊಳ್ಳಲಿಕ್ಕೆ ಕಷ್ಟವಾಗುತ್ತದೆ. ಈ ಬಗೆಯ ಮಾತುಗಳಷ್ಟೇ ಎರಡೂ ಸಂಸ್ಕೃತಿಯನ್ನು ಸ್ಫುಟವಾಗಿ ಹರಹುತ್ತದೆ ಎಂಬುದನ್ನು ತ.ರಾ.ಸು. ಒಪ್ಪಿಕೊಂಡು ಅದಕ್ಕೊಂದು ತಂತ್ರವನ್ನು ಹುಡುಕಬೇಕಾದ ಅವಶ್ಯಕತೆ ಇತ್ತೆ ಎನಿಸುತ್ತದೆ. ವೀರಣ್ಣಜ್ಜನ ಪ್ರಸಂಗವನ್ನು ಬಳಸಿಕೊಂಡು ಹಿಂದಿನ ಸಂಸ್ಕೃತಿಯನ್ನು ಉಜ್ವಲೀಕರಿಸಿದರೂ, ಅದೊಂದು ಪ್ರವಾದಿಯ ಪವಾಡದಂತೆ ಭಾಸವಾಗುತ್ತದೆ; ಅಲ್ಲದೆ ಕಥಾದೃಷ್ಟಿಯಿಂದ ಅಲ್ಲಿ ಬೇಕಾದುದು 'ಮನುಷ್ಯರಿಗಾಗಿ ಇನ್ನು ಮೇಲೆ ಹಾಡುವುದಿಲ್ಲ' ಎಂಬ ವೆಂಕಟಸುಬ್ಬಯ್ಯನ ಪ್ರತಿಜ್ಞೆ ಅಷ್ಟೆ.

ಕಲಾವಿದನ ಬಾಳು ಒಂದು ರೀತಿಯಲ್ಲಿ ಕಷ್ಟಮಯವಾಗಿರುತ್ತದೆ, ಅವನು ಒಂದಲ್ಲ ಒಂದು ರೀತಿಯಲ್ಲಿ ಯಶಸ್ಸು ಗಳಿಸಿಯೇ ತೀರುತ್ತಾನೆ. ಅವನ ಬಾಳು ನೋವು ನಿರಾಶೆಗಳ, ಎಡರುತೊಡರುಗಳ ಮಡಿಲಲ್ಲಿ ಮಂಡಿಕೆಗೊಂಡಿರುತ್ತದೆ ಎಂಬೊಂದು ಸಿದ್ಧಸೂತ್ರಕ್ಕೆ ಇದು ಕೂಡ ಪಕ್ಕಾಗಿದೆ. ಕಲಾವಿದನ ಬಾಳು ದುರಂತಕ್ಕೆ ಒಳಗಾಗಿ ತೀರುತ್ತದೆ ಎಂಬುದನ್ನು ಇದು ಕೂಡ ಒಪ್ಪಿಕೊಂಡು ಅದನ್ನೇ ನಿರ್ವಹಿಸಿದೆ. ಆದರೆ ಎಷ್ಟರಮಟ್ಟಿಗೆ ವಾಸ್ತವಿಕತೆಯನ್ನು ಕದಡದೆ, ಕಲಾತ್ಮಕವಾಗಿ ಇದು ಅದನ್ನು ಆಗುಗೊಳಿಸಿದೆ ಎಂಬುದನ್ನು 'ಸುಬ್ಬಣ್ಣ' ಹಾಗೂ 'ಸಂಧ್ಯಾರಾಗ' ಇವುಗಳ ಜೊತೆ ಹೋಲಿಸಿ ನೋಡಿದಾಗ ತಿಳಿಯುತ್ತದೆ.

ಮಾಸ್ತಿಯವರ 'ಸುಬ್ಬಣ್ಣ' ಮತ್ತು ಕೃಷ್ಣರಾಯರ 'ಸಂಧ್ಯಾರಾಗ' ಈ ಕೃತಿಯ ಮೇಲೆ ನಿಚ್ಚಳವಾದ ಪ್ರಭಾವವನ್ನು ಬೀರಿದೆ. ಕೃಷ್ಣರಾಯರ ಭಾವನಾವೇಶದ ಮಾರ್ಗದಲ್ಲಿಯೇ ನಡೆದು, ತ.ರಾ.ಸು. ಅವರ ಪ್ರಭಾವಕ್ಕೆ ಸಿಲುಕಿದುದು ಸಹಜ ಎನಿಸಿದರೂ, ಮಾಸ್ತಿಯವರ 'ಸುಬ್ಬಣ್ಣ'ದಿಂದ ಅಪಾರವಾಗಿ ಪ್ರಭಾವಿತರಾಗಿರುವುದು ವಿಸ್ಮಯನ್ನುಂಟು ಮಾಡುತ್ತದೆ. ಸಂಧ್ಯಾರಾಗದಲ್ಲಿಯಂತೆ ಇಲ್ಲಿಯೂ ರಾಗದಲ್ಲಿ ವಿಶಿಷ್ಟ ಪ್ರಾವೀಣ್ಯ ಪಡೆಯುವುದು, ಹಾಡನ್ನು ಹಾಡುತ್ತಲೇ ದುರಂತಕ್ಕೆ ಒಳಗಾಗುವುದು. ತಂದೆ ತಾಯಿಗಳಿಂದ ವಿದ್ಯೆಯನ್ನು ಕಲಿಯಲು ಅವಕಾಶ ಪಡೆದುಕೊಳ್ಳುವುದು, ವಿದ್ಯೆಯನ್ನು ಕಷ್ಟಪಟ್ಟು ಕಲಿಯುವುದು ಅನುಸರಣೆಯ ಫಲವಾಗಿದೆ ಎನಿಸುತ್ತದೆ. ಈ ಕಾದಂಬರಿ ತನ್ನ ಶಿಲ್ಪವನ್ನು ಇಡೀ ಕಥೆಯನ್ನು ನೇರ್ಪುಗೊಳಿಸುವ, ತಂತ್ರ ನೈಪುಣ್ಯದಿಂದ ಪಡೆದುದೇ ಆದರೂ, ವಸ್ತು ವಿನ್ಯಾಸ ಹಾಗೂ ಪಾತ್ರ ಪರಿಕಲ್ಪನೆಯ ಮಟ್ಟದಲ್ಲಿ 'ಸುಬ್ಬಣ್ಣ'ದಿಂದ ದಟ್ಟವಾಗಿ ಪ್ರಭಾವಿತವಾಗಿದೆ,

'ಸುಬ್ಬಣ್ಣ'ದಲ್ಲಿ ಸುಬ್ಬಣ್ಣ ಬಾಲ್ಯದಲ್ಲಿ ಶ್ಲೋಕಗಳನ್ನು ರಾಗವಾಗಿ ಹಾಡುತ್ತ ಸಂಗೀತದ ಅಭಿಲಾಷೆ ತೋರುವಂತೆ, ಇಲ್ಲಿಯೂ ವೆಂಕಟಸುಬ್ಬಯ್ಯ ಬಾಯಿಪಾಠವನ್ನು ರಾಗವಾಗಿ ಒಪ್ಪಿಸುತ್ತ ಕೋಗಿಲೆಯ ಹಾಡಿಗೆ ಮರುಳಾಗಿ ನಿಲ್ಲುತ್ತಾನೆ. ಅಲ್ಲಿನ ಸಿತಾಸಾನಿಯ ಪಾತ್ರವೇ ಇಲ್ಲಿನ ಚಂದ್ರಾಸಾನಿಯ ಪಾತ್ರಕ್ಕೆ ಪ್ರೇರಕವಾಗಿರುವಂತೆ ಕಾಣುತ್ತದೆ. ಅಲ್ಲಿ ವೆಂಕಟರಮಣನೊಂದಿಗೆ ಸವಾಲಿಗೋಸುಗ ಪಿಟೀಲಿನಲ್ಲಿ ಬಾರಿಸುವ ಭೈರವೀ ರಾಗವೇ, ಇಲ್ಲಿ ವೆಂಕಟಸುಬ್ಬಯ್ಯನವರು ಭೈರವಿಯನ್ನು ಒಲಿಸಿಕೊಳ್ಳುವಂತೆ ಪಡಿಮೂಡಿದೆ. ಸುಬ್ಬಣ್ಣನನ್ನು ಸುಬೇದಾರರು ತಮ್ಮ ಮನೆಯಲ್ಲಿ ಪಿಟೀಲು ವಾದನವನ್ನು ಕೇಳುವ ಪ್ರಸಂಗವೇ, ಇಲ್ಲಿ ಟೀಪ್ಪೂ ವೆಂಕಟಸುಬ್ಬಯ್ಯನವರನ್ನು ಹಾಡಲು ಬಲವಂತಪಡಿಸಿ ಅವರ ದುರಂತಕ್ಕೆ ಕಾರಣನಾಗುವ ಪ್ರಸಂಗ, ಅಲ್ಲಿನವರ ಪ್ರತಿಬಿಂಬವೇ ಐತಿಹಾಸಿಕರಂಗಿನೊಂದಿಗೆ ಬಂದಿದೆಯೋನೋ ಎಂದು ಭಾಸವಾಗುತ್ತದೆ. ಸುಬ್ಬಣ್ಣದಲ್ಲಿ ಕಾದಂಬರಿಕಾರರೇ ಕಥೆಯನ್ನು ನಿರೂಪಿಸುವಂತೆ, ಇಲ್ಲಿಯೂ ತ.ರಾ.ಸು.ವೇ ಕಥೆಯನ್ನು ಹೇಳಿಕೊಂಡು ಹೋಗುತ್ತಾರೆ. ಒಟ್ಟಿನಲ್ಲಿ ಈ ಕಾದಂಬರಿ 'ಸುಬ್ಬಣ್ಣ'ದ ಎಲ್ಲ ಪ್ರಭಾವವನ್ನೂ ಅರಗಿಸಿಕೊಂಡು, ಅಲ್ಲಿನ ಕಥಾವಸ್ತುವನ್ನೇ ಬೇರೊಂದು ಬಣ್ಣಸವರಿ ನೋಡುವುದರ ಮುಖೇನ ನಿರ್ಮಿತವಾಗಿದೆ ಎನ್ನಬಹುದು.

ಆದರೆ ಇದು ಮಾಸ್ತಿಯವರ 'ಸುಬ್ಬಣ್ಣದಷ್ಟು ಸತ್ವಶಾಲಿ ಹಾಗೂ ಪ್ರಭಾವಶಾಲಿ ಕೃತಿಯಾಗಿಲ್ಲ. ಮಾಸ್ತಿಯವರದು ಹಿರಿದಾದ ಜೀವನದೃಷ್ಟಿ. ಭಾವಾವೇಶದ ಗುಂಗಿಗೆ ಸಿಲುಕಿದೆ. ಚಿತ್ತಸ್ವಾಸ್ಥ್ಯವನ್ನು ಪಡೆದುಕೊಂಡುದರಿಂದಲೇ ಅವರ 'ಸುಬ್ಬಣ್ಣ' ಹೆಚ್ಚು ವಾಸ್ತವಿಕವಾಗಿದೆ. ಅಲ್ಲದೆ ಮಾಸ್ತಿಯವರು 'ಸುಬ್ಬಣ್ಣ'ದಲ್ಲಿ ಪರಿಪಕ್ವತೆ ಹಾಗೂ ಜೀವನಾನುಭವದ ದಟ್ಟಣೆಯಿಂದ ಸುಬ್ಬಣ್ಣನ ಸಾತ್ವಿಕ ಜೀವನದ ಒಳಮೈಯನ್ನು ಸುಸ್ಫುಟವಾಗಿ ರೇಖಿಸುತ್ತ ಬರುತ್ತಾರೆ. ಸುಬ್ಬಣ್ಣನ ಮನೋಧರ್ಮವನ್ನು ರೂಪಿಸುತ್ತ ಹಾಗೂ ದೀಪಿಸುತ್ತ, ಸಂಗೀತ ಅವನ ಬದುಕಿನಲ್ಲಿ ಎಂಥ ಪಾತ್ರ ವಹಿಸಿತು ಮತ್ತು ಅವನ ಬದುಕನ್ನು ಹೇಗೆ ಮಾಗಿಸತೊಡಗಿತು ಎಂಬುದರ ಕಡೆ ಮಾಸ್ತಿ ಹೆಚ್ಚು ಎಚ್ಚರವಿತ್ತಿದ್ದಾರೆ. ಸುಬ್ಬಣ್ಣನ ಅಂತರಂಗವಾದರೂ ಸಂಗೀತದ ಮುಖೇನ ಪರಿಪೂರ್ಣತೆ ಪಡೆಯುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಮಾಸ್ತಿಯವರ ಸಾಹಿತ್ಯಿಕ ಕಲ್ಪನೆಯು ಜೀವನದ ನೈಜ ಅನುಭವ ಹಾಗೂ ಪ್ರಬುದ್ಧ ಮನಸ್ಸಿನ ಶುಭ್ರಶೀಲ ಕೊಸರಾಗಿ ಬಂದಿರುವುದು ಅಲ್ಲಿನ ವಾಸ್ತವಿಕತೆಯನ್ನು ಇನ್ನಷ್ಟು ದಟ್ಟವಾಗಿಸಿದೆ. 'ಹಂಸಗೀತೆ' ಯಾದರೋ ರಂಜಕತೆ, ಭಾವಾವೇಶ ಹಾಗೂ ಭಾವಾತಿರೇಕಗಳ ಬಗಲಿಗೆ ಬಿದ್ದು ಸಹಜತೆಯನ್ನು ಮರೆಮಾಚುತ್ತ, ನಮ್ಮ ಬದುಕಿನ ಜೀವಂತಸ್ತರಕ್ಕೆ ದೂರ ನಿಲ್ಲುತ್ತದೆ. ತ.ರಾ.ಸು. ಅನುಭವಗಳನ್ನು ಜರಡಿ ಹಿಡಿಯದೆ ನಿರರ್ಗಳವಾಗಿ ಭಾವ ತುಂಬಿ ಅಭಿವ್ಯಕ್ತಿಸಿ, ಚಾಪಲ್ಯದಿಂದ ಅವನ್ನಲಂಕರಿಸುವುದರಿಂದ ವಾಸ್ತವಿಕ ಕಕ್ಷೆಯಲ್ಲಿ ಸನ್ನಿವೇಶ ಮತ್ತು ಪಾತ್ರ ರಚನೆ ಮಾಡಲಾಗುವುದಿಲ್ಲ. ಅಲ್ಲದೆ ತ.ರಾ.ಸು.ಗೆ ಕಥೆಗಿಂತ ವಿಷಯ ನಿರೂಪಣೆ ಮುಖ್ಯ ಎನಿಸುವುದರಿಂದ, ಅಂಥದ

ಎಂಥದೋ ಒಂದು ಹುಮ್ಮಸ್ಸಿನಲ್ಲಿ, ಇಲ್ಲವೇ ತಂತ್ರದಲ್ಲಿ ರೂಹುದಳೆಯುತ್ತದೆ. ಮಾಸ್ತಿಯವರ 'ಸುಬ್ಬಣ್ಣ'ದ ಬಂಧ, ಭಾಷೆ, ಕಲಾವಿನ್ಯಾಸ ಇಲ್ಲಿ ಕಾಣಬರುವುದಿಲ್ಲ. ಅಲ್ಲಲ್ಲಿ ತ.ರಾ.ಸು. ರವರ ಅದಮ್ಯ ಉತ್ಕಟತೆ ಅಪ್ರಯತ್ನವಾಗಿ ಪುಟಿಯುವುದರಿಂದ ಇರುವ ಸಹಜತೆಯು ತುಣುಕು ಭಾವಾವೇಶತೆಯು ಬಣ್ಣ ಪಡೆದುಬಿಟ್ಟಿದೆ.

'ಸಂಧ್ಯಾರಾಗ'ದೊಡನೆ ಈ ಕಾದಂಬರಿಯನ್ನು ಹೋಲಿಸಿದರೆ ಅದಕ್ಕಿಂತ ಇದು ಪರವಾಗಿಲ್ಲ ಎನಿಸುತ್ತದೆ. 'ಸಂಧ್ಯಾರಾಗ'ದಲ್ಲಿ ಚಿತ್ರಿತವಾಗಬೇಕಾದುದು ಗಾಯಕ ಲಕ್ಷ್ಮಣನ ಪಾತ್ರವೇ ಆದರೂ, ಅವನ ಪಾತ್ರ ದಳ ದಳವಾಗಿ ಅರಳಿಲ್ಲ. ಅಲ್ಲಿ ಲಕ್ಷ್ಮಣನಿ ಗಿಂತ ಶ್ರೀನಿವಾಸರಾಯರ ಹಾಗೂ ಮೀನಾಕ್ಷಮ್ಮನವರ ಪಾತ್ರಕ್ಕೆ ಹೆಚ್ಚು ಒತ್ತು ಕೊಡಲ್ಪಟ್ಟಿರುವುದರಿಂದ ಅವರ ಪಾತ್ರಗಳೇ ನಮ್ಮನ್ನು ಹೆಚ್ಚು ಆಕರ್ಷಿಸುತ್ತದೆ. ಲಕ್ಷ್ಮಣನ ವ್ಯಕ್ತಿತ್ವ ಘನವಾದುದು ಎಂದು ನಮಗೆ ಭಾವನಾವಶತೆಯಿಂದ ಭಾಸವಾಗಿ ಸುತ್ತಾರೆಯೇ ಹೊರತು ಸಹಜತೆಯಿಂದ ಅನುಭವಗಮ್ಯವಾಗಿಸುವುದಿಲ್ಲ. "ಲಕ್ಷ್ಮಣನ ವ್ಯಕ್ತಿವಿಕಾಸದಲ್ಲಿ ಎಂಥದೇ ಹೋರಾಟ ತೂಗಾಟಗಳನ್ನು ಎತ್ತಿ ತೋರಿಸುವುದಿಲ್ಲ" 5 "ಅವನ ಕಲೆ ನಿರಾತಂಕವಾಗಿ ಮುಂದುವರಿಯುತ್ತದೆ. ಅವನ ಯಾವುದೇ ಸಂಗೀತ ಕಛೇರಿ ಅಯಶಸ್ವಿಯಾಗುವುದಿಲ್ಲ, ಲಕ್ಷ್ಮಣನಿಗೆ ಬರತಕ್ಕ ದುಃಖಗಳೆಲ್ಲ ಅನ್ಯಕ್ಷೇತ್ರ-ದ್ದಾಗಿವೆ" 6. ಆಕಸ್ಮಿಕ ಹಾಗೂ ಪೂರ್ವನಿಯೋಜಿತ, ಘಟನೆಗಳನ್ನು ಭಾವನೆಗಳ ರಂಗಿನಿಂದ ಕೋದುಕೊಂಡು ಹೋಗವುದು ಕೃತಕ ಎನಿಸುತ್ತದೆ. ಲಕ್ಷ್ಮಣನನ್ನು ಅವನ ಕಲಾಜೀವನದಲ್ಲೂ ಒಂದೇ ಬಗೆಯ ಭಾವಾವೇಶಿತ ಸಂದರ್ಭಗಳಲ್ಲಿ ಇಡಲ್ಪಟ್ಟಿರು ವುದರಿಂದ ಅವನ ಪಾತ್ರದ ಬೆಳವಣಿಗೆಗೆ ಅಸಹಜ ಎನಿಸುತ್ತದೆ. 'ಹಂಸಗೀತೆ'ಯಲ್ಲಿ ಕೆಲಮಟ್ಟಿಗೆ ಈ ದೋಷಗಳು ಮಾಯವಾಗಿವೆ. ವೆಂಕಟಸುಬ್ಬಯ್ಯನವರ ಕಲಾ ಜೀವನಕ್ಕೆ ಮೊದಲಿನಿಂದಲೂ ಒಂದಲ್ಲ ಒಂದು ರೀತಿ ಅಡ್ಡಿ ಅಡಚಣೆಗಳು ಒದಗಿ ಬರುತ್ತಲೇ ಇರುತ್ತವೆ. ಆಕ್ರೋಶವೇ ಅವರ ವ್ಯಕ್ತಿತ್ವದ ಮೂಲಧಾತುವಾಗಿ ನಿಲ್ಲು ವುದರಿಂದ ದುಡುಕು ನಿರ್ಧಾರಗಳು ಅವರ ಸಂಗೀತಾಭ್ಯಾಸಕ್ಕೆ ಆತಂಕ ಉಂಟು ಮಾಡುತ್ತದೆ. ಗುರುವಾದ ತಿರುಮಲಯ್ಯನನ್ನು ಸೋಲಿಸಿದಾದ ಅವನಿಗೆ ಯಾರೂ ಸಂಗೀತವನ್ನು ಹೇಳಿಕೊಡದಿರುವುದು, ಸದಾನಂದ ಬುವಾನಂತಹ ವ್ಯಕ್ತಿಯ ಹತ್ತಿರ ಸಂಗೀತ ಕಲಿಯಲು ಕಷ್ಟಪಡುವುದು, ಕಲಿತು ಬಂದು ಅನಂತರ ಸ್ವಾಮಿಗಳ ಶಿಷ್ಯನಿಂದ ಪರಾಜಿತನಾಗುವುದು, ಚಂದ್ರಸಾನಿಯ ಬಳಿ ವ್ಯವಹರಿಸುವಾಗ ಸಂಗೀತ ಮರೆಯುವುದು ಇವೆಲ್ಲಾ ಸ್ವಲ್ಪವಾದರೂ ಸಹಜವಾಗಿದ್ದು ಕಲಾವಿದನ ಕಲಾಜೀವನ ದಲ್ಲಿ ನಡೆಯುತಕ್ಕ ಘಟನೆಗಳಾಗಿವೆ. ಅಲ್ಲದೆ ಕಾದಂಬರಿಯಲ್ಲಿ ವೆಂಕಟಸುಬ್ಬಯ್ಯ ವಿವಿಧ ಸಂದರ್ಭಗಳಲ್ಲಿ ಇಡಲ್ಪಟ್ಟು ಪೋಷಿತರಾಗುತ್ತ ಬರುವುದು ಅವರ ಪಾತ್ರದ ಬೆಳವಣಿಗೆಯಲ್ಲಿ ಸಹಜತೆ ಇದೆ ಎನ್ನಲು ಸಮರ್ಥನೆಯನ್ನು ನೀಡುತ್ತದೆ. ಇಷ್ಟಾಗಿ

---

5. ರಂ. ಶ್ರೀ ಮುಗಳಿ, 'ಸಾಹಿತ್ಯೋಪಾಸನ' ಪು. ೬೩
6. ಕೀರ್ತನಾಥ ಕುರ್ತಕೋಟಿ, 'ನಡೆದುಬಂದ ದಾರಿ' ಪು. ೧೨೮೯

ವಾಸ್ತವತೆಯ ಬುನಾದಿಯ ಮೇಲೆ 'ಹಂಸಗೀತೆ'ಯನ್ನು ಕಾದಂಬರಿಕಾರರು ಕಟ್ಟಲು ಪ್ರಯತ್ನಿಸಿರುವ ಅಂಶ ಗೋಚರವಾದರೂ, ಅದು ಭಾವಾವೇಶದ ಕಟ್ಟಡವಾಗಿ ಪರಿಣಮಿಸಿರುವುದು ಸೋಜಿಗವನ್ನುಂಟು ಮಾಡುತ್ತದೆ.

ತ.ರಾ.ಸು.ರವರ ಶೈಲಿಯನ್ನು ಕುರಿತಂತೆ ಎರಡು ಮಾತು ಹೇಳಬಹುದು. ಅ.ನ.ಕೃ.ಗಿಂತ ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ವರ್ಣಮಯವಾಗಿ ತ.ರಾ.ಸು. ಗದ್ಯಶೈಲಿಯನ್ನು ಬಳಸಿಕೊಂಡಿದ್ದಾರೆ. ಆದರೆ ಈ ಬಗೆಯ ಅವರ ರಭಸವಾದ ಮಾತುಗಳು, ಹರಿತವಾದ ಸಂಭಾಷಣೆ ಮತ್ತು ಉಪಮೆರೂಪಕಗಳ ದುಂದುಗಾರಿಕೆ ಸಾಮಾನ್ಯ ಮಟ್ಟದ ಓದುಗನನ್ನು ಮಾತ್ರ ತೃಪ್ತಿಪಡಿಸುತ್ತದೆ. ಈ ಬಗೆಯ ಶೈಲಿಯಿಂದ ಜ್ವಲಂತ ಸನ್ನಿವೇಶ, ಖಚಿತ ಪಾತ್ರಪರಿಕಲ್ಪನೆ, ಕಥೆಯಲ್ಲಿ ಕ್ರಿಯಾಶೀಲತೆ ತರಬಲ್ಲರಾದರೂ ಹೆಚ್ಚಿನ ಅರ್ಥವಂತಿಕೆಯನ್ನು ಧ್ವನಿಸಲು ಸಾಧ್ಯವಾಗುವುದಿಲ್ಲ. ಕುರ್ತಕೋಟಿಯವರು ಹೇಳುವ ತ.ರಾ.ಸು. ಅವರ ಶೈಲಿ ಅತಿಶಯೋಕ್ತಿಯ ರಾಮಗನ್ನಡಿಯಾಗಿ ವಿಷಮತೆಯನ್ನು ಅಸಹನೀಯವಾಗಿ ಮಾಡುತ್ತದೆ.... ವಾಸ್ತವತೆಯನ್ನು ಚಿತ್ರಿಸುವ ಲವಲವಿಕೆಯಲ್ಲಿ ಅದು ಹುಸಿಯಾಗುತ್ತದೆ" 7 ಎಂಬುದನ್ನು ಅವರ ಬಹುತೇಕ ಕಾದಂಬರಿಗಳಿಗೆ ಅನ್ವಯಿಸಿ ನೋಡಿದಾಗ ಸಹಜ ಎನಿಸಿದರೂ, ಈ ಕಾದಂಬರಿಗೆ ಸಮುಚಿತವೇ ಎಂದು ಪ್ರಶ್ನಿಸಿಕೊಂಡಾಗ ಹಿಂದುಮುಂದು ನೋಡಬೇಕಾಗುತ್ತದೆ.

ಕೊನೆಯದಾಗಿ "ಕನ್ನಡದ ಐತಿಹಾಸಿಕ ಕಾದಂಬರಿಕಾರರಲ್ಲಿ ತ.ರಾ.ಸು. ಅವರಿಗೆ ಮೇಲಾದ ಸ್ಥಾನವು ಸಲ್ಲತಕ್ಕದ್ದು" 8 ಎಂಬ ಮುಗಳಿಯವರ ಹೇಳಿಕೆಯೊಂದಿಗೆ ನಾವೂ ದನಿಗೂಡಿಸಬಹುದಾದರೂ 'ಹಂಸಗೀತೆ'ಯಂತಹ ಕಾದಂಬರಿ ಗಟ್ಟಿಮುಟ್ಟಾದ ಶುದ್ಧ ಕಲಾಕೃತಿಯಾಗಿ ನಿಲ್ಲದೆ, ರೋಚಕವಾದ ಕಥೆಯನ್ನು ಮೈಗೂಡಿಸಿಕೊಂಡಿರುವ ಕಥನಾತ್ಮಕ ಐತಿಹಾಸಿಕ ಕಾದಂಬರಿಯಾಗಿ ಮಾತ್ರ ನಿಂತಿದೆ ಎಂಬುದನ್ನು ಮರೆಯುವಂತಿಲ್ಲ.

---

7. ಕೀರ್ತಿನಾಥ ಕುರ್ತಕೋಟಿ, 'ಯುಗಧರ್ಮ ಹಾಗೂ ಸಾಹಿತ್ಯದರ್ಶನ' ಪು. ೧೯೮
8. ರಂ. ಶ್ರೀ ಮುಗಳಿ, ಕನ್ನಡ ಸಾಹಿತ್ಯದ ಇತಿಹಾಸ' ಪು. ೨೫೩.

ಶಿಶು—ದೈತ್ಯ

—ರಾಮಕೃಷ್ಣ ಜೋಷಿ.

ವಸ್ತು-ತಂತ್ರ ಪ್ರಯೋಗಗಳ ವೈವಿಧ್ಯದೊಂದಿಗೆ ನಿರೂಪಣಾ ನಾವೀನ್ಯವನ್ನು ರೂಢಿಸಿಕೊಂಡು, ಸಮಕಾಲೀನ ಸಮಾಜದ ಸಮಸ್ಯಾಮುಖಗಳನ್ನು ತೆರೆದಿಡುತ್ತಾ, ಅ.ನ.ಕೃ. ಗರಡಿಯಲ್ಲಿ ತಯಾರಾಗಿ ಗುರುವನ್ನೂ ಮೀರಿಸಿದ ಶಿಷ್ಯರಾದ ತ.ರಾ.ಸು. ರವರು ಕನ್ನಡ ಕಾದಂಬರೀ ಪ್ರಪಂಚಕ್ಕೆ ಸುಮಾರು ನಲವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ನೀಡಿದ್ದಾರೆ. 1957ರಲ್ಲಿ ಪ್ರಕಟಗೊಂಡ ಅವರ "ಶಿಶುದೈತ್ಯ" ದೈತ್ಯರನ್ನು ನಿರ್ಮಾಣ ಮಾಡುತ್ತಿರುವ ನಾಗರಿಕ ಸಮಾಜದತ್ತ ತೋರುಬೆರಳಾಗಿರುವ ಮನೋವಿಶ್ಲೇಷಣಾತ್ಮಕ ಕಾದಂಬರಿ.

"ಈಶ್ವರ ಅಲ್ಲಾ ತೇರೇ ನಾಮ್, ಸಬ್‌ಕೋ ಸನ್ಮತಿ ದೇ ಭಗವಾನ್" ಎಂಬ ಉದಾತ್ತ ಭಾವನೆಯೊಂದಿಗೆ ಅಹಿಂಸಾಮೂರ್ತಿಯಾದ ಮಹಾತ್ಮರ ಮುಂದಾಳುತನದಲ್ಲಿ, ಸುದೀರ್ಘವಾದ ಹೋರಾಟದ ನಂತರ ನಮ್ಮ ದೇಶಕ್ಕೆ ಸ್ವಾತಂತ್ರ್ಯವೇನೋ ಬಂತು. ಆದರೆ ಅದರೊಂದಿಗೇ ಮಹಾತ್ಮರ ಧೈರ್ಯ-ಪ್ರಯತ್ನವನ್ನೂ ಮೀರಿ ದೇಶ ವಿಭಜನೆಯಾಯಿತು. ಸುಪ್ತವಾಗಿದ್ದ ಮತೀಯ ಘರ್ಷಣೆಯ ಸ್ಫೋಟದಿಂದಾಗಿ ರಕ್ತಪಾತ ನಡೆದು ಅಲ್ಲೂ-ಇಲ್ಲೂ ಸಾವಿರಾರು ಕುಟುಂಬಗಳು ಉಧ್ವಸ್ತವಾಗಿ ಅದರ ಕಾವನ್ನು ಇನ್ನೆಷ್ಟು ಪೀಳಿಗೆ ಅನುಭವಿಸಬೇಕೋ ಗೊತ್ತಿಲ್ಲ. ಈ ದಾರುಣ ಸಮಸ್ಯೆಯ ಒಂದು ಪಾರ್ಶ್ವವೇ ಕಾದಂಬರಿಯ ಮೂಲ ಸ್ರೋತ. ಇದನ್ನು ಕಾದಂಬರಿಕಾರರು ಮನೋವಿಜ್ಞಾನಿಯಾದ ಡಾ॥ ಘುರಪುರೆಯವರ ಬಾಯಿಂದ ಈ ರೀತಿ ಹೇಳಿಸುತ್ತಾರೆ.

"ನಮ್ಮ ದೇಶ ಶತ-ಶತಮಾನಗಳ ಗುಲಾಮಗಿರಿಯನ್ನು ನೀಗಿ, ಸ್ವತಂತ್ರವಾದಂದು ನಮ್ಮ ಶಿಶುದೈತ್ಯನ ಜನನವಾಯಿತೆಂದು ನಾನು ಹೇಳಿದುದನ್ನು ಕೇಳಿ ನಿಮಗೆ ಆಶ್ಚರ್ಯವಾಯಿತಲ್ಲವೇ?" ಆ ಮಾತಿನ ಅರ್ಥ ಇದು—

"ಆ ಆಗಸ್ಟ್ ೧೫ರ ಮಧ್ಯರಾತ್ರಿ ದೆಹಲಿ, ರಾಜಭವನದಿಂದ ದೇಶದ ಸ್ವಾತಂತ್ರ್ಯ ಘೋಷಣೆಯಾದ ಹೊತ್ತಿನಲ್ಲಿ - ಭಾರತ ಸ್ವತಂತ್ರವಾಯಿತಷ್ಟೇ ಅಲ್ಲ, ಅಂದಿನವರೆಗೆ ಅಖಂಡವಾಗಿದ್ದ ನಮ್ಮ ದೇಶ ಇಬ್ಭಾಗವಾಗಿ ಸಿಡಿದೊಡೆದು, ಜಮುನಾ ನದಿಯ ದಂಡೆಯ ಮೇಲೆ ಭಾರತ ಹುಟ್ಟಿದಂತೇ, ಸಿಂಧೂನದಿಯ ತೀರದಲ್ಲಿ ಪಾಕೀಸ್ಥಾನ ಹುಟ್ಟಿತು, ಆದರೆ ಪಾಕೀಸ್ಥಾನ ಹಿಂದೂಸ್ಥಾನದಂತೆ ಶಾಂತಿ ಘೋಷಣೆಯೊಂದಿಗೆ ಜನಿಸಲಿಲ್ಲ; ಮತದ್ವೇಷದ ರಕ್ತವರ್ಷದಲ್ಲಿ ಜನಿಸಿತು,

"ಮನುಷ್ಯ ತಾನು ಮನುಷ್ಯನೆಂಬುದನ್ನು ಮರೆತು ಮತದ್ವೇಷವನ್ನು ಸಾಧಿಸುವ ಸಾಧಕಯಂತ್ರದಂತೆ ನಡೆದುಕೊಂಡ ಆ ಕಾಲದಲ್ಲಿ ನಡೆಸಿದ ಬೀಭತ್ಸ ಹತ್ಯಾಕಾಂಡ

ವನ್ನು ನಾನು ಈಗ ಮತ್ತೊಮ್ಮೆ ವಿವರಿಸಬೇಕಾಗಿಲ್ಲ. ಮಿ. ರಾವ್ ಜಗತ್ತಿಗೆ ಜಗತ್ತೇ. ಕಂಡು ಕೇಳಿ, ಮರೆಯಲೆತ್ನಿಸಿದರೂ ಮರೆಯಲಾಗದ ದಾರುಣ ಕಥೆ ಅದು".

ಈ ಕಾದಂಬರಿಯಲ್ಲಿ ಹೊರಜಗತ್ತು ಮತ್ತು ಒಳಜಗತ್ತಿನ ನಾನಾ ಮನೋವೃತ್ತಿಗಳ ನಿಕಟ ಸಂಬಂಧದ ಪರಿಚಯವಾಗುತ್ತದೆ. ಆದರಿಂದಲೇ ಇಲ್ಲಿ ಸನ್ನಿವೇಶ ಮತ್ತು ಪಾತ್ರಗಳೆರಡಕ್ಕೂ ಸಮಾನವಾದ ಅವಕಾಶ ದೊರಕಿದುದನ್ನು ಕಾಣಬಹುದು. ಕಾದಂಬರಿಯ ಕ್ರಿಯೆ ನಡೆಯುವುದು ಬೊಂಬಾಯಲ್ಲಿ ಸಂಜೆಯ ಬೇಸರ ಕಳೆಯಲು ತಿರುಗಾಟಕ್ಕೆ ಹೋದಾಗ ಕುಸುಮಳ ಪರಿಚಯವಾಗಿ, ಹೋಟೆಲಿನಲ್ಲಿ ಕಾಫೀ ಕುಡಿಯುವುದರಿಂದ ಕಾದಂಬರಿಯ ಸನ್ನಿವೇಶದ ಸರಪಳಿ ಪ್ರಾರಂಭವಾಗುತ್ತದೆ. ಮುಂದೆ ಕಾದಂಬರಿಕಾರನೂ ಪ್ರಮುಖ ಪಾತ್ರವಾಗಿ, ಕೇಂದ್ರ ಪ್ರಜ್ಞೆಯಾಗಿ, ಹೊರಜಗತ್ತಿನ ಪ್ರತಿಕ್ರಿಯೆಗಳೊಂದಿಗೆ ಸನ್ನಿವೇಶಗಳು ಬೆಳೆಯುತ್ತಾ ಹೋಗುತ್ತವೆ. ಮೊದಲು ಆತ್ಮ ವೃತ್ತಾಂತದ ತಂತ್ರದಿಂದ ಪ್ರಾರಂಭವಾದ ಕಾದಂಬರಿ ಮುಂದೆ ಜೀವನ ವೃತ್ತಾಂತದ ಕಡೆಗೆ ತಿರುಗಿ, ಉಸಿರುಕಟ್ಟಿಸುವಂತೆ ಕಥೆಯ ಓಟ ಸಾಗುತ್ತದೆ.

ಕಾದಂಬರಿಕಾರನಿಗೆ ಕುಸುಮಳ ಪರಿಚಯವಾದಾಗ, "ಸಣ್ಣ ಊರು ಸಣ್ಣ ಮನಸ್ಸು; ದೊಡ್ಡ ಊರು ದೊಡ್ಡ ಮನಸ್ಸು, ದೊಡ್ಡ ಊರಿನಲ್ಲಿ ನಮ್ಮ ಆದರ, ಅಭಿಮಾನ, ಹೃದಯ ಮನಸ್ಸು ಎಲ್ಲವೂ ವಿಶಾಲವಾಗುತ್ತದೆ. .... ಮನುಷ್ಯ ಮನುಷ್ಯನಾಗಬೇಕಾದರೆ, ಬೊಂಬಾಯಿಯಂಥ ಊರಿನಲ್ಲಿ ನಾಲ್ಕಾರು ವರ್ಷ ಇರಬೇಕು" ಎನ್ನುವ ತಾತ್ತ್ವಿಕ ನಿಲುವು ಆತನದಾಗಿತ್ತು. ಆದರೆ ಕಾದಂಬರಿ ಬೆಳೆದಂತೆಲ್ಲ ಕಾದಂಬರಿಕಾರರ ಈ ನಿಲುವು ಬದಲಾಗುತ್ತದೆ. ಕಾದಂಬರಿಯ ಬೆನ್ನೆಲುಬಾದ ಮೂರು ಕಥಾನಕಗಳು ಇದಕ್ಕೆ ಕಾರಣವಾಗುತ್ತವೆ. ಕಾದಂಬರಿಕಾರನಿಗೆ ಕುಸುಮಳಿಂದ ಡಾ॥ ಘರಪುರೆಯವರ ಪರಿಚಯವಾಗುತ್ತದೆ. ಈ ಸಂದರ್ಭದಲ್ಲಿ ಡಾ॥ ಘರಪುರೆಯವರು ಸಹಜವಾಗಿ ಕೇಳುವ "ಪ್ರಾಮಾಣಿಕವಾಗಿ ಹೇಳಿ ರಾವ್— ಬೊಂಬಾಯಿಯನ್ನು ನೋಡಿ ನಿಮಗೆ ಏನನ್ನಿಸುತ್ತದೆ?" ಎನ್ನುವ ಪ್ರಶ್ನೆಯೇ ಮುಂದಿನ ಕಥಾನಕಗಳಿಗೆ ನಾಂದಿಯಾಗುತ್ತದೆ. ಇದೇ ಸಂದರ್ಭದಲ್ಲಿ ಡಾ॥ ಘರಪುರೆಯವರು ಹೇಳುವ ಮಾತುಗಳೇ ಕಾದಂಬರಿ ತಾಳುವ ಧೋರಣೆಯೂ ಹೌದು. "ಈ ಕಾಡಿನಲ್ಲಿ ಮನುಷ್ಯ ಮನುಷ್ಯನನ್ನು ಬೇಟೆಯಾಡುತ್ತಾನೆ. ಅಷ್ಟೇ ಅಲ್ಲ – ಆ ಬೇಟೆಯಲ್ಲಿನ ಮೊದಲ ಬಲಿ ಮಾನವತೆ ಮಾನವ ಬೇಟೆಗಾರ, ಅವನ ಬೇಟೆಯ ಮಿಗವಾದ ಮಾನವ ಪಶು – ಇಬ್ಬರಲ್ಲಿಯ ಮಾನವತೆಯೂ ನಷ್ಟವಾಗಿ ಹೋಗುತ್ತದೆ. ಈ ನಗರಗಳು ಮಾನವನ ಜೀವನದಲ್ಲಿ ಮೂಡಿಸುವ ಸಮಸ್ಯೆಗಳು ಒಂದೊಂದಲ್ಲ-ರಾವ್ ವಿಜ್ಞಾನ ಮುನ್ನಡೆಯುತ್ತಿದೆ ಎಂದು ನಾವು ಹೇಳಿಕೊಳ್ಳುತ್ತೇವಲ್ಲ ರಾವ್ – ಏನು ಮುನ್ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದೀರಿ? ವಿನಾಶದತ್ತ ಧಾವಿಸುತ್ತಿರುವ ಮಾನವತೆಯನ್ನು ಆ ವಿನಾಶದಿಂದ ಉಳಿಸುವ ಸೋಲೇ ಶತಸ್ಸಿದ್ಧವಾದ ಸ್ಪರ್ಧೆಯಲ್ಲೇ ನಾವು ಮುನ್ನಡೆಯುತ್ತಿರುವುದು. ಜ್ಞಾನ, ವಿಜ್ಞಾನಗಳೆಲ್ಲವೂ, ಆಧುನಿಕ ಜೀವನ

ದಿನದಿನಕ್ಕೆ ಮೂಡಿಸುತ್ತಿರುವ ನಾನಾ ಸಮಸ್ಯೆಗಳನ್ನು ನಿವಾರಿಸಲೇ ವಿನಿಯೋಗವಾಗುತ್ತಿದೆ. ......ಇಂದಿನ ನಾಗರಿಕತೆಯ ಕೇಂದ್ರವಾದ ನಗರ, ಇದು ಮೂಲೋತ್ಪಾಟನವಾಗದೆ, ಈ ಸಮಸ್ಯೆಗಳಾವುವೂ ಬಗೆಹರಿಯುವುದಿಲ್ಲವೆಂದೇ ನನಗೆ ತೋರುತ್ತೆ" ಅವರೇ ಮುಂದುವರಿದು, "ಇಂದು ಧರ್ಮ, ಭಾಷೆ, ದೇಶ, ಆರ್ಥಿಕ ಪರಿಸ್ಥಿತಿ ಎಲ್ಲವೂ ಒಬ್ಬನಲ್ಲಿ ಇನ್ನೊಬ್ಬನ ಬಗ್ಗೆ ಸ್ಪರ್ಧೆ ಎನ್ನುವ ಭಾವನೆಯನ್ನೇ ಮೂಡಿಸಿರುವಾಗ, ಈ ಹುಚ್ಚು ಸ್ಪರ್ಧೆಯಲ್ಲಿ 'ನಾನು ಮಾನವ, ನನ್ನ ಬಳಿಯಲ್ಲಿರುವವರೂ ಮಾನವರು' ಎಂಬ ಭಾವನೆ ಎಲ್ಲಿ ಉಳಿಯುತ್ತದೆ ಹೇಳಿ?" ಎನ್ನುವ ಮಾತು ಸಂದರ್ಭೋಚಿತವಾಗಿ ಬಂದಿದ್ದರೂ ಈ ಮಾತನ್ನು ಕಾದಂಬರಿಯಲ್ಲಿ ಮುಂದೆ ಬರುವ ಕಥಾನಕಗಳು ಸಾಬೀತು ಪಡಿಸುತ್ತವೆ.

ಡಾ॥ ಘರಪುರೆಯವರಿಂದ 'ಶಿಶುದೈತ್ಯ' ಮಧುಪಾಠಕ್‌ನ ಪರಿಚಯವಾಗುತ್ತದೆ. "...ಒಂದು ರೀತಿಯಲ್ಲಿ ಮಧು ನಮ್ಮೆಲ್ಲರ ಹೃದಯದಲ್ಲಿ ಹುದುಗಿರುವ ಸುಪ್ತ ಹಾಲಾಹಲದ ಜೀವಂತರೂಪ. ನಾವು ವಿದ್ಯಾವಂತರು, ನಾಗರಿಕರು, ಸುಸಂಸ್ಕೃತರು ಎಂದುಕೊಳ್ಳುವವರು, ಹೊಟ್ಟೆಯೊಳಗಿಟ್ಟುಕೊಂಡೂ ವ್ಯಕ್ತಪಡಿಸಲು ಸಂಕೋಚ ಪಡುವ ಕಹಿ ಭಾವನೆಗಳ, ಘನೀಭೂತ ಸಜೀವ ಮೂರ್ತಿ..." ಎಂದು ಡಾ॥ ಘರಪುರೆಯವರಲ್ಲಿ 'ಸೋಷಿಯಲ್ ವರ್ಕರ್' ಆಗಿ ಕೆಲಸ ಮಾಡುತ್ತಿರುವ ವಾಸಂತೀ ಬಹೆನ್‌ಳ ಮಾತು ಮಧು ಪಾಠಕ್‌ನ ಸಮಸ್ಯೆ ತೋರಿಕೆಗೆ ಕೇವಲ ವೈಯಕ್ತಿಕವಾಗಿ ಕಂಡರೂ, ಅಂತರಾಳವನ್ನು ಕೆದಕಿದಾಗ ಅದೊಂದು ರಾಷ್ಟ್ರೀಯ ಸಮಸ್ಯೆ ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತವೆ. ಮಧು ಪಾಠಕನ ಸಿಂಧೀ ದ್ವೇಷಕ್ಕೆ ಕಾರಣ ದೇಶದ ವಿಭಜನೆಯಿಂದಾಗಿ, ನಿರಾಶ್ರಿತರಾಗಿ ಬಂದ ಸಿಂಧೀಗಳು ಸ್ಥಳೀಯರಾದ ಗುಜರಾತಿಗಳೊಂದಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸುತ್ತಿರುವುದರಿಂದ ಅಂದರೆ ಆರ್ಥಿಕ ಸಮಸ್ಯೆಯೇ ಮುಖ್ಯವಾಗುತ್ತದೆ. ಮಧು ಪಾಠಕನ ತಂದೆ ಸಿಂಧಿವ್ಯಾಪಾರಿಯೊಬ್ಬನೊಂದಿಗೆ ಸ್ಪರ್ಧಿಸಲಾರದೆ ಮನೆಯ ಆರ್ಥಿಕ ಸ್ಥಿತಿ ಕುಸಿಯುತ್ತದೆ. ಇದೇ ಎಳೆ ಹೃದಯದ ಮಧು ಪಾಠಕನಲ್ಲಿ ಸಿಂಧೀದ್ವೇಷಕ್ಕೆ ಮೂಲವಾಗುತ್ತದೆ. ಇದು ಅವನೊಬ್ಬನ ವೈಯಕ್ತಿಕ ಸಮಸ್ಯೆಯಾಗದೆ, ಡಾ॥ ಘರಪುರೆಯವರು ಹೇಳುವಂತೆ, "ಮೂಲಭೂತವಾಗಿ ಇದು ಒಂದು ವರ್ಗ ಇನ್ನೊಂದು ವರ್ಗದ ಮೇಲೆ ತನ್ನ ಆರ್ಥಿಕ ಸುಭದ್ರತೆಗಾಗಿ ಹೂಡಿದ ಸಮರ—ಬರೀ ಸಿಂಧೀ ದ್ವೇಷವಲ್ಲ."

ಸಿಂಧೀ ದ್ವೇಷಕ್ಕೆ ಹಿನ್ನೆಲೆಯಾಗಿ ರಿಟಾವಾಧ್ವಾನಿಯ ಕಥಾನಕ ಬರುತ್ತದೆ. ಇದು ಸ್ವಾತಂತ್ರ್ಯದ ನಂತರ ದೇಶದಲ್ಲಿ ಉದ್ಭವಿಸಿದ ಅನೇಕ ಸಮಸ್ಯೆಗಳಿಗೆ, ಮುಖ್ಯವಾಗಿ ಮತ ಸಂಘರ್ಷಕ್ಕೆ ದೇಶದ ವಿಭಜನೆಯ ಸಂದರ್ಭ ಹೇಗೆ ಬೀಜವಾಯಿತು ಎನ್ನುವುದರತ್ತ ನಮ್ಮ ಗಮನ ಸೆಳೆಯುತ್ತದೆ. ಆ ಸಂದರ್ಭದಲ್ಲಿ ನಡೆದ ಮಾನವನ ಪಾಶವೀ ಕೃತ್ಯವನ್ನು ಈ ಘಟನೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ರಿಟಾವಾಧ್ವಾನಿಯ ತಂದೆ ಸಾಯುವ ಮುನ್ನ ಹೇಳಿದ "ಕಾಡಿನಲ್ಲಿ ಅಲೆಯುವ ಹುಲಿಯನ್ನು ನಂಬು, ಹುತ್ತದಲ್ಲಿ

ಹರಿಯುವ ಹಾವನ್ನು ನಂಬು, ಆದರೆ ನಿನ್ನ ಜೊತೆಯಲ್ಲೇ ವಾಸಿಸುವ ಮನುಷ್ಯನನ್ನು ಮಾತ್ರ ನಂಬಬೇಡ. ಅವನು ಅದೆಲ್ಲಕ್ಕಿಂತಲೂ ಭಯಂಕರವಾದ ಪ್ರಾಣಿ" ಎಂಬ ಮಾತು ಮನುಷ್ಯನಿಗೆ ಮನುಷ್ಯನಲ್ಲಿದ್ದ ನಂಬಿಕೆ ಸತ್ತು ಹೋಗುವಂತೆ ಮಾಡಿದ ಆ ಕ್ರೌರ್ಯದ ತೀವ್ರತೆಯನ್ನು ತಿಳಿಸುತ್ತದೆ. "—ಪಾಕೀಸ್ತಾನದ ಭಾಗದಿಂದ ಹಿಂದೂ ಸ್ಥಾನಕ್ಕೆ ನಿರಾಶ್ರಿತರಾಗಿ ಓಡಿ ಬಂದ ಜನತೆಯಲ್ಲಿ ನೂರಕ್ಕೆ ತೊಂಭತ್ತು ಪಾಲು ಜನ ಹೊತ್ತು ತಂದ ಸಂದೇಶ ಅದೇ; ಆ ಸಂದೇಶವೇ ಇಂದು ನಮ್ಮ ಕಣ್ಣ ಮುಂದಿರುವ ಸಮಸ್ಯೆಯ ಒಂದು ಮುಖ" ಎನ್ನುವ ಡಾ॥ ಘರಪುರೆಯವರ ಮಾತು ಇಡೀ ಘಟನೆಗೆ ವ್ಯಾಖ್ಯಾನದಂತೆ ಬರುತ್ತದೆ.

'ಕಲೆಯ ಸಲೆ ಬತ್ತಿ ದ್ವೇಷದ ಚಿಲುಮೆಯಾದ' ಚಂದೂ ಕಮಲಾನಿಯ ಬಾಳ ದುರಂತ ಮೂರನೆಯ ಕಥಾನಕ. ಇದು ಕಾದಂಬರಿಯಲ್ಲಿ ಅನಿವಾರ್ಯ ಅಂಗ ಎನ್ನಿಸುವುದಿಲ್ಲ. ಮಧು ಪಾಠಕನಲ್ಲಿ ದೇಶವಿಭಜನೆಯಿಂದುಂಟಾದ ಪರಿಣಾಮದಿಂದ ಸಿಂಧೀ ದ್ವೇಷ ಬೆಳೆದರೆ, ಚಂದೂ ಕಮಲಾನಿಗೆ ಮನುಷ್ಯರ ಬೆಳೆಯುವ ದ್ವೇಷ ನೇರವಾದದ್ದು. 'ಆ'ಸಂದರ್ಭದಲ್ಲಿ ಕಲೆಯ ಕೊಲೆಯೂ ಹೇಗೆ ನಡೆಯಿತು ಎಂಬುದನ್ನು ಮಾತ್ರ ಇದು ತಿಳಿಸುತ್ತದೆ. ಆದರೆ ಇದರ ನಿರೂಪಣಾ ರೀತಿ ಹೃದಯಸ್ಪರ್ಶಿಯಾಗಿದೆ. ಇಲ್ಲಿ 'ಹುಲಿ, ಹಾವನ್ನಾದರೂ ನಂಬು' ಎನ್ನುವ ಜೋಯಿತ್‌ರಾಂ ವಾಧ್ವಾನಿ ಮತ್ತು ಚಂದೂ ಕಮಲಾನಿ ಇವರಿಬ್ಬರೂ 'ಮತ ದ್ವೇಷದ ಅಗ್ನಿ ತಾಂಡವ ನಡೆದ ಮಹಾಮಸಣದಲ್ಲಿ ಅರಳಿದ ವಿಷ ಪುಷ್ಪಗಳು.'

ಈ ಮೂರೂ ಕಥಾನಕಗಳು ಒಂದೇ ಸಮಸ್ಯೆಯನ್ನು ಬೇರೆ ಬೇರೆ ದೃಷ್ಟಿ ಕೋನದಿಂದ ನೋಡುತ್ತವೆಯೇ ವಿನಾ ಒಂದಕ್ಕಿಂತ ಇನ್ನೊಂದು ಹೆಚ್ಚು ತೀವ್ರವಾಗಿದ್ದು ಓದುಗನಲ್ಲಿ ಆ ತೀವ್ರತೆಯ ಅರಿವನ್ನು ಉಂಟುಮಾಡುವುದಿಲ್ಲ.

ಈ ಕಾದಂಬರಿಯನ್ನು ಓದಿದ ಮೇಲೆ ಯಾವ ಪಾತ್ರವೂ ಓದುಗನ ಮನಸ್ಸಿನಲ್ಲಿ ನಿಲ್ಲುವುದಿಲ್ಲ. ಕಾರಣ, ಇದು ಪರಿಣಾಮ ವಿಧಾನದ (Impressionistie) ತಂತ್ರ ಉಳ್ಳದ್ದು. ಅಂದರೆ, ಪ್ರಧಾನ ಪಾತ್ರಗಳ ಸುತ್ತಲಿನ ಜೀವನಕ್ಕಿಂತ ಅವರ ಮಾನಸಿಕ ಜೀವನಕ್ಕೆ ಹೆಚ್ಚು ಪ್ರಾಧಾನ್ಯ ದೊರೆತಿದೆ. ಈ ಕಾದಂಬರಿಯ ಪಾತ್ರಗಳನ್ನು. ಸುತ್ತಲಿನ ಸಮಾಜದೊಂದಿಗೆ ಉತ್ತಮ ಸಂಬಂಧವನ್ನು ಬೆಳಸಿಕೊಂಡವರು, ಬೆಳಸಿಕೊಳ್ಳಲಾರದವರು ಎಂದು ಎರಡು ರೀತಿಯಲ್ಲಿ ವಿಂಗಡಿಸಬಹುದು. ಮೊದಲನೆಯ ರೀತಿಗೆ ಡಾ॥ ಘರಪುರೆ, ವಾಸಂತೀ ಬೆಹೆನ್ ಮತ್ತು ಕುಸುಮಸಂಘದವರು ಉತ್ತಮ ಉದಾಹರಣೆ. ಈ ಜನ ಸಮಾಜದ ಮೇಲು ಸ್ತರದಲ್ಲಿದ್ದೂ ಉಳಿದ ಸ್ತರಗಳಲ್ಲಿರುವ ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತ, ಆ ಸಮಸ್ಯೆಗಳ ಪರಿಹಾರಕ್ಕಾಗಿ ಕ್ರಿಯಾಶೀಲರಾದವರಾದುದರಿಂದ ಸುತ್ತಲಿನ ಸಮಾಜದೊಂದಿಗೆ ಅವರ ಸಂಬಂಧ ಉತ್ತಮವಾಗಿರಲು ಸಾಧ್ಯವಾಯಿತು. ಎರಡನೆಯ ರೀತಿಯ ಜನರೆಂದರೆ ಜೋಯಿತ್‌ರಾಂ ವಾಧ್ವಾನಿಯಂಥವರು. ಈತ ತನ್ನ ಸುತ್ತಲಿನ ಸಮಾಜದೊಂದಿಗೆ

ಉತ್ತಮ ಸಂಬಂಧವನ್ನು ಹೊಂದಲು ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಕಾರಣ, ಸಾಮಾನ್ಯರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳದೆ ಇರುವುದರಿಂದ ಇದೇ ದೇಶದ ವಿಭಜನೆಯ ಸಂದರ್ಭದಲ್ಲಿ ಅವನಂಥವರ ಬಾಳಿನ ದುರಂತಕ್ಕೂ ಕಾರಣವಾಯಿತು. ಇದು ಮೇಲು ನೋಟಕ್ಕೆ ಮತೀಯ ಘರ್ಷಣೆಯಂತೆ ಕಂಡರೂ ಈ ಸಮಸ್ಯೆಗೆ ಮೂಲ ವಾದದ್ದು ವರ್ಗದ್ವೇಷ. ಈ ವರ್ಗದ್ವೇಷ ಸಮಾಜದಲ್ಲಿನ ಅನೇಕ ಸಮಸ್ಯೆಗಳಿಗೆ ಮೂಲವಾಗಿದ್ದು, ಮತ ಸಂಘರ್ಷ ಅದರ ಒಂದು ಮುಖ ಮಾತ್ರ ಎನ್ನುವುದನ್ನು ಕಾದಂಬರಿ ಚಿತ್ರಿಸುತ್ತದೆ. "ಆ ಸೀಮೆಯ ಬಹು ಸಂಖ್ಯಾತರಾದ ಮುಸಲ್ಮಾನ ಜನ ಬಡವರು, ಕೂಲಿಕಾರರು, ರೈತರು, ಅವರ ಆರ್ಥಿಕ ಪರಿಸ್ಥಿತಿಯ ಜೀವ, ಜೀವಾಳ ಅಲ್ಲಿಯ ವ್ಯಾಪಾರ, ವಾಣಿಜ್ಯ, ಕೈಗಾರಿಕೆಯ ಬಹು ಭಾಗ, ಅಲ್ಪ ಸಂಖ್ಯಾತರಾದ ಸಿಂಧಿ ಹಿಂದೂಗಳ ಹಿಡಿಯಲ್ಲಿತ್ತು. ಈ ಆರ್ಥಿಕ ಶೋಷಣೆಯಿಂದ ಹೊಗೆಯಾಡು ತ್ತಿದ್ದ ಆಕ್ರೋಶ, ಸಿಡಿಲಾಗಿ ಸಿಡಿಯಲು ಮತದ್ವೇಷಕ್ಕೆ ದಾರಿ ಮಾಡಿಕೊಟ್ಟಿತು". ಎನ್ನುವ ಡಾ॥ ಘರಪುರೆಯವರ ಮಾತು ಇದನ್ನೇ ಸಮರ್ಥಿಸುತ್ತದೆ. ಅಂತೆಯೇ ಮಧುಪಾತಕನ ಸಿಂಧೀದ್ವೇಷಕ್ಕೂ ಇದೇ ಮೂಲ. ಇಂಥ ಸಮಸ್ಯೆಗಳನ್ನು ಬಿಡಿಸು ವಲ್ಲಿ ಬೌದ್ಧಿಕ ಮಾರ್ಗ ದರ್ಶನ ನೀಡಬಲ್ಲಂತಹ ಸಾಹಿತಿ, ಮನಃಸ್ಥಿತಿಯನ್ನರಿಯ ಬಲ್ಲಂತಹ ಡಾಕ್ಟರ್ ಮತ್ತು ವ್ಯಕ್ತಿಯನ್ನು ಸಮಾಜಜೀವಿಯಾಗಿಸಬಲ್ಲಂತಹ ಸಮಾಜ ಸೇವಕ – ಮುಂತಾದ, ಕ್ರಿಯಾತ್ಮಕವಾಗಿ ತೊಡಗಬಲ್ಲ ವ್ಯಕ್ತಿಗಳು ಒಟ್ಟಾಗಿ ಸಮಸ್ಯೆಗೆ ಪರಿಹಾರೋಪಾಯಗಳನ್ನು ಕಂಡು ಹಿಡಿದಾಗ ಮಾತ್ರ ಇಂತಹ 'ಶಿಶುದೈತ್ಯ' ನಿಂದ ಸಮಾಜಕ್ಕೆ ಮುಕ್ತಿ ಸಾಧ್ಯ ಎನ್ನುವುದನ್ನು ಕಾದಂಬರಿ ಸೂಚಿಸುತ್ತದೆ. ಈ ರೀತಿ ಮನುಷ್ಯ ಮನುಷ್ಯನ ಮಧ್ಯೆ ಇರುವ ಅಸಮಾನತೆಯನ್ನು ಹೋಗಲಾಡಿಸಲು ಇರು ವುದನ್ನು ಹಂಚಿ ತಿನ್ನದಿದ್ದರೆ, ಯಾವುದೋ ಸಂದರ್ಭದಲ್ಲಿ ಒಬ್ಬರಿಂದ ಇನ್ನೊಬ್ಬರು ಕಸಿದು ತಿನ್ನುವಂಥ ರಕ್ತಕ್ರಾಂತಿ ಅನಿವಾರ್ಯವಾಗುತ್ತದೆ ಎನ್ನುವುದನ್ನು ಈ ಕಥಾನಕಗಳು ಧ್ವನಿಸುತ್ತವೆ.

"ಎಲ್ಲರೂ ಬದುಕಬಹುದು ಎಂದು ಬೊಂಬಾಯಿಗೆ ಬರುತ್ತಾರೆ; ರಾವ್. ಆದರೆ ಹಾಗೆ ಬಂದವರಾರೂ ಇಲ್ಲಿ ಬದುಕುವುದಿಲ್ಲ. ಎಲ್ಲರನ್ನು ತಿಂದು ಬೊಂಬಾಯಿ ಬದುಕುತ್ತದೆ. ಮಾನವನನ್ನು ತಿಂದು ಅರಗಿಸಿಕೊಂಡು, ದೈತ್ಯರನ್ನು ಸೃಷ್ಟಿಸುವ ಬೃಹತ್ ಕಾರ್ಖಾನೆ ಬೊಂಬಾಯಿ" ಎಂದು ಡಾ॥ ಘರಪುರೆಯವರ ಬಾಯಿಂದ ಹೇಳಿಸುವುದರ ಮೂಲಕ, ಕಾದಂಬರಿಕಾರರು, 'ಈ' ಸಮಸ್ಯೆಗಳಿಗೆ ದೈತ್ಯಾಕಾರವಾಗಿ ಬೆಳೆದ ಮತ್ತು ಬೆಳೆಯುತ್ತಿರುವ ನಗರಗಳೂ ಹೇಗೆ ಕಾರಣವಾಗುತ್ತವೆ ಎಂಬುದನ್ನು ಸೂಚಿಸುತ್ತಾರೆ.

ಕಾದಂಬರಿಯಲ್ಲಿ ಬರುವ ಘಟನೆಗಳು ಬಿಡಿ ಬಿಡಿಯಾಗಿ ಕಂಡರೂ ಅವುಗಳೆಲ್ಲ ಕಾದಂಬರಿಯ ಒಟ್ಟು ಉದ್ದೇಶಕ್ಕಾಗಿ ದುಡಿಯುತ್ತವೆ. ಆದರೆ ಘಟನೆಗಳಲ್ಲಿ ಸಾವಯವ ಸಂಬಂಧವನ್ನು ಹುಡುಕುವುದು ಕಷ್ಟ. ಕಾದಂಬರಿ ಸರಳ ಶೈಲಿಯಲ್ಲಿದ್ದು, ಉದ್ದಕ್ಕೂ

ಕುತೂಹಲವನ್ನು ಕಾಯ್ದುಕೊಳ್ಳುವುದರಿಂದ ಓದಿಸಿಕೊಂಡು ಹೋಗುತ್ತದೆ. ಕಾದಂಬರಿಯಲ್ಲಿ ನಿರೂಪಣೆಗಿಂತ ಸಂಭಾಷಣೆಗೇ ಹೆಚ್ಚು ಪ್ರಾಧಾನ್ಯ ದೊರೆತಿದೆ. ಸಂಭಾಷಣೆಯಲ್ಲಿ ಚುರುಕಿದ್ದರೂ, ಲೇಖಕರ ವಾಚಾಳಿತನದಿಂದಾಗಿ. ಕಾದಂಬರಿಯಲ್ಲಿ ಯಾವ ಧ್ವನಿರಮ್ಯತೆಗೂ ಎಡೆ ಇಲ್ಲದೆ ಎಲ್ಲವೂ ವಾಚ್ಯದಲ್ಲೇ ನಿಲ್ಲುತ್ತದೆ. ●

ಚಂದವಳ್ಳಿಯ ತೋಟ

—ಪ್ರೊ|| ಈ. ವಿ. ಬಿಳೇಕಲ್.

ತ್ರ.ರಾ.ಸು. ಬರೆದ ಕಾದಂಬರಿಗಳಲ್ಲಿ ಮೊದಲು ಜಲನ ಚಿತ್ರವಾದ ಕಾದಂಬರಿ 'ಚಂದವಳ್ಳಿಯ ತೋಟ' ಒಂದು ಸುಂದರ, ಸಾಮಾಜಿಕ ಕೃತಿಯಾಗಿದೆ. ಮೂಲತಃ ರೈತರಿಗಾಗಿ ರಚಿಸಲಾದ ನಾಟಕ "ನರಕವಾದ ನಂದನ" ಮೈಸೂರು ಆಕಾಶವಾಣಿಯ ನಿಲಯದಿಂದ ಪ್ರಸಾರಗೊಂಡಿತು. ೧೯೫೪ರಲ್ಲಿ ವಸ್ತು ಸ್ವಾತಂತ್ರ್ಯೋತ್ತರ ಭಾರತದ ಹಳ್ಳಿಗಳಲ್ಲಿ ಹ್ರಾಸವಾಗುತ್ತಿರುವ ಅವಿಭಕ್ತ ಕೌಟುಂಬಿಕ ಜೀವನ ಮೌಲ್ಯಗಳು: ಆದ್ದರಿಂದ ಸಂಸ್ಕೃತಿ, ನಾಗರಿಕತೆಗಳು ಕೂಡ ತಮ್ಮ ಹಿರಿಮೆ ಕಳೆದುಕೊಳ್ಳುತ್ತಿವೆಯಾದರೂ ಹಿಂದಿನ ಆದರ್ಶಗಳನ್ನೂ ಭಾರತದ ಹಳ್ಳಿಗಳಲ್ಲೇ ಕಂಡು ಬರುತ್ತವೆಂದು ಚಿತ್ರಿಸಲಾಗಿವೆ. ಈ ಉದ್ದೇಶದಲ್ಲಿ ಕಾದಂಬರಿಕಾರರಿಗೆ ನಿರೀಕ್ಷೆಮೀರಿ ಸಫಲತೆ ದೊರಕಿದೆ.

ಕಥೆ ಐದು ಭಾಗಗಳಲ್ಲಿ ಹೇಳಲ್ಪಟ್ಟಿದೆ. ಎರಡನೆ ಭಾಗ 'ಚಂದವಳ್ಳಿಯ ತೋಟದಿಂದ' ಕಥೆ ಪ್ರಾರಂಭವಾದರೂ ಪೀಠಿಕೆಯಾಗಿ ಮೊದಲ ಭಾಗ "ಚಂದ-ವಳ್ಳಿಯತ್ತ"ದಲ್ಲೇ ಪ್ರತಿನಾಯಕ ಕರಿಯಪ್ಪ ಹಾಗೂ ನಾಯಕ ಶಿವನಂಜೇಗೌಡರ ಪರಿಚಯ ಅತ್ಯಂತ ಸಹಜರೀತಿಯಲ್ಲಾಗುತ್ತದೆ. ಅಳಿಯ ರಾಮಿಗೇ, ಅಂತೆಯೇ ಓದುಗರಿಗೆ. ಅಲ್ಲದೆ ಅವರನ್ನು ಕುರಿತು ಕುತೂಹಲ ಕೆರಳುತ್ತದೆ. ಅವರ ಕಥೆ ಕೇಳಲು ಮನಸ್ಸು ಹಾತೊರೆಯುತ್ತದೆ. ಮೊದಲ ಎರಡು ಹಾಗೂ ಕೊನೆಯ ಎರಡು ಭಾಗಗಳನ್ನೂ ಶಾಮಣ್ಣ ನಿರೂಪಿಸಿದರೆ, ಮಧ್ಯಭಾಗವನ್ನು ಆತನ ಹೆಂಡತಿ ಕಾವೇರಮ್ಮ ಕಣ್ಣೀರು ಬರುವಂತೆ ಹೇಳುತ್ತಾಳೆ. ಸಹೃದಯರಿಗೆ ಹಳ್ಳಿಯ ಬದುಕಿನ ನಾನಾ ಮುಖಗಳ ದರ್ಶನವಾಗುತ್ತಿರುವಂತೆ ಕಥೆ ಕೊನೆಯವರೆಗೂ ಆಸಕ್ತಿಯನ್ನುಂಟು ಮಾಡುತ್ತ ಮುಂದೋಡುತ್ತದೆ. ಕೊನೆಗೆ 'ಅಯ್ಯೋ' ಎಂದು ಮರುಕಪಡುವಂತಾಗುತ್ತದೆ ; ಗೌಡರ ಇಂದಿನ ಪರಿಸ್ಥಿತಿಯನ್ನು ನೋಡಿ ! ಅವರ ಹಾಳಾದ ಹಳ್ಳಿಯ ಪ್ರತೀಕವಾಗಿದ್ದಾರೆ. ಹುಚ್ಚುಹಿಡಿದು ಪ್ರೇತದಂತೆ ಮೋಹಕಳೆದುಕೊಳ್ಳದೆ ಈಗಲೂ ತೋಟದ ಸಮೀಪ ಸುತ್ತಾಡುತ್ತಾರೆ. ಅವರಿಗೆ ಆಸರೆಯೆಂದರೆ ಹೊಟ್ಟೆಯ ಮಕ್ಕಳಲ್ಲ; ಗೆಳೆಯ ನರಹರಿಯ ಮಗ ಶಾಮಣ್ಣ ದಿನಾಲು ಅವರಿಗೆ ಊಟ ಮಾಡಿಸಿ ತನ್ನ ಜೀವನ ಕೃತಾರ್ಥ ಮಾಡಿಕೊಳ್ಳುತ್ತಾನೆ. ಅಷ್ಟೇ ವಿಶ್ವಾಸ, ವಾತ್ಸಲ್ಯ ಗೌರವಾದರಗಳಿಂದ ಹೆಂಡತಿ ಕಾವೇರಮ್ಮ ಕೂಡ ಗೌಡರಿಗೆ ಅನ್ನ ಹಾಕುವಲ್ಲೇ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಂಡು, ಅವರ ಇಂದಿನ ಸ್ಥಿತಿಗೆ ಕಣ್ಣೀರು ಸುರಿಸಿ ಹೃದಯದ ಭಾರವನ್ನು ಹಗುರ ಮಾಡಿಕೊಳ್ಳುತ್ತಾಳೆ.

'Well begun is half done' ಎಂಬ ಉಕ್ತಿಯಂತೆ ಕಾದಂಬರಿಯ ಪ್ರಾರಂಭವೇ ಅದರ ಸಾಫಲ್ಯತೆಯನ್ನು ಮೊದಲಲ್ಲೇ ಸೂಚಿಸುತ್ತದೆ, ತಂತ್ರದಲ್ಲಿ

ಹೊಸತನವಿದೆ. ಅದ್ದರಿಂದಲೇ ಭಿನ್ನ-ಭಿನ್ನ ದೃಶ್ಯಗಳಲ್ಲಿ ನಿರೂಪಿಸಿ ಕಥೆ ಮನ ಮೋಹಕವಾಗಿದೆ.

ಕಥೆ ಪ್ರಾರಂಭ ಎರಡನೆಭಾಗ 'ಚಂದವಳ್ಳಿಯ ತೋಟ'ದಿಂದ ಪ್ರಾರಂಭ ವಾಗುತ್ತವೆ. ಕುತೂಹಲ ತಡೆದುಕೊಳ್ಳಲಾರದೆ ರಾಮಣ್ಣ ಅತ್ತೆಗೆ ಕೇಳಿದರೆ, "ಅವರನ್ನೇ ಕೇಳು, ಹೇಳುತ್ತಾರೆ" ಎಂದು ಊಟಕ್ಕೆ ಬಡಿಸುತ್ತಾಳೆ. ಕೊನೆಗೆ ರಾಮಣ್ಣನೇ ಶಿವನಂಜೇಗೌಡರ, ಮನೆತನದ ಹಳ್ಳಿಯ ಕಥೆ ಹೇಳುತ್ತಾನೆ.

ಊರನ್ನೇ ಸ್ವರ್ಗವನ್ನಾಗಿಸಲು ಅತ್ಯಂತ ಅಭಿಮಾನದಿಂದ ದುಡಿದ ಗೌಡರ ಕಥೆ ಹೇಳುವಲ್ಲಿ ಅವರ ದೊಡ್ಡಸ್ತಿಕೆಯ ಸಂಪೂರ್ಣ ಅರಿವುಂಟಾಗುತ್ತದೆ. 'ಅತಿಥಿ-ದೇವೋಭವ' ಎನ್ನುವ ಆರ್ಯೋಕ್ತಿಯನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬಂದ ಒಳ್ಳೆಜೀವಿ ಗೌಡರು! ಊರಿಗೆ ಬಂದವರಿಗೆ ಅವರ ಯೋಗ್ಯತೆಗೆ ತಕ್ಕ ಮರ್ಯಾದೆ. ಗೌರವಾದಿಗಳಿಂದ ಕಳಿಸುವುದು ವಾಡಿಕೆ. ಬ್ರಾಹ್ಮಣರು ಬಂದರೆ ಅವರ ಉಪಚಾರಕ್ಕೂ ಅಷ್ಟೇ ಆಸಕ್ತಿ. ಗೆಳೆಯ ನರಹರಪ್ಪನ ಸಹಾಯ ಸಹಕಾರದಿಂದ ಹಳ್ಳಿಯನ್ನೊಂದು ನಂದನವನವನ್ನಾಗಿಸಲು ಬಯಕೆ ಉಂಟಾದದ್ದು — ಊರಿ-ಗೊಮ್ಮೆ ಬಿಸಿಲಲ್ಲಿ ಬಂದ ತಹಶೀಲ್ದಾರರ ಸೂಚನೆ—ಎಳನೀರು—ಲಿಂಬೆಗಿಡಗಳಿಲ್ಲದ ಊರಿದೆಂಥದ್ದು 'ಕೊಪ್ಪಕ್ಕಿಂತ ಕೀಳು' ಎಂದಾಗ ಗೌಡರಲ್ಲಿಯ ಅಭಿಮಾನಕ್ಕೆ ಪೆಟ್ಟು. ಅತಿನೋವಾಗಿ ಅಂದೇ ಹೇಗಾದರೂ ಮಾಡಿ ಊರಿಗೊಂದು ತೋಟ ಮಾಡಿಸುವ ಹಠ. ಅದಕ್ಕಾಗಿ ವೆಂಕಟರಮಣ ಜ್ಯೋತಿಷಿಗಳಲ್ಲಿಗೆ ಪಯಣ. ಅವರ ಅಭಿಪ್ರಾಯ ದಂತೆ ತನ್ನ ಹೊಲಗಳಲ್ಲಿ ತೋಟ ಮಾಡಿಸುವ ಯೋಗವಿಲ್ಲವೆಂದಾಗ, ನರಹರಪ್ಪನ ಹೊಲದಲ್ಲಿ ತೋಟ ಮಾಡಿಸುವ ನಿರ್ಧಾರ. ಪಂಚರ ಎದುರಲ್ಲಿ ಮಾತು ಕಥೆಯಾಗಿ ಇಬ್ಬರೂ ಒಪ್ಪಿ, ತೋಟವನ್ನು ದೇವರ ತೋಟವೆಂದು ಮೊದಲು ಹಳ್ಳಿಗರೊಂದಿಗೆ ನಿರತರಾಗುತ್ತಾರೆ. ನೀರು ಬಿದ್ದಾಗ, ಆನಂದಪಟ್ಟು ಭಾವಿತೋಡಿದವರಿಗೆ ಮರ್ಯಾದೆ ಮಾಡಿ, ಮುತ್ತೈದೆಯರಿಂದ ಆರತಿ ಮಾಡಿಸಿ ಉಡುಗೊರೆ ಕೊಟ್ಟು ತನಗಾದ ಸಂತೋಷ ವನ್ನೂ ವ್ಯಕ್ತಗೊಳಿಸುತ್ತಾನೆ ; ಸರ್ವರ ಸುಖಕ್ಕಾಗಿ.

ಅದರೆ ಮುಂದೆ ಕೆಲವೇ ವರ್ಷಗಳಲ್ಲಿ ಮಳೆಯಾಗದೆ ಪರಿಸ್ಥಿತಿ ಗಂಭೀರ ವಾಗುತ್ತದೆ ಬಿಸಿಲಿನ ತಾಪಕ್ಕೆ ಒಣಗುವ ತೆಂಗಿನ ಸಸಿಗಳಿಗೆ ಹೆಂಡತಿಯೊಂದಿಗೆ ಶ್ರಮಿಸಿ ಕಷ್ಟದಿಂದ ನೀರುಣಿಸುತ್ತಾನೆ. ಅವನ ಕಠಿಣ ಕರ್ತವ್ಯಕ್ಕೋ, ಅಥವಾ ನರಹರಪ್ಪ ಊರ ಹನುಮಂತ ದೇವರಿಗೆ ಖಾರದಪುಡಿಯನ್ನು ಲೇಪಿಸಿದ್ದಕ್ಕೋ ಏನೋ, ಕೆಲವೇ ದಿನ ಗಳಲ್ಲಿ ಭಾರಿ ಮಳೆ—ಹಿಂದೆಂದೂ ಕಾಣದಂಥ ಮಳೆ ಬೀಳುತ್ತದೆ. ಎಲ್ಲರೂ ಸಂತೋಷ ಪಡುತ್ತಾರೆ. ಆಗ ಗೌಡ ಗೆಳೆಯನಿಗೆ ಹನುಮಪ್ಪನಿಗೆ ಹಾಲಿನ ಅಭಿಷೇಕ ಮಾಡಿಸುವ ವಿಚಾರ ತಿಳಿಸುತ್ತಾನೆ. ಆ ವೆಂಕಟರಮಣಜೀಯವರಿಗೆ, ಈ ಊರಿಗೊಬ್ಬ ಒಳ್ಳೆ ಬ್ರಾಹ್ಮಣರನ್ನು ಕಳಿಸಿಕೊಡುವಂತೆ ಬಿನ್ನವಿಸಿಕೊಳ್ಳುತ್ತಾನೆ ; ಊರವರ—ಊರ ಕಲ್ಯಾಣಕ್ಕಾಗಿ. [illegible] ಕಲ್ಯಾಣಕ್ಕೆ [illegible] ಅಗತ್ಯವಾಗುತ್ತದೆ [illegible]

ಸುಬ್ಬಾಭಟ್ಟ ಹಾಗೂ ಆತನ ಹೆಂಡತಿ ಜಲಜಾಕ್ಷಮ್ಮರಿಂದ ಅದೇ ವೇಳೆಗೆ ಕೆಲದಿನಗಳಿಂದ ಊರು ಬಿಟ್ಟು ಹೋದ ಈರಯ್ಯನ ಮಗ ಕರಿಯಪ್ಪನೂ ಬರುತ್ತಾನೆ. ಇವರೆಲ್ಲರಿಂದ ನಂದನವನದಂತಿದ್ದ ಹಳ್ಳಿ ನರಕವಾಗುತ್ತದೆ, ಅದನ್ನು ತಪ್ಪಿಸಲು ಎಷ್ಟೋ ಸಮಾಧಾನದಿಂದ, ಸಹನೆಯಿಂದ ಪ್ರಯತ್ನಿಸಿದರೂ. ವಿಧಿಯ ಆಟವೇನೋ ಎಂಬಂತೆ ಅನಪೇಕ್ಷಣೀಯ ಘಟನೆಗಳು ಒಂದರಮೇಲೊಂದು ನಡೆದು ಹಳ್ಳಿ ಹಾಳಾ-ಗುತ್ತದೆ ಗೌಡರ ಕುಟುಂಬದೊಂದಿಗೆ.

ಹಳ್ಳಿಗೆ ಹೊಸದರಲ್ಲಿ ಬಂದ ಸುಬ್ಬಾಭಟ್ಟ ಹಾಗೂ ಹೆಂಡತಿ ಜಲಜಾಕ್ಷಮ್ಮನಿಗೆ ಆಸೆಗೆ ಅಳತೆಯೇ ಇಲ್ಲ. ಅತಿಯಾಸೆಯಿಂದಾಗಿ ಪುಟ್ಟತಾಯಮ್ಮ ಹಾಗೂ ಪಾರ್ವತಮ್ಮರ ನಡುವೆ ವಿರಸ ಬೆಳೆಯುವಂತೆ ಪ್ರಯತ್ನಿಸಿ ಛೀಮಾರಿ ಹಾಕಿಸಿಕೊಂಡು. ಸೇಡು ತೀರಿಸಿಕೊಳ್ಳಲು ವಿಷಸರ್ಪಿಣಿಯಂತೆ ಅವಕಾಶಕ್ಕಾಗಿ ಕಾಯುತ್ತಾಳೆ. ಅವಮಾನದಿಂದ ಒದಗಿದ ಅಪಮಾನಕರ ಪ್ರಸಂಗದಿಂದ ಪತಿ ಸುಬ್ಬಾಭಟ್ಟನೂ ಒಳಗೊಳಗೇ ಗೌಡರ ಬಗ್ಗೆ ವಿಷಕಾರುತ್ತ ಅವಕಾಶಕ್ಕಾಗಿ ಕಾಯುತ್ತಾನೆ. ಅಂದಿ-ನಿಂದಲೇ ಚರಸ್ಥಾನ ಪ್ರಾರಂಭಿಸುತ್ತಾನೆ. ಅದರ ಪ್ರಾರಂಭ ತನಗೆ ಕೊಡುತ್ತೇನೆಂದ ಹೊಲವನ್ನ ಅವನ ಹೆಸರಿಗೆ ಬರೆದುಕೊಡುವ ಘಟನೆಯಿಂದ ಪ್ರಾರಂಭ, ಅಂದೇ ಎಲ್ಲರಿಗೂ ತಮ್ಮಲ್ಲೇ ಊಟಕ್ಕೆ ಬರಬೇಕೆಂದು ಔತಣ. ಹೇಳಿದ ನರಹರಪ್ಪನಿಗೂ ಅವಮಾನವಾಗುವಂತೆ ತಿರಸ್ಕರಿಸುತ್ತಾನೆ. ಅಂದೇ ಅವನ ಬಗ್ಗೆ ಅವನ ಹೆಂಡತಿಯ ಬಗ್ಗೆ ಎಚ್ಚರಿಕೆಯಿಂದಿರಲು ಎಲ್ಲರಿಗೂ ಸೂಚನೆ ಕೊಡುತ್ತಾನೆ. ಆದರೂ ಅದೇ ಸಮಯಕ್ಕೆ ಹಳ್ಳಿಯನ್ನು ಪ್ರವೇಶ ಮಾಡಿದ ಶನಿಯಾದ ಕರಿಯಪ್ಪನನ್ನು ಕೂಡಿಕೊಂಡು ಗೌಡರ ಹಾಗೂ ನರಹರಪ್ಪರ ವಿರುದ್ಧ ಹಲ್ಲು ಮಸೆಯುತ್ತಾನೆ. ತಂದೆ ಮಾರಿದ ಹೊಲಗಳನ್ನೂ ಹಾಗೂ ಮರಳಿಕೊಡಿಸಬೇಕೆಂದು ಕೇಳುವ ಕರಿಯಪ್ಪ ಪಂಚಾಯಿತಿಯಲ್ಲಿ ಗೌಡರ ಮಾತಿಗೆ ಗೌರವ ಕೊಡದೆ, ಹೊಲಹಿಡಿದ ರೈತನ ಪತ್ನಿಗೆ ಅಪಮಾನ ಮಾಡಿದ್ದಕ್ಕೆ ದಂಡ ಕೊಡಲೂ ಒಪ್ಪದೆ ದೈವಕ್ಕೆಲ್ಲ ವಿರೋಧಿಯಾಗಿ ಬಹಿಷ್ಕೃತನಾಗುತ್ತಾನೆ. ಪಕ್ಕ ಹಳ್ಳಿ ಆಜ್ಜನ ಪಟ್ಟಿಯ ತಿಪ್ಪಾರೆಡ್ಡಿಯ ಆಶ್ರಯಕ್ಕೆ ಹೋಗುತ್ತಾನೆ. ಆತನ ಸಹಾಯದಿಂದ ತನ್ನ ಹೊಲಗಳನ್ನ ವಕೀಲರ ರಾಜೀ ಪ್ರಯತ್ನದಿಂದ ದೊರಕಿಸಿಕೊಂಡು ಹಳ್ಳಿಯ ಪ್ರವೇಶ ಮಾಡುತ್ತಾನೆ. ಊರ ಜನ ಮತ್ತೆ ಅವನೊಂದಿಗೆ ವ್ಯವಹರಿಸಲು ಹಿಂಜರಿಯುತ್ತಾರೆ. ಆದರೆ ಸುಬ್ಬಾಭಟ್ಟನ ಕುತಂತ್ರದಿಂದ—ಶಿವನಂಜೇಗೌಡರ ದೊಡ್ಡ ಮನಸ್ಸಿನಿಂದ ಮತ್ತೆ ಎಲ್ಲರೊಂದಿಗೆ ಬೆರೆಯಲು ಪ್ರಾರಂಭಿಸುತ್ತಾನೆ, ದಂಡತೆತ್ತು. ಆದರೆ ಅದೆಲ್ಲ ಬೂಟಾಟಿಕೆ. ಒಳಗೊಳಗೇ ಗೌಡರ ವಿರುದ್ಧ ಸೇಡು ತೀರಿಸಿಕೊಳ್ಳಲು ಗೌಡರ ಎರಡನೇ ಮಗ ರಾಮಣ್ಣನನ್ನು ದುಶ್ಚಟಗಳಿಂದಾಗಿ ಅವಿಧೇಯನನ್ನಾಗಿಸಿ. ಅವ್ಯಹಿತಚಿಂತಕರಂತೆ ವರ್ತಿಸಿ, ಮನೆಯನ್ನು ಇಬ್ಭಾಗ ಮಾಡಿಸುತ್ತಾರೆ. ಅದರೊಂದಿಗೆ ಊರು ಎರಡು ಪಂಗಡಗಳಾಗಿ ಮೊದಲಿನ ನೆಮ್ಮದಿ, ಸುಖ, ಸಮಾಧಾನಗಳಿಲ್ಲದಂತಾಗುತ್ತದೆ. ಈ

ಕಾರ್ಯದಲ್ಲಿ ಸುಬ್ಬಾಭಟ್ಟನ ಹೆಂಡತಿ ಜಲಜಾಕ್ಷಮ್ಮನೂ ರಾಮಣ್ಣನ ಪತ್ನಿ ಲಕ್ಷ್ಮಿಯು ಕಿವಿಯಾಗಿ ತಾನೇನು ದುಷ್ಕೃತ್ಯಗಳಲ್ಲಿ ಕಡಿಮೆಯಿಲ್ಲವೆಂದು ತೋರಿಸಿಕೊಳ್ಳುತ್ತಾಳೆ; ಸೇಡು ತೀರಿಸಿಕೊಳ್ಳುತ್ತಾಳೆ.

ಮನೆ ಪಾಲಾಗುವುದಕ್ಕೆ ಮೊದಲೇ ತಿಪ್ಪಾರೆಡ್ಡಿಯ ಸಹಾಯದಿಂದ ಎಲ್ಲ ಕಾಗದ ಪತ್ರಗಳನ್ನು ನೋಡಿ ಕೊನೆಯಲ್ಲಿ ತೋಟವ ಪಾಲಾಗುವ ವಿಷಯವೆತ್ತುತ್ತಾನೆ. ಎಷ್ಟೇ ಹೇಳಿದರೂ ರಾಮಣ್ಣ ಕೇಳುವುದಿಲ್ಲ. ತಂದೆಯ ಗೌರವಕ್ಕಾಗಿಯಾದರೂ ಅದನ್ನು ಬಿಟ್ಟುಬಿಡಲು ಅಣ್ಣ ಹನುಮಪ್ಪ ಕೇಳಿಕೊಂಡಾಗಲೂ ಬಿಡಲು ಸಿದ್ಧ-ನಿಲ್ಲದ್ದನ್ನು ಕಂಡು ಅದರ ಬೆಲೆ ಕಟ್ಟಿಸಿ, ತಾಯಿಯ ಆಭರಣಗಳನ್ನೆಲ್ಲ ನರಹರಪ್ಪನಿಗೆ ಕೊಡಲು ಸಿದ್ಧನಾದಾಗ. ನರಹರಪ್ಪನ ತ್ಯಾಗದ ಭಾವನೆ ವ್ಯಕ್ತವಾಗುತ್ತದೆ — ತಂಗಿಯಂತಿರುವ ಪುಟ್ಟತಾಯಮ್ಮನ ಮೈಮೇಲೇ ಆಭರಣ ಹಾಕಿರಿಯೆಂದು ಹೇಳಿದಾಗ. ಹೀಗೆ ಜಾತಿ-ಭೇದಗಳಿಲ್ಲದೆ ಒಂದಾಗಿ ಊರ ಒಳಿತಿಗಾಗಿ ಹಗಲಿರುಳು ಪ್ರಯತ್ನಿಸುವ ಆದರ್ಶ ವ್ಯಕ್ತಿಗಳೆಲ್ಲಿ? ಅವರ ಆದರ್ಶಗಳನ್ನೆಲ್ಲ ಮಣ್ಣುಪಾಲು ಮಾಡಲು ಪ್ರಯತ್ನಿಸುವ ಚರಿತ್ರಹೀನ ವ್ಯಕ್ತಿಗಳೆಲ್ಲಿ? ಎಂಬುದನ್ನು ಕಾಣುತ್ತೇವೆ; ಈ ಕಾದಂಬರಿಯಲ್ಲಿ. ಅಲ್ಲದೆ ಆದರ್ಶಕ್ಕಾಗಿ, ಗೌರವಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ಪುಟ್ಟತಾಯಮ್ಮನೊಂದಿಗೆ ಗೌಡರ ಮನೆಯ ಗೌರವ ಲಕ್ಷ್ಮಿ ಹೊರಟುಹೋಗುತ್ತಾಳೆ. ಗೌಡರಿಗೆ ಭ್ರಮೆಯುಂಟಾಗುತ್ತದೆ. ನರಹರಪ್ಪ ತಮ್ಮ ಮನೆಯಲ್ಲೇ ಇಟ್ಟು ಕೊಳ್ಳುತ್ತಾನೆ. ಮುಂದೆ ನಾಲ್ಕೇ ತಿಂಗಳಲ್ಲಿ ಮೊದಲ ಮಗನಿಗೆ ಮಗನೊಬ್ಬ ಹುಟ್ಟಿ ಅಜ್ಜನಿಗೆ ಆಕರ್ಷಣೆಯಾಗುತ್ತಾನೆ. ಆಗಾಗ್ಗೆ ಮೊಮ್ಮಗನನ್ನು ನೋಡಲು ಮಗನ ಮನೆಗೆ ಹೋಗುತ್ತಾನೆ. ಇದನ್ನು ಸಹಿಸದ ಸುಬ್ಬಾಭಟ್ಟ ಮತ್ತೆ ಎರಡನೆ ಮಗ ರಾಮಣ್ಣನಿಗೆ ಕಿವಿಯಾಗುತ್ತಾನೆ. (ಕಳ್ಳ ಹಣ) ತೆಗೆದಿಟ್ಟ ಗಂಟನ್ನು ಕೊಟ್ಟಿದ್ದಾ-ನೆಂದು ಹೇಳುತ್ತಾನೆ. ಇದೇ ಕಾರಣಕ್ಕಾಗಿ ಮತ್ತೆ ಅಣ್ಣ-ತಮ್ಮಂದಿರು ಹೊಡೆದಾಡ ಬೇಕಾಗುತ್ತದೆ. ಕೋರ್ಟಿಗೆ ಹೋಗುತ್ತಾರೆ. ಮೂರು ತಿಂಗಳು ಜೈಲುವಾಸ ಅನುಭವಿಸಿ ಬರುತ್ತಾನೆ ಹನುಮಪ್ಪ; ತನ್ನ ಸಂಗಾತಿಗಳೊಂದಿಗೆ. ಅಷ್ಟರಲ್ಲಿ ಚನ್ನಮ್ಮ ಲಕ್ಷ್ಮಿಯನ್ನು ಕುರಿತು ಆಡಿದ ಬಂಜೆಯೆಂಬ ಸಣ್ಣಮಾತು ದೊಡ್ಡದಾಗಿ ಅವಳಿಗೆ ಮುಟ್ಟುತ್ತದೆ. ಇದೇ ಸಮಯ ಸಾಧಿಸಿ ಜಲಜಾಕ್ಷಮ್ಮ ಕೊನೆಯದಾಗಿ ಸೇಡು ತೀರಿಸಿಕೊಳ್ಳುತ್ತಾಳೆ; ಬಸವನಿಗೆ ವಿಷ ಪ್ರಾಶನ ಮಾಡಿಸಿ ಮುಗಿಸಿಬಿಡ ಬೇಕೆಂದು ಸೂಚನೆ ಕೊಟ್ಟು, ಲಕ್ಷ್ಮಿಗೆ ಬೇಕಾದದ್ದು ಅಷ್ಟೇ. ಕೂಡಲೆ ಹೊಲೆಯರ ತಿಮ್ಮಯ್ಯನನ್ನು ಕರೆಸಿ ಹತ್ತು ರೂಪಾಯಿ ಕೊಟ್ಟು ಕಳಿಸುತ್ತಾಳೆ ಶಿಶುಹತ್ಯೆಗೆ. ಮಗುವಿನ ಹತ್ಯೆಯೊಂದಿಗೆ ಕೊನೆಗೊಳ್ಳುವ ಕಾದಂಬರಿ ಹಳ್ಳಿಗಳ ಸಮಸ್ಯೆಗಳಿಗೆಲ್ಲ ರಾಮಗನ್ನಡಿಯಂತೆ ಅಲ್ಲಿ ನಡೆದ ದಿನ ನಿತ್ಯದ ಚಟುವಟಿಕೆಗಳನ್ನು ಅತ್ಯಂತ ಸೂಕ್ಷ್ಮ-ವಾದ ರೀತಿಯಲ್ಲಿ ತೋರಿಸುತ್ತದೆ. ಇಡೀ ಹಳ್ಳಿಯೇ ಗೌಡರ ದುರಂತದಲ್ಲಿ ಪಾಲ್ಗೊಂಡು ನೋವು ಅನುಭವಿಸುತ್ತದೆ. [illegible] ಕರಿಯಪ್ಪ. ಸುಬ್ಬಾಭಟ್ಟ

ರಿಂದಾಗಿ ಇನ್ನೂ ಅದೇ ಸ್ಥಳ ಭಾರತೀಯ ಹಳ್ಳಿಗಳಲ್ಲಿ ಕಂಡು ಬರುತ್ತದೆ. ಆದರ್ಶಗಳಲ್ಲಿ ಹಾಳಾಗಿ ಸಮಾಜ ವಿರೋಧಿ ಕೃತಿಗಳೇ ಹೆಚ್ಚಾಗಿ ಭಾರತದ ಪ್ರಗತಿ ನಿರೀಕ್ಷಿಸಿದಷ್ಟು ಆಗದೆ, ಮತ್ತಷ್ಟು ಹದಗೆಟ್ಟಿದೆಯೆಂಬುದನ್ನು ಸೂಚಿಸಲಾಗಿದೆ.

ಏಕೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯರೆಲ್ಲ ಭವ್ಯ ಕನಸು ಕಂಡಿದ್ದರು. ಆದರೆ ಅದು ಕನಸಾಗೇ ಉಳಿದಿದೆ. ಎಲ್ಲೆಲ್ಲೂ ಸಮಸ್ಯೆಗಳೇ ತಾಂಡವವಾಡುತ್ತಿವೆ. ಹೀಗಾಗಿ ಯಾರಿಗೂ ಸ್ವತಂತ್ರ್ಯದ ಸುಖ ಸಿಕ್ಕಿಲ್ಲ. ಸಿಕ್ಕಿದ್ದರೂ ಸ್ವಾರ್ಥಿಗಳಿಗೆ! ಅದೂ ಶಾಶ್ವತವಲ್ಲದ್ದು! ಕೇವಲ ಕ್ಷಣಿಕ! ಆದ್ದರಿಂದ ಕಾದಂಬರಿಕಾರರ ಆಶಯ ಮತ್ತೆ ಮೊದಲಿನ ಕೌಟುಂಬಿಕ ಮೌಲ್ಯಗಳ ಪುನರ್‌ಜೀವನವಾಗಬೇಕೆಂದಾಗಿದೆ. ಅಂದಾಗಲೇ ನಮಗೆಲ್ಲ ಸುಖ, ಶಾಂತಿ, ಸಮೃದ್ಧಿ. ಈ ಆಶಯದೊಂದಿಗೆ ಕಥೆಯು ಕೊನೆಗೊಂಡಿದೆ. ಇದು ಭಾರತದ ಒಂದೇ ಹಳ್ಳಿಯ ಕಥೆಯಲ್ಲ, ಪ್ರತಿಯೊಂದು ಹಳ್ಳಿಯ ಕಥೆಯಾಗಿದೆ. ಅಲ್ಲಿಯ ಸಂಸ್ಕೃತಿ, ಸಭ್ಯತೆ, ನಾಗರಿಕತೆಗಳೇ ಭಾರತೀಯ ನಾಗರಿಕತೆ ಹಾಗೂ ಸಂಸ್ಕೃತಿಗಳಾಗಿವೆ. ಅವುಗಳ ಉಳಿವಿಗಾಗಿ, ಉತ್ಕರ್ಷಕ್ಕಾಗಿ ಪ್ರಯತ್ನ ಪ್ರತಿಯೊಬ್ಬರಿಂದಲೂ ನಡೆಯಬೇಕು. ಅಂದಾಗಲೇ ನಾವು ನಮ್ಮ ಕಲ್ಯಾಣ ಸಾಧಿಸಿದಂತಾಗುತ್ತದೆ. ಅದೇ ನಮ್ಮೆಲ್ಲರ ಧ್ಯೇಯವಾಗಬೇಕು.

ವಸ್ತು, ಪಾತ್ರಗಳು, ಶೈಲಿ, ವಾತಾವರಣ ವರ್ಣನೆ ಮೊದಲಾದವುಗಳ ದೃಷ್ಟಿಯಿಂದ 'ಚಂದವಳ್ಳಿಯ ತೋಟ' ಕಾದಂಬರಿಯು ಕನ್ನಡ ಸಾಹಿತ್ಯದಲ್ಲೇ ಸುಪ್ರಸಿದ್ಧವಾದ ಸುಂದರ ಕೃತಿಯಾಗಿದೆ. ಇಲ್ಲಿ ಬರುವ ಕೆಲವೇ ಪ್ರಮುಖ ಪಾತ್ರಗಳು ಇಂದಿಗೂ ನಿತ್ಯಜೀವನ ಸತ್ಯ ಪ್ರತಿಪಾದಕ ವ್ಯಕ್ತಿಗಳಾಗಿದ್ದಾರೆ. ಅವರ ಪ್ರಯತ್ನ ನಮ್ಮೆಲ್ಲರ ಪ್ರಯತ್ನಗಳೆಂಬಂತೆ ತೋರಿ ಬರುತ್ತವೆ. ನಾವೇ ಅವರಾಗಿ ಅವರೇ ನಾವಾಗಿ ಕಥೆ ನಮ್ಮದಾಗಿದೆ. ಭಾಷೆಯಾದರೂ ಪಾತ್ರಗಳಿಗೆ ಅತ್ಯಂತ ಆಡುಬಾಷೆಯಾಗಿದೆ, ಹಳ್ಳಿಗರ ಬಾಯಲ್ಲಿ, ಅಲ್ಲದೆ ಸುಸಂಸ್ಕೃತರ ಬಾಯಲ್ಲಿ ಗ್ರಾಂಥಿಕವಾದುದಾಗಿದೆ. ಎಲ್ಲೂ ಕ್ಲಿಷ್ಟತೆ ಕಂಡು ಬರುವುದಿಲ್ಲ. ತಂತ್ರವಂತೂ ಪ್ರಯೋಗಶೀಲವಾದದ್ದು. ಹೀಗಾಗಿ ಓದುಗರಿಗೆ ಹೊಸ ಅನುಭವ ಓದುವಾಗೆಲ್ಲ. ಅಲ್ಲದೆ ಅಲ್ಲಲ್ಲಿ ನಾಣ್ಣುಡಿಗಳು, ಗಾದೆಗಳು ಉಪಯೋಗಿಸಲ್ಪಟ್ಟಿವೆ. ಅದರಿಂದಾಗಿ ಶೈಲಿ ಹೆಚ್ಚು ಪ್ರಭಾವ ಪೂರ್ಣ ಹಾಗೂ ಶಕ್ತಿಯುತವಾಗಿದೆ. ಸಮಸ್ಯೆ ಕೌಟುಂಬಿಕವೇ ಆಗಿರಲಿ, ಸಾಮಾಜಿಕವೇ ಆಗಿರಲಿ, ಆರ್ಥಿಕವೇ ಆಗಿರಲಿ, ಧಾರ್ಮಿಕವೇ ಆಗಿರಲಿ, ಅತ್ಯಂತ ಸರಳ ರೀತಿಯಲ್ಲಿ ನಿರೂಪಿತವಾಗಿವೆ. ಎಲ್ಲೂ ಅಸಹಜತೆಗೆ ಅವಕಾಶ ಸಿಕ್ಕಿಲ್ಲ. ಐದಂಕದ ನಾಟಕದಂತೆ— ನಡೆವ ಘಟನೆಗಳಲ್ಲಿ ಸ್ಮೃತಿಪಟಲದ ಮೇಲೆ ಅಚ್ಚಳಿಯದ ಪರಿಣಾಮವನ್ನುಂಟು ಮಾಡುತ್ತದೆ. ನಾಯಕ ಶಿವನಂಜೇಗೌಡನ ಹೋರಾಟ ಆತನ ಧೈರ್ಯ, ತಾಳ್ಮೆ ಲೋಕಾನುಭವ. ಸರಹರಪ್ಪನೊಡನಿಟ್ಟುಕೊಂಡ ಸಂಬಂಧ, ಹಾಸ್ಯ ಮೊದಲಾದ ಗುಣಗಳು ನಮಗೆಲ್ಲ ಅನುಕರಣೀಯ! ಅಂಥ ಗುಣಗಳಿಂದಲ್ಲವೇ ಈಗಲೂ ಭಾರತೀಯ ಪರಂಪರೆ–ಸಂಸ್ಕೃತಿ–ಸಭ್ಯತೆ ಎಲ್ಲರಿಗೂ

ಮೆಚ್ಚಿಕೆಯದಾಗಿರುವದು. ಅಷ್ಟೇ ಅನುಕರಣೀಯರು ಆತನ ಪತ್ನಿ ಪುಟ್ಟತಾಯಮ್ಮ ಮೊದಲ ಮಗ ಪಸುಪಪ್ಪ ಹೆಂಡತಿ ಚೆನ್ನಮ್ಮ ಗೆಳೆಯ ನರಹರಪ್ಪ ಆತನ ಪತ್ನಿ ಪಾರ್ವತಮ್ಮ. ಮಗ-ಸೊಸೆ ಶಾಮಣ್ಣ ಹಾಗೂ ಕಾವೇರಮ್ಮ, ಇವರೆಲ್ಲ ಉಚ್ಚ-ಸಂಸ್ಕೃತಿಯ ಪ್ರತೀಕಗಳು !

ಈ ಕಾದಂಬರಿಯಲ್ಲಿ ಮತ್ತೊಂದು ಉತ್ಕೃಷ್ಟ ಪಾತ್ರವೆಂದರೆ ಲಾಯರ್ ಭೀಮ-ರಾಯರದು. ಕರಿಯಪ್ಪರೆಡ್ಡಿಯವರನ್ನು ಕೂಡಿಕೊಂಡು ಹೇಗಾದರೂ ಮಾಡಿ ಸೇಡು ತೀರಿಸಿಕೊಳ್ಳಬೇಕೆಂಬ ಹಠದಿಂದ ತಮ್ಮ ಲಾಯರ್ ಚಂದ್ರಯ್ಯ ಅವರಿಂದ ನೋಟೀಸ್ ಕೊಡಿಸಿದಾಗ, ಲಾಯರ್ ಭೀಮರಾಯರು ವಕೀಲಿ ವೃತ್ತಿಗೂ ಆದರ್ಶಪ್ರಾಯರಾಗಿ ಶಿವನಂಜೇಗೌಡ ಹಾಗೂ ನರಹರಪ್ಪರಿಗೆ ರಾಜೀ ಮಾಡಿಕೊಳ್ಳಲು ಸಲಹೆನೀಡುತ್ತಾರೆ ಇದೇ ವಿಷಯ ಕುರಿತು ಪ್ರತಿವಾದಿಯ ಪಾರ್ಟಿಯ ವೃತ್ತಿ ಬಂದು ಚಂದ್ರಯ್ಯ ನವರಿಗೆ ಮಾನವೀಯ ಕೆಲಸ ದೃಷ್ಟಿಯಿಂದ ಸಮಸ್ಯೆಯನ್ನು ಪರಿಶೀಲಿಸಬೇಕೆಂದು ಸೂಚಿಸುತ್ತಾರೆ. ಕೇವಲ ಹಣಕ್ಕಾಗಿ ವಾದಮಾಡಿ ಕಿಸೆ ತುಂಬಿಸಿಕೊಳ್ಳುವಂಥವರಲ್ಲ! ಇಂಥವರಿಂದಲೇ ಕೋಟ್ಯಾವಧಿ ಅಶಿಕ್ಷಿತ ಭಾರತೀಯರ ಉದ್ಧಾರವಾಗುವುದು. ಇಲ್ಲವಾದಲ್ಲಿ ಹಳ್ಳಿಗರು ದುಡಿದಷ್ಟೆಲ್ಲ ವಕೀಲರಿಗೇ ಎಂದಾಗುತ್ತದೆ. ಅದಕ್ಕೆ ಉದಾಹರಣೆ ಶಿವನಂಜೇಗೌಡರ ಎರಡನೆ ಮಗ ರಾಮಯ್ಯ ಅವನಿಗೆ ಕರಿಯಪ್ಪ ಹಾಗೂ ಸುಬ್ಬಾಭಟ್ಟರ ಉಪದೇಶ ಅದರಿಂದಾಗಿ ಪೂರ್ಣಹಾಳಾಗಿ, ತಂದೆಯ ಪ್ರತಿಷ್ಠೆಯ ಪ್ರತೀಕದಂತಿದ್ದ 'ತೋಟವನ್ನು' ಕರಿಯಪ್ಪನಿಗೆ ಮಾರಿಕೊಳ್ಳುವ ಪ್ರಸಂಗ ಬರುತ್ತದೆ. ಅವನು ಕೆಟ್ಟ ಜನರ ಸಹವಾಸ ಮಾಡಿದ್ದರಿಂದಲೇ ಹಾಳಾದನೆಂದೂ, ಅವರಣ್ಣ ತಂದೆಯಂತೆ ಸತ್ಯ, ಧರ್ಮ, ನ್ಯಾಯಕ್ಕಾಗಿ ಬಾಳಿ ಎಲ್ಲರಿಗೂ ಬೇಕಾದವನಾದ ನೆಂದೂ ಚಿತ್ರಿಸಲಾಗಿದೆ.

ಇಲ್ಲಿ ಚಿತ್ರಿತವಾದ ಅನೇಕ ಘಟನೆಗಳು ಅತಿ ಸ್ವಾಭಾವಿಕವಾಗಿವೆ. ವರ್ಣನೆಯಂತೂ ಸೂಕ್ತವಾಗಿದೆ. ಮೂರು-ನಾಲ್ಕು ತರಹದ ಸತಿ-ಪತಿಗಳಿದ್ದಾಗ್ಯೂ, ಅವರ ರೀತಿ-ನೀತಿಗಳಲ್ಲಿ, ಬಾಳಿನಲ್ಲಿ ವೈವಿಧ್ಯತೆಯಿದೆ. ಅದರಲ್ಲೇ ಅವರೆಲ್ಲರ ಒಳಿತು. ಮುಖ್ಯ ವ್ಯವಸಾಯ ಒಕ್ಕಲುತನವಾದರೂ ಜೀವನದಲ್ಲಿಯ ರಸನಿಮಿಷಗಳಿಗೇನೂ ಕೊರತೆ ಇಲ್ಲ. ಆದ್ದರಿಂದಲೇ ಇವರು ತಮ್ಮ ಹಳ್ಳಿಯನ್ನು ನಂದನವನ್ನಾಗಿ ಮಾಡಿರಲು ಸಾಕು. ಅದೇ "ಚಂದವಳ್ಳಿಯ ತೋಟ"ದ ವೈಶಿಷ್ಟ್ಯ! ಭಾರತದ ಭವಿಷ್ಯತ್ತನ್ನು ಸೂಚಿಸುವ ಕೃತಿಯಾಗಿದೆ. ಆದ್ದರಿಂದ ಇಂದೂ ಕೂಡ ತನ್ನ ಮಹತ್ವವನ್ನು ಕಾಯ್ದುಕೊಂಡು ಓದುಗರಿಗೆಲ್ಲ ಸಂತೋಷವನ್ನುಂಟುಮಾಡುತ್ತದೆ. ಮತ್ತೆ ಮತ್ತೆ ಓದಬೇಕೆನ್ನಿಸುತ್ತದೆ. ಶಿವನಂಜೇಗೌಡನಿಗಾಗಿ ಮರುಗುವಂತೆ ಮಾಡುತ್ತದೆ. ಅದರಲ್ಲೇ ಅದರ ಸಾರ್ಥಕತೆ. ಸಫಲತೆಗಳಿವೆಯೆಂದು ಮುಕ್ತಕಂಠದಿಂದ ಹೇಳ ಬಹುದು.

ಹೆಣ್ಣು ಕಟ್ಟಿದ ಮನೆ : ಒಂದು ಟಿಪ್ಪಣಿ.

— ಡಿ. ವಿಜಯಾ

ತ್ರಾತ್ವಿಕ ವ್ಯವಹಾರದಲ್ಲಿ ಆಸಕ್ತಿಯಿಲ್ಲದ ರಾಮಾವಧಾನಿಯ ಸಂಸಾರವನ್ನು ಆತನ ಪತ್ನಿಯಾದ ನರಸಮ್ಮ ಉಳಿಸಿದ್ದು, ನರಸಮ್ಮನ ವ್ಯಾವಹಾರಿಕ ಜಾಣ್ಮೆ, ನಯ ಸಿದ್ಧತೆಗಳಿಲ್ಲದ ಆಕೆಯ ಸೊಸೆ ವೆಂಕಮ್ಮ ಅಧಿಕಾರದಿಂದ ಆಕರ್ಷಿತಳಾಗಿ ನರಸಮ್ಮನನ್ನು ಅನುಸರಿಸ ಹೊರಟು ಕೇಡು ಬಗೆದು ಸಿಕ್ಕಿಕೊಂಡಿದ್ದು ತ.ರಾ.ಸು. ಅವರ 'ಹೆಣ್ಣು ಕಟ್ಟಿದ ಮನೆ' ಕಾದಂಬರಿಯ ಸ್ಥೂಲಪಂದರ.

ಕಾದಂಬರಿಯ ಮೊದಲ ಅಧ್ಯಾಯಕ್ಕೆ ನಿಜವಾಗಿ ಯಾವ ಕೆಲಸವೂ ಇಲ್ಲ. ವರ್ತಮಾನದಿಂದ ಭೂತಕ್ಕೆ ಕಥೆಯನ್ನು ಒಯ್ಯುವ ತಂತ್ರ ಇಲ್ಲಿದ್ದರೂ ವಾಸ್ತವವಾಗಿ ಕಾದಂಬರಿ ಪ್ರಾರಂಭವಾಗುವ ವರ್ತಮಾನ ಕ್ರಿಯೆಯೊಂದಿಗೆ ಒಟ್ಟು ಕಾದಂಬರಿ ಯಾವ ಸಾವಯುವ ಸಂಬಂಧವನ್ನು ಉಳಿಸಿ ಕೊಳ್ಳುವುದಿಲ್ಲ. ಕಾದಂಬರಿ ಕೊನೆಯಾಗು ವುದನ್ನು ನೋಡಿದರೆ ಇಂಥದೊಂದು ಅಧ್ಯಾಯ ಈ ಕಾದಂಬರಿಯ ಮೊದಲಿಗೆ ಇತ್ತು ಎಂಬುದನ್ನು ಕೂಡ ಓದುಗ ಮರೆತರೂ ನಷ್ಟವಿಲ್ಲ. ಈ ಅಧ್ಯಾಯದಲ್ಲಿ ಕೇಳಿಸುವ ರಾಜಾವಧಾನಿ ಕಾದಂಬರಿಯ ಕೇಂದ್ರ ಘಟನೆಗಳು ನಡೆಯುವ ಸಂದರ್ಭದಲ್ಲಿ ಹುಟ್ಟಿ ದವನು ಎಂಬುದನ್ನು ಬಿಟ್ಟರೆ ಇಲ್ಲಿ ಅವನಿಗಾಗಲೀ ಅವನ ಮದುವೆಯ ಪ್ರಸ್ತಾಪ ಕ್ಕಾಗಲೀ ಅಂಥ ಮಹತ್ತ್ವವಿಲ್ಲ. ಇಲ್ಲಿನ ಇನ್ನೊಂದು ಸ್ವಾರಸ್ಯವೆಂದರೆ ಒಟ್ಟು ಕಾದಂಬರಿಯಲ್ಲಿ ಈ ಪಾತ್ರಗಳ ಬಗ್ಗೆ ನಮಗೆ ಸಿಕ್ಕುವ ಕಲ್ಪನೆಗೂ ಈ ಅಧ್ಯಾಯದಲ್ಲಿ ಕಾಣುವ ಪಾತ್ರಗಳ ವ್ಯಕ್ತಿತ್ವಕ್ಕೂ ಒಂದು ಸಾಂಗತ್ಯ ಕಾಣುವುದಿಲ್ಲ. 'ಹೆಂಡತಿಯಗಂಡ' ನೆನಸಿಕೊಂಡಿದ್ದ ಶ್ರೀನಿವಾಸಾವಧಾನಿ ಇಲ್ಲಿ ಸಿಡುಕಿನ ಗುಂಡು, ಅನಿವಾರ್ಯವಲ್ಲದ ಸಂದರ್ಭಗಳಲ್ಲಿ ಜೋರಾಗಿ ದನಿ ಎತ್ತದ ರಾಮಾವಧಾನಿಯದೇ ಇಲ್ಲಿ ಅಗತ್ಯವಿಲ್ಲದೆಯೂ ಬಾಯಿಹಾಕುತ್ತಿದ್ದ ವೆಂಕಮ್ಮ ಇಲ್ಲಿ ಮಗನ ಮದುವೆಯ ಬಗ್ಗೆಯೂ ತಟಸ್ಥೆ, ರಾಜಾ ವಧಾನಿ ಹುಟ್ಟುವ ಮೊದಲೇ ಅವನ ಭವಿಷ್ಯದ ಬಗ್ಗೆ ಯೋಚನೆ ಮಾಡಿದವಳು ಇಲ್ಲಿ ಆತನ ಭವಿಷ್ಯದ ಬಗ್ಗೆ ಆತಂಕವೇ ಇಲ್ಲವೆಂಬಂತೆ ವರ್ತಿಸಿದ್ದಾಳೆ. ಮೊದಲ ಅಧ್ಯಾಯಕ್ಕೂ ಕಾದಂಬರಿಯ ಉಳಿದ ಭಾಗದ ಘಟನೆಗಳಿಗೂ ನಡುವೆ 18-20 ವರ್ಷಗಳು ಸಂದಿವೆ ಎಂಬುದು ನಿಜ. ಆದರೆ ಈ ಬದಲಾವಣೆಗಳ ಅಗತ್ಯವಾಗಲೀ ಕಾರಣವಾಗಲೀ ಕಾದಂಬರಿಯಲ್ಲಿಲ್ಲ. ಕಾದಂಬರಿಯ ಮುಖ್ಯ ಘಟನೆಗಳು ನಡೆದ ಸುಮಾರು 20 ವರ್ಷದ ನಂತರ ಅವರ ಬದುಕಿನ ಒಂದು ಭಾಗವನ್ನು ಅನುದ್ದೇಶಿತ ವಾಗಿ ನಮ್ಮ ಮುಂದಿಟ್ಟಿದೆ. ಎರಡನೆಯ ಅಧ್ಯಾಯದಲ್ಲಿ ಕಥೆ ಹಿಂದಕ್ಕೆ ಜಗಿಯುತ್ತದೆ. ನರಸಮ್ಮ ಸ್ವಂತ ಸಂಸಾರ ಹೂಡುವುದರ ಹಿನ್ನೆಲೆ ಎರಡನೆಯ ಅಧ್ಯಾಯದಲ್ಲಿದೆ. ಮೂರರಿಂದ ಎಂಟನೆಯ ಅಧ್ಯಾಯದವರೆಗಿನ ಭಾಗ ನರಸಮ್ಮ 'ಮನೆ ಕಟ್ಟಿದ'

ಬಗೆಯನ್ನು ಬಣ್ಣಿಸಿದೆ. ಇನ್ನುಳಿದ ಭಾಗವೆಲ್ಲಾ ವೆಂಕಮ್ಮನ ಕುಹಕತೆಯಿಂದ ಮನೆ 'ಒಡೆದ' ಕಥೆಯನ್ನು ಹೇಳುತ್ತದೆ. ಶೀರ್ಷಿಕೆಯಲ್ಲಿ 'ಮನೆ ಕಟ್ಟು'ವುದಕ್ಕೆ ಪ್ರಾಶಸ್ತ್ಯ ಕೊಟ್ಟಂತೆ ಇದ್ದರೂ 'ಒಡೆಯುವು'ದನ್ನೇ ಕಾದಂಬರಿ ವಿವರವಾಗಿ ಬಣ್ಣಿಸಿದೆ.

ಕಾದಂಬರಿಯ ಹೆಸರೇ ಹೇಳುವಂತೆ ಘಟನೆಗಳ ಒಳ್ಳೆಯದು ಕೆಟ್ಟದ್ದೆಲ್ಲದರ ಹೊಣೆಗಾರರು ಇಲ್ಲಿನ ಹೆಂಗಸರು. ಯಾಕೆಂದರೆ ಅವರೇ ಈ ಘಟನೆಗಳ ಸೂತ್ರಧಾರರು. ಇಲ್ಲಿನ ಗಂಡಸರು ಹೆಚ್ಚಾಗಿ ಪ್ರೇಕ್ಷಕರು. ಕಾದಂಬರಿಯ ಪ್ರವಾಹವನ್ನು ಅವರ ವಿಶೇಷವಾಗಿ ಬದಲಿಸುವವರೂ ಅಲ್ಲಿ ನಿಲ್ಲಿಸುವವರೂ ಇಲ್ಲ. ಅವರೆ ನೀನಾಡಿಸಿದಂತೆ ಆಡುವವನು ನಾನು ಎಂದು ಪರಮಾತ್ಮನ ಮುಂದೆ ಕೈ ಮುಗಿದು ನಿಂತ ಭಕ್ತನಂತೆ ಗಂಡಸಿದ್ದರೆ ಕೌಟುಂಬಿಕ ಸಮಸ್ಯೆಗಳು ಮುಗಿಯುವುದಿಲ್ಲ ಎಂಬ ಅರಿವೂ ಕಾದಂಬರಿಯಲ್ಲಿದೆ. ಕಾದಂಬರಿಯ ಉತ್ತರಾರ್ಧವೇ ಇದಕ್ಕೆ ಸಾಕ್ಷಿಯಾಗಿದೆ. ಪಾಪಾಶಾಸ್ತ್ರಿಯ ನಿರಂಕುಶತೆಯೇ ಆಗಲಿ, ನರಸಮ್ಮನ ದಕ್ಷತೆಯೇ ಆಗಲಿ ತನಗರಿವಿಲ್ಲದೆ. ಉಳಿದವರ ಕರ್ತೃತ್ವ ಶಕ್ತಿಯನ್ನು ಮೊಟಕುಗೊಳಿಸುತ್ತದೆ. ಆದರೂ ನರಸಮ್ಮ. ಪಾಪಾಶಾಸ್ತ್ರಿಗಳ ಪ್ರವೃತ್ತಿ ಅನಿವಾರ್ಯ ಅಗತ್ಯವೂ ಆಗಿ ಬಿಡುತ್ತದೆ ಎಂಬುದೂ ವಾಸ್ತವ. ಹೆಣ್ಣಾಗಲೀ ಗಂಡಾಗಲೀ ಆಯಾವ್ಯಕ್ತಿಯ ಶಕ್ತಿ ಮತ್ತು ಸನ್ನಿವೇಶವನ್ನವಲಂಬಿಸಿ ಅವು ನಿರ್ಣಾಯಕ ಶಕ್ತಿಗಳಾಗುತ್ತವೆ.

ನರಸಮ್ಮನಂಥ ಹೆಂಗಸರು ಮನೆಗಳನ್ನು ಕಟ್ಟುತ್ತಾರೆಂದು ಸಾರುವಲ್ಲಿಯೇ ಅಂಥವರು ಅನುಕರಣಯೋಗ್ಯರೆಂದು ಈ ಕಾದಂಬರಿ ಅಪ್ರತ್ಯಕ್ಷವಾಗಿ ಹೇಳುತ್ತಿದೆ. ಈ ಕುರಿತಾದ ಮೆಚ್ಚುಗೆಯೂ ಅಲ್ಲಲ್ಲಿ ವ್ಯಕ್ತವಾಗಿದೆ - ಕಾದಂಬರಿಯ ಈ ಧ್ವನಿಗೆ ತೀರ ಮಿತವಾದ ಒಂದು ವಲಯದಲ್ಲಿ ಮಾತ್ರ ಅರ್ಥವಿದೆ. ಮನೆಯ ಎಲ್ಲ ಜವಾಬ್ದಾರಿಗಳನ್ನು ಹೊತ್ತದ್ದಕ್ಕೆ ಅವಳನ್ನು ಭೇಷ್ ಎನ್ನುತ್ತಾ ಮರಿದುಂಬಿಸಿ, ಹೆಂಗಸು ಇಷ್ಟಾದರೆ ಸಾಕು ಎಂದು ಧ್ವನಿಸಿ, ಗಂಡಸಿನ ಬೇಜವಾಬ್ದಾರಿ–ತನಕ್ಕೆ ಇಂಬುಕೊಟ್ಟು, ಅದರಾಚೆಗೂ ಹೆಣ್ಣಿನ ವಿಕಾಸಕ್ಕಿರುವ ಅವಕಾಶವನ್ನು ಮರೆಮಾಚಬಾರದು.

ಈ ಕಾದಂಬರಿಯಲ್ಲಿ ಬರುವ ಎಲ್ಲ ಸ್ತ್ರೀ ಪಾತ್ರಗಳು ತಮ್ಮ ಗಂಡ, ಮಕ್ಕಳನ್ನೇ ತಮ್ಮ ಬದುಕಿನ ಕೇಂದ್ರವೆಂದುಕೊಳ್ಳುವವರು. ಹೊರ ಪ್ರಪಂಚದ ಬಹುತೇಕ ಮಹಿಳೆಯರಿಗಿಂತ ಈ ವಿಷಯದಲ್ಲಿ ಇವರೇನೂ ಭಿನ್ನವಾಗಿಲ್ಲ. ಈ ಅಂಶವನ್ನು ಇತಿಹಾಸದ ಹಿನ್ನೆಲೆಯಲ್ಲಿ ಸಮಗ್ರವಾಗಿ ಯೋಚಿಸಬೇಕಾದ್ದು ಮಹತ್ತ್ವದ ಸಂಗತಿ. ಅವರು ಹೀಗಷ್ಟೇ ಯಾಕೆ ಯೋಚಿಸುತ್ತಾರೆ, ಅದರಾಚೆಗೆ ಅವರ ದೃಷ್ಟಿ ಯಾಕೆ ಹರಿಯುತ್ತಿಲ್ಲ? ಅವಳ ದೈಹಿಕ ರಚನೆ, ಮಾನಸಿಕ ಸ್ಥಿತಿ, ಮನುಷ್ಯನ ಹುಟ್ಟಿನಲ್ಲಿ ಅವಳ ಪಾತ್ರ, ಸಾಮಾಜಿಕ ರಚನೆ ಈ ಎಲ್ಲವೂ ಈ ಸ್ಥಿತಿಯನ್ನು ಆಕೆಗೆ ಹೇಗೆ ತಂದುಕೊಟ್ಟಿವೆ ಎಂಬ ಅಂಶಗಳು ಮುಖ್ಯವಾಗಿದ್ದರೂ ಈ ಕಾದಂಬರಿಯ ಚೌಕಟ್ಟಿಗೆ ಇವು ಹೊರತಾಗಿವೆ. ಕಾದಂಬರಿಯ ಆಶಯವೇ ತೀರ ಸ್ಥೂಲ ಮತ್ತು ಮಿತ. ಈಕೆ ಹೀಗಿದ್ದಾಳೆ, ಹೀಗಿರು

ವುದರಿಂದ ಮನೆ ಉಳಿದೀತು – ಇದರಿಂದಾಚೆಗೂ ಇಲ್ಲ, ಈಚೆಗೂ ಇಲ್ಲ. ಹೀಗಾಗಿ ಕಾದಂಬರಿ ತಾನು ದಕ್ಕಿಸಿಕೊಳ್ಳಬಹುದಾಗಿದ್ದ ಆಳ ಅಗಲವನ್ನು ಕಳೆದುಕೊಂಡಿದೆ.

ಎರಡು ತಲೆಮಾರಿನ ಇಬ್ಬರು ಹೆಂಗಸರ ಕೌಟುಂಬಿಕ ಆಡಳಿತದ ಮೇಲೆ ಈ ಕಾದಂಬರಿ ನಿಂತಿದೆ. ಆ ಇಬ್ಬರು ಹೆಂಗಸರು : ನರಸಮ್ಮ ಮತ್ತು ವೆಂಕಮ್ಮ- ಇವರ ಜೊತೆಗೆ ಕಾದಂಬರಿಯಲ್ಲಿ ಮುಖ್ಯವಾಗುವ ಇನ್ನೊಬ್ಬ ಸ್ತ್ರೀ : ಭಾಗೀರಥಿ. ನರಸಮ್ಮನ ವಿವೇಕ, ಸ್ಥೈರ್ಯ ವೆಂಕಮ್ಮನಲ್ಲಿಲ್ಲ. ಅಲ್ಲಗೆ ನರಸಮ್ಮ ವೆಂಕಮ್ಮನಿಗಿಂತ ಭಿನ್ನವಾದ ಪರಿಸರದಲ್ಲಿ ಬದುಕಿದಳು. ಅವಳ ಜಾಣ್ಮೆ ಪ್ರಯೋಗವಾದದ್ದು ಅವಳ ಗಂಡ ಮಕ್ಕಳಿಂದ ಮಾತ್ರ ಕೂಡಿದ ಸಂಸಾರದಲ್ಲಿ. ಎಲ್ಲಕ್ಕಿಂತ ಹೆಚ್ಚಾಗಿ ನರಸಮ್ಮನ ನಯ ವೆಂಕಮ್ಮನಲ್ಲಿಲ್ಲ. ಈ ಮಾತಿಗೆ ನಿದರ್ಶನವಾಗಿ ನರಸಮ್ಮ ಮತ್ತು ವೆಂಕಮ್ಮನ ಎರಡು ಮಾತುಗಳನ್ನು ಕ್ರಮವಾಗಿ ಗಮನಿಸಬಹುದು. :

1) "ಅವರ ಪಾದಸೇವೆ ಮಾಡೋ ಮೂಳಿ ನಾನು ಮಾವ. ಅವರ ಲೋಪ ದೋಷ ಎಣಿಸಿ, ನಾನು ಯಾವ ನರಕಕ್ಕೆ ಹೋಗಲಿ. ಹೇಗಿದ್ದರೂ ಅವರು ನನ್ನ ಪಾಲಿನ ದೇವರು. ಎಂಜಲೆಲೆ ಎತ್ತ್ಕೋಳಿಗ್ಯಾಕೆ ಉಂಡೋರ ಲೆಕ್ಕ ?" (ಪು31.)

2) "ನನ್ನದು ಅಂಥ ಬುದ್ಧಿ ಆಗೋ ಹೊತ್ತಿಗೇ, ಈ ಮನೆ ಒಂದು ಮನೇಂತ ಆಗಿರೋದು ಇಲ್ದೆ ಹೋದ್ರೆ ಈ ಮನೇಲಿರೋ ಧರ್ಮಗೊಡ್ಡು ಗಂಡಸರೆಲ್ಲಾ ಸೇರಿಕೊಂಡು, ಈ ಮನೇನ ಸಾರಿಸಿ ಗುಡಿಸಿ ರಂಗೋಲಿ ಇಟ್ಟು ಹಣೇಗೂ ಸುಣ್ಣದ ಬೊಟ್ಟು ಹಚ್ಚಿಕೊಳ್ತಾ ಇದ್ದರು" (ಪು. 125.)

'ಹೆಣ್ಣು ಕಟ್ಟಿದ ಮನೆ, ಹೆಣ್ಣಿನಿಂದಲೇ ಸಿಡಿದು ಹೋಯಿತು' ಎಂಬ ಭರತ ವಾಕ್ಯದೊಂದಿಗೇ ಕಾದಂಬರಿ ಕೊನೆಯಾಗಿದ್ದರೂ ಕಾದಂಬರಿಯ ಕೊನೆಯ ದೃಶ್ಯ ರಾಮಾವಧಾನಿಗಳಿಗೆ ಆ ಕ್ಷಣಕ್ಕೆ ಅಹಿತವಾಗಿ ಕಂಡಿದ್ದರೂ ಅದೇನು ಬದುಕಿನ ಮಹಾ ದುರಂತವಲ್ಲ. ರಾಮಾವಧಾನಿಗಳು ಕೂಡ ತಮ್ಮ ಸೋದರರಿಂದ ಬೇರಾಗಿ ಬಂದಿಲ್ಲವೆ? ಆದರೆ ಒಂದು ವಿಷಾದದ ಸಂಗತಿಯೆಂದರೆ ಅಣ್ಣ ತಮ್ಮಂದಿರು ಬೇರಾಗುವ ರೀತಿ ಮಾತ್ರ ರಂಪದ್ದು, ಅದಿಲ್ಲದಿದ್ದರೆ ಅದೊಂದು ತೀರ ಸಾಮಾನ್ಯ ಘಟನೆಯಾಗುತ್ತಿತ್ತು.

ಯಾವುದೇ ವಿಷಯವಾಗಲಿ ಅತಾರ್ಕಿಕವಾದ ರೂಢಿಯಾಗಿಬಿಟ್ಟರೆ ಆಭಾಸಗಳೇ ಅನಿವಾರ್ಯ. ಸಮರ್ಥೆಯಾದ ನರಸಮ್ಮನೇನೋ ಸಂಸಾರವನ್ನು ಉಳಿಸಿದಳು. ಆದರೆ ಆ ಕಾರಣಕ್ಕಾಗಿಯೇ ಮುಂದೆ ಬರುವವರೂ ಹೆಂಡತಿಗೆ ಮನೆಯನ್ನು ಒಪ್ಪಿಸ ಬೇಕೆನ್ನುವುದು ಅಪಾಯಕಾರಿ. "ನಮ್ಮಪ್ಪ ನನಗೆ 'ಹೆಂಡತಿ ಹೇಳಿದ ಹಾಗೆ ಕೇಳಿ ಕೊಂಡಿರು' ಎಂದ ನಾನು ಕೇಳ್ದೆ. ಅದ್ರಿಂದ ನಾನು ಕೆಡಲಿಲ್ಲಾನ್ನೋಕೆ, ಈಗ ನೀವೆಲ್ಲಾ ಬೆಳೆದು ಬಾಳ್ತಾ ಇರೋದೆ ಸಾಕ್ಷಿ. ಅದಕ್ಕೇ ಈಗ ನಾನು ನಿನಗೆ ಹೇಳೋದು ಇಷ್ಟೆ – ನಿನ್ನ ಹೆಂಡತೀನ ಕೇಳು. ಆಕೆ ಹ್ಯಾಗೆ ಹೇಳಿದರೆ ಹಾಗೆ ಮಾಡು" (ಪು 111) ಹಾಗೆ ಮಾಡಿದ್ದರಿಂದ ಏನಾಯಿತೆಂಬುದು ಕಾದಂಬರಿಯಲ್ಲೇ ಇದೆ.

ಹೆಣ್ಣಿನ ಸಾಮರ್ಥ್ಯವನ್ನು ಲಕ್ಷಿಸಿದ್ದರೂ ಇದುವರೆಗಿನ ಬಹುಪಾಲು ಕಾದಂಬರಿ 'ಹೆಣ್ಣು ಕಟ್ಟಿದ ಮನೆ' ಕೂಡ ಹೆಣ್ಣಿನ ಬಗ್ಗೆ ಸಾಂಪ್ರದಾಯಿಕ ದೃಷ್ಟಿಯನ್ನೇ ತಳೆದಿದೆ ಎಂಬುದಕ್ಕೆ ಒಂದು ನಿದರ್ಶನ : "ನರಸಮ್ಮ ಹೆಂಗಸಾಗಿ ಹುಟ್ಟಿದ್ದು ಆಕೆಯ ಸೃಷ್ಟಿಸಿದ ವಿಧಾತನ ತಪ್ಪು. ಹಾಗಲ್ಲದೆ ಗಂಡಸಾಗಿ ಹುಟ್ಟಿದ್ದಿದ್ದರೆ ಮತ್ತೊಂದು ಪಾಳೆಯ ಪಟ್ಟನ್ನೇ ಸ್ಥಾಪಿಸುವಂಥ ಯೋಗ್ಯತೆ ಆಕೆಯದು. ಹೆಣ್ಣಾಗಿ ಹುಟ್ಟುವುದರಲ್ಲೇ ಕೊರತೆಯಿದೆ. ಗಂಡಸಿಗೆ ಮಾತ್ರ ಸಾಧನೆ ಸಾಧ್ಯ ಎಂಬ ಎರಡು ಅಂಶಗಳು ಈ ವಾಕ್ಯದಲ್ಲಿ ಎದ್ದು ಕಾಣುತ್ತವೆ. ಮಹಿಳೆಯ ದೇಹ ರಚನೆಯ ಸ್ವರೂಪದಿಂದಾಗಿ ಒಂದು ಕಾಲಕ್ಕೆ ಹಿಂದೆ ತಳ್ಳಲ್ಪಟ್ಟ ಹೆಂಗಸು ಮತ್ತೊಂದು ಪಾಳೆಯ ಪಟ್ಟನ್ನು ಸ್ಥಾಪಿಸಲಾಗದಂಥ ಒಂದು ಸಾಮಾಜಿಕ ರಚನೆಯಲ್ಲಿ ಬದುಕುತ್ತಿರುವುದೇ ಅವಳ ಸಾಧನೆಗೆ ಅಡ್ಡಿಯಾಗಿದೆಯೆಂಬುದನ್ನು ಮರೆಯುವ ಹಾಗಿಲ್ಲ. ಅದಕ್ಕೆ ಹೆಂಗಸಷ್ಟೇ ಕಾರಣವಲ್ಲ ಹಾಗೂ 'ವಿಧಾತ'ನೊಬ್ಬನನ್ನು ಸೃಷ್ಟಿಸಿ ಆ ಕೊರೆಯನ್ನು ಅವನ ಮೇಲೆ ಹಾಕಬೇಕಾದ ಅಗತ್ಯವಿಲ್ಲ. ಆದರೆ ಈ ಬಗೆಗಿನ ಇದುವರೆಗಿನ ತಿಳಿವಳಿಕೆಯನ್ನೇ ಈ ಕಾದಂಬರಿಯೂ ಎತ್ತಿ ಹಿಡಿದಿರುವುದರಿಂದ ಮೇಲಿನ ಮಾತು ಈ ಕೃತಿಯಲ್ಲಿ ಬರುವುದು ಸಹಜ.

ತನ್ನ ಮನೆಯನ್ನು ಮಾತ್ರ ಮೇಲೆತ್ತುವ ಉದ್ದೇಶವಿದ್ದ ನರಸಮ್ಮನಿಗೆ ವೆಂಕಮ್ಮನಂತೆ ತನ್ನ ಮನೆಯವರಿಗೇ ಕೇಡು ಬಗೆಯುವ ಸನ್ನಿವೇಶ ಒದಗಲಿಲ್ಲವಾದರೂ ಒಟ್ಟಂದದಲ್ಲಿ ಅವಳು ಕೂಡ ಉಳಿದ ಒಳಿತು ಕೆಡುಕುಗಳನ್ನು ಕಡೆಗಣಿಸಿ ತನ್ನ ಮನೆಯ ಉದ್ಧಾರವನ್ನು ಕಾಣಬಯಸುವವಳೇ. ಶ್ರೀನಿವಾಸ ಸಂಬಳದಷ್ಟೇ ಗಿಂಬಳದೊಂದಿಗೆ ಬಂದಾಗ ನರಸಮ್ಮನಿಗೆ ಸಂತೋಷವೇ ಆಗಿದೆ : "ಬುದ್ಧಿ ಇರೋ ಹೊತ್ತಿಗೆ ಸಂಬಳದಷ್ಟೇ ಮೇಲಾದಾಯ ಮಾಡಿಕೊಂಡಿದಾನೆ. ಒಂದು ವರ್ಷ ಅವನು ಹೀಗೆ ದುಡಿದರೆ ಇನ್ನೊಂದು ಮನೆ ಕಟ್ಟಿಸಿ ಬಿಡ್ತೀನಿ" (ಪು 50) ಎನ್ನುತ್ತಾಳೆ. "ಅವನು ಎಷ್ಟು ಜನರ ಹೊಟ್ಟೆ ಉರಿಸಿ ಇಷ್ಟು ಹಣ ತಂದಿದಾನೋ ಏನೋ" (ಪು 50) ಎನ್ನುವ ರಾಮಾವಧಾನಿಯ ಮಾತು ಅವಳಿಗೆ ಒಪ್ಪಿಗೆಯಾಗಲಿಲ್ಲ. "ಪ್ರಪಂಚದಲ್ಲಿ ಎಲ್ಲಾರೂ ನಿಮ್ಮ ಹಾಗಿದ್ದರೆ ನಿಮ್ಮ ಮಾತು ನಿಜ ಎನ್ನಬಹುದಾಗಿತ್ತು. ಅವಕಾಶವಿದ್ದೂ ದುಡೀದೇ ಇರೋದನ್ನ ಯಾರೂ ಜಗತ್ತಿನಲ್ಲಿ ಮನ್ನಿಸೋಲ್ಲ" (ಪು 50)---ಎನ್ನುತ್ತಾಳೆ.

ಕಾದಂಬರಿಯ ರಚನಾವಿಧಾನದಲ್ಲಿ ಅಂಥ ವಿಶೇಷವಿಲ್ಲ. ಅಯಶಸ್ವಿಯಾದ ಕಾಲವ್ಯತ್ಯಯ ತಂತ್ರವನ್ನು ಬಿಟ್ಟರೆ ಉಳಿದಂತೆ ನಿರೂಪಣೆ ನೇರವಾಗಿ ಕಾಲಕ್ರಮದಲ್ಲಿ ನಡೆದಿದೆ. ನರಸಮ್ಮ ಮನೆಕಟ್ಟುವುದನ್ನೂ ಮನೆಉಳಿಸುವುದನ್ನೂ ವೇಗವಾಗಿ ಚಿತ್ರಿಸಿದ (3 ರಿಂದ 7 ನೆಯ ಅಧ್ಯಾಯ) ಲೇಖಕರು ಮನೆ ಒಡೆಯುವುದನ್ನು ಚಿತ್ರಿಸಲು ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ. ಪ್ರಥಮ ಪುರುಷದಲ್ಲೇ ಕಥೆ ನಿರೂಪಿತವಾಗಿದೆ. ಕಾದಂಬರಿಯ ಭೂಮಿಕೆಗೆ ಬೇಕಾದ ಸೂಕ್ಷ್ಮವಿವರಗಳನ್ನು ಹಿಗ್ಗಿಸಿ ಉಳಿದ ವಿವರಗಳನ್ನು ಕತ್ತರಿಸಿದ್ದರೂ ಕಾದಂಬರಿಗೆ ನಷ್ಟವಾಗುತ್ತಿರಲಿಲ್ಲ. ಸ್ಥೂಲವಾಗಿ ಕಥೆ ಓದುಗನಿಗೆ ಮುಟ್ಟುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಕಾದಂಬರಿಯ

ಕಟ್ಟಡದ ಮಿತಿಯಿಂದಾಗಿ ಕಾದಂಬರಿ ಇಡಿಯಾಗಿ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವುದಿಲ್ಲ.

ಮನೆ 'ಕಟ್ಟುವುದು' 'ಉರುಳಿಸುವುದರ' ಮೇಲೆಯೇ ಕಣ್ಣಿಟ್ಟ ಕಾದಂಬರಿ ಕುಟುಂಬದ ವ್ಯಾವಹಾರಿಕ ಅಂಶಗಳನ್ನು ವಿವರಿಸಿದ ಹಾಗೆ ಕೌಟುಂಬಿಕ ಸಂಬಂಧಗಳನ್ನು ಗಮನಿಸಿಲ್ಲ. ಕಾದಂಬರಿ ಓದಿ ಮುಗಿಸಿದ ಮೇಲೆ ನಮ್ಮ ತಲೆಯಲ್ಲಿ ವ್ಯವಹಾರಸ್ಥೆಯಾದ ನರಸಮ್ಮ, ಹಾಗೆಂದು ಕೊಳ್ಳುವ ಮೂರ್ಖಿ ವೆಂಕಮ್ಮ ಉಳಿಯುತ್ತಾರೆಯೇ ಹೊರತು ಇದರ ಜತೆಯಲ್ಲೇ ಇರಬೇಕಾಗಿದ್ದ ಅವರ ಮನುಷ್ಯ ಸಂಬಂಧಗಳು, ಭಾವನೆಗಳಿಗೆ ಕಾದಂಬರಿಯಲ್ಲಿ ಸರಿಯಾದ ಜಾಗ ದೊರೆತಿಲ್ಲ. ವಾಸ್ತವವಾಗಿ ಈ ಕಾದಂಬರಿಯ ವಸ್ತು ಹಲವಾರು ಸೂಕ್ಷ್ಮ ಸ್ಥಿತಿಗಳಿಗೆ, ಇಕ್ಕಟ್ಟಿಗೆ ಒಳಗಾಗುವಂಥದು. ಆದರೆ ಕಾದಂಬರಿಯ ಘಟನೆ, ಪಾತ್ರಗಳೆಲ್ಲಾ ತುಂಬ ಸರಳೀಕರಣಗೊಳ್ಳುವುದರಿಂದ ಕಾದಂಬರಿಗಿದ್ದ ಈ ಅವಕಾಶಗಳೆಲ್ಲ ತಪ್ಪಿಹೋಗುತ್ತವೆ.

ಕಾದಂಬರಿಯ ಮುಖ್ಯ ಪಾತ್ರಗಳ ಕಣ್ಣು ವ್ಯಾವಹಾರಿಕ ಯಶಸ್ಸಿನ ಮೇಲೆ ಇದೆ. ಅದರಾಚೆಗಿನ ಮಹತ್ತ್ವದ ಆಕಾಂಕ್ಷೆಗಳು ಇಲ್ಲಿಯ ಪಾತ್ರಗಳಿಗಿಲ್ಲ. ವ್ಯಾವಹಾರಿಕ ಯಶಸ್ಸಿಗೆ ಹೋರಾಡುವಲ್ಲಿ ಎದುರಾಗುವ ಸಣ್ಣತನ, ದೊಡ್ಡತನ, ದ್ವಂದ್ವ ಸಂಘರ್ಷ ಗಳೂ ಇಲ್ಲಿಲ್ಲ : ನರಸಮ್ಮನ ಕೆಲಸವೆಲ್ಲ ಪೂಪೆತ್ತಿದ ಹಾಗೆ. ಆಶೆ ಪಟ್ಟಪಾಡಿನ ಚಿತ್ರ ಹೆಚ್ಚಾಗಿ ಹೇಳಿಕೆಗಳಾಗಿ ಬರುತ್ತವೆ. "ಹೆಣ್ಣಿಗೆ ಸಂಸಾರದಲ್ಲಿ ಸಾಮಾನ್ಯವಾಗಿ ಸಿಗದ ಸ್ಥಾನ, ತನ್ನ ಪಾಲಿಗೆ ಬಂದಾಗ...ಅದಕ್ಕೊಂದು ಸ್ಥಾನ ದೊರಕಿಸಿಕೊಟ್ಟಳು" (ಪು 63). ಇಂಥ 'ಸನ್ಮಾನ ಪತ್ರ' ಗಳು ಇಲ್ಲಿದ್ದರೂ ಹೀಗೆ ಆದ ಬಗೆಯನ್ನು ಸರಿಯಾಗಿ ಕಾದಂಬರಿ ನಮ್ಮ ಕಣ್ಣಿಗೆ ಕಟ್ಟಿಸುವುದಿಲ್ಲ.

ಸ್ಥಿತ್ಯಂತರದ ನಡುವಣ ಪ್ರಕ್ರಿಯೆಯನ್ನು ಲೇಖಕ ತುಂಬ ಎಚ್ಚರದಿಂದ ಚಿತ್ರಿಸ ಬೇಕು. ಆ ಪ್ರಕ್ರಿಯೆಯ ವಿಚಾರ, ಭಾವನೆಗಳ ಎಳೆ ಓದುಗನನ್ನು ಒಪ್ಪಿಸುತ್ತಾಹೋಗ ದಿದ್ದರೆ ಕಾದಂಬರಿ ಪರಿಣಾಮಕಾರಿಯಾಗುವುದಿಲ್ಲ. ಶ್ರೀನಿವಾಸಾವಧಾನಿಯ ಪರಿ ವರ್ತನೆಗಳು, ಶೇಷಾಚಲನಲ್ಲಾದ ಬದಲಾವಣೆ, ಭಾಗೀರಥಿಯ ನಿರ್ಧಾರದಲ್ಲಾದ ಬದಲಾವಣೆ ಈ ಎಲ್ಲದರ ಹಿಂದೆ ಸಮರ್ಥವಾದ ಚಿತ್ರಣಬೇಕಿತ್ತು.

ನಿರೂಪಣೆಯಲ್ಲಿ ಲೇಖಕರು ತಾಟಸ್ಥ್ಯ ವಹಿಸಿಲ್ಲ. ಆಯಾ ಸಂದರ್ಭ ಮತ್ತು ವ್ಯಕ್ತಿಯನ್ನು ಕುರಿತು ಅಲ್ಲಿಯೇ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪ್ರತಿಕ್ರಿಯಿಸಿ ದ್ದಾರೆ. ಲೇಖಕರ ಒಲವು ಯಾವಕಡೆಗಿದೆಯೆಂಬುದನ್ನು ತುಂಬ ಸುಲಭವಾಗಿ ಗ್ರಹಿಸ ಬಹುದು. ಕಾದಂಬರಿಯುದ್ದಕ್ಕೂ ಇದಕ್ಕೆ ನಿದರ್ಶನಗಳು ಸಿಕ್ಕುತ್ತವೆ :

1) ಆದರೆ ಆಕೆಯಲ್ಲಿ ಪರಿವರ್ತನೆ ಹೊಸ ಜಾಡನ್ನು ಹಿಡಿಯಲಿಲ್ಲ, ಹಳೆಯದನ್ನೇ ಮತ್ತಷ್ಟು ಬಲವಾಗಿಸಿತು. ಕಹಿಸೋರೆಯ ಕುಡಿ, ಮಿಡಿಯಾದಾಗ ಮತ್ತಷ್ಟು ಕಹಿಯಾಗುವಂತಾಯಿತು, ವೆಂಕಮ್ಮನ ಸ್ವಭಾವ. (ಪು 183).

II) ಮೊದಲಿನಿಂದಲೂ ಆಕೆಯಲ್ಲಿದ್ದ ಸ್ವಾರ್ಥಪರತೆ, ಈಗ ಮತ್ತಷ್ಟು ಪ್ರಬಲವಾಗಿ, ಕರಾಳ ರೂಪುಧರಿಸಿ ವಿಜೃಂಭಿಸಲಾರಂಭಿಸಿತು. (ಪು 133).

III) ಮೊದಲೇ ಸಂಸಾರ ನಿರ್ವಹಣೆಯ ವಿಷಯದಲ್ಲಿ ಜಾಣೆಯಾಗಿದ್ದ ಸರಸಮ್ಮ ಎರಡು ಮಕ್ಕಳ ತಾಯಿಯಾದ ಬಳಿಕ ಇದ್ದದ್ದೂ ಹುಷಾರಾದಳು. (ಪು 40).

ಒಟ್ಟಿನಲ್ಲಿ ಇದೊಂದು ಮಿತ ಆಶಯದ ಸಾಮಾನ್ಯ ಕಾದಂಬರಿ. ಈ ಸಾಮಾನ್ಯವೆನಿಸುವ ಚೌಕಟ್ಟಿನ ಎಲ್ಲ ಮುಖಗಳನ್ನೂ ಸೂಕ್ಷ್ಮಗಳನ್ನೂ ದ್ವಂದ್ವಗಳನ್ನೂ ಗಮನಿಸಿ ಅವನ್ನೆಲ್ಲ ಕೃತಿಯ ಒಟ್ಟು ಪರಿಣಾಮಕ್ಕೆ ದುಡಿಸಿಕೊಳ್ಳುವ ಅವಕಾಶಗಳು ಈ ಕಾದಂಬರಿಯ ಭೂಮಿಕೆಯಲ್ಲಿದ್ದವು. ಮೊದಲ ಅಧ್ಯಾಯದ ಹೊರತಾಗಿ ಉಳಿದಂತೆ ಉದ್ದೇಶಿತ ಚೌಕಟ್ಟಿನ ಆಚೆ ಈಚೆ ಹೋಗದೆ, ನಿರೂಪಣೆ ಆದಷ್ಟು ಸಹಜವೂ ಪ್ರಾಮಾಣಿಕವೂ ಆಗಿರುವುದು ಈ ಕಾದಂಬರಿಯಲ್ಲಿ ಮೆಚ್ಚಿಗೆಯಾಗುವ ಗುಣ.

ಬಿಡುಗಡೆಯ ಬೇಡಿ

— **ಮಾಧವ ನಾ. ಮಹಿಷಿ**

ಭಾರತಕ್ಕೆ ಸ್ವಾತಂತ್ರ್ಯ ಬಂದು ಐದು ವರ್ಷಗಳ ನಂತರ ಮೊದಲ ಬಾರಿಗೆ ಪ್ರಕಟವಾದ ಕಾದಂಬರಿ ‘ಬಿಡುಗಡೆಯ ಬೇಡಿ’. ಆಗಿನ್ನೂ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ತೀರ ಕೆಳ ಮಟ್ಟದಲ್ಲೇ ಇತ್ತು. ಅದರಲ್ಲೂ ಸ್ತ್ರೀಯರಲ್ಲಂತೂ ಈ ಪ್ರಮಾಣ ಇನ್ನೂ ಹೀನ ಮಟ್ಟದಲ್ಲಿತ್ತು. ಆ ಕಾಲದಲ್ಲಿ ವಿದ್ಯಾವತಿಯೂ ಪ್ರಜ್ಞಾವಂತಳೂ ಆದ ಯುವತಿಯೊಬ್ಬಳಿಗೆ ಎದುರಾಗುವ ಸಮಸ್ಯೆ - ಸ್ತ್ರೀಸ್ವಾತಂತ್ರ್ಯದ ಸಮಸ್ಯೆಯನ್ನೆ ಕೇಂದ್ರವಸ್ತುವಾಗಿರಿಸಿಕೊಂಡು ತ.ರಾ.ಸು. ಈ ಕಥೆಯನ್ನು ಹೆಣೆದಿದ್ದಾರೆ.

ಇಡೀ ಕಾದಂಬರಿ ವರ್ತಮಾನ ಕಾಲದಲ್ಲಿ ಪ್ರಾರಂಭವಾಗಿ ಸ್ವಲ್ಪ ಸಮಯದಲ್ಲೇ ಕಥಾನಾಯಕಿಯ ಜೀವನದ ಉದಯ ಕಾಲಕ್ಕೆ ಫ್ಲ್ಯಾಶ್‌ಬ್ಯಾಕ್ ತಂತ್ರದ ಮೂಲಕ ಜಿಗಿಯುತ್ತದೆ. ಮತ್ತದು ವರ್ತಮಾನಕ್ಕೆ ಮರಳುವುದು ಕೊನೆಯ ಅಧ್ಯಾಯದಲ್ಲೇ. ಪ್ರಭಾವತಿ ಬೆಂಗಳೂರಿನ ಶ್ರೀಮಾತವೆಂದು ವರ್ಗೀಕರಿಸಬಹುದಾದಂತಹ ಉಚ್ಚ ಮಧ್ಯಮ ವರ್ಗಕ್ಕೆ ಸೇರಿದ ಒಂದು ಕಲ್ಯಾಣದಲ್ಲಿ ಹುಟ್ಟಿ ಬೆಳೆದಾಕೆ. ಏಕಮಾತ್ರ ಪುತ್ರಿ, ಅಣ್ಣ ತಮ್ಮಂದಿರ ಮಧ್ಯೆ ತಾನೂ ಗಂಡು ಮಗುವಿನಂತೆಯೇ ಬಾಲ್ಯವನ್ನು ಕಳೆದಾಕೆ, ತಾಯಿ ವಾತ್ಸಲ್ಯಮಯಿ, ಆದರೆ ಗಂಡನ ದರ್ಪದ ಛಾಯೆಯಲ್ಲಿ ಹೆಮ್ಮರಕ್ಕೆ ಆಸರೆಯಾಗಿ ಹಬ್ಬಿಕೊಂಡು ಬಾಳುವ ಬಳ್ಳಿಯಂತೆ ನಿಸ್ಸಹಾಯಳು. ತಂದೆ ಪಾಶ್ಚಿಮಾತ್ಯ ಸಂಸ್ಕೃತಿಯ ಮೆರುಗಿಗೆ ಮಾರುಹೋಗಿ, ಅದರ ಬಹಿರಾಡಂಬರವೇ ತಥ್ಯವೆಂದು ನಂಬಿದ ಮತ್ತು ತನ್ನ ಮಕ್ಕಳಿಲ್ಲ ತನ್ನ ವಿಚಾರಧಾರೆಯ ಪತಿ ನೆಳಲಲ್ಲೇ ರೂಪುಗೊಳ್ಳಬೇಕೆಂದು ಬಯಸುವ ಆಧುನಿಕ ಭಾರತದ ಕಂದು ಸಾಹೇಬ. ಇಂಥ ವಾತಾವರಣದಲ್ಲಿ ಬೆಳೆದ ಪ್ರಭಾವತಿಯಲ್ಲಿ ಮಾನಸಿಕ ತುಮುಲ ಚಿಕ್ಕಂದಿನಲ್ಲೇ ಪ್ರಾರಂಭವಾಗುತ್ತದೆ. ತಂದೆ ತನ್ನನ್ನು ಮುದ್ದಿನ ಅರಗಿಣಿಯಂತೆ ನೋಡಿಕೊಳ್ಳುತ್ತಿದ್ದರೂ ತಾಯಿಯನ್ನು ಆತ ನಡೆಸಿಕೊಳ್ಳುತ್ತಿದ್ದ ರೀತಿ ಹೆಣ್ಣೇನೋ ಕಡಿಮೆಯೆಂದು ತನ್ನನ್ನು ಕಾಣುವ ಸೋದರರು ಇದೆಲ್ಲ ಯೌವನದಲ್ಲಿ ಕಾಲಿರಿಸುತ್ತಿದ್ದ ಪ್ರಭಾವತಿಯ ಮನಸ್ಸನ್ನು ಒಂದು ದೃಷ್ಟಿಯಿಂದ ಪುರುಷ ದ್ವೇಷಿಯಾಗುವಂತೆ ರೂಪಿಸುತ್ತವೆ. ಮುಂದೆ ಆಕೆ ಕಾಲೇಜು ಕಟ್ಟೆಯನ್ನೇರಿದ ನಂತರ ಪುರುಷ ಜನಾಂಗದ ಬಗೆಗೆ ಆಕೆಯಲ್ಲಿ ಮೊದಲೇ ಮೂಡಿದ್ದ ಭಾವನೆ ಬಲಗೊಳ್ಳುತ್ತದೆಯೇ ಹೊರತು ಅದನ್ನು ಬದಲಿಸಬೇಕಾದಂತಹ ಯಾವ ಘಟನೆಯೂ ನಡೆಯುವುದಿಲ್ಲ. ವಯಸ್ಸಿಗೆ ಬಂದ ನಂತರ ಒಂದು ಗಂಡನ್ನು ಗಂಡನೆಂದು ದೊರಕಿಸುವುದರಲ್ಲೇ ಸಾರ್ಥಕ್ಯವನ್ನು ಕಾಣಲೆಳಸುವ ಗೆಳತಿಯರ ಪ್ರವೃತ್ತಿಯನ್ನು ಕಂಡು ಆಕೆಗೆ ಮರುಕವಾಗುತ್ತದೆ; ತುಸು

ಯೋಜಿಸಿದ ನಂತರ ಭಾರತೀಯ ನಾರಿ ತನಗೆ ತಾನಾಗಿಯೇ ಆರೋಪಿಸಿಕೊಂಡಿರುವ ಅಬಲತ್ವದ ನಂಟನ್ನು ಮನದುಂಡು ಕುದಿಯುತ್ತಾಳೆ. ಗಂಡಿನ ಆಸರೆಯಿಲ್ಲದೆ ತನ್ನ ಬಾಳನ್ನು ತಾನೇ ರೂಪಿಸಿಕೊಳ್ಳಬೇಕೆಂದು ದೃಢನಿರ್ಧಾರ ಕೈಕೊಳ್ಳುತ್ತಾಳೆ.

ಪ್ರಭಾವತಿಯ ಮುಂದಿನ ಜೀವನವನ್ನು ಅವಲೋಕಿಸುವಾಗ ಪ್ರಾರಂಭ ಕಾಲದಲ್ಲಿ ಅವಳ ವ್ಯಕ್ತಿತ್ವಕ್ಕೆ ತಿರುವನ್ನು ಕೊಟ್ಟ ಈ ಅಂಶವನ್ನು ಕಡೆಗಣಿಸುವಂತೆಯೇ ಇಲ್ಲ. ಪುರುಷದ್ವೇಷಿಯಾದ ಆಕೆಯ ಜೀವನದಲ್ಲಿ ಆಕಸ್ಮಿಕವೊಂದು ನಡೆದು ಪುರುಷನೊಬ್ಬ ಪ್ರವೇಶಿಸುತ್ತಾನೆ. ಅಂತರ್ಯದಲ್ಲಿ ತೀವ್ರ ಮಾನಸಿಕ ತುಮುಲವನ್ನು ಅನುಭವಿಸಿದ ನಂತರ ಆ ಮನುಷ್ಯನಲ್ಲಿರುವ ಅದಮ್ಯ ಆತ್ಮವಿಶ್ವಾಸವನ್ನು ಮಾತ್ರ ನೆಚ್ಚಿ ಅವನನ್ನು ವರಿಸಲು ನಿರ್ಧರಿಸುತ್ತಾಳೆ. ಒಮ್ಮೆ ನಿರ್ಧಾರ ದೃಢಪಟ್ಟ ನಂತರ ಆತನಿಗಾಗಿ ಸರ್ವತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ತಮ್ಮ ಮನೆತನದ ಅಂತಸ್ತಿನ ಬಗ್ಗೆ ಭಾರಿ ಕಲ್ಪನೆಯಿರಿಸಿಕೊಂಡಿದ್ದ ತಂದೆ ಮಗಳ ಈ ಕೃತಿಯನ್ನು ಬಲವಾಗಿ ವಿರೋಧಿಸುತ್ತಾನೆ. ತೀರ ಸಾಧಾರಣ ಮನೆಯ ಹುಡುಗನನ್ನು ತನ್ನ ಏಕಮಾತ್ರ ಪುತ್ರಿ ಕೂಡಿಕೊಳ್ಳುವುದು ತಾಯಿಗೂ ಹಿಡಿಸುವುದಿಲ್ಲ. ಈ ಎಲ್ಲ ಪ್ರತಿರೋಧವನ್ನು ಎದುರು ಹಾಕಿಕೊಂಡೂ ತವರನ್ನು ತೊರೆದು ಪ್ರಭಾವತಿ ತಾನು ಮೆಚ್ಚಿದವನೆಡೆ ಬರುತ್ತಾಳೆ. ಮುಂದೆ ಕಷ್ಟ ಪರಂಪರೆಯೇ ಪ್ರಾರಂಭವಾಗಿ, ಓಡಿಬಂದವಳೆಂಬ ಕಲಂಕವನ್ನು ಹೊತ್ತು, ಸಮಾಜದಿಂದ ಬಹಿಷ್ಕೃತೆಯಾಗಿ ಬೆಂಗಳೂರಿನಲ್ಲಿರುವುದೇ ದುಸ್ಸಹವಾಗ ತಾನು ಪತಿಯೆಂದು ಅಂಗೀಕರಿಸಿದ ಶಾಂತಾರಾಮನೊಂದಿಗೆ ಹೊಸ ಜೀವನವನ್ನಾರಿಸಿ ಮುಂಬಯಿಗೆ ಬರುತ್ತಾಳೆ. ಶಾಂತಾರಾಮನ ಮಿತ್ರ ಸದಾನಂದ ಮತ್ತು ಅವನ ಮಡದಿ ಲೀಲಾವತಿಯಿಂದ ಈ ಕಂಗೆಟ್ಟ ದಂಪತಿಗೆ– ಇನ್ನೂ ಔಪಚಾರಿಕವಾಗಿ ಮದುವೆಯಾಗದಿದ್ದಾಗಲೂ ಆಸರೆಯಲ್ಲದೆ ಅತ್ಯಗತ್ಯವಾಗಿದ್ದ ಸಾಂತ್ವನವೂ ದೊರೆಯುತ್ತದೆ.

ಮುಂಬಯಿ ಮಹಾನಗರವು ಪ್ರಭಾವತಿಯ ಜೀವನದಲ್ಲಿಯ ಬಹು ಮುಖ್ಯ ಘಟ್ಟ. ಅವಳ ಮಾನಸಿಕ, ಭಾವನಾತ್ಮಕ ತುಮುಲಗಳು ತೀವ್ರಗೊಳ್ಳುವಂತಹ ಘಟನೆಗಳು ಇಲ್ಲಿ ನಡೆದು ದಾಂಪತ್ಯನೌಕೆ ಬಂಡೆಗಪ್ಪಳಿಸಿ ಮತ್ತೆಂದೂ ಒಂದುಗೂಡದಂತೆ ಒಡೆದು ಹೋಗುತ್ತದೆ: ಆಕೆ ಕೊನೆತನಕವೂ ಪುರುಷದ್ವೇಷಿಯಾಯೇ ಉಳಿಯುತ್ತಾಳೆ. ಲೀಲಾವತಿ ಭಾರತವು ಆದರ್ಶ ಗೃಹಿಣಿಯೆಂದು ಪರಂಪರಾಗತವಾಗಿ ನಂಬಿರುವ ಮೌಲ್ಯಗಳನ್ನು ಪ್ರತಿನಿಧಿಸುತ್ತಾಳೆ. ಒಂದು ದೃಷ್ಟಿಯಲ್ಲಿ ಅವಳದು ಸುಖೀ ಸಂಸಾರ. ಗಂಡ–ಹೆಂಡಿರು ಪರಸ್ಪರರನ್ನು ಅರ್ಥಮಾಡಿಕೊಂಡಿದ್ದಾರೆ. ಬಾಳಿನಲ್ಲಿ ತಂತಮ್ಮ ಪ್ರತ್ಯೇಕ, ಆದರೆ ಪರಸ್ಪರ ಪೂರಕವಾದ ಕಾರ್ಯವಲಯಗಳನ್ನು ಗುರುತಿಸಿಕೊಂಡು ಬಾಳ ನೌಕೆಯನ್ನು ತೇಲಿಸಿಕೊಂಡು ನಡೆದಿದ್ದಾರೆ. ಲೀಲಾವತಿ ಮುಂಬಯಿಯಲ್ಲಿ ಮೊದಲು ಪ್ರಭಾವತಿಯ ಆತಿಥೇಯಳಾಗುವುದರೊಟ್ಟಿಗೇ ಆಕೆಯ ಗೆಳತಿಯೂ, ಒಂದು ದೃಷ್ಟಿಯಿಂದ ಹಿರಿಯಕ್ಕನಂತೆ ಹೆಂಗಾವಲೂ

ಆಗಿ ಪರಿಣಮಿಸುತ್ತಾಳೆ. ನೂತನ ದಂಪತಿಗಳಲ್ಲಿ ಆಗೀಗ ಉಂಟಾಗುವ ವಿರಸವನ್ನು ತಿಳಿಗೊಳಿಸಿ ಸಂಸಾರ ರಥ ಸರಾಗವಾಗಿ ಸಾಗುವಂತೆ ಯತ್ನಿಸುತ್ತಾಳೆ. ಕೊನೆಗೆ ಪ್ರಭಾವತಿ ಶಾಂತಾರಾಮರು ಪ್ರತ್ಯೇಕ ಮನೆಹೂಡುವಾಗ ವಿವಾಹಿತ ನಾರಿಗೆ ಒಂದು ರಕ್ಷೆಯೆಂಬಂತೆ ಇರಲೆಂದು ಪ್ರಭಾವತಿಗೆ ಮಂಗಳಸೂತ್ರವನ್ನು ಉಡುಗೊರೆಯಾಗಿ ಕೊಡುತ್ತಾಳೆ. ಪ್ರಭಾವತಿಯ ದೃಷ್ಟಿಯಲ್ಲಿ ಮಂಗಳಸೂತ್ರ ಹೆಣ್ಣಿಗೊಂದು ಬಂಧನದ ಸಂಕೇತ, ಸ್ತ್ರೀಸ್ವಾತಂತ್ರ್ಯ ಹರಣದ ಕುರುಹು. ಆದರೂ ಮುಂಬಯಿಯಂಥ ಮಹಾ ನಗರದಲ್ಲಿ ಇಂಥ ಒಂದು ರಕ್ಷೆ ವ್ಯಾವಹಾರಿಕವಾಗಿ ಅಗತ್ಯವೆಂದು ಮನಗಂಡಾಗ ಗಂಡನ ಕೈಯಿಂದಲೇ ಕಟ್ಟಿಸಿಕೊಳ್ಳುತ್ತಾಳೆ.

ಆದರೆ ಶಾಂತಾರಾಮನ ಅಲ್ಪ ಸಂಬಳದ ನೌಕರಿಯನ್ನೇ ಆಧಾರವಾಗಿಸಿಕೊಂಡ ಪ್ರಾರಂಭವಾದ ಇವರ ಜೀವನ ತೀರ ಯಾಂತ್ರಿಕವಾಗಿ ಪರಿಣಮಿಸಲು ಹೆಚ್ಚು ದಿನ ಹಿಡಿಯುವುದಿಲ್ಲ. ಹಗಲಿಡೀ ದುಡಿದು ಸುಸ್ತಾಗಿ ಮನೆಗೆ ಮರಳುವ ಶಾಂತಾರಾಮನಿಗೆ ಊಟ ಮಾಡಿ ಮಲಗಿಬಿಡುವುದೇ ದಿನಚರಿಯಾಗುತ್ತದೆ. ಅವನಿಗೆ ಅಗತ್ಯ ವೆನಿಸಿದಾಗ, ಅವನು ಬಯಸಿದಾಗ ಮಾತ್ರ ಅವನ ಕಾಮತೃಷೆಯನ್ನು ತೀರಿಸುವುದಕ್ಕೆ ಆಕೆ ಬೇಕು. ಆ ಕೆಲವು ಕ್ಷಣಗಳನ್ನುಳಿದರೆ ದಾಂಪತ್ಯಸುಖವೆಂದು ಅವಳ ಮಟ್ಟಿಗೆ ಅರ್ಥಶೂನ್ಯವಾಗತೊಡಗಿತು. ಚಿಕ್ಕ ಪುಟ್ಟ ಕಾರಣಗಳಿಂದಾಗಿ ವಿರಸದ ಹೊಗೆಯಾಡತೊಡಗುತ್ತದೆ. ಸಮಾನಧರ್ಮಿಯೆಂದೂ ತನ್ನ ಅನಿಸಿಕೆಯನ್ನು ಅರ್ಥ ಮಾಡಿಕೊಂಡು ಗೌರವದಿಂದ ಕಾಣಬಲ್ಲ ವ್ಯಕ್ತಿಯೆಂದೂ ತಾನೂ ನಂಬಿಕೊಂಡು ಬಂದಿದ್ದ ಶಾಂತಾರಾಮನು ಸಹ ತನ್ನನ್ನು ಮನೆಗೆಲಸ ಮಾಡಿಕೊಂಡು ಬಿದ್ದಿರಬೇಕಾಗಿತ್ತೆಂದು ಭಾವಿಸುತ್ತಾನೆಂದು ಅವಳಿಗೆ ಮನವರಿಕೆಯಾದಾಗ ಅವಳ ಕನಸಿನ ಮಂದಿರದ ಅಡಿಪಾಯವೇ ಅಲುಗಾಡಿಸುತ್ತದೆ. ಈ ಮಧ್ಯದಲ್ಲೇ ಇವರಿದ್ದ ಕಟ್ಟಡದ ಮೇಲ್ಮಟ್ಟದಲ್ಲಿ ವಾಸವಾಗಿರುವ ಫ್ಲೋರಾ ಎಂಬ ಕ್ರಿಶ್ಚಿಯನ್ ಯುವತಿಯ ಪರಿಚಯ ಪ್ರಭಾವತಿಗೆ ಒಂದು ರಾತ್ರಿ ಅನಿರೀಕ್ಷಿತ, ವಿಚಿತ್ರ ಸಂದರ್ಭದಲ್ಲಾಗುತ್ತದೆ. ಮಧ್ಯರಾತ್ರಿಯ ನಂತರ ಕುಡಿತದ ಅಮಲಿನಲ್ಲಿ ಅರ್ಧ-ಪ್ರಜ್ಞಾವಸ್ಥೆಯಲ್ಲಿ ಮೆಟ್ಟಲೇರುತ್ತಿರುವಾಗ ಎಡವಿ ಬಿದ್ದುದರಿಂದ ಎಚ್ಚರಗೊಂಡ ಪ್ರಭಾವತಿ ಎದ್ದು ಹೋಗಿ ಈ ಅಪರಿಚಿತ ಯುವತಿಯನ್ನು ಎಬ್ಬಿಸಿ ಅವಳ ಮನೆಗೆ ತಲುಪಿಸಿ ಸಾಂತ್ವದ ಮಾತಾಡಿದಾಗ ಈ ನೀರಸ ಜಗತ್ತಿನಲ್ಲಿ ಗಾಢ ಮೈತ್ರಿಯ ಬೀಜವೊಂದು ಮೊಳೆಯುತ್ತದೆ. ಮುಂದದು ಬೆಳೆಯತೊಡಗಿದ್ದೇ ಪ್ರಭಾವತಿ–ಶಾಂತಾರಾಮರ ದಾಂಪತ್ಯದ ನಾವೆ ಒಡೆದು ಹೋಗಲು ಕಾರಣವಾಗುತ್ತದೆ. ಫ್ಲೋರಾ ನೀತಿಗೆಟ್ಟ ಹೆಣ್ಣು ಎಂದು ಭಾವಿಸಿದ ಶಾಂತಾರಾಮ ಅವಳೊಂದಿಗೆ ಬೆಳೆಯುತ್ತಿರುವ ಪ್ರಭಾವತಿಯ ಮೈತ್ರಿಯನ್ನು ತಡೆಗಟ್ಟಲೆತ್ನಿಸುತ್ತಾನೆ, ಅದು ಅಸಾಧ್ಯವಾದಾಗ ಹೆಂಡತಿಯ ಶೀಲವನ್ನೂ ಶಂಕಿಸುತ್ತಾನೆ. ಹೆಣ್ಣು ಹುಲಿಯಂತೆ ಸಿಡಿದೆದ್ದ ಪ್ರಭಾವತಿ, ಲೀಲಾವತಿಯ ಒತ್ತಾಯಕ್ಕೆಂಬಂತೆ ಕಟ್ಟಿಕೊಂಡಿದ್ದ ಮಂಗಲಸೂತ್ರವನ್ನು ಕಿತ್ತೆಸೆದು ದಾಂಪತ್ಯದ ಔಪಚಾರಿಕ ಬಂಧನದಿಂದ ಬಿಡುಗಡೆ ಸಾರಿ ಗಂಡನ ಮನೆಗೆ ವಿದಾಯ ಹೇಳುತ್ತಾಳೆ. ಅನಂತರ ಫ್ಲೋರಾ

ಪ್ರಭಾವತಿಯ ಅತಿಥೇಯಳಾಗುತ್ತಾಳೆ. ಈಗ ಪ್ರಭಾವತಿ ವಿದ್ಯಾರ್ಥಿದೆಸೆಯಲ್ಲಿ ಕಲಿತುಕೊಂಡಿದ್ದ ಟೈಪಿಂಗ್ ಆವಳ ಜೀವನೋಪಾಯಕ್ಕೆ ಒಂದು ನೌಕರಿಯನ್ನು ಒದಗಿಸುತ್ತದೆ. ಒಡೆದು ಹೋದ ಈ ದಾಂಪತ್ಯವನ್ನು ಒಂದುಗೂಡಿಸಲು ಸದಾನಂದ ಲೀಲಾವತಿ ಮಾಡಿದ ಪ್ರಯತ್ನ ನಿರಾಶೆಯಲ್ಲೇ ಕೊನೆಗೊಳ್ಳುತ್ತದೆ – ಕಾರಣ ಷ್ಲೇರಾಳೊಂದಿಗೆ ಸ್ನೇಹ ಬೆಳೆಸಿದ ಪ್ರಭಾವತಿ ಕೂಡ ನೀತಿಗೆಟ್ಟವಳು ಖಂಡಿತವೆಂದು ನಂಬಿದ್ದ ಶಾಂತಾರಾಮ ಆಕೆ ತನ್ನ ಮನೆ ಬಿಟ್ಟುದರಿಂದ ಪೀಡೆ ಅನಾಯಾಸ ತೊಲಗಿತೆಂದು ಭಾವಿಸಿದ್ದ.

ಮುಂಬಯಿ ಮಹಾನಗರಿಯ ಯಾಂತ್ರಿಕ ಜೀವನದಲ್ಲಿ ಒಂದು ಪುಟ್ಟ ಅನಾಮಧೇಯ ಚಕ್ರವಾಗಿ ಬಾಳು ನಡೆಸುವ ಪ್ರಭಾವತಿಯ ಜೀವನ ಸಂದರ್ಭದಲ್ಲಿ ಗಡಿಯಾರದ ಮುಳ್ಳುಗಳಂತೆ ಯಾಂತ್ರಿಕವಾಗಿಯೇ ಮುನ್ನಡೆಯುವುದಾದರೂ ವಾಸ್ತವದಲ್ಲಿ ಆಕೆ ತೀವ್ರ ಸಂಘರ್ಷದಿಂದ ತೆರಳುತ್ತಾಳೆ.

ಇಂದಿನ ಕಾಲದಲ್ಲಿ ಮಧ್ಯಮ ವರ್ಗದ ಸುಶಿಕ್ಷಿತ ಸ್ತ್ರೀ ಎದುರಿಸುವ ಸಮಸ್ಯೆಯೇ ಸ್ತ್ರೀ ಸ್ವಾತಂತ್ರ್ಯ. ತಥ್ಯತಃ ಇದು ಮಧ್ಯಮ ವರ್ಗೀಯರ ಸಮಸ್ಯೆಯೇ ಆಗಿದೆ ಯೆಂಬುದಕ್ಕೆ ಕಾರಣ ಮೂಲತಃ ಈ ವರ್ಗದ ರಚನೆ. ನಮಗೆ ರಾಜಕೀಯ ಸ್ವಾತಂತ್ರ್ಯ ಬಂದು ಮೂರು ದಶಕಗಳು ಸಂದ ನಂತರವೂ ಇಡೀ ಕುಟುಂಬ ಒಬ್ಬನ ದುಡಿಮೆಯನ್ನೇ ಅವಲಂಬಿಸಿರುವಂತಹ ಪರಿಸ್ಥಿತಿ ಈ ವರ್ಗದ ಪ್ರಧಾನ ಲಕ್ಷಣವಾಗಿ ಮುಂದುವರೆದಿದೆ. ಅದೇ ಶ್ರೀಮಂತರಲ್ಲಿ ಸಾಮಾನ್ಯವಾಗಿ ಸಂಸಾರ ನಿರ್ವಹಣೆಗಾಗಿ ದುಡಿಯಬೇಕಾದ ಅಗತ್ಯವೇ ಬೀಳುವುದಿಲ್ಲ. ಬಡವರಲ್ಲಿ ಹಿರಿ ಕಿರಿಯರೆಂಬ, ಗಂಡು ಹೆಣ್ಣೆಂಬ ಭೇದವಿಲ್ಲದೆ ಸಂಸಾರ ರಥ ನಡೆಸುವುದಕ್ಕೆ ಕುಟುಂಬದಲ್ಲಿಯ ಎಲ್ಲರಿಂದಲೂ ಅಷ್ಟಿಷ್ಟು ಸೇವೆ ಸಲ್ಲುವುದು. ಇದರಿಂದಾಗಿ ಶ್ರೀಮಂತ ಇಲ್ಲವೆ ಬಡ ವರ್ಗಗಳಲ್ಲಿ ಹೆಣ್ಣು ಗಂಡುಗಳಲ್ಲಿ ಮಾನಸಿಕ ಸಂಘರ್ಷ ವೇರ್ಪಡಲು ಬಲವತ್ತರವಾದ ಕಾರಣಗಳೇ ಇಲ್ಲ. ಆದರೆ ಒಬ್ಬ ಗಂಡಸಿನ ದುಡಿಮೆಯ ಮೇಲೆಯೇ ಇಡೀ ಸಂಸಾರ ಅವಲಂಬಿಸಿರುವಂತಹ ಮಧ್ಯಮ ವರ್ಗದಲ್ಲಿ ದುಡಿಯುವ ಗಂಡಸು ಸ್ವಾಭಾವಿಕವಾಗಿಯೇ ತನ್ನ ಯಜಮಾನಿಕೆಯನ್ನು ಮೆರೆಯಲು ಯತ್ನಿಸುತ್ತಾನೆ. ಅರ್ಥಾತ್ ಯಜಮಾನಿಕೆಯಲ್ಲಿ ಅವನಿಗೊಂದು ಬಗೆಯ ವಿಶಿಷ್ಟ ಹಿತಾಸಕ್ತಿ ಪ್ರಾಪ್ತವಾಗುತ್ತದೆ. ತಲೆ ತಲಾಂತರದಿಂದ ನಡೆದು ಬಂದ ಈ ಒಂದು ಸಂಪ್ರದಾಯದಿಂದಾಗಿ ಯಜಮಾನ ಗಂಡು ತನ್ನ ಮನೆಯ ಮಟ್ಟಿಗೆ ಅರ್ಥ ಜಗತ್ತಿನ ಒಡೆಯನಾಗುತ್ತಾನಾದರೆ, ಅದೇ ಕಾರಣಕ್ಕಾಗಿ ಅವನ ಹೆಂಡತಿಯು ಮನೆಯ ಯಜಮಾನಿಯಾಗುತ್ತಾಳೆ. ಹಾಗಾದರೂ ಅವಳ ಸ್ಥಾನ ಕ್ರಮಾಂಕದಲ್ಲಿ ಅವನ ನಂತರವೇ ಬರುತ್ತದೆ. ಶತಮಾನಗಳ ಕಾಲ ಅವನಿಗಿಂತ ಕಡಿಮೆಯವಳು ತಾನೆಂಬುವನ್ನು ಮೈಗೂಡಿಸಿಕೊಂಡು, ಅದು ತೀರ ಸ್ವಾಭಾವಿಕ ಮೆಂದೇ ನಂಬಿಕೊಂಡು ಬಂದವಳು ನಮ್ಮ ಮಧ್ಯಮ ವರ್ಗದ ಹೆಣ್ಣು. ಆದರೆ ಈ ಶತಮಾನದಲ್ಲಿ ಶಿಕ್ಷಣದ ಪಾಶ್ಚಾತ್ಯೀಕರಣದ ಪ್ರಭಾವ ಬಲಗೊಂಡಂತೆ ಈ ವರ್ಗ

ದಲ್ಲೂ ಸುಶಿಕ್ಷಿತ ಸ್ತ್ರೀಯರ ಸಂಖ್ಯೆ ಬೆಳೆಯತೊಡಗಿತು, ಶ್ರೀಮಂತ ವರ್ಗದ ಸ್ತ್ರೀಯರಲ್ಲಿ ಉಂಟು ಮಾಡದಿದ್ದ ಜಾಗ್ರತಿಯನ್ನು ಶಿಕ್ಷಣ ಮಧ್ಯಮ ವರ್ಗದ ಸ್ತ್ರೀಯರಲ್ಲಿ ಸ್ವಾಭಾವಿಕವಾಗಿಯೇ ಪ್ರಚೋದಿಸಿತು, ಒಂದು ಕಾಲಕ್ಕೆ ಗೃಹ ಬಂಧಿಯಾಗಿದ್ದ ಹೆಣ್ಣು ಮೆಲ್ಲಗೆ ಮನೆತನದ ಉಪ ಜೀವನಕ್ಕಾಗಿ ದುಡಿಯುವುದು ನಿಷಿದ್ಧವಲ್ಲವೆಂಬಂಥ ಪರಿಸ್ಥಿತಿ ಮೊದಲು ನಗರಗಳಲ್ಲಿ ನಿರ್ಮಾಣವಾಗಿ ನಂತರ, ಆಮೆಯ ಗತಿಯಲ್ಲಾದರೂ ಈ ತಂತ್ರ ಪಸರಿಸುತ್ತಿದೆ. ಒಂದು ಜತೆ ಗಾಜಿನ ಬಳೆಗಾಗಿ ಕೂಡ ಗಂಡನನ್ನೇ ಅವಲಂಬಿಸಬೇಕಿದ್ದ ನಾರಿಗೆ ಸ್ವಂತ ದುಡಿಮೆ ಹಿಂದೆಂದೂ ಆಕೆ ಅನುಭವಿಸಿರದಿದ್ದಂಥ ಸ್ಥೈರ್ಯವನ್ನೂ ಪ್ರತ್ಯೇಕ ಅಸ್ತಿತ್ವವನ್ನೂ ಒದಗಿಸಿತು. ತನ್ನ ಸ್ವತಂತ್ರ ಅಸ್ತಿತ್ವದ ಅರಿವೇ ಅವಳನ್ನು ಹತ್ತಾರು ಬಗೆಯ ಯೋಚನೆ, ಆಲೋಚನೆಗೀಡು ಮಾಡಿ ಗಂಡಿನೊಡನಿನ ತನ್ನ ಸಂಬಂಧದ ಪುನರ್ವಿಮರ್ಶೆಗೆ ಪ್ರಚೋದಿಸಿತು, ಇಂಥ ಸಂದರ್ಭದಲ್ಲಿ ಘರ್ಷಣೆ ಅನಿವಾರ್ಯವೂ ಆಯಿತು. ಐತಿಹಾಸಿಕ ಅಗತ್ಯವೂ ಆಯಿತು,

'ಬಿಡುಗಡೆಯ ಬೇಡಿ'ಯ ವಸ್ತುವನ್ನು ಈ ಐತಿಹಾಸಿಕ ಹಿನ್ನಲೆಯಲ್ಲಿ ನೋಡಿದರೇನೆ ಕಾದಂಬರಿಕಾರನಿಗೆ ಅನ್ಯಾಯವಾಗದ ರೀತಿಯಲ್ಲಿ ರಸಗ್ರಹಣ ಮಾಡಲು ಸಾಧ್ಯವಾದೀತು.

ಈ ಕಾದಂಬರಿಯಲ್ಲಿಯ ಮೂರು ಮುಖ್ಯ ಪಾತ್ರಗಳಾದ ಪ್ರಭಾವತಿ, ಲೀಲಾವತಿ, ಫ್ಲೋರಾ ಹಾಗು ಅಮುಖ್ಯವೆಂದು ಅಲಕ್ಷಿಸಲು ಬಾರದಂತಹ ನಾಲ್ಕನೆಯ ಪಾತ್ರ ಶಾಲಿನಿ-ಎಲ್ಲರೂ ಮಧ್ಯಮ ವರ್ಗದಲ್ಲೇ ಹುಟ್ಟಿ ಬೆಳೆದು ತಮ್ಮ ತಮ್ಮ ದಾರಿಯಲ್ಲಿ ನಡೆದು ಜೀವನದಲ್ಲಿ ಒಂದು ಹಂತಕ್ಕೆ ಬಂದು ನಿಂತವರು.

ಉತ್ತಮ ದಾಂಪತ್ಯದಲ್ಲಿ ಆದರ್ಶ ಸಹಭಾಗಿನಿಯೆನಿಸಿದ ಲೀಲಾವತಿ ಮಾತೃತ್ವಕ್ಕಾಗಿ ಹಾತೊರೆಯುತ್ತಿರುತ್ತಾಳೆ, ಪುರುಷ ಜಾತಿಯ ಬಗ್ಗೆ ಪ್ರಭಾವತಿಗಿದ್ದಂಥ ದ್ವೇಷ ಅವಳಲ್ಲಿಲ್ಲ. ಅವರೆ ವೇಶ್ಯೆಯ ಮಗಳಾದ ಫ್ಲೋರಳ ಪುರುಷ ದ್ವೇಷ ಪ್ರಭಾವತಿಯ ಕಲ್ಪನೆಯನ್ನು ಮೀರಿಸುವಂಥದು. ತನ್ನ ಕಾಮದ ಹಸಿವನ್ನು ಇಂಗಿಸಿಕೊಳ್ಳಲೋಸುಗ ಮಾತ್ರ ತನಗೆ ಬೇಕಾದ ಗಂಡನ್ನು ಆಯ್ದುಕೊಂಡು ತಾನು ತೃಪ್ತಳಾದ ನಂತರ ಅವನನ್ನು ಗಂಡು ವೇಶ್ಯೆಯೆಂಬಂತೆ ಬಗೆದು ಅವನ 'ಸೇವೆ'ಗಾಗಿ ಕಾಸು ಚೆಲ್ಲಿ ಬರುವ ಆಕೆ ಪ್ರೀತಿಸುವುದು ಒಬ್ಬನೇ ಒಬ್ಬನನ್ನು-ಯೇಸುವನ್ನು. ಮದುವೆಯಾದ ಗಂಡನನ್ನು ಮನಸಾ ಪ್ರೀತಿಸುತ್ತಿರುವಾಗಲೂ ಅತ್ತೆಯ ಕಾಟಕ್ಕೆ ತಾಳಲಾಗದೆ, ಅಸಹಾಯಕ ಗಂಡನನ್ನು ಬಿಟ್ಟುಕೊಟ್ಟು ಸ್ವತಂತ್ರ ಜೀವನೋಪಾಯವನ್ನು ಅರಸಿ ಕೈಗೂಡಿಸಿಕೊಂಡ ಶಾಲಿನಿ ಕಮ್ಯೂನಿಸ್ಟ್ ಪಕ್ಷ ಸೇರಿರುತ್ತಾಳೆ. ಸಮತಾವಾದದಲ್ಲಿ ಪೂರ್ತಿ ವಿಶ್ವಾಸ, ಅದರಿಂದಲೇ ಸಮಾಜದ ಉದ್ಧಾರವೆಂಬ ನಂಬಿಕೆಯಿರುವಾಗಿಲೂ ತನ್ನ ನಿಷ್ಠೆ ಮೂಲತಃ ರಶಿಯಕ್ಕಿರಬೇಕೆಂದು ಪಕ್ಷ ನಿರೀಕ್ಷಿಸಿದಾಗ ಆಕೆ ತೀವ್ರ ಭಿನ್ನಾಭಿಪ್ರಾಯ ತಳೆಯುತ್ತಾಳೆ. ಪಕ್ಷ ಅವಳನ್ನು ಹೊರತಳ್ಳುತ್ತದೆ. ಆದರೂ ಸಮಾಜವಾದದಲ್ಲಿ, ಸಮತಾವಾದದಲ್ಲಿ ಆಕೆಯ ಶ್ರದ್ಧೆ ಕುಂದುವುದಿಲ್ಲ. ಭಾರತದಲ್ಲೂ

ಖಂಡಿತ ಕ್ರಾಂತಿಯಾಗುತ್ತದೆ, ತನ್ನ ರಾಷ್ಟ್ರೀಯ ಸಂಸ್ಕೃತಿ ಪರಂಪರೆಗನುಗುಣವಾದ ರೀತಿಯಲ್ಲೇ ಸಮತಾವಾದವನ್ನು ಈ ದೇಶ ಮೈಗೂಡಿಸಿಕೊಳ್ಳುತ್ತದೆಂದು ಶಾಲಿನಿ ದೃಢವಾಗಿ ನಂಬುತ್ತಾಳೆ. ಲೀಲಾವತಿ, ಫ್ಲೋರಾ, ಶಾಲಿನಿ ಈ ಮೂವರಿಗೂ ಭವಿತವ್ಯದಲ್ಲಿ ಅವರವರದೇ ರೀತಿಯಲ್ಲಿ ಆಳವಾದ ಶ್ರದ್ಧೆಯಿದೆ. ಆದರೆ ಪ್ರಭಾವತಿ ? ಹೆಣ್ಣು ಅಬಲೆಯಲ್ಲ, ಗಂಡಿಗಿಂತ ಯಾವ ವಿಧದಲ್ಲೂ ಕಮ್ಮಿಯಲ್ಲವೆಂಬುದಾಗಿ ಎಳವೆಯಿಂದಲೂ ಹೆಜ್ಜೆ ಹೆಜ್ಜೆಗೂ ಸಾಧಿಸುತ್ತಾ ಬಂದ ಆಕೆಗೆ ಇಂದು ಯಾವುದರಲ್ಲಿ ವಿಶ್ವಾಸವುಳಿದಿದೆ ? ಭರವಸೆ ಉಳಿದಿದೆ ? ಲೀಲಾವತಿಯಂತೆ ಆಕೆ ಗೃಹಿಣಿಯಾಗಲಾರಳು, ಫ್ಲೋರಾಳಂತ ಮನಸ್ವೀ ದೈಹಿಕ ಸುಖವನ್ನನುಭವಿಸಲಾರಳು, ಗಂಡನ್ನು ತೆತ್ತಿನಂತೆ ಕಂಡು ಸೇಡುತೀರಿಸಿಕೊಳ್ಳಲಾರಳು ; ಶಾಲಿನಿಗಿರುವ ಆಳವಾದ ತತ್ತ್ವನಿಷ್ಠೆಯೂ ಆಕೆಯಲಿಲ್ಲ. ಪ್ರಭಾವತಿಯ ವ್ಯಕ್ತಿತ್ವವನ್ನು ಪುರಾತನ ಭಾರತೀಯ ಚಿಂತಕರ ಒಂದು ಪಂಥದ ಮಾತಿನಲ್ಲಿ ಹೇಳಬಹುದು. ನೇತಿ, ನೇತಿ, ನೇತಿ........ ಅದಲ್ಲ, ಅದಲ್ಲ, ಅದೂ ಅಲ್ಲ,

‘ಬಿಡುಗಡೆಯ ಬೇಡಿ’ಯನ್ನೋದಿ ಮುಗಿಸಿದ ತನ್ನ ಮಿತ್ರರೊಬ್ಬರು ನನ್ನನ್ನು ಒಂದು ಮಾತು ಕೇಳಿದರು. “ಕಾದಂಬರಿಕಾರ ಗಹನವಾದೊಂದು ಸಮಸ್ಯೆಯನ್ನೇನೋ ಎತ್ತಿಕೊಂಡು ಅದನ್ನು ಚೆನ್ನಾಗಿ ಹಿಂಜಿ ಹಿಂಜಿ ಚಿತ್ರಿಸಿದ್ದಾರೆ. ಆದರೆ ಹಿಂಜಿದಷ್ಟೂ ತೊಡಕಿನದಾಗುತ್ತಲೇ ನಡೆದ ಸಮಸ್ಯೆಗೆ ಪರಿಹಾರ ಕಾಣದೆ ಅವರು ಸೋತಿದ್ದಾರೆನಿಸುತ್ತದೆ; ಅಲ್ಲವೆ ? ” ಎಂದು.

ಕಾದಂಬರಿಕಾರ ಅಥವಾ ಕತೆಗಾರನಿಂದ ಓದುಗ ನಿರೀಕ್ಷಿಸಬೇಕಾದದ್ದು ಗಣಿತದ ಸಮೀಕರಣವನ್ನೆ ? ಎರಡರಲ್ಲಿ ಎರಡು ಕೂಡಿಸಿದರೆ ನಾಲ್ಕು, ಅದರಲ್ಲಿ ಮೂರು ಕಳೆದರೆ ಮೂರು ಎಂದು ಹೇಳಲು ನೂರಾರು ಪುಟಗಳ ಕಥೆಯೇಕೆ ಬೇಕು ? ಕಥಾ ನಿರೂಪಣೆಯಲ್ಲಿ ಕಲಾತ್ಮಕತೆಯ ಸೊಗಸು, ಕಥೆ ಹೆಣೆದುಕೊಳ್ಳುವ ರೀತಿಯಲ್ಲಿ ಹಾಸು ಹೊಕ್ಕಿನಂತಹ ಬಿಗುವು, ಪಾತ್ರ ರಚನೆಯಲ್ಲಿ ಪಾತ್ರಗಳ ಹೊರಮೈಯನ್ನು ಮಾತ್ರವಲ್ಲದೆ ಅಂತರ್ಯದ ಹಿರಿ ಕಿರಿಮೊಗಗಳನ್ನೂ ಹಿತ ಮಿತವಾಗಿ ಎತ್ತಿ ತೋರುವಂತಹ ಕುಸುರು ಇದ್ದರೆ ಸಾಲದೆ ? ಸಮಸ್ಯಾ ಪರಿಹಾರ ಕಾದಂಬರಿಕಾರರ ಉದ್ದೇಶವೂ ಅಲ್ಲ, ಹಾಗೆ ಮಾಡಲು ಅವನು ಯತ್ನಿಸುವುದಾದರೆ ಆ ಮಟ್ಟಿಗೆ ಅವನ ಕಲಾವಂತಿಕೆಯ ಯಶಸ್ಸಿಗೆ ಪರಿಮಿತಿಯ ಅಡ್ಡಗೋಡೆಯನ್ನೇ ಹಾಕಿಕೊಂಡಂತಾದೀತು.


ತ.ರಾ.ಸು. ಮಾತಿನಲ್ಲೇ ಹೇಳಬೇಕಾದರೆ, “......ವಿರೋಧಾಭಾಸಗಳಿಂದ, ವಿಚಾರ-ಆಚಾರಗಳ ನಡುವಿನ ವಿಷಮತೆಯಿಂದ ಕೂಡಿದ ಸಮಾಜದಲ್ಲಿ ಮುಟ್ಟಿದುದೆಲ್ಲವೂ ಸಮಸ್ಯೆಯೇ ಆಗುವಂತೆ, ಎಲ್ಲವೂ ಅಡ್ಡಹಾದಿ ಹಿಡಿಯುವಂತೆ, ಸ್ವಾತಂತ್ರ್ಯವೂ ತನ್ನ ಸಹಜ ಸ್ವರೂಪವನ್ನು ಕಳೆದುಕೊಂಡು ವಿಕಾರವಾಗುತ್ತದೆ” ಅದನ್ನು ‘ಬಿಡುಗಡೆಯ ಬೇಡಿ’ ಸಮರ್ಥವಾಗಿ ಚಿತ್ರಿಸುತ್ತಿದೆ. ಖಂಡಿತವಾಗಿಯೂ ಇದು ತ.ರಾ.ಸು. ಅವರ ಯಶಸ್ವೀ ಕೃತಿಗಳಲ್ಲೊಂದು.



ಶಿಷ್ಯ, ಗುರು: ತ.ರಾ.ಸು., ಅ.ನ.ಕೃ.




ತ.ರಾ.ಸು. – ಕಲಾಬ್ರಹ್ಮ ಶ್ರೀ ಮಿಣಜಗಿಯವರೊಂದಿಗೆ



'ಮಾರ್ಗದರ್ಶಿ' ಚಲನ ಚಿತ್ರದ ಪ್ರಥಮ ಪ್ರದರ್ಶನ.
ತ.ರಾ.ಸು. ದೇವರಾಜ ಅರಸರೊಂದಿಗೆ




ಬೆಂಗಳೂರಿನ ಏಆರೋನಾಟಿಕಲ್ ಲ್ಯಾಬೋರೇಟರಿಯವರು
ಏರ್ಪಡಿಸಿದ ತ.ರಾ.ಸು. ಸನ್ಮಾನ 1974



ಎಲ್.ಆರ್.ಡಿ. ವಿಂಗ್‌ಕಮಾಂಡರ್ ಕೃಷ್ಣಮೂರ್ತಿಯವರೊಂದಿಗೆ ತ.ರಾ.ಸು.



ಪಶ್ಚಿಮ ಜರ್ಮನಿಯ ಲಪ್‌ಜಿಗ್ ನಗರದ
ಲೆನಿನ್ ಸ್ಮಾರಕದ ಬಳಿ 1969



ಶ್ರೀಮತಿ ಅಂಬುಜಾ ತ.ರಾ.ಸು. ಅವರಿಗೆ ಸನ್ಮಾನ. ಪಿ. ಸಿ.ಜಾಬೀನ್ ಸೈನ್ಸ್‌ಕಾಲೇಜು, ಹುಬ್ಬಳ್ಳಿ



ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಶ್ರೇಷ್ಠ ಕಾದಂಬರಿಕಾರ ಪ್ರಶಸ್ತಿ
ಡಾ॥ ಮಾಸ್ತಿಯವರಿಂದ ಸ್ವೀಕರಿಸುತ್ತಿರುವುದು. 26-12-1970




ತಂದೆ : ತಳುಕಿನ ರಾಮಸ್ವಾಮಯ್ಯನವರು ಯೌವನದಲ್ಲಿ



ತಾಯಿ : ದಿ|| ಸೀತಮ್ಮನವರು ತಮ್ಮ ತಾರುಣ್ಯದ ದಿನಗಳಲ್ಲಿ



ಅತ್ತೆ : ಶ್ರೀಮತಿ ಲಲಿತಮ್ಮನವರು



ಮಾವ : ದಿ॥ ತಳುಕಿನ ಸುಬ್ಬಣ್ಣನವರು




ತಂದೆ - ಮಗ : ದಿ॥ ರಾಮಸ್ವಾಮಯ್ಯ, ತ.ರಾ.ಸು.




ತಾಯಿ - ಮಗ : ದಿ॥ ಸೀತಮ್ಮ, ತ.ರಾ.ಸು.



ವ್ಯಾಸರಾಯ ಬಲ್ಲಾಳ - ತ.ರಾ.ಸು.
'ಜ್ವಾಲಾ' ನಾಟಕ ಪ್ರದರ್ಶನ, ಮುಂಬಯಿಯಲ್ಲಿ




ತ.ರಾ.ಸು. ಮಗ ಪ್ರಸಾದನೊಂದಿಗೆ



ತ. ರಾ. ಸು. ಕುಟುಂಬ

ನಿಂತಿರುವವರು : ಟಿ. ಎಸ್. ಪ್ರದೀಪಕುಮಾರ (ಮಗ), ವಿ. ವಿ. ಸುಂದರ (ಅಳಿಯ)
ಪೂರ್ಣಿಮಾ (ಮಗಳು), ಟಿ. ಎಸ್. ನಾಗಪ್ರಸಾದ (ಹಿರಿಯ ಮಗ)
ಕುಳಿತಿರುವವರು ; ತ. ರಾ. ಸು., ಅಂಬುಜಾ ತ. ರಾ. ಸು.




ಬರ್ಲಿನ್ ಶಾಂತಿ ಸಮ್ಮೇಳನದಲ್ಲಿ ವಿಯೇಟ್ನಾಂ ಪ್ರತಿನಿಧಿಗಳೊಂದಿಗೆ



ಪಶ್ಚಿಮ ಜರ್ಮನಿಯ ಹಾಲೇ ನಗರದ ಮಕ್ಕಳ ಶಾಲೆಯಲ್ಲಿ ಸ್ವಾಗತ 1969



‘ಚಕ್ರತೀರ್ಥ’ ಚಲನ ಚಿತ್ರದ ಪ್ರಥಮ ಪ್ರದರ್ಶನ ಸಮಾರಂಭ. ಡಾ. ನಾಗಪ್ಪ ಆಳ್ವ, ಶ್ರೀ ಶಂಕರೇಗೌಡ, ತ.ರಾ.ಸು.



14-10-1978 ರಂದು ಚಿತ್ರದುರ್ಗದಲ್ಲಿ ಮದಕರಿ ಜಯಂತಿ ಉತ್ಸವದ ಸಂದರ್ಭದಲ್ಲಿ ಮದಕರಿ ಬಳಗದವರು ಆನೆಯಿಂದ ಪುಷ್ಪಹಾರ ಹಾಕಿಸಿ ಸನ್ಮಾನಿಸಿದರು.



ತ.ರಾ.ಸು. ಅಂಬುಜಮ್ಮ ಅವರ ಸತ್ಕಾರ
ಪಿ. ಸಿ. ಜಾಬೀನ್ ಸೈನ್ಸ್ ಕಾಲೇಜ್, ಹುಬ್ಬಳ್ಳಿ.

ಎಲ್ಲಾ ಅವನ ಹೆಸರಿನಲ್ಲೇ ಯಕ್ಷಪ್ರಶ್ನೆ

—ನಾ. ಡಿಸೋಜ

ತ.ರಾ.ಸು. ಅವರ "ಎಲ್ಲಾ ಅವನ ಹೆಸರಿನಲ್ಲೇ!" ಹಾಗೂ "ಯಕ್ಷಪ್ರಶ್ನೆ" ಕಾದಂಬರಿಗಳೆರಡೂ ಪ್ರಕಟವಾದುದು ೧೯೬೩ ರಲ್ಲಿ. ಇವೆರಡೂ ಅಪೂರ್ಣ ಕಾದುಂಬರಿಗಳಾಗಿದ್ದು, ಇವುಗಳ ಮುಂದಿನಭಾಗ ಈವರೆಗೂ ಹೊರಬೀಳದಿರುವುದರಿಂದ ಯಾವುದೋ ಒಂದು ಘಟ್ಟಕ್ಕೆ ಹೋಗಿನಿಂತ ಕತೆ ಓದುಗರ ಕುತೂಹಲವನ್ನು ಕೆರಳಿಸಿ, ಮುಂದೇನು ಎಂಬ ಪ್ರಶ್ನೆಗೆ ಉತ್ತರ ಕಾಣದೆ ಓದುಗರು ಪರದಾಡುವಂತೆ ಮಾಡಿವೆ ಈ ಕಾದುಂಬರಿಗಳೆರಡೂ. ಈ ಕಾದಂಬರಿಗಳ ಬಗ್ಗೆ ಬರೆಯುವ ಲೇಖಕ ಕೂಡ ಅರ್ಧಕೆತ್ತಿದ ಶಿಲಾಮೂರ್ತಿಯೊಂದರ ಕಲಾಕೃತ ವಿವರಣೆ ನೀಡ ಹೊರಟಂತಹಾ ವಿಚಿತ್ರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಆದರೆ ಅರೆಬರೆಯಾಗಿ ಕೆತ್ತಿದ ಶಿಲ್ಪವೂ ಕೂಡ ರುವಾರಿಯ ಕಲಾಪ್ರತಿಭೆಯನ್ನು ಎತ್ತಿ ತೋರಿಸುವಂತೆ, ತ.ರಾ.ಸು. ಅವರ ಮೇಲಿನ ಎರಡೂ ಕಾದಂಬರಿಗಳು ಅವರ ಪ್ರತಿಭಾ ಪೂರ್ಣ ಬರವಣಿಗೆಯ ದ್ಯೋತಕವಾಗಿವೆ.

ತ.ರಾ.ಸು. ಪ್ರಗತಿ ಶೀಲ ಸಾಹಿತಿಗಳ ಗುಂಪಿನಲ್ಲಿ ಕಾಣಿಸಿಕೊಂಡು ತಮ್ಮದೇ ಆದ ಒಂದು ವೈಶಿಷ್ಟ್ಯ ವಿಶೇಷತೆಗಳಿಂದ ಮುಂದೆ ಬಂದು ನಿಂತ ಸಮರ್ಥ ಲೇಖಕ. ಭಾಷೆಯ ಬಳಕೆ, ಘಟನೆಗಳ ಚಿತ್ರಣ, ಸಂಭಾಷಣೆಯ ಚತುರತೆ, ಕತೆ ಹೇಳುವಲ್ಲಿನ ಜಾಣ್ಮೆ, ಓದುಗರ ಕುತೂಹಲವನ್ನು ಕೆರಳಿಸಿಕೊಂಡು ಹೋಗುವ ಕಲೆಗಾರಿಕೆ ತ.ರಾ.ಸು. ಅವರಿಗೆ ಹಸ್ತಗತವಾದಂತೆ ಕನ್ನಡದ ಲೇಖಕರಲ್ಲಿ ಬಹಳಷ್ಟು ಜನರಿಗೆ ಆಗಿಲ್ಲ. ವಸ್ತು - ಸಾಮಾಜಿಕವಿರಲಿ, ಐತಿಹಾಸಿಕವಿರಲಿ, ಪೌರಾಣಿಕವಿರಲಿ, ಆ ವಸ್ತುವಿಗೆ ತಕ್ಕ ರೀತಿ-ಸಂಯೋಜನೆಗಳಿಂದ ಕೃತಿ ರಚಿಸಿ ಭಲೆ! ಎನಿಸಿ ಕೊಂಡಿರುವವರು ಕನ್ನಡದಲ್ಲಿ ತ.ರಾ.ಸು. ಒಬ್ಬರೆ.

ತ.ರಾ.ಸು. ಅವರ ಕಲಾಕೃತ ನಿರೂಪಣೆಗೆ ಮೇಲೆ ಹೇಳಿದ ಎರಡು ಕಾದಂಬರಿಗಳೂ ಹೊರತಾಗಿಲ್ಲ. ಇಲ್ಲಿಯೂ ಕೂಡ ಪುಟ ಪುಟಗಳಲ್ಲೂ ತ.ರಾ.ಸು. ತನ ತನ್ನ ವೈಭವವನ್ನು ಮೆರೆಸಿದೆ.

"ಎಲ್ಲಾ ಅವನ ಹೆಸರಿನಲ್ಲೇ! "ಕಾದಂಬರಿ ನಮ್ಮ ಜನರು ಧರ್ಮ ದೇವರುಗಳ ಮೇಲಿಟ್ಟಿರುವ ನಂಬಿಕೆಯ ಸುತ್ತ ಹೆಣೆಯಲ್ಪಟ್ಟಿರುವ ಯಶಸ್ವೀ ಕೃತಿಯಾಗಿದೆ. ಲೇಖಕರು ತಮ್ಮ "ಅರಿಕೆ" ಯಲ್ಲಿ ಹೇಳಿಕೊಂಡಿರುವ ಹಾಗೆ "ಧರ್ಮ ಹೇಗೆ ನಮಗೆ ಋಜು ಜೀವನದ ನೀತಿ ಸೂತ್ರವಾಗಿಲ್ಲವೊ, ಹಾಗೇ ದೇವರೂ, ಸತ್ಯ, ಸೌಂದರ್ಯ. ಕಲ್ಯಾಣದ ಸಂಕೇತವಾಗಿಲ್ಲ. ಧರ್ಮ ಎನ್ನುವುದು ನಮ್ಮ ಹುಟ್ಟಿನೊಂದಿಗೆ ಬಂದ

ಮತವಾಗಿ, ದೇವರು ಒಂದು ಮತದವರು ಪೂಜಿಸುವ ವಿಶಿಷ್ಟ ವಿಗ್ರಹವಾಗಿ ಹೋಗಿದೆ; ಎಷ್ಟು ಮತವೋ ಅಷ್ಟು ದೇವರುಗಳಾಗಿವೆ.

"...ಹತ್ತಾಗಿ ಕಾಣುವುದೆಲ್ಲವೂ ಒಂದೇ ಎಂದು ನಾವು ಬಾಯಲ್ಲಿ ಆಡಿದರೂ. ವ್ಯವಹಾರದಲ್ಲಿ ಹತ್ತನ್ನು, ಹತ್ತಾಗಿಯೇ ಉಳಿಸಿಕೊಳ್ಳಲು ಯತ್ನಿಸುತ್ತಿದ್ದೇವೆ. ಇದರಿಂದಾಗಿಯೇ ಇಂದು ಮತ ಮತಗಳ ನಡುವೆ ಹೋರಾಟ ನಡೆಯುತ್ತಿದೆ- ಮತೋದ್ಧಾರಕ್ಕಾಗಿಯಲ್ಲ–ಮಾನವನ ಸ್ವಾರ್ಥಕ್ಕಾಗಿ, ಈ ಕಾರ್ಯವನ್ನು ಮಾಡು ವಾಗಲೂ, ನಾವು ದೇವರ ಹೆಸರನ್ನು ಹೇಳದೆ ಮಾಡುವುದಿಲ್ಲ"

ಈ ಎರಡು ಮಾತುಗಳೊಡನೆ "ಎಲ್ಲಾ ಅವನ ಹೆಸರಿನಲ್ಲೇ ಕಾದಂಬರಿ ಆರಂಭವಾಗುತ್ತದೆ. ಹಳ್ಳಿಗೆ ಬಂದ ಬೈರಾಗಿಯೋರ್ವ ಸದಾಶಿವ ಶಾಸ್ತ್ರಿಗಳಿಂದ ಮೂರು ಹಿಡಿ ಅನ್ನವನ್ನು ಭಿಕ್ಷೆ ತೆಗೆದುಕೊಂಡು ಹಳ್ಳಿಯ ಹೊರಗಿನ ಸೋಮೇಶ್ವರನ ಪಾಳು ಗುಡಿಯಲ್ಲಿ ರಾತ್ರಿ ಕಳೆಯಲು ಹೊರಟು ಹೋಗುತ್ತಾನೆ. ಆ ಬೈರಾಗಿಯ ಮಾತು–ನಡೆಗೆ ಪ್ರಭಾವಿತರಾದ ಶಾಸ್ತ್ರಿಗಳು ಅವನತ್ತ ಆಕರ್ಷಿಸಲ್ಪಡುತ್ತಾರೆ. ಆ ರಾತ್ರಿ ಬೈರಾಗಿಗೆ, ಆ ದೇಗುಲದ ಜೀರ್ಣೋದ್ಧಾರ ಮಾಡುವಂತೆ ದೈವೀ ಪ್ರೇರಣೆ ಯಾಗುತ್ತದೆ. ನಾಡಾಡಿಯಾಗಿ ಬಂದ ಬೈರಾಗಿ ಈ ಕಾರ್ಯಕ್ಕಾಗಿ ಟೊಂಕ ಕಟ್ಟಿ ನಿಲ್ಲುತ್ತಾನೆ. ಅವನಿಗೆ ಸಹಾಯಕರಾಗಿ ಶಾಸ್ತ್ರಿಯವರು ನಿಲ್ಲುತ್ತಾರೆ. ಒಂದು ಕಾಲ ದಲ್ಲಿ ಈ ದೇವಾಲಯ, ಇದರ ಸುತ್ತಮುತ್ತಲಿನ ಆಸ್ತಿ ಪಾಸ್ತಿಗಳಿಗೆಲ್ಲ ಒಡೆಯರಾಗಿದ್ದು ಇದೀಗ ದೂರದ ಪಟ್ಟಣ ಸೇರಿದ್ದ ಜೋಡಿದಾರರು ಕೂಡ ಈ ಪಾಳುದೇಗುಲದ ಜೀರ್ಣೋದ್ಧಾರಕ್ಕೆ ನೆರವು ನೀಡುತ್ತಾರೆ. ಹಳ್ಳಿಯ ಎಲ್ಲ ಜನರ ಸಹಕಾರ ಸಿಕ್ಕಾಗ, ಆಂಜನೇಯನ ಗುಡಿಯ ಪೂಜಾರಿ ಕಿಟ್ಟಪ್ಪ, ವೀರಭದ್ರಸ್ವಾಮಿ ಗುಡಿಯ ಬಸವಣ್ಣ ಬೇರೊಂದು ರೀತಿಯಲ್ಲೇ ಯೋಚಿಸುತ್ತಾರೆ. ಹಳೆಯದಾದ ಸೋಮೇಶ್ವರ ಸ್ವಾಮಿಯ ಗುಡಿ ಮತ್ತೆ ತಲೆ ಎತ್ತಿದರೆ ತಮ್ಮ ಸಂಪಾದನೆ ಶೂನ್ಯವಾಗುತ್ತದೆಂದು ಬೆದರಿ, ಈ ಕಾರ್ಯಕ್ಕೆ ಯಾವುದಾದರೂ ರೀತಿಯಲ್ಲಿ ತಡೆಯನ್ನು ತಂದೊಡ್ಡ ಬೇಕೆಂದು ಉಪಾಯ ಹುಡುಕುತ್ತಾರೆ. ಕುಡುಕನೂ ಸ್ತ್ರೀಲಂಪಟನೂ. ದುಷ್ಟನೂ ಆಗಿದ್ದ ಜೋಡಿದಾರರ ಮಗ ನಾಗೇಶನನ್ನೇ ಬೈರಾಗಿಯ ಎದುರು ತಂದು ನಿಲ್ಲಿ- ಸುತ್ತಾರೆ. ನಾಗೇಶ ಬೈರಾಗಿಯನ್ನು ಬೂಟಿನಿಂದ ಒದ್ದು ನೆಲಕ್ಕೆ ಕೆಡವಿ ಶಾಸ್ತ್ರಿಗಳನ್ನು ದುರ್ಲಕ್ಷಿಸಿ, ಶಾನುಭೋಗರನ್ನು ಎದುರು ಹಾಕಿಕೊಂಡು, ಬೈರಾಗಿಯ ಪುಣ್ಯ- ಕಾರ್ಯಕ್ಕೆ ಎಲ್ಲ ನೆರವೂ ನೀಡಲು ಸಿದ್ಧನಾಗಿದ್ದ ನಂಜೇಗೌಡನನ್ನು ಕೆಣಕಿ ಹೋಗುತ್ತಾನೆ. ಈ ನಂಜೇಗೌಡ "ಸ್ವಾಮಿಗಳಿಗೆ ಆಗಿದ್ದೇ ನಿನಗೂ ಆಗುತ್ತದೆ. ಪರಮೇಶ್ವರ ಬಂದರೂ ಅದು ತಪ್ಪುವುದಿಲ್ಲ" ಎಂದು ನಾಗೇಶನಿಗೆ ಎಚ್ಚರಿಸುತ್ತಾನೆ. ಏಟುತಿಂದ ಬೈರಾಗಿಯ ಬಳಿ ಬಂದು "ದೇಗುಲವನ್ನು ಜೀರ್ಣೋದ್ಧಾರ ಮಾಡುವ ಕೆಲಸ ನಿಲ್ಲಬಾರದೆಂದೂ, ಇದರಲ್ಲಿ ತನ್ನ ಜೀವ ಹೋದರೂ ಸರಿಯೆ, ಹತ್ತು ಹೆಣ ಬಿದ್ದರೂ ಸರಿಯೆ, ಈ ಕೆಲಸ ಆಗಬೇಕೆಂದೂ ಹೇಳಿ ಹೋಗುತ್ತಾನೆ. ಬೈರಾಗಿ

"ಸ್ವಾಮೀ, ಸೋಮೇಶ್ವರಾ ಆಗುವ ಕೆಡುಕೇನಿದ್ದರೂ ನನಗಾಗಲಿ, ಉಳಿದೆಲ್ಲರಿಗೂ ಒಳಿತಾಗಲಿ" ಎಂದು ಕಂಬನಿ ತುಂಬಿ ಬೇಡಿ ಕೈ ಮುಗಿಯುತ್ತಿರುವಲ್ಲಿಗೆ ಇನ್ನೂರೈ ಪುಟದ ಕಾದಂಬರಿ ಮುಕ್ತಾಯವಾಗುತ್ತದೆ.

ಮುಂದೇನು ಮುಂದೇನು ಎಂದು ಧಾವಂತದಲ್ಲಿ ಓದುತ್ತ ಬಂದ ಓದುಗ ಈ ಮುಕ್ತಾಯವನ್ನು ಕಂಡು ರೋಸಿ ಹೋಗುತ್ತಾನೆ. ಕತೆ ಯಾವುದೇ ರೀತಿಯ ಘಟ್ಟಕ್ಕೆ ಬಂದು ಮುಟ್ಟದಿರುವುದರಿಂದ ಈ ವರೆಗಿನ ಓದು ವ್ಯರ್ಥವೆನಿಸುತ್ತದೆ. ಆದರೆ ಅವನ ಮನಸ್ಸಿನಲ್ಲಿ ಬೈರಾಗಿ, ಸದಾಶಿವ ಶಾಸ್ತ್ರಿ, ಸಂಜೀಗೌಡ, ಜೋಡಿದಾರರು, ನಾಗೇಶ, ಬಸವಣ್ಣ ಈ ಹಲವು ವ್ಯಕ್ತಿಗಳು ಮೂಡಿನಿಂತಿರುತ್ತಾರೆ.

ವ್ಯಕ್ತಿ ಚಿತ್ರಣದಲ್ಲಂತೂ ತ.ರಾ.ಸು. ಸಿದ್ಧ ಹಸ್ತರು. ಆರಂಭದಲ್ಲಿ ಶಾಸ್ತ್ರಿಗಳು ನಿರ್ವಾಣ ಷಟ್ಕವನ್ನು ಪಠಿಸುತ್ತಿರುವಾಗ ಬೈರಾಗಿಯ ಬಾಯಿಂದ "ಅನ್ನಪೂರ್ಣಾ ಸ್ತೋತ್ರ" ವನ್ನು ಹೇಳಿಸಿ, ಸಂಸಾರಿಗನಾಗಿ ವೇದಾಂತದ ಮರೆ ಹೊಕ್ಕ ಶಾಸ್ತ್ರಿಗಳನ್ನೂ, ಮೂರು ಹಿಡಿ ಅಕ್ಕಿಗಿಂತಾ ಹೆಚ್ಚಿನದನ್ನು ಬಯಸದ, ಸೂರ್ಯಾಸ್ತವಾದ ಮೇಲೆ ಊರಿನಲ್ಲಿ ಇರಲೊಪ್ಪದ ಬೈರಾಗಿಯನ್ನು ಅಕ್ಕ ಪಕ್ಕದಲ್ಲಿ ತಂದಿರಿಸುತ್ತಾರೆ. ಮುಂದಿನ ಪುಟಗಳಲ್ಲಿ ಬೈರಾಗಿಯಂತೂ ಧರ್ಮ – ವೇದಾಂತದ ಸಾಕಾರಮೂರ್ತಿಯಾಗಿ ಅದ್ಭುತ ವ್ಯಕ್ತಿಯಾಗಿ ಬೆಳೆದು ನಿಲ್ಲುತ್ತಾನೆ. ಅವನ ಸ್ನಾನ – ಪ್ರಾರ್ಥನೆ, ಪಾಳು ಗುಡಿಯನು ಜೀರ್ಣೋದ್ಧಾರ ಮಾಡಲು ಅವನು ಪಡುವ ಪಾಡು ಎಲ್ಲವೂ ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈ ಮಧ್ಯೆ ಶಾಸ್ತ್ರಿಗಳ ಸೇವಾ ಮನೋವೃತ್ತಿ, ಊರ ಜನರ ಸಂದೇಹ ಪ್ರವೃತ್ತಿ, ಉಪಾಯ ವೇದಾಂತ, ಸ್ವಾರ್ಥ. ಜಾತೀಯತೆ, ಎಲ್ಲವೂ ಸುರಳಿ ಬಿಚ್ಚಿ ಕೊಳ್ಳುತ್ತದೆ. ನಾಗೇಶನ ಹಲ್ಲೆ ಕಟ್ಟಿದ ಬೂಟಿನ ಸದ್ದಿನೊಂದಿಗೆ "ಜೇನುಹುಟ್ಟು ಕೆರಳು" ತ್ತದೆ. ದೈವೀ ಪ್ರೇರಣೆಗೆ ಒಳಗಾಗಿ ಗುಡಿಯ ಜೀರ್ಣೋದ್ಧಾರಕ್ಕೆ ನಿಂತ ಬೈರಾಗಿ ಮಣ್ಣಿನಲ್ಲಿ ಹೊರಳಾಡ ಬೇಕಾಗುತ್ತದೆ. ಭೈರಾಗಿಯ ನೇಮ – ನಿಷ್ಠೆಗಳನ್ನು ಚಿತ್ರಿಸಿದ ಲೇಖನಿ ಅಷ್ಟೇ ವಾಸ್ತವವಾಗಿ ನಾಗೇಶನ ಅವಗುಣಗಳನ್ನೂ ಚಿತ್ರಿಸುತ್ತದೆ.

ತ.ರಾ.ಸು. ಸಂಗೀತಗಾರನೋರ್ವನು ರಾಗಾಲಾಪನೆಯಲ್ಲಿ ತೊಡಗಿದಂತೆ ಬರವಣಿಗೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಕತೆ ಸಾಮಾನ್ಯವಾಗಿ ವೇಗವಾಗಿ ಓಡುವುದೇ ಇಲ್ಲ. ಅದು ನಿಂತಲ್ಲಿಯೇ ನಿಂತಿರುತ್ತದೆ. ಆದರೆ ನಡೆದ ಘಟನೆಯನ್ನೋ, ಆಡಿದ ಮಾತನ್ನೋ, ನೋಡಿದ ದೃಶ್ಯವನ್ನೋ ಲೇಖಕ ಹಿಂಜಿ ಹಿಂಜಿ ಇಡುತ್ತಿರುತ್ತಾನೆ. ಪ್ರತಿ ಪರಿಚ್ಛೇದದ ಕೊನೆಯ ಸಾಲು ಮುಂದಿನ ಪರಿಚ್ಛೇದದ ಮೊದಲ ಸಾಲಾಗಿ ಕತೆ ಗಾಣದ ಎತ್ತಿನಂತೆ ತುಳಿದ ದಾರಿಗೇನೆ ಮತ್ತೆ ಬಂದು ನಿಲ್ಲುತ್ತದೆ. ಭಾಷೆಯ ಸೊಗಸುಗಾರಿಕೆ, ವಿಚಾರದ ಪ್ರತಿಪಾದನೆಯಿಂದಾಗಿ ಇದೊಂದು ದೋಷವೆನಿಸುವುದಿಲ್ಲವಾದರೂ ಕೆಲವೊಂದು ಕಡೆಗಳಲ್ಲಿ ಈ ತಂತ್ರ ಕೇವಲ ಪುಟಗಳನ್ನು ಹೆಚ್ಚಿಸಲು ಬಳಸಿಕೊಂಡಿರಬಹುದೆ ಎನಿಸುತ್ತದೆ.

"ಎಲ್ಲಾ ಅವನ ಹೆಸರಿನಲ್ಲಿ!" ಒಂದು ಕ್ರಾಂತಿಕಾರಿಯಾದ, ವೈಚಾರಿಕ ಚಿನ್ನೆಲೆಯುಳ್ಳ ಕಲಾತ್ಮಕವಾಗಿ ಹೇಳಲ್ಪಟ್ಟ ಕೃತಿ. ಇದು ಸಂಪೂರ್ಣವಾಗಿ ಒಂದೇ ಕೃತಿಯಾಗಿ ಹೊರ ಬಂದಿದ್ದರೆ, ಇಲ್ಲವೆ ಮೊದಲ ಭಾಗದ ಹಿಂದೆಯೇ ಎರಡನೇ ಭಾಗವೂ ಬಂದಿದ್ದರೆ ಈ ಕೃತಿಯ ಉದ್ದೇಶ ಪೂರ್ಣವಾಗಿ ನೆರವೇರುತಿತ್ತು. ಈ ದಿನ ಇನ್ನೂರು ಪುಟಗಳಷ್ಟನ್ನೇ ಓದಿ ಸಂತೋಷ ಪಡುವುದೇ ಆಗಲಿ, ಬರೆಯುವುದೇ ಆಗಲಿ ತುಂಬಾ ಕಷ್ಟದ ಕೆಲಸ.

ಯಕ್ಷಪ್ರಶ್ನೆ ಕಾದಂಬರಿಕೂಡ ಗಹನವಾದ್ದೊಂದು ವಸ್ತುವನ್ನು ಕುರಿತು ಬರೆಯಲ್ಪಟ್ಟಿದೆ. ಗಂಡು ಹೆಣ್ಣಿನ ಸ್ನೇಹ ಸಂಬಂಧಗಳಿಗೆ, ಲೈಂಗಿಕ ಆಕರ್ಷಣೆಗೆ ಸಂಬಂಧ ಪಟ್ಟ ಈ ಕತೆ ಪ್ರಾರಂಭವಾಗುವುದು ಆದಿ ಶಂಕರಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟದ್ದೆಂದು ನಂಬಲಾಗಿರುವ ತ್ರಿಪುರಸುಂದರಮ್ಮನವರ ದೇವಾಲಯವಿದ್ದ ತಿಬ್ಬಾಪುರಕ್ಕೆ ಬಸ್ಸೊಂದು ಬಂದು ನಿಂತಾಗ ಈ ಬಸ್ಸಿನಿಂದ ದಂಪತಿಗಳಿಬ್ಬರು ದೇವರ ಸೇವೆ ಮಾಡಿಸಲೆಂದು ಬಂದವರು ಕೆಳಗಿಳಿಯುತ್ತಾರೆ. ಊರ ಜಾತ್ರೆಯಾಗಿದ್ದರಿಂದ ಹೋಟೆಲು ಛತ್ರಗಳೆಲ್ಲ ತುಂಬಿಕೊಂಡಿರುತ್ತವೆ. ಜಟಕ ಸಾಬಿಯ ಕೃಪೆಯಿಂದ ಓರ್ವ ಶಾಸ್ತ್ರಿಯ ಮನೆಗೆ ಇವರೀರ್ವರೂ ಹೋಗಿ ತಂಗುತ್ತಾರೆ. ಆ ಶಾಸ್ತ್ರಿ ತನ್ನ ಮನೆಗೆ ಊರಿನಲ್ಲಿ ಒಳ್ಳೆಯ ಹೆಸರಿಲ್ಲ ಎಂಬ ಮಾತೊಂದನ್ನು ಮುಂಚಿತವಾಗಿ ಹೇಳಿ ಬಿಡುತ್ತಾನೆ. ಕತೆ ಅತೀ ಕುತೂಹಲದ ಹಂತಕ್ಕೆ ಬಂದಾಗ ಹಿಂದಿನ ಕತೆ ಆರಂಭವಾಗಿ ಬಿಡುತ್ತದೆ. ತಿಬ್ಬಾಪುರ, ಜಾತ್ರೆ, ಶಾಸ್ತ್ರಿಯ ಮನೆ ಇತ್ಯಾದಿಗಳೆಲ್ಲ ಮರೆತು ಹೋಗುತ್ತವೆ. ನಲವತ್ತೊಂದನೇ ಪುಟದಿಂದ ದೇವರ ಸೇವೆ ಕೈ ಕೊಳ್ಳಲೆಂದು ಬಂದ ಮೀನಾಕ್ಷಿ ತನ್ನ ಸ್ವಗತವನ್ನು ಆರಂಭಿಸುತ್ತಾಳೆ.

ತಿಬ್ಬಾಪುರಕ್ಕೆ ಬಂದಿಳಿದ ಮೀನಾಕ್ಷಿ ಆನಂದರಾಯರ ಒಮ್ಮತವಿಲ್ಲದ ದಾಂಪತ್ಯದ ಬಗ್ಗೆ ಮೊದಲ ಪುಟಗಳಲ್ಲಿ ಅಲ್ಲಲ್ಲಿ ಸುಳುವು ಕಂಡ ಓದುಗ ಮೀನಾಕ್ಷಿಯ ಬಾಯಿಂದ ಇದಕ್ಕೆ ಕಾರಣವಾದ ಘಟನೆಯ ಒಂದು ಮುಖವನ್ನು ಕಾಣುತ್ತಾನೆ. ಅವಳ ಮದುವೆ ನಿಶ್ಚಿತವಾಗಿ, ಮದುವೆಗೆ ಸಿದ್ಧತೆಗಳು ನಡೆಯುತ್ತಿದ್ದಾಗ ತನ್ನ ಕೈ ಹಿಡಿಯಲಿರುವ ಗಂಡು ಹಿಂದೆ ಅದಾರೋ ಹುಡುಗಿಯೊಂದನ್ನು ಪ್ರೀತಿಸುತ್ತಿದ್ದನಂತೆ ಎಂಬ ಮಾತು ಮೀನಾಕ್ಷಿಯ ಕಿವಿಗೆ ಬೀಳುತ್ತದೆ. ಈ ಮಾತೇ ಇವರ ಮದುವೆಯ ನಂತರವೂ ಇವರಿಬ್ಬರ ಅನ್ಯೋನ್ಯತೆಗೆ ಅಡ್ಡಿಯಾಗಿ ನಿಂತು ಬಿಡುತ್ತದೆ. ಮೀನಾಕ್ಷಿ ಗಂಡನನ್ನು ಅಪ್ಪಿಕೊಂಡಾಗಲೆಲ್ಲ ಈ "ಹೆಣ್ಣು" ಅವಳೆದುರು ಬಂದು ನಿಂತು ಆಕೆ ಗಂಡನಿಂದ ದೂರ ಸರಿಯುತ್ತಾಳೆ. ಗಂಡ ಬೇರೊಂದು ಹೆಣ್ಣನು ಪ್ರೀತಿಸಿದ್ದನೆಂಬ ಅವಳ ನಂಬಿಕೆ ಸುಖವನ್ನು ಮಾತ್ರವಲ್ಲದೆ, ಗಂಡನ ಸುಖವನ್ನೆ ಅವರ ಸಂಸಾರವನ್ನು ಹಾಳುಮಾಡುವಲ್ಲಿಗೂ ಹೋಗುತ್ತದೆ. ಕೊನೆ ಕೊನೆಗೆ ಮೀನ ಮನೆ ಮಂದಿಗೆಲ್ಲ ಒಂದು ಸಮಸ್ಯೆ ಎನಿಸುತ್ತಾಳೆ. ಈ ಸಮಸ್ಯೆಯ ಪರಿಹಾರೋಪಾಯಕ್ಕೆ ದಾರಿ ಕಾಣದೆ ಅವಳು ತಿಬ್ಬಾಪುರಕ್ಕೆ ಬರುತ್ತಾಳೆ.

ಪುಸ್ತಕದ ಮೂರನೇ ಭಾಗದಲ್ಲಿ ಆನಂದರಾಯನ ಮತ್ತೊಂದು ಸ್ವಗತ ಆರಂಭ ವಾಗುತ್ತದೆ. ಆನಂದರಾಯ ಕಾಲೇಜು ಕಲಿಯಲೆಂದು ತುಮಕೂರಿಗೆ ಬಂದು ಅಲ್ಲಿ ಸತ್ಯನಾರಾಯಣ ಎಂಬುವರ ಮನೆಯಲ್ಲಿ ಉಳಿಯುತ್ತಾನೆ. ಇವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇವರಲ್ಲಿ ಮೊದಲನೆಯವಳು ಶಕುಂತಲಾ ಇವಳ ಹಿಂದಿನವಳು ಅನಸೂಯ. ಅನಂದನಿಗೂ ಅನಸೂಯೆಗೂ ಪ್ರೀತಿ ಬೆಳೆಯುತ್ತದೆ ಮದುವೆಯಾಗಬೇಕೆಂದರೆ ಮಧ್ಯೆ ಶಕುಂತಲಾ ಇದ್ದಾಳೆ. ಅವಳನ್ನು ನೋಡಲು ಬಂದ ವರ ಅಕ್ಕನ ಬದಲು ತಂಗಿ ಅನಸೂಯಳನ್ನೇ ಕೇಳುತ್ತಾನೆ. ಹೀಗೆ ಕೇಳಿದ ವರನ ಕಾಗದ ಓದಿ, ಕೇಳಿ ಮನೆಯಲ್ಲಿ ಮಂಕು ಕವಿಯುವಲ್ಲಿಗೆ, ಶಂಕುಂತಲಾ ಬಿಕ್ಕಿ ಬಿಕ್ಕಿ ಅಳುತ್ತಿರುವಲ್ಲಿಗೆ, ಅನಸೂಯ ಪ್ರಚಂಡ ಕ್ರೋಧ ತಿರಸ್ಕಾರ ದ್ವೇಷದಿಂದ ನೋಡುತ್ತಿರುವಲ್ಲಿಗೆ ಯಕ್ಷಪ್ರಶ್ನೆ ಮುಗಿಯುತ್ತದೆ. ಆನಂದರಾಯ ತನ್ನ ಸ್ವಗತದ ಆರಂಭದಲ್ಲಿ ಶಂಕುತಲೆಯನ್ನು ಬೇರೆ ಹೊಗಳುವುದರಿಂದ ಕತೆಯ ಬಗ್ಗೆ ಕೆರಳಿದ ಕುತೂಹಲ ಯಾವರೀತಿಯಲ್ಲೂ ತಣಿಯುವುದಿಲ್ಲ.

ಪುಸ್ತಕದ ಮುನ್ನುಡಿಯಲ್ಲಿ ತ.ರಾ.ಸು.ಮಹಾಭಾರತದಲ್ಲಿ ಬರುವ ‘ಯಕ್ಷಪ್ರಶ್ನೆ’ಯ ಕಥಾ ಭಾಗವನ್ನು ಉದಾಹರಿದ್ದಾರೆ. ಬಾಯಾರಿ ಕೊಳ ಒಂದಕ್ಕೆ ನೀರು ಕುಡಿಯಲು ಹೋದ ಪಂಚ ಪಾಂಡವರಲ್ಲಿ ಮೊದಲ ನಾಲ್ವರು, ಆ ಕೊಳದ ನಿವಾಸಿಯಾಗಿದ್ದ ಯಕ್ಷನು ಕೇಳಿದ ಜೀವನದ ಮೂಲಭೂತ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ನೀರು ಕುಡಿಯಲು ಹೋಗಿ ಮೃತರಾಗುತ್ತಾರೆ, ಕೊನೆಗೆ ಧರ್ಮರಾಯ ಆ ಪ್ರಶ್ನೆಗಳೆಲ್ಲಕ್ಕೂ ಉತ್ತರ ಕೊಟ್ಟು ಯಕ್ಷನನ್ನು ತೃಪ್ತಿಪಡಿಸಿ ತನ್ನ ತಮ್ಮಂದಿರನ್ನು ಬದುಕಿಸಿ ಕೊಳ್ಳುತ್ತಾನೆ. ಈ ಕತೆಯನ್ನು ಸಾಂಕೇತಿಕವಾಗಿ ಬಳಸಿಕೊಂಡು ತ.ರಾ.ಸು. ಈ ಕಾದಂಬರಿಯನ್ನು ಹೆಣೆದಿದ್ದಾರೆ.

ಕಾದಂಬರಿಯ ಮೀನಾಕ್ಷಿ, ಸುಂದರರಾಯ, ಶಾಕುಂತಲ, ಅನಸೂಯ, ತಿಬ್ಬಾಪುರದ ಶಾಸ್ತ್ರಿ, ಜಟಕಾ ಸಾಬಿ, ಮೀನಾಕ್ಷಿಯ ತಂದೆ, ತಾಯಿ, ಅತ್ತೆ,ಮಾವ ಇವರೆಲ್ಲರೂ ಯಕ್ಷ ಪ್ರಶ್ನೆಗೆ ಉತ್ತರ ಹುಡುಕುವವರೆ. ಅತೃಪ್ತಳಾದ ಹಾಗು ತನ್ನ ಗಂಡನ ಹೃದಯವನ್ನು ಇನ್ನಾವುದೋ ಹೆಣ್ಣು ಅಪಹರಿಸಿದೆ ಎಂಬ ಆಘಾತದ ಸುಳಿಗೆ ಸಿಲುಕಿ ಅವನಿಗೆ ತನ್ನನ್ನು ಸಮರ್ಪಿಸಿ ಕೊಳ್ಳಲಾಗದೆ ಪರದಾಡುವ ಮೀನಾಕ್ಷಿ, ಹಳೆಯದನ್ನು ಮರೆತು ಹೊಸ ಬಾಳನ್ನು ಬದುಕಬೇಕೆನ್ನುವ ಹಂಬಲದಿಂದ ಹೊರಟ ಸುಂದರರಾಯ ತನ್ನ ಪ್ರೇಮ ವಿವಾಹಕ್ಕೆ ಅಡ್ಡ ಗೋಡೆಯಾಗಿ ನಿಂತಿರುವ ಅಕ್ಕನನ್ನು ಶಪಿಸುತ್ತ ವೇದನೆ ಪಡುವ ಅನಸೂಯ ಇವರೆಲ್ಲ ಸಮಸ್ಯೆಯ ಹಲವು ಮುಖಗಳು. ಈ ಮಧ್ಯೆ ಋಷಿ ಪಂಚಮಿ ಉದ್ಯಾಪನೆ ಮಾಡುವ ವಯಸ್ಸಾಗಿದ್ದರೂ ಸರಸವಾಡುತ್ತಿದ್ದ ಮೀನಾಕ್ಷಿಯ ಅತ್ತೆ ಮಾವ ಅನಾನುಕೂಲದ ದಾಂಪತ್ಯ ನಡೆಸುತ್ತಿರುವ ಹಳೆ ದಂಪತಿಗಳ ಬಾಳಿನ ದುರಂತವನ್ನು ನೆನಪಿಗೆ ತಂದು ಕೊಡುತ್ತಾರೆ.

ಕತೆಗಾರ ತ.ರಾ.ಸು. ತುಂಬಾ ಜಾಣ್ಮೆಯಿಂದ ಕತೆ ಹೇಳಿಕೊಂಡು ಹೋಗುತ್ತಾರೆ. ಪುಟಪುಟಕ್ಕೂ ಕುತೂಹಲದ ತುದಿಗೊಯ್ದು ನಿಲ್ಲಿಸುತ್ತಾರೆ. ಎಂದಿನಂತೆ ಕತೆ ಮುಂದೆ ಹರಿಯದೆ ಸುಳಿಯಂತೆ ಸುತ್ತುತ್ತಿರುತ್ತದೆ. ಆದರೆ ಸುಳಿಯ ಆಳ, ವೇಗ, ಘರ್ಷಣೆ ಪುಟ ಪುಟಗಳಲ್ಲೂ ಅಡಗಿರುತ್ತವೆ. ಮಾತುಗಾರಿಕೆ, ಕತೆಯ ಬಿಗಿಕಟ್ಟು, ಪಾತ್ರ ನಿರ್ಮಾಣ ಎಲ್ಲವೂ ಅದ್ಭುತ. ವಸ್ತು ಹಳೆಯದಾದರೂ ನಿರೂಪಣೆ. ವೈಚಾರಿಕ ಹಿನ್ನೆಲೆ ಹೊಸದು.

ದೋಷವೆಂದರೆ ಕತೆಯನ್ನು ಬೇಕೆಂದೇ ಲಂಬಿಸಿಕೊಂಡು ಹೋಗಿರುವುದು ಹಾಗು ಅನಿಶ್ಚಿತ ಘಟ್ಟಕ್ಕೆ ನಿಲ್ಲಿಸಿ ಓದುಗನ ಕೈ ಬಿಡುವುದು. ಈ ಪುಸ್ತಕದ ದ್ವಿತೀಯ ಭಾಗವೂ ಈ ವರೆಗೂ ಬಂದಿಲ್ಲ.

ಕಾದಂಬರೀ ಪ್ರಪಂಚಕ್ಕೆ ನವ್ಯತೆಯ ಗಾಳಿ ಸೋಂಕುತ್ತಿದೆ ಈಗಾಗಲೇ ಕೆಲವಾರು ನವ್ಯ ಕಾದಂಬರಿಗಳು ಕನ್ನಡದಲ್ಲಿ ಬಂದೂ ಇವೆ. ಸಮಾಜ ಸುಧಾರಣೆಗಾಗಿ, ವ್ಯಕ್ತಿಯ ಉದ್ಧಾರಕ್ಕಾಗಿ ಸಾಹಿತ್ಯ ಎಂಬ ಮಾತು ಹಳೆಯದಾಗಿ, ವಾಸ್ತವಿಕತೆ, ಮನೋವಿಶ್ಲೇಷಣೆ. ಸಾಂಕೇತಿಕತೆ, ವೈಚಾರಿಕತೆ ಕಾದಂಬರಿಗಳ ಉದ್ದೇಶ ಎಂಬ ಮಾತು ಕೇಳಿ ಬರುತ್ತಿದೆ. ಸಾಮಾಜಿಕ ಮೌಲ್ಯಗಳ ಮಾಪನ. ವೈಯುಕ್ತಿಕ ಸ್ವಾತಂತ್ರ್ಯ ಇತ್ಯಾದಿಗಳ ಬಗ್ಗೆ ಇಂದಿನ ಲೇಖಕರು ದೃಷ್ಟಿ ಹರಿಸುತ್ತಿದ್ದಾರೆ. ಆದರೆ ಹಿಂದಿನವರು ಎನಿಸಿ ಕೊಂಡಿರುವ ತ.ರಾ.ಸು. ಬಹಳ ಹಿಂದೆಯೇ ಹೊಸ ಹಾದಿಗೆ ಹೊರಳಿ ಕೊಂಡಿದ್ದರು ಎಂಬುದನ್ನು ಎಲ್ಲರೂ ಒಪ್ಪಬೇಕು. ಭಾಷೆ, ವಸ್ತು, ವಿಚಾರ, ನಿರೂಪಣೆ ಇದೆಲ್ಲದರಲ್ಲೂ ಹೊಸತನವನ್ನು ತರಲು ತ.ರಾ.ಸು. ಮರೆಯಲಿಲ್ಲ.

ತ.ರಾ.ಸು. ಅವರ ಪಾಲಿಗೆ ಕಾದಂಬರಿ ಸಮಾಜಕ್ಕೆ ಹಿಡಿಯುವ ರನ್ನಗನ್ನಡಿ "ಮಾತ್ರ ಆಗಲಿಲ್ಲ. ಸಮಾಜದ ಅಂತರಂಗ, ಮಾನವ ಜೀವನದ ಒಳ ತೋಟಿಯನ್ನೂ ಅವರು ಕಂಡರು, ಚಿತ್ರಿಸಿದರು. ಅವರ ಉಳಿದೆಲ್ಲ ಕಾದಂಬರಿಗಳಂತೆ ಎಲ್ಲಾ ಅವನ ಹೆಸರಿನಲ್ಲೇ !" ಹಾಗು "ಯಕ್ಷ ಪ್ರಶ್ನೆ" ಈ ಮಾತಿಗೆ ಸೂಕ್ತ ಉದಾಹರಣೆಗಳಾಗಿವೆ.

ಬಂಗಾರಿ, ಗಾಳಿ ಮಾತು ಮತ್ತು ಮರಳು ಸೇತುವೆ

—ಗುಪ್ತಶ್ರೀ

ಪ್ರಸಿದ್ಧ ಕಾದಂಬರಿಕಾರ ತ.ರಾ.ಸು. ರವರ ಬಗ್ಗೆಯಾಗಲೀ ಅಥವಾ ಅವರ ಕಾದಂಬರಿ ಸೃಷ್ಟಿಸಿರುವ ಸಾಮರ್ಥ್ಯದ ಬಗ್ಗೆಯಾಗಲೀ ಈ ಲೇಖನದಲ್ಲಿ ಏನನ್ನೂ ಹೇಳಲು ಪ್ರಯತ್ನ ಪಟ್ಟಿಲ್ಲ. ಅದರ ಹೊರತಾಗಿ ಅವರ ಅನೇಕ ಕಾದಂಬರಿಗಳಲ್ಲಿ ಮೂರನ್ನು ಮಾತ್ರ ಆಯ್ದುಕೊಂಡು ಅದರ ಬಗ್ಗೆ ಲೇಖಕನಿಗೆ ಅವುಗಳನ್ನು ಓದಿದಾಗ ಉಂಟಾದ ಪರಿಣಾಮಗಳನ್ನು ಸ್ಥೂಲವಾಗಿ ಓದುಗರ ಮುಂದಿರಿಸಲು ಪ್ರಯತ್ನಿಸಲಾಗಿದೆ. ನನ್ನ ಅನುಭವ ಇತರರರವೂ ಆಗಿರಬೇಕು ಎಂಬ ಅಭಿಪ್ರಾಯ ಲೇಖಕನಿಗಿಲ್ಲ 'ಬಂಗಾರಿ', 'ಗಾಳಿ ಮಾತು' ಹಾಗೂ 'ಮರಳ ಸೇತುವೆ' ಇವೇ ಆ ಕಾದಂಬರಿಗಳು.

ಕಾದಂಬರಿಕಾರರು 'ಬಂಗಾರಿ'ಯ ಮುನ್ನುಡಿಯಲ್ಲಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. ಸಮಾಜದಲ್ಲಿನ ವ್ಯಕ್ತಿಗಳು ನೆರೆ ಹೊರೆಯವರ ವಿಷಯವಾಗಿ ಹಗುರ ಮನೋಭಾವದಿಂದ ಮಾತನಾಡುವುದರ ಪರಿಣಾಮ, ಆ ವಿಷಯವು ಯಾರನ್ನು ಕುರಿತುದಾಗಿದೆಯೋ ಅವರ ಬಗ್ಗೆ ಇತರರು ಯಾವ ಅಭಿಪ್ರಾಯವನ್ನು ಹೊಂದುತ್ತಾರೆ, ಅದರಿಂದಾಗಿ ಅವರ ವ್ಯಕ್ತಿತ್ವ ಹೇಗೆ ಮಾರ್ಪಾಡಾಗುವುದು, ಪರಿಣಾಮ ಎಂತಹುದು ಎಂಬುದನ್ನು ಗಮನದಲ್ಲಿಡಬೇಕಾದ ಅಂಶ. ಆ ತೆರನಾದ ಲಘು ಮನೋವೃತ್ತಿಯುಳ್ಳವರಾಗದೆ ಹೆಚ್ಚು ಮಾನವೀಯ ದೃಷ್ಟಿಯಿಂದ ಇತರರೊಂದಿಗೆ, ಮುಖ್ಯವಾಗಿ ಸಮಾಜ ಯಾರನ್ನು 'ಕೆಟ್ಟವರು' ಎಂದು ನಿರ್ಧರಿಸಿ ದೂರ ವಿರಿಸಿದೆಯೋ ಅಂತಹವರೊಂದಿಗೆ. ನಡೆಯುವುದನ್ನು ಅನುಸರಿಸಿದರೆ, ಆ ವ್ಯಕ್ತಿಗಳ 'ಕೆಟ್ಟತನ' 'ಒಳ್ಳೆಯತನ' ಗಳಿಗೆ ಹೊಸ ಮೌಲ್ಯ ಬಂದು, ನಮ್ಮ ತೀರ್ಪೂ ಅವರ ನಡತೆಯ ಬಗ್ಗೆ ನಿಷ್ಠೂರತೆಯಿಂದ ಹೊರತಾಗಿ ಹೆಚ್ಚು ಮಾನವೀಯವಾಗಿರುತ್ತದೆ. ಇದೇ ಮೊದಲೆರಡು ಕಾದಂಬರಿಗಳ ತಿರುಳು, ಅವುಗಳಿಂದ ನಾವು ಕಲಿಯಬೇಕಾದದ್ದು ಏನಾದರೂ ಇರುವುದಾದರೆ.

ಕಾದಂಬರಿಯ ಹೆಸರೇನೋ 'ಬಂಗಾರಿ' ಯಾದರೂ ಸುಮಾರು ಇನ್ನೂರು ಪುಟಗಳ ಕಾದಂಬರಿಯಲ್ಲಿ ಆ ವ್ಯಕ್ತಿಯೋರ್ವಳ ಬಗ್ಗೆ ನಮಗೆ ತಿಳಿದು ಬರುವುದು ಕಡೆಯ ಸುಮಾರು ನಲವತ್ತು ಪುಟಗಳಲ್ಲಿ. ಆದರೆ ಸಮಾಜದವರಿಂದ ಕೆಟ್ಟವನು ಎಂದು ತೀರ್ಮಾನಿಸಲ್ಪಟ್ಟು ದೂರವಿಡಲ್ಪಟ್ಟಿರುವ ಜೂಜು ಕೋರ, ಕುಡುಕ, ವ್ಯಭಿಚಾರಿಯಾದ "ಶ್ರೀಕಂಠಾಚಾರಿ"ಯು, "ಕೂಡಿಕೆ" ಮಾಡಿಕೊಂಡ "ರುದ್ರಮ್ಮ"ನ ಮಗಳಾಗಿ ಹುಟ್ಟಿದುದರಿಂದಾಗಿ ಅವಳ ಬಗ್ಗೆ ಸಮಾಜದ ಲಘುವಾದ ಮನೋವೃತ್ತಿಯನ್ನು · ವಿಶಾಲವಾದ ಹಿನ್ನೆಲೆಯನ್ನೊದಗಿಸಿ, ಚೆನ್ನಾಗಿ ಪರಿಚಯ ಮಾಡಿಕೊಡುವುದರಲ್ಲಿ ಸಫಲರಾಗಿದ್ದಾರೆ.

ಕಾದಂಬರಿಯನ್ನು ಮೂರು ಭಾಗಗಳಾಗಿ ವಿಂಗಡಿಸಿ, ಮೂರು ಬಗೆಯ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಅವಕ್ಕೆ ಪೋಷಕವಾಗಿ ಇತರ ವ್ಯಕ್ತಿಗಳ ಚಿತ್ರಣವೂ ನಡೆದಿದೆ. ಕಾದಂಬರಿಯಲ್ಲಿನ ಎಲ್ಲ ವ್ಯಕ್ತಿಗಳೂ ನಿಜ ಜೀವನದಲ್ಲಿ ಅಪರೂಪದವರೇನೂ ಅಲ್ಲವಾಗಿ, ಪ್ರತಿಯೊಬ್ಬರೂ ತಾವು ಇರಬೇಕಾದ ಸನ್ನಿವೇಶದ ಪ್ರಭಾವಕ್ಕೆ ಒಳಗಾಗಿ, ವಿವಿಧ ಪಯೊಲಿಗಳ ಒತ್ತಡಕ್ಕೆ ಗುರಿಯಾಗಿ ಹೇಗೆ ಅವರ ವ್ಯಕ್ತಿತ್ವ ರೂಪುಗೊಳ್ಳುವುದೆಂಬುದನ್ನು ನಾವು ಮನಗಾಣಬಹುದು. ಮೊದಲ ಭಾಗದಲ್ಲಿ ವೇದವಲ್ಲಿಯಂತಹ ಸಾಧ್ವಿಯೊಬ್ಬಳು, ಪರಿಸರದ ಕಾರಣದಿಂದಾಗಿ, ಬಂಧುಗಳ ತಿರಸ್ಕಾರಕ್ಕೆ ಗುರಿಯಾಗಿ ತನ್ನ ವ್ಯಕ್ತಿತ್ವವೇ ಸಂಪೂರ್ಣವಾಗಿ ಮಾರ್ಪಾಟುಗೊಂಡ ಪ್ರಸ್ತುತ ವೇದವಲ್ಲಿಯನ್ನು ನಾವು ಕಾಣುತ್ತೇವೆ. ಇದಕ್ಕೆ ಅವಳು ಎಷ್ಟು ಮಾತ್ರ ಕಾರಣಳೆಂದರೆ, ಕುಟುಂಬದ ಮೊದಲನೆಯ ಸೊಸೆಯಾಗಿ ಬಂದರೂ, ಅನಂತರ ಬಂದವರಿಗಿಂತಲೂ ಮೊದಲೇ ಮಕ್ಕಳನ್ನು ಪಡೆಯುವ ಭಾಗ್ಯವಿಲ್ಲದವಳಾದುದೇ.

ವೇದವಲ್ಲಿಯು ತನ್ನ ಆ ಪರಿಸ್ಥಿತಿಯಲ್ಲಿ "ತನ್ನ ಸುತ್ತಲಿನಿಂದ, ತನ್ನ ಆಪ್ತೇಷ್ಟರಿಂದ ನಿರೀಕ್ಷಿಸಿದುದು- ಸಹಾನುಭೂತಿಯನ್ನು" ಆದರೆ ಪಡೆದುದು ಮಾತ್ರ "ಅವಳು ಅಪರಾಧಿ" ಎಂದು ಇತರರಿಂದ ಅನಿಸಿಕೊಂಡುದು. ಪರಿಸರದ ಗುಲಾಮಳಾಗಿ, ಸಹನೆಯನ್ನು ಕಳೆದುಕೊಂಡು, ಅಸೂಯಾ ಪರಳಾಗಿ ವೇದವಲ್ಲಿಯು ಮನೆಯ ಬೇರ್ಪಡುವಿಕೆಗೆ ಕಾರಣಳೆನಿಸಿಕೊಳ್ಳುತ್ತಾಳೆ.

ಆದರೆ ಮುಂದೆ ಕುಟುಂಬದವರಿಂದ ದೂರನಿಂತು ನೆಲೆಯನ್ನು ಕಂಡುಕೊಂಡಾಗ ತನ್ನ ಹಳೆಯ ವ್ಯಕ್ತಿತ್ವವನ್ನು ಮರಳಿ ಪಡೆಯಲು ಯತ್ನಿಸದೆ, "ಬಾಯಿ ಜೋರಿಗೇ" ಹೆದರುವ ಗಂಡ ವೆಂಕಟಾಚಾರಿಯ ದುರ್ಬಲತೆಯನ್ನು ದುರುಪಯೋಗಪಡಿಸಿಕೊಳ್ಳುವ ವೇದವಲ್ಲಿಯ ನಡತೆ ಯಾರೂ ಸಮರ್ಥಿಸಲಾಗದು.

ಇಂತಹವರ ಮಗನಾಗಿ ಆ ರೀತಿಯ ಸನ್ನಿವೇಶದಲ್ಲಿ ಬೆಳೆಯುತ್ತಾನೆ ದೇಶಿಕಾಚಾರಿ. ಅವನು ಕೇವಲ ತಾಯಿಯ ಅತಿ ಮುದ್ದಿನಿಂದ ಮಾತ್ರವೇ ಅಲ್ಲದೆ; ತನಗೆ ಬೇಕಾದಂತಹ ಸ್ನೇಹಿತ ಗೋವಿಂದಾಚಾರಿಯನ್ನು ದೊರಕಿಸಿಕೊಳ್ಳುತ್ತಾನೆ ಶಾಲೆಯಲ್ಲಿ.

ಗೋವಿಂದಾಚಾರಿಯವರ ತಂದೆ ಶ್ರೀಕಂಠಾಚಾರಿಯವರ ಪಾತ್ರವನ್ನು ಹಂತಹಂತವಾಗಿ ಚಿತ್ರಿಸಲಾಗಿದ್ದು, ಒಳ್ಳೆಯ ಸನ್ನಿವೇಶ ದೊರೆತರೂ ಕೂಡ ಸಹವಾಸದಿಂದಾಗಿ ದುರಾಚಾರಿಯಾಗಿ ಮಾರ್ಪಡುತ್ತಾನೆ. ಅವನ ಹವ್ಯಾಸಗಳೂ ಸಹ ಎಳೆಯ ವಯಸ್ಸಿನ, ತಾಯಿಯಿಲ್ಲದ ಗೋವಿಂದಾಚಾರಿಯು ಒಳ್ಳೆಯ ವ್ಯಕ್ತಿಯಾಗಲು ಆಶಾದಾಯಕವಲ್ಲ. ಜೂಜು, ವ್ಯಭಿಚಾರ, ಕುಡಿತ ಇವುಗಳ ಮೇಲೆ ಶ್ರೀಕಂಠಾಚಾರಿಯ ವ್ಯಾಮೋಹ ಎಷ್ಟೆಂದರೆ ತನ್ನ ಹೆಂಡತಿಯನ್ನೂ ಕಳೆದುಕೊಳ್ಳಲು ಸಿದ್ಧನಿನಿರುವಷ್ಟು. ಹೆಂಡತಿ, ಹವ್ಯಾಸಗಳನ್ನು ಆಯ್ದುಕೊಳ್ಳುವಾಗ, ತನ್ನ ಹವ್ಯಾಸಗಳಿಗೇ ಪ್ರಥಮ ಪ್ರಾಧಾನ್ಯತೆಯನ್ನು ಕೊಡುತ್ತಾನೆ.

ಯಾರಿಗೂ ತಲೆಬಾಗದ, ಅಭೀಷ್ಟೆಯನ್ನು ಎಷ್ಟೇ ತೋಂದರೆ ಬಂದರೂ ನೆರವೇರಿಸಿಕೊಳ್ಳುವ; ಸಮಯ ಬಂದಾಗ ತಂದೆಯ ವಿರುದ್ಧವೂ ತಲೆ ಎತ್ತಲು ಸಂಕೋಚ ಪಡದ ವ್ಯಕ್ತಿಯಾಗಿ ಬಾಳುತ್ತಾನೆ- ಗೋವಿಂದಾಚಾರಿ. ಅವನ ವ್ಯಕ್ತಿತ್ವವನ್ನು ಸರಿಪಡಿಸಲು "ಚಿಕ್ಕಮ್ಮ" ರುದ್ರಮ್ಮನಿಂದ ವಿಫಲ ಪ್ರಯತ್ನ ನಡೆಯುತ್ತದೆ. ಇಂತಹ ಗೋವಿಂದಾಚಾರಿಯ ಬರಡು ಜೀವನದಲ್ಲಿ ಚಿಗುರಾಗಿ ಕಾಣಿಸಿಕೊಳ್ಳುವಳು ಬಂಗಾರಿ- ಹೆಸರಿಗೆ ತಕ್ಕಂತಹ ವ್ಯಕ್ತಿತ್ವವುಳ್ಳವಳು.

ಸಂಪೂರ್ಣವಾಗಿ ಸ್ವಂತ ವ್ಯಕ್ತಿತ್ವವನ್ನೇ ಕಳೆದುಕೊಂಡು ಹೆಂಡತಿಯನ್ನೂ ಪರರ ವಶಕ್ಕೊಪ್ಪಿಸುವಂತಹ ಶ್ರೀಕಂಠಾಚಾರಿಯ ಹೆಂಡತಿ (ಕೂಡಿಕೆಯಾದುದು) ರುದ್ರಮ್ಮ ತನ್ನ ಮಗಳು ಬಂಗಾರಿಯೂ ತನ್ನಂತೆ ಆಗದಿರಲು ವಿಶ್ವಪ್ರಯತ್ನ ನಡೆಸುತ್ತಾಳೆ ಪರಿಸ್ಥಿತಿಯ ಸಂಪೂರ್ಣ ಅರಿವಿಲ್ಲವಾದರೂ, ಅವರೆ ಸಮಾಜದವರಿಂದ ಕೆಟ್ಟವರೆಂದು ತೀರ್ಮಾನಿಸಲ್ಪಟ್ಟವರ ಮಗಳಾದ "ಬಂಗಾರಿ"ಯು ಕಡೆಗೆ ದೇಶಿಕಾಚಾರಿಗೆ ಒಪ್ಪಿಸಲ್ಪಡುತ್ತಾಳೆ. ಮಗಳ ಉತ್ತಮ ಭವಿಷ್ಯಕ್ಕಾಗಿ ಹಾತೊರೆದು ದೇಶಿಕಾಚಾರಿಗೆ ಬಂಗಾರಿಯನ್ನು ಒಪ್ಪಿಸುವಾಗ, ಅವಳ ಅನಿರ್ದಿಷ್ಟ ಭವಿಷ್ಯ ಹೆಚ್ಚಿಂದು ಮನವರಿಕೆಯಾದಾಗ ಅವಳಿಗೆ ನಿರಾಶೆಯೇ ಕಾದಿರುವುದು.

ಹೀಗೆ ಕಾದಂಬರಿಯಲ್ಲಿ ಬರುವ ಪಾತ್ರಗಳೆಲ್ಲವೂ ಸನ್ನಿವೇಶದ ಪ್ರಭಾವದಿಂದಾಗಿ ತಮ್ಮ ಒಳಗಣ್ಣನ್ನು ತೆರೆಯಲಾಗದೆ ಅಂಧರಾಗಿ ನೇರಮಾರ್ಗಾವಲಂಬಿಗಳಾಗದೆ, ಅವಕ್ಕೆ (ಸನ್ನಿವೇಶ) ತಲೆಬಾಗುತ್ತಾರೆ. ಸನ್ನಿವೇಶದ ಕೂಸುಗಳಾಗಿದ್ದರೂ ಒಳ್ಳೆಯ ಅವಕಾಶದೊರೆತಿದ್ದಲ್ಲಿ ಉತ್ತಮ ಪ್ರಜೆಗಳಾಗುತ್ತಿದ್ದರೆಂಬುದನ್ನೂ ಸೂಕ್ಷ್ಮವಾಗಿ ಚಿತ್ರಿಸಲ್ಪಟ್ಟಿದೆ. ದಿನಬೆಳಗಾದರೆ ಜೂಜುಕೋರರ ನಡುವೆಯೇ ಜೀವಿಸಬೇಕಾದಂತಹ ಸನ್ನಿವೇಶ ಚಿಕ್ಕಂದಿನಿಂದಲೂ ದೊರಕಿದ್ದರೂ ಗೋವಿಂದಾಚಾರಿಯು ತನ್ನ ತಂಗಿ ಬಂಗಾರಿಯ ಅಭಿಪ್ರಾಯಕ್ಕೆ. ಬಂಗಾರಿಯ ತಾಯಿಯ ಅಭಿಪ್ರಾಯಕ್ಕಿಂತಲೂ ಹೆಚ್ಚು ಮನ್ನಣೆ ಕೊಡುವುದೇ ಸಾಕ್ಷಿ ಮೇಲಿನ ಹೇಳಿಕೆಗೆ, ಗೋವಿಂದಾಚಾರಿಯು ತಂಗಿಯ ಭವಿಷ್ಯ ತಂಗಿಯೇ ನಿರ್ಧರಿಸುವ ಅವಕಾಶವನ್ನು ಅವಳಿಗೆ ಒದಗಿಸಿಕೊಡುವಾಗ ಅವನ ವ್ಯಕ್ತಿತ್ವದ ಏಮ್ಮುಖ ಪರಿಚಯ ಮಾತ್ರವಿದ್ದ ಓದುಗರಿಗೆ ಅದಕ್ಕೆ ತೀರ ವಿರುದ್ಧವಾದ ನಡತೆಯನ್ನು ಕಾಣುತ್ತಾರೆ. ಈ ಭಾಗದಲ್ಲಿ ಗೋವಿಂದಾಚಾರಿಯ ನಡತೆ ಉಜ್ವಲವಾಗಿ ಚಿತ್ರಿತವಾಗಿದೆ. ಅಂತಹವನಿಂದ ಅಷ್ಟನ್ನು ನಿರೀಕ್ಷಿಸುವುದು ಹೆಚ್ಚೇ.

ನಮ್ಮ ಪರಿಸರದ ಜನರ ನಡತೆಯ ಬಗ್ಗೆ ಮಾತನಾಡುವಾಗ ಅವರನ್ನು ಆದಷ್ಟು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕೆಂಬ ಸಂದೇಶ ಉತ್ತಮ ಮಟ್ಟದಲ್ಲಿ ಮನದಟ್ಟಾಗುವಂತೆ ಚಿತ್ರಿಸಲ್ಪಟ್ಟಿದೆ; ಬಂಗಾರಿಯಲ್ಲಿ. ಹಾಗೆ ನಾವು ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸದೆ, ಪರಿಸ್ಥಿತಿಯ ಸಂಪೂರ್ಣ ಅರಿವಿಲ್ಲದೆ, ಬಾಹ್ಯಪ್ರೇಕ್ಷಕರಾಗಿದ್ದು ಅಂತಹ ವ್ಯಕ್ತಿಗಳ ಬಗ್ಗೆ ನಿರ್ದಾಕ್ಷಿಣ್ಯವಾದ ಅಭಿಪ್ರಾಯ ತಾಳಿ

ಅವರ ಬಗ್ಗೆ ಯಾವೊಂದು ಖಂಡಿತವಾದ ತೀರ್ಮಾನಕ್ಕೂ ಬರಬಾರದು. ಇಲ್ಲವಾದಲ್ಲಿ ಬಂಗಾರಿಯಂತಹ ಮುಗ್ಧ ವ್ಯಕ್ತಿಗಳು ತಮ್ಮ ಭವಿಷ್ಯವನ್ನು ಅನಿರ್ದಿಷ್ಟವಾಗಿ ಮಾರ್ಪಡಿಸಿಕೊಳ್ಳಬೇಕಾದ ಪ್ರಸಂಗಕ್ಕೆ ನಾವೇ ಅವಕಾಶ ಒದಗಿಸಿಕೊಟ್ಟು ಅಕ್ಷಮ್ಯ ಕಾರ್ಯ ಮಾಡುವಂತಾದೀತು.

ಇದಕ್ಕೆ ಪ್ರಮಾಣವಾಗಿ ನಿರ್ದೋಷಿಯೊಬ್ಬಳು ತನ್ನ ಜೀವನವನ್ನು ವಿನಾ ಕಾರಣ ದಂಡತೆತ್ತುದನ್ನು “ಗಾಳಿ ಮಾತು” ಕಾದಂಬರಿಯಲ್ಲಿ ಕಾಣುತ್ತೇವೆ. ವಿಷಯ ಸಮರ್ಥನೆಗೆ ಆಧಾರವೇ ಇಲ್ಲದೆ ಕೇವಲ ಊಹೆ, ಕಲ್ಪನೆಗಳಿಂದಲೇ ಇತರ ವ್ಯಕ್ತಿಗಳ ಬಗ್ಗೆ ತಮ್ಮ ಅಭಿಪ್ರಾಯ ಹೊರಗೆಡಹುವವರ ವರ್ತನೆಯಿಂದಾಗುವ ಅನಾಹುತಗಳ ಪರಮಾವಧಿಯ ಪರಿಚಯವೇ “ಗಾಳಿಮಾತು” ಕಾದಂಬರಿಯ ವಸ್ತು. ಗಾಳಿ ಮಾತಿಗೆ ನಾವು ಎಷ್ಟರ ಮಟ್ಟಿಗೆ ಬೆಲೆ ಕೊಡಬೇಕು, ಗಾಳಿ ಮಾತು ತಂದವರು ಸತ್ಯ ದರ್ಶನವನ್ನು ಮಾಡಿರುವುದರಲ್ಲಿ ನಿಜವೆಷ್ಟು ? ಈ ಸಂಗತಿಗಳನ್ನು ಪರಿಶೀಲಿಸಿ ಪ್ರಮಾಣೀಕರಿಸಿಕೊಳ್ಳಬೇಕು; ಗಾಳಿಮಾತಿಗೆ ಕಿವಿಗೊಡುವರು ಇಲ್ಲವೇ ಅದರ ಪರಿಣಾಮ ನಿರ್ದೋಷಿಯೊಬ್ಬಳ ಆತ್ಮಹತ್ಯೆ, ಖೂನಿ, ಕೊಲೆ !

ಸುನಂದೆಯು ಆಕಸ್ಮಿಕ ಘಟನೆಯೊಂದರ ಪ್ರೇಕ್ಷಕಳಾದುದರಿಂದ ಕಾಮೋನ್ಮತ್ತನಾಗಿ, ತನ್ನ ಕಾರ್ಯ ಒಳಿತು ಕೆಡುಕುಗಳ ಪ್ರಜ್ಞಾ ಪ್ರಜ್ಞೆಯಿಲ್ಲದೆ, ತನ್ನ ಮನದಿಚ್ಛೆಯನ್ನು, ತನ್ನ ಬಗ್ಗೆ ಏನೂ ತಿಳಿಯದಿರುವ ಸುನಂದೆಗೆ, ಶಾಲೆಯ ವಿಳಾಸಕ್ಕೆ. ಪ್ರಣಯ ಕಾಗದಗಳನ್ನು ಬರೆಯುವ ಸಾಹಸ ಮಾಡುತ್ತಾನೆ. ಅನಾಮಧೇಯ ವ್ಯಕ್ತಿಯೊಬ್ಬನು, ಕಾಗದಗಳ ಮೂಲಕ ಸುನಂದೆಯ ಶಾಂತ ಜೀವನದಲ್ಲಿ ಬಿರುಗಾಳಿ ಬೀಸುತ್ತಾನೆ. ಇದರಿಂದಾಗಿ ಕನಕಳಂತ ವಿಷಜೀವಿಯೊಂದಿಗೆ ವಿರಸ ಏರ್ಪಡುತ್ತದೆ. “ಕಾಗದದಲ್ಲಿನ ವಿಷಯ ತಿಳಿಸಲಿಲ್ಲ” ಎಂಬ ಒಂದೇ ಪ್ರಬಲ ಕಾರಣಕ್ಕಾಗಿ ಕನಕಳು ಸುನಂದೆಯ ವಿರುದ್ಧ ಪ್ರತಿಭಟಿಸಿ ಸಿಡಿದೆದ್ದು ನಿಂತು ದ್ವೇಷ ಸಾಧನೆಗೆ ಪ್ರಯತ್ನಿಸುತ್ತಾಳೆ. ಅವಳ ಸುದೈವಕ್ಕೆ ಅವಕಾಶವೂ ಒದಗಿಬರುತ್ತದೆ.

ಸುನಂದೆಯನ್ನು “ಕನ್ಯಾ ಪರೀಕ್ಷೆ”ಗಾಗಿ ನೋಡಲು ಬಂದವರ ಮುಂದೆ ಸುನಂದೆಯ ನಡತೆಯನ್ನು ಶಂಕಿಸಿ, ಅವಳ ಅನುಮಾನಕ್ಕೆ ಪ್ರಮಾಣಗಳೆಂಬಂತೆ ಸುನಂದೆಯು ಪಡೆಯುತ್ತಿದ್ದ ಕಾಗದಗಳ ಸಂಗತಿಯನ್ನು ಗಳಿಸುತ್ತಾಳೆ, ಕನಕ-ಸುನಂದೆಯ ಭಾವೀ ಮಾವನ ಮುಂದೆ. ಇಷ್ಟು ಕಾರಣ ಸಾಕಾಗುತ್ತದೆ; ಸುನಂದೆಯ ಆಗಬಹುದಾಗಿದ್ದ ಮದುವೆ ನಿಲ್ಲಲು. ನಮ್ಮ ಜೀವಿತ ಕಾಲಾವಧಿಯೆಲ್ಲಾ ಒಬ್ಬನೊಡನೆ ಬೆರೆತರೂ ಅವನ ಬಗ್ಗೆ ಖಚಿತವಾದ ಅಭಿಪ್ರಾಯ ತಳೆಯಲು ಸಾಧ್ಯವಿಲ್ಲದಂತೆ. ಅವರೂ ದಿನ ಬೆಳಗಾದರೆ ಶಾಲೆಯಲ್ಲಿ ಒಡನಾಡುವ ಸ್ನೇಹಿತೆಯೊಬ್ಬಳ ನಿರಾಧಾರ ಹೇಳಿಕೆ ನಿರಾಕರಿಸುವಷ್ಟು ಸಹನೆ ವ್ಯಕ್ತಪಡಿಸದೆ ಅದರ ಸತ್ಯಾಸತ್ಯತೆಯ ಪರಿಶೀಲನೆ ಮಾಡುವುದಿಲ್ಲ “ವಿದ್ಯಾವಂತ” ಸುಧಾರಿತ ಜನ.

ಅನಾಮಧೇಯ ಕಾಮೋನ್ಮತ್ತನಿಂದ ಪ್ರಣಯಯಾಚನೆ. ಸುಂದರ ಬಾಳನ್ನು ನಡೆಸುವ ಅವಕಾಶವಿರುವ ದಾಂಪತ್ಯ ಜೀವನಕ್ಕೆ ಆಹ್ವಾನ-ಇವೆರಡು ಸಂದರ್ಭಗಳನ್ನು ಒಮ್ಮೆಗೆ ಕಥಾ ನಾಯಕಿ ಸುನಂದೆಗೆ ಒದಗಿಸಿಕೊಟ್ಟು ಅವಳನ್ನು ಒಂದು ವಿಧದ ಪರೀಕ್ಷೆಗೊಳಪಡಿಸಿ ಉತ್ತೀರ್ಣಗೊಳಿಸಿದ್ದಾರೆ ಲೇಖಕರು. ಕಾದಂಬರಿಯ ಈ ಭಾಗ ಉತ್ತಮವಾಗಿ ಚಿತ್ರಿಸಲ್ಪಟ್ಟಿದೆ. ಕಡೆಗೆ ದಾಂಪತ್ಯ ಜೀವನದೆಡೆಗೆ ಒಲವು ಉಂಟಾಗಿ (ಸಹಜವಾದದ್ದೇ, ಸುನಂದೆಯನ್ನು ಅರಿತವರು ಅವಳ ಆಯ್ಕೆಗೆ ಸರ್ವ ವಿಧದಲ್ಲೂ ಒಪ್ಪಿಗೆ ಕೊಡುವರು) ಕಡೆಗೆ ಅದು ನಿರಾಶೆಯಲ್ಲಿ ಕೊನೆಗೊಂಡಾಗ ಅವಳಿಗೆ ತನ್ನ, "ರೂಪೋನ್ಮತ್ತ" ಪ್ರಣಯನಿಂದ ಕಾಗದ ಬರುವುದು. ಅದರಲ್ಲಿನ ವಾಕ್ಯ "ಈ ವಿಷಯ ನಿನ್ನ ಕೊನೆಯಾಗಬೇಕು, ಇಲ್ಲ ನಿನ್ನ ಬಾಳಿನದು ಎಂಬುದೇ ಸುನಂದೆಯ ಭವಿಷ್ಯವನ್ನು ರೂಪು ಗೊಳಿಸುವುದು ಅವಳ ಆತ್ಮಹತ್ಯೆಯಲ್ಲಿ !

ಕಾದಂಬರಿಯ ಯಶಸ್ಸಿಗೆ ಮುಖ್ಯ ಕಾರಣಗಳಲ್ಲೊಂದಾದ ಕುತೂಹಲವನ್ನು ಕೆರಳಿಸುವ ಬಗೆಯನ್ನು ಗಾಳಿಮಾತಿನ ಕಡೆಯವರೆಗೂ ಬಹಳ ಜಾಣ್ಮೆಯ ರೀತಿಯಲ್ಲಿ ಕಾಪಾಡಿಕೊಂಡು ಹೋಗಿದ್ದಾರೆ. ಯಾವುದೇ ಕ್ಷಣದಲ್ಲಾದರೂ ಸುನಂದೆಯ ಪ್ರಣಯಕಾಂಕ್ಷಿಯನ್ನು ನಿರೀಕ್ಷಿಸುತ್ತಿದ್ದರೂ ಇಡೀ ಕಾದಂಬರಿಯಲ್ಲಿ ಅವನ ಪ್ರವೇಶವೇ ಇಲ್ಲದಿರುವುದು ಗಮನಾರ್ಹ. ವ್ಯಕ್ತಿಯ ಅಸ್ತಿತ್ವದ ಬಗ್ಗೆ ಏನೂ ಸಹ ತಿಳಿದು ಬರದಿದ್ದರೂ ಅವನ ಕಾಗದಗಳೇ ಅನಾಹುತಕ್ಕೆ ಕಾರಣವಾಗುವುದು "ಗಾಳಿಮಾತಿಗೆ" ಎಲ್ಲ ವಿಧದಿಂದಲೂ ಒಪ್ಪಿಗೆಯಾಗುವಂತಹುದು. ಒಬ್ಬ ಮುಗ್ಧ ಹುಡುಗಿಗೆ, ತನ್ನ ಉನ್ಮತ್ತ ಸ್ಥಿತಿಯಿಂದಾಗಿ ಕಷ್ಟಗಳ ಪರಂಪರೆಯನ್ನೊಡ್ಡಿ (ಉದ್ದೇಶ ಅದಲ್ಲವಾದರೂ, ಅವನ ಕಾರ್ಯದ ಪರಿಣಾಮ ಅದೇ) ಅವಳ ಸಂಪೂರ್ಣ ಅವನತಿಗೆ ಅಪರೋಕ್ಷವಾಗಿ ಕಾರಣವಾಗುವ ಈ ಅನಾಮಧೇಯನ ಬಗ್ಗೆ ಓದುಗನಲ್ಲಿ ಕಡೆಯಲ್ಲಿ ಉಳಿಯುವ ಭಾವನೆ, ದ್ವೇಷ. ಇದರ ಹೊರತು ಮತ್ತೇನೂ ಅಲ್ಲ. ಓದುಗನ ಮೇಲೆ ಕಡೆಯಲ್ಲಿ ಈ ರೀತಿ ಪರಿಣಾಮ ಉಂಟುಮಾಡುವಂತೆ ಮಾಡಿ; ಸಮಾಜದಲ್ಲಿನ ಇಂತಹ ವ್ಯಕ್ತಿಗಳ ಬಗ್ಗೆ ಎಷ್ಟು ಎಚ್ಚರದಿಂದಿದ್ದರೂ ಸಾಲದು ಎಂಬುದನ್ನು ವಿಶದಪಡಿಸಿದ್ದಾರೆ ಈ ಕಾದಂಬರಿಯಲ್ಲಿ. ಕೊರತೆಯ ವಿಷಯವೆಂದರೆ ಕತೆಯ ಶೀಘ್ರ ಮುಂದುವರಿಕೆ, ಅನಿರೀಕ್ಷಿತ ಮುಕ್ತಾಯದಿಂದಾಗಿ ಕಾದಂಬರಿಯ ಅಂತ್ಯ ಅಸಹಜವೇನೋ ಎನಿಸುವುದು. ಆದರೂ ಸಮಾಜದಲ್ಲಿ ಅಸಂಭವವಾದದ್ದೇನೂ ಅಲ್ಲ.

ಮೇಲಿನ ಎರಡು ಕಾದಂಬರಿಗಳೊಂದಿಗೆ ಯಾವರೀತಿಯೂ ಹೋಲಿಸಲಾಗದ ಕಥಾವಸ್ತುವುಳ್ಳ ಕಾದಂಬರಿ "ಮರಳು ಸೇತುವೆ" ಹಿಂದೂ ಸಂಸ್ಕೃತಿಯ ಹೆಗ್ಗುರುತಾಗಿರುವ ದೇವಸ್ಥಾನಗಳು, ಗುಡಿ ಗೋಪುರಗಳು ಇಂದಿನ ಸ್ಥಿತಿಗೆ ಬಂದಿರುವ ಕಾರಣವನ್ನು ಒಂದು ಕೋಮಿನವರು ಮತ್ತೊಂದು ಕೋಮಿನವರ ಮೇಲೆ ಹೇರಿ, ತಮ್ಮ ತಪ್ಪನ್ನು ಮುಚ್ಚಿಡಲು ಯತ್ನಿಸುವುದಕ್ಕೆ ಕಾರಣ 'ಹಿಂದಿನಂತೆ ಧರ್ಮ ನಮ್ಮ ಜೀವನದ ಸರ್ವ ವ್ಯಾಪಿಯಾದ, ಸರ್ವಾಧಿಕಾರಿಯಾದ ಶಕ್ತಿಯಾಗದೆ, ಕೇವಲ ಆಪದ್ಧರ್ಮ

ವಾಗಿರುವುದು;......ಪರಲೋಕಕ್ಕೆ ಉಪಯೋಗವಾಗುತ್ತಿರುವುದು......' ಎಂದು ಹೇಳಿದ್ದಾರೆ ಮುನ್ನುಡಿಯಲ್ಲಿ. ಸ್ವಾರ್ಥ ಸಾಧನೆಗೆ ಪರರ ಸೊತ್ತಿನ ವಿಷಯ ಅಂತಿರಲಿ ದೇವರ ಸೊತ್ತನ್ನೇ ಅರಗಿಸಿಕೊಳ್ಳಲು ಪ್ರಯತ್ನಪಟ್ಟವನ ವಿಷಯವೇ ಕಾದಂಬರಿಯ ತಿರುಳು.

ದೇಶದ ಸಂಸ್ಕೃತಿಯ ಹೆಮ್ಮೆಯ ಕೃತಿಗಳಾದ ವಿಗ್ರಹಗಳ ಕಳುವು ಸರ್ವೇಸಾಧಾರಣವಾಗಿ ಹೋಗಿದೆ; ಇಂದಿನ ಸಮಾಜದಲ್ಲಿ.ಅವುಗಳ ಮಹತ್ವವೇ ತಿಳಿದಿರುವುದರಿಂದ, ಅವುಗಳನ್ನು ಪಡೆದಾದರೂ ಮಾಡಬೇಕಾದುದೇನು ? ಎಂಬ ಮನೋಭಾವನೆ ರೂಢಿಸಿಕೊಂಡಿದ್ದಾರೆ ನಮ್ಮ ಜನ– ನಾವೂ.

ನೂರೆಂಬತ್ತು ಪುಟಗಳ ಈ ಕಾದಂಬರಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಮೊದಲೆರಡು ಭಾಗಗಳು ಮುಖ್ಯ "ಕಥೆ"ಯ ಬಗ್ಗೆ ಏನನ್ನೂ ಹೇಳದಿದ್ದರೂ ಓದುಗನು ಮುಂದಿನದನ್ನು ಹೆಚ್ಚು ಕುತೂಹಲದಿಂದ ಓದಿಕೊಳ್ಳಲು ಅಗುವಂತೆ ಅನುವು ಮಾಡಿಕೊಟ್ಟಿದ್ದಾರೆ. ಹಾಗೇ ಈ ಭಾಗಗಳಲ್ಲಿ ಇಂದಿನ ದೇವಸ್ಥಾನಗಳ ಸ್ಥಿತಿಗಳನ್ನೂ ಶಾಸನಗಳೇ ಮೊದಲಾದ ಅಮೂಲ್ಯ ವಸ್ತುಗಳಿಗೆ ಒದಗಿರುವ ದುರ್ಗತಿಯನ್ನು ಸ್ಥೂಲವಾಗಿ ಚಿತ್ರಿಸಿ, ಹೇಗೆ ದೇವಸ್ಥಾನಗಳನ್ನು ತಮ್ಮ ಕೈವಶಮಾಡಿಕೊಳ್ಳಲು ಒಂದು ಕೋಮಿನವರು ಮತ್ತೊಂದು ಕೋಮಿನವರಿಗೆ ಮೋಸವೆಸಗುತ್ತಾರೆ. ವಿಗ್ರಹಗಳ ಅಪಹರಣದಲ್ಲಿ 'ಶ್ಯಾನುಭೋಗ ಚಿಕ್ಕಣ್ಣಯ್ಯ' ನಂತಹವರ ವ್ಯಕ್ತಿತ್ವಗಳ ಪಾತ್ರ ಎಂತಹದಾಗಿದೆ ಎಂಬುದು ಪರಿಚಯವಾಗುವುದು.

ಕಥೆಯ ಎರಡು ಭಾಗಗಳು ಹೀಗೆ ದೇವರ ಸೊತ್ತನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನ ಪಟ್ಟವರು ಎಷ್ಟರ ಮಟ್ಟಿಗೆ ತಮ್ಮ ಕಾರ್ಯದಲ್ಲಿ ಜಯ ಹೊಂದುವರು, ಎಂತಹ ಪರ್ಯವಸಾನವನ್ನು ಅವರು ಕಾಣಬೇಕಾಗುವುದು ಎಂಬುದು ಬಹು ಪರಿಣಾಮಕಾರಿಯಾಗುವಂತೆ ಮಾಡಿದ್ದಾರೆ-ಕಥಾಭಾಗ ಚಿಕ್ಕದಾದರೂ.

"ನವಿಷಂ ವಿಷಮಿತ್ಯಾಹುರ್ದೇವಸ್ವಂ ವಿಷಮುಚ್ಯತೇ
ವಿಷಮೇಕಾಕಿನಂ ಹಂತಿ ದೇವಸ್ವಂ ಪುತ್ರ ಪೌತ್ರಿಕಂ ॥
ಬ್ರಹ್ಮಸ್ವ ಪರಿಪುಷ್ಟಾನಿ ವಾಹನಾಗಿ ಬಲಾನಿಚ
ಯುದ್ಧಕಾಲೇ ವಿಶೀರ್ಯಂತೇ ಸೈಕತಾಸ್ಸೇತವೋ ಯಥಾ ।

(ವಿಷವನ್ನು ವಿಷವೆನ್ನಬಾರದು: ದೇವಸ್ವವೇ ವಿಷ. ವಿಷ ಒಬ್ಬನನ್ನು ಕೊಂದರೆ, ದೇವಸ್ವ ಪುತ್ರ ಪೌತ್ರಿಕರನ್ನೂ ಕೊಲ್ಲುತ್ತದೆ.

ಬ್ರಹ್ಮಸ್ವದಿಂದ ಪುಷ್ಟವಾದ ವಾಹನ, ಬಲ ಮೊದಲಾದ ಸಕಲ ಸಂಪತ್ತು ಯುದ್ಧ ಕಾಲದಲ್ಲಿ, ಮರಳಿನಲ್ಲಿ ಸೇತುವೆಯ ಹಾಗೆ ವಿನಾಶವಾಗುತ್ತವೆ.)

ಎಂಬುದನ್ನು ಸೋದಹರಣವಾಗಿ ಸಮರ್ಥಿಸಿದ್ದಾರೆ.

ದೇವಸ್ಥಾನವೊಂದರ ಒಡೆತನಕ್ಕಾಗಿ ಪ್ರಯತ್ನಪಟ್ಟ ಶ್ರೀವೈಷ್ಣವರು ಹಾಗೂ ಸ್ಮಾರ್ತರುಗಳ ಗುಂಪಿನ ತಿಕ್ಕಾಟದಲ್ಲಿ ಅವಕಾಶ ಪಡೆದು ತನ್ನ ಅಭ್ಯುದಯಕ್ಕಾಗಿ ಪ್ರಯತ್ನ ಪಟ್ಟು ಆ ತೀರದ ದಾಹದ ತೀವ್ರತೆಯನ್ನು ಹೆಚ್ಚಿಸಿಕೊಂಡು ಅದರಿಂದಾಗಿಯೇ ಅಧಃ ಪತನಕ್ಕಿಳಿಯುತ್ತಾನೆ "ಕಥಾ ನಾಯಕ" ವೆಂಕಟಾಚಾರಿ. ಅವನ ದುರಾಸೆಯ ಮಿತಿ ಏನೆಂಬುದು ಪ್ರಥಮ ಪ್ರವೇಶದಲ್ಲೇ ಗೊತ್ತಾಗುವುದು. ಕೇವಲ ದ್ರವ್ಯದಾಹವೇ ಅಲ್ಲ ಅವನನ್ನು ಸುತ್ತಿದ್ದುದು, ಸ್ತ್ರೀ ದಾಹವೂ. ಒಂದು ಇನ್ನೊಂದಕ್ಕೆ ನಿಮಿತ್ತ. ಷೇಕ್ಸ್‌ಪಿಯರ್‌ನ ದುರಂತ ನಾಟಕಗಳಲ್ಲಿನ ನಾಯಕರ ಅಂತವು ಅವರ "ಗುಣ ವಿಶೇಷ" ಗಳಿಂದಲೇ ಹೇಗೆ ರೂಪುಗೊಳ್ಳುವುದನ್ನು ನಾವು ಕಾಣುವೆವೋ ಹಾಗೆಯೇ ಇಲ್ಲಿ ವೆಂಕಟಾಚಾರಿಯ ಅವನತಿ ಅತಿಯಾದ ದಾಹದಿಂದಾಗಿ ಆಗುವುದನ್ನು ಅರಿಯುವೆವು.

ದೈವವು ತನ್ನ ಅಸ್ತಿತ್ವದ ಪ್ರಮಾಣಕ್ಕೆ ತಾನೇ ವೆಂಕಟಾಚಾರಿಗೆ ಒದಗಿಸಿದ ಅಂತ್ಯವೋ. ರಂಗಾಚಾರಿಯ (ದೇವಸ್ಥಾನದ ಪಾರುಪತ್ತೆಗಾರರು) ಧರ್ಮ ಪತ್ನಿಯು ತಮಗಾದ ಅವಮಾನ ಕಳ್ಳತನದ ಅಪವಾದದಿಂದಾಗಿ ಶಪಿಸಲ್ಪಟ್ಟ್ಯೋ, ಅವನ ಅದೃಷ್ಟವೇ ಹಾಗೋ, ಅಂತೂ ಕಾರಣವೇನಾದರೂ ಅವನ (ವೆಂಕಟಾಚಾರಿಯ) ಅಂತ್ಯ ಸ್ವಯಂಕೃತಾಪರಾಧದ ಪರಿಣಾಮ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಹಾವಿನ ವಿಷದ ಪರಿಣಾಮ ಹಾವು ಕಚ್ಚಿದ ಒಬ್ಬನಿಗೇ ಆದರೂ. ದೇವ ಸೊತ್ತನ್ನು ಅಪಹರಿಸಿದವನು ಅದರ ಪ್ರತೀಕಾರವಾಗಿ ಉಂಟಾದ ಪರಿಣಾಮ ತಾನು ಅನುಭವಿಸುವುದಲ್ಲದೆ ಪುತ್ರ ಪೌತ್ರಾದಿಗಳೂ ಅವನ್ನು ಅನುಭವಿಸುವಂತಾಗಲು ಕಾರಣಪುರುಷನಾಗುತ್ತಾನೆ ಎಂಬ ಸಂಗತಿ ತಂದೆಯ ಅಪರಾಧದ ವಿಷಯದಲ್ಲಿ ಭಾಗಿಗಳಲ್ಲದ ಮಗ ನರಸಿಂಹಾಚಾರಿ ಹಾಗೂ ಅಳಸಿಂಗಾಚಾರಿಯ ದಾರುಣವಾದ ಜೀವನ ನಮಗೆ ಮನವರಿಕೆ ಮಾಡಿಕೊಡುತ್ತದೆ.

ನಮಗೆ ಪಾಪ ಪುಣ್ಯಗಳ ಪ್ರತಿಫಲದ ಕಲ್ಪನೆ ಏನೇ ಆಗಿದ್ದಿರಲಿ, ಅದೃಷ್ಟ, ಪ್ರಾಚೀನಕರ್ಮ ಎನ್ನುವುದು ಎಷ್ಟೇ ಸೀಮಿತ ಸಂಗತಿ ಎಂದು ಭಾವಿಸಿರಲಿ, ವೆಂಕಟಾಚಾರಿ – ನರಸಿಂಹಾಚಾರಿ – ಅಳಸಿಂಗಾಚಾರಿಗಳ ಜೀವನವು ಇದರ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಅಳಸಿಂಗಾಚಾರಿ (ಎಲ್ಲ ದೃಷ್ಟಿಯಿಂದಲೂ ನಿರ್ದೋಷಿಯಾಗಿ, ಸ್ವಭಾವಸಹಜದಿಂದಲೇ ನಿಷ್ಕಳಂಕ ವ್ಯಕ್ತಿ) ಯ ಸ್ಥಿತಿಯನ್ನು ವರ್ಣಿಸುತ್ತಾ "ಅವರ ಮೈಯನ್ನು ವ್ಯಾಪಿಸಿದ ತೊನ್ನುರೋಗ, ಮುಖವನ್ನೂ ವ್ಯಾಪಿಸಿ, ಹುಬ್ಬುಗಳೆಲ್ಲವೂ ಬಿಳಿದಾಗಿಹೋಗಿ, ಬೋಳಾದ ತಲೆಯ ಮೇಲೂ ಅಲ್ಲಲ್ಲಿ ತೊನ್ನಿನ ಮಚ್ಚೆ ಮೂಡಿ, ಅವರನ್ನು ನೋಡಿದರೂ ಭಯವಾಗುವಂತಿತ್ತು" ಎಂದಿರುವ ಸಾಲುಗಳು ಆರೋಗಿಯ ವಿಷಯದಲ್ಲಿ ಸಾಮಾನ್ಯವಾಗಿ ಎಂಥವನಾದರೂ ಅನುಕಂಪ ತೋರಿಸಲು ಕಾರಣವಾಗುವಂತಿದೆ. ಹಾಗಿದ್ದರೂ 'ಕಥೆ'ಯನ್ನು ಸಂಪೂರ್ಣ ಅರಿತವರು ಆರೋಗದ ಹಿನ್ನೆಲೆಯಾಗಿರುವ ಕಾರಣ ತಿಳಿದವರಾಗಿ ಕೊನೆಯಲ್ಲಿ ಇವನ ಸ್ಥಿತಿಗಾಗಿ ಮರುಗಿ

ಸಹಾನುಭೂತಿಪರವಾಗುವುದಿರಲಿ, ಅವನ ಸ್ಥಿತಿಯೇ ಸರಿ ಎನ್ನುವಷ್ಟು ನಿಷ್ಕರುಣಿಗಳಾದರೂ ಆಶ್ಚರ್ಯವೇನಿಲ್ಲ. ಹಾಗಿದೆ ದೈವದ ಶಾಪ - ದೇವರಸೊತ್ತನ್ನು ಅಪಹರಿಸಿ, ಮರಳಿನಲ್ಲಿ ಸೇತುವೆ ಕಟ್ಟಲು ಪ್ರಯತ್ನಿಸುವವರ ಮೇಲೆ. ಹಾಗಿದೆ ಅದನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವ ಲೇಖಕರ ಶೈಲಿ. ಈ ವಿಷಯದಲ್ಲಿ ಜನಜಾಗೃತಿ ಮೂಡಿಸಲು ಯತ್ನಿಸಿರುವ ಲೇಖಕರ ಕಾರ್ಯ ಶ್ಲಾಘ್ಯ.

ಎಚ್ಚರಿಕೆ! ವಿಷ ಒಬ್ಬನನ್ನು ಕೊಂದರೆ ದೇವಸ್ವ ಪುತ್ರ ಪೌತ್ರಿಕರನ್ನೂ ಬಿಡುವುದಿಲ್ಲ. ದೇವಸ್ವವನ್ನು ಜೀರ್ಣಿಸಿಕೊಳ್ಳುವವರ ಯತ್ನ ವೆಂಕಟಾಚಾರಿಯ ಬಾಳಿನಂತೆ ಮರಳಿನಲ್ಲಿ ಕಟ್ಟುವ ಸೇತುವೆಯಂತೆ ಅಸಫಲಕಾರಿ ಎಂಬುದು ಮರೆಯಬಾರದ ಸಂಗತಿ.

ಆಕಸ್ಮಿಕ, ಅಪರಾಧಿ, ಪರಿಣಾಮ

ಎಂ. ರಾಮಕೃಷ್ಣ ಬಿ. ಎಸ್‌ಸಿ., ಬಿ. ಇ. ಎಂ. ಎ

ಕನ್ನಡ ಕಾದಂಬರಿ ಪ್ರಪಂಚವಲ್ಲಿ ಎರಡನೇ ಮಹಾಯುದ್ಧ ಮತ್ತು ನಂತರದ ಕಾಲ ಗಮನಾರ್ಹವಾದುದು. ಅದೇ ಸಂಸುಮಾರಿನಲ್ಲಿ 'ಪ್ರಗತಿಶೀಲ' ಸಾಹಿತಿಗಳೆಂಬ ನುಡಿಗಟ್ಟು ಕೇಳಲಾರಂಭಿಸಿ ಜನ ಸಾಮಾನ್ಯರ ದುಃಖದುರಿತಗಳನ್ನೂ ಆಸ್ಥೆಯಿಂದ ಚಿತ್ರಿಸಬೇಕೆಂಬ ನಿರ್ಧಾರದಿಂದ ಹೊರಟದ್ದುಂಟು. 'ಪ್ರಗತಿಶೀಲ'ವೆಂದು ಆ ಕಾಲಕ್ಕೆ ಹಾಗೆಂದು ಕೊಂಡರೂ ಕಾಲ ಕಳೆದಂತೆ ತಮಗೊಂದು ತಲೆಪಟ್ಟಿ ಬೇಡವೆಂದು ಹೇಳಿ 'ಕಾದಂಬರಿಕಾರ' ಎಂಬ ಸಾಮಾನ್ಯ ನುಡಿಯೇ ಸಾಕೆಂದು ಹೊರಟವರು ವಿರಳರು. ಅಂತಹ ವಿರಳರಲ್ಲಿ ತ.ರಾ.ಸು. ಅವರೂ ಒಬ್ಬರೆಂದರೆ ತಪ್ಪಾಗಲಾರದು. ಕನ್ನಡಕೆ ಅನೇಕ ಉತ್ಕೃಷ್ಟ ಕಾದಂಬರಿಗಳನ್ನು ಕೊಟ್ಟು ಅವೆಲ್ಲಕ್ಕೂ ಮಿಗಿಲಾದ ಕೃತಿಯೊಂದನು ಕೊಡಬಹುದಾದ ಸಾಮರ್ಥ್ಯ ಪಡೆದಿರುವ ತ.ರಾ.ಸು. ಅವರು ಹೆಸರಿಗೆ ತಕ್ಕಂತೆ ತ್ರಾಸು ಹಿಡಿದು ತೂಗಿ ಬರೆಯುವುದೂ, ಕೆಲವೊಮ್ಮೆ 0–0=0 ಮುಂತಾದ ಕತೆಗಳಲ್ಲಿ ಓದುಗರ ಬುದ್ಧಿಗೆ ತ್ರಾಸ ಕೊಡುವುದೂ ಉಂಟು. ಅಂತೂ ಕಾದಂಬರಿಗೂ ಇವರಿಗೂ ಬಿಡಲಾಗದ ನಂಟು.

ಪ್ರಸ್ತುತ, ಮೂರು ಭಾಗವಾಗಿ ಪ್ರಕಟವಾಗಿರುವ ಕಾದಂಬರಿ – ಆಕಸ್ಮಿಕ– ಅಪರಾಧಿ – ಪರಿಣಾಮ"– ಯಲ್ಲಿ ಬಯಕೆ – ಭೀತಿಗಳೆರಡನ್ನೂ ಉಳ್ಳ ನವಯುವಕ ನೊಬ್ಬನ ಮನಸ್ಸನ್ನು ವಿಶ್ಲೇಷಿಸಿರುವುದು ಕಾಣುತ್ತವೆ. ಮಾನವನ ಬಯಕೆ ಎಂದೆಂದಿಗೂ ದುರ್ದಮನೀಯ, ಆದರೆ ಭೀತಿಯೂ ಅಷ್ಟೇ ಪ್ರಬಲ. ಎರಡೂ ವಿರುದ್ಧ ದಿಕ್ಕಿನತ್ತ ಎಳೆಯುವಾಗ ದೇಹ ಜುರ್ಝರಿತವಾಗುವುದೊಂದೇ ಗತಿ. ಧರ್ಮದ ಭೀತಿ ಹೇಡಿತನದ ಭೀತಿ ಯಾವುದೇ ಆಗಿರಬಹುದು ಅದು ಮಾನವನ ಪರಮ ಶತ್ರುವಾಗು ವುದು ಪ್ರಸಂಗೋಚಿತವಾಗಿ ಮಾತ್ರ. ಎಲ್ಲ ಕಾಲದಲ್ಲಿಯೂ ನಿರ್ಭೀತಿ ಶ್ರೇಯಸ್ಸಿಗೆ ದಾರಿ ಎನ್ನಲಾಗದು. ಅಂತೆಯೇ ಇಲ್ಲಿ ಬರುವ ಯುವಕನ ಭೀತಿಯನ್ನು ಧಾರ್ಮಿಕ ವೆಂದೇ ಹೇಳ ಬೇಕಾಗುತ್ತದೆ. ಅವನು ಬಯಸಿದ್ದು ಸಮಾಜಕ್ಕೆ ದ್ರೋಹಕಾರಿಯಾಗು ವಂತಹುದು. ಅದಕ್ಕಿಂತಲೂ ಹೆಚ್ಚಿನದನ್ನು ಅವನು ಬಯಸಿದ್ದರೆ ಆಗಮಾತ್ರ ದಿಟ್ಟ ತನದ ಮಂಕಾಗುತ್ತಿತ್ತು. ಆದ್ದರಿಂದ ಅವನು ಭೀತಿಯಿಂದ ಮುಕ್ತನಾಗಿ ಲೈಂಗಿಕ ಸ್ವಾತಂತ್ರ್ಯ ಪಡೆಸಿದ್ದರೆ ಅದೇನೂ ಶ್ಲಾಘನೀಯವಾಗುತ್ತಿರಲಿಲ್ಲ. ಕಾದಂಬರಿಯಲ್ಲಿ ಸಮಸ್ಯೆಯನ್ನು ಬಿಡಿಸಲೆತ್ನಿಸಿದ್ದರೂ ಆ ಕಾರ್ಯ ಇನ್ನೂ ಉತ್ತಮವಾಗಿ ನಡೆಯ ಬಹುದಿತ್ತು ಅನಿಸಿ ಓದುಗರಲ್ಲಿ ಸ್ವಲ್ಪ ನಿರಾಶೆಯನ್ನು ಹುಟ್ಟಿಸುತ್ತದೆ.

ಕಾದಂಬರಿಕಾರರು ಮುನ್ನುಡಿಯಲ್ಲಿ ಹೇಳಿರುವ ಕಳಕಳಿಯ ಮಾತುಗಳು ಮಾತ್ರ ಎಂದಿಗೂ ಸತ್ಯವೇ. ಮಾನವ ಸ್ವಭಾವ ಎಂದಿನವರೆಗೆ ಬದಲಾಗುವುದಿಲ್ಲವೋ ಮನುಷ್ಯ

ನಿಗೆ ಹಸಿವು ತೃಷೆ ಬಯಕೆಗಳು ಎಂದಿನವರೆಗೆ ಹಿಂಗುವುದಿಲ್ಲವೋ ಅಲ್ಲಿಯವರೆಗೆ ಅವನನ್ನು ಸುತ್ತಿರುವ ಜಾಲಬಂಧನ, ಅವಶ್ಯಕತೆಗಳು ಅನಿವಾರ್ಯ. ಅಂತಹ ಅನಿವಾರ್ಯ ಅವಶ್ಯಕತೆಗಳಲ್ಲಿ ಧರ್ಮವೂ ಒಂದು. ಧರ್ಮವೆನ್ನುವುದು ಮನುಷ್ಯರ ಕಾಲು ಬೇಡಿ ಎನ್ನುವುದು ಅಪೂರ್ಣದೃಷ್ಟಿಯ ಹಸಿ ಭಾವನೆಯ ಮಾತಾಗುತ್ತದೆ. ಬಹುಪಾಲು ಹೇಳಿಕೆಗಳಲ್ಲಿ ಅವು ಧರ್ಮದ ಬಗ್ಗೆ ತಾಳಿರುವ ಧೋರಣೆಯೇ ದೋಷಪೂರ್ಣವಾದುದು. ಧರ್ಮವೆಂದರೆ ಯಾವುದೋ ಆಚಾರಗಳ ಕಂತೆ, ಮಡಿ ಮೈಲಿಗೆ ವ್ಯವಹಾರ, ಕುರುಡು ನಂಬಿಕೆ ಸಂಪ್ರದಾಯಗಳ ಕಟ್ಟಲೆ ಮುಂತಾಗಿ ಭಾವಿಸಿರುವ ಬುದ್ಧಿಗೆ ಏನೆನ್ನೋಣ. ತಮ್ಮಲ್ಲೇ ತಪ್ಪನ್ನಿಟ್ಟುಕೊಂಡು ಸಮಾಜವನ್ನೇ ದೂರುವುದು ಇಂದಿನ ವಿದ್ಯಾವಂತರ ವಿಶೇಷ ಮಹತ್ವಪೂರ್ಣ ಅಂಶವಾಗಿದೆ. ವ್ಯಷ್ಟಿ ಕೆಡದೆ ಸಮಷ್ಟಿ ಹೇಗೆ ಕೆಟ್ಟೀತು. ಧರ್ಮವೆಂದರೆ ಗುಡಿಗುಡಾರ, ಮಂತ್ರ ತಂತ್ರ ಕಟ್ಟು ಕಟ್ಟಲೆ ಅಲ್ಲ, ಅದು ಮನುಷ್ಯರು ನೆಮ್ಮದಿಯಿಂದ ಸಮಾಜದಲ್ಲಿ ಬಾಳಲು ಅತ್ಯಂತ ಅವಶ್ಯಕವಾದ ಅಂಶ. ವ್ಯಕ್ತಿ ತನ್ನ ವಿಕಾಸವನ್ನು ಸಮಾಜದ ವಿಕಾಸಕ್ಕೆ ಧಕ್ಕೆ ಬಾರದಂತೆ ಮಾಡಿಕೊಳ್ಳಲು ಬೇಕಾದ ಅನಿವಾರ್ಯ ವಸ್ತು ವಿಶೇಷ – ಈ ಧರ್ಮ. ಅದೇ ಶೀಲ.

ಮುನ್ನುಡಿಯಲ್ಲಿ "ಧರ್ಮದ ಶಾಶ್ವತವಾದ ತಳಹದಿಯನ್ನು ಕಳೆದುಕೊಂಡು ಕೇವಲ ಭೋಗ ಮುಖವನ್ನು ಮಾತ್ರ ಉಳಿಸಿಕೊಂಡು ಬೆಳೆಯುತ್ತಿರುವ ಇಂದಿನ ನಾಗರಿಕತೆ ತನ್ನ ಆರಾಧಕನಾದ ಮಾನವನಿಗೆ ಮಿತಿಯಲ್ಲಿ ತೃಪ್ತಿಯನ್ನು ಕಲಿಸದೆ ನಿತ್ಯ ಅತೃಪ್ತಿಯೇ ಪ್ರಗತಿಯ ಹೆಗ್ಗುರುತು ಎಂಬ ಪಾಠವನ್ನು ಕಲಿಸಿದೆ" ಎಂದಿದ್ದಾರೆ. ಮಾನವ ತಾನು ತನ್ನ ಹತೋಟಿಯನ್ನು ಕಳೆದುಕೊಂಡು ಸೌಲಭ್ಯ ಸವಲತ್ತುಗಳನ್ನು ದೂರಿದರೆ ಯಾರೇನು ಮಾಡುವರು. ನಾಗರಿಕತೆ ತನಗೆ ತಾನೇ ನಿಂದ್ಯವಲ್ಲ. ಬಳಸಿಕೊಳ್ಳುವವನ ವಿವೇಚನೆಯೇ ಹದಗೆಟ್ಟಿದೆ. ಬೇಕಾದದ್ದು ಒಳಿತು ಕೆಡುಕುಗಳ ಕೂಲಂಕಷ ವಿವೇಚನೆ, ತಲಸ್ಪರ್ಶಿ ವಿಮರ್ಶೆ, ಆ ವಿಮರ್ಶೆ ದ್ವಿಮುಖವಾಗಿ ತನಗೊಂದು ಇತರರಿಗೊಂದು ಆಗಿರುವುದೇ ಗೊಂದಲಕ್ಕೆ ಕಾರಣ.

"ಭೋಗ ಪರಾಯಣವಾದ ನಾಗರಿಕತೆಯನ್ನೇ ಸಂಸ್ಕೃತಿ ಎಂದು ಭ್ರಮಿಸಿದುದರಿಂದ ಮಾನವನ ಬಾಳಿನಲ್ಲಿ ದಿನದಿನವೂ ಎಂಥ ದುರಂತ ನಡೆಯುತ್ತಿದೆ ಎಂಬುದು ಕಾಣಬರುತ್ತದೆ" ಕಾದಂಬರಿಕಾರರ ಈ ಮಾತು ಸತ್ಯವಾದರೂ ನಾಗರಿಕತೆ ಮತ್ತು ಸಂಸ್ಕೃತಿ ಎರಡೂ ಬೇರೆ ಬೇರೆಯಾಗಿ ಮುಂದುವರಿಯಲಾರವು. ಅನಾಗರಿಕ ಜನಾಂಗವನ್ನು ಸುಸಂಸ್ಕೃತರೆಂದು ಕರೆಯುವುದು ಹೇಗೆ. ನಾಗರಿಕವೆಂದರೆ ಉಡುಪು ವಾಹನಗಳ ಪರಿಷ್ಕಾರವೆಂದು ಮಾತ್ರವಾಗಬಾರದು. ಬಾಹ್ಯ ಆಚರಣೆಗಳಿಗೂ ಅಂತರಂಗಿಕ ಆಚಾರಗಳಿಗೂ ಯಾವುದೋ ಸಂಬಂಧವಿದ್ದೇ ಇರುತ್ತದೆ. ಪೃಥಕ್ಕರಣ ಯಾವಾಗಲೂ ಸಾಧುವೇನಲ್ಲ. ಕೈ ಕೈಹಿಡಿದು ನಡೆಯದಿದ್ದರೆ ಮಾನವನ ಪ್ರಗತಿ ಏಡಿಯ ನಡಿಗೆ ಆದೀತು.

"ಈ ಉದ್ದೇಶ ಕೃತಿ ರಚನೆಯಲ್ಲಿ ಎಷ್ಟರಮಟ್ಟಿಗೆ ಸಫಲವಾಗಿದೆ, ಸಾರ್ಥಕವಾಗಿದೆ ಎಂಬುದನ್ನು ವಾಚಕ ಮಿತ್ರರು ಹೇಳಬೇಕು" ಎಂದಿರುವುದು ವಿಷಯಕ್ಕೆ ಎತ್ತಿದ ಬಾವುಟವಾಗಿದೆ. ಸಮಸ್ಯಾತ್ಮಕವಾಗಲಿ ವೈಚಾರಿಕವೆನ್ನಲಿ ಕಲಾದೃಷ್ಟಿ ಮಕಾಂದರೆ ಫಲವಿಲ್ಲ. ಯಾವುದೇ ಸಮಸ್ಯೆಯನ್ನು ಬಿಡಿಸುವುದೇ ಕಲೆಯ ಸಾರವಲ್ಲ. ಆಹ್ಲಾದವೇ ಕಲೆಯ ತಿರುಳು. ಆದರೆ ಅದರಿಂದ 'ಶಿವೇತರಕ್ಷತಿ' ಆಗಬೇಕೆನ್ನುವುದು ಅಪರಾಧವಲ್ಲ, ಮನುಷ್ಯ ಏನೇ ಮಾಡಿದರೂ ಏನಾದರೂ ಪ್ರಯೋಜನದ ಕಡೆ ದೃಷ್ಟಿಯಿಟ್ಟಿರುತ್ತಾರೆ. ಕಾದಂಬರಿಯಾದರೂ ಅಷ್ಟೆ. 'ಪ್ರಯೋಜನಮನುದ್ದಿಶ್ಯ ನ ಮಂದೋऽಪಿ ಪ್ರವರ್ತತೇ' ಎಂಬ ನುಡಿ ತ್ರಿಕಾಲಸತ್ಯ. ಆಟದ ಮೋಹದಲ್ಲಿ ತನಗರಿವಿಲ್ಲದಂತೆಯೇ ದೇಹ ದೃಢವಾಗುವುದು ಈ ತೆರನ ಕಾರ್ಯ. ಬರಿಯ ವ್ಯಾಯಾಮ ನೀರಸ. ಸಮಸ್ಯೆಯನ್ನೇ ಚರ್ಚಿಸುವುದು ತತ್ವ ಶಾಸ್ತ್ರದಲ್ಲಿ, ಆದರ ಯಾವ ಸಮಸ್ಯೆಯನ್ನು ಎತ್ತಿಕೊಂಡರೂ ಕೃತಿಕಾರ ನೂರಕ್ಕೆ ನೂರರಷ್ಟು ಜಯಶಾಲಿಯಾಗುವನೆನ್ನುವುದು ಕಷ್ಟವೇ. ಬ್ರಹ್ಮ ಸೃಷ್ಟಿಯೇ ಪರಿಪೂರ್ಣವಲ್ಲವೆನ್ನುವಾಗ ಸಾಹಿತಿ ಬ್ರಹ್ಮಸೃಷ್ಟಿ ಹೇಗೆ ಪರಿಪೂರ್ಣವಾದೀತು. ಕೆಲವು ಅಂಶಗಳನ್ನು ಕೈಬಿಟ್ಟು ಕಲಾಪರಿಧಿಯಲ್ಲಿಟ್ಟು ಪರೀಕ್ಷಿಸಿದರೆ ಬೆಲೆ ತಿಳಿಯುವುದು ಕಷ್ಟವೇನಲ್ಲ. ಬಲ್ಲವನೇ ಬಲ್ಲ.

ಈ ನಿಟ್ಟಿನಿಂದ ನೋಡಿದಾಗ ತಿಳಿಯುವ ಅಂಶವೆಂದರೆ ಕಾದಂಬರಿ ಕೃತಿಕಾರರ ಭವ್ಯ ಆಶಯವನ್ನು ಸಂಪೂರ್ಣವಾಗಿ ಈಡೇರಿಸಲು ಇನ್ನಷ್ಟು ಕಲಾತ್ಮಕವಾಗಿ ಬರಬೇಕಾಗಿತ್ತು ಎನ್ನುವುದು. ಕಲಾಕೃತಿಯಲ್ಲಿ ಸಾವಯವ ಸಮಗ್ರೀಕರಣವೆನ್ನುವುದು ಬಹು ಮುಖ್ಯ ಅಂಶ. ಪ್ರಾಚೀನ ಮಹಾಕವಿಗಳಾದ ವ್ಯಾಸ, ವಾಲ್ಮೀಕಿ, ಹೋಮರ್ ಮುಂತಾದವರು ಆ ಗುಣವನ್ನು ಹೊಂದಿದ್ದುದರಿಂದಲೇ ತಮ್ಮ ಸುತ್ತಲೂ ಹಬ್ಬಿ ಹರಡಿದ್ದ ಅಸಂಖ್ಯ ಜಾನಪದ ಕತೆಗಳನ್ನೂ, ನಂಬಿಕೆ ನಡೆವಳಿಕೆಗಳನ್ನೂ ಮಣ್ಣಿನ ಗುಣವನ್ನೂ ತಿಳಿದು ಸಮೀಕರಿಸಿ, ಸಮನ್ವಯ ಮಾಡಿ, ಸುಸಂಬದ್ಧಗೊಳಿಸಿ ಕಲಾಕೃತಿಯನ್ನಾಗಿ ಮಾಡಿ ನೀಡಿದರು. ಪಾಯಸದಲ್ಲಿ ಹಾಕುವ ಪದಾರ್ಥಗಳು ಒಂದರೊಡನೊಂದು ಬೆರೆತು ಹೊಸದೊಂದು ರುಚಿ ನೀಡುವುದು ಅವಶ್ಯಕ. ಕಾಫಿ ಮಾಡಿದಾಗ ನೀರು ಬೇರೆ ತರಿ ಬೇರೆ ಆದರೆ 'ಒಡೆಯಿತು' ಎಂದು ಕುಡಿಯರು. ಕಾದಂಬರಿ ಖಂಡ ರೂಪದಲ್ಲಿ ಬಂದರೆ ದೋಷವಿಲ್ಲ. ಅದರಲ್ಲಿ ಬರುವ ವಿವಿಧ ವ್ಯಕ್ತಿಗಳ ಜೀವನ ಚರಿತ್ರೆ, ಘಟನೆಗಳು, ಸನ್ನಿವೇಶಗಳು ಎಲ್ಲವೂ ಸ್ವತಂತ್ರ ಘಟಕಗಳಾಗಿ ನಿಲ್ಲದೆ, ಕಲಾತ್ಮಕವಾಗಿ, ಹಾಸು ಹೊಕ್ಕಾಗಿ ಬಂದರೇ ಚೆನ್ನ. ಬದಲಾಗಿ ಮುದ್ದೆ ಮುದ್ದೆಯಾಗಿ, ಗುಪ್ಪೆಯಾಗಿ ಕಾಣಿಸಿಕೊಳ್ಳುವುದು ಬಟ್ಟೆಯ ನಯಗಾರಿಕೆಗೆ ಕುಂದು. ಅದಕ್ಕಾಗಿಯೇ ತಿಂಡಿ ತಯಾರಿಸುವವರು ಪದಾರ್ಥಗಳನ್ನು ಬೆರೆಸಿ ಯಾವುದೋ ಒಂದು ಹದ ಬರುವವರೆಗೆ 'ಮಿದಿದು' ಗುದ್ದುತ್ತಾರೆ. ಇಲ್ಲವಾದರೆ ಗಾತ್ರಕ್ಕೆ ತಕ್ಕ ಸಮಾನ ರುಚಿ ಬರದೆ ಹರಡಿಕೊಂಡಂತಾಗುತ್ತದೆ. ಕಾದಂಬರಿಯಲ್ಲಿಯೂ ಅನೇಕ ಪಾತ್ರಗಳು ಬರುತ್ತವೆ. ಅವರವರ ಜೀವನ ಚರಿತ್ರೆ ಪ್ರಸಂಗೋಚಿತವಾಗಿ, ಸೂಕ್ಷ್ಮವಾಗಿ, ಸಿಂಹಾವಲೋಕನವೆಂಬಂತೆ

ದಕ್ಕೆ ತಕ್ಕಷ್ಟು ಬಂದು ಉಳಿದವನ್ನು ಓದುಗರಿಗೇ ಬಿಡಬಹುದು, “ಅಪರಾಧಿ” ಭಾಗದಲ್ಲಿ ಬರುವ ‘ಇಂದಿರೆಯ ಕನಸು’ ಅಂತಹ ಒಂದು ಘಟಕ. ‘ಪರಿಣಾಮ’ ದಲ್ಲಿ ಬರುವ ‘ಕ್ಲಾರಾಳ ಕತೆ’ ಇನ್ನೊಂದು. ಇವೆರಡೂ ಬೇರೆಯ ಸ್ವತಂತ್ರ ಪರಿಮಾಣವನ್ನು ಹೊಂದಿ ಕಲಾತ್ಮಕತೆಗೆ ಏಕಸೂತ್ರತೆಗೆ ಧಕ್ಕೆ ತಂದಿವೆ ಅನಿಸುತ್ತದೆ.

ಖಂಡ ಕಾದಂಬರಿಗಳನ್ನು ಪ್ರಕಟಿಸುವಾಗ ಗಮನಿಸಬೇಕಾದ ಅಂಶ ಪ್ರಕಟಣೆಯ ಕಾಲ ಮುಖ್ಯವಲ್ಲ. ಬರೆವಣಿಗೆ ಒಂದೇ ಸಿಟ್ಟಿಗೆ ಬರೆದು ಮುಗಿದಿದ್ದರೆ ಯಾವ ತೊಂದರೆಯೂ ಆಗದು. ಕೃತಿ ರಚನೆಯೇ ಬೇರೆ ಬೇರೆ ಸಮಯದಲ್ಲಿ ನಡೆದು ಮಧ್ಯೆ ಮಧ್ಯೆ ಬೇರಾವುದೋ ಸಂವಿಧಾನ ತಲೆ ಹೊಕ್ಕಿತೆಂದರೆ ಕಲೆಗೆ ಅಪಾಯವಾಗುವುದು ಖಂಡಿತ. ಹಿರಿಯ ಕಾದಂಬರಿಕಾರರ ಖಂಡ ಕಾದಂಬರಿಗಳಲ್ಲಿ ಪಾತ್ರವೊಂದರ ಹೆಸರೇ ಬದಲಾಗಿ ಹೋಗಿದ್ದ ಸಂಗತಿ ಇದಕ್ಕೆ ಪುಷ್ಟಿ ಕೊಡುತ್ತದೆ. ಕತೆಯ ಓಟ ಬೆಳೆಸಿಕೊಂಡು ಹೋದಂತೆಲ್ಲಾ ಓಡುತ್ತದೆ. ಆದರೆ ಪರಿಣಾಮ ರಮಣೀಯತ (Aftereffect) ಎನ್ನುವುದು ಅತಿ ಮುಖ್ಯ ಅಂಶ. ಉದ್ದೇಶ ಉತ್ತಮವಿದ್ದು ಅದರ ಸಾಧನೆ ಆಗದೆ ಹೋದಾಗ ಮತ್ತೂ ನೋವು. ಮನೋರಂಜನೆ ಒಂದೇ ಉದ್ದೇಶವಾದರೆ ಕೃತಿ ಬಹು ಕಾಲ ನಿಲ್ಲಲಾರದು. ನೊರೆಯ ಮೇಲಿನ ಕಾಮನಬಿಲ್ಲು ಮಾತ್ರ. ಉದ್ದೇಶ, ಧ್ಯೇಯ ಒಳ್ಳಿತಾದರೆ ಪ್ರಯೋಗದ ಬಗ್ಗೆ ಎರಡು ಮಾತಿರಲಾರದು, ಅದು ಬಿಟ್ಟು ಪ್ರಯೋಗಕ್ಕಾಗಿ ಪ್ರಯೋಗವೆಂದು ಹೊರಟರೆ ಯೋಗ ಕೆಟ್ಟು ವಿಯೋಗದಿಂದ ನರಳಬೇಕಾಗುತ್ತದೆ.

‘ಆಕಸ್ಮಿಕ – ಅಪರಾಧಿ’ ಎರಡೂ ಭಾಗಗಳು ರೈಲು ಪ್ರಯಾಣದಲ್ಲಿಯೇ ಮುಗಿಯುವುದು ಸಂವಿಧಾನ ಚಾತುರ್ಯಕ್ಕೆ ಸಾಕ್ಷಿ. ಕಾದಂಬರಿಕಾರರಿಗೆ ಪರಿಶ್ರಮ ವಿರುವುದು ತಿಳಿಯುತ್ತದೆ. ‘ಆಕಸ್ಮಿಕ’ ಹೆಸರೇ ಹೇಳುವಂತೆ ಆಕಸ್ಮಿಕ ಘಟನೆಗಳ ಸರಪಣಿ. ಜೋಗಿನಲ್ಲಿ ಕಾಣಸಿಕೊಂಡು ಮರೆಯಾದ, ಮರೆಯಾದರೂ ಮರೆಯಲಾಗದ ಸುಂದರಿ, ಇದ್ದಕ್ಕಿದ್ದಂತೆ ರೈಲಿನಲ್ಲಿ ಸಿಕ್ಕದ ಇಂದಿರೆ, ವ್ಯಾಸರಾಯ, ಭಯಂಕರಾಕಾರದ ರಾಜಗೋಪಾಲ್, ಪ್ರತಿಯೊಂದು ಘಟನೆಯೂ ಆಕಸ್ಮಿಕ. ಮೂರ್ತಿ ಹೋದದ್ದು ನೆಮ್ಮದಿಯ ಪ್ರವಾಸಕ್ಕೆ. ಆದುದು ಆಘಾತದ ಆಯಾಸ. ಮೊದಲೇ ದುರ್ಬಲ ಮನಸ್ಸಿನ ಮೂರ್ತಿಗೆ ಈ ಘಟನೆಗಳು ವಿಷ ಪ್ರಾಯವಾಗುತ್ತವೆ. ಬಯಕೆ – ಭೀತಿಗಳ ದ್ವಂದ್ವ ಮೂಡಿಸಿ ದುರ್ಬಲ ಮನಸ್ಸು ಮತ್ತಷ್ಟು ದುರ್ಬಲವಾಗುವಂತೆ ಮಾಡುತ್ತವೆ ಘಟನೆಗಳು ನಾಟಕೀಯವಾಯಿತು ಅನಿಸುತ್ತದೆ ಒಮ್ಮೊಮ್ಮೆ. ರೈಲಿನಲ್ಲಿ ನಡೆಯುವ ಈ ಘಟನೆಗಳು ಇತರರ ಗಮನಕ್ಕೆ ಬರಲಿಲ್ಲವೇ ಎನ್ನುವುದೂ ಸಂದೇಹಾಸ್ಪದವೇ. ಆದರೆ ನಿರ್ವಹಣೆ ಕಲಾತ್ಮಕವಾಗಿದೆ ಅಲ್ಲಲ್ಲಿ. ಮೂರ್ತಿಯ ಮನಸ್ಸಿನ ಹೊಯ್ದಾಟ ವಿವರವಾಗಿ ವಿಶದ ವಿಸದವಾಗಿ ಚಿತ್ರಿಸಲ್ಪಟ್ಟಿದೆ. ವ್ಯಾಸರಾಯನ ದೃಷ್ಟಿ, ಮೂರ್ತಿಯ ದೃಷ್ಟಿಗಳ ವ್ಯತ್ಯಾಸ ಎದ್ದು ಕಾಣುತ್ತವೆ. ಮೂರ್ತಿಯ ಬಯಕೆಯು ಕಾವು ಒಳಗೊಳಗೇ ಏರುತ್ತಾ ಹೋಗಿ ಅದಕ್ಕನುಕೂಲವಾಗುವಂತೆ ರಾಜಗೋಪಾಲ್

ಕಾಣಿಸಿಕೊಂಡುದು, ವ್ಯಾಸರಾಯ ಇಂದಿರೆಯನ್ನು ಮೂರ್ತಿಯ ಪಕ್ಕಕ್ಕೆ ಕೂರಿಸಿದುದು ಆಕಸ್ಮಿಕ. ಮೂರ್ತಿ ಬಯಸಿದ್ದೇನೋ ದಿಟ. ಆದರೆ ಇಂತಹ ಸಂದರ್ಭದಲಲ್ಲ. ಬಿಸಿ ತುಪ್ಪ ನುಂಗಲೂ ಆರ ಬಿಡಲೂ ಆರ ಎಂಬಂತಾಯಿತು. ಇಂದಿರೆಯತ್ತ ಯಾವ ಆಸೆಯಿಂದ ನೋಡಿದ್ದನೋ ಅದೇ ಆಸೆ ಬೆಂಕಿಯಾಗಿ ಆಕೆ ತೊಲಗಿದರೆ ಸಾಕು ಅನ್ನಿಸಿದುದು ಮೂರ್ತಿಯಂತಹ ಭೀತನಿಗೆ ಸಹಜ. ಇಲ್ಲಿ ಕಾದಂಬರಿಕಾರರು ಆವೇಶಕ್ಕೆ ಅನುವು ಕೊಡದೆ ಮೂರ್ತಿಯ ಮನಸ್ಸಿನ ತಳಮಳವನ್ನು ನಿರುದ್ವಿಗ್ನರಾಗಿ ಚಿತ್ರಿಸಿದ್ದಾರೆ. ಇಂತಹ ಕಾರ್ಯ ಕಷ್ಟವೆನ್ನುವುದು ಕಾದಂಬರಿಕಾರರಾದವರಿಗೆ ಗೊತ್ತು. ಸನ್ನಿವೇಶದ ಆವೇಶ ಕೃತಿಕಾರನ ಮೇಲೆ ಮಾಯೆ ಬೀಸಿ ಎತ್ತೆತ್ತಲೋ ತಿರುಗಿಸುವುದು ಅಸಾಧ್ಯವೇನಲ್ಲ. ಆದರೆ ಮೂರ್ತಿಯ ಮನೋಸ್ಥಿತಿಯ ಕಡೆ ಕೃತಿಕಾರರ ಕಣ್ಣಿರುವುದು ತಿಳಿಯುತ್ತದೆ. ಒಂದು ವಿಚಾರವೆಂದರೆ ಅಪರಿಚಿತನಾದ ಮೂರ್ತಿಯ ಮೇಲೆ ಅಷ್ಟು ಸಲೀಸಾಗಿ ಇಂದಿರೆಯ ಭಾರ ಹಾಕಿದುದೇ ಅಲ್ಲದೆ, ಚಾಕು ತೋರಿಸಿ ಕೊಲೆಯ ಬೆದರಿಕೆ ಹಾಕುವುದು ವ್ಯಾಸರಾಯನಿಗೆ ಸಾಧ್ಯವಾಗುವಂತಹುದೇ ಎನ್ನುವ ಅನುಮಾನ.

"ಅಪರಾಧಿ" ಭಾಗದ ಗಮನಾರ್ಹ ಅಂಶವೆಂದರೆ ಮೂರ್ತಿಯ ಮನಸ್ಸಿನ ಹೊಯ್ದಾಟ. ಮನಸ್ಸಿನ ದಾರದ ಸಿಕ್ಕನ್ನು ಬಿಡಿಸುತ್ತ ತೋರಿಸುತ್ತಾ ನಡೆಯುವ ಜಾಣ್ಮೆ ಮೆಚ್ಚಬೇಕಾದ್ದು. ಇಲ್ಲವಾದರೆ ವಾತಾವರಣ ಸನ್ನಿವೇಶಗಳನ್ನು ಮರೆತ ಉನ್ಮತ್ತ ಪ್ರಣಯಿಗಳ ಹುಚ್ಚುತನವನ್ನೇ ವರ್ಣಿಸಿ ಬಿಡಬಹುದಾದ ಅಪಾಯವಿತ್ತು. 'ಇಂದಿರೆಯ ಕನಸು' ಎಂಬ ಭಾಗವನ್ನು ಬಿಟ್ಟರೆ ಇಡೀ ಕಾದಂಬರಿಯ ಉದ್ದಕ್ಕೂ ಮೂರ್ತಿಯ ಒದ್ದಾಟ, ಅವನ ಬೇಸರ, ತಪ್ಪಿಸಿಕೊಳ್ಳಲೆತ್ನಿಸುವ ಅತೀವ ಆಸೆ, ಇಂದಿರೆಯ ಬಗ್ಗೆ ತಾಳಿದ ಜುಗುಪ್ಸೆ, ವ್ಯಾಸರಾಯನ ಮೇಲಿನ ಭಯ –ಕ್ರೋಧ, ರಾಜಗೋಪಾಲ್‌ನ ಹೆದರಿಕೆ, ಮಾನ ಮರ್ಯಾದೆಯ ಕಡೆ ಆಸ್ಥೆ, ತಂದೆ ತಾಯಿ, ಸ್ಥಾನಮಾನ ಸಮಾಜ ಮುಂತಾದ ಇತಿಮಿತಿಯ ಕಾರಣಗಳು ಎಲ್ಲವೂ ಚಿತ್ರಿತವಾಗಿವೆ. ಇದನ್ನು ಪರಿಗಣಿಸಿ ಹೇಳುವುದಾದರೆ ಮೂರು ಭಾಗಗಳಲ್ಲಿ ಈ ಭಾಗವೇ ಯಶಸ್ವಿಯೆನ್ನಬಹುದು. ಮುಂದಿನದೂ ಇದೇ ನಿಟ್ಟಿನಲ್ಲಿ ಹರಿದಿದ್ದರೆ ಕಾದಂಬರಿಯ ತಿರುವೇ ಬೇರೆಯಾಗುತ್ತಿತ್ತು. ಅವನ ಬಾಳಿನಲ್ಲಿ ಪ್ರವೇಶಿಸಿ ಮಾಯವಾದ ಅಲಕನಂದಾ, ಗೌರಿ, ಇಂದಿರಾ ಇವರೆಲ್ಲರೂ ಪ್ರಭಾವ ಬೀರಿದವರೇ ಅವರಲ್ಲೂ ಗೌರಿಯ ದುಡುಕುತನಕ್ಕೂ ಮೂರ್ತಿ ಅಂಜಿದ ಮೇಲೆ, ಧರ್ಮ ಮರ್ಯಾದ ಮಾತಿರಲಿ ತಾತ್ಕಾಲಿಕ ಇಂದ್ರಿಯ ತೃಪ್ತಿಯ ಸಾಧನೆಯೂ ಅವನಿಂದಾಗಲಿಲ್ಲವೆಂದ ಮೇಲೆ ಆತನ ಬಾಳು ದುರಂತದಲ್ಲೇ ಮುಗಿಯುಗಿವುದು ಸಹಜ. ಅಥವಾ ಕಾರಣಾಂತರಗಳಿಂದ ಕಲಾತ್ಮಕವಾದ ರೀತಿಯಲ್ಲಿ ಬೆಳವಣಿಗೆಯನ್ನು ತೋರಿಸಬೇಕಾಗುತ್ತದೆ. ಮೂರ್ತಿ ಯಾರನ್ನಾದರೂ ವಿವಾಹವಾಗಿ ಬಾಳಲು ಸಿದ್ಧನಿದ್ದನೇ ಎನ್ನುವುದು ತಿಳಿದು ಬರುವುದಿಲ್ಲ. ಇಂದಿರೆಯಷ್ಟಾದರೂ ಧೈರ್ಯವಿದ್ದಿದ್ದರೆ ಸಮಸ್ಯೆ ಎಷ್ಟೋ ಪರಿಹಾರವಾಗಬಹುದಿತ್ತು. ಎದುರಿಸಿ ನಿಲ್ಲುವ

ಧೈರ್ಯವಿಲ್ಲ. ಇಂದಿರೆ ಪಕ್ಕದಲ್ಲಿ ಕುಳಿತು ಕೊಂಡಾಗ ಒಳಗೊಳಗೇ ಹಿಗ್ಗಿದರೂ ಅವನ ಮನಸ್ಸು ಬಂಧನದಿಂದ ಪಾರಾಗಿರಲಿಲ್ಲ. ಇದೊಂದು ರೀತಿಯ ಎಳಸುತನದ ಬಯಕೆ. ಕದ್ದು ತಿನ್ನುವ ಆಸೆಯೊಂದೇ ಇದ್ದುದು. ಇಲ್ಲೆಲ್ಲಾ ಕೃತಿಕಾರರು ಸ್ವಂತ ಭಾವನೆಗಳಿಗೆ ಒಳಗಾಗದೆ ವಸ್ತು ನಿಷ್ಠರಾಗಿ ಮೂರ್ತಿಯ ಯೋಗ್ಯತೆಗೆ ತಕ್ಕಂತೆ ನಡೆಸಿರುವುದು ಸಹಜತೆಗೆ ಮೆರುಗುಕೊಟ್ಟಿದೆ. "ಹೇಗಾದರಾಗಲೀ ದೇವರೇ – ನಾನು ಜೀವ, ಮರ್ಯಾದೆ ಉಳಿಸಿಕೊಂಡು ಈ ಪ್ರಸಂಗದಿಂದ ಪಾರಾದರೆ ಸಾಕು" ಎನ್ನುವ ಮೂರ್ತಿ ಇಂದಿರೆಯನ್ನು ಪ್ರೇಮಿಸಬಲ್ಲನೆ. ಪ್ರೇಮ ಪ್ರಾಣ ಭಯಕ್ಕೂ ಜಗ್ಗದು. ಆದರೆ ಮೂರ್ತಿಗೆ ಜೀವದ ಮೇಲಿನ ಆಸೆ ಹಾಗೂ ಮರ್ಯಾದೆಯೂ ಉಳಿಯಬೇಕು. ಇನ್ನೊಮ್ಮೆ ಈ ಮೂರೂ ಜನರೂ ಒಂದೇ ಗುಂಪಿನವರೋ ಎಂಬ ಅನುಮಾನ ಬೇರೆ. ಇಂತಹ ಯೋಚನೆಗಳು ಮೂರ್ತಿಯ ಹೇಡಿತನವೆಂದೆನಿಸಿದರೂ, ಅದಕ್ಕೆ ತಕ್ಕ ಭಾವನೆಗಳೇ ಅವು. ತನ್ನ ಶಕ್ತಿಮೀರಿದ ಕಾರ್ಯಕ್ಕೆ ಕೈ ಹಾಕಿದ್ದೇ ದೋಷ. ಅರಗಿಸಿ ಕೊಳ್ಳಲಾರದನ್ನು ಚಾಪಲ್ಯವಶನಾಗಿ ತಿಂದರೆ ರೋಗ ಅನಿವಾರ್ಯ, ಇಂದಿರೆಯನ್ನು ಕಡೂರಿನ ಪ್ರವಾಸಿ ಮಂದಿರದಲ್ಲಿ ಅಸಹಾಯ ಪರಿಸ್ಥಿತಿಯಲ್ಲಿ ಬಿಟ್ಟು ಹೋಗುವುದಂತೂ ಹೇಡಿತನದ ಪರಾಕಾಷ್ಠೆ.

ಇಂತಹ ಮೂರ್ತಿ ಕ್ಲಾರಾಳ ಜತೆ ಹೇಗೆ ಬದಲಾದ ಎನ್ನುವುದೇ ಆಶ್ಚರ್ಯ, "ಪರಿಣಾಮ" ದಲ್ಲಿ ಕಲಾತ್ಮಕತೆ ಕಡಿಮೆಯಾಗಿ ಮೂರ್ತಿ-ಕ್ಲಾರಾರ ಉನ್ಮತ್ತ ಪ್ರಣಯ ಚಿತ್ರಣವೇ ತುಂಬಿದೆ. ಇದ್ದಕ್ಕಿಂದತೆ ಆ ಧೈರ್ಯ ಬರುವುದೆಂದರೆ ಸಹಜತೆಗೆ ದೂರ, ಅದಕ್ಕೆ ಕಾರಣ ಇಂದಿರೆಗೆ ಮಾಡಿದ ಅಪರಾಧದ ಉರಿಯೇ ಇರಬಹುದೇ ಅನಿಸುತ್ತದೆ. ಪಾತ್ರಗಳು ಕೃತಿಕಾರರ ಗೊಂಬೆಗಳಾದರೆ ಸೊಗಸುವುದಿಲ್ಲ. ಪಾತ್ರಗಳ ಸಹಜ ಬೆಳವಣಿಗೆಯ ಹಿಂದೆ ಹಿಂದೆ ಕೃತಿಕಾರ ನಡೆಯಬೇಕಾದುದು ಒಳ್ಳೆಯದೇ. ಕೃತಿಕಾರ ಬೇಕೆನಿಸಿದಂತೆ ಮಾಡಿ ಬಿಟ್ಟರೆ ಪಾತ್ರಗಳು ಸೂತ್ರದ ಗೊಂಬೆಗಳಾಗಿ ಯಾವುದು ಬೇಕಾದರೂ ಘಟಿಸಬಹುದು, ಸಾಧ್ಯವಾಗಬಹುದು. ಆಗ ಅದೆಲ್ಲ ಲೋಕ ದೂರ ಅನಿಸಿ ಸಹೃದಯನಿಗೆ ಉದಾಸೀನ ಭಾವ ಮೂಡಿ ರಸಾಸ್ವಾದ ಇಲ್ಲವಾಗಬಹುದು. 'ಪರಿಣಾಮ' ದಲ್ಲಿ ಎದ್ದು ಕಾಣುವ ಅಂಶಗಳೆಂದರೆ ಅತಿಯಾದ ಭಾವುಕ ಪ್ರಣಯ, ಕೃತಕ ಸಂಭಾಷಣೆಗಳು ಕ್ಲಾರಾ–ಮೂರ್ತಿಯವರ ಸಂಭಾಷಣೆಯ ರೀತಿ ನಾಟಕದಂತೆ ಕಾಣುತ್ತವೆ. ಅವರ ಉನ್ಮತ್ತ ವಿಲಾಸ ವರ್ಣನೆಯೂ ಅತಿಯಾಗಿ ಚಿತ್ರಿತವಾಗಿದೆ. ಸಿಹಿ ಹೆಚ್ಚಾದರೂ ಓಕರಿಗೆ ಅನಿವಾರ್ಯ. ಕ್ಲಾರಾ ಓರ್ವ ಅಪರಿಚಿತನೊಡನೆ ಅಷ್ಟು ಸಲುಗೆಯಿಂದ ವರ್ತಿಸಿ ಮೋಹಿಸಿ ಇದ್ದದ್ದು ಕೂಡ ಸಹಜವಾಗಬಹುದೆ ?. ಇನ್ನೂ ಕ್ಲಾರಾ ಅಂತಹ ಹೆಣ್ಣು ಮೂರ್ತಿಯೊಡನೆ ಹಲವಾರು ದಿನಗಳ ಸ್ನೇಹ ಬೆಳೆಸಿ ಅನಂತರ ಪ್ರೇಮಿಗಳಾಗುವುದಾದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಅಲ್ಲದೆ ಅವಳು ಸತ್ ಶೀಲದ ವ್ಯಕ್ತಿಯಲ್ಲವೆಂದೂ ತೋರಲಾಗಿದೆ. ಆದರ್ಶಗೃಹಿಣಿಯಾಗುವ ಆಸೆಯನ್ನೂ

ಉಳ್ಳ ಕ್ಲಾರಾ ಹೇಗೆ ಅಂತಹ ಉನ್ಮತ್ತ ವಿಲಾಸದ, ಕುಡಿತದ ಬದುಕಿಗೆ ಒಗ್ಗಿಕೊಂಡಳು, ಅಷ್ಟೇ ಸುಲಭವಾಗಿ ಲಗ್ನದ ನಂತರ ಬಿಟ್ಟು ಬಿಟ್ಟಳು ಎನ್ನುವುದೂ ಸಮಸ್ಯೆಯೇ.

ಮೂರ್ತಿಯ ತಂದೆ ತಾಯಿಗಳು ಬಹು ಮಡಿವಂತ ಆಚಾರ ನಿಷ್ಠರು. ಅಂತಹ ವರು ಮೂರ್ತಿ-ಕ್ಲಾರಾರ ಲಗ್ನಕ್ಕೆ ಒಪ್ಪಿದ್ದೇ ಆಶ್ಚರ್ಯ. ಮೊದ ಮೊದಲು ಕಿಡಿ ಕಾರುತ್ತಿದ್ದ ವಾಸುದೇವರಾಯರು ಹಣದ ವಿಚಾರ ತಿಳಿದ ನಂತರ ಮನಸ್ಸು ಬದ ಲಾಯಿಸುವುದು ಅವರ ವ್ಯಕ್ತಿತ್ವಕ್ಕೇ ಹೊಂದುವಂತೆ ಕಾಣುವುದಿಲ್ಲ. "ನಿಜ ನಿಜ ಮೂರು ಲಕ್ಷ ಅಂದ್ರೇ- ನಮ್ಮಂಥೋರು ಮೂಗಿಗೆದಾರ ಹಾಕಿಕೊಂಡು ಹತ್ತು ತಲೆ ಮಾರು ದುಡಿದರೂ ಸಂಪಾದಿಸೋದು ಸಾಧ್ಯವಿಲ್ಲ. ಏನೋ ಅದೃಷ್ಟ ಖುಲಾಯಿ ಸಿದರೆ ಅಷ್ಟು ಹಣ ಕಾಣೋದು ಸಾಧ್ಯ" ಎಂದು ಹೇಳುವಾಗ ವಾಸುದೇವರಾಯರೇ ಹೇಳಿದ ಮಾತೆ ! ಅನಿಸುತ್ತದೆ. ಅಂತೆಯೇ ಗಂಡನಿಗಿಂತಲೂ ಮಿಗಿಲು ಆಚಾರವಂತೆ ಯಾದ ಅನಸೂಯಮ್ಮ ತೀರ ಹೆಚ್ಚೆಂದರೆ "ಹಾಳಾಗಲಿ" ಎನ್ನಬಹುದಿತ್ತೇ ವಿನಾ "ಇವತ್ತಿನಿಂದಲಾದ್ರೂ ಆ ಹಾಳು ಹೋಟೆಲಿನಲ್ಲಿರೋದು ಬಿಟ್ಟು ಅವರಿಗೆ ಇಲ್ಲೇ ಬಂದಿರೂಂತ ಹೇಳು" ಎನ್ನುವುದು ಪವಾಡದಷ್ಟೇ ಅಲೌಕಿಕ. ಹೀಗೆ ಸಮಸ್ಯೆಯನ್ನು ಸರಳಗೊಳಿಸಿ ಬಿಡಿಸಿರುವುದನ್ನು ಕಾಣಬಹುದು.

ಕಾದಂಬರಿಯನ್ನು ಓದಿ ಮತ್ತೊಮ್ಮೆ ಇಡೀ ಕಟ್ಟಡವನ್ನು ನೆನೆಸಿಕೊಂಡಾಗ ಏಕೋ ಮೂರ್ತಿಯ ಪಾತ್ರದ ಬೆಳವಣಿಗೆ ಸಹಜವಾಗಿ ಆಗಿರುವಂತೆ ತೋರುವು ದಿಲ್ಲ. ಆಕಸ್ಮಿಕ ಘಟನೆಗಳು ಇರುತ್ತವಾದರೂ ಜೀವನದುದ್ದಕ್ಕೂ ಅಂಥವೇ ಘಟನೆ ಗಳು ತುಂಬಿರಲಾರವು. ಕ್ಲಾರಳ ಸಾವು ಕೂಡ ಬೇಕೆಂದೇ ಎಳೆದು ತಂದಂತಿದೆ. ಕ್ಲಾರಾ ಸಾಯದಿದ್ದರೆ ಇಂದಿರೆಯ ವಿಚಾರವೇ ಬರುತ್ತಿರಲಿಲ್ಲ. ಹಾಗೆ ಇಂದಿರೆ ಬರು ವುದು ಕಲಾತ್ಮಕತೆಗೆ ಅವಶ್ಯವಾಗಿತ್ತೆ ಅನಿಸುತ್ತದೆ. ಕ್ಲಾರಾಳ ಸಾವೇ ಮುಕ್ತಾಯಕ್ಕೆ ಒಂದು ಸರಿಯಾದ ಘಟ್ಟವಾಗುತ್ತಿತ್ತು. ಹಬೆ ನಿಂತ ಮೇಲೂ ಅಷ್ಟು ದೂರ ಓಡುವ ರೈಲು ಬಂಡಿಯಂತೆ ಕತೆ ಚಲಿಸುತ್ತದೆ. ಮೂರ್ತಿ ಭೀತಿಯನ್ನು ಗೆದ್ದ ಎನ್ನುವುದ ಕ್ಕಿಂತ ಕ್ಲಾರಳೇ ಅವನ ಬಯಕೆಯ ತೃಪ್ತಿಗೆ ಕಾರಣ ಎನ್ನಬಹುದು. ಅವಳಲ್ಲದೆ ಬೇರೆ ಯಾರಾದರೂ ಆಗಿದ್ದರೆ ಮೂರ್ತಿ ಭೀತಿ ಮುಕ್ತನಾಗುತ್ತಿದ್ದಾನೆ ಎಂಬ ಸಂಶಯ ಬರುತ್ತದೆ. ಕೊನೆ ಕೊನೆಗೆ ಮೂರ್ತಿ ಮಾನವ ದ್ವೇಷಿಯಾದ ಪೋಲೀಸು ನೌಕರನಾಗುವುದು, ಇಂದಿರೆಯನ್ನು ಪ್ರೀತಿಸುವುದು ಇವೆಲ್ಲವೂ ಒಟ್ಟು ಕಟ್ಟಡಕ್ಕೆ ಹೊರತಾಗುತ್ತವೆ.

"ಆಕಸ್ಮಿಕ - ಅಪರಾಧ - ಪರಿಣಾಮ" ಕಾದಂಬರಿಗಳು ಯಾವುದೋ ಒಂದು ತೆರನ ಓದುಗರನ್ನು ಬಲವಾಗಿ ಆಕರ್ಷಿಸುತ್ತವೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಸಹೃದಯ ವಿಮರ್ಶಕನಿಗೆ ನಿ ರಾ ಸೆ ಯಾ ಗ ಲು ಬೇಕಾದಷ್ಟು ಕಾರಣಗಳಿವೆ ಎನ್ನಬಹುದು.

'ನಾಗರ ಹಾವು' ಕಾದಂಬರಿ- ಒಂದು ಅಧ್ಯಯನ

—ಸದಾಶಿವ ಎಣ್ಣೆಹೊಳೆ

ಸಮಾಜದ ನಡುವೆ ಬಾಳಬೇಕಾಗಿರುವ ವ್ಯಕ್ತಿಯ ಇಷ್ಟಾನಿಷ್ಟಗಳು ಸಮಾಜ ನಂಬಿರುವ ಮೌಲ್ಯಗಳಿಗೆ ಬಲಿಯಾದಾಗ ಅಂತಹ ವ್ಯಕ್ತಿಯ ಜೀವನ ಹೇಗೆ ದುರಂತದಲ್ಲಿ ಪರ್ಯವಸಾನವಾಗುತ್ತದೆ ಎನ್ನುವುದಕ್ಕೆ *'ನಾಗರ ಹಾವು' ಕಾದಂಬರಿ ಒಂದು ಅತ್ಯುತ್ತಮ ಉದಾಹರಣೆ. ಈ ಕಾದಂಬರಿಯ ನಾಯಕ ರಾಮಾಚಾರಿಯ ಬದುಕಿನ ಏರಿಳಿತಗಳೇ ಕಾದಂಬರಿಯ ವಸ್ತು.

ರಾಮಾಚಾರಿ ಅಂಥ ಆಕರ್ಷಕ ರೂಪವಂತನೇನಲ್ಲ. ತೇಪೆ ಹಾಕಿದ ಅಂಗಿ. ಮುಂಭಾಗದಲ್ಲಿ ಅರ್ಧ ಚಂದ್ರಾಕಾರವಾಗಿ ಬೋಳಿಸಿ ಹಿಂದೆ ಬಾಚಿಸುತ್ತಿದ್ದ ಕೂದಲ ಗಂಟು, ಅಲ್ಲಲ್ಲಿ ಸಿಡುಬಿನ ಕಲೆಗಳ ಗುರುತು ಕಾಣಿಸುವ ಒಣಗಿದ ಮುಖ, ಬಡಕಲಾದ ಕೈಕಾಲ್ಗಳು, ತಂದೆ ಕೂಡ ಶ್ರೀಮಂತನಲ್ಲ. ಮಧ್ವ ರಾಮಾಚಾರ್ಯರು ಪೇಟೆ ಆಂಜನೇಯನ ಗುಡಿಯಲ್ಲಿ ಪುರಾಣ ಹೇಳಿ ಬಂದ ಉತ್ಪಾದನೆಯಲ್ಲಿ ಸಂಸಾರ ನಡೆಯುತ್ತಿತ್ತು. ಶಾರೀರಕವಾಗಿ ರಾಮಾಚಾರಿ ದುರ್ಬಲನಾದರೂ ಧೈರ್ಯದ ಶ್ರೀಮಂತಿಕೆ ಇತ್ತು. ಜೊತೆಗೆ ಒರಟುತನ ಮುಂಗೋಪಗಳ ಕವಚ ಕೂಡ. ಇನ್ನೂ ಚಿಕ್ಕ ಹುಡುಗನಾಗಿದ್ದಾಗಲೇ ರೇಗಿಸಿದ ಅಪ್ಪನನ್ನೇ 'ನೀನ್ಯಾವನೋ ನನಗೆ ಹೊಡೆಯೋಕೆ' ಎನ್ನುತ್ತಾನೆ, ಈ ದುಷ್ಟತನದ ಪರಮಾವಧಿಯನ್ನು ಪರೀಕ್ಷೆಯಲ್ಲಿ ಕಾಪಿ ಹೊಡೆಯುತ್ತಿದ್ದವನನ್ನು ನ್ಯಾಯವಾಗಿ ಶಿಕ್ಷಿಸಿದ ಉಪಾಧ್ಯಾಯರ ಮೇಲೆ ಪ್ರತೀಕಾರವನ್ನು ಕೈಗೊಂಡ ರೀತಿಯಿಂದ ಕಾಣಬಹುದು. 'ಏನಾದರೂ ಸರಿಯೇ ಅವನು ನನಗೆ ಶರಣಾಗತನಾಗುವಂತೆ ಮಾಡಬೇಕು. ಪ್ರಾಣ ಹೋದರೂ ಸರಿಯೇ ಬಿಡಬಾರದು. ಅವನ್ನ ಸತಾಯಿಸಿ ದಮ್ಮಯ್ಯನ್ನೋ ಹಾಗೆ ಮಾಡ್ದೇ ಇದ್ರೆ ನನ್ನ ಹೆಸರು ರಾಮಾಚಾರೀನೇ ಅಲ್ಲ, ಎಂದು ಪ್ರತಿಜ್ಞೆ ಮಾಡಿ. ಉಪಾಧ್ಯಾಯರ ಮನೆಯ ಮೇಲೆ ಕಲ್ಲಿನ ಮಳೆಗರೆದು. ಮಾಡನ್ನು ಛಿದ್ರಗೊಳಿಸಿ, ಕಿಟಕಿ ಬಾಗಿಲುಗಳ ಮೇಲೆ ಸೇಡು ತೀರಿಸಿಕೊಂಡದ್ದು ಸಾಲದೆ ಗೋಡೆಯ ಮೇಲೆ ಹೊಲಸು ಮಾತುಗಳನ್ನು ಬರೆದು. ಉಪಾಧ್ಯಾಯರು "ನನಗಿನ್ನು ಈ ಊರಿನ ಋಣ ಮುಗಿಯಿತು" ಎಂದು ಹೇಳುವ ಸ್ಥಿತಿಗೆ ತರುತ್ತಾನೆ. ಸಿಟ್ಟಿನ ಭರದಲ್ಲಿ ದುಡುಕುತ್ತಾನೆ ನಿಜ, ಆದರೆ ತಾನು ಮಾಡಿದ್ದು ತಪ್ಪು ಎಂದು ಅರಿವಾದಾಗ ಪಶ್ಚಾತ್ತಾಪ ಪಡುತ್ತಾನೆ. "ಅಮ್ಮಾ ನನ್ನಿಂದ

---

*ನಾಗರ ಹಾವು, ಎರಡು ಹೆಣ್ಣು ಒಂದು ಗಂಡು, ಸರ್ಪ ಮತ್ಸರ ಮೂರು ಭಾಗಗಳಲ್ಲಿ ಕಾದಂಬರಿ ಇರುವುದಾದರೂ ಅನುಕೂಲಕ್ಕಾಗಿ ಕಾದಂಬರಿಯ ಹೆಸರನ್ನು ಉಲ್ಲೇಖಿಸಬೇಕಾದಾಗ 'ನಾಗರ ಹಾವು' ಎನ್ನುವ ಮೊದಲ ಕಾದಂಬರಿಯ ಹೆಸರನ್ನೇ ಮೂರಕ್ಕೂ ಅನ್ವಯಿಸಿ ಹೆಸರಿಸಿಕೊಂಡು ಹೋಗಿದ್ದೇನೆ.

ತಪ್ಪಾಯ್ತು, ಶಾಮರಾಯ ಮೇಷ್ಟ್ರು ನನ್ನ ಹೊಡೆದ್ರೂಂತ ಹೀಗೆ ಮಾಡ್ದೆ. ಇನ್ಮೇಲೆ ಯಾವತ್ತೂ ಹೀಗ್ಮಾಡೊಲ್ಲಾ" ಎಂದು ಉಪಾಧ್ಯಾಯರ ಹೆಂಡತಿಯ ಕಾಲು ಹಿಡಿದು ಕಣ್ಣೀರು ಹಾಕುತ್ತಾನೆ.

ಮೇಲಿನ ಘಟನೆ ಸುಗಮವಾಗಲು ಮುಖ್ಯ ಕಾರಣ ಚಾಮಯ್ಯ ಮೇಷ್ಟ್ರು. ಅವರ ಮಧ್ಯಸ್ಥಿಕೆಯಿಂದ ಗುರು ಶಿಷ್ಯರ ಬಾಂಧವ್ಯ ಪುನಃ ಮೊದಲಿನಂತಾಗಲು ಕಾರಣವಾಗುತ್ತದೆ. ಅಂದಿನಿಂದ ರಾಮಾಚಾರಿ ಚಾಮಯ್ಯ ಮೇಷ್ಟರ ಪರಮ ಶಿಷ್ಯನಾಗುತ್ತಾನೆ. ಅವರು ಆಡಿದ ಮಾತು ಅವನಿಗೆ ವೇದ ವಾಕ್ಯ ; ಅವರ ಮನೆ ತನ್ನ ಮನೆ. ಚಾಮಯ್ಯನವರಾದರೂ ಅಷ್ಟೆ. "ಅದು ಸರ್ಪದ ಸಹವಾಸ" ಎಂದು ಹೇಳಿದವರಿಗೆ "ಹಾವನಾಡಿಸ ಬಲ್ಲಡೆ ಹಾವಿನ ಸಂಗ ಲೇಸು ಕಾಣಯ್ಯ" ಎಂದು ಹೇಳಿ ಬಾಯಿ ಮುಚ್ಚಿಸುತ್ತಾರೆ. ವ್ಯವಸ್ಥಿತವಾಗಿ ಮುಂದುವರಿಯುತ್ತಿದ್ದ ರಾಮಾಚಾರಿಯ ಜೀವನ ಗತಿ ಅಡ್ಡ ದಾರಿ ಹಿಡಿಯಲು ಅಲಮೇಲುವಿನ ಪ್ರಸಂಗ ಕಾರಣವಾಗುತ್ತದೆ. ತನ್ನ ತಂಗಿಗೆ ಕಿರುಕುಳ ಕೊಡುವ ಜಲೀಲನನ್ನು ಸದೆ ಬಡಿಯಲು ಅಸಹಾಯನಾದ ವರದಯ್ಯಂಗಾರಿ ರಾಮಾಚಾರಿಯ ಸಹಾಯವನ್ನು ಕೋರಿ. ಮುಂದೆ ಆಗಬಹುದಾದ ಅನರ್ಥಗಳ ಪರಿವೆಯಿಲ್ಲದೆ ತನ್ನ ತಂಗಿಯನ್ನು ಮದುವೆ ಮಾಡಿಸುವುದಾಗಿ ಭಾಷೆ ಕೊಡುತ್ತಾನೆ. ರಾಮಾಚಾರಿಯಲ್ಲಿ ಇದುವರೆಗೂ ಕಾಣದಿದ್ದ ಪ್ರಣಯ ಭಾವನೆಗಳು ಅಂಕುರಿಸುತ್ತವೆ. ಅಲಮೇಲುವಿನ ನೋಟ ಹೃದಯದಲ್ಲಿ ವಿಚಿತ್ರ ಭಾವ ತರಂಗಗಳನ್ನು ಉಂಟು ಮಾಡುತ್ತನೆ. "ಅಲಮೇಲು ನನ್ನ ಹುಡುಗಿ" ಎಂದು ತನಗೆ ತಾನೇ ಹತ್ತಾರು ಬಾರಿ ಹೇಳಿಕೊಳ್ಳುತ್ತಾನೆ. ಜಲೀಲನ ವಿರುದ್ಧ ಬಡಿದಾಟದಲ್ಲಿ ಪೆಟ್ಟು ಬಿದ್ದಿದ್ದ ರಾಮಾಚಾರಿ ಅಲಮೇಲುವಿನ ಶುಶ್ರೂಷೆಯಲ್ಲಿದ್ದಾಗ ಅವಳ ಕೈ ನೇವರಿಸಿ "ನಿನಗೋಸ್ಕರ ಪ್ರಾಣಾನಾರ ಕೊಡ್ತೀನಿ" ಎನ್ನುತ್ತಾನೆ. ಪ್ರತ್ಯುತ್ತರವಾಗಿ ಅಲಮೇಲು "ಇವತ್ತಿಂದ ನಾನೂ ಅಷ್ಟೆ" ಎನ್ನುತ್ತಾಳೆ. ಹೀಗೆ ಬೀಜಾಂಕುರವಾದ ಪ್ರೇಮ ಬಲಿತು ಮರವಾಗುತ್ತದೆ. ರಾಮಾಚಾರಿಯನ್ನು ಕಂಡಾಗ ಅಲಮೇಲು ಲೋಕವನ್ನೇ ಮರೆಯುತ್ತಾಳೆ. ಸದಾ ಅವನ ಸಂಗಡವೇ ಇರಬೇಕೆಂದು ತವಕಿಸುತ್ತಾಳೆ. ಪರಸ್ಪರ ಎದುರು ಕೂತಾಗ ಕಾಲ ದೇಶಗಳ ಪರಿವೇ ಇಲ್ಲದೆ ತಮ್ಮ ಭಾವ ಸಾಮ್ರಾಜ್ಯದಲ್ಲಿ ತಲ್ಲೀನರಾಗುತ್ತಾರೆ.

ಅಲಮೇಲುವಿನ ಪರಿಚಯ ಒಂದು ರೀತಿಯಲ್ಲಾದರೆ ಮಾರ್ಗರೆಟ್ಟಳ ಪರಿಚಯವಾದದ್ದು ಬೇರೊಂದು ಬಗೆಯಲ್ಲಿ, ಒಮ್ಮೆ ತರಗತಿಯಲ್ಲಿ ರಾಮಾಚಾರಿಯನ್ನು ಮಾರ್ಗರೆಟ್ "ಕರೀ ಮೂತಿ ಮುಸಿಯ" ಎಂದು ಹಂಗಿಸುತ್ತಾಳೆ, 'ಭಾಳಾ ಧಿಮಾಕಿದ್ದಾಗಿದೆ ಈ ಲೌಡಿಗೆ ಇರಲಿ– ಇವಳಿಗೆ ರಾಮಾಚಾರಿ ಕೈ ತೋರಿಸ್ತೀನಿ. ಅಂದುಕೊಂಡ ರಾಮಾಚಾರಿ ಸ್ಕೂಲು ಬಿಟ್ಟ ನಂತರ ದಾರಿ ಮಧ್ಯೆ ಮಾರ್ಗರೆಟ್ಟಳು ನಡೆದು ಬರುವಾಗ ನಿಲ್ಲಿಸಿ "ಇವತ್ತು ಹೇಳಿದ ಮಾತು ವಾಪಸ್ಸು ತಗೊಂಡ್ರೋ ಬದುಕಿದೆ. ನಾಳೆ ತನಕ ಟೈಂ ಕೊಟ್ಟಿದ್ದೀನಿ" ಎನ್ನುತ್ತಾನೆ. ಆದರೆ ರಾಮಾಚಾರಿಯ ಬೆದರಿಕೆಗೆ

ಮಾರ್ಗರೆಟ್ ಸೊಪ್ಪು ಹಾಕುವುದಿಲ್ಲ. "ಥ್ಥು! ನಿನ್ನಂಥ ಕುರಿಗಳನ್ನು ಬಹಳ ಜನಾನ ನೋಡಿದ್ದೀನಿ. ಇನ್ನೊಂದ್ಸಲ ಹೀಗೆ ಬೀದೀಲಿ ಮಾತಾಡಿಸಿದ್ರೆ, ಕಾಲಿನಲ್ಲಿರೋದು ಕೈಗೆ ಬರುತ್ತೆ" ಎಂದು ಪ್ರತಿಯಾಗಿ ಉತ್ತರಿಸುತ್ತಾಳೆ. ಮಾರ್ಗರೆಟ್ಟಳ ಮಾತುಗಳಿಂದ ರಾಮಾಚಾರಿಗೆ ಸಿಡಿಲು ಬಡಿದಂತಾಗುತ್ತದೆ. ಏಕಾಂಗ ವೀರನಾದ ತನಗೆ ಅದೂ ಯಃಕಶ್ಚಿತ್ ಒಂದು ಹೆಣ್ಣಿನಿಂದ ಇಂಥ ಅಪಮಾನ : ಆ ಕ್ಷಣ ಹೆಚ್ಚು ಮಾತಾಡದೆ "ನಾಳೆ ಇದೆ ನಿನ್ನಾಟ" ಎಂದು ಹೇಳಿ ಹಿಂತಿರುಗುತ್ತಾನೆ.

ಸ್ನಿ ಆಟ ಆಡುವ ಸಿಪದಲ್ಲಿ ಮೇರಿಯಮ್ಮನ ಕೋಳಿಗಳಿಗೆ ಹೊಡೆದು ರಾದ್ಧಾಂತ ಮಾಡಿದ ರಾಮಾಚಾರಿಯು ಮೇಲಿನ ದೂರು ಬೇರೊಂದು ಬಗೆಯಾಗಿ ಮುಖ್ಯೋಪಾಧ್ಯಾಯರನ್ನು ಮುಟ್ಟುತ್ತದೆ. ಸಾಲದುದಕ್ಕೆ "ನನ್ನ ಮೇಲಿನ ಸಿಟ್ಟನ್ನು ಕೋಳೀ ಮೇಲೆ, ನಮ್ಮಮ್ಮನ ಮೇಲೆ ತೀರಿಸ್ಕೊತಾನೆ ಹೇಡಿ" ಎಂದು ಮಾರ್ಗರೆಟ್ ರಾಮಾಚಾರಿಯನ್ನು ಹಂಗಿಸುತ್ತಾಳೆ. 'ಹೇಡಿ' ಎನ್ನುವ ಶಬ್ದ ರಾಮಾಚಾರಿಯ ಮೈಯಲ್ಲಿ ಬೆಂಕಿಯ ಜ್ವಾಲೆಯನ್ನು ಭುಗಿಲ್ ಎಂದು ಹೊತ್ತಿಸುತ್ತದೆ. 'ತನ್ನ ಮೇಲೆ ಕೈ ಮಾಡಲು ಬಂದ' ಎಂದು ತಾಯಿ ಮಗಳಿಬ್ಬರೂ ಕೂಡಿ ರಾಮಾಚಾರಿಯ ವಿರುದ್ಧ ಕೊಟ್ಟ ದೂರು ಹೆಡ್ಮಾಸ್ಟರ ಭಯಂಕರ ಕೋಪಕ್ಕೆ ಕಾರಣವಾಗಿ ಅಲ್ಲಿಯೂ ಪೆಟ್ಟು ಬೈಗುಳಗಳಲ್ಲದೆ 'ತಾಯಿ ಮಗಳನ್ನು ಕ್ಷಮಾಪಣೆ ಕೇಳಿ ಬರದ ಹೊರತು ಶಾಲೆಗೆ ಪ್ರವೇಶವಿಲ್ಲ' ವೆಂಬ ಆಜ್ಞೆ. ಅನಿರೀಕ್ಷಿತವಾಗಿ ಬಂದ ಈ ಬಲವಾದ ಹೊಡೆತದಿಂದ ರಾಮಾಚಾರಿ ದಿಙ್ಮೂಢನಾಗುತ್ತಾನೆ. ತಾನೂ ಎಂದೂ ಯಾರನ್ನೂ ಪಾಪದ ಕಣ್ಣಿನಿಂದ ನೋಡದಿದ್ದರೂ ತನ್ನ ಮೇಲೆ ಇಂಥ ಅಪವಾದ : ಹತ್ತಾರು ಬಾರಿ ಯೋಚಿಸುತ್ತಾನೆ. ಕೊನೆಗೆ ಆದದ್ದಾಗಲಿ ಹೇಗಿದ್ದರೂ ತಾನು ಅಪರಾಧಿಯೆಂದು ತೀರ್ಮಾನಿಸಿದ್ದಾರೆ ಅದನ್ನು ನಿಜ ಮಾಡಿಯೇ ತೋರಿಸುತ್ತೇನೆಂದು ಸಂಕಲ್ಪಿಸಿ ಮೇರಿಯಮ್ಮನ ಮನೆಯನ್ನು ಪ್ರವೇಶಿಸಿದವನೇ "ನಿನ್ನೊಂದು ಮಾತು ಕೇಳ್ಕೋಕೆ ಬಂದೆ. ನಿನ್ನ ಕತ್ತಿನಲ್ಲಿರೋ ಶಿಲುಬೆ ಸಾಕ್ಷಿಯಾಗಿ ನಿಜ ಹೇಳ್ತೀಯಾ" ಎಂದು ಮಾರ್ಗರೆಟ್ಟಳನ್ನು ಕೇಳುತ್ತಾನೆ. ರಾಮಾಚಾರಿ ಧಾವಿಸಿ ಬಂದ ರೀತಿ, ಅವನ ಕ್ರೋಧೋನ್ಮತ್ತ ಕಣ್ಣುಗಳನ್ನು ನೋಡಿಯೇ ಬೆದರಿದ್ದ ಮಾರ್ಗರೆಟ್ ತಡವರಿಸುತ್ತ "ಹೂ" ಎನ್ನುತ್ತಾಳೆ. "ಎಂದಾದರೂ ನಾನು ನಿನ್ನ ಮೇಲೆ ಕೈ ಮಾಡಿದೆನೇ ? ನಿನ್ನ ಮಾನಭಂಗಕ್ಕೆ ಪ್ರಯತ್ನಿಸಿದೆನೇ ?" "ಇಲ್ಲ" ಎನ್ನುತ್ತಾಳೆ ಮಾರ್ಗರೆಟ್—ನಡುಗುವ ಧ್ವನಿಯಿಂದ. "ಈ ಗಳಿಗೆಯವರೆಗೆ ಮಾರ್ಗರೆಟ್, ನಾನು ನಿನ್ನ ಮೇಲೆ ಪಾಪದೃಷ್ಟಿ ಬೀರಿರಲಿಲ್ಲ. ನಿನ್ನ ಮಾನಭಂಗ ಮಾಡಬೇಕೆಂಬ ಭಾವನೆ ನನಗೆ ಎಂದೂ ಬಂದಿರಲಿಲ್ಲ. ನೀನು ಚೆಲುವೆ. ಆದರೂ ನಾನೆಂದೂ ನಿನ್ನನ್ನು ಆ ರೀತಿ ನೋಡಿರಲಿಲ್ಲ. ಹಾಗೆಯೇ ರಾಮಾಚಾರಿ ಎಂದೂ ಹೇಡಿಯಲ್ಲ. ಇದ್ದ ಮಾತನ್ನು ಮುಚ್ಚಿಡುವ ಭಯ ನನಗೆ ಎಂದೆಂದೂ ಇಲ್ಲ. ಆದ್ದರಿಂದ ಹೇಳುತ್ತೀನಿ ಕೇಳು. ಇಂದಿನಿಂದ ಏನಾದದ್ದಾಗಲಿ—ನಿನ್ನನ್ನು ಭೋಗಿಸದೆ ಬಿಡುವುದಿಲ್ಲ. ಮೇರಿಯಮ್ಮ ನೀನೇ ಈ ಮಾತಿಗೆ ಸಾಕ್ಷಿ" ಎಂದವನೇ ಮಾರ್ಗರೆಟ್ಟ-

ಳನ್ನು ತೋಳಿನಲ್ಲಿ ಬಿಗಿದು ನಡುಗುತ್ತಿದ್ದ ಅವಳ ತುಟಿಗಳನ್ನು ಚುಂಬಿಸಿದ. ಮರು ಗಳಿಗೆ "ಇವತ್ತಿನಿಂದ ನೀನು ಎಲ್ಲಿದ್ದರೂ ಬಿಡುವುದಿಲ್ಲ. ನೆನಪಿರಲಿ ಮಾರ್ಗರೆಟ್ ಹಾವಿಗೆ ಹನ್ನೆರಡು ವರ್ಷ ರಾಮಾಚಾರಿಗೆ ಇಪ್ಪತ್ತನಾಲ್ಕು ವರ್ಷ" ಎಂದು ಹೇಳಿದವನೇ ಬಿರು ಗಾಳಿಯಂತೆ ಕತ್ತಲಿನಲ್ಲಿ ಹೊರಬರುತ್ತಾನೆ.

ರಾಮಾಚಾರಿ ಪ್ರಚಂಡನೇ ಸರಿ. 'ಹೇಡಿ' ಎನ್ನುವ ಮಾತನ್ನು ಎಂದೂ ಸಹಿ ಸದ ಆತ ತನ್ನ ಮೇಲೆ ಸುಳ್ಳೇ ಅಪವಾದ ಹೊರಿಸಿದ ವಿರುದ್ಧ ತೀರಿಸಿಕೊಂಡ ಪ್ರತೀಕಾರ ನಿಜಕ್ಕೂ ಭಯಂಕರ. ಆದರೆ ಈ ಘಟನೆಯಾದ ಮೇಲೆ ಮಾರ್ಗರೆಟ್ ರಾಮಾಚಾರಿಯನ್ನು ದ್ವೇಷಿಸುವ ಬದಲು ಪ್ರೀತಿಸಿ ಆತನ ಪ್ರತಿಜ್ಞೆ ನೆರವೇರಲು ಬೇರೆ ರೀತಿಯಲ್ಲಿ ಕಾರಣಳಾಗುತ್ತಾಳೆ.

ಮರುದಿನ ಹೆಡ್ಮಾಸ್ತರನ್ನು ಭೆಟ್ಟಿಯಾದ ಮಾರ್ಗರೆಟ್ "ನಿನ್ನೆ ನಾನು ನಿಮಗೆ ಕೊಟ್ಟ ದೂರು ಸುಳ್ಳು ಸಾರ್, ಅದನ್ನು ಹೇಳಿ ಕ್ಷಮಾಪಣೆ ಕೇಳಬೇಕೂಂತ ಬಂದೆ" ಭಾರವಾದ ಧ್ವನಿಯಲ್ಲಿ ಹೇಳುತ್ತಾಳೆ. ಕಾರ್ಮೋಡದಂತೆ ಕವಿದು ಬಂದ ವಿಪತ್ತು ತಾನಾಗಿ ಕರಗಿ ಹೋಗುತ್ತದೆ. ಈಘಟನೆಯೇ ಕಾರಣವಾಗಿ ರಾಮಾಚಾರಿ–ಮಾರ್ಗರೆಟ್ ಹತ್ತಿರವಾಗುತ್ತಾರೆ. ಅವಳನ್ನು ಕಂಡಾಗಲೆಲ್ಲ ರಾಮಾಚಾರಿಯ ಹೃದಯದಲ್ಲಿ ಅರಿವಾಗದ ಯಾತನೆಯೊಂದು ಮೂಡಿ ದೇಹ ಮನಸ್ಸುಗಳೆರಡನ್ನೂ ಸೆಳೆಯುತ್ತದೆ. ಏಕಾಂತದಲ್ಲಿ ಸಂಧಿಸಿದಾಗೊಮ್ಮೆ ಮಾರ್ಗರೆಟ್ ರಾಮಾಚಾರಿಯನ್ನು ಕುರಿತು "ಏಸುವಿನಾಣೆಗೂ ನಿನ್ನೊಬ್ಬನನ್ನೇ ನಾನು ಪ್ರೀತಿಸುವುದು. ನಿನಗೋಸ್ಕರ ನನ್ನ ಪ್ರಾಣವನ್ನಾದರೂ ಕೊಡುತ್ತೇನೆ. ಅದಕ್ಕೆ ಇದೇ ಸಾಕ್ಷಿ" ಎಂದು ರಾಮಾ–ಚಾರಿಯನ್ನು ತಬ್ಬಿ ಅವನ ತುಟಿಗಳಿಗೆ ಮುತ್ತಿಡುತ್ತಾಳೆ. ರಾಮಾಚಾರಿ "ನನ್ನನ್ನು ನೀನು ಯಾವತ್ತೂ ಬಿಡಬೇಡ ಮಾರ್ಗರೆಟ್" ಎನ್ನುತ್ತಾನೆ. "ನೀನೂ ಅಷ್ಟೆ" ಎನ್ನುತ್ತಾಳೆ ಮಾರ್ಗರೆಟ್. ಪರಸ್ಪರ ಅಗಲುವ ಕೊನೆಯಲ್ಲಿ "ನೀನು ಶುದ್ಧ ಪೋಲಿ ಈಗಾಗಲೇ ಎಷ್ಟು ಹುಡುಗೀರ ತಲೆ ಕೆಡಿಸಿದೆಯೋ ಏನೋ ಎಂದು ಮಾರ್ಗರೆಟ್ ಹುಡುಗಾಟಕ್ಕೆ ಹೇಳಿದ ಮಾತು ರಾಮಾಚಾರಿಯ ಹೃದಯಕ್ಕೆ ಸುತ್ತಿಗೆಯಿಂದ ಬಡಿದಂತಾಗುತ್ತದೆ. "ನಿನಗೋಸ್ಕರ ಪ್ರಾಣನಾದ್ರೂ ಕೊಡ್ತೀನಿ" ಎಂದು ಅಲಮೇಲುಗೆ ಹೇಳಿದ್ದ ಮಾತು ಜ್ಞಾಪಕಕ್ಕೆ ಬರುತ್ತದೆ.

ತಾನು ದ್ವೇಷಿಸಿದ್ದು ಪ್ರೀತಿಯಾಗಿ ಮಾರ್ಪಟ್ಟ ಹೆಣ್ಣು ಮಾರ್ಗರೆಟ್ ಒಂದು ಕಡೆ, ತಾನಾಗಿ ಬಯಸಿ ಒಲಿದು ಬಂದ ಅಲಮೇಲು, ಮತ್ತೊಂದು ಕಡೆ. ಅಲಮೇಲು ವನ್ನು ನೆನೆದಾಗ ಮಾರ್ಗರೆಟ್ಟಳ ರೂಪ, ಮಾರ್ಗರೆಟ್ಟಳ ಆಲಿಂಗನದಲ್ಲಿ ಮೈ ಮರೆತಾಗ ಅಲಮೇಲುವಿನ ನೆನಪು. ಇರ್ಕಡೆಯ ಸೆಳೆತ. ಒಮ್ಮೆ ಅಲಮೇಲುವಿನ ಕಡೆಗೆ ಒಮ್ಮೆ ಮಾರ್ಗರೆಟ್ಟಳ ಕಡೆಗೆ ಮನಸ್ಸಿನ ತುಯ್ದಾಟ. ಈ ಹೊಯ್ದಾಟದಲ್ಲಿರುವಾಗ ಬಿರುಗಾಳಿಯೊಂದು ಬೀಸಿ ರಾಮಾಚಾರಿಯ ಪ್ರೇಮಜೀವನ ಅಸ್ತವ್ಯಸ್ತ.

ಮಾರ್ಗರೆಟ್ಟಳ ತೋಳ್ತೆಕ್ಕೆಯಲ್ಲಿರುವಾಗೊಮ್ಮೆ ಮಾರ್ಗರೆಟ್ ಮದುವೆಯ ಪ್ರಸ್ತಾಪ ಮಾಡುತ್ತಾಳೆ. ರಾಮಾಚಾರಿಯ ಮಿದುಳಿನಲ್ಲಿ ಸುಪ್ತವಾಗಿದ್ದ ವಿಚಾರವನ್ನು ಅದು ಕೆದಕುತ್ತದೆ. "ಅಲಮೇಲುವಿಗೆ ಗಂಡು ನೋಡೋಕೆ ಹೋಗಿದ್ದಾರೆ" ಸ್ನೇಹಿತ ಹೇಳಿದ್ದ ಮಾತು ನೆನಪಿಗೆ ಬಂದು ರಾಮಾಚಾರಿಗೆ ಚಾಟಿಯಿಂದ ಜಡಿದಂತಾಗುತ್ತದೆ. ಮಾರ್ಗರೆಟ್ಟಳಾದರೋ "ನಿನ್ನ ಪ್ರೀತಿ ನನಗೇ ಮೀಸಲು" ಎನ್ನುತ್ತಾಳೆ. ಹಾಗಾದರೆ 'ಏನಿದ್ದರೂ ನಾನು ನಿನ್ನವಳೇ' ಎನ್ನುವ ಅಲಮೇಲು? ರಾಮಾಚಾರಿಯ ಮಿದುಳಿನಲ್ಲಿ ಮತ್ತೆ ಸುಂಟರಗಾಳಿ ಬೀಸತೊಡಗುತ್ತದೆ. ಪ್ರೇಮಸಲ್ಲಾಪದಲ್ಲಿದ್ದ ರಾಮಾಚಾರಿಯಲ್ಲಾದ ಈ ಹಠಾತ್ ಪರಿವರ್ತನೆ ಮಾರ್ಗರೆಟ್ಟಳನ್ನು ಗಾಬರಿ ಬೀಳಿಸುತ್ತದೆ. ರಾಮಾಚಾರಿಗಾದರೋ ಉಭಯ ಸಂಕಟ. 'ನಿನಗಾಗಿ ಪ್ರಾಣವನ್ನಾದರೂ ಕೊಡುತ್ತೇನೆ' ಎನ್ನುವವಳಿಗೆ ಇನ್ನೊಬ್ಬಳನ್ನು ಪ್ರೀತಿಸುತ್ತೇನೆಂದು ಹೇಗೆ ಹೇಳುವುದು. ಮಾರ್ಗರೆಟ್ಟಳ ಒತ್ತಾಯಕ್ಕೆ ಮಣಿದು ಕೊನೆಗೆ "ನಾನು ಇನ್ನೊಬ್ಬಳನ್ನು ಪ್ರೀತಿಸಿದ್ದೆ ಮಾರ್ಗರೆಟ್" ಎಂದು ನಿಜಸ್ಥಿತಿಯನ್ನು ಹೊರಗೆಡಹುತ್ತಾನೆ. ಆ ಮಾತು ಕೇಳುತ್ತಿದ್ದಂತೆ ಮಾರ್ಗರೆಟ್ಟಳಿಗೆ ಬರಸಿಡಿಲೆರಗಿದಂತಾಗುತ್ತದೆ. ಮಾತು ಮೂಕವಾಗಿ ಬರಿದೇ ರಾಮಾಚಾರಿಯನ್ನು ದೃಷ್ಟಿಸುತ್ತಾಳೆ. ಕೆಲ ಕ್ಷಣ ಕಳೆದು ಚೇತರಿಸಿಕೊಂಡ ಮಾರ್ಗರೆಟ್ ಮೌನ ಮುರಿದು "ಹಾಗಾದರೆ–ಅವಳನ್ನು ಮದುವೆಯಾಗುವುದಾಗಿ ಮಾತು ಕೊಟ್ಟಿದ್ದೀಯಾ? ಅವಳು ಒಪ್ಪಿದ್ದಾಳೆಯೇ?" ಎಂದು ಪ್ರಶ್ನಿಸುತ್ತಾಳೆ. ರಾಮಾಚಾರಿ ಅದಕ್ಕೆ ಉತ್ತರವಾಗಿ" ಏನಾದ್ದಾಗಲಿ ಅವಳನ್ನು ಮದುವೆಯಾಗೇತೀರ್ತೀನಿ ಅಂತ ಪಣ ತೊಟ್ಟಿದೀನಿ ಬಿಡುವುದಿಲ್ಲ" ಎನ್ನುತ್ತಾನೆ. ಮಾರ್ಗರೆಟ್ 'ಮರೆತು ಬಿಡು' ಎಂದು ಕೇಳಲು 'ಸಾಧ್ಯವಿಲ್ಲ' ಎಂದು ನಿರಾಕರಿಸುತ್ತಾನೆ. ಕೊನೆಗೆ ಮಾರ್ಗರೆಟ್ "ನಿನಗೆ ಯಾರು ಬೇಕೋ ಅವರನ್ನು ಆರಿಸಿಕೋ" ಎಂದು ತೀರ್ಮಾನವನ್ನು ರಾಮಾಚಾರಿಗೇ ಬಿಡುತ್ತಾಳೆ. ಆದರೆ ರಾಮಾಚಾರಿಗೆ ಯಾರನ್ನೂ ಬಿಡಲು ಇಷ್ಟವಿಲ್ಲ. "ನನಗೆ ನೀವಿಬ್ಬರೂ ಬೇಕು ಮಾರ್ಗರೆಟ್, ಯಾರನ್ನೂ ಬಿಡಲಾರೆ. ಅವಳನ್ನು ಮದುವೆಯಾದರೂ ನಿನ್ನನ್ನು ಪ್ರೀತಿಸುತ್ತೇನೆ" ಎಂದು ಮಾರ್ಗರೆಟ್ಟಳನ್ನು ಸಮಾಧಾನ ಪಡಿಸಲು ಉದ್ದೇಶಿಸಿ ಮುಟ್ಟುತ್ತಿದ್ದಂತೆ ಕೆರಳಿದ ಮಾರ್ಗರೆಟ್ "ನೀನು ಅವಳನ್ನು ಮರೆಯುವವರೆಗೂ ನನ್ನನ್ನು ಮುಟ್ಟಬೇಡ. ಬೇರೆಯವರನ್ನು ಮುಟ್ಟಿದ ಕೈ ನನ್ನನ್ನು ಮುಟ್ಟುವುದು ಕೂಡದು" ಎಂದು ಬಿರುನುಡಿಯುತ್ತಾಳೆ. ಬರಸಿಡಿಲಿನಂತೆರಗಿ ಬಂದ ಬಿರುನುಡಿಗಳನ್ನು ಕೇಳಿದ ರಾಮಾಚಾರಿ ನೋವಾದರೂ ಎದೆಗುಂದದೆ "ಸರಿ ಹಾಗಾದರೆ ನಾನು ಬರುತ್ತೇನೆ. ಮಾರ್ಗರೇಟ್, ಮತ್ತೆಂದೂ ನಿನಗೆ ತೊಂದರೆ ಕೊಡುವುದಿಲ್ಲ. ಆದರೆ ಇಷ್ಟು ಮಾತ್ರ ನಂಬು ನನ್ನ ಜೀವವಿರುವವರೆಗೂ ನಿನ್ನನ್ನು ಪ್ರೀತಿಸುತ್ತೇನೆ." ಎಂದು ಹೇಳಿದವನೇ ಬಿರುಗಾಳಿಯಂತೆ ಹೊರಬರುತ್ತಾನೆ.

ಧಿಕ್ಕರಿಸಿ ಬಂದಷ್ಟು ಸುಲಭವಾಗಿ ಮಾರ್ಗರೆಟ್ಟಳನ್ನು ಮರೆತು ಬಿಡುವುದು ಸಾಧ್ಯವಾಗುವುದಿಲ್ಲ. ಒಂದು ಒಂದಾಗಿ ಅನೇಕ ರಸನಿಮಿಷಗಳನ್ನು ಸವಿದ ಎರಡು

ಜೀವಗಳ ಅಗಲಿಕೆ ಸುಲಭ ಸಾಧ್ಯವಲ್ಲ. "ನಾನು ನಿನ್ನವಳು, ಈ ಮೈ ನಿನ್ನದು' ಎನ್ನುವ ಮಾರ್ಗರೆಟ್ಟಳ ಮೋಹಕ ಮಾತುಗಳು ರಾಮಾಚಾರಿಯ ಮಿದುಳಿನಲ್ಲಿ ಪ್ರತಿಧ್ವನಿಸುತ್ತವೆ. ಅದರ ಮರುಗಳಿಗೆಯೇ "ಮಾರ್ಗರೆಟ್ ಇಲ್ಲ, ನನ್ನ ಪಾಲಿಗಿನ್ನು ಮಾರ್ಗರೆಟ್ ಇಲ್ಲ" ಎಂಬ ಅರಿವಾಗಿ ದುಃಖ, ಕ್ರೋಧ, ನಿರಾಶೆಗಳು ದಹಿಸುತ್ತವೆ. ನೂರಾರು ಭಾವಗಳ ತುಮುಲ. ತನ್ನ ಬಾಳಿನಲ್ಲಿ ಎಂದೂ ಅನುಭವಿಸದ ವಿಪ್ಲವ.

ಈ ಹೊಯ್ದಾಟ, ನಿರಾಶೆ, ದುಃಖದ ಬಿರುಬಿಸಿಲಿಗೆ ಸಿಕ್ಕಿ ಪರಿತಪಿಸುತ್ತಿರುವಾಗಲೇ ಪ್ಲೇಗಿಗೆ ತುತ್ತಾಗಿದ್ದ ತಂದೆ ತೀರಿ ಹೋದದ್ದು ರಾಮಾಚಾರಿಗೆ ಭರಿಸಲಾಗದ ಯಾತನೆಗೀಡು ಮಾಡುತ್ತದೆ. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಗುತ್ತದೆ. ಹೀಗೆ ಒಂದರ ಹಿಂದೊಂದು ಬಂದೆರಗಿದ ಸಿಡಿಲಿನ ಸಾಲುಗಳ ಹೊಡೆತದಿಂದ ರಾಮಾಚಾರಿ ತತ್ತರಿಸಿ ಹೋಗುತ್ತಾನೆ.

ಶವ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದ ಅಲಮೇಲುವಿನ ತಂದೆ ಶಾಮಯ್ಯಂಗಾರ್ಯರು ಮುಂದಿನ ತಿಂಗಳು ಅಲಮೇಲುವಿನ ಮದುವೆಯೆಂಬ ಸುದ್ದಿಯನ್ನು ಹೊರಗೆಡವುತ್ತಾರೆ. ವಿಚಾರ ತಿಳಿದ ರಾಮಾಚಾರಿಯ ಮೈಗೆ ಬೆಂಕಿ ಹೊತ್ತಿಸಿದಂತಾಗುತ್ತದೆ. ದಿಗ್ಗನೆ ತಾನು ಕುಳಿತಿದ್ದ ಸ್ಥಳವನ್ನು ಬಿಟ್ಟು ದೂರ ಹೋಗುತ್ತಾನೆ. ಸುತ್ತಲಿದ್ದವರು "ರಾಮಾಚಾರಿ...ರಾಮಾಚಾರಿ" ಎಂದು ಕೂಗಿದರೂ ತನ್ನದೇ ತುಮುಲದಲ್ಲಿದ್ದ ರಾಮಾಚಾರಿಗೆ ಯಾವುದೂ ಕೇಳಿಸುವುದಿಲ್ಲ. ಹುಡುಕಿಕೊಂಡು ಬಂದ ಚಾಮಯ್ಯನವರೇ ರಾಮಾಚಾರಿಯನ್ನುದ್ದೇಶಿಸಿ "ಕೂಗಿದ್ದು ಕೇಳ್ಲಿಲ್ವೇನೋ, ಏನು ಯೋಚನೆ ಮಾಡ್ತಾ ಇದೀಯ ? " ಎಂದು ಕೇಳುತ್ತಾರೆ. ರಾಮಾಚಾರಿ "ಮೇಷ್ಟ್ರೇ ನನಗೋಸ್ಕರ ನೀವೊಂದು ಕೆಲಸ ಮಾಡಬೇಕು. ಅದು ನಿಮ್ಮಿಂದಲೇ ಸಾಧ್ಯ" ಎನ್ನಲು, 'ಏನು ? ' ಎಂದು ಚಾಮಯ್ಯನವರು ಮರು ಪ್ರಶ್ನೆ ಹಾಕುತ್ತಾರೆ. ಶಾಮಯ್ಯಂಗಾರ್ರಿಗೆ ಹೇಳಿ "ಅಲಮೇಲು ಮದುವೆ ನಿಲ್ಲಿಸಬೇಕು" ಎಂದು ಖಂಡಿತವಾದ ಧ್ವನಿಯಲ್ಲಿ ರಾಮಾಚಾರಿ ಹೇಳುತ್ತಾನೆ. ರಾಮಾಚಾರಿಯ ಅನಿರೀಕ್ಷಿತ ಮಾತುಗಳಿಂದ ಚಕಿತರಾದ ಚಾಮಯ್ಯನವರು 'ಏಕೆ ? ' ಎಂದು ಮರು ಪ್ರಶ್ನೆ ಹಾಕಲು ರಾಮಾಚಾರಿ ಅವನ್ನೆಲ್ಲ ಬಿಡಿಸಿ ಹೇಳಲು ಇಷ್ಟವಿಲ್ಲದೆ "ಅದೆಲ್ಲ ಹೇಳೋಕೆ ಪುರುಸೊತ್ತಿಲ್ಲ. ಅಲಮೇಲುನ ಮದುವೆ ಮಾಡಿಕೋಬೇಕು...ಒಳ್ಳೆ ಮಾತಿನಲ್ಲಿ ಶಾಮಯ್ಯಂಗಾರ್ರು ಒಪ್ಪಿಕೊಂಡರೆ ಸರಿ, ಇಲ್ದೇ ಹೋದ್ರೆ ಮದುವೆ ಚಪ್ಪರಕ್ಕೆ ಬೆಂಕಿ ಹಚ್ಚಿ ಎಲ್ಲರನ್ನೂ ಬೇಯಿಸಿ ಬಿಡ್ತೀನಿ" ಎಂದು ಶಪಥ ಮಾಡುತ್ತಾನೆ.

ರಾಮಾಚಾರಿಯ ನಿರ್ಧಾರದ ಮಾತುಗಳನ್ನು ಕೇಳಿದ ಚಾಮಯ್ಯನವರಿಗೆ ನಿಂತ ನೆಲ ಕುಸಿಯುತ್ತಿರುವಂತೆ ಭಾಸವಾಗುತ್ತದೆ. ಪ್ರಶಾಂತವಾಗಿದ್ದ ಕೊಳಕ್ಕೆ ಕಲ್ಲೆಸೆದಂತಾಗಿ ಚಾಮಯ್ಯನವರ ತಲೆಯಲ್ಲಿ ಹಲವು ಯೋಚನೆಗಳ ಸಮರ ಪ್ರಾರಂಭವಾಗುತ್ತದೆ.

ಮೈ ಮನಗಳ ಪರಿವೆಯಿಲ್ಲದೆ, ಯೋಚನೆಯ ಸುಳಿಯಲ್ಲಿ ಸಿಕ್ಕ ರಾಮಾಚಾರಿ ತೂರಾಡುತ್ತಾ ಮನೆ ತಲುಪಿದಾಗ ತನ್ನ ತಾಯಿಯನ್ನು ಸಂತೈಸಲು ಬಂದಿರುವ ಪದ್ಮಮ್ಮ ಮತ್ತು ಅಲಮೇಲು ಕಣ್ಣಿಗೆ ಬೀಳುತ್ತಾರೆ. ಆಗಲೆ ರಾತ್ರಿ ಸರಿಹೊತ್ತಾಗಿರಲು ಅವರನ್ನು ಮನೆ ತಲುಪಿಸುವ ಜವಾಬ್ದಾರಿಯನ್ನು ಸೋನಾಬಾಯಿ ಮಗನಿಗೆ ವಹಿಸುತ್ತಾರೆ. ದಾರಿ ಯುದ್ದಕ್ಕೂ ರಾಮಾಚಾರಿ ಹಾಗೂ ಅಲಮೇಲುವಿನ ನಡುವೆ ವ್ಯಂಗ್ಯ ಮಿಶ್ರಿತ ಮಾತುಕತೆಗಳಾಗುತ್ತವೆ. ಅಲಮೇಲುವಿನ ಮಾತಿನ ಧಾಟಿಯಿಂದ ಆಕೆಗೆ ತನ್ನ ಮೇಲೆ ಪ್ರೀತಿ ಇರುವುದು ವ್ಯಕ್ತವಾಗುತ್ತದೆ. ಅಲಮೇಲುವಿನ ಮನೆಯಿಂದ ಹಿಂತಿರುಗುವಾಗ ರಾಮಾಚಾರಿಯನ್ನು ಏಕಾಂತವಾಗಿ ಕಾಣಲೆಂದು ಹಿತ್ತಲಿನಿಂದ ಕದ್ದು ಬಂದ ಅಲಮೇಲು ರಾಮಾಚಾರಿಯನ್ನುದ್ದೇಶಿಸಿ "ನನಗೆ ನೀನೇ ಗಂಡ" ಆವತ್ತೆ ನಿನಗೆ ಮಾತುಕೊಟ್ಟಿದ್ದೀನಿ. ಈ ಮದ್ವೆ ಹೇಗಾದ್ರೂ ನಿಲ್ಲಿಸಿಬಿಡು. ನಿನ್ನ ಬಿಟ್ಟು ನಾನು ಬೇರೆ ಯಾರನ್ನೂ ಮದುವೆ ಮಾಡಿಕೊಳ್ಳಲ್ಲ" ಎಂದು ಅಂಗಲಾಚುತ್ತಾಳೆ. "ನಿನಗೋಸ್ಕರ ನಾನು ಏನು ಬೇಕಾದ್ರೂ ಮಾಡಲಿಕ್ಕೆ ಸಿದ್ಧವಾಗಿದೀನಿ ಅಲಮೇಲು. "ಏನು ಮಾಡಬೇಕು ಹೇಳು" ರಾಮಾಚಾರಿ ಅಭಯ ನೀಡುವಂತೆ ಹೇಳುತ್ತಾನೆ. "ನಾನು ನಿನ್ನ ಜೊತೆಯಲ್ಲೇ ಬಂದು ಬಿಡ್ತೀನಿ, ಎಲ್ಲಾರ ಕರಕೊಂಡ್ಹೋಗು" ಎನ್ನುವ ಅಲಮೇಲುವಿನ ಪ್ರೀತಿಯ ಆಧಿಕ್ಯವನ್ನರಿತ ರಾಮಾಚಾರಿ "ನನಗೂ ನಿನ್ನ ಮೇಲೆ ಅಷ್ಟೇ ಪ್ರೀತಿಯಿದೆ, ಏನಾದ್ರೂ ಆಗ್ಲಿ ನಾನು ಬಿಡೋಲ್ಲ" ಎಂದು ಧೈರ್ಯ ಹೇಳಿ ಅಲಮೇಲುವನ್ನು ಬೀಳ್ಕೊಡುತ್ತಾನೆ.

ಅವೇಳೆಯಲ್ಲಿ ಮಗಳು ಕದ್ದು ಹೊರಗೆ ಹೋಗಿ ಬಂದದ್ದನ್ನು ಕಂಡ ಶಾಮಯ್ಯಂಗಾರರಿಗೆ ಅದೇ ದೊಡ್ಡ ಅಪರಾಧವಾಗಿ, ಅನಾಹುತವಾಗಿಹೋದಂತೆ ಭಾವಿಸಿ ಅಲಮೇಲುವಿಗೆ ಮೈ ರಕ್ತ ಬರುವಂತೆ ಬಡಿಯುತ್ತಾರೆ. ರಾಮಾಚಾರಿಯೊಡನೆ ಗುಪ್ತ ಪ್ರಣಯ ನಡೆಸಿ ಸರ್ವಸ್ವವು ನಾಶವಾಗಿ ಹೋಗಿರುವಂತೆ ಊಹಿಸಿ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತೆ ಕಂಗಾಲಾಗುತ್ತಾರೆ. ವರದಯ್ಯಂಗಾರಿಯಿಂದ ವಿಷಯ ತಿಳಿದ ಚಾಮಯ್ಯನವರು ಕೆಂಡವಾಗುತ್ತಾರೆ. ರಾಮಾಚಾರಿಯನ್ನು ಹುಡುಕಿಕೊಂಡು ಬಂದಾಗ ಸದಾ ಶಾಂತವಾಗಿರುತ್ತಿದ್ದ ಚಾಮಯ್ಯನವರು ಅಂದು ರುದ್ರಸ್ವರೂಪರಾಗಿರುವುದನ್ನು ಕಂಡು ರಾಮಾಚಾರಿಗೆ ಕ್ಷಣ ಅಂಜಿಕೆಯಾಗುತ್ತದೆ. ಅವರ ಕಣ್ಣುಗಳಲ್ಲಿ ಉರಿಯುತ್ತಿದ್ದ ಬೆಂಕಿಯ ಜ್ವಾಳ ರಾಮಾಚಾರಿಗೆ ಸೋಕಿ ಏಕೆಂದು ಅರಿಯದೆ ತತ್ತರಿಸಿ ಹೋಗುತ್ತಾನೆ.

ಆಂಜನೇಯನ ಗುಡಿಯ ಹತ್ತಿರ ಬರುತ್ತಾರೆ. ನೀನು "ಮದ್ವರಾಮಾಚಾರ್ರ ಮಗನೋ ಅಥವಾ ಬೇರೆಯವರಿಗೆ ಹುಟ್ಟಿದವನೋ" ಚಾಮಯ್ಯನವರು ರಾಮಾಚಾರಿಯ ಎದೆಗೆ ನೇರವಾಗಿ ಗುರಿಯಿಟ್ಟು ಬಾಣಬಿಟ್ಟರು. ಚಾಮಯ್ಯನವರು ತನ್ನ ಹುಟ್ಟನ್ನೇ ಹಂಗಿಸುವಂತೆ ಕೇಳಿದ ಆ ಪ್ರಶ್ನೆಯನ್ನು ಕೇಳಿ ರಾಮಾಚಾರಿಯನ್ನು ಕವಿದಿದ್ದ ಭಯ ಎಲ್ಲಿಯೋ ಹಾರಿಹೋಗಿ ಸಿಟ್ಟಿನಿಂದ "ನೀವಾಗೋ ಹೊತ್ತಿಗೆ ಆ ಮಾತು ಹೇಳಿ ಬದುಕಿದಿರಿ, ಸಾರ್. ಇನ್ನೊಂದ್ಸಲ ಅಂಥ ಪ್ರಶ್ನೆ ಕೇಳಬೇಡಿ" ಎಂದು

ಎಚ್ಚರಿಸುತ್ತಾನೆ. "ರಾಮಾಚಾರಿ ಇವತ್ತು ನನ್ನ ಕೈಲಿ ನಿನ್ನ ಪ್ರಾಣ ಹೋಗಬೇಕು, ಇಲ್ಲವೇ ನಿನ್ನ ಕೈಲಿ ನನ್ನ ಪ್ರಾಣ ಹೋಗಬೇಕು. ಎರಡರಲ್ಲಿ ಒಂದಾಗಬೇಕು. ಹೇಳು ಈ ಮನೆಹಾಳು ಕೆಲ್ಸ ಯಾಕೆ ಮಾಡ್ದೆ. ಅಲಮೇಲೂನ ಹೊರಗೆ ಕರೆದುಕೊಂಡು ಹೋಗಿ ಕೆಡಿಸಿದ್ದುಂಟೋ ಇಲ್ವೊ ?"

ಚಾಮಯ್ಯನವರ ಕೊನೆಯ ಮಾತಿನಿಂದ ಸ್ತಂಭಿತನಾದ ರಾಮಾಚಾರಿ, ಅನಿರೀಕ್ಷಿತವಾದ ಆಘಾತದಿಂದ ಚೇತರಿಸಿಕೊಳ್ಳಲಾಗದೆ, ಕಂಬದಂತೆ ನಿಂತೇಯಿದ್ದ. ತಮ್ಮ ಪ್ರಶ್ನೆಗೆ ತಕ್ಷಣ ಉತ್ತರ ಕೊಡದ ರಾಮಾಚಾರಿಯನ್ನು ಕಂಡು ಸಹನೆ ಸೋತು, ರಾಮಾಚಾರಿಯನ್ನು ದೊಣ್ಣೆಯಿಂದ ಅಪ್ಪಳಿಸಿ "ಯಾಕೋ ಸುಮ್ಮನಾಗಿಬಿಟ್ಟೆ. ಬೊಗಳು – ಆ ಅರೀದ ಹುಡುಗೀನ ಯಾಕೆ ಕೆಡಿಸಿದೆ ?"

ಚಾಮಯ್ಯನವರು ಬೀಸಿದ ದೊಣ್ಣೆ ಮೈ ಮುಟ್ಟುತ್ತಿದ್ದಂತೆ ತಡೆದುಕೊಂಡಿದ್ದ ಸಿಟ್ಟು ಭುಗಿಲ್ಲೆಂದು ಆಸ್ಫೋಟಿಸಿ "ಮೇಷ್ಟ್ರೇ ಬದುಕಿರಬೇಕೂಂತ ಆಸೆ ಇದ್ರೆ ಇನ್ನೊಂದ್ಸಲ ಕೈ ಎತ್ತಬೇಡಿ. ನನ್ನ ಕೊಲ್ಲಬೇಕು ಅನ್ನೋ ಆಸೆ ಇದ್ರೆ ತೀರಿಸಿಕೊಳ್ಳಿ. ಆದರೆ ಇಲ್ಲದ್ದು ಸುಳ್ಳು ಪಳ್ಳು ಹೇಳಬೇಡಿ" ಎಂದು ಗುಡುಗಿದ.

"ಹಾಗಾದ್ರೆ–ನೀನು ಅಲಮೇಲೂನ ಕೆಡಿಸಲಿಲ್ಲವೇ ?" ರಾಮಾಚಾರಿಯ ಮಾತಿನಲ್ಲಿ ನಂಬಿಕೆಯಿಲ್ಲದೆ ಚಾಮಯ್ಯನವರು ಪುನಃ ಪ್ರಶ್ನಿಸಿದರು.

"ಊಹೂ. ಪ್ರಾಣದೇವರ ಪಾದದಾಣೆ ನಾನು ಅವಳನ್ನು ಕೆಡಿಸಲಿಲ್ಲ. ನನಗೆ ಅವಳ ಮೇಲೆ ಎಷ್ಟು ಪ್ರೀತಿ ಇದೆಯೋ, ಅವಳಿಗೂ ನನ್ನ ಮೇಲೆ ಅಷ್ಟೇ ಪ್ರೀತಿಯಿದೆ. ನನ್ನ ಹೆಂಡತಿಯಾಗೋಳನ್ನ ಯಾಕೆ ಕೆಡಿಸಲಿ ? ಮೇಸ್ಟರೆ ಒಂದು ಸಲ ನಾನು ನಿಮಗೆ ಸುಳ್ಳಾಡೋದಿಲ್ಲ ಅಂತ ಮಾತು ಕೊಟ್ಟಿದೀನಿ. ಅದೊಂದು ಮಾತ್ರ ಕೆಡಿಸಿಕೊಳ್ಳೋಲ್ಲ" ಚಾಮಯ್ಯನವರ ಪ್ರತ್ಯುತ್ತರವನ್ನು ಕಾಯದೆ ರಾಮಾಚಾರಿ ಬಿರುಸಾಗಿ ನಡೆದ.

ನಿಜಸ್ಥಿತಿ ಅರಿತ ಚಾಮಯ್ಯನವರು ನಿಟ್ಟುಸಿರು ಬಿಟ್ಟರು. ರಾಮಾಚಾರಿ ನಂಬಿದ ಹುಡುಗಿಯನ್ನು ಕೆಡಿಸುವಂಥ ನೀಚನಲ್ಲವೆಂಬುದು ಮನವರಿಕೆಯಾದಾಗ ಅವನ ಬಗೆಗೆ ಮತ್ತಷ್ಟು ಅಭಿಮಾನ ಮೂಡಿತು. ಅಲಮೇಲು–ರಾಮಾಚಾರಿ ಪರಸ್ಪರ ಪ್ರೀತಿಸುವುದನ್ನು ನೆನೆದು "ಈ ಜೋಡಿ–ದಂಪತಿಗಳೇ ಆದರೆ ಎಷ್ಟು ಸೊಗಸು" ಎಂದುಕೊಳ್ಳುತ್ತಾರೆ ತಮ್ಮ ಮನಸ್ಸಿನಲ್ಲಿಯೇ. ತಮ್ಮ ಮನದಿಂಗಿತವನ್ನು ಶಾಮಯ್ಯಂಗ್ರಾರ ಮುಂದೆ ತಿಳಿಸಿದಾಗ ಶಾಮಯ್ಯಂಗಾರ್ರು ಕೆರಳಿ "ಈ ಮಾತು ಹೇಳೋಕೆ ಇಷ್ಟು ದೂರ ಬಂದ್ರಾ ಚಾಮಯ್ಯನೋರೆ. ನನ್ನ ಮಗಳನ್ನು ಆ ಪೋಕರಿಗೆ ಕೊಟ್ಟು ಮದುವೆ ಮಾಡೂಂತ ಹೇಳೋಕೆ ನಿಮಗೆ ಬಾಯಾದರೂ ಹೇಗೆ ಬಂತು. ಇದೆಲ್ಲ ಆಗಹೋಗದ ಮಾತು" ಎಂದು ಖಡಾ ಖಂಡಿತವಾಗಿ ಹೇಳುತ್ತಾರೆ. ನಿಶ್ಚಿತವಾಗಿರುವ ಮದುವೆ ಸಂಸೂತ್ರವಾಗಿ ನಡೆಯುವಂತಾಗಲು ಚಾಮಯ್ಯನವರೇ ರಾಮಾಚಾರಿಗೆ ಅಲಮೇಲುವನ್ನು ಮರೆತು ಬಿಡುವಂತೆ ಹೇಳಲು

ಮಧ್ಯಸ್ಥಿಕೆ ವಹಿಸುವಂಥವ ಇಕ್ಕಟ್ಟಿನ ಪರಿಸ್ಥಿತಿ ಚಾಮಯ್ಯನವರಿಗೆ ಉಂಟಾಗುತ್ತದೆ. ಗೋಳಿಡಿದು ಕಣ್ಣೀರು ಹರಿಸಿ 'ಮರ್ಯಾದೆ ಉಳಿಸಿ' ಎನ್ನುವ ಪದ್ಮಮ್ಮ 'ನಿಮ್ಮಿಂದ ಸಾಧ್ಯವಾಗದೆ ಹೋದರೆ ಹೇಳಿ ನಾವೇ ಎಲ್ಲಾದ್ರೂ ದೇಶಾಂತರ ಹೋಗ್ತೀವಿ' ಎನ್ನುವ ಶಾಮಯ್ಯಂಗಾರರು. ಕೊನೆಗೆ ಯಾವುದೋ ನಿರ್ಧಾರಕ್ಕೆ ಬಂದ ಚಾಮಯ್ಯನವರು "ಶಾಮಯ್ಯಂಗಾರ್ರೆ ಯೋಚಿಸಬೇಡಿ ದೇವರಿದ್ದಾನೆ. ಈ ಘಟ ಇರೋವರೆಗೂ ಅವಮರ್ಯಾದೆಯಾಗಲು ಬಿಡೊಲ್ಲ" ಎಂದು ಹೇಳಿ ಅಲ್ಲಿನಿಲ್ಲಲಾಗದೆ ಹೊರಬರುತ್ತಾರೆ.

ಈ ಇಕ್ಕಟ್ಟಿನ ಪರಿಸ್ಥಿತಿಯನ್ನು ಬಿಡಿಸುವುದು ಸುಲಭವಲ್ಲ ಎನ್ನುವ ಅರಿವು ಚಾಮಯ್ಯನವರಿಗೂ ಇದೆ. ರಾಮಾಚಾರಿ ಎಂದೂ ಸುಳ್ಳು ಹೇಳಲಿಲ್ಲ. ನನ್ನನ್ನೇ ಹೊಡೆಯಲು ಕೈ ಎತ್ತಿದಾಗಲೂ ಅವನ ನಾಲಿಗೆ ಸುಳ್ಳು ಹೇಳಲಿಲ್ಲ. ಅಂಥ ಹುಡುಗನ ಮನಸ್ಸು ಮುರಿಯೋದು ಹೇಗೆ? ಎನ್ನುವ ವ್ಯಥೆ ಒಂದು ಕಡೆ. ಯಾರಿಗೂ ಯಾವ ಕಾರಣಕ್ಕಾಗಿಯೂ ನೋವನ್ನುಂಟು ಮಾಡಲಿಚ್ಛಿಸದ ಅವರ ಕೋಮಲ ಜೀವ ಎಳೆಯ ಜೀವಗಳೆರಡರ ಬಾಳಿನ ಕನಸನ್ನು ಮುರಿಯಲು ಹೊರಟಿರುವ ನೋವು ಮತ್ತೊಂದು ಕಡೆ. ಈ ಹೊಯ್ದಾಟದಲ್ಲಿ "ದೇವರೇ ಈ ಕೆಲಸದಲ್ಲಿ ನನ್ನಿಂದ ತಪ್ಪಾಗುತ್ತಿದ್ದರೆ ಕ್ಷಮಿಸು" ಎಂದು ದೇವರಲ್ಲಿ ಆರ್ತವಾಗಿ ಬೇಡುತ್ತಾರೆ.

ಬಾಳಿನ ಸಮಸ್ಯೆಗಳೆಲ್ಲ ತೀರಿ ಗೆಲುವು ಭರವಸೆಗಳು ಲಾಸ್ಯವಾಡುತ್ತಿದ್ದ ರಾಮಾಚಾರಿಯ ಮುಖ ನೋಡಿದಾಗ ಚಾಮಯ್ಯನವರ ನಾಲಗೆ ಒಳ ಸೆಳೆದುಕೊಳ್ಳುತ್ತದೆ. "ಯಾಕ್ಸಾರ್ ಏನೋ ಭಾಳಾ ಯೋಚನೆ ಮಾಡ್ತಾ ಇದ್ದೀರ? " ರಾಮಾಚಾರಿಯೇ ಮೌನ ಮುರಿದು ಮಾತನಾಡುತ್ತಾನೆ. ಮನಸ್ಸನ್ನು ಕಲ್ಲುಮಾಡಿಕೊಂಡ ಚಾಮಯ್ಯನವರು "ಒಳ್ಳೇದೋ ಕೆಟ್ಟದ್ದೋ ಏನಿದ್ರೂ ಹೇಳಿ ಸಾರ್ ನೀವು ಕೊಟ್ಟರೆ ವಿಷಾನಾದರೂ ಗಟಗಟಾಂತ ಕುಡಿದು ಬಿಡ್ತೀನಿ ಎನ್ನುವ ರಾಮಾಚಾರಿಗೆ"ಇವತ್ತಿಂದ ಅಲಮೇಲುನ ಮರೆತು ಬಿಡಬೇಕು" ಎನ್ನುತ್ತಾರೆ. "ಏನಂದ್ರಿ" ತಟ್ಟನೆ ಮರು ಪ್ರಶ್ನೆ ಹಾಕುತ್ತಾನೆ ರಾಮಾಚಾರಿ. "ನೀನು ನನ್ನನ್ನು ಮರೆತು ಬಿಡು ಅಂತ ಅಲಮೇಲುವಿಗೆ ಹೇಳಿ, ನೀನೇ ಮುಂದೆ ನಿಂತು ಅವಳ ಮದುವ ನಡೆಸಿಕೊಡಬೇಕು" ಚಾಮಯ್ಯನವರು ದೃಢವಾಗಿ ಹೇಳುತ್ತಾರೆ. ಆ ಮಾತು ಕೇಳಿದ ರಾಮಾಚಾರಿಯ ರಕ್ತ ಕುದಿಯುತ್ತದೆ. "ಸಾರ್...ಸಾರ್, ನನ್ನ...ಪರೀಕ್ಷೆ ಮಾಡೋಕೆ ಹೇಳಬೇಡಿ ಸಾರ್" ಎಂದು ತೊದಲುತ್ತಾನೆ. ಚಾಮಯ್ಯನವರು ತಮ್ಮ ಸಂಕಟವನ್ನು ನಿವೇದಿಸಿಕೊಳ್ಳಲೆಂಬಂತೆ "ನಿನ್ನ ನಾನು ಪರೀಕ್ಷೆ ಮಾಡ್ತಾ ಇಲ್ಲ ರಾಮಾಚಾರಿ ತಮ್ಮ ಮರ್ಯಾದೆ ಹೋಗುತ್ತಲ್ಲಾಂತ ಅತ್ತಾ ಇದ್ದ ಪದ್ಮಮ್ಮನೋರಿಗೆ ಮಾತುಕೊಟ್ಟು ಬಂದಿದ್ದೀನಿ" ಎನ್ನುತ್ತಾರೆ. ಮುಂದುವರೆದು "ನೀನು ನನ್ನ ಮಾತು ನಡೆಸಿಕೊಡದಿದ್ದರೆ ನಾನೇ ಸಾಯುತ್ತೇನೆ" ಎಂದು ಹೇಳುತ್ತಾರೆ.

ರಾಮಾಚಾರಿಯ ಮಿದುಳು ಚಕ್ರದಂತೆ ಗಿರಗಿರನೆ ಸುತ್ತಲು ಪ್ರಾರಂಭವಾಗುತ್ತವೆ, ನೂರಾರು ಗತ ಚಿತ್ರಗಳು ಕಣ್ಮುಂದೆ ಬರುತ್ತವೆ. 'ಯಾರಿಗಾಗಿಯೂ ಅಲಮೇಲುವನ್ನು ಬಿಡುವುದಿಲ್ಲ' ಮಾರ್ಗರೆಟ್ಟಳನ್ನು ಧಿಕ್ಕರಿಸಿ ಬರುವಾಗ ಹೇಳಿದ್ದ ಮಾತು ನೆನಪಿಗೆ ಬರುತ್ತದೆ" ಎಲ್ಲ ಮುಗಿದು ಹೋಯಿತು ಎಂದು ಅಳುತ್ತಾನೆ, ಕೊನೆಗೆ ತನ್ನ ಹಣೇ ಬರಹವೇ ಇಷ್ಟು ಎಂದು ತೀರ್ಮಾನಿಸಿ "ನಮ್ಮಪ್ಪನಾಣೆ ಇನ್ನು ನಿಮ್ಮ ಅಲಮೇಲುವಿನ ಮುಖ ನೋಡಲ್ಲ. ಇವತ್ತಿಂದ ಅವಳು ನನ್ನ ಪಾಲಿಗೆ ಸತ್ತಂತೆಯೇ ಬಿಡಿ" ಎಂದು ತನ್ನ ಕೊನೆಯ ನಿರ್ಧಾರವನ್ನು ತಿಳಿಸುತ್ತಾನೆ.

ರಾಮಾಚಾರಿಯ ವ್ಯಕ್ತಿತ್ವ ಇಂಥ ಕಡೆ ಮುಗಿಲು ಮುಟ್ಟುತ್ತದೆ. ಯಾವ ಒಂದು ಹೆಣ್ಣು ನೀನಿಲ್ಲದೆ ಬದುಕಲಾರೆ ಎಂದಿದ್ದಳೋ, ಯಾರ ಬಳಿ ಅಲಮೇಲುವನ್ನು ಮರೆಯುವುದಿಲ್ಲವೆಂದು ಶಪಥ ಮಾಡಿದ್ದನೋ ಅಂಥ ಪ್ರೇಮಮೂರ್ತಿಯನ್ನು ಮಾತಿಗೆ ಕಟ್ಟು ಬಿದ್ದು ತೊರೆಯುತ್ತಾನೆ- ಅವಳ ಪ್ರೀತಿಗೆ ಎರವಾಗುತ್ತಾನೆ, ಬೇರೆ ಯಾವ ವಿಚಾರವಲ್ಲಾದರೂ ಸರಿ ಬದಲಾಯಿಸಬಹುದಾದ ಮನಸ್ಸು ಗಂಡು ಹೆಣ್ಣಿನ ಪ್ರೀತಿ ಪ್ರೇಮಗಳ ವಿಷಯದಲ್ಲಿ ನಿರ್ಧಾರವನ್ನು ಬದಲಿಸುವುದು ಸುಲಭದ ಮಾತಲ್ಲ. ಅದರಲ್ಲೂ ರಾಮಾಚಾರಿಯಂಥ ಹಠಮಾರಿ ಯುವಕ ಅಂಥ ನಿರ್ಧಾರವನ್ನು ತಳೆದ ಎಂದರೆ ಅದೊಂದು ಪವಾಡಸದೃಶ ಪರಿವರ್ತನೆಯೆಂದೇ ಹೇಳಬೇಕು. ಚಾಮಯ್ಯನವರು ಒಡ್ಡಿದ ಪರೀಕ್ಷೆಯಲ್ಲಿ ರಾಮಾಚಾರಿ ಉತ್ತೀರ್ಣನಾಗುತ್ತಾನೆ.

*　　　　　*

ತಂದೆ ತೀರಿಹೋದ ನಂತರ ಸಂಸಾರದ ಭಾರ ಹೆಗಲ ಮೇಲೆ ಬೀಳಲು ರಾಮಾಚಾರಿ ಶಾಲೆಗೆ ತಿಲಾಂಜಲಿ ಇತ್ತು ಪೈಲ್ವಾನ್ ಸಣ್ಣ ಬಸಪ್ಪನ ಶಿಫಾರಸ್ಸಿನಿಂದ ಸಿದ್ದ ಬಸಪ್ಪನ ಮಂಡಿಯಲ್ಲಿ ಕೆಲಸವೊಂದನ್ನು ದೊರಕಿಸಿಕೊಳ್ಳುತ್ತಾನೆ. ಅಲ್ಲಿಂದ ಅವನ ಜೀವನದ ಗತಿ ಬದಲಾಗಿ ಮನೆ-ಮನಗಳಲ್ಲಿ ಶಾಂತಿ ನೆಲೆಸಿ, ಜೀವನದಲ್ಲಿ ತುಸು ನೆಮ್ಮದಿ ಕಂಡು ಬರುತ್ತದೆ. ಆದರೆ ಅದೂ ಕ್ಷಣಿಕ. ರಾಮಾಚಾರಿಯ ಬದುಕಿನಲ್ಲಿ ತಂಗಾಳಿಗಿಂತ ಬಿರುಗಾಳಿಯೇ ಹೆಚ್ಚು. ತಂಪಿಗಿಂತ ಬಿಸಿಲೇ ಅಧಿಕ.

ಈ ನಡುವೆ ರಾಮಾಚಾರಿಗೆ ತಿಳಿಯದಂತೆ ಸಣ್ಣರಂಗಪ್ಪ ಮಾರ್ಗರೆಟ್ಟಳಿಂದ ಮುನ್ನೂರು ರೂ. ಪಡೆದು ರಾಮಾಚಾರಿಗೆ ಕೊಟ್ಟು ಆತನ ತಂದೆಯ ಕರ್ಮಾಂತರಕ್ಕೆ ನೆರವಾಗಿರುತ್ತಾನೆ. ಹಣ ಕೊಡುವಾಗ ಮಾರ್ಗರೆಟ್ 'ನನ್ನ ಮೇಲೆ ನಿಮಗೆ ನಿಜವಾಗಿಯೂ ಸಿಸ್ಟರ್ ಅನ್ನೋ ಅಭಿಮಾನವಿದ್ದರೆ ಒಂದು ಸಲ ಯಾವಾಗಲಾದರೂ-ಅವರನ್ನು ಇಲ್ಲಿಗೆ ಕರೆ ತರ್‍ತೀರಾ ?' ಎಂದಿರುತ್ತಾಳೆ. ಸಣ್ಣರಂಗಪ್ಪ 'ಆಗಲಿ' ಎಂದು ಮಾತು ಕೊಟ್ಟಿರುತ್ತಾನೆ. ಅವಕಾಶಕ್ಕಾಗಿ ಕಾದಿದ್ದ ಸಣ್ಣರಂಗಪ್ಪ ರಾಮಾಚಾರಿಯ ಮನೆಗೇ ಹುಡುಕಿಕೊಂಡು ಹೋಗುತ್ತಾನೆ. ಹಣಕ್ಕೆ ಪೀಠಿಕೆ ಹಾಕಿ ಸುತ್ತಿ ಬಳಸಿ ಕೊನೆಗೆ 'ನೀನು ಹೋಗಿ ಮಾರ್ಗರೆಟ್ನ ನೋಡಿ ಮಾತಾಡಿಸಿಕೊಂಡು ಬಾ. ಅಸಲು ಬಡ್ಡಿ ಬಂತು ಅಂತ ರಸೀದಿ ಕೊಟ್ಟು ಬಿಡ್ತೀನಿ' ಎನ್ನುತ್ತಾನೆ

ಮಾರ್ಗರೆಟ್ಟಳನ್ನು ನಾನು ನೋಡಬೇಕೆಂದು ಸಣ್ಣರಂಗಪ್ಪ ಏಕೆ ಒತ್ತಾಯಿಸುತ್ತಿದ್ದಾನೆ. ಇವನಿಗೂ ಅವಳಿಗೂ ಏನು ಸಂಬಂಧ. ರಾಮಾಚಾರಿಯ ಮನಸ್ಸಿನಲ್ಲಿ ಸಂಶಯದ ಬೀಜ ಮೊಳೆಯುತ್ತದೆ. ಕೊನೆಗೆ ಸಣ್ಣರಂಗಪ್ಪನಿಂದಲೇ 'ಆ ಹುಡುಗಿ ಅಂಥವಳಲ್ಲ' ಎಂದು ತಿಳಿದಾಗ ಹೃದಯ ಹಗುರವಾಗುತ್ತದೆ.

ವಿವಿಧ ಭಾವನೆಗಳ, ಆಲೋಚನಾ ತರಂಗಗಳ ಗುಂಗಿನಲ್ಲಿಯೇ ಮೇರಿಯಮ್ಮನ ಮನೆಯ ಬಾಗಿಲು ತಟ್ಟುತ್ತಾನೆ. ರಾಮಾಚಾರಿಯ ಆಕಸ್ಮಿಕ ಬರುವಿಕೆ ಮೇರಿಯಮ್ಮನಿಗೆ ಅಚ್ಚರಿ ತರುತ್ತದೆ. ಒಳ ಕರೆದು ಕೂರಿಸುತ್ತಾಳೆ. ರಾಮಾಚಾರಿ ತನ್ನಿಂದ ದೂರ ಹೋದಾಗಿನಿಂದ ಅದೇ ಚಿಂತೆಯಲ್ಲಿ ಕೊರಗಿ ಕೃಶಳಾಗಿ ಹಾಸಿಗೆ ಹಿಡಿದಿದ್ದ ಮಾರ್ಗರೆಟ್‌ಗೆ ಈಗ ಬಂದವನು ರಾಮಾಚಾರಿ ಎಂದು ತಿಳಿದಾಗ ಆಕೆಯ ಬತ್ತಿದ ಕಣ್ಣುಗಳಲ್ಲಿ ಪುನಃ ಮಿಂಚು ಕಾಣಿಸಿಕೊಳ್ಳುತ್ತದೆ. ಪ್ರಯಾಸದಿಂದ ಹಾಸಿಗೆ ಬಿಟ್ಟೆದ್ದು ತನ್ನ ಪ್ರಿಯಕರನನ್ನು ಕಾಣಲು ಬರುತ್ತಾಳೆ. ರಾಮಾಚಾರಿ ನೋಡುತ್ತಾನೆ. ನಿಸ್ತೇಜವಾದ ಮುಖ, ಹೊಳಪನ್ನು ಕಳೆಕೊಂಡ ಕಣ್ಣುಗಳು, ಅಸ್ತವ್ಯಸ್ತವಾದ ಕೂದಲು, ರಾಮಾಚಾರಿಯ ಕರುಳು ಮಿಡಿಯುತ್ತದೆ. ಇನ್ನೇನು ಬೀಳುವುದರಲ್ಲಿದ್ದ ಮಾರ್ಗರೆಟ್ಟಳನ್ನು ತೋಳುಗಳಿಂದ ತಬ್ಬಿ ಹಿಡಿದು ಹಾಸಿಗೆಯಲ್ಲಿ ಮಲಗಿಸುತ್ತಾನೆ. ಅವಳ ಅವಸ್ಥೆಯನ್ನು ಕಣ್ಣಾರ ಕಂಡ ರಾಮಾಚಾರಿಗೆ ಹಿಂದಿನ ವಿರಸ ಮರೆತು ಹೋಗಿ ತನ್ನ ಅವಳ ಹಿಂದಿನ ಮಧುರ ಗಳಿಗೆಗಳ ಸವಿನೆನಪು ಒತ್ತಿಕೊಂಡು ಬರುತ್ತದೆ. ತುಂಬಿ ತುಳುಕುವ ದುಃಖದಲ್ಲಿ ಮಾರ್ಗರೆಟ್ ರಾಮಾಚಾರಿಯನ್ನು ಕುರಿತು "ಎಂದೆಂದಿಗೂ ಇಂಥ ಶಿಕ್ಷೆ ಕೊಡಬೇಡಿ. ನಾನು ಬೇಡ ಎನಿಸಿದರೆ ನನ್ನ ಕತ್ತು ಮುರಿದು ಹೋಗಿ, ಆದರೆ ಜೀವ ಉಳಿಸಿ ಇಂಥ ಬೇಗೆಗೆ ತಳ್ಳಬೇಡಿ, ಬದುಕಿದ್ದೂ ನಿಮ್ಮನ್ನು ಬಿಟ್ಟಿರಲು ನನ್ನಿಂದ ಸಾಧ್ಯವಿಲ್ಲ" ಎನ್ನುತ್ತಾಳೆ. ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧಳಾದ ದೇವತೆಗೆ ವಂಚಿಸಿದೆ ಎನ್ನಿಸುತ್ತದೆ ರಾಮಾಚಾರಿಗೆ. ಮಾರ್ಗರೆಟ್ ತನ್ನ ಬಗೆಗಿಟ್ಟಿರುವ ಅಮಿತ ವಿಶ್ವಾಸ, ನಂಬಿಕೆಗಳಿಗೆ ತಾನು ಅರ್ಹನೆ ಎಂದು ಪ್ರಶ್ನಿಸಿ ಕೊಳ್ಳುತ್ತಾನೆ. ನೀವು ಎಂದೆಂದಿಗೂ ನನ್ನನ್ನು ಬಿಟ್ಟು ಹೋಗಬಾರದೆಂದು ಮಾರ್ಗರೆಟ್ ಪುನಃ ಒತ್ತಿ ಹೇಳಿದಾಗ ರಾಮಾಚಾರಿ "ಅಗಲಿ, ಒಂದು ವೇಳೆ ನಿನ್ನನ್ನು ಉಳಿಸಿಕೊಳ್ಳುವುದಕ್ಕೆ ಯೋಗ್ಯತೆಯಿಲ್ಲದಿದ್ದರೆ ಕೊಂದಾದರೂ ಹೋಗುತ್ತೇನೆ" ಎಂದು ಹೇಳಿ ತುಡಿಯುತ್ತಿದ್ದ ಮಾರ್ಗರೆಟ್ಟಳ ಜೀವಕ್ಕೆ ಸಮಾಧಾನ ತರುತ್ತಾನೆ. ಮಾರ್ಗರೆಟ್ಟಳ ಪುನರ್ ಸಾಮೀಪ್ಯದಿಂದ ರಾಮಾಚಾರಿಯ ಬರಡು ಬಾಳಿನಲ್ಲಿ ಮತ್ತೆ ವಸಂತೋದಯವಾದಂತಾಗಿ ಚೈತನ್ಯ ತುಂಬಿ ಬರುತ್ತದೆ. ಕೆಲದಿನ ಜೀವನ ನೌಕೆ ಸುಖ, ಸಂತೋಷ, ಸಮೃದ್ಧಿಗಳ ಕಡಲಿನಲ್ಲಿ ಸರಾಗವಾಗಿ ಸಾಗುತ್ತದೆ. ಆದರೆ ಮತ್ತೆ ಬಿರುಗಾಳಿ:

ತಾನು ಕೆಲಸ ಮಾಡುತ್ತಿದ್ದ ಮಂಡಿಯ ಸಹನೌಕರ ಫಕೀರಪ್ಪನಿಂದ ರಾಮಾಚಾರಿಯ ಕೈತಪ್ಪಿಹೋದ ಅಲಮೇಲು ವೇಶ್ಯೆಯಾಗಿರುವ ವಿಷಯ ತಿಳಿಯುತ್ತದೆ. ರಾಮಾಚಾರಿಯ ತೀವ್ರತೆ ಇಲ್ಲಿಂದ ಮುಂದೆ ಹೆಚ್ಚಾಗುತ್ತದೆ. ಮರೆತು ಹೋದಂತಿದ್ದ

ಅಲಮೇಲುವಿನ ಮರು ಪ್ರವೇಶ ರಾಮಾಚಾರಿಯ ಬದುಕಿನ ಮುಂದಿನ ಘಟನಾವಳಿಗಳಿಗೆಲ್ಲ ಮುಖ್ಯ ಪ್ರೇರಣೆಯಾಗುತ್ತದೆ. ಆದರೆ ಆಕೆ ವೇಶ್ಯೆಯಾಗಲು ಕೊಡುವ ಕಾರಣಗಳು ಸಮಂಜಸವೆನ್ನಿಸುವುದಿಲ್ಲ. ಯಾಕೆಂದರೆ ಒಂದು ಗೌರವಸ್ಥ ಕುಟುಂಬದಿಂದ ಬಂದಂಥ ವ್ಯಕ್ತಿ ಇಂಥ ಕ್ಷುಲ್ಲಕ ವ್ಯಾಪಾರಕ್ಕೆ ಕೈ ಹಿಡಿದ ಹೆಂಡತಿಯನ್ನು ದೂಡುತ್ತಾನೆಯೇ ಎಂಬುದು ಯೋಚಿಸಬೇಕಾದ ಅಂಶ. ಒಂದು ವೇಳೆ ಈ ಸಾಧ್ಯತೆಯನ್ನು ಒಪ್ಪಿಕೊಂಡರೂ ರಾಮಾಚಾರಿಯ ಜೊತೆ ರಾತ್ರಿ ವೇಳೆ ಕದ್ದು ಕೆಲ ಹೊತ್ತು ಮಾತಾಡಿದ್ದೇ ದೊಡ್ಡ ಅಪರಾಧವಾಗಿ ಶೀಲದ ಬಗ್ಗೆ ಶಂಕಿಸಿ ಜೀವ ಹೋಗುವ ಮಟ್ಟಿಗೆ ಶಿಕ್ಷಿಸಿದ ಅಲಮೇಲುವಿನ ತಂದೆ ತಾಯಿಗಳು ಮಗಳ ಈ ದುರಂತ ಸಂದರ್ಭದಲ್ಲಿ ಎಲ್ಲಿ ಹೋಗಿದ್ದರು. ಅವಳ ರಕ್ಷಣೆಗೆ ಬರಲಿಲ್ಲವೇ ? ಯಾವ ತಂದೆ ತಾಯಿಗಳೂ ಕೂಡ ಧಾರೆಯೆರೆದ ಮೇಲೆ ತಮ್ಮ ಬಾಂಧವ್ಯ ಮುಗಿಯಿತೆಂದು ಭಾವಿಸುವುದಿಲ್ಲ. ಕರುಳಿನ ಮಮತೆ ಎಲ್ಲಿದ್ದರೂ ಸೆಳೆಯುತ್ತದೆ. ಅಲ್ಲದೆ ಅಂಥ ಸಂಸ್ಕಾರದಲ್ಲಿ ಬೆಳೆದ ಹೆಣ್ಣೊಂದು ಅಷ್ಟು ಸುಲಭವಾಗಿ ಇಂತಹ ದಂದೆಗೆ ಇಳಿಯುತ್ತಾಳೆಂದು ನಂಬುವುದು ಕಷ್ಟ. ಸ್ವಲ್ಪ ಎಚ್ಚರಿಕೆ ವಹಿಸಿದ್ದರೆ ಲೇಖಕರು ಈ ಸಂಶಯಗಳನ್ನು ನಿವಾರಿಸಬಹುದಿತ್ತು. ಮೇಲಿನ ಪ್ರಶ್ನೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದಾಗಿತ್ತು.

'ಅವಳು ಒಪ್ಪಿದೋನು ಕಡೇ ಗಳಿಗೇಲಿ ಕೈ ಕೊಟ್ಟನಂತೆ. ಬೇಕಾದೋನು ಸಿಕ್ಕಿಲ್ಲ; ಬ್ಯಾಡದೋನು ತಪ್ಪಲಿಲ್ಲ. ಈಗ ಯಾರಾದ್ರೇನು ಅಂತಾಳೆ ಹುಡುಗಿ' ಫಕೀರಪ್ಪನಿಂದ ಸುದ್ದಿ ತಿಳಿದ ರಾಮಾಚಾರಿಗೆ ಆತನಾಡಿದ ಒಂದೊಂದು ಮಾತುಗಳೂ ನೂರು ಚಾಪಟಿಗಳಾಗಿ ತನ್ನನ್ನು ಅಪ್ಪಳಿಸುತ್ತಿರುವಂತೆ ಯಾತನೆಯಾಗುತ್ತದೆ. ಮನಸ್ಸು ಇದಕ್ಕೆಲ್ಲ ನೀನೇ ಕಾರಣ ಎಂದು ತಿವಿದು ಹೇಳುತ್ತದೆ. ಇಲ್ಲ ಈ ದುರಂತಕ್ಕೆ ಕಾರಣ ನಾನಲ್ಲ, ಚಾಮಯ್ಯ ಮೇಷ್ಟ್ರು ಅನ್ನಿಸಿ ಅವರ ನರನರವನ್ನು ಬಗೆದು ನೆತ್ತರು ಹೀರುವಷ್ಟು ಆಕ್ರೋಶ ಕೆರಳುತ್ತದೆ. ತನ್ನಲ್ಲೇ ದಹಿಸುತ್ತಿರುವ ಬೆಂಕಿಯ ಶಮನಕ್ಕೆ ದಾರಿ ಕಾಣದೆ ತೊಳಲುತ್ತಾನೆ. ಕೊನೆಗೆ ಮಾರ್ಗರೆಟ್ಟಳ ಆಶ್ರಯವೊಂದೇ ಗತಿ ಅನ್ನಿಸಿ ಅವಳ ಮನೆಯತ್ತ ಧಾವಿಸುತ್ತಾನೆ. ಮಾರ್ಗರೆಟ್ಟಳನ್ನು ಅಪ್ಪಿ ಹಿಡಿದು 'ಮಾರ್ಗಿ.... ಮಾರ್ಗಿ...' ಎಂದು ಬಿಕ್ಕಿ ಬಿಕ್ಕಿ ಅಳುತ್ತಾನೆ. ಅಲಮೇಲುವಿನ ಬಾಳಿನ ದುರಂತ ಕಥೆಯನ್ನು ಕೇಳಿದ ಮಾರ್ಗರೆಟ್ಟಳ ಕಣ್ಣುಗಳು ಕೂಡ ಹನಿಗೂಡುತ್ತವೆ. ತನ್ನ ಹೃದಯದ ಅಳಲನ್ನೆಲ್ಲ ಮಾರ್ಗರೆಟ್ಟಳ ಮುಂದೆ ತೋಡಿಕೊಂಡಾಗ ರಾಮಾಚಾರಿಯ ತಾಪ ಕಡಿಮೆಯಾಗುತ್ತದೆ.

ರಾಮಾಚಾರಿ–ಮಾರ್ಗರೆಟ್ಟಳ ಸಂಬಂಧ ಹೆಚ್ಚೆಚ್ಚು ನಿಕಟವಾದಂತೆ ಊರಿನವರಿಗೆ ಆಡಿ ಕೊಳ್ಳಲು ಹೊಸ ಸುದ್ದಿಯಾಯಿತು. ಕಡೆಗೆ ವಿಷಯ ಸೋನಾಬಾಯಿಯ ಕಿವಿಗೂ ಬೀಳದಿರಲಿಲ್ಲ. ಸೋನಾಬಾಯಿಗೆ ಜಗತ್ತೇ ಪ್ರಳಯವಾದಂಥ ಭಾವನೆ ಉಂಟಾಗುತ್ತದೆ. ರಾಮಾಚಾರಿ ಮನೆಗೆ ಬಂದಾಗ ತಾಯಿ ಮಗನಿಗೆ ಇನ್ನಿಲ್ಲದ ರಾದ್ಧಾಂತವಾಗಿ ಕೊನೆಗೆ ರಾಮಾಚಾರಿ ಬಾಗಿಲಿಗೆ ಅಡ್ಡ ನಿಂತಿದ್ದ ಸೋನಾ

ಬಾಯಿಯನ್ನು ತಳ್ಳಿ "ಇವತ್ತಿಗೆ ಕೊನೆ, ಇನ್ಮ್ಯಾಲೆ ಯಾವತ್ತೂ ನನ್ನ ದಾರೀಲಿ ಅಡ್ಡ ಬರಬೇಡ" ಎಂದು ಹೇಳಿ ಬರಬರನೆ ಹೊರಟು ಹೋಗುತ್ತಾನೆ.

ಮಗನ ಮೇಲಿನ ಸಿಟ್ಟು ಕಂಬನಿಯಾಗಿ ಹರಿದು, ಸೋನಾಬಾಯಿ ಮುಂದಿನ ದಿಕ್ಕು ಕಾಣದೆ ತೊಳಲಾಡುತ್ತಾಳೆ. ಅವನನ್ನು ಸರಿದಾರಿಗೆ ತರುವ ಚಿಂತೆಯ ಚಕ್ರ ವ್ಯೂಹದಲ್ಲಿ ಸಿಲುಕಿ ತೊಳಲುವಾಗ ಚಾಮಯ್ಯ ಮೇಷ್ಟರೊಬ್ಬರೇ ಈ ಕೆಲಸಕ್ಕೆ ಸಮರ್ಥರು ಎನ್ನಿಸಿ ಕರೆತರಲು ಮಗನನ್ನು ಅಟ್ಟುತ್ತಾಳೆ. ಚಾಮಯ್ಯನವರನ್ನು ಕಂಡೊಡನೆ ಸೋನಾಬಾಯಿ ಗೊಳೋ ಎಂದು ಅಳುತ್ತಾಳೆ. ವಿಷಯವನ್ನರಿತ ಚಾಮ ಯ್ಯನವರು ಪುನಃ ಆ ಎಳೆಯ ಜೀವಗಳನ್ನು ನೋಯಿಸುವ ಪಾಪಕಾರ್ಯಕ್ಕೆ ಖಂಡಿತ ಕೈ ಹಾಕಬಾರದೆಂದು ನಿರ್ಧರಿಸಿ "ಇದೊಂದು ಕೆಲಸಕ್ಕೆ ನಾಸಿಲ್ಲಾಂತ ಅಂದ್ಕೊಳ್ಳಿ ಅಮ್ಮ. ಬೇರೆ ಏನು ಬೇಕಾದರೂ ಹೇಳಿ ನೀವು ಕಾಲಿನಲ್ಲಿ ತೋರಿಸಿ ದ್ದನ್ನು ತಲೇಲಿ ಹೊತ್ತು ಮಾಡ್ತೀನಿ. ಆದರೆ ಇದು ಮಾತ್ರ ಸಾಧ್ಯವಿಲ್ಲ" ಎಂದು ಖಂಡಿತವಾಗಿ ಹೇಳುತ್ತಾರೆ. ಸಾಧ್ಯವಾದರೆ ಎರಡು ಜೀವಗಳನ್ನು ಒಂದಾಗಿಸುವ ಪ್ರಯತ್ನದ ಬಯಕೆಯನ್ನು ವ್ಯಕ್ತಪಡಿಸಿದಾಗ ಸೋನಾಬಾಯಿ ಮಗನ ಸುಖವನ್ನ-ಪೇಕ್ಷಿಸಿದರೂ ಪಿಂಡದ ಪ್ರಶ್ನೆಯನ್ನು ಮುಂದೊಡ್ಡುತ್ತಾಳೆ. ಉಳಿದ ಮಕ್ಕಳ ಭವಿಷ್ಯದ ಚಿಂತೆಯನ್ನು ಮುಂದೊಡ್ಡಿದಾಗ ಚಾಮಯ್ಯನವರ ಬಾಯಿ ಕಟ್ಟುತ್ತದೆ. ಸೋನಾ ಬಾಯಿ ಕರುಳು ಕರಗುವಂತೆ ದೀನಳಾಗಿ ಚಾಮಯ್ಯನವರಲ್ಲಿ ಮಗನಿಗೆ ಬುದ್ಧಿವಾದ ಹೇಳುವಂತೆ ಮತ್ತೆ ಮತ್ತೆ ಒತ್ತಾಯಿಸಲು ಆ ತಾಯಿ ಹೃದಯದ ಕೊರಗಿಗೆ ಮನ ಸೋತ ಚಾಮಯ್ಯನವರು "ಎಲ್ಲೋದ್ರು ಸುಖ ಪಡೋದು ಅವನ ಹಣೇಲಿ ಬರೆ ದಿಲ್ಲ. ಇದೂ ಒಂದು ಸತ್ವ ಪರೀಕ್ಷೆ ಆಗಿ ಹೋಗಲಿ" ಎಂದು ತೀರ್ಮಾನಿಸಿ ದೈವೇಚ್ಛೆ ಹೇಗಿದ್ದರೆ ಹಾಗಾಗಲೀ ಎಂದು ರಾಮಾಚಾರಿಯನ್ನು ಹುಡುಕಿಕೊಂಡು ಹೊರಡುತ್ತಾರೆ.

'ನನ್ನ ಹೊಟ್ಟೆ ಉರಿಸೋಕೆ ಯಾವ ಮುಂಡಮೋಪಿ ಹಡೆದಿಟ್ಟಳೋ ಆ ಹಾದರಗಿತ್ತೀನ' ತನ್ನ ಪ್ರೇಮ ಮೂರ್ತಿಯ ಬಗ್ಗೆ ತಾಯಿ ಆಡಿದ ಚುಚ್ಚು ಮಾತು ಗಳು ರಾಮಾಚಾರಿಯ ಕಿವಿಯಲ್ಲಿ ಮಾರ್ದನಿಗೈಯುತ್ತಿದ್ದವು. ನಾನು ಯಾರಿಗೂ ವೈರಿಯಲ್ಲ- ಆದರೂ ನನಗೆ ಎಲ್ಲರೂ ವೈರಿಗಳು; ನಾನು ಯಾರಿಗೂ ಕೆಡುಕು ಬಯ ಸಿಲ್ಲ ಆದರೂ ನಾನು ಪೋಲಿ, ಹೀಗೇಕೆ ? ರಾಮಾಚಾರಿ ತನ್ನನ್ನು ತಾನೇ ಪ್ರಶ್ನಿಸಿ ಕೊಂಡ. ಅಲಮೇಲುವಿನ ಬಾಳಿನ ದುರಂತದ ಕೊರಗು ಬಳಲಿಸುತ್ತಿದ್ದಾಗ ಮಾರ್ಗ ರೆಟ್ಟಳ ತೋಳಾಸರೆಯಲ್ಲಾದರೂ ನೆಮ್ಮದಿ ದೊರಕುತ್ತಿತ್ತು. ಈಗ ಅದಕ್ಕೂ ಕಲ್ಲು.

ರಾಮಾಚಾರಿಯ ಮಿದುಳಿನಲ್ಲಿ ಹೊಯ್ದಾಟ ನಡೆಯುತ್ತಿರುವಾಗ ಚಾಮಯ್ಯ ನವರು ಹುಡುಕಿಕೊಂಡು ಮಾರ್ಗರೆಟ್ಟಳ ಮನೆಗೇ ಬಂದರು. ಮಾತಾಡಲು ಅದು ತಕ್ಕ ಸ್ಥಳವಲ್ಲ ಅನ್ನಿಸಿ "ನಿನ್ನ ಹತ್ತಿರ ಸ್ವಲ್ಪ ಮಾತಾಡೋದಿತ್ತು. ಒಂದು ಗಳಿಗೆ ಬರ್ತೀಯಾ?" ಎನ್ನುತ್ತಾರೆ. ಮಾರ್ಗರೆಟ್ಟಳ ಮನೆಗೆ ತನ್ನನ್ನು ನೇರವಾಗಿ ಹುಡುಕಿಕೊಂಡು ಬಂದಾ

ಗಲೇ ಏನೋ ಇರಬೇಕೆಂದು ಊಹಿಸಿದ ರಾಮಾಚಾರಿ ಹೊರಡುವುದಕ್ಕೆ ಮುಂಚೆ ಮಾರ್ಗರೆಟ್ಟಳ ಬಳಿ ಬರುತ್ತಾನೆ. ಮಾರ್ಗರೆಟ್ ರಾಮಾಚಾರಿಯನ್ನು ಬಿಗಿದಪ್ಪಿ ಉದ್ವೇಗದಿಂದ "ನನ್ನೇನು ಮಾಡ್ತೀರಾ" ಎನ್ನುತ್ತಾಳೆ. ಅವಳ ಮುಖದಲ್ಲಿ ತುಂಬಿದ ಭಯವನ್ನು ಕಂಡ ರಾಮಾಚಾರಿ "ಪುಟ್ಟಿ ನಿನ್ನನ್ನು ಬಿಟ್ಟು ನಾನೆಲ್ಲಿ ಸಾಯುತ್ತೇನೆ. ಹೋದರೆ ಇಬ್ಬರೂ ಹೋಗಬೇಕಾದದ್ದೆ" ಎಂದು ಹೇಳಿ ಚಾಮಯ್ಯನವರನ್ನು ಹಿಂಬಾಲಿಸುತ್ತಾನೆ.

ದೂರದ ನಿರ್ಜನವಾದ ಬಂಡೆಯೊಂದರ ಬಳಿಗೆ ಇಬ್ಬರೂ ಬರುತ್ತಾರೆ. ರಾಮಾಚಾರಿಯನ್ನು ಉದ್ದೇಶಿಸಿ ಚಾಮಯ್ಯನವರು "ಇಲ್ಲಿ ಕೂತುಕೋ ಬಾ ರಾಮಾಚಾರ್" ಎನ್ನುತ್ತಾರೆ. ಸ್ವಲ್ಪ ಹೊತ್ತು ಮೌನದಿಂದಿದ್ದು "ಅವತ್ತು ಅಲಮೇಲುವಿನ ವಿಷಯ ನಿನ್ನ ಹತ್ತಿರ ಮಾತಾಡುವಾಗ ನಾನು ನಿನಗೆ ಒಂದು ಮಾತು ಹೇಳಿದ್ದ-ನೆನಪಿದೆಯೇ?" ಮುಂದಿನ ಮಾತಿಗೆ ಪೀಠಿಕೆಯಾಗಿ ರಾಮಾಚಾರಿಯನ್ನು ಕೇಳಿದರು. "ಏನು ಹೇಳಿದಿರಿ" ಒರಟಾಗಿ ಕೇಳಿದ ರಾಮಾಚಾರಿ. "ಜಗತ್ತಿನಲ್ಲಿ ತಾನು ಕಷ್ಟಪಟ್ಟರೂ ಇತರರು ಸುಖ ಪಡಲಿ ಎನ್ನುವವನೇ ನಿಜವಾದ ದೊಡ್ಡ ಮನುಷ್ಯ-ಅಂತ. ಇವತ್ತು ನಾನು ಬಂದಿರೋದು ಅದೇ ಮಾತು ಹೇಳಲಿಕ್ಕೆ. ಮತ್ತೆಯೂ ನೀನು ತ್ಯಾಗ ಮಾಬೇಕು ಅಂತ ಹೇಳೋಕೆ ಬಂದಿದೀನಿ" ಚಾಮಯ್ಯನವರು ರಾಮಾಚಾರಿಯನ್ನು ಕರೆತಂದ ಉದ್ದಿಶ್ಯವನ್ನು ತಿಳಿಸಿದರು. "ಏನು ತ್ಯಾಗ ಮಾಡಬೇಕು" ರಾಮಾಚಾರಿ ಪುನಃ ಪ್ರಶ್ನಿಸಿದ. "ನಿನ್ನ ಮಾರ್ಗರೆಟ್ಟಳನ್ನು" ಚಾಮಯ್ಯನವರು ಉತ್ತರಿಸಿದರು.

ಚಾಮಯ್ಯನವರ ಬಾಯಿಂದ ಶಬ್ದಗಳು ಹೊರಡುತ್ತಿದ್ದಂತೆ ರಾಮಾಚಾರಿಯ ನರಗಳಲ್ಲಿ ರಕ್ತದ ವೇಗ ಹೆಚ್ಚಿತು. "ನಾವು ಸುಖವಾಗಿರೋದು ನಿಮಗೆ ಬೇಕಿಲ್ಲ" ವ್ಯಂಗ್ಯವಾಗಿ ಕೇಳಿದ. ಪರಸ್ಪರ ಮಾತಿಗೆ ಮಾತು ಬೆಳೆಯಿತು. ಮಾರ್ಗರೆಟ್ಟಳನ್ನು ಪ್ರೀತಿಸುವುದರಿಂದ ಆಗುವ ಅನಾಹುತವನ್ನು ಚಾಮಯ್ಯನವರು ಬಿಡಿಸಿ ಹೇಳಿದರು. "ನೀನು ಪರಜಾತಿಯ ಹೆಣ್ಣನ್ನು ಕಟ್ಟಿಕೊಂಡರೆ ದೇವಸ್ಥಾನಕ್ಕೆ ಸೇರಿಸುವುದಿಲ್ಲ, ನಿನ್ನ ತಂಗಿಯನ್ನು ಮದುವೆಯಾಗಲು ಹಿಂಜರಿಯುತ್ತಾರೆ; ಊರೆಲ್ಲ ನಿನ್ನನ್ನು ನೀತಿಗೆಟ್ಟವನು ಮಾರ್ಗರೆಟ್ ವ್ಯಭಿಚಾರಿಣಿ ಎಂದು ಕರೆಯುತ್ತಾರೆ. ನಿಮಗೆ ಹುಟ್ಟಿದ ಮಕ್ಕಳನ್ನು ಜಾರಸುತಾನ ಎಂದು ಹೀಯಾಳಿಸುತ್ತಾರೆ". ರಾಮಾಚಾರಿ ಈ ಎಲ್ಲದಕ್ಕೂ ಸಿದ್ಧನಾಗಿದ್ದ ಕುರುಡು ಸಮಾಜದ ಕಟ್ಟುಕಟ್ಟಳೆಗೆ ಹೆದರಿ ಮಾರ್ಗರೆಟ್ಟಳನ್ನು ಬಿಟ್ಟು ಕೊಡಲು ಆತ ಸಿದ್ಧನಿರಲಿಲ್ಲ. ಅದಕ್ಕಾಗಿಯೇ ಚಾಮಯ್ಯನವರಿಗೆ ತಿರುಗಿಸಿ ಕೇಳುತ್ತಾನೆ "ನಂಬಿದೋರಿಗೆ ಮೋಸ ಮಾಡೋದನ್ನ ಯಾವ ದೇವರು ಒಪ್ತಾನೆ ಸಾರ್. ಒಂದ್ಸಲ ನಿಮ್ಮ ಮಾತು ಕೇಳಿ ಅಲಮೇಲೂನ ಹಾಳು ಮಾಡಿದ್ದೇ ಸಾಕು. ಅದನ್ನ ನೆನಸಿಕೊಂಡ್ರೆ ನಿಮ್ಮ ಕತ್ತು ಹಿಸುಕಿ ಬಿಡಬೇಕು ಅನ್ನಿಸುತ್ತೆ" ಅಲಮೇಲುವಿನ ಬಗ್ಗೆ ಏನೂ ತಿಳಿಯದ ಚಾಮಯ್ಯನವರು ಏನಾಯ್ತೆಂದು ತಬ್ಬಿಬ್ಬಾಗಿ ಕೇಳುತ್ತಾರೆ. ವಿಷಯ ತಿಳಿದಾಗ ಗುರುಡಿನೇಟು ತಿಂದಷ್ಟು ವೇದನೆಯಾಗುತ್ತದೆ.- ಮೌನವಾದ ಚಾಮಯ್ಯನವರನ್ನು

ರಾಮಾಚಾರಿ ಕೆಣಕಿ ಕೇಳುತ್ತಾನೆ "ಯಾಕ್ಸಾರ್ ಮಾತಾಡಿ. ಇಷ್ಟೆಷ್ಟುದ್ದ ಪುರಾಣ ಓದ್ತಿದ್ರಲ್ಲಾ. ನಾನು ಊರ ಹೆಂಗಸರನ್ನ ಕೆಡಿಸೊ ವ್ಯಭಿಚಾರಿ ಅಲ್ವೆ. ನೀವೇ ಉದ್ಧಾರ ಮಾಡೋರು". ಮುಂದುವರಿದು ಮತ್ತಷ್ಟು ಉನ್ಮತ್ತನಾಗಿ ಕೇಳುತ್ತಾನೆ "ಈಗಹೇಳಿ–ಮಾರ್ಗರೆಟ್ನ ಬಿಡಬೇಕೋ ?" ಕಿಡಿ ಕಾರುತ್ತಿರುವ, ಕ್ರೋಧದಿಂದ ಉನ್ಮತ್ತನಾಗಿರುವ ರಾಮಾಚಾರಿಯನ್ನು ಚಾಮಯ್ಯನವರು ನೋಡಿದರು. ಕಾಲು ಹಿಡಿದು ಕಂಬನಿಗೆರೆಯುವ ಸೋನಾಬಾಯಿಯ ಚಿತ್ರ ಕಣ್ಮುಂದೆ ಬರುತ್ತದೆ. ಕರ್ತವ್ಯ ಪ್ರಜ್ಞೆಯ ನೆನಪಾಗಿ "ಹೌದು. ನೀನು ಮಾರ್ಗರೆಟ್ಟಳನ್ನು ಬಿಡಲೇಬೇಕು" ಎನ್ನುತ್ತಾರೆ. ಚಾಮಯ್ಯನವರಾಡಿದ ಮಾತಂ ಕೇಳಿದ ರಾಮಾಚಾರಿ "ಬೋಳಿಮಗನೆ ಮತ್ತೆ ಅದೇ ಮಾತೇ ಆಡ್ತೀಯಾ ? ನಿನ್ನಂಥೋರ್ನ ಜೀವಸಹಿತ ಬಿಡಬಾರ್ದು ಒಳ್ಳೆ ಮಾತೇ ಆಡಿ ಕಂಡೋರ ಮಕ್ಕಳನ್ನೆಲ್ಲ ಕೊಂದು ಬಿಡ್ತೀಯ. ನೀನು ಮನುಷ್ಯನಲ್ಲ ಪಿಶಾಚಿ" ಎಂದವನೇ ಚಾಮಯ್ಯನವರ ಕತ್ತಿಗೆ ಕೈಹಾಕಿದ. "ಹೋಗು ಇನ್ನೊಂದಿನ ನನ್ನ ತಂಟೆಗೆ ಬರಬೇಡ" ಎಂದು ಬಲವಾಗಿ ದಬ್ಬಿದ. ಹಾಗೆ ದಬ್ಬಿದ ರಭಸಕ್ಕೆ ಬಂಡೆಗಳ ಮೇಲೆ ಉರುಳಿ ಅಷ್ಟುದೂರ ಹೋಗಿಬಿದ್ದ ಚಾಮಯ್ಯನವರು ಪುನಃ ಮೇಲೇಳಲಿಲ್ಲ. ತಲೆಯಿಂದ ನೆತ್ತರು ನಿಧಾನವಾಗಿ ಹರಿಯುತ್ತಿತ್ತು.

ರೋಷದ ಕಾವು ಇಳಿದಾಗ ರಾಮಾಚಾರಿ "ಅಯ್ಯೋ ಇದೇನು ಮಾಡಿದೆ. ಮೇಷ್ಟ್ರೇ.... ಮೇಷ್ಟ್ರೇ... ಎಂದು ಕೂಗಿದ. "ಕೊಂದು ಬಿಟ್ಟೆ, ಚಾಮಯ್ಯ ಮೇಷ್ಟ್ರನ್ನ ಕೊಂದು ಬಿಟ್ಟೆ" ಎಂದು ಚೀರಿದ. ಸಿಟ್ಟಿನ ಭರದಲ್ಲಿ ನಡೆದು ಹೋದ ದುರ್ಘಟನೆ ರಾಮಾಚಾರಿಯ ಮಿದುಳನ್ನು ಅಸ್ತವ್ಯಸ್ತಗೊಳಿಸಿತು. ಪೋಲೀಸು, ಕೋರ್ಟು, ಶೂಲ ಹಲವು ಯೋಚನೆಗಳು ಒಮ್ಮೆಲೆ ಧಾಳಿ ಮಾಡಿದವು. ಗಲ್ಲಿಗೇರಿಸುವುದು ಖಂಡಿತ ಅನಿಸಿತು. ಇದರಿಂದ ಪಾರಾಗ ಬೇಕು. ಅಷ್ಟೇ ಅಲ್ಲ "ನಿನ್ನನ್ನು ಉಳಿಸಿಕೊಳ್ಳುವುದಾಗದಿದ್ದರೆ ಕೊಂದಾದರೂ ಹೋಗುತ್ತೇನೆ" ಎಂದು ಭರವಸೆ ಕೊಟ್ಟಿರುವ ಮಾರ್ಗರೆಟ್ಟಳನ್ನು ಕೈಬಿಡಬಾರದು. ಮಿಂಚಿನಂತೆ ಯೋಚನೆಯೊಂದು ಹೊಳೆದು ರಾಮಾಚಾರಿ ದುರ್ಗದತ್ತ ನಡೆದ. ಮೇರಿಯಮ್ಮನ ಮನೆಯನ್ನು ತಲುಪಿದವನೇ "ಮಾರ್ಗಿ ಒಂದು ಗಳಿಗೆ ಬರ್ತೀಯಾ" ಎಂದು ಕೇಳಿದ. ಎಲ್ಲಿಗಾದರೂ ಸರಿ ರಾಮಾಚಾರಿಯನ್ನು ಹಿಂಬಾಲಿಸಲು ಸಿದ್ಧಳಾಗಿದ್ದ ಮಾರ್ಗರೆಟ್, ಮೇರಿಯಮ್ಮ ತಡೆದರೂ ಧಿಕ್ಕರಿಸಿ ರಾಮಾಚಾರಿಯನ್ನು ಹಿಂಬಾಲಿಸಿದಳು. ತೋಟದ ಬಾವಿಯ ಬಳಿಗೆ ಮಾರ್ಗರೆಟ್ಳನ್ನು ಕರೆತಂದ ರಾಮಾಚಾರಿ "ಹೋಗೋಣವೇ ಮಾರ್ಗಿ" ಎಂದು ಕೇಳಿದ. ಕತ್ತಲೆಯೇ ಕರಗಿ ನೀರಾಗಿದ್ದಂತೆ ಕಂಡು ಬರುತ್ತಿದ್ದ ಕಪಿಲೆ ಬಾವಿಯನ್ನು ನೋಡಿದಳು ಮಾರ್ಗರೆಟ್. ಮೈ ನಡುಗಿತು. "ಅಲ್ಲಿಗೇಕೆ? " ಎಂದಳು. ಚಾಮಯ್ಯ ಮೇಷ್ಟ್ರನ್ನ ಕೊಂದು ಬಿಟ್ಟೆ. ನಿನ್ನ ಬಿಡಿಸೋಕೆ ಬಂದಿದ್ರು" ಬೆಳಿಗ್ಗೆ ಪೋಲೀಸ್ನೋರ ಕೈಲಿ ಶೂಲಕ್ಕೇರಿಸಿಕೊಳ್ಳಲು ನನಗಿಷ್ಟವಿಲ್ಲ. ನಾನು ಹೋದ್ರೆ ನಿನ್ನೂ ಕರಕೊಂಡು ಹೋಗ್ತೀನಿ ಅಂತ ಮಾತು ಕೊಟ್ಟಿದ್ದೆ ಅದಕ್ಕೆ. ರಾಮಾಚಾರಿ ಕೈ ಮೀರಿ ನಡೆದು

ಹೋದ ಘಟನೆಯನ್ನು ವಿವರಿಸಿದ. ಮಾರ್ಗರೆಟ್ ಮತ್ತೊಮ್ಮೆ ಬಾವಿಯ ಕಡೆ ನೋಡಿ "ಹೂ ಬರ್‍ತೀನಿ" ಅಂದಳು. ಉಕ್ಕಿ ಬಂದ ಪ್ರೇಮದಲ್ಲಿ ಮಾರ್ಗರೆಟ್ಟಳನ್ನು ಬಿಗಿದಪ್ಪಿದ ರಾಮಾಚಾರಿ "ಇನ್ನು ನಮ್ಮನ್ನು ಯಾರೂ ಅಗಲಿಸಲು ಸಾಧ್ಯವಿಲ್ಲ ಹೋಗೋಣವೇ" ಎಂದು ತನ್ನನ್ನು ತಬ್ಬಿದ ಮಾರ್ಗರೆಟ್ಟಳನ್ನು ಎತ್ತಿಕೊಂಡು ನೀರಿಗೆ ಹಾರಿದ. ತನ್ನ ಪ್ರೇಮಿಗೆ ಕೊಟ್ಟ ಮಾತನ್ನು ಉಳಿಸಿಕೊಂಡ.

ತರುಣನೊಬ್ಬನ ಬದುಕಿನ ಪರಿಳಿತವನನ್ನು ಇಷ್ಟೊಂದು ಸುಂದರವಾಗಿ ಬಿಡಿಸಿರುವ ಕಾದಂಬರಿ ಬಹುಶಃ ಕನ್ನಡದಲ್ಲಿ ಮತ್ತೊಂದು ಇರಲಾರದು. ರಾಮಾಚಾರಿಯನ್ನು ಒಂದು ವ್ಯಕ್ತಿ ಎನ್ನುವುದಕ್ಕಿಂತ ಒಂದು ವಿಶಿಷ್ಟ ಶಕ್ತಿಯೆನ್ನಬೇಕು. ಆತನ ಬಗೆಗೆ ಹೀಗೆ ಎಂದು ಗೆರೆ ಕೊರೆದಂತೆ ಹೇಳಲು ಬಾರದು. ಚಿಕ್ಕಂದಿನಲ್ಲಿ ಹೊಡೆಯಲು ಬಂದ ತಂದೆಯನ್ನು ನೀನ್ಯಾವನೋ ನನ್ನ ಹೊಡೆಯೋಕೆ ಎನ್ನುತ್ತಾನೆ. ಅದೇ ತಂದೆ ಕಾಯಿಲೆ ಮಲಗಿದ್ದಾಗ ಪಡಬಾರದ ಯಾತನೆ ಪಡುತ್ತಾನೆ. ಹಾಗೆಯೇ ಚಾಮಯ್ಯ ಮೇಷ್ಟ್ರು ತನ್ನ ದಾರಿಗೆ ಮುಳ್ಳು ಎಂದೂ ಕಂಡರೂ ಅವರ ಮಾತನ್ನು ಮೀರುವುದಿಲ್ಲ. ಹೀಗೆ ರಾಮಾಚಾರಿ ಹಲವು ದ್ವಂದ್ವಗಳನ್ನೊಳಗೊಂಡವನು. ಆತ ಛಲವಾದಿಯಾದರೂ ಅವನಿಗೊದಗಿದ ಪರಿಸ್ಥಿತಿಗಳು ಅವನು ಆಡಿದಂತೆ ಆಡಲು ಬಿಡುವುದಿಲ್ಲ. ಅವನೇ ಒಂದು ಕಡೆ ಹೇಳುತ್ತಾನೆ. "ಹೋದೋದ ಕಡೇಲೆಲ್ಲಾ ಮಾತಿಗೆ ಕಟ್ಟು ಬಿದ್ದು ಮೂಗು ಕಳಕೊಳ್ಳೋದು ನನ್ನ ನಸೀಬು. ರಾಮಾಚಾರಿಯ ಹಣೆಬರಹ ಇದೇ. ಜೀವನದುದ್ದಕ್ಕೂ ತನ್ನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿ ಕೊಳ್ಳುವಲ್ಲಿ ವಿಫಲನಾಗುತ್ತಾನೆ. ಆದರೆ ಎಂದೂ ಸುಳ್ಳು ಹೇಳಿದವನಲ್ಲ, ಯಾವತ್ತೂ ಯಾರಿಗೂ ಮೋಸ ಮಾಡಲಿಲ್ಲ.

ಒಂದಲ್ಲ ಒಂದು ವಿಧದಲ್ಲಿ ರಾಮಾಚಾರಿ ಮಾನಸಿಕ ತೊಳಲಾಟಕ್ಕೆ ಈಡಾಗುತ್ತಾನೆ. ಇದಕ್ಕೆ ಮುಖ್ಯ ಕಾರಣ ಅವನ ಪ್ರೇಮದ ಎರಡು ಧ್ರುವಗಳಾದ ಅಲಮೇಲು ಮಾರ್ಗರೆಟ್. ಕಾದಂಬರಿಯ ಬಹು ಭಾಗ ಈ ಮೂವರ ಸುತ್ತಲೇ ತ್ರಿಕೋಣಾಕಾರವಾಗಿ ಸುತ್ತುತ್ತದೆ. ಇಬ್ಬರು ಹೆಣ್ಣುಗಳೂ ರಾಮಾಚಾರಿಯನ್ನು ಪ್ರಾಣಕ್ಕೆ ಸಮನಾಗಿ ಪ್ರೀತಿಸುತ್ತಿದ್ದವರು ; ಆದರೆ ಯಾರನ್ನೂ ಹೊಂದಲಾಗದ, ಯಾರಿಂದಲೂ ಶಾಶ್ವತವಾಗಿ ಸುಖ ಕಾಣುವ ಅವಕಾಶ ಬರುವುದಿಲ್ಲ. ರಾಮಾಚಾರಿಯ ಈ ವೈಫಲ್ಯಕ್ಕೆ ಒಂದು ರೀತಿಯಲ್ಲಿ ಚಾಮಯ್ಯ ಮೇಷ್ಟ್ರು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಾರಣವಾಗುತ್ತಾರೆ. ರಾಮಾಚಾರಿಯ ಜೀವನದ ಬಹು ಮುಖ್ಯ ಎನ್ನಬಹುದಾದ ನಿರ್ಣಾಯಕ ಘಟಕಗಳಲ್ಲಿ ಮಧ್ಯ ಪ್ರವೇಶಿಸಿ ಆತನ ಬಾಳಿನ ಗತಿಯನ್ನೇ ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ, ರಾಮಾಚಾರಿಯ ಉತ್ಕರ್ಷವನ್ನೇ ಸದಾ ಬಯಸುವ ಚಾಮಯ್ಯನವರು ಅವನ ಬಾಳ ಹಾದಿಗೆ ಮುಳ್ಳಾಗಬಾರದೆಂದು ಎಷ್ಟೇ ಪ್ರಯತ್ನ ಪಟ್ಟರೂ ಪರಿಸ್ಥಿತಿಯ ಒತ್ತಡದಿಂದಾಗಿ ಸಾಧ್ಯವಾಗುವುದಿಲ್ಲ. ರಾಮಾಚಾರಿಯ ವಿಚಾರದಲ್ಲಿ ಯಾರಿಗೂ ಇಲ್ಲದ ನಂಬಿಕೆ ಅವರಿಗಿತ್ತು. ಊರಿಗೆ ಮಾರಿಯಾ

ಗುವ, ವಿಷದ ಚಿಗುರಾಗಿ ಕಾಣದೆ ಕ್ರಿಯಾಶೀಲಿಯಾಗಬಲ್ಲ ಶಕ್ತಿಯೊಂದು ಸರಿಯಾದ ಮಾರ್ಗದರ್ಶನವಿಲ್ಲದೆ ಅಡ್ಡದಾರಿ ಓಡಿಯುತ್ತಿರುವಂತೆ ತೋರುತ್ತಿತ್ತು. ಆದ್ದರಿಂದಲೇ ಆತನನ್ನು ಸರಿದಾರಿಗೆ ತರಬಲ್ಲೆನೆಂಬ ನಂಬಿಕೆಯನ್ನು ಪ್ರಾರಂಭದಲ್ಲಿಯೇ ವ್ಯಕ್ತಪಡಿಸುತ್ತಾರೆ. ಆದರೆ ಅದಕ್ಕಾಗಿ ಅವರು ತೆತ್ತ ಬೆಲೆ ಅಪಾರವಾದುದು. ಎರಡು ಬಾರಿ ರಾಮಾಚಾರಿಯನ್ನು ಬದಲಾಯಿಸುವಲ್ಲಿ ಯಶಸ್ವಿಯಾದ ಚಾಮಯ್ಯನವರು ಅಂತಿಮ ಪರೀಕ್ಷೆಯಲ್ಲಿ ಸೋಲನನ್ನುಭವಿಸುವುದರ ಜೊತೆಗೆ ತನ್ನ ಪ್ರಾಣವನ್ನೂ ತ್ಯಾಗ ಮಾಡಬೇಕಾಗುತ್ತದೆ. "ನಾಗರ ಹಾವು" ಕಾದಂಬರಿಯಲ್ಲಿ ಚಾಮಯ್ಯನವರದು ಎದ್ದು ಕಾಣುವ ಪಾತ್ರ.

ಒಂದರ್ಥದಲ್ಲಿ 'ನಾಗರ ಹಾವು' ಪ್ರೇಮ ಕಾದಂಬರಿಯಾದರೂ ಇಲ್ಲಿನ ನಾಯಕ ಉಳಿದ ಸಾಧಾರಣ ಪ್ರೇಮ ಕಾದಂಬರಿಗಳ ನಾಯಕನಿಗಿಂತ ಭಿನ್ನವಾಗಿರುವುದರಿಂದ "ನಾಗರ ಹಾವು" ಕಾದಂಬರಿಗೆ ಒಂದು ವೈಶಿಷ್ಟ್ಯವಿದೆ. ರಾಮಾಚಾರಿ, ಮಾರ್ಗರೆಟ್, ಅಲಮೇಲು, ಚಾಮಯ್ಯ ಈ ನಾಲ್ಕು ಪಾತ್ರಗಳ ಸಂದರ್ಭಗಳಲ್ಲಿ ತ.ರಾ.ಸು. ಅವರ ಲೇಖನಿ ಮೇಲ್ಮಟ್ಟದಲ್ಲಿ ಕೆಲಸ ಮಾಡಿರುವುದನ್ನು ಕಾಣಬಹುದು. ಮುಖ್ಯ ಪಾತ್ರಗಳ ಹಾಗೆಯೇ ಜಲೀಲ್, ವರದ, ಸಣ್ಣ ರಂಗಪ್ಪ, ಚಲುವಾಚಾರಿ, ಸಣ್ಣ ಬಸಪ್ಪ, ಫಕೀರಪ್ಪ, ಸೋನಾಬಾಯಿ, ಸಿಂಗಮ್ಮ ಇಂಥ ಚಿಕ್ಕ ಪಾತ್ರಗಳೂ ಸಹ ಕಾದಂಬರಿಯಲ್ಲಿ ಯಶಸ್ವಿಯಾಗಿ ತಮ್ಮ ಪಾತ್ರವನ್ನು ನಿರ್ವಹಿಸಿರುವುದನ್ನು ಕಾಣಬಹುದು, ಚುರುಕಾದ ಸಂಭಾಷಣೆ ಅಲ್ಲಲ್ಲಿ ಮಿಂಚಿನಂತೆ ಸುಳಿಯುವ ವರ್ಣನೆಗಳು ನಾಗರಹಾವು ಉತ್ತಮ ಕಾದಂಬರಿಯಾಗಲು ಕಾರಣವಾಗಿದೆ. ಕೆಲವೊಮ್ಮೆ ಬರವಣಿಗೆ ಭಾವೋದ್ವೇಗಕ್ಕೊಳಗಾದಂತೆ ಕಂಡು ಬಂದರೂ ಪ್ರಾದೇಶಿಕ ಸೊಗಡನ್ನು ಸೂಸುವ ಆತ್ಮೀಯವಾದ ಭಾಷಾ ಶೈಲಿ ಓದುಗರನ್ನು ತಲ್ಲೀನಗೊಳಿಸುತ್ತದೆ. ಒಟ್ಟಿನಲ್ಲಿ ವಿಭಿನ್ನ ಮಾದರಿಯ ವ್ಯಕ್ತಿಯನ್ನು ನಾಯಕನನ್ನಾಗಿ ಒಳಗೊಂಡ ತ.ರಾ.ಸು. ಅವರ ನಾಗರ ಹಾವು ಒಂದು ಬಾರಿ ಓದಬಹುದಾದ ಕಾದಂಬರಿಯೆಂದು ಧಾರಾಳವಾಗಿ ಹೇಳಬಹುದು.

ವಿಷಪ್ರಾಶನ - ಒಂದು ಟಿಪ್ಪಣಿ

—ಪ್ರೊ|| ಬಿಂ. ಕೃ. ಅನಂತಸ್ವಾಮಿ

ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ಕಾದಂಬರಿ ರಚನೆಯಲ್ಲಿ ಸಿದ್ಧ ಹಸ್ತರೆನಿಸಿರುವ ಶ್ರೀ ತ.ರಾ.ಸು. ಅವರೇ ಹೇಳುವಂತೆ ಇದು "ಹೆಣ್ಣೆಂಬ ಉರಿಸೋಕಿ ಬಾಳಿನ ಆದರ್ಶದ ಕಣ್ಣನ್ನು ಕಳೆದುಕೊಂಡು, ಕುರುಡಾದ ಕಲಾವಿದನೋರ್ವನ ಜೀವನ ಕಥೆ."

"ಕಾದಂಬರಿಯ ನಾಯಕ ಸದಾಶಿವ ಪ್ರಕೃತಿಯ ಮಡಿಲಲ್ಲಿ ಪುಲಕಗೊಂಡು ನಾಟ್ಯಕಲಾವಿದನಾದ. ನಾಟ್ಯಕಲೆ ಅವನ ಬಾಳ ಉಸಿರಾಯಿತು. ಆದರೆ ವಿಧಿ ಅವನ ಪಾಲಿಗಿತ್ತ ಅಗ್ನಿಪರೀಕ್ಷೆಯೇ ಬೇರೆ. ಸದಾಶಿವನ ಕಲಾಚೇತನ ಸೌಂದರ್ಯೋಪಾಸನೆಯ ದಿವ್ಯ ಪಥದಲ್ಲಿ ಹೆಣ್ಣಿನ ನಿರ್ಮಲ ಸಾನ್ನಿಧ್ಯವನ್ನರಸುತ್ತ ಹೊರಟಾಗ ಬೆಂಗಳೂರಿನ ಗಿರಿಜೆ, ಮಂಗಳೂರಿನ ಮನು ಅವನ ಬಾಳಿನಲ್ಲಿ ಕಾಲಿಕ್ಕಿದರು. ಇಬ್ಬರಿಗೂ ನಾಟ್ಯಕಲೆಯ ಅಮೃತಧಾರೆಯನ್ನೆರೆದ ಸದಾಶಿವ. ಆದರೆ ಕಡೆಗೆ ಅವನ ಪಾಲಿಗೆ ದೊರೆತದ್ದು ಹೆಣ್ಣು ಕುಲವನ್ನು ಕಂಡರೇ ರೌರವ ದ್ವೇಷ, ಜುಗುಪ್ಸೆ."

"ವಿಷಪ್ರಾಶನ ಕಥೆಯ ಹಂದರ ಇಷ್ಟೇ ಕತೆಯನ್ನು ಓದಿದವರು ಹೇಳ ಬಹುದಾದ್ದು, ಏನು ಕಥೆ ಜಾಳು-ಜಾಳು, ಏನಂಥಹುದು ಹೊಸದಾದ್ದೇನಿದೆ ಎಂದೆಲ್ಲ, ಸಾಮಾನ್ಯರು ಹೀಗೆ ಹೇಳುವಂತಹ ಕತೆಯನ್ನೂ ತ.ರಾ.ಸು. ಎಷ್ಟು ಹೃದಯಂಗಮವಾಗಿಸಿದ್ದಾರೆ ಎಂದು ತಿಳಿಯಲು ಅವರ ಕೃತಿ "ವಿಷಪ್ರಾಶನ" ವನ್ನೇ ಓದಬೇಕು. ಏನಿದೆ ಹೊಸದು ಎಂದನ್ನುವಂಥರಿಗೆ ಹೇಳಬಹುದಾದ್ದಿಷ್ಟೇ ಯಾವುದರಲ್ಲಿ ತಾನೆ ಹೊಸದಿದೆ? ವ್ಯಾಸನ ಮಹಾಭಾರತ, ವಾಲ್ಮೀಕಿಯ ರಾಮಾ-ಯಣದ ನಂತರ ಹೊಸದಾದ್ದು ಏನನ್ನೂ ಯಾರೂ ಬರೆಯಲೇ ಉಳಿದಿಲ್ಲ. ಹಾಗಿದ್ದ ಮೇಲೆ ಯಾರೂ ಬರೆಯಲೇ ಬಾರದೇ? ಹಾಗಿಲ್ಲಿ ಹಳೆಯ ಕಥೆಯನ್ನೇ ಹೇಗೆ ಹೊಸದಾಗಿಸಿದ್ದಾರೆ, ಹೊಸತನ ಎಂತು ತುಂಬಿದ್ದಾರೆ, ಎಂಬುದನ್ನು ಕಾಣು ವುದರಲ್ಲೂ ಓದುಗರ ಜಾಣ್ಮೆಯೂ ಇರುತ್ತೆ. ತ.ರಾ.ಸು. ಅವರು ತಮ್ಮ ಕಾದಂಬರಿಗಳ ಸೃಷ್ಟಿ ಕೌಶಲ್ಯವನ್ನು ಪೂರ್ಣವಾಗಲ್ಲದಿದ್ದರೂ, ಸಾಕಷ್ಟು ತೋರಿಸಿ ದ್ದಾರೆ. ಇದರಲ್ಲೂ ತ.ರಾ.ಸು. ಮುದ್ರೆ ಉಂಟು ಎಂದು ಕಾದಂಬರಿ ಓದುವ ಪರಿಪಾಠವುಳ್ಳ ಯಾರೇ ಆದರೂ ಹೇಳಬಹುದು.

ಇಲ್ಲಿ ನಾನು ಕೃತಿವಿಮರ್ಶೆಗೆ ಕೈ ಹಾಕಲೇಳುವುದಿಲ್ಲ, ಅದು ಸಾಧುವೂ ಅಲ್ಲ ಬೇಕೂ ಇಲ್ಲಾ, ಕಾರಣ ೧೯೫೦ ರಷ್ಟು ಹಿಂದೆ ಅಂದರೆ ೨೯ ವರ್ಷಗಳ ಹಿಂದೆ ಬರೆದ ಒಂದು ಕಾದಂಬರಿಯ ಕತೆಯ ಬಗ್ಗೆ ಇಂದು ಕುಳಿತು ಇದರಲ್ಲಿ ಇದು ಬೇಕಿರಲಿಲ್ಲ,

ಇದು ಹೊಸದಲ್ಲ ಎಂದು ಹೇಳುತ್ತಾ ಕೂರುವುದು ಅಂತಹಾ ಕೃತಿಯ ಬಗೆಗೆ ಬರೆಯುವವನ ಅಲ್ಪತನವನ್ನು ತೋರಿಸುತ್ತೆಯೇ ವಿನಃ ಮತ್ತೇನಲ್ಲ. ಅದರಿಂದಾಗಿ ಇಲ್ಲಿ ನಾನು ಕೈಹಾಕಲೆಳಸುವುದು ತ.ರಾ.ಸು. ಅವರ ಕೃತಿಯಲ್ಲಿ ಪ್ರಕೃತಿ ವರ್ಣನೆ ಎಂತು, ಹಾಸ್ಯ ಪ್ರವೃತ್ತಿ ಏನಾದರೂ ಉಂಟೇ ಎಂಬಿತ್ಯಾದಿ ಸಂಗತಿಗಳನ್ನು ನನ್ನ ದೃಷ್ಟಿಯಲ್ಲಿ ಕಾಣತಿಳಿಸುವ ಕೆಲಸ ಮಾತ್ರ. ಹಾಗೇ ನಾನು ತ.ರಾ.ಸು. ಅವರ ಕೃತಿಗಳಲ್ಲಿ ಮೂಡಿ ಬಂದಿರುವ ಹಾಸ್ಯದ ಬಗೆಗಾಗಲೀ ಇಲ್ಲಾ ತ.ರಾ.ಸು. ಅವರ ಹಾಸ್ಯ ಪ್ರವೃತ್ತಿಯ ಬಗೆಗಾಗಲೀ ಚಿಂತಿಸದೆ ನಾನು ಮಾಡಲೆಳಸುವುದು ಕೃತಿ 'ವಿಷಪ್ರಾಶನ'ದಲ್ಲಿ ಮೂಡಿ ಬಂದಿರಬಹುದಾದ ಹಾಸ್ಯ ಹೇಗಿದೆ ಎಂದು ಹೆಕ್ಕಿ ನೋಡುವಷ್ಟರ ಕೆಲಸ ಮಾತ್ರ.

......“ಸದಾಶಿವ ನಿನ್ನ ಮೈ ಕುಯ್ದರೆ ಬರೀ ಕಾಫಿಯೇ ಸಿಗಬಹುದು ಎಂದೆ ನಾನು; ಅವನು ಮೇಲಿಂದ ಮೇಲೆ ಕಾಫಿ ಬಸಿದದ್ದನ್ನು ಕಂಡು

‘ಇಲ್ಲ ಸಿಗರೇಟು ಹೊಗೆಯೂ ಸಿಗುತ್ತದೆ’ ಎಂದು ನಕ್ಕ ಸದಾಶಿವ.

ಇದು ಸದಾಶಿವನಿಗೂ ಅವನ ಮಿತ್ರ ರಾಜಶೇಖರನಿಗೂ ನಡೆವ ಸಂಭಾಷಣೆ. ಈ ಸಂಭಾಷಣೆಯಲ್ಲಿ ಎಂತಹ ತಿಳಿಹಾಸ್ಯ ಮಿಂಚಿದೆ ಎಂಬುದು ಇದನ್ನು ಓದುತ್ತಿದ್ದಂತೇ ತಿಳಿದೀತು.

“ನನಗೂ ಅನ್ನ ಮಾಡಿಕೊಳ್ಳುವುದು ಕಷ್ಟ ನಾನೂ ಅಕ್ಕಿಗೆ ದುಡ್ಡು ಕೊಡುತ್ತೇನೆ ಭೂತ ತೃಪ್ತಿಗಾಗಿ. ಹಾಗೆಂದು ರೈತನೂ ಅನ್ನ ಬೆಳೆಯುವುದಿಲ್ಲ. ಭತ್ತವನ್ನೇ ಬೆಳೆಯುತ್ತಾನೆ”

‘ಅನ್ನ ಮಾಡಿಕೊಳ್ಳಲಾರದ ನಿಮ್ಮಂಥವರಿಗೆ ಕೃಷ್ಣಾಚಾರಿಯಂಥ ಅನ್ನದಾತರಿರುತ್ತಾರಲ್ಲಾ’ ಎಂದರು ನಗುತ್ತಾ

‘ಅವರು ಕೊಡುವ ಸುಲಭ ಬೆಲೆಯ ಅನ್ನ ರೋಗಕ್ಕೆ ದಾರಿ. ಸುಲಭ ಬೆಲೆಯ ಕಲೆಯೂ ಅಷ್ಟೆ’...... (ಪುಟ ೧೦೦,೧೦೧)

ವೆಂಕಟರಾಯರಿಗೂ ಸದಾಶಿವನಿಗೂ ನಡೆವ ಸಂಭಾಷಣೆ ಹಾಸ್ಯದ ಮುಖವಾಡ ಹೊತ್ತ ಛೇಡಿಕೆ ಇಲ್ಲುಂಟು. ಇಲ್ಲಿ ಎರಡೇ ಮಾತಿನಲ್ಲಿ ತಂದಿರುವ ಹೋಟೆಲ್ ಅನ್ನ ನೆಚ್ಚಿ ಕುಳಿತಿರುವವರ ಜೀವನ ದರ್ಶನ. ಅವನ್ನೇ 'ವಿಷಪ್ರಾಶನ'ದ ಪ್ರಮುಖ ವಸ್ತು 'ಕಲೆ–ಕಲಾವಿದ' ಅವಕ್ಕೆ ತಾಳೆ ಹಾಕಿರುವ ರೀತಿ, ತ.ರಾ.ಸು. ಅವರ ಕೃತಿ ರಚನಾ ಚಾಣ್ಮೆಯ ದ್ಯೋತಕ.

“ಕಾಕಾ ನಿಮ್ಮ ಮನೆಯಲ್ಲಾರೋ ಡ್ಯಾನ್ಸರ್ ಇದಾರಂತೆ, ಮನುಷ್ಯರು ಅವರನ್ನು ನೋಡಬಹುದೇ?’ ಎಂದಳು. ‘ನೀನು ಮನುಷ್ಯಳಲ್ಲವಾದ್ದರಿಂದ ನೋಡಬಹುದು’ ಎಂದು ಹೇಳಿ ಕರೆದುಕೊಂಡು ಬಂದೆ. ಪಾಪಾ, ನೋಡಿದೆಯಾ ನನ್ನ ಚಂಪಾಜೀನ’ ಎಂದು ಹೇಳಿ ವೆಂಕಟರಾಯರು ನಮ್ಮಿಬ್ಬರನ್ನೂ ನೋಡಿ ನಗಲಾರಂಭಿಸಿದರು,

'ಕಾಕಾ, ನಿಮಗಿಷ್ಟು ವಯಸ್ಸಾದರೂ ಹುಡುಗಾಟ ತಪ್ಪಲಿಲ್ಲ' 'ನಿನಗಿದನ್ನೂ ಯಾರು ಹೇಳಿಕೊಟ್ಟದ್ದು? ಯಜಮಾನೀನೋ? ಅವಳಿಗೆ ಅದು ಕನ್ಸೆಷನ್, ನಿನಗೆ.......' 'ನನಗಾದರೆ ಕಾಕ?' 'ಹೀಗೆ ಕೆನ್ನೆ ಹಿಂಡುತ್ತೇನೆ' ಎಂದು ಅವಳ ಕೆನ್ನೆಯನ್ನು ಹಿಂಡಿದರು. 'ಕಾಕ, ಅದು ಕೆನ್ನೆ, ತಂಬೂರಿ ಬಿರಟೆಯಲ್ಲ' 'ತಂಬೂರಿಯ ಬಿರಟೆಯಾಗಿದ್ದರೆ ಚೆನ್ನಾಗಿತ್ತು'. 'ಏಕೋ' "ಇಷ್ಟು ಮೃದುವಾದ ಬಿರಟೆಯನ್ನು ದಿನಾ ಹಿಂಡ ಬಹುದಿತ್ತು"...... (ಪುಟ ೧೧೮).

ಇದು ವೆಂಕಟರಾಯರಿಗೂ, ಮನೋರಮಾಳಿಗೂ ನಡೆವ ಸಂಭಾಷಣೆ. ಇಲ್ಲಿ ಮೂಡಿ ಬಂದಿರುವ ನವಿರಾದ ಹಾಸ್ಯದೊಂದಿಗೇ ಸಂಭಾಷಣೆಯಲ್ಲೇ ಕತೆಯನ್ನೂ ಕಟ್ಟುವ ಬೆಳಸುವ ಕಲೆ ತ.ರಾ.ಸು. ಅವರಿಗೆ ಎಷ್ಟು ಕರಗತವಾಗಿದೆ ಎಂಬುದು ಸ್ಪಷ್ಟ. ಇಂತಹ ಸುರಸ ಸಂಭಾಷಣೆಗಳು ಪುಸ್ತಕಮುದ್ದಕ್ಕೂ ನಾಯಕ ಕಲಾವಿದ ಸದಾಶಿವನ ಬಾಳಚಿತ್ರಣದೊಂದಿಗೇ ಬೆಳೆದು ಬಂದಿದೆ. ಬರೀ ಸಂಭಾಷಣೆಯಲ್ಲೇ ಸಂಪೂರ್ಣ ಕಥೆ ಹೇಳುವುದು ಅಪ್ಪಟ ಅ.ನ.ಕೃ. ಶೈಲಿಯಾದರೂ 'ಅದೇ ಗರಡಿಯಲ್ಲಿ ಬೆಳೆದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ತ.ರಾ.ಸು. ಅವರು ಈ ಕಥೆಯನ್ನೇನೂ ಅನುಕರಿಸಿ ಬರೆದಿಲ್ಲ. ಗುಡ್ಡ ಕಡಿದು ನೂರು ಮೆಟ್ಟಲು ಹಾಕಿ ಕೊಟ್ಟು ಬೇರೆ ಸಾಹಿತ್ಯ ಪಥಿಕರಿಗೆ ದಾರಿ ಸುಗಮ ಮಾಡಿಕೊಟ್ಟವರನ್ನು, ನೂರೂ ಮೆಟ್ಟಲು ಹತ್ತಿ ಬಂದು ಏನು ಮಹಾ ಎನ್ನುವುದು ಇಂದಿನ ಎಷ್ಟೋ ಯುವ ಸಾಹಿತಿಗಳ ಪ್ರವೃತ್ತಿಯಾದರೂ ತ.ರಾ.ಸು. ಅಂತಹ ಧೀಮಂತ ಸಾಹಿತಿಯ ಅ.ನ.ಕೃ. ನೆನಕೆ ಯುವ ಸಾಹಿತಿಗಳಿಗೊಂದು ಮಾರ್ಗದರ್ಶನ.

ತ.ರಾ.ಸು. ಅವರು ಮನೂ – ಸದಾಶಿವನ ಸಂಭಾಷಣೆಯಲ್ಲಿ ಕಾಲೇಜ್– ಕಾಲೇಜ್ ಜೀವನ ಎಂತು ಎಂಬುದಕ್ಕೆ ಕನ್ನಡಿ ಹಿಡಿದಿದ್ದಾರೆ ಒಂದೆರಡೇ ವಾಕ್ಯದಲ್ಲಿ.

"One good act merits another. ಈವಿನಿಂಗ್ ಇನ್ ಪ್ಯಾರಿಸ್" ಈವಿನಿಂಗ್ ಇನ್ ಪ್ಯಾರಿಸ್? (ಪ್ಯಾರಿಸ್‌ನಲ್ಲಿ ಸಂಜೆ) ಪರಿಮಳಕ್ಕೆ ತಕ್ಕ ಹೆಸರು! 'ನೋಡಿ ಮುಂದಿನ ಸಲ ನಾನು ಬರುವ ಹೊತ್ತಿಗೆ ನೀವೂ ತರಿಸುತ್ತೀರಾ ಈ ಸೆಂಟನ್ನು?'– ತನ್ನ ಮಾತನ್ನು ಕೇಳಿ ನಾನು ಏನೂ ಮಾತಾಡದೆ ಸುಮ್ಮನಿದ್ದುದನ್ನು ಕಂಡು, ಆಕೆಯೇ ಮೌನವನ್ನು ಮುರಿದು ಕೇಳಿದಳು. 'ಏಕೆ?' ಆಕೆಯ ಪ್ರಶ್ನೆಯ ಅರ್ಥವರಿಯದೆ ಕೇಳಿದೆ ನಾನು, 'ನಮ್ಮ ಕಾಲೇಜಿನಲ್ಲಾದರೆ ಹುಡುಗರಿಗೆ ಗೊತ್ತಾದರೆ ಮರುದಿನವೇ ಅದೇ ಸೆಂಟ್ ಹಚ್ಚಿ ಬರುತ್ತಾರೆ. ನಾವುಟ್ಟ ಸೀರೆಯ ಬಣ್ಣದ ಕರ್ಚೀಫ್ ಕಾಣಿಸುತ್ತಿರುತ್ತದೆ ಅವರ ಜೇಬಿನಲ್ಲಿ. ನೀವು ಎಂದೂ ಕಾಲೇಜಿಗೆ ಹೋಗಲಿಲ್ಲವೇ?' 'ಇಲ್ಲ' 'ಬಹಳ ಅನ್ಯಾಯವಾಯಿತು! ಏನೆಲ್ಲಾ ಕಲಿಯುವ ಅವಕಾಶ ತಪ್ಪಿತು.' 'ಅವಳ ಮಾತು ಕೇಳಿ ನನಗೆ ನಗು ಬಂತು.' (ಪುಟ ೧೨೨) ಇಂತಹುದನ್ನು ಕಲಿಯಲು, ಇಂತಹುದಕ್ಕೆಂದೇ ಕಾಲೇಜಿಗೆ ಹೋಗುವುದು ಎಂದು ತಿಳಿದರೆ ಸದಾಶಿವನಿಗೇನು ಯಾರಿಗಾದರೂ ನಗುಬರುವಂಥದೇ. ಈಗ 29 ವರುಷಗಳ ಹಿಂದೆ ಕಾಲೇಜ್

ವಾತಾವರಣ ಒಗ್ಗಿತ್ತೋ ಇಲ್ಲವೋ ಒತ್ತಟ್ಟಿಗಿರಲಿ ಆದರೆ ಇಂದಂತೂ ಹೀಗಿದೆ ಎಂಬುದು ಎಲ್ಲರಿಗೂ ತಿಳಿದದ್ದೇ. ಆ ಅರ್ಥದಲ್ಲಿ ತ.ರಾ.ಸು. ಅವರ ದಾರ್ಶನಿಕ ದೃಷ್ಟಿ ಇದು ಎನ್ನಬಹುದೇ!?

ವಿಷಪ್ರಾಶನದ ನಾಯಕ 'ಸದಾಶಿವ' ಭಾವಜೀವಿ. ಅಸಮಾನ ನಾಟ್ಯಕಲಾ ವಿದನಾಗಬೇಕೆಂಬ. ಆಸೆ ಹೊತ್ತವ. ತನ್ನ ಈ ಮಹತ್ವಾಕಾಂಕ್ಷೆಯ ಸಾಧನೆಗೆ ಬೇಕಾದ ದೃಢಚಿತ್ತ ಅವನಲ್ಲಿಲ್ಲದ್ದು ಅವನ ದುರಂತಕ್ಕೆ ನಾಂದಿ. ಮೊದಲಬಾರಿ ನಾಟ್ಯಾಭ್ಯಾಸಿ ಯಾಗಿ ಲಕ್ಷ್ಮಾಸಾನಿಯಲ್ಲಿಗೆ ಹೋದಾಗ ಅವಳ ಸೋದರ ಸೊಸೆ ಗಿರಿಜೆಯಿಂದ ಆಕ ರ್ಷಿತನಾಗುತ್ತಾನೆ. ಪಯೋಧರ್ಮಕ್ಕನುಗುಣವಾಗಿ ಗಿರಿಜೆಯೂ ಅವನ ತೋಳ ತೆಕ್ಕೆ ಯಲ್ಲಿ ಹಾತೊರೆಯುತ್ತಾಳೆ. ಇವರಿಬ್ಬರ ಸಂಬಂಧ ಬಯಲಾದಾಗ ಮಾತ್ರ ಗಿರಿಜೆ ತಾನೇನೂ ತಪ್ಪು ಮಾಡಲಿಲ್ಲ ಹೆದರಿಸಿ, ಬೆದರಿಸಿ ಸದಾಶಿವನೇ ತನ್ನನ್ನು ಸೆಳೆದು ಕೊಂಡ ಎಂದು ಸುಳ್ಳು ಹೇಳಿ ಸದಾಶಿವ ಇವಳಲ್ಲಿಟ್ಟಿದ್ದ ನಂಬಿಕೆಗೆ ದ್ರೋಹ ಬಗೆ ಯುತ್ತಾಳೆ. ಸುಳ್ಳು ಬಚಾವಾದ ಗಿರಿಜೆ ಈ ಮೂಲಕ ಸದಾಶಿವನಿಗೆ ಬಾಳ ವಿಷದ ಮೊದಲ ಗುಟುಕನ್ನುಣಿಸುತ್ತಾಳೆ. ಜೋಳಿ ಸ್ವಭಾವದ ಸದಾಶಿವ ಎಲ್ಲರನ್ನೂ ತನ್ನವರೇ ಎಂದು ನಂಬುತ್ತಾನೆ. ಗಿರಿಜೆಯಂತೆ ಹೆಣ್ಣಿನ ಸೋಗೂ ಬೇಳ್ವೆ ಮಾತುಗಳೂ ಸತ್ಯವಾಗಿ ಕಾಣುತ್ತೆ ಸದಾಶಿವನಿಗೆ. ಹೀಗೆ ಕಂಡುದು ಅವನ ಬಾಳ ದುರಂತ. ಕಾದಂಬರಿ ಓದಿದ ವರು ಯಾರೇ ಆದರೂ ಅಸಹಜ ಚಿತ್ರಣ ಎಂದು ಹೇಳಲಾರರು.

ಬೆಂಗಳೂರಿನ ಗಿರಿಜೆಯಿಂದ ವಂಚಿತನಾದ ಸದಾಶಿವ ಮನಬಂದತ್ತ ಹೊರಡ ಳೆಲೆಸಿ ಬಂದು ಸೇರಿದ್ದು ಶಿವಮೊಗ್ಗೆ. ಶಿವಮೊಗ್ಗೆಯಿಂದ ಆಗುಂಬೆಗೆ ಹೋಗುವ ಹಾದಿಯಲ್ಲಿ ಸದಾಶಿವ ಕಂಡ ಪ್ರಕೃತಿ ಸಿರಿವರ್ಣನೆಯನ್ನು ಅವನ ಬಾಯಲ್ಲೇ ಹೇಳಿ ಸಿದ್ದಾರೆ ತ.ರಾ ಸು. ನಾಯಕ ತನ್ನ ಕಥೆಯನ್ನು ತಾನೇ ಹೇಳುತ್ತ ಹೋದಂತೆ ಕಾದಂಬರಿ ಬೆಳೆಯುಗೊಡುವುದು ಒಂದು ವಿನೂತನ ಕ್ರಮ ಎಂದು ಇಂದಿನ ಎಷ್ಟೋ ಲೇಖಕರು ತಮ್ಮ ಕಾದಂಬರಿಯಲ್ಲಿ ಈ ತಂತ್ರವನ್ನು ಪ್ರಪ್ರಥಮವಾಗಿ ಬಳಸಿ ಕಾದಂಬರೀ ರಚನೆಯಲ್ಲಿ ನವ್ಯಸೃಷ್ಟಿ ಎಂದೆಲ್ಲ ಹೇಳಿ ಕೊಂಡರೂ 28-30 ವರುಷ ಗಳಷ್ಟು ಹಿಂದೆಯೇ ತ ರಾ.ಸು. ಅವರು ಈ ತಂತ್ರವನ್ನು ಸೃಷ್ಟಿಸಿದವರು ಎಂದಲ್ಲಿ ಅತಿಶಯೋಕ್ತಿಯಾಗಲಾರದು!

"ದಾರಿಯುದ್ದಕ್ಕೂ ಇಬ್ಬದಿಯಲ್ಲೂ ಬೆಳೆದ ಹೇರಡವಿ. ಮರ...ಮರ.... ಮುಗಿಲು ಮುಟ್ಟುವ ಮರ. ಹಸಿರಿನಲ್ಲಿ ಎಷ್ಟು ವೈವಿಧ್ಯವಿದೆಯೋ ಅಷ್ಟನ್ನೂ ಬಿಂಬಿ ಸುವ ಕಾಡ ಹಸಿರು. ಹಸಿರು ಕಾಡು. ಕೆಂಬಣ್ಣದ ಎರೆಳಿವ ದಾರಿ, ಆಗಾಗ ಒಡಲಿನಲ್ಲಿ ಮಿಂಚಿ ಮಾಯವಾಗುವ ಹೊಳೆ. ಎಷ್ಟು ಬಣ್ಣದ ಹೂವು! ಉದ್ದಕ್ಕೂ ಇಬ್ಬದಿ ಯಲ್ಲೂ ಕಾಡೇ ಕಾಡಾದರೂ ಬೇಸರ ಬರದ ನೋಟ ಅದು. ಏಕನಾದದ ಏಕನಾದ, ಏಕತೆಯಲ್ಲೇ ಕೇಳುವ ಮನಸ್ಸಿನಲ್ಲಿ ಬಗೆ ಬಗೆಯ ಭಾವವನ್ನು ಮೂಡಿಸುವಂತೆ,

ಒಂದೇ ಸಮನೆ ಅನಂತವಾಗಿ ಹರಡಿದ ಕಾಡು, ಹೆಜ್ಜೆ ಹೆಜ್ಜೆಗೆ ಹೊಸ ಬಗೆಯ ಸೌಂದರ್ಯದರ್ಶನ ಮಾಡಿಸಿತು..."

"........ಒಂದು ಕಡೆ ಮುಗಿಲ ಮೋಡಗಳೊಂದಿಗೆ ಕಾಡು ಸರಸವಾಡಲು ಹೊರಟಿದ್ದರೆ, ಇನ್ನೊಂದು ಬದಿಯಲ್ಲಿ ಎಲ್ಲೋ ಪಾತಾಳದಲ್ಲಿ ಮರದ ನೆತ್ತಿ ಮಾತ್ರ ಕಾಣುವಷ್ಟು ಆಳವಾದ ಕಮರಿ. ವಿರಾಟಪುರುಷನನ್ನು ತೂಗಲು ಪ್ರಕೃತಿ ಕಟ್ಟಿದ ಎಲೆ ತೊಟ್ಟಿಲಿನಂತಿತ್ತು ಆ ಕಮರಿ. ಎಲೆಗಳ ಮರ್ಮರ ನಿನಾದ, ಬಿದಿರುಮೆಳೆಗಳ ಮೈಯುಜ್ಜುವ ಸದ್ದು, ಹಕ್ಕಿಗಳ ಉಲಿಹು-ವನದ ಮೌನ ಮಿಡಿದು ಮೌನವನ್ನೇ ಹೆಚ್ಚಿಸುತ್ತಿತ್ತು. ಕಾಡಿನ ಅಮಾನುಷ ಭವ್ಯತೆಯಲ್ಲಿ ಮಾನವ, ಅವನ ದುಃಖ, ಕ್ರೋಧ, ದ್ರೋಹ ಎಲ್ಲವೂ ಅಣುವಿಗಿಂತ ಕಿರಿದಾಗಿ ತೋರುತ್ತಿತ್ತು. ಕ್ಷುಲ್ಲಕ ಸದ್ದುಗಳಿಗೆ ಕಲಕವೆ, ನಿಂತ ವಿಪಿನದ ಬೃಹತ್ ಶಾಂತಿ, ನನ್ನ ಹೃದಯದ ವೇದನೆಗೆ ತಂಪೆರೆಯಿತು. ನನ್ನೆದೆಯಲ್ಲಿ ಹೊಯ್ದಾಡುತ್ತಿದ್ದ ಅಶಾಂತಿ ಎಲ್ಲೋ ಮರೆಯಾಗಿ, ಹೃದಯದಲ್ಲಿ ಶಾಂತಿ ಮೂಡಿತು." (ಪುಟ ೩––೩೪)

ಹೀಗೇ ಪುಸ್ತಕದಲ್ಲಿ ನಾಲ್ಕಾರು ಕಡೆ ತ.ರಾ.ಸು. ಅವರ ಗದ್ಯಕಾವ್ಯ ಮಿಂಚಿರುವುದನ್ನು ಕಾಣಬಹುದು. 'ವಿಷಪ್ರಾಶನ'ದ ನಂತರದ ಇವರ ಕಾದಂಬರಿಗಳಲ್ಲಿ ಬರುವ ಗದ್ಯಕ್ಕೆ ಹೋಲಿಸಿದಾಗ ಇದೇನೂ ಅಲ್ಲಿ ಅಂದರೂ ಇಲ್ಲಿ ನಾಯಕ ಸದಾಶಿವನ ಮನಃಸ್ಥಿತಿಗೆ ತಕ್ಕಂತ ಪ್ರಕೃತಿ ಸಿರಿವಸ ಪ್ರದೇಶವನ್ನು ಆರಿಸಿಕೊಂಡು ಆ ಪ್ರಕೃತಿ ಸಿರಿಯನ್ನು ಸದಾಶಿವನ ಮಾನಸಿಕ ಪ್ರಕೃತಿಗೆ ತಾಳೆ ಹಾಕಿರುವ ರೀತಿ ನಿಜಕ್ಕೂ ಅಪ್ಪಟ ತ.ರಾ.ಸು. ಶೈಲಿ. ಇಂತಹಾ ಬರವಣಿಗೆಯಲ್ಲಿ ತ.ರಾ.ಸು. ಅವರಿಗೆ ತ.ರಾ.ಸು. ಮಾತ್ರವೇ ಸಾಟಿ ಎಂದು ಹೇಳಿದರೆ ತಪ್ಪಾಗಲಾರದು.

೧೩೮ ಪುಟಗಳ ಸರಳ ಸುಂದರ ಸಾಮಾಜಿಕ ಕಾದಂಬರಿ 'ವಿಷಪ್ರಾಶನ'. ಈ ಪುಟ್ಟ ಕೃತಿಯಲ್ಲಿ ತ.ರಾ.ಸು. ಅವರ ಕಲಾಭಿಜ್ಞತೆ. ನಾಟ್ಯ ಕಲೆಯ ಬಗೆಗಿನ ಅವರ ಒಲವು ನಿಲವು ಸ್ಪಷ್ಟವಾಗಿ ನಿರೂಪಿತವಾಗಿದೆ. ಇವರ ಯಾವುದೇ ಕಾದಂಬರಿಯಂತೆ ಈ ಕಾದಂಬರಿಯೂ ಒಮ್ಮೆ ಓದಲು ಆರಂಭಿಸಿದರೆ ಮುಗಿಸುವವರೆಗೂ ಕೆಳಗಿಡಲು ಬಾರದು. ಮೂವತ್ತು ವರುಷಗಳಲ್ಲಿ ಮೂರು ಮುದ್ರಣ ಕಂಡಿದೆ ಅದೂ ಕನ್ನಡದಲ್ಲಿ, ಎಂಬುದೇ ಇದರ ಜನಪ್ರಿಯತೆಗೆ ಸಾಕ್ಷಿ ಎಂದನ್ನೋಣವೇ. ?

‘ಬಯಕೆಯ ಬಂದಿ’ ಮತ್ತು ‘ಪರಿಮಳದ ಉರುಳು’

—ಬಿ. ಪಿ. ಸ್ವಪ್ರಭಾನಂದ ಶರ್ಮ

ಕ್ರಿ. ಶ. ೧೯೪೫ ರ ಹೊತ್ತಿಗೆ ಅಖಿಲ ಭಾರತದಲ್ಲಿ ಸುಳಿಯಲಾರಂಭಿಸಿದ ಹೊಸ ಗಾಳಿಯ ಫಲಶ್ರುತಿಯೇ “ಕನ್ನಡದ ಪ್ರಗತಿ ಶೀಲ ಪಂಥ” ಅ.ನ.ಕೃ. ಅವರು ಇದರ ನೇತಾರರು, ನವೋದಯ ಸಾಹಿತಿಗಳ ಧೋರಣೆಯನ್ನು ಖಂಡಿಸಿದ ಪ್ರಗತಿ ಶೀಲರು ಸಾಹಿತಿಗೆ ಸಾಮಾಜಿಕ ಹೊಣೆಗಾರಿಕೆಯನ್ನು ಹೇರಿ. ಸಾಹಿತ್ಯ ವಾಸ್ತವಿಕತೆಗೆ ಮುಸುಕು ಹಾಕಬಾರದು- ಅದೂ ಸಾಮಾಜಿಕ ಕ್ರಾಂತಿಯ ವಜ್ರಾಯುಧವಾಗಬೇಕು ಎಂದು ಸಾರಿದರು. ಯಾವುದನ್ನು ನಮ್ಮ ಹಿಂದಿನ ಲೇಖಕರು ಅಶ್ಲೀಲವೆಂದು ಮುಚ್ಚಿಟ್ಟರೋ ಅದನ್ನು ಪ್ರಗತಿ ಶೀಲ ಲೇಖಕರು ಯಾವ ಮುಲಾಜಿಲ್ಲದೆ ಬಿಚ್ಚಿ ಬಿಚ್ಚಿ ಬರೆಯ ತೊಡಗಿದರು. ಆದರೂ ಕನ್ನಡದ ನವೋದಯ ಕವಿಗಳಂತೆ ಪ್ರಗತಿ ಶೀಲ ಸಾಹಿತಿಗಳೂ ಪಾಶ್ಚಾತ್ಯ ಬರಹಗಾರರ ಪ್ರಭಾವಕ್ಕೆ ಒಳಗಾದವರೇ. ಹೆಚ್ಚು ಕಡಿಮೆ ಕಾದಂಬರಿ ಸಣ್ಣ ಕಥೆಗಳಿಗಷ್ಟೇ ಸೀಮಿತವಾದ ಕನ್ನಡದ ಪ್ರಗತಿ ಶೀಲ ಸಾಹಿತ್ಯದಿಂದ ಕನ್ನಡಕ್ಕಾದ ಒಂದು ಮಹದುಪಕಾರ ವೆಂದರೆ–ಓದುಗರ ವಲಯ ವಿಸ್ತಾರವಾದರೂ ಜೊತೆಗೆ ದಾಕ್ಷಿಣ್ಯ ರಹಿತವಾಗಿ ಬರೆಯುವ ಹವ್ಯಾಸ ಮೊದಲಾದದ್ದು ಪ್ರಗತಿ ಶೀಲ ಲೇಖಕರು ಆಕ್ಷೇಪಗಳಿಗೇನೂ ಹೊರತಲ್ಲ. ಪ್ರಗತಿ ಶೀಲ ಸಾಹಿತಿಗಳಲ್ಲಿ ಆವೇಶ; ಭಾವಾತಿರೇಕ ದಿಢೀರ್ ಪರಿಣಾಮ ಮಾಡಿಸುವ ತವಕ ವಿಶೇಷವಾಗಿ ಕಂಡು ಬರುತ್ತದೆ. ಇವುಗಳ ಭರದಲ್ಲಿ ಪ್ರಗತಿ ಶೀಲರು ಬರವಣಿಗೆಯಲ್ಲಿ ವಿವರಗಳ ಸಮಾರಾಧನೆ ಮಾಡಿದರೇ ವಿನಹ ಅನುಭವದ ಆಳಕ್ಕಿಯಲ್ಲಿಲ್ಲ. ಇದರಿಂದ ಭಾಷೆ ಅಗ್ಗವಾಗಿ ತನ್ನ ಖಚಿತತೆಯನ್ನು ಕಳೆದು ಕೊಂಡಿತು. ಇವು ಪ್ರಗತಿ ಶೀಲರ ಬಗೆಗಿನ ಆಕ್ಷೇಪಗಳು. ಪ್ರಗತಿ ಶೀಲ ಬರಹಗಾರರಲ್ಲಿ ತ.ರಾ.ಸು. ಅವರ ಹೆಸರು ಗಮನಾರ್ಹವಾದುದು. ಇವರು ವೃತ್ತಿ ಬರಹಗಾರರಾದರೂ ಕನ್ನಡಕ್ಕೆ ಕೆಲವು ಸಾರ್ಥಕ ಕಾದಂಬರಿಗಳನ್ನು ಕೊಟ್ಟವರು, ಇತರ ಪ್ರಗತಿಶೀಲ ಲೇಖಕರಿಗಿಂತ ಇವರಲ್ಲಿ ಹೆಚ್ಚಿನ ಕಲಾತ್ಮಕತೆಯನ್ನು ಕಾಣಬಹುದು.

ತ.ರಾ.ಸು. ರವರ “ಬಯಕೆಯ ಬಂದಿ” ಮತ್ತು “ಪರಿಮಳದ ಉರುಳು” ಅಂತಹ ಮಹತ್ತರ ಕಾದಂಬರಿಗಳೇನಲ್ಲ. ಕಾಮ ಮನುಷ್ಯನ ಮನಸ್ಸಿನ ಪ್ರಬಲ ಪ್ರವೃತ್ತಿ. ಮನುಷ್ಯನ ಮನಸ್ಸಿನ ಪದರ ಪದರಗಳನ್ನು ಸುಡುವ ಕಾಮದ ಒಂದೊಂದು ಮುಖಗಳು ಈ ಒಂದೊಂದು ಕಾದಂಬರಿಯಲ್ಲಿ ವ್ಯಕ್ತವಾಗಿದೆ,

“ಬಯಕೆಯ ಬಂದಿ” ಕಾದಂಬರಿಯ ನಾಯಕ ರಾಘವೇಂದ್ರ ಹೋಟೆಲ್ ಮಾಲೀಕ. ಒಂದು ದಿನ ಅವನ ಹೋಟೆಲಿಗೆ ಚಹ ಕುಡಿಯ ಬಂದ ಉತ್ತರ ಕರ್ನಾಟಕದ ನಾಟಕದವನೊಬ್ಬ ಕೊಟ್ಟ ಕರಪತ್ರದತ್ತ ದೃಷ್ಟಿ ಹರಿಸಿದಾಗ ಅದರಲ್ಲಿನ ಹೆಂಗ

ಸಿನ ಚಿತ್ರ ಅವನ ಮನಸ್ಸನ್ನು ಸೆರೆ ಹಿಡಿದು ಕಲಮಲಗೊಳಿಸುತ್ತದೆ, ನೆನಪು ಹಿಂದಕ್ಕೆ ಜಾರುತ್ತದೆ: ಕಾದಂಬರಿಕಾರರು ಈ ಸನ್ನಿವೇಶವನ್ನು ಹಿನ್ನೆಲೆಯಾಗಿಟ್ಟುಕೊಂಡು 'Flash Back' ತಂತ್ರದಿಂದ ರಾಘವೇಂದ್ರನ ಸರ್ವ ಜೀವನದ ಕಥೆಯ ಸುರುಳಿಯನ್ನು ಬಿಚ್ಚುತ್ತಾರೆ.

ಹೇರೂರಿನ ರಾಘವೇಂದ್ರ ಬಸರೂರಿಗೆ 'ಅಂಗಧ ಸಂಧಾನ' ವೆಂಬ ಯಕ್ಷಗಾನ ನಾಟಕವನ್ನು ನೋಡಲು ಹೋಗಿರುತ್ತಾನೆ ಅಗಲೇ ಅವನ ಅಂಗಜ ಸಂಧಾನವೂ ಕುದುರುತ್ತದೆ. ಆ ಊರಿನ ದೇವಾಲಯದಲ್ಲಿ ತನ್ನ ತಾಯೊಂದಿಗೆ ಅಲ್ಲಿಗೆ ಬಂದ ಹರೆಯದ ಮಾದಕ ಸೌಂದರ್ಯದ ಅಪರಿಚಿತ ಹೆಣ್ಣೊಂದನ್ನು ಕಾಣುತ್ತಾನೆ. ಆಕೆಯ ಪೂರ್ವಾಪರಗಳನ್ನರಿಯದ ಮುನ್ನವೇ ಮನಸ್ಸು ಅವಳ ಬಂದಿಯಾಗುತ್ತದೆ. ಪರಿಚಯದ ಆತುರ ಕೂಡುವ ಕಾತುರ ಮಿಗಿಲಾಗುತ್ತದೆ. ಮುಂದೆ ಅವನ ಅಂಗಜ ಸಂಧಾನಕ್ಕೆ ಟ್ಯಾಕ್ಸಿ ಡ್ರೈವರ್ ನಿಮಿತ್ತವಾಗುತ್ತಾನೆ. ತಲೆ ಹಿಡುಕ ಸೀನ ಅದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾನೆ. ಸೀನನ ರಾಯಭಾರ ಕುದುರಿ ರಾಘವೇಂದ್ರ ಅವನೊಂದಿಗೆ ತಾನೊಲಿದವಳ ಮನೆಗೆ ನಡೆಯುತ್ತಾನೆ. "ರಾಜೀವಿ"ಯ ಮಾದಕ ಸೌಂದರ್ಯದಲ್ಲಿ ಮೈ ಮರೆತ ರಾಘವೇಂದ್ರ ಹಾಲನ್ನು ಮಾತ್ರ ಕಂಡ ಬಡಿಗೆಯನ್ನೂ ಯನ್ನು ಕಾಣಲಿಲ್ಲ. ರಾಜೀವಿಯ ತಾಯಿ ಸರಸ್ವತಿಗೆ ಮಗಳನ್ನು ತಾನು ಖಾಯಂ ಆಗಿ ಕೈ ಹಿಡಿಯುವುದಾಗಿ ಮಾತುಕೊಟ್ಟ. ಅವಳ ಷರತ್ತುಗಳಿಗೊಪ್ಪಿ ಅವಳ ಬೇಡಿಕೆಗಳನ್ನು ಪೂರೈಸಲು ಊರಿಗೆ ಹಿಂತಿರುಗಿ ತಾಯಿಯ ಕಣ್ತಪ್ಪಿಸಿ ಆಭರಣಗಳನ್ನು ಅಪಹರಿಸಿದ. ಬೇಕಾದ ನಗದು ಹಣಕ್ಕಾಗಿ ಸಲ್ಲದ ಸಬೂಬು ಹೇಳಿ ಪರಿಚಿತರಲ್ಲಿ ಸಾಲ ಮಾಡಿ, ತನ್ನ ಪ್ರೇಯಸಿಯ ತಾಯಿ ಕೇಳಿದ ಒಡವೆ, ವಸ್ತ್ರ, ಹಣವನ್ನು ಸಲ್ಲಿಸಿ, ರಾಜೀವಿಯನ್ನು ಅನಧಿಕೃತವಾಗಿ ಕೈ ಹಿಡಿದ, ಮೊದಲ ರಾತ್ರಿಯೊಂದಿಗೆ ಒಂದೆರಡು ಸವಿ ಇರುಳುಗಳೂ ಉರುಳಿದವು. ಅಷ್ಟು ಹೊತ್ತಿಗೆ ಮನೆಯ ಕಡೆ ನೆನಪಾಗಿ ಊರಿಗೆ ಹೊರಡುವ ಮುನ್ನ ರಾಜೀವಿಯ ತಾಯಿಯ ಮಾತುಗಳಿಗೆ ಹೂ ಗುಟ್ಟಿ ಊರು ಸೇರುತ್ತಾನೆ. ರಾಜೀವಿಯ ಸಖ್ಯ ಸುಖದ ಅಮಲಿನಲ್ಲಿ ಮನೆಯ ಹಿತಾಸಕ್ತಿಯನ್ನು ಮರೆತು ಸುಗಂಧ ದ್ರವ್ಯಗಳ ಏಜೆನ್ಸಿ ವ್ಯವಹಾರಕ್ಕೆಂದು ಬ್ಯಾಂಕಿನಿಂದ ಹಣ ಪಡೆಯಲು ಸ್ನೇಹಿತನೊಬ್ಬನನ್ನು ಸಾಕ್ಷಿಯಾಗಿಟ್ಟುಕೊಂಡು ತಾಯಿಯಿಂದ ಚೆಕ್ಕಿಗೆ ಸಹಿ ಪಡೆಯುತ್ತಾನೆ. ಅವನ ಪಾಲಿಗೆ ಅವನ ಭಾಗ್ಯದ ಬೆಳಕು ತೆರೆದಂತಾಯಿತು. ಅಲ್ಲಿಗೆ ಕಾದಂಬರಿ ಮುಗಿಯುತ್ತದೆ.

ವರ್ಣನೆ ವಿವರಣೆಗಳ ಸಮಾರಾಧನೆಯಲ್ಲಿ ಕಾದಂಬರಿಕಾರರು ಒದುಗನನ್ನು ರಂಜಿಸಿ. ಕುತೂಹಲವನ್ನು ಕೆರಳಿಸುತ್ತಾ ಹೋಗಿ ಕಥೆಯನ್ನು ಗಂಭೀರ ಘಟ್ಟದಲ್ಲಿ ಕೈಬಿಟ್ಟ ಅನುಭವವಾಗುತ್ತದೆ ಈ ಕಾದಂಬರಿಯಲ್ಲಿ. ರಾಘವೇಂದ್ರ-ರಾಜೀವಿಯ ಪ್ರೇಮ ಕುದುರಿದ ಬಗೆ ಅವರ ಒಂದೆರಡು ದಿನಗಳ ಪ್ರಣಯ ಜೀವನ, ರಾಜೀವಿಯೊಂದಿಗಿನ ಸುಖವನ್ನು ಶಾಶ್ವತವಾಗಿಸಿಕೊಳ್ಳುವ ರಾಘವೇಂದ್ರನ ಪ್ರಯತ್ನ –

ಇಷ್ಟನ್ನೂ ಕೊಟ್ಟ ಕಾದಂಬರಿಕಾರರು ಕಾದಂಬರಿ ರಾಘವೇಂದ್ರನ ಬದುಕಿನ ನಿರ್ಣಾಯಕ ಘಟ್ಟವನ್ನು ಮುಟ್ಟುವ ಹೊತ್ತಿಗೇ ಕೈತೊಳೆದುಕೊಳ್ಳುವುದು ಆಶ್ಚರ್ಯದ ಸಂಗತಿ. ರಾಘವೇಂದ್ರನಿಗೆ ರಾಜೀವಿ ಕೈಕೊಟ್ಟು ನಾಟಕದ ಕಂಪನಿಗೆ ಕಾಲು ಹಾಕಿಕೊಳ್ಳಲು ಕಾರಣವೇನು ? ತನ್ನ ನೆಚ್ಚಿನ ಮೆಚ್ಚಿನ ಪ್ರೇಯಸಿ ಕೈಬಿಟ್ಟಾಗ ರಾಘವೇಂದ್ರನ ಮನಸ್ಸಿನ ಮೇಲಾದ ಪರಿಣಾಮವೇನು ? ಇವು ಓದುಗರನ್ನು ಕಾಡುವ ಪ್ರಶ್ನೆಗಳು. ಕಾದಂಬರಿಕಾರರು ಓದುಗನ ಈ ಪ್ರಶ್ನೆಗಳನ್ನು ತಣಿಸಲು ಹೊರಟಿದ್ದರೆ ಈ ಕಾದಂಬರಿಗೆ ಉತ್ತಮ ಗ್ರಾಸವೊದಗುತ್ತಿತ್ತು. ಆದರೆ ಕಾದಂಬರಿಕಾರರು ಈ ಅಂಶಗಳನ್ನು ಓದುಗನ ಕಲ್ಪನೆಗೇ ಬಿಟ್ಟಂತೆ ಕಾಣುತ್ತದೆ. ಕಾದಂಬರಿ ಎಲ್ಲಿ ಪ್ರಶಸ್ತಾವಸ್ಥೆಗೇರಬಹುದಾಗಿತ್ತೋ ಅಲ್ಲಿಯೇ ಮುಕ್ತಾಯವಾಗುವುದು ಕಾದಂಬರಿಯ ಬಹುದೊಡ್ಡ ಸೋಲಾಗಿದೆ. ಇಲ್ಲಿ ಕಾದಂಬರಿಕಾರರು ಸಸ್ಪೆನ್ಸ್ ಸಿಸಿಮಾಗಳ ಕಾಡುವ ತಂತ್ರವನ್ನು ಬಳಸಿದರೇನೋ ! ಹಿಂದೊಮ್ಮೆ ತನ್ನನ್ನ ರಮಿಸಿ ಕೈಕೊಟ್ಟ ಹೆಣ್ಣಿನ ಬಯಕೆಯಲ್ಲಿ ಮತ್ತೆ ಬಾಧಿಯಾಗುವ ರಾಘವೇಂದ್ರ ಕಾದಂಬರಿಯ ದುರ್ಬಲ ನಾಯಕ ಈತ ಅನುಭವದಿಂದ ಕಲಿತ ಪಾಠವೇನು ಎಂದು ಓದುಗ ಪ್ರಶ್ನಿಸಬೇಕಾಗುತ್ತದೆ, ಇವನಿಗಿಂತ ಅನುಭವದ ಗಟ್ಟಿತನದಲ್ಲಿ ಟ್ಯಾಕ್ಸಿ ಡ್ರೈವರ್, ಸೀನ, ಸರಸ್ವತಿ ಮುಂತಾದ ಪಾತ್ರಗಳು ಓದುಗನಿಗೆ ಮೆಚ್ಚಾಗುತ್ತದೆ.

ಇನ್ನು ಪರಿಮಳದ ಉರುಳಲ್ಲಿ ಕಾದಂಬರಿಯಲ್ಲಿ ಅಭಿವ್ಯಕ್ತವಾಗಿರುವುದು ಬಲವತ್ತರವಾದ ಕಾಮವೇ. ಕಾಲೇಜಿನಲ್ಲಿ ಮನಶ್ಶಾಸ್ತ್ರ ಕಲಿತ ರಾಜಣ್ಣ ತನ್ನ ಮಾವನ (ಚಂದ್ರಶೇಖರಯ್ಯ) ಊರಿಗೆ ಬಂದು ಅಲ್ಲಿ ಅನಿರೀಕ್ಷಿತ ಪ್ರಸಂಗವೊಂದರಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಒಂದು ಹೂವಿನ (ಏಳು ಸುತ್ತಿನ ಮಲ್ಲಿಗೆ ಹೂವು) ಸಂಬಂಧವಾಗಿ ಆ ಪ್ರಸಂಗಕ್ಕೆ ಸಂಬಂಧವನ್ನು ಕಲ್ಪಿಸುವುದರ ಮೂಲಕ ಕಾದಂಬರಿಕಾರರು ತಮ್ಮ ಕಲಾವಂತಿಕೆಯನ್ನು ಮೆರೆದಿದ್ದಾರೆ. ಕಾದಂಬರಿಯ ರಾಜಣ್ಣ ತನ್ನ ವ್ಯಕ್ತಿತ್ವಕ್ಕೆ ಯಾವುದೇ ಭದ್ರ ನೆಲೆಯಿಲ್ಲದ ಎಬಡವಾಗಿ ಕಂಡು ಬರುವ ನಾಯಕ ಪಾತ್ರವಾಗಿದ್ದಾನೆ. ರಾಜಣ್ಣ ತನ್ನ ಮಾವನ ಮನೆಗೆ ಹಾಲು ಹೂವು ಕೊಡುವ ಅಜ್ಜಯ್ಯನಿಂದ ಅವನ ಮಗಳು ಲಕ್ಷ್ಮಿಗೆ ಮನೋವಿಕಾರವೆಂದು ತಿಳಿದು ಆ ಬಗೆಗೆ ಕುತೂಹಲಿತನಾಗುತ್ತಾನೆ. ಮುಂದೆ ಅನುಕೂಲ ಸನ್ನಿವೇಶವೊಂದರಲ್ಲಿ ಅವಳನ್ನು ಕಾಣುತ್ತಾನೆ. ಆಗ ರಾಜಣ್ಣನಲ್ಲಿ ಅವಳ ಬಗೆಗೆ ಕನಿಕರ ಮೂಡುತ್ತದೆ. ಆಂತಹ ಸ್ಥಿತಿಯಲ್ಲೂ ಆತ ಅವಳ ಚೆಲುವನ್ನು ಗುರುತಿಸದೇ ಇಲ್ಲ. ಕಾಲೇಜಿನಲ್ಲಿ ಅಲ್ಪ ಸ್ವಲ್ಪ ಮನಶ್ಶಾಸ್ತ್ರವನ್ನು ಕಲಿತವನಾದ್ದರಿಂದ ಆ ಅತ್ಯುತ್ಸಾಹದಲ್ಲಿ ಲಕ್ಷ್ಮಿಯ ಮನೋವಿಕಾರವನ್ನು ಅಧ್ಯಯನ ಮಾಡಲು ಪ್ರಯತ್ನಿಸಿ ರಾಜಣ್ಣ ಎರಡನೇ ಬಾರಿಗೆ ತಾನೊಬ್ಬನೇ ಕಾಣುತ್ತಾನೆ. ಆಗ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದ ಲಕ್ಷ್ಮಿಯ ಮೈಯ ಚೆಲುವು ರಾಜಣ್ಣನನ್ನು ಕೆಣಕುತ್ತದೆ. ಮುಂದೆ ಲಕ್ಷ್ಮಿ ವಿಕಾರ ಸ್ಥಿತಿಯಲ್ಲಿ ರಾಜಣ್ಣನನ್ನು ಬಳಸಿ ತನ್ನ ಬೆತ್ತಲೆ ಮೈಗೆ ಒತ್ತಿ ಹಿಡಿದಾಗ ಸುಪ್ತವಾಗಿದ್ದ ಅವನ ಗಂಡ್ಸುತನದ ಬಯಕೆ ಗರಿಗೆ

ದರುತ್ತದೆ. ಆ ದಿಶೆಯಲ್ಲಿ ಮುಂದುವರೆಯುವ ಮನಸ್ಸಾದರೂ ತಾನು ಬಂದ ಉದ್ದೇಶ ಲಕ್ಷ್ಮಿಯ ತಂದೆ ತಾಯಿಗಳು ತನ್ನಲ್ಲಿಟ್ಟಿದ್ದ ಪವಿತ್ರ ಭಾವನೆ ಅಡ್ಡ ಬರುತ್ತದೆ. ಒಳಿತು - ಕೆಡಕುಗಳ ಗೊಂದಲದಲ್ಲಿ ತೂಗುಯ್ಯಾಡಿದ ರಾಜಣ್ಣನ ಮನಸ್ಸು ಆಗ ಹಿಂಜರಿದರೂ ಅಲ್ಲಿನ ಮುರಳಿ ಮಾವನ ಮನೆಗೆ ಬಂದಾಗ ಆ ಬಗ್ಗೆ ಕಲಮಲಗೊಳ್ಳುತ್ತದೆ.

ಲಕ್ಷ್ಮಿಯ ಮನೋವಿಕಾರಕ್ಕೆ ಅವಳ ಹೆಣ್ತನದ ಬಯಕೆಯನ್ನು ತಣಿಸಲಾರದ ಷಂಡ ಗಂಡನೇ ಕಾರಣವೆಂಬ ಗುಮಾನಿಯನ್ನು ಕಾದಂಬರಿಯೇ ಹುಟ್ಟಿಸುತ್ತದೆ. ಪ್ರಸ್ತ ಮುಗಿದು ಮೊದಲ ರಾತ್ರಿಯ ಅನುಭವವಾಗಿ ಗಂಡನೂರಿಗೆ ಹೊರಡುವ ಮುನ್ನ ಚಂದ್ರಶೇಖರಯ್ಯ ದಂಪತಿಗಳನ್ನು ವಂದಿಸಿ ಹೋಗಲು ಅವರ ಮನೆಗೆ ಬರುತ್ತಾಳೆ ಲಕ್ಷ್ಮಿ. ಚಂದ್ರಶೇಖರಯ್ಯನವರ ಹೆಂಡತಿಗೆ ಲಕ್ಷ್ಮಿ ತನ್ನ ಗಂಡನೊಂದಿಗೆ ನಮಸ್ಕಾರ ಮಾಡುತ್ತಾಳೆ. ಆಗ ಅವರು "ಗಂಡು ಮಗುವಿಗೆ ತಾಯಿಯಾಗಿ ಬಾ" ಎಂದು ಹರಸುತ್ತಾರೆ. ಆಗ ಹೊಸದಾಗಿ ಒಸಗೆಯಾದ ಲಕ್ಷ್ಮಿಯ ಮುಖ ಓಕಳಿಯಲ್ಲಿ ಅದ್ದಿದಂತಾಗುವುದಕ್ಕೆ ಬದಲು ಬೆಂಕಿ ಸೋಕಿದ ಹೂವಿನಂತೆ ಬಾಡಿ ಏನೋ ಒಂದು ವಿಚಿತ್ರ ರೀತಿಯಲ್ಲಿ ತನ್ನ ಗಂಡನ ಮುಖ ನೋಡಿ, ಬಳಿಕ ಚಂದ್ರಶೇಖರಯ್ಯನವರ ಮುಖವನ್ನು ನೋಡಿ "ನಿಮ್ಮ ಬಾಯ ಹರಕೆ ಸತ್ಯವಾಗಲಿ" ಎಂದಷ್ಟೇ ಹೇಳಿ ಆತುರಾತುರವಾಗಿ ಮಾತು ಮುಗಿಸಿ ಅಲ್ಲಿಂದ ನಿರ್ಗಮಿಸುವುದಾದರೂ (ಪುಟ-೯೨) ಬುದ್ಧಿ ಗೆಟ್ಟ ಹೆಂಡತಿಯನ್ನು ನೋಡ ಬಂದ ಕೆಂಚಯ್ಯ "ನನ್ನಂಥ ಪಾಪಿ ಕೈಹಿಡಿದು ಲಕ್ಷ್ಮಿ ಹೀಗಾದ್ಲು" ಎಂದು ಅತ್ತುಕೊಂಡು ಹೋಗುವುದು (ಪುಟ-೯೨) ಮೇಲಿನ ಗುಮಾನಿಗೆ ಪುಷ್ಟಿ ಕೊಡುತ್ತದೆ. ಅಲ್ಲದೆ ರಾಜಣ್ಣನ ಮೊದಲ ಸಲದ ಲಕ್ಷ್ಮಿಯ ಸಂದರ್ಶನದಲ್ಲಿ "ಷಂಡ ನನ್ಮಕ್ಕಳು...ಎಲ್ಲಾ ಷಂಡ ನನ್ಮಕ್ಕಳು... ಎಂಬುದೂ ಈ ಗುಮಾನಿಗೆ ಮತ್ತಷ್ಟು ಸಮರ್ಥನೆ ನೀಡುತ್ತದೆ. ರಾಜಣ್ಣನು ಇದನ್ನೂ ಗ್ರಹಿಸಿದ್ದಾನೆ.

ಕಾದಂಬರಿಯ ನಾಯಕ ರಾಜಣ್ಣ ಒಬ್ಬ ಅನನುಭವಿಯಾದ ಎಬಡ ಲಕ್ಷ್ಮಿಯ ಮನೋವಿಕಾರವನ್ನು ತನ್ನ ಪ್ರಾಯೋಗಿಕ ಅಧ್ಯಯನಕ್ಕೆ ರಾಜಣ್ಣ ಬಳಸಿಕೊಂಡರೂ ಅವನಿಗೆ ಒಬ್ಬ ಮನೋವಿಜ್ಞಾನಿಗೆ ಇರಬೇಕಾದ ಮನೋ ದೃಢತೆ ನಿರ್ವಿಕಾರ ಹಾಗೂ ನಿರ್ಲಿಪ್ತ ಮನಃಸ್ಥಿತಿಗಳಿಲ್ಲ. ಲಕ್ಷ್ಮಿಯ ಹುಚ್ಚನ್ನು ನಿವಾರಿಸುವ ವಿಶ್ವಾಸವನ್ನು ಹೊಂದಿ ಒಂದು ರೀತಿಯಲ್ಲಿ ರಾಜಣ್ಣ ಹುಚ್ಚು ಸಾಹಸಕ್ಕೆ ಕೈ ಹಾಕುತ್ತಾನೆ. ಕೊನೆಗೆ ಹುಚ್ಚಿಯ ಅಂಗಕ್ಕೂ ಕಣ್ಣು ಹಚ್ಚಿ ಅವಳ ಸೌಂದರ್ಯದ ಸೆಳೆತಕ್ಕೆ ಸಿಕ್ಕಿ ಯಜ್ಞ ಪಶುವಾಗುವ ಸೂಚನೆಯನ್ನು ಕಂಡಾಗ ಅವನನ್ನು ಅನನುಭವಿಯಾದ ಎಬಡನೆನ್ನುವುದರಲ್ಲಿ ಸಂಶಯವೇನಿಲ್ಲ. ಇಲ್ಲಿ ಎಂತಹ ಸ್ಥಿತಿಯಲ್ಲೂ ಹೆಣ್ಣು-ಗಂಡಿನ ಸಹಜ ಆಕರ್ಷಣೆ ತಪ್ಪದು ಎಂಬುದು ಕಾದಂಬರಿಕಾರರ ಧೋರಣೆಯಿದ್ದಂತೆ ಭಾಸವಾಗುತ್ತದೆ. ರಾಜಣ್ಣ ಲಕ್ಷ್ಮಿಯ ಮನೋವಿಕಾರಕ್ಕೆ ಗಂಡಿನ ಸುಖವೇ ಮದ್ದು. ಅವಳು ಮೊದಲಿನಂತಾಗುವುದಾದರೆ ಅವಳ ಅತೃಪ್ತ ಕಾಮವನ್ನು ಗಂಡಿನ ಸ್ಥಾನದಲ್ಲಿ ನಿಂತು

ನಾನೇ ಏಕೆ ತಣಿಸಬಾರದು ? ಎಂಬ ತೀರ್ಮಾನ ಸ್ಥಿತಿಗೆ ಬರುತ್ತಾನೆ. ಇಲ್ಲಿಯೂ ರಾಜಣ್ಣನಿಗೆ ಲಕ್ಷ್ಮಿಯ ಬಗೆಗಿನ ಕನಿಕರ-ಕ್ಷೇಮಾಭಿಲಾಷೆಗಿಂತ ಸ್ವಾರ್ಥವೇ ಹಿರಿದಾಗಿರುವಂತಿದೆ. ಕಾದಂಬರಿಯ ಕೊನೆಯಲ್ಲಿ ರಾಜಣ್ಣ ತನ್ನ ಮಾವನೊಂದಿಗೆ ಆಡುವ ಮಾತುಗಳಲ್ಲಿ ಎಲ್ಲರನ್ನೂ ಮನೆಯಿಂದ ಹೊರ ಹಾಕಿ ಮಿಶ್ರಿತ ಸ್ಥಿತಿಯಲ್ಲಿ ಲಕ್ಷ್ಮಿಯ ಬಯಕೆಯನ್ನು ಪೂರೈಸುವುದರೊಂದಿಗೆ ತನ್ನ ಕಾಮದ ಹಸಿವನ್ನು ತಣಿಸಿಕೊಳ್ಳುವ ಹವಣಿಕೆಯು ಸೂಚನೆಯಿದೆ.

ಒಂದು ಹೂವಿನ ಪರಿಮಳದ ಬಗೆಗೆ ಗರಿಗೆದರಿದ ರಾಜಣ್ಣನ ಕುತೂಹಲ – ಹುಚ್ಚಿ ಲಕ್ಷ್ಮಿಯ ಬಗೆಗಿನ ಕನಿಕರವಾಯಿತು. ಆ ಕನಿಕರ ಲಕ್ಷ್ಮಿಯ ಹುಚ್ಚೇರಿಸುವ ಸೌಂದರ್ಯದ ಸುಳಿಯಲ್ಲಿ ತಿರ್ರನೆ ತಿರುಗಿ ದೈಹಿಕ ಸುಖಾಪೇಕ್ಷೆಯಾಯಿತು. ಅದನ್ನು ತೀರಿಸಿಕೊಳ್ಳುವ ಹವಣಿಕೆ ರಾಜಣ್ಣನ ಸಜ್ಜನಿಕತೆ, ನೈತಿಕತೆಗೆ ಉರುಳಾಯಿತು. ಈ ದೃಷ್ಟಿಯಲ್ಲಿ ಕಾದಂಬರಿ ಶೀರ್ಷಿಕೆ ಅರ್ಥ ಪೂರ್ಣವೆನಿಸುತ್ತದೆ.

ಈ ಕಾದಂಬರಿಯ ಮುಗ್ಧತೆಯೋ ಮೈವೆತ್ತ. ಎರಡರಿಯದ ಮನೋಭಾವದ ಅಜ್ಜಯ್ಯ. ಓಬವ್ವ ಮತ್ತು ಸಾತ್ವಿಕತೆಯ ಪ್ರತೀಕದಂತಿರುವ ಚಂದ್ರಶೇಖರಯ್ಯ – ಈ ಪಾತ್ರಗಳು ಓದುಗರ ಮನಸ್ಸನ್ನು ತುಂಬುತ್ತದೆ.

ಒಟ್ಟಿನಲ್ಲಿ ಕಾದಂಬರಿಕಾರರು ತಮ್ಮ ಈ ಎರಡು ಕಾದಂಬರಿಗಳಲ್ಲಿ ಮನುಷ್ಯನ ಮೂಲ ಭೂತ ಹಾಗೂ ಪ್ರಬಲ ಪ್ರವೃತ್ತಿಯಾದ ಕಾಮದ ಪ್ರಖರತೆ ಮತ್ತು ತೀವ್ರತೆಯನ್ನು ಅರಿವು ಮಾಡಿಕೊಡುತ್ತಾರೆ. ಎರಡೂ ಕಾದಂಬರಿಗಳೂ ಓದುಗನ ಕುತೂಹಲವನ್ನು ಕೆಣಕಿ ಕೊನೆಯವರೆಗೂ ಓದಿಸಿಕೊಳ್ಳುವ ಗುಣವನ್ನೊಳಗೊಂಡಿವೆ. ಆದರೆ ಕನ್ನಡದಲ್ಲಿ ಕಾದಂಬರಿ ಪ್ರಕಾರ ಬೆಳೆಯುತ್ತಾ ಬಂದು ಸಂಕೀರ್ಣ ಸ್ಥಿತಿಯನ್ನು ಮುಟ್ಟಿರುವ ಇಂದಿನ ನಿಟ್ಟಿನಲ್ಲಿ ನೋಡಿದಾಗ ತ.ರಾ.ಸು. ಅವರ ಈ ಎರಡು ಕಾದಂಬರಿಗಳಲ್ಲಿ ಅಂತಹ ಗಹನತೆಯಾಗಲೀ ಮನಸ್ಸಿನ ಸಂಕೀರ್ಣ ಅಭಿವ್ಯಕ್ತಿಯಾಗಲೀ ಸಾಂದ್ರ ಅನುಭವವಾಗಲೀ ಹೊಸತನವಾಗಲೀ ಕುಡು ಬರದೆ ನಿರಾಶೆ ಹುಟ್ಟಿಸುತ್ತದೆ. ಆದರೂ ಸನ್ನಿವೇಶಗಳನ್ನು ಹೊಂದಿಸುವುದರಲ್ಲಿ ಕಾದಂಬರಿಕಾರರು ತಮ್ಮ ಕಲಾವಂತಿಕೆಯನ್ನೂ ಮೆರೆದಿದ್ದಾರೆ.

ವಿಷಪ್ರಾಶನ-ಕೆಲವು ಅನಿಸಿಕೆಗಳು

— ಸುಮಂಗಲಾ ಅನಂತಸ್ವಾಮಿ

ಮನುಷ್ಯ ಜೀವನದಲ್ಲಿ ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಬೆದರುತ್ತ ಕುಳಿತರೆ ಬಾಳು ಬೆಳೆಯಲು ಅಸಾಧ್ಯ. ಬಾಳು ಬೆಳೆಯುವುದು ಆತ್ಮವಿಶ್ವಾಸಪೂರ್ಣವಾದ ಕರ್ತವ್ಯದಿಂದ. ಯಾರೋ ಏನೋ ಮಾಡಿದರು ತನಗೆ ಎಂಬ ಭ್ರಮೆಯಿಂದ ದೇವರುಕೊಟ್ಟ ಈ ಅಪೂರ್ವನಿಧಿಯಾದ ಬದುಕನ್ನು ವ್ಯರ್ಥಗೊಳಿಸುವುದು ಮುರ್ಖತನ. ಇದು ತ.ರಾ.ಸು. ಅವರ 'ವಿಷಪ್ರಾಶನ' ಸಾಮಾಜಿಕ ಕಾದಂಬರಿಯ ನಾಯಕ ಸದಾಶಿವನಿಗೆ ನೂರಕ್ಕೆ ನೂರರಷ್ಟು ಅನ್ವಯಿಸುತ್ತದೆ.

'ವಿಷಪ್ರಾಶನ' ಒಂದು ಸಾಮಾಜಿಕ ಕಾದಂಬರಿ. ಕಲಾವಿದನೊಬ್ಬ ಹೆಣ್ಣಿನ ಪ್ರಣಯೋನ್ಮಾದದ ಕಾವಿನಲ್ಲಿ ಸುಟ್ಟು ಬೆಂದು ಹೋಗುವ ಹೃದಯವಿದ್ರಾವಕ ಕಾದಂಬರಿ.

'ವಿಷಪ್ರಾಶನ' ದ ನಾಯಕ ಸದಾಶಿವ ಯೌವನದ ಕಾವಿನಲ್ಲಿ, ಹೆಣ್ಣಿನ ಪ್ರೇಮ, ಪ್ರೀತಿಯ ಕಪಟತನ ಅರಿಯದೆ ತನ್ನ ಬಾಳನ್ನೇ ದುರಂತವಾಗಿಸಿಕೊಂಡ ಒಬ್ಬ ನಾಟ್ಯ ಕಲಾವಿದ. ಪ್ರಕೃತಿಯ ಮಡಿಲಲ್ಲಿ ಚೇತನಗೊಂಡು ನಾಟ್ಯ ಕಲಾವಿದನಾದ ಸದಾಶಿವ ನಾಟ್ಯ ಕಲೆಯನ್ನೇ ತನ್ನ ಬಾಳಉಸಿರನ್ನಾಗಿಸಿಕೊಂಡವ. ಚಿಕ್ಕಂದಿನಿಂದಲೂ ಆಟ ಪಾಠಗಳಲ್ಲಿ ಹೊತ್ತು ಕಳೆಯದೇ ಬರೀ ಗ್ರಂಥವಾಚನದಲ್ಲಿ ಸಂಗೀತದಲ್ಲಿ, ಆಸಕ್ತಿವಹಿಸಿ ಎಲ್ಲರಿಂದಲೂ ದೂರ ಸರಿದು ನಿಲ್ಲುತ್ತಿದ್ದ ಸದಾಶಿವನ ಮನಸ್ಸನ್ನು ಆಳವಾಗಿ ಗಮನಿಸಿದವರು ಅವನ ಶಾಲಾ ಗುರುಗಳಾದ ಗುರುರಾಯರು. ಅವರ ಸಹಾಯದಿಂದ, ಪ್ರೋತ್ಸಾಹದಿಂದ ಹಾಗೂ ತಂದೆಯ ಬೆಂಬಲದಿಂದ ತಾಫೆ ಲಕ್ಷ್ಮಾಸಾನಿಯಲ್ಲಿ ನೃತ್ಯಾಭ್ಯಾಸಕ್ಕೆ ನೆಲೆಗೊಳ್ಳುತ್ತಾನೆ. ಅವನನ್ನು ಮನೆಯ ಮಗನಂತೆ ಕಂಡು ಹಾಲು ಕುಡಿಸಿ ಬೆಳೆಸಿ ನೃತ್ಯ, ಸಂಗೀತ ಕಲಿಸಿಕೊಡುತ್ತಿದ್ದ ಮುದುಕಿಗೆ ಒಮ್ಮೆ ಬರಸಿಡಿಲಿನಂತಹಾ ಸುದ್ದಿ ಬಡಿಯಿತು. ಅದು ಅವಳ ಸೋದರ ಸೊಸೆ ಗಿರಿಜೆಗೂ ಸದಾಶಿವನಿಗೂ ಸಂಬಂಧ ಬೆಳೆದು ಸದಾಶಿವ ಹೆದರಿಸಿ ಬೆದರಿಸಿ ಗಿರಿಜೆಯನ್ನು ಭೋಗಿಸಿದ್ದಾನೆ ಎಂಬುದು. ಈ ಬಗ್ಗೆ ಗಿರಿಜೆಯನ್ನು ಕೇಳಿದಾಗ ಸದಾಶಿವ ಹೆದರಿಸಿ ಬೆದರಿಸಿ ತನ್ನನ್ನು ಹಾಳು ಮಾಡಿದ ಎನ್ನಲು ರೋಸಿ ಹೋದ ಮುದುಕಿ ಸದಾಶಿವನನ್ನು ಮನೆಯಿಂದ ಹೊರಗಟ್ಟುತ್ತಾಳೆ. ಗಿರಿಜೆಯ ಕಪಟತನದಿಂದಾಗಿ ಸದಾಶಿವನ ಮನಸ್ಸೊಡೆದು, ತನ್ನ ನೃತ್ಯಾಭ್ಯಾಸೇಚ್ಛೆ ಚೂರು ಚೂರಾದುದನ್ನು ಸಹಿಸಲಾರದೇ ಯಾರಿಗೂ ಹೇಳದೇ ಕೇಳದೇ ಅನಿಶ್ಚಿತ ಪ್ರಯಾಣ ಬೆಳೆಸಿದ. ಮೊದಲು ಶಿವಮೊಗ್ಗೆಯಿಂದ ಆರಂಭವಾದ ಅವನ ಪಯಣ ಆಗುಂಬೆಯತ್ತಣಿಂದ ಮಂಗಳೂರಿನ ಕಡಲ ತೀರಕ್ಕೆ ಬಂದು ಮುಟ್ಟಿತು. ಅಲ್ಲಿಗೆ ಬಂದಾಗ ನಿಸರ್ಗದ ಸೊಬಗಿನಿಂದಾಗಿ ಅವನೆಲ್ಲ ಸುಪ್ತ ಭಾವನೆಗಳಿಗೂ ಪುನಃಶ್ಚೇತನ ದೊರಕುತ್ತೆ.

ಇಲ್ಲಿ ತ.ರಾ.ಸು. ರವರು ಸದಾಶಿವನ ಮೂಲಕ ವ್ಯಕ್ತಪಡಿಸಿರುವ ನಿಸರ್ಗದ ವರ್ಣನೆ ಸಾಮಾನ್ಯನ ಕಲ್ಪನೆಗೂ ಮೀರಿದ್ದು. ಅವರು ಪ್ರಕೃತಿಯ ಸೊಬಗನ್ನೇ ನೃತ್ಯ ಕಲೆಯಲ್ಲಿ ಒಂದುಗೂಡಿಸುವ ವಿಚಾರವನ್ನು ಕಲಾವಿದನಲ್ಲಿ ಮೂಡಿಸಿದ್ದಾರೆ.

ಊರು ಬಿಟ್ಟು ದೂರ ಬಂದ ಸದಾಶಿವ ಕಡಲ ತೀರದ ಸೊಬಗಿನ ಮಡಿಲಲ್ಲಿ ಕುಳಿತು ಸೌಂದರ್ಯೋಪಾಸನೆಯಲ್ಲಿ ತೊಡಗಿರುವಾಗ ಅವನ ತಂದೆ, ಹಾಗೂ ಗುರುಗಳಾದ ಗುರುರಾಯರು ತನ್ನಲ್ಲಿಟ್ಟಿದ್ದ ದೃಢ ನಂಬಿಕೆ ವಿಶ್ವಾಸಗಳ ಸವಿನೆನಪಿನಿಂದ ಹೊಸ ಜೀವನವನ್ನು ರೂಪಿಸುವ ಅಭಿಲಾಷೆ ಹೊಂದುತ್ತಾನೆ.

ಮೊದಲ ಗಟುಕಿನಲ್ಲಿ ಗಿರಿಜೆಯ ದ್ರೋಹಪೂರ್ಣವಾದ ಪ್ರೇಮದಿಂದಾಗಿ ವಂಚಿತನಾದ ಸದಾಶಿವನನ್ನು ಎರಡನೇ ಗುಟುಕಿನಾರಂಭದಲ್ಲಿ ತ.ರಾ.ಸು. ರವರು ವೆಂಕಟರಾಯರ ಮೂಲಕ ಪುನಃಶ್ಚೇತನಗೊಳಿಸುತ್ತಾರೆ, ಕಲಾವಿದನ ಬಾಳನ್ನು ಬೆಳಗಿಸಲು ಪ್ರಯತ್ನಿಸುತ್ತಾರೆ ಆದರೆ ವಿಧಿ ?

ವೆಂಕಟರಾಯರಂತಹ ಗಣ್ಯವ್ಯಕ್ತಿ ಕಡಲ ತೀರದಲ್ಲಿ ಕಲಾವಿದ ಸದಾಶಿವನ ಚಲನ ವಲನಗಳನ್ನು ಗಮನಿಸಿ, ತಮ್ಮ ಮನೆಗೆ ಕರೆದೊಯ್ದು ಮಗನಂತೆ ಸಾಕಿ ಸಲಹಿ ಅವನ ಕಲೆಗೆ ಬೇಕಾದ ಎಲ್ಲ ಪ್ರೋತ್ಸಾಹ ಕೊಟ್ಟು ಕಾಪಾಡಿದರು. ಆದರೆ ಅವರ ಮನೆಯ ಆಪ್ತ ಹಾಗೂ ಆಗರ್ಭ ಶ್ರೀಮಂತರೊಬ್ಬರ ಮಗಳು ಮನೋರಮ (ಮನು)ಳಿಂದಾಗಿ ಅವನು ಜೀವನದಲ್ಲಿ ಎರಡನೆ ಬಾರಿ ಜಿಗುಪ್ಸೆ ಹೊಂದುವಂತಾಯಿತು. ಸಹಜವಾಗಿ ಬರುತ್ತಿದ್ದ ಮನು ಸದಾಶಿವನ ನಾಟ್ಯ ಕಲೆಯಿಂದ ಆಕರ್ಷಿತಳಾಗಿ ಅವನೊಂದಿಗೆ ಸಲಿಗೆ ಬೆಳೆಸಿಕೊಳ್ಳುತ್ತಾಳೆ. ಅವಳೇ ಅವನನ್ನು ಪ್ರೀತಿಸಿ ಕಾಡಿಸಿ ಹತ್ತಿರ ಎಳೆದು ಕೊಳ್ಳುತ್ತಾಳೆ. ಒತ್ತಾಯ ಪೂರ್ವಕವಾಗಿ ತನ್ನ ಮನೋಭಿಲಾಶೆ ಅಭಿರುಚಿಗಳನ್ನು ಅವನಲ್ಲಿ ರೂಢಿಸುತ್ತಾಳೆ. ಸದಾಶಿವನನ್ನು ರಂಗದ ಮೇಲೆ ತರಲು ತನ್ನ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಭಾಗವಹಿಸುವಂತೆ ಮಾಡುತ್ತಾಳೆ. ಇವೆಲ್ಲ ಕಾರಣಗಳಿಂದಾಗಿ ಆಕರ್ಷಿತನಾದ ಸದಾಶಿವ ಮನುವಿನಲ್ಲಿ ಒಂದು ದಿನ ತನ್ನ ಪ್ರೇಮ, ಪ್ರೀತಿಯ ಭಾವನೆಗಳನ್ನರುಹಿದಾಗ ಅವಳಿಂದಲೂ ಸಮಾನ ಪ್ರತಿಕ್ರಿಯೆ ಪಡೆದ. ಹೀಗೆ ಮುಂದು ವರೆದ ಅವರ ಪ್ರೇಮ ಪ್ರಕರಣ ಮದುವೆಯ ಹಂತ ಮುಟ್ಟಿತು. ಅಷ್ಟರಲ್ಲಿಯೇ ಅವರಿಬ್ಬರೂ ಒಂದಾಗುವ ದಿನವೂ ಬಂತು. ಇಷ್ಟರ ಮಟ್ಟಿಗೆ ಅವಳಲ್ಲಿ ಲೀನವಾಗಿ ಹೋದ ಸದಾಶಿವ ಮನುವಿನದು ನಿಜವಾದ ಪ್ರೀತಿಯೆಂದು ನಂಬಿ ಅವಳನ್ನು ಆರಾಧಿಸಲುತೊಡಗಿದ. ಆದರೆ ವಿಧಿ, ಒಮ್ಮೆ ಮನು ನುಡಿದ ನುಡಿ "ರಾಜಾ ಸುಖಿದ ದಿನವೇ ಸಿಡಿಲು ಹೊಡೆಯುವುದು" ಎಂಬುದನ್ನು ಸತ್ಯವಾಗಿಸಿತು. ಸದಾಶಿವನಿಗೆ ಎರಡನೆಯ ಬಾರಿಗೆ ವಿಷದ ಊಣಿಸು ಸಿದ್ಧವಾಗಿತ್ತು; ಮನು ಬೇರೆಯವನೊಂದಿಗೆ ಮದುವೆಯಾಗುವ ಸುದ್ದಿ. ಇದರಿಂದ ತಳಮಳಗೊಂಡು ಒದ್ದಾಡುತ್ತಿದ್ದ ಸದಾಶಿವನನ್ನು ಕಂಡು ವಿಷಯ ತಿಳಿದ ವೆಂಕಟರಾಯರು ಮನುವಿನೊಂದಿಗೆ ಅವನ

ಅಭಿಲಾಷೆ ವ್ಯಕ್ತಿ ಪಡಿಸಿದಾಗ ಅವಳ ಬಾಯಿಂದ ಬಂದ ಮಾತುಗಳು "ನಿಜವಾಗಿಯೂ ಹೇಳಿದರೇ ಕಾಕ" "—ಕಾಕ, ಇನ್ನವರಿಗೆ ನನಗೆ ಮುಖ ತೋರಿಸಬೇಡಿರೆಂತ ಹೇಳು, ಟ್ರೈಟರ್, ಬಿಟ್ರೇಯರ್". ಎರಡನೆ ಬಾರಿಗೆ ಉಂಡ ವಿಷವನ್ನು ಜೀರ್ಣಿಸಿ ಕೊಳ್ಳಲಾರದ ಸದಾಶಿವ ಮತ್ತೊಮ್ಮೆ ಎಲ್ಲರನ್ನೂ ತೊರೆದು ಹೊರಟ.

ಕಲಾವಿದನೂ ಒಬ್ಬ ಮನುಷ್ಯ. ಅವನ ಮನಸ್ಸು ಕಲೆಯ ವಿಶಾಲ ಕ್ಷೇತ್ರದಲ್ಲಿ ವಿಸ್ತಾರಗೊಂಡು ಅರಳುತ್ತದೆ. ಆದರೆ ಅದೇ ಕಲಾವಿದನ ಜೀವನದಲ್ಲಿ ಮೂಡಿ ಬರುವ ಕಹಿ ಘಟನೆಗಳು ಅವನನ್ನು ಪಾತಾಳಕ್ಕೆ ಒಯ್ಯುತ್ತವೆ. ಇದನ್ನು ತ.ರಾ.ಸು.ರವರು ತಮ್ಮ ಕಾದಂಬರಿ "ವಿಷಪ್ರಾಶನ"ದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಇಂಥ ಘಟನೆಗಳು ಅವನ ಕಲೆಯ ನಾಶಕ್ಕೆ ಹೇಗೆ ಕಾರಣವಾಗುತ್ತವೆ. ಎಂಬುದನ್ನೂ ಸಿದ್ಧಪಡಿಸಿದ್ದಾರೆ.

"ವಿಷ ಪ್ರಾಶನ" ಕಾದಂಬರಿಯನ್ನು ತ.ರಾ.ಸು.ರವರು ಕಾಮ–ಪ್ರೇಮಗಳ ತೂಗುಯ್ಯಾಲೆಯಲ್ಲಿ ಗತಿತಪ್ಪಿ ಹೋಗುವ ಹೆಣ್ಣುಗಳ ಮನೋಧರ್ಮವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಗಿರಿಜೆ ಮತ್ತು ಮನುವಿನಂತಹ ಸ್ತ್ರೀಯರಿರುವ ಸಮಾಜದಲ್ಲಿ ಇಂತಹ ಸನ್ನಿವೇಶಗಳು ಸಾಧಾರಣವಾಗಿ ಕಂಡುಬರುವಂತಹವೇ. ಗಂಡು–ಹೆಣ್ಣಿನ ಆಕರ್ಷಣೆಯ ಸಹಜ ಸಂಬಂಧದಲ್ಲಿ ಹೆಣ್ಣು ಯಾವಾಗಲೂ ತನ್ನ ಮೇಲೆ ಏನೇ ತಪ್ಪನ್ನೂ ಹಾಕಿಕೊಳ್ಳಲಾರಳು. ಯಾವಾಗಲೂ ತನ್ನಿಂದ ತಪ್ಪೇ ಉಂಟಾಗಲಿಲ್ಲ, ಎಲ್ಲಾ ಗಂಡಸಿನದೆ ತಪ್ಪು ಎಂದು ಸಿದ್ಧಪಡಿಸುವಳು. ಇದು ವಿಷಪ್ರಾಶನದಲ್ಲಿ ಚೆನ್ನಾಗಿ ರೂಪುಗೊಂಡಿದೆ. ಮನು, ಗಿರಿಜೆ ಇಬ್ಬರೂ ಒಂದೇ ಮನೋಭಾವದವರು. ತ.ರಾ.ಸು. ಈ ಕಾದಂಬರಿಯಲ್ಲಿ ಹೆಣ್ಣೆನಂತಹ ಒಂದು ಭೀಕರ ಪ್ರಾಣಿಯನ್ನು ಕೇಂದ್ರವಾಗಿಟ್ಟುಕೊಂಡು, ಅದರಿಂದ ಉಂಟಾಗುವ ಪಲವಾರು ಕಹಿ ಸನ್ನಿವೇಶಗಳನ್ನು,ಒಂದಾದ ಮೇಲೊಂದರಂತೆ ಬರುವ ಘಟನೆಗಳನ್ನು ಸದಾಶಿವನ ದುರಂತ ಪ್ರೇಮದೊಂದಿಗೆ ಹೊಂದಿಸಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಎರಡು ಬಾರಿ ವಿಷದ ಗುಟುಕುಗಳನ್ನು ನುಂಗಿದ ಸದಾಶಿವ ಇಡೀ ಹೆಣ್ಣು ಕುಲವನ್ನೇ ದ್ವೇಷಿಸುವಂತಾಗುತ್ತದೆ. ಮತ್ತು ಎಲ್ಲ ಹೆಣ್ಣುಗಳನ್ನು ಒಂದೇ ದೃಷ್ಟಿ ಕೋನದಲ್ಲಿ ನೋಡುವಂತಾಗುತ್ತೆ. "ಹೆಣ್ಣು ಹೆಣ್ಣೇ ರಾಜಾ, ಹೆಣ್ಣು, ಹೆಣ್ಣೇ" "ಹೆಣ್ಣು ಎಲ್ಲಿ ಹುಟ್ಟಿದರೂ ಒಂದೇ, ಹುಲಿ ಮಲಬಾರಿನದಾದರೇನು, ಬಂಗಾಲದ್ದಾದ ರೇನು? ಉಗ್ರ ನಖ" ರಕ್ತದಂತ ಎಲ್ಲಿದ್ದರೂ ಒಂದೇ. ಹುಲಿ ಎಲ್ಲಿದ್ದರೂ ಹುಲಿಯೇ; ಹೆಣ್ಣೂ ಅಷ್ಟೇ..." ಕಾದಂಬರಿಯಲ್ಲಿ ಮೂಡಿಬಂದಿರುವ ಇಂತಹಾ ಮಾತುಗಳು ಸದಾಶಿವನ ಮನದಲ್ಲಿ ಅಚ್ಚೊತ್ತಿರುವ ಸ್ತ್ರೀ ದ್ವೇಷವನ್ನು ಎತ್ತಿ ತೋರಿಸುತ್ತವೆ. ಗಂಡಸೆಂಬ ಪ್ರಾಣಿಯು, ಯೌವ್ವನದ ಕಾವಿನಲ್ಲಿ ತನ್ನ ನೈಸರ್ಗಿಕ ದುರ್ಬಲತೆಗಳು

ಹೆಚ್ಚಾಗಿ, ತಾನೇ ನಿರ್ಮಿಸಿಕೊಂಡ ವಿಷವೃತ್ತದತ್ತ ಸಿಕ್ಕಿ ಒದ್ದಾಡಿ ಭಗ್ನಗೊಳ್ಳುವುದನ್ನು ಚೆನ್ನಾಗಿ ರೂಪಿಸಿದ್ದಾರೆ.

ನಿಸರ್ಗದ ಸೊಬಗನ್ನು ತುಂಬ ನೈಜವಾಗಿ ವರ್ಣಿಸಿದ್ದಾರೆ. ಪ್ರಕೃತಿಯ ಸೊಬಗಿನ ಸಿರಿನೆಯನ್ನು ನೃತ್ಯದಲ್ಲಿ ಅಳವಡಿಸಲೆಳಸಿರುವ ಅವರ ವಿಚಾರ ಪ್ರಶಂಸನೀಯ.

ನಂಜುಂಡ ನರ ಸದಾಶಿವ ಕುಡಿಯುವ ವಿಷದ ಗುಟುಕುಗಳು ಎರಡೇ ಆದರೂ, ತಾನು ಕುಡಿದ ಗುಟುಕುಗಳು, ಅಂಥ ಗುಟುಕು ಕಲಾವಿದನೊಬ್ಬನ ಜೀವನಕ್ಕೆ ಎಷ್ಟು ಮಾರಕ ಎಂಬುದನ್ನು ತ.ರಾ.ಸು. ಅವರು ಹೃದಯಂಗಮವಾಗಿ ಸದಾಶಿವನ ಪಾತ್ರ ಸೃಷ್ಟಿಯಿಂದ ನಿರೂಪಿಸಿದ್ದಾರೆ. ಸದಾಶಿವನಂತಹ ಕಲಾವಿದನಿಗೆ, ತಾನು ಪಡೆದ ಅನುಭವಗಳು 'ವಿಷಪ್ರಾಶನ' ವಾದರೂ, ಈ ಕಾದಂಬರಿಯನ್ನು ಓದುವ ಓದುಗರಿಗೆ ಇದೊಂದು 'ಅಮೃತ ಸೇಚನ' ಎಂಬುದಂತೂ ನಿಸ್ಸಂದೇಹ. ●

ಕಾ ಮಾ ಕ್ಷಿ

—ಎ. ಎಸ್. ಲೋಕಾಕ್ಷಿ

"ಕಾಮಾಕ್ಷಿ" ತ.ರಾ.ಸು. ರವರು ೧೯೪೭ ರಲ್ಲಿ ಬರೆದ ಒಂದು ನೀಳ್ಗತೆ. ಇದು ನೀಳ್ಗತೆಯೋ ಅಲ್ಲವೋ ಎಂಬುದು ಲೇಖಕರಿಗೇ ಗೊತ್ತಿಲ್ಲ. ನೀಳ್ಗತೆಯ ಲಕ್ಷಣಗಳು, ವೈಶಿಷ್ಟ್ಯಗಳು "ಇದಮಿತ್ಥಂ" ಎಂದು ಲಾಕ್ಷಣಿಕರು ಎಲ್ಲೂ ನಿರ್ಧರಿಸಿಲ್ಲ. ಅಲ್ಲಿ, ಇಲ್ಲಿ ಕೆಲವು ವಿಮರ್ಶಕರು ತೋರಿಸಿರುವ ಲಕ್ಷಣಗಳು, ಇದರಲ್ಲಿ ಅಸ್ಪಷ್ಟ ರೂಪದಲ್ಲಿ ದೊರೆಯುತ್ತದೆ. ಈ ಕೃತಿ ಪ್ರಕಟವಾದ ತರುಣದಲ್ಲಿ ಕನ್ನಡ ಸಾಹಿತ್ಯದಲ್ಲಿ "ಮನೋ ವಿಶ್ಲೇಷಣೆ" ಯನ್ನು ಬಳಸಿಕೊಂಡಿದ್ದ ಕಥೆ, ನೀಳ್ಗತೆ, ಕಾದಂಬರಿಗಳು ಬಹುಶಃ ಇರಲಿಲ್ಲ. ಪ್ರಸಿದ್ಧ ಮನೋ ವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್‌ರವರು ಮನಸ್ಸಿನ ಅವಸ್ಥೆಗಳ ಅಂತಸ್ತುಗಳ ಅಧ್ಯಯನಕ್ಕೆ ನಾಂದಿ ಹಾಡಿ, ಇದನ್ನು ಒಂದು ಶಾಸ್ತ್ರ (ಪ್ರಾಯೋಗಿಕ) ವಾಗಿ ಬೆಳೆಯಲು ಕಾರಣರಾದರು. ಈ ಕಥೆಯಲ್ಲಿ ಕೇವಲ ಮನೋವಿಶ್ಲೇಷಣೆಯಷ್ಟೇ ಅಲ್ಲ ಇನ್ನೂ ಹಲ ಕೆಲವು ಶಾಸ್ತ್ರೀಯ ಸಿದ್ಧಾಂತಗಳನ್ನು ಛಾಯೆಯನ್ನು ಕಾಣಲು ಸಾಧ್ಯ. ಪ್ರಖ್ಯಾತ ಜೀವ ಶಾಸ್ತ್ರಜ್ಞ ಮೆಂಡೆಲ್‌ರವರ ಸಂತತಿ ಸಿದ್ಧಾಂತವನ್ನು ಇಲ್ಲಿ ಕಾಣಬಹುದು. ಇವುಗಳ ಜೊತೆಗೆ ಸಂಕೇತಗಳ ಬಳಕೆ ಸ್ವಪ್ನಗಳ ಬಳಕೆ, ಶಕುನಗಳ ಬಳಕೆಯೂ ಕೂಡ ನಡೆದಿದೆ. ಪ್ರಕೃತಿಯ ವರ್ಣನೆಯಲ್ಲಿ ತ.ರಾ.ಸು. ಯಾವ ರೊಮ್ಯಾಂಟಿಕ್ ಸಾಹಿತಿಗೂ ಕಡಿಮೆಯೇನಲ್ಲ. ಹೀಗೆ ಈ ನೀಳ್ಗತೆಯ ಈ ಹಲವು "ವಾದ"ಗಳ, ಸಿದ್ಧಾಂತಗಳ, ನಂಬಿಕೆಗಳ ಹರಕು, ಮುರುಕು ಅಲೆ ದಾಟದ ಗಟ್ಟಿಯಾಗಿದೆ.

ಕಥೆ ಸಾಮಾನ್ಯವಾದದ್ದು. ಸಹಜ ಆಕಾಂಕ್ಷೆಗಳನ್ನು ಹೊತ್ತ ಇಬ್ಬರು ನಾಯಕ ಮತ್ತು ನಾಯಕಿ ಪ್ರಭಾವತೆ ನಾಯಕಿಯರು, ನಾಯಕ ಇಲ್ಲಿ ಗೌಣ, ಒಂದು ಪೋಷಕ ಪಾತ್ರ. ಕಾಮಾಕ್ಷಿಯು ಪ್ರಕೃತಿಯ ಕೂಡ ಬೆಳೆದವಳು. ಅದರ ಸನ್ನಿಧಿಯಲ್ಲಿ, ಆ ಮೂಗು ಪ್ರಾಣಿಗಳ ಕೂಡ, ಪಕ್ಷಿಗಳ ಕೂಡ ತನ್ನ ಆಸೆ ಆಕಾಂಕ್ಷೆಗಳನ್ನು ಹಂಚಿಕೊಂಡವಳು. ಅಲ್ಲಿ ಮಾನಸಿಕ ತೃಪ್ತಿಯನ್ನು ಪಡೆದವಳು. ಅದರ ರಂಗು ರಂಗಿನಲ್ಲಿ ಈಕೆ ತನ್ನ ಪ್ರತಿ ಸ್ಪಂದನಕ್ಕೆ ಅರ್ಥ ಕಾಣುತ್ತಾಳೆ.

"ಮತ್ತಾವುದೋ ಹೊಸ ಮಾಯೆ......." ಹೊಳೆಯುತ್ತದೆ (೩–೯) ಈ ಸಾಲುಗಳಲ್ಲಿ ವ್ಯಕ್ತವಾಗುವ ಆ ಮಾಯೆಗೆ ಆಕೆ ಮರುಳು. ಅದು ಅವಳನ್ನು ಕರೆಯುತ್ತದೆ.

"ಬೇರೆಯವರ ಕಣ್ಣಿಗೆ ಕಾಣಿಸದ........ಮುದ್ರೆಯೊತ್ತುತ್ತದೆ" (೩-೧೪) ಹೀಗೆ ಇತರರಿಗೆ ಕಾಣಿಸದ ಅರ್ಥವಾಗದ ಅರ್ಥ ಅಥವ ಅರಿವು ಅವಳಿಗೆ ಇಲ್ಲ ಈ ಪ್ರಾಕೃತಿಯ ರಂಗಿನಾಟದಲ್ಲಿ ಕಾಣಿಸುತ್ತದೆ. ಆಕೆ ಪ್ರಾಕೃತಿಯ ಮಗು. ಅವಳಿಗೂ ತಣಿವಿಲ್ಲ...... ಮೋರೆ ಚಿಕ್ಕದು ಮಾಡಿಕೊಂಡು (೯–೧೧)

ಹೂಗಳ ಬಗ್ಗೆ ಹೆಣ್ಣು ಮಕ್ಕಳಿಗೂ ಇರುವ ಮೋಹ ವಿಶೇಷವಾದದ್ದು. ಹೂಗಳ ಪ್ರಪಂಚದಲ್ಲಿ ಯಾವುದೇ ಹೆಣ್ಣು ಮಗು ಹೊಕ್ಕಾಗ ಆಗುವ ಮಾನಸಿಕ ಆನಂದ ಅನನ್ಯ ಸಾಧಾರಣವಾದದ್ದು. ಈ ಅತಿ ವಾಸ್ತವ ಚಿತ್ರಣ ಕಥೆಗೆ, ಅದರ ಬೆಳವಣಿಗೆಗೆ ಪೋಷಕವಾಗಿದೆ.

"ವಾಸುದೇವ ತಾಯಿಯ ಮಗನಾದಂತೆ, ಕಾಮಾಕ್ಷಿ ತಂದೆಯ ಮಗಳಾಗಿದ್ದಳು" (೧೨–೨)

" ವಂಶಪಾರಂಪರ್ಯವಾಗಿ ಬಂದ ರಸಿಕತೆ......." (೧೩–೯) "ತಮ್ಮ ತಾತನ ಜಾಡು ಹಿಡಿದು ಚಂದ್ರಶೇಖರಶಾಸ್ತ್ರಿಗಳು ಒಂದೆರಡು ಹಾಡು ಕಟ್ಟಿದ್ದರು" (೯–೧೮)

ಇಲ್ಲಿ ಪ್ರಖ್ಯಾತ ಜೀವ ಶಾಸ್ತ್ರಜ್ಞ ಮೆಂಡೆಲ್‌ರವರ ಜೀವ ಶಾಸ್ತ್ರೀಯ ಸಿದ್ಧಾಂತ(ಸಂಸತಿ ಸಿದ್ಧಾಂತ)ವನ್ನು ಬಳಸಿಕೊಂಡಿದ್ದಾರೆ. ಇದರ ಪ್ರಕಾರ ಗಂಡು ಮಕ್ಕಳಲ್ಲಿ ತಾಯಿಯ ಗುಣಗಳ ಬಹು ಭಾಗ, ಹೆಣ್ಣು ಮಕ್ಕಳಲ್ಲಿ ತಂದೆಯ ಗುಣಗಳ ಹೆಚ್ಚು ಭಾಗ ಕಂಡು ಬರುತ್ತವೆ. ಹಾಗೂ ಪ್ರತಿ ಮೂರನೇ ತಲೆ ಮಾರಿನಲ್ಲಿ ಸ್ವಭಾವಗಳ ಪುನರಾವರ್ತನೆ ಕಂಡು ಬರುತ್ತವೆ ಎಂಬ ಶಾಸ್ತ್ರೀಯ ಸತ್ಯವನ್ನು ಉಪಯೋಗಿಸಿ ಕೊಂಡಿದ್ದಾರೆ. ಕಥೆಯ ಬೆಳವಣಿಗೆಗೆ ವಿಜ್ಞಾನದ ಒಂದು ಮೆಟ್ಟಿಲುಗಟ್ಟಿದ್ದಾರೆ.

"ಆಕೆಯ ಪ್ರೀತಿ ವಾಸುದೇವನಿಗೆ ವಿನಿಯೋಗವಾಗಿತ್ತು" (೧೨–೨೨)

"ಆದುದರಿಂದ ಆ ಭೀತಿ ಸಿಡುಕುತನದಲ್ಲಿ ಸಿಡಿಯುತ್ತಿತ್ತು" "ನನ್ನ ಮಗಳಾಗಿ... ಹೋಗ್ತಿಯಾ" (೧೮–೨) ಇಲ್ಲಿ ತಾಯಿ ತನ್ನ ಒಬ್ಬಳೇ ಮಗಳ ಬಗ್ಗೆ ಇಟ್ಟುಕೊಂಡ ಅಭಿಪ್ರಾಯ ಅವಳ ವರ್ತನೆಗಳು ತೀರಾ ಅಸಹಜ. ಆಕೆ ತಂದೆ ತಾಯಿಗಳ ಒಬ್ಬಳೇ ಮಗಳು. ಹೀಗಿರುವಾಗ ಸಾಮಾನ್ಯವಾಗಿ ಅಂತಹ ತಾಯಿಗೆ ಅಂತಹ ಮಗಳು ಕೇವಲ ಮಗಳೇ ಅಲ್ಲ. ಆಕೆಯ ಅಂತರಂಗದ ಆಪ್ತಳೂ ಆಗುತ್ತಾಳೆ. ಇದು ಎಲ್ಲ ಸಂಸಾರಗಳ ಕಥೆ. ಹೀಗಿರುವಾಗ ತನ್ನ ಒಬ್ಬಳೇ ಮಗಳಿಗೆ ಆ ತಾಯಿ ಈ ರೀತಿ ಶಪಿಸುವುದು, ಹಾಗೂ ಪ್ರೀತಿಯಲ್ಲಿ ಪಕ್ಷಪಾತ ಮಾಡುವುದು ತೀರ ಅಸಹಜವೆನಿಸುತ್ತದೆ.

ಜೀವನಾರ್ಜನೆ ಬಿಟ್ಟರೆ ಯಾವ ವಿಧದಲ್ಲೂ ಸೌಂದರ್ಯ ಪೂಜೆ ಮಾಡುವ ಅವಕಾಶ ವಿಲ್ಲದ ಶಾಸ್ತ್ರಿಗಳಿಗೆ (೧೮–೧೩)

ಕಾಮಾಕ್ಷಿಯ ಹೃದಯದಲ್ಲಿ....... ಮೂಡಿಸುತ್ತಿದ್ದುವು (೧೩–೧೫) ಹೆಚ್ಚು ಮಾತಾಡಲಾರದೆ ಮಗಳನ್ನು ತಬ್ಬಿಕೊಳ್ಳುತ್ತಿದ್ದರು (೧೭–೯) ಶಾಸ್ತ್ರಿಗಳು ಕವಿಗಳು ರಸಿಕರು. ಕಾವ್ಯ ರಚನೆ ಕಾವ್ಯ ವಾಚನದಲ್ಲಿ ಸಂಪೂರ್ಣ ತೃಪ್ತಿ ಪಡೆಯುತ್ತಿದ್ದರು. ಅದರ ರಸ ಸನ್ನಿವೇಶಗಳಲ್ಲಿ ಮೈಮರೆಯುತ್ತಿದ್ದರು, ಆನಂದ ತುಂದಿಲರಾಗುತ್ತಿದ್ದರು. ಅಂದರೆ ಕಾವ್ಯ ರಚನೆ, ಹಾಗೂ ಅದರ ಉಪಾಸನೆಯೂ ಒಂದು ಬಗೆಯ ಸೌಂದರ್ಯೋಪಾಸನೆಯೇ ಆಗಿತ್ತು. ಹೀಗಿರುವಾಗ ಶಾಸ್ತ್ರಿಗಳಿಗೆ

ದೇವಾತಾರ್ಚನೆಯೊಂದೇ ಶಾಸ್ತ್ರಿಗಳ ಸೌಂದರ್ಯೋಪಾಸನೆಯ ಅವಕಾಶ ಎನ್ನುವ ಮೇಲಿನ ಮಾತು ವಿರೋಧಾಭಾಸಕ್ಕೆ ಎಡೆಮಾಡುತ್ತದೆ. ಇದು ಕಥೆಯ ಬರಿಯ ಕುತ್ತು.

ಕೈಗೆ ಸಿಕ್ಕಿದ ಕಲ್ಲನ್ನು...... ಬೀರುತ್ತಾಳೆ (೨೩-೨೦) ಈ ಸಿಟ್ಟು, ಈ ಕೋಪ ಏಕೆ?

ಅವಳ ದ್ಮೃಯನ್ನು ಚಿತ್ತಲಿ ಮಾಡಿ ನೋಡಿದಂತಾಗುತ್ತದೆ.(೨೪-೮) ಈಕೆಯನ್ನು ಚಿತ್ತಲಿ ಮಾಡಬೇಕು, ಯಾವ ಉದ್ದೇಶಕ್ಕಾಗಿ?

ಅವಳ ದೃಷ್ಟಿ ಅವಳ ಮೈ ತಾಕಿದತ್ತ ಅಗ್ನಿಸ್ಪರ್ಶವಾಗುತ್ತದೆ ೨೪-೧೬) ಅಂತಹ ವಿಪರೀತ ಮಾನಸಿಕ ಒತ್ತಡಕ್ಕೆ ಕಾರಣವೇನು?

ತನ್ನ ಎದೆಯ ಮೇಲೆ ಕೈಯಾಡಿಸಿಕೊಳ್ಳುವಳು .... ಕಂಪಿಸುತ್ತದೆ (೨೬-೨) ಇದರ ಅವಶ್ಯಕತೆಯೇನು ?

ಈ ಚಿತ್ರಣಗಳು ಸಂಕೇತಗಳ ಮೂಲಕ ಅವಳ ಮಾನಸಿಕ ಪರಿಯನ್ನು ಬಿಡಿಸುವ ರೀತಿ ಮನೋವಿಶ್ಲೇಷಣೆ ಎಂದು ಒಪ್ಪಿಕೊಳ್ಳುವುದು ಒಂದು ಧಾರ್ಷ್ಟ್ಯವಾಗುತ್ತದೆ. ಕಾಮಾಕ್ಷಿಯ ಪರಿಸರ ಶುದ್ಧವಾದದ್ದು ಬೆಳವಣಿಗೆ ಶುದ್ಧವಾದದ್ದು. ಆಕೆಯ ಮೇಲೆ ಯಾವುದೇ ಬಗೆಯ ಒತ್ತಡಗಳೂ ಬಿದ್ದಿಲ್ಲ. ಆಕೆಯಲ್ಲಿದ್ದ ಸುಪ್ತ ಕಾಮ ಮೇಲೆದ್ದು ಥಂಗನೆ ಕುಣಿಯಲು, ಅದು ಯಾವ ಕಾರಣದಿಂದಲೂ ಅಸ್ವಾಭಾವಿಕ ಒತ್ತಡಕ್ಕೆ ಗುರಿಯಾಗಿಲ್ಲ. ಹೀಗಿರುವಾಗ ಈ ಸಹಜ ಚಿತ್ರಣ ಕಥೆಯ ಬೆಳವಣಿಗೆಗೆ ಪೂರಕವಾಗಲಿಲ್ಲ.

"ಎರಡು ಪಾರಿವಾಳ......ಕೂತಿತು" (೨೭-೨) ಇಲ್ಲಿ ಕಥೆಗಾರರ ಕಲ್ಪನೆಯ ಲೋಕದಲ್ಲಿ ದಾರಿ ತಪ್ಪಿರುವುದು ಕಂಡು ಬರುತ್ತದೆ. ತೀರ ವೈಪರೀತ್ಯಕ್ಕೆ ಕಾರಣ ಈ ಒಂದು ಚಿತ್ರ, ಈ ಬೇಟ ಮತ್ತು ಕೂಟ, ಹಳ್ಳಿಗಳಲ್ಲಿ, ಪ್ರಕೃತಿಯ ಮಡಿಲಲ್ಲಿ ಬೆಳೆದ ಪ್ರತಿ ವ್ಯಕ್ತಿಗೆ ತೀರ ಸಮೀಪದಲ್ಲಿ ಕಾಣುವ ದೃಶ್ಯ. ನಾಯಿ, ಕೋಳಿ, ಗುಬ್ಬಚ್ಚಿಗಳ ಬೇಟ, ಹಸು ಎಮ್ಮೆಗಳ ಬೆರೆ, ಕುರಿ ಮೇಕೆಗಳ ಕೂಟ, ಇವು ಹಳ್ಳಿಯ ಜೀವನವಲ್ಲಿ ದಿನಂಪ್ರತಿ ಗೋಚರಿಸುವ ದೃಶ್ಯಗಳು. ಆ ಬಗ್ಗೆ ಅವರಿಗೆ ಯಾವ ವಿಪರೀತವೂ, ವಿಕಾರವೂ ಆದ ಕಾಮಕೆರಳಲಾರದು. ಈ ಸಾಮಾನ್ಯ ಘಟನೆಗಳಿಗೆ ಇಲ್ಲದ ಅರ್ಥ ಕಲ್ಪಿಸಲು ಪಾರಿವಾಳಗಳನ್ನೇ ಎಳೆದು ತಂದದ್ದು ತೀರ ಅಸಹಜ ಹಾಗೂ ಆ ಮೂಲಕ ಕಾಮಾಕ್ಷಿಯ ಕೂಗಿಗೆ ಕೊಟ್ಟ ಉತ್ತರ ಸತ್ಯದೂರವಾಯಿತು.

"ಮಧುರವಾದ ಬೆಂಕಿ ಹೊಳೆ, ಕೋಟಿ ತೆರೆ ಪಟ್ಟಿ ನುಗ್ಗಿದಂತಾಯಿತು" (೨೮-೭) ಕೈ ಅರಳಿದ ಗುಲಾಬಿಯನ್ನು ಮೃದುವಾಗಿ ನೇವರಿಸುತ್ತಿತ್ತು (೨೮-೧೦) ಇಲ್ಲಿ ವಿವಾಹ ಪೂರ್ವದಲ್ಲಿ ವಧುವಿನ ಮನಸ್ಸನ್ನು ತೆರೆಯುವ ರೀತಿಯಲ್ಲಿ ಕಂಡು ಬರುವ ವಿರೋಧಾಭಾಸ ಗಮನಾರ್ಹವಾಗಿದೆ. "ಬೆಂಕಿ ಹೊಳೆ ಮಧುರವಾಗು

ವುದು, ಕೋಟಿ ತೆರೆ ನುಗ್ಗುವುದು, ಮುಳ್ಳು ಗುಲಾಬಿಯನ್ನು ನೇವರಿಸುವುದು. ಒಂದು ಭಾಗದಲ್ಲಿ ಕೋಮಲತೆ, ಇನ್ನೊಂದು ಭಾಗದಲ್ಲಿ ಹಿಂಸೆ, ಈ ಜೋಡು ಪದಗಳಲ್ಲಿ ಸೇರಿಕೊಂಡು, ಅವಳ ಹೃದಯದಲ್ಲಿ ತುಂಬಿಕೊಂಡಿರುವ ಭಾವ, ಆಸೆ, ಆಕಾಂಕ್ಷೆಗಳ ಬಗ್ಗೆ ತೀರ ಅಸ್ಫುಟವಾದ, ಅರ್ಥ ರಹಿತವಾದ ಚಿತ್ರಗಳನ್ನು ಮೂಡಿಸುತ್ತದೆ.

"ಈ ಹುಡುಗನನ್ನು ನೋಡಿ ಎನ್ನಿಸಿತು"

"ನೀನು ಒಪ್ಪಿದವನೇ ಆ ಹುಡುಗ"

"ನೆನಪಿನ ಇದಿರು ಕಾಮಾಕ್ಷಿ ತತ್ತರಿಸಿ ಹೋದಳು"(೨೫–೧೮) ಇಲ್ಲಿ ಕಾಮಾಕ್ಷಿಯಂ ಪರಿ, ತೀರ ಶೋಚನೀಯ, ಆಕೆಯ ಬಗ್ಗೆ ಸಹಾನುಭೂತಿ ಮೂಡಿಸಲು, ಬರಲಿರುವ ಅನಾಹುತಕ್ಕೆ ಓದುಗರನ್ನು ತಯಾರು ಮಾಡುವ ಸನ್ನಾಹ ಇಲ್ಲಿ ನಡೆದಿದೆ ಬಲಿ ಗಂಬಕ್ಕೆ ಬಿಗಿಯಲು ಎಳೆದೊಯ್ಯುವ ಕುರಿಯ ಪರಿ ಈಕೆಯದು. ತಂದೆ ತಾಯಿ ತಮ್ಮ ಭಾರ ಕಳಚಿಕೊಳ್ಳಲು ಚೈತ್ರಯಾತ್ರೆ ಕೈಗೊಂಡ ದುರಂತ ಮಜಲಿನ ಮುಮ್ಮೆಟ್ಟಿಲು ಈ ಚಿತ್ರ.

"ಅವಳ ಬಯಕೆ ತೀವ್ರವಾದಾಗ...... ಹುಟ್ಟಿಸುತ್ತದೆ" (೪೨–೩) ಹೀಗೆ ಮೇಲೆ ಚಿತ್ರಿತವಾದ ಭಯಂಕರ ಕನಸುಗಳು ಹಾಗೂ ರೂಕ್ಷ ಚಿತ್ರಣಗಳ ಅವಶ್ಯಕತೆ ಇದೆಯೇ? ಮಧುರವಾದ ಸ್ವಪ್ನ ಕಾಣುತ್ತಿರುವ ನವ ವಿವಾಹಿತ ಯುವತಿ, ಆಕೆಯ ಬಯಕೆ ತೀವ್ರವಾದಾಗ ಇಂತಹ ಭಯಂಕರ ಸ್ವಪ್ನ ಕಾಣುವುದು ಸಾಧ್ಯವೆ ? ತನ್ನನಲ್ಲ, ತನ್ನ ಪ್ರಿಯಕರನ ಬದಲು ಅಗ್ನಿ, ನೀರು ಮತ್ತು ಏರುತ್ತಿರುವ ತೆರೆ, ಹುಲಿ, ಹಾವು ವಿಕಾರಾಕೃತಿಗಳು, ಈ ಮೂಲಕ ಅವಳ ಮಾನಸಿಕ ಅವಸ್ಥೆಯನ್ನು ಚಿತ್ರಿಸಿರುವುದು ತೀರ ಅವಾಸ್ತವಿಕ. ಈ ಚಿತ್ರಗಳ ಹುಟ್ಟು ಅಸ್ಪಷ್ಟ. ಅಪರಾಧ ಮೂಲ ಮನಸ್ಸಿನಲ್ಲಿ ಸ್ವಸ್ಥ ಆನಂದಾನುಭವ ಒಂದು ಮನಸ್ಸಿನಲ್ಲಿ ಅಲ್ಲ. ಹಾಗಿರುವಾಗ ತೀರ ಭಾವುಕಳೂ, ಸೌಂದರ್ಯದ ಆರಾಧಕಳೂ, ಸ್ವಯಂ ಸುಂದರಿಯೂ ಆದ ಕಾಮಾಕ್ಷಿಯನ್ನು ಈ ಅಗ್ನಿ ಜ್ವಾಲದಲ್ಲಿ ತೊಡಕಿಸುವ ಈ ಯತ್ನ ತೀರ ತಪ್ಪಾದುದು.

ಅದನ್ನು ಕೇಳಿದಾಗ ಅವಳ ಎದೆ ಹಾರಲಾರಂಭಿಸಿತು.....ಮುಚ್ಚಿತು (೪೨-೮) "ಮೈನೆರೆದ ಮಗಳನ್ನು ಮನೇಲಿಟ್ಟುಕೊಂಡು......ಸಾಕು" (೫೦–೯) ಇಲ್ಲಿ ಶಾಸ್ತ್ರಿಗಳು ಲೋಕ ತಿಳಿದವರು, ವ್ಯವಹಾರ ಜ್ಞಾನ ಇದ್ದವರು. ಕಾವೇರಮ್ಮನೂ ಅಷ್ಟೆಯೇ. ಹಾಗಿರುವ ಶಾಸ್ತ್ರಿಗಳು ಕಾವ್ಯದ ಈ ರಸ ಸನ್ನಿವೇಶಗಳನ್ನು ವಾಚಿಸಿ, ಅವುಗಳನ್ನು ಮನಸಾರೆ ಕಲ್ಪಿಸಿಕೊಂಡು ಮೈ ಮರೆಯುವುದು. ಅಗ ಹೆಚ್ಚು ಕಡಿಮೆ ಅಂತಹದೇ ಲೋಕದಲ್ಲಿದ್ದ ಕಾವೇರಮ್ಮ ಕಾಮಾಕ್ಷಿಗೇ ಕೇಳುವಂತೆ ಅವರನ್ನು ಎಚ್ಚರಿಸುವ ಮಾತು ತೀರ ಅಸಹಜವಾದುದು. ಲೋಕ ತಿಳಿದ ಸಭ್ಯತೆ ಅರಿತಿದ್ದ ಕಾವೇರಮ್ಮ ಸನ್ನೆಗಳ ಮೂಲಕ ತಮ್ಮ ಪತಿಯನ್ನು ತೆಪ್ಪಗಿರಿಸಬಹುದಾಗಿತ್ತು. ಅದು ಸಹಜವಾಗಿತ್ತು. ಆದರೆ ಇಲ್ಲಿ ಆದ ಚಿತ್ರಣ ಲೋಕ ರೂಢಿಗೆ, ವ್ಯವಹಾರ ದೃಷ್ಟಿಗೆ ದೂರವಾಗಿ; ಕಥೆಯ ಬೆಳವಣಿಗೆಗೆ ಅಡ್ಡಿಯೊಡ್ಡುತ್ತದೆ.

"ಆ ದಿನ ಹತ್ತಿರವಾದ ಹಾಗೆ......ಭೀತಿ ಕವಿಯುತ್ತಿತ್ತು" (೫೨-೧೩) "ನದಿಯ ಗಡ್ಡೆಗೆ ಹೋದಾಗ......ಭಾರವಾಗುತ್ತಿತ್ತು (೫೨-೧೬) ತೀರಾ ವಿಪರೀತವಾದ ಕಲ್ಪನೆ. ನವ ದಂಪತಿಗಳ ಜೀವಮಾನದಲ್ಲಿ ಇದೊಂದು ಸ್ಮರಣೀಯ ದಿನ. ಯುವತಿಯ ಮನಸ್ಸಿನಲ್ಲಿ ಬೆದರಿಕೆ ಬರಬಹುದು. ಆದರೆ ದುಃಖ ಕವಿಯಲು, ಹೃದಯ ಭಾರವಾಗಲು ಕಾರಣವೇನು ?

"ಕಾಮಾಕ್ಷಿಗೆ ಇದ್ದಕ್ಕಿದ್ದ ಹಾಗೆ ಬಲಗಣ್ಣು ಹಾರಿತು" (೫೬-೬) ಸಂಕೇತಗಳ ಜೊತೆ, ಸ್ವಪ್ನಗಳ ಜೊತೆಗೆ ಈಗ ಶಕುನಗಳನ್ನು ಎಳೆದು ತಂದಿದ್ದಾಗಿದೆ, ಅಂಧಾನುಕರಣೆ ಮತ್ತು ಮೂಢ ನಂಬಿಕೆಗಳ ಓಕುಳಿಯಾಟ. ಯಾವುದೋ ಅನಿಷ್ಟಕ್ಕೆ, ಅದರ ಬೇಟೆಗಾಗಿ ಪೂರ್ವ ಸಿದ್ಧತೆ ಮಾಡಿದಂತೆನಿಸುತ್ತದೆ.

ಒಂದು ಭೀತಿ ಎಳೆ ಹರಿಯುತ್ತದೆ. ಮೈಯನ್ನು ಅವಳ ಮೈಗೆ ಸೋಕಿಸಲಿಲ್ಲ. ಹೀಗೇಕೆ ಎಂದು ಚಿಂತಿಸಿದಳು. (೫೭-೮) ಆಕೆಯ ವೈವಾಹಿಕ ಜೀವನದ ಏಳು-ಬೀಳಿನ ರಾತ್ರಿ. ಓದುಗ ಈಗಾಗಲೇ ಸಿದ್ಧವಾಗಿದ್ದಾನೆ. ಕಾಮಾಕ್ಷಿಯ ನಿರಾಸೆ, ನೋವು, ದುರಂತದಲ್ಲಿ ಪರಿಸಮಾಪ್ತಿಯಾಗುತ್ತದೆ. ಆ ಪಾತ್ರಕ್ಕೆ ಈ ಪಾತ್ರ ಸಹಜ ಹಾಗೂ ನಿರೀಕ್ಷಿತ. ಈಘಟ್ಟದಲ್ಲಿ ಈ ಒಂದು ಚಿತ್ರಣ ಕಥೆಯ ಹಲವಾರು ಸೋಲುಗಳನ್ನು ಅತ್ತಸರಿಸಿ ಕೇವಲ ಕಾಮಾಕ್ಷಿ ಆಕೆಯ ಮುಗ್ಧ ಜೀವನ, ತಾಯಿ ತಂದೆಗಳ ವ್ಯಾವಹಾರಿಕ ಸ್ವಾರ್ಥ, ಅದಕ್ಕೆ ಬಲಿಯಾದ ಈ ಮುಗ್ಧ ಹೆಣ್ಣು ಇವಳ ಜೀವ ತೆಗೆಯಲು ಆ ಸ್ವಾರ್ಥಿಗಳ ಜೊತೆ ಸೇರಿಕೊಂಡ ಆ ಗಂಡು! ಇವರ ಬಗ್ಗೆ ರೋಷವೂ ಉಂಟಾ-ಗುತ್ತದೆ. ಕಾಮಾಕ್ಷಿ ಹೀಗೆಯೇ ಸಮಾಜದ ನಿರ್ದಾಕ್ಷಿಣ್ಯ ನಿರ್ವಂಚಿತ ವೇದಿಕೆಯ ಮೇಲೆ ಪ್ರಾಣಾರ್ಪಣೆ ಮಾಡಿದ ಒಂದು ಬಲಿ ಪಶು.

ಕಥೆಗಾಗಿ ಆಯ್ದ ವಸ್ತು ಸಾಮಾನ್ಯವಾದರೂ ಅದರ ಚಿತ್ರಣ ಕುತೂಹಲಕರವಾಗಿದೆ. ಪ್ರಕೃತಿಯ ಮಡಿಲಲ್ಲಿ ಬೆಳೆದು ಬಂದ ಮುಗ್ಧ ಹೆಣ್ಣು ಸಂಪ್ರದಾಯದ ಮಮತೆಯ ಸುಳಿಯಲ್ಲಿ ಸಿಕ್ಕಿ ಮುಳುಗಿ ಹೋಗುವ ಈ ಚಿತ್ರ ಬಹು ಕಾಲ ನೆನಪಿನಲ್ಲಿ ಉಳಿಯುತ್ತದೆ. ಆಕೆಯ ಯೌವನಸಹಜ ಆಸೆ ಆಕಾಂಕ್ಷೆಗಳನ್ನು ಬಹಳ ಮಾರ್ಮಿಕವಾಗಿ ಚಿತ್ರಿಸುವ ಯತ್ನ ನಡೆದಿದೆ. ಆದರೆ ಅನೇಕ ಕಡೆ ಅಪಕ್ವ ಬರವಣಿಗೆಯಿಂದ ಇದು ಸೋತಿದೆ. ಫ್ರಾಯ್ಡ್ ಮತ್ತಿತರ ಮನೋ ವಿಜ್ಞಾನಿಗಳ ಸಿದ್ಧಾಂತಗಳ (ಸೆಕ್ಸ್‌ಥಿಯೋರಿಸ್, ಸೈಕೋ ಅನಾಲಿಸಿಸ್) ನ್ನು ಬಳಸಿ ಕಾಮಾಕ್ಷಿಯ ಪಾತ್ರದ ಅಂತರಂಗವನ್ನು ಬಿಚ್ಚಲು, ಆ ಮೂಲಕ ಅವಳ ಬಹಿರಂಗ ಜೀವನದ ಮೇಲೆ ಬೆಳಕು ಚೆಲ್ಲಲು ಪ್ರಯತ್ನ ಮಾಡಲಾಗಿದೆ. ಪ್ರಯೋಗ ನೂತನವಾದದ್ದು, ಅಪೇಕ್ಷಣೀಯವಾದುದು. ಆದರೆ ಲೇಖಕರು ಆ ಕಾಲಕ್ಕೆ ಇನ್ನೂ ಬೆಳೆಯುತ್ತಿದ್ದುದರಿಂದ ಈ ವಸ್ತು ಅವರ ಕೈಯಲ್ಲಿ ಪಡೆಯ ಬಹುದಾದ ಸಾಫಲ್ಯತೆಯನ್ನು ಪಡೆದಿಲ್ಲ. ಕಾಮಾಕ್ಷಿ ಹಳ್ಳಿಯ ಹುಡುಗಿ, ಪ್ರಕೃತಿಯ ಶಿಶು. ಸಂಸ್ಕಾರದ ಬಲವೂ ಆಕೆಗಿದೆ. ಹೀಗಿದ್ದಾಗ ಮನೋವಿಶ್ಲೇಷಣೆಯ ಬೆಳಕಿನಲ್ಲಿ ಪರಿ ಪರಿಯಾಗಿ ಬಿಚ್ಚಿಕೊಳ್ಳುವ ಅವರ ಪಾತ್ರ

ಎಲ್ಲೋ ತನ್ನ ಏಕತೆಯನ್ನು ತನ್ನ ಸಮಗ್ರತೆಯನ್ನು ಕಳೆದುಕೊಂಡಿದೆ ಎನ್ನಿಸುತ್ತದೆ.

ಒಬ್ಬ ಲೇಖಕನ ಸಾಹಿತ್ಯ ಜೀವನದ ವಿವಿಧ ಮಜಲುಗಳನ್ನು ಕಾಣುವ, ನಿರೀಕ್ಷಿಸುವ, ಅಭ್ಯಸಿಸುವ ವಿಚಾರಕನಿಗೆ ಈ ಪುಸ್ತಕ ಬಹಳ ಬೇಕಾದ ಕೊಡುಗೆ. ಮುಂದೆ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ಬೀವರ್ಚಸ್ಸನ್ನು ರುವಂತಹ ಒಬ್ಬ ಸಾಹಿತಿಯು, ಸಾಹಿತ್ಯ ಶೈಶವದಲ್ಲಿ ಅತ ಅಂಬೆಗಾಲಿಡುತ್ತಿದ್ದಾಗ ಆಗುತ್ತಿದ್ದ ಏಳು ಬೀಳುಗಳು ಈ ಕೃತಿಯಲ್ಲಿ ಬಹು ಗಮನಾರ್ಹವಾಗಿವೆ. ಹೀಗೆ ಇದು (ಈ ಕೃತಿ) ಕನ್ನಡಿಗರ ಆಸ್ತಿಯಲ್ಲಿ, ಇರಲೇ ಬೇಕಾದ ಒಂದು "ಐಟಂ" ಆಗಿದೆ.

'ಒನ್ಮೆ ನಕ್ಕನಗು'ವಿನಲ್ಲಿನ 'ಗಂಡಸರು'

—: ಶ್ರೀನಿವಾಸ ಉಡುಪ

ಸಮಾಜದಲ್ಲಿ ಸಂಕೀರ್ಣತೆ ಹೆಚ್ಚಾದಂತೆಲ್ಲಾ ಸಮಸ್ಯೆಗಳು ವಿಪುಲವಾಗುತ್ತವೆ. ಧಾರ್ಮಿಕ, ನೈತಿಕ ವಿಚಾರಗಳಲ್ಲಿ ಕಾಲ ಕಾಲಕ್ಕೆ ಕ್ರಾಂತಿ ಉಂಟಾದಂತೆಲ್ಲಾ ಸಮಾಜದ ಸ್ವರೂಪ ಬದಲಾಗುತ್ತದೆ. ಒಂದು ಕಾಲದ ಸತ್ ಸಂಪ್ರದಾಯಗಳು ಇನ್ನೊಂದು ಕಾಲಕ್ಕೆ ಸತ್ತ ಸಂಪ್ರದಾಯಗಳಾಗುತ್ತವೆ. ಪರಿವರ್ತನೆಯ ಪ್ರಭಾವವನ್ನು ಬೇಗನೆ ಅರ್ಥ ಮಾಡಿಕೊಳ್ಳಲಾರದ ಪ್ರಜಾವರ್ಗ ನಾನಾ ರೀತಿ ತೊಳಲಾಡುತ್ತಿರುತ್ತವೆ. ದಿಕ್ಕು ದೆಸೆಯಿಲ್ಲದೆ ದಿಗ್ಭ್ರಾಂತಿಗಳೊಳಗಾಗಿರುವ, ಇಂತಹ ಸಮಾಜದ ಲೋಪದೋಷಗಳನ್ನು ತ.ರಾ.ಸು. ತಮ್ಮ ಹಲವಾರು ಕಾದಂಬರಿಗಳ ಪುರುಷ ಪಾತ್ರಗಳಿಂದ ನಾನಾ ಬಗೆಗಳಲ್ಲಿ ಚಿತ್ರಿಸಿದ್ದಾರೆ.

ಮಾನವ ಸ್ವಭಾವದಲ್ಲಿ ತ.ರಾ.ಸು. ಅವರಿಗೆ ಇರುವ ಆಸಕ್ತಿಯನ್ನು ಗಮನಿಸಿದರೆ, ಅವರ ಪುರುಷ ಪಾತ್ರ ಸೃಷ್ಟಿ ಸಮರ್ಥವಾಗಿರುತ್ತದೆ. ಅವರ ಕಾದಂಬರಿಗಳಲ್ಲಿ ಬರುವ ಪುರುಷರು ಗಟ್ಟಿಯಾಗಿರುತ್ತಾರೆ. ಆ ಪುರುಷ ಪಾತ್ರಗಳು ಕಥಾಹಂದರದಲ್ಲಿ ಅರಿವಿಲ್ಲದಂತೆಯೇ, ಅವನಲ್ಲಿ ಅಡಗಿರುವ ಶಕ್ತಿಗಳು ಪ್ರದರ್ಶಿಸುತ್ತಾ ತನ್ನ ಮನುಷ್ಯತ್ವದ ಎಲ್ಲಾ ಗುಣಗಳನ್ನು ಬಿಚ್ಚುತ್ತಾ ಬೆಳೆದು ಎದ್ದು ನಿಲ್ಲುತ್ತಾನೆ. ಜೀವನದಲ್ಲಿ ಮನುಷ್ಯನನ್ನು ಮನುಷ್ಯನನ್ನಾಗಿ ಉಳಿಸಲು ತ.ರಾ.ಸು. ತಮ್ಮ ಕಾದಂಬರಿಗಳಲ್ಲಿ ಪುರುಷ ಪಾತ್ರಗಳನ್ನು ಸೃಷ್ಟಿಸುತ್ತಾ ಬಂದಿದ್ದಾರೆ, ಮನುಷ್ಯನ ಅಂತಃಕರಣದ ಕಲ್ಪನಾತ್ಮಕ ನಿರೂಪಣೆಯನ್ನು ನೀಡುವ ಕಾದಂಬರಿಗಳನ್ನು ತ.ರಾ.ಸು. ಬರೆಯುತ್ತಲೇ ಬಂದಿದ್ದಾರೆ. ಒಂದು ಕಾದಂಬರಿಯಿಂದ ಇನ್ನೊಂದು ಕಾದಂಬರಿಯಲ್ಲಿ ತ.ರಾ.ಸು. ಅವರ ಪುರುಷ ಪಾತ್ರಗಳು ಬೆಳೆದಿವೆ. ಕೋಪ, ಉದ್ರೇಕ, ಮತ್ಸರ, ಮದ, ಸಂತಸ, ದುಃಖ, ಎಲ್ಲರನ್ನು ಈ ಪುರುಷ ಪಾತ್ರಗಳಲ್ಲಿ ನಾವು ಕಾಣಬಹುದು, ಇದು ಮನುಷ್ಯನ ಸ್ವಭಾವವಷ್ಟೇ ; ಸಹಾನುಭೂತಿ, ಔದಾರ್ಯ, ಸ್ನೇಹ, ಜೀವನಶ್ರದ್ಧೆ, ಕಷ್ಟ ಸಹಿಷ್ಣುತೆ, ಇಂತಹ ಎಲ್ಲರಿಗೂ ಮುಟ್ಟುವ ಮೌಲ್ಯಗಳನ್ನು – ತ.ರಾ.ಸು. ತಮ್ಮ ಕೆಲವಾರು ಕಾದಂಬರಿಗಳಲ್ಲಿನ ಪುರುಷ ಪಾತ್ರಗಳಲ್ಲಿ ತುಂಬುತ್ತಾರೆ, ತಮ್ಮ ಕಾದಂಬರಿಗಳ ಪಾತ್ರಗಳು, ಅವುಗಳಲ್ಲಿ ಪುರುಷ ಪಾತ್ರಗಳು ಹಾಗೂ ಇಡೀ ಕಾದಂಬರಿ ಓಟ, ಅಂತರಾರ್ಥ ಸುಂದರವಾಗಿ ಇರಬೇಕು, ಆಕರ್ಷಿತವಾಗಿ ಕಾಣಬೇಕು ಎನ್ನುವ ಚಪಲ ತ.ರಾ.ಸು.ಗೆ ಇಲ್ಲ. ತಾವು ಕಾದಂಬರಿಗೆ ಆಯ್ದುಕೊಂಡ ಬರವಣಿಗೆಯಲ್ಲಿ ಏಕಾಗ್ರಮನಸ್ಕರಾಗಿ ಇವರು ಪಾತ್ರಗಳನ್ನು ಸೃಷ್ಟಿಸುತ್ತಾರೆ. ಎದ್ದು ಕಾಣುವ ಹರಿತವಾದ ಶೈಲಿಯ ಸೆಳೆತ, ಪಾತ್ರಗಳ ವ್ಯಕ್ತಿತ್ವ ಸಮಕಾಲೀನ ಬದುಕನ್ನು ಪರಿಚಯಿಸುತ್ತದೆ, ಇವರ ಪುರುಷ ಪಾತ್ರಗಳು ಮನುಷ್ಯನ ಬಹಿರಂಗ ಮತ್ತು ಅಂತರಂಗವನ್ನು ಸೂಕ್ಷ್ಮ

ವಾಗಿ ಪ್ರತಿನಿಧಿಸಬಲ್ಲದು. ಮನುಷ್ಯನ ಸಾಮಾಜಿಕ ವರ್ತನೆ ಮತ್ತು ಬದುಕಿನ ಕ್ರಿಯೆಗಳು, ಅವನ ಅಂತರಂಗ ದರ್ಶನ ಕೂಡ – ತ.ರಾ.ಸು. ಅವರ ಪುರುಷ ಪಾತ್ರಗಳ ಸೃಷ್ಟಿಯಲ್ಲಿ ನಾವು ಗುರುತಿಸಬಹುದು.

ಸಮರ್ಥ ಕಾದಂಬರಿಕಾರ ತ.ರಾ.ಸು. ಅವರು ಜೀವನದ ಆಳ, ವಿಸ್ತಾರ ಎರಡನ್ನೂ ಬಲ್ಲ ಅನುಭವಿ. ಅವರು ಅವರ ಕಾದಂಬರಿಗಳಲ್ಲಿ ಕೆಲವು ಚಲನ ಚಿತ್ರವಾಗಿ ಪ್ರದರ್ಶಿತವಾದಾಗ, ಅವುಗಳಲ್ಲಿನ ಪುರುಷ ಪಾತ್ರದ ಪೌರುಷವನ್ನು ನಮ್ಮ ಓದು ಬಾರದ ಅಸಂಖ್ಯಾತ ಜನ ಇಮಿಟೇಶನ್ ಮಾಡುವಷ್ಟು ಅದರು, ಎಂದರೆ ಅತಿಶಯೋಕ್ತಿಯಲ್ಲ. ಜೀವನದ ಗೊಂಬೆಯು ಶ್ಯಾನುಭೋಗ ಸೀತರಾಮು ಬೆಳೆದು ಬಂದ ಬಗೆ. ಅತ್ತೆಯಲ್ಲಿ ವಾತ್ಸಲ್ಯ, ಹೆಂಡತಿಯಲ್ಲಿ ಪ್ರೇಮ, ನಾಟಕದ ನಟರ ಬಗೆಗೆ ಔದಾರ್ಯ, ಊರಿನ ಬಡರೈತರ ಬಗೆಗೆ, ಇದ್ದ ಹಣ ದಾನಮಾಡಿ ಸಾಲಮಾಡುವಷ್ಟು ಉದಾರಿ. ಈ ಒಂದು ಪುರುಷ ಪಾತ್ರ ಮೇಲಿನದಕ್ಕೆ ಉದಾಹರಣೆ ಸಾಕು. ಇವರ ಎಲ್ಲಾ ಪುರುಷ ಪಾತ್ರಗಳಲ್ಲಿ ಅವರ ಸ್ಥೈರ್ಯ, ತಾಳ್ಮೆ, ಕೋಪ, ಕರುಣೆ, ಪುರುಷತ್ವ ಇವೆಲ್ಲವನ್ನೂ ಗುರುತಿಸಬಹುದಾಗಿದೆ.

'ಒಮ್ಮೆ ನಕ್ಕ ನಗು' ತ.ರಾ.ಸು. ಅವರ ಕಾದಂಬರಿಗಳಲ್ಲಿ ಒಂದು ಅತ್ಯುತ್ತಮ ಕೃತಿ. ಈ ಕಾದಂಬರಿಯಲ್ಲಿ ಮನರಂಜನೆಗಿಂತ – ವಿಚಾರ ಪ್ರಚೋದನೆಯು ಹೆಚ್ಚಾಗಿದೆ. ಈ ಕಾದಂಬರಿಯಲ್ಲಿ ಮುಖ್ಯವಾಗಿ ಬರುವ ಗಂಡಸರು ಇಬ್ಬರು. ನಾಯಿಡು ಹಾಗೂ ಕನಕಲಿಂಗಂ. ಈ ಗಂಡಸರ ಸ್ವರೂಪ, ಅವರು ಬದಕು ಬೆಳೆದು ಹಬ್ಬುವ ವಿವಿಧ ಹಂದರಗಳು, ಅವರ ಅಂತರಾಳ, ಹೊರರೂಪ ಇವು ನಮಗೆ ಕಾದಂಬರಿ ಓದುವಾಗ ಗೊತ್ತಾಗುವುದು. ರಾಘವರೆಡ್ಡಿ ರಾಜಕೀಯ ಮುಂದಾಳು ಎನ್ನುವುದು ನಿಜ. ಆತ ಕುಡಿಯುತ್ತಾನೆ ಎನ್ನುವುದು ನಿಜ. ಅದಕ್ಕಿಂತಲೂ ಹೆಚ್ಚು ಕುಡಿಯುವವರಲ್ಲೂ ಆತ ಮುಂದಾಳು. ಇಂತಹವನ ಮನೆಯಲ್ಲಿ ಪರ ಊರಿನಿಂದ ಬಂದ ರಾಜಕೀಯ ನಾಯಕನೊಬ್ಬ ಉಳಿಯುತ್ತಾನೆ. ಇವರು 'ಮದ್ಯಪಾನ ನಿರೋಧ ದಿನಾಚರಣೆಗೆ ಅಧ್ಯಕ್ಷತೆಗೆ ಬಂದವರು. ಇಲ್ಲಿ ನಿತ್ಯ ನಾವು ನೋಡುವ, ಕಾಣುವ ಸಮಾಜದ ಅನೇಕಾನೇಕ ಗಂಡಸರ, ರಾಜಕೀಯ ಮುಖಂಡರ. ದೇಶದ ಮುಂದಾಳುಗಳ ಸತ್ಯದರ್ಶನ – ತ.ರಾ.ಸು. ಕಾದಂಬರಿಯಲ್ಲಿ ಉಪಪಾತ್ರಗಳ ಮೂಲಕ ಮಾಡಿ ಕೊಡುತ್ತಾರೆ. ಇದೇ ರಾಘವರೆಡ್ಡಿ ಕುಡಿಯುವ ತನ್ನ ಮಿತ್ರರೆದುರು ಒಂದು ಮಾತು ಹೇಳುತ್ತಾನೆ, 'ಸಂನ್ಯಾಸ ತಗೋಳಕ್ಕೆ ಸೂಳೇಗೇರಿಗೆ ಹೋಗೊಲ್ಲ, ನೀರು ಕುಡಿಯೋಕೆ ರಾಘವರೆಡ್ಡಿ ಮನೆಗೆ ಬರೋಲ್ಲ'. ಅಂದು ತಾನು ಮದ್ಯಪಾನ ನಿರೋಧದ ಸಭೆಗೆ ಅತಿಥಿ ಆದರೂ ತನ್ನ ಹವ್ಯಾಸವನ್ನು ಕುಡಿಯುವಾಗ ಹೇಗೆ ಆತ ಹೇಳುತ್ತಾನೆ ಎನ್ನುವುದಕ್ಕೆ ಈ ಸಂಭಾಷಣೆ. ಸೂರ್ಯಚಂದ್ರರಾವ್ ರಾಘವರೆಡ್ಡಿಯ ಸ್ನೇಹಿತ. ಅವನು ಒಂದು ಮಾತು ಹೇಳುತ್ತಾನೆ. 'ಮದ್ಯಪಾನ ನಿರೋಧ ಪ್ರಚಾರಕ್ಕಿಂತ ಬಂದು ಕುಡಿಯುವ ಮಹನೀಯರು......' ಅವನ ಮಾತು ಪೂರ್ತಿ ಆಗುವುದಿಲ್ಲ. ಮುಂದೆ

ಬರುವ ಸಂಭಾಷಣೆ ಇಂದಿನ ನಮ್ಮ ಸಮಾಜದ ವರ್ತನೆಗಳನ್ನು ಹಾಗೇ ನಮ್ಮ ಕಣ್ಣೆದುರಿಗೆ ಇಡುತ್ತದೆ. ಇದು ತ.ರಾ.ಸು. ಅವರ ಕಾದಂಬರಿಗಳ ವೈಶಿಷ್ಟ್ಯ. "ಬಿದೀಲಿ ಹೆಣ ಬಿದ್ದರೆ ನಿನ್ನ ಮನೇಲಿ ಊಟ ಆಗಬಾರದೆ"? ಮುಖಂಡರ ಪ್ರಶ್ನೆ "ಆಗಬಹುದು" ಸೂರ್ಯಚಂದ್ರರಾವ್ ಅವರ ಉತ್ತರ. 'ಇದೂ ಹಾಗೆ ಸತ್ತೋರಿಗೆ ಕಣ್ಣೀರು', ಮದುವೆಗೆ ಬಂದೋರಿಗೆ ಪನ್ನೀರು, ಒಂದಕ್ಕೊಂದು ಸಂಬಂಧ ಕಲ್ಪಿಸಬಾರದು, ಅದರಲ್ಲೇ ವ್ಯವಹಾರ ಜ್ಞಾನ ಇರೋದು. ಮುಂದೆ ಆ ಪರ ಊರ ಮುಖಂಡರು ಹೇಳುತ್ತಾರೆ, 'ನಾನು ಬೀರ್ ಕುಡಿಯೋದು, ನನ್ನ ಮೈಗೆ ಒಳ್ಳೇದಂತ. ಪಾನ ನಿರೋಧ ಪ್ರಚಾರ ಮಾಡ್ತೋದು ದೇಶಕ್ಕೆ ಒಳ್ಳೆದಂತ. ನನ್ನ ಅನುಕೂಲ ನನಗೆ, ದೇಶ ಸೇವೆ ದೇಶಕ್ಕೆ.' 'ಈ ಸೂಕ್ಷ್ಮ ಅರ್ಥ ಮಾಡಿ ಕೊಳ್ಳೋದೆ ವ್ಯವಹಾರ ಜ್ಞಾನ' ಇದು ನಮ್ಮ ದೇಶದ ಮುಖಂಡರ ಸಾಮಾನ್ಯ ಲಕ್ಷಣ. ಎಂದು ಸೂರ್ಯಚಂದ್ರರಾವ್ ತನ್ನ ಕಥೆಯಲ್ಲಿ ನಿರೂಪಿಸುತ್ತಾನೆ. 'ಒಮ್ಮೆ ನಕ್ಕ ನಗು' ಕಾದಂಬರಿ ಉದ್ದಕ್ಕೂ ಅವನ ಐಶ್ವರ್ಯ, ಅವನ ಆಸ್ತಿ, ಅವನ ಮದುವೆ, ಆಗ ಬಂದ ಆಸ್ತಿ ಪಾಸ್ತಿಗಳು, ಆ ಸಂಭ್ರಮ ಇದರ ಜೊತೆಗೆ ನಾಯ್ಡು ತನ್ನ ಹಳ್ಳಿಯನ್ನು, ಜೊತೆಗೆ ಪಟ್ಟಣವನ್ನು ಪರಿಚಯಿಸುತ್ತಾನೆ. ಮದ್ಯಪಾನ ಹುಚ್ಚು ನಾಯ್ಡುಗೆ. ಅದೂ ಕೂಡ ಗುರುತು ಪರಿಚಯವಿಲ್ಲದ ಜನ, ಬೆಂಗಳೂರು ನೋಡಿದಾಗ ನಾಯ್ಡುಗೆ ಅಪರಿಮಿತ ಆನಂದ ಮೊದಲು ಅಧ್ಯಾಯ ನಾಯ್ಡು ಎಂದು ಕರೆಸಿಕೊಳ್ಳುವ, 'ಒಮ್ಮೆ ನಕ್ಕ ನಗು' ಕಾದಂಬರಿಯ ನಾಯಕ ಸೂರ್ಯಚಂದ್ರರಾವ್ ಅವನ ಮಿತ್ರರಾದ ರಾಘವರೆಡ್ಡಿ, ಚಲಪತಿರಾವ್, ಕೆನಕಲಿಂಗಂ, ಜೊತೆಗೆ ಕಥೆ ಓಡುತ್ತದೆ. ನಾಯ್ಡುವಿನ ಸ್ವಂತ ಹಳ್ಳಿ. ಬೇಕಷ್ಟು ಭೂಮಿ, ಐಶ್ವರ್ಯ ಅವನಿಗಿದೆ. ಅವನ ತಂದೆ ಆ ಹಳ್ಳಿಗೆ ದರ್ಪದ ಶ್ರೀಮಂತ. ನಾಯ್ಡು ಭೋಗಿ. ಅವನ ಹೆಣ್ಣಿನ ಹುಚ್ಚು ಕಾದಂಬರಿಯ ಉದ್ದಕ್ಕೂ ಬಿಚ್ಚುತ್ತಾ ಹೋಗುತ್ತದೆ. ಅವನು ಬಯಸಿದ ಹೆಣ್ಣು ಅವನ ಮಡಿಲಿಗೆ ಬರಬೇಕು. ನಾಯ್ಡು ಮದುವೆ ದಿನ ಕೂಡ ಹರಿಕಥೆಗಾಗಿ ಬಂದ 'ರಾಮಲಕ್ಷ್ಮಿ'ಯನ್ನು ಬಯಸಿ ಅವಳನ್ನು ವಶಮಾಡಿಕೊಳ್ಳುತ್ತಾನೆ. ಅವಳೊಡನೆ ಅತ್ಯಂತ ಸುಖ ಅನುಭವಿಸುತ್ತಾನೆ, ಛಲದ ಮಹಾವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ, ಅವನ ರೈಸ್ ಮಿಲ್ಲಿನ ಮ್ಯಾನೇಜರ್ ಲಕ್ಷ್ಮಯ್ಯ ನಾಯ್ಡುಗೆ ಮದುವೆ ಮುಂಚೆ ಸ್ತ್ರೀ ಸೌಖ್ಯದ ಅನುಭವ ಮಾಡಿಕೊಟ್ಟ ಗುರು. ನಾಯ್ಡುವಿನ ಈ ಮಾತು ನೋಡಿ, 'ಲಕ್ಷ್ಮಯ್ಯ' ನನ್ನ ನಮ್ಮ ಸಚಿವ. ಮದುವೆಗೆ ಮುಂಚೆ ಸ್ತ್ರೀ ಸಂಗದ ಸವಿಯೇನೆಂಬುದನ್ನು ಕಲಿಸಿದ ಗುರು. ಅವನ ಬಳಿ ನಾನು ಯಾವ ವಿಷಯವನ್ನು ಮುಚ್ಚಿಡುವ ಅಗತ್ಯವಿರಲಿಲ್ಲ !'

ನಾಯ್ಡು ಹರಿಕಥೆ ಹುಡುಗಿ ರಾಜಲಕ್ಷ್ಮಿಯ ರೂಪ ನೋಡಿ ಅವಳನ್ನು ಬಯಸುತ್ತಾನೆ. ಲಕ್ಷ್ಮಯ್ಯನಿಗೆ ಅವಳನ್ನು ಕರೆತರುವ ಕೆಲಸ ಹಚ್ಚುತ್ತಾನೆ, ಆಗ ಲಕ್ಷ್ಮಯ್ಯನ ಯಾವ ಮಾತು ಕೇಳದೆ ಅವನನ್ನು ಗದರಿಸಿಕೊಳ್ಳುತ್ತಾನೆ. ನಾಯ್ಡುವಿನ ತಂದೆ ಶ್ರೀಮಂತ: ಅವನ ದರ್ಪ, ಅವನು ಆಳು ಕಾಳುಗಳನ್ನು ಹಾಗೂ ಒಕ್ಕಲನ್ನು

ನೋಡುವ ರೀತಿ ಅವನ ಶೋಷಣೆಯ ವಿವಿಧ ರೂಪಗಳನ್ನು ನಾಯ್ಡುವಿನ ಮುಖಾಂತರ ತ.ರಾ.ಸು. ಮಾಡಿಕೊಡುತ್ತಾರೆ. ಪ್ರತಿಭಟಿತವಾದದ್ದು ಅಧಿಕಾರವೇ ಅಲ್ಲ ಎಂಬುದು ನಾಯ್ಡುವಿನ ತಂದೆಯ ಸಿದ್ಧಾಂತ. ಹಾಗೆಯೇ ಮನೆಯಲ್ಲಿ ಒಬ್ಬರ ತೀರ್ಪಿಗೆ ಇನ್ನೊಬ್ಬರು ವಿರೋಧಾಭಿಪ್ರಾಯ ವ್ಯಕ್ತ ಪಡಿಸುವುದು ಮನೆ ತನದ ಗೌರವ ಸಡಿಲವಾಗುವುದಕ್ಕೆ ದಾರಿ ಮಾಡಿ ಕೊಟ್ಟ ಹಾಗೇ ಎಂದು ನಾಯ್ಡು ತಂದೆ ನಂಬಿದ್ದ. ನಾಯ್ಡು ಭತ್ತದ ವಸೂಲಿಗೆ ಹಳ್ಳಿಗೆ ಹೋದಾಗ, ರೈತರೊಡನೆ ಮಾತು ಬೆಳೆದಾಗ ಅವನು ಕೋಪಗೊಂಡು ಕೈಲಿದ್ದ ಬಾರಕೋಲಿನಿಂದ ಆ ರೈತರಿಗೆ ಚೆನ್ನಾಗಿ ಹೊಡೆದ. ಆದರೆ ನಾಯ್ಡುವಿನಿಂದ ಪೆಟ್ಟು ತಿಂದ ರೈತರು ಅವನ ತಂದೆಗೆ ದೂರು ಕೊಟ್ಟರು. ಆದರೆ ಅವನ ತಂದೆ ನಾಯ್ಡುವನ್ನೇ ವಿಚಾರಿಸಲು ರೈತರಿಗೆ ಹೇಳಿದರು. ಆ ಮೇಲೆ ಮಗನನ್ನು ಕಂಡಾಗ ಅವರು ಹೇಳುವ ಮಾತನ್ನು ನೋಡಿ, 'ಬೆಪ್ಪವಾ ನೀನು ಹೊಡೆದಿದ್ದಕ್ಕೆ ನಿನ್ನ ರೈತರು ಬೇರೆಯವರ ಹತ್ತಿರ ದೂರು ಹೇಳಿದ್ದರೆ, ನೀನು ಹೊಡೆದಿದ್ದರ ದರ್ಪವೇನು ಉಳಿಯಿತು? ನೀನು ಹೊಡೆದರೆ ಅವರು ಮತ್ತೆ ಇನ್ನೊಬ್ಬರ ಮುಂದೆ ಆ ಸುದ್ದಿ ಎತ್ತಬಾರದು ಎಂಬಷ್ಟು ಭಯ ಇಟ್ಟು ಕೊಳ್ಳಲು ಯೋಗ್ಯತೆ ಇಲ್ಲದ ಮೇಲೆ ಹೊಡೆಯಲು ಹೋಗಬೇಡ. ಈಗ ಅವರಿಗೇನು ಮಾಡುತ್ತೀಯಾ ಮಾಡು. ಇದನ್ನು ಕೇಳಿದ ನಾಯ್ಡು ಕುದುರೆಯ ಮೇಲೆ ಹಳ್ಳಿಗೆ ಹೋಗಿ ದೂರು ಕೊಟ್ಟವರ ಗುಡಿಸಲನ್ನು ಬೂದಿ ಮಾಡಿ ಅವರನ್ನು ಕುದುರೆ ಕಾಲಿಗೆ ಕಟ್ಟಿಸಿ ಎಳೆಸಿದುದು. ಇಲ್ಲಿ ತ.ರಾ.ಸು ಗಂಡಸರ ಚಿತ್ರಣ ಅದೂ ಶ್ರೀಮಂತರ ಮನೆ ತನದ ಗಂಡಸರ ನೈಜ ಚಿತ್ರಣ ಎದ್ದು ಕಾಣುತ್ತದೆ. ಆದ್ದರಿಂದ ಇದೇ ಹೆದರಿಕೆ ಯಿಂದ ಲಕ್ಕಯ್ಯ ಅವನು ಹೇಳಿದ ಕೆಲಸ ಮಾಡುತ್ತಿದ್ದ. ಲಕ್ಕಯ್ಯನಂತಹ ಜನಕೂಡ ನಮ್ಮ ಸಮಾಜದ ನಿಜ ಸ್ವರೂಪವಾಗಿದೆ. ಲಕ್ಕಯ್ಯ ರಾಮಲಕ್ಷ್ಮಿ ಮನೆಗೆ ಹೋಗಿ ಬಂದು ನಾಯ್ಡುವನ್ನೇ ಅವಳಲ್ಲಿ ಬರಬೇಕೆಂದಾಗ, ನಾಯ್ಡು ರೇಗಿ ಹೋದ, ಆದರೆ ಅವನ ಕೋಪ ಅವಳನ್ನು ಪಡೆಯುವುದಕ್ಕಾಗಿ ಏನೂ ಕೆಲಸ ಮಾಡುವುದಿಲ್ಲ, ಅವಳಿಗೆ ಅವನು ಸೋಲಬಾರದೆಂದು ಯೋಚಿಸಿ ಸೋಲುತ್ತಾನೆ. ಅವನು ಹೇಳುವುದು ಹೀಗೆ, "ಪೊಗರು ಅವಳದಲ್ಲ. ಅವಳಿಗಿರೋ ರೂಪದ್ದು, ಯೌವನ" ಇದು ಹಲವು ಹೆಂಗಸರನ್ನು ಬಯಸುವ ಗಂಡಸರ ಸತ್ಯ ಚಿತ್ರಣ. ಅವನು ರಾಮ ಲಕ್ಷ್ಮೀ ಮನೆಗೆ ಹೋಗುವಾಗ ಯೋಚಿಸುತ್ತಾನೆ.

ಆ ಹುಡುಗಿಗೆ ನಾನು ತೀರ ಸೋತಿರುವಂತೆ ತೋರಿಸಿಕೊಳ್ಳಬಾರದು. ನನ್ನ ಬಿಗಿಯನ್ನು ಎಳ್ಳು ಕಾಳಿನಷ್ಟು, ಮುಳ್ಳು ಮೊನೆಯಷ್ಟು ಬಿಟ್ಟುಕೊಡಬಾರದು. ಅವಳು ಈ ಪೊಗರಾಟ ಎಲ್ಲಾ ಬಿಟ್ಟು ತಾನಾಗಿ ನನ್ನ ಹತ್ತಿರ ಬರುವಂತೆ ಮಾಡಿ ಕೊಳ್ಳಬೇಕು. ನಾಯ್ಡುವಿನ ಚಿತ್ರ ಅದು ಪುರುಷ ಪಾತ್ರದ ಚಿತ್ರಣ. ಮನುಷ್ಯ ಹಂತ ಹಂತವಾಗಿ ಪ್ರತಿ ಕ್ಷಣ ಅವನ ವಿವಿಧ ಗುಣಗಳು ಕಾದಂಬರಿ ಉದ್ದಕ್ಕೂ ಮುಂದುವರೆಯುತ್ತದೆ. ಕಾದಂಬರಿ ಓದುತ್ತಾ ಓದುತ್ತಾ ನಾವು ನಾಯ್ಡುವನ್ನು

ನೋಡಿದ್ದೇವೆ ಅನ್ನಿಸುತ್ತದೆ. ಇದು ತ.ರಾ.ಸು. ಅವರ ಶಕ್ತಿಯುತ ಬೆಳವಣಿಗೆಯ ಮೋಡಿ. ನಾಯ್ಡು ಬಯಸಿದ ರೂಪು ಅವನು ರಾಮಲಕ್ಷ್ಮಿಯಲ್ಲಿ ಕಂಡಾಗ ಅವನ ಸಿಟ್ಟು ತಣ್ಣಗಾಗುತ್ತದೆ. ಅವನ ದರ್ಪದ ಹುಟ್ಟು ಅಡಗುತ್ತದೆ. ಮುಂದೆ ರಾಮಲಕ್ಷ್ಮಿ ತನ್ನ ದರ್ಪ ಹಾಗೂ ನಾಯ್ಡುವನ್ನು ಕೆರಳಿಸುವ ಮಾತುಗಳನ್ನು ಆಡುತ್ತಾಳೆ. ನಾಯ್ಡುವಿನ ಕ್ರೋಧ ಅವಳ ಮುಂದೆ ಕೆಲಸ ಮಾಡದಾಗುತ್ತದೆ. ಅವಳ ಒಂದು ಪ್ರಶ್ನೆಯನ್ನು "ನಾನು ಬೇಕು ಅಂದರೆ ನಾನು ಬೇಕೋ, ನನ್ನ ಮೈ ಅಷ್ಟೇ ಸಾಕೋ" ನಾಯ್ಡುವಿಗೆ ಅದು ವಿಚಿತ್ರ ಪ್ರಶ್ನೆಯಾಗುತ್ತದೆ. ಮತ್ತು ಅವನು ದಿಗ್ಭ್ರಮೆಗೆ ಒಳಗಾಗುತ್ತಾನೆ. ಅವನಿಗೆ ಅವಳು ಬೇಕು ಎನಿಸಿದಾಗ ಅವಳು ಬೇರೆ ಅವಳ ಮೈ ಬೇರೆ ಅನಿಸಿರಲಿಲ್ಲ. ಇದು ಗಂಡಸರು ಈ ಪ್ರಕರಣದಲ್ಲಿ ಸಿಕ್ಕಾಗ ಆಗುವ ಸ್ವಾಭಾವಿಕತನ. ಅವರಂತೆ ನಾಯ್ಡುವಿಗೆ ತಾನು ಬಯಸಿದ ಹೆಣ್ಣು ಬೇಕು. ಆದರೆ ರಾಮಲಕ್ಷ್ಮಿ ಅಂತಹ ಹೆಣ್ಣು ಅವನಿಗೆ ಸಮಸ್ಯೆಯಾಗುತ್ತಾಳೆ, ಅವರ ಸಂಭಾಷಣೆ ಮುಂದುವರೆದಾಗ, ನಾಯ್ಡು ಅವಳ ಮೈ ಬಯಸಿದ್ದು ಎಂದಾಗ. ಅವಳು ಅದು ಬೇರೆಯವರದ್ದಾಗಿದೆ ಅನ್ನುತ್ತಾಳೆ, ಈಗ ನಾಯ್ಡು ತಬ್ಬಿಬ್ಬಾಗುತ್ತಾನೆ, ಅವನ ಬಾಯಿ ಕಟ್ಟುತ್ತಾನೆ. ಕಾರಣ ಅವಳು ವಿವಾಹಿತ ಸ್ತ್ರೀ ಎಂದು ನಾಯ್ಡು ಹೇಳುವ ಮಾತು. ನಮ್ಮ ಸಮಾಜದಲ್ಲಿ ಇಂಥ ಪುರುಷರನ್ನು ಬಹಳಷ್ಟು ನಾವು ಕಾಣಬಹುದು. ನೆನಪು ಮಾಡುತ್ತವೆ. ನಾಯ್ಡುವಿನ ಈ ಹೇಳಿಕೆ ಮೇಲಿನದಕ್ಕೆ ಪೂರಕವಾಗುತ್ತದೆ. "ಎಷ್ಟೋ ಬಾರಿ ನನಗೆ ಅನುಭವವಾಗಿದೆ. ಬಯಸಿದ ಹೆಣ್ಣು ವಿವಾಹಿತೆ ಎಂಬ ಅರಿವು ಎಂಥ ಉಗ್ರಾವಸ್ಥೆಯಲ್ಲಿದ್ದ ಕಾಮುವನ್ನೂ ಹಿಂಜರಿಯುವಂತೆ ಮಾಡುತ್ತದೆ. ಉನ್ಮತ್ತ, ಲಂಪಟತ್ವಕ್ಕೂ ತಾತ್ಕಾಲಿಕವಾಗಿಯಾದರೂ ಕಡಿವಾಣ ಬಿಗಿಯುತ್ತದೆ. ಆ ಬಿಸಿ ಎಷ್ಟು ಹೊತ್ತು ಉಳಿಯುತ್ತದೆ. ಎಷ್ಟೋ ಕಾಲ ಪರಿಣಾಮಕಾರಿಯಾಗಿರುತ್ತದೆ ಎನ್ನುವುದು ಬೇರೆ ವಿಷಯ. ಅದು ಕಾಮುವಶನಾದ ವ್ಯಕ್ತಿಯ ಸಂಸ್ಕಾರದ ಹುಟ್ಟು. ಅವನಲ್ಲಿ ಕಾಮವನ್ನು ಕೆರಳಿಸಿದ ಸ್ತ್ರೀ ವ್ಯಕ್ತಿತ್ವದ ಪ್ರಭಾವವನ್ನು ಅವಲಂಬಿಸಿದ ಮಾತು ವಿಸ್ಮಯ ನಿಜ. ಪುರುಷ ಸ್ಪರ್ಶವಿಲ್ಲದ ಸ್ತ್ರೀಯ ವಿಷಯದಲ್ಲಿ ಹರ್ಷಿಸುವಷ್ಟು ಧಾರಾಳ. ವಿವಾಹಿತ ಸ್ತ್ರೀಯ ವಿಷಯದಲ್ಲಿ ಮನಸ್ಸು ಹತೋಟಿಯನ್ನು ಮೀರುವುದಿಲ್ಲ. ನಾಯ್ಡು ಅಂಥ ಸ್ತ್ರೀ ಲೋಲ, ಸ್ತ್ರೀಯನ್ನು ಬೇಕೆಂದಾಗ ತನ್ನ ಸಹಾಯಕರಿಂದ ಕರೆಸಿ ಸುಖ ತೀರಿಸುವವನಿಗೆ ರಾಮಲಕ್ಷ್ಮಿ ಪ್ರಶ್ನೆ ಹಾಗೂ ಅವಳು ಕೇಳಿದ ಮಾತುಗಳಿಂದ ಹೊಸ ಯೋಜನೆ ಪ್ರಾರಂಭವಾಯ್ತು. ಅದಕ್ಕಾಗಿ ಅವಳ ಜೊತೆಗೆ ಮಲಗಿದ್ದಾಗಲೂ ಆತ ಕಾ ಮ ದಿಂ ದ ಉರಿಯುತ್ತಿದ್ದರೂ ಅವನ ಸ್ಥಿತಿ ನೋಡಿ "ಅವಳ ಮಾತಿನಂತೆ ಯಾಂತ್ರಿಕವಾಗಿ ನಾನು ಅವಳ ಪಕ್ಕದಲ್ಲಿ ಮಲಗಿಕೊಂಡೆ. ನಮ್ಮಿಬ್ಬರ ದೇಹವೂ ಸಮೀಪದಲ್ಲಿದ್ದವು. ಸಾಮೀಪ್ಯ ನನ್ನ ಮೈಯಲ್ಲಿ ಬೆಂಕಿಯ ಮಳೆ ಕರೆಯುತ್ತಿದ್ದರೂ ರಾಮಲಕ್ಷ್ಮಿ ಮಾತ್ರ ನನ್ನ ಸಾಮೀಪ್ಯದಿಂದ ಏನೊಂದೂ ಪರಿಣಾಮವಾಗದಂತೆ ಮಲಗಿದ್ದಳು. ಅವಳ ವಿಚಿತ್ರ ವರ್ತನೆ

ನಾಯ್ಡುವಿಗೆ ದಿಗ್ಭ್ರಾಂತಿ ಗೊಳಿಸಿತು, ನಾಯ್ಡು ಅವಳನ್ನು ಎಳೆದುಕೊಳ್ಳಲು ಪ್ರಾರಂಭಿಸುತ್ತಾನೆ. ಅವಳು ಅವನಿಗೆ ಇಷ್ಟವಿದ್ದರೆ ನಮ್ಮ ತೀಟೆ ತೀರಿಸಿಕೊಳ್ಳಿ" ಎನ್ನುತ್ತಾಳೆ. ಎಷ್ಟೋ ಹೊತ್ತಿನ ಮೇಲೆ ಅವಳಾಗಿ ಅವನಿಗೆ ವಶವಾಗುತ್ತಾಳೆ, ನಾಯ್ಡುವಿಗೆ ಅವಳು ಕೊಟ್ಟ ಸುಖ ಅತಿ ಹೆಚ್ಚಿನದಾಗುತ್ತದೆ. ಇಂತಹ ಪುರುಷನನ್ನು ನಮ್ಮ ಕಣ್ಣೆದುರು ಸದಾ ನೋಡುತ್ತಿರುತ್ತೇವೆ. ಮದುವೆಯಾದ ಹೆಂಡತಿಯಾಗಲೀ ವಶಪಡಿಸಿಕೊಂಡ ಹೆಣ್ಣಾಗಲೀ ಒಂದು ಸಲ ಗೆಲ್ಲುವವರೆಗೆ ತಪ್ಪು. ಆಮೇಲೇನೂ ಕೋಟೆಯ ಬಾಗಿಲು ಹಾರು ಹೊಡೆದಂತೆ ಎಂಬ ಭಾವನೆ ಹೆಣ್ಣಿನ ಬಗ್ಗೆ ಬಹು ಜನಕ್ಕಿದೆ. ಬಹುಜನ ಹೆಂಗಸರ ವಿಷಯದಲ್ಲಿ ಈ ಭಾವನೆ ನಿಜವಿರಬಹುದು. ನಾಯ್ಡು ರಾಮಲಕ್ಷ್ಮಿ ವಿಷಯದ ಬಗ್ಗೆ ಈ ಭಾವನೆ ತಪ್ಪು ಎನ್ನುತ್ತಾನೆ. ಅವಳನ್ನು ರಾಯಚೂರು ಕೋಟೆಗೆ ಹೋಲಿಸುತ್ತಾನೆ, ವಿಜಯ ನಗರದ ಇತಿಹಾಸ ಓದಿದವರಿಗೆಲ್ಲಾ ಗೊತ್ತು. ಒಬ್ಬೊಬ್ಬ ದೊರೆಯ ಕಾಲದಲ್ಲೂ ರಾಯಚೂರಿನ ಕೋಟೆಯನ್ನು ತಮ್ಮದು ಎನ್ನಬೇಕಾದರೆ ಮತ್ತೆ ಮತ್ತೆ ಗೆದ್ದು ತಮ್ಮದಾಗಿಸಿಕೊಳ್ಳಬೇಕಾಯಿತು ಎಂಬುದು. ಅದೇ ರೀತಿ ಒಂದೊಂದು ಬಾರಿಯೂ ರಾಮಲಕ್ಷ್ಮಿಯನ್ನು ನಾಯ್ಡು ಒಳಸಿಕೊಳ್ಳಬೇಕಾದರೂ ಒಂದು ಯುದ್ಧದಲ್ಲಿ ಗೆದ್ದ ಹಾಗೇ ಮೊದಲ ಬಾರಿ ಅವಳನ್ನು ಪಡೆದ ಹಾಗೆ ಆಗುತ್ತಿತ್ತು. ಅವನ ಮಾತು ಎಷ್ಟೊಂದು ಸತ್ಯ. ಸಮಾಜದಲ್ಲಿ ಎಷ್ಟೊಂದು ಗಂಡಸರ, ಹೆಂಗಸರ ಅನುಭವ. ತ.ರಾ.ಸು. ಅವರ ನಾಯ್ಡು ಅಂತಹ ಪುರುಷ ಪಾತ್ರ ಜೀವಂತ ಅನುಭವಕ್ಕೆ ಸಾಕ್ಷಿಯಾಗುತ್ತದೆ. ನಾಯ್ಡುಗೆ ರಾಮಲಕ್ಷ್ಮಿ ಒಮ್ಮೆ ಬೆಂಕಿ, ಮತ್ತೊಮ್ಮೆ ಮಂಜಿನ ಅನುಭವ ತರುತ್ತಾಳೆ. ಒಮ್ಮೆ ಮೇಣದ ಗೊಂಬೆ, ಇನ್ನೊಮ್ಮೆ ಉಕ್ಕಿನ ವಿಗ್ರಹವಾಗುತ್ತಾಳೆ.

ತ.ರಾ.ಸು. ಅವರ ಕಾದಂಬರಿ 302 ಪುಟಗಳಿವೆ. ಉದ್ದಕ್ಕೂ ನಾಯ್ಡು ಮುಖ್ಯ ನಾಯಕ ಪಾತ್ರದಲ್ಲಿ-ಮುಂದುವರೆಯುತ್ತಾನೆ. ಒಟ್ಟು ನಾಲ್ಕು ಭಾಗ ಮಾಡಿ ಮೊದಲನೇ ಭಾಗ ನಾಯ್ಡು ಅವರ ಮನೆತನದ ಶ್ರೀಮಂತಿಕೆ, ಶ್ರೀಮಂತಗೆಳೆಯರು, ಹಾಗೂ ಮದುವೆ ಮದ್ರಾಸ್ ಪಟ್ಟಣ ಅವನು ಪದೇ ಪದೇ ನೋಡುವುದು. ಜನ ಜಂಗುಳಿ ಬಗ್ಗೆ ಅವರ ಹುಚ್ಚು ಹರಿಕಥೆ ಹುಡುಗಿ ರಾಮಲಕ್ಷ್ಮಿಯನ್ನು ಅವನು ಇಟ್ಟುಕೊಂಡು ಅವಳೊಡನೆ ನವಿಯುವ ದೇಹಸುಖ, ಅವರ ಬಗ್ಗೆ ವಿವರಣೆ, ಅವಳ ಸಾವು-ಹೀಗೆ ಕಥೆ ಮುಂದುವರಿಯುತ್ತದೆ. ಎರಡನೇ ಭಾಗ ಅವನಮಿತ್ರ ಸಿನಿಮಾ ಟಾಕೀಸಿನ ಮಾಲೀಕ ಚಲಪತಿಯೊಂದಿಗೆ ಚಿತ್ರ ತಯಾರಿಸಲು ಕನಕಲಿಂಗಂನೊಡನೆ ಹೋದಾಗ, ಕನಕಲಿಂಗಂ ಕಥೆ ಮುಂದುವರಿಸುತ್ತಾನೆ. ಕನಕಲಿಂಗಂ ನಾಯ್ಡುವಿಗೆ ಬಯಸಿದ ಹೆಣ್ಣು ಒದಗಿಸಿ "ಸಿರ್‌ಪಕ್ಡು" ನಂತೆ ಇಲ್ಲಿ ಮುಂದುವರಿಯುತ್ತಾನೆ. ಕವಿಯಾದ ಈತನಿಗೆ ಚಲನಚಿತ್ರದ ಬೆಳ್ಳಿ ತೆರೆಮೇಲೆ ತನ್ನ ಹೆಸರನ್ನು ಕಾಣುವ ಬಯಕೆ, ಜೊತೆಗೆ ಹೊಟ್ಟೆಪಾಡಿಗಾಗಿ ಆತ ನಾಯ್ಡುವಿನೊಂದಿಗೆ ಹೋಗುತ್ತಾನೆ, ಚಲಪತಿ ನಡೆಸಿದ ಮೂರುದಿನ ಓಡಿದ ಚಿತ್ರದ ಚಲನ ಚಿತ್ರದ

ತಾರೆ ಮಂಜರೀದೇವಿ, ನಾಯ್ಡು ಊರಿಗೆ ಬಂದಾಗ ಚಲನಚಿತ್ರದ ಹುಚ್ಚು ಹೆಚ್ಚಿಸಿ ಹೋಗುತ್ತಾಳೆ. ನಾಯ್ಡುವಿಗೆ ಮಂಜರೀ ದೇವಿಯಮೇಲೆ ಮೊದಲು ಮನಸ್ಸು ಓಡುವುದಿಲ್ಲ. ಚಿತ್ರ ತಯಾರಿಸುವ ಹುಚ್ಚು ಇರುವುದಿಲ್ಲ. ಆದರೆ ಚಲಪತಿ, ಕನಕಲಿಂಗಂಗೆ ಚಿತ್ರದ ಬಗ್ಗೆ ಹುಚ್ಚು. ಪತ್ರಿಕೋದ್ಯೋಗಿ ಕೋದಂಡರಾಮನಿಂದ ನಾಯ್ಡು ತಮ್ಮ ಬಲೆಗೆ ಬೀಳುವ ಹಾಗೆ ಮಾಡುತ್ತಾನೆ. ಅಲ್ಲಿ ವಿಶಾಲಾಕ್ಷಿಯನ್ನು ಕಂಡು ನಾಯ್ಡುವಿಗೆ ಅವಳನ್ನು ಒಪ್ಪಿಸಿ ಕನಕಲಿಂಗಂ ವಿಶಾಲಾಕ್ಷಿಯಿಂದ ಹೊಡೆತ ತಿನ್ನುತ್ತಾನೆ. ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ವಿಶಾಲಾಕ್ಷಿನಾಯ್ಡುವಿನ ವಶವಾಗುತ್ತಾಳೆ. ಎಷ್ಟು ಬೇಗ ನಾಯ್ಡು ಅವಳನ್ನು ಬಯಸಿದ್ದನೋ ಅಷ್ಟೇ ಬೇಗ ಅವಳನ್ನು ತೊರೆಯುತ್ತಾನೆ, ಮುಂದೆ ತಾರೆ ಮಂಜರೀದೇವಿ ಹಾಗೂ ಅವಳ ಮನೆಯಲ್ಲಿದ್ದ ಲಲಿತಾದೇವಿಯೊಡನೆ ನಾಯ್ಡು ಸುಖ ಭೋಗಿಸುತ್ತಾನೆ. ಚಲಪತಿ ಹಾಗೂ ಕನಕ ಲಿಂಗಂ ಚಿತ್ರ ಶುರುವಾಗದಿದ್ದಕ್ಕೆ ಕೊರಗುತ್ತಾನೆ. ಮೂರನೇ ಭಾಗ ಕೋಮಲೆ ಕಥೆ ಮುಂದುವರಿಸುತ್ತಾಳೆ. ಕೋಮಲೆ ತಂದೆ ತಾಯಿಗೆ ಒಬ್ಬಳೇ ಮಗಳು. ಗಂಡಾಗಿ ಅವಳು ಟೈಪಿಸ್ಟ್ ಕೆಲಸಕ್ಕೆ ಸೇರಿ ತಂದೆ ತಾಯಿಯನ್ನು ಸಾಕುವ ಹೆಣ್ಣು. ಅವಳ ತಂದೆ ಅಯ್ಯರಿಗೆ ಮಗಳ ಮದುವೆ ಬೇಕಿಲ್ಲ. ಅವಳು ದುಡಿಯುವ ಹಣ ಬೇಕು, ಅವಳನ್ನು ಬಯಸಿ ಮದುವೆಯಾಗಲು ಸಿದ್ಧನಾದ ಪದ್ಮನಾಭ ವಾರಿಯಾರ್ ಅವಳೊಡನೆ ತಂದೆತಾಯಿಗಳನ್ನು ಸಾಕಲು ಸಿದ್ಧನಿಲ್ಲ. ಅದರಿಂದ ಕೋಮಲೆ ಅವನೇ ಒದಗಿಸಿದ ಬೇರೆಕಡೆ ಕೆಲಸಕ್ಕೆ ಹೋಗಿ, ಅವನು ಮರೆಯಾದಾಗ, ಅಲ್ಲಿ ಚಂದ್ರನ್ ಅವಳನ್ನು ತನ್ನ ಮನೆಗೆ ಕರೆದೊಯ್ದು ಅವಳ ದೇಹಸಂಬಂಧ ಬೆಳೆಸುವಾಗ, ಕೋಮಲೆ ಅವನಿಗೆ ತಂದೆಯಾಗಲು ಅವನಿಂದ ಮಗುವನ್ನು ಪಡೆಯಲು ಬಯಸುತ್ತಾಳೆ. ಅವನು ಅದಕ್ಕೆ ಒಪ್ಪುವುದಿಲ್ಲ. ಕೋಮಲೆ ಅಲ್ಲಿ ಅವನಿಂದ ತಪ್ಪಿಸಿ ಮನೆಗೆ ಬಂದಾಗ ರಾತ್ರಿ ಯಾಗಿರುತ್ತದೆ. ಅವಳ ತಂದೆಯೇ ಅವಳನ್ನು ಹಾದರಗಿತ್ತಿ ಎಂದು ಅವಳನ್ನು ಶಿಕ್ಷಿಸಿದಾಗ ಬಹಳದಿನದಿಂದ ತಾನು ಕಾಯುವ ಬಸ್‌ಸ್ಟಾಪಿನ ಹತ್ತಿರ ಮನೆಮಾಡಿದ ನಾಯ್ಡುವನ್ನು ಕಂಡು ಅವನಿಗೆ ಸಿಗದಿದ್ದ ಅವಳು ತಾನಾಗಿ ಅವನ ಮನೆಗೆ ಹೋಗು ತ್ತಾಳೆ. ಕನಕಲಿಂಗಂ ಅವಳಿಗಾಗಿ ಹುಚ್ಚು ಹಿಡಿಸಿ ತನ್ನ ಧಣಿಗಾಗಿ ಅವಳ ವಿಷಯ ಸಂಗ್ರಹಿಸಿ ನಾಯ್ಡುಗೆ ಅವಕಾಶ ಕಲ್ಪಿಸಲು ಹೆಣಗಾಡುತ್ತಾನೆ. ಕೊನೆ ಅಧ್ಯಾಯ ಮತ್ತೆ ನಾಯ್ಡು ಕಥೆ ಮುಂದುವರಿಸುತ್ತದೆ. ಅವನು ನೂರಾರು ಹೆಣ್ಣುಗಳನ್ನು ಅನುಭವಿಸಿದ್ದರೂ ಕೋಮಲಳ ಹಾಗೆ ಪ್ರಶ್ನಿಸಿ ಕೇಳಿದವರು ಯಾರೂ ಇಲ್ಲ. ನನಗೆ ಮಗುವನ್ನು ನೀವು ಕೊಡುತ್ತೀರಾ ? ಆಗ ಅವಳೊಂದಿಗೆ "ಬೆತ್ತಲೆಯಾಗಿ ಕೋಮಲೆ ಯೊಂದಿಗೆ ನಾಯ್ಡು ಮಲಗಿದ್ದರೂ ಅವಳ ಮುಖದಲ್ಲಿ ತನ್ನ ಮಗಳ ರೂಪಕಂಡು ಸೆಟೆದೇಳುತ್ತಾಳೆ. ಮತ್ತೆ ಮನಸ್ಸು ಗಟ್ಟಿಮಾಡಿ ಅವಳನ್ನು ಸಂಭೋಗಿಸಲು ಯತ್ನಿಸಿ ವಿಫಲನಾಗುತ್ತಾನೆ. ತಾನು ಅವಳಿಗೆ ಮಗುವನ್ನು ಕೊಡಲು ಸಾಧ್ಯವಿಲ್ಲವೆಂದಾಗ ಕೋಮಲೆ ಅವನನ್ನು 'ನೀನು ಒಬ್ಬ ಗಂಡಸಾ !' ಎಂದು ಕರೆದು ಬಿರುಗಾಳಿಯಂತೆ ಓಡುತ್ತಾಳೆ. ನಾಯ್ಡುವಿಗೆ ಆಗ 52 ವರ್ಷಗಳು, ಕೋಮಲೆ ಮಗುವಿನ ಬಯಕೆ

ಹೊತ್ತು ಚಂದ್ರನ ಜೊತೆ ಹೋದಾಗ ಅನಸೂ ಅದಕ್ಕೆ ಒಪ್ಪದಾಗ ನಗುತ್ತಾಳೆ. ಹುಚ್ಚಳುತೆ, ಅದೇ ತಲೆಬರಹ ಈ ಕಾದಂಬರಿಗೆ" "ಒಮ್ಮೆ ನಕ್ಕ ನಗು" ಸಮಂಜಸವಾಗುತ್ತದೆ.

ನಾಯ್ಡು, ರಾಮರೆಡ್ಡಿ, ಲಕ್ಷ್ಮಯ್ಯ, ಕನಕಲಿಂಗಂ, ಕೋದಂಡಪಾಣಿ, ಜೋಗರಾಯ, ಚಲಪತಿ, ಗೋವಿಂದರಾಯರು, ಅಯ್ಯರ್, ಪದ್ಮನಾಭವಾರಿಯಾರ್, ಚಂದ್ರನ್ ಇವು ಈ ಕಾದಂಬರಿಯ ಪುರುಷ ಪಾತ್ರಗಳು. ಇವುಗಳ ಚಲನೆ ಕಾದಂಬರಿಯ ಉದ್ದಕ್ಕೂ ರಾಮಲಕ್ಷ್ಮಿ, ವಿಶಾಲಾಕ್ಷಿ, ಮಂಜರೀದೇವಿ, ಲಲಿತಾದೇವಿ ಕೋಮಲರೊಂದಿಗೆ ಸಾಗುವುದೇ ಕಥೆಯ ಹಂದರ. ಇಲ್ಲಿನ ಪುರುಷ ಪಾತ್ರಗಳು ಜೀವಂತ ಸಮಾಜವನ್ನು ಪ್ರತಿಬಿಂಬಿಸುತ್ತದೆ. ಸ್ತ್ರೀ ಪಾತ್ರಗಳು ಇವುಗಳ ಜೊತೆ ಸೇರಿ ತ.ರಾ.ಸು. ಚಿತ್ರಿಸಿದ "ಮನುಷ್ಯರು" ಸಮಾಜದಲ್ಲೀ ಕಾಣುವಷ್ಟು ಪ್ರಭಾವ ಬೀರುತ್ತಾರೆ.

ಈ ಕಾದಂಬರಿಯಲ್ಲಿನ ಪುರುಷ ಪಾತ್ರಗಳು, ಸಂಭಾಷಣೆಗಳು ಇದಕ್ಕೆ ಉದಾಹರಣೆಯಾಗುತ್ತವೆ. ನಾಯ್ಡು ದೇಶದ ಜನರ ಬಗ್ಗೆ ಹೀಗೆ ಹೇಳುತ್ತಾನೆ. "ನಮ್ಮ ದೇಶದ ಜನ ಅತಿ ವಾಚಾಳಿಗಳು. ನಮ್ಮ ದೇಶದ ಜನ ಮಾತು ಬೆಳೆಸುವಷ್ಟು ಬಹುಶಃ ಬೇರೆ ಯಾವುದೇ ದೇಶದ ಜನರು ಮಾತು ಬೆಳೆಸುವುದಿಲ್ಲ. ಯಾರಾದರೂ ಕುತೂಹಲಕ್ಕೆ ಜಗತ್ತಿನಲ್ಲಿ ಯಾವ ದೇಶದಲ್ಲಿ ಭಾಷಣಕಾರರ ಸಂಖ್ಯೆ ಹೆಚ್ಚು, ಎಂದು ಸರ್ವೆ ನಡೆಸಿದರೆ ನಮ್ಮ ದೇಶದಲ್ಲಿ ಅಗ್ರಸ್ಥಾನ ದೊರೆಯುತ್ತದೆ. ವಸ್ತು ಸ್ಥಿತಿ ಹೇಗಿದ್ದರೂ ನಮ್ಮ ಸಂಸ್ಕೃತಿಯಲ್ಲಿ ಮೌನಕ್ಕಿರುವ ಬೆಲೆ ಬೇರೆ ಇನ್ನಾವ ದೇಶದ ಸಂಸ್ಕೃತಿಯಲ್ಲೂ ಕಾಣಬರದು. ಕುಡಿತ ಮತ್ತು ಹೆಣ್ಣು ಈ ಬಗ್ಗೆ ಅದೇ ನಾಯ್ಡು ಹೇಳುವುದು ಹೀಗೆ "ಕುಡಿತದ ಮಾತಂ ಹಾಗಿರಲಿ. ಅದಕ್ಕಿಂತ ವಿಷ ಹೆಣ್ಣಿನದು. ಯಾರಾದರೊಬ್ಬ ಹೆಣ್ಣಿನ ಗೀಳಂ ಹತ್ತಿದರೆ ಮುಗಿದೇ ಹೋಯಿತು. ಆ ಹೆಣ್ಣಿನ ವ್ಯಾಮೋಹಕ್ಕೆ ಆಯುಷ್ಯವೇ ಮೀಸಲು. ನೆತ್ತಿಯ ಮೇಲೆ ರುದ್ರಾಭಿಷೇಕವಾದಾಗಲಾದರೂ, ಕುಡಿತದ ಅಮಲಿನಿಂದ ಎಚ್ಚರವಾಗುತ್ತದೆ. ಹೆಣ್ಣು ಹಿಡಿಸಿದ ಅಮಲಿಗೆ ಪ್ರತಿ ಮದ್ದು ಎನ್ನುವುದೇ ಇಲ್ಲ. ಈ ಅಮಲು ಮನುಷ್ಯನನ್ನು ಎಲ್ಲದ್ದಕ್ಕೂ ಕುರುಡು ಮಾಡಿಬಿಡುತ್ತದೆ- ಅದನ್ನು ನಿವಾರಿಸುವ ನೇತ್ರಾಂಜನವೇ ಇನ್ನೂ ಸೃಷ್ಟಿಯಾಗಿಲ್ಲ.

ಶ್ರೀಮಂತರ ಬಗ್ಗೆ ಶ್ರೀಮಂತನಾದ ನಾಯ್ಡು ಹೇಳುತ್ತಾನೆ. ಹುಟ್ಟಾ ಶ್ರೀಮಂತರಾದವರಿಗೆ ತಮ್ಮ ಶ್ರೀಮಂತಿಕೆಯ ಬಗ್ಗೆಯೇ ವಿಚಾರ ಮಾಡಿದಾಗ.ಏನೋ ಒಂದು ಬಗೆಯ ಅತೃಪ್ತಿ ತಲೆದೋರುತ್ತದೆ. ತಮ್ಮ ಶ್ರೀಮಂತಿಕೆಯ ಬಗ್ಗೆ, ಅದು ತಮಗೆ ನೀಡಿದ ಜೀವನದ ಬಗ್ಗೆ ಕಷ್ಟ ಪಟ್ಟು ದುಡಿದ ದುಡಿಮೆಯ ಫಲದಿಂದ ದೊರಕುವ ತೃಪ್ತಿ ಅವರಿಗೆ ಬರುವುದು ಸಾಧ್ಯವಿಲ್ಲ.ಕಷ್ಟಪಡದೆ ಹಗಲೆಲ್ಲ ಮಲಗಿ ಕಾಲ ಕಳೆದವರಿಗೆ ಅನ್ನ ಹೇಗೆ ರುಚಿಸುವುದಿಲ್ಲವೋ ಹಾಗೆ, ಅನ್ನ ರುಚಿಯಾಗದಿದ್ದಾಗ ಕುರುಕಲು ತಿಂಡಿಗಾಗಿ ನಾಲಗೆ ತುರಿಸುವಂತೆ. ಶ್ರೀಮಂತರು ಜೀವನದಲ್ಲಿ ಸಹಜವಾಗಿ ತಮ್ಮ

ಶ್ರಮದಿಂದ ದೊರಕಿಸಲಾಗವ ತೃಪ್ತಿಯನ್ನ ಇಂತಹ ಕುಂಟು ಚೇಷ್ಟೆಗಳಿಂದ ದೊರಕಿಸಿ ಕೊಳ್ಳಲು ಯತ್ನಿಸುತ್ತಾರೆ. ನಾಯ್ಡುವಿನ ಶೋಕಿನ ಬಗ್ಗೆ ಕನಕಲಿಂಗಂ ಹೇಳುತ್ತಾನೆ. ಅವರಿಗೆ ಹೆಂಗಸರ ಶೋಕಿ ಇದ್ದೇ ಹೊರತು ಸಿನಿಮಾ ತಾರೆಯರ ಶೋಕಿಯಿಲ್ಲ. ಬಣ್ಣ ಬಳಿದುಕೊಂಡು ಲಕ್ಷಣವಾಗಿ ಕಾಣುವವರಿಗೆ ಲಕ್ಷ ಸುರಿಯುವುದಕ್ಕಿಂತ ಸಹಜ ಹಾಗೂ ಲಕ್ಷಣವಾಗಿರುವವರಿಗೆ ಸಾವಿರಕ್ಕೆ ಇಪ್ಪತ್ತು ಜನ ಸಿಗುತ್ತಾರೆ. ಹೆಸರಿಗೇಕೆ ಹಣ ಕೊಡಬೇಕು ಎನ್ನುತ್ತಾರೆ'. ಮತ್ತೆ ನಾಯ್ಡು ಹೇಳುವ ಇನ್ನೊಂದು ಮಾತು 'ಈ ಶ್ರೀಮಂತರಿಗೆ ಏನಿಲ್ಲವಾದರೂ ಮರ್ಯಾದೆ ಅಂತ ಒಂದಿದೆಯಲ್ಲ' ಕನಕಲಿಂಗಂ ಪತ್ರಿಕೋದ್ಯೋಗಿ ಕೋದಂಡಪಾಣಿ ಬಗ್ಗೆ ಹೇಳುವ ಮಾತು ನೋಡಿ. ಆ ಕೋದಂಡ ಪಾಣಿ ಅರ್ಧ ಬಾಟಲ್ ಜಾನಿವಾಕರ್ ವಿಸ್ಕಿ ಮುಗಿಸಿ ಅದು ತಲೆಗೆ ತಟ್ಟದೆ ಈ ಊರಿ ನಲ್ಲಿ 'ವಿಂಡೋಡಲಿವರಿ' ಅಂದರೆ ಅಚ್ಚ ಸಾರಾಯಿ ಉಂಟೆ ಅಂತ ವಿಚಾರಿಸಿಕೊಂಡು ನಾನೇ ಮದ್ರಾಸಿನ ಸುಪ್ರಸಿದ್ಧ ಚಲನಚಿತ್ರ ಪತ್ರಿಕೋದ್ಯೋಗಿ, ರಜತ ಪರದೆಯ ಸಂಪಾದಕ ಮಂಜರಿ ಒಂತರಹದ ಪಾನಾಸಕ್ತ ಭ್ರಮರ ಅಂತೆಲ್ಲ ಹೇಳಿಕೊಂಡು ತನ್ನ ಒಂದುವರೆಯ ತೆವಲು ತೀರಿಸಿಕೊಂಡವನು. ಕನಕಲಿಂಗು ನಾಯ್ಡುವನ್ನು ಕುರಿತು ಹೇಳುವ ಮಾತು ಶ್ರೀಮಂತ ವರ್ಗದಲ್ಲಿರುವ ಇಂತಹ ಜನರನ್ನು ಪ್ರತಿನಿಧಿಸುತ್ತದೆ. ಶ್ರೀಮಂತ ಮೂರ್ಖರ ಬಗ್ಗೆ ತಾತ್ಸಾರ ಪೂರ್ಣವಾದ ಸಹನೆಯೊಂದಲ್ಲದೆ ಬೇರೇನೂ ಅಗತ್ಯವಿಲ್ಲ ಎಂಬುದನ್ನ ತಿಳಿದು ಕೊಂಡಿದ್ದೇನೆ. ಅಲ್ಲದೆ ಶ್ರೀಮಂತರಾಗಿರುವವರಿಗೆ ಇಂತಹ ಏನಾದರೊಂದು ಹುಚ್ಚು ತಗಲು ಬೀಳುವುದರಲ್ಲಿ ಒಂದು ರೀತಿಯ 'ನಿಸರ್ಗ ನ್ಯಾಯ' ಇದೆಯೆಂಬುದನ್ನು ನಾನು ಕಂಡು ಕೊಂಡಿದ್ದೇನೆ. ಹೆಚ್ಚಿದ ಸೊಳ್ಳೆ, ನೊಣ, ಜಿರಳೆಗಳನ್ನ ತಿನ್ನಲು ಪ್ರಕೃತಿ ಹಲ್ಲಿಯನ್ನು ಸೃಷ್ಟಿಸುವ ಹಾಗೆ ಶ್ರೀಮಂತರ ಕೊಬ್ಬನ್ನ ಕರಗಿಸಲು ಇಂತಹ ಹುಚ್ಚನ್ನು ಯಾವುದಾದರೊಂದನ್ನು ಅವರಿಗೆ ಗಂಟು ಹಾಕಿರುತ್ತಾನೆ. ಅದರಿಂದ ಅವಕ್ಕೆ ಮರುಕ ವ್ಯರ್ಥ. ಇಲ್ಲಿ ಹಲ್ಲಿ ಉಪಮೆ ಶ್ರೀಮಂತರ ಹೆಣ್ಣಿನ ವ್ಯಾಮೋಹ ಕೆಟ್ಟ ಚಟಗಳಿಗೆ ಸರಿಯಾದ ಉಪಮೆಯಾಗುತ್ತದೆ. ತಾರೆ ಮಂಜರಿದೇವಿ ಆಹ್ವಾನ ಅವಳನ್ನ ಅಷ್ಟಾಗಿ ಬಯಸದ ನಾಯ್ಡು ಒಪ್ಪಿ ಕೊಂಡಾಗ, ಕನಕಲಿಂಗಂ ನಾಯ್ಡು ಬಗ್ಗೆ ಬರೆಯುವ ಈ ಮಾತು ಎಷ್ಟೊಂದು ಸಮಾಜದಲ್ಲಿನ ಇಂತಹ ಜನರ ಬಗ್ಗೆ ನೋವು ಮಾಡಿ ಕೊಡುತ್ತದೆ. ಅದಕ್ಕೆ ಶ್ರೀಮಂತರನ್ನು ಕಂಡರೆ ನನಗಷ್ಟು ಬೇಸರ......ಜೂಜಿನ ಕುದುರೇಗಿಂತ ಇವರ ಬುದ್ಧಿ ವಿಚಿತ್ರ. ಇವರ ಬುದ್ಧಿ ಹೀಗೇಂತ ನಂಬಲುಂ ಹೋಗಿ ನಾನು ಎಷ್ಟೊಂದು ಬಾರಿ ಗಸ್ತು ತಿಂದಿದ್ದೇನೆ. ಕವಿಯಾದ ಕನಕಲಿಂಗಂನ ಬಾಯಿಯಲ್ಲಿ ಸೌಂದರ್ಯದ ಬಗ್ಗೆ ತ.ರಾ.ಸು. ಹೀಗೆ ಬರೆ ಯುತ್ತಾರೆ. ನಾವು ಸೌಂದರ್ಯವನ್ನ ಅರಸುವ ಸಾಹಿತ್ಯ,ಚಿತ್ರ,ಶಿಲ್ಪ, ಸಂಗೀತ,ಮೊದ ಲಾದ ಕಲೆಗಳಲ್ಲಿ, ಆ ಕಲಾ ವಸ್ತುವಿನಲ್ಲಿ ಸೌಂದರ್ಯವಿದೆಯೋ ಎಂದು ಅಳೆಯುವುದಕ್ಕೆ ಬೇರೆ ಪ್ರಮಾಣವಿದೆ. ಆ ವಸ್ತುವಿನಲ್ಲಿ ಸೌಂದರ್ಯವಿದೆಯೋ ಇಲ್ಲವೇ ಅನ್ನೋ ದಕ್ಕೆ ಕೆಲವು ಲಕ್ಷಣಗಳ ನಿಕ್ಷೇಪವಿದೆ.ಆದುದರಿಂದ ಅವುಗಳಲ್ಲಿ ಅನಂತ ಕಾಲದಿಂದಲೂ ಸುಂದರವೆಂದೂ ಪರಿಗ್ರಹಿಸಲ್ಪಟ್ಟ ಕೆಲವು ವಸ್ತುಗಳಿವೆ. ಅವನ್ನ ನಾವು ಸುಂದರ

ವೆಂದು ಒಪ್ಪಿ ಕೊಳ್ಳುತ್ತೇವೆ. ನಮ್ಮ ರುಚಿ ವೈವಿಧ್ಯತೆಗೆ ಅನುಸಾರವಾಗಿ ಆ ಲಕ್ಷಣಗಳನ್ನು ನಾವು ಮನ್ನಿಸುವಾಗ ವ್ಯಕ್ತಿ ವ್ಯಕ್ತಿಗೂ ಕೊಂಚ ಭೇದ ಬರಬಹುದು. ತತ್ವ ಸಾರ್ವತ್ರಿಕವಾದರೂ ರುಚಿ ಪ್ರಿಯರಾದ ನಮಗೆ ಸಪ್ಪೆ ಅಡಿಗೆ ಹೇಗಿದ್ದರೂ ರುಚಿಸುವುದಿಲ್ಲವೋ ಹಾಗೆಯೇ ಕಲಾವಸ್ತುಗಳೂ ಅಷ್ಟೆ. ನಮ್ಮ ವೈಯಕ್ತಿಕ ರುಚಿಗೆ ಜಗ್ಗದ ವಸ್ತು ನಮಗೆ ಪ್ರಿಯವಾಗುವುದಿಲ್ಲ. ಎಲ್ಲದರಲ್ಲೂ ನಮ್ಮ ರುಚಿಯನ್ನೇ ಅರಸುತ್ತೇವೆ. ಅದಿಲ್ಲದಿದ್ದುದನ್ನ ತೊರೆಯುತ್ತೇವೆ. ಇನ್ನು ಗಂಡಸರಂ ಅವೂ ಕಾಮುಕ ಗಂಡಸರೂ ಹೆಂಗಸನ್ನ ನೋಡುವ ದೃಷ್ಟಿ ಆ ಹೆಂಗಸು ಏನೇ ಆಗಿರಲಿ ಅದರ ಬಗ್ಗೆ ಯೋಚಿಸುವುದಿಲ್ಲ. ಆದರೆ ಜೊತೆಗಿರುವ ಜನರ ಬಗ್ಗೆ ತಿಳಿಯುತ್ತಾನೆ ಅನ್ನುವುದಕ್ಕೆ ಈ ಮಾತುಗಳು. ಆ ಹುಡುಗಿಯನ್ನು ನೋಡಿದಾಗಲೇ ನಾನು ಅವನನ್ನ ನೋಡಿದ್ದು. (ಹುಡುಗಿ ಜೊತೆಗಿದ್ದವನನ್ನು) ಮಾವಿನಕಾಯಿಯ ಕಂಡು ಬಾಯಿಯಲ್ಲಿ ನೀರು ಸುರಿಸುವ ಹುಡುಗ ತೋಟದ ಬೇಲಿ ಎಂಥದ್ದು ಎಂದು ಗಮನಿಸುವುದಿಲ್ಲವೇ?! ಆಂಧ್ರರ ದೇಶಾಭಿಮಾನದ ಬಗ್ಗೆ ಕನಕಲಿಂಗಂ ಹುಡುಗಿಯನ್ನ ತನ್ನ ಒಡೆಯ ನಾಯ್ಡು ವಶಪಡಿಸಿಕೊಡಲು ಹುಡುಗಿಯ ಜೊತೆಗಿದ್ದವನನ್ನ ತೆಲುಗಿನಲ್ಲಿ ಮಾತನಾಡಿಸಿ ಹತ್ತಿರಕ್ಕೆ ಸೆಳೆಯುತ್ತಾನೆ. ಪರಭಾಷೆಯ ಪ್ರದೇಶದಲ್ಲಿ ಒಂದೇ ಭಾಷೆಯನ್ನಾಡುವ ಇಬ್ಬರು ಬಹು ಬೇಗ ಸ್ನೇಹಿತರಾಗುತ್ತಾರೆ. ಅದರಲ್ಲೂ ಆಂಧ್ರದವರಾದರೇ ಅವರೆದುರಿಗೆ ತೆಲುಗನ್ನ ಆಂಧ್ರ ಭಾಷೆಯನ್ನ ಹೊಗಳಿದರೆ ಸಾಕು ವಜ್ರ ಬೆಸುಗೆ ಹಾಕಿದಂತಾಗುತ್ತದೆ. ಅಷ್ಟು ಉತ್ಕಟವಾಗಿದೆ ಆಂಧ್ರರ ಭಾಷಾಭಿಮಾನ, ದೇಶಾಭಿಮಾನ ಈ ಮಾತು ಎಷ್ಟೋ ಬಾರಿ ನನ್ನ ಅನುಭವಕ್ಕೆ ಬಂದಿದೆ ಎಂತಲೇ ನನ್ನನ್ನ ಕಂಡು ಗುರ್ರೆನ್ನುತ್ತಿದ್ದ ಆ ಮನುಷ್ಯನನ್ನ ದಾರಿಗೆ ತರಲು ಮಂತ್ರ ಪ್ರಯೋಗ ಮಾಡಿದೆ.

ಶ್ರೀಮಂತರಿಗೆ ಅವರ ಅಭಿಲಾಷೆ ಈಡೇರಿಸಲು ಅವರು ಬಯಸಿದ್ದು ಒದಗಿಸುವವನ ಗೋಳು ನಾಯ್ಡುವಿನ ಇಂತಹ ಗೆಳೆಯ ಕವಿ ಕನಕಲಿಂಗಂ ಹೇಳುವ ಮಾತುಗಳು ಇವು. ಈ ಒಂದು ಸಲವೇನು ಎಷ್ಟೋ ಸಲ ನಾಯ್ಡು ನನ್ನನ್ನ ತಮ್ಮ ತಲೆ ಹಿಡುಕನಂತೆ ಬಳಸಲು ಯತ್ನಿಸಿದಾಗಲೆಲ್ಲ ನನ್ನ ಮೈ ಉರಿದಿದೆ. ಈ ರೀತಿಯ ವರ್ತನೆಯನ್ನ ಸಹಿಸುವುದು ಕವಿಯಾಗಿ ಹುಟ್ಟಿದ ನನ್ನ ಮನುಷ್ಯತ್ವಕ್ಕೆ ಅವಮಾನ ಎನಿಸಿದೆ. ಆದರೇನು ಮಾಡಲಿ? ಮರ್ಯಾದೆಗಿಂತ ಮೊದಲು ಹುಟ್ಟಿದ ನನ್ನ ಹೊಟ್ಟೆ ನನ್ನ ಮಾತನ್ನ ಕೇಳಿದರೆ ತಾನೇ? ಅಲ್ಲದೆ ಅದಕ್ಕಿಂತಲೂ ಹೆಚ್ಚಾಗಿ ಹುಡುಗಿಯರನ್ನ ಕಂಡ ಮೊದಲಲ್ಲಿ ನಾಯ್ಡು ನನ್ನನ್ನ ತಲೆ ಹಿಡುಕನಂತೆ ಬಳಸಿದರು.ಬಳಿಕ ನನ್ನನ್ನ ಅವರ ಸಹಚಾರಿಯಾಗಿ ಮಾಡಿ ಕೊಳ್ಳುತ್ತಿರಲಿಲ್ಲ. ಅವರು ಉಂಡ ಊಟದಲ್ಲಿ ನನಗೂ ಪಾಲು ಕೊಡದೇ ಹೋಗುವುದಿಲ್ಲ. ಆ ಸುಖಕ್ಕಾಗಿ ಈ ಅವಮಾನವನ್ನ ಸಹಿಸಿ ಕೊಳ್ಳುತ್ತೇನೆ. ಸುಖ ಬೇಕು ಎಂದರೆ ಸಹನೆಯೂ ಬೇಕು'. ತ.ರಾ.ಸು. ಅವರ ಈ ಕಾದಂಬರಿಯಲ್ಲಿ ಎಲ್ಲ ರೀತಿಯ ಮನುಷ್ಯರನ್ನು ಸೃಷ್ಟಿಸಿದ್ದಾರೆ. ಕನಕಲಿಂಗಂ ಸಂಥವನನ್ನು ನಾವು ಸಮಾಜದಲ್ಲಿ ಕಾಣಬಹುದು [illegible]

ಬರುವವರು. ನಾವು ಬೀಸುಗಲ್ಲಿನ ಎರಡು ಶಿಲಾ ಕಲ್ಲಿನ ಮಧ್ಯೆ ಸಿಕ್ಕವರು. ಇಂದು ನಾಳೆ ಎರಡರಲ್ಲೂ ಸ್ಥಿರಸ್ಥಾನ ಇಲ್ಲದವರು. ಶ್ರೀಮಂತರಿಗೆ ನಮ್ಮನ್ನು ಕಂಡರೆ ತಾತ್ಸಾರ. ಬಡವರಿಗೆ ನಮ್ಮನ್ನ ಕಂಡರೆ ಸಂಶಯ. ಮನುಷ್ಯ ಬದುಕ ಬೇಕು ಎಂದರೆ ಅವನಲ್ಲಿ ಎರಡು ಗುಣ ಇರಬೇಕು. ಒಂದು ಹಣ ಇರಬೇಕು ಇಲ್ಲವೇ ತೋಳು ಬಲ ಇರಬೇಕು. ಯುಗ ಯುಗಾಂತರದಿಂದಲೂ ಇವೆರಡು ಇಲ್ಲವೇ ಎರಡು ವರ್ಗಗಳಿಗೂ ಅನಗತ್ಯವಾದ ಬುದ್ಧಿಯನ್ನ ಮಾತ್ರ ನಾವು ಈ ಸರಕನ್ನೇ ಮಾರಿ ಬದುಕಬೇಕು. ನಮ್ಮ ಬುದ್ಧಿಯನ್ನ ಅವರ ಅಗತ್ಯಕ್ಕೆ ಅವಸರಕ್ಕೆ ಒದಗಿಸಬೇಕು. ಮುಕ್ಕಾಲುಪಾಲು ಬುದ್ಧಿ ಜೀವಿಗಳು ಬದುಕುತ್ತಿರುವುದು ಹೀಗೆಯೇ.ಆದರೆ ಈ ವೃತ್ತಿಯನ್ನು ಅವರ ತಲೆ ಹಿಡುಕತನ ಎಂದು ಭೀಭತ್ಸವಾಗಿ ಕರೆಯಲು ಒಪ್ಪುವುದಿಲ್ಲ. ವೃತ್ತಿ ಎಂತಹದಾದರೂ ಹೆಸರು ಗಂಭೀರವಾಗಿರಲಿ ಎನ್ನುತ್ತಾರೆ ಕನಕಲಿಂಗಂ. ನಾಯ್ಡು ಅವರು ಹುಡುಗಿಯನ್ನ ಒಪ್ಪಿಸುವ ಮುಂಚೆ ಬಡವರು, ಶ್ರೀಮಂತರು, ಮಧ್ಯಮವರ್ಗದ ಮನುಷ್ಯರನ್ನ ಕಾಣುವ ರೀತಿ ಬುದ್ಧಿ ಜೀವಿ ಮಧ್ಯಮವರ್ಗದವನ ಗತಿ ಬಗ್ಗೆ ಹೇಳುವ ಮಾತುಗಳು ಈ ವರ್ಗದ ಮನುಷ್ಯರ, ಪುರುಷರ ಪ್ರತೀಕ ಕನಕಲಿಂಗಂ ಆಗುತ್ತಾನೆ, ವಿಶಾಲಾಕ್ಷಿಗೆ ನಾಯ್ಡು ಅವಳನ್ನು ಬಯಸಿದ ಸುದ್ದಿ ಹೇಳಿದಾಗ ಅವಳು ಕನಕಲಿಂಗಂನನ್ನು ನೋಡುವ ರೀತಿ, ಶಿಕ್ಷಿಸುವ ರೀತಿ, ಆಗ ಕನಕಲಿಂಗಂ ಹೇಳುತ್ತಾನೆ, ಬಂದೂಕ ಬಾಂಬು ಯಾವುದನ್ನಾದರೂ ಎದುರಿಸಬಹುದು. ಚಪ್ಪಲಿಯನ್ನು ಅದರಲ್ಲೂ ಹೆಣ್ಣಿನ ಚಪ್ಪಲಿ ಯನ್ನು ಯಾರು ತಾನೇ ಎದುರಿಸಲು ಸಾಧ್ಯ ? ಕನಕಲಿಂಗಂ ವಿಶಾಲಾಕ್ಷಿಯನ್ನು ನಾಯ್ಡು ಕೋಣೆಗೆ ಕರೆತಂದಾಗ ನಾಯ್ಡು ಅತ್ಯಂತ ಕುರೂಪಿ ಹೆಣ್ಣಿನೊಡನೆ ಇರುತ್ತಾನೆ. ಅವಳನ್ನು ಕಳಿಸಲು ಹೇಳಿದಾಗ, ನಾಯ್ಡು ಮಾತು- ಅಯ್ಯೋ ಪೆರ್ರಿ-ವೆಧವಾ ಇವಳನ್ನು ಕಳಿಸಿ ಬಿಡುವುದೇ ? ಇಂಥ ಸುಖ ಕೊಡೋಳು ಎಲ್ಲಿ ಸಿಕ್ಕಾಳು ? ನಿನ್ನ ಹುಡುಗಿ ಬಂದಿದ್ದರೆ ರೂಂ ಮಾಡಿ ಇಟ್ಟಿರು. ನಾಳೆ ನೋಡಿ ಕೊಳ್ಳೋಣ. ಇದು ಗಂಡಸು ಹೆಂಗಸನ್ನ ತರಕಾರಿಯಂತೆ ಕಾಣುವ ಸಮಾಜದ ದೊಡ್ಡ ಕಾಯಿಲೆಗೆ ನಾಯ್ಡು ಜೀವಂತ ಸಾಕ್ಷಿಯಾಗುತ್ತಾನೆ. ಹೆಣ್ಣಿನ ಬಳಕೆ ಪಶುಗಿಂತ ಕಡೆಯದೇದು ಈ ಪುರುಷ ಪಾತ್ರದ ನಾಯ್ಡು ಮನವರಿಕೆ ಮಾಡಿ ಕೊಡುತ್ತಾನೆ.ಶ್ರೀಮಂತ ಗಂಡಸರು ಅದರಲ್ಲೂ ಹೆಂಗಸರ ಖಯಾಲು ಇರುವ ಗಂಡಸರು ಮುಖಾಲಂಕರಣ ಹಾಗೂ ಅವರ ಅಲಂಕಾರದ ಬಗ್ಗೆ 52 ವರ್ಷವಾದ ಕನಕಲಿಂಗಂ ಈ ರೀತಿಯಲ್ಲಿ ತಿಳಿಸುತ್ತಾನೆ, 'ಎಷ್ಟೋ ವರ್ಷಗಳಿಂದ ನಾನು ನಾಯ್ಡುವನ್ನು ನೋಡುತ್ತಿದ್ದೇನಲ್ಲ. ಅವರಿಗೆ ಯಾವಾಗಲೂ ಸೆಂಟುಗಳು, ಸ್ನೋ, ಹೇರ್ ಆಯಿಲ್, ಫೇಸ್ ಪೌಡರ್ ಮೊದಲಾದ ಪ್ರಸಾಧನ ಸಾಮುಗ್ರಿಗಳಲ್ಲಿ ತುಂಬಾ ಆಸಕ್ತಿ. ಪ್ಯಾರಿಸ್ಸಿನ ಫರ್‌ಫ್ಯೂಮ್ಸ್, ಕನೋಜಿನ ಅತ್ತರು, ಮೈಸೂರಿನ ಗಂಧದೆಣ್ಣೆ ಹೀಗೆ ಬಗೆ ಬಗೆಯ ಪರಿಮಳ ವಸ್ತುಗಳ ಬತ್ತಳಿಕೆಯನ್ನೇ ಇಟ್ಟಿರುತ್ತಾರೆ. ಮತ್ತೆ ಎಲ್ಲಾ ಶ್ರೀಮಂತರ ಹಾಗೆ ಇವರು ಯಾವು ದಕ್ಕೆ ಬೆಲೆ ಹೆಚ್ಚೋ ಅದನ್ನೇ ಉತ್ತಮವಾದುದೆಂದು ಭಾವಿಸುತ್ತಾರೆ. ದಿನಕ್ಕೆರಡು ಬಾರಿ ಮುಖಕ್ಷೌರ ಮಾಡಿಕೊಂಡು, ಮೀಸೆ ಹುಬ್ಬುಗಳನ್ನು ಟ್ರಿಂ ಮಾಡಿಕೊಳ್ಳುತ್ತಾರೆ.

ಕ್ಷೌರದಿಂದ ನಯವಾದ ಮುಖಕ್ಕೆ ಸ್ನೋ ಹಚ್ಚಿ ತಿಕ್ಕಿ ಗಮಗಮಿಸುವ ಪೌಡರನ್ನು ಉಜ್ಜಿ, ಬಳಿಕ ಮೀಸೆ ಹುಬ್ಬುಗಳು ಹೊಳೆಯುವಂತೆ ವ್ಯಾಸಲೀನ್ ಲೇಪನ ಮಾಡುತ್ತಾರೆ. ತಲೆಗೂದಲಿಗೂ ಅಷ್ಟೇ. ದಿನಾ ಶಾಂಪೂ ಸ್ನಾನವಾಗಲೇ ಬೇಕು. ಬಳಿಕ ಅದಕ್ಕೆ ಗಂಧ ತೈಲ ಲೇಪನ. ಅದಾದ ಮೇಲೆ ಪರಿಮಳಗಳ ಉಪಯೋಗ. ಕಿವಿಯ ಹಿಂಬದಿಗೆ, ಕಂಕುಳಿಗೆ, ಮುಂಗೈ ಮೇಲೆ ಇಷ್ಟೆಲ್ಲಾ ಅಲಂಕಾರಗಳನ್ನು ಅವರು ವಿಶೇಷ ಸಂದರ್ಭಗಳಲ್ಲಿ ಮಾತ್ರ ಮಾಡಿಕೊಳ್ಳುವುದಿಲ್ಲ. ದಿನ ನಿತ್ಯವೂ ಮಾಮೂಲು. ವಿಶೇಷ ದಿನಗಳಲ್ಲಿ ಇನ್ನಷ್ಟು ಎಚ್ಚರಿಕೆ. ದಿನಾ ಒಂದು ಗಂಟೆ ಸಾಕಾದರೆ, ವಿಶೇಷ ದಿನಗಳಲ್ಲಿ ಅವಸರವೆಂದರೆ ಎರಡು ಗಂಟೆ. ಇನ್ನು ತಮಗಾಗಿ ಕಾದವರನ್ನು ಕಾಯಿಸುವುದು ಶ್ರೀಮಂತ ಪುರುಷರ ಸ್ವಭಾವ. ಅದಕ್ಕೆ ಉದಾಹರಣೆ, ಕನಕಲಿಂಗಂ, ನಾಯ್ಡು ಅವರ ಬಗ್ಗೆ ಹೀಗೆ ಕೊಡುತ್ತಾನೆ ಯಾವುದೇ ಸಂದರ್ಭಕ್ಕಾದರೂ ಹತ್ತು ನಿಮಿಷವಾದರೂ ತಡವಾಗಿ ಹೋಗಿ ಇತರರನ್ನು ತಮಗೆ ಕಾಯುವಂತೆ ಮಾಡದಿದ್ದರೆ ತಮ್ಮ ಶ್ರೀಮಂತಿಕೆ ಶೃಂಗಭಂಗವಾಗುವುದೆಂದು ನಂಬಿದ್ದ ನಾಯ್ಡು'.

ಈ ಜಗತ್ತಿನಲ್ಲಿ ವಿಚಿತ್ರ ರೀತಿಯ ಜನರಿರುತ್ತಾರೆ. ಅದಕ್ಕೆ ನಾಯ್ಡು ತನ್ನ ಅನುಚರ ಕನಕಲಿಂಗಂ ಎದುರು ತಾನು ಮಾಡಿದ ಎಲ್ಲಾ ರತಿ ಕ್ರೀಡೆಗಳನ್ನು ಹೇಳುತ್ತಾನೆ. ಹಾಗೂ ಶ್ರೀಮಂತರ ಇನ್ನೊಂದು ಮುಖ ನಾಯ್ಡು ಈ ಮಾತು ಸಮರ್ಥಿಸುತ್ತಾನೆ. 'ತಮ್ಮ ಶ್ರೀಮಂತಿಕೆ ತಾವು ಮಾಡುವ ಎಲ್ಲಾ ಅನಾಚಾರ, ಅತ್ಯಾಚಾರಗಳಿಗೆ ರಕ್ಷಣೆಯನ್ನು ಒದಗಿಸುತ್ತದೆ. ಎಂದು ತಿಳಿದುಕೊಂಡ ಈ ಜನ ಸ್ವೇಚ್ಛಾ ಪ್ರವರ್ತನೆಯ ಸಹಜ ರೀತಿ ಎಂದು ಭಾವಿಸಿದ್ದಾರೆ. ಈ ಬಗೆಯ ಅನೈಸರ್ಗಿಕ ದೃಷ್ಟಿಯಿಂದಾಗಿ ಈ ಜನಕ್ಕೆ ಸಹಜವಾದ ಯಾವುದರಿಂದಲೂ ತೃಪ್ತಿ ಇಲ್ಲವಾಗಿದೆ. ಅಲ್ಲದೆ 'ಮಿತಿ' ಎನ್ನುವುದು ಜೀವನದ ಎಲ್ಲ ವಿಷಯಗಳಿಗೂ ರುಚಿ ಕೊಡುವ ಉಪ್ಪು ಎನ್ನುವ ಮಾತಿನಲ್ಲೂ ಇವರಿಗೆ ನಂಬಿಕೆ ಇಲ್ಲ. 'ಮಿತಿ' ಕೇವಲ ಬಡವರಿಗೆ ಹೇಳಿಸಿದ ಆಪದ್ಧರ್ಮವೇ ಹೊರತು ಶ್ರೀಮಂತಿಕೆಯನ್ನು ಮೆರೆಸುವ ಪಲ್ಲಕ್ಕಿಯಲ್ಲ ಎಂದು ದೃಢವಾಗಿ ನಂಬಿದ್ದಾರೆ. ಎಂತಲೇ ಈ ಜನಕ್ಕೆ ಎಲ್ಲಾ ವಿಷಯದಲ್ಲೂ 'ಅತಿ'ಯೇ ಆರಾಧ್ಯ ವಸ್ತುವಾಗಿದೆ. 'ಶ್ರೀಮಂತರ ಲೈಂಗಿಕ ಜೀವನದ ಅಡ್ಡದಾರಿಗೆ ಈ ಮಾತುಗಳು...' ನಮಗೆ ಒಬ್ಬ ಹೆಣ್ಣು ನಾವು ಬದುಕಿರುವಷ್ಟು ದಿನವೂ ಸಾಕಾದರೆ, ಇವರಿಗೆ ದಿನಕ್ಕೆ ಒಂದು ಹೆಣ್ಣಾದರೂ ಸಾಲದು. ಲೈಂಗಿಕ ವಿಷಯದಲ್ಲಿ ರಹಸ್ಯ ನಮಗೆ ಪ್ರಿಯವಾದರೆ, ಇವರಿಗೆ ಅದು ಆದಷ್ಟು ಬಹಿರಂಗವಾಗಿರಬೇಕು. ಅಷ್ಟೆಲ್ಲಾ ಯಾಕೆ, ಸಹಜವಾದ ಲೈಂಗಿಕ ಕ್ರಿಯೆಯಿಂದಲೂ ಇವರಿಗೆ ತೃಪ್ತಿ ಇಲ್ಲ. ಕೆಲವರಲ್ಲಿ ಸದಾ ಈ ಪ್ರವೃತ್ತಿ ಕಾಣಬಹುದು. ಅದಕ್ಕೆ ಅನುಭವದ ಮಾತು ಹೀಗೆ'. ವೈ ಮನಸ್ಸುಗಳೆ- ರಜಕ್ಕೂ ಕೆಲಸವಿಲ್ಲದೆ ಇರುವಾಗ ಕಣ್ಣಿನ ಎದುರು ಒಂಟಿಯಾದ ಹೆಂಗಸೊಬ್ಬಳು ಕಾಣುವುದಕ್ಕಿಂತ ಒಳ್ಳೆಯ ಕೆಲಸ ಇನ್ನೇನು ಬೇಕು ಕಣ್ಣಿಗೆ?

ಮನುಷ್ಯ ದೇವತೆಯಾಗುತ್ತಿದ್ದ ಎನ್ನುವುದಕ್ಕೆ ತ. ರಾ. ಸು. ಅವರು ಕನಕ ಲಿಂಗಂನಿಂದ ಈ ಮಾತು ಹೇಳಿಸುತ್ತಾರೆ. ನಿಜ ಹೇಳಬೇಕೆಂದರೆ ನಾಯ್ಡು ಅವರು ನನ್ನ ಹೆಂಡತಿಯನ್ನು ನೋಡಿ "ಕಳುಹಿಸು" ಎಂದರೆ ಇಲ್ಲವೆನ್ನುವಷ್ಟು ಧೈರ್ಯ ನನಗಿಲ್ಲ ಎಂದೂ ಅಂತಹ ವಿಷ ನುಂಗುವ ಪ್ರಸಂಗ ಬರಬಾರದೆಂದು ಅಲ್ಲವೇ, ನಾನು ಕುರೂಪಿ ಹೆಣ್ಣನ್ನು ಕಟ್ಟಿಕೊಂಡು ಏಗುತ್ತಿರುವುದು, ನಾನು ಈ ಮಾತು ಹೇಳಿದಾಗ ನಿಮಗೆ ನನ್ನ ಬಗ್ಗೆ ಹೇಸಿಗೆಯಾಗಬಹುದು, ನಿಮಗೇನು? ನನಗೂ ನನ್ನ ಬಗ್ಗೆ ಹೇಸಿಗೆ ಯಾಗುತ್ತದೆ. ನೀವು ಹೇಳಬಹುದಾದ ಹಾಗೆ ನನಗೂ ಈ ಶರಪಂಜರಕ್ಕಿಂತ ಕೂಲಿ ಕೆಲಸ ಮಾಡಿ ಹೊಟ್ಟೆ ಹೊರೆಯುವುದು ಲೇಸಲ್ಲವೇ ಅಂತ ಅನಿಸಿದೆ. ಹಾಗೆ ಅನಿಸುವುದು ಸುಲಭ. ರೊಟ್ಟಿ ಚಟ್ನಿ ತಿಂದರೂ ಹೊಟ್ಟೆ ತುಂಬುತ್ತದೆ ನಿಜ. ಆದರೆ ಸಣ್ಣಕ್ಕಿ ಅನ್ನ ಬೆಣ್ಣೆ ಕಾಯಿಸಿದ ತುಪ್ಪದ ರುಚಿ ಹತ್ತಿದ ನಾಲಿಗೆಗೆ ರೊಟ್ಟಿ ಚಟ್ನಿ ಖಂಡಿತವಾಗಿಯೂ ವಿಷವಾಗುತ್ತದೆ. ಹೊಟ್ಟೆಗಿಂತಲೂ ಹೆಚ್ಚಾಗಿ ಮನುಷ್ಯ ನಾಲಿ ಗೆಯ ಗುಲಾಮ. ಆ ನಾಲಿಗೆ ಒಂದಿರದಿದ್ದರೆ ಖಂಡಿತವಾಗಿಯೂ ಮನುಷ್ಯ ದೇವತೆ ಯಾಗಿರುತ್ತಿದ್ದ. ಆದರೇನು ಮಾಡುವುದು ? ಮನುಷ್ಯನಾಗಿ ಹುಟ್ಟಿದವನಿಗೆ ನಾಲಿಗೆ ತಪ್ಪಿದ್ದಲ್ಲ. ನಾಲಿಗೆ ಇದ್ದವನಿಗೆ ಒಂದಲ್ಲ ಒಂದು ರೀತಿಯ ಭಂಡಬಾಳು ತಪ್ಪಿದ್ದಲ್ಲ. ಒಬ್ಬೊಬ್ಬರಿಗೆ ಒಂದೊಂದು ತರಹ. ನನಗೆ ಈ ತರಹ—, ನಾಯ್ಡು ಬಯಸಿದ ಕೋಮಲೆ ಅವನ ಕಡೆಗೆ ನೋಡದಿದ್ದಾಗ ಕನಕಲಿಂಗಂ ಸಂತೋಷ ಪಟ್ಟರೂ ಆ ಹುಡುಗಿ "ಧಿಮಾಕಿನ ಹುಡುಗಿ" ಅನ್ನುತ್ತಾನೆ ನಾಯ್ಡು. ಅದಕೆ ಕನಕಲಿಂಗಂ ಹೇಳುತ್ತಾನೆ, 'ಧಿಮಾಕು' ಅದು ಶ್ರೀಮಂತರು ಬಡವರ ಗಾಂಭೀರ್ಯಕ್ಕೆ ಇಡುವ ಹೆಸರು, ಕೊಡುವ ಬೆಲೆ ಹೀಗೆ ಕಾದಂಬರಿ ಉದ್ದಕ್ಕೂ ವಿಶ್ಲೇಷಣೆಗಳು ತುಂಬಿ, ಕಾದಂಬರಿ ಇಡಿಯಾಗಿ ಸಮಾಜದ ಒಳಿತು ಕೆಡುಕನ್ನು ಬಿಚ್ಚುತ್ತಾ ಹೋಗು ತ್ತದೆ. ಅದಕ್ಕೆ ಇನ್ನೊಂದು ಉದಾಹರಣೆ ನೋಡಿ, ‹ಹಣಕ್ಕಾಗಿ ಬದುಕುವವರು ನೀತಿ ಶೀಲ ಬಿಡಬೇಕಾಗುತ್ತದೆ. ಈ ಹಾಳು ದ್ವಂದ್ವಕ್ಕಾಗಿ ನಾನು ಸತ್ಯದ ವಿಚಾರಕ್ಕೆ ತಲೆಕೊಡುವುದಿಲ್ಲ. ಬದುಕಬೇಕು ಎನ್ನುವವರಿಗೆ 'ವಿಚಾರಕ್ಕಿಂತ ದೊಡ್ಡ ವೈರಿ ಇಲ್ಲ' ಹರಿಯುವ ನೀರು ಏಕೆ ಹರಿಯುತ್ತಿದೆ ಅಂತ ಯೋಚನೆ ಮಾಡುವುದಕ್ಕಿಂತ, ಹಾಳಾದ್ದು ಹರಿದು ಹೋಗಲಿ ಎನ್ನುವುದು ಲೇಸಲ್ಲವೇ.

ಹೆಣ್ಣು ತಿರಸ್ಕರಿಸಿದಷ್ಟೂ ಅವಳನ್ನು ಬಯಸುವ ಗಂಡಿಗೆ ಅದರ ಮೇಲೆ ವ್ಯಾಮೋಹ ಹೆಚ್ಚುತ್ತಾ ಹೋಗುತ್ತದೆ. ನಾಯ್ಡು ಬಯಸಿದ ಕೋಮಲೆ ಅವನನ್ನು ಕಣ್ಣೆತ್ತಿ ನೋಡದಾಗ ನಾಯ್ಡು ಹೇಳುವ ಮಾತು, ಅವಳು ಏನಾಗಿದ್ದರೂ ಸರಿಯೇ, ಅವಳ ಕಾಲವಲ್ಲಿ ನನ್ನ ಜೀವ ಹೋದರೂ ಸರಿಯೇ, ಒಮ್ಮೆಯಾದರೂ ಅವಳನ್ನು ತಬ್ಬಿ ಮುತ್ತಿಟ್ಟು ಅವಳು ನನ್ನನ್ನ ಚುಂಬಿಸುವಂತೆ ಮಾಡಬೇಕು. ಇಷ್ಟು ದಿನ ವಿರೋಧಿಸಿದ ಆ ಹೆಣ್ಣನ್ನೇ ನಾನು ಕಾಣಲಿಲ್ಲ. ಕನಕಲಿಂಗಂ, ಈ ಮುಂಚೆಯೇ ಅವಳು ನನ್ನನ್ನು ಒಪ್ಪಿದರೂ ನಾನು ಅವಳನ್ನು ಲೆಕ್ಕಕ್ಕೆ ಸೇರಿಸಿರಲಿಲ್ಲ. ತಿರಸ್ಕರಿ

ಸಿದ್ದರೂ ಪೀಡೆ ತೊಲಗಿತು ಎನ್ನುತ್ತಿದ್ದೆ. ಆದರೆ ತನ್ನ ನಿರ್ಲಕ್ಷ್ಯದಿಂದ ನನ್ನನ್ನು ಇಷ್ಟೊಂದು ಸತ್ತಂತೆ ಮಾಡಿದ ಆ ಹುಡುಗಿ ನನ್ನ ಪುರುಷತ್ವಕ್ಕೆ ಸವಾಲು. ಒಂದು ದಿನ ಒಂದು ಗಳಿಗೆ ಅವಳ ಸಂಗವನ್ನು ಅಲ್ಲದಿದ್ದರೂ ಅವಳ ಸಾಮೀಪ್ಯವನ್ನು ಅನು-ಭವಿಸಲೇಬೇಕು.

ಸಮಾಜದಲ್ಲಿ ಒಳ್ಳೆಯ ಪುರುಷರೂ ಇರುತ್ತಾರೆ. ಅವರು ಉದ್ಯೋಗಸ್ಥ ಹೆಣ್ಣನ್ನು ಮನಸಾರೆ ಪ್ರೀತಿಸಿ ಮದುವೆಯಾಗುತ್ತಾರೆ ಅನ್ನುವುದಕ್ಕೆ ಆದರ್ಶ ವ್ಯಕ್ತಿಯಾಗಿ ಉತ್ತಮ ಗುಣದ ಶಕ್ತಿ ಆಗಿ ಕಾದಂಬರಿಯಲ್ಲಿ ಅಪರೂಪನಾದ ಪದ್ಮನಾಭ ವಾರಿಯಾರ್ ಕೋಮಲಳಿಗೆ ಹೇಳುವ ಈ ಮಾತುಗಳು ಸಾಕ್ಷಿ. 'ನಾಳೆ ಆಫೀಸಿಗೆ ಬರುವಾಗ ನಿಮ್ಮ ತಂದೆ ತಾಯಿಗಳನ್ನು ಕೇಳಿ ಬನ್ನಿ. ಅವರು ಒಪ್ಪಿದರೆ ಎಲ್ಲರೂ ಒಪ್ಪ ಬಲ್ಲಂತಹ ಗಂಡನ್ನು ನಾನು ತೋರಿಸುತ್ತೇನೆ. ನನ್ನ ಆಸಕ್ತಿಯನ್ನು ಅನ್ಯಥಾ ಭಾವಿಸಬೇಡಿ. ನೀವು ಸಂಸಾರಿಯಾಗಲು ತಕ್ಕವರೇ ಹೊರತು ಈ ವೃತ್ತಿ ಜೀವನಕ್ಕಲ್ಲ.'

ಆದರೆ ಹೆಣ್ಣಿನ ದುಡಿಮೆಯಿಂದ ಬದುಕುವ ಅವಳ ಬಾಳು ಹಾಳು ಮಾಡುವ ಸ್ವಾಂತ ತಂದೆಯಂದಿರು ಎಷ್ಟು ಜನರಿರುವರು ಈ ಜಗತ್ತಿನಲ್ಲಿ? ಅದಕ್ಕೆ ಸಂಕೇತ ಕೋಮಲೆಯ ತಂದೆ ಐಯ್ಯರ್, ಮಗಳು ಮದುವೆಯಾಗಲು ಒಪ್ಪಿದ ಅಧಿಕಾರಿಯನ್ನು ಹೇಗೆ ಸುಮ್ಮನಾಗುವಂತೆ ಮಾಡುತ್ತಾನೆ. ಅದಕ್ಕೆ 'ನಿನ್ನನ್ನು ಮದುವೆಯಾಗುವುದರ ಜೊತೆಗೆ ನನ್ನ ಸಂಸಾರವನ್ನು ನಡೆಸೋಕೆ ಸಿದ್ಧವಾಗಿದ್ದರೆ ಆಗ ನಿನ್ನನ್ನು ಮದುವೆಯಾಗಬಹುದು. ಈಗ ನಿನ್ನ ಮದುವೆಯಾಗಲು ಮುಂದೆ ಬಂದಿರೋರು ಅವಕ್ಕೆ ತಯಾರಾಗಿದ್ದಾರೇನು ಕೇಳು. ಅವರು ಅದಕ್ಕೆ ಅಸ್ತು ಎಂದರೆ ನನ್ನದು ಅಸ್ತು. ನಾಳೆಯೇ ನಿನ್ನನ್ನು ಧಾರೆ ಎರೆದು ಕೊಡುತ್ತೇನೆ. ಸರಿಯೇ, ಆಗಬಹುದೇ?' ವಾರಿಯಾರ್‌ನ ಒಳ್ಳೆಯ ಗುಣ ಮೊಟ್ಟ ಮೊದಲು ಗಂಡಸಿನ ಬಗ್ಗೆ ಕೋಮಲೆಗೆ ಯೋಚಿಸಲು ದಾರಿಯಾಗಿ ಅವನಿರುವ ಕಛೇರಿ ಕೆಲಸ ಬಿಡುವಷ್ಟು ಮುಂದುವರಿದು ಅದನ್ನು ವಾರಿಯಾರ್‌ಗೆ ಹೇಳಿದಾಗ ಅವನು ಹೇಳುವ ಮಾತು ಕಣ್ಣೀರು ತರಿಸುತ್ತದೆ. 'ಹಾಗೆಂದರೆ ನಿಮ್ಮ ಬಗ್ಗೆ ನಾನೇನಾದರೂ ಅನುಚಿತ ವರ್ತನೆಗೆ ಮನಸ್ಸು ಮಾಡಿಯೇನು ಎಂಬ ಭಯವೇ?' ಅನಂತರ ಆತನೇ ಕೆಲಸ ಬಿಟ್ಟರೆ ಆಗುವ ಕೆಡುಕಿನ ಬಗ್ಗೆ ಹೇಳುತ್ತಾನೆ.

'ಈ ಕಾಲದಲ್ಲಿ ಇರುವ ಕೆಲಸ ಬಿಡುವುದು ಸುಲಭವೇ ಹೊರತು, ಹೊಸ ಕೆಲಸ ಸಿಗುವುದು ಸುಲಭವಲ್ಲ. ಈ ಕಾಲದಲ್ಲಿ ಹೆಣ್ಣಿಗೆ ಗಂಡು ಸಿಗುವುದು ಎಷ್ಟು ಕಷ್ಟವೋ, ಉದ್ಯೋಗ ಸಿಗುವುದು ಅಷ್ಟೇ ಕಷ್ಟ. ಏನಿಲ್ಲವಾದರೂ ನನಗೆ ನಿಮ್ಮ ಸಾಂಸಾರಿಕ ಪರಿಸ್ಥಿತಿ ಅರ್ಥವಾಗಿದೆ. ನಿಮ್ಮ ವೃತ್ತಿಯೇ ನಿಮ್ಮ ಸಂಸಾರಕ್ಕೆ ಊರುಗೋಲು ಆಗಿರುವಾಗ ಇದ್ದ ಕೆಲಸ ಬಿಟ್ಟು ಬೇರೇನು ಮಾಡುತ್ತೀರಾ'? ಹೆಣ್ಣು ಬಲೆಗೆ ಬೀಳುತ್ತಾಳೆ ಎಂದು ಗೊತ್ತಾಗಿರುವ ಗಂಡು ಅವಳನ್ನು ಬಲೆಗೆ ಕೆಡಹುವ ಸ್ಥಿತಿ ಹೀಗೆ. ಚಂದ್ರುಕೋಮಲೆಗೆ ಹೇಳುವುದು, 'ನೀವು ನಕ್ಕಾಗ ನಿಮ್ಮ ಕೆನ್ನೆಯ ಮೇಲೊಂದು ಪುಟ್ಟ ಗುಳಿ

ಬಿದ್ದು ನಿಮ್ಮ ಲಾವಣ್ಯ ಇಮ್ಮಡಿಸುತ್ತದೆ. ಈ ಕೆನ್ನೆಯ ಗುಳಿಗೆ ಏನು ಮಾಡಬೇಕು ಅನಿಸುತ್ತದೆ ಗೊತ್ತೇ?' ಸಂತಾನ ಬಯಸಿದ ಕೋಮಲೆ ಚಂದ್ರನ್ ಹತ್ತಿರ ಅದು ಆಗದಾಗ ಅವಳು ನಗುತ್ತಾಳೆ. ವಿಕಾರವಾಗಿ ನಗುತ್ತಾಳೆ. ಅವಳೇ ಆ ನಗುವಿನ ಬಗ್ಗೆ ಹೇಳುವುದು. 'ಗಟ್ಟಿಯಾಗಿ ನಕ್ಕು ಬಿಟ್ಟೆ. ನನ್ನ ನಗುವನ್ನು ಕೇಳಿ ಚಂದ್ರನ್ ನನಗೆ ಹುಚ್ಚು ಹಿಡಿದಿದೆಯೇನೋ ಎಂಬಂತೆ ನನ್ನತ್ತ ನೋಡಿದ. ಆತ ನೋಡುತ್ತಲೇ ಇದ್ದ, ನಾನು ನಗುತ್ತಲೇ ಇದ್ದೆ.'

ಕೋಮಲೆಯ ಆಸೆ ನೆರವೇರದಾಗ ಅವಳು ನಿರಾಶಳಾಗುತ್ತಾಳೆ. ಆಗ ಅವಳು ಮಾತಿನಲ್ಲಿ ಎಷ್ಟೊಂದು ಸಮಾಜದ ಕಠೋರತೆ, ನೈಜತೆ ಇದೆ ಎನ್ನುವುದಕ್ಕಾಗಿ ಈ ಮಾತುಗಳು–'ಜಗತ್ತು ನಮ್ಮ ಬಗ್ಗೆ ಏನೇನು ಹೇಳಬಹುದು ಹೇಗೆ ವರ್ತಿಸಬಹುದು ಆ ಹೇಳಿಕೆ ವರ್ತನೆಗಳು ಅಸಹ್ಯವಾದರೂ ನಮ್ಮ ಬಗ್ಗೆ ನಮಗಿರುವ ಭಾವನೆ ಈ ಅಸಹ್ಯವಾದ ಆಘಾತದಿಂದ ನಾವು ಕುಸಿದು ಬೀಳದಂತೆ ಮಾಡುತ್ತದೆ. ಆದರೆ ನಮ್ಮ ಬಗ್ಗೆ ನಮಗೆ ನಂಬಿಕೆ ಗೌರವಗಳು ತಪ್ಪಿ ಹೋಗುವುದಕ್ಕಿಂತಲೂ ಘೋರವಾದ ದುರಂತ ಇನ್ನೊಂದುಂಟೆ? ಹಾಗಾದ ಬಳಿಕ ಇನ್ನು ಉಳಿದಿದ್ದೇನು? ತಳಪಾಯ ಸಡಿಲವಾದ ಮನೆ, ಬೆನ್ನೆಲುಬು ಮುರಿದ ಮನುಷ್ಯ ನೇರವಾಗಿ ನಿಂತು ಬದುಕುವುದುಂಟೆ? ಊಹು, ಬಿದ್ದು ಧೂಳಲ್ಲಿ ಉರುಳುವುದೊಂದೇ ದಾರಿ...'

ಅಯ್ಯರ್–ಮಗಳು ರಾತ್ರಿ ತಡವಾಗಿ ಬಂದಾಗ ಅವಳಿಗೆ ಹೊಡೆದು ಹಾದರಗಿತ್ತಿ ಅಂದು ಮತ್ತೆ ಹೊಡೆಯಲು ಹೋದಾಗ ಕೋಮಲ ಅವನ ಕೈಲ್ಲಿದ್ದ ಕೋಲು ಕಸಿದು ಮೈಮುಟ್ಟ ಬೇಡ ಅಂದಾಗ ಅವನು ಹೇಳುವ ಮಾತು– 'ನಿಜವಾಗಿ ಹೃದಯ ತುಡಿಸುತ್ತದೆ–ನಿನ್ನ ಮೈ ಮುಟ್ಟೋದೆ-ಛೀ ಹಾದರಗಿತ್ತಿ ಮುಂಡೆ. ನಿನ್ನ ಮೈ ಮುಟ್ಟಿದರೆ ಏಳೇಳು ಸಲ ಸ್ನಾನಮಾಡಿ ಪಂಚಗವ್ಯ ಕುಡಿಯಬೇಕು.... ಪದ್ಮನಾಭ ವಾರಿಯಾರ್ ಕೋಮಲಳ ಮಾನದ ಕೋಟೆಯ ಗೋಡೆಯಲ್ಲಿ ಬಿರುಕನ್ನು ಸೃಷ್ಟಿಸಿದರೆ, ಚಂದ್ರನ್ ಅವಳ ಬಾಳಿನಲ್ಲಿ ಕಳ್ಳನಂತೆ ನುಸುಳಿ ಅವಳ ಮನ ಹಾಳು ಮಾಡಿದ. ಹಾದರಗಿತ್ತಿ ಎಂದು ಕರೆದ.ಅವಳ ತಂದೆಯೇ ಯಾರೂ ಇಲ್ಲದ ಸಮಯದಲ್ಲಿ ತಾಯಿಯೊಡನೆ ಕಾಮಕೇಳಿಯಲ್ಲಿ ನಿರತನಾದಾಗ ಕೋಮಲೆ ನಾಯ್ದುವನ್ನು ಸೇರಲು ನಿರ್ಧರಿಸಿದಳು. ಹೆಣ್ಣಿನ ದೈಹಿಕ ದಾಹ ಪುರುಷರು ಹೇಗೆ ಹೆಚ್ಚಿಸುತ್ತಾರೆ ಎನ್ನುವುವಕ್ಕೆ ಚಂದ್ರನ್, ವಾರಿಯಾರ್, ಅಯ್ಯರ್, ನಾಯ್ದುವಿನಂತಹ ಪುರುಷರೇ ಉದಾಹರಣೆಯಾಗಿ ಕಣ್ಣೆದುರಿಗೆ ಎದ್ದು ನಿಲ್ಲುತ್ತಾರೆ. ದಾರಿ ತಪ್ಪಿದ ಹೆಣ್ಣು ಏನು ಕೇಳಿಯಾಳು? ತ.ರಾ.ಸು. ಅವರ 'ಒಮ್ಮೆ ನಕ್ಕ ನಗು' ಇದಕ್ಕೆ ಉತ್ತರ ಕೊಡುತ್ತದೆ. ನಾಯ್ಡು, ಕೋಮಲ ಹಣ ಕೇಳಿಯಾಳು ಎಂದಿದ್ದ. ಆದರೆ ಅವಳು ಹಣ ಕೇಳಲಿಲ್ಲ. ಸೀರೆಯನ್ನು ಕೇಳಬಹುದೆಂದಿದ್ದ. ಅದನ್ನು ಅವಳು ಕೇಳಲಿಲ್ಲ. ಅವಳು ಕೇಳಿದ್ದು ಅವನುತದ್ದೇ ಒಂದು ಮಗುವನ್ನು. ಆದರೆ ಅದನ್ನ ಅವನಿಂದ ಕೊಡಲಾಗಲಿಲ್ಲ

ಅನಂತರವೂ ಅವನು ಗಂಡನಾಗಿ ಉಳಿಯಲಿಲ್ಲ. ಕೋಮಲ ಅವನಿಗೆ ಬೈದು ಹೊರಟು ಹೋಗುತ್ತಾಳೆ.

ಪ್ರಗತಿಶೀಲ ಸಾಹಿತ್ಯದಲ್ಲಿ ಮೂಡಿ ಬಂದ ಕಾದಂಬರಿ ಇದು. ವಿಚಾರ ಸರಣಿ, ಸಮಾಜದ ಹುಳುಕು, ಆಗಿನ ಶ್ರೀಮಂತ ವ್ಯಕ್ತಿಗಳು. ಅವರ ವಿಲಾಸ ಜೀವನ ಅದಕ್ಕೆ ಪ್ರೇರಕವಾಗುವ ಮಧ್ಯಮ ವರ್ಗದ ಬುದ್ಧಿ ಜೀವಿಗಳ ಪುರುಷ ಪಾತ್ರಗಳು. ಬಲಿಯಾಗುವ ಬಡ ಹೆಣ್ಣು ಮಕ್ಕಳು. ವ್ಯಕ್ತಿಗಳು ಸಮಾಜ ಇದಿರನ್ನು ಇಟ್ಟುಕೊಂಡು ಸಮಾಜದ ಸಮಸ್ಯೆಗಳನ್ನು 'ಒಮ್ಮೆ ನಕ್ಕ ನಗು' ಬಿಚ್ಚುತ್ತಾ ಹೋಗುತ್ತದೆ.

ನಾಣ್ಣುವಿನ ಪುರುಷ ಪಾತ್ರ ಚಿತ್ರಣದಲ್ಲಿ ತ.ರಾ.ಸು. ಯಶಸ್ವಿಯಾಗಿ ಪರಿಸರ – ಪರಿಸ್ಥಿತಿ ಎರಡನ್ನು ಕಾದಂಬರಿಯಲ್ಲಿ ಚಿತ್ರಿಸಿ ಯಶಸ್ವಿಯಾಗಿದ್ದಾರೆ. ವಾರಿಯಾರ್‌ನಂತಹ ಆದರ್ಶ ಪುರುಷನನ್ನು ಅವರು ಚಿತ್ರಿಸಿದ್ದಾರೆ.

'ತ.ರಾ.ಸು. ಸಾಮಾಜಿಕ ಕಾದಂಬರಿಗಳಲ್ಲಿ ಸಂಘರ್ಷ'

—ಅನಂತರಾಮು ಯೇತ್ರಡ್ಕ.

ಹರಿಹರ ತಾಲೂಕಿನ ಮಲೇಬೆನ್ನೂರಲ್ಲಿ 1920 ನೇ ಇಸವಿಯಲ್ಲಿ, ಕನ್ನಡದ ಕಾದಂಬರಿಕಾರ, ತ.ರಾ.ಸುಬ್ಬರಾಯರು ಜನಿಸಿದರು. ತ.ರಾ.ಸು. ಅವರು ಹುಟ್ಟಿ ಬೆಳೆದ ವಾತಾವರಣ, ಮನೆತನದ ಸಂಸ್ಕೃತಿ, ಅವರ ಪ್ರತಿಭೆಯನ್ನು ಉಜ್ವಲವಾಗಿ ಬೆಳೆಸಲು ಕಾರಣವಾಯಿತು. ಇಪ್ಪತ್ತು. ಇಪ್ಪತ್ತೆರಡರ ಹರೆಯದಲ್ಲೇ ಸುಬ್ಬರಾಯರು ಪತ್ರಿಕೋದ್ಯೋಗಿಯಾಗಿ ಕೆಲಸಕ್ಕೆ ಸೇರಿದರು.

ಪತ್ರಿಕೋದ್ಯೋಗಿಯಾಗಿ ಕನ್ನಡದ ನೆಲದಲ್ಲೆಲ್ಲಾ ಸಂಚರಿಸಿದ ತ.ರಾ.ಸು. ಓದಿ ತಿಳಿಯುವ ಜ್ಞಾನಕ್ಕಿಂತ ಮಿಗಿಲಾದ ಅನುಭವವನ್ನು ಪಡೆದುಕೊಂಡರು.

ರಾಷ್ಟ್ರದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಕ್ರಾಂತಿಯ ಗಾಳಿ, ಬಲವಾಗಿ ಬೀಸುತ್ತಿದ್ದ ಕಾಲದಲ್ಲಿ 'ವಿಶ್ವಕರ್ನಾಟಕ' ದಿನಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡುತ್ತಿದ್ದ ತ.ರಾ.ಸು ಕರ್ನಾಟಕದ ಪ್ರಗತಿಶೀಲ ಪತ್ರಿಕೋದ್ಯೋಗಿ ಎಂಬ ಕೀರ್ತಿಯನ್ನು ಗಳಿಸಿಕೊಂಡರು.ದೀನ ದಲಿತರ,ಸೇವೆಗಾಗಿ, ಏಳ್ಗೆಗಾಗಿ ತಮ್ಮ ಲೇಖನಿಯನ್ನು ಸವೆಸಿದರು. ಸಮಾಜವನ್ನು. ದೀನ, ದಲಿತರನ್ನು, ಶೋಷಣೆ ಮಾಡುವ, ಮುಂದಾಳುಗಳೆಂದೆನಿಸಿಕೊಳ್ಳುವ, ಗೋಮುಖ ವ್ಯಾಘ್ರಗಳಿಗೆ ತ. ರಾ. ಸು. ಸಿಂಹಸ್ವಪ್ನವೇ ಆದರು.

ಕನ್ನಡ ಸಾಹಿತ್ಯದ ವಿವಿಧ ರಂಗಗಳಲ್ಲಿಯೂ. ತ.ರಾ.ಸು. ಅವರ ಹೆಸರನ್ನು ನಾವು ಕೇಳುತ್ತೇವೆ. ಆದರೆ ಅವರು ಯಶಸ್ವಿಯಾದುದು ಕಾದಂಬರಿ ಕ್ಷೇತ್ರದಲ್ಲಿ ಮಾತ್ರ. ಸಾಮಾಜಿಕ ಕಾದಂಬರಿಗಳ ಜೊತೆಗೆ ಕನ್ನಡನಾಡಿನ ಇತಿಹಾಸದ ತುಣುಕುಗಳನ್ನು ಹೆಕ್ಕಿ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ ತ.ರಾ.ಸು.

ವಿವಿಧ ವೃತ್ತಿಗಳನ್ನು ಜೀವನೋಪಾಯಕ್ಕಾಗಿ ಅವಲಂಬಿಸುವ ಸಮಾಜ ಜೀವಿಗಳನ್ನು ತ ರಾ.ಸು. ವಿಮರ್ಶಾತ್ಮಕ ದೃಷ್ಟಿಯಿಂದ ನೋಡುತ್ತಾರೆ. ವ್ಯಕ್ತಿಯೊಬ್ಬನ ಜೀವಿತದ ಬಾಳು ಅಂತರಾಳವನ್ನು ಹೊಕ್ಕು, ಅಲ್ಲೇನಿದೆ ಎಂಬುದನ್ನು ಅರಿತುಕೊಳ್ಳಲು ಯತ್ನಿಸುತ್ತಾರೆ. ಜನರ ಬಾಳಿನ ಒಳ ಹೊರಗನ್ನು. ಆಳವಾಗಿ ಅಭ್ಯಸಿಸಿ, ಲೇಖನಿಯ ಮೂಲಕ ಆ ಬೇವು ಬೆಲ್ಲಗಳನ್ನು ನಮಗೆ ತಿನ್ನಿಸುತ್ತಾರೆ ತ.ರಾ.ಸು.

ಪ್ರಗತಿಶೀಲ ನವ ಸಮಾಜದ ನಿರ್ಮಾಣವಾಗಬೇಕೆಂದು ನಾವೂ ಹೇಳುತ್ತೇವೆ; ತ.ರಾ.ಸು. ಅವರೂ ಹೇಳುತ್ತಾರೆ. ಹಳೆಯ ಸಮಾಜದಲ್ಲಿರುವ ಕುಂದು ಕೊರತೆಗಳೇನು? ಹೊಸ ಸಮಾಜದ ಅವಶ್ಯಕತೆಗಳೇನು? ನವ ಸಮಾಜವನ್ನು ಹೇಗೆ ನಿರ್ಮಾಣ ಮಾಡ ಬಲ್ಲೆವು ? ಎಂಬುದನ್ನು ಅರಿಯಲು ಯತ್ನಿಸಿ, ನಮಗೆ ಕಾದಂಬರಿಗಳ ಮೂಲಕ ತಿಳಿ ಹೇಳುತ್ತಾರೆ ತ.ರಾ.ಸು.

ಸಮಾಜದಲ್ಲಿ ಶ್ರೇಷ್ಠರೆಂದು, ಮುಂದಾಳುಗಳೆಂದು, ತಾವೇ ಸಮಾಜದ ಆಧಾರ ಸ್ತಂಭಗಳೆಂದು ಹೇಳಿಸಿ ಕೊಳ್ಳುವ "ಗೋಮುಖವ್ಯಾಘ್ರಗಳ" ಮುಖವಾಡ ವನ್ನು ನಿರ್ದಾಕ್ಷಿಣ್ಯವಾಗಿ ಸರಿಸುವ ತ.ರಾ.ಸು. ಸಮಾಜ ಕಂಟಕರನ್ನು ನಾಶಮಾಡಿ ಎಂದು ಓದುಗರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಾರೆ.

ನಮ್ಮ ಸಮಾಜದಲ್ಲಿ ಬೀದಿಯೇ 'ಮನೆ'ಯಾಗಿ ಇರುವ ಲಕ್ಷಾಂತರ ಮಂದಿ ಇದ್ದಾರೆ. ಅವರ ಹುಟ್ಟು, ಜೀವನ ಮತ್ತು ಸಾವು, ಎಲ್ಲವೂ ಬೀದಿಯಲ್ಲೇ ನಡೆಯುತ್ತದೆ.

ಬೇಡುವುದು, ವಂಚಿಸುವುದು, ಕಳ್ಳತನ ಮಾಡುವುದು, ಕೊಲೆ ಸುಲಿಗೆಗಳನ್ನು ಮಾಡುವುದೇ ಮೊದಲಾದ ಕೆಟ್ಟಚಾಳಿಯಿರುವ, ಈ ಲಕ್ಷಾಂತರ ದರಿದ್ರರು, ಸಮಾಜಕ್ಕೆ ಕಂಟಕರಾಗಿ, ಕೊನೆಯುಸಿರೆಳೆಯಬೇಕೇ ? ಇವರು ಒಳ್ಳೆಯವರೆಂದೆನಿಸಿ, ಸಾಯಬಾರದೆ ? ಎಂದು ನಮಗನ್ನಿಸುತ್ತದೆ.

ಮಾನವ ಸಹಜವಾದ ಕರುಣೆ, ಪ್ರೀತಿ, ಆತ್ಮೀಯತೆಯ, ಸಾಂತ್ವನದ, ಸ್ನೇಹ ಪೂರ್ಣವಾದ ನಾಲ್ಕು ಮಾತುಗಳು, ಈ ಬೀದಿ ಭಿಕಾರಿಗಳನ್ನು, ನರಕದಿಂದ–ಸ್ವರ್ಗಕ್ಕೆ, ಪಶು ಜೀವನದಿಂದ–ಮಹಾಮಾನವತೆಗೆ, ಏರಿಸಲು ಸಾಕಾಗಬಹುದು. ಆದರೂ ಆ ಬಗ್ಗೆ ಯಾರ ಗಮನವೂ ಹರಿಯುವುದಿಲ್ಲ ; ಏಕೆ ?

ಪ್ರೀತಿ, ಕರುಣೆಗಳನ್ನು ದಟ್ಟ ದರಿದ್ರರಿಗೆ ನೀಡಬೇಕೆಂಬ ಅರಿವು ಸಮಾಜಕ್ಕಿಲ್ಲ. ಸಮಾಜದ ಗಣ್ಯರಿಗೂ ಇಲ್ಲ. ಮನುಷ್ಯರಾಗಿ ಹುಟ್ಟಿ ಪಶುವಿನಂತೆ ಬಾಳುವ, ಯಾರಿಗೂ ಬೇಡವಾದ ಈ "ಬೇವಾರ್ಸಿ" ಜನರ ಉದ್ಧಾರ ಸಾಧ್ಯವಿಲ್ಲವೆ ? ಅವರೂ ನಮ್ಮಂತೆ ಬಾಳ ಬೇಕೆಂಬ ಕರ್ತವ್ಯ ಬುದ್ಧಿ, ನಮ್ಮಲ್ಲಿ ಎಷ್ಟು ಜನರಿಗಿದೆ ? ಇದ್ದ ಬುದ್ಧಿಯನ್ನು ಉಪಯೋಗಿಸುವವರು ಎಷ್ಟು ಮಂದಿ ?

ಬೀದಿ ನಾಯಿಗಳ ರಕ್ಷಣೆಗಾಗಿ "ಪ್ರಾಣಿದಯಾ ಸಂಘ" ದಂತಹ ಸಂಸ್ಥೆಗಳನ್ನು ಕಟ್ಟುವಷ್ಟು ಮುಂದುವರಿದ ನಾವು, ಅದೇ 'ಬೀದಿನಾಯಿ' ಗಳೊಡನೆ ಜಗಳಾಡಿ, ಎಂಜಲೆಲೆಯ ಅನ್ನಕ್ಕಾಗಿ ಬಾಯ್ಬಿಡುವ ಮಾನವರನ್ನು ಮಾನವರಂತೆ, ಕಾಣಬೇಕಾದ ಕರ್ತವ್ಯ ಜ್ಞಾನ ನಮಗಿಲ್ಲವೇಕೆ ?

ತ.ರಾ.ಸು. ಅವರು ತಮ್ಮ ಸಾಮಾಜಿಕ ಕಾದಂಬರಿ "ಪುರುಷಾವತಾರ"ದಲ್ಲಿ ಈ ಜ್ವಲಂತ ಸಮಸ್ಯೆಯ, ರುದ್ರ ಚಿತ್ರವನ್ನು ನಮ್ಮ ಕಣ್ಣಮುಂದಿರಿಸಿದ್ದಾರೆ. ಪುರುಷಾವತಾರದ ನಾಯಕ 'ಕಣ್ಣ' ಕಣ್ಣಿದ್ದೂ ಕುರುಡರಂತೆ ನಟಿಸಿ ನಮ್ಮ ಕಣ್ಣನ್ನು ತೆರೆಸುತ್ತಾನೆ.

ಕಣ್ಣ ಬೀದಿಯ ಭಿಕಾರಿ. ತಂದೆ ಯಾರೊ? ತಾಯಿ ಯಾರೊ? ದೇವರೇಬಲ್ಲ. ಯಾರನ್ನೋ ತಾಯಿಯೆಂದು ಪ್ರೀತಿಸಿದ. ಬೀದಿಯಲ್ಲಿ ಬಿಸುಡಿ,ಎಂಜಲೆಲೆಯ ಪಕ್ವಾನ್ನ ವನ್ನೇ ತಿಂದು ಬದುಕಿದ.

ಅವನಂತೆಯೇ ಯಾರ ಪಾಪಕ್ಕೋ, ಹುಟ್ಟಿದ ಹೆಣ್ಣು ಮಗುವೊಂದನ್ನು ತಂಗಿಯೆಂದು ಪ್ರೀತಿಸಿದ. ಎಂಜಲೆಲೆಯ ಪಕ್ವಾನ್ನವನ್ನೇ ಕೊಟ್ಟು ಸಾಕಿದ. ಒಂದು ದಿನ ತಂಗಿಗಾಗಿ ಒಂದು ಹಣ್ಣು ತರಲೆಂದು ಆರು ಕಾಸನ್ನು ಜೋಬಿಗೆ ಸೇರಿಸಿಕೊಂಡು ಹಣ್ಣಿನಂಗಡಿಯ ಬಳಿಗೆ ಬಂದ.

ಆರು ಕಾಸನ್ನು ಸಾಹುಕಾರನಿಗಿತ್ತು 'ಯಾವುದಾದರೊಂದು ಹಣ್ಣುಕೊಡಿ' ಎಂದ.ನೂರಾರು ರೂಪಾಯಿಗಳ ಕೊಳೆತ ಹಣ್ಣುಗಳನ್ನು ಬೀದಿ ಗೆಸೆಯುತ್ತಿದ್ದಸಾಹುಕಾರ, ಒಂದೇ ಒಂದು ಕೊಳೆತ ಹಣ್ಣನ್ನಾದರೂ ಆರು ಕಾಸಿಗೆ ಕೊಡಲಿಲ್ಲ. 'ಥೂ, ಕಳ್ಳ ಸೂ......ಮಗನೆ, ನಿನ್ನಪ್ಪನ ಅಂಗಡಿಯಲ್ಲ ಇದು ; ನಡಿ. ಎಂದು ಕತ್ತಿಗೆ ಕೈ ಹಾಕಿ ದಬ್ಬಿದ. ಮುಸುಡಿಗೆರಡು ಬಾರಿಸಿದ.

ಬೀದಿಯಲ್ಲಿದ್ದ ಜನ ಸೇರಿದರು. ಅವರಲ್ಲಿ ಕೆಲವರು ತಮ್ಮ ಕೈಯ ತೀಟೆಯನ್ನೂ ತೀರಿಸಿದರು. ಮಧ್ಯವರ್ತಿಯಾಗಿ ಪೋಲಿಸಪ್ಪನೊಬ್ಬ ಬಂದು ಹಾಜರಾದ.

'ವಡ್ಡರ ಗ್ಯಾಂಗಿದ್ದ ಹಾಗೆ, ಈ ಮಕ್ಕಳೆಲ್ಲಾ ಕಳ್ಳರೇ. ನಾವು ಸ್ವಲ್ಪ ಎಚ್ಚರ ತಪ್ಪಿದರೆ, ಸಿಕ್ಕಿದ್ದನ್ನ ಹಾರಿಸಿ ಬಿಡ್ತಾರೆ. ನಾನೀಪತ್ತೇನೋ ಹುಷಾರಾಗಿದ್ದೆ. ಸಿಕ್ಕಿಬಿದ್ದ ಬಡ್ಡೀಮಗ.' ಎಂದು ಪೋಲಿಸಪ್ಪನಲ್ಲಿ ಸುಳ್ಳು ಹೇಳಿದ ಸಾಹುಕಾರ; ತನ್ನ ಜಾಣ್ಮೆಯನ್ನು ನೆನೆದು ಮುಗುಳ್ನಕ್ಕ. ಸುತ್ತಲಿದ್ದ ಜನ, ಸಾಹುಕಾರನ ಪರವಾಗಿಯೆ ವಾದಿಸಿದರು.

"ನನ್ನ ಸುತ್ತುನಿಂದವರು ಮನುಷ್ಯರಲ್ಲ,ಮೃಗಗಳು. ನಾನು ಕಳ್ಳತನ ಮಾಡಲಿಲ್ಲ. ಆದರೂ ಇವರ ದೃಷ್ಟಿಯಲ್ಲಿ ಕಳ್ಳ. ಅನ್ಯಾಯವಾಗಿ ಏಟು ತಿಂದ ನನ್ನ ಬಗ್ಗೆ, ಒಬ್ಬರಾದರೂ ಒಂದು ಸಾಂತ್ವನದ ಮಾತನ್ನೂ ಆಡಲಿಲ್ಲ. ಇದೊಂದು ಬಾರಿ ಆಗುವುದೆಲ್ಲಾ ಆಗಲಿ. ಪೋಲೀಸಪ್ಪನ ಕೈಯಿಂದ ಬದುಕಿ ಬಂದರೆ, ಸೇಡಿಗೆ ಸೇಡು ತೀರಿಸಿಕೊಳ್ಳುತ್ತೇನೆ." ಎಂದು ಕಣ್ಣ ನೋವಿನೊಂದಿಗೆ ಹಲ್ಲು ಕಡಿದ.

"ಇವರೆಲ್ಲರ ಮನೆಗೂ ಬೆಂಕಿ ಹಚ್ಚಿ, ಮೈರಕ್ತ ಹೊರ ಬರುವಂತೆ ಸಾಯಬಡಿದು, ಕರುಳು ಬಗೆದು ಕತ್ತಿಗೆ ಮಾಲೆ ಹಾಕಿ ಕೊಳ್ಳುತ್ತೇನೆ", ಎಂದಿತು ಅವನ ಉನ್ಮತ್ತ ಮನಸ್ಸು.

"ಈ ಜಗತ್ತಿನಲ್ಲಿ ನನ್ನ, ನನ್ನಂತಹರಪಾಲಿಗೆ, ಸತ್ಯ, ಕರುಣೆ, ಪ್ರೀತಿ, ಒಂದೂ ಇಲ್ಲ. ಇವರಿಗೆ ಬೇಕಾದುದು ನಮ್ಮ ರಕ್ತ. ಇವರ ರಕ್ತವನ್ನೇ ಇವರಿಗೆ ಕುಡಿಸುತ್ತೇನೆ." ಹಲ್ಕಡಿದು ಶಪಥ ಹಾಕಿ ಕೊಂಡ ಕಣ್ಣ.

ಸಮಾಜದ ಗಣ್ಯರು, ಇಂತಹ ಒಳ್ಳೆಯವರನ್ನು, ಕೆಟ್ಟವರನ್ನಾಗಿ ಮಾಡುತ್ತಾರೆ, ಎಂಬುದಕ್ಕೆ "ಪುರುಷಾವತಾರದ ಕಣ್ಣ" ಒಂದು ಉತ್ತಮ ಉದಾಹರಣೆ,

ಪೋಲೀಸರಲ್ಲಿಯೂ ಹೃದಯವಿದ್ದವರು ಇದ್ದಾರೆ, ಎಂಬುದಕ್ಕೆ ಕಣ್ಣನನ್ನು ಎಳೆದುಕೊಂಡು ಹೋದ, ಪೋಲೀಸಪ್ಪನೂ ಯೋಗ್ಯ ಉದಾಹರಣೆ,

"ತೊಟ್ಟಿಗಳಲ್ಲಿ ನಾಯಿಗಳ ಹಾಗೆ ತಿನ್ನೋರನ್ನ, ಜನ ನಾಯಿಗಳನ್ನ ಕಂಡ ಹಾಗೆ ಕಾಣುತ್ತಾರೆ. ಗೌರವ ಕೊಡೋದಿಲ್ಲ. ಬದಲು ಬಡೀತಾರೆ. ಬೈಯುತ್ತಾರೆ. ಇವಕ್ಕಿಂತ ಮೂಟೆ ಹೊತ್ತು ಬದುಕುವುದು ಮೇಲಲ್ಲವೇ ಕಣ್ಣ. ನೀನು ಗಂಡಸು ಮಗ ಅಲ್ವ?" ಪೋಲೀಸಪ್ಪನ ಮಾತುಗಳು ಕಣ್ಣನ ಜೀವನದ ಗತಿಯನ್ನೆ ಬದಲಾಯಿಸಿತು. ಅವನ ಆತ್ಮದಲ್ಲಿದ್ದ ಪಶುತನವನ್ನ ಮಾನವತೆಗೆ ಪರಿವರ್ತನೆ ಮಾಡಿತು.

"ನಾನು ನಾಯಿಯಲ್ಲ; ಗಂಡಸು." ತನಗೆ ತಾನೇ ಹೇಳಿಕೊಂಡ ಕಣ್ಣ.

"ಇಂದು ನಾನು ಗಂಡಸು. ನಾನು ದುಡಿಯುತ್ತೇನೆ. ದುಡ್ಡು, ತಿನ್ನೋಕೆ ತರ್ತೀನಿ. ಇನ್ನು ಮುಂದೆ ನೀನು ಎಂಜಲು ತೊಟ್ಟಿಯ ಅನ್ನ ತಿನ್ನಬಾರದು." ತಂಗಿಯೆಂದು ಪ್ರೀತಿಸಿದ ಇಂದಿರಾಗೆ ತನ್ನ ನಿರ್ಧಾರದ ಆಜ್ಞೆಯನ್ನು ತಿಳಿಸಿದ ಕಣ್ಣ.

ಇಂತಹ ನೂರಾರು ಸನ್ನಿವೇಶಗಳು ತ.ರಾ.ಸು. ಅವರ 'ಪುರುಷಾತಾವರ'ದಲ್ಲಿ ಕಾಣಸಿಕ್ಕುತ್ತದೆ. ಕಾದಂಬರಿಯು ಓದುಗನನ್ನು ಓದಿಸಿಕೊಂಡು ಹೋಗುತ್ತದೆ. ಸರಳವಾದ ಶೈಲಿ, ತ.ರಾ.ಸು. ಅವರಿಗೆ ಒಲಿದು ಬಂದಿದೆ. ಆಳವಾದ ಅನುಭವವಿದೆ. ಬೀದಿಯ ಭಿಕಾರಿಗಳ ಮೇಲೆ ತಾತ್ಸಾರದ ಬದಲು, ಅನುಕಂಪವಿದೆ. ತಾತ್ಸಾರ ತೋರುವ ಸಮಾಜದ ಮೇಲೆ ಕ್ರೋಧವೂ ಇದೆ. ಈ ಕಾದಂಬರಿ ತನ್ನ ಉದ್ದೇಶವನ್ನು ನಿರೂಪಿಸುವುದರಲ್ಲಿ ಸಫಲವಾಗಿದೆ.

ಭಾವಜೀವಿಯಾಗಿ, ರಾಗಜೀವಿಯಾಗಿ, ಬಾಳಿದ ಕಲಾವಿದನೊಬ್ಬನ, ಬಾಳ ಭವನಕ್ಕೆ ಹೆಣ್ಣೊಂಬ ಉರಿಸೋರೆ, ಬಾಳಿನ ಆದರ್ಶದ, ಕಣ್ಣನ್ನು ಕಳೆದುಕೊಂಡು, ಕುರುಡಾದ ಕಲಾವಿದನೊಬ್ಬನ ಬಾಳ ಕತೆ "ಪಾರಿಜಾತ.

ಪಾರಿಜಾತದ ನಾಯಕ ಸದಾಶಿವನಿಗೆ, ಎಲ್ಲರಂತೆ ಬಾಳಿಬದುಕಿ, ಹೆಸರುಳಿಸಿ ಸಾಯಬೇಕೆಂಬ ಬಯಕೆ ಇತ್ತು. ಆದರೆ ಆ ಆಸೆ ಈಡೇರಲಿಲ್ಲ.

ಸಂಗೀತ, ನಾಟಕದಲ್ಲಿ ಅಭಿರುಚಿ ಇದ್ದ ಸದಾಶಿವನಿಗೆ, ಅವನ ತಂದೆ ತಾಯಿಯರಿಂದ ಪ್ರೋತ್ಸಾಹವೂ ದೊರಕಿತ್ತು.

"ಅವನ ಜನ್ಮಕ್ಕೆ ತಾನು ನಿಮಿತ್ತ. ಅವನ ಬುದ್ಧಿಗೆ ಅಧ್ಯಾಪಕರು ನಿಮಿತ್ತ. ಅವನ ಬಾಳು ಅವನ ಕೈಯಲ್ಲಿ. ಅವನ ಜೀವನ ಅವನ ಹೊಣೆಗಾರಿಕೆ. ನನ್ನಂತೆಯೇ ನನ್ನ ಮಗನೂ ಮನೆತನದ ಮರ್ಯಾದೆಯನ್ನು ಕಾಪಾಡಬೇಕೆಂಬುದು ನನ್ನ ಬಯಕೆ." ಎಂದು ಬಗೆಯುತ್ತಿದ್ದ ಅವನ ತಂದೆ– ಸಂಗೀತ, ನಾಟಕ, ಓದುವಿಕೆಗೆ ಅಡ್ಡ ಬರಲಿಲ್ಲ, ನೃತ್ಯ ಕಲಿಯಬೇಕೆಂಬಾಸೆಗೆ ಯೋಗ್ಯ ನೃತ್ಯಗಾತಿಯನ್ನು ಒದಗಿಸಿ ಕೊಟ್ಟರು.

"ಪ್ರತಿಯೊಬ್ಬರಿಗೂ ಅವರವರ ಮನೋಧರ್ಮ ಪ್ರತ್ಯೇಕವಾಗಿಯೇ ಇದೆ. ಪ್ರವೃತ್ತಿಪಿಪಾಸೆಗಳಿಗೆ ಅನುಗುಣವಾಗಿ, ಆದರ್ಶವನ್ನು ರೂಪಿಸಿಕೊಳ್ಳುವ ಅಧಿಕಾರ ಎಲ್ಲರಿಗೂ ಇದೆ. ಬೇರೆಯವರ ಆದರ್ಶ, ನಮ್ಮದಾಗಬೇಕೆಂಬ ಕಡ್ಡಾಯವೂ

ಇರಬಾರದು. ನಮ್ಮ ಸ್ವಂತ ಮನೋಧರ್ಮಕ್ಕೆ ಸರಿದೂಗುವ ಆದರ್ಶ ಬೇರೆಯವರಲ್ಲಿದ್ದರೆ, ಅವನ್ನು ನಾವು ಅಳವಡಿಸಿಕೊಳ್ಳುವುದೂ ಸಹಜ. ಆದರೆ ನಮ್ಮ ಆದರ್ಶವನ್ನು ನಮ್ಮದನ್ನಾಗಿಯೇ ಉಳಿಸಿಕೊಳ್ಳಬೇಕು. ಜನರ ಪ್ರೀತಿ, ವಿಶ್ವಾಸ ಎಲ್ಲ "ಮೈಯ-ಮಟ್ಟದಲ್ಲೇ ಉಳಿಯುತ್ತದೆ. ಆದರೆ ಈ ಮೈಯೊಳಗೆ ಅಡಗಿರುವ ಆತ್ಮವನ್ನು ಯಾರೂ ನೋಡುವುದಿಲ್ಲ. ನಾವು ನಮ್ಮ ಆತ್ಮಕ್ಕೆ ವಂಚನೆ ಮಾಡಬಾರದು. ಅದು ಅಂದರೆ ನಮ್ಮ ಆತ್ಮ ಚೆನ್ನಾಗಿದ್ದರೆ ನಮಗೆ ಈ ಲೋಕದ ಚಿಂತೆಯೇ ಇಲ್ಲ. ಆದುದರಿಂದ ನಿನ್ನ ಬಾಳನ್ನು, ನಿನ್ನ ಮನೋಧರ್ಮಕ್ಕೆ ಅನುಸರಿಸಿ, ನೀನೇ ರೂಪಿಸಿಕೊಳ್ಳಬೇಕು" ಎಂದು ಸದಾಶಿವನಿಗೆ ಸದಾ ಹೇಳುತ್ತಿದ್ದವರು, ಅವನ ಪ್ರೀತಿಯ ಅಧ್ಯಾಪಕ ಶ್ರೀ ಗುರುರಾಯರು. ಅವರು ಅವನ ಬಾಳಿಗೆ ದೀಪವಾಗಿದ್ದರು.

ಲಕ್ಷ್ಮಮ್ಮಸಾನಿ ಎಂಬ ಸೂಳೇಗೇರಿಯ ಮುದಿ ಹೆಣ್ಣು. ಸದಾಶಿವನಿಗೆ ನೃತ್ಯಾಭ್ಯಾಸವನ್ನು ಕಲಿಸಿ ಕೊಟ್ಟಳು. ಮೂರು ದಿನಕೊಮ್ಮೆ ಗರಡಿಯವರನ್ನು ಕರೆಸಿ, ಮೈಗೆ ಎಣ್ಣೆ ತಿಕ್ಕಿಸಿ, ಬಿಸಿನೀರು ಹಾಕಿಸಿ, ಉಪಚಾರ ಮಾಡಿಸುತ್ತಿದ್ದ ಸಾನಿ, ಪ್ರತಿದಿನವೂ ಅರ್ಧ ಸೇರು ಮಸಾಲೆ ಹಾಕಿದ ಆಕಳ ಹಾಲನ್ನು ಕುಡಿಸುತ್ತಿದ್ದಳು. ಈ ಉಪಚಾರಕ್ಕೆ ಆಕೆ ಬೇರೆ ಹಣ ಪಡೆಯುತ್ತಿರಲಿಲ್ಲ.

ಲಕ್ಷ್ಮಮ್ಮಸಾನಿಯ ನೀತಿ ಕೆಟ್ಟಿದ್ದರೂ, ನಿಯತ್ತು ಕೆಟ್ಟಿರಲಿಲ್ಲ. ಹಣಕ್ಕಾಗಿ ಆಕೆ ನೃತ್ಯವನ್ನು ಕಲಿಸುತ್ತಲೂ ಇರಲಿಲ್ಲ.

"ಅಯ್ಯೋ ಚೆಂದಾಗಿ ಕಲಿತು, ಸರಸ್ವತೀ ತಾಯೀನ ಉದ್ಧಾರ ಮಾಡಿ ಹೇಳಿಕೊಟ್ಟೋರ ಹೆಸರುಳ್ಸಿದರೆ.ನಾನು ಕಲ್ಸಿದ ವಿದ್ಯಾ ನಾಲ್ಕು ಜನರಿಂದ ಚೆನ್ನಾಗಿದೇಂತ ಹೇಳ್ಸಿದರೆ, ನನ್ನ ಶ್ರಮ ಸಾರ್ಥಕಾ ಆಯ್ತು" ಎಂದು ವಿಶ್ವಾಸದಿಂದ ಹೇಳಿದ್ದಳು.

ವಿಶ್ವಾಸಕ್ಕೆ ಅನ್ಯಾಯವಾದಾಗ, ಸಾನಿಯ ಸೊಸೆಯನ್ನು ಸದಾಶಿವ ಬಲಾತ್ಕಾರದಿಂದ ಕೆಡಿಸಿದ ಎಂದು ಆ ಹುಡುಗಿ ಹೇಳಿದಾಗ, "ಹಾಲು ಹಾಕಿದ್ದೂ, ವಿಷ ಕಾರ್ತಾರೆ ಈ ಜನ. ಒರೋರೆಲ್ಲಾ ಲಾಡಿ ಬಿಚ್ಚೋರೆ. ಇದು ಸೂಳೇ ಮನೆ. ಇಲ್ಲಿ ಸರಸ್ವತಿ ತಾಯಿ ಇರಬಾರ್ದು" ಎಂದು ಕೆರಳಿ ಕೆಂಡವಾಗ್ತಾಳೆ. ತನ್ನ ತಂಬೂರಿಯನ್ನ ನೆಲಕ್ಕಪ್ಪಳಿಸಿ, ಪುಡಿ ಪುಡಿ ಮಾಡ್ತಾಳೆ.

"ನೀವಿನ್ನು ಹೊಂಟೋಗ್ರಿ ಅಯ್ಯ. ಈ ಮನೆ ಹೊಸ್ಲು ತುಳಿಬ್ಯಾಡ್ರಿ. ನಿಮ್ಮಪ್ಪಾ ಅವರು ದೇವ್ರಂಥೋರು. ಅಂಥೋರ ಹೊಟ್ಟೇಲಿ ನಿಮ್ಮಂಥೋರು ಹುಟ್ಬಾರ್ದು. ನಿಂತ್ಕೋಬೇಡಿ. ಹೊಂಟೋಗಿ" ಎಂದು ಸದಾಶಿವನ ಮುಖಕ್ಕೆ ಗೆಜ್ಜೆಯನ್ನೆಸೆದು ಅಳುತ್ತಾಳೆ ಲಕ್ಷ್ಮಸಾನಿ.

"ಗಂಡಿಂಗೆ ಹೆಣ್ಣಾಗಿ ಕಾಡಿತ್ತು ಮಾಯೆ" ವಚನಗಾರರ ಮಾತು. ಸದಾಶಿವನ ಪಾಲಿಗೆ ಸತ್ಯವಾಯ್ತು.

ಇತ್ತ ಲಕ್ಷ್ಮಸಾನಿಯ ಸೊಸೆ, ಅತ್ತ ಮಂಗಳೂರಿನ ಮನೋರಮೆ, ಇಬ್ಬರೂ ಸದಾಶಿವನಿಗೆ ದ್ರೋಹ ಮಾಡಿದ್ದರು. ವಂಚನೆ ಮಾಡಿದ್ದರು. ಆದರೆ ಆತನ ನೃತ್ಯ ಕಲೆಗೆ, ಈ ಇಬ್ಬರು ಮಾಯಾವಿನಿಯರೂ, ಪ್ರೇರಕ ಶಕ್ತಿಯಾಗಿ, ಅದ್ಭುತ ಪ್ರಭಾವ ಬೀರಿ, ಆತನ ಸುಪ್ತ ಪ್ರತಿಭೆಯನ್ನು ಜೀವಂತ ಬೆಳಗಿಸಲು ಕಾರಣರೂ ಆಗಿದ್ದರು.

ಆದರ್ಶ ಮತ್ತು ಪ್ರೇಮದ ಬಗ್ಗೆ ಸದಾಶಿವನಿಗೆ ಘೋರ ನಿರಾಶೆ ಮೂಡಿತ್ತು. ಸ್ತ್ರೀಯರ ಮೇಲಿರಬೇಕಾದ ಪೂಜ್ಯ ಮನೋಭಾವ ಆತನಿಂದ ತೊಲಗಿ ಹೋಗಿತ್ತು. ಆತ ಸ್ತ್ರೀ ದ್ವೇಷಿಯಾಗಿದ್ದ. ಪರಿಸ್ಥಿತಿ ಆತನನ್ನು ಹಾಗೆ ಮಾಡಿತ್ತು.

ತ.ರಾ.ಸು. ಅವರು ಈ ಕಾದಂಬರಿಯಲ್ಲಿ ಸಾಧಿಸಬೇಕೆಂದು ಎಣಿಸಿದ್ದು ಸಾರ್ಥಕವಾಗಲಿಲ್ಲ. ಇಲ್ಲಿ ಯಾವ ಆದರ್ಶವೂ ಪಕ್ವವಾಗಿ ಪರಿಣಮಿಸಿಲ್ಲ. ಸಮಾಜದ ಮೇಲ್ಮೆಗಾಗಿ ಯಾವ ನೀತಿ ನಿರೂಪಣೆಯೂ ಇಲ್ಲಿ ಹೃದಯಂಗಮವಾಗಿ ಚಿತ್ರಿತ ವಾಗಲಿಲ್ಲ. ಸಂಭಾಷಣೆಯಲ್ಲಿ ಬಿಗುವೂ, ಶೈಲಿಯಲ್ಲಿ ಲಾಲಿತ್ಯವೂ ಇಲ್ಲದ "ಪಾರಿಜಾತ" ಯಾರದೋ ಒತ್ತಾಯಕ್ಕೆ ಅವಸರ ಅವಸರವಾಗಿ ಗೀಚಿದ ಕಾದಂಬರಿ ಯೆಂದು ಓದುಗನಿಗೆ ಅನಿಸುತ್ತದೆ.

'ನಂಬಿಕೆಯೂ ಶ್ರದ್ಧೆಯೂ ಇಲ್ಲದೆ ಬದುಕುವುದೇ ಸಾಧ್ಯವಿಲ್ಲ. ಅದಿಲ್ಲದ ಬಾಳು ಅಂಬಿಗನಿಲ್ಲದ ದೋಣಿ".

ಲೀಲಾವತಿಗೆ ತಾಯಿತನದ ಕನಸು, ಫ್ಲೋರಾಗೆ ಯೇಸು ಸ್ವಾಮಿಯ ಅನುಗ್ರಹದ ಕನಸು. ಶಾಲಿನಿಗೆ ಸಮತಾವಾದದ ಕನಸು.

ಅವರವರ ಹಾದಿಯಲ್ಲಿ, ನೋವು, ದುಃಖಗಳಿಂದ ಬಿಡುಗಡೆಯಾಗಬೇಕೆಂದು ಅವರವರು ಬೇರೆ ಬೇರೆಯಾಗಿಯೇ ಹೋರಾಟ ನಡೆಸುತ್ತಾರೆ. "ಪುರುಷನ ಗುಲಾಮಗಿರಿಯಿಂದ ಬಿಡುಗಡೆಯಾಗಬೇಕು. ಹೆಣ್ಣು ಗಂಡು ಸಮಾನತೆಯಿಂದ ಬಾಳಿ ಬದುಕುವ ಸ್ವಾತಂತ್ರ್ಯ ಬೇಕು", ಎಂದು ಬಯಸಿ ಬಂದ ಹೆಣ್ಣು ಪ್ರಭಾವತಿ.

ಆದರೆ ಯಾರಿಗೂ ಬಿಡುಗಡೆಯೇ ಇಲ್ಲ. ಎಲ್ಲರನ್ನೂ ಬಿಡುಗಡೆ ಇಲ್ಲದ ಬೇಡಿ ಬಂಧಿಸಿತ್ತು.

ತ.ರಾ.ಸು. ಅವರು ಹೆಣ್ಣಿನ ಹಲವು ತರದ ಬಯಕೆಗಳನ್ನು ಅರಿತಿದ್ದಾರೆ. ಸಬಲೆಯರಾಗಲು ಪ್ರಯತ್ನಿಸಿದ ಎಲ್ಲ ಹೆಣ್ಣುಗಳೂ, ಒಂದಲ್ಲ ಒಂದುದಿನ ಅಬಲೆ ಯರೇ ಆಗುತ್ತಾರೆ, ಎಂಬ ಚಿರನೂತನ ಸತ್ಯವನ್ನು ಆಳವಾಗಿ ಅಭ್ಯಸಿಸಿ, ವಿಮರ್ಶೆ ಮಾಡಿ, "ಬಿಡುಗಡೆಯ ಬೇಡಿ" ಎಂಬ ಕಾದಂಬರಿಯನ್ನು ಬರೆದಿದ್ದಾರೆ.

"ಜೀವಿಯ ಜೀವನದಲ್ಲಿ ನಾನಾತರದ ಕಷ್ಟಗಳು ಬಂದೇ ಬರುತ್ತದೆ. ಆ ಕಷ್ಟ ಗಳಿಗೆ ಹೆದರಿ, ಮುದುಡಿ ಕುಳಿತರೆ, ಬಾಳಲು ಸಾಧ್ಯವೇ ಇಲ್ಲ. ಹೆದರಿಸುವವರನ್ನು ಮತ್ತಷ್ಟು ಹೆದರಿಸುತ್ತದೆ ಜೀವಿಯ ಜೀವನ."

"ಗಂಡು – ಹೆಣ್ಣು ಸಮಾನತೆಯಿಂದ ಬಾಳಿ ಬದುಕಬೇಕು. ಹೆಣ್ಣು – ಗಂಡಿನ ಗುಲಾಮಳಲ್ಲ. ಗಂಡಿನಂತೆ ಹೆಣ್ಣಿಗೂ ಸಾತಂತ್ರ್ಯಬೇಕು. ಆಕೆಯ ಬಾಳನ್ನು ಆಕೆ ರೂಪಿಸಿಕೊಳ್ಳುವಾಗ, ಗಂಡನೆಂದೆನಿಸಿದವನು ಅಲ್ಲಿ, ಅನ್ನದಲ್ಲಿ ಬೆರೆತ ಕಲ್ಲಿನಂತೆ ತಡೆಯಾಗಿ ಬರಬಾರದು" ಬೆಂಗಳೂರಿನ ಹೆಣ್ಣು ಪ್ರಭಾವತಿಯ ಆಶಾ ಸೌಧ ಹಾಗಿತ್ತು.

ಒಲಿದ ಗಂಡಿನ ಜೊತೆಗೂಡಿ, ಬೊಂಬಾಯಿಗೆ ಬಂದ ಪ್ರಭಾವತಿ ಸಂಸಾರ ಹೂಡುತ್ತಾಳೆ. ಲೀಲಾವತಿ ತಾಯಿಯಂತೆ ಆಕೆಯನ್ನು ಪ್ರೀತಿಸುತ್ತಾಳೆ. ಆದರೆ, ಕಾಮದ ಕಾವು ಕಡಮೆಯಾದಾಗ, ಜೀವನದ ಕಹಿ ಅನುಭವದ ಬಿಸಿ ಏರಿದಾಗ ಗಂಡು ಹೆಣ್ಣನ್ನು ಗುಲಾಮಗಿರಿಗೆ ನಿಧಾನವಾಗಿ ತಳ್ಳುವ, ಸತ್ಯದ ಬೆಳಕು ಗೋಚರಿಸುತ್ತದೆ.

ಗಂಡನನ್ನು ಬಿಟ್ಟು, ನೌಕರಿಗೆ ಸೇರಿ, ಸ್ವತಂತ್ರ ಜೀವನ ನಡೆಸಲು ಯತ್ನಿಸಿದ ಪ್ರಭಾ, 'ಹೆಣ್ಣು ಹೂಗಳಿಗೆಲ್ಲಾ, ಗಂಡಿನ ಅಗ್ನಿಕುಂಡವೇ ಸಮಾಧಿ' ಎಂಬ ಬಾಳ ಸತ್ಯವನ್ನು ತಿಳಿದುಕೊಳ್ಳಲೂ, ಹೆಚ್ಚು ಸಮಯ ಬೇಕಾಗಿ ಬರಲಿಲ್ಲ. ಗಂಡಿನ ಗುಲಾಮಗಿರಿಯಿಂದ, ಕಾಮುಕರ ಕಾಮದ ಕಣ್ಣುಗಳಿಂದ ಬಿಡುಗಡೆಯೇ ಇಲ್ಲವೆಂಬ ಅನುಭವವೂ ಆಯಿತಂ ಪ್ರಭಾವತಿಗೆ.

ಪ್ರಭಾವತಿಯ ಗೆಳತಿ, ಫ್ಲೋರಾ, ಕ್ರಿಶ್ಚಿಯನ್ ಹೆಣ್ಣು, ಗಂಡು ಬೀರಿ. ಲೀಲಾವತಿಯೂ ಆಕೆಯ ಗೆಳತಿ, ಶಾಲಿನಿಯೂ ಆಕೆಯ ಗೆಳತಿ. ಸಿಗರೇಟು ಸೇದುವುದು, ಬೇಕಾದಷ್ಟು ಕುಡಿಯುವುದು ಆಕೆಯ ಹವ್ಯಾಸ.

"ಪ್ರಭಾ, ಸ್ವತಂತ್ರ ಜೀವನವನ್ನು ಮಾಡಿ, ತಾನೊಂದು ಮಹತ್ಕಾರ್ಯ ಮಾಡಿದೆನೆಂದು ನೀನು ಭಾವಿಸುತ್ತಿ. ಆದರೆ ಜಗತ್ತು ನಿನ್ನನ್ನು ತಾತ್ಸಾರದಿಂದ ಕಾಣುತ್ತದೆ ಎಂಬುದನ್ನ ಮರೆಯಬೇಡ. ಜಗತ್ತು ನಿನಗೇನು ಬೆಲೆ ಕಟ್ಟಿದೆಯೆಂದು ತಿಳಿದುಕೊ. ಜಗತ್ತಿಗೂ ನೀನೂ ಅಷ್ಟೇ ಬೆಲೆಯನ್ನು ಕೊಟ್ಟರೆ ಸಾಕು."

"ನನಗೆ ಯಾವುದರ ಬಗ್ಗೆಯೂ ಭ್ರಮೆ ಇಲ್ಲ ಎಂತಲೇ ನಿರಾಶೆಯೂ ಇಲ್ಲ. ಈ ಜಗತ್ತು ಕಂಬನಿಯ ಕಾಸಾರ. ಇದರಲ್ಲಿ ಮುಳುಗಿ ಸುಖ ಪಡುವುದು ಸಾಹಸದ ಕೆಲಸ. ಸ್ವಾತಂತ್ರ್ಯವೆನ್ನುವುದು ಬಿಡುಗಡೆಯಲ್ಲ ಬಂಧನ."

"ಪುರುಷರಿಗೆ ತಾವೇ ಶ್ರೇಷ್ಠರೆಂಬ, ತಾವೇ ಯಜಮಾನರೆಂಬ, ಪ್ರತಿಷ್ಠೆ ಇರುವ ತನಕ, ಆ ಪ್ರತಿಷ್ಠೆ ಉರಿದು ಬೂದಿಯಾಗುವ ತನಕ, ಸ್ತ್ರೀಗೆ ಪುರುಷದ್ವೇಷ ಇರಲೇಬೇಕು. ಈ ಜಗತ್ತಿಗೆ ಒಳ್ಳೆಯದಾಗಬೇಕಾದರೆ, ಸ್ತ್ರೀಪುರುಷರ ಅಧಿಕಾರಗಳಲ್ಲಿ, ಅಂತರವಿರಬಾರದು."

"ಗಂಡೂ ಅನ್ನಿಸಿಕೊಂಡವನು ಹೆಣ್ಣಿನ ಹೃದಯದಲ್ಲೇನಿದೆಯೆಂದು ತಿಳಿದುಕೊಳ್ಳಲು ಯತ್ನಿಸುವುದಿಲ್ಲ. ಆತನಿಗೆ ಹೆಣ್ಣಿನ ಹೃದಯ ಬೇಡ. ಮೈ ಬೇಕು, ರೂಪ ಬೇಕು. ಈ ರೂಪಯಜ್ಞದಲ್ಲಿ ಯಾವ ಹೆಣ್ಣೂ ಉಳಿಯುವುದಿಲ್ಲ ಪ್ರಭಾ. ಉರಿದು

ಹೋಗುವುದೇ ಗುರಿಯಾಗಿರುವಾಗ ತಲೆ ಮುಂದಾಗಿ ಉರಿದರೇನು? ಕಾಲು ಮುಂದಾಗಿ ಉರಿದರೇನು?"

"ಗಂಡು ಹತ್ತು ಹಲವು ಹೆಂಗಸರ ಮೈಯ ರುಚಿಯನ್ನು ನೋಡುವುದು ಸಾಧ್ಯವೂ, ಸಭ್ಯತೆಯೂ ಆದರೆ ಹೆಣ್ಣು ಮನಬಂದವನ ಜೊತೆ ಯಾಕೆ ಹೋಗ ಬಾರದು? ಈ ಜಗತ್ತಿನಲ್ಲಿ ಗಂಡನ್ನು ಗಂಡಾಗಿಯೇ ಇದಿರಿಸಬೇಕು ಪ್ರಭಾ. ಗಂಡು ಹೆಣ್ಣನ್ನು ನಡೆಸಿಕೊಂಡಂತೆ ಹೆಣ್ಣು ಗಂಡನ್ನೂ ನಡೆಸಿಕೊಳ್ಳಬೇಕು."

"ಗಂಡಿನಿಂದ ಕಾಮತೃಪ್ತಿ ಪಡೆದು, "ಇದೋ! ನೀನು ನನ್ನನ್ನು ತೃಪ್ತಿ ಪಡಿಸಿದೆಯಲ್ಲ! ಇದು ಆ ತೃಪ್ತಿಯ ಬೆಲೆ "ಎಂದು ಹಣವನ್ನು ಅವನ ಮುಖಕ್ಕೆ ಎಸೆದು, "ಹೂಂ ನಡಿ" ಎಂದು ಹೊರಗಟ್ಟಬೇಕು.

"ಇವರು ಬೀದಿಯ ವೇಶ್ಯೆಯರು, ಕುಲಟೆಯರು. ಮೈಮಾರುತ್ತಾರಲ್ಲಾ ಅವಕ್ಕೇ ಇವರಿಗೆ ಈ ಹೆಸರು ಗಂಡಿನಿಂದ ಬಂದಿದೆ. ಆದರೆ ಇವರ ಮೈ ಕೊಳ್ಳು ವವನು ಗಂಡಸು! ಸಭ್ಯ ಗೃಹಸ್ಥ, ದೊಡ್ಡ ಮನುಷ್ಯ, ಈ ವಿಪರ್ಯಾಸ ಹೋಗ ಬೇಕು ಪ್ರಭಾ. ಗಂಡಸು ತನ್ನ 'ರೂಪದ ಬೂಟು ನೆಕ್ಕುವ ನಾಯಿ' ಇದು ನನ್ನ ಅನುಭವದ ತೀರ್ಮಾನ ಪ್ರಭಾ."

"ಪ್ರಭಾ ನನಗೆ ಪುರುಷನ ಪ್ರೇಮ ಬೇಕಾಗಿಲ್ಲ. ಆತನ ಮೇಲೆ ಪ್ರತೀಕಾರ ಬೇಕಾಗಿದೆ. ಹೆಣ್ಣಿನ ಆತ್ಮವನ್ನೂ, ಮೈಯನ್ನೂ, ಸದಾ ಕೊಲ್ಲುತ್ತಿರುವ ಪುರುಷರಲ್ಲಿ, ಆತ್ಮೀಯತೆಗೆ ಅವಕಾಶವೇ ಇಲ್ಲ. ಎಲ್ಲೋ ಬೆರಳೆಣಿಕೆಯ ಕೆಲವು ಮಂದಿ, ಸ್ತ್ರೀಯರ ಪ್ರೇಮಕ್ಕೊ 'ಕಾಮಕ್ಕೊ'ಬೇಕಾಗಿ, ಸಾಯುತ್ತಾರೆ. ಸತ್ತರೆ ಸಾಯಲಿ...."ಫ್ಲೋರಾಳ ಪುರುಷದ್ವೇಷ ಅಚಲವಾಗಿತ್ತು.

"ಪ್ರಭಾ ನಾನು ನನ್ನ ಹೃದಯವನ್ನು ಆತನಿಗೆ ಅರ್ಪಿಸಿದ್ದೇನೆ. ಅವನೇ ಯೇಸುಸ್ವಾಮಿ. ಅಥವಾ ನಿನ್ನ ಹರನೊ? ಹರಿಯೊ? ಯಾರೋ ಒಬ್ಬ. ಪ್ರಭಾ ನನ್ನ ಈ ದ್ವೇಷಕ್ಕಾಗಿ, ನಾನು ಮಾಡುತ್ತಿರುವುದು ಪಾಪವೆಂಬುದನ್ನು ನಾನೂ ಬಲ್ಲೆ. ಆದುದರಿಂದಲೇ ಆತನನ್ನು ಪ್ರೀತಿಸುತ್ತೇನೆ. ಪುಣ್ಯಾತ್ಮರು ಆತನನ್ನು ಹುಡುಕಿ ಕೊಂಡು ಹೋಗುತ್ತಾರೆ. ಆದರೆ ನನ್ನಂತಹ ಪಾಪಿಗಳನ್ನು ಹುಡುಕಿಕೊಂಡು ಆತನೇ ಬರುತ್ತಾನೆ. ಪಾದ್ರಿಗಳು ಕಂಡದ್ದು ಆತನ ನೆರಳನ್ನು. ಚರ್ಚಿನಲ್ಲಿರುವುದು ಆತನ ಹೆಣ, ಆದರೆ ಆತ ನನ್ನ ಹೃದಯದಲ್ಲಿ ಜೀವಂತವಾಗಿ ಬಂದು ನೆಲೆಸಿದ್ದಾನೆ." ಫ್ಲೋರಾಳ ಹೃದಯದ ಆಳವಲ್ಲಿ ದೇವರ ಬಗ್ಗೆ ನಂಬಿಕೆಯೂ ಇತ್ತು. ಧರ್ಮಾಂಧರ ಬಗ್ಗೆ ದ್ವೇಷವೂ ಇತ್ತು. ಹಾಗೆಯೇ ಹೆಣ್ಣಿನ ಬಗ್ಗೆ ಅನುಕಂಪವೂ ಇತ್ತು.

'ಫ್ಲೋರಾ' ತ.ರಾ.ಸು. ಅವರ ಲೇಖನಿ ಚಿತ್ರಿಸಿದ ಜೀವಂತ ಚಿತ್ರ. ಸಮಾಜದ ರಕ್ತದಲ್ಲಿ ತನ್ನ ಹರಿತವಾದ ಲೇಖನಿಯನ್ನು ಮುಳುಗಿಸಿ, ಫ್ಲೋರಾಳನ್ನು ಚಿತ್ರಿಸಿದ ತ.ರಾ.ಸು. ಅವರ ಹೃದಯದಲ್ಲಿ ಹೆಣ್ಣಿನ ಬಗ್ಗೆ ಎಂತಹ ಉತ್ತಮ ಭಾವನೆ ಇವೆ ಎಂಬುದಕ್ಕೆ ಬಿಡುಗಡೆಯ ಬೇಡಿಯನ್ನು ಓದಲೇಬೇಕು.

ಕಮ್ಯೂನಿಸ್ಟ್ ಪಕ್ಷದ ತತ್ವಗಳಲ್ಲಿ ಅಪಾರ ನಂಬಿಕೆ ಇರಿಸಿ, ಸಂಸಾರವನ್ನೇ ತ್ಯಾಗ ಮಾಡಿದ ಶಾಲಿನಿ, ಲೀಲಾವತಿಯ ಸ್ನೇಹಿತೆಯಾಗಿದ್ದಳು. ಲೀಲಾ ಶಾಲಿನಿಯನ್ನು ಮಗಳೆಂದು ಪ್ರೀತಿಸುತ್ತಿದ್ದಳು. ಲೀಲಾವತಿಯ ದೃಷ್ಟಿಯಲ್ಲಿ ಹೆಣ್ಣು ತಾಯಿ. ಆಕೆ ಪವಿತ್ರ ದೇವತೆ. ಲೀಲಾವತಿಯ ಹೃದಯ ವಿಶಾಲವಾದುದು. ಆಕೆಯ ಸಂಸಾರ ವಿಶ್ವಸಂಸಾರವಾಗಿತ್ತು.

"ಪ್ರಭಾ, ನನಗೂ ನಿಮ್ಮಂತೆ ಅಪಾರ ವ್ಯಥೆ ಇದೆ.ಎದೆ ಬಿರಿದು ಹೋಗುವಷ್ಟು ವ್ಯಥೆ ನನಗೂ ಇದೆ. ಜೀವನದಲ್ಲಿ ಬಿಡುಗಡೆ ಎಂಬುದೇ ಇಲ್ಲವೇನೂ ? ಜೀವನವೇ ಒಂದು ಬಂದೀಖಾನೆ."

"ಜೀವನದಲ್ಲಿ ಮಕ್ಕಳಿಲ್ಲದ್ದೊಂದೇ ನನಗಿರುವ ಕೊರತೆ. ಆದರೆ ಅದು ವ್ಯಥೆಯಲ್ಲ ಪ್ರಭಾ, ನಿನ್ನನ್ನು, ಫ್ಲೋರಾಳನ್ನು, ಶಾಲಿನಿಯನ್ನು ಮಕ್ಕಳೆಂದು ಪ್ರೀತಿಸುತ್ತಿದ್ದೇನೆ; ನಿಜ. ಆದರೆ ನನ್ನ ಮಕ್ಕಳೆಂದೆನಿಸಿಕೊಂಡವರಿಗೂ, ಸಂಬಿ ಕೊಡಲಿಲ್ಲ. ಅದೇ ನನ್ನ ಕೊರಗು. ನನ್ನ ವ್ಯಥೆ. ನನ್ನನ್ನು ಬಿಗಿದಿರುವ ಬೇಡಿ. ಈ ಬೇಡಿಯಿಂದ ಯಾರಿಗೂ ಬಿಡುಗಡೆಯೇ ಇಲ್ಲವೇನೂ ?"

"ಪ್ರಭಾ ನನ್ನ ದೃಷ್ಟಿಯಲ್ಲಿ, ಹೆಣ್ಣು ಎಂದರೆ ಮಗಳಲ್ಲ; ತಂಗಿಯಲ್ಲ; ಹೆಂಡತಿಯೂ ಅಲ್ಲ; ಆಕೆ ತಾಯಿ. ಜಗತ್ತಿನಲ್ಲಿ ದುಡಿಯುವುದು, ಅಳುವುದು, ಕೊಲ್ಲುವುದು ಇವೆಲ್ಲಕ್ಕಿಂತಲೂ, ಕಾಪಾಡಿ, ಸಲಹಿ ಬೆಳೆಸುವ ಭಾಗ್ಯ ಬಹುದೊಡ್ಡದು. 'ಗಂಡು ಹೆಣ್ಣನ್ನು ಗುಲಾಮಳಾಗಿ ಮಾಡಿ ಕೊಂಡಿದ್ದಾನೆ, ಎನ್ನುವುದು ಸರಿಯಲ್ಲ; ಪ್ರಭಾ. ಹೆಣ್ಣು, ಹೊಟ್ಟೆಯಲ್ಲಿ ಹುಟ್ಟಿಸುವವನ್ನೇ ಅಲ್ಲ; ಕೈ ಹಿಡಿದ ಗಂಡನನ್ನೂ ತಾಯಿಯಂತೆ ಪ್ರೀತಿಸಬೇಕು. ಸಲಹಬೇಕು. ಹಾಗಾದಾಗ 'ಗಂಡು–ಹೆಣ್ಣಿನ' ಮಧ್ಯೆ, ವಿರಸಕ್ಕೆ ಕಾರಣವೇ ಇರುವುದಿಲ್ಲ. ತಾಯಿ ಮಕ್ಕಳಿಗಾಗಿ ದುಡಿಯುವಂತೆ, ಗಂಡನಿಗಾಗಿಯೂ ದುಡಿಯಬೇಕು. ಹಾಗೇ ಪ್ರೀತಿಸಬೇಕು. ಹಾಗೇ ಆಳಬೇಕು. ಜಗತ್ತನ್ನೇ ತನ್ನ ಮಕ್ಕಳೆಂದು ಪ್ರೀತಿಸುವ ಹೆಣ್ಣಿಗೆ ನಾವು ತಾಯಿಯೆಂದು ಹೇಳುತ್ತೇವೆ. ತಾಯಿಯಾದವಳಿಗೆ ಬಂಧನವೂ ಇಲ್ಲ. ಬಿಡುಗಡೆಯೂ ಇಲ್ಲ. ಅವಳಿಗಿರುವುದು ಸಂಸಾರ. ವಿಶ್ವಸಂಸಾರ. ಅವಳ ಪ್ರೀತಿಗೊಳಗಾದವರ ಸ್ನೇಹ ಬಂಧನವನ್ನು ಸ್ವರ್ಗವೆನ್ನುವುದು ಸತ್ಯ. ಸತ್ತ ಮೇಲೆ ಸ್ವರ್ಗವಿದೆ ಎಂಬುದು ಮಿಥ್ಯ."

ಹೆಂಗಸರೆಲ್ಲಾ ಲೀಲಾವತಿಯಂತಿರಬೇಕೆಂಬುದು ತ.ರಾ.ಸು. ಆಸೆ, ಕಾದಂಬರಿಯನ್ನೋದಿ ಮುಗಿಸಿದಾಗ, ಲೀಲಾವತಿಯಂತಹ ಹೆಂಗಳೆಯರೇ, ಈ ಜಗತ್ತಿನಲ್ಲಿ ತುಂಬುವ ಕಾಲ ಎಂದು ಬಂದೀತು ಎಂದು ಓದುಗರು ಯೋಚಿಸುವಂತಾಗುತ್ತದೆ.

ಹೆಣ್ಣಿನ ಜೀವನದ ಸಹಸ್ರ ಮುಖಗಳ ಪರಿಚಯ ಮಾಡಿಕೊಂಡ ತ.ರಾ.ಸು, ಲೀಲಾವತಿಯ ಮುಖವನ್ನೇ ಮೆಚ್ಚುತ್ತಾರೆ. ತ.ರಾ.ಸು. ಅವರು ತಮ್ಮ ಶ್ರಮದಲ್ಲಿ, ಸಾರ್ಥಕ್ಯವನ್ನೂ ಪಡೆದಿದ್ದಾರೆ. ಅವರ ಆಳವಾದ ಅನುಭವ, ವಿಷಯ ವಿವೇಚನೆ,

ಪರಿತವಾದ ಶೈಲಿ, ಓದುಗನ ಮನಸ್ಸಿನಲ್ಲಿ ಸಾಮಾಜಿಕ ಕ್ರಾಂತಿಯೊಂದನ್ನು ಮೂಡಿಸಲು ನಾಂದಿಯಾಗುತ್ತದೆ.

ವ್ಯಕ್ತಿಯೊಬ್ಬನ ವಿಚಾರಧಾರೆ, ಹಾವಭಾವ, ನಡೆನುಡಿ, ಇನ್ನೊಬ್ಬನಕಿಂತ, ಸಹಜವಾಗಿಯೇ ಭಿನ್ನವಾಗಿದೆ. ಆ ಭಿನ್ನತೆಯನ್ನೇ ಮುಂದಿಟ್ಟುಕೊಂಡು ಆತ ದೇವತಾ ಮನುಷ್ಯ, ಈತ ಘಟಿಂಗ ಎಂದು, ಬಾಳೆಹಣ್ಣು ಸುಲಿದು ತಿಂದಷ್ಟು ಸುಲಭವಾಗಿ, ನಾವು ತೀರ್ಮಾನಿಸುತ್ತೇವೆ. ಆದರೆ ನಮ್ಮ ತೀರ್ಮಾನ ಸತ್ಯಕ್ಕೆ ಅಪಚಾರವನ್ನು ಮಾಡುವುದಿಲ್ಲವೇ ?

ಒಬ್ಬನ ಒಳ್ಳೆಯ ತನ ಕೆಟ್ಟತನಗಳು, ಹುಟ್ಟಿನಿಂದ ಬರುವ ಗುಣಗಳಲ್ಲ. ಪೂರ್ವ ಜನ್ಮದ ಪಾಪ ಪುಣ್ಯಗಳು, ವ್ಯಕ್ತಿಯ ವ್ಯಕ್ತಿತ್ವದ ಒಳಿತು ಕೆಡುಕುಗಳಿಗೆ ಕಾರಣವಾಗುವುದೂ ಇಲ್ಲ. ಒಳ್ಳೆಯವರ ಮಕ್ಕಳು ಕೆಟ್ಟವರೇ ಆಗಬಹುದು. ಕೆಟ್ಟವರ ಮಕ್ಕಳು ಗುಣನಿಧಿಗಳೂ ಆಗಬಹುದು. ಬೆಳೆದು ಬಂದ ವಾತಾವರಣ, ಬಾಲ್ಯದಲ್ಲಿ ದೊರೆತ ಶಿಕ್ಷಣ, ಒಡನಾಟದಲ್ಲಿ ಒಂದಾದ ಜನರ ರೀತಿನೀತಿ, ಆರ್ಥಿಕ ಹಾಗೂ ಸಾಮಾಜಿಕ, ಒತ್ತಡ, ಮತ್ತು ಇನ್ನಿತರ ಸಣ್ಣಪುಟ್ಟ ಕಾರಣಗಳು, ವ್ಯಕ್ತಿಗಳ ಮೇಲೆ ಪ್ರಭಾವ ಬೀರಿ, ಆತನ ಜೀವನವನ್ನು ರೂಪಿಸುತ್ತವೆ.

ತ.ರಾ.ಸು. ಅವರ ಕಾದಂಬರಿ "ಬಂಗಾರಿ"ಯಲ್ಲಿ ಒಳಿತು ಕೆಡುಕುಗಳ ನಿಜವಾದ ವಿಮರ್ಶೆ ನಡೆದಿದೆ.

ಬಂಗಾರಿಯಲ್ಲಿ ಬರುವ ಬಂಗಾರಿ, ಆಕೆಯ ತಾಯಿ ರುದ್ರಮ್ಮ, ಶ್ರೀಕಂಠಾಚಾರಿ, ಮತ್ತು ದೇಶಿಕಾಚಾರಿ, ಸಮಾಜದ ದೃಷ್ಟಿಯಲ್ಲಿ ಕೆಟ್ಟವರೇ ಆದರೂ, ಯಾರೂ ಬೇಕೆಂದು ಕೆಟ್ಟವರಾಗಲಿಲ್ಲ. ಸಮಾಜದ ಪ್ರತಿಷ್ಠಿತರು ಕೆಲವರು ಅವರಿಗಿಂತಲೂ ಕೆಟ್ಟವರಾಗಿರಬಹುದು. ಕೆಟ್ಟವರಾಗಿದ್ದಾರೆ.

ಏರುಜವ್ವನದ ಕಾವಿನಲ್ಲಿ ಕರಗಿ. ಮದುವೆಯಾಗುವ ಮುನ್ನ ಮೈಯೊಪ್ಪಿಸಿದ, ಬಂಗಾರಿ, ಪರಿಸ್ಥಿತಿಯ ಒತ್ತಡಕ್ಕೆ ಮಣಿಯಬೇಕಾಯಿತು. ಮದುವೆಯಾಗಿ ಆರು ತಿಂಗಳಲ್ಲೆ ಗಂಡನನ್ನು ಕಳಕೊಂಡ ರುದ್ರಮ್ಮ, ಮರ್ಯಾದೆಯಾಗಿ ಬದುಕುವ ಆಸೆಯಿಂದ ಶ್ರೀಕಂಠಾಚಾರಿಗೆ ಮೈಯೊಪ್ಪಿಸಿ, ದಫೇದಾರ್ ಅನಂತಯ್ಯನ ಬಲಾತ್ಕಾರಕ್ಕೆ ಬಲಿಯಾಗಿ, ಸೂಳೆಯಾಗುತ್ತಾಳೆ.

ಒಂದಲ್ಲ ಒಂದು ರೀತಿಯ ಅನಿವಾರ್ಯ ಕಾರಣಗಳಿಗೆ ಕಟ್ಟುಬಿದ್ದು ವ್ಯಕ್ತಿಗಳು ಕೆಟ್ಟವರಾಗುತ್ತಾರೆ. ಹಾಗೆಯೇ ಒಳ್ಳೆಯವರೂ ಆಗುತ್ತಾರೆ ಎಂಬುದನ್ನು ಸರಳವಾಗಿ, ಹೃದಯಂಗಮವಾಗಿ, ತ.ರಾ.ಸು. ಅವರು ಬಂಗಾರಿ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

"ದೈವವೇ ಸರ್ವಸ್ವವೆಂದು ನಂಬಿ, ಎಲ್ಲವನ್ನೂ ಆ ಶಕ್ತಿಗೆ ನಿವೇದಿಸಿ, ಆತ್ಮಾರ್ಪಣ" ಮಾಡುತ್ತಿದ್ದ ಕಾಲ ಒಂದು ಇತ್ತು. ಅಂದರೆ ಆ ಕಾಲ ಈಗಿಲ್ಲ, ದೈವ ನಂಬಿಕೆ ಕರಗುತ್ತಾ ಬಂದಿದೆ, 'ಎಲ್ಲಕ್ಕೂ ಕಾರಣ ವ್ಯಕ್ತಿ. ಎಲ್ಲದರ ಪರಿಣಾಮವೂ

ವ್ಯಕ್ತಿಯ ಮೇಲೆ' ಎಂದು ನಂಬುವ ಕಾಲ ಘಟ್ಟದಲ್ಲಿ ನಾವೀಗ ಇದ್ದೇವೆ. ನಾವು ಇಲ್ಲೇ ನಿಲ್ಲುವುದಿಲ್ಲ; ಇನ್ನೂ ಮುಂದೆ ಹೋಗುತ್ತೇವೆ. ವ್ಯಕ್ತಿ ಸಮಾಜವಶನಾಗಿ, ಸಮಾಜವೇ ಪರಮ ಗುರಿ" ಯೆಂಬ ಕಡೆಗೆ ನಾವು ಹೋಗುತ್ತಲೇ ಇದ್ದೇವೆ.

"ದೈವವೇ ಸರ್ವಸ್ವ" ಎಂದು ನಂಬಿದ, ಗತಕಾಲದ ಕತೆಯನ್ನ 'ಮೊದಲ ನೋಟ' ಎಂಬ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ ಕಾದಂಬರಿಗಾರ ತ.ರಾ.ಸು.

"ಮೊದಲ ನೋಟದ"ದ ಕಥಾನಾಯಕರು ವೆಂಕಟದಾಸಪ್ಪ ಮತ್ತು ಅವರ ತಂದೆ ನರಸಪ್ಪ.

ಮನೆತನದ ದೇವಿಯನ್ನೇ ಸರ್ವಸ್ವವೆಂದು ನಂಬಿದ್ದರು ಈ ತಂದೆ ಮಕ್ಕಳು. ಬಡ ಕುಟುಂಬವಾದರೂ ಅವರ ಹೃದಯ ಶ್ರೀಮಂತವಾಗಿತ್ತು.

ವೆಂಕಟದಾಸಪ್ಪ ಒಬ್ಬ ನಾಟಕ ಬರೆಯುವ ಸಾಹಿತಿ. ಕಲೆಯ ಬಗ್ಗೆ ಆಸಕ್ತಿಯುಳ್ಳ ಕಲಾವಿದ. ದೇವಿಯನ್ನು ನಂಬಿ, ಜೀವಬಿಡಲು ಹತ್ತಿರವಾದ ಕುದುರೆಗೆ ತೀರ್ಥವನ್ನು ಕುಡಿಸಿ, "ತಾಯಿ ಈ ಮೂಕ ಜೀವವನ್ನು ಬದುಕಿಸು. ಅದು ಹುಲ್ಲು ನೀರು ತೆಗೆದುಕೊಳ್ಳುವತನಕ, ನಾನು ಅನ್ನ ನೀರು ಮುಟ್ಟುವುದಿಲ್ಲ"ವೆಂದು ಶಪಥ ಮಾಡಿದ ವೆಂಕಟದಾಸಪ್ಪನವರ ಕರೆಗೆ ತಾಯಿ ಓಗೊಟ್ಟಳು. ಕುದುರೆ ಕಾಲು ಯಾಡಿಸಿ, ಎದ್ದು ನಿಂತು, ನೀರು ಮೇವನ್ನುಸ್ವೀಕರಿಸಿತು.

ಹಾಗೆ ವೈದ್ಯರೂ ಆದ ವೆಂಕಟಪ್ಪ ದೇವಿಯಲ್ಲಿ ಅನನ್ಯ ಭಕ್ತಿಯನ್ನಿಟ್ಟಿದ್ದರು. ಅವರ ತಂದೆಯ ಭಕ್ತಿ ಅವರಿಗಿಂತ ಒಂದು ತೂಕ ಹೆಚ್ಚಾಗಿತ್ತು.

ಒಂದು ನಾಟಕದ ಬಗ್ಗೆ ಹಳ್ಳಿಯಲ್ಲಿ ಮರ್ಯಾದೆಯ ಪ್ರಶ್ನೆ ಎದುರಾಗಿತ್ತು. ವೆಂಕಟದಾಸಪ್ಪ ನಾಟಕ ಬರೆಯುತ್ತೇನೆ ಎಂದರು. ಮನೆಯ ದೇವಿಯನ್ನು ನಂಬಿ, ಊರು ಬಿಟ್ಟು ಪಾಳು ಬಿದ್ದ ದೇವಾಲಯದ ಒಳ ಬಂದು ತಂಗಿದರು. ಉಪವಾಸ ಬಿದ್ದರು 12 ದಿನ. ದೇವಿಯ ಪ್ರೇರಣೆಯಾಯಿತು. ನಾಟಕವೂ ಬರೆದರು, ಹಳ್ಳಿಯ ಜನ ಹೊಗಳಿ ಸನ್ಮಾನ ಮಾಡಿದರು.

"ದಾಸು ಇಷ್ಟಕ್ಕೆ ಹೆಮ್ಮೆ ಪಡಬೇಡ. ನಾಟಕ ಬರೆದವಳು ತಾಯಿ, ನೀನಲ್ಲ. ಅದನ್ನು ಮರೆತರೆ ಆಕೆಯ ಅನುಗ್ರಹ ಅಲ್ಲಿಗೇ ಬತ್ತಿ ಹೋಗುತ್ತದೆ" ಎಂದರು ನರಸಪ್ಪ.

'ಇದನ್ನು ಬರೆದವನು ನಾನಲ್ಲ ತಾಯಿ. ಆಕೆಯ ಅನುಗ್ರಹದಿಂದ ನಾನು ಹೀಗೆಯಾದೆ, ಇಲ್ಲವಾದರೆ ಬರೀ ಕಾಡು ಮರದ ಕೊರಡಾಗೇ ಇರುತ್ತಿದ್ದೆ' ಎಂದರು ದಾಸಣ್ಣ. (ವೆಂಕಟದಾಸಪ್ಪ)

ಹಟ ಹಿಡಿದರೆ ಈ ಅಯ್ಯ ಆಕಾಶ ಪಾತಾಳ ಒಂದು ಮಾಡ್ತಾನೆ. ಇದು ಅಂತಿಂಥ ಕುಳವಲ್ಲ, ಭಾರೀ ಘಟ–ದಾಸಣ್ಣನ ಹತ್ತಿರದ ಸಂಗಾತಿ ವೀರಣ್ಣ ಊರಿನಲ್ಲಿಯೂ ಹೇಳುತ್ತಿದ್ದ. ತನ್ನ ಮಡದಿಯೊಡನೆ ಹಗಡೆಯಾಡುವಾಗಲೂ ಹೇಳಿದ.

ವೀರಣ್ಣ ಮುದುಕ. ಆತನ ಹೆಂಡತಿ ಗೌರಮ್ಮ ಯುವತಿ. ವೀರಣ್ಣನ ಹೊಗಳಿಕೆ ಕೇಳಿ "ನನ್ನಾವ ಪಗಡೆ ಆಡಿ ಆ ಅಯ್ಯ ಗೆಲ್ಲಲಿ. ಪಂದ್ಯದಲ್ಲಿ ಯಾರು ಗೆಲ್ತಾರೋ ನೋಡೋಣ" ತಮಾಷೆಗಾಗಿ ಗಂಡನನ್ನು ಛೇಡಿಸುತ್ತಾಳೆ ಗೌರಮ್ಮ.

ಅಂದಿನಿಂದ ಪ್ರತಿದಿನ ಆಟದ ಹುಚ್ಚು ಹಿಡಿದು ಇಬ್ಬರೂ ಆಡುತ್ತಾರೆ. ಪ್ರಾಯದ ಗಂಡು ಹೆಣ್ಣು ಕಲೆತು ಆಡಿದಾಗ ಬೆಂಕಿಗೆ ಬೆಣ್ಣೆ ಕರಗಿದಂತೆ. ಒಂದು ದಿನ ಬೆಣ್ಣೆ ಕರಗುತ್ತದೆ. ಏನಾಯಿತೆಂಬುದು ದಾಸಣ್ಣ-ಗಿರಿಜೆಗೆ ಅರಿವಾದುದು ನೆರೆಯ ನೀರು ಇಳಿದ ಮೇಲೆ. ಆಗ ಆಗಬಾರದುದು ಆಗಿ ಹೋಗಿತ್ತು.

ವೀರಣ್ಣ ಮನೆಗೆ ಬಂದಾಗ. ಗೌರಿ ಒಳಗೆ ಇರಲಿಲ್ಲ. ಹೊರಗೆ ದನದ ಕೊಟ್ಟಿಗೆಯ ಛಾವಣಿಯ ಜಂತೆಯಲ್ಲಿ ನೇತಾಡುತ್ತಿದ್ದಳು. ಹಗ್ಗ ತುಂಡರಿಸಿ, ಉಪಚಾರ ಮಾಡಿದಾಗ ಕಣ್ತೆರೆದು, "ನನ್ನ ಮುಟ್ಟಬೇಡಿ ನಾನು ಪಾಪಿ" ಎಂದು ದೂರ ಸರಿದು ಗೌರಮ್ಮ ಎಲ್ಲವನ್ನೂ ಹೇಳುತ್ತಾಳೆ.

"ಇದು ಇವರ ತಪ್ಪೆ ? ಇವರನ್ನು ನಂಬಿದ ನನ್ನ ತಪ್ಪೆ ? ಎಂದೂ ಪರಸ್ತ್ರೀಯತ್ತ ಕಣ್ಣೆತ್ತಿ ನೋಡದ ಮಿತ್ರ. ಪರಪುರುಷರ ಚಿಂತೆ ಮಾಡದ ಮಡದಿ... ಅಪರಂಜಿ ಚಿನ್ನದಲ್ಲೀ ಹಿತ್ತಾಳೆಯ ಕಸಿರು ! ಅಯ್ಯೋ ಎಂದು ಮಡದಿಯನ್ನು ಒಂದರೆ ಘಳಿಗೆ ವೀರಣ್ಣ ನೋಡಿದ ...ಇವಳು ಚೆಲುವೆ...ದಾಸಣ್ಣ ಯುವಕ. ಚೆಲುವು ಯೌವನಗಳ ನಡುವೆ ನಾನು... ಹುಬ್ಬು ಬಿಳುಪಾದ ಮುದುಕ... ಮೊದಲ ಬಾರಿ "ಮೊದಲ ನೋಟಕ್ಕೆ" ಅವನಿಗೆಲ್ಲಾ ಅರ್ಥವಾಯಿತು, ಪಶ್ಚಾತ್ತಾಪದ ಕಂಬನಿ ಸುರಿಯಿತು.

"ಏಳು ಗೌರಿ, ತಪ್ಪು ನಿನ್ನದಲ್ಲ ನನ್ನದು" ಗೌರಿಯ ಮೈ ನೇವರಿಸಿದ. "ಇನ್ನು ಈ ಮೈಲಿಗೆ ಮೈ ಮುಟ್ಟಬೇಡ್ರಿ" "ನಾ ಬರೋಗಂಟ ಏನಾದ್ರೂ ಮಾಡಿಕೊಂಡ್ರೆ ನನ್ನಾಣೆ, ನಾ ಬರ್ತೀನಿ" ಎಂದು ವೀರಣ್ಣ ಹೊರ ನಡೆದ.

ದೇವಿ ಗುಡಿಯಲ್ಲಿ ಸ್ಮೃತಿ ತಪ್ಪಿ ಬಿದ್ದಿದ್ದ ವೆಂಕಟದಾಸಪ್ಪನವರನ್ನು ವೀರಣ್ಣ ನೋಡುತ್ತಾನೆ. ಆತನ ಕ್ರೋಧ ಉಕ್ಕೇರುತ್ತದೆ. ಗುಡಿಯಲ್ಲಿರುವ ತಾಯಿಯ ವಿಗ್ರಹವನ್ನು ನೋಡುತ್ತಾನೆ. ನೋಡುತ್ತಲೇ ಇರುವಾಗ ತಾಯಿ ಏನೋ ಅಂದಂತೆ ಭಾಸವಾಯ್ತು.

"ನಾನು ತಾಯಿ. ನನಗೆ ಗೊತ್ತಿರುವುದು ಕರುಣೆಯೊಂದೇ. ಪ್ರೀತಿಯೊಂದೇ. ಕ್ಷಮೆಯೊಂದೇ" ಎಂದು ತಾಯಿ ಹೇಳಿದಂತೆನಿಸಿತು ವೀರಣ್ಣನಿಗೆ. ದಾಸಣ್ಣನ ಮುಖಕ್ಕೆ ನೀರು ಚಿಮುಕಿಸಿ ಎಬ್ಬಿಸ್ತಾನೆ.

"ನಿನಗೆ ಕೊಡುವ ಶಿಕ್ಷೆ ಇಲ್ಲಿಲ್ಲ; ರಂಗದಲ್ಲಿ. ಬಾ ನನ್ನ ಜೊತೆ" ಎಂದ ವೀರಣ್ಣ. ದಾಸಣ್ಣ ಸೂತ್ರದ ಗೊಂಬೆಯಂತೆ ಹಿಂಬಾಲಿಸಿದ.

"ಮುಕಾನ ಏನು ನೋಡುತ್ತಿ ? ಮದುವೇಲಿ ಕೊಟ್ಟ ಸೀರೇನ, ಉಟ್ಕೊಂಡು ಬಾ" ಗಡುಸಾದ ದನಿಯಲ್ಲಿ ಅಪ್ಪಣೆ ಇತ್ತ ವೀರಣ್ಣ.

ಸೀರೆ ಉಟ್ಟು ಬಂದ ಗೌರಿಯನ್ನೂ, ದಾಸಣ್ಣನನ್ನೂ ಒಟ್ಟಾಗಿ ತಬ್ಬಿಕೊಂಡ ವೀರಣ್ಣ. ಕಂಬನಿ ಸುರಿಸಿದ. ಉಳಿದಿಬ್ಬರ ಕಣ್ಣುಗಳೂ ತೇವವಾದುವು.

"ನೀವಿಬ್ಬರು ನಾ ಹೇಳಿದಾಂಗೆ ಕೇಳ್ಬೇಕು. ಇದೇ ನಿಮಗೆ ಶಿಕ್ಷೆ, ಇನ್ನು ಮುಂದೆ ನೀವು ಗಂಡ ಹೆಂಡಿರು. ಗೌರಿ ನನ್ನ ಮಗಳು....ಮಡದಿಯಲ್ಲ....ಗೌರಿ ಒಳ್ಳೆ ಹೆಣ್ಣು....ಅದಕ್ಕೆ ದುಃಖಕೊಡ್ಬೇಡ ದಾಸಣ್ಣ...ನೀವಿಬ್ರೂ ಸುಕ್ವಾಗಿರಿ. ಉರಿಯೋ ದೀಪಾನೆ ಈ ಮಾತಿಗೆ ಸಾಕ್ಷಿ."

ದಾಸಣ್ಣ ಗೌರಿಯನ್ನು ಹೀಗೆಯೇ ಅಂಗೀಕರಿಸಿದ. ಅನಿವಾರ್ಯ ಅವನನ್ನು ಕಟ್ಟಿಹಾಕಿತ್ತು. ತಾನು ಮಾಡಿದ್ದು ಅನ್ಯಾಯ ಅನಿಸಿತ್ತು....ಆದರೆ ಬೇರೆ ಉಪಾಯ ವಿರಲಿಲ್ಲ.

ವೀರಣ್ಣ ಔದಾರ್ಯದ ದುರ್ಬಲತೆಯಿಂದ ಈ ತ್ಯಾಗವನ್ನ ಮಾಡಿರಲಿಲ್ಲ. ಆದರೆ ಜನ ಅವನನ್ನು ಕಂಡುಕೊಂಡ ರೀತಿಯೇ ಬೇರೆ. "ಪಾಳೆಯಗಾರ್ರ ವಂಶದೋನಂತೆ; ಇವನ ಮುಕಕ್ಕಷ್ಟು ಬೆಂಕಿ ಹಾಕ; ತಾನೇ ಹೆಂಡ್ತೀ ತಲೆ ಹಿಡೀತಾನೆ. ಬೇವಾರ್ಸಿ."

"ಒಳ್ಳೆ ಹಾರುವಯ್ಯನ ಕೆಡಿಸಿ ಬಿಟ್ಟಳು ಹಾದರಗಿತ್ತಿ." ಗಿರಿಜೆಗೆ ಸಿಕ್ಕಿದ ಬಹುಮಾನ.

"ಅಂತೋರ ಮನೇಲಿ ಹುಟ್ಟಿ ಹಿಂಗಾ ಮಾಡೋದು ? ಕಬ್ಬಿನ ಹೊಟ್ಟೇಲಿ ಸೂಲಂಗಿ ಹುಟ್ಟಿದಂಗಾಯ್ತು." ಹಳ್ಳಿಗರ ಸಡಿಲವಾದ ನಾಲಗೆಯಿಂದ ದಾಸಣ್ಣನ ಬಗ್ಗೆ ಹೀಗೆ ಮಾತು ಹೊರಡುತ್ತಿದ್ದುವು.

ಈ ಸುದ್ದಿಯನ್ನು ತಿಳಿದ ನರಸಪ್ಪ "ತಾಯೀ, ಅವನಿಗೇಕೆ ಈ ಹಾಳು ಬುದ್ಧಿ ಕೊಟ್ಟೆ." ಎಂದು ವಿಹ್ವಲರಾಗಿ ದೇವಿಯನ್ನು ಬೇಡಿದರು. "ಇವನು ಮಗನಲ್ಲ, ನನ್ನ ಹೊಟ್ಟೆಯಲ್ಲಿ ಹುಟ್ಟಿದ ಬೆಂಕಿ. ತಾನು ಕೆಟ್ಟು, ವಂಶವನ್ನೇ ಪಾಪ ಕೂಪದಲ್ಲಿ ಅದ್ದಿ ಬಿಟ್ಟ" ಎಂದು ನೊಂದುಕೊಂಡರು. "ದಾಸೂ ನೀನು ದೊಡ್ಡವನಾದೆ. ವಯಸ್ಸಿಗೆ ಬಂದ ಮಗನನ್ನು ಮಿತ್ರನಂತೆ ಕಾಣಬೇಕೆಂದು ಶಾಸ್ತ್ರವಚನ. ಆಯಿತು. ಇನ್ನು ನಿನ್ನ ದಾರಿ ನಿನಗೆ" ತಂದೆ ಮಕ್ಕಳ ಆ ಮಾತು ಕೊನೆಯದಾಯಿತು.

"ದೇವರಿದಾನೆ, ದಾಸಣ್ಣನನ್ನು ಮದುವೆಗೆ ಒಪ್ಪಿಸುತ್ತೇನೆ." ದಾಸಣ್ಣನ ತಂಗಿ ರಾಜೇಶ್ವರಿ ಶಪಥ ಮಾಡುತ್ತಾಳೆ. ಗೌರಮ್ಮನನ್ನು ಕಾಣಲು ಅವಳ ಮನೆಗೆ ಹೋಗುತ್ತಾಳೆ.

"ನಾನು ಆ ಮನೆ ಮುರಿಯೋಕೆ ಬಂದಿದ್ವಿ ಅಂತ ತಿಳಕೊಂಡ್ರಾ ? ಅವ್ರು ಮದ್ವೆ ಮಾಡ್ಕೋಬೇಕು. ಇಬ್ಬರ ಸೇವೇನೂ ಮಾಡಿ,ಹುಟ್ಟಿದ್ದು ಸಾರ್ಥಕ ಆಯ್ತು ಅಂತೀನಿ.

ಗೌರಮ್ಮನ ಒಪ್ಪಿಗೆ ಪಡೆದ ರಾಜೇಶ್ವರಿ ಅಮ್ಮ ಅಪ್ಪನಲ್ಲಿ ವಿಷಯವನ್ನ ಹೇಳ್ತಾಳೆ. ಲಕ್ಷ್ಮೀದೇವಮ್ಮ ಒಪ್ತಾಳೆ–ಆದರೆ ನರಸಪ್ಪ ಅವರು "ಇವನ ಜನ್ಮಕ್ಕೆ ಮದುವೆಯೊಂದು ಕೇಡು. ನಾಳೆ ಕುಡ್ಕೋರ ಕೂಸು ಕಣ್ಣೀರಲ್ಲಿ ಕೈ ತೊಳೆಯೋದನ್ನ, ನಾನು ಕಾಣಬೇಕೆ?" ಎಂದು ಸಿಟ್ಟಿನಿಂದ ಕುಣಿದಾಡಿದರು.

"ದೊಡ್ಡ ಬುದ್ಧಿಯೋರ್ನ ನಾನು ಮದುವೇಗೊಪ್ಪಿಸ್ತೀನಿ. ಅವರು ಸಿಟ್ಟಿನಿಂದ, ನನ್ನ ಕೊಂದು ಹಾಕಿದ್ರೆ ನಾನು ಭಾಗ್ಯಶಾಲಿ. ಮತ್ತೆ ಈ ಮನುಷ್ಯ ಜನ್ಮದಲ್ಲಿ ಹುಟ್ಟೋ ಕಾಟಾನೇ ಇಲ್ಲ" ನರಸಪ್ಪನವರನ್ನು ಒಪ್ಪಿಸಲು ಗೌರಮ್ಮ ಸಿದ್ಧಳಾಗುತ್ತಾಳೆ.

"ಬೆಟ್ಟದಿಂದ ಬಿದ್ದೋರ್ನ ಪಡೀಲಿ ಹೊಡೆಯೋದು ನ್ಯಾಯವೆ? ಚಿಕ್ಕ ಬುದ್ಧಿಯೋರ್ನ ನಾವು ದಂಡಿಸ್ತಾ ಇರೋದು ಅನ್ಯಾಯ. ನನ್ನಜಿಟ್ಟಿನ ಬುದ್ಧಿ. ಚಿಕ್ಕ ಬುದ್ಧ್ಯೋರ ಮದ್ವೇಗೆ, ನೀವು ಒಪ್ದೇ ಹೋದ್ರೆ ವಂಶ ನಡೆದಾತಾ?" ನರಸಪ್ಪನವರಲ್ಲಿ ಗೌರಮ್ಮ ಬೇಡಿಕೊಳ್ತಾಳೆ.

ವಿಷಯವನ್ನೆಲ್ಲಾ ವಿವರವಾಗಿ ತಿಳಿದ ನರಸಪ್ಪ. "ದಾಸಣ್ಣನ ಮದುವೆಗೆ ನಾನು ಅಷ್ಟ ಬರುವದಿಲ್ಲ. ಆದ್ರೆ ಅವನ ಹತ್ತಿರ ಮಾತಾಡೋದಿಲ್ಲಾಂತ ತಾಯಿ ಹೆಸ್ರು ಹೇಳಿ ಶಪಥಾ ಮಾಡಿದ್ದೇನೆ. ತಾಯಿಯ ಇಚ್ಛೆ ಹಾಗಿತ್ತು. ಈ ಶಿಕ್ಷೆಯನ್ನ ನಾವು ತಾಯಿ ಮಕ್ಕಳು ಅನುಭವಿಸಿಯೇ ತೀರ್ಬೇಕು" ಕಂಬನಿ ತುಂಬಿ ನರಸಪ್ಪ ಹೇಳಿದರು.

ರಾಜೇಶ್ವರಿ ಮತ್ತು ಆಕೆಯ ಗಂಡ ಮದುವೆಗೆ ಹುಡುಗಿಯನ್ನು ನೋಡಿ ನಿಶ್ಚಯಿಸುತ್ತಾರೆ. ದಿಬ್ಬಣ ಹೊರಡುತ್ತದೆ, ವೀರಣ್ಣ ಗೌರಮ್ಮರೂ ಮದ್ವೇಗೆ ಬರಬೇಕೆಂದು ನರಸಪ್ಪ ಹಠಮಾಡ್ತಾರೆ. ಕೊನೆಗೆ ಅವರೂ ಪ್ರತ್ಯೇಕ ಗಾಡಿಯಲ್ಲಿ ಬರುತ್ತಾರೆ.

"ರಂಗೂ ನನ್ನ ಮಗಳು. ಗೌರಮ್ಮನೂ ನನ್ನ ಇನ್ನೊಬ್ಬ ಮಗಳು. ವೀರಣ್ಣ ಗೌರಮ್ಮರಿಗೆ ಇರಲು ನಾನು ಮನೇಲೇ ವ್ಯವಸ್ಥೆ ಮಾಡಿದೀನಿ" ದಾಸಣ್ಣನ ಮಾವನಾಗುವ ರಾಮಣ್ಣ, ಗೌರಮ್ಮನ ಬಗ್ಗೆ ಒಳ್ಳೆ ಭಾವನೆಯಿಂದ ಅವಳಿಗೆ ಮದುವೆ ಮನೆಯಲ್ಲೇ ಇರಲು ವ್ಯವಸ್ಥೆ ಮಾಡಿದ್ದರು.

"ರಂಗಣ್ಣನ್ನೇನು ಧಾರೇ ಮನೇಗೆ ಕಳಿಸ್ತಾ ಇದೀರೊ? ಅಥ್ವಾ ವನವಾಸಕ್ಕೆ ಕಳಿಸ್ತಾ ಇದೀರೊ? ಒಂದು ಕಿವೀಗಿಲ್ಲ, ಮೂಗ್ಗಿಲ್ಲ." ರಾಜೇಶ್ವರಿಯನ್ನು ಹತ್ತಿರ ಕರೆದು ಗೌರಮ್ಮ ಕೇಳ್ತಾಳೆ.

"ನನ್ನ ಮಗಳಿಗೆ ಕಣ್ಣು ಮೂಗೇ ಒಡವೆ. ಬೇರೆ ಒಡವೆ ಬೇಡ ಎಂದು ಹಟ ಹಿಡಿದಿದ್ದಾರೆ ಹುಡುಗಿಯ ತಂದೆ ರಾಮಣ್ಣ."

"ಎರವಲು ಬೇಡವೇ ಬೇಡ, ಈ ಸಣ್ಣ ಗಂಟಲ್ಲಿದ್ದ ಒಡವೇನ ಹುಡುಗೀಗೆ ಹಾಕಿ. ನಾನೂ ರಂಗಮ್ಮಾ ಅಕ್ಕ ತಂಗಿಯೋರು ಅಲ್ವ? ಈ ಒಡವೆ ರಂಗಕ್ಕಂದು,

ಏನವಲು ಅಲ್ಲ" ಎಂದು ತನ್ನ ಆಭರಣ ಕೊಟ್ಟು ಗೌರಮ್ಮ ಬಾಗಿಲಿನಿಂದ ಹೊರಗೆ ಹೋಗುತ್ತಾಳೆ.

ಮದುವೆ ಕಳೆದು, ಮನೆ ತುಂಬಿಸುವ ಶಾಸ್ತ್ರವೂ ಮುಗಿದು ಅಳಿಯನ ಮನೆಯಿಂದ ಶಾಮಣ್ಣ ತನ್ನೂರಿಗೆ ಹೊರಟು ನಿಂತಾಗ,

"ನಾಲ್ಕು ದಿನ ಇದ್ದು ಹೋಗಿ ಶಾಮಣ್ಣ ಇನ್ನೂ ಸ್ವಲ್ಪ ಕೆಲಸ ಉಳಿದಿದೆ"
"ತಾಯಿ ಅಪ್ಪಣೆ ಕೊಡೋದು, ನಾನು ಅವನ್ನೇ ಕಾಯ್ತೀನಿ" ಎಂದರು ನರಸಪ್ಪ.

ಮರು ದಿನ ಶುಕ್ರವಾರ ನರಸಪ್ಪನವರು ತುಂಬಾ ಹೊತ್ತು ದೇವಿಯ ಪೂಜೆ ಮಾಡಿದರು. ಎಲ್ಲರನ್ನೂ ಉಣ್ಣಲು ಹೇಳಿದರು. ತಾವು ತೀರ್ಥವಾತ್ರ ತೆಗೆದುಕೊಂಡು. "ಏಕೊ ತಲೆಸುತ್ತುತ್ತಾ ಇದೆ" ಎಂದು ಮಲಗಿಬಿಟ್ಟರು. ಅಮೇಲೆ,......

"ದಾಸಣ್ಣಾ ಅಮ್ಮನವರಿಗೆ ಮಂಗಳಾರತಿ ಮಾಡು" ಎಂದು ಮಗನಲ್ಲಿ ಅನಿರೀಕ್ಷಿತವಾಗಿ ಹೇಳಿದರು.

"ಗೌರಕ್ಕಾ ಇಲ್ಲಿ ಬಾ...ರಂಗೂ ನೀನೂ ಹತ್ತಿರ ಬಾ...ರಂಗೂ"ಗೌರಕ್ಕ ನಿನ್ನ ಸವತಿಯಲ್ಲ. ಅಕ್ಕ. ಲಕ್ಷ್ಮೀ ನೀನು ಇವರಿಬ್ಬರಲ್ಲಿ ವ್ಯತ್ಯಾಸ ಮಾಡಬಾರದು. ಇಬ್ಬರೂ ನಿನ್ನ ಸೊಸೆಯರು. ಒಬ್ಬನಿಗೇ ಇಬ್ಬರನ್ನು ಕಳಿಸಿ ಕೊಟ್ಟಿದಾಳೆ ತಾಯಿ . ದಾಸಣ್ಣ ಈವತ್ತಿನವರೆಗೂ ನಿನ್ನ ಕೈಲಿ ಮಾತಾಡಲಿಲ್ಲ. ಈ ಶಿಕ್ಷೆ ಅನುಭವಿಸಬೇಕೂಂತ ನಮಗೆ ಅಮ್ಮನ ಅಪ್ಪಣೆಯಾಗಿತ್ತು. ನೋಡು. ರಂಗೂಗೆ ನೀ ಹೆಚ್ಚು ಕಡಮೆ ಮಾಡಿದ್ರೂ ಗೌರಮ್ಮನನ್ನ ನೋಯಿಸ ಬೇಡ. ಶಾಮಣ್ಣ ಇನ್ನು ಮುಂದೆ ನಿನ್ನ ಮಾವನಲ್ಲ, ತಂದೆ. ರಾಜಕ್ಕಾ ನೀನು ಮಗಳಲ್ಲ– ಈ ಮನೆಯ ನಂದಾದೀಪ." ಎಂದು ಹೇಳಿ ನರಸಪ್ಪ ಕಣ್ಣು ಮುಚ್ಚುತ್ತಾರೆ.

ತ.ರಾ.ಸು. ಅವರ ಸಾಮಾಜಿಕ ಕಾದಂಬರಿಗಳು ಸಂಖ್ಯೆಯಲ್ಲಿ ಸುಮಾರು ಎಪ್ಪತ್ತರ ತನಕ ತಲುಪಿರಬಹುದು. ಕೇವಲ ಕೆಲವೇ ಕಾದಂಬರಿಗಳನ್ನು ಓದುವ ಭಾಗ್ಯ ಈ ಲೇಖಕನಿಗೆ ಬಂದಿದೆ.

'ಮೊದಲ ನೋಟ'ದ ವೆಂಕಟದಾಸಪ್ಪ, ಭಾವಜೀವಿ. ದೈವ ಭಕ್ತ, ನಾಟಕಕಾರ. ನೀತಿ ನಿಯಮಗಳನ್ನೇ ಪ್ರಾಮಾಣಿಕವಾಗಿ ಪಾಲಿಸುವವ. ತಾಯಿ, ತಂದೆ, ತಂಗಿ, ಸ್ನೇಹಿತ ಎಂದು ಎಲ್ಲರನ್ನು ಪ್ರೀತಿಸುವ ವಿಶ್ವ ಸಂಸಾರಿ.

ಒಂದು ಕಡೆ ತಂದೆ ತಾಯಿಗಳು, ಇನ್ನೊಂದೆಡೆ ಮಹಾತ್ಯಾಗಿ, ಪ್ರಾಮಾಣಿಕ ಸ್ನೇಹಿತ ವೀರಣ್ಣ, ಮತ್ತೊಂದು ಕಡೆ ತಂದದಿಗಿಂತಲೂ ಹೆಚ್ಚು ಪ್ರೀತಿಸುವ ಆದರಿಸುವ ಗೌರಮ್ಮ. ಇನ್ನೊಂದು ಕಡೆ ಸಂಪ್ರದಾಯ ಶರಣರಾದ ಸಮಾಜ ಬಾಂಧವರು, ಕತ್ತರಿಯಲ್ಲಿ .ಸಿಕ್ಕಿದಂತಾಗಿದ್ದ ದಾಸಣ್ಣನ ಪಾತ್ರವನ್ನು ಬಹಳ ಸೂಕ್ಷ್ಮವಾಗಿ, ಚಿತ್ರಿಸಿದ್ದಾರೆ, ತ.ರಾ.ಸು.

ಮಗನಿಗಿಂತಲೂ ನಿಷ್ಠಾವಂತರಾದ ತಂದೆ ನರಸಪ್ಪನವರ ಹೃದಯ ತುಂಬ ವಿಶಾಲವಾದುದು. ನೀತಿ ನಿಯಮಕ್ಕಾಗಿ, ಪ್ರಾಣವನ್ನೇ ಧಾರೆಯೆರೆಯುವ ಧೈರ್ಯ ಶಾಲಿ. ಹಾಗೆಯೇ ಸತ್ಯ ಕಣ್ಣಿಗೆ ಗೋಚರವಾಗುವಾಗ, ಮಹಾತ್ಯಾಗಕ್ಕೆ ಸಿದ್ಧರಾಗಿ. ತಪ್ಪನ್ನು ಒಪ್ಪಿಗೊಂಡು ಪಶ್ಚಾತ್ತಾಪ ಪಡುವ ಸರಳಜೀವಿ, ದೇವತಾ ಮನುಷ್ಯ,

ರಾಜೇಶ್ವರಿ, ಜುಮ್ರತೇಬಿರ, ವೀರಣ್ಣ, ಲಕ್ಷ್ಮಿದೇವಮ್ಮ ಶ್ಯಾಮಣ್ಣ, ಬುಡನ್ ಸಾಬಿ, ಗೌರಮ್ಮ, ಎಲ್ಲ ಪಾತ್ರಗಳೂ ನಮಗೆ ದೇವತೆಗಳಂತೆ ಕಾಣುತ್ತಾರೆ.

ಎರಡು ತಲೆಮಾರುಗಳ ಹಿಂದೆ ನಮ್ಮ ಸಮಾಜ ಹೇಗಿತ್ತು ? ಇಂದಿನ ಸಮಾಜ ಹಾಗಿದೆಯೇ ? ತಪ್ಪಿ ಬಿದ್ದಿದೆಯೆ ? ನಿಯತ್ತು ಶಿಸ್ತುಗಳು ಮಣ್ಣುಪಾಲಾಗಿ ದೆಯೆ ? ಎಂಬುದನ್ನೆಲ್ಲಾ ಜಾಗೃತ ಮನಸ್ಸಿನಿಂದ ಚರ್ಚಿಸಿ, ವಿಶ್ಲೇಷಿಸಿ, ನಮ್ಮ ಮುಚ್ಚಿದ ಕಣ್ಣನ್ನು ತೆರೆಸಲು ಯತ್ನಿಸಿದ್ದಾರೆ ತ.ರಾ.ಸು. ತಮ್ಮ ಯತ್ನದಲ್ಲಿ ಅತ್ಯಂತ ಯಶಸ್ವಿಯಾಗಿದ್ದಾರೆ.

ಶ್ರೀ ತ.ರಾ.ಸು. ಅವರು ಸಮಾಜವನ್ನು ವೈಜ್ಞಾನಿಕ ಕಣ್ಣುಗಳಿಂದ ನೋಡು ತ್ತಾರೆ. 'ರವಿಕಾಣದಿದ್ದುದನ್ನು' 'ಕವಿ' ಮಾತ್ರವಲ್ಲ, ಕಾದಂಬರಿಕಾರನೂ ಕಾಣ ಬಲ್ಲನೆಂಬ ಮಾತಿಗೆ, ತ.ರಾ.ಸು. ಅವರ, ಸಾಮಾಜಿಕ ಕಾದಂಬರಿಗಳು ಉತ್ತಮ ಉದಾಹರಣೆಗಳಾಗಿವೆ.

ಸಮಾಜದಲ್ಲಿ ಕೆಟ್ಟವರೂ ಇದ್ದಾರೆ. ಒಳ್ಳೆಯವರೂ ಇದ್ದಾರೆ. ಕೆಟ್ಟವರು ಅಥವಾ ಒಳ್ಳೆಯವರು ಎಂದು ನಾವು ತೀರ್ಮಾನಿಸಿದ ವ್ಯಕ್ತಿಗಳನ್ನು, ಮಾನವೀಯ ದೃಷ್ಟಿಯಿಂದ ನಾವು ಸೂಕ್ಷ್ಮವಾಗಿ ನೋಡಬೇಕು. ವ್ಯಕ್ತಿಯೆಂಬ ನಾಣ್ಯದ ಇನ್ನೊಂದು ಮುಖವನ್ನು ನಾವು ಆಳವಾಗಿ ಅಭ್ಯಾಸ ಮಾಡಬೇಕು.

ಕೆಟ್ಟವರು ಎಂದು ಸಮಾಜ ಹೇಳುವ ಜನ ನಿಜವಾಗಿಯೂ ಕೆಟ್ಟವರೆ ? ಅವರ ಹೃದಯದಲ್ಲಿ "ಹಾಲಾಹಲ" ಅಲ್ಲದೆ ಇನ್ನೇನೂ ಇಲ್ಲವೆ ? ಎಂಬುದನ್ನು ತಿಳಿದು ಕೊಳ್ಳುವ ಹೃದಯ ವೈಶಾಲ್ಯ, ನಮ್ಮದಾಗಬೇಕು. ಆಗ ಹಾಲಾಹಲವಿದ್ದಲ್ಲಿ ಅಮೃತ ಕುಂಭವೂ ಇದೆಯೆಂದು ನಮಗೆ ಅರಿವಾಗುತ್ತದೆ. ಎಲ್ಲಿ ಅಮೃತದ ಪೂರ್ಣಕುಂಭವಿದೆ ಯೆಂದು ನಾವು ಬಗೆದಿದ್ದೆವೊ ಆ ಕುಂಭದ ತುಂಬಾ ವಿಷವೇ ಇದೆಯಲ್ಲಾ ಎಂದು ನಮಗೆ ಅಚ್ಚರಿಯೂ ಆಗುತ್ತದೆ.

ನಾವು ಯಾವುದನ್ನು ಒಳ್ಳೆಯದೆಂದು ಪೂಜಿಸಿದ್ದೆವೊ ? ಆ ಒಳಿತಿಗೆ ಕೆಟ್ಟದೆಂಬ ಇನ್ನೊಂದು ಮುಖವೂ ಇದೆಯೆಂಬ ಸತ್ಯ ನಮಗೆ ಗೋಚರವಾಗುತ್ತದೆ.

ಈ ಸೂಕ್ಷ್ಮವಾದ ವಿಜ್ಞಾನದ ಕಣ್ಣನ್ನು ತನ್ನ ಕಾದಂಬರಿಗಳಲ್ಲಿ, ತ.ರಾ.ಸು. ಅವರು ಉಪಯೋಗಿಸುತ್ತಾರೆ ಎಂತಲೇ ಅವರ ಕಾದಂಬರಿಗಳು ಬುದ್ಧಿ ಪ್ರಚೋದಕ ಗಳಾಗಿವೆ. ಸಮಾಜ ಜೀವನದಲ್ಲಿ ಒಳಿತು ಕೆಡಕುಗಳ ಸಂಘರ್ಷ ಇದ್ದೇ ಇರುತ್ತದೆ. ಆ ಸಂಘರ್ಷಕ್ಕೆ ಕೊನೆಯೇ ಇಲ್ಲ. ಕೊನೆಯಾದರೆ ಆ ಜೀವನದಲ್ಲಿ ಸ್ವಾರಸ್ಯವೂ ಇಲ್ಲ. ಸಮಾಜದ ಸಮಕಾಲೀನ ಸಜೀವ ಚಿತ್ರಣವನ್ನು ಚಿತ್ರಿಸುವ ಕಾದಂಬರಿಗಾರ,

ಜೀವನವನ್ನು ಅತ್ಯಂತ ಉನ್ನತಿಯೆಡೆಗೆ ಒಯ್ಯಲು ಹವಣಿಸುತ್ತಾನೆ. ಅದೇ ಅವನ ವ್ಯವಸಾಯ ಧರ್ಮ. ಈ ಯತ್ನದಲ್ಲಿ ತ.ರಾ.ಸು. ಅತ್ಯಂತ ಯಶಸ್ವೀಯಾಗಿದ್ದಾರೆ.

ತ.ರಾ.ಸು. ಅವರ ನವುರಾದ ಸಂಭಾಷಣೆ ಮನೋಜ್ಞವಾಗಿದೆ. ಕಥಾ ನಿರೂಪಣೆ ಮಾಡುವಾಗ, ಆ ಕಥೆಯ ಕಾರಣ ಮತ್ತು ಹಿನ್ನೆಲೆಯನ್ನು ವಿವರವಾಗಿ ವಿವರಿಸುವ ಅವರ ಜಾಣ್ಮೆ ಮೆಚ್ಚುವಂತಹುದು. ಅವರ ಕಾದಂಬರಿಗಳಲ್ಲಿ ಹೆಚ್ಚಾಗಿ ಯಾವ ಪಾತ್ರಗಳೂ ನಿರ್ಜೀವವಾಗಿರುವುದಿಲ್ಲ. ನಿರ್ಜೀವ ಪಾತ್ರಗಳನ್ನು ಕಾದಂಬರಿಗಳಲ್ಲಿ ತುಂಬಿಸಿ, ಶಬ್ದಾಡಂಬರದ ಜಾಲವನ್ನು ಹೆಣೆದು ಪುಟಗಳನ್ನು ಬೆಳೆಸುವ ಹವ್ಯಾಸಕ್ಕೆ ಅವರು ಹೋಗುವುದೇ ಇಲ್ಲ. ಕಿರಿಯ ಪಾತ್ರಗಳಿಗೂ ಹಿರಿತನದ ಹೃದಯವನ್ನಿತ್ತು. ಆ ಪಾತ್ರಗಳು ಓದುಗನ ಮನಸ್ಸಿನಲ್ಲಿ ಸದಾ ಉಳಿಯುವಂತೆ ಮಾಡುವ ಅಪೂರ್ವ ಶಕ್ತಿ ತ.ರಾ.ಸು. ಅವರಲ್ಲಿದೆ.

ನಮ್ಮ ಸಮಾಜ ಧನದಾಹವೇ ಬದುಕಿನ ಧರ್ಮ ಎಂದು ತಿಳಿಯುವಷ್ಟು ಹೀನಾವಸ್ಥೆಗಿಳಿದಿದೆ. ನಮ್ಮ ಇಂದಿನ ಶಿಕ್ಷಣ, ಸುತ್ತು ಮುತ್ತಲಿನ ವಾತಾವರಣ, ವ್ಯಕ್ತಿಯ ಸ್ವಾರ್ಥವನ್ನು ಬೆಳೆಯುವ ಫಲವತ್ತಾದ ಹೊಲವಾಗಿದೆ. ಇಡೀ ದೇಶವೇ ಇಂದು ಈ ಶಾಪದಿಂದ ನರಳುವಂತಾಗಿದೆ. ದೇಶದ ರಾಜಕೀಯ ಇಂದು ತೀರ ಕಳಪೆಯಾಗಲು ಈ ಸ್ವಾರ್ಥವೇ ಮೂಲ ಕಾರಣವಾಗಿದೆ.

ನಮ್ಮ ಸಮಾಜದಲ್ಲೂ ಕ್ರಾಂತಿಯಾಗಬೇಕಾದುದು ಅನಿವಾರ್ಯ. ವ್ಯಕ್ತಿ ದೌರ್ಜನ್ಯವನ್ನು ಹಳಿಯುವುದು, ವ್ಯಕ್ತಿಗೆ ಸತ್ ಶೀಲವನ್ನು ಬೋಧಿಸುವುದೂ, ದೌರ್ಬಲ್ಯದ ಪ್ರದರ್ಶನವಂತೆ ಕಾಣುತ್ತದೆ. ಚುಚ್ಚುಮದ್ದಿನಿಂದ ರೋಗದ ಪ್ರಾಬಲ್ಯವನ್ನು ತಡೆಯಬಹುದು. ಆದರೆ ರೋಗದ ಸಮೂಲ ನಾಶ ಮಾಡಲು ದೀರ್ಘಾವಧಿಯ ಆರೈಕೆ ಅಗತ್ಯ, ಅರೋಗ್ಯದ ಕಾರಣವನ್ನು ಕಂಡು ಹಿಡಿಯದೆ ಅದರ ಮೂಲವನ್ನು ನಾಶ ಪಡಿಸುವುದು ಸಾಧ್ಯವಿಲ್ಲ. ಈ ದಿಸೆಯಲ್ಲಿ ತ.ರಾ ಸು. ಕಾದಂಬರಿಗಳು ಹುಟ್ಟಿಕೊಂಡಿವೆ. ತ.ರಾ.ಸು. ಅವರ ಈ ಉದ್ದೇಶ ಸಾಕಷ್ಟು ಸಫಲವೂ ಆಗಿದೆ. ಎಂತಲೇ ಅವರ ಕಾದಂಬರಿಗಳು ವ್ಯಕ್ತಿಶೀಲದ ಚಿತ್ರಣವಾಗಿರುವಂತೆಯೇ, ಸಮಾಜದ ರುದ್ರ ಸ್ವರೂಪದ ದರ್ಶನವೂ ಆಗಿದೆ. ತ.ರಾ.ಸು. ಸಮಾಜ ಜೀವನವನ್ನು ಸರಿಪಡಿಸುವ ದಾರಿಯನ್ನು ತೋರಿಸಿ ಕೊಟ್ಟಿದ್ದಾರೆ. ಆದರೆ ಆ ದಾರಿಯಲ್ಲಿ ನಡೆಯುವ ಸದ್ಬುದ್ಧಿ ಮಾತ್ರ ನಮ್ಮಲ್ಲಿ ಹೆಚ್ಚಿನವರಿಗೆ ಬಂದಿಲ್ಲ, ಬರಬೇಕಾದುದು ಅನಿವಾರ್ಯ.

ನಮ್ಮ ಸಮಾಜ ಈಗಾಗಲೇ ಸಾಕಷ್ಟು ಅವನತಿಯತ್ತ ಇಳಿದಿದೆ. ಪೂರ್ಣ ಹಾಳಾಗುವ ಮೊದಲು, ನಾವು ನಮ್ಮನ್ನು ತಿದ್ದಿಕೊಳ್ಳಬೇಕಾಗಿದೆ ಶ್ರೀ ತ.ರಾ.ಸು. ಅವರಂತಹ ಕಾದಂಬರಿಕಾರರು, ಪ್ರಗತಿಶೀಲ ಸಾಹಿತಿಗಳು, ಕವಿಗಳು ಇನ್ನೂ ಹೆಚ್ಚೆಚ್ಚು ಮಂದಿ ಹುಟ್ಟಬೇಕಾಗಿದೆ. ಈ ಸಮಾಜವನ್ನ ಮುನ್ನಡೆಸಬೇಕಾಗಿದೆ. ಅವರ ಆದರ್ಶ ನಮ್ಮನ್ನ ಕಾಪಾಡಬೇಕಾಗಿದೆ.

ಉದಾತ್ತ ಪಾತ್ರಗಳು

—ವಿಚಿತ್ರ, ಯೇತಡ್ಕ

ಶ್ರೀ ತ. ರಾ. ಸು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ "ಉದಾತ್ತ ಪಾತ್ರಗಳು" ಎಂಬ ವಿಷಯದ ಬಗ್ಗೆ ನಾನು ಬರೆಯಬೇಕಾಗಿದ್ದು ಈ ಕಾದಂಬರಿಗಳಲ್ಲಿ ಬರುವ ಪ್ರಮುಖ ಸ್ತ್ರೀ-ಪುರುಷ ಪಾತ್ರಗಳಲ್ಲಿರುವ ಉದಾತ್ತ, ವೀರ ಮನೋಭಾವವನ್ನು ವಿಶ್ಲೇಷಿಸಬೇಕೆಂದು ಶ್ರೀ ತ.ರಾ.ಸು. ಗೌರವ ಗ್ರಂಥದ ಗೌರವಾನ್ವಿತ ಸಂಪಾದಕರಾದ ಆತ್ಮೀಯ ಶಾ. ಮಂ. ಕೃಷ್ಣರಾಯರ ಆದೇಶ ಈ ಈ ಸಾಹಸ ಕಾರ್ಯಕ್ಕೆ ನೀಡಿದ ಸ್ಫೂರ್ತಿಯುತ ಪ್ರಚೋದನೆಯಾಗಿದೆ.

ಐತಿಹಾಸಿಕ ಕಾದಂಬರಿಗಳೆಂದಾಗ ಉದಾತ್ತ, ವೀರ ಪಾತ್ರಗಳು ಇರಲೇ ಬೇಕಲ್ಲ. ಇತಿಹಾಸ ನಿರ್ಮಾಣವಾಗುವುದು ಇಂಥ ಪಾತ್ರಗಳಿಂದ, ವ್ಯಕ್ತಿಗಳಿಂದ. ಭಾವನೆ ಉದಾತ್ತರಾಗಿರುವವರೆಲ್ಲರೂ ವೀರರಾಗಲೇ ಬೇಕೆಂದಿಲ್ಲ. ವೀರರಾಗಿರುವವರೆಲ್ಲರೂ ಉದಾತ್ತರೂ ಆಗಿರುವುದಿಲ್ಲ. ಆದರೆ ಇವೆರಡರ ಸಮನ್ವಯದಿಂದ ರೂಪುಗೊಂಡ ಧೀರೋದಾತ್ತ ವ್ಯಕ್ತಿಗಳು ಮಾತ್ರ ಉಜ್ವಲವಾದ ಬದುಕನ್ನು ಬಾಳಿ, ಇತಿಹಾಸದಲ್ಲಿ ಬಹುಕಾಲ ಉಳಿಯುತ್ತಾರೆ. ವರ್ತಮಾನ ಕಾಲದ ಜನ ಜೀವನದುದ್ದಕ್ಕೂ ಮಾರ್ಗ ದರ್ಶಕರಾಗಿ ಬೆಳಗುತ್ತಾರೆ. ಶ್ರೀ ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳಲ್ಲೂ ಈ ಎಲ್ಲ ಬಗೆಯ ವ್ಯಕ್ತಿಗಳ ಪಾತ್ರಗಳ ಪ್ರಭಾವ ಅಭಿವ್ಯಕ್ತವಾಗಿವೆ.

'ಕೀರ್ತಿನಾರಾಯಣ'ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳ ಶ್ರೇಣಿಯಲ್ಲಿ ಒಂದು ವೈಶಿಷ್ಟ್ಯಪೂರ್ಣ ಕಾದಂಬರಿ. ಹೊಯ್ಸಳ ರಾಜ ಬಲ್ಲಾಳರಾಯ ಕೃಷ್ಣಾ ತೀರದಿಂದ ನೀಲಗಿರಿಯವರೆಗಿನ ಕನ್ನಡನಾಡನ್ನು ಒಂದಾಗಿಸುವ ಕಂಡ ಕನಸನ್ನು ನನಸಾಗಿ ಮಾಡುವ ಬೃಹತ್ಕಾರ್ಯದ ಮೊದಲ ಹೆಜ್ಜೆಯಾಗಿ ಚೋಳರಾಜನೊಡನೆ ಹೋರಾಡಿ ಗಂಗವಾಡಿಯ ಬಿಡುಗಡೆಯನ್ನು ಸಾಧಿಸಿದ ರೋಮಾಂಚನಕಾರಿ ಸಾಹಸ ಕೃತ್ಯದ ಸ್ವೈಜ ಚಿತ್ರಣ ಎನ್ನುವಂತಿದೆ ಕೀರ್ತಿನಾರಾಯಣ.

ಕೀರ್ತಿನಾರಾಯಣದ ಮೊದಲ ಅಧ್ಯಾಯದಲ್ಲೆ ಮುಗಿದು ಹೋಗುವ, ಹೊಯ್ಸಳ ರಾಜ ಬಲ್ಲಾಳರಾಯ, ರಾಜ ಪರಂಪರೆಯ ಒಬ್ಬ ಧೀರೋದಾತ್ತ ವ್ಯಕ್ತಿ. ಚೋಳ-ಚಾಲುಕ್ಯರ ಆಕ್ರಮಣ ನೀತಿಯ ಪ್ರಬಲ ವಿರೋಧಿಯಾಗಿದ್ದ ಆತ ಹರಿದುಹಂಚಿಹೋದ ಕನ್ನಡ ನಾಡಿನಿಂದ ಏಕೀಕರಣದ ಕನಸನ್ನು ಕಂಡ ದೂರ ದೃಷ್ಟಿಯ ಶ್ರೀಮಂತ ಪ್ರಜ್ಞಾವಂತ. ತಾನು ರೋಗಿಷ್ಟನಾಗಿದ್ದರೂ ಜಗದೇವರಾಯನ ಧಾಳಿಯನ್ನು "ಕಿರೀಟ ಹೊತ್ತವನಿಗೆ ಹಿಡಿಯುವಷ್ಟೂ ಶಕ್ತಿ ಇರಲಿಲ್ಲ ಎಂದು ಲೋಕ ನಗುವಂತಾಗ ಬಾರದು" ಎಂದು ತಾನೇ ರಣಕಣಕ್ಕಿಳಿದು ಯಶಸ್ವಿಯಾಗಿ ಎದುರಿಸಿದ ಧೀರ.

"ಎಂದಿದ್ದರೂ ಬಂದೇ ಬರುವ ಸಾವು-ಹಾಸಿಗೆಯಲ್ಲೇ ಬಾರದೆ ಸಮರಾಂಗಣದಲ್ಲಿ ಬಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಭಾವಿಸುವ ಕೆಚ್ಚೆದೆಯ ಕಲಿ. 'ನನಗಿರುವುದು ನನ್ನ ಚಿಂತೆಯಲ್ಲ, 'ರಾಜ್ಯದ ಚಿಂತೆ' ಎನ್ನುವ ಉದಾತ್ತ ಉಜ್ವಲ ರಾಜ್ಯನಿಷ್ಠೆ. ಪ್ರಜಾವಾತ್ಸಲ್ಯ, ಸಮೃದ್ಧ ಸುಖೀರಾಜ್ಯ, ಅದಕ್ಕಾಗಿ ತಮ್ಮ-ವಿಷ್ಣುವರ್ಧನನಿಂದ ಭಾಷೆ ತೆಗೆದುಕೊಳ್ಳುವತನಕವೂ ಆತನಿಗೆ ನೆಮ್ಮದಿ ಇರುವುದಿಲ್ಲ. ಕಾದಂಬರಿಯಲ್ಲಿ ಬಲ್ಲಾಳರಾಯನದು ಕಿರಿಯ ಪಾತ್ರ. ಅವನ ಭವಿಷ್ಯವೂ ಕಿರಿದು. ಆದರೆ ಉದಾತ್ತ ವೀರಮನೋಭಾವ ಅತ್ಯಂತ ಹಿರಿದು.

ಅಣ್ಣ ಬಲ್ಲಾಳರಾಯನ ಕನಸನ್ನು ನನಸಾಗಿ ಮಾಡುವ ಪ್ರತಿಜ್ಞೆಗೆ ಬದ್ಧನಾಗಿ ಅಧಿಕ್ಕಾರಕ್ಕೇರಿದ ವಿಷ್ಣುವರ್ಧನ ಮೊದಲು ಯೋಚಿಸಿದ್ದ ಗಂಗವಾಡಿಯ ಬಿಡುಗಡೆಯ ಹೋರಾಟವನ್ನು. ಚೋಳ ರಾಜ ಅದಿಮನ-ಅಧೀನದಲ್ಲಿದ್ದ ಗಂಗವಾಡಿಯ ಮೇಲೆ ಪ್ರಬಲವಾದ ಧಾಳಿಯನ್ನು. ಆ ಧಾಳಿಯು ಕ್ಷಣಿಕ ಆವೇಶದಿಂದ ರೂಪುಗೊಳ್ಳಲಿಲ್ಲ. ಮಂತ್ರಿವರ್ಗದವರ - ದಂಡನಾಯಕರ - ಆಪ್ತೇಷ್ಟರ ಕೂಡ ದೀರ್ಘವಾದ ಸಮಾಲೋಚನೆ ನಡೆಸಿಯೇ ಸಮರ ಸನ್ನಾಹವನ್ನು ಕೈಗೊಂಡದ್ದು ಅವನ ಉದಾತ್ತತೆಗೆ ಸ್ಪಷ್ಟ ಸಾಕ್ಷಿಯಾಗಿದೆ.

ವಿಷ್ಣುವರ್ಧನ-ಹೊಯ್ಸಳ ರಾಜರಾಜೇಶ್ವರ. "ಆತನ ಕಣ್ಣಸನ್ನೆಯೊಂದೇ ಸಾಕು ಸಾವಿರಾರು ಜನ ಸೈನಿಕರು ಕತ್ತಿ ಹಿಡಿದು ಜೀವನ್ಮರಣ ಹೋರಾಟಕ್ಕೆ ಧುಮುಕುತ್ತಾರೆ. ಅವರ ಅಚಲವಾದ ರಾಜ್ಯ ನಿಷ್ಠೆ. ರಾಜವಿದ್ಯೆ ಕಲಿತನದ್ದಲ್ಲ ಅವನಿಗೆ ವಿಶ್ವಾಸವಿದೆ. ದಂಡ ನಾಯಕರೇ ದಂಡಯಾತ್ರೆಯ ಹೊಣೆಗಾರಿಕೆಯನ್ನು ಒಪ್ಪಿಕೊಂಡಿದ್ದಾರೆ. ಸಮಗ್ರ ಸೇನಾ ಬಲವೇ ಗಂಗವಾಡಿಯ ಕಡೆಗೆ ಹೊರಟಿದೆ. ಮಮತೆಯ ಮಡದಿ ಶಾಂತಲಾದೇವಿ ತುಂಬು ಬಸಿರಿ. ಆದರೂ ಯಶಸ್ವಿಯಾಗಿ ಹೋರಾಡಿದ ಅವನನ್ನು ಅಸೀಮ-ಆಕಾಂಕ್ಷೆ ದಂಡಯಾತ್ರೆಯಲ್ಲಿ ಸಹ ಭಾಗಿಯಾಗಲು ಪ್ರೇರೇಪಿಸುತ್ತದೆ. ಅದೂ ಸಾಮಾನ್ಯ ಸೈನಿಕನಂತೆ" ಎಂತಲೇ ಮುನ್ನುಗ್ಗುತ್ತಾನೆ. ಯುದ್ಧದಲ್ಲಿ ಗೆಲುವಾದಾಗಲೂ ಈ ಗೆಲುವು ನಮ್ಮೊಬ್ಬನದೇ ಅಲ್ಲ, ಸಾವಿರಾರು ಜನ ಸೈನಿಕರದು. ಲಕ್ಷಾಂತರ ಮಂದಿ ಕನ್ನಡ ಜನತೆಯದು ಎಂದು ಕೃತಜ್ಞತೆ ಸಲ್ಲಿಸುತ್ತಾನೆ. ಇಂತಹ ಉದಾರ – ಉದಾತ್ತ ಮನೋಭಾವ ಎಲ್ಲ ಅರಸರಲ್ಲೂ ಕಾಣಬಹುದೆ ಎಂದು ಬೆರಗಾಗುತ್ತೇವೆ.

ಶೌರಾಚಾರಿಯ ಸರ್ವ ಸಜ್ಜಿತ ರಥ ಆಕಾಶ ದರ್ಶಿಗಳನ್ನು ಕಂಡಾಗ ಅವನಲ್ಲಿ ತೋರುವ ಗೌರವವೂ ಅಭಿನಂದನೀಯ. ದೇಶ ಅಳಿಯುವುದು-ಉಳಿಯುವುದು ತನ್ನ ಕೃತಿಗಳ ಬಗ್ಗೆ ಅಭಿಮಾನವುಳ್ಳ ಪ್ರತಿಭಾಶಾಲಿಗಳಿಂದ ಎಂದು ಹೇಳುವ ವಿಷ್ಣುವರ್ಧನನ ಮಾತು ಅವನ ಕಲಾ ಶ್ರೀಮಂತಿಕೆಗೆ ಉದಾತ್ತತೆಯ ಮೆರುಗು ಕೊಟ್ಟಂತಾಗಿದೆ.

ವಿಷ್ಣುವರ್ಧನ ವೀರಾಧಿವೀರ "ಮತಿಜರೊಳ್ ಗಂಡ." ದಾಸ್ಯಭಾವದಿಂದ ಅವನತವಾದ ಕನ್ನಡಿಗರ ಶಿರಗಳು ಮತ್ತೆ ನಿಮಿರಿ ನಿಲ್ಲುವಂತೆ ಮಾಡಿದ ಪ್ರಜಾ "ಪ್ರಭುತ್ವವಾದೀ ಪ್ರಭು" 'ಇಂದು ನಾವು ಶತಮಾನಗಳ ದಾಸ್ಯಕ್ಕೊಳಗಾಗಿ, ಬಲ ವಾದ ನಮ್ಮ ನಾಡನ್ನು ಕಟ್ಟಬೇಕಾಗಿದೆ. ಇಂದು ನಮ್ಮ ಜನರ ಚೈತನ್ಯ–ಪ್ರತಿಭೆ ಹಾಗೂ ಸಾಹಸ ಎಲ್ಲವೂ ಅದಕ್ಕಾಗಿ ವಿನಿಯೋಗವಾಗಬೇಕಾಗಿದೆ. ದಾಸ್ಯದೊಂದಿಗೇ ದ್ವೇಷವನ್ನೂ ಮರೆತು, ಆ ಸೃಷ್ಟಿಶೀಲವಾದ ದಾರಿಯಲ್ಲಿ ನಮ್ಮ ಚೈತನ್ಯ ಗಂಗೆಯನ್ನು ಹರಿಯಬಿಡಿ, ವಿಷ್ಣುವರ್ಧನನ ಉದಾತ್ತತೆಯ ಉಜ್ವಲತೆ, ವಿಜಯೋತ್ಸವದ ಸಂದರ್ಭದಲ್ಲಿ ಪ್ರಬಲವಾಗುತ್ತದೆ.

ಆತ ಕೀರ್ತಿಗಾಮಿ, ಅದು ಹೋಗಲಿ ಬರಲಿ ಎನ್ನುವ ಅಭಿಲಾಷೆಯಿಲ್ಲ, ಧರ್ಮಾಚರಣೆಯಿಂದ ಬರಬೇಕು. ಇದು ಅವನ ಅಭಿಮತ. "ಯಾವ ಸಾಮ್ರಾಜ್ಯವೂ ಸ್ಥಿರವಲ್ಲ, ಚಿರವಾದುದು ಒಳ್ಳೆಯ ಹೆಸರು ಮಾತ್ರ. ಆ ಮಾರ್ಗದಲ್ಲಿ ಗೆಲುವು ಬಂದರೆ ಸಂತೋಷ. ಸಾವು ಬಂದರೂ ಶ್ರೇಯಸ್ಕರ." ಧೀರೋದಾತ್ತ ವ್ಯಕ್ತಿತ್ವವಿಲ್ಲದ ಯಾವ ದೊರೆಯಿಂದ ಇಂಥ ಮಾತು ಬಂದೀತು.

ತ.ರಾ.ಸು. ಬರೆದಂತೆ – ಕರ್ನಾಟಕವನ್ನು ಆಳಿದ ರಾಜ ಮಹಾರಾಜರ ಮಾಲೆಯಲ್ಲಿ ಧ್ರುವಕಾಂತಿಯಿಂದ ಬೆಳಗುತ್ತಿರುವ ಉಜ್ವಲತಾರೆ ವಿಷ್ಣುವರ್ಧನ. ಇಂದು ಕರ್ನಾಟಕವೆಂದು ಹೆಸರು ಪಡೆದಿರುವಷ್ಟು ಭಾಗವನ್ನು ಒಂದು ನಾಡಾಗಿ ಕಟ್ಟಿದ ಮೊದಲನೆಯವನು ವಿಷ್ಣುವರ್ಧನ.

'ಕೀರ್ತಿ ನಾರಾಯಣ'ದಲ್ಲಿ ಇನ್ನೊಂದು ಪ್ರಮುಖ ಧೀರೋದಾತ್ತಪಾತ್ರ-ಗಂಗರಾಜನದು. ಆತ ವಯೋವೃದ್ಧ, ಜ್ಞಾನವೃದ್ಧ, ಸಮರತಂತ್ರ ಶಾಸ್ತ್ರಜ್ಞ. ಗಂಗವಂಶದ ದೊರೆಗಳ ಪರಂಪರೆಯಲ್ಲಿ ಹುಟ್ಟಿ ರಾಜಕಾರಣಿ. ಎಪ್ಪತ್ತರ ಇಳಿ ವಯಸ್ಸಿನಲ್ಲೂ, ಇಪ್ಪತ್ತರ ಹುಮ್ಮಸ್ಸು, ಎನ್ನುವ ಕೆಚ್ಚಿದೆ. ಗಂಗರಾಜ–ವಿಷ್ಣುವರ್ಧನನ ಮಹಾ ದಂಡನಾಯಕನೂ ಹೌದು, ಆಪ್ತ ವರ್ಗದವನೂ ಹೌದು, ತನ್ನ ತಾಯ್ನಾಡಿನ ಬಿಡುಗಡೆ, ಅವನ ಬಾಳಿನ ಉಸಿರು. ಆದರೂ ಸೇನಾಧಿಪತ್ಯದ ಹೊಣೆ ಹೊರಬೇಕಾಗಿ ಬಂದಾಗ – ಅದನ್ನು ಕಿರಿಯರಾರಿಗಾದರೂ ಒಪ್ಪಿಸಬೇಕೆನ್ನುವ. ಗಂಗರಾಜನ ಔದಾರ್ಯ, ಉದಾತ್ತತೆಯ ಇನ್ನೊಂದು ರೂಪವಾಗಿ ಬಂದಿರುವುದು ಉಲ್ಲೇಖನೀಯ. ಗಂಗರಾಜನ ಧರ್ಮಪ್ರಜ್ಞೆ, ರಾಜಕೀಯ ಸಿದ್ಧಾಂತ, ನ್ಯಾಯ. ನಿಷ್ಠೆ, ಶಿಸ್ತು, ಸಂಯಮ ನೈತಿಕತೆಗಳು ಅವನ ಉದಾತ್ತ ವೀರ ಮನೋಭಾವಕ್ಕೆ ಪೂರಕವಾಗಿವೆ.

ಶಾಂತಲಾ – ವಿಷ್ಣುವರ್ಧನನ ಪಟ್ಟದರಸಿ. ಅವಳ ಪತಿನಿಷ್ಠೆ – ಧರ್ಮಪರಾಯಣತೆ, ಕಲಾವಂತಿಕೆ ಸರಳ. ಅನುಕರಣೀಯ. ಅಂತೆಯೇ ಅವಳು ರಾಜತಾಂತ್ರಿಕಳೂ ಹೌದು. ಸಮರ ಕಲಾ ಶೋಭಿತಳೂ ಹೌದು. ದೊರೆ ದಂಡನಾಯಕರೊಡನೆ ದಂಡಯಾತ್ರೆಗೆ ತೆರಳಿದಾಗ ಅರಕ್ಷಿತವಾದ ರಾಜ್ಯದ ರಕ್ಷಣೆಯ ಸರ್ವಭಾರವನ್ನೂ ಆಕೆ ವಹಿಸಿಕೊಂಡಾಗ ಅವಳ ವೀರೋಚಿತ ಮಾತುಗಳು ರೋಮಾಂಚಕ

ವಾಗಿವೆ. ಜನಸಾಮಾನ್ಯರ, ಬಗೆಗಿರುವ ಅನುಕಂಪ, ತಾಯ್ತನಕ್ಕೆ ಸಹಜವಾದ ಪ್ರೀತಿ – ವಾತ್ಸಲ್ಯ ಉದಾತ್ತತೆಗೆ, ಮಾನವೀಯ ಮೌಲ್ಯಗಳ ಹಿರಿತನಕ್ಕೆ ಒಂದು ಸುಂದರ ಕೊಡುಗೆಯಾಗಿದೆ.

ಕಥಾ ವಸ್ತುವಿಗೆ, ಅದರಲ್ಲಿ ಬರುದು ಹೋಗುವ ಪ್ರಮುಖ ಪಾತ್ರಗಳ ಅಭಿವ್ಯಕ್ತಿಗೆ ಹೊಂದಿಕೆಯಾದ ಕಾದಂಬರಿಯ ಹೆಸರು "ಕೀರ್ತಿ ನಾರಾಯಣ" ಇಲ್ಲಿ ಸಾರ್ಥಕವಾಗಿದೆ.

೨

ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ತ.ರಾ.ಸು. ಕಾದಂಬರಿಗಳ ಸಾಲಿನಲ್ಲಿ ಮೊದಲನೆಯದಾದ ಕಂಬನಿಯ ಕುಯಿಲು ಎಂದೋ ಒಮ್ಮೆ ಓದಿದ್ದೆ. ಈಗ ಪುನಃ ಓದುವ ಭಾಗ್ಯ ಬರಲಿಲ್ಲ, ಆದರೆ 'ರಕ್ತರಾತ್ರಿ' ಲಭ್ಯವಾಯಿತು. ಮೆಲಕು ಹಾಕುವ ಕೆಲಸವನ್ನೂ ಮಾಡಿದುದೂ ಆಯಿತು. ಆಗ ಕಂಡದ್ದು ಅನುಭವಿಸಿದ್ದೂ......ಒಂದು ಐತಿಹಾಸಿಕ ದುರಂತ ಘಟ್ಟವನ್ನು.

ಚಿತ್ರದುರ್ಗದ ಗದ್ದುಗೆಯನ್ನೇರಿದ್ದ ಓಬಣ್ಣನಾಯಕನನ್ನು ಓಲಗ ಸಾಲೆಯಲ್ಲಿ ಶರಣಾಗತಿಯ ನೆವದಿಂದ ಬಂದ ದಳವಾಯಿ ಮುದ್ದಣ್ಣ ಕೊಲೆ ಮಾಡಿದ. ತಮ್ಮ ಚಿಕ್ಕಣ್ಣನಾಯಕ ಮುದ್ದಣ್ಣನ ಕೈಗೊಂಬೆಯರಸನಾಗಿ ಕಿರೀಟ ಹೊತ್ತು ಅತಂತ್ರನಾಗಿ ಸತ್ತ. ಸಿಂಹಾಸನ ಮತ್ತೆ ಬರಿದಾದಾಗ ಲಿಂಗಣ್ಣನಾಯಕ ಆಪ್ತೇಷ್ಟರ ಒತ್ತಾಯಕ್ಕಾಗಿ ಪಟ್ಟವೇರುತ್ತಾನೆ. ಆದರೆ ಧೂರ್ತ ಮುದ್ದಣ್ಣನ ಕುತಂತ್ರ–ಅಧಿಕಾರಾಕಾಂಕ್ಷೆಯ ಹಂಬಲಕ್ಕೆ ತುತ್ತಾಗಿ ಕೊಲೆಯಾಗುವ ರುದ್ರ, ಮನೋಹರ, ಬೀಭತ್ಸ ಸನ್ನಿವೇಶಗಳಿಂದ 'ರಕ್ತರಾತ್ರಿ' ರಂಜಿಸುತ್ತಿದೆ.

ಹಾಗೆ ನೋಡಿದರೆ ಮೇಲುನೋಟಕ್ಕೆ ಈ ಕಾದಂಬರಿಯಲ್ಲಿ ಉದಾತ್ತ ಪಾತ್ರಗಳೇ ಇಲ್ಲವೆನ್ನಬಹುದಾದರೆ. ಲಿಂಗಣ್ಣನಾಯಕ, ಭರಮಣ್ಣ, ಪರಶುರಾಮಪ್ಪ, ಗುರುಗಳು, ಮಲ್ಲಪ್ಪನಾಗತಿ, ಗಿರಿಜಪ್ಪ, ಇವರೆಲ್ಲ ಎಂಥವರು ಎಂದು ಕೇಳಬೇಕಾಗುತ್ತದೆ. ಪಲನಾಡಿನ ಒತ್ತಡದಿಂದಾಗಿ ಒಮ್ಮೊಮ್ಮೆ ಅತ್ತಿತ್ತ ಚಲಿಸಿದರೂ. ಈ ಪ್ರಮುಖ ಜೀವಂತ ಪಾತ್ರಗಳಲ್ಲಿ ಉದಾತ್ತ ವೀರ ಮನೋಭಾವ, ಮಿಡಿಯುತ್ತಿರುವುದರ ಅರಿವಾಗುತ್ತದೆ.

ದಳವಾಯಿ ಮುದ್ದಣ್ಣನಿಗೂ ಉದಾತ್ತತೆಗೂ ಎಣ್ಣೆ–ಸೀಗೆ ಸಂಬಂಧ. ಆತ ವೀರ ಹೌದು. ಆದರೆ ಅವನ ವೀರಗಾಥೆ ಕುತಂತ್ರ, ವಂಚನೆ, ಕೊಲೆ, ನಿರಂಕುಶಾಧಿಕಾರ, ತೀರದ ಮಹತ್ವಾಕಾಂಕ್ಷೆಗಳ ಕರಾಳ ಮುಸುಕಿನಲ್ಲಿ, ಅದು ತನ್ನ ಪಟ್ಟವನ್ನೇ ಕಳೆದು ಕೊಂಡಿದೆ. ಅವನ ತಮ್ಮಂದಿರು ಪರಿವಾರದವರು ಅಷ್ಟೇ, ಭೋಗ ಪರಾಕುಗಳು.

ಲಿಂಗಣ್ಣನಾಯಕನಲ್ಲಿ ನಾಯಕನಾಗುವ ಯೋಗ್ಯತೆಯುಳ್ಳ ಧೀಮಂತಿಕೆ ಇದೆ. ಆದರೆ ತನ್ನ ನಲವತ್ತು ವರ್ಷಗಳ ಜೀವನದಲ್ಲಿ ಏನನ್ನೂ ಸಾಧಿಸಲಾರದ ನಿರಾಶೆಯ ನೋವಿದೆ, ವೈರಾಗ್ಯದ ನಿರ್ಲಿಪ್ತತೆಯೂ ಇದೆ. ನಿಷ್ಕ್ರಿಯ, ಹಿರಿಯನ ತನಕ್ಕಾಗಿ ತನಗೆ ತಾನು ಗಂಡಸೇ ಎಂದು ಸವಾಲು ಹಾಕುತ್ತಾನೆ. ಬದುಕನ್ನೇ ಪ್ರಶ್ನಿಸುತ್ತಾನೆ, ನೆನಪಿನಾಳವನ್ನು ಕೆದಕುತ್ತಾನೆ. ಸಿಂಹಾಸನವನ್ನೊಲ್ಲೆನ್ನುತ್ತಾನೆ ಅವನ ಅಂತಃಕರಣ ಕಲಕದೆ. ಅಲ್ಲಿ ಸೇಡು ಪ್ರತೀಕಾರಗಳು ಉಂಟಾಗುತ್ತದೆ; ಅವನ ಹೃದಯ ಕಲ್ಲಾಗುತ್ತದೆ. ಗುರುಗಳ ಹಿತೋಪದೇಶ, ಭರಮಣ್ಣ, ಪರಶುರಾಮಪ್ಪನವರ ಒತ್ತಾಯ, ಗಿರಿಜವ್ವನ ಪ್ರಚೋದನೆಯಿಂದ ಅವನಿಗೆ ರಾಜ್ಯಾಭಿಷೇಕವಾಗುತ್ತದೆ. ತನ್ನ ಉನ್ನತ ಧ್ಯೇಯ ಸಾಧನೆಗಳಿಗಾಗಿ ನಿರಂತರ ಪ್ರಯತ್ನಿಸಿದರೂ, ಮುದ್ದಣ್ಣನ ಮಹತ್ವಾಕಾಂಕ್ಷೆಯ ವಿರೋಧಿಯಾಗಿ ಬಲಿ ಪಶುವಾಗುತ್ತಾನೆ.

ಲಿಂಗಣ್ಣನ ಉದಾತ್ತ ವ್ಯಕ್ತಿತ್ವಕ್ಕೆ ಪೋಷಕವಾದ ಇನ್ನೊಂದು ಸನ್ನಿವೇಶ— ಮುದ್ದಣ್ಣ ಕಳಿಸಿದ ಅಬಲೆಯನ್ನು "ತಂಗಿಯಂತೆ ಭಾವಿಸಿ ಉಪಚರಿಸಿ ಉಡುಗೆ ತೊಡುಗೆಯಿತ್ತು ಕಳುಹಿಸುವಲ್ಲಿ ವ್ಯಕ್ತವಾಗುತ್ತದೆ. ಮುದ್ದಣ್ಣ ಬೀಸಿದ ಗಾಳದ ಸುಳಿವು ಹತ್ತಿದ ಲಿಂಗಣ್ಣ ನಾಯಕ ಈ ಸಂದರ್ಭದಲ್ಲಿ ನಡೆದುಕೊಂಡ ರೀತಿ ಹೆಣ್ಣಿನ ಬಗೆಗೆ ಅವನಿಗಿರುವ ಪೂಜ್ಯ ಭಾವನೆಯ ಗೌರವದ ಸಂಕೇತವಾಗಿದೆ.

ಹುಚ್ಚಿ ಗಿರಿಜವ್ವ ನಿಜಕ್ಕೂ ಹುಚ್ಚಳೇ, ಅವಳ ಸ್ವಂತಕ್ಕಾಗಿ ಏನನ್ನೂ ಭಾವಿಸದಿರುವುದೇ ಅವಳ ಉದಾತ್ತತೆಗೆ ನಿದರ್ಶನ. ಅವಳ ರಾಜ್ಯ ನಿಷ್ಠೆ, ರಾಜ ನಿಷ್ಠೆ, ಪ್ರಶ್ನಾತೀತ. ನಾಗತಿಯ ಬಗೆಗೂ ಅವಳದು ಅಚಲ ನಿಷ್ಠೆ. ನಾಗತಿಯ ಸಾವಿಗೆ ಕಾರಣರಾದವರ ರಕ್ತಕ್ಕಾಗಿ ಅವಳು ನಾಗತಿಯ ನೆರಳಾಗುತ್ತಾಳೆ. ಹಿಂಸೆಯನ್ನು ಹಿಂಸೆಯಿಂದಲೇ ಸೋಲಿಸಬೇಕೆನ್ನುವ ಸೇಡು ಪ್ರತೀಕಾರಗಳಿಗಾಗಿ ಹಾತೊರೆಯುತ್ತಾಳೆ. ಅವಳು ಶಾಂತಿಯನ್ನು ಬಯಸುತ್ತಾಳೆ. ಆದರೆ ಅದನ್ನು ವಿರಕ್ತಿಯಿಂದಲ್ಲ, ಕ್ರಾಂತಿಯಿಂದ, ಸಾಹಸ ಸಾಮರ್ಥ್ಯಗಳಿಂದ, ಶಕ್ತಿಯಿಂದ.

ಗಿರಿಜವ್ವ ನಾಗತಿಯ ದಾಸಿ. ಆದರೆ ಮುದ್ದಣ್ಣನ ವಿಶ್ವಾಸಘಾತದ ವಿರುದ್ಧ ಹೋರಾಡುವ ಗಡಸುತನವಿದೆ. ಗಿರಿಜವ್ವನ ವೀರೋಚಿತ ನಡೆ–ನುಡಿ ಸಾಮಾನ್ಯ ನಾರಿಯಾದರೇನಾಯಿತು, ಮುದ್ದಣ್ಣನ ಕರಾಳ ಪೈಶಾಚಿಕ ಕೃತ್ಯಗಳನ್ನು ಮೆಟ್ಟಿ ನಿಲ್ಲುವ ಮಾರಿಯಾಗುತ್ತಾಳೆ. ಭರಮಣ್ಣ, ಪರಶುರಾಮಪ್ಪ ಚಿತ್ರದುರ್ಗದ ಒಡೆಯರ ನಿಷ್ಠಾವಂತ ಹಿರಿಯ ಅಧಿಕಾರಿಗಳು, ಪರಂಪರೆಯಲ್ಲಿ ಹುಟ್ಟಿ ಬೆಳೆದಿರುವ ಅವರ ದೂರದೃಷ್ಟಿ, ಸೂಕ್ಷ್ಮ ಬುದ್ಧಿ, ರಾಜಕೀಯ ಪರಿಣತಿ ಶ್ಲಾಘನೀಯ. ಬರಿಯ ಅಧಿಕಾರ ದಾಹಕ್ಕೇ ಅಂಟಿಕೊಂಡ ದುಷ್ಟತೆಯ ಕೈಗೊಂಬೆಗಳನ್ನು, ಅರಾಜಕತೆಯನ್ನು ಅವರು ಮೆಚ್ಚುವುದಿಲ್ಲ. ಶಾಂತಿ ಸುವ್ಯವಸ್ಥೆ, ಸುಭದ್ರ ಆಡಳಿತ ಅದಕ್ಕಾಗಿ ಬದುಕನ್ನೇ ಬಲಿಗೊಡಲೂ ಸಿದ್ಧರಿರುವ ಉನ್ನತ ಸಜ್ಜನ ನಾಯಕ.

ಶ್ರೀ ರಾಮರು. ಅವರಲ್ಲಿ ಶಿಸ್ತು, ಸಂಯಮ, ಸಹನೆಗಳಿವೆ. ನ್ಯಾಯ ಅನ್ಯಾಯಗಳನ್ನು ವಿವೇಚಿಸುವ ವಿಶ್ಲೇಷಿಸುವ ಪಾಂಡಿತ್ಯವಿದೆ. ಪರಿಶ್ರಮವಿದೆ, ಪೌರುಷವೂ ಇದೆ. ಪ್ರಾಮಾಣಿಕತೆಯಿದೆ, ಪ್ರತಿಭೆಯಿದೆ. ರಕ್ತರಾತ್ರಿಯ ಕರಾಳತೆಯಲ್ಲೂ ನಿರ್ಭೀತರಾಗಿ, ಸುಳಿದಾಡುವ ಅವರ ಪಾತ್ರಗಳು ಪರಿಣಾಮಾಕಾರಿಯಾಗಿವೆ.

ಶ್ರೀ ಶ್ರೀ ಉಗ್ರಚೆನ್ನವೀರ ಸ್ವಾಮಿಗಳದ್ದು ಇನ್ನೊಂದು ಜ್ವಲಂತ ಪಾತ್ರ. ಸ್ವಾಮಿಗಳಿಗೆ ವಿರಕ್ತಜೀವನ ಮುಖ್ಯ. ಮಠದ ಆವರಣದ ಆಚೆಗೆ ಏನು ನಡೆಯುತ್ತದೆ ಎನ್ನುವ ಊಹೆಗೂ ಅಷ್ಟೇ ಆಸಕ್ತಿಯೂ ಇರುವುದರಿಂದಲೇ ಈ ಪಾತ್ರಕ್ಕೊಂದು ವೈಶಿಷ್ಟ್ಯವಿದೆ. ಸ್ವಾಮಿಗಳ ವಿಶಾಲ ಮನೋಭಾವ ರಾಜ್ಯದ ರಾಜಕೀಯ ಕುರಿತು ಚಿಂತಿಸುತ್ತದೆ. ಸತ್ಯ-ಶಾಂತಿ-ಅಹಿಂಸೆ-ಧರ್ಮ ದೇವರುಗಳಿಗೆ ಬೆಲೆ ಬರಬೇಕಾದರೆ ಆಳುವವರು ಒಳ್ಳೆಯವರಾಗಿರಬೇಕು. ಆಗ ಪ್ರಜೆಗಳೂ ಒಳ್ಳೆಯವರಾಗಿರುತ್ತಾರೆ. ನ್ಯಾಯದಲ್ಲಿ ನಂಬಿಕೆ, ನಡತೆಯಲ್ಲಿ ಸಚ್ಚಾರಿತ್ರ್ಯ ಒಡಮೂಡುತ್ತದೆ; ಎಂತಲೇ ಅವರು ನಾಯಕ, ಪರಶುರಾಮಪ್ಪ, ಭರಮಪ್ಪ. ಗಿರಿಜವ್ವ, ನಾಗತಿ ಮುಂತಾದವರ ಬೆನ್ನ ಹಿಂದೆ ನಿಂತು ರಾಜ್ಯ ರಕ್ಷಣೆಯ ಸೂತ್ರಧಾರಿಗಳಾಗುತ್ತಾರೆ. ಆದರೆ ಅವರು ಸೇಡು, ರಕ್ತಪಾತ, ಕೊಲೆ, ಹಿಂಸೆಯನ್ನು ಬೆಂಬಲಿಸುವುದಿಲ್ಲ. ಸ್ವಾಮಿಗಳ ಸಲಹೆಗಳು ಹಿತೋಕ್ತಿಗಳು, ಕಾಲೋಚಿತ ರಾಜಕೀಯ ಪ್ರಜ್ಞೆಗಳ ಪ್ರತೀಕವಾಗಿದ್ದು ಅವರ ಅಪಾರ ಅನುಭವ ಜ್ಞಾನ ಅನುಕರಣೀಯವಾಗಿದೆ. 'ರಕ್ತರಾತ್ರಿ, ಯಲ್ಲಿ ಅವರೊಂದು ಚಲಿಸದ ಧೃವತಾರೆ.

'ರಕ್ತರಾತ್ರಿ' ಸುಮ್ಮನೆ ಕಳೆಯುವುದಿಲ್ಲ. ಅದಕ್ಕೆ ಕಾರಣವಾದ ಸನ್ನಿವೇಶಗಳಲ್ಲಿ, ವ್ಯಕ್ತಿಗಳಲ್ಲಿ ಯಾವುದೋ ಒಂದು ಸಂಘರ್ಷ ನಡೆಯಲೇಬೇಕಾಗಿದ್ದು ಅದು 'ತಿರುಗುಬಾಣ' ದಲ್ಲಿ ಸಫಲತೆಯನ್ನು ಕಂಡುಕೊಂಡಿದೆ. ತಿರುಗುಬಾಣದ ಹೊಡೆತಕ್ಕೆ ಬೇಡವಾದುದು ಅಳಿದಿದೆ ಬೇಕಾದುದು ಉಳಿದಿದೆ. 'ರಕ್ತರಾತ್ರಿ' ಯಲ್ಲಿ ನೋವಿನ ಕಹಿಯನ್ನು ಅನುಭವಿಸಿದ ಉದಾತ್ತತೆ ಇಲ್ಲ. ಗೆಲುವಿನ ಸಿಹಿಯನ್ನೇ ಮೈಗೂಡಿ ಕೊಂಡು ಬಂದಿದೆ.

"ಉದಾತ್ತವಲ್ಲದ ಯಾವ ಧ್ಯೇಯಗಳೂ ಎಂದೂ ಸಫಲವಾಗುವುದಿಲ್ಲ." ಎಂಬ ಸಂದೇಶ ಇಲ್ಲಿ ಸಂಕೀರ್ಣಗೊಂಡು ಚಿತ್ರಿತವಾಗಿದೆ. ಇತಿಹಾಸಕಾಲದಿಂದಷ್ಟೇ ಅಲ್ಲ ಪುರಾಣಕಾಲದಿಂದಲೂ ಕೊಲೆ, ಶೋಷಣೆ, ದಬ್ಬಾಳಿಕೆ, ನಿರಂಕುಶ ಪ್ರಭುತ್ವ, ಕುಟಿಲ–ಕ್ಷುದ್ರ ರಾಜಕಾರಣದ ವಿರುದ್ಧ ಹೋರಾಟ ನಡೆಯುತ್ತಲೇ ಬಂದಿದೆ. ಸತ್ಯಕ್ಕೆ ನ್ಯಾಯಕ್ಕೆ, ಧರ್ಮಕ್ಕೆ, ನೀತಿಗೆ ಅಂದೂ–ಇಂದೂ ಎಲ್ಲ ಕಾಲದಲ್ಲಿಯೂ ಜಯವಾಗುವುದು ಖಂಡಿತವಾದಂದೇ. ಆಯಾ ಕಾಲಕ್ಕೆ ಇವುಗಳ ಮೌಲ್ಯ ಮಾಪನ ದಲ್ಲಿ, ಗುಣ ವಿಶೇಷದಲ್ಲಿ, ಸಿದ್ಧಾಂತದಲ್ಲಿ ಬದಲಾವಣೆಗಳನ್ನು ಗುರುತಿಸಿಕೊಳ್ಳ ಬಹುದಾದರೂ ಮೂಲ ವಸ್ತುವಿನಲ್ಲಿ ಯಾವುದೇ ವ್ಯತ್ಯಾಸವಿಲ್ಲದಿರುವುದು ಅಷ್ಟೇ ಸತ್ಯ. ಅದು ಕಾಲಾತೀತ, ಚಿರನೂತನ,

‘ತಿರುಗುಬಾಣ’ದಲ್ಲಿ ಆದಿಯಿಂದ ಅಂತ್ಯದವರೆಗೂ ಗಿರಿಜವ್ವನದೇ ಮುಖ್ಯ ಪಾತ್ರ. ಯುದ್ಧನೀತಿ, ಎಲ್ಲಿ ಬೇಕೋ ಅಲ್ಲಿ ಪ್ರತ್ಯಕ್ಷಳಾಗುವ ಅವಳ ಕಾರ್ಯ ಚತುರತೆ ನಿರ್ಭಯತೆ–ದಿಟ್ಟ ಹೋರಾಟಕ್ಕೊಂದು ನಿದರ್ಶನ. ಕತ್ತಿಯ ಅಲಗಿನ ಹೊಳಪಿನಲ್ಲಿ ತನ್ನ ಬದುಕಿನ ಗುರಿಯನ್ನು ಗುರುತಿಸಿಕೊಂಡು ಆಕೆ ರಕ್ತಕ್ರಾಂತಿಯ ರಕ್ತೇಶ್ವರಿಯಾಗುತ್ತಾಳೆ. ಆದರೆ ತನ್ನ ಧ್ಯೇಯಗಳೆಲ್ಲ ಸಫಲತೆಯನ್ನೈದಿದ ಮರುಕ್ಷಣದಲ್ಲಿಯೇ ಶಾಂತಿಯ ಪ್ರತಿಮೂರ್ತಿಯಾಗಿ ವಿರಾಗಿಣಿಯಾಗುತ್ತಾಳೆ. ಚಿತ್ರದುರ್ಗದ ಐತಿಹಾಸಿಕ ಕೃತಿಗಳಲ್ಲಿ ಗಿರಿಜವ್ವನ ಪಾತ್ರ ರುದ್ರ ಮನೋಹರ, ಭೀಕರ, ಆಕರ್ಷಕ.

ವಿಸ್ಫೋಟದ ವಿಧ್ವಂಸಕ ಕೃತ್ಯಕ್ಕೆ ಬಲಿಯಾದ ಗೋಪಾಲಪುರದ ಗೌಡ ಇನ್ನೊಬ್ಬ ಧೀಮಂತ ಉದಾತ್ತ ವ್ಯಕ್ತಿ. ನಿಷ್ಕಳಂಕವಾದ ಅವನ ಸ್ವಾಮಿನಿಷ್ಠೆ ನಾಡ ಪ್ರೇಮ, ತನ್ನತನ, ಅಭಿಮಾನ. ಗೌರವಗಳಿಂದ ಆತ ಗೌಡನಾಗುವ ಯೋಗ್ಯತೆಗೆ ಅರ್ಹನಾಗಿದ್ದಾನೆ. ಮಲ್ಲರ ಘಟದ ಹಳ್ಳಿಯ ಭೈರಪ್ಪಗೌಡ ಪ್ರಶಂಸಾತ್ಮಕ ಪಾತ್ರ ವಹಿಸಿ ತನ್ನ ಹಳ್ಳಿಯ ಹೆಸರನ್ನು ಸಾರ್ಥಕಗೊಳಿಸಿದ್ದಾನೆ. ಗೌಡರ ಮುಂದಾಳುತನ ವಹಿಸಿ ಆತ ನಡೆಸಿದ ಗುಪ್ತ ಚಟುವಟಿಕೆ ನಿರಂಕುಶ ಪ್ರಭುತ್ವದ ಅವಸಾನಕ್ಕೆ ನೆರವು ನೀಡುವುದರಲ್ಲಿ ಯಶಸ್ವಿಯಾಗಿದೆ.

ಗೌಡ ಮಾತ್ರವೇ ಅಲ್ಲ, ಅಲ್ಲಿನ ಗೌಡತಿ–ಚುರುಕುಬುದ್ಧಿ, ಚಾಣಾಕ್ಷತನ, ದಿಟ್ಟ ತನಗಳಿಂದ ಓದುಗರ ಕೃಪೆಗೆ ಪಾತ್ರಳಾಗುತ್ತಾಳೆ. ಅವಳ ಮಾತಿನ ಮೋಡಿ, ನಯ ವಿನಯ, ಸಹನೆ ಸಂಯಮಗಳಾದ ಮುದ್ದಣ್ಣನ ಅಂತರಂಗದ ಆಪ್ತನಾದ ಧೂರ್ತ ದಾಸನಾಯಕನನ್ನು ಅವನ ಸೈನಿಕರನ್ನು ಪರಿವರ್ತನೆಗೊಳಿಸಿದ ಕಾರ್ಯಚತುರೆ. ಈ ಜಾಣ್ಮೆ ಮುಂದಿನ ಹೋರಾಟದಲ್ಲಿ ಮುನ್ನಡೆವ ಹೋರಾಟಗಾರರಿಗೆ ದಾರಿದೀಪ ವಾಯಿತು. ತನ್ನನ್ನು ಮೆಟ್ಟಿ ತುಳಿದ ದಾಸನಾಯಕನನ್ನು ಅಣ್ಣಾ ಎಂದು ಸಂಬೋಧಿಸಲು ಹಿಂಜರಿಯದ ಆಕೆಯ ಮನೋಭಾವ ಮನನೀಯ.

ಕಾದಂಬರಿಯ ಮೊದಲ ಪುಟಗಳಲ್ಲಿ ಮುದ್ದಣ್ಣನ ಬೇಟೆ ನಾಯಿಯಂತೆ, ಮರಿ ಖಳನಾಯಕ ಪಾತ್ರಧಾರಿ ದಾಸನಾಯಕ ಮಾಡಬಾರದ ಎಲ್ಲ ಅನ್ಯಾಯಗಳನ್ನು ಮಾಡಿ ಗೌಡತಿಯಿಂದ ಪುನಃ ಪರಿವರ್ತನೆಗೊಂಡು ಪ್ರಾಯಶ್ಚಿತ್ತಕ್ಕಾಗಿ ಎನ್ನುವಂತೆ ಪ್ರಾಮಾಣಿಕನಾಗಿ ದುಡಿಯುವ ಚಿತ್ರ ವೈಶಿಷ್ಟ್ಯಪೂರ್ಣವಾಗಿದೆ.

ವಿರೂಪಾಕ್ಷ ಜೋಯಿಸರು ಕಾದಂಬರಿಯ ಕೊನೆಗೆ ಆಗಾಗ ಅಲ್ಲಲ್ಲಿ ಕಾಣ ಬರುವ ವ್ಯಕ್ತಿಯಾದರೂ ಮುದ್ದಣ್ಣನ ರಾಕ್ಷಸ ಜೀವನದ ಅಂತ್ಯಕ್ಕಾಗಿ ನಡೆದ ರೋಮಾಂಚಕಾರಿ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಲ್ಲರಿಗೂ ಬೇಕಾದವ ರಾಗಿ ನೆನಪಿನಲ್ಲಿ ಉಳಿಯುತ್ತಾರೆ.

ಅನ್ಯಾಯ, ಅಕ್ರಮಣ, ದಬ್ಬಾಳಿಕೆ. ದೌರ್ಜನ್ಯ, ರಾಕ್ಷಸೀಕಾಂಕ್ಷೆಗಳ ವಿರುದ್ಧ ಹೋರಾಟ ಹಿಂದಿನಿಂದಲೂ ನಡೆದು ಬಂದಿದೆ. ಕೊನೆಗೆ ಸತ್ಯಕ್ಕೆ ಜಯ ವಾಗುತ್ತದೆ. ನ್ಯಾಯಕ್ಕೆ ಮನ್ನಣೆ ಸಿಗುತ್ತದೆ, ಧರ್ಮ ರಾರಾಜಿಸುತ್ತದೆ. ತ್ಯಾಗ–ಬಲಿ

ದಾನಗಳಿಂದೂ ವ್ಯರ್ಥವಾಗುವುದಿಲ್ಲವೆಂಬ ಸಂದೇಶ ತಿರುಗುಬಾಣದ ಕೇಂದ್ರ ವಾಗುತ್ತದೆ.

ಚಿತ್ರದುರ್ಗ ಕಾದಂಬರಿ ಮಾಲೆಯ ಐದನೆಯ ಕಾದಂಬರಿಯಾಗಿ ಬಂದ 'ಹೊಸಹಗಲು' ನಲ್ಲಿ ತ.ರಾ.ಸು. ಹೇಳಿರುವಂತೆ, ವಿನಾಶೋನ್ಮುಖಿ ಉಲ್ಕೆಯು ಕಣ್ಣು ಕೋರೈಸುವ ಬೆಳಕಿನಂತಲ್ಲ. ದೇಶಕ್ಕೆ ಬೆಳಕು ನೀಡುವುದಕ್ಕಾಗಿ ಹೊರಟ ಪ್ರಶಾಂತಕಾಂತಿಯಾಗಿ ಅಧಿಕಾರ, ವ್ಯಾಮೋಹಗಳ ಕರಾಳತೆಯನ್ನು ಕಳೆದು ಜನಮನ ವನ್ನು ತಣಿಸುವ ಹೊಂಬೆಳಕಿನ-ಲಾಸ್ಯವಾಗಿ ಹೊಸಹಗಲು ಉದಯಿಸಿದೆ. ಮುದ್ದಣ್ಣ ನಂತಹ ರಕ್ತಕ್ಕೆ ಹಸಿದ ಹೆಬ್ಬುಲಿಗಳು ಇಲ್ಲಿ ಕಾಣ ಸಿಗುವುದಿಲ್ಲ. ಕುರಿ ಕಾಯುವ ಪೈದನೊಬ್ಬ ದೊರೆಯಾಗಿ ಬಿಚ್ಚುಗತ್ತಿ ಭರಮಣ್ಣನಾಯಕನೆಂದು ಕೀರ್ತಿಗಳಿಸಿದ ಧೀರ ಜೀವನವನ್ನು ನಾವು ಕಣ್ಣು ಬಿಟ್ಟು ನೋಡುತ್ತೇವೆ.

ಕುರಿ ಕಾಯುತ್ತ ಕುಳಿತ ಭರಮಣ್ಣ ಪಾಳೆಯಗಾರನಾಗುವ ಕನಸನ್ನು ಕಂಡ. ಅನಿರೀಕ್ಷಿತವಾಗಿ ಬಂದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಆ ಕನಸು ನನಸಾಗುವ ಭವಿಷ್ಯ ನುಡಿದರು. ಇಮ್ಮಡಿ ಮದಕರಿನಾಯಕನ ಮರಣದಿಂದೀಚೆಗೆ ಯುಗಗಳಂತೆ ಕಳೆದು ಹೋದ ಕೇವಲ ಹದಿಮೂರು ವರ್ಷಗಳು. ನಡೆದ ಕೊಲೆ, ರಕ್ತಪಾತ, ಕಣ್ಣೀರು, ವಿಕಟಾಟ್ಟಹಾಸ, ಸಾವಿನ ರುದ್ರಮೌನವನ್ನು ಕಂಡು ಅನುಭವಿಸಿ ಬೇಸತ್ತ ಜನಕೋಟಿಗೆ ಒಬ್ಬ ಸಮರ್ಥ ನಾಯಕ ಬೇಕಾಗಿತ್ತು. ಭರಮಣ್ಣ ದೊರೆತನವನ್ನು ಅರಸಿ ಹೋಗಲಿಲ್ಲ, ಅರಸೊತ್ತಿಗೆ ಕೇವಲ ಅಲಂಕಾರಿಕ ಎಂದು ತಿಳಿದವನೂ ಅಲ್ಲ. ದೊರೆತನ ತಾನಾಗಿ ಬಂದಾಗ ಗುರುಗಳು ಹೇಳಿದ 'ಸಿಂಹಾಸನ ಹಾವಿನ ಹೆಡೆಯಂತೆ' ಎಂಬ ಮಾತನ್ನು ಮರೆಯಲಿಲ್ಲ, ತನ್ನ ಧೀರೋದಾತ್ತ ಗುಣ ನಡತೆಗಳಿಂದ ಅಧಿಕಾರಿ ಗಳ, ಪ್ರಜಾವರ್ಗದ ಸ್ನೇಹವನ್ನು ಗಳಿಸಿದ. ರಾಜ್ಯದ ಜನತೆಯ ಶ್ರೇಯೋಭಿ ವೃದ್ಧಿಗಾಗಿ, ದುಡಿಯುವ ಪ್ರತಿಜ್ಞೆ ಮಾಡಿದ. ಮುದ್ದಣ್ಣನ ಕೈಗೊಂಬೆಯಾಗಿ ಪಟ್ಟವೇರಿ ಅವನ ಊಳಿಗದ ಆಳಿನಂತೆ ನಡೆದುಕೊಂಡು ಕೊನೆಗೆ ಬಂಧಿಯಾಗಿದ್ದ ದುರಭಿಮಾನಿ ರಂಗಪ್ಪನಾಯಕ 'ಕುರುಬ ದೊರೆ' ಎಂದು ಹೀಯಾಳಿಸಿದಾಗಲೂ ಅವನ ತಲೆ ಉರುಳಿಸಲಿಲ್ಲ. ಅವನ ಕೈಗೂ ಕತ್ತಿಕೊಟ್ಟು ಹೋರಾಟದಲ್ಲಿಯೇ ಅವನನ್ನು ಮುಗಿಸಿ ಬಿಡಲು ನಿರ್ಧರಿಸಿದ. ಭರಮಣ್ಣನಾಯಕನ ಧರ್ಮ-ಯುದ್ಧನೀತಿ ಪ್ರಶಂಸನೀಯ. ರಾಜ್ಯಕ್ಕೆ ದ್ರೋಹ ಬಗೆದ ಕೆಂಚಯ್ಯನಿಗೆ ಜೀವದಾನ ಮಾಡು ವಾಗಲೂ ಅದೇ ಉದಾರತೆ, ಧರ್ಮಪ್ರಜ್ಞೆ, ವೀರೋಚಿತ ಆಜ್ಞೆ. ಶರಣಾಗತನಾದ ಪರಪನ ಪಳ್ಳಿಯ ದಳಪತಿಗೂ ಗಡಿಪಾರು ಶಿಕ್ಷೆ; ಬಿಚ್ಚುಗತ್ತಿ ತಲೆ ಉರುಳಿಸುವುದ- ಕ್ಕಷ್ಟೇ ಅಲ್ಲ ಉಳಿಸಲೂ ಬಹುದು ಎನ್ನುವುದಕ್ಕೆ ಸಾಕ್ಷಿ ಈ ಸನ್ನಿವೇಶಗಳು. ಧರ್ಮರಾಯ ಸ್ವರ್ಗಕ್ಕೆ ಹೋಗುವಾಗಲೂ ಹಿಂಬಾಲಿಸಿದ ನಾಯಿಯನ್ನು ಬಿಡಲಿಲ್ಲ. ಭರಮಣ್ಣ ದೊರೆಯಾಗಿ ದುರ್ಗಕ್ಕೆ ಹೋಗುವಾಗ ಹುಟ್ಟಿ ಬೆಳೆದ ಹಳ್ಳಿ-ಮನೆ-ಮಠ- ತಂದೆ-ತಾಯಿ-ಸ್ನೇಹಿತರು ಎಲ್ಲರನ್ನು ಬಿಟ್ಟು ಈ ನಾಯಿಯಾದರೂ ಜೊತೆಯಲ್ಲಿ

ಬರಲಿ, ಎನ್ನುವಾಗ ತನ್ನನ್ನು ನಂಬಿದ ಆ ಮೂಕ ಪ್ರಾಣಿಯ ಬಗೆಗೆ ಅವನಿಗಿರುವ ಪ್ರೀತಿ–ವಾತ್ಸಲ್ಯ–ಆದರ–ಅನುಕಂಪ ಅವರ್ಣನೀಯ.

ಪ್ರಧಾನಿ ಪರಶುರಾಮಪ್ಪನವರು ಇಲ್ಲಿಯೂ ತಮ್ಮ ಸಮತೋಲನವನ್ನು ಉಳಿಸಿ ಕೊಂಡಿದ್ದಾರೆ. ಅವನ ವಿವೇಚನೆ, ವಿಶ್ಲೇಷಣೆ, ಸಮಸ್ಯೆಗಳ ನಿವಾರಣೆಗಾಗಿ ಹೂಡುವ ಹಂಚಿಕೆ ಒಂದು ರಾಜ್ಯದ ಸಮರ್ಥ ಪ್ರಧಾನಿಯಾಗುವ ಅವನಿಗಿರುವ ಅರ್ಹತೆ ತೋರಿಸುತ್ತದೆ.

ದಳವಾಯಿ ಭರಮಣ್ಣ ಮುದ್ದಣನ ಕೊಲೆಯಾದ ಬಳಿಕ ತನ್ನ ಉನ್ನತ ವ್ಯಕ್ತಿತ್ವದ ನೆಲೆಯಿಂದ ಒಂದಿಷ್ಟು ಜಾರಿದಂತೆ ಕಂಡರೂ ಆಮೇಲೆ ಚೇತರಿಸಿ ಕೊಳ್ಳುತ್ತಾನೆ.

ಮಾಯಕೊಂಡದ ಗೌಡ–ಜೋಗನಾಯಕರದ್ದು ಪುಟ್ಟ ಪೋಷಕ ಪಾತ್ರಗಳಾದರೂ ಹೊಸ ರಾಜ್ಯದ ನಿರ್ಮಾಣದ ಆ ಸಂಧಿಕಾಲದಲ್ಲಿ ತಮ್ಮಿಂದಾಗುವ ನೆರವು ನೀಡುತ್ತಾರೆ.

ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ರಾಜ್ಯ ರಕ್ಷಣೆಯ ಮುಂಚೂಣಿಯಲ್ಲಿ ನಿಂತ ಅನಭಿಷಿಕ್ತ ನಾಯಕರು. ಅವರ ಮಾತುಗಳಲ್ಲಿ ಕಾಲದ ಔಚಿತ್ಯವಿದೆ, ಮೋಡಿಯಿದೆ, ಆಣಕವಿದೆ, ಆಕರ್ಷಣೆಯಿದೆ. ಸಮಸ್ಯೆಗಳ ವಿವೇಚನೆಯ ಪರಿಹಾರ ಸೂತ್ರಗಳೂ ಇವೆ. ದೌರ್ಬಲ್ಯ, ನಿರಾಸೆ, ಕ್ಲೈಬ್ಯಗಳನ್ನು ಹೊಡೆದೋಡಿಸುವ ಶಕ್ತಿಯಿದೆ. ಮಿಂಚಿನ ಥಳಕೂ ಇದೆ. ಧರ್ಮ–ನೀತಿ–ನಿಯಮಗಳ ಹಿತೋಕ್ತಿಗಳೂ ಇವೆ. ಶ್ರೀ ಶ್ರೀಗಳ ಪಾತ್ರ ಇಲ್ಲಿ ಸರ್ವಾಂಗ ಸುಂದರವಾಗಿದೆ. ಇಷ್ಟೆಲ್ಲ ವಿಮರ್ಶೆಯ ಪರಿಧಿಯಲ್ಲಿ ಹೇಳಿದ ನಾನು ಆಚೆಗೂ ನಿಂತು ಸ್ವಲ್ಪ ಹೇಳಬೇಕಾಗಿದೆ.

ಲೇಖಕರ ಶೈಲಿಗಳಲ್ಲಿ ವಿಭಿನ್ನತೆ ಕಾಣುವುದು ಸ್ವಾಭಾವಿಕ. ಒಬ್ಬೊಬ್ಬರದು ಒಂದೊಂದು ಬಗೆಯ ನಿರೂಪಣೆ. ತ.ರಾ.ಸು. ಅವರ ಶೈಲಿಯ ಮೋಹಕತೆ, ಕಥೆಯನ್ನು ವಿಸ್ತರಿಸುತ್ತ ಕಣ್ಣಿಗೆ ಕಟ್ಟಿದಂತೆ ದೃಶ್ಯಗಳನ್ನು ನಿಲ್ಲಿಸುತ್ತವೆ. ಆದರೆ 'ಕೀರ್ತಿನಾರಾಯಣ' ದಲ್ಲಿ ತ.ರಾ.ಸು. ಹಳೆಯ ಲೇಖಕರ ಜಾಡು ತುಳಿದಿದ್ದಾರೆನಿಸುತ್ತದೆ. 'ರಕ್ತರಾತ್ರಿ' ಯಲ್ಲಿ ದೌರ್ಜನ್ಯ, ಕರಾಳ, ಕ್ರೂರತೆಗಳನ್ನು ಬಿಂಬಿಸುವ ಗಡಸುತನವಿದೆ, ತೀಕ್ಷ್ಣತೆಯಿದೆ: 'ತಿರುಗುಬಾಣ' ಇದೇ ಜಾಡಿನಲ್ಲಿ ಇನ್ನಷ್ಟು ತೀವ್ರತೆ ಹಾಗೂ ಮೊನಚನ್ನು ಸಾಧಿಸಿದೆ. ಪತ್ತೇದಾರಿ ಕೃತಿಗಳಲ್ಲಿ ಬರುವಂಥ ವಿಸ್ಮಯ, ಕುತೂಹಲ, ಅನಿರೀಕ್ಷಿತ, ಆಕಸ್ಮಿಕ ಸನ್ನಿವೇಶಗಳಿಂದ ರೋಮಾಂಚಕಾರಿಯಾಗಿದೆ. 'ಹೊಸಹಗಲು' ಹೆಸರಿಗೆ ತಕ್ಕಂತೆ ನಿಚ್ಚಳ ಆದರೆ ಸೌಮ್ಯ, ಸರಳ, ಶುಭ್ರತೆಯಿಂದ ಬೆಳಕು ಬೀರುವಂತಹ ರೀತಿಯಲ್ಲಿ ರೂಪುಗೊಂಡಿದೆ.

ತ.ರಾ.ಸು. ಪ್ರಚಲಿತ ಸಾಮಾಜಿಕ, ಜ್ವಲಂತ ಸಮಸ್ಯೆಗಳನ್ನು ಬದಿಗಿರಿಸಿ ಐತಿಹಾಸಿಕ ವಸ್ತುಗಳಿಗೆ ಯಾಕೆ ಜೋತುಬಿದ್ದಿದ್ದಾರೆ ಎಂದು ಆ ಕಾಲದಲ್ಲಿ ಕೆಲವರು

ಕೇಳಿದ್ದರಂತೆ. ಆದರೆ ಸಾಮಾಜಿಕ ಸಮಸ್ಯೆಗಳಿಗಷ್ಟೇ ನಮ್ಮ ಬದುಕು ಸೀಮಿತವಾಗಿಲ್ಲ. ತ.ರಾ.ಸು. ಅವರು ಹೇಳಿವಂತೆ 'ಅರ್ಧ ಪುಟದಷ್ಟು ದೊರೆತ ಆಧಾರದಿಂದ' ಸಾವಿರ ಪುಟದಷ್ಟು ಬರೆದರು ಎಂದಾಗ ಅವರ ಕಲ್ಪನಾ ಶಕ್ತಿಯ ವೈಶಾಲ್ಯ, ಆಳಗಳ ಅರಿವಾಗುತ್ತದೆ. ಅವರು ಬಹುಕಾಲ ಬದುಕಿ ಕನ್ನಡದ ಕಾರ್ಯ ಮಾಡಲಿ.

ತರಾಸು ಅವರ ಸಾಮಾಜಿಕ ಕಾದಂಬರಿಗಳಲ್ಲಿ ಸ್ತ್ರೀಪಾತ್ರಗಳು

—ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಸಾಹಿತ್ಯದ ನಾನಾ ಪ್ರಕಾರಗಳಲ್ಲಿ 'ಕಾದಂಬರಿ' ನಿಸ್ಸಂದೇಹವಾಗಿ ಯಶಸ್ವಿ ಪಡೆದ ಮಾಧ್ಯಮ. ಹಾಗೆಂದ ಮಾತ್ರಕ್ಕೆ ಉಳಿದ ಸಾಹಿತ್ಯ ಪ್ರಾಕಾರಗಳಿಗೆ ಯಾವ ಮೂಲಭೂತ ಜವಾಬ್ದಾರಿಯೂ ಇಲ್ಲವೆಂದಲ್ಲ. ಒಬ್ಬ ಲೇಖಕ ತಾನು ಹೇಳಬೇಕೆಂದಿರುವ ವಿಚಾರಗಳನ್ನು ಅವಲಂಬಿಸಿ ಅವನು ಆಯ್ದುಕೊಳ್ಳುವ ಸಾಹಿತ್ಯ ಪ್ರಕಾರ ಬೇರೆ ಆಗಬಹುದು. ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಲೇಖಕನಿಗೆ ಸಣ್ಣ ಕತೆ, ಕವಿತೆ ಇತ್ಯಾದಿಗಳಲ್ಲಿ ಹೇಳುವುದಕ್ಕಿಂತ ಹೆಚ್ಚಿನದನ್ನು ಹೇಳುವ ಅವಕಾಶವಿರುತ್ತದೆ· ಕಾದಂಬರಿ ತನ್ನ ಸ್ವರೂಪವನ್ನು ತನ್ನೊಳಗೆ ಹೊಂದಿಸಿಕೊಂಡಿರುವ ಪಾತ್ರಗಳು, ಸಂಭಾಷಣೆಗಳು, ಘಟನೆಗಳು, ನಿರೂಪಣೆಗಳು, ಭಾಷೆ ಇವುಗಳಿಂದ ಪಡೆದುಕೊಂಡಿರುತ್ತದೆ ಶಿಲ್ಪ ಬಿಗಿಯಾಗಿದ್ದರೆ ಕಾದಂಬರಿಕಾರ ಅದರೊಳಗಿನ ಬಂಧನದಲ್ಲೇ ಇದ್ದು ಅದನ್ನು ತನ್ನ ಹಿಡಿತದಲ್ಲಿಯೇ ಇಟ್ಟುಕೊಂಡಿರಬಹುದಾಗುತ್ತದೆ. ಇಲ್ಲವಾದರೆ ಅದರ ಬಂಧ ಸಡಿಲವಾಗಿ ಶಿಲ್ಪಕೆಟ್ಟು ಕಾದಂಬರಿಯಲ್ಲಿ ತಾರ್ಕಿಕತೆಯಿಲ್ಲದೆ ಕಾದಂಬರಿಯ ಇತರ ಪರಿಕರಗಳು ಎಲ್ಲೆಂದರಲ್ಲಿ ಹರಿದು ಹೋಗುತ್ತವೆ. ಬಂಧನದ ಮೇಲೆ ಹಿಡಿತವಿಟ್ಟುಕೊಂಡು ಕಾದಂಬರಿಯ ಶಿಲ್ಪವನ್ನು ಬಿಗಿಗೊಳಿಸಿ ವಸ್ತುವನ್ನು ಕಲಾತ್ಮಕಗೊಳಿಸುವತ್ತಲೇ ಒಬ್ಬ ಯಶಸ್ವೀ ಕಾದಂಬರಿಕಾರನ ಮಹತ್ವವಿರುವುದು. ಕಾದಂಬರಿಯಲ್ಲಿ ಪಾತ್ರಗಳು ಪ್ರವೃತ್ತಿಸುವ ರೀತಿಯಿಂದಲೇ ಕಾದಂಬರಿಯ ದಾರಿ ನಿರ್ಮಾಣವಾಗುವುದು. ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು, ಪುರುಷ ಪಾತ್ರಗಳು ಆಲೋಚಿಸುವ ಕ್ರಮದಲ್ಲಿಯೇ ವಸ್ತುವಿನ ಸಂಘಟನೆಯು ನಿರ್ಮಾಣವಾಗುತ್ತದೆ. ಆಯಾ ಪಾತ್ರಗಳ ಮನೋಲಹರಿಯೂ ಕಾದಂಬರಿಯನ್ನು ನಡೆಸಲು ಕಾರಣವಾಗುತ್ತದೆ.

ಪ್ರಸ್ತುತ ಲೇಖನದಲ್ಲಿ ನಾನು ಮೇಲೆ ಹೇಳಿದ ವಿಚಾರದ ಹಿನ್ನೆಲೆಯಲ್ಲಿ ತ. ರಾ. ಸು. ರವರ ಕೆಲವು ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ತ. ರಾ. ಸು. ಅವರು ನಿಸ್ಸಂದೇಹವಾಗಿ ಜನಪ್ರಿಯ ಕಾದಂಬರಿಕಾರರು. ಅವರ ಕಾದಂಬರಿಗಳಲ್ಲಿನ ಸ್ತ್ರೀಯರು 'ವಜ್ರಾದಪಿ ಕಠೋರಾಣಿ ಕುಸುಮಾದಪಿ ಮೃದೂನಿಚ' ಎನ್ನುವಂತಿದ್ದಾರೆ. ಯಾವ ಕಾದಂಬರಿಯಲ್ಲೂ ಒಂದೇರೀತಿಯ ಹೆಣ್ಣನ್ನು ಚಿತ್ರಿಸುವ ಜಾಯಮಾನ ಅವರದಲ್ಲ. ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ ಈ ಕಾದಂಬರಿಗಳಲ್ಲಿ ಬರುವ ಗಿರಿಜೆಯ ಪಾತ್ರ ಹೆಣ್ಣು ಪ್ರತಿಕಾರ ಮನೋಭಾವಕ್ಕೆ ಇಳಿದರೆ ಎಷ್ಟು ಕಠೋರವಾಗಿ ವರ್ತಿಸಬಲ್ಲಳು, ಅವಳು ಎಷ್ಟು ರೊಚ್ಚನ್ನು ತೋರಿಸಬಲ್ಲಳು ಎಂಬುದನ್ನು ಪ್ರಕಟಿಸುತ್ತದೆ. ಗಿರಿಜೆಯು

ಪಾತ್ರವನ್ನು ನೆನೆದಾಗ ಈಕೆಯಲ್ಲಿ ಚಿತ್ರದುರ್ಗದ ಪಾಳೆಯಗಾರರ ಬಗೆಗೆ ಎಷ್ಟು ನಂಬಿಕೆಯಿದೆ ! ಆತ್ಮಗೌರವ, ಸ್ವಾಮಿನಿಷ್ಠೆಯಲ್ಲಿ ಹೆಣ್ಣು ಎಷ್ಟು ಸತ್ಯ ನಿಷ್ಠಳಾಗಿ ವರ್ತಿಸಬಲ್ಲಳು ಎಂಬುದು ತಿಳಿಯುತ್ತದೆ. ಚಿತ್ರದುರ್ಗದ ಪಾಳೆಯಪಟ್ಟಿಗೆ ಅಂಟಿದ್ದ ದುಶ್ಶಕ್ತಿಗಳ ಶನಿಪಬ್ಬಾಳಿಕೆಯ ಕಪಿಮುಷ್ಟಿಯಿಂದ ಬಿಡಿಸಿ ಸತ್ಯನಿಷ್ಠರ ವಜ್ರಮುಷ್ಟಿಗೆ ಒಪ್ಪಿಸಿ ಸ್ವಾಮಿಭಕ್ತಿ, ದೇಶಭಕ್ತಿಯನ್ನು ಸಲ್ಲಿಸಲು ತನ್ನ ಜೀವಿತವನ್ನೇ ಸವೆಸುವ ಪಣತೊಡುತ್ತಾಳೆ. ರಾಜಕೀಯ ಚಾಣಾಕ್ಷತನವನ್ನು ಯಶಸ್ವಿಯಾಗಿಸಲು ಸತತ ಶ್ರಮ ಪಡುತ್ತಾಳೆ. ಕೋಟೆಯೊಳಗೊಂದು ಆಡಳಿತ ಕೋಟೆಯಿದ್ದರೆ ಈಕೆ ಎಲ್ಲರ ಹೃದಯವನ್ನು ಗೆದ್ದು ತನ್ನದೇ ಆದ ಸುಭದ್ರಕೋಟೆಯನ್ನು ಸ್ಥಾಪಿಸುತ್ತಾಳೆ. ಗಿರಿಜೆ ರಕ್ತಾಕ್ಷಿಯಂತೆ ರಕ್ತದಾಹಕ್ಕೆ ಕಾಯ್ದು ಕುಳಿತುಕೊಳ್ಳುತ್ತಾಳೆ. ಯಂತ್ರದ ಬೊಂಬೆ ಗಳಂತಿದ್ದ ಅಧಿಕಾರಿಗಳ ಮನಪೊಲಿಸಿ ಅವರಲ್ಲಿ ಧೈರ್ಯತುಂಬಿ ಸ್ವಾಮಿನಿಷ್ಠರಾಗಿ ದುಡಿಯಲು ಪ್ರೇರೇಪಿಸುತ್ತಾಳೆ. ಅಧೈರ್ಯದ ಷಂಡತನವನ್ನು ಧೈರ್ಯದಿಂದ ಕಿತ್ತೊಗೆದು ಸ್ವಾಮಿನಿಷ್ಠೆಗಾಗಿ ಹೋರಾಡಲು ಸಕಾಲವನ್ನರಸುವಂತೆ ಅವರನ್ನು ಹುರಿದುಂಬಿಸುತ್ತಾಳೆ. ಈ ಧರ್ಮಯುದ್ಧಕ್ಕೆ ಕಾವಿಯುಟ್ಟ ಮಠದ ಸ್ವಾಮಿಜಿ ಯವರ ಆಶೀರ್ವಾದವನ್ನೂ ಬೇಡುತ್ತಾಳೆ. ಧರ್ಮಸಂರಕ್ಷಕರಾದ ಸ್ವಾಮಿಜಿಯವರು ಅಧರ್ಮದ ವಿರುದ್ಧ ಹೋರಾಡಲು ತಮ್ಮ ಪೂರ್ಣಾಶೀರ್ವಾದವನ್ನೂ ಬೆಂಬಲವನು ಇತ್ತು ಹೆಣ್ಣಿನ ಹಿರಿಮೆಯನ್ನು ಮೆಚ್ಚಿಕೊಳ್ಳುತ್ತಾರೆ. ಅವರಿಗೂ ಸ್ವಾಮಿನಿಷ್ಠ ಹೆಣ್ಣಿನ ಬಗ್ಗೆ ಅಪಾರ ಗೌರವ, ಸರ್ವಸಂಗ ಪರಿತ್ಯಾಗಿಗಳಾಗಿ ಉಳಿದಿರಬೇಕಾದ ತಮಗೆ ಸಕಾಲದಲ್ಲಿ ಎಚ್ಚರಿಕೆಯ ಕಣ್ಣುತೆರೆಸಿದ ಗಿರಿಜೆ ಹೆಣ್ಣಾಗಿ ಕಾಣುವುದಿಲ್ಲ. ಚಿತ್ರದುರ್ಗದ ಕ್ಷೇತ್ರದೇವತೆಯ ಅಪರಾವತಾರವೇ ಎಂಬಂತೆ ಕಾಣುತ್ತಾಳೆ. ಮೊದಲಿದ್ದ ಹೆಣ್ಣಿನ ಮೃದುತನ ಪರಿಸ್ಥಿತಿಗೆ ಪಕ್ಕಾಗಿ ಕಬ್ಬಿಣದಂತಾಗುತ್ತದೆ. ಪ್ರತೀ ಕಾರಕ್ಕೆ ಕಾಯುತ್ತ "ನಾಗತಿಯ ನೆರಳಾಗಿ" ತಿರುಗುವ ಗಿರಿಜೆಯ ಸನ್ನಿವೇಶವಂತೂ ಕನ್ನಡಿಗರ ಎದೆಯಲ್ಲಿ ದುರ್ಗದ ಪಾಳೆಗಾರರ ವಂಶವನ್ನು ನೆನಪಿಸಿಕೊಳ್ಳುವ ಸಂದರ್ಭ ದಲ್ಲಿ ಎಂದೂ ಮರೆಯದ ಸ್ಥಾನವನ್ನು ಪಡೆದುಕೊಳ್ಳುತ್ತದೆ,

ಗಿರಿಜೆ ನಾಗಿಣಿಯಂತೆ ಕೆರಳಿ ಕನಲಿದರೆ 'ಹಂಸಗೀತೆ'ಯ ಚಂದ್ರ ಅಷ್ಟೇ ಮೃದು. ತನ್ನ ಲಾವಣ್ಯ, ಹಾವ, ಭಾವ, ವಿನ್ಯಾಸಗಳಿಂದ ವೆಂಕಟಸುಬ್ಬಯ್ಯನ ಮನಸ್ಸನ್ನು ಗೆಲ್ಲುವುದಷ್ಟೇ ಅಲ್ಲದೆ ಆ ಕಾದಂಬರಿಯನ್ನು ಓದಿದ ರಸಿಕರ ಮನಸ್ಸನ್ನೂ ಆಕರ್ಷಿಸುತ್ತಾಳೆ. 'ಪ್ರಭುತ್ವ ಮತ್ತು ಕಲೆ', 'ಪ್ರೇಮ ಮತ್ತು ಕಲೆ' ಇವುಗಳ ಸುತ್ತ ಸುತ್ತುವ ಕಾದಂಬರಿಯಲ್ಲಿ ಅನಂತಯ್ಯನವರು ಚಂದ್ರಳಿಂದ ವೆಂಕಟಸುಬ್ಬಯ್ಯನನ್ನು ಭಿಕ್ಷೆ ಬೇಡುವ ಪ್ರಸಂಗ ಕಾದಂಬರಿಯಲ್ಲಿ ಭಾವನೆಯ ಮುಗಿಲು ಮುಟ್ಟುತ್ತದೆ. ತನ ಗಾಗಿ ರಾಗವನ್ನು ಒತ್ತೆಯಿಟ್ಟ ವೆಂಕಟಸುಬ್ಬಯ್ಯನನ್ನು ದಂಡಿಸುವ ಚಂದ್ರಾ ಕಲೆಗಾಗಿ ತನ್ನ ಪ್ರೇಮವನ್ನು ತ್ಯಾಗಮಾಡಿ ತಾನೇ ಮಣ್ಣಾಗುತ್ತಾಳೆ. ಚಂದ್ರಾಳ ನಡೆ, ನುಡಿ, ಪ್ರೀತಿ ವಾತ್ಸಲ್ಯಗಳಿಂದಾಗಿ ಕಾದಂಬರಿಕಾರರೇ ಹೇಳುವಂತೆ ಆಕೆ ಈ ಲೋಕದ

ಹೆಣ್ಣಾಗುವುದಿಲ್ಲ. ಅನುಗ್ರಹಿಸಲು ಬಂದ ದೇವತೆಯಾಗುತ್ತಾಳೆ. ಕಾದಂಬರಿಯ ಕಥೆ ಚಿತ್ರದುರ್ಗದ ಪ್ರಚಲಿತ ಕಥೆಯಾಗಿದ್ದು ಅದಕ್ಕೆ ತ.ರಾ.ಸು. ಜೀವ ತುಂಬಿದ್ದಾರೆ. ಕಾದಂಬರಿಯ ಕಥೆ ನಿಜವಾಗಿ ನಡೆದದ್ದು ಎಂದು ನಂಬಿಸುವಂತಹ ತಂತ್ರದ ಹಿನ್ನೆಲೆ ಯಲ್ಲಿ ಕಲಾವಿದರು ಬದುಕಿನ ಸಿಹಿ–ಕಹಿಗಳನ್ನು ನಿರೂಪಿಸಿದ್ದಾರೆ. ಕಲೆಗಿರುವ ಸ್ವಾತಂತ್ರ್ಯಾಪೇಕ್ಷಿತನ, ಅದು ರಾಜಾಶ್ರಯದಲ್ಲಿ ಬಂಧಿತವಾಗುವುದು, ಪ್ರೇಮ ಮತ್ತು ಕಲೆ ಇವೆರಡರಲ್ಲಿ ಒಂದನ್ನು ಕಲಾವಿದ ತನ್ನ ಸಾಧನೆಗೆ ಅನಿವಾರ್ಯವಾಗಿ ಬಿಡಲೇ ಬೇಕಾಗುತ್ತದೆ. ಚಂದ್ರಾಸಾನಿ ವೆಂಕಟಸುಬ್ಬಯ್ಯನ ಪ್ರೇಮವನ್ನಾದರೂ ಬಿಟ್ಟುಕೊಟ್ಟು ಅವನ ಕಲೆ ಉಳಿಸುವ ಪ್ರಯತ್ನ ಮಾಡುತ್ತಾಳೆ. ಟೀಪೂಸುಲ್ತಾನ ಎಷ್ಟೇ ಆಸೆ ಆಮಿಷ ತೋರಿಸಿದರೂ ಎಷ್ಟೇ ಬೆದರಿಸಿದರೂ ತನ್ನ ಕಲೆಯನ್ನು ಮಾರದೆ ಅವನ್ನು ತನ್ನಲ್ಲಿಯೇ ಉಳಿಸಿಕೊಂಡು ವೆಂಕಟಸುಬ್ಬಯ್ಯ ಸಾಯುತ್ತಾನೆ. ಹಾಗೆ ನೋಡಿದಾಗ ಚಂದ್ರಾ, ವೆಂಕಟಸುಬ್ಬಯ್ಯ ಇಬ್ಬರೂ ಕಲೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿ ತಮ್ಮನ್ನೇ ತ್ಯಾಗ ಮಾಡಿಕೊಳ್ಳುತ್ತಾರೆ. ಕಾದಂಬರಿಯ ಒಂದು ಹಂತದಲ್ಲಿ ಹೆಣ್ಣೇ ಕಲೆಯಾಗುತ್ತದೆ. ವೆಂಕಟಸುಬ್ಬಯ್ಯನ ಬಾಳಿನ ಕಲಾ ಜ್ಯೋತಿ ಯನ್ನು ಹಿರಿದು ಮಾಡುವ ತೈಲವಾಗಿ ಚಂದ್ರಾಳ ಪಾತ್ರ ಹೃದಯಂಗಮವಾಗಿ ಚಿತ್ರಿತವಾಗಿದೆ.

ಮೇಲಿನ ಕಾದಂಬರಿಗಳು ಚಿತ್ರದುರ್ಗದ ಇತಿಹಾಸದ ಕಥೆಯ ಹಿನ್ನೆಲೆಯಲ್ಲಿ ರಚಿತವಾಗಿವೆ. ಅವುಗಳಲ್ಲಿ ಹೆಣ್ಣು ವಿಭಿನ್ನವಾಗಿ ವರ್ತಿಸುವ ಸಾಧ್ಯತೆಯಿರುತ್ತದೆ. ಕಾರಣ ಅವು ಕಾಲ, ದೇಶಗಳಿಂದ ದೂರವಾಗಿವೆ. ಇಂದಿನ ಸಮಾಜದಲ್ಲಿ ಗಿರಿಜೆ ಯಂತಹ ಹೆಣ್ಣುಗಳು, ಚಂದ್ರಾಳಂತಹ ಹೆಣ್ಣುಗಳಿರಬಹುದು. ಆದರೆ ಅವರ ಆವೇಶ, ಪ್ರೇಮ, ಪ್ರತೀಕಾರ ಇವುಗಳು ಆ ಪ್ರಮಾಣದಲ್ಲಿರಲು ಸಾಧ್ಯವಿಲ್ಲ. ಏಕೆಂದರೆ ಅದು ಅವರು ಬದುಕಿರುವ ಸಮಾಜದ ಇತಿ ಮಿತಿಗಳ ಒಳಗೇ ನಿಯಂತ್ರಿತ ಗೊಂಡಿರುತ್ತವೆ. ಇಂದಿನ ಸಮಾಜದ ಹೆಣ್ಣಿನಲ್ಲಿ ಗಿರಿಜೆಯ ಗುಣಗಳಿರಬಹುದು. ಆದರೆ ಅದು ಅಷ್ಟೊಂದು ಸಾಂದ್ರವಾಗಿರುವುದಿಲ್ಲ. ಚಂದ್ರಾಳಂತೆ ಪ್ರೇಮ, ತ್ಯಾಗ ಗಳಿಗೆ ತನ್ನನ್ನೇ ತಾನು ತ್ಯಾಗ ಮಾಡಿಕೊಂಡಿರುವ ಹೆಣ್ಣುಗಳಿದ್ದರೂ ಅವು ಆ ಪ್ರಮಾಣದ ದಟ್ಟತೆಯನ್ನು ಪಡೆದಿರಲಾರವು. ಹೆಣ್ಣಿನ ಎರಡು ವಿವಿಧ ಬಾಳಿನ ಮುಖಗಳ ಪರಿಚಯ "ನಾಗರಹಾವು", "ಎರಡು ಹೆಣ್ಣು ಒಂದು ಗಂಡು" ಹಾಗೂ "ಸರ್ಪಮತ್ಸರ" ಕಾದಂಬರಿಗಳಲ್ಲಿ ಕಾಣಬಹುದು.

ಅಲಮೇಲು ಹಾಗೂ ಮಾರ್ಗರೆಟ್ ಭಿನ್ನ ಸಾಮಾಜಿಕ ಸ್ತರಗಳ ಭಿನ್ನಮತೀಯ ಹೆಣ್ಣುಗಳು. ಸಾಮಾನ್ಯ ಕುಟುಂಬದವರು. ಅತ್ಯಂತ ಸಾಮಾನ್ಯ ಸಂಪ್ರದಾಯಸ್ಥ ಬ್ರಾಹ್ಮಣ ಮನೆತನದ ಹೆಣ್ಣಾಗಿ ಅಲಮೇಲುವಿನ ಪರಿಚಯವಾದರೆ, ಮುಂದುವರೆದ ಅತ್ಯಂತ ಸ್ವಾತಂತ್ರ್ಯ ಪಡೆದ ಕ್ರೈಸ್ತ ಮನೆತನದ ಹೆಣ್ಣಾಗಿ ಮಾರ್ಗರೆಟ್ ನಮ್ಮ ಮುಂದೆ ನಿಲ್ಲುತ್ತಾಳೆ. ಜಲೀಲನ ಪ್ರಸಂಗದಿಂದಾಗಿ ವರದ ರಾಮಾಚಾರಿಗೆ ನೀಡುವ ಭಾಷೆ

ಯಿಂದಾಗಿ ಮುಗ್ಧ ಹೆಣ್ಣು ಅಲಮೇಲು ತನಗೇ ಅರಿವಿಲ್ಲದಂತೆ ಅತನನ್ನು ಮನದಲ್ಲೇ ವರಿಸುತ್ತಾಳೆ. ಮನೆಯವರ ಹಠದಿಂದಾಗಿ ಅನಿವಾರ್ಯವಾಗಿ ತನ್ನ ಹಾಗೂ ರಾಮಾಚಾರಿಯ ನಡುವಿನ ಪ್ರೇಮವನ್ನು ಅಣ್ಣ ತಂಗಿಯರ ಪ್ರೇಮ ಎಂದು ಭಾವಿಸಿ ಮದುವೆಯ ಬಲಿ ಪಶುವಾಗುತ್ತಾಳೆ. ತನ್ನ ಬಾಳು ಭಗ್ನಗೊಂಡು ಗಂಡನಿಂದಲೇ ವೇಶ್ಯೆಯಾಗಬೇಕಾಗುತ್ತದೆ. ರಾಮಾಚಾರಿಯನ್ನು ಅಕಸ್ಮಾತ್ತಾಗಿ ಭೇಟಿಯಾದ ಅವಳು ತನಗೆ ಅವನು ಹೊಸಬಾಳು ನೀಡಿದರೆ ಸ್ವೀಕರಿಸಲು ಸಿದ್ಧವಾಗುತ್ತಾಳೆ. ಆದರೆ ಅವನಿಂದ ತಿರಸ್ಕೃತಗೊಂಡದ್ದು ಅವಳ ದುರಂತ. ಈ ಕಾದಂಬರಿಗಳಲ್ಲಿ ದುರಂತದತ್ತಲೇ ಮುಖ ಮಾಡಿಕೊಂಡು ಪಾತ್ರಗಳು ಹಂತ ಹಂತವಾಗಿ ಸಾಗುತ್ತದೆ. ಶುದ್ಧ ಹೃದಯದಿಂದ ನಿರ್ಮಲ ಪ್ರೇಮಧಾರೆಯೆರೆಯ ಹೊರಟ ಒಂದು ಹೆಣ್ಣಿನ ಬಾಳು ಸಂಪ್ರದಾಯ. ಆಚಾರ ಮತ್ತಿತರ ಸಮಾಜಿಕ ಅರ್ಥಹೀನ ಕಟ್ಟು ಪಾಡುಗಳಿಂದಾಗಿ ಕಮರಿ ಹೋಗುತ್ತದೆ. ಅವಳನ್ನು ಕಟ್ಟು ಪಾಡಿನಲ್ಲಿ ಬಂಧಿಸ ಹೊರಟ ಸಮಾಜಕ್ಕೆ ಅವಳು ವೇಶ್ಯೆಯಾಗಿ ಸಮಾಜದ ಹೊಸ ಸಮಸ್ಯೆಯಾಗಿ ಹಿಂತಿರುಗುತ್ತಾಳೆ. ಅಲಮೇಲವಿನ ಪಾತ್ರದಲ್ಲಿ ಅನುಕಂಪ, ಕರುಣೆ, ಸಹಾನುಭೂತಿ ಹುಟ್ಟಿಸುವ ಸಕಲ ಅಂಶಗಳೂ ಇವೆ. ಸಮಾಜಕ್ಕೆ ಉತ್ತಮ ಕೊಡುಗೆಯನ್ನು ಕೊಡಬಹುದಾಗಿದ್ದ ಸೂಕ್ಷ್ಮ ಸಂವೇದಿ ಮುಗ್ಧ ಹೆಣ್ಣು ಸಮಾಜಕ್ಕೇ ಸವಾಲಾಗಿ ನಿಂತು ಸಮಾಜದ ಹೊಸ ಸಮಸ್ಯೆಗೆ ಕಾರಣಳಾಗುತ್ತಾಳೆ. ಸಮಾಜದ ಅರ್ಥಹೀನ ಮೌಲ್ಯಗಳಲ್ಲಿ ತಂದೆ ತಾಯಿಯರಿಂದಲೇ ತನ್ನ ಬಾಳಿನಪಥ ಕಳೆದುಕೊಂಡು ದುರಂತಕ್ಕೊಳಗಾಗುತ್ತಾಳೆ. ಸೂಕ್ಷ್ಮಮತಿ, ಮೃದು, ಮುಗ್ಧ ಮನೋಭಾವದ ಹೆಣ್ಣಿಗೆ ಸಮಾಜ ಕೊಡುವ ಕೊಡುಗೆ ಇದು !

ಇನ್ನೊಂದು ಅತಿರೇಕದಲ್ಲಿ ನಿಂತು ಸಮಾಜವನ್ನು ಎದುರಿಸತ್ತೇನೆಂದು ಹೊರಡುವ ಒರಟು ಹೆಣ್ಣುಮಾರ್ಗರೆಟ್. ಅಲಮೇಲು ಬೆಣ್ಣೆಯಾದರೆ ಮಾರ್ಗರೆಟ್ ಬೆಂಕಿ. ಹೆಣ್ಣಿನ ಅತೀಮೃದುಮನೋಭಾವ, ವಿನಯ ವಿಧೇಯತೆಯಾಗಲಿ ಅತಿಕಠಿಣ, ಒರಟು ಧೂರ್ತತನವನ್ನಾಗಲಿ ಸಮಾಜ ಸಹಿಸುವುದಿಲ್ಲ. ಎರಡು ಅತಿರೇಕಗಳಲ್ಲಿ ನಿಂತ ಎರಡೂ ಹೆಣ್ಣುಗಳೂ ಈ ಕಾದಂಬರಿಗಳಲ್ಲಿ ದುರಂತಕ್ಕೊಳಗಾಗುತ್ತವೆ. ಸಮಾಜಕ್ಕೆ ಹೆದರಿ ತನ್ನ ಪ್ರೇಮವನ್ನು ಬಿಟ್ಟುಕೊಡಲಾರದ ಮಾರ್ಗರೆಟ್ ರಾಮಾಚಾರಿಯೊಂದಿಗೆ ಸಾಯುತ್ತಾಳೆ. ಅವಳು ಸತ್ತು ಪ್ರೇಮವನ್ನು ಒಂದು ರೀತಿಯಲ್ಲಿ ಸಮಾಜಕ್ಕೆ ಎತ್ತಿ ತೋರಿಸಿದ್ದರೆ ಮತ್ತೊಂದು ರೀತಿಯಲ್ಲಿ ಅದೇ ಸಮಾಜಕ್ಕೇ ಹೆದರಿ ಅವನೊಡನೆ ಸತ್ತಿರುತ್ತಾಳೆ. ಹೇಗಾದರೂ ದುರಂತ ಅವಳಿಗೆ ಕಟ್ಟಿಟ್ಟ ಬುತ್ತಿ. ತನಗೆ ಸರಿತೋರಿದ್ದನ್ನು ಮಾಡಿ ಸಮಾಜದ ಕಣ್ಣಿನಲ್ಲಿ ಪ್ರತಿಗಾಮಿ, ಮೊಂಡಿ, ಹಠಮಾರಿ ಎಂದು ಹೆಸರು ಪಡೆಯುತ್ತಾಳೆ.

ಈ ಕಾದಂಬರಿಗಳಲ್ಲಿ ಸಮಾಜ ಹೆಣ್ಣನ್ನು ಸಮಸ್ಯೆ ಎಂದೇ ಭಾವಿಸುತ್ತದೆ. ಅವಳು ಅತಿಮೃದುವಾಗಿ ವಿನಯವಂತಳಾಗಿ ಬದುಕಲು ಹೊರಟರೆ ಅವಳ ಒಳ್ಳೆಯ

ಗುಣವನ್ನೇ ದುರುಪಯೋಗ ಪಡಿಸಿಕೊಂಡು ಅವಳನ್ನು ತುಳಿದುಹಾಕುತ್ತದೆ.ಒಟ್ಟಿನಲ್ಲಿ ಅಲಮೇಲು, ಮಾರ್ಗರೇಟರ ಪಾತ್ರಚಿತ್ರಣದ ಸೂಕ್ಷ್ಮತೆ ಅತ್ಯಂತ ಮನೋಜ್ಞ ವಾಗಿದೆ.

ನಗರಜೀವನದಿಂದ ದೂರವಾಗಿ ನಿಂತು ಯಾವ ತೋರಿಕೆತನ, ಕುಟಿಲತೆ, ಕುಯುಕ್ತಿಯನ್ನು ಕಾಣದ ಸರಳ ಜನ, ಸಹೃದಯಿಗರು, ಚಂದವಳ್ಳಿಯ ಜನ. ಅವರ ಮನಸ್ಸು ಹೂವಿನಂತೆ ಕೋಮಲವಾಗಿಯೂ ಇರಬಲ್ಲುದು. ಕೆಟ್ಟಕೃತ್ಯಗಳಿಗೆ ಬೇಸತ್ತಾಗ ಕಲ್ಲಿನಂತೆ ಗಡಸೂ ಆಗಬಲ್ಲದು. ಹಳ್ಳಿಯ ಬದುಕಿನ ನಿರ್ಮಲತೆ, ಮುಗ್ಧತೆ, ಕಪಟವರಿಯದ ಶುದ್ಧ ಪಾತ್ರಗಳನ್ನು 'ಚಂದವಳ್ಳಿಯ ತೋಟ' ಕಾದಂಬರಿ ಬಹು ಸುಂದರವಾಗಿ ಚಿತ್ರಿಸುತ್ತದೆ. ಈ ಕಾದಂಬರಿಯ ನಾಯಕ ಶಿವನಂಜೇಗೌಡರ ಹೆಂಡತಿ ಪುಟ್ಟತಾಯಮ್ಮ, ಸೊಸೆ ಚೆನ್ನವ್ವ, ಅದೇ ಹಳ್ಳಿಯ ಶಾನುಭೋಗರ ಹೆಂಡತಿ ಪಾರೋತಮ್ಮ. ಇವರುಗಳು ಹಳ್ಳಿಯ ಬದುಕಿನ ನಿಷ್ಕಪಟ ಮನೋಭಾವವನ್ನು ಸಾರುವ ಹೆಣ್ಣುಗಳು, ಕೇಳಿಕೆಯ ಮಾತುಗಳಿಗೆ ಪಕ್ಕಾಗದವರು. ಯಾವಮುಚ್ಚು ಮರೆಯನ್ನು ಕಾಣದವರು. ಇದನ್ನು ಜಲಜಾಕ್ಷಮ್ಮನ ಹಾಲು, ಮೊಸರಿನ ಪ್ರಸಂಗ ಸ್ಪಷ್ಟಪಡಿಸುತ್ತದೆ. ಪಾರೋತಮ್ಮ, ಪುಟ್ಟತಾಯಿ ಇವರ ನಡುವೆ ವಿರಸವುಂಟು ಮಾಡುವ ಸಂದರ್ಭ ತಪ್ಪುವುದು ಅವರ ಮುಕ್ತ ಆಲೋಚನೆಯಿಂದ. ಇವರುಗಳ ಅತಿ ಉದಾರೀ ಮನೋಭಾವ, ಹೂವಿನಂಥ ಮನಸ್ಸನ್ನು ದುರುಪಯೋಗ ಪಡಿಸಿ ಕೊಳ್ಳುವವರೂ ಅದೇ ಹಳ್ಳಿಯ ಆವರಣದೊಳಗೇ ಸೃಷ್ಟಿಯಾಗಿದ್ದಾರೆ. ಜಲಜಾಕ್ಷಮ್ಮ ಲಕ್ಷ್ಮಿಯಂತಹ ಹೆಣ್ಣುಗಳಿಂದ ಅವಿಭಕ್ತ ಕುಟುಂಬ ಒಡೆದು, ಹಳ್ಳಿಯೇ ಹಾಳಾಗಿ ಗೌಡನಂತಹ ಹಾಲುಮನಸ್ಸಿನ ಗಂಡಂಗಳು ಮನೋಸ್ವಾಸ್ಥ್ಯ ಕಳೆದು ಕೊಳ್ಳುವುದರಲ್ಲಿ ಸಂದೇಹವಿಲ್ಲ. ಜಲಜಾಕ್ಷಮ್ಮನಂಥ ಸಂಕುಚಿತ ಸ್ವಾರ್ಥಮನೋಭಾವದ ಹೆಣ್ಣು ಹಳ್ಳಿಯನ್ನೇ ಹಾಳುಮಾಡುತ್ತಾಳೆ. ಹಾಲು ಹೊಳೆಯಲ್ಲಿ ಹುಳಿ ಹಿಂಡುತ್ತಾಳೆ. ಹೆಣ್ಣಿನ ವಿವಿಧ ಮನೋಭಾವಗಳನ್ನು, ಅವರ ಸಿಹಿ, ಕಹಿ ಮನೋಬಾವಗಳನ್ನು ಈ ಕಾದಂಬರಿ ಅತ್ಯಂತ ಸರಳ ಸುಂದರವಾಗಿ ಚಿತ್ರಿಸುತ್ತದೆ.

ಚಂದವಳ್ಳಿಯತೋಟ ಹಳ್ಳಿ ಹೆಣ್ಣುಗಳ ಬದುಕನ್ನು ಹೃದಯಂಗಮವಾಗಿ ಚಿತ್ರಿಸಿದರೆ, ನಗರದ ಹೆಣ್ಣುಗಳ ಕಾವಿನ ಬದುಕನ್ನು ತೀವ್ರವಾಗಿ ಚಿತ್ರಿಸುವ ಕಾದಂಬರಿ "ಬಿಡುಗಡೆಯ ಬೇಡಿ".

"ಬಿಡುಗಡೆಯ ಬೇಡಿ" ಹೆಸರೇ ಸೂಚಿಸುವಂತೆ ಸಮಸ್ಯಾತ್ಮಕ ಕಾದಂಬರಿ. ಈ ಕಾದಂಬರಿಯ ಕೇಂದ್ರವಸ್ತು ಸ್ತ್ರೀ ಸ್ವಾತಂತ್ರ್ಯದ ಸಮಸ್ಯೆ. ಸ್ವಾತಂತ್ರ್ಯಾನಂತರದ ಭಾರತದ ವೈಜ್ಞಾನಿಕ ಪ್ರಗತಿಯ ವೇಗದ ಕಾಲದ ಸಮಾಜದ ಸಮಸ್ಯೆಗಳೇ ಈ ಕಾದಂಬರಿಯ ಒಡಲು.

ಯಂತ್ರ ನಾಗರೀಕತೆ, ವಿಜ್ಞಾನದ ಬಳಕೆಯಿಂದಾಗಿ ಯಂತ್ರಗಳನ್ನು ಮಾನವನ ಸಹಾಯಕ್ಕಾಗಿ ಕೊಡುಗೆಯಿತ್ತರೂ ಆ ಕೊಡುಗೆ ಮಾರಕವಾಗಿ ಸಣ್ಣ ಪ್ರಮಾಣದ

ಯಂತ್ರಗಳನ್ನು ಮಾನವ ನಿಯಂತ್ರಿಸುತ್ತಿದ್ದುದು ಅದರ ಪ್ರಮಾಣ ಹೆಚ್ಚಿದಂತೆ ಯಂತ್ರಗಳೇ ಮಾನವನನ್ನು ನಿಯಂತ್ರಿಸುವ ಶೋಚನೀಯ ಸ್ಥಿತಿಗಿಳಿಯಿತು. ಅವರಲ್ಲೂ ಯಂತ್ರನಾಗರೀಕತೆಯ ಹೃದಯವಾದ ಬೊಂಬಾಯಿಯಂತಹ ನಗರಗಳಲ್ಲಿ ಮನುಷ್ಯನೇ ಒಂದು ಯಂತ್ರ ಎಂಬುದು ಕಾದಂಬರಿಯ ಪ್ರತಿಪುಟದಿಂದಲೂ ವೇದ್ಯವಾಗುವ ಸಂಗತಿ.

ಹುಟ್ಟು ಶ್ರೀಮಂತನ ಮಗಳಾದ ಪ್ರಭಾ ತಂದೆ ತಾಯಿಯರ ಒಲವಿನ ಮಗುವಾಗಿ ಬೆಳೆದರೂ ತಂದೆ ತನ್ನನ್ನು ನಡೆಸಿಕೊಳ್ಳುವ ರೀತಿ, ಹಾಗೂ ತಾಯಿಯನ್ನು ನಡೆಸಿಕೊಳ್ಳುವ ರೀತಿಗಳಲ್ಲೇ ಚಿಕ್ಕಂದಿನಿಂದಲೂ ವ್ಯತ್ಯಾಸವನ್ನು ಕಾಣುತ್ತಾಳೆ. ತಾಯಿ ತಂದೆಯ ಆಳು, ಕೈಗೊಂಬೆ ಎಂದು ಅರಿಯುತ್ತಾಳೆ. ಈ ಸಂಗತಿ ಅವಳಿಗೆ ಮನದಟ್ಟಾಗುವುದು ಮೊಗ್ಗಿನಜಡೆ ಪ್ರಸಂಗದಿಂದ. ಅಣ್ಣ, ತಮ್ಮ, ತಂಗಿ, ತಂದೆ ಎಲ್ಲರೂ ತನ್ನನ್ನು ಪ್ರೀತಿಸುವುದು ಹೆಣ್ಣು ಎಂಬ ಭಾವನೆಯಿಂದ, ಕನಿಕರದಿಂದ. ಈ ಭಾವನೆ ಇವಳು ಬೆಳೆದಂತೆಲ್ಲ ಒಲಿಯುತ್ತ ಹೋಗುತ್ತದೆ.

ಒಮ್ಮೆ ಕಾಲೇಜಿನಲ್ಲಿ ಆದ ಚರ್ಚಾಸ್ಪರ್ಧೆ ಅವಳ ಈ ಭಾವನೆಯನ್ನು ಇನ್ನಷ್ಟು ವೃದ್ಧಿಸುತ್ತದೆ. ಮನಸ್ಸನ್ನು ರೊಚ್ಚಿಗೆಬ್ಬಿಸುತ್ತವೆ. ತನಗೇ ತಿಳಿಯದಂತೆ ಸ್ತ್ರೀ ದ್ವೇಷಿ ಶಾಂತಾರಾಮನನ್ನು ಪುರುಷ ದ್ವೇಷಿ ಪ್ರಭಾವತಿ ಒಲಿಯಬೇಕಾಗುತ್ತದೆ. ಅವಳು ದಿಟ್ಟತನದಿಂದ ಸಮಾಜವನ್ನು ಎದುರಿಸಿ, ಕುಟುಂಬದವರನ್ನು ಎದುರಿಸಿ ತನ್ನ ಸ್ವಾತಂತ್ರ್ಯವನ್ನು ಕೊಳ್ಳಲು ಹೋಗುತ್ತಾಳೆ. ಆದರೆ ಅವಳು ತಿಳಿದಷ್ಟು ಸುಲಭವಾಗಿ ಹೆಣ್ಣಿಗೆ ಸ್ವಾತಂತ್ರ್ಯ ಸಿಕ್ಕುವುದಿಲ್ಲವೆಂಬುದನ್ನು ಲೀಲಾವತಿ ಮನದಟ್ಟು ಮಾಡಿಕೊಳ್ಳುತ್ತಾಳೆ. ಶಾಂತಾರಾಮ ಮತ್ತು ಪ್ರಭಾಳ ದಾಂಪತ್ಯ ಒಡೆಯುತ್ತದೆ, ಅವಳಿಗೆ ಭ್ರಮನಿರಸನವಾಗುತ್ತದೆ. ಅಂತಹ ಸಮಯದಲ್ಲಿ ಕೈಹಿಡಿದು ಕಾಪಾಡುವಳು ಫ್ಲೋರಾ, ಜಗತ್ತಿನ ಕಣ್ಣಲ್ಲಿ ಕಾಠಿಣ್ಯಮೂರ್ತಿಯಾಗಿ, ಜಾರಿಣಿಯಾಗಿ, ಕುಲಟೆಯಾಗಿ ಕಾಣುವ ಅವಳು ಏಸುಕ್ರಿಸ್ತನ ಪ್ರಿಯತಮೆ ಎಂಬುದನ್ನು ಪ್ರಭಾ ಮನಗಾಣುತ್ತಾಳೆ. ಅವಳಿಂದ ಪ್ರಭಾ ಹೊಸಬಾಳು ಪಡೆಯುತ್ತಾಳೆ. ಅವಳದು ಈಗ ಯಾಂತ್ರಿಕ ಬದುಕು. ಯಂತ್ರಕ್ಕೆ ಯಂತ್ರವಾಗಿ ದುಡಿಯುವ ಯಾಂತ್ರಿಕ ಬದುಕು.

ಈ ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಲ್ಲಿ ನಾಲ್ಕು ಸ್ತ್ರೀಪಾತ್ರಗಳು ಬರುತ್ತವೆ. ಪ್ರಭಾವತಿ ನಿಸ್ಸಂಶಯವಾಗಿ ಈ ಕಾದಂಬರಿಯ ಕೇಂದ್ರಪಾತ್ರವಾದರೂ ಅವಳಿಂದ ನಿಯಂತ್ರಿಸಲ್ಪಟ್ಟರೂ ಸ್ವತಂತ್ರವಾಗಿ ವರ್ತಿಸುವ ಪಾತ್ರ ಫ್ಲೋರಾಳದು. ಪ್ರಭಾವತಿ, ಫ್ಲೋರಾ ಇಬ್ಬರ ನೋವೂ ಸಮಾನ ರೀತಿಯದು. ಫ್ಲೋರಾ ಚಿಕ್ಕಂದಿ- ನಲ್ಲಿಯೇ ತಾಯಿಯ ಪ್ರೇಮವನ್ನು ಕಳೆದುಕೊಂಡು ತನ್ನ ತಾಯಿಯನ್ನು ವೇಶ್ಯೆಯನ್ನಾಗಿ ಮಾಡಿದ ಸಮಾಜದ ಮೇಲೆ ಚುಚ್ಚುವ ಕಣ್ಣಿನಿಂದ ಪ್ರತೀಕಾರದ ಕಿಡಿ ಕಾರುವ ನೋಟ ಕಾರುತ್ತಾಳೆ. ಗಂಡು ಹೆಣ್ಣನ್ನು ಬೆಲೆಗೆ ಕೊಂಡು ಕೊಳ್ಳುವಂತೆ ತಾನೂ ಗಂಡನ್ನು ಕೊಂಡುಕೊಳ್ಳುತ್ತೇನೆ ಎನ್ನುವ ಮನೋಭಾವ ಈಕೆಯದು. 'ಬದುಕಿ

ಇರುವುದು ಸಂತೋಷಕ್ಕಾಗಿ. ಸಂತೋಷ ಪಡಪವರನ್ನು ಬದುಕು ಬಂಧಿಸುತ್ತದೆ. ನಿನ್ನೆ ಸತ್ತುಹೋಯಿತು. ನಾಳೆ ಸಂಶಯಾತೀತವಾದುದು. ಇರುವ ಇಂದನ್ನು ಸುಖಿಪಡು' ಎಂಬ ಉಮರ್ ಖಯಾಂನ ತತ್ವವನ್ನು ಅನುಸರಿಸುತ್ತಾಳೆ.

ಪ್ರಭಾವತಿಯ ಬದುಕಿನ ಎರಡು ದಂಡೆಗಳಾಗಿ ಫ್ಲೋರಾ ಹಾಗೂ ಲೀಲಾವತಿಯರು ವರ್ತಿಸುತ್ತಾರೆ. ಇವರ ನಡುವೆ ಹಾದು ಬರುವವಳು ಶಾಲಿನಿ. ಕೌಟುಂಬಿಕ ಸುಖದಿಂದ ನೊಂದು ಕಮ್ಯುನಿಸ್ಟ್ ಪಾರ್ಟಿ ಸೇರಿ, ಅಲ್ಲಿಯೂ ಭ್ರಮನಿರಸವನ್ನು ಅನುಭವಿಸಿ, ಬೇಸತ್ತು ಮತ್ತೆ ತನ್ನ ಬದುಕಿನ ಭೂತದೊಡನೆ ಹೊಂದಿಕೊಳ್ಳಲು ಯತ್ನಿಸುವವಳು.

ಲೀಲಾವತಿ ಯಾವ ರೀತಿಯ ಹೋರಾಟವನ್ನೂ, ನಡೆಸದೆ ಬದುಕನ್ನು ಯಾವ ಮಹತ್ವಾಕಾಂಕ್ಷೆಗಳಿಗೂ ಒಳಗಾಗಿಸದೆ ಅದು ಬರುವ ರೀತಿಯಲ್ಲಿಯೇ ಸ್ವೀಕರಿಸುತ್ತಾಳೆ. ತನ್ನ ಹಾಗೂ ಪುರುಷನ ನಡುವೆ ಸ್ವಾತಂತ್ರ್ಯ ಕಲ್ಪನೆಯಲ್ಲಿ ಸ್ಪಷ್ಟವಾಗಿ ವ್ಯತ್ಯಾಸ ವಿರುವುದನ್ನು ಕಾಣುತ್ತಾಳೆ. ಅದು ಪ್ರಕೃತಿ ಸಹಜವಾದುದು ಎಂದು ಅದರ ಬಗ್ಗೆ ಯಾವ ವಿಶೇಷ ಗಮನವನ್ನೂ ನೀಡುವುದಿಲ್ಲ.

ವ್ಯಕ್ತಿ ಸಮಾಜದ ಕೃತ್ಯಗಳಿಗೆ ಬಂಡೇಳುತ್ತೇನೆಂದು ಪ್ರಯತ್ನಿಸ ಹೊರಟಾಗ ಅವನು ಸೀಮಿತವಲಯದಲ್ಲಿ ಮಾತ್ರ ಬಂಡಾಯಗಾರನಾಗುತ್ತಾನೆಯೇ ಹೊರತು ಇಡೀ ಸಮಾಜದ ದೃಷ್ಟಿಯಲ್ಲಲ್ಲ.

ಶಾಂತಾರಾಮನನ್ನು ತ್ಯಜಿಸಿದ ನಂತರ ಪ್ರಭಾ ಸಮಾಜದ ಬದುಕಿನ ವಾಸ್ತವತೆಗೆ ಮುಖಾಮುಖಿಯಾಗುತ್ತಾಳೆ. ಶೋಷಣೆ, ಯಾಂತ್ರಿಕತೆ, ಸಮಾಜದ ಮೈಯೊಳಗೇ ಹರಿಯುವ ರಕ್ತ ಎಂದು ಭಾವಿಸುತ್ತಾಳೆ. ತನಗೆ ಉದ್ಯೋಗ ದೊರೆತಾಗ ಸ್ವಾತಂತ್ರ್ಯದ ರೆಕ್ಕೆ ಬಡಿಯುವ ಹಕ್ಕಿ ಎಂದು ಭಾವಿಸುತ್ತಾಳೆ. ಆದರೆ ಅವಳು ದುಡಿತದ ಲಯದಲ್ಲಿ ಒಂದಾಗಿ ಕರಗಿ ಮತ್ತೆ ಬಿಡುವಿಗಾಗಿ ಹಾತೊರೆಯುತ್ತಾಳೆ ಕೊನೆಗೆ ಅವಳಿಗೆ ದೊರೆಯುವುದು ಕಡಲಕರಗೆ ಓಗೊಟ್ಟು, ಸತ್ತು, ಬದುಕಿನಿಂದ ಬಿಡುಪು ಪಡೆಯುವುದು ; ಇಲ್ಲವೆ ಮಿದುಳ ಬಚ್ಚಲಲ್ಲಿ ತನ್ನ ಆಲೋಚನೆ, ಭಾವನೆ, ಭ್ರಮೆಗಳನ್ನು ಕುದಿಸುತ್ತಾ ಮತ್ತೆ ಯಾಂತ್ರಿಕ ಬದುಕನ್ನು ಮುಂದುವರೆಸುವುದು. ಬದುಕಿಗೇ ಬದ್ಧಳಾಗಿ ಎಲೆಕ್ಟ್ರಿಕ್‌ಟ್ರೈನ್ ಹತ್ತಿ ಬದುಕಿನ ನಿಲ್ದಾಣದತ್ತ ಓಡಿಬರುವ ಪ್ರಭಾ ನಮಗೆ ಮುಖ್ಯಳಾಗುತ್ತಾಳೆ,

ಈ ಕಾದಂಬರಿ ಅಹಂಪ್ರಜ್ಞೆಯ ನಿರೂಪಣೆಯಿಂದ ಪ್ರಾರಂಭವಾಗುವ ಮೊದಲ ಕನ್ನಡ ಕಾದಂಬರಿ. ನವ್ಯ ಕಾದಂಬರಿಕಾರರ ಈ ತಂತ್ರವನ್ನು ತ.ರಾ.ಸು. ಅವರು ಆಗಲೇ ದುಡಿಸಿಕೊಂಡಿರುವುದನ್ನು ಕಾಣಬಹುದು.

ಕಾದಂಬರಿಗಳಲ್ಲಿ ಸಾಮಾಜಿಕ ವಿಡಂಬನೆ

— ದಯಾನಂದ ತೊರ್ಕೆ

ಕಾದಂಬರಿ ಸಮಾಜದ ಕೈಗನ್ನಡಿ, ಪ್ರತಿ ಕಾದಂಬರಿಯ ಮೂಲ ಉದ್ದೇಶ್ಯ ನಾವು ಬದುಕಿರುವ ಸಮಾಜದ ಹಲವು ಮುಖಗಳನ್ನು ತೋರಿಸುವದು. ಇಂಥ ಚಿತ್ರಣ ನೈಜವಾಗಿದ್ದಷ್ಟೂ ಆ ಕಾದಂಬರಿ ಜನಪ್ರಿಯವಾಗಿ ಯಶಸ್ವಿಯಾಗುವದು. ಹೀಗೆ ಸಮಾಜದ ನೈಜ ಚಿತ್ರಣ ನೀಡಿ, ಯಶಸ್ವಿಯಾದ ಕಾದಂಬರಿಗಳಲ್ಲಿ ತ.ರಾ.ಸು. ರವರ ಹಲವು ಕಾದಂಬರಿಗಳನ್ನು ಉದಾಹರಿಸಬಹುದು.

ತ.ರಾ.ಸು. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹೆಸರು ಮಾಡಿದ ಕಾದಂಬರಿಕಾರ. ನಾನು ಮೆಚ್ಚಿಕೊಂಡಿರುವ ಕೆಲವೇ ಲೇಖಕರಲ್ಲಿ ಒಬ್ಬರು. ಇವರು ಆಯ್ದುಕೊಳ್ಳುವ ಕಥೆ ನಮ್ಮ ಕಣ್ಣೆದುರು ನಡೆಯುವ ಘಟನೆಯೇ. ಕಥೆಯನ್ನು ಕೇವಲ ಶಬ್ದಜಾಲದಿಂದ ಪಡಿಮೂಡಿಸಿದರೆ ಅದು ಪರಿಣಾಮಕಾರಿ, ಯಶಸ್ವೀ ಕೃತಿಯಾಗುತ್ತದೆಂದು ಹೇಳಲಾಗದು. ಅದನ್ನು ಚಿತ್ರಿಸುವ ರೀತಿ ಸರಿಯಾಗಿರಬೇಕು. ಈ ಕಲೆಯನ್ನು ಸಾಧಿಸಿದವರು ತ.ರಾ.ಸು. ಇವರು ಕಥೆ ಹೇಳುವ ತಂತ್ರ ಆಕರ್ಷಕ, ಪರಿಣಾಮಕಾರಿ, ಸಮಾಜವನ್ನು ಜೀವಂತವಾಗಿ ಕಣ್ಣೆದುರು ಇಡುವ ಕಲೆ ಇವರ ಲೇಖನಿಯಲ್ಲಿದೆ.

ಇಲ್ಲಿ ನಾನು, ಅವರು ತಮ್ಮ ಕೃತಿಗಳಲ್ಲಿ ಸಮಾಜವನ್ನು ವಿಡಂಬಿಸಿದ ಬಗ್ಗೆ ಹೇಳಹೊರಟಿರುವದು ಅವರ ಹಳೆಯದಾದ ಪಂಜರದ ಪಕ್ಷಿ, ಕಾರ್ಕೋಟಕ, ಶುಕ್ರವಾರದ ಲಕ್ಷ್ಮಿ, ಮುಂಜಾವಿನ ಮುಂಜಾವು, ಪಾರಿಜಾತ, ಮಾರ್ಗದರ್ಶಿ — ಈ ಕೆಲವೇ ಕೃತಿಗಳ ಮೂಲಕ. ಒಂದು ಪಾತ್ರೆಯೊಳಗಿನ ಅನ್ನ ಬೇದಿದೆಯೋ ಎಂದು ನೋಡಲು ಇಡೀ ಕಾಳನ್ನು ಹಿಸುಕಿ ನೋಡಬೇಕಾಗಿಲ್ಲ; ಕೇವಲ ಒಂದೆರಡನ್ನು ನೋಡಿದರೆ ಸಾಕು, ಹಾಗೆ, ಸಮಾಜದ ಬಗ್ಗೆ ಲೇಖಕನ ಅನಿಸಿಕೆಯನ್ನು ಅರಿಯಲು ಅವನ ಪೂರ್ಣ ಕೃತಿಗಳನ್ನು ಅಭ್ಯಸಿಸಬೇಕಾಗಿಲ್ಲ. ಅದಕ್ಕಾಗಿ ನಾನು ತ.ರಾ.ಸು. ರವರ ಮೇಲಿನ ಆರು ಕೃತಿಗಳನ್ನಷ್ಟೇ ಆರಿಸಿಕೊಂಡಿರುವದು. ಈಗ ಆದರಲ್ಲೂ ಆರು ಕಥೆ, ಆರು ವಿಧದ ಸಮಾಜದ ಚಿತ್ರಣವಿದೆ.

'ಪಂಜರದ ಪಕ್ಷಿ'ಯಲ್ಲಿ ಚಿತ್ರಿತವಾಗಿರುವದು ಇಂದಿನ ಮಧ್ಯಮ ಬಡವರ್ಗದ ಸಂಸಾರದ ಚಿತ್ರ. ಇದರ ಕೇಂದ್ರಬಿಂದುವಾದ ಕೋಮಲಾಳ ಬಾಳಿನ ದುರಂತ ಚಿತ್ರಣ ಮನ ಮಿಡಿಯುವಂಥದ್ದು, ಹೊಟ್ಟೆಪಾಡಿಗಾಗಿ ದುಡಿಯುವ ಈಕೆ ಬಡತನದಿಂದಾಗಿ ಹಲವರ ಜವಾಬ್ದಾರಿ ಹೊತ್ತು, ತನ್ನ ತಾರುಣ್ಯ ಸಹಜವಾದ ಆಸೆ–ಆಕಾಂಕ್ಷೆ– ಅಭೀಷ್ಟೆಗಳನ್ನು ಮೆಟ್ಟಿನಿಲ್ಲುವ ದುರಂತ ನಾಯಕಿ. ಇವಳ ತಂದೆ ಗೋವಿಂದರಾಯನಂಥ ಕಡು ಬಡವ, ಹೆಣ್ಣು ಸಂತಾನದ ಭಾರ ಹೊತ್ತ ತಂದೆಯಂದಿರು ಇಂದಿನ ಸಮಾಜದಲ್ಲಿ ಎಷ್ಟಿಲ್ಲ? ಕತ್ತಲು ತುಂಬಿದ ಗೋವಿಂದರಾಯನ

ಬದುಕಿನಲ್ಲಿ ಕೋಮಲ ಒಬ್ಬಳೇ ಆಶಾಕಿರಣ. ಅವಳ ಮೇಲೇ ಆಧಾರವಾಗಿ ನಿಂತಿದೆ ಸಂಸಾರ. ಆ ಭಾರ ಹೊತ್ತು, ಕರ್ತವ್ಯ ಪ್ರಜ್ಞೆ ತಳೆದ ಕೋಮಲ ಪಡುವ ಪಾಡು ನೋಡಿದರೆ ಕನಿಕರವಾಗದಿರದು. ಒಂದೆಡೆ ಆಕೆ "ನಾನು ಹೆಂಗಸು – ಆದೇ ಮನುಷ್ಯಳು. ನನ್ನ ಸಾಕಿ ಸಲಹಿದ್ದೋರು, ಬೆನ್ನಲ್ಲಿ ಬಿದ್ದೋರು ಕಷ್ಟ ಪಡ್ತಾ ಇದ್ರೆ ನಾನು ಕಣ್ಣಿದ್ದೂ ಇಲ್ಲದೋಳ ಹಾಗೆ, ಯಾರು ಸತ್ತರೆ ನನಗೇನು ಅಂತ ಕೂತು ಕೊಂಡಿರಲೆ? ಅಥವಾ ನನ್ನ ಸುಖಕ್ಕೆ ರಾಣಿ ಮಾಡಿ ಉರುಲು ಹಾಕಿಕೊಂಡು ಸಾಯಿರಿ ಅಂತ ಹೇಳಲೆ? ನನ್ನ ಹಣೇಲಿ ಮದುವೇಂತ ಬರೆದಿದ್ರೆ ಎಂದೋ–ಹೇಗೋ ಆಗುತ್ತೆ. ಅದುವರೆಗೂ ಎಲ್ಲರಿಗೂ ಭಾರವಾಗಿರೋ ಬದಲು, ಅಷ್ಟು ನನ್ನ ಕೈಯಿಂದ ಆದಷ್ಟು ಮಾಡಿ, ಈ ಮನೆಗೆ ಮಗಳಾಗಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತು ಅಂತಾ-ನಾದ್ರೂ ಅನ್ನಿಸಿಕೋತೀನಿ" ಅನ್ನುತ್ತಾಳೆ. ಇದು ಕೋಮಲಳಂಥ ಪ್ರತಿ ದುರ್ದೈವೀ ಹೆಣ್ಣಿಗೇ ಹಿಡಿದ ಕೈಗನ್ನಡಿ. ಇಂಥ ದುರ್ದೈವಿಗಳು ನಮ್ಮ ಸಮಾಜದಲ್ಲಿ ಎಷ್ಟಿಲ್ಲ? ಜೊತೆಗೆ ಇಂದಿನ ವರದಕ್ಷಿಣೆಯ ಅವಾಂತರದಲ್ಲಿ ನರಳುವ ಹೆಣ್ಣು ಹೆತ್ತ ಬಡ ಕುಟುಂಬದ ಧ್ವನಿ ಇಲ್ಲಿ ಮೊಳಗಿವೆ.

ತ.ರಾ.ಸು. ಈ ಕಾದಂಬರಿಯಲ್ಲಿ ಕೋಮಲಳ ಮೂಲಕ ಹೆಣ್ಣಿನ ಅಸಹಾಯಕತೆಯನ್ನು ಎತ್ತಿತೋರಿಸಿದರೂ ಇನ್ನುಳಿದ ಪಾತ್ರಗಳ ಮೂಲಕ ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸಿ, ಹೆಣ್ಣುಗಂಡಿನ ದಾಸಳಲ್ಲ, ಅವಳೂ ಸ್ವಾತಂತ್ರವಾಗಿ, ಸ್ವಚ್ಛಂದವಾಗಿ ಇರಬಲ್ಲಳೆಂದು ಪ್ರತಿಪಾದಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಬರುವ ಮಾತುಗಳು ಹೀಗಿವೆ. :–

"ಹೆಣ್ಣಾಗಿ ಹುಟ್ಟಿದೊಳಿಗೆ ಗಂಡು ಸಿಗೋದೇ ಡಿಗ್ರಿ; ಮಕ್ಕಳಾಗೋದೇ ಡಾಕ್ಟರೇಟ್! ಡ್ಯಾಂ, ನಾನ್‌ಸೆನ್ಸ್. ಹೆಂಗಸರೂಂದ್ರೆ ಈ ಜನ ಹೆರಿಗೆಯಂತ್ರ ಅಂತ ತಿಳಕೊಂಡಿದ್ದಾರೆ. ಅದಕ್ಕೆ ತಕ್ಕಹಾಗೆ ಒಬ್ಬ ಗಂಡು ಗೊತ್ತಾಗಿಬಿಟ್ರೆ ಆಗಿಹೋಯ್ತು– ಗೌರಿಶಂಕರ ಶಿಖರ ಹತ್ತಿದ ಹಾಗೇ! ಈ ಆಟಿಟ್ಯೂಡ್ ಶುದ್ಧ ಅಪಮಾನ"

"ಇಷ್ಟವಿದ್ದಷ್ಟು ದಿನ ಓದಿ, ಲಕ್ಷಣವಾಗಿ ಸಂಬಳ ಬರೋಕೆಲಸ ಹಿಡಿದು, ಗಂಡಸರ ಹಾಗೇ ಮಜಾ ಮಾಡ್ತೀನಿ. ಯಾವೋನಿಗೋ ಕೂಳು ಕಟ್ಟಿಡಲಿಕ್ಕೆ ನನಗೇನು ತೆವಲೆ?"

"ನಾವು ಚೆನ್ನಾಗಿದ್ರೆ ನಮ್ಮ ಕಾಲಮೇಲೆ ಬೀಳೋ ಗಂಡಸರು ಸಾವಿರ. ಆ ಸುಖ ಬೇಕನ್ನಿಸಿದಾಗ ಪಟ್ಟರಾಯಿತು. ಅದಕ್ಕೆ ಈ ಮದುವೆಬೇಡಿ ಯಾಕೆಬೇಕು?"

"ಶೀಲ–ನೀತಿ! ಇದೆಲ್ಲ ಕಾಕಮ್ಮನ ಕಥೆಗೆ ಹೆದರೋಕೆ ನಾನು ಹಸುಗೂಸಲ್ಲ. ಶೀಲ–ನೀತಿಯೆಲ್ಲ ಡ್ಯಾಂ, ನಾನ್‌ಸೆನ್ಸ್ ಅಂತ ಅನ್ನೋದು. ಅದಕ್ಕೇ ನನಗೆ ಅವುಗಳ ಭಯಾನೂ ಇಲ್ಲ"

ಇಂಥ ಮಾತುಗಳನ್ನಾಡುವ ದಿಟ್ಟೆಯರು ಇಂದಿನ ಸಮಾಜದಲ್ಲಿ ಕಡಿಮೆಯಿಲ್ಲ. ತನ್ನ ಬಡತನ, ಬಡ ಸಂಸಾರ, ಜವಾಬ್ದಾರಿ ಅರಿತು ಅದಕ್ಕಾಗಿ ಸರ್ವಸ್ವವನ್ನೂ

ತ್ಯಾಗ ಮಾಡಿದಂಥ ಕೋಮಲಳಂಥವಳು ಇರುವ ಸಮಾಜದಲ್ಲಿ ಇಂಥವರಿಗೂ ಕೊರತೆಯಿಲ್ಲ.

'ಪಂಜರದ ಪಕ್ಷಿ' ಹೆಣ್ಣಿನ ಸೂಕ್ಷ್ಮ ಸಂವೇದನೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟ ಕಾದಂಬರಿ. "ಇದರಲ್ಲಿ 'ಸುಪ್ತ ಚಿತ್ತ ಪ್ರವಾಹ' (Stream of inner consciousness) ತಂತ್ರ ಇದೆ" ಎಂದು ಲೇಖಕರೇ ಹೇಳಿಕೊಂಡಿದ್ದಾರೆ.

ಇವರ ಇನ್ನೊಂದು ಕಾದಂಬರಿ 'ಕಾರ್ಕೋಟಕ' ಸಮಾಜ ಜೀವನವನ್ನು ವಿಷಮಗೊಳಿಸುವ ವ್ಯಕ್ತಿಯೊಬ್ಬನ ಚಿತ್ರ ನೀಡುತ್ತದೆ. ಇದರಲ್ಲಿ ಬರುವ ಶಾಂತ–ರಾಜ, ಅನಂತರಾಜಪ್ಪ, ಪದ್ಮಾವತಮ್ಮ, ಲೋಕಮ್ಮ ಇವರೆಲ್ಲ ನಮ್ಮ ಸಮಾಜದೊಳಗಿನ ಒಂದೊಂದು ಮುಖ. "ಹತ್ತು ರೂಪಾಯಿ! ಹತ್ತು ರೂಪಾಯಿ ಖರ್ಚು ಮಾಡಿದ್ರೆ ಒಂದು ತಿಂಗಳಿಗಾಗೋ ಅಷ್ಟು ಅಕ್ಕಿ, ತುಪ್ಪ ಬರ್ತದೆ. ಒಂದು ನಾಟಕಕ್ಕೆ ಅಷ್ಟು ಖರ್ಚು ಮಾಡೋದಾ?" ಅನ್ನುವಂಥ ಅನಂತರಾಜಯ್ಯನಂಥ 'ಸ್ಟಿಂಜಿ'ಗಳಿಗೆ ನಮ್ಮಲ್ಲಿ ಕಡಿಮೆಯಿಲ್ಲ. ಅದರಂತೆ "ಎರಡು ದಿನ ಅನ್ನ ಅಕ್ಕಕ್ಕಿ ಮಾಡು, ಸಾರಿಗೆ ಉಪ್ಪು ಹೆಚ್ಚು ಹಾಕು. ಅಗ ಅವರಿಗೆ ಮನೆ ಹೆಂಡತಿ ಜ್ಞಾಪಕ ಬರುತ್ತೆ" ಎಂದು ಕಿವಿ ಚುಚ್ಚಿ ಹೆಂಡತಿಯನ್ನು ಗಂಡನ ವಿರುದ್ಧ ಎತ್ತಿ ಕಟ್ಟುವ ಸಾವಿತ್ರಿಯಂಥವರಿಗೂ ನಮ್ಮಲ್ಲಿ ಕಡಿಮೆಯಿಲ್ಲ. ಪುರಾಣ ಕಾಲದ ಸಾವಿತ್ರಿ ಸತ್ತು ಹೋದ ಗಂಡನನ್ನು ಯಮನ ಕೈಯಿಂದ ಬಿಡಿಸಿಕೊಂಡು ಬಂದಳು. ಆದರೆ ಇಂದಿನ ಕಾಲದ ಸಾವಿತ್ರಿ ಜೀವಂತವಿರುವ ಗಂಡನನ್ನು ಸಾಯಿಸಿ ಯಮಸದನಕ್ಕೆ ಅಟ್ಟುವಂಥವಳು. ಇದನ್ನು ಹೇಳಬೇಕಾದ್ದೇ ಮುಖ್ಯ ಉದ್ದೇಶ್ಯ ಲೇಖಕರದು ಇಲ್ಲಿ.

ಆಧುನಿಕ ಸ್ತ್ರೀಯ ವಿಡಂಬನಾತ್ಮಕ ನೋಟವನ್ನು ತ.ರಾ.ಸು. ತಮ್ಮ ಈ ಕಾದಂಬರಿಯಲ್ಲಿ ಲೋಕಮ್ಮನ ರೂಪದಲ್ಲಿ ಸ್ವಾರಸ್ಯವಾಗಿ ನೀಡಿದ್ದಾರೆ. ಇದರಲ್ಲಿ ಲೋಕಮ್ಮ ಸಿಂಗರಿಸಿಕೊಳ್ಳುವ ದೀರ್ಘಕಾಲದ ಕ್ರಿಯೆ ಇಂದಿನ ಆಧುನಿಕ ಸ್ತ್ರೀಸಮಾಜದ ಮುಖಕ್ಕೆ ಹಿಡಿದ ಕನ್ನಡಿ. ಗಂಡನಾದವನು ಹೆಂಡತಿಯ ಅತಿ ಆಡಂಬರಕ್ಕೆ ರೋಸಿ ಹೇಳುವ ಮಾತು ಸ್ವಾರಸ್ಯವಾಗಿದೆ: "ಇದಕ್ಕೆ ನಾನು ಈ 'ಯಮತಂಪಿನ' ಹೆಂಗಸರನ್ನು ಕರಕೊಂಡು ಎಲ್ಲಿಗೂ ಹೋಗಬಾರದು ಅನ್ನೋದು. ಊಟಕ್ಕೆ ಕುಂತ್ರೆ ಮೂರು ದಿವಸ, ಉಂಗುರ ಇಡೊ ಅಂದ್ರೆ ಆರು ದಿವಸ. ನಿನ್ನನ್ನ ಹೊರಗೆ ಕರಕೊಂಡ್ ಹೋಗೋದೂಂದ್ರೆ ಬೆಕ್ಕನ್ನು ಕಂಕುಳಲ್ಲಿ ಇಟ್ಟುಕೊಂಡು ಶಕುನ ಕೇಳೋಕೆ ಹೋದ ಹಾಗೆ. ಸೀರೆ ಉಟ್ಕೊಳ್ಳೋದೇನು ಈವತ್ತೇ ಕಲೀಬೇಕೆ ? ಬೇಗ ಹೊರಡು ಅಂದ್ರೆ ಬ್ರಹ್ಮ ಶೌಚಕ್ಕೆ ಹೋದ ಕಥೆ ಮಾಡ್ತಿದ್ದೀಯಲ್ಲ."

ಈ ಅವಸ್ಥೆ ಇಂದಿನ 'ಅಮ್ಮಾವ್ರ ಗಂಡ' ನಿಂಗೇನು ಹೊಸದಲ್ಲ. ಇದೇ ಕಾದಂಬರಿಯಲ್ಲಿ ತ.ರಾ.ಸು. ವ್ಯಕ್ತಿಯನ್ನು ರೂಪಿಸುವುದು ಅವನ ಸ್ಥಿತಿ–ಗತಿ ಅನ್ನುವುದನ್ನು ಸ್ವೀಕರಿಸಲು ಧರಣಯ್ಯನ ಮೂಲಕ ಚಿತ್ರಿಸಿದ್ದಾರೆ. ಈತ ತನ್ನ

ಮಗನಿಗೆ "ಎಲ್ಲ ವಿಷಯಾನೂ ಅಷ್ಟೆ-ಏನು ಮಾಡಿದ್ರೂ ದೊಡ್ಡದಾಗಿ ಮಾಡ್ಬೇಕು. ಒಂದು ಮನೆ ಕಳ್ಳತನ ಮಾಡಿದ್ರೆ ಜೈಲು, ದೇಶಾನೇ ಕಳ್ಳತನ ಮಾಡಿದ್ರೆ ರಾಜಪಟ್ಟ; ಶಾಸ್ತ್ರ, ಪುರಾಣ ಏನೇ ಹೇಳಿದ್ರೂ ಜಗತ್ತು ಹೀಗೇ ನಡೀತಾ ಇದೆ. ಆದ್ದರಿಂದಲೇ ಈ ಜಗತ್ತಿನಲ್ಲಿ ಬದುಕಬೇಕು ಅನ್ನೋನು ಸಣ್ಣ ಪುಟ್ಟ ಸುಳ್ಳು ಹೇಳಬಾರದು. ಜಗತ್ತೇ ಅಲ್ಲಾಡುವಂಥ ಸುಳ್ಳು ಹೇಳಬೇಕು. ಸುಳ್ಳು ಸಾಹುಕಾರ್ರ ಬಲ; ಸತ್ಯ ಬಡವರ ಬಲ ಇದನ್ನು ನೆನಪಿಟ್ಟುಕೊ" ಎಂದು ಉಪದೇಶಿಸುವ ಮಾತು ಇಂದಿನ ಸಮಾಜದ ಸ್ಥಿತಿಗತಿಯ ನಗ್ನಚಿತ್ರ. ಧರಣಯ್ಯನ ಈ ಮಾತುಗಳು ಅಕ್ಷರಶಃ ಸತ್ಯವೆನ್ನುವ ಹಾಗೆ ದೇಶವನ್ನೇ ಲೂಟಿ ಮಾಡಿ, ಸುಳ್ಳನ್ನೇ ಬದುಕನ್ನಾಗಿಸಿಕೊಂಡು, ಲೋಕದ ಕಣ್ಣಿಗೆ ದೊಡ್ಡವರೆನ್ನಿಸಿಕೊಂಡವರೇ ತುಂಬಿ ಹೋಗಿದ್ದಾರೆ ಈ ಪ್ರಪಂಚದಲ್ಲಿ. ಇಂಥವರಿಂದಲೇ ಧರಣಯ್ಯನ ಮಗ ಶಾಂತರಾಜುವಿನಂಥ ಮಕ್ಕಳ ನಿರ್ಮಾಣವಾಗುವುದು. ತಂದೆಯ ಉಪದೇಶಕ್ಕೆ ಈ ಪುತ್ರರತ್ನ "ಸುಳ್ಳು ಹೇಳುವುದು ತಪ್ಪಿಲ್ಲ. ಸುಳ್ಳು ಹೇಳುವುದೇ ದುಡ್ಡು ಕೂಡಲು ದಾರಿ. ಉಳಿದುದೆಲ್ಲಕ್ಕೂ ರಹದಾರಿ" ಎಂದು ತಲೆಬಾಗಿ, ಅದೇ ದಾರಿಯಲ್ಲಿ ಸಾಗಿ 'ದೊಡ್ಡ'ವನಾಗುವನು ಮುಂದೆ ಈತ ಇದನ್ನೇ ತನ್ನ ಜೀವನದ ಮಂತ್ರವನ್ನಾಗಿ ಮಾಡಿಕೊಂಡು, ಗೋಪಾಲಶಾಸ್ತ್ರಿಯೆಂಬವರ ವ್ಯವಹಾರದಲ್ಲಿ ಸೇರಿಕೊಂಡು, ಅವರ ಮನೆ ಹೊಕ್ಕು ತನಗಿಂತಲೂ ಹತ್ತೆಂಟು ವರ್ಷ ದೊಡ್ಡವಳಾದ ಪಾರ್ವತಿಯೊಡನೆ ಪ್ರಣಯ ನಡೆಸಿ ಇಂದಿನ ಅನೇಕ 'ತಲೆಹಿಡುಕರಿಗೆ' ಮಾದರಿಯಾಗುತ್ತಾನೆ.

ಕಾಮುಕ ಹೆಣ್ಣು ಅದೆಷ್ಟರ ಮಟ್ಟಿಗೆ ಬುದ್ಧಿಗೇಡಿಯಾಗುತ್ತಾಳೆನ್ನುವುದಕ್ಕೆ ಇದರಲ್ಲಿಯ ಪಾರ್ವತಿ ಒಂದು ಉದಾಹರಣೆಯಾಗಿ ಲೇಖಕರು ನೀಡಿದ್ದಾರೆ. ತನಗಿಂತಲೂ ಕಿರಿಯವನಾದವನೊಡನೆ ಲೈಂಗಿಕಕ್ರಿಯೆ ನಡೆಸಲು ಪಾರ್ವತಿಗೆ ಹೇಸಿಕೆಯೆನ್ನಿಸುವುದಿಲ್ಲ. ತೃಪ್ತಿಯೇ ಅವಳ ಗುರಿ. ಇಂಥ ಹೆಂಗಸರು ಇಂದಿನ ಸಮಾಜದಲ್ಲಿ ಸಾಕಷ್ಟು ಕಾಣಸಿಗುತ್ತಾರೆ.

ಭೋಗಲಾಲಸೆಯ ಪಾರ್ವತಿಯ ಮೂಲಕ ತ.ರಾ.ಸು. ಒಂದು ವರ್ಣದ ಸ್ತ್ರೀಸಮೂಹವನ್ನು ಚಿತ್ರಿಸಿದಂತೆ, 'ಶುಕ್ರವಾರದ ಲಕ್ಷ್ಮಿ'ಯಲ್ಲಿ ಅಚ್ಚುತಮ್ಮನ ಮೂಲಕ ಆದರ್ಶದ ಇನ್ನೊಂದು ಸ್ತ್ರೀಸಮೂಹವನ್ನು ಚಿತ್ರಿಸಿದ್ದಾರೆ. ಅಚ್ಚುತಮ್ಮ ಶಾನುಭೋಗ ಸೋಮಯ್ಯನ ಜೀವನವನ್ನು ನಂದನವನವನ್ನಾಗಿಸಿದಂತೆ. ಇಂಥವರಿಗೂ ನಮ್ಮ ಸಮಾಜದಲ್ಲಿ ಕೊರತೆಯಿಲ್ಲ. ಆದರೆ 'ಶುಕ್ರವಾರದ ಲಕ್ಷ್ಮಿ' ಕಾದಂಬರಿಯ ಕಥೆಯ ಹಂದರ ಹಮ್ಮಿಕೊಂಡಿರುವುದು ಮೆಚ್ಚಿ ತಂದ ಹೆಣ್ಣಿನಿಂದ ಸಂಸಾರದಲ್ಲಾಗಬಹುದಾದ ದುರಂತದ ಚಿತ್ರಣದಿಂದ. ಗಂಡ ಶ್ಯಾನುಭೋಗನಾದರೂ ಅವನಿಗೆ ನಂಬಿಕೆಯುಳ್ಳವಳಾಗಿ, ತನ್ನ ಬಡ ಸಂಸಾರದಲ್ಲಿ ತೃಪ್ತಿ ಕಾಣುವ ಹೆಣ್ಣು ಅಚ್ಚುತಮ್ಮ. ಆದರೆ ಅಮಲ್ದಾರ ಮಹದೇವಶಾಸ್ತ್ರಿಗಳ ಹೆಂಡತಿ ಅನ್ನಪೂರ್ಣಮ್ಮ ತನ್ನ ದೊಡ್ಡಸ್ತಿಕೆಯಿಂದ ಬೀಗಿದ ಘಮಂಡಿ ಹೆಣ್ಣು. ಲೇಖಕರು ಇಲ್ಲಿ ಹೆಣ್ಣಿನ ಎರಡು ವಿರುದ್ಧ

ಗುಣ ಧರ್ಮಗಳನ್ನು ತೋರಿಸಿದ್ದಾರೆ. ತನ್ನ ಗಂಡ ಸಾಮಾನ್ಯ ಶ್ಯಾನುಭೋಗ ಸೋಮಯ್ಯನ ಮಗನೊಡನೆ ಬೀಗತನದ ಸಂಬಂಧ ಬೆಳೆಸಲು ಇಚ್ಛಿಸಿದಾಗ "ನೀವು ನೋಡಿದರೆ ಅಮಲ್ದಾರರು, ಗಂಡು ಶಾನುಭೋಗರ ಮಗ. ಇಂಥ ಸಂಬಂಧ ಮಾಡಿದ್ರೆ ನೋಡಿದೋರು ನಗೋಲ್ವೆ ?" ಎಂದು ಅನ್ನಪೂರ್ಣಮ್ಮ ಆತಂಕ ವ್ಯಕ್ತ ಪಡಿಸುತ್ತಾಳೆ. ಪ್ರತಿ ಹೆಣ್ಣಿಗೂ ತನ್ನ ಮನೆಯ ಘಟನೆಯ ಕಾಳಜಿ ಬಹಳ. ಇದು ಇಂದಿಗೂ ನಾವು ಕಾಣುವ ಸ್ಥಿತಿ. ಅನ್ನಪೂರ್ಣಮ್ಮ ಸ್ತ್ರೀಸಮೂಹದ ಪ್ರತಿನಿಧಿಯಾಗಿ ಇಲ್ಲಿ ಎದ್ದು ತೋರಿದ್ದಾಳೆ. ಆದರೆ "ನನ್ನ ಅಮಲ್ದಾರಿಕೆ ಅಂದ್ರೆ ಬ್ರಹ್ಮಪಟ್ಟದ ಹಾಗೆ ಶಾಶ್ವತ ಅಂತ ತಿಳಿದುಕೊಂಡಿದ್ದೀಯಾ ? ಈ ಪದವಿ ಅನ್ನೋದು ನಾಯಿ ತಲೆಯ ಮೇಲಿನ ಬುತ್ತಿ ಇದ್ದ ಹಾಗೆ. ದಿನದಿನಕ್ಕೆ ಇದರ ಕಡೆಗಾಲ ಹತ್ತಿರ ಆಗ್ತಾ ಇದೆ. ಇದು ಅರ್ಥ ಮಾಡಿಕೊಳ್ಳುವದು ಬಿಟ್ಟು ಹೆಣ್ಣು ಹಡೆದೋಳು ಗಂಡು ಹೆತ್ತೋಳ ಹಾಗೆ ಬಿಂಕ ಮಾಡಿದರೆ ನೋಡಿದೋರು ನಗ್ತಾರೆ. ಕೆಲಸಕ್ಕೆ ಬಾರದ ದೊಡ್ಡಸ್ತಿಕೆ ಮಾಡಿದರೆ ನಿನ್ನ ಮಗಳು ಮದುವೆ ಕಾಣದೆ ಮನೆಯಲ್ಲೇ ಇರ್ತಾಳೆಯೇ ಹೊರ್ತು ಸೋಮಯ್ಯನ ಮಗನ ಮದುವೆ ನಿಂತು–ಹೋಗೋದಿಲ್ಲ" ಎನ್ನುವ ಅಮಲ್ದಾರರಂಥ ಗಂಡಂಗಳು ಎಷ್ಟಿದ್ದಾರೆ ಎಂದು ಯೋಚಿಸಬೇಕಾಗಿದೆ, ಇಲ್ಲಿ ತ.ರಾ.ಸು. ಅಮಲ್ದಾರರ ಮೂಲಕ ಸಮಾಜಕ್ಕೆ ಎಚ್ಚರಿಕೆ ನೀಡಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ. ಹೆಣ್ಣು ಹೆತ್ತ ಯಾರೇ ಆಗಲಿ ಈ ಮಾತನ್ನು ಅರ್ಥ ಮಾಡಿಕೊಳ್ಳಬೇಕು. ಗಂಡು ಹೆತ್ತವರು ಎಂಥವರೇ ಆದರೂ ಹೆಣ್ಣಿದ್ದವರು ಅವರೆದುರು ತಲೆ ತಗ್ಗಿಸಲೇ-ಬೇಕಾದ ಕಟು ಸತ್ಯ ಇಂದಿನ ಸಮಾಜದ ಜೀವಂತ ಚಿತ್ರಣ.

ಮಗಳ ಮದುವೆಯ ನಂತರವೂ ಅನ್ನಪೂರ್ಣಮ್ಮ ಬೀಗರ ಮೇಲೆ ತನ್ನ ಬಿಂಕ ತೋರಿಸದಿರಲಿಲ್ಲ. ತಾಯಿಯಂತೆ ಮಗಳೂ ಕೂಡ. ತಮ್ಮ ದೊಡ್ಡಸ್ತಿಕೆಗೆ ಅಳಿಯ ಗುಲಾಮನಂತೆ ನಡೆದುಕೊಳ್ಳಬೇಕೆನ್ನುವದು ಅನ್ನಪೂರ್ಣಮ್ಮನ ಇರಾದೆ. ತಾಯಿಯ ಆಶೆಯನ್ನು ಪೂರೈಸಲು ಹೆಣಗುತ್ತಾಳೆ ಮಗಳು ಸರೋಜ. ಇಂಥವರಿಂದಲೇ ಎಷ್ಟೋ ಸಂಸಾರ ಹಾಳಾಗಿ ಹೋಗಿರುವದು, ಹಾಲಾಹಲದಲ್ಲಿ ತುಂಬಿರುವದು. ತನ್ನ ತೌರಿನ ಅಂತಸ್ತನ್ನು ತೋರಿಸುವ ಹುಚ್ಚಿನಲ್ಲಿ ಗಂಡನನ್ನು ಕಾಲ ಕಸವಾಗಿ ಕಾಣುವ ಹೆಂಗಸರು ನಮ್ಮಲ್ಲಿ ಅಪರೂಪವಲ್ಲ. ತ.ರಾ.ಸು. ರವರ ಈ ಸಮಾಜದ ವಿಡಂಬನೆ ಅತಿರಂಜಿತ ವಲ್ಲ, ಅವಾಸ್ತವವಲ್ಲ.

ತ. ರಾ. ಸು.ರವರ ಮೇಲಿನ ಕಾದಂಬರಿಗಳ ಕಥೆ ಒಂದು ಜಾಡಿನದಾದರೆ ಮುಂದೆ ಹೇಳುವ ಕಾದಂಬರಿಗಳ ಜಾಡು ಇನ್ನೊಂದು ರೀತಿಯದು. ಇದು ಇಡಿಯ ಸಮಾಜದ ಆರೋಗ್ಯವನ್ನು ಹೇಳುವುದಕ್ಕಿಂತ ಸಮಾಜದಲ್ಲಿಯ ಒಂದು ಭಾಗವಾಗಿ ಬದುಕುವ ವಿಶಿಷ್ಟ ವ್ಯಕ್ತಿಗಳ ಕುರಿತಾದ ಕಥೆ. ಈ ವ್ಯಕ್ತಿಗಳ ಮೂಲಕ ಅವರು ಇಡಿಯ ಸಮಾಜವನ್ನು ವಿಡಂಬಿಸಿದ್ದಾರೆ.

"ಮುಂಜಾವಿನ ಮುಂಜಾವು" ಪತ್ರಿಕೋದ್ಯಮಿಯ ಜೀವನ ಚಿತ್ರಣ ನೀಡುವ ಕಾದಂಬರಿ. ಇವರಲ್ಲಿಯ ಲಕ್ಷ್ಮಣ, ಶಾಸ್ತ್ರಿ, ರಂಗರಾಮಯ್ಯ, ಶೇಷಾದ್ರಿ, ರಾಮನಾಥ ಇವರೆಲ್ಲ ಪತ್ರಿಕಾ ವ್ಯವಸಾಯದಲ್ಲಿ ಜೀವನವನ್ನು ಗಂಡಾಂತರಕ್ಕೀಡು ಮಾಡಿಕೊಂಡವರು. ಇವರಲ್ಲಿ ನಮ್ಮ ಪತ್ರಿಕಾ ಕ್ಷೇತ್ರದ ದುರಂತ, ದುರ್ಗಮ ಚಿತ್ರಣ ಕಾಣಸಿಗುತ್ತವೆ. ಈ ಕಾದಂಬರಿಯನ್ನು ತ.ರಾ.ಸು. 1950 ರಲ್ಲಿ ಬರೆದರು. ಆದರೆ ಅನಂತರದ 25 ವರ್ಷಗಳ ಅವಧಿಯಲ್ಲೂ ಈ ಕ್ಷೇತ್ರದ ಸ್ಥಿತಿ-ಗತಿ ಆಗಿನಕ್ಕಿಂತ ಬದಲಾಗಲಿಲ್ಲ. ಇಂದಿಗೂ ಪತ್ರಿಕಾವ್ಯವಸಾಯಿಗಳನ್ನು ಲಕ್ಷ್ಮಣ, ಶಾಸ್ತ್ರಿ, ಶೇಷಾದ್ರಿಗಳ ರೂಪದಲ್ಲೇ ಕಾಣುತ್ತೇವೆ. ಪತ್ರಿಕಾವ್ಯವಸಾಯ ಸರಸ್ವತಿಯ ಆರಾಧನೆಯಾದರೂ ಆ ಕ್ಷೇತ್ರದಲ್ಲಿನ ಗುಂಪುಗಾರಿಕೆ, ರಾಜಕಾರಣ ನೋಡಿದರೆ ನಿರಾಶೆ, ಕೋಪ, ಕನಿಕರ ಹುಟ್ಟುತ್ತದೆ. ಈ ಕಾದಂಬರಿಯ ಲಕ್ಷ್ಮಣ ಒಬ್ಬ ಅಮಾಯಕ ವ್ಯಕ್ತಿ. ಉಚ್ಚ ಆದರ್ಶಗಳನ್ನು ಹೊಂದಿದ ಕನಸುಗಾರ. ದುಷ್ಟ ಶಕ್ತಿಗಳ ಕೈವಾಡದಿಂದ ಅವನ ಸ್ಥಿತಿ ಅಯ್ಯೋ ಅನ್ನುವಂಥದ್ದು. ನರಸಿಂಹಯ್ಯನಂಥ ಸ್ವಾರ್ಥಿಗಳಿಂದಾಗಿಯೇ ಲಕ್ಷ್ಮಣನಂಥ ದುರಂತ ಜೀವಿಗಳ ನಿರ್ಮಾಣವಾಗುವುದು, ಆದರೂ ಲಕ್ಷ್ಮಣ ಧೃತಿಗೆಡದ ಜೀವಿ. ತನ್ನ ಆದರ್ಶಗಳ ಸಾಫಲ್ಯಕ್ಕಾಗಿ ಹೋರಾಡುವನು. ಇಂಥ ಧೀಮಂತರು ನಮ್ಮಲ್ಲಿ ಎಷ್ಟಿಲ್ಲ? ಆದರೆ ದುಷ್ಟ ಶಕ್ತಿಗಳ ಕೈಯೇ ಮೇಲಾಗುತ್ತದೆನ್ನುವುದು ಯಾವತ್ತೂ ಸತ್ಯ. ಇಲ್ಲಿಯ ಲಕ್ಷ್ಮಣ ಸಮಾಜದ ಕಂಟಕರ ಚಾಕುವಿಗೆ ಬಲಿಯಾಗುತ್ತಾನೆ. ಇದಕ್ಕೆ ನಮ್ಮ ಕಣ್ಣೆದುರೇ ಹಲವು ಘಟನೆಗಳು ನಡೆದು ಸಾಕ್ಷ್ಯವಾಗಿವೆ. ಅಂದು - ಇಂದು ಎಂದೆಂದೂ ಸಮಾಜ ಹೀಗೇ ಇರುತ್ತದೆನ್ನುವುದಕ್ಕೆ ಸಾಕ್ಷಿ; ಲಕ್ಷ್ಮಣ ಇಂದಿನ ಸಮಾಜವನ್ನು ವಿಡಂಬಿಸುವ ಜೀವಂತ ಪಾತ್ರ.

ಲಕ್ಷ್ಮಣನ ಆದರ್ಶ, ಅವನ ಸಾಧನೆಯ ದಾರಿ ಒಂದು ರೀತಿಯದಾದರೆ "ಪಾರಿಜಾತ"ದ ಸದಾಶಿವನ ದಾರಿ ಇನ್ನೊಂದು ಬಗೆಯದು. ಈತ ಕಲಾವಿದ ನೃತ್ಯಪಟು. ಪ್ರತಿಯೊಬ್ಬ ಕಲಾವಿದನ ಬಾಳಿನ ಹಿಂದೆ ಹೆಣ್ಣಿನ ಪ್ರಭಾವ ಇರಬೇಕು. ಇದಕ್ಕೆ ಸದಾಶಿವನೇನು ಹೊರತಲ್ಲ. "ಹೆಣ್ಣೆಂಬ ಉರಿ ಸೋಕಿ ಬಾಳಿನ ಆದರ್ಶದ ಕಣ್ಣನ್ನು ಕಳೆದುಕೊಂಡು ಕುರುಡಾದ ಕಲಾವಿದನೋರ್ವನ ಜೀವನ ಕಥೆ" ಎಂದು ಈ ಕಾದಂಬರಿಯಲ್ಲೇ ಹೇಳಿದೆ. ಇವನ ಬಾಳಿನಲ್ಲಿ ಪ್ರವೇಶಿಸಿದ ಪ್ರಿಯತಮೆಯರು ಗಿರಿಜಾ ಮತ್ತು ಮನೋರಮ. ಇವರಿಗಾಗಿ ಸರ್ವಸ್ವವನ್ನೂ ಧಾರೆಯೆರೆಯಲು ಸಿದ್ಧನಾದವನು ಸದಾಶಿವ. ಆದರೆ "ಪ್ರೇಮ"ದ ಜಗತ್ತಿನಲ್ಲಿಯೂ ಮೋಸ, ವಂಚನೆ ಇರುತ್ತದೆನ್ನುವುದನ್ನು ಲೇಖಕರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಸದಾಶಿವ ಮುಗ್ಧ ಪ್ರೇಮಿ. ಇವನ ಮುಗ್ಧತೆಯನ್ನು ಅವನ ಪ್ರಿಯತಮೆಯರು ದುರುಪಯೋಗ ಪಡಿಸಿಕೊಳ್ಳುವರು. ಇವರ ಪ್ರೀತಿ ಕೇವಲ ತಮ್ಮ ಸ್ವಾರ್ಥಕ್ಕಾಗಿ. ಇಂಥ ಪ್ರೇಮಿಗಳಿಗೆ ನಮ್ಮ ಸಮಾಜದಲ್ಲಿ ಕೊರತೆಯಿಲ್ಲ. ಲೈಲಾ-ಮಜನು, ಶಿರಿನ್-ಫರಾಹಾದ್, ರಾಧಾ-ಕೃಷ್ಣರ ಪ್ರೇಮ ಅರಿತವರಿಗೆ ಗಿರಿಜಾ-ಮನೋರಮಾರ ರೀತಿ ಕಂಡು ಅಸಹ್ಯ

ವೆನಿಸುವುದು ಖಂಡಿತ. ಆದರೆ ಇಂಥವರಿಗೆ ಕೊರತೆಯಿಲ್ಲ. ಹಾಗೇ ಸದಾಶಿವನಂಥ ವರಿಗೂ ಕೊರತೆಯಿಲ್ಲ. ಯಾರಿಗಾಗಿ ಆತ ಸರ್ವಸ್ವವನ್ನೂ ತ್ಯಾಗ ಮಾಡಿದನೋ ಅವರಿಂದಲೇ ಅವನ ಆಸೆ, ಅಕಾಂಕ್ಷೆ, ಕನಸು, ಸುಖಗಳೆಲ್ಲ ನುಚ್ಚುನೂರಾದವು, ಹೀಗೆ ಹೆಣ್ಣಿನ ಕಣ್ಣಿಗೆ ಬಲಿ ಬೀಳುವವರಿಗೆ ತ.ರಾ.ಸು. ಸದಾಶಿವನ ಮೂಲಕ ಎಚ್ಚರಿಕೆ ನೀಡಿದ್ದಾರೆ.

ಇವರ "ಮಾರ್ಗದರ್ಶಿ" ಭಾರತದ ಹಳ್ಳಿಗಳ ರಾಜಕಾರಣ, ಅಲ್ಲಿ ನಡೆಯುವ ಅನ್ಯಾಯ–ಅತ್ಯಾಚಾರಗಳ ಚಿತ್ರ ನೀಡುವ ಕಾದಂಬರಿ. ಇವರ ಕಥೆ ಇಂದಿನ ಪ್ರಜ ಲಿತ ಸಮಸ್ಯೆ (burning problem)ಯ ಮೇಲೆ ಬೀರುವ 'ಕ್ಷ' ಕಿರಣ. ಇಲ್ಲಿಯ ಶ್ರೀಕಂಠ, ವಿದ್ಯಾವಂತ ನಿರುದ್ಯೋಗಿ. ಪಟ್ಟಣದಲ್ಲಿ ಕೆಲಸ ಸಿಗದೆ ಹಳ್ಳಿಗೆ ಹಿಂತಿರುಗಿ, ಅಲ್ಲಿನ ರಾಜಕಾರಣ, ಗುಂಪುಗಾರಿಕೆಯಲ್ಲಿ ಸಿಕ್ಕಿ ನರಳುವ ನತ ದೃಷ್ಟ ಯುವಕ. ಇದು ಇಂದಿನ ಸಾವಿರಾರು ನಿರುದ್ಯೋಗಿ ಯುವಕರ ಕಥೆ. ಹಳ್ಳಿಯ ವಾತಾವರಣದಲ್ಲಿ ತನ್ನ ಕತ್ತಲು ತುಂಬಿದ ಭವಿಷ್ಯದ ಬಗ್ಗೆ ಮಿಡುಕುವ ಶ್ರೀಕಂಠನ ಚಿತ್ರಣ ಇಲ್ಲಿ ಮಾರ್ಮಿಕವಾಗಿ ಮೂಡಿದೆ. ಆತ ಹೇಳುವ ಮಾತು ಸಮಸ್ತ ನಿರುದ್ಯೋಗಿ ಯುವಕರ ಮುಖವಾಣಿಯಂತಿದೆ :– "ಈ ವಿದ್ಯೆ ಕಲಿತು ಏನೋ ಮಾಡ್ತೀನೀಂತ ನಂಬಿಕೊಂಡು ಬಂದು ಜೀವನ ಹಾಳು ಮಾಡಿಕೊಂಡಿದ್ದು. ಈ ಹುಚ್ಚಿಗೆ ಬೀಳದೆ ಹೋಗಿದ್ದರೆ ಇಷ್ಟು ಹೊತ್ತಿಗೆ ನಾನು ಎಲ್ಲಾದ್ರೂ ಒಬ್ಬ ಮನುಷ್ಯ ಆಗ್ತಾ ಇದ್ದೆ. ಮೊದಲೇ ಈ ಬುದ್ಧಿ ಇದ್ದಿದ್ರೆ ನನ್ನ ವಯಸ್ಸೂ ವ್ಯರ್ಥವಾಗ್ತಾ ಇರಲಿಲ್ಲ. ಜಮೀನೂ ಉಳಿತಾ ಇತ್ತು. ಈಗ ಎರಡೂ ಹೋಗಿ ಕೆಲಸಕ್ಕೆ ಬಾರದ ಈ ವಿದ್ಯೇನ ತಲೇಲಿ ತುಂಬಿಕೊಂಡ ಹಾಗಾಯ್ತು"

ಇಲ್ಲಿ ಚಿತ್ರಿತಗೊಂಡ ಹುಲಿಗೊಂದಿ ಹಳ್ಳಿ ಭಾರತದ ಹಳ್ಳಿಗಳ ಪ್ರತೀಕ. ಆದರಲ್ಲಿಯ ಅಣ್ಣನಿಗೇ ದ್ರೋಹ ಬಗೆದು ಅವನ ಆಸ್ತಿಯನ್ನು ಎತ್ತಿಹಾಕುವಂಥ ಚಿಕ್ಕನರಸಪ್ಪನಂಥವರು, ಎಲ್ಲೆಡೆ ಕಾಣಸಿಗುತ್ತಾರೆ. ರಾಮಣ್ಣನಂಥ ಪೋಲಿಗಳಿಗೂ ಕಡಿಮೆಯಿಲ್ಲ. ತಮ್ಮ ಬೇಳೆ ಬೇಯಿಸಿಕೊಳ್ಳಲು ಗುಂಪು ಕಟ್ಟಿ ಇನ್ನೊಬ್ಬರನ್ನು ಮಟ್ಟ ಹಾಕುವ ದೃಷ್ಟಾಂತ ಈ ಕಾದಂಬರಿಯಲ್ಲಿ ಚಿತ್ರಿತವಾಗಿದ್ದು ಇದು ಇಂದಿನ ಹಳ್ಳಿಗಳ ಜೀವಂತ ವಿಡಂಬನೆ.

ಹೀಗೆ ತ.ರಾ.ಸು. ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ಪಾತ್ರಗಳು ಒಂದೊಂದು ರೀತಿಯಲ್ಲಿ ಪ್ರಚಲಿತ ನಮ್ಮ ಸಮಾಜದ ನಡೆಯನ್ನು ವಿಡಂಬಿಸುತ್ತವೆ.

ತ.ರಾ.ಸು. ಕಾದಂಬರಿಯ ಒಲವು - ನಿಲುವುಗಳು

— ಯು. ಎಂ. ಶ್ರೀಧರ

ತ್ರ.ರಾ.ಸು. ಮೂಲತಃ ಆದರ್ಶವಾದಿ ಹಾಗೂ ಭಾವಜೀವಿ ಅವರ ಉತ್ತಮ ಕಾದಂಬರಿಗಳೆಂದು ಹೆಸರಾದ ಕೃತಿಗಳು ರಚನೆಗೊಂಡುದು ಅವರ ಯೌವನ ಕಾಲದಲ್ಲಿಯೇ. ಸ್ವಾಭಾವಿಕವಾಗಿ ಅವರ ಕಾದಂಬರಿಗಳಲ್ಲಿ ಯೌವನದ ಕಾವು, ಉತ್ಸಾಹದ ಓಟ ಇದೆ. ಸಮಾಜದ ನಡವಳಿಕೆಯನ್ನು ಕಂಡು ರೋಸಿ, ರೊಚ್ಚಿಗೆದ್ದು ಹೇಳಬೇಕಾದುದನ್ನು. ಕಟುವಾಗಿಯೇ, ನಿರ್ದಯರಾಗಿಯೇ ವರ್ಣಿಸುತ್ತಾರೆ. ಪ್ರಗತಿಶೀಲರೆನಿಸಿಕೊಂಡವರೆಲ್ಲ ಮಾಡಿದುದು ಇದನ್ನೇ. ಆದರ್ಶವೆಂಬ ಬಲೆಯಲ್ಲಿ ಸಿಕ್ಕಿಕೊಂಡ ಬರೆಹಗಾರರ ಕೃತಿಗಳೆಲ್ಲ ಸಾಮಾನ್ಯವಾಗಿ ತಾತ್ಕಾಲಿಕ ಮೌಲ್ಯವುಳ್ಳವುಗಳು. ಸಮಾಜದ ಕೃತಕತೆಯನ್ನು ಡಾಂಭಿಕತನವನ್ನು ನೋಡಿ ಎದೆಯ ಬೇಗುದಿಯನ್ನು ಹೊರಗೆಡಹುವುದಷ್ಟೇ ಇಂತಹ ಲೇಖಕರ ಸಾಧನೆ.

ತ.ರಾ.ಸು. ಅವರ 'ಕೇದಿಗೆವನ'ದ ಶ್ರೀಧರ ಇಂತಹ ಮನೋಭಾವದವನು. ತಾವು ಸಮಾಜದ ಬಗೆಗೆ ಹೇಳಬೇಕಾದುದನ್ನು ಶ್ರೀಧರ ಬಾಯಿಯಿಂದ ತ.ರಾ.ಸು. ಹೇಳಿಸುತ್ತಾರೆ. ಆದರೆ ಇಲ್ಲಿನ ಪಾತ್ರ ಚಿತ್ರಣ ತೀರ ಶಿಥಿಲವಾಗಿದ್ದು ಶ್ರೀಧರನ ವ್ಯಕ್ತಿತ್ವದ ಬಗೆಗೆ ಗೌರವ ಮೂಡುವ ಬದಲು ಅವನ ಬಗೆಗೆ ಅವನ ತಿರಸ್ಕಾರ ಭಾವನೆಯೇ ಮೂಡುವಂತಾಗುತ್ತದೆ. ಬಡಕುಟುಂಬದಲ್ಲಿ ಹುಟ್ಟಿದ ಶ್ರೀಧರನು ಯಾವುದೋ ಆದರ್ಶವನ್ನು ಹಿಡಿದು ಅರ್ಧದಾರಿಯಲ್ಲಿಯೇ ಸಮಾಜದ ಬಗೆಗೆ ದ್ವೇಷಗೊಂಡು ವಿದ್ಯಾಭ್ಯಾಸವನ್ನು ಬಿಟ್ಟು ಬಿಡುತ್ತಾನೆ. ಅವನ ಜೀವನದ ರೀತಿಯನ್ನು ಕಂಡು ಅವನ ಬಗೆಗೆ ಕನಿಕರವಾದರೂ ಅವನ ಒಂದೊಂದು ಮಾತು ಸಿಡಿಲಿನಂತೆರಗಿ ನಾವು ನಿಂತ ನೆಲವನ್ನೇ ನಡುಗಿಸುತ್ತವೆ. ಎಳೆಯ ಯುವಕರಿಗೆ ಸರಿಯಾಗಿ ಅರ್ಥವಾಗದ ಕಮ್ಯೂನಿಸ್ಟ್‌ವಾದದ ಹೊಳಹು ಅವನ ಮಾತಿನಲ್ಲಿ ವ್ಯಕ್ತವಾಗುತ್ತದೆ. ಕಮ್ಯೂನಿಸ್ಟ್ ವಾದವಿರಲಿ ಬೇರೆ ಇನ್ನಾವುದೇ ವಾದವಿರಲಿ, ಮಾನವನಿಗೆ ಸಜ್ಜನಿಕೆ ಮುಖ್ಯ. ದಲಿತರಿಗೂ ಒಳ್ಳೆಯ ಜೀವನ ನಡೆಸುವ ಅಧಿಕಾರವಿದೆ. ಆದರೆ ಅದಕ್ಕಾಗಿ ಜಗಳವಾಡುವುದು ಭಾರತೀಯ ಸಂಸ್ಕೃತಿಗೆ ಭೂಷಣವಲ್ಲ.

ಯೌವನ ಕಾಲದಲ್ಲಿ ತ.ರಾ.ಸು. ಅವರ ಒಲವು ಕಮ್ಯೂನಿಸ್ಟ್ ತತ್ವದ ಕಡೆಗೆ ಇದ್ದಿರಬೇಕು. ಅವರ ಹೆಚ್ಚಿನ ಕಾದಂಬರಿಗಳ ಸೆಲೆ ಇದೇ ತತ್ವದ ಕಡೆಗೆ ಹರಿದಿದೆ. ಈ ತತ್ವವನ್ನು ಪ್ರತಿಪಾದಿಸುವಲ್ಲಿ ತ.ರಾ.ಸು. ಅವರ ಪಾತ್ರ ಚಿತ್ರಣದ ಕಡೆಗೆ ಹೆಚ್ಚಿನ ಗಮನ ಕೊಡುವ ಬದಲು ಮಾತಿನ ಜಘಕ್ಕೇ ಹೆಚ್ಚಿನ ಪ್ರಾಮುಖ್ಯ ನೀಡಿದ್ದಾರೆ. ಇಂತಹ ಪಾತ್ರಗಳು ಎಳೆಯರ ಮನಸ್ಸಿಗೆ ಬಹಳ ಚೆನ್ನಾಗಿ ಕಾಣಿಸಬಹುದಾದರೂ ಮನಸ್ಸು, ಹೃದಯ ಬಲಿತ ಹಾಗೆಲ್ಲ ಈ ಭಾವನೆ ಬದಲಾಗಬಹುದು. ಕಮ್ಯೂನಿಸ್ಟ್

ವಾದದಲ್ಲೇ ಸಾಕಷ್ಟು ಬದಲಾವಣೆಗಳಾಗಿರುವ ಈ ಕಾಲದಲ್ಲಿ ಹಳೆಯ ಆದರ್ಶಗಳು ಸಮಂಜಸವಾಗಿ ಕಾಣುವುದಿಲ್ಲ. ಈ ಕಾರಣದಿಂದಲೇ ಎಳೆಯ ವಯಸ್ಸಿನಲ್ಲಿ ನಾನು ಮೆಚ್ಚಿದ ತ.ರಾ.ಸು. ಕಾದಂಬರಿಗಳು ತುಸು ನೀರಸವಾಗಿ ತೋರುತ್ತವೆ.

ಇದೇ 'ಕೇದಿಗೆ ವನ'ದಲ್ಲಿ ಉನ್ನತ ಹುದ್ದೆಯಲ್ಲಿರುವ ಸ್ವಜಾತಿ ಪ್ರೇಮದಿಂದ ಉದಿಸಿದ ಸಮಾಜ ಸೇವೆ, ಜಾತೀಯತೆಯ ಭೂತದ ಕರಾಳ ದೃಶ್ಯ ಇವು ಚಿತ್ರಿತ ವಾಗಿವೆ. ಆದರೆ ಮನಸ್ಸು, ಹೃದಯ ವಿಕಾಸಗೊಂಡಿರುವಂತಹ ಈಗಿನ ಕಾಲವಲ್ಲಿ ಅಂತಹ ಕಾದಂಬರಿಗಳು ಎಷ್ಟೊಂದು ಪರಿಣಾಮಕಾರಿಯಾಗಬಲ್ಲದೆಂದು ಹೇಳುವುದು ಕಷ್ಟ. ಇದರಿಂದಾಗಿಯೇ ಸಾಮಾಜಿಕ ಕಾದಂಬರಿಗಳನ್ನು ಬರೆಯುವುದು ಕಷ್ಟ. ತಾತ್ಕಾಲಿಕ ಸಮಸ್ಯೆಯ ಬಗೆಗೆ ರಚಿತವಾದ ಕೃತಿ ಚಿರಂತನವಾಗಿ ಉಳಿಯಲಾರದು. ಬರೆವ ಕಾಲಕ್ಕೆ ಅದೇನೋ ಬಹು ಪರಿಣಾಮಕಾರಿಯಾದರೂ ಕಾಲ ಕ್ರಮೇಣ ಅವು ಓದುಗನ ಪಾಲಿಗೆ ನೀರಸವೆನಿಸಲೂ ಬಹುದು.

ತ.ರಾ.ಸು. ಅವರ ಹೆಚ್ಚಿನ ಕಾದಂಬರಿಗಳು ಸಮಾಜದ ಕುರುಡು ನಂಬಿಕೆ, ಟೊಳ್ಳು ಡಂಭಾಚಾರ ಹಾಗೂ ಕೃತಕ ಸಜ್ಜನಿಕೆಯನ್ನು ಕಂಡು ಕುಪಿತಗೊಂಡು ಬರೆದವುಗಳಾಗಿವೆ. ಅಂದರೆ ತಾರುಣ್ಯದ ಹುಚ್ಚು ಹುಮ್ಮಸ್ಸಿನಲ್ಲಿ ಬರೆದುವುಗಳು. 'ಮಸಣದ ಹೂ' ಕಾದಂಬರಿಯಲ್ಲಿ ಇದೇ ರೀತಿ ವೇಶ್ಯಾ ಸಮಸ್ಯೆಯನ್ನು ಚಿತ್ರಿಸಲು ಪ್ರಯತ್ನಿಸಿ ಸನ್ನಿವೇಶ ಚಿತ್ರಣವಲ್ಲಿ ಅವರು ಸಫಲರಾಗಿದ್ದರೂ ಅದರಲ್ಲಿನ ಪಾತ್ರ ಚಿತ್ರಣ ಅಷ್ಟೊಂದು ಸಮರ್ಪಕವೆನಿಸುವುದಿಲ್ಲ. ಅದರಲ್ಲಿನ ಹೆಚ್ಚಿನ ವೇಶ್ಯೆಯರಲ್ಲಿ ಕೆಲವೊಮ್ಮೆ ತೀರ ಸುಸಂಸ್ಕೃತರಂತೆ ಕಂಡರೂ ಮರು ಕ್ಷಣಕ್ಕೆ, ತದ್ವಿರುದ್ಧ ಮನೋ ಭಾವದವರಾಗಿಯೂ ಕಾಣಿಸುತ್ತಾರೆ. ವೇಶ್ಯಾವೃತ್ತಿಗಿಳಿಯಲು ತ.ರಾ.ಸು.ಕೊಟ್ಟಿರುವ ಕಾರಣಗಳು ಅಷ್ಟೊಂದು ತರ್ಕಬದ್ಧವಾಗಿ ಕಾಣುವುದಿಲ್ಲ. ಅವರು ಚಿತ್ರಿಸಿದ ವೇಶ್ಯೆ ಯರಲ್ಲಿ ಹೆಚ್ಚಿನವರು ಹಳ್ಳಿಯ ಸುಸಂಸ್ಕೃತ ಮನೆತನಗಳಲ್ಲಿ ಹುಟ್ಟಿ ಬೆಳೆದ ಮುದ್ದು ಬಾಲಕಿಯರು. ಎಲ್ಲರೂ ವಂಚಿಸಲ್ಪಟ್ಟು ವೇಶ್ಯಾವೃತ್ತಿಗಿಳಿದವರು. ಕಾಲು ಜಾರಿದ ಮೇಲೆ ಅದೇ ಹೊಸಲನ್ನು ಮೆಟ್ಟಿ ಬಾಳುತ್ತಿದ್ದರೂ ತಮ್ಮ ಗತ ಬಾಳಿನ ನೈರ್ಮಲ್ಯದ ಬಗೆಗೆ ಅಭಿಮಾನವುಳ್ಳವರು. ಈ ತರದ ಪಾತ್ರ ಸೃಷ್ಟಿಯಲ್ಲಿ ತುಸು ಕೃತಕತೆ ಕಾಣು ತ್ತದೆ. ಗತ ಬಾಳು ಪರಿಶುದ್ಧವಾಗಿತ್ತೆಂಬ ಪ್ರಜ್ಞೆಯುಳ್ಳವರು ವೇಶ್ಯಾವೃತ್ತಿ ಹೊಲ ಸೆಂದು ತಿಳಿದಿದ್ದರೂ ಅದನ್ನೇ ನೆಚ್ಚಿಕೊಂಡು ಕೊರಗುತ್ತಾ ಬಾಳುವುದಕ್ಕಿಂತ ಆತ್ಮಹತ್ಯೆಯನ್ನಾದರೂ ಯಾಕೆ ಮಾಡಿಕೊಳ್ಳಬಾರದೆಂದೆನಿಸುತ್ತದೆ.

ತ.ರಾ.ಸು. ಅವರು ಸಾಮಾಜಿಕ ಕಾದಂಬರಿಗಿಂತಲೂ ಐತಿಹಾಸಿಕ ಕಾದಂಬರಿ ಗಳನ್ನು ಬಹು ಸುಂದರವಾಗಿ, ನೈಜತೆಯೇ ಕಣ್ಣು ಮುಂದೆ ಇದ್ದಂತೆ ರಚಿಸಬಲ್ಲರು. ಅದಕ್ಕೆ ಅವರು ಚಿತ್ರ ದುರ್ಗದ ಇತಿಹಾಸವನ್ನು ಕುರಿತು ಬರೆದ ಕಾದಂಬರಿಗಳೇ ಸಾಕ್ಷಿ ಅವರ ಐತಿಹಾಸಿಕ ಕಾದಂಬರಿಗಳು ಸದಾ ಹಸಿರಾಗಿ ನೆನಪಿನಲ್ಲಿ ಉಳಿಯುವಂತಹವು. ಎಳೆಯನಿದ್ದಾಗ ನಾನು ಅವುಗಳನ್ನು ಓದಿ ಎಷ್ಟು ಮೆಚ್ಚಿಕೊಂಡಿದ್ದೆನೋ ಅಷ್ಟು

ಈಗಲೂ ಮೆಚ್ಚಿಕೊಂಡಿದ್ದೇನೆ. ಅವರ ಪ್ರತಿಭೆಯನ್ನು ಎತ್ತಿ ತೋರಿಸಿದವುಗಳು ಐತಿಹಾಸಿಕ ಕಾದಂಬರಿಗಳೇ. ಚಾರಿತ್ರಿಕ ಕತೆಗಳಿಗೆ ತ.ರಾ.ಸು. ಅವರ ಶೈಲಿ, ಭಾಷೆ, ನಿರೂಪಣೆ, ತಂತ್ರ ಬಹು ಚೆನ್ನಾಗಿದೆ. ಯಾವುದರಲ್ಲಿಯೂ ತೂಕ ತಪ್ಪಿಲ್ಲ. ಚಿತ್ರ ದುರ್ಗದ ಕತೆಯನ್ನು ಓದುವಾಗ ಅದು ಕತೆಯೇ ಅಲ್ಲ, ಪ್ರತಿಯೊಂದು ಪ್ರಸಂಗವೂ ನಮ್ಮ ಕಣ್ಮುಂದೆಯೇ ನಡೆಯುತ್ತಿರುವಂತೆ ಅನಿಸುತ್ತದೆ. ಅದರಲ್ಲಿ ಅಷ್ಟೊಂದು ನೈಜಕತೆಯಿದೆ. ಒಟ್ಟಿನಲ್ಲಿ ಹೇಳಬಹುದಾದರೆ ತ.ರಾ.ಸು. ಅವರ ಸಾಮಾಜಿಕ ಕಾದಂಬರಿಗಳಿಗಿಂತ ಚಾರಿತ್ರಿಕ ಕಾದಂಬರಿಗಳು ಹೆಚ್ಚಿನ ಮೌಲ್ಯವುಳ್ಳವುಗಳು.

ಇದರರ್ಥ ಅವರ ಎಲ್ಲ ಕಾದಂಬರಿಗಳೂ ಜಳ್ಳು ಎನ್ನುವಂತಿರಲಿಲ್ಲ. "ಚಂದ ವಳ್ಳಿಯ ತೋಟ"ವನ್ನು ಓದಿದರೆ ತ.ರಾ.ಸು. ಸಾಮಾಜಿಕ ಕಾದಂಬರಿಗಳನ್ನು ಚೆನ್ನಾಗಿ ಬರೆಯಬಲ್ಲವರೆನಿಸುತ್ತದೆ, ಸಾಮಾಜಿಕ ಕಾದಂಬರಿಗಳ ಸತ್ವ ಕಥಾವಸ್ತು ವನ್ನು ಅವಲಂಬಿಸಿದೆ. ಕಾದಂಬರಿಕಾರ ಕ್ರೈಸ್ತ ಪಾದ್ರಿಯಂತೆ ಯಾವುದಾದರೊಂದು ತತ್ವವನ್ನು ಪ್ರತಿಪಾದಿಸಲು ಹೊರಟು ತಾತ್ಕಾಲಿಕ ಸಮಸ್ಯೆಯನ್ನಷ್ಟೇ ಎತ್ತಿಕೊಂಡರೆ ಕಾದಂಬರಿ ನೀರಸವಾಗಬಹುದು. ಅದರ ಬದಲು ಸರ್ವಕಾಲೀನ ಸಮಸ್ಯೆಯನ್ನು ಎತ್ತಿಕೊಂಡು ಅದರ ವಿವಿಧ ಮುಖಗಳನ್ನಷ್ಟೇ ಚಿತ್ರಿಸಿ ಅದಕ್ಕೆ ಪರಿಹಾರವನ್ನು ಸೂಚಿಸುವ ಸಾಹಸಕ್ಕಿಳಿಯದೆ ಹಿಂದೆ ನಿಂತರೆ ಆ ಕೃತಿ ಅಮೋಘವೆನಿಸಿಕೊಳ್ಳುತ್ತದೆ.

ಕಾದಂಬರಿಕಾರ ತತ್ವಬೋಧಕನಾಗಬಾರದು, ಸಮಸ್ಯೆಯನ್ನು ಜೀವಂತವಾಗಿ ಚಿತ್ರಿಸುವುದಷ್ಟೇ ಅವನ ಕೆಲಸ. ಸಮಸ್ಯೆಯನ್ನು ಪರಿಹರಿಸಬೇಕಾದವರು ಓದುಗರು. ಕಲಾವಿದ ಸಮಾಜದ ಹುಳುಕು, ಜಾಡ್ಯಗಳಿಗೆ 'ಕ್ಷ' ಕಿರಣ ದಲ್ಲಿ ಅನ್ಯರ ಲಕ್ಷ್ಯವನ್ನು ಆ ಕಡೆ ಸೆಳೆಯುವಂತೆ ಮಾಡಬೇಕು. ●

ಸಾಮಾಜಿಕ ಪ್ರಜ್ಞೆ

—**ಶ್ರೀಮತಿ ಉಷಾ ಶಾಸ್ತ್ರಿ,** ಬಿ. ಎಸ್.ಸಿ., ಬಿ. ಎಡ್.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಅವಿರತವಾಗಿ ದುಡಿದು ಪ್ರಸಿದ್ಧರಾದವರಲ್ಲಿ ತ.ರಾ.ಸು. ಒಬ್ಬರು. ತ.ರಾ.ಸು. ಕಾದಂಬರಿಗಳು ಸಮಾಜದ ಸಮಸ್ಯೆಗಳೊಂದಿಗೆ ಸ್ಪಂದಿಸುತ್ತವೆ. ಅವರ ಕತೆಗಳು, ಕಾದಂಬರಿಗಳು ಸಮಾಜಕ್ಕೆ ಹಿಡಿದ ಕನ್ನಡಿಗಳು. ಅವರ ಕೃತಿಗಳಲ್ಲಿ ಕಾಣುವುದು ಸಮಾಜದ ಒಳಿತು–ಕೆಡಕು ಎರಡೂ ಮುಖಗಳು.

ಅವರ ಎಲ್ಲ ಕಾದಂಬರಿಗಳನ್ನು ನಾನು ಓದಿಲ್ಲ. ಆದರೆ ಅವರು ಚಿತ್ರಿಸಿದ ಪಾತ್ರಗಳು, ಸನ್ನಿವೇಶಗಳು, ಸಂಭಾಷಣೆಗಳು ಅವರಿಗಿರುವ ಸಾಮಾಜಿಕ ಕಾಳಜಿಯನ್ನು ತೋರಿಸುತ್ತವೆ. ತ.ರಾ.ಸು. ಬದುಕನ್ನು ವ್ಯಾಪಕವಾಗಿ ನೋಡಿದ್ದಾರೆ. ಅದರ ಸೂಕ್ಷ್ಮಾತಿಸೂಕ್ಷ್ಮಗಳನ್ನೆಲ್ಲ ತಮ್ಮ ಕಾದಂಬರಿಗಳ ಮೂಲಕ ಹೊರಗೆಡಹಿದ್ದಾರೆ. ಜೀವನದ ನೋವು–ನಲಿವು, ಕಷ್ಟ–ಕಾರ್ಪಣ್ಯಗಳೆಲ್ಲ ಅವರ ಕೃತಿಗಳಲ್ಲಿ ಒಡಮೂಡಿ ನಿಂತಿವೆ.

ತ.ರಾ.ಸು. ಚಿತ್ರಿಸಿದ ಪಾತ್ರಗಳು ಬದುಕಿನ ವಿವಿಧ ಮುಖಗಳನ್ನು ಪ್ರತಿನಿಧಿಸುತ್ತವೆ. ಕೆಲವು ಪಾತ್ರಗಳ ಬಗೆಗೆ ಅವರಿಗೆ ಸಹಾನುಭೂತಿಯಿದೆ. ಕೆಲವು ಪಾತ್ರಗಳ ಬಗೆಗೆ ಅವರಲ್ಲಿ ರೊಚ್ಚು ಇದೆ, ಕೆಲವು ನೀತಿ–ನಡೆವಳಿಕೆಯ ಬಗೆಗೆ ಅವರು ಕೆಂಡಕಾರುತ್ತಾರೆ. ಕೆಲವು ಕಡೆ ಅವರು ನಾಸ್ತಿಕರಂತೆ ಕಾಣಿಸಿಕೊಳ್ಳುತ್ತಾರೆ. ಆದರೆ ಅವರು ಧರ್ಮದ ಹೆಸರಿನಲ್ಲಿ, ರಾಜಕೀಯದ ಹೆಸರಿನಲ್ಲಿ ನಡೆಯುವ ಬೂಟಾಟಿಕೆಯನ್ನು ಸಹಿಸುವುದಿಲ್ಲ. ಅವರಿಗೆ ದೇವರು–ಧರ್ಮಗಳ ಬಗೆಗೆ ಗೌರವವಿದೆ. ಆದರೆ ಅದು ಬಾಹ್ಯಾಡಂಬರದ ವಸ್ತುವನ್ನಾಗಿ ಬಳಸಿಕೊಂಡಾಗ ಅವರು ಸಿಡಿದೇಳುತ್ತಾರೆ.

ಅವರು ಬರೆದ 'ಖೋಟಾನೋಟು' ಮುದ್ರಣವಾಗಿ ಒಂದು ದಶಕಕ್ಕಿಂತಲೂ ಜಾಸ್ತಿಯಾಗಿದೆ. ಆದರೆ ಅಂತಹ ಅವ್ಯವಹಾರ ಇಂದಿಗೂ ನಡೆಯುತ್ತಲೇ ಇದೆ. ಇಲ್ಲಿ ತ.ರಾ.ಸು. ಸಮಾಜದ ಹಲವು ದೋಷಗಳನ್ನೆತ್ತಿ ಪರಿಶೀಲಿಸಿ ಕೂಲಂಕಶವಾಗಿ ಸಮಸ್ಯೆಯನ್ನು ಬಿಚ್ಚಿಡುತ್ತಾರೆ. ಕಳ್ಳಸಾಗಾಣೆ, ಕಪ್ಪುಹಣದ ಕುರಿತು ಅದನ್ನು ಸಂಗ್ರಹಿಸುವವರ ಬಗ್ಗೆ ಖಾರವಾಗಿ ಬರೆಯುತ್ತಾರೆ. ಕಲಿತ ವಿದ್ಯೆ ಕೀರ್ತಿ ಪಡೆಯಲು ಅಲ್ಲವೇ ಅಲ್ಲ ಅದು ಹಣ ಪಡೆಯುವುದಕ್ಕಾಗಿ ದೇಹದಂಡನೆಗಾಗಿ ಅಲ್ಲ, ದೇಹ ಸುಖಕ್ಕಾಗಿ. ಅದರ ಹಿತಕ್ಕಾಗಿ ಅಲ್ಲ ಬರೇ ಅದರ ವಿಲಾಸಕ್ಕಾಗಿ ಇದೇ ಧ್ಯೇಯವನ್ನಿಟ್ಟುಕೊಂಡಿರುವ ಕುರೂಪ್‌ನಂತಹ ವ್ಯಕ್ತಿಯ ಚಿತ್ರಣದ ಮೂಲಕವೂ, ಆ ನಡೆಯುತ್ತಿರುವ ರೀತಿಯ ಬಗ್ಗೆಯೂ ಬೇಕಷ್ಟು ವಿವರಣೆಗಳನ್ನು ನೀಡಿರುತ್ತಾರೆ. ಇದನ್ನು ಓದಿದ ಯಾವನೊಬ್ಬ ಪ್ರಾಮಾಣಿಕ ವ್ಯಕ್ತಿಯೂ ಇಂತಹ ಕೆಲಸಕ್ಕೆ ಕೈ

ಹಾಕಲಿಕ್ಕಿಲ್ಲ. ಆದರೆ ಕೆಲವೊಮ್ಮೆ ಇವೆಲ್ಲ ವಿವರಗಳನ್ನು ಕ್ರೋಢೀಕರಿಸಿ ಆತ ಅಂತಹ ಕೆಲಸದಲ್ಲಿ ತೊಡಗಲೂ ಸಾಧ್ಯವುಂಟು.

ಅವರ 'ಪರಿಮಳದ ಉರುಳು' ಮಾನಸಿಕ ಕಲಹದಿಂದಾಗಿ ತಲೆದೋರಿದ, ಮಾನಸಿಕ ರೋಗದ ಹಾಗೂ ರೋಗಿಯ ಚಿತ್ರಣ. ಲಕ್ಷ್ಮಿ ಅಸಾಧಾರಣ ಚೆಲುವೆ; ಚತುರೆ. ಅತೃಪ್ತ ದೇಹಸುಖ ಪರಿಣಾಮವಾಗಿ ಅವಳಲ್ಲಿ ಸುಪ್ತವಾಗಿದ್ದ ಅಸಂತುಷ್ಟ ಭಾವನೆಗಳ ವಿಕಾರತೆಯನ್ನು ತೋರಿಸಿ 'ಹುಚ್ಚಿ' ಎನಿಸಿಕೊಳ್ಳುತ್ತಾಳೆ. ಮನೋವಿಜ್ಞಾನದಲ್ಲಿ ಪದವೀಧರನಾಗಿ ಬಂದ ರಾಜಣ್ಣನಿಗೆ ಇವಳ ಬಗ್ಗೆ ಕುತೂಹಲ ಬೆಳೆದು ಅವಳ ಶುಶ್ರೂಷೆಯನ್ನು ಕೈ ಕೊಳ್ಳುತ್ತಾನೆ. ಅವಳನ್ನು ಸಂಪೂರ್ಣ ಗುಣ ಪಡಿಸುವ ಜವಾಬ್ದಾರಿಯನ್ನು ಹೊರುತ್ತಾನೆ. ಹೀಗೆ ಮಾಡಿದ್ದು ಸರಿಯೇ ಎಂದು ಅನೇಕರು ಕೇಳಬಹುದು. ಲಕ್ಷ್ಮಿಯಲ್ಲಿ ಆ ಸೌಂದರ್ಯ, ಲಾವಣ್ಯ ಯೌವನ ಇಲ್ಲದಿದ್ದರೆ ರಾಜಣ್ಣ ಈ ಪ್ರಯೋಗಕ್ಕೆ ಕೈ ಹಾಕುತ್ತಿದ್ದನೇ? ಇದಲ್ಲದೆ ಇಲ್ಲಿ ಬರುವ ಪಾತ್ರಗಳಲ್ಲಿ ರಾಜಣ್ಣನ ಮಾವ ಚಂದ್ರಶೇಖರಯ್ಯ, ಲಕ್ಷ್ಮಿಯ ತಂದೆ ಅಜ್ಜಯ್ಯನವರ ಚಿತ್ರಣಗಳು ಮರೆಯಲಾರದಂತಹವುಗಳು.

ಇಂತಹ ಕಾಯಿಲೆಗಳಿಂದ ನರಳುವವರು ಹಲವರಿದ್ದಾರೆ. ಅವರ ಕುರಿತು ಕ್ರೂರ ಟೀಕೆಗಳೇ ಹೆಚ್ಚು. ಚಿಕಿತ್ಸಾಕ್ರಮಗಳೂ ಕಲವು ನಿಶ್ಚಿತ ಕ್ರಮಗಳಲ್ಲಿ ನಡೆಯುತ್ತದೆ ಜನ ಸಾಮಾನ್ಯರಲ್ಲಿ ಇಂತಹ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿ ಬಂದಿಲ್ಲ, ಅವರ ಗಾಳಿಮಾತು ಒಂದು ಮುಗ್ಧ ಹೆಣ್ಣಿನ ಅಸಹಾಯಕತೆಯ ಕರುಣಾಜನಕವಾದ ಸನ್ನಿವೇಶವನ್ನೊಳಗೊಂಡ ಒಂದು ಕಿರು ಕಾದಂಬರಿ. ಇದನ್ನು ಓದಿದವರಿಗೆ ಕಾದಂಬರಿಯ ಕಥಾನಾಯಕಿ ಸುನಂದಾಳಲ್ಲಿ ಹೆಚ್ಚಿನ ಗಡಸುತನವಿರಬೇಕಿತ್ತು ಎನಿಸುತ್ತದೆ. ಆದರೆ ಇಂಥವರೂ ಸಮಾಜದಲ್ಲಿದ್ದಾರೆಂಬುದು ಸುಳ್ಳಲ್ಲ. ಹೆಣ್ಣು ಮಕ್ಕಳಲ್ಲಿ ವಿಚಾರ ಶಕ್ತಿ ಇನ್ನೂ ಬೆಳೆಯಬೇಕು. ತಮ್ಮ ವಿಚಾರಗಳನ್ನು ಹೆತ್ತವರೊಂದಿಗೆ ಚರ್ಚಿಸಿ, ತಮ್ಮ ಬಾಂಧವ್ಯಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು. ಸಂಸಾರವ ಜವಾಬ್ದಾರಿಯನ್ನು ಹೊರುವಾಗ ಹೆತ್ತವರ ಸಹಕಾರ ಅತ್ಯಗತ್ಯವಾದದ್ದು. ಒಡೆದ ಸಂಸಾರದ ಪ್ರಭಾವ ಭವಿಷ್ಯದ ಪೀಳಿಗೆಯ ಮೇಲೆ ಇದ್ದೇ ಇರುವಂತಹುದು ಆದುದರಿಂದ ಹೆಣ್ಣು ಶಿಶು ಹೃದಯದವಳಾಗಿರದೆ ಇದ್ದು ಕುರುಡು ಪ್ರೇಮದ ದಾಸಿಯಾಗಬಾರದು.

ಸುನಂದಾಳಿಗೆ ಪತ್ರ ಬರೆಯುತ್ತಿದ್ದವರ ಗುಣಾವಗುಣಗಳನ್ನು ತಿಳಿಯುವ ತಾಳ್ಮೆ ಯಾರಿಗೂ ಇಲ್ಲವಾಯಿತು. 'ಗಾಳಿಮಾತು'ಗಳ ಕಹಿತಕ್ಕೆ ಸಿಕ್ಕಿದ ಸುನಂದಾ ಅಸಹಾಯಕಳಾಗಿ ನೀರು ಪಾಲಾಗಬೇಕಾಯಿತು. ಎಂತಹ ದುರ್ದೈವ.

ತ.ರಾ.ಸು. ಅವರ 'ಜೀತದ ಜೀವ' ಮಾನಸಿಕ ದ್ವಂದ್ವಗಳನ್ನು ಚಿತ್ರಿಸುವ ಪರಿಣಾಮಕಾರಿ ಕಾದಂಬರಿ. ಇಂದು ಸಮಾಜದಲ್ಲಿ ಹಲವಾರು ಬಗೆಯ ವ್ಯಕ್ತಿಗಳಿದ್ದರೆ

ಅದು ಅವರವರು ಆರಿಸಿಕೊಂಡಿರುವ ರೀತಿ–ನೀತಿ, ಒಪ್ಪಿಕೊಂಡಿರುವ ತತ್ವಗಳು ನಂಬಿಕೊಂಡಿರುವ ಹೇಳಿಕೆಗಳು ಮೊದಲಾದುವುಗಳೇ ಕಾರಣ. ತ.ರಾ.ಸು. ಅನ್ನುವಂತೆ ಪ್ರತಿಯೊಬ್ಬನೂ ಒಂದು ಪ್ರಧಾನ ರಾಗದ ಆಳು. ನಮ್ಮ ದೈಹಿಕ ಜೀವನ ಒಂದು ಬಗೆಯಂದಾದರೆ ಸುಪ್ತವಾಗಿರುವ ಮಾನಸಿಕ ಜೀವನ ಇನ್ನೊಂದು ಬಗೆಯದು. ಅಥವಾ ಇವೆರಡರ ಮೇಳ ಒಂದಾಗಿರಬಹುದು ಈ ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳೂ ಕರ್ತವ್ಯ ಪರಿಪಾಲಕರು; ಶಾಂತವೀರನು ಮಾತ್ರ ದ್ರೋಹ ಬಗೆಯುವ ಪುಂಡ. ಉಳಿದವರು ಅಂತರ್ಮುಖಿಗಳು. ಪರಿಸರದ ಒತ್ತಡಕ್ಕೆ ಬಲಿಬಿದ್ದು ಅಂತ ರಂಗದ ಬಯಕೆಯನ್ನು ಅವರ ಗರ್ಭದಲ್ಲೇ ಅಡಗಿಸಿಕೊಂಡು ಬಂದವರು. ಒಬ್ಬೊಬ್ಬ ನಲ್ಲಿ ಒಂದೊಂದು ಭಾವನೆ ಸುಪ್ತವಾಗಿರುತ್ತದೆ. ಅಂತೆಯೇ ಕಥಾನಾಯಕ ವೀರ ಭದ್ರನಲ್ಲಿ ಸುಪ್ತವಾಗಿದ್ದ ಲೈಂಗಿಕ ಬಯಕೆಯ ಅತಿರೇಕಗಳನ್ನು ತ.ರಾ.ಸು. ತುಂಬ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಅವರ 'ಎಲ್ಲಾ ಅವನ ಹೆಸರಿನಲ್ಲೇ' ಇನ್ನೊಂದು ಉತ್ತಮವಾದ ಕಾದಂಬರಿ. ನಾವು ಧಾರ್ಮಿಕರು, ಧರ್ಮಾನುಸಾರ ನಡೆದುಕೊಂಡು ಬಂದವರು. ಧರ್ಮದ ತಾತ್ವಿಕತೆಯ ಅರಿವು ಅವರಿಗಿಲ್ಲದಿರುವುದು ಅವರು ಅಂಧಾನುಕರಣೆಗೆ ದಾರಿ ಮಾಡಿ ಕೊಟ್ಟಿದೆ. ತಮ್ಮ ಸ್ವಾರ್ಥಕ್ಕಾಗಿ ಮತಗಳ ಹೆಸರಿನಲ್ಲಿ ಧರ್ಮಯುದ್ಧಗಳು ನಡೆಯು ತ್ತಲೇ ಇವೆ. ಆ ದೇವರು ಎಂಬ ಜಗಳ ಹಲವು ವಿಷಮಾತೆಗಳಿಗೆ ಕಾರಣವಾಗಿದೆ. ಧರ್ಮದ ಹೆಸರಿನಲ್ಲಿ ನಡೆಯುವ ಅವ್ಯಾಪಾರಗಳನ್ನು ತಮ್ಮ ಪಾತ್ರಗಳ ಮುಖಾಂತರ ಬಿಚ್ಚಿಡುತ್ತ ತ.ರಾ.ಸು. ನಮ್ಮನ್ನು ವಾಸ್ತವತೆಯ ಕಡೆಗೆಳೆದೊಯ್ಯುತ್ತಾರೆ.

ತ.ರಾ.ಸು. ಅವರ ಸಾಮಾಜಿಕ ಕಾದಂಬರಿಗಳು ಕೇವಲ ಅಜ್ಜೀಕಥೆಗಳನ್ನು ಬರೆದವುಗಳಲ್ಲಿ, ಸಮಾಜದ ವಿವಿಧ ಸಮಸ್ಯೆಗಳನ್ನು ಗ್ರಹಿಸಿ, ಅವುಗಳ ಪ್ರತಿಬಿಂಬವನ್ನು ತಮ್ಮ ಕಾದಂಬರಿಗಳಲ್ಲಿ ವಾಸ್ತವವಾಗಿ ಚಿತ್ರಿಸಿ ಓದುಗರನ್ನು ಎಚ್ಚರಿಸಿದ್ದಾರೆ. ಅವರ ಕಾದಂಬರಿಗಳ ವಸ್ತು ಸಮಕಾಲೀನ ಬದುಕಿನ ವಾಸ್ತವ ಚಿತ್ರಣ. ಸಾಮಾಜಿಕ ಪ್ರಜ್ಞೆಯಿಂದ ಸ್ಪಂದಿಸಿದುದರಿಂದಲೇ ತ.ರಾ.ಸು. 'ಮಸಣದ ಹೂ' 'ಬಿಡುಗಡೆಯ ಬೇಡಿ' 'ಕೇದಿಗೆಯ ವನ' 'ಚಂದವಳ್ಳಿಯ ತೋಟ'ದಂತಹ ಉತ್ತಮ ಕಾದಂಬರಿ ಗಳನ್ನು ನೀಡಿದ ಶ್ರೇಯಸ್ಸು ತ.ರಾ.ಸು. ಅವರಿಗೆ ಸಲ್ಲುತ್ತದೆ. ಇವರ ಅನೇಕ ಕಾದಂಬರಿಗಳು ಪಠ್ಯಪುಸ್ತಕಗಳಾಗಿವೆ, ಚಲನಚಿತ್ರಗಳಾಗಿ ಯಶಸ್ವಿಯಾಗಿವೆ.

ಇಂತಹ ಸಿದ್ಧಹಸ್ತ ಲೇಖಕ ತ.ರಾ.ಸು. ನೂರು ವರ್ಷ ಬಾಳಿ ಅತಿ ಸುಗಂಧ ಮಯ ಕಾದಂಬರಿ ಹೂಗಳನ್ನು ನಮಗೆ ನೀಡುತ್ತಿರಲಿ ಎಂದು ಆಶಿಸುತ್ತೇನೆ. ●

ರಕ್ತ ತರ್ಪಣ ಆದರ್ಶ ಪಾತ್ರಗಳ ವೈಭವೀಕರಣ

—ಹಾ. ತಿ. ಕೃಷ್ಣೇಗೌಡ

ಸ್ವಾತಂತ್ರ್ಯ ಆಂದೋಲನದ ಹಿನ್ನೆಲೆಯಲ್ಲಿ ರಚಿತವಾಗಿರುವ ಈ ಕಾದಂಬರಿಯಲ್ಲಿ ಒಂದು ಸಾಮಾನ್ಯ ಹಳ್ಳಿ ಹೇಗೆ ಗುಲಾಮಗಿರಿಯ ವಿರುದ್ಧ ಸಿಡಿದೆದ್ದು ಆ ಮಹಾನ್ ಆಂದೋಲನಕ್ಕೆ ತನ್ನ ಪಾಲಿನ ಕಾಣಿಕೆಯನ್ನು ಅರ್ಪಿಸಿತು ಎಂಬುದರ ಚಿತ್ರ ಮೂಡಿ ಬಂದಿದೆ. ಸೋಮಲಾಪುರಕ್ಕೆ ಚಂದ್ರಶೇಖರನ ಆತ ಬಿಸಿರಕ್ತದ ಕ್ರಾಂತಿಕಾರಕ ಮನೋಭಾವವನ್ನು ಹೊಂದಿದ ತರುಣನ ಆಕಸ್ಮಿಕ ಪ್ರವೇಶವಾದೊಡನೆಯೆ, ಜಡವಾಗಿ ಮಲಗಿದ್ದ ಆ ಪರಿಸರ ದಿಗ್ಗನೆದ್ದು ಜಾಗ್ರತವಾಗುತ್ತದೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಪ್ರತಿಭಟಿಸಲು ಅಲ್ಲಿನ ತರುಣರ ತಂಡ ಸಿದ್ಧವಾಗುತ್ತದೆ. ಈ ಸಿದ್ಧತೆಯಲ್ಲಿ ಊರಿನ ಹಿರಿಯರು, ಕೆಲವರು, ಮೇಲು ಜಾತಿ, ಕೆಳಜಾತಿ ಈ ಯಾವುದೇ ಭೇದಭಾವವಿಲ್ಲದೆ ಅನುವಾಗುತ್ತಾರೆ. ಸ್ವಾತಂತ್ರ್ಯ ಬಯಕೆಯ ಕಾವು ಎಲ್ಲರ ಮನಸ್ಸುಗಳನ್ನೂ ತಿದಿಯೊತ್ತುತ್ತದೆ. ಅದು ದಳ್ಳುರಿಯಾಗಿ ಪರಡಿದಾಗ ಪಾಶವೀ ಶಕ್ತಿಯ ಇನ್ನೊಂದು ಮುಖವಾದ ಪೋಲೀಸ್ ವ್ಯವಸ್ಥೆ ದಮನ ಯಜ್ಞದಲ್ಲಿ ನಿರತವಾಗುತ್ತದೆ. ಈ ಯಜ್ಞಕ್ಕೆ ಚಂದ್ರಶೇಖರ ಆಹುತಿಯಾಗುತ್ತಾನೆ. ನಾಳಿನ ಒಳಿತಿಗಾಗಿ ತನ್ನ ರಕ್ತ ಚೆಲ್ಲುತ್ತಾನೆ. ತಾಯಿನಾಡಿನ ಪ್ರೀತಿ, ಅದಕ್ಕಾಗಿ ವ್ಯಕ್ತಿ ತ್ಯಾಗಮಾಡಬೇಕಾದ ವಸ್ತು ಎಂಥದು ಎಂಬುದನ್ನು ಈ ಕಾದಂಬರಿ ನಮ್ಮ ಮನಸ್ಸಿನ ಮೇಲೆ ಅಚ್ಚೊತ್ತುತ್ತದೆ.

ತ.ರಾ.ಸು. ಅವರು ಯಾವುದೇ ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲರು. ಅವರ ಶಬ್ದ ಚಿತ್ರಗಳು ಮೂರ್ತಿ ಶಿಲ್ಪಗಳಾಗಿ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತವೆ, ನಿಜ; ಆದರೆ ಪಾತ್ರಗಳ ಬೆಳವಣಿಗೆ ಕೆಲವೊಮ್ಮೆ ಭಾವುಕವೆನಿಸಿಬಿಡುತ್ತವೆ. ಅತ್ಯುತ್ಸಾಹ ಇಲ್ಲಿ ದೋಷವಾಗಿ ಪರಿಣಮಿಸಿಬಿಡುತ್ತದೆ. ಸಹಜ ಬೆಳವಣಿಗೆಗಿಂತ ಅವುಗಳನ್ನು ವೈಭವೀಕರಿಸುವತ್ತ ಲೇಖಕರ ಗಮನ ಕೇಂದ್ರೀಕೃತವಾದಾಗ ಅವು ಜೀವಂತವಾಗದೆ ಒಬ್ಬ ಮೂರನೇ ದರ್ಜೆಯ ಕಲಾಕಾರ ಬಣ್ಣದ ಬೆಲೆ ತಿಳಿಯದೆ ಅಡ್ಡಾದಿಡ್ಡಿ ಗಾಢವಾಗಿ ಬಳಿದ ಕಳಪೆ ಚಿತ್ರಗಳಂತೆನಿಸಿಬಿಡುತ್ತವೆ. ಚಂದ್ರಶೇಖರ, ಸೀತಾರಾಮಯ್ಯ ಈ ಪಾತ್ರಗಳು ಇಂಥ ಆದರ್ಶ ಚಿತ್ರಣದಿಂದ ನರಳಿವೆ. ಅವು ನಮ್ಮಲ್ಲಿ ಸಹಜ ಸ್ಪಂದನವನ್ನು ಉಂಟು ಮಾಡದೆ ಹೋಗುತ್ತವೆ. ಈ ಕಾದಂಬರಿಯ ಮೆಚ್ಚುಗೆಯ ಒಂದು ಅಂಶವೆಂದರೆ ಚುರುಕಿನ, ಲವಲವಿಕೆಯ ಬರೆವಣಿಗೆ. ಒಂದು

ಮಾತಂತೂ ಸತ್ಯ. ಸ್ವಾತಂತ್ರ್ಯ ಆಂದೋಲನದ ಕಲ್ಪನೆಯೇ ಇಲ್ಲದ ಅನಂತರದ ತಲೆಮಾರಿನವರಿಗೆ ಆ ಋಣದ ಕಿರು ಅನುಭವವನ್ನು ಉಂಟುಮಾಡುವಲ್ಲಿ ಈ ಕಾದಂಬರಿ ಯಶಸ್ವಿಯಾಗಿದೆ.

ತ.ರಾ.ಸು. ಅವರ ಕಾದಂಬರಿಯ (ಯಾ ಕಾದಂಬರಿಗಳ) ಸಾಹಿತ್ಯಿಕ ಮೌಲ್ಯ ಏನೇ ಇರಲಿ, ನಮ್ಮಲ್ಲಿ ಓದುಗನನ್ನು ಸೃಷ್ಟಿಸಿದ ಜವಾಬ್ದಾರಿಯುತ ಕಾರ್ಯದಲ್ಲಿ ಇವರ ಪಾಲು ದೊಡ್ಡದೆಂದೇ ಹೇಳಬೇಕು. ಅನ್ಯಾಯ, ಅತ್ಯಾಚಾರಗಳನ್ನು ಕಂಡು ಕೆರಳುವ ತನ್ನ ಸುತ್ತಣ ಪರಿಸರಕ್ಕೆ ಈಗಲೂ ಸ್ಪಂದಿಸುವ ತ.ರಾ.ಸು. ನಮಗೆ ಜೀವಂತವಾಗಿಯೂ ಹತ್ತಿರವಾಗುತ್ತಾರೆ. ●

'ಚಂದನದ ಗೊಂಬೆ' - ಒಂದು ಸಮೀಕ್ಷೆ

— ಡಿ. ಮಂಗಳಾ ಪ್ರಿಯದರ್ಶಿನಿ

ತ್ರಿ.ರಾ ಸು. ಕನ್ನಡ ಕಾದಂಬರಿ ಕ್ಷೇತ್ರದ ಜನಪ್ರಿಯ ಹೆಸರು. ತ.ರಾ.ಸು. ಕನ್ನಡ ಕಾದಂಬರಿ ಕ್ಷೇತ್ರದ ಬೆಳವಣಿಗೆಯಲ್ಲಿ ಗಮನಾರ್ಹವಾದ ಕೊಡುಗೆಯನ್ನು ನೀಡಿದ್ದಾರೆ. ಸರ್ವೋದಯ ಸಾಹಿತ್ಯದ ತರುವಾಯ ಬಂದ ಕನ್ನಡ ಪ್ರಗತಿಶೀಲ ಚಳುವಳಿ ಕಾದಂಬರಿ, ಸಣ್ಣಕಥೆಗಳಿಗೆ ಪ್ರೋತ್ಸಾಹ, ತಿರುವನ್ನು ತಂದುಕೊಟ್ಟು ಓದುಗರನ್ನು ನಿರ್ಮಾಣ ಮಾಡಿದ ಕಾಲ, ಸಾಹಿತ್ಯ ಜನಸಾಮಾನ್ಯರನ್ನು ತಲುಪಬೇಕು ಎಂಬ ಕಳಕಳಿ ಇವರ ಹಿಂದಿದ್ದ ಉದ್ದೇಶ. ಶ್ರಮಜೀವಿಗಳ ವರ್ಗ, ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದವರ ಸಮಸ್ಯೆಗಳನ್ನು ಮುಖ್ಯವಾಗಿ ಇಲ್ಲಿಯ ಕಾದಂಬರಿಕಾರರು ಹೇಳಲು ಪ್ರಯತ್ನಿಸಿದರು. ಅ.ನ.ಕೃ. ಅವರ ನಾಯಕತ್ವದಲ್ಲಿ ಹೊರಟ ಈ ಸಾಹಿತ್ಯಕ ಆಂದೋಲನದಲ್ಲಿ ತ.ರಾ.ಸು. ಅದರು ಸಕ್ರಿಯವಾಗಿ ಭಾಗವಹಿಸಿ. ಮೌಲ್ಯಾತ್ಮಕ ಕೊಡುಗೆಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿರುವುದನ್ನು ಗಮನಿಸಬೇಕು.

"ಚಂದನದ ಗೊಂಬೆ" ತ.ರಾ.ಸು. ಅವರ ಜನಪ್ರಿಯ ಕಾದಂಬರಿಗಳಲ್ಲಿ ಒಂದಾಗಿದೆ. ಇದು ಮುಖ್ಯವಾಗಿ ಒಂದು ಸಾಂಸಾರಿಕ ಕಥಾನಕ ಅನಾಥೆಯಾದ ಹೆಣ್ಣನ್ನು ಸಮಾಜ ಹೇಗೆ ತನ್ನ ಸ್ವಾರ್ಥ ಸಾಧನೆಗೋಸ್ಕರ ಬಳಸಿಕೊಂಡು ಅವಳ ದುರಂತಕ್ಕೆ ಕಾರಣವಾಗುತ್ತದೇ ಎಂಬುದೇ ಇದರ ವಸ್ತು.

ಬಡಮೇಷ್ಟರ ಮಗಳು ಮೂಲಾ ನಕ್ಷತ್ರದ ಹುಡುಗಿ ರತ್ನಮ್ಮನನ್ನು ಕಮಲಮ್ಮ ಶ್ರೀನಿವಾಸರಾಯರ ಕರುಣಾಳು ಹೃದಯ, ನೆರಮನೆಯ ಅನಾಥ ಹುಡುಗ ಸೀತಾ–ರಾಮುವಿಗೆ ಹೆಂಡತಿಯಾಗಿ ತಂದುಕೊಳ್ಳುತ್ತವೆ. ನಾಲ್ಕು ವರ್ಷದ ಮಗ ನಾರಾಯಣನನ್ನು, ರತ್ನಮ್ಮನನ್ನು ಬಿಟ್ಟು ಬೇಜವಾಬ್ದಾರಿ, ಹುಡುಗಾಟದ ಸ್ವಭಾವದ ಸೀತಾ–ರಾಮು ಆಕಸ್ಮಿಕವಾಗಿ ಜ್ವರ ಬಂದು ಸತ್ತು ಹೋಗುತ್ತಾನೆ. ಉದಾರಿ ಹೃದಯದ ಶ್ಯಾನುಭೋಗನಾಗಿದ್ದ ಆತ ಹಳ್ಳಿಯ ಜನತೆಗೆ ಬೇಕಾದಷ್ಟು ಸಹಾಯ ಮಾಡಿದ್ದರೂ ಅದು ತನ್ನ ಕುಟುಂಬಕ್ಕೆ ಎರವಾಗುವಷ್ಟರ ಮಟ್ಟಿಗೆ ಸಹಾಯ ಮಾಡಲು ಹೋಗಿ, ಹೆಂಡತಿ, ಮಗನ ಮೇಲೆ ಸಾಲದ ಉರಿ ಹೊರೆಯನ್ನು ಹರಿಸಿರುತ್ತಾನೆ. ರತ್ನಮ್ಮ ವಿಧವೆಯಾಗುತ್ತಾಳೆ, ಅನಾಥೆಯಾಗುತ್ತಾಳೆ. ಆದರೂ ತನ್ನ ಗಂಡನ ಅನುಪಮ ಆಸ್ತಿಯಾದ ಮನೆಯನ್ನು ನಾರಾಯಣನಿಗೆ ಉಳಿಸಿ ಹೋಗಬೇಕೆಂಬ ಛಲದಿಂದ ಆ ಹಳ್ಳಿಯಲ್ಲೇ ಉಳಿಯುವ ನಿರ್ಧಾರ ಮಾಡುತ್ತಾಳೆ. ಅನೇಕ ವಿರೋಧಗಳ ನಡುವೆಯೂ ಅಣ್ಣನಂತಿರುವ ರಾಘಣ್ಣನ ಬೆಂಬಲದಿಂದ ಅಲ್ಲೇ ಉಳಿಯುತ್ತಾಳೆ. ಈ ಮಧ್ಯೆ ಸೀತಾರಾಮು ಮಾಡಿದ್ದ ಈರಮ್ಮನ ಸಾಲದ ಪರವಾಗಿ ಅವನು ನಂಜಾಪುರದ ಶ್ಯಾನುಭೋಗಿಕೆಯನ್ನು ವಿಠೋಬನಿಗೆ ಬಿಟ್ಟುಕೊಡುವ ಸ್ಥಿತಿ ಬರುತ್ತದೆ.

ಈ ವಿಷಯವಾಗಿ ಉಂಟಾದ ಮನಸ್ತಾಪ ರಾಘಣ್ಣನನ್ನು ರತ್ನಮ್ಮನಿಂದ ದೂರ ಪಡಿಸಿ ಚಿನ್ನೋಬಯ್ಯ ಹತ್ತಿರದವನಾಗುವಂತಾಗುತ್ತದೆ. ಚಿನ್ನೋಬಯ್ಯ ರತ್ನಮ್ಮರ ಸಂಬಂಧದ ಬಗ್ಗೆ ಹಳ್ಳಿಯಲ್ಲಿ ಏಳುವ ಸುದ್ದಿ, ರತ್ನಮ್ಮನ ತಂದೆ ಕಮಲಮ್ಮ, ರಾಘಣ್ಣ ಇವರೂ ನಂಬುವ ಹಾಗೆ ಮಾಡುತ್ತದೆ, ಚಿನ್ನೋಬಯ್ಯ ಮೊದಲು ರತ್ನಮ್ಮನ ಬಗ್ಗೆ ಆ ಭಾವನೆಯಿದ್ದರೂ, ಅನಂತರ ಅದನ್ನು ಬದಲು ಮಾಡಿಕೊಳ್ಳುವುದು ಇದನ್ನು ನಂಬದ ಸಮಾಜ ಅವರನ್ನು ದೂಷಿಸುವುದು ಎಷ್ಟೇ ಹೇಳಿದರೂ ಅವಳನ್ನು ನಂಬದ ಸಮಾಜದ ಬಗ್ಗೆ ಬೇಸತ್ತು ರತ್ನಮ್ಮ ಹಗ್ಗದ ಮೇಲಿನ ಹೆಣವಾಗುವುದು ಇದೇ ಈ ಕಾದಂಬರಿಯ ಮುಖ್ಯಕಥೆ.

ಕಾದಂಬರಿ ಪ್ರಾರಂಭವಾಗುವುದೇ ಮುಖ್ಯ ಪಾತ್ರವಾದ ಸೀತಾರಾಮುವಿನ ಸಾವಿನಿಂದ. ಈ "ಸಾವು" ಕಾದಂಬರಿಯಲ್ಲಿ ಮಹತ್ವದ ಘಟನೆಯಾಗುತ್ತದೆ. ಸೀತಾರಾಮುವಿನ ಸಾವಿನ ಮೂಲಕ ರತ್ನಮ್ಮನ ಅನಾಥತೆ. ಅಸಹಾಯಕತೆಯೊಂದಿಗೆ ಕಥಾನಕ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಜೊತೆ ಜೊತೆಗೆ ರತ್ನಮ್ಮನಿಗೆ ಸಮಾಜ, ಬದುಕುಗಳ ಅರಿವಾಗುತ್ತಾ ಹೋಗುತ್ತದೆ. ಗಂಡ ಬದುಕಿದ್ದಾಗ ತನ್ನನ್ನು ನಡೆಸಿಕೊಂಡ ಸಮಾಜದ ದೃಷ್ಟಿಕೋನವೇ ಅವನ ಸಾವಿನೊಂದಿಗೆ ಬೇರೆ ತಿರುವನ್ನು ತೆಗೆದುಕೊಳ್ಳುತ್ತದೆ. ಅವನ ಸ್ನೇಹಿತರ ಆಲೋಚನೆಗಳು, ಘರ್ಷಣೆ – ಇವುಗಳಲ್ಲಿ ರತ್ನಮ್ಮ ಕರಗಿ ಹೋಗುತ್ತಾಳೆ.

ಹೆಣ್ಣನ್ನು ಶೋಷಿಸುವ ಗುಣ ನಮ್ಮ ಸಮಾಜದಲ್ಲಿ ಅನಾದಿಕಾಲದಿಂದಲೂ ನಡೆದು ಬಂದಿದೆ, ಪ್ರಸ್ತುತ ಕಾದಂಬರಿಯಲ್ಲಿ ಶೋಷಣೆಗೆ ನೇರವಾಗಿ ಒಳಗಾಗುವ ಹೆಣ್ಣು ರತ್ನಮ್ಮ. ತಾನು ಮೂಲ ನಕ್ಷತ್ರದಲ್ಲಿ ಹುಟ್ಟಿದ್ದರ ಕಾರಣದಿಂದಲೇ ಮದುವೆ ಕಷ್ಟವಾಗುತ್ತದೆ. ಮದುವೆಯಾದ ಮೇಲೂ ಕೆಲವೇ ವರ್ಷಗಳಲ್ಲಿ ಗಂಡ ತೀರಿಕೊಳ್ಳುವುದು, ಸಾಲದ್ದಕ್ಕೆ ಸಾಲವನ್ನು ಹೊರೆಸಿ ಹೋಗುವುದು, ಎಳೆಯ ನಾರಾಯಣನ ಜವಾಬ್ದಾರಿ, ಹಳ್ಳಿಯ ಜನರೊಡನೆ ಸ್ನೇಹ ; ಪ್ರೀತಿಯಿಂದ ವರ್ತಿಸಲು ಹೋಗಿ, ಈ ಪ್ರೇಮ, ಪ್ರೀತಿಯೇ ಮುಳ್ಳುವಾಗುವುದು ನಂಬಿದ ರಾಘಣ್ಣನಿಂದ, ಕಮಲಮ್ಮ, ಶ್ರೀನಿವಾಸರಾಯರಿಂದ ತಿರಸ್ಕೃತಳಾಗುವುದು, ಅಣ್ಣನೆಂದು ಭಾವಿಸಿದ ಚಿನ್ನೋಬ ಅವಳ ಪ್ರೀತಿಯನ್ನು ಅಪಾರ್ಥ ಮಾಡಿಕೊಳ್ಳುವುದು – ಈ ಘಟನೆಗಳ ಕಾದಂಬರಿಯ ಇನ್ನೊಂದು ನೆಲೆಯನ್ನು ಸೂಚಿಸುತ್ತವೆ. ವಿಠೋಬ ಹಾಗೂ ಈರಮ್ಮರ ಸಾಲದ ಕಾರಣದಿಂದಾಗಿ ಆವಳ ಶೋಷಣೆ ಬೇರೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಒಟ್ಟಾರೆಯಾಗಿ ನಮ್ಮ ಸಮಾಜದಲ್ಲಿ ಹೆಣ್ಣು ಎಷ್ಟೆಷ್ಟು ರೀತಿಯ ಶೋಷಣೆಗಳಿಗೆ ಒಳಗಾಗಬಹುದೋ ರತ್ನಮ್ಮ ಹೆಚ್ಚೂ ಕಡಿಮೆ ಅಂತಹ ಎಲ್ಲಾ ಸ್ಥಿತಿಗಳಿಗೆ ಸಿಲುಕಿ ನಲುಗುತ್ತಾಳೆ, ಆದರೂ ಈ ಕಾದಂಬರಿಯಲ್ಲಿ ಮುಗ್ಧ ಹೆಣ್ಣಿನ 'ಹೋರಾಟ' ಇರುವುದು ಮುಖ್ಯ ಸಂಗತಿಯಾಗುತ್ತದೆ.

ಹಳ್ಳಿಯ ಒಳಜಗಳ, ಬಿರುಕುಗಳು, ವೈಯ್ಯಕ್ತಿಕ ದ್ವೇಷಗಳು ವ್ಯಕ್ತಿಗಳ ಬದುಕನ್ನು ಹೇಗೆ ದುರಂತಗೊಳಿಸುತ್ತವೆ ಎಂಬುದೂ ಈ ಕಾದಂಬರಿಯಲ್ಲಿ ಚರ್ಚಿತ

ವಾಗುವ ವಿಷಯವಾಗುತ್ತವೆ. ಇದರ ಮುಖ್ಯ ವಸ್ತು –'Sex' ಹಾಗೂ'ಹಣ', ಹೆಣ್ಣನ್ನು ಶೋಷಿಸಲು ಸಾಧ್ಯವಿರುವ ಈ ಎರಡು ಪ್ರಮುಖ ವಿಚಾರಗಳು ಇಲ್ಲಿ ಮುಖ್ಯವಾಗುತ್ತವೆ. ಚಿನ್ನೋಬಯ್ಯ ರತ್ನಮ್ಮನನ್ನು ನೋಡುವ ದೃಷ್ಟಿ, ವಿಠೋಬ ಹಾಗೂ ಈರಮ್ಮ – ಇವರ ಸಂಬಂಧದ ಉಳಿವಿಗೆ ಬೇಕಾಗಿರುವ 'ಹಣ' – ಈ ಹಣಕ್ಕಾಗಿ ಈರಮ್ಮನ ಮಗಳು ರುದ್ರಿ, ಚಿನ್ನೋಬಯ್ಯನ ಕಾಮಕ್ಕೆ ಬಲಿಯಾಗುವುದು –– ಈ ವರ್ತುಲಗಳು ಕಾದಂಬರಿಯಲ್ಲಿ ಸುಳಿಯಂತೆ ಸುತ್ತುತ್ತವೆ 'ಹಣ' ಮತ್ತು 'ಕಾಮ' – ಇವು ಕಾದಂಬರಿಯುದ್ದಕ್ಕೂ ಪಾತ್ರ, ಪಾತ್ರಗಳ ನಡುವೆ ಜೊತೆ ಜೊತೆ ಯಾಗಿ ನಡೆಯುವ ವಿಚಾರಗಳಾಗುತ್ತವೆ. ಚಿನ್ನೋಬಯ್ಯ–ರತ್ನಮ್ಮ ಹಾಗೂ ರುದ್ರಿಯ ರಂತಹ ಎರಡು ಹೆಣ್ಣುಗಳ ಶೋಷಣೆಗೆ – ಆ ಮೂಲಕ ಅವರ ದುರಂತಕ್ಕೆ ಕಾರಣ ವಾದರೆ, ವಿಠೋಬ – ಈರಮ್ಮ, ರುದ್ರಿ, ರತ್ನಮ್ಮ – ಹೀಗೆ ಅನೇಕ ಹೆಣ್ಣುಗಳ ಶೋಷಣೆಗೆ, ದುರಂತಕ್ಕೆ ಕಾರಣವಾಗುತ್ತಾನೆ. ವಿಠೋಬನಿಗಾಗಲಿ, ಚಿನ್ನೋಬಯ್ಯ ನಿಗಾಗಲಿ ಒಂದು ಹೆಣ್ಣಿನ ಪ್ರೇಮ, ಪ್ರೀತಿ, ಸಹಜವಾದ ಮಾನವಸಂಬಧಗಳು ಮುಖ್ಯವಾಗಿಲ್ಲ, ಕೇವಲ 'ಕಾಮ' ಹಾಗೂ 'ಹಣ' – ಆ ಮೂಲಕ ಸಮಾಜದಲ್ಲಿ 'ಪ್ರತಿಷ್ಠೆ' ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ ರಾಘಣ್ಣನೂ ಹೊರತಾಗಿಲ್ಲ. ಆತ ರತ್ನಮ್ಮನನ್ನು ಅಕ್ಕನಂತೆ ಭಾವಿಸಿದರೂ ಅವಳು ತನ್ನ ಮಾತನ್ನು ಅಲಕ್ಷಿಸಿ ನಡೆದಾಗ ಮಾನವೀಯ ಸಂಬಂಧಗಳನ್ನು ಉಳಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ತನ್ನ 'ಪ್ರತಿಷ್ಠೆ'. 'ವ್ಯಕ್ತಿತ್ವ'ಗಳ ಉಳಿವಿಗೆ ಹೋರಾಟ ನಡೆಸುತ್ತಾನೆ. ಇವೆಲ್ಲದರ ಪರಿಣಾಮ ಹೆಣ್ಣಿನ ಶೋಷಣೆ ತಾನು ಶೋಷಣಾ ಚಕ್ರಕ್ಕೆ ಸಿಲುಕಿದ್ದೇನೆಂಬ ಕಲ್ಪನೆಯೂ ಇಲ್ಲದೆ ಶೋಷಣೆಗೆ ಒಳಗಾಗಿರುವ ಈರಮ್ಮ, ರುದ್ರಿಯರಂತಹ ಹೆಣ್ಣುಗಳ ದುರಂತ ಇನ್ನೂ ಪರಿಣಾಮಕಾರಿಯಾದುದು. ಅಷ್ಟೇ ಅಲ್ಲದೆ ಹೆಣ್ಣು, ಹೆಣ್ಣನ್ನೇ ಶೋಷಿಸುವುದು ಈ ಕಾದಂಬರಿಯಲ್ಲಿ ಮುಖ್ಯ ವಿಚಾರವಾಗಿದೆ. ತಾಯಿ ಯಾದ ಈರಮ್ಮನಿಂದಲೇ ತನ್ನ ಕಾಮತೃಪ್ತಿ, ವೈಯ್ಯಕ್ತಿಕ ಆಮಿಷಗಳಿಗೆ ಮಗಳು ಮುಗ್ಧೆ ರುದ್ರಿಯ ಶೋಷಣೆ, ಅನಾಥ ಹೆಣ್ಣು ರತ್ನಮ್ಮನ ಶೋಷಣೆ – ಹೀಗೆ ಹೆಣ್ಣಿನ ಶೋಷಣೆಯ ವಿವಿಧ ಮುಖಗಳು ಹಾಗೂ ಸ್ವರಗಳು ಇಲ್ಲಿ ಪ್ರಕಟ– ವಾಗುತ್ತವೆ ಎಂಬುದು ಮುಖ್ಯ.

ಕಾದಂಬರಿಯನ್ನು ಲೇಖಕರು ಕಾದಂಬರಿಯ ಘಟನೆ, ಬೆಳವಣಿಗೆಯ ಹಿನ್ನೆಲೆ ಯಲ್ಲಿ ಮೂರು ಭಾಗಗಳಾಗಿ ವಿಂಗಡಿಸಿ ಅವಕ್ಕೆ 'ಚಂದನದ ಗೊಂಬೆ', ಊಸರುಳ್ಳಿ', 'ಸೂತ್ರಕಿತ್ತಪಟ' ಎಂದು ಹೆಸರಿಸಿದ್ದಾರೆ. 'ಚಂದನದ ಗೊಂಬೆ' – ಭಾಗದಲ್ಲಿ ಸೀತಾರಾಮು– ರತ್ನಮ್ಮ– ಇವರ ಮದುವೆ. ದಾಂಪತ್ಯ ಜೀವನದ ಚಿತ್ರಣ ಬಂದರೆ, ವಿಠೋಬ, ಈರಮ್ಮ, ಚಿನ್ನೋಬಯ್ಯ – ಇವರು ಸೀತಾರಾಮು ಬದುಕಿದ್ದಾಗ ರತ್ನಮ್ಮ ನೊಂದಿಗಿರಿಸಿಕೊಂಡಿದ್ದ ಸಂಬಂಧಗಳ ಸ್ವರೂಪವನ್ನು 'ಊಸರುಳ್ಳಿ' ಭಾಗ ದಲ್ಲಿ ಬದಲಾಯಿಸಿಕೊಳ್ಳುತ್ತಾರೆ. 'ಸೂತ್ರ ಕಿತ್ತಪಟ' – ಈ ಹೆಸರೇ ಸೂಚಿಸುವಂತೆ

ಜೀವನಾಧಾರವಿಲ್ಲದೆ ಅನಾಥೆಯಾಗಿ ಬದುಗಿನ ಬಿರುಗಾಳಿಯ ದುರಂತಕೊಳ್ಳಗಾಗುವ ರತ್ನಮ್ಮನ ಕೊನೆಯದಿನಗಳನ್ನು ಇದು ಚಿತ್ರಿಸುತ್ತದೆ.

'ಚಂದನವ ಗೊಂಬೆ' ಭಾಗದಲ್ಲಿ ಲೇಖಕರು ಕಥಾ ಓಟವನ್ನು ಅತ್ಯಂತ ಸುಂದರವಾಗಿ ನಿರೂಪಿಸುತ್ತಾರೆ. ಸೀತಾರಾಮು – ರತ್ನಮ್ಮರ ಮದುವೆ, ನಾರಾಯಣ ಹುಟ್ಟಿ ನಾಲ್ಕು ವರ್ಷದವನಾಗುವುದು, ಸೀತಾರಾಮುವಿನ ಸಾವು ಹೀಗೆ ಕೇವಲ ಎಪ್ಪತ್ತೆಂಟು ಪುಟಗಳಲ್ಲಿ ಕಥೆ ವೇಗವಾಗಿ ಸಾಗುತ್ತದೆ. ಇಲ್ಲಿ ಲೇಖಕರು ವಾಚಾಳಿಯಾಗಿಲ್ಲ. ಸಂಯಮದಿಂದ ನಿರೂಪಿಸುತ್ತಾರೆ. ಆದರೆ ಅದೇ ಎರಡನೆಯ ಭಾಗವಾದ 'ಊಸರುಳ್ಳಿ'ಯಲ್ಲಿ ಈರಮ್ಮನ ಸಾಲಕ್ಕೆ ವಿಠೋಬ ಈರಮ್ಮನನ್ನು ಎತ್ತಿ ಕಟ್ಟುವುದು, ಆ ಮೂಲಕ ನಂಜಾಪುರದ ಶ್ಯಾನುಭೋಗಿಕೆಯನ್ನು ಕಿತ್ತುಕೊಳ್ಳಲು ಪ್ರಯತ್ನಿಸುವುದು......ಈ ಭಾಗದಲ್ಲಿ ಬರುವ ಈ ಒಂದು ಪ್ರಸಂಗಕ್ಕೆ ಲೇಖಕರು ಸುಮಾರು ಎಂಭತ್ತೈದು ಪುಟಗಳನ್ನು ಮೀಸಲಾಗಿಟ್ಟಿದ್ದಾರೆ. ಈ ಪ್ರಂಸಗ ಕಾದಂಬರಿಯ ಮುಖ್ಯ ಪ್ರಸಂಗಗಳಲ್ಲಿ ಒಂದಾದರೂ, ಇದನ್ನು ಇಷ್ಟೊಂದು ಬೆಳಸುವ ಅಗತ್ಯವಿರಲಿಲ್ಲ. ಈರಮ್ಮ ಪದೇ ಪದೇ ರತ್ನಮ್ಮನನ್ನು ಗೋಳಾಡಿಸುವುದು ಬಹಳ ವಾಗಿಸಿ, ಓದುಗರ ಸಹನೆಯನ್ನು ಕೆಣಕುತ್ತಾರೆ. ಮೊದಲ ಭಾಗದಲ್ಲಿದ್ದ ಸಂಯಮದ ಬರವಣಿಗೆ ಇಲ್ಲಿ ಮಾಯವಾಗಿದೆ. ಆದರೆ ಈ ಭಾಗದಲ್ಲಿ ರತ್ನಮ್ಮನೊಡನೆ ಸಂಬಂಧವಿಟ್ಟುಕೊಂಡಿದ್ದ ಎಲ್ಲ ವ್ಯಕ್ತಿಗಳ ಬಣ್ಣದ ಬದಲಾವಣೆ ಈ ಭಾಗದ ಶೀರ್ಷಿಕೆಯನ್ನು ಸಮರ್ಥಿಸುತ್ತದೆ. 'ಸೂತ್ರಕಿತ್ತ ಪಟ' – ಹೆಸರೇ ಸೂಚಿಸುವಂತೆ ಆಧಾರವಿಲ್ಲದ ಅಬಲೆ ಹೆಣ್ಣು ಸಮಾಜದ ನೀಚವ್ಯಕ್ತಿಗಳ ಕೈಗೆ ಸಿಕ್ಕು ತತ್ತರಿಸು ವುದನ್ನು ಹೇಳುತ್ತದೆ. ಸೂತ್ರಕಿತ್ತ ಪಟಕ್ಕೆ ನಾಶ ಹೇಗೆ ವಾಸ್ತವವೋ ಹಾಗೇ ರತ್ನಮ್ಮನಿಗೂ ದುರಂತ ಕಟ್ಟಿಟ್ಟ ಬುತ್ತಿಯಾಗುತ್ತದೆ. ಈ ಭಾಗದಲ್ಲಿ ಭಾವತೀವ್ರತೆ ತುಂಬಿ ಹರಿಯುತ್ತದೆ. ರತ್ನಮ್ಮ, ಚಿನ್ನೋಬಯ್ಯ – ಇವರ ಸಂಭಾಷಣೆ ಅತ್ಯಂತ ಹರಿತವಾಗಿದೆ. ಕೊನೆಗೂ ಎಲ್ಲರಿಂದಲೂ ನಿಂದನೆಗೆ ಒಳಗಾಗಿ ಅವಳು ಆತ್ಮಹತ್ಯೆಯ ಮೂಲಕ ತನ್ನ ಅಂತ್ಯವನ್ನು ಕಂಡುಕೊಳ್ಳಬೇಕಾಗುತ್ತದೆ.

'ಚಂದನದ ಗೊಂಬೆ' ಕಾದಂಬರಿಯ ಶೀರ್ಷಿಕೆಯ ಬಗ್ಗೆ ಲೇಖಕರು ತಾವೇ ಮುನ್ನುಡಿಯಲ್ಲಿ ಅದಕ್ಕೆ ಸಮರ್ಥನೆಯನ್ನು ನೀಡಿ, 'ಚಂದನದ ಗೊಂಬೆ' ನವರಾತ್ರಿ ಯಲ್ಲಿ ನಾವು ಪಟ್ಟಕ್ಕೆ ಕೂಡಿಸುವ ಮರದ ಗೊಂಬೆ, ಅದು ಪಟ್ಟಕ್ಕೆ ಕೂಡಲೂ ಬಯಸುವುದಿಲ್ಲ ವಿಸರ್ಜನೆಯಾಗ ಬಯಸುವುದೂ ಇಲ್ಲ. ನಮ್ಮ ಬಯಕೆ ಅದರ ಸ್ಥಾಪನೆ, ವಿಸರ್ಜನೆಗಳೆರಡಕ್ಕೂ ಕಾರಣವಾಗುತ್ತದೆ' – ಎನ್ನುತ್ತಾರೆ. ಪ್ರಸ್ತುತ ಕಾದಂಬರಿಯ ರತ್ನಮ್ಮನ ಬದುಕೂ ತನ್ನ ಇಚ್ಛೆಗೆ ಅಧೀನವಾಗಿ ನಡೆಯದೆ ಸುತ್ತ ಇರುವ ಜನಗಳ ಬದುಕಿಗನುಸಾರವಾಗಿ ನಡೆದು ತನ್ನ ಅಂತ್ಯ ಕಂಡುಕೊಳ್ಳುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ಶೀರ್ಷಿಕೆ ಸಮರ್ಥಗೊಳ್ಳುತ್ತದೆ.

ಇದು ಗ್ರಾಮೀಣ ಬದುಕಿನ ಮಧ್ಯಮವರ್ಗದ ಬ್ರಾಹ್ಮಣ ಕುಟುಂಬದ ಸಾಂಸಾ ರಿಕ ಕಥಾನಕವಾಗಿದೆ. ಸಮಾಜ ಹಾಗೂ ವ್ಯಕ್ತಿ–ಇವರಿಬ್ಬರ ನಡುವೆ ಕೊಡು,

ಕೊಳ್ಳುಗಳಿರಬೇಕು. ವ್ಯಕ್ತಿಯಲ್ಲಿ ಹೇಗೆ ಸ್ನೇಹ, ಸೌಹಾರ್ದತೆ, ತ್ಯಾಗಗಳಿರಬೇಕೋ, ಆ ಗುಣಗಳು ವ್ಯಕ್ತಿಯ ಸುತ್ತ ಬದುಕುವ ವ್ಯಕ್ತಿಗಳಲ್ಲೂ ಇರಬೇಕಾದುದು ಅವಶ್ಯಕ. ಹಾಗಿಲ್ಲದಿದ್ದಾಗ ವ್ಯಕ್ತಿಯ ಬಾಳನ್ನು ಸುಂದರಗೊಳಿಸಿ, ಬೇರೊಂದು ಸ್ವರೂಪವನ್ನು ನೀಡಿ, ಅವನ ವ್ಯಕ್ತಿತ್ವ ನಿರ್ಮಾಣ ಮಾಡಬೇಕಾದ ಸಮಾಜದ ಕಾಲ್ತುಳಿತಕ್ಕೇ ಸಿಕ್ಕಿ ಅವನ ಬದುಕು ದುರಂತಗೊಳ್ಳುತ್ತದೆ.

ಪ್ರಗತಿಶೀಲ ಚಳುವಳಿಯ ಯುಗದ ಹಿನ್ನೆಲೆಯಲ್ಲಿ ಈ ಕಾದಂಬರಿಯನ್ನಿಟ್ಟು ನೋಡಿದಾಗ, ಈ ಕಾದಂಬರಿ ಪ್ರಗತಿಶೀಲ ಚಳುವಳಿಯ ತಾತ್ತ್ವಿಕ ನೆಲೆಗಳಿಗಿಂತ ಭಿನ್ನವಾದ ನೆಲೆ ಪಡೆದುಕೊಳ್ಳುತ್ತದೆ. ಇದರಲ್ಲಿ 'ರೊಮ್ಯಾಂಟಿಕ್' ಮನೋಭಾವವೇ ಹೆಚ್ಚು ತುಂಬಿದೆ. ಹೀಗಾಗಿ ಕಾದಂಬರಿ ಭಾವನಾತ್ಮಕ ನೆಲೆಯಲ್ಲೇ ಸಾಗಿ, ಒಂದು ಹಂತದಲ್ಲಿ ಅಲ್ಲಲ್ಲಿ 'ಮೆಲೋಡ್ರಮ್ಯಾಟಿಕ್' ಕೂಡ ಆಗಿ ಬಿಡುತ್ತದೆ. ಆದರೂ ಕಾದಂಬರಿಕಾರ ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣು, ಅವಳ ಹೋರಾಟ, ಅವಳ ಶೋಷಣೆ– ಈ ಹಿನ್ನೆಲೆಯಲ್ಲಿ ಸಮಾಜ ತನ್ನ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುವುದು– ಇವುಗಳ ಚಿತ್ರಣದತ್ತ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿರುವುದು ಇಲ್ಲಿ ಮುಖ್ಯ ವಾಗುತ್ತದೆ.

ತ.ರಾ.ಸು. ಅವರ ಭಾಷೆ ಈ ಕಾದಂಬರಿಯಲ್ಲೂ. ಉಳಿದ ಯಾವುದೇ ಅವರ ಇತರ ಕಾದಂಬರಿಗಳಲ್ಲಿರುವಂತೆ ಅತ್ಯಂತ ಶಕ್ತಿಶಾಲಿಯಾಗಿ ಮೂಡಿಬಂದಿದೆ. ಈ ಕಾದಂಬರಿಕಾರನಲ್ಲಿರುವ ಶ್ರೇಷ್ಠಗುಣವೆಂದರೆ ಇವರ 'ಭಾಷೆ' ಈ 'ಭಾಷೆ' ಹಲ ವೊಮ್ಮೆ ವಿಚಾರಕ್ಕೆಳೆಸುವುದಕ್ಕಿಂತ ಓದುಗನನ್ನು ಮೋಹಿತಗೊಳಿಸಿಬಿಡುತ್ತದೆ. ಇದು ಇವರ ಐತಿಹಾಸಿಕ ಕಾದಂಬರಿಗಳಲ್ಲಂತೂ ಅಕ್ಷರಶಃ ನಿಜವಾದುದು. ಬಳಸುವ ಭಾಷೆಯ ಮೂಲಕವೇ ಇವರ ಕಾದಂಬರಿಗಳು ತಮ್ಮದೇ ಆದ ಓದುಗವಲಯವನ್ನು ನಿರ್ಮಾಣ ಮಾಡಿಕೊಳ್ಳುತ್ತವೆ. 'ಚಂದನದ ಗೊಂಬೆ' ಕಾದಂಬರಿಯಲ್ಲಿ ಗಾದೆ ಮಾತುಗಳನ್ನು ಹೇರಳವಾಗಿ ಬಳಕೆಮಾಡಿಕೊಂಡು, ಕಾದಂಬರಿಯ ಪ್ರಸಂಗ, ಘಟನೆ ಗಳಿಗೆ ಒಂದು ಜಾನಪದೀಯ ಆವರಣ, ಸತ್ವವನ್ನು ಕಲ್ಪಿಸಿಕೊಡುತ್ತಾರೆ.

ತ.ರಾ.ಸು. ಅವರ ಶೈಲಿ ಯಾವ ಸಂದರ್ಭದಲ್ಲೇ ಆಗಲಿ ಓದುಗರಲ್ಲಿ ಆಸಕ್ತಿ ಯನ್ನು ಕಳೆದುಕೊಳ್ಳುವಂತೆ ಮಾಡುವುದಿಲ್ಲ. ಕಥೆ ಹೇಳುವ ಜಾಣ್ಮೆ, ನಿರೂಪಣೆ, ಸಂಭಾಷಣೆ, ಭಾಷೆ, ನಾಟಕೀಯ ನಿರ್ಮಾಣ–ಇವು ಇವರ ವಿಶಿಷ್ಟ ಅಂಶಗಳು. ಹೀಗಾಗಿ ತ.ರಾ.ಸು. ಅವರ ಯಾವುದೇ ಕಾದಂಬರಿಯಾಗಲಿ ಹೊಸತನದಿಂದ ಕೂಡಿರುತ್ತದೆ. ಸಾಂಸಾರಿಕ ಕಥಾನಕಗಳಾದ 'ಚಂದವಳ್ಳಿಯ ತೋಟ' 'ಪುನರ್ಜನ್ಮ' 'ಗಾಳಿಮಾತು' 'ಬೆಂಕಿಯ ಬಲೆ' 'ನಾಗರಹಾವು' – ಈ ಕಾದಂಬರಿಗಳಂತೆಯೇ ಇದೂ ಕೂಡ ಮಧ್ಯಮವರ್ಗದ ಬ್ರಾಹ್ಮಣ ಕುಟುಂಬದ ಸಮಸ್ಯೆಗಳ ಸೂಕ್ಷ್ಮತೆಯನ್ನು ಪರಿಶೀಲಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ತ.ರಾ.ಸು. ಅವರು ಸಾಹಿತ್ಯವನ್ನು ಗಂಭೀರಚಿಂತಕರಾಗಿ ಅಭ್ಯಾಸ ಮಾಡುತ್ತಾರೆ. ಯಾವೊಂದು ಸಮಸ್ಯೆಯನ್ನು ವಿಶ್ಲೇಷಿಸುವಾಗಲೂ ಅದರ ತೀವ್ರತೆಯ ಅನುಭವವನ್ನು ಓದುಗರಿಗೆ ಉಳಿಸಿ ಕೊಡುತ್ತಾರೆ. ಯಾವುದೇ ಕತೆಯನ್ನಾಗಲಿ ಅಚ್ಚುಕಟ್ಟಾದ ಶೈಲಿ, ಭಾಷೆಯ ಮೂಲಕ ಕಣ್ಣಿಗೆ ಕಟ್ಟುವಂತೆ, ಹೃದಯಕ್ಕೆ ಮುಟ್ಟುವಂತೆ ನಿರೂಪಿಸಬಲ್ಲರು. ತ.ರಾ.ಸು. ಅವರು ಕನ್ನಡಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ, ಕಾದಂಬರಿ ಚರಿತ್ರೆಯ ಸಂದರ್ಭದಲ್ಲಿ ಒಬ್ಬ ಗಂಭೀರ ಸಾಹಿತ್ಯ ಚಿಂತಕರಾಗಿ ಅಭಿರುಚಿ ನಿರ್ಮಾಣಕ್ಕಾಗಿ ತೀವ್ರವಾಗಿ ದುಡಿದಿದ್ದಾರೆ ಎಂಬುದನ್ನು ಅಗತ್ಯವಾಗಿ ಸ್ಮರಿಸಬೇಕಾಗಿದೆ. ●

ತ.ರಾ.ಸು. ಸಾಹಿತ್ಯದಲ್ಲಿ ಪ್ರಗತಿಶೀಲ ಧೋರಣೆ

— ಎನ್. ಎಸ್. ಗದಗಕರ

ಪ್ರಗತಿಶೀಲಧೋರಣೆ ಇತ್ತೀಚಿನದೆನಿಸಿದರೂ ಇದಕ್ಕೆ ಸರಿಸರಿ ಎನಿಸುವ ವಿಚಾರ ಪ್ರಣಾಲಿಗಳೆಂದರೆ ಅಭಿಜಾತ ಪರಂಪರೆ ಪ್ರಾಚೀನ ಪ್ರಿಯತೆ (Romantic and classicism) ಇವೆರಡೂ ವಿಚಾರ ಪ್ರಣಾಲಿಗಳಿಂದ ಸಾಹಿತ್ಯರಂಗದಲ್ಲಿ ಜಾಗತಿಕವಾಗಿ ಎದ್ದ ಗಲಭೆ,ಹಾಹಾಕಾರ ಅಸದೃಶ.ಸಾಹಿತ್ಯ ತಜ್ಞರಂತೂ ಅಭಿಜಾತ ಪರಂಪರೆ ಅಂದರೇನು ಎಂಬ ಪ್ರಶ್ನೆ ಹಾಕಿದರು. ವಿಶ್ವದಲ್ಲಿ ಅವರಿಗೆ ಪ್ರಾಚೀನತೆ, ಕುರುಡುತನ ಕಾಣಲಿಲ್ಲ. “Lift the stone there it is, cleave the wood there it is” ಎಂಬ ವಾದ ಪ್ರಗತಿಶೀಲರದು. ಆದೇ ಸೂರ್ಯ, ಅದೇ ಭುವಿ, ಅದೇ ನಿಸರ್ಗ, ಆದರೆ ದಿನದಿನಕ್ಕೆ ಸೊಬಗಿನ ಸೂರೆ. ಇದಕ್ಕೆ ಕಾರಣ ನಮ್ಮ ಕಣ್ಣು, ದೃಷ್ಟಿ, ಕೆಲವರ ಕಣ್ಣಿಗೆ – ರವೀಂದ್ರರಂತಹರಿಗೆ – ನಾವೀನ್ಯವೇ ಗೋಚರಿಸುವುದು. ಸೃಷ್ಟಿಯಲ್ಲಿ ನೀರಸ ಎಂಬುದೇ ಇಲ್ಲ. ಇದ್ದರೆ ನಮ್ಮ ದೃಷ್ಟಿ ಮಾಂದ್ಯ ಮೂಲ. !

ಇಂದು ನಾವು ತಿಳಿಯುವ ಪ್ರಗತಿಶೀಲತೆಯ ಇತಿಹಾಸ ರವೀಂದ್ರರ ಕಾಲದ್ದು. ಅವರಿಗೆ ನಿಸರ್ಗದಲ್ಲಿ ಸೌಂದರ್ಯ ಝಗ್ಗೆಂದು ಕಣ್ಣಿಗೆ ಬಿದ್ದಿತು. ಶಾಲೆ ಬಿಟ್ಟರು ಹೊತ್ತಿಗೆ ಎಂದು ನಿಸರ್ಗಕ್ಕೆ ಮಾರು ಹೋದರು. ದೇವಾಲಯದ ಪೂಜಾರಿಗೆ ಆಹ್ವಾನವಿತ್ತರು. “Leave this cheating and singing” ಅಂದರು ಕತ್ತಲೆಯಲ್ಲಿ ದೇವರಿಲ್ಲ. ಹೊರಗೆ ಅಡಿ ಇಡು, ನಿನ್ನ ಈ ಶ್ವ ರ ಕುಂಬಾರನ ತಿಗರಿಯಲ್ಲಿ ನೆಲೆಸಿರುವ ನೇಗಿಲಯೋಗಿಯ ಬಸವಣ್ಣನ ಹಿಂದೆ ನಡೆದಿರುವ. ಹೊಟ್ಟೆಗಾಗಿ ಬೆವರು ಸುರಿಸುವ ಬಡ ಹೆಣ್ಣು ಗಂಡು, ಬೀದಿಯನ್ನು ದುರಸ್ತು ಮಾಡುವವರುಗಳ ಹೃದಯದಲ್ಲಿ ನೆಲೆಸಿರುವ ಆ ಗುಗ್ಗುಳ ಲೋಬಾನ, ಗಂಟೆ–ಜಾಗಟೆಗಳು ಬೆಲೆಹೀನ. ಕಂಗಾಲನ ಮೊರೆ ಕೇಳು–ಈಶ ಅಲ್ಲಿರುವ

ರವೀಂದ್ರರು ಕೇವಲ ಕವನದಲ್ಲಿ ಪ್ರಗತಿಶೀಲತೆಯನ್ನು ಕಾಣಲಿಲ್ಲ. wrek Hungry stones and other stories” ಪ್ರಗತಿಶೀಲತೆಗೆ ಸಜೀವ ಮಾದರಿ. ಅವರ ಪಾತ್ರಗಳೋ “They pulsate with life” ಎನ್ನಬೇಕು. ಅದಕ್ಕೆ ನಾಳಿನ ಪ್ರಜ್ಞೆ ಉಂಟು. ಅಸಂತೋಷವೇ ಏಳ್ಗೆಯ ಮೂಲ ಅವರ ಪಾಲಿಗೆ ನೆಪೋಲಿಯನ್‌ನಂತೆ ಅವರ ಪಾತ್ರಗಳು ಗುಣದೋಷಗಳ ಆಗರ. ಅದು ಜೀವನ. ಪ್ರಗತಿಶೀಲ ಸಾಹಿತ್ಯ ಕಂಡ ಜೀವನ ಉತ್ಸಾಹ ಸೂಸುವ ಬಾಳು ಅದು.

ವಾಸ್ತವತೆಯ ಪ್ರಜ್ಞೆಯಿಂದ ವಿದೂರವಾದ ಸಾಹಿತ್ಯ ನೈಜ ಸಾಹಿತ್ಯವೇ ಅಲ್ಲ ಆದರ್ಶ ಗಾಳಿ ಗೋಪುರ, ಆಕಾಶ ಕುಸುಮ. ಅವ್ಯವಹಾರಿ ಪ್ರಗತಿಶೀಲ ಸಾಹಿತ್ಯ

ಕೇವಲ ಅಸಂತುಷ್ಟಿಗೆ, ಅಶ್ಲೀಲಕ್ಕೆ, ಅಭದ್ರತೆಗೆ ಮೀಸಲೆಂಬ ವಾದವಿದೆ. ನವ್ಯವೆಂಬುದೆಲ್ಲ ಅವಿವೇಕದ್ದು ಎಂಬ ಸಾಮಾನ್ಯ ಪ್ರತೀತಿ ಜನಜನಿತವಾಗಿದೆ, ಪ್ರಗತಿ ನಿಂತ ನೀರಲ್ಲ. ಪ್ರವಹಿಸುವ ನಿರಂತರ ಝರಿ. ಕ್ರಾಂತಿ ಅದರ ಜೀವಾಳ. ಕ್ರಾಂತಿಯ ಕಲ್ಪನೆಯಾದರೂ ಉದಿಸುವುದೇತಕ್ಕೆ ? ನಮಗೆ ಅನ್ಯಾಯ ಆದದ್ದಕ್ಕೆ ಪ್ರತಿಭಟಿಸುವ ರೀತಿ ಅದು. ಸುತ್ತೆಲ್ಲ ಅನ್ಯಾಯ, ಅತ್ಯಾಚಾರ, ಅವಹೇಳನ, ಆತ್ಮಸ್ತುತಿ, ಪರನಿಂದೆ, ಸ್ವಾರ್ಥ ನಡೆಯುತ್ತಿದ್ದರೆ ಸಾಹಿತಿ ಕಂಡು ಕಂಡೂ ಸುಮ್ಮನಿರ. ತನ್ನ ಪ್ರತಿಕ್ರಿಯೆ ಅಭಿವ್ಯಕ್ತಗೊಳಿಸದಿದ್ದರೆ ಅವನಿಗೆ ಪಳಹಳಿ. ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ' ತಕ್ಕ ನಿದರ್ಶನ. ಅವರ ಪಾತ್ರಗಳು ಜೀವನದ ಕಲುಮೆಯಿಂದ ಸಮುದ್ಭವಿಸಿವೆ. ಅವರ ನಾರಾಯಣನಿಗೆ ಹೇಡಿತನಕ್ಕಾಗಿ ಕೋಪವಿದೆ. ತುಳಸಿಯೊಡನೆ ಲಗ್ನ ಅನಿವಾರ್ಯ, ತನ್ನ ವಿದ್ಯೆ ಜೀವನ ನೌಕೆ ದಾಟಿಸಲಿಲ್ಲ ಎಂದು ರೊಚ್ಚಿಗೆದ್ದು ಸಿಡಿದೇಳುವ ಅವರ 'ಅಶ್ವಮೇಧ' ನೈಜ ಆಹ್ವಾನ. ಎಲ್ಲಿಯ ವರದಕ್ಷಿಣೆ. ! ಲಗ್ನವಾಗುವ ಗಂಡಿಗೆ ಬುದ್ಧಿ ಬರಲಿ ಎಂದು ಮಗಳ ಹಣೆಗೆ ಪಟ್ಟಿಕಟ್ಟಿ ಬಿಡುವ. ಇದೇ ಪ್ರಗತಿಶೀಲತೆ. ಸಾಮಾಜಿಕ ಸಮಸ್ಯೆಯನ್ನ ಸೂಕ್ಷ್ಮವಾಗಿ ಬಿಡಿಸುವ ರೀತಿ. ಇಬ್ಸನ್‌ನಿಗೂ ಇದೇ ಹೊಳೆದಿತ್ತು. ಅವನು ಕುರುಡನಲ್ಲ. ತನ್ನ ಸ್ತ್ರೀಪಾತ್ರಗಳಿಗೆ ಅವನು ವ್ಯಕ್ತಿತ್ವವಿತ್ತ ಅವರು ಪುರುಷರ ಗುಲಾಮರಾಗಲಿಲ್ಲ, ಪ್ರಗತಿಶೀಲತೆ ನವ್ಯ ಸಾಧಿಸುವ ಗುರಿ ಇದು. ಸಂಪ್ರದಾಯಶೀಲತೆ ಗಂಡು ಹೆಣ್ಣನ್ನು ನಿಷ್ಕ್ರಿಯಗೊಳಿಸಬಾರದೆಂಬ ಧೋರಣೆ–ಸತ್ವಶಾಲಿ ಲೇಖಕರವು, ಒಂದು ಗ್ರಂಥ–ಕಾದಂಬರಿ ಬರಿ ಹೆಬ್ಬೊಟ್ಟಿಗೆಯಲ್ಲ. ಆದರ್ಶಗಳ ಪುಂಜ ಮೊದಲಲ್ಲ. ಪಾತ್ರಗಳ ಆಸೆ–ಆಕಾಂಕ್ಷೆಗಳ ತಿರುಗಣೆಯ ಮಡುವು ಅದು. ಇಂದಲ್ಲ ನಾಳೆ ವ್ಯಕ್ತಿ ಮುಂದಾಗಲಿ ಎಂಬುದು ಒಳ್ಳೆಯ ನವ್ಯ ಸಾಹಿತಿಯ ಆಶಯ. "ಉತ್ಪದ್ಯಂತೆ ವಿಲೀಯಂತೆ ದರಿದ್ರಾಣಾಂ ಮನೋರಥಾಃ" ಎಂಬಂತೆ ಪಾತ್ರಸೃಷ್ಟಿ. ಕತೆ, ಕಾದಂಬರಿಗಳಲ್ಲಿ, ಕವನ ಕೂಡ ಹಾಗೆಯೇ ಚರಿತ್ರವೂ ಇದರ ಪ್ರತಿರೂಪ. ಸುವರ್ಣದ್ದಲ್ಲದಿದ್ದರೂ, ಅಂದ ಚೌಕಟ್ಟಿನ ರಂಗುಕನ್ನಡಿ ಪ್ರಗತಿಶೀಲ ಸಾಹಿತಿಯ ಕಲಾಕೃತಿ ಬರೀ ಸೌಂದರ್ಯ ರಸಹೀನ ವ್ಯಕ್ತಿಯ ಬಾಳು ಬದುಕಿಗೆ ಚೇತನದ ಬುಗ್ಗೆಯಾದಾಗ ಸಾಹಿತ್ಯಗ ಸಾರ್ಥಕತೆ ! ಅದು ಕೂಲಿಯವನ, ಮೋಚಿಯ, ರೇಲ್ವೆ ಕೆಲಸಿಗನ, ಕಮ್ಮಾರನ, ಉಪ್ಪಾರನ, ಕುಂಬಾರನ, ಕಲೋಪಾಸಕನ ಡೊಂಬನ ಬಾಳಿನ ಬವಣೆಯ ಚಿತ್ರವಾಗಬೇಕು ಅದು ರಸವತ್ತೆಂದರೆ ಅವನ ನಿತ್ಯ ಬಾಳಿಗೆ ಬೆಳಕು ಈಯಬೇಕು. ಇದೇ ನವ್ಯ ಸೃಷ್ಟಿಯ ಜೀವಾಳ!

ಈ ಹಿನ್ನೆಲೆಯಲ್ಲಿ ನಿರುಕಿಸಿದಾಗ ಪ್ರಗತಿಶೀಲ ಆಂದೋಲನಕ್ಕೆ ಐತಿಹಾಸಿಕ ಘನತೆಯಿದೆ ಎನಿಸುವುದು. ಕನ್ನಡದಲ್ಲಿಯಂತೂ ಅದರ ಪುರಸ್ಕರ್ತರು ಅನೇಕ ಇರುವರು. ಡಿ.ವಿ.ಜಿ., ವೀರಕೇಸರಿ ಸೀತಾರಾಮ ಶಾಸ್ತ್ರಿ, ಡಿ.ಕೆ. ಭಾರದ್ವಾಜರು ತೀರ ಕೆಲವರು ಹಾಗೆ ನೋಡಿದರೆ, ಮಾಸ್ತಿಯವರ ಕತೆ ಕಾದಂಬರಿಗಳ ಉಸಿರು ಪ್ರಗತಿ ಆಗಿದೆ. ಶ್ರಮಜೀವಿಗಳ ಸುಖ ದುಃಖ ಅವರ ಕತೆಗಳಲ್ಲಿ ಅಖಂಡವಾಗಿ

ಪ್ರವಹಿಸಿವೆ.ಹಾಗೆಯೇ ಬೆಟಗೇರಿ ಕೃಷ್ಣಶರ್ಮರ ಬರೆವಣಿಗೆ ಅವರ ಕೃತಿಗಳಿಗೆ ಕ್ರಾಂತಿ ಜೀವಾಳ ಜೀವನವನ್ನು ಸೂಕ್ಷ್ಮವಾಗಿ ಕಂಡು ಕಲಾತ್ಮಕವಾಗಿ ರೂಪಿಸುವಲ್ಲಿ, ಜನತೆಯನ್ನು ಬಡಿದೆಬ್ಬಿಸುವಲ್ಲಿ ಅವರಿಗೆ ಎಲ್ಲಿಲ್ಲದ ಪ್ರೀತಿ.

ಕೀರ್ತಿಶೇಷ ಅ.ನ.ಕೃ. ಅವರು ತ.ರಾ.ಸು. ಅವರಿಗೆ ಸ್ಫೂರ್ತಿಯ ಕೇಂದ್ರ ಅನಿಸಿದರೂ ಕುರುಡು ಶಿಷ್ಯವೃತ್ತಿ ತ.ರಾ.ಸು. ಅವರ ಕ್ಷೇತ್ರವಾಗಲಿಲ್ಲ. ಪ್ರತಿಸೃಷ್ಟಿ ನಿರ್ಮಿಸಿದರು. ಅದು ಭಾವ ಪ್ರಭಾತ. ಶ್ರೀ ನಿರಂಜನ, ಬಸವರಾವ ಕಟ್ಟೀಮನಿ ಅವರು ಇದೇ ಪಂಥದವರಾದರೂ ನಿರೂಪಣೆಯ ರೀತಿ, ಸಮಾಜವನ್ನು ನಿರುಕಿಸುವ ವ್ಯಕ್ತಿತ್ವ ಅಭಿವ್ಯಕ್ತಗೊಳಿಸುವ ಸರಣಿ ವಿಭಿನ್ನ. ನೈಜ ಪ್ರಗತಿಶೀಲ ಲೇಖಕ ಕಲೋಪಾಸಕನೆಂಬಲ್ಲಿ ಸಂದೇಹವಿಲ್ಲ. ತ.ರಾ.ಸು. ಅಂತಹ ಸಜೀವ ಓಜಸ್ವಿ ಬರಹ ಗಾರರು.

ಸಂಖ್ಯಾಮಾನದಿಂದ ಪೊಟ್ಟ ಮೊದಲು ನಿರುಕಿಸಿದರೆ ಕನ್ನಡ ನುಡಿ ಹೆಮ್ಮೆ ಪಡಬಹುದಾದ ಗಾತ್ರ ತ.ರಾ.ಸು. ಕೃತಿಗಳದು ಬರೀ ಗಾತ್ರವಲ್ಲ, ಅಖಂಡ ವೈವಿಧ ಒಂದು ಕತೆಯೇ ಕಾದಂಬರಿಯೇ, ಕಲಾರಂಗವೇ, ಚಲನ ಚಿತ್ರರಂಗವೇ, ಚರಿತ್ರೆ ಕ್ಷೇತ್ರವೇ? ಬರಿ ಕೈಯಾಡಿಸಿ ಸುತೃಪ್ತಿ ಹೊಂದುವ ಜೀವನ ತ.ರಾ.ಸು. ಅವರದಲ್ಲ. ಮುಖ್ಯವಾಗಿ ಅವರು ರಸವತ್ತಾದ ಮಾತುಗಾರರು. ವೇದಿಕೆಯಲ್ಲಿಯೂ ಅದುದು ಮನೆಯ ಮೊಗಸಾಲೆಯಲ್ಲಿ ಗೆಳೆಯರ ನಡುವೆಯೂ ಆಯಿತು.

ಕಾದಂಬರಿಯ ರಂಗದಲ್ಲಿ ತ.ರಾ.ಸು. ಅವರ ಕೃತಿಗಳು ಸಾಮಾಜಿಕವೂ ಇವೆ, ಐತಿಹಾಸಿಕವೂ ಇವೆ. ಇವುಗಳಲ್ಲಿ ಹಲವು ಚಿತ್ರಪಟಗಳಾಗಿ (ಹಂಸಗೀತೆ, ನಾಗರ ಹಾವು ಇತ್ಯಾದಿ) ಮೆರೆದು ರಸಿಕರನ್ನು ತಣಿಸಿದುದು ಸಣ್ಣಮಾತಲ್ಲ. ತ.ರಾ.ಸು. ಅವರ ಇಲ್ಲಿಯ ಪಾತ್ರಗಳು ವೈವಿಧ್ಯಕ್ಕಾಗಿ ಹೆಸರಾಗಿವೆ. ಅಲ್ಲಿ ಕೆಳಮಟ್ಟದಿಂದ ಉಚ್ಚ ಮಟ್ಟದವರೆಗೆ ಪಾತ್ರ ಇರುವವು. ಅವರು ಚಿತ್ರಿಸಿದ ಹೆಣ್ಣು-ಗಂಡುಗಳು ಸಜೀವ, ಗೊಂಬೆಗಳಲ್ಲ, ಛಲಕ್ಕಾಗಿ ಹಲವು ಇದ್ದರೆ, ವಿವೇಕದ ಬಲಕ್ಕಾಗಿ ಹಲವು ಇವೆ. ಉದಾಹರಣೆ ಹೇಳಿದರೆ ಅಪಚಾರವೇ ಸೈ, ಅಂಗೈಯಲ್ಲಿ ವಿಶ್ವವನ್ನು ಹಿಡಿ-ದಿಡುವ ಹುಚ್ಚು ಹವ್ಯಾಸವದು.

ಶ್ರೀಯುತರ ಕಥೆಗಳು, ಸಣ್ಣ ಕಥೆಗಳು ಬರಿ ಗಾತ್ರದ ಮಾನದಿಂದ ಅಲ್ಲ, ಕಲೆಯ ದೃಷ್ಟಿಯಿಂದಲೂ ಉಚ್ಚಮಟ್ಟದವು. 'A short story should be short and a story as well' ಎಂಬ ಖ್ಯಾತ ಅಮೇರಿಕನ್ ಕಲಾವಿದ ಸಾಹಿತಿ ಎಡ್ಗರ್ ಎಲೆನ್ ಪೋ ಅಭಿಪ್ರಾಯ ಪಟ್ಟಂತೆ ಇವರ ಕೃತಿಗಳಿವೆ. ರೂಪಸಿ ನಿಜಕ್ಕೂ ರೂಪಸಿಯೇ. ಅವರ ಸಾಹಿತ್ಯಾಂಗನೆ ನಿಜಕ್ಕೂ ಸರ್ವಾಭರಣ ವಿಭೂಷಿತೆ. ಆದರೆ ಸುಖ ಪ್ರವೃತ್ತಿಯನ್ನಷ್ಟೇ ತ.ರಾ.ಸು. ಬಣ್ಣಿಸುವವರಲ್ಲ. ದುಃಖವನ್ನು ಮರೆ ಮಾಜದೆ ವಿವೇಚಿಸುವರು. ಸುಖ ದುಃಖ 'Different facets of the'

some gem' ಎಂದು ಅವರಿಗೆ ಗೊತ್ತು. ಒಟ್ಟಿನಲ್ಲಿ ನೈಜ ಜೀವನದ ಪಾತ್ರಗಳನ್ನೇ ಅವರು ಸೃಜಿಸಿಯಾರೆ ಹೊರತು ಗೊಳ್ಳು ವ್ಯಕ್ತಿಗಳಲ್ಲ. ನಿರುದ್ದಿಶ್ಯ ಪಾತ್ರ ಅವರ ಸಾಹಿತ್ಯದಲ್ಲಿ ಕಾಣಲಾಗದು. ಭಾವನೆಗಳು ಉದ್ದೀಪನೆಗೊಳ್ಳುವುದು. ಮುರಿಗೆಗೊಳ್ಳುವುದು, ಅವರ ವೈಶಿಷ್ಟ್ಯ ಒಂದೆಡೆ ಹೃದಯ ವಿದಾರಕ ಅಳಲು ಇದ್ದರೆ, ಇನ್ನೊಂದೆಡೆ ವಿಧಿಯ ಅನಿವಾರ್ಯ ಕೈವಾಡ. ಎರಡರ ತುತ್ತಾಗಿ ವ್ಯಕ್ತಿ ತೊಳಲಾಡುತ್ತಿರುವ ಚಿತ್ರಣ ಅವರದು. ನಿಷ್ಕ್ರಿಯತೆಗೂ ಶ್ರೀಯುತರಿಗೂ ಎಣ್ಣೆ ಸೀಗೇಕಾಯಿ ಸಂಬಂಧ. ಕೈಚೆಲ್ಲಿ ಹೌಹಾರಿ ಕುಳಿತುಕೊಳ್ಳುವ ವ್ಯಕ್ತಿಗಳು ಅವರಿಗೆ ಅಪರಿಚಿತ. 'Learn to labour and to what' ಅವರ ಸೂತ್ರ Awake, arise, stop not till the goal is reached ಎಂಬುದು ಅವರ ಹೃದಯಾಂತರಾಳ 'Act in the living present' ಅವರ ಸೂತ್ರ.

ನಮ್ಮ ವಿಶ್ವ ನವನವೋನ್ಮೇಷಶಾಲಿನಿ ಎಂದು ಮನಗಾಣಬೇಕಿದ್ದರೆ ತ.ರಾ.ಸು. ಅವರ ಕಲಾ ಕೃತಿಗಳನ್ನು ಅನುಪಮ ಶ್ರದ್ಧೆಯಿಂದ ಪರಿಕಿಸಬೇಕು. ಕಿರಿಯರಿಗೆ ಅವು ದಾರಿ ದೀಪ. ಹಿರಿಯರ ಕಣ್ಣು ತೆರೆಸುವಷ್ಟು ಅವು ಓಜಸ್ವಿ. ಬುದ್ಧಿಜೀವಿಗಳನ್ನು ಅವು ವಿಚಾರಲೋಲುಪರಾಗುವಂತೆ ಬಡಿದೆಬ್ಬಿಸುವ ದೈವೀರಭಸ ಅವರ ಪಾತ್ರ, ಸನ್ನಿವೇಶ ನಿರ್ಮಿತಿಯ ರಂಗದಲ್ಲಿ ನೆಲೆಸಿವೆ. ಇದೀಗ ವಿಲಾಸೀ ಲೇಖಕರಿಗೂ ಅವರಿಗೂ ಅಂತರ, ಮಹದಂತರ, ಅಜಗಜಾಂತರ! ಎಷ್ಟು ಪ್ರಯತ್ನಪಟ್ಟರೂ ತ.ರಾ.ಸು. ಕಿರಿಯರಿಗೆ ಅನುಕರಣೆಗೆ ಯೋಗ್ಯರಲ್ಲ. ಯಾಕೆಂದರೆ ಅವರ ವ್ಯಕ್ತಿತ್ವ ಅಷ್ಟು ಉಜ್ವಲ. ಹಿಡಿದಿಡಲು ಅವು ಸಿಗದು, ಅವರ ಪಾದ ನೆಲಕ್ಕೇ ಹತ್ತವು. ಅವರ ವರ್ಡ್ಸ್‌ವರ್ಥ್, ಶೆಲ್ಲಿಯರ ಸ್ಕ್ವಾಯಲಾರ್ಕ್. Ethercal, thirsted pilgrim of the sky soaring everthou singest, singing ever thou soarest' ಎಂಬ ಸರಣಿ ಅವರದು. ಅಷ್ಟು Dynamic !

ನಾಗರ ಹಾವು, ಮಸಣದ ಹೂ, ಹಂಸ ಗೀತೆ, ಚಕ್ರತೀರ್ಥ, ಸರ್ಪ ಮತ್ಸರ, ಎರಡು ಹೆಣ್ಣು ಒಂದು ಗಂಡು ಹಾಗೂ ಐತಿಹಾಸಿಕ ಕಾದಂಬರಿಗಳನ್ನು ತೆಗೆದುಕೊಂಡರೂ ಅಲ್ಲಿ ನಾವು ಕಾಣುವುದು ಅನುಪಮ ಪಾತ್ರ ಸೃಷ್ಟಿ. ವಾತಾವರಣ ನಿರ್ಮಿತಿಯ ಕೌಶಲ್ಯ ಜೀವನ ನಿರುಕಿಸುವ ವಿಶಿಷ್ಟ ಸೃಷ್ಟಿ. ವಿಧಿಯ ಕೈವಾಡ, ಶೈಲಿಯೋ ? ಇವೆಲ್ಲವುಗಳ ವಶವರ್ತಿ. ಈ ಸಾಹಿತ್ಯಕ ಲಕ್ಷಣಗಳ ಮಾನದಿಂದ ಪರ್ಯಾಲೋಚಿಸುವಾಗ, ನಮಗೆ ತೀರ ಸಹಜವಾಗಿ ತ.ರಾ.ಸು, ಅವರಿಗೆ ಸಮೀಪವರ್ತಿ ಎನಿಸುವರು; ಶರಶ್ಚಂದ್ರರು. ಅವರ ಭಾವ ಪ್ರಪಂಚ ಇಲ್ಲಿ ನಮ್ಮ ಕಣ್ಣು ಕಟ್ಟುವುದು ಶ್ರೀಯುತರ ಪಾತ್ರಗಳು ಅಷ್ಟು ಸಮುಜ್ವಲ. ಜೀವನದಿಂದ ನೇರವಾಗಿ ಬಂದುವು. ಅವು ಗಾಳಿಯವಲ್ಲ ! ವಿಚಾರದ ಹೊಯ್ದಾಟ ಅವುಗಳ ಉಸಿರು ಜೀವಕಳೆಗೆ ನಿಮಿತ್ತ ನ್ಯಾಯ-ನಿಷ್ಠುರ, ದಾಕ್ಷಿಣ್ಯಪರವಲ್ಲ.

ಶ್ರೀಯುತರ ಐತಿಹಾಸಿಕ ಕಾದಂಬರಿ ಓದುವಾಗ ನಮಗೆ ಸರ್‌ವಾಲ್ಟರ್ ಸ್ಕಾಟನ ನೆನಪು ಮಿಂಚುವುದು. ಅವರ ಕಾದಂಬರಿಗಳಿಗೆ ಐತಿಹಾಸಿಕ ಹಿನ್ನೆಲೆ ನಿಜ ವಾತಾವರಣ ಸಾಹಿತ್ಯದ್ದು. ಅವರ ಐತಿಹಾಸಿಕ ಪಾತ್ರಗಳು ಮೂಲತಃ ವಾಸ್ತವ ಇತಿಹಾಸ ಎಷ್ಟು ಬೇಕೋ ಅಷ್ಟು. ಸಾಹಿತ್ಯದ ರುಳಕು ಪ್ರಮುಖ. ಬರೀ ಇತಿಹಾಸ ವೆಂಬುದೆ ಸ್ವಂತ ಸುದ್ದಿಗಾರರ ಕ್ಷೇತ್ರ. ಅದು ಸಾಹಿತ್ಯದ ರಂಜಕತೆಯಿಂದ ಹೇಗೆ ಬೆಳಗೀತು ? ಚಿತ್ರ ದುರ್ಗದ ಇತಿಹಾಸ ಅವರ ಕಾದಂಬರಿಗಳಿಗೆ ಮಿಂಚು ತಂದಿದೆ. ಹಾರ್ಡಿಗೆ ವೆಸೆಕ್ಸ ಜೀವಕಳೆ ತಂದಂತೆ. ಧಾರವಾಡದ ಛಪ್ಪರ ಬಂದ ಕಾಲೋನಿ ಯನ್ನು ಬಣ್ಣಿಸಿದ ಲೇಖಕ ಗಂಗೆಯ ಗುತ್ತಿಗೆಯನ್ನು ಅತ್ತಿಕೊಳ್ಳ ಬರೆದ ಕಲೆಗಾರ ಸಣ್ಣವನೆ ? ಜೀವನ ಬಿಟ್ಟು ಸಾಹಿತ್ಯವಿಲ್ಲ, ಜೀವನವೇ ಸಾಹಿತ್ಯ ಜೊತೆಗೆ ತಾತ್ವಿಕತೆ, ಕಲೆಯ ಕೈವಾಡ ಅಲಕ್ಷಿಸಲಾಗದು.

ತ.ರಾ.ಸು. ಅವರ ಶೈಲಿ ವೈಶಿಷ್ಟ್ಯ ಪೂರ್ಣ. ಅವರ ಗದ್ಯ ರಸವತ್ತಾದಂದು ಅವರು ಕಾವ್ಯವನ್ನೇನೋ ನಿರ್ಮಿಸಲಿಲ್ಲ. ಅನಾವಶ್ಯಕ ಎನಿಸಿತು. ಪ್ರಗತಿ ಶೀಲತೆಯ ಜೀವಾಳವನ್ನು ಮೈಗೂಡಿಸಿಕೊಂಡ ಅಂಬಿಕಾತನಯ ದತ್ತ, ಕುವೆಂಪು ಅವರ ಛಾಯೆ ಅಲ್ಲಿ ಸಾಂದ್ರವಾಗಿರುವುದು. ಅಂತಹ ಶೈಲಿಯನ್ನು ಮೈಗೂಡಿಸಿಕೊಳ್ಳಬೇಕೆಂಬ ತವಕ ಅವರಿಗಿಲ್ಲ. ಆದರ ಲೀಲಾಜಾಲವಾಗಿ ಕಾವ್ಯ ಗುಣ ಅವರ ಬರವಣಿಗೆಯಲ್ಲಿ ಹಾಸು ಹೊಕ್ಕಾಗಿದೆ. ಆ ಮೂಲಕ ಅವರ್ಣನೀಯ ಮೋಹಕತೆ ಅಲ್ಲಿ ಆವರಿಸಿದೆ.

ಗದ್ಯದ ಮಾನದಿಂದ ನಿರೀಕ್ಷಿಸಿದರೆ ನಾಟಕೀಯತೆ, ತ.ರಾ.ಸು. ಅವರಕೃತಿಗಳಲ್ಲಿ ಸ್ಫುಟವಾಗಿ ಗೋಚರಿಸುವುದು ಅವರ ಪಾತ್ರಗಳು ನೇರವಾಗಿ ನಿಂತು ಚರ್ಚಿಸಿರ ಲಿಕ್ಕಿಲ್ಲ. ಆದರೆ ಆ ಅಪ್ರತಿಮ ಸಾಹಿತ್ಯ ಸೃಷ್ಟಿಯಲ್ಲಿ ನಾಟ್ಯ ಗುಣದ ಓಜ ಸುಳಿದಿದೆ. ಪಾತ್ರಗಳು ನಾಟಕೀಯತೆಯ ಸೊಬಗಿನಿಂದ ಮೈವೆತ್ತಿರುವುದು ವೈಶಿಷ್ಟ್ಯವೇ.

ತ.ರಾ.ಸು. ಕೃತಿಗಳ ಸಂಖ್ಯೆ ಹೆಚ್ಚಿದೆ, ವೈವಿಧ್ಯಮಯವಾಗಿದೆ ಅನ್ನುವುದು ದೊಡ್ಡ ಮಾತಲ್ಲ. ತ.ರಾ.ಸು. ಆ ಪಂಥದವರಲ್ಲ Bulk of ಬೆಲೆ ಕೊಡುವವರಲ್ಲ. ಹಾಗೆ ನೋಡಿದರೆ ಅವರ ಚಾರಿತ್ರಿಕ ಕೃತಿ His Masters voice ಅಲ್ಲ ಸ್ವಂತದ ವ್ಯಕ್ತಿತ್ವವನ್ನು ತ.ರಾ.ಸು. ಎಂದೂ ಗಾಳಿಗೆ ತೂರಿದವರಲ್ಲ. ಆತ್ಮ ಪ್ರತಿಭೆ ಯಿಂದ ಬೆಳಗಿದವರು ಅವರು. ಅವರ ಕೃತಿಗಳೇ ಅವರ ವ್ಯಕ್ತಿತ್ವಕ್ಕೆ ಉಜ್ವಲತೆ ತಂದಿದೆ, ಇವೇ ಅವರ ಬಹುಮುಖ ಸಾಹಿತ್ಯಿಕ ಸೇವೆಗೆ ಸಜೀವ ನಿದರ್ಶನಗಳು,

ಇದೀಗ ತ.ರಾ.ಸು. ಅವರ ನವ್ಯತೆಯ, ಪ್ರಗತಿ ಶೀಲತೆಯ ನಿಗೂಢ. ಅವರ ಸಾಹಿತ್ಯೋಪಾಸನೆಯ ಅಪೂರ್ವ ಜೀವಾಳ ಸತ್ಯ ಶಿವಂ ಸುಂದರಂ. ●

ಯುಗಧರ್ಮ ಹಾಗೂ ಸಾಹಿತ್ಯದರ್ಶನ

— ಕೆ.ಡಿ. ಕುರ್ತಕೋಟಿ

ಪುಟ ೧೬೫

ಅ.ನ.ಕೃ. ಅವರ ಕತೆಗಳಿಗಿಂತ ಅವರ ವಾದ ಉಳಿದವರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿತು. ಅವರ ಪ್ರಭಾವಲಯದಲ್ಲಿ ಬಂದ ಹೊಸ ಬರೆಹಗಾರರು ಕಾದಂಬರಿಯಂತೆಯೇ ಸಣ್ಣಕತೆಯಲ್ಲಿಯೂ ಪ್ರಗತಿಶೀಲತೆಯ ಹೊಸಭಾವನೆಯಿಂದ ಪ್ರೇರಿತರಾಗಿ ಮುಂದುವರಿದರು. ಆದರೆ ಇಲ್ಲಿ ಒಂದು ಮಾತನ್ನರಿಯುವುದು ಅವಶ್ಯಕ ವಾಗಿದೆ. ಪ್ರಗತಿಶೀಲತೆ ಇವರ ಸಾಹಿತ್ಯಜೀವದಲ್ಲಿಯ ಒಂದು ಅವಸ್ಥೆ ಮಾತ್ರ. ಅದು ಬಂದಷ್ಟೇ ಬೇಗ ಸರಿದು ಹೋಯಿತು. ನಿರಂಜನ, ತ.ರಾ.ಸು. ರಂಥವರು ಕಥಾಲೇಖನವನ್ನು ಬಿಟ್ಟು ಕಾದಂಬರಿಗೇ ಗಂಟು ಬಿದ್ದರು. ಇವರಲ್ಲಿ ತ.ರಾ.ಸು. ಹೆಚ್ಚು ಕತೆಗಳನ್ನು ಬರೆದಿದ್ದಾರೆ. ತ.ರಾ.ಸು. ಪ್ರಗತಿಶೀಲತೆಯ ಆವರಣದಲ್ಲಿ ಬೆಳೆದು ಬಂದಿದ್ದರೂ ಸಾಹಿತ್ಯದ ಬಗ್ಗೆ ಪ್ರಾಮಾಣಿಕವಾದ ಕಳಕಳಿಯಿರುವುದರಿಂದ ಅವರು ಹೊಸ ಪ್ರಯೋಗಗಳಿಗೆ ಕೈ ಹಾಕಿದರು. ಅವರ ಮೊದಲ ಕಥಾ ಸಂಗ್ರಹ ಗಳಲ್ಲಿ ಇದೇ ಕಾವಿನಲ್ಲಿ ಬರೆದ ಕತೆಗಳೇ ಇವೆ. ಆದರೆ ಇತ್ತೀಚಿನ ಸಂಗ್ರಹವಾದ 'ಗಿರಿಮಲ್ಲಿಗೆಯ ನಂದನದಲ್ಲಿ'ಕೆಲವೊಂದು ರೀತಿಯಲ್ಲಿ ಹೊಸದಾಗಿದೆ.'ರಾಜಾಸಾಹೇಬ' ಎಂಬ ಕತೆಯಲ್ಲಿ ಹಳೆಯ ಕಾವು ಕೈ ಸುಡುವಷ್ಟು ಬಿಸಿಯಾಗಿದೆ. ವಿಲಾಸಿಯಾದ ಒಬ್ಬ ರಾಜಕಾರಣಿ ತನ್ನ ವಿಲಾಸಕ್ಕೆ ಅನುಕೂಲನಾಗಿದ್ದ, ಹಳೆಯ ಗೆಳೆಯನಾದ ಸಾಬಿ(ಶರೀಫ)ಯನ್ನು ಕೊನೆಗೆ ಅಲಕ್ಷಿಸುತ್ತಾನೆ, ಅವನ ಸ್ನೇಹಕ್ಕೆ ದ್ರೋಹ ಬಗೆಯು ತ್ತಾನೆ. ತ.ರಾ.ಸು. ಅವರ ತೀವ್ರತೆ ಬಿಸಿಯಾಗಿ ಪ್ರವಹಿಸುತ್ತಿದರೂ ಕತೆಯ ವಸ್ತು ತನ್ನ ವಿನ್ಯಾಸವನ್ನು ಕಳೆದುಕೊಂಡಿಲ್ಲ. ಮತ್ತು ಪಾತ್ರಗಳ ವ್ಯಕ್ತಿತ್ವವನ್ನು ಕಳೆದು ಕೊಂಡಿಲ್ಲ. ಈ ಸಂಗತಿ ತ.ರಾ.ಸು. ಅವರ ಕಲೆಯಲ್ಲಿಯ ಬೆಳವಣಿಗೆಯನ್ನು ಸೂಚಿಸುತ್ತದೆ. ಈ ಸಂಗ್ರಹದಲ್ಲಿಯ 'ಎಕ್ಸ' ಎಂಬ ಕತೆ ಕಮ್ಯುನಿಸ್ಟ ಪಾರ್ಟಿಯ ದಬ್ಬಾಳಿಕೆಗೆ ಸಿಕ್ಕ ತನ್ನ ವ್ಯಕ್ತಿತ್ವವನ್ನೇ ಹಾಳು ಮಾಡಿಕೊಂಡ ಒಬ್ಬ ಕನಸಂಗಾರನ ಅಂತರಂಗವನ್ನು ಬಿಡಿಸಿ ತೋರಿಸುತ್ತದೆ, ಕತೆಯ ತಂತ್ರ ನವ್ಯತೆಯ ಕಡೆಗೆ ಮುಖ ಮಾಡಿದೆ. ಆದರೆ ತ.ರಾ.ಸು. ಅವರ ಉತ್ಕಟತೆ ನೋವಿನ ಸೂಕ್ಷ್ಮತೆಯನ್ನು ಅಳಿಸಿ ಬಿಟ್ಟಿದೆ. ಅವರ ತಪ್ತವಾದ ಮನೋಧರ್ಮ ವಸ್ತುವನ್ನು ಬಹಳ ಬೇಗ ಗ್ರಹಿಸಿ ಅದಕ್ಕಿಂತ ಹೆಚ್ಚು ವೇಗದಿಂದ ಅದನ್ನು ಇಲ್ಲವಾಗಿಸಿಬಿಡುತ್ತದೆ.

ಪುಟ ೧೯೮

ತ.ರಾ.ಸು. ಮೊದಲು ಅ.ನ.ಕೃ.ರವರ ದಾರಿಯಲ್ಲಿಯೇ ಮುಂದುವರಿದರು. ಅವರ 'ಮಸಣದ ಹೂವು' ಹಾಗೂ 'ಬಿಡುಗಡೆಯ ಬೇಡಿ'ಗಳು ಅ.ನ.ಕೃ. ರೀತಿ

ಯನ್ನು ಹೆಚ್ಚು ಸ್ಪಷ್ಟವಾಗಿಸಿದವು. 'ಮಸಣದ ಹೂವು' ವೇಶ್ಯಾಸಮಸ್ಯೆಯನ್ನು ಚರ್ಚಿಸಿದರೆ, 'ಬಿಡುಗಡೆಯ ಬೇಡಿ'ಯಲ್ಲಿ ಸ್ತ್ರೀಸ್ವಾತಂತ್ರ್ಯವನ್ನು ಕುರಿತು ಚರ್ಚಿಸಲಾಗಿದೆ. ಹೆಣ್ಣು – ಜೀವನದ ಬೇಟೆ ಅನೇಕ ಕ್ಷೇತ್ರಗಳಲ್ಲಿ ನಡೆದದ್ದನ್ನು ತ.ರಾ.ಸು. ಅ.ನ.ಕೃ. ಗಿಂತ ಹೆಚ್ಚು ದಾರುಣವಾಗಿ ನಿರೂಪಿಸಿದರು. ಆದರೆ ಈ ಗುಣ ತ.ರಾ.ಸು. ಅವರಲ್ಲಿ ಅನಾವಶ್ಯಕವಾದ ಹಿಂಸೆಯಾಗಿ ಪರಿಣಮಿಸುತ್ತದೆ ಈ ಎರಡೂ ಕಮಂಬರಿಗಳಲ್ಲಿ ಈ ಹಿಂಸೆಯ ಅತಪ್ತವಾತಾವರಣ ದಪ್ಪವಾಗಿ ಹರಡಿಕೊಂಡಿದೆ. ತ.ರಾ.ಸು. ಅವರ ಶೈಲಿ ಅತಿಶಯೋಕ್ತಿಯ ರಾವುಗನ್ನಡಿಯಾಗಿ ವಿಷಮತೆಯನ್ನು ಅಸಹನೀಯವಾಗಿ ಮಾಡುತ್ತದೆ. 'ಚಂದವಳ್ಳಿಯ ತೋಟ'ವೊಂದೇ ಬಹುಶಃ ಅವರ ಎಲ್ಲ ಕಾದಂಬರಿಗಳಲ್ಲಿ ಶಾಂತವಾದ ಕೃತಿಯಾಗಿವೆ. ಇಲ್ಲದಿದ್ದರೆ ಉಳಿದೆಲ್ಲ ಕಡೆಗೆ ತ.ರಾ.ಸು. ಜೀವನವನ್ನು ರೊಚ್ಚಿನಿಂದ ಕಂಡಿದ್ದಾರೆ 'ನಾಗರ ಹಾವು', 'ಎರಡು ಗಂಡು ಒಂದು ಹೆಣ್ಣು' ಹಾಗೂ 'ಸರ್ಪ ಮತ್ಸರ' ಈ ಮೂರು ಸಂಪುಟಗಳಲ್ಲಿ ಪ್ರಕಟವಾದ ಕೃತಿ ಅವರ ಎಲ್ಲ ಗುಣಗಳನ್ನೂ ಪ್ರತಿಬಿಂಬಿಸುತ್ತದೆ. ಅವರ ನಾಯಕನಾದ ರಾಮಾಚಾರಿ ರಾಜಸಗುಣವೇ ಪ್ರಧಾನವಾಗಿ ಉಳ್ಳ ಹುಡುಗ. ಅವನ ತುಂಟತನ ಕ್ರಮೇಣ ಕ್ರೌರ್ಯವಾಗಿ ಚಿತ್ರಿಸಿದ್ದಾರೆ. ಈ ಸ್ವಭಾವಕ್ಕನುಗುಣವಾಗಿ ತ.ರಾ.ಸು. ಅವರ ಕೃತಿಗಳನ್ನು ಪ್ರತಿಕ್ರಿಯೆಗಳನ್ನು ವಾಸ್ತವವಾಗಿ ಚಿತ್ರಿಸಿದ್ದಾರೆ. ಅವನ ಉತ್ಕಟತೆಗೆ ಹಿಂಸೆಯ ಗುಣವೇ ಮೂಲವಾಗಿದೆ. ಆದರೆ ಒಳ್ಳೆಯ ಸಮಯಗಳಲ್ಲಿ ಅದು ಉದಾತ್ತವಾಗುವುದೂ ಉಂಟು. ಈ ಉತ್ಕಟತೆಯನ್ನು ಕಡಿಮೆ ಮಾಡಿ ತ.ರಾ.ಸು., ಅವನ ಪಾತ್ರದ ಸೂಕ್ಷ್ಮತೆಗಳನ್ನು ಬಣ್ಣಿಸಿದ್ದರೆ ಕಾದಂಬರಿ ಅಪೂರ್ವವಾಗುತ್ತಿತ್ತು. ಆದರೆ ತ.ರಾ.ಸು. ಅವರಲ್ಲಿ ವೈಚಾರಿಕತೆ ಭಾವನೆಯಷ್ಟೇ ತೀವ್ರವಾಗಿ ಬಿಡುತ್ತದೆ. ಈ ಕಾದಂಬರಿಯಲ್ಲಿ ತ.ರಾ.ಸು., ಅ.ನ.ಕೃ. ಅವರಲ್ಲಿ ಕಾಣದ ಪಾತ್ರ ರಚನೆ ಬೆಳವಣಿಗೆಯನ್ನೂ ತಂದರು. ರಾಮಾಚಾರಿಯ ಜೊತೆಗೆ ಅವನ ತಂದೆಯಾದ ಮಧ್ವರಮಣಾಚಾರ್ಯರು, ಅಲಮೇಲು, ವರದರಾಜು, ಮಾರ್ಗರೆಟ್, ಚಾಮಯ್ಯ ಮೇಷ್ಟರು ಇವರ ಪಾತ್ರಗಳು ಜೀವಂತ ಸತ್ವದಿಂದ ತುಂಬಿವೆ. ಆದರೆ ತ.ರಾ.ಸು. ಈ ಜೀವಂತತನವನ್ನು ಅತಿಶಯೋಕ್ತಿಯ ಕಾವಿನಲ್ಲಿ ಕರಗಿಸಿಬಿಡುತ್ತಾರೆ. ಅ.ನ.ಕೃ. ಸಂಪ್ರದಾಯದ ಭಾವನಾವಶತೆಯು ಇವರನ್ನೂ ಬಿಟ್ಟಿಲ್ಲ.

ಈ ದೃಷ್ಟಿಯಿಂದ ನೋಡಿದಾಗ ಅವರ 'ಚಂದನದ ಗೊಂಬೆ' ಬಹಳ ತೂಕವುಳ್ಳ ಕೃತಿಯಾಗಿದೆ. ತ.ರಾ.ಸು. ಇಲ್ಲಿ ಜೀವನವನ್ನು ತಾಳ್ಮೆಯಿಂದ ಒಳಹೊಕ್ಕು ನೋಡಿ ರೂಪಿಸಿದ್ದಾರೆ. ಇಸ್ಪೇಟಿನಾಟ ಆಡುತ್ತಿರುವಾಗ ನಡುವೆ ಎದ್ದು ಹೋದವರಂತೆ ತನ್ನ ಗಂಡ ಸತ್ತು ಹೋದ ಮೇಲೆ ರತ್ನಾ ಅನಾಥೆಯಾಗುತ್ತಾಳೆ. ರತ್ನಾಳ ಗಂಡ ಔದಾರ್ಯದ ಮುಚ್ಚಿನಲ್ಲಿ ಹೆಂಡಿರು – ಮಕ್ಕಳಿಗಾಗಿ ಏನೂ ಸಂಗ್ರಹಿಸಿರುವುದಿಲ್ಲ. ಇಂಥ ಆಪತ್ಕಾಲಕ್ಕೆ ಗಂಡನ ಸ್ನೇಹಿತ ಅಣ್ಣನಂತೆ ಬಂದು ನೆರವಾಗುತ್ತಾನೆ. ರತ್ನಾ, ರಾಘಣ್ಣರ ಉದಾತ್ತ ಸಂಬಂಧವಲ್ಲಿಯೂ ವಾಸ್ತವತೆಯ ಹದ ತಪ್ಪುವುದಿಲ್ಲ

ವೆಂಬುದೇ ಈ ಕಾದಂಬರಿಯ ವೈಶಿಷ್ಟ್ಯವಾಗಿದೆ. ಯಾವುದೋ ಹಳೆಯ ಸಾಲ ಮುಖ ಬದಲಾದೊಡನೆ ಅವನ ಸಂಬಂಧಿಕರ ಜೀವನವನ್ನು ಸುಖಮಯವನ್ನಾಗಿ ಮಾಡುವದೆಂಬ ಕಟು – ಸತ್ಯ ಈ ಕಾದಂಬರಿಗೆ ತಳಪದಿಯಾಗಿವೆ. ರತ್ನಳ ಗಂಡನ ಸಾಲ ಒಮ್ಮೆ ಹಿಂದಿನ ಸೇಡಾಗಿ, ಇನ್ನೊಮ್ಮೆ ಸ್ವಾರ್ಥಸಾಧನೆಯಾಗಿ ಅವಳನ್ನು ಹೆದರಿಸುತ್ತದೆ. ಋಣಸಂಬಂಧ, ಸಾಮಾಜಿಕ ನೀತಿ, ವ್ಯವಹಾರದ ದುಷ್ಟತನ ಸಹಾನುಭೂತಿಯ ನಿರ್ವ್ಯಾಜತೆ ಇವುಗಳಿಗೆ ಮನುಷ್ಯ – ಜೀವನದ ರಕ್ತ ಸಂಬಂಧ ವನ್ನು ಯೋಚಿಸಿ, ಅವುಗಳ ಸಂಕೀರ್ಣತೆಯನ್ನು ತೋರಿಸುವುದರಿಂದ ಕಾದಂಬರಿ ಅರ್ಥಪೂರ್ಣವಾಗಿದೆ. ಅದಕ್ಕೆ ತಕ್ಕಂತೆ ವಾತಾವರಣದ ನಿರ್ಮಾಣವಿದೆ. ಇಸ್ಪೇಟಾಡುವ ಗುಂಪಿನ ಮಾತುಕತೆಗಳು, ಈರವ್ವನ ಅಂಗಡಿಯಲ್ಲಿ ಮಿಣುಕುದೀಪದ ಕತ್ತಲೆಯ ಮರೆಯಲ್ಲಿ ಸುಳಿದಾಡುವ ರಹಸ್ಯ ಈ ವಿವರಗಳು ಧ್ವನಿಪೂರ್ಣವಾಗಿವೆ. ಇಸ್ಪೇಟಿನ ಮೇಳವಂತೂ ಗೀತದಲ್ಲಿಯ ಪಲ್ಲವಿಯಂತೆ ತಿರಂತಿರುಗಿ ಬಂದು, ಕೃತಿಯ ಬಂಧವನ್ನು ಕಾವ್ಯದ ಮಟ್ಟಕ್ಕೇರಿಸಿದೆ.

ಉತ್ಕಟತೆ ತ.ರಾ.ಸು. ಸಾಹಿತ್ಯದ ಅಂಗದಲ್ಲಿ ರಕ್ತದಂತೆ ಚಲಿಸುತ್ತದೆ. ಈ ಶಕ್ತಿ ಒಳ್ಳೆಯದೂ ಹೌದು, ಕೆಟ್ಟದೂ ಹೌದು. ಇದೇ ಗುಣ ಅವರ ಕತೆಗೆ ವೇಗವನ್ನೂ ಪಾತ್ರಗಳಿಗೆ ಜೀವಂತತನವನ್ನೂ ತಂದು ಕೊಟ್ಟಿದೆ. ಅವರ ಕತೆಗಳನ್ನು ಓದುಗರು ಬಾಯಿ ತೆರೆದೇ ಓದಬೇಕಾಗುತ್ತದೆ. ತ.ರಾ.ಸು. ಜೀವನವನ್ನು ಕಂಡೊಡನೆ ರಣ ಗರ್ಜನೆಯನ್ನು ಕೇಳಿದ ಯುದ್ಧದ ಕುದುರೆಯಂತೆ ಉತ್ಸುಕರಾಗಿ ಬಿಡುತ್ತಾರೆ. ಆದರೆ ಸಮಸ್ಯೆ ಲಘುವಾಗಿದ್ದಾಗ ಈ ಗುಣ ಹಿಂಸೆಯಾಗಿ ತೋರುತ್ತದೆ. ಪ್ರಣಯದ ಸನ್ನಿವೇಶಗಳಲ್ಲಿ ಈ ಸತ್ಯ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಅವರ ಎಲ್ಲ ಪಾತ್ರಗಳೂ ಪ್ರಣಯಕ್ಕಾಗಿ ಕಾತರದಿಂದ ಕಂದಿಯುತ್ತವೆ. ವಾಸ್ತವತೆಯನ್ನು ಚಿತ್ರಿಸುವ ಲವಲವಿಕೆಯಲ್ಲಿ ಅದು ಹಿಂಸೆಯಾಗುತ್ತದೆಂಬುದನ್ನು ಅವರು ಮರೆತು ಬಿಡುತ್ತಾರೆ. ಅಂಥದೊಂದು ಮನುಷ್ಯಮಾದರಿಯನ್ನು ವರ್ಣಿಸಿದಾಗ ಈ ಗುಣ ಕ್ಷಮ್ಯವಾದೀತು. ಆದರೆ ಲೇಖಕನ ವೈಯಕ್ತಿಕ ಶೈಲಿಯಾದರೆ ? ಅ.ನ.ಕೃ. ಅವರಂತೆ ತ.ರಾ.ಸು. ತಮ್ಮ ಸೃಷ್ಟಿಯಲ್ಲಿ ಹಿಂದು ಮುಂದು ನೋಡದೆ ತಾದಾತ್ಮ್ಯವನ್ನು ಹೊಂದಿಬಿಡುತ್ತಾರೆ. ಇದರಿಂದ ವೈಯಕ್ತಿಕ ಆವೇಶದ ಸಂಕುಚಿತ ಕ್ಷೇತ್ರದಲ್ಲಿ ಪಾತ್ರ ಗಳು ಜೀವಿಸಬೇಕಾಗುತ್ತದೆ. ಇಂದಿಗೂ ತ.ರಾ.ಸು. ಅವರ ಕಾದಂಬರಿಗಳಿಗೆ ಈ ದೋಷ ಬಿಟ್ಟಿಲ್ಲ.

ಪುಟ:- ೨೩೬

ತ.ರಾ.ಸು. ನಿರಂಜನ, ಬಸವರಾಜ ಕಟ್ಟೀಮನಿಯವರಂಥ ಲೇಖಕರ ಕೃತಿಗಳು ನಿಶ್ಚಯವಾಗಿ ಬೇರೆದಾರಿಯನ್ನು ಹಿಡಿದವು. ಜೀವನದಲ್ಲಿಯ ದುಗುಡ ದುಮ್ಮಾನ ಗಳನ್ನು ತೀವ್ರವಾಗಿ ರೊಚ್ಚಿನಿಂದ ಚಿತ್ರಿಸಿದರು. ಕಟ್ಟೀಮನಿಯವರಲ್ಲಿ ಆ ರೊಚ್ಚು ತಣ್ಣಗಿನ ರೋಷವಾಗಿವೆ. 'ಜ್ವಾಲಾಮುಖಿಯ ಮೇಲೆ', 'ಬೀದಿಯಲ್ಲಿ ಬಿದ್ದವಳು'

ಮೊದಲಾದ ಕೃತಿಗಳಲ್ಲಿ ಇನ್ನೂ ಕುದಿಯುತ್ತಿರುವ ರೋಷವಿದೆ. ಮುಂದೆ ಬರ ಬರುತ್ತ ಅದು ತಣ್ಣಗಾದರೂ ಅವನ ಜೀವನ ದೃಷ್ಟಿಯನ್ನೇ ಬದಲಿಸಿಬಿಟ್ಟಿತು. ಕಾದಂಬರಿಯನ್ನು ಬರೆದು ಜೀವನದ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಭಾವನೆ ಅವರ ಎಷ್ಟೋ ಕೃತಿಗಳಿಗೆ ಮೂಲವಾದಂತೆ ಕಾಣುತ್ತದೆ. ಅತಿಯಾದ ಆದರ್ಶವಾದದಂತೆ ಅತಿಯಾದ ದೋಷವೂ ಕಾದಂಬರಿಯ ಕಲಾತ್ಮಕತೆಯನ್ನು ನುಂಗುತ್ತದೆ. ಯಾವುದೇ ಅನುಭವ ಇದ್ದಕ್ಕಿದ್ದಂತೆ ಹಸಿಯಾಗಿ ಬಂದು ಬಿಟ್ಟರೆ ಸಾಹಿತ್ಯಕ್ಕೆ ಮಾರಕವಾಗಬಲ್ಲದು. ರೋಷ ಕೂಡ ಸಾಹಿತ್ಯದ ಅನುಭವವಾಗಬಲ್ಲದು, ವಿಡಂಬನ ಅದರ ಅಭಿವ್ಯಕ್ತಿಯಾಗಬಲ್ಲದು. ಡ್ರ್ಯಾಯ್‌ಡನ್ ಹಾಗೂ ಪೋಪರ ಕತೆಗಳಲ್ಲಿ ಸ್ವಿಫ್ಟ್, ಬಟ್ಲರ್, ಆರ್ವೆಲ್ಲರ ಕಾದಂಬರಿಗಳಲ್ಲಿ ಈ ಸತ್ಯವನ್ನು ಮನಗಾಣಬಹುದಾಗಿದೆ. ನಮ್ಮಲ್ಲಿಯೇ ಕಾರಂತ ಹಾಗೂ ಶ್ರೀರಂಗರು ಈ ಮಾದರಿಯ ಕೃತಿಗಳನ್ನು ಬರೆದಿದ್ದಾರೆ. ಅವರಲ್ಲಿ ಅನುಭವ ಸಾಹಿತ್ಯವಾಗಿ ಪರಿಣಮಿಸಿದೆ.

ಪುಟ:- ೨೪೮

ತ.ರಾ.ಸು. ಚಿತ್ರದುರ್ಗದ ಇತಿಹಾಸವನ್ನವಲಂಬಿಸಿ ಐದಾರು ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಮೊದಲ ಕಾದಂಬರಿಯಾದ "ಹಂಸಗೀತೆ" ಆ ಕಾಲದ ಒಬ್ಬ ಸಂಗೀತಗಾರನ ಕತೆಯಾಗಿದೆ. ಕೇಂದ್ರವ್ಯಕ್ತಿಯಾದ ವೆಂಕಟಸುಬ್ಬಯ್ಯನವರ ಮನೋರಂಜಕವಾದ ಆ ಕಾಲದ ಐತಿಹಾಸಿಕ ವಿವರಗಳು ಒಂದು ಕತೆಗೆ ಜೀವಕಳೆಯನ್ನು ಕೊಡುತ್ತವೆ. ಆದರೆ ತ.ರಾ.ಸು. ಅವರ ಉತ್ಕಟತೆಯಿಂದ ಕಥನಕ್ರಮ ಪೊಯ್ದಾಡಿದಂತಾಗಿದೆ. ಅವರ ಮುಂದಿನ ಕಾದಂಬರಿಗಳಾದ 'ಕಂಬನಿಯ ಕುಯಿಲು' 'ರಕ್ತರಾತ್ರಿ', 'ತಿರುಗುಬಾಣ', 'ಹೊಸಹಗಲು' ಮೊದಲಾದವುಗಳಲ್ಲಿ ನೇರವಾಗಿ ಚಿತ್ರದುರ್ಗದ ಇತಿಹಾಸವನ್ನೇ ಬಳಸಿಕೊಳ್ಳಲಾಗಿದೆ. ಚಿತ್ರದುರ್ಗದ ಮದಕರಿ ನಾಯಕರ ವಂಶದ ಆಗು-ಹೋಗುಗಳು, ದೈವ-ದುರ್ದೈವಗಳು ಉದ್ದಕ್ಕೂ ಹಬ್ಬಿಕೊಂಡಿವೆ. ವರ್ಣನೆ, ವಾತಾವರಣ, ಪಾತ್ರಸೃಷ್ಟಿಗಳಲ್ಲಿ ತ.ರಾ.ಸು. ವೀರ ಜೀವನದ ರಕ್ತವನ್ನು ಪರಿಯಿಸಿದ್ದಾರೆ. ಆ ಕಾಲದ ವರ್ಣಪ್ರಪಂಚ ತನ್ನೆಲ್ಲ ವಿವರಗಳೊಂದಿಗೆ ಪ್ರತ್ಯಕ್ಷವಾಗುತ್ತವೆ. ಚಿತ್ರದುರ್ಗದ ಕೋಟೆ–ಕೊತ್ತಳಗಳು, ಅರಮನೆ–ದೇವಾಲಯಗಳು, ವೈಭವದಿಂದ ತುಂಬಿದ ಬೀದಿಗಳು ಮಹಾಕಾವ್ಯದಲ್ಲಿಯ ವೀರರಂತಿರುವ ಯೋಧರು, ನಾಯಕರು, ನಾಗತಿಯರು ಸಿದ್ಧರ ಶಾಪಾನುಗ್ರಹಗಳಿಗೆ ಈಡಾದ ದುರ್ಗದ ಸಿಂಹಾಸನ, ಕ್ಷಾತ್ರ, ರಕ್ತಪಿಪಾಸೆ, ಸಾಮಾನ್ಯ ಜನತೆಯಲ್ಲಿಯೂ ಕಳೆಗೊಳ್ಳುವ ದುರ್ಗದ ಅಭಿಮಾನ ಇವೆಲ್ಲ ವರ್ಣರಂಜಿತವಾಗಿ ಮೂಡಿ ಬಂದಿವೆ. ಈ ವರ್ಣವೈಭವ ನಿಜವಾಗಿಯೂ ಕಣ್ಣು ಕುಕ್ಕಿಸುವಂಥದು. ಆದರೆ ಈ ಕಾದಂಬರಿಗಳಲ್ಲಿ ಆಗಾಗ ಬರುವ ವಿವರಣೆಗಳು ಸಮಕಾಲೀನ ಮನೋವೃತ್ತಿಯ ವಿಮರ್ಶೆಗಳೆಂದೆನಿಸುತ್ತವೆ. ಸಮಕಾಲೀನತೆಯ ಪ್ರಜ್ಞೆ ಬರಬಾರದೆಂದಲ್ಲ, ಅದು ಅವಶ್ಯ

ವಾಗಿದೆ. ಆದರೆ ಆ ಪ್ರಜ್ಞೆ ಲೇಖಕನ ದೃಷ್ಟಿಕೋನದಲ್ಲಿರಬೇಕೇ ಹೊರತು ಆ ಕಾಲದ ವ್ಯಕ್ತಿಗಳ ಸ್ವಭಾವದಲ್ಲಲ್ಲ. ಉದಾ : 'ರಕ್ತರಾತ್ರಿ'ಯಲ್ಲಿ ಲಿಂಗಣ್ಣನಾಯಕನ ಪಾಶ್ಚಾತ್ತಾಪದ ಒಳಗುದಿ ಹ್ಯಾಮ್ಲೆಟ್ ಪಾತ್ರವನ್ನು ನೆನಪಿಗೆ ತಂದುಬಿಡುತ್ತದೆ. ಅದೇ ಮುರುಘರಾಜೇಂದ್ರ ಸ್ವಾಮಿಗಳ ಭೂತದಯೆ ಪರಕೀಯವೆಂದೆನಿಸುವುದಿಲ್ಲ. ಇಂಥ ಕೆಲವು ದೋಷಗಳನ್ನು ಬಿಟ್ಟರೆ ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳು ಸುಂದರವಾಗಿವೆ. ಇಷ್ಟೇ, ಕೊನೆಗೆ ಬಂದ ಕಾದಂಬರಿಗಳಲ್ಲಿ ಸಂಗತಿಗಳು ಪುನರುಕ್ತವಾಗುವುದರಿಂದ ಅವು ಅಷ್ಟೊಂದು ಪ್ರಭಾವಶಾಲಿಯಾಗಿಲ್ಲ. "Alexander Dumas"ನ ಕಾದಂಬರಿಗಳ ಗತಿಯೇ ಇದಕ್ಕೂ ಬಂದಿದೆ.

(ಸಾಹಿತ್ಯ ಮತ್ತು ಯುಗಧರ್ಮದಿಂದ)

ಹೊಸಗನ್ನಡ ಸಾಹಿತ್ಯ

—ಎಲ್. ಎಸ್. ಶೇಷಗಿರಿ ರಾವ್

ಬಸವರಾಜ ಕಟ್ಟೀಮನಿ, ತ.ರಾ.ಸುಬ್ಬರಾವ್, ನಿರಂಜನ, ಅರ್ಚಿಕ ವೆಂಕಟೇಶ, ನಾಡಿಗೇರ ಕೃಷ್ಣರಾವ್, ಕುಮಾರ ವೆಂಕಣ್ಣ ಎಲ್ಲರೂ ಪ್ರಗತಿಶೀಲ ಮಾರ್ಗದಲ್ಲಿ ಬರೆದವರು. ಇವರಲ್ಲಿ ಕಲೆಗಾರಿಕೆ ತ.ರಾ.ಸು. ಅವರದು. ಚಿತ್ರಮಯವಾದ ಭಾಷೆ, ಕಣ್ಣಿಗೆ ಕಟ್ಟುವಂತೆ ನೋಟವನ್ನಾಗಲಿ ವ್ಯಕ್ತಿಗಳನ್ನಾಗಲಿ ಅವರು ವರ್ಣಿಸಬಲ್ಲರು. ಅವರ ಪ್ರಾರಂಭದ ಕಾದಂಬರಿಗಳಲ್ಲಿ ಆವೇಶ ಹೆಚ್ಚು. ಬರೆಹಕ್ಕೆ ಸಕ್ಕರೆ ಅಂಟಿದಂತೆ ಭಾವುಕತೆ ಅಂಟುತ್ತದೆ. ಆದರೆ ಅವರ ಪ್ರಾರಂಭದ ಕಾದಂಬರಿಗಳಾದ "ಮುಂಜಾವಿನಿಂದ ಮುಂಜಾವು' ತೋರಿಸುವ ಹಾಗೆ, ಒಂದು ಜೀವನ ವಿಧಾನವನ್ನು ಇವರು ಜೀವಂತವಾಗಿ ನಿರೂಪಿಸಬಲ್ಲರು. ಸಣ್ಣ ಅಂಗಡಿಯ ಮಾಲೀಕ, ಕೂಲಿಯವನು, ಅಚ್ಚುಕೂಟದ ಕೆಲಸಗಾರ ಪತ್ರಿಕೋದ್ಯಮಿ ಯಾರ ಬಾಳನ್ನಾದರೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲರು. 'ಪುರುಷಾವತಾರ' ದಂತಹ ಕಾದಂಬರಿಯ ದೋಷಗಳು ಏನೇ ಇರಲಿ, ಭಿಕ್ಷುಕರ ಬಾಳನ್ನು ಕರಳು ಮಿಡಿಯುವಂತೆ ಅದು ಚಿತ್ರಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ತ.ರಾ.ಸು. ಭಾಷೆಯ ಬಳಕೆಯಲ್ಲಿ ಮಾತ್ರ ಕಲೆಗಾರರಲ್ಲ. ಕಾದಂಬರಿಯ ತಂತ್ರದಲ್ಲಿಯೂ ಕಲೆಗಾರರು ಇಡೀ ಕಾದಂಬರಿಯ ಕ್ರಿಯೆ ಒಂದು ಬೆಳಗಿನಿಂದ ಮರು ಬೆಳಗಿನಲ್ಲಿ ಅಡಕಮಾಡಬಲ್ಲರು, ಇಷ್ಟೇ ಅವಧಿಯಲ್ಲಿ ಒಂದು ಇಡೀ ಪಂಗಡದ ಕಷ್ಟಕಾರ್ಪಣ್ಯ ಕುದಿತಗಳನ್ನು ಚಿತ್ರಿಸಬಲ್ಲರು. 'ಪ್ರಜ್ಞಾ ಪ್ರವಾಹತಂತ್ರ' ವನ್ನು ಕನ್ನಡದಲ್ಲಿ ಮೊಟ್ಟ ಮೊದಲ ಬಾರಿಗೆ ಗಮನಾರ್ಹವಾಗಿ ಬಳಸಿದವರು ತ.ರಾ.ಸು. 'ಬಿಡುಗಡೆಯ ಬೇಡಿ' ಕಾದಂಬರಿಯಲ್ಲಿ. (ನಮ್ಮ ಜೀವನದ ಅನುಭವ ಇದು : ಮನಸ್ಸಿನಲ್ಲಿ ವಿಚಾರಗಳು, ಸ್ಪಷ್ಟವಾದ ತಾರ್ಕಿಕ ಸಂಬಂಧವಿಲ್ಲದೆ, ಒಂದನ್ನೊಂದು ಬೆನ್ನಟ್ಟಿಕೊಂಡು ಬರುತ್ತವೆ. ಸಾಮಾನ್ಯವಾಗಿ ಕಾದಂಬರಿಕಾರ ಪಾತ್ರಗಳ ಮನಸ್ಸಿನ ಯೋಚನೆಗಳನ್ನು ತರ್ಕಬದ್ಧವಾಗಿ ನಿರೂಪಿಸುತ್ತಾನೆ. ಪ್ರಜ್ಞಾ ಪ್ರವಾಹ ತಂತ್ರದಲ್ಲಿ ಕಾದಂಬರಿಕಾರ ಮನಸ್ಸಿನ ಯೋಚನಾಲಹರಿಯನ್ನು ಹಾಗೆಯೇ ಮಾತಿನಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಾನೆ. ಇಲ್ಲಿಯೂ ಆಯ್ಕೆ ಅನಿವಾರ್ಯ. ಆದರೆ ಸಾಂಪ್ರದಾಯಿಕ ಕಾದಂಬರಿಗಿಂತ ಈ ಬಗೆಯ ಕಾದಂಬರಿ ಮನಸ್ಸಿನ ವ್ಯಾಪಾರವನ್ನು ಹೆಚ್ಚು ವಾಸ್ತವಿಕವಾಗಿ ನಮ್ಮ ಅನುಭವಕ್ಕೆ ತಂದುಕೊಡುತ್ತದೆ.) ಈ ಕಾದಂಬರಿಯಲ್ಲಿ ಬಿಡುಗಡೆಯನ್ನು ಬಯಸುವ ಹೆಣ್ಣಿನ ಹೋರಾಟ ಹೊರೆಗಳು ನಿರೂಪಿತವಾಗುತ್ತವೆ. (ಇಲ್ಲಿ 'ಬೇಡಿ' ಎಂಬುದಕ್ಕೆ ಎರಡು ಅರ್ಥಗಳುಂಟು : ಬೇಡುತ್ತಾ ಎಂಬುದೊಂದು, ಕೈಕೋಳ ಎಂಬುದೊಂದು.) 'ಹಂಸಗೀತೆ' ಸಣ್ಣ ಸರಪಳಿಯಂತೆ ಕಂಡರೂ ಸುತ್ತಿ ಸುತ್ತಿ ಒಂದೇ ಕೇಂದ್ರ ಬಿಂದುವಿನತ್ತ ಮುಖ ಮಾಡುತ್ತದೆ.

ನಾಗರಮುರಿ

— ಎಸ್. ಚನ್ನಪ್ಪ, ಎಂ. ಎ.

ಪ್ರಸಿದ್ಧ ಕಾದಂಬರಿಕಾರರಾದ ತ.ರಾ.ಸು. ಅವರು ಕಾದಂಬರಿಗಳ ಜತೆಗೆ ಸಣ್ಣಕತೆ, ನಾಟಕ, ವ್ಯಕ್ತಿ ಚಿತ್ರಗಳನ್ನು ಬರೆದಿರುವರಲ್ಲದೆ, ಹೊಸದಾಗಿ ಓದಂ ಕಲಿತ ವಯಸ್ಕರಿಗೆ ಉಪಯುಕ್ತವಾದ ಸಾಹಿತ್ಯವನ್ನೂ ರಚಿಸಿದ್ದಾರೆ. ಇಂಥ ಸಾಹಿತ್ಯದಲ್ಲಿ 'ನಾಗರಮುರಿ' ಎಂಬುದು 28 ಪುಟಗಳ ಒಂದು ಪುಟ್ಟ ಪುಸ್ತಕ; ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಿಂದ ಪ್ರಕಟವಾಗಿದೆ.

'ನಾಗರಮುರಿ' ಒಂದು ಕತ್ತಿಯ ಹೆಸರು. ಅದು ಕೆಳದಿ ರಾಜಮನೆತನದ ಪೂರ್ವಿಕರಿಗೆ ದೊರೆತ ರೀತಿ, ಅದರ ಬಲದಿಂದ ಸಾಮಾನ್ಯ ರೈತಮನೆತನದವರಾಗಿದ್ದ ಅವರು ರಾಜ್ಯವನ್ನು ಕಟ್ಟಿ ಆಳಿದ್ದು, ಈ ಮನೆತನದ ದೊಡ್ಡ ಸಂಕಣ್ಣನಾಯಕ ದೆಹಲಿಯಲ್ಲಿ ಅಂಕುಶಖಾನ ಎಂಬ ಬಲಾಢ್ಯನನ್ನು ಸೋಲಿಸಿ, ಕರ್ನಾಟಕದ ಕೀರ್ತಿಯನ್ನು ಮೆರೆದಿದ್ದು ಈ ಪುಸ್ತಕದ ವಸ್ತು.

ಕರ್ನಾಟಕವನ್ನು ಆಳಿದ ಹೆಸರಾಂತ ಮನೆತನಗಳಲ್ಲಿ ಕೆಳದಿ ಮನೆತನವೂ ಒಂದು. ಪೂರ್ವದಲ್ಲಿ ಸಾಮಾನ್ಯ ಮನೆತನದವರಾಗಿದ್ದ ಇವರು ದೈವಭಕ್ತರು, ಕಷ್ಟಜೀವಿಗಳೂ ಆಗಿದ್ದರು. ಚೌಡಪ್ಪನಾಯಕರು ಕೆಳದಿ ಮನೆತನದ ಮೊದಲ ತಲೆ. ಕೆಳದಿಯ ಸಮೀಪದ 'ಹಳ್ಳಿಯ ಬಯಲು' ಇವರ ಮೂಲ ಸ್ಥಳ. ಎಂದಿನಂತೆ ಒಂದು ದಿನ ಚೌಡಪ್ಪನಾಯಕರು ಹೊತ್ತಿಗೆ ಎದ್ದು, ಗದ್ದೆಯ ಕೆಲಸಕ್ಕೆ ಹೋದರು. ಮಧ್ಯಾಹ್ನದ ವರೆಗೂ ಒಂದೇ ಸಮನೆ ದುಡಿದು ದಣಿದ ಚೌಡಪ್ಪನಾಯಕರು ಗದ್ದೆಯ ಸಮೀಪದಲ್ಲಿಯೇ ಇದ್ದ ಮಾವಿನ ಮರದ ತಣ್ಣನೆಯ ನೆರಳಿನಲ್ಲಿ ವಿಶ್ರಮಿಸಿಕೊಳ್ಳಲೆಂದು ಮಲಗಿದವರು, ಚೆನ್ನಾಗಿ ನಿದ್ದೆ ಹೋದರು. ಗದ್ದೆ ಕೆಲಸಕ್ಕೆ ಹೋದ ಮಗ, ಮಧ್ಯಾಹ್ನವಾದರೂ ಮನೆಗೆ ಬರದಿದ್ದರಿಂದ ಕಾತರಗೊಂಡ ತಾಯಿ ಬಸವಾಂಬೆ ಊಟ ಹೊತ್ತುಕೊಂಡು ಗದ್ದೆಯ ಬಳಿಗೆ ಹೋದಳು. ಮಾವಿನ ಮರದಡಿಯಲ್ಲಿ ಮಲಗಿದ್ದ ಮಗನನ್ನು ಕಂಡ ತಾಯಿಗೆ ಸಂತೋಷವಾಯಿತಾದರೂ ಅವಳು ಕಂಡ ಇನ್ನೊಂದು ದೃಶ್ಯ ಮೈ ನಡುಗಿಸಿತು. ಮರದಡಿ ಮಲಗಿದ್ದ ಮಗನ ತಲೆಯ ಸಮೀಪದಲ್ಲಿಯೇ ಘಟಸರ್ಪವೊಂದು ಹೆಡೆ ಬಿಚ್ಚಿಕೊಂಡು ಕುಳಿತಿದೆ. ಆಕೆಗೆ ಏನೂ ಮಾಡಲು ತೋಚದೆ, ಸುಮ್ಮನೆ ನಿಂತುಬಿಟ್ಟಳು. ಅಷ್ಟರಲ್ಲಿ ಆ ಘಟಸರ್ಪ ತನ್ನ ಹೆಡೆ ಮುಚ್ಚಿ, ಸ್ವಲ್ಪ ದೂರ ಹರಿದು ಹೋಯಿತು. ಕೂಡಲೆ ಬಸವಾಂಬೆ ಮಗನ ಬಳಿಗೆ ಹೋಗಿ, ಅವನನ್ನು ಎಚ್ಚರಿಸಿ, ತಾನು ಕಂಡದ್ದನ್ನು ತಿಳಿಸಿದಳು. ಅದನ್ನು ಕೇಳಿ ಚೌಡಪ್ಪನಾಯಕರು ದಿಗಿಲುಗೊಂಡರು. ಸ್ವಲ್ಪ ದೂರ ಸರಿದು ಹೋದ ಹಾವು ಮುಂದಕ್ಕೆ ಹೋಗದೆ ಸಪ್ಪಳ ಮಾಡಿ ಅವರಿಬ್ಬರ ಗಮನವನ್ನು ತನ್ನೆಡೆಗೆ ಸೆಳೆದು

ಕೊಂಡು, ತನ್ನ ಹೆಡೆಯನ್ನು ಮೂರುನಾಲ್ಕು ಸಾರಿ ಗದ್ದೆಯ ಒಂದು ಸ್ಥಳದಲ್ಲಿ ಅಪ್ಪಳಿಸಿ ಮರೆಯಾಯಿತು. ಮನುಷ್ಯನನ್ನು ಕಂಡಕೂಡಲೆ ಕಡಿದು ಕೊಲ್ಲುವ, ಇಲ್ಲವೆ ಮಿಂಚಿನಂತೆ ಮರೆಯಾಗುವ ಸರ್ಪದ ಈ ವಿಚಿತ್ರ ವರ್ತನೆಯನ್ನು ಕಂಡು ತಾಯಿ-ಮಗ ಇಬ್ಬರೂ ಅಚ್ಚರಿಗೊಂಡರು. ಇದರಲ್ಲೇನೋ ರಹಸ್ಯವಿದೆ ಎಂದು ಭಾವಿಸಿಕೊಂಡರು. ಹಾವು ಗದ್ದೆಯಲ್ಲಿ ತೋರಿಸಿದ ಸ್ಥಳದಲ್ಲಿ ಗುರ್ತಿನ ಕಲ್ಲನ್ನು ಇಟ್ಟು, ಅವರಿಬ್ಬರೂ ಮನೆಗೆ ಹೋದರು. ಮಾರನೆಯ ದಿನ ಚೌಡಪ್ಪನಾಯಕರು ಆ ಗುರುತಿನ ಸ್ಥಳವನ್ನು ತೋಡಿಸಿ ನೋಡಿದಾಗ, ಸಂಪತ್ತು ತುಂಬಿ ತುಳುಕುತ್ತಿದ್ದ ಒಂದು ದೊಡ್ಡ ಕಬ್ಬಿಣದ ಕೊಪ್ಪರಿಗೆಯನ್ನು, ಅದರಲ್ಲಿ ಮಿಂಚಿನಂತೆ ಹೊಳೆಯುತ್ತಿದ್ದ ಹರಿತವಾದ ಒಂದು ಕತ್ತಿಯನ್ನೂ ಕಂಡರು. ಸರ್ಪದ ಕಾರಣದಿಂದ ಸಿಕ್ಕಿದ ಆ ಕತ್ತಿಗೆ 'ನಾಗರಮುರಿ' ಎಂದೇ ಹೆಸರಿಟ್ಟರು. ಆ ಸಂಪತ್ತು ಮತ್ತು ಕತ್ತಿಯ ಬಲದಿಂದ ಕೆಳದಿಯ ಆ ರೈತರು ಸಾಮ್ರಾಜ್ಯವೊಂದನ್ನು ಕಟ್ಟಿ ಆಳಲು ಸಾಧ್ಯವಾಯಿತು. ಆ ಕತ್ತಿ ಕೆಳದಿ ಮನೆತನದ 'ರಕ್ಷಾದೇವತೆ' ಯಾಯಿತು. ಮುಂದೆ, ಆ ಮನೆತನದಲ್ಲಿ ಪ್ರಸಿದ್ಧನಾದ ದೊಡ್ಡ ಸಂಕಣ್ಣನಾಯಕನೂ ಅನೇಕ ಶತ್ರುಗಳನ್ನು ಎದುರಿಸಿ ಕೆಳದಿಯನ್ನು ಅನೇಕ ವರ್ಷಗಳ ಕಾಲ ಆಳಿದ್ದು ಆ ಕತ್ತಿಯ ಬಲದಿಂದಲೇ ! ದೊಡ್ಡ ಸಂಗಣ್ಣನಾಯಕರಿಗೆ ವಯಸ್ಸಾದಂತೆ ರಾಜ್ಯಾಡಳಿತದಲ್ಲಿ ಆಸಕ್ತಿ ಹಿಂಗಿತು ; ದೇವರ ಕಡೆ ಮನಸ್ಸು ತಿರುಗಿತು ; ಪುಣ್ಯ ಕ್ಷೇತ್ರಗಳ ದರ್ಶನಕ್ಕೆ ಅವರ ಮನಸ್ಸು ಹಾತೊರೆಯಿತು. ತಮ್ಮ ಇಚ್ಛೆಯನ್ನು ಸಹೋದರ ಚಿಕ್ಕಸಂಕಣ್ಣನಾಯಕರಿಗೆ ತಿಳಿಸಿ, ರಾಜ್ಯಾಡಳಿತವನ್ನು ಅವರಿಗೆ ವಹಿಸಿ, ಅರಮನೆ ಮತ್ತು ರಾಜ್ಯದ ಜನತೆಯ ಅಸಮ್ಮತಿಯನ್ನು ನಯವಾಗಿ ನಿವಾರಿಸಿಕೊಂಡು 'ನಾಗರಮುರಿ'ಯನ್ನು ಸೊಂಟದಲ್ಲಿ ಭದ್ರಪಡಿಸಿಕೊಂಡು, ಕಾಷಾಯಧಾರಿಗಳಾಗಿ, ನಾಲ್ವರು ಆಪ್ತಸಹಾಯಕರೊಂದಿಗೆ ದೇಶಸಂಚಾರಕ್ಕೆ ಹೊರಟರು.

ಆಡಳಿತದ ಜವಾಬ್ದಾರಿಯಿಂದ ಮುಕ್ತಗೊಂಡು, ಶಾಂತಿಯನ್ನು ಅರಸುತ್ತ ಹೊರಟ ದೊಡ್ಡ ಸಂಕಣ್ಣನಾಯಕರು, ಶಿವಗಂಗೆ, ಕಂಚಿ, ಚಿದಂಬರಂ, ಕುಂಭಕೋಣ, ರಾಮೇಶ್ವರ ಮುಂತಾದ ಅನೇಕ ತೀರ್ಥಕ್ಷೇತ್ರ, ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ವಿಜಯಪುರ, ಅಹ್ಮದ್‌ನಗರ ಮುಂತಾದ ದೊಡ್ಡ ನಗರಗಳನ್ನು ನೋಡಿಕೊಂಡು ದೆಹಲಿಗೆ ಹೋದರು. ಅಲ್ಲಿ ಅವರಿಗೊಂದು 'ಸವಾಲು' ಕಾದಿತ್ತು !.

ಆಗ್ಗೆ ದೆಹಲಿಯನ್ನು ಆಳುತ್ತಿದ್ದ ಬಾದಷಹನಿಗೆ ಅಂಕುಶಖಾನ ಎಂಬ ಒಬ್ಬ ವಜೀರ ಇದ್ದ. ಅವನು ಬಹಳ ಪರಾಕ್ರಮಶಾಲಿ. 'ಒಂಟಿಗತ್ತಿಯ ಯುದ್ಧ'ದಲ್ಲಿ ಅವನನ್ನು ಗೆದ್ದವರು ಯಾರೂ ಆ ಪ್ರಾಂತ್ಯದಲ್ಲಿ ಇರಲಿಲ್ಲ. ಅವರಿಂದ ಕೊಬ್ಬಿದ್ದ ಅಂಕುಶಖಾನ ಅರಮನೆಯ ರಾಜದ್ವಾರದ ಮುಂದೆ ಒಂದು ಕತ್ತಿಯನ್ನು ಕಟ್ಟಿಸಿ, 'ತನ್ನನ್ನು ಯುದ್ಧದಲ್ಲಿ ಎದುರಿಸುವವರು ಯಾರಾದರೂ ಇದ್ದರೆ. ಅಂಥವರು ಈ ಕತ್ತಿಯನ್ನು ಕೆಳಗಿಳಿಸಲಿ, ಇಲ್ಲದಿದ್ದರೆ ಕತ್ತಿಯ ಕೆಳಗೆ ತಲೆಬಾಗಿ ನಡೆಯಲಿ' ಎಂಬುದಾಗಿ ಸಾರಿಸಿದ್ದ. ಇದನ್ನು ತನ್ನ ಸಹಾಯಕರಿಂದ ಕೇಳಿದ ದೊಡ್ಡ ಸಂಕಣ್ಣನಾಯಕರಿಗೆ

ಈ ಪ್ರಾಂತ್ಯದಲ್ಲಿ ಇವನನ್ನು ಎದುರಿಸುವವರು ಯಾರೂ ಇಲ್ಲವೇ ? ಎಂದು ಆಶ್ಚರ್ಯ ವಾಯಿತಲ್ಲದೆ, ಅವರಲ್ಲಿ ಸಹಜವಾಯೇ ಇದ್ದ, ಕಾಷಾಯವೇಷದಲ್ಲಿ ಮರೆಯಾಗಿದ್ದ ಪೌರುಷವೂ ಜಾಗ್ರತವಾಯಿತು. ತಾವು ಆ ಕತ್ತಿಯ ಕೆಳಗೆ ತಲೆಬಾಗಿಸಿ ನಡೆದು ಹೋದರೆ, ಅದು ತಮಗೆ ಮಾತ್ರವಲ್ಲ; ಇಡೀ ಕನ್ನಡ ನಾಡಿಗೇ ಅಪಮಾನ ಎಂದು ಭಾವಿಸಿದ ಅವರು, ಕತ್ತಿಯನ್ನು ಕೆಳಗಿಳಿಸುವಂತೆ ದ್ವಾರಪಾಲಕರಿಗೆ ತಿಳಿಸಲು, ತಮ್ಮ ಸಹಾಯಕರಿಗೆ ಹೇಳಿದರು. ದ್ವಾರಪಾಲಕರು ಅನುಮಾನದಿಂದಲೇ ಕತ್ತಿಯನ್ನು ಕೆಳಗಿಳಿಸಿದರು. ಕಾಷಾಯಧಾರಿಯೊಬ್ಬ ಕತ್ತಿ ಇಳಿಸಿ, ಅಂಕುಶಖಾನನೊಡನೆ ಯುದ್ಧಕ್ಕೆ ಸಿದ್ಧನಿರುವ ವಿಷಯ ದೆಹಲಿಯಲ್ಲಿ ದೊಡ್ಡ ಸುದ್ದಿಯಾಯಿತು. ಅದು ಬಾದಷಹನಿಗೂ ತಿಳಿಯಿತು. ಅವನು ಕುತೂಹಲದಿಂದ ಜಂಗಮವೇಷದಲ್ಲಿದ್ದ– ಸಂಕಣ್ಣ ನಾಯಕರನ್ನು ಅರಮನೆಗೆ ಕರೆಸಿಕೊಂಡು, ಅವರ ಪರಿಚಯ ತಿಳಿಸುವಂತೆ ಕೇಳಿದ. ಆ 'ಜಂಗಮಧಾರಿ' ದೊಡ್ಡಸಂಕಣ್ಣನಾಯಕರು ತಾವು 'ಕರ್ಣಾಟಕ'ದವ ರೆಂದು ಮಾತ್ರ ತಿಳಿಸಿ, ಹೆಚ್ಚಿನ ಪರಿಚಯ ತಕ್ಕ ಸಮಯದಲ್ಲಿ ತಿಳಿಸುತ್ತೇವೆಂದು ಹೇಳಿ, ಬಾದಷಹ ಒದಗಿಸಿದ್ದ ಅತಿಥಿಗೃಹಕ್ಕೆ ವಿಶ್ರಾಂತಿಗೆ ತೆರಳಿದರು.

ಅಂದೇ ಮಧ್ಯಾಹ್ನ ಅರಮನೆಯ ಹೊರಬಯಲಿನಲ್ಲಿ 'ಒಂಟಿಗತ್ತಿಯ ಯುದ್ಧಕ್ಕೆ ಎಲ್ಲವೂ ಸಿದ್ಧವಾಯಿತು. ಬಾದಷಹ ತನ್ನ ಪರಿವಾರ ಸಮೇತ ಅಲ್ಲಿಗೆ ಬಂದ. ಮದಿಸಿ ಮತ್ತನಾಗಿದ್ದ ಅಂಕುಶಖಾನನೂ ಠೀವಿಯಿಂದ ಬಂದ. ಅರಮನೆಯ ಅತಿಥಿಶಾಲೆಯಲ್ಲಿ ಪೂಜೆ, ಭೋಜನ ವಿಶ್ರಾಂತಿಯನ್ನು ಮುಗಿಸಿಕೊಂಡು ತಮ್ಮ ಸೇವಕರೊಂದಿಗೆ ನಾಯಕರೂ ಬಂದರು. ಬಾದಷಹ ಇಬ್ಬರನ್ನೂ ಪರಸ್ಪರ ಪರಿಚಯಿಸಿ, ಬರಿಗೈಯಲ್ಲಿ ಬಂದಿದ್ದ ನಾಯಕರಿಗೆ ಒಂದು ಕತ್ತಿಯನ್ನು ತರಿಸಿಕೊಟ್ಟು, ಯುದ್ಧವನ್ನು ಆರಂಭಿಸಲು ಸೂಚಿಸಿದರು. ನಾಯಕರು ಕತ್ತಿಯನ್ನು ಕೈಗೆತ್ತಿಕೊಂಡು ಒಂದು ಸಾಗಿ ಝಳಿಪಿಸಿದರು. ಅದು ಎರಡು ತುಂಡಾಯಿತು. ಬಾದಷಹ ಮತ್ತೊಂದು ಕತ್ತಿಯನ್ನು ತರಿಸಿಕೊಟ್ಟರು. ಅದು ಹಾಗೆಯೇ ಆಯಿತು. ಹೀಗೆ ತರಿಸಿಕೊಟ್ಟನಾಲ್ಕಾರು ಕತ್ತಿಗಳೂ ಮುರಿದುಹೋದುವು. ಕೊನೆಗೆ ಬಾದಷಹ ತಮ್ಮ ಸೊಂಟದಲ್ಲಿದ್ದ ಪಟ್ಟದಕತ್ತಿಯನ್ನೇ ಕೊಡಲು ಮುಂದಾದರು, ಆಗ ನಾಯಕರು, 'ಅದು ಪಟ್ಟದಕತ್ತಿ, ಅದು ನಿಮ್ಮಲ್ಲಿಯೇ ಇರಲಿ. ನನ್ನಲ್ಲಿ ಶಿವ ಕೊಟ್ಟ ಕತ್ತಿ ಇದೆ' ಎಂದು ಹೇಳಿ, ತಮ್ಮ ಸೊಂಟಕ್ಕೆ ಒಡ್ಯಾಣದಂತೆ ಕಟ್ಟಿಕೊಂಡಿದ್ದ 'ನಾಗರಮುರಿ' ಯನ್ನು ಹೊರಕ್ಕೆ ತೆಗೆದು ಒಂದು ಸಾರಿ ಝಳಪಿಸಿ, ಯುದ್ಧಕ್ಕೆ ಸಿದ್ಧರಾದರು. ಕೂಡಲೇ ಯುದ್ಧ ಪ್ರಾರಂಭವಾಯಿತು. ಅಂಕುಶಖಾನ ಚತುರ, ಯುದ್ಧವೀರ. ನಾಯಕರೂ ಯುದ್ಧಶೂರರು. ನೆರೆದಿದ್ದ ಜನಸ್ತೋಮ ಕಾತರ ಕುತೂಹಲದಿಂದ ಆ ಯುದ್ಧವನ್ನು ವೀಕ್ಷಿಸುತ್ತಿತ್ತು. ವೀರನಾದ ಅಂಕುಶಖಾನನಿಂದ ಈ ಜಂಗಮಧಾರಿಗೆ ಸೋಲು ಖಚಿತ ಎಂದೇ ಜನಸ್ತೋಮ ಭಾವಿಸಿತ್ತು. ನೋಡು

ನೋಡುತ್ತಿದ್ದಂತೆ ಯುದ್ಧ ಬಿರುಸಾಯಿತು. ಇಬ್ಬರೂ ಸಮಸಮವಾಗಿ ಕಾದಾಡು-ತ್ತಿದ್ದರು. ಯುದ್ಧದ ಚಮತ್ಕಾರಗಳನ್ನು ತಿಳಿದಿದ್ದ ನಾಯಕರು, ಸಮಯ ನೋಡಿ ಎದುರಾಳಿಯ ನಡುವಿಗೆ ಗುರಿಯಿಟ್ಟು 'ನಾಗರಮುರಿ'ಯನ್ನು ರಭಸದಿಂದ ಬೀಸಿದರು ಅದರ ಪರಿತಕ್ಕೆ ಅಂಕುಶಖಾನನ ಕತ್ತರಿಸಿದ ನಡು ದೇಹದಿಂದ ಉರುಳದೆ ಹಾಗೆಯೇ ನಿಂತಿತ್ತು! ಸಂಕಣ್ಣನಾಯಕರು ಕತ್ತಿಯನ್ನು ಪಕ್ಕಕ್ಕೆ ಇಟ್ಟು, ವಿಶ್ರಮಿಸಿಕೊಳ್ಳಲಾರಂಭಿಸಿದರು. ಅದನ್ನು ಕಂಡ ಬಾದ್‌ಷಹ 'ಇದೇನು ಸಾಕಾಯಿತೇ'? ಎಂದು ಕೇಳಿದ. ಆಗ ಸಂಕಣ್ಣನಾಯಕ 'ಯುದ್ಧ ಮುಗಿಯಿತು' ಎಂದು ಹೇಳಿ, ಕತ್ತಿಯಿಂದ ಅಂಕುಶ-ಖಾನನ ದೇಹವನ್ನು ತಳ್ಳಿದರು. ಅದು ಎರಡು ಹೋಳಾಗಿ ಕೆಳಗುರುಳಿತು. ಅದನ್ನು ಕಂಡ ಬಾದ್‌ಷಹ ಮತ್ತು ಜನಸ್ತೋಮ ಆಶ್ಚರ್ಯಪಟ್ಟಿತು. ಯಾರಿಗೂ ಬಗ್ಗದೆ ಕೆಚ್ಚಿನಿಂದ ಮೆರೆಯುತ್ತಿದ್ದ ಅಂಕುಶಖಾನ ಒಬ್ಬ ಸಾಮಾನ್ಯ 'ಜಂಗಮಧಾರಿಗೆ' ಸೋತು ಸತ್ತಿದ್ದು ದೆಹಲಿಯಲ್ಲಿ ದೊಡ್ಡ ಸುದ್ದಿಯಾಯಿತು.

'ಜಂಗಮಧಾರಿಯ' ಪರಾಕ್ರಮವನ್ನು ಕಣ್ಣಾರೆ ಕಂಡ ಬಾದ್‌ಷಹ ಇವನು ನಿಜವಾದ ಸನ್ಯಾಸಿಯಲ್ಲ, ಇವನೊಬ್ಬ ವೀರನೇ ಇರಬೇಕು' ಎಂದು ಭಾವಿಸಿದ. ಮಾರನೆಯ ದಿನ ಅವನನ್ನು ತನ್ನ ಅರಮನೆಗೆ ಆಹ್ವಾನಿಸಿ, ಯುದ್ಧದಲ್ಲಿ ಗೆದ್ದಿದ್ದಕ್ಕೆ ತಮ್ಮ ಸಂತೋಷವನ್ನು ಸೂಚಿಸಿ, ಅಮೂಲ್ಯ ರತ್ನಾಭರಣಗಳನ್ನು ಕಾಣಿಕೆಯಾಗಿ ಕೊಟ್ಟು ಸತ್ಕರಿಸಿದ. ದೊಡ್ಡ ಸಂಕಣ್ಣನಾಯಕರು ಬಾದ್‌ಷಹನಿಗೆ ತಮ್ಮ ನಿಜ ವೃತ್ತಾಂತವನ್ನು ತಿಳಿಸಿ, ತಮ್ಮ ಸ್ನೇಹದ ಜ್ಞಾಪಕಕ್ಕಾಗಿ ರಾಜ್ಯದ ಪುಣ್ಯ ಕ್ಷೇತ್ರಗಳಲ್ಲಿ ದೇವರಪೂಜೆ ಮತ್ತು ಯಾತ್ರಿಕರಿಗೆ ಅನುಕೂಲಗಳನ್ನು ಕಲ್ಪಿಸುವಂತೆ ಹೇಳಿ ಬಾದ್‌ಷಹ ತಮಗೆ ನೀಡಿದ್ದ ರತ್ನಾಭರಣಗಳನ್ನು ಅವನಿಗೇ ಹಿಂತಿರುಗಿಸಿದರು. ಜಂಗಮ ವೇಷದಲ್ಲಿದ್ದವರು ಕರ್ನಾಟಕದವರೆಂದು, ಕೆಳದಿಯ ವಂಶದ ರಾಜರೆಂದು ತಿಳಿದು, ಬಾದ್‌ಷಹ ಬಹಳ ಸಂತೋಷಪಟ್ಟದ್ದಲ್ಲದೆ, ಅವರ ಅಪೇಕ್ಷೆಯಂತೆ ತೀರ್ಥ ಕ್ಷೇತ್ರಗಳಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ. ದೊರೆಯಿಂದ ಬೀಳ್ಕೊಂಡ ದೊಡ್ಡ ಸಂಕಣ್ಣನಾಯಕರು ತಮ್ಮ ಪ್ರವಾಸವನ್ನು ಮುಂದುವರಿಸಿದರು.

ಹೀಗೆ ಕನ್ನಡ ನಾಡಿನ ವೀರನೊಬ್ಬ ದೆಹಲಿ ಸುಲ್ತಾನನ ರಾಜ್ಯಾಡಳಿತದಲ್ಲಿ, ಎದುರಾದ ಅಪಮಾನವನ್ನು ಸಹಿಸದೆ, ಎದುರಿಸಿ ಗೆದ್ದಿದ್ದು, ಆ ಮೂಲಕ ಕರ್ನಾಟಕದ ಕೀರ್ತಿಯನ್ನು ಎತ್ತಿ ಹಿಡಿದಿದ್ದು ಐತಿಹಾಸಿಕವಾಗಿಯೂ ಮಹತ್ವದ ಸಂಗತಿಯಾಗಿದೆ. ಇಂಥದೊಂದು 'ಐತಿಹಾಸಿಕ ಸಂಗತಿ'ಯನ್ನು ತ.ರಾ.ಸು. ಅವರು ಸರಳವಾದ ಆಕರ್ಷಕ ಶೈಲಿಯಲ್ಲಿ ಓದಬಲ್ಲ ವಯಸ್ಕರಿಗೆ ಆತ್ಮೀಯವಾಗಿ ಈ ಪುಸ್ತಕದಲ್ಲಿ ಪರಿಚಯಿಸಿದ್ದಾರೆ. ಚುರುಕು ಸಂಭಾಷಣೆ, ಕಾತರ, ಕುತೂಹಲಗಳಿಂದ ಕೂಡಿದ ಆಕರ್ಷಕ ನಿರೂಪಣೆ ಈ ಪುಸ್ತಕದ ಹೃದಯ ಗುಣಗಳು.

ತ.ರಾ.ಸು. ಉವಾಚ

—ಟಿ. ವಿ. ವೆಂಕಟರಮಣಯ್ಯ

ಅಧಿಕಾರ : ಅಧಿಕಾರ ನಾಗರಹಾವಿನ ಹೆಡೆ ಇದ್ದಂತೆ. ಅದು ಬರಲಿ ಎಂದು ಬಯಸಬಾರದು. ಬಂದಾಗ, ಸ್ವೀಕರಿಸುವಾಗ, ಹೆದರಿ ಸ್ವೀಕಾರ ಮಾಡಬೇಕು.

ಅಧಿಕಾರ ಪೀಠವನ್ನೇರಿದ ಮನುಷ್ಯರಲ್ಲಿ ಇಬ್ಬಗೆಯ ಬಯಕೆಗಳು ಸದಾ ಜಾಗೃತವಾಗಿರುತ್ತವೆ. ತಾನು ಒಮ್ಮೆ ಏರಿದ ಅಧಿಕಾರವನ್ನು ಶಾಶ್ವತವಾಗಿ ಉಳಿಸಿಕೊಳ್ಳಬೇಕೆಂಬ ವ್ಯಾಮೋಹಕ್ಕೆ ಅಗ್ರಸ್ಥಾನ. ಎರಡನೆಯದು ತನ್ನ ಸುತ್ತಲವರು ಹಾಡಿ ಹೊಗಳಬೇಕೆಂಬುದು.

ಗುಣವಿಲ್ಲದವರ ಅಧಿಕಾರ ಕೋಡಗಕ್ಕೆ ಕಿರೀಟವಿದ್ದಂತೆ.

ಅನಿರೀಕ್ಷಿತೆ : ಅನಿರೀಕ್ಷಿತೆ ಆನಂದಕ್ಕೆ ವಿಶೇಷ ರುಚಿಯನ್ನು ಕೊಡುತ್ತದೆ.

ಅನುಭವ : ಅನುಭವ ಮಳೆಯ ನೀರಿನಂತೆ. ಅನುಭವ ಆದಾಗ ಮನಸಿನ ಮೇಲೆ ಏನೋ ಪರಿಣಾಮವಾಗುತ್ತದೆ. ಕೊಂಚ ಹೊತ್ತಾದ ಮೇಲೆ ಮರೆವಿನಲ್ಲಿ ಆರಿಹೋಗುತ್ತದೆ.

ಅಪೇಕ್ಷೆ : ನಮ್ಮ ಅಪೇಕ್ಷೆಗಳಲ್ಲಿ ಎರಡು ಜಾತಿಯಿದೆ ಒಂದು ಹೇಗೋ ನಾನು ಅಂದುಕೊಂಡುದು ಆದರೆ ಆಯಿತು ಎಂದರೆ, ಮತ್ತೊಂದು ಹೀಗೇ ತೀರಬೇಕು ಎನ್ನುತ್ತದೆ.

ಅಹಂಕಾರ : ಅಹಂಕಾರ ಬೆಳೆಯುವ ಗಿಡಕ್ಕೆ ಹತ್ತಿರುವ ರೋಗ.
ಅಹಂಕಾರದೊಡನೆ ಸಾಧಕನಿಗೆ ಸರಸ ಸಲ್ಲದು.

ಆತ್ಮವಿಶ್ವಾಸ : ನಮ್ಮ ಬಗ್ಗೆ ನಮಗೆ ನಂಬಿಕೆ ಗೌರವಗಳು ತಪ್ಪಿಹೋಗುವುದಕ್ಕಿಂತಲೂ ಘೋರವಾದ ದುರಂತ ಇನ್ನೊಂದು ಉಂಟೆ? ತಳಪಾಯ ಸಡಿಲಿದ ಮನೆ, ಬೆನ್ನೆಲುಬು ಮುರಿದ ಮನುಷ್ಯ ನೇರವಾಗಿ ನಿಂತು ಬದುಕುವುದುಂಟೆ? ಉಹೂ, ಕೆಡೆದು ಧೂಳಿನಲ್ಲಿ ಹೊರಳುವುದೊಂದೇ ದಾರಿ.

ಆನಂದ : ಹೃದಯದ ವೇದನೆ ಕಂಬನಿಯಾಗಿ ಅವತರಿಸುವಂತೆ ಆನಂದ ಮಂದಹಾಸದಂತೆ ಮೂಡಿಬರಬೇಕು.

ಇಸ್ಪೀಟು : ಇಸ್ಪೀಟಾಟ ಮಹಾ ಕೆಟ್ಟ ಹುಚ್ಚು. ಆ ಪೋಕಿಗೆ ಬಿದ್ದರೆ ಕೊಪ್ಪರಿಗೆ ಹಣವೂ ಸಾಲದು; ದಿನಕ್ಕೆ ಇಪ್ಪತ್ನಾಲ್ಕು ಗಂಟೆಯೂ ಸಾಲದು, ಅಷ್ಟೇ ಅಲ್ಲ, ಆ ವ್ಯಸನದ ಅಣ್ಣ ತಮ್ಮಂದಿರಾಗಿ ಉಳಿದ ಚಟಗಳೂ ತಾನಾಗಿಯೇ ಬಂದು ತಗಲಿ ಕೊಳ್ಳುತ್ತದೆ.

ಉಪಕಾರ : ಸೂರ್ಯ ಕಾಸು ಕೊಟ್ಟವರಿಗೆ ಬೆಳಕು ಕೊಡುತ್ತೇನೆ ಎನ್ನುತ್ತಾನೆಯೇ ? ಲೋಕೋಪಕಾರದ ಜಾಡಿನಲ್ಲಿ ನಾವು ನಡೆದರೆ ಅದರಿಂದ ಬಯಸಲಿ ಬಿಡಲಿ ನಮಗೂ ಅಷ್ಟಿಷ್ಟು ಒಳ್ಳೆಯದಾಗುತ್ತದೆ.

ಉಪಾಧ್ಯಾಯ : ಮೇಷ್ಟ್ರು ಅಂದ್ರೆ ತಂದೆ ತಾಯಿಗಳು ರೋಸಿಗೊಂಡು ಕಳಿಸುವ ಮಕ್ಕಳ ಹೊರೆ ಹೊರುವ ಅಗಸನ ಕತ್ತೆ. ಎಲ್ಲರಿಗೂ ಅಗತ್ಯವಾಗಿ ಯಾರಿಗೂ ಬೇಡವಾದ ತ್ರಿಶಂಕು. ಅತಿ ಕಡಿಮೆ ಕೂಲಿಗೆ ಅತಿ ಹೆಚ್ಚು ದುಡಿಯುವ ಬಾಯಿದ್ದ ಮೂಕಪ್ರಾಣಿ.

ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಲು ಮಾಜಿಸ್ಟ್ರೇಟರ ಕೋರ್ಟ್ ನಲ್ಲೂ ಸ್ಕೂಲು, ಉಪಾಧ್ಯಾಯ ತಪ್ಪು ಮಾಡುವಾಗ ಮಾತ್ರ ಕಾಣಿಸಿಕೊಳ್ಳುವ ಕಾನ್ಸ್‌ಟೇಬಲ್ಲೂ ಅಲ್ಲ. ಬೆಳೆಯುವ ಮಕ್ಕಳಿಗೆ ಉಪಾಧ್ಯಾಯರೇ ತಂದೆ-ತಾಯಿ. ತಪ್ಪು ಮಾಡೋ ಹುಟ್ಟು ಗುಣ ಇರೋರನ್ನ ತಪ್ಪು ಮಾಡದ ಹಾಗೆ ತಿದ್ದಿ ಬೆಳೆಸಿ ಊರಿಗೆ ಒಳ್ಳೆ ಮಗನನ್ನಾಗಿ ಮಾಡೋದು ಮಾಸ್ಟರು.

ಕಲಾವಿದ-ಕಲೆ : ನಮ್ಮ ಸೀಮೆಯಲ್ಲಿ ಕಲಾವಿದನಾಗಿ ಹುಟ್ಟಲು ಹಿಂದಿನ ಏಳೇಳು ಜನ್ಮದಲ್ಲಿ ಮಹಾ ಪಾಪ ಮಾಡಿರಬೇಕು.

ಕಲೆ ಯಾವ ಬೆಲೆಯನ್ನು ಬಹುಮಾನವನ್ನು ಬಯಸುವುದಿಲ್ಲ. ಅದು ಕೇಳುವುದು ಎರಡು ಹನಿ ಆನಂದಾಶ್ರು

ಅಂತರಾತ್ಮದ ಉತ್ಕಟ ಅಪೇಕ್ಷೆಯೇ ಕಲೆಯ ಪೋಷಕವಸ್ತು. ಆ ಅನಿಸುವಿಕೆ ಉಕ್ಕಿ ಹರಿದಾಗ ಜಗತ್ತು ಕಲಾಕೃತಿಯನ್ನು ಕಾಣುತ್ತದೆ ಕಲಾವಿದನ ಬದುಕು ಸಾರ್ಥಕವಾಗುತ್ತದೆ.

ಕಲಾವಿದ ತನ್ನ ಎಲ್ಲ ಚೈತನ್ಯ, ಪ್ರತಿಭೆ, ಬಯಕೆ, ಕಾತರ, ಎಲ್ಲ ರಾಗ ಭಾವಗಳನ್ನು ಉಳಿಯದೆ ತನ್ನ ವಸ್ತುವಿಗೆ ಧಾರೆ ಹೊಯ್ದಾಗ ಸುಂದರ ಕಲಾಕೃತಿ ಮೈತಾಳುತ್ತದೆ.

ಕಲಿಯುವಿಕೆ : ವಿದ್ಯೆ ಕಲಿಸುವವನು ಯಾರೇ ಆದರೂ, ಆತ ಹೇಗೆ, ಏನು ಭಾವನೆಯಿಂದ ಹೇಳಿಕೊಟ್ಟರೂ, ಶ್ರದ್ಧೆಯಿಂದ 'ಗುರು ಹೇಳಿ

ದುದೇ ಸರಿ' ಎಂಬ ನಂಬಿಕೆಯಿಂದ ಕಲಿಯಬೇಕು. ಆ ನಿಷ್ಠೆ ಇಲ್ಲವಾದಲ್ಲಿ ಹೇಳಿಕೊಡುವವನು ಎಷ್ಟೇ ಮನಸ್ಸಿಟ್ಟು ಹೇಳಿ' ಕೊಟ್ಟರೂ ಸೀಸಕ್ಕೆ ಮೆರಗು ಕೊಟ್ಟ ಹಾಗಾಗುವುದೇ ಹೊರತು ಚಿನ್ನಕ್ಕೆ ಮೆರಗು ಕೊಟ್ಟಂತಾಗುವುದಿಲ್ಲ.

ಕವಿತೆ : ಅಯ್ಯೋ ಅಂತ ಅಂದದ್ದೇ ಕವಿತೆಯಾಗೋದಾದ್ರೆ ಇಷ್ಟು ಹೊತ್ತಿಗೆ ಜಗತ್ತಿನಲ್ಲಿ ಒಂದಲ್ಲ ಒಂದು ಕೋಟಿ ರಾಮಾಯಣ ಇರೋದು.

ಕ್ರಾಂತಿ : ಕ್ರಾಂತಿ ಸಫಲವಾಗಲು ಸತ್ಯದ ಬುನಾದಿ ಬೇಕು.

ಕೀರ್ತಿ : ಕೀರ್ತಿ ಮಹಾರಾಜನಿದ್ದಂತೆ ಧನ, ಗೌರವ ಎಲ್ಲವೂ ಅನುಚರ ರಂತೆ ವಂದಿಮಾಗಧರಂತೆ ಕೀರ್ತಿಯನ್ನು ಹಿಂಬಾಲಿಸುತ್ತವೆ.

ಗಂಡ ಹೆಂಡತಿ : ಗಂಡಸಾಗಿ ಹುಟ್ಟಿದ ಮೇಲೆ ಯಾರೋ ಒಬ್ಬ ಹುಡುಗಿ ಕೈ ಹಿಡಿದೇ ಹಿಡಿಯುತ್ತಾಳೆ. ಪುರುಷನ ಜೀವನದ ಸರಪಣಿಯಲ್ಲಿ ಅವನ ಹೆಂಡತಿ ದುರ್ಬಲ ಕೊಂಡಿ. ಗಂಡ ಗುಂಡಕಲ್ಲು ಅದ್ರೆ ಹೆಂಡತಿ ಅಡಿಗಲ್ಲು. ಅದು ಭದ್ರವಾಗಿದ್ದರೇನೇ ಗುಂಡಕಲ್ಲು ಆಡೋದು ಅರೆಯೋದು.

ಗುರು : ಪುಣ್ಯ ಪಕ್ವವಾದಾಗ ಗುರು ತಾನೇ ಬರುತ್ತಾನೆ. ನಿಮ್ಮ ಮನಸ್ಸು ಯಾರಿಗೆ ತಲೆ ಬಾಗುವುದೋ ಅವರನ್ನು ಗುರು ಎಂದು ಕೊಂಡು ಅವರಿಗೆ ನಿನ್ನ ಬಾಳನ್ನು ಅರ್ಪಿಸು.

ಚರಿತ್ರೆ : ನಮಗೆ ನಮ್ಮ ನಾಡಿನ ಇತಿಹಾಸ, ನಮ್ಮ ನೆಲವನ್ನು ಪವಿತ್ರ ಗೊಳಿಸಿದ ಮಹನೀಯರ ವಿಚಾರ ಏನೂ ತಿಳಿಯದು.

ಛಲ : ಸಾಲು ಸೋಲುಗಳನ್ನು ಗೆಲುವಿನ ಗೋಪುರಕ್ಕೆ ಮೆಟ್ಟಿಲು ಗಳನ್ನಾಗಿ ಮಾಡಿಕೊಳ್ಳಬಲ್ಲ ಛಲ ಬೇಕು.

ಜನರ ಸ್ವಭಾವ : ಸಾಮಾನ್ಯವಾಗಿ ಜನರು ತಮ್ಮ ಹಾಗೇ ಜಗತ್ತು ಎಂದು ತಿಳಿಯುತ್ತಾರೆ. ತಮ್ಮ ಪರಿಮಿತ ದೃಷ್ಟಿಯ ದೋಷದಿಂದಾಗಿ ಅದಕ್ಕೆ ಅನುಕೂಲವಾಗಿ ತಿಪ್ಪೆಯ ಸುತ್ತಲೂ ಕತ್ತೆ, ನಾಯಿ, ನೊಣಗಳೇ ಸುಳಿಯುವ ಹಾಗೆ, ಅಂಥ ಜನರ ಸುತ್ತಲೂ ಅವ ರಿಗೆ ತಕ್ಕವರೆ ಓಡಾಡುತ್ತಿರುತ್ತಾರೆ.

ಜಯ : ಗೆಲ್ಲುತ್ತೇನೆ ಎಂದು ಬಂದವನು ಸೋಲುವುದಕ್ಕೂ ಸಿದ್ಧನಿರ ಬೇಕು.

ಜ್ಞಾನ : ಧನಕನಕಗಳಿಗಿಂತಲೂ ಅದನ್ನು ಉತ್ಪಾದಿಸುವ ಶಕ್ತಿಯನ್ನು ಕೊಡುವ ಜ್ಞಾನವೇ ನಿಜವಾದ ಸಂಪತ್ತು.

ಜೀವ : ನನ್ನ ಜೀವ ಒಂದಿದ್ದರೆ ಇವತ್ತಲ್ಲ ನಾಳೆ ನನ್ನ ಆಸೆ ಈಡೇರಿಸಿ ಕೊಳ್ಳುತ್ತೇನೆ.

ಜೀವನ : ಜೀವನದ ಬಗ್ಗೆ ಎಲ್ಲರ ನೋಟವೂ ಒಂದೇ ಅಲ್ಲ ; ವ್ಯಕ್ತಿ ವಕ್ತಿಗೂ ವ್ಯತ್ಯಾಸವಿರುತ್ತದೆ. ಕೆಲವರ ಪಾಲಿಗೆ ಸಂಸಾರ ಕಣ್ಣೀರಿನ ಕಾಸಾರ ; ಕೆಲವರಿಗೆ ಭ್ರಮೆಯ ಆಡುಂಬೊಲ ; ಕೆಲವರಿಗೆ ಕರ್ಮಕ್ಷೇತ್ರ....ಕೆಲವರಿಗೆ ಮೂರು ದಿನದ ಸಂತೆ. ಬಾಳನ್ನು ಸಾಹಸಯಾತ್ರೆ ಎಂದುಕೊಂಡ ಜನಕ್ಕೆ ಜೀವನ ನಿತ್ಯ ಸಂತಸದ ಯಾತ್ರೆ.

ತಾಯಿ : ಹೆಣ್ಣು ಹೆಣ್ಣಾಗಿರುವವರೆಗೂ ಆಕೆಯ ಬಾಳು ಆಕೆಯ ಸುಖಕ್ಕೆ ಮೀಸಲು. ಆದರೆ ತಾಯಿಯಾದ ಬಳಿಕ ಆಕೆಯುಂಡ ಆಹಾರವು ಆಕೆಯದಲ್ಲ ; ಅದೂ ಆಕೆಯಲ್ಲಿ ಜನಿಸಿದ ಕಂದನನ್ನು ಬೆಳೆಸಲು ಹಾಕಲಾಗುತ್ತದೆ. ಈ ಮಾತು ಅರ್ಥವಾಗಿ ಹೆಣ್ಣು ಜೀವ ಅದುವರೆಗೂ ಕಿರುದೊರೆಯಾಗಿದ್ದುದು ಮಹಾ ಸಾಗರವಾಗುತ್ತದೆ.

ತಿಳುವಳಿಕೆ : ಹೆಚ್ಚು ತಿಳಿಯುವುದೂ ಅಜ್ಞಾನದ ಪರಮಾವಧಿಯಾಗುತ್ತದೆ. ಒಬ್ಬರ ವಿಚಾರ ಒಬ್ಬರು ತಿಳಿಯದಿದ್ದಲ್ಲಿ ಸ್ನೇಹ ಶಾಶ್ವತವಾಗುತ್ತದೆ. ಈ ತಿಳುವಳಿಕೆ ತುಂಬಾ ಅಪಾಯಕಾರಿ.

ತೊಂದರೆ : ಒಬ್ಬರಿಗೊಬ್ಬರು ತೊಂದರೆ ಕೊಡದಿದ್ದರೆ ಮನುಷ್ಯರಾಗಿ ಹುಟ್ಟಿದ್ದಕ್ಕೇನು ಸಾರ್ಥಕ. ಹುಟ್ಟಿದಾಗ ತಾಯಿಗೆ – ಸತ್ತಾಗ ಹೆಣ ಹೊರುವವನಿಗೆ, ಇದ್ದಾಗ ಎಲ್ಲರಿಗೂ ತೊಂದರೆ ಕೊಡಲೆಂದೇ ನಾವಿರುವುದು. ತೊಂದರೆ ಕೊಡದವರನ್ನು ಜಗತ್ತು ಲಕ್ಷಿಸುವುದಿಲ್ಲ.

ದಬ್ಬಾಳಿಕೆ : ಪ್ರಜೆಗಳ ವಿಶ್ವಾಸವನ್ನು ದಬ್ಬಾಳಿಕೆಯಿಂದ ಗೆಲ್ಲುತ್ತಾ ಹೊರಟಲ್ಲಿ ಸುಣ್ಣವನ್ನು ತನ್ನ ಮಡಿಲಲ್ಲಿ ಕಟ್ಟಿಕೊಂಡು ಮಡುವಿಗೆ ಹಾಕಿದಂತಾಗುತ್ತದೆ. ಕಾಲು ಕತ್ತರಿಸಿಕೊಂಡು ಬೆಟ್ಟ ಹತ್ತಿದಂತಾಗುತ್ತದೆ.

ದೇವರು : ಈಗ ಬಿಡಿ, ಹಿಟ್ಟು ಕಾಣದ ಜನ ಹಾಳು ಗುಡಿ ದೇವರಿಗೆ ಗಂಟು ಬೀಳುತ್ತಾರೆ. ದೇವರಿಗೆ ಇಡೋ ನಾಮಾನ ಜನಕ್ಕೆ ಇಟ್ಟು ಹೊಟ್ಟೆ ಹೊರೆಯುತ್ತಾರೆ. ಇದೇ ದೇವರು ಎಂದು

ನಮಗೆ ನಂಬಿಕೆ ಬಂದಾಗ ಆ ವಸ್ತು ನಮಗೆ ದೇವರಾಗುತ್ತದೆ. ಉಳಿದಿದ್ದರಲ್ಲಿ ದೇವತಾಂಶವಿದ್ದರೂ ಅದು ದೇವರಾಗುವುದಿಲ್ಲ. ದೇವರ ದರ್ಶನಕ್ಕೆ ಹೋದವರು ಪೂಜಾ ವೇಳೆಯವರೆಗೆ ಕಾಯಲೇ ಬೇಕು. ಜನಕ್ಕೆ ದೇವರು ಬೇಕಾದರೆ ತಾನೇ ದೇವರಿಗೆ ಜನ ಬೇಕಾಗಿರೋದು. ದೇವರ ದಾರಿ ನನಗೂ ನಿನಗೂ ಕಾಣುವುದಿಲ್ಲ. ಕಹಿ ಔಷಧದಲ್ಲಿ ಆರೋಗ್ಯವನ್ನು ನೀಡುವ ಬಲವಿರುವಂತೆ, ನಮಗೆ ಅಹಿತವೆಂದು ಕಾಣುವುದರಲ್ಲೂ ಯಾವುದೋ ಹಿತವನ್ನು ಹುದುಗಿಸುವುದು ಆತನ ಲೀಲೆ.

ಧನ ದಾಹ : ಜಗತ್ತಿನಲ್ಲಿ ಎಲ್ಲ ಬಗೆಯ ದಾಹ, ಹಸಿವೆಗೂ ಒಂದು ಮಿತಿಇದೆ. ಧನದ ದಾಹ ಒಂದಕ್ಕೆ ಮಾತ್ರ ಯಾವ ಮಿತಿಯೂ ಇಲ್ಲ. ಅದು ದೊರೆತಷ್ಟೂ ಬೆಳೆಯುವುದು ವಿಚಿತ್ರ ದಾಹ.

ಧರ್ಮ – ಮತ : ಧರ್ಮ – ಮತ ; ಗರತಿ – ಸೂಳೆಯರಿದ್ದಂತೆ.

ನಂಬಿಕೆ : ಅತಿ ನಂಬಿಕೆಗಿಂತ ದೊಡ್ಡ ತಪ್ಪು ಬೇರೆ ಯಾವುದೂ ಇಲ್ಲ. ನಂಬಿಕೆ ತಾನೇ ಲಭಿಸಬೇಕಾದಂಥ ವಸ್ತು ; ಕೇಳಿ ಪಡೆಯಬಹುದಾದುದಂಥದಲ್ಲ.

ಪ್ರಜಾಪ್ರಭುತ್ವ : ಜನ ಎಲ್ಲಿಯವರೆಗೆ ಆಡಳಿತದ ಬುನಾದಿಯೋ ಎಲ್ಲಿಯವರೆಗೆ ಜನರನ್ನು ಅವಲಂಬಿಸಿ ರಾಜ್ಯಾಡಳಿತ ನಡೆಸಬೇಕೋ, ಅಲ್ಲಿಯವರೆಗೂ ಅವರ ಮಾತಿಗೆ ಮಾನ್ಯತೆ ಕೊಡಲೇಬೇಕು. ಅವರದು ತಿಳಿಯದ ಮಾತು ಎಂದು ತಾತ್ಸಾರ ಮಾಡುವುದು ಸರಿಯಲ್ಲ. ಅವರಿಗೂ ತಿಳಿಯುವಂತೆ ಅವರೂ ಅರ್ಥ ಮಾಡಿಕೊಂಡು ಒಪ್ಪಿಕೊಳ್ಳುವಂತೆ ರಾಜ್ಯವಾಳುವುದು ಆಳುವವನ ಕರ್ತವ್ಯ.

ಪ್ರಜೆಗಳು : ಪ್ರಜೆಗಳೇ ಸಾಮ್ರಾಜ್ಯದ ಅಸ್ತಿಭಾರ. ಅವರ ತೃಪ್ತಿ, ಅಭಿಮಾನ, ವಿಶ್ವಾಸ ನಿಷ್ಠೆಗಳೇ ಸಾಮ್ರಾಜ್ಯವನ್ನು ರಕ್ಷಿಸುವ ವಜ್ರಭಿತ್ತಿ. ಪ್ರಜೆಗಳ ವಿಶ್ವಾಸವನ್ನು ಕಳೆದುಕೊಂಡ ಅರಸರಾರ ಹೆಸರುಗಳೂ ಬದುಕಿಲ್ಲವೆಂಬುದಕ್ಕೆ ಇತಿಹಾಸವೇ ಸಾಕ್ಷಿ.

ಪ್ರಪಂಚ : ಈ ಜಗತ್ತು ಹುಚ್ಚನೊಬ್ಬ ಹೇಗೋ ರಚಿಸಿ ಏನೋ ಆಕಸ್ಮಿಕ ಕ್ಕೊಳಗಾಗಿ ನಡೆಸುತ್ತಿರುವ ಯಂತ್ರದ ಹಾಗಿದೆ. ಈ ಯಂತ್ರ ಹೇಗೆ ಚಲಿಸಲಾರಂಭಿಸಿತು ಎಂಬುದು ನಮಗೆ ತಿಳಿಯದೋ ಹಾಗೇ ಏನು ಕೆಲಸದಿಂದ ಯಂತ್ರ ಕೆಟ್ಟು ಹೋಗಿ, ಇದರ ಚಾಲನೆ ನಿಂತು ಹೋದೀತು ಎಂಬುದೂ ತಿಳಿಯದು.

ಪೂಜೆ : ಪೂಜೆ ಮಾಡುವ ಕೈ ಬೇಡಬಾರದು.

ಪ್ರೇಮ-ಕರುಣೆ : ಕರುಣೆ–ಪ್ರೇಮ ಅವಳಿ ಜವಳಿ.

ಪ್ರೇಮ-ಕಾಮ : ಪ್ರೇಮ ತನ್ನ ಕೃಪೆಗೆ ಪಾತ್ರವಾದ ವ್ಯಕ್ತಿಯನ್ನು ಉದ್ಧಾರ ಮಾಡುತ್ತದೆ. ಕಾಮ ಪಾತಾಳಕ್ಕೆ ತಳ್ಳುತ್ತದೆ. ಒಂದರಲ್ಲಿ ಅರಿವು ಅರಳಿದರೆ ಇನ್ನೊಂದರಲ್ಲಿ ವಿಸ್ಮೃತಿ ಕವಿಯುತ್ತದೆ. ಮೊಗ್ಗನ್ನು ಅರಳಿಸಿ ಜಗತ್ತಿಗೇ ಅದರ ಸೌಂದರ್ಯದ ನರುಗಂಪನ್ನು ನೀಡುವುದು ಪ್ರೇಮ. ಅರಳಿದ ಹೂವನ್ನು ಬಾಡಿಸಿ ಕೊಲ್ಲುವ ಬಿಸಿಲು ಕಾಮ.

ಪ್ರೇಮ–ತಾಳ್ಮೆ : ಪ್ರೇಮವು ಒಣಗಿದ ಸಿಮೆಂಟಿನ ಪುಡಿ ಇದ್ದ ಹಾಗೆ. ಬರೀ ಅದನ್ನೇ ಹಾಕಿದರೆ ಅದು ಹಿಡಿಯುವುದಿಲ್ಲ. ತಾಳ್ಮೆಯ ನೀರು ಬೆರೆತಾಗ ಅದಕ್ಕೆ ಕಚ್ಚಿಕೊಳ್ಳುವ ಶಕ್ತಿ ಬರುತ್ತದೆ. ನೀರು ಬಿದ್ದಷ್ಟೂ ಸಿಮೆಂಟು ಬಲವಾಗುತ್ತದೆ. ತಾಳ್ಮೆ ಇದ್ದಷ್ಟೂ ಪ್ರೇಮಸ್ಥಿರವಾಗುತ್ತದೆ.

ಬಡತನ : ಬಡತನದ ಬುರುದೆಯಲ್ಲಿ ದುರಾಶೆಯ ಪಾಚಿಯಲ್ಲದೆ ನಿಷ್ಠೆಯ ಪುಷ್ಪ ಅರಳಲಾರದು.

ಬಯಕೆ : ಬಯಕೆಯೊಂದು ಶಕ್ತಿ, ಪ್ರಬಲಶಕ್ತಿ. ಅದು ತೀವ್ರವಾದಷ್ಟೂ ಉತ್ಕಟವಾದಷ್ಟೂ ಪರಿಣಾಮಕಾರಿಯಾಗುತ್ತದೆ.

ಬುದ್ಧಿವಾದ : ಕರೆಕಳಿಸದೆ ಬರುವುದು ಎಷ್ಟು ತಪ್ಪೋ, ಕೇಳದೆ ಬುದ್ಧಿವಾದ ಹೇಳುವುದೂ ಅಷ್ಟೇ ತಪ್ಪು.

ಮತ : ಯಾವ ಮತದ ಆಧಿಪತ್ಯದಲ್ಲೂ ಮನುಷ್ಯ ಮನುಷ್ಯನಾಗಿ ಬಾಳುವುದು ಸಾಧ್ಯವಿಲ್ಲ.

ಮನುಷ್ಯ : ಮನುಷ್ಯ ಪಾಪಾಸಕಳ್ಳಿಗಿಂತ ಕೆಟ್ಟಜಾತಿ ; ಪಾಪಾಸಕಳ್ಳಿ ಬೆಳೆಯದ ಜಾಗದಲ್ಲೂ ಅವನು ಬೆಳೆಯುತ್ತಾನೆ ; ತನ್ನ ಸಂತಾನ ಬೆಳಸುತ್ತಾನೆ.

ಯೌವನ : ಏರುವ ಯೌವನದ ಕಾಯಕಾಂತಿಗೆ ವೈಧವ್ಯ ಮುಸುಕಾದೀತೇ?

ವ್ಯವಸಾಯ : ಫಣಿ ಸೇವ ; ಆಡಿದರೆ ಅರಗಿಳಿ, ಕಾಡಿದರೆ ಘಟಸರ್ಪ. ಆದರೆ ಭೂತಾಯಿ ಸೇವೆ ಹಾಗಲ್ಲ. ಒಪ್ಪತ್ತು ಸೇವೆ ಬಿಟ್ಟು ಮಲಗಿದ್ರೂ ಮುನಿಸಿಕೊಳ್ಳೋಲ್ಲ.ನಂಬಿದ ಹೊಟ್ಟೆ ಮೇಲೆ ಹೊಡೆಯೋದಿಲ್ಲ. ತಾನು ತಿಂದು ಸಾಕಾದರೆ ಊರಿಗೆಲ್ಲ ಕೊಡುವಷ್ಟು ಕೊಡ್ತಾಳೆ.

ವ್ಯಾಮೋಹ : ಸ್ತ್ರೀ ವ್ಯಾಮೋಹ ಅತಿಯಾದವರನ್ನು ಮುರಿಯುವುದಕ್ಕೆ ದಂಡೂ ಬೇಡ, ಥಾಳಿಯೂ ಬೇಡ; ಒಂದು ಹೆಣ್ಣು ಸಾಕು.

ವಿಧ್ಯಾರ್ಥಿ : ವಿದ್ಯಾರ್ಜನೆಯ ರಥಕ್ಕೆ ಸತತ ಪರಿಶ್ರಮದ ಆಸಕ್ತಿ ಒಂದು ಚಕ್ರವಾದರೆ ಪ್ರತಿಭೆ ಮತ್ತೊಂದು ಚಕ್ರ. ಎರಡು ಚಕ್ರಗಳು ಇದ್ದರೇ ಆ ರಥ ಸುಲಲಿತವಾಗಿ ಚಲಿಸುವುದು.

ವಿದ್ಯೆ : ವಿದ್ಯೆ ಮಹಮಂದನ ಗುಡಾರವನ್ನು ಪ್ರವೇಶಿಸಿದ ಒಂಟೆ ಇದ್ದಂತೆ. ಕತ್ತಲೆಯ ಶಿಬಿರದಲ್ಲಿ ಈ ಬೆಳಕಿನ ಕಲೆ ಒಮ್ಮೆ ಪ್ರವೇಶಿಸಿದ ಬಳಿಕ, ಕತ್ತಲೆಗೆ ಅಲ್ಲಿಲ್ಲೂ ಇರಲು ತಾವಿಲ್ಲದಂತಾಗುತ್ತದೆ. ಕಲಿಸಿದ ವಿದ್ಯೆಯನ್ನು ಮರೆಯಬೇಡ. ಕಲಿಸಿದ್ದನ್ನು ಬೆಳಸಿಕೋ. ಎಷ್ಟು ಬೆಳಸಿದರೂ ಕೊನೆಗಾಣದಷ್ಟು ಅಪಾರವಾದದ್ದು ಈ ವಿದ್ಯೆ.

ವಿಧಿವಿಲಾಸ : ಎಷ್ಟೋ ವೇಳೆ ವಿಧಿ ನಮ್ಮ ಕೈಲಿ ಕಣ್ಣು ಮುಚ್ಚಾಲೆಯಾಡುತ್ತದೆ. ಕಣ್ಣು ಮುಚ್ಚಿ ದುರಂತ ನಾಟಕ ಆಡುತ್ತದೆ ನಮ್ಮ ಬಾಳಿನಲ್ಲಿ.

ವಿರೋಧ : ಬೆಂಕೀನ, ವಿರೋಧಾನ ಬೆಳೆಯೋಕೆ ಬಿಡಬಾರದು. ಮೊಳಕೇಲೆ, ಮತ್ತೆ ತಲೆ ಎತ್ತದ ಹಾಗೆ ತುಳಿದುಬಿಡಬೇಕು.

ವೇಶ್ಯೆ : ನೂರು ದೇಶದಲ್ಲಿ ನೂರು ಹೆಸರು ಅವಳಿಗೆ, ದೇವದಾಸಿ, ಬಸವಿ, ಡಯೋನಿಸ್ ಆರಾಧಕಳು, ವೀನಸ್ ಪೂಜಕಳು.

ಶರಣ : ಶರಣ ಗಂಧದ ಕೊರಡಿದ್ದಂತೆ; ತಾನು ತೇಯ್ದು ಲೋಕಕ್ಕೆ ಕಂಪನ್ನುನೀಡಬೇಕು; ಕಬ್ಬಿನಂತೆ ತಾನು ಹಿಂಡಿ ಲೋಕಕ್ಕೆ ಸಂಧೆಯುಣಿಸಬೇಕು. ಲಿಂಗದೀಕ್ಷೆ ಈ ಪವಿತ್ರ ವ್ರತದ ರತ್ನ ಕಂಕಣ.

ಶಿಸ್ತು : ಶಿಸ್ತು ಎಂದರೆ ಭಯೋತ್ಪಾದನೆಯಲ್ಲ; ಅದೊಂದು ಬಗೆಯ ದೋಹದ–ಕ್ರಮ; ಮೊಗ್ಗನ್ನು ಮುಗುಳಾಗಿ ಮಾಡುವ ರಸವಿದ್ಯೆ. ಆ ಕಲಾವಂತಿಕೆ ತಾಯಿಗೆ ತಿಳಿದಿರದಿದ್ದರೆ ಮುಂದೆ ಮಕ್ಕಳ ಬಾಳು ಬಹು ದುರ್ಭರವಾಗುತ್ತವೆ. ಇಂದು ತಂದೆ ತಾಯಿಗೆ ಹೆದರಿದ ಮಕ್ಕಳು ನಾಳೆ ನೆರಳಿಗೂ ಹೆದರುವ ಅಂಜುಬುರುಕರಾಗುತ್ತಾರೆ.

ಸಂಪತ್ತು : ಕಣ್ಣಿಗೆ ಸಂಪತ್ತಾಗಿ ಕಾಣುವುದಕ್ಕಿಂತ ಅಂಥ ಸಂಪತ್ತನ್ನು ಉತ್ಪಾದಿಸುವ ಶಕ್ತಿಯೇ ನಿಜವಾದ ಸಂಪತ್ತು.

ಸಂಪ್ರದಾಯ : ಎಲ್ಲಾ ಹೊಲೆಯನ್ನೂ ಪವಿತ್ರಗೊಳಿಸುವ ಗಂಗಾಮಾತೆಗೆ ಚಂಡಾಲಸ್ಪರ್ಶದಿಂದ ಅಪವಿತ್ರತೆಯೊದಗಿತು ಎನ್ನುವುದಾದರೆ ನಾವು ಆ ಶಕ್ತಿಗೆ ಅವಮಾನ ಮಾಡಿದಂತೆ; ನಮ್ಮ ಅಲ್ಪತನ ವನ್ನೂ ಆ ದೇವಿಗೂ ಆರೋಪಿಸಿದಂತೆ, ಅದು ತಪ್ಪು. ಸಂಪ್ರ ದಾಯವೇ ಸತ್ಯವೆಂದು ಭ್ರಮಿಸಿದ ಜನ ತಮ್ಮ ವಿಚಾರ ಶಕ್ತಿ ಯನ್ನು ಸಂಪೂರ್ಣವಾಗಿ ಕಳೆದುಕೊಂಡಿರುತ್ತಾರೆ.

ಸಂಪ್ರದಾಯ-ಸತ್ಯ: ಸಂಪ್ರದಾಯ ಸತ್ಯವಲ್ಲದಿರಬಹುದು; ಆದರೆ ಸಂಪ್ರದಾಯಕ್ಕೆ ಸತ್ಯವೇ ತಾಯಿ.

ಸಂಸಾರ : ನಂಟೂ ಕಳೆದುಕೊಳ್ಳಬಾರದು, ಗಂಟೂ ಕಳೆದುಕೊಳ್ಳಬಾರದು. ಹತ್ತು ಕುದುರೆ ಕಟ್ಟಿ ರಥ ನಡೆಸುತ್ತಾರೆ; ಹಾಗೆ ನಡೆಸಬೇಕು, ಸಂಸಾರಾನ. ಈ ಕುದುರೆಗಳನ್ನೆಲ್ಲಾ ಒಟ್ಟಿಗೆ ಒಂದೇ ದಿಕ್ಕಿನಲ್ಲಿ ನಡೆಸುವ ಲಗಾಮು ಇದೆಯಲ್ಲ ಅದು ಬಲವಾಗಿರಬೇಕು. ಪ್ರೀತಿಯೋ ವಿಶ್ವಾಸವೇ ಆ ಲಗಾಮು.

ಸಂಶಯ : ಸಂಶಯ ಗಾಳಿಯಲ್ಲಾಡುವ ಭೂತಗಳಿದ್ದಂತೆ. ಅದು ಯಾವ ಗಳಿಗೆಯಲ್ಲಿ, ಯಾರ ಮೈಯನ್ನಾದರೂ ಹೋಗಬಹುದು.

ಸಹಜತೆ-ಅಸಹಜತೆ: ಸಹಜತೆ ಜೀವನ, ಅಸಹಜತೆ ಕಲೆ.

ಸಹವಾಸ : ಲೋಕದಲ್ಲಿ ಕಾಗೆಗಳ ಸಂಖ್ಯೆಯೇ ಹೆಚ್ಚೆಂದು ಕೋಗಿಲೆ ಆತ್ಮ ಹತ್ಯೆ ಮಾಡಿ ಕೊಳ್ಳುತ್ತದೆಯೇ? ಕಾಗೆಯ ಗೂಡಿನಲ್ಲಿಯೇ ಬೆಳೆದು ಲೋಕವನ್ನು ಅದು ತನ್ನ ಮಧುರ ಕಂಠದಿಂದ ಹರ್ಷ ಪಡಿಸುವುದಿಲ್ಲವೇ? ಮನುಷ್ಯನಿಗೂ ಅದೇ ಪಾಠವಾಗಬೇಕು.

ಸ್ವರ್ಗ : ದೇವರನ್ನು ನಿರ್ಮಿಸಿದ ಮನುಷ್ಯ ಆತನ ವಾಸಕ್ಕೆ ಸ್ವರ್ಗವನ್ನು ನಿರ್ಮಿಸಿದ.

ಸಾಕು—ಬೇಕು : 'ಸಾಲದು' ಎನ್ನುವುದು 'ಬೇಕು' ಎನ್ನುವುದಕ್ಕೆ ತಾಯಿ; 'ಬೇಕು' ಎನ್ನುವುದು ಪ್ರಯತ್ನಕ್ಕೆ ಪ್ರಚೋದನೆ. ಪ್ರಯತ್ನ, ಪುರುಷ ಜನ್ಮದ ಸಾರ್ಥಕತೆ ಎನ್ನುತ್ತಾರೆ ತಿಳಿದವರು.

ಸಾಹಿತಿ : ಸಾಹಿತಿ ಜೀವನದ ಹೊಗಳು ಭಟ್ಟಂಗಿಯಲ್ಲ; ವಂದಿಮಾಗಧನಲ್ಲ, ನೀತಿಗೆಟ್ಟ ನಿಯಮಗಳನ್ನು ಹೊಗಳಿ ಅವನು ಯಾವ ಬಿರುದು ಬಾವಲಿಯನ್ನೂ ಪಡೆಯಬೇಕಾಗಿಯೂ ಇಲ್ಲ. ಅವನು ವಾಸ್ತವಿಕತೆಯ ವಿಮರ್ಶಕ,

ಸ್ವಾತಂತ್ರ್ಯ : ಬಿಡುಗಡೆಯೂ ಒಂದು ಬೇಡಿಯೇ.

ಸ್ವಾರ್ಥ : ಸ್ವಾರ್ಥದ ಭೂತ ಒಂದು ಸಲ ಮನುಷ್ಯನಿಗೆ ಹಿಡಿದರೆ ಮುಗಿದು ಹೋಯಿತು ಅದಕ್ಕೆ ಬಲಿಯಾದ ಮನುಷ್ಯ ಉಚ್ಚ, ನೀಚ ಯಾವುದನ್ನು ನೋಡುವುದಿಲ್ಲ.

ಸುಖ-ದುಃಖ : ಸುಖದ ಆಲಿಂಗನದಲ್ಲೇ ದುಃಖದ ಅವತಾರವಾಗುವುದು ಯಾರೂ ಅರಿಯದ ವಿಷಯವೇನಲ್ಲ. ಆದರೂ ಅದನ್ನು ಕೇಳಿ ತಿಳಿದೂ ಮನುಷ್ಯ ಈ ಕಾಂಚನ ಮೃಗದ ಬೇಟೆಯಾಡ ಬಯಸು ತ್ತಾನೆ. ಬಯಸಿ, ಬಯಸಿ ಸುಖ ರೂಪದ ದುಃಖವನ್ನು ಕೈಯಾರೆ ಆಹ್ವಾನಿಸುತ್ತಾನೆ. ಅದೇ ಸ್ವರ್ಗವೆಂದು ಭ್ರಮಿಸು ತ್ತಾನೆ. ಅದಿಲ್ಲದೆ ತನ್ನ ಬಾಳೇ ಅಪೂರ್ಣವೆಂದು ಮರುಗಿ ಹಂಬಲಿಸುತ್ತಾನೆ.

ಸುಖಕ್ಕೂ ದುಃಖಕ್ಕೂ ಜಾತಿಯ ಸೋಂಕಿಲ್ಲ, ಮಡಿ ಮೈಲಿಗೆಗಳ ಬಂಧನವಿಲ್ಲ.

ಸುಖಕ್ಕಿಂತ ಮಾದಕವಾದ ವಸ್ತು ಇನ್ನಾವುದು ?

ಸೂಳೆಗಾರಿಕೆ : ಮಾನವನ ಅತಿ ಭೋಗಲಾಲಸೆ ನಿರ್ಮಿಸಿದ ಈ ಭಯಂಕರ ಭೀಭತ್ಸಯಂತ್ರ ಮುರಿದು ಪುಡಿ ಪುಡಿಯಾಗಬೇಕು. ಇಲ್ಲವೆ ಗಾಂಧೀಜಿ ಹೇಳಿದಂತೆ ಈ ಬೆಂಕಿಯನ್ನು ಸೆರಗಿನಲ್ಲಿ ಕಟ್ಟಿಕೊಂಡ ಸಮಾಜ ಉಗ್ರವ್ಯಾಧಿಗಳು, ಮುರಿದ ಮನೆಗಳ ಉರಿಯಲ್ಲಿ ಬೂದಿಯಾಗಬೇಕು.

ಸ್ನೇಹ-ವ್ಯವಹಾರ : ಸ್ನೇಹಕ್ಕೆ ಸ್ನೇಹ, ವ್ಯವಹಾರಕ್ಕೆ ವ್ಯವಹಾರ. ಅವೆರಡೂ ಬೇರೆ ಬೇರೆಯಾಗಿದ್ದರೆ, ಸ್ನೇಹಕ್ಕೆ ಸ್ನೇಹಾನೂ ಉಳಿಯುತ್ತೆ ; ವ್ಯವ ಹಾರಕ್ಕೆ ವ್ಯವಹಾರಾನೂ ಉಳಿಯುತ್ತೆ.

ಸ್ತೋತ್ರ : ಸ್ತೋತ್ರವೇ ಅನುಗ್ರಹವನ್ನು ಕರೆಯುವ ದೇವಸುರಭಿಯಲ್ಲವೇ?

ಸೌಂದರ್ಯ : ಅಬ್ರಹ್ಮವಾದುದು ಈ ಜಗತ್ತಿನಲ್ಲಿ ಹೇಗಿಲ್ಲವೋ ಅಸುಂದರ ವಾದುದೂ ಈ ಜಗತ್ತಿನಲ್ಲಿ ಇಲ್ಲ ; ಆದರೆ ಅದನ್ನು ಕಾಣಲು ನಮ್ಮ ಕಣ್ಣಿಗೆ ಮಾತ್ರ ಬಲ ಬೇಕು.

ಹಣ–ಹಣವಂತ : ಹಣವುಳ್ಳವರು ಮಾಡಿದ್ದೆಲ್ಲ ಮಾದರಿ ಎಂದುಕೊಳ್ಳುವ ಜನ ಎಂದೆಂದಿಗೂ ಇದ್ದವರೆ, ಇಂದಿಗೂ ಇದ್ದಾರೆ.

ದೇವರು ಧನ, ಅಧಿಕಾರ ಕೊಡೋದು ಹತ್ತು ಜನಕ್ಕೆ ಉಪಕಾರ ಮಾಡಲಿ ಅಂತ. ಆದರೆ ಮನುಷ್ಯ ಅದನ್ನು ನೂರಾರು ಜನರನ್ನು ಸುಲಿಗೆ ಮಾಡಲು ಉಪಯೋಗಿಸುತ್ತಾನೆ.

ಹಣಕಾಸು ಶಾಶ್ವತವೇ ? ಬಿಸಿಗಿಟ್ಟ ಬೆಣ್ಣೆ ಹಾಗೆ ಕರಗಿಹೋಗುತ್ತೆ. 'ಕಾಸಿನ ಯೋಗಕ್ಷೇಮ ನೀನು ನೋಡಿಕೋ, ರೂಪಾಯಿಸ ಯೋಗಕ್ಷೇಮ ನಾನು ನೋಡಿಕೋತೀನಿ'

ಹಸಿವು : ಜೀವನದಲ್ಲಿ ಎಲ್ಲದಕ್ಕೂ ಮೊದಲು ಹೊಟ್ಟೆಯ ಆತುರ. ಜೀವನದ ಹಲವಾರು ಹಸಿವು ಬಯಕೆಗಳ ಬುದ್ಧಿ ಬೆಳೆದ ನಂತರ ಬೆಳಕಿಗೆ ಬಂದರೆ ಹಾಳು ಹೊಟ್ಟೆ ಹುಟ್ಟುವಾಗಲೇ ಬೆನ್ನಿಗೆ ಅಂಟಿಕೊಂಡೇ ಹುಟ್ಟಿರುತ್ತದೆ. ಜಗತ್ತಿನ ಎಲ್ಲ ದುಃಖ ಪಾಪದ ಬೂನಾದಿ ಹಸಿವು. ಇದು ಮಾನವನನ್ನು ದಾನವನನ್ನಾಗಿ ಮಾಡಬಲ್ಲದು. ನೀತಿವಂತನನ್ನು ಅನೀತಿಯ ಪಂಕಕ್ಕೆ ಎಳೆಯಬಲ್ಲದು.

ಹಿತೋಪದೇಶ : ನಾವು ಹೇಳುವುದನ್ನೆಲ್ಲಾ ನಾವು ಬಾಳುವ ಬಾಳು ಹೇಳಬೇಕೇ ಹೊರತು ನಾಲಿಗೆ ಹೇಳಬಾರದು.

ಹೆಣ್ಣು : ಹೆಣ್ಣು ಬರೀ ವಿಷಯದ ವಸ್ತುವಲ್ಲ. ಭೋಗ ಸಾಮಗ್ರಿಯಲ್ಲ. ಆಕೆ ಶುದ್ಧ ತ್ಯಾಗ ಮೂರ್ತಿ. ಆಕೆಯ ತ್ಯಾಗದಲ್ಲಿ ಸೃಷ್ಟಿ ಶಕ್ತಿ ಇದೆ ; ನಮ್ಮ ಭೋಗದಲ್ಲಿ ವಿನಾಶದ ವಿಷವಿದೆ.

ಹೆಣ್ಣಿನ ಬುದ್ಧಿ ಕೆಡಿಸಲು ಒಳ್ಳೆಯದಾರಿ ಹೊಗಳುವುದು, ಹೆಂಡ ಕುಡಿಸಿ ಬಿಟ್ಟರೆ ಹೆಣ್ಣು ಹುಚ್ಚಾಗಿ ಕುಣಿಯುತ್ತದೆ. ಒಮ್ಮೆ ಹೀಗೆ ಕೆಟ್ಟ ಹೆಣ್ಣು ಮತ್ತೆ ಎಂದಿಗೂ ಹತೋಟಿಗೆ ಸಿಕ್ಕುವುದಿಲ್ಲ.

ಊರು, ಮನೆ ಯಾವುದು ಹಾಳಾಗಬೇಕಾದರೂ ಹೆಣ್ಣಿನಿಂದ! ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವುದೇ ಅವನ ಹೆಣ್ಣಿನ ಅಗತ್ಯ. ಆ ರಸವಾಹಿನಿಯಲ್ಲಿ ವಿಷಯದೆ ಆ ಅಮೃತ ಚಿಲುಮೆ ನೀಡುವ ಅಮೃತವನ್ನುಣ್ಣದೆ ಯಾರಿಗೂ ಸೌಂದರ್ಯ ಸ್ವರ್ಗದ ಬಾಗಿಲು ತೆರೆಯುವುದಿಲ್ಲ ಯಾವ ಬಾಳಿನ ಸಮಸ್ಯೆಯೂ ಪೂರ್ಣವಾಗುವುದಿಲ್ಲ. ಹೆಣ್ಣಿಗೆ, ತಾನು ಕೇಳಿದುದನ್ನು ಗಂಡು ತಂದು ಕೊಟ್ಟರೆ ತೃಪ್ತಿಯೇ ಹೊರತು, ಗಂಡು ತಾನಾಗಿಯೇ ತಂದು ಕೊಟ್ಟರೂ ಅಷ್ಟು ರುಚಿಸುವುದಿಲ್ಲ.

ಹೆಂಗಸು ತನ್ನ ದುಃಖವನ್ನಾಗಲೀ, ಸುಖವನ್ನಾಗಲೀ, ಸಿಟ್ಟನ್ನಾಗಲೀ ಎಂದೂ ತಾನೊಬ್ಬಳೇ ಅನುಭವಿಸಲಾರಳು. ಆ ಭಾವದ

ಪೂರ್ಣಾನುಭವವಾಗಲು ಮತ್ತೊಂದು ಕಿವಿ. ಬಾಯಿನ ನೆರವು ಬೇಕೇ ಬೇಕು. ಎಷ್ಟೋ ಸಂಸಾರದ ಗುಟ್ಟು ಹೊರ ಬೀಳಲು ಹೆಣ್ಣಿನ ಈ ಸ್ವಭಾವವೇ ಬಹು ಮಟ್ಟಿಗೆ ಕಾರಣ.
ಹೆಣ್ಣನ್ನು ಹಾವಿನಂತೆ ಆಡಿಸಬೇಕು. ಪುಂಗಿಯನಾದಕ್ಕೆ ಹೆಡೆಯಾಡುವವರೆಗೂ ಅದು ಆಕರ್ಷಕ. ಹಿಡಿತ ಸಡಲಿತೋ. ತೂಗುವ ಹೆಡೆಯೋ ಸಾವಿನ ಸಿಡಿಲಾಗಬಹುದು.

ಹೊಗಳಿಕೆ : ವರ್ಷಕ್ಕೊಂದು ಬಾರಿ ಬಿಡುವ ಹೂವಿನ ಹಾಗಿದ್ದರೆ ಆ ಕಾಲ ಎಂದು ಬಂದೀತೋ ಎಂದು ಕಾಯುತ್ತೇವೆ. ಎಷ್ಟು ಬೆಲೆಯಾದರೂ ಕೊಟ್ಟು ಕೊಳ್ಳುತ್ತೇವೆ. ಹಾಗಿರಬೇಕು ಹೊಗಳಿಕೆ.

ಜಾಣ್ನುಡಿಗಳು — ನಾಣ್ಣುಡಿಗಳು

1 ಮಾಡಿದ್ದಕ್ಕೆ ಬದುಕೋದೆ ಸಾಕ್ಷಿ.
2 ಮೀಸೆಯು ಅಲ್ಲ, ದೇಶವನ್ನೂ ಕಾಣ.
3 ಬಿಸಿಲಿನಲ್ಲಿ ಜಾಲಿ ಮರದ ನೆರಳು ಕೋರಿ ಹೋದ ಹಾಗೆ.
4 ರೆಕ್ಕೆ ಬಲಿತ ಹಕ್ಕಿ ತಾಯಿ ಗೂಡಿನಲ್ಲಿ ಇರುವುದಿಲ್ಲ. ಅದಕ್ಕೆ ಬಂದ ರೆಕ್ಕೆ ಅದನ್ನು ಅಲ್ಲಿರಗೊಡುವುದಿಲ್ಲ; ಇದು ನಿಸರ್ಗದ ಧರ್ಮ.
5 ಎರಡು ಕೈಗಳೂ ಹೊತ್ತಿ ಉರಿಯುತ್ತಿರುವಾಗ ಯಾವ ಕೈ, ಯಾವ ಬೆಂಕಿಯನ್ನು ಆರಿಸಬೇಕು ?
6 ಕಡಲು ಕಿರು ತೊರೆಯ ಬಾಗಿಲಿಗೆ ಬಂದರೆ ಏನು ಸಿಕ್ಕೀತು ?
7 ಊರಿಗೆ ಸಾವಿರ ನಾಲಿಗೆ. ಊರೋರ ಬಾಯಿ ಕಟ್ಟೋಕಾದೀತಾ ?
8 ಕೊಟ್ಟ ಕೈಗೆ ತಗೊಳ್ಳೋದು ಹಿತವಾಗಿರುತ್ತೆ.
9 ಹತ್ತು ಕಾಯಿ ಹೊರೋ ಬಳ್ಳಿಗೆ ಒಂದು ಪೀಚು ಭಾರವೇ ?
10 ಹಸುವಿನ ಹಾಲು ಹಿರಿದೋ, ಹಾಲು ಕೊಡುವ ಹಸು ಹಿರಿದೋ ?
11 ಕಾಯನ್ನು ಹಿಸುಕಿ, ಹಣ್ಣು ಮಾಡಿ ತಿಂದು ನಾಲಿಗೆಯನ್ನೂ ಹುಳಿ ಮಾಡಿಕೊಳ್ಳುವುದೇಕೆ ?
12 ಯೋಗಿ ಪಡೆದದ್ದು ಯೋಗಿಗೆ, ಜೋಗಿ ಪಡೆದದ್ದು ಜೋಗಿಗೆ,
13 ಅಲ್ಲ ಕಣೋ ದಾಸಯ್ಯ ಅಂದ್ರೆ, ಗೋಡೆ ಹಿಂದೆ ಹೋಗಿ 'ಟಿಂಗ್' ಅಂದ್ನಂತೆ.
14 ಶಿವರಾತ್ರಿಗೆ ಏಕಾದಶೀಗಂಟ್ಬಿದ್ಹಂಗಾಯ್ತು.

15 ಮಾಡಿದೋರ ಪಾಪ ಆಡಿದೋರ ಬಾಯಲ್ಲಿ.

16 ತೊರೆ ಬಡವಾದಷ್ಟೂ ಕಡಲು ಕಿರಿದು.

17 'ನನ್ನ ತಲೆ ನಿನ್ನ ತಲೆ ಮೇಲಿದೆ' ಅಂತ ತೋರಿಸಿದರೇ ಜನ ಹೇಳಿದ ಹಾಗೆ ಕೇಳೋದು.

18 ಕುಣಿಯುವ ಕಾಲಿಗೆ ಗೆಜ್ಜೆ ಕಟ್ಟಿದಂತಾಯಿತು.

19 ಎಲ್ಲಾ ಬೇರೆಯೋರ ಎಲೆ ನೊಣ ಓಡಿಸೋರೆ. ತಮ್ಮೇಲೇಲಿ ಬಿದ್ದಿರೋ ಸತ್ತ ಕತ್ತೆ ಎತ್ತಿ ಹಾಕೋರು ಯಾರೂ ಇಲ್ಲ.

20 ಮುಳ್ಳಿನ ಮೇಲೆ ಬಟ್ಟೆ ಹಾಕಿದಂತೆ.

21 ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದಂತೆ.

22 ಊರಿಗೆ ಮಾಡಿದೋನು ಉಡು ಬಟ್ಟೆ ಕಾಣ.

23 ಶ್ರೀಮಂತರಿಗೆ ಮನೆ ದೊಡ್ಡದಾಗಿರಬೇಕು, ಬಡವರಿಗೆ ಹಿತ್ತಲು ದೊಡ್ಡದಾಗಿರಬೇಕು.

24 ಕೊಲ್ಲೂರು ಮಣ್ಣು, ಬಸರೂರು ಹುಣ್ಣು.

25 ಕೂಡಿ ಕೆಡಬಾರದು, ಕೆಟ್ಟು ಕೊಡಬೇಕು.

26 ಕಲಿಸಿಕೊಟ್ಟ ಬುತ್ತಿ, ಹೇಳಿಕೊಟ್ಟ ಮಾತು,ಎರಡೂ ಭಾಳಾ ದಿನ ಉಳಿಯೋಲ್ಲ

27 ಹುಲಿಗೆ ತನ್ನ ಕಾಡು, ಪರರ ಕಾಡು ಅಂತ ಇದೆಯೆ ?

28 ದೇವರ ಗುಡಿಗೆ ಬರೋರು, ಸೂಳೆ ಮನೆಗೆ ಬರೋರು ಯಾವತ್ತೂ ಬರೀ ಕೈಲಿ ಬರಬಾರದು.

29 ಹೋಟೆಲಿನಲ್ಲಿ ಇಳುಕೊಳ್ಳೋರು ಆವತ್ತಿನ ಛಾರ್ಜು ಎಷ್ಟು ಅಂತ ಕೇಳ್ತಾರೆ. ಖಾಯಂ ಆಗಿ ಮನೆ ಬೇಕು ಅನ್ನೋರು ತಳಪಾಯ ಎಷ್ಟು ಭದ್ರವಾಗಿದೆ ಅಂತ ನೋಡ್ತಾರೆ.

ತ.ರಾ.ಸು.ರವರು ಬಳಸಿದ ಉಕ್ತಿ ವೈಚಿತ್ರ್ಯ

--**ಎಸ್. ಶಂಕರನಾರಾಯಣ ಭಟ್ಟ**, ಎಂ.ಎ.,ಬಿ.ಎಡ್.

ಕನ್ನಡ ಸಾಹಿತ್ಯದ ಕಡೆ ಮುಖ ಮಾಡಿದವರೆಲ್ಲರೂ ತ.ರಾ.ಸು. ರವರನ್ನು ಬಲ್ಲರು. ಕನ್ನಡ ಕಾದಂಬರಿಗಳ ಕಥೆ ಕಣ್ಣಾಡಿಸಿದವರಿಗಂತೂ ಅವರ ಹೆಸರು ಮಾತ್ರ ತೀರ ಪರಿಚಿತವಲ್ಲ. ಅವರ ಕಾದಂಬರಿಗಳಲ್ಲಿರುವ ರಸಸುಧೆಯ ಪಾನದಿಂದಾದ ಆನಂದಾನುಭವವಾಗಿಯೇ ತೀರುತ್ತದೆ. ಅದಕ್ಕೆ ಅವರ ಕಾದಂಬರಿಗಳ ಮೊತ್ತಕ್ಕಿಂತಲೂ ಸತ್ವವನ್ನೇ ಹೆಸರಿಸಬೇಕಾಗಿದೆ. ಸತ್ವವಿರುವವುಗಳು ಎದ್ದು ಕಾಣುವುದು ಸಹಜವಲ್ಲವೇ? ಸತ್ವಹೀನ ವಸ್ತುಗಳು ಯಾರ ಕಣ್ಣನ್ನೂ ಸೆಳೆಯದೆ ಹೋಗುವುದು ವಿಶೇಷವೇನಲ್ಲ. ತ.ರಾ.ಸು. ಬಳಸಿದ ರಚನಾತಂತ್ರ ಸಂವಿಧಾನಾದಿಗಳು ಉಲ್ಲೇಖನೀಯವಾದಂತೆ ಅವರ ಭಾಷೆಯೂ ಮೇಲ್ಮಟ್ಟದ್ದಾಗಿದೆ. ಅವರ ಸೃಷ್ಟಿಯ ಭಾಷಾತರುಣಿ ಮನಮೋಹಕಳಾಗಿ ಬೆಳೆದಿದ್ದಾಳೆ. ತನ್ನ ಹಾವ, ಭಾವ ವಿಲಾಸಗಳಿಂದ ಶೋಭಿಸಿದ್ದಾಳೆ. ಬೆಡಗುವಡೆದ ನೋಟಗಳಿಂದ ಆಕರ್ಷಿಸುತ್ತಿದ್ದಾಳೆ. ಇದಕ್ಕೆ ಅವರ ಭಾಷೆಯಲ್ಲಿ ಹೆಜ್ಜೆ ಹೆಜ್ಜೆಗೂ ಮಿನುಗುತಾರೆಯಂತೆ ಕಂಗೊಳಿಸುವ ವೈಚಿತ್ರ್ಯಪೂರ್ಣವಾದ ಸರಸೋಕ್ತಿಗಳೇ ಕಾರಣ.

ತ.ರಾ.ಸು.ರವರ ಭಾಷೆಯಲ್ಲಿ ಎಡೆಗೊಂಡ ಉಕ್ತಿಗಳು ರಸಲೋಕದ ಪ್ರತಿನಿಧಿಗಳು. ಸಜೀವತೆಯ ಸಾಕಾರಮೂರ್ತಿಗಳು. ಅವುಗಳು ರಸವಾಹಕಗಳಾಗಿದ್ದು ಕಾವ್ಯಾರಾಮವನ್ನು ಶೃಂಗರಿಸಿದ ಮಕರಂದಪೂರಿತ ಕುಸುಮಗಳಾಗಿವೆ.ಅವುಗಳಿಂದಾಗಿ ಭಾಷೆ ಘನಗಂಭೀರತೆಯಿಂದ ಹರಿಯುವ ಗಂಗಾನದಿಯಾಗಿದೆ. ಸುವಾಸನೆಯನ್ನು ಸುತ್ತಲೂ ಬೀರುವ ಪುಷ್ಪಮಂಜರಿಗಳಿಂದಾವೃತವಾದ ತರುವಾಗಿದೆ. ಪಾತ್ರಗಳಿಗೊಪ್ಪುವ ಭಾವನಾಲಹರಿ, ಅದಕ್ಕೊಪ್ಪುವ ಆರರ ಮೇಲಣ ಶೈಲಿ, ಶೈಲಿಗೆ ತಕ್ಕುದಾದ ಶಬ್ದಪ್ರಯೋಗ, ಮುದ್ದಣನು ಹೇಳಿದಂತೆ "ಕರ್ಮಣಿ ಸರದೊಳ್ ಚೆಂಬವಳ ಮರಿ ಕೋದಂತಿ"ರುವ ಉಚಿತ ಸಂಸ್ಕೃತ ಪದಗಳ ಕೋಯುವಿಕೆ, ಆ ಶಬ್ದಗಳಿಗೆ ಅನುಗುಣವಾದ ಭಾವಗಭೀರತೆ, ಭಾವಗಭೀರತೆಯನ್ನು ಉಜ್ವಲಗೊಳಿಸುವ ಉಕ್ತಿವೈಚಿತ್ರ್ಯ ಅವರ ಭಾಷೆಯ ಜೀವಂತಿಕೆಗೆ ಸಂಜೀವಿನಿಯಾಗಿದೆ.

ತ.ರಾ.ಸು.ರವರ ಭಾಷೆಯಲ್ಲಿ ಹಾಸುಹೊಕ್ಕಾಗಿರುವ ಉಕ್ತಿವೈವಿಧ್ಯ ಚೇತೋಹಾರಿಯಾದುದು. ರಸಕವಳವಾದುದು ಹಾಗೂ ದೇದೀಪ್ಯಮಾನವಾದುದು. ಆ ಉಕ್ತಿವೈಚಿತ್ರ್ಯದ ಚಿತ್ರ ಮುಖ್ಯವಾಗಿ, ಅವರು ಉಪಯೋಗಿಸಿದ ಉಪಮೆಗಳು ಮತ್ತು ರೂಪಕಗಳಿಂದ ಮೆರುಗು ಪಡೆದಿದೆ. ಉಪಮಾವಾಕ್ಯಗಳ, ರೂಪಕ

ನಿರೂಪಣೆಯ ಪರಿಚಯ ಓದುವವನಿಗೆ ಎಲ್ಲೆಂದರಲ್ಲಿ ಆಗಿಯೇ ತೀರುತ್ತದೆ. ಸಹಜವೂ ಸರಳವೂ, ಉಚಿತವೂ ಆದ ಹೋಲಿಕೆಗಳು ಅವರ ಬಾಷೆಯಲ್ಲಿ ಪ್ರಕಾಶಿಸುತ್ತಿರುತ್ತವೆ. ಅವುಗಳು ಸಂದರ್ಭಕ್ಕೆ ತಕ್ಕುಗಿದಾಗಿ ತಮ್ಮ ಸ್ಥಾನವನ್ನು ಅಲಂಕರಿಸಿಕೊಂಡಿವೆ. ಪಾತ್ರಗಳ ಸ್ವಭಾವ ಚಿತ್ರದ ಸ್ಪಷ್ಟತೆಯನ್ನು ಹೆಚ್ಚಿಸುವಂತೆ ನಿಲುವನ್ನುತಾಳಿಕೊಂಡಿವೆ. ಭಾಷೆಯ ವಂತಿಕೆಯನ್ನು ವೆಗ್ಗಳಿಸಿವೆ. ಹೀಗಾಗಿ ಭಾಷೆ ಕಾವ್ಯಮಯವಾಗಿದೆ. ಹೃದ್ಯವಾಗಿದೆ.

ತ.ರಾ.ಸು.ರವರು ಬಳಸಿದ ಉಕ್ತಿವೈಚಿತ್ರ್ಯದ ರಹಸ್ಯ ಅವರು ಅದಕ್ಕಾಗಿ ಕೈಗೆತ್ತಿಕೊಂಡ ಪ್ರಾಕೃತಿಕ ವಸ್ತುಗಳು, ಭೌತಿಕ ಪದಾರ್ಥಗಳು, ಅಮೂರ್ತ ವಿಚಾರಗಳು ಹಾಗೂ ಮಾನವೀಯ ಭಾವನೆಗಳಲ್ಲಿ ಹುದುಗಿದೆಯೆಂಬುದನ್ನು ಕೆಲವು ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. ಪ್ರತ್ಯಕ್ಷವಾಗಿ ಕಂಡುಂಡ ಸತ್ಯವನ್ನು ಆತ್ಮಜ್ಞಾನದ ಒರೆಗೇರನ್ನೆಳೆದು, ಅನುಭವದ ಮೂಲಕ ಅವುಗಳನ್ನು ಹೊರಗೆ-ಡವುತ್ತಾರೆ ತ.ರಾ.ಸು.

ಕಮಲವಿದ್ದ ಹಾಗೆ ನಮ್ಮ ಬಾಳು [1] ,ಹನಿಹನಿಯಾಗಿ ಬಿದ್ದರೂ ನೀರು ಕಡೆಗೊಂದು ದಿನ ಕೋಡುಗಲ್ಲನ್ನೇ ಕದಲಿಸುವಂತೆ ಲೋಕದ ಮಾತು ನಿನ್ನ ನಂಬಿಕೆಯನ್ನು ಕೆಡಿಸಬಹುದು [2] ,ಬೆಳಗಿನ ಬೆಳಕು ಉರಿಬಿಸಿಲಾಗದೆ, ಚಳಿಗಾಲ ದಲ್ಲಿ ಬಯಸುವ ಹೊದಿಕೆಯಂತೆ ಹಿತವಾಗಿದೆ [3] ಅಷ್ಟುದೂರದಲ್ಲಿದ್ದುದನ್ನೂ ದಹಿಸುವ ಬೆಂಕಿಯ ಝಳದಂತಿದ್ದ ಆಕೆಯ ಕೊರಗಿನ ಬೇಗೆಯನ್ನು ತಾನೇ ಸಹಿಸಲಾಗಿದೆ [4] , ಚಂದ್ರೋದಯವನ್ನು ಕಂಡ ಕಡಲಿನಲ್ಲಿ ಏಳುವ ನೂರಾರು ಪೀಚಿಗಳಂತೆ ಆತನ ಹೃದಯದಲ್ಲಿ ಪುತ್ರೇಚ್ಛೆಯಿಂದ ಭಾವನಾತರಂಗಗಳು ಮೂಡುವವು [5] ಬೆಣಚು ಕಲ್ಲಿನಲ್ಲಿ ಕಡೆದ ವಿಗ್ರಹದಂತೆ ಕುಳಿತು ಬಿಟ್ಟಿದ್ದ ಶೇಷಗಿರಿ ಭಟ್ಟ [6] ವೇಗವಾಗಿ ಸುತ್ತುವ ಚಕ್ರಕ್ಕೆ ಕಟ್ಟಿದಂತೆ ಯಶೋನಾಥನ ತಲೆ ಸುತ್ತುತ್ತಿತ್ತು [7] ನಡುಹಗಲ ಮಾರ್ತಾಂಡನಂತೆ ಉಜ್ವಲ ವೈಭವದಿಂದ ವಿಧಿ ಇದ್ದಕ್ಕಿದ್ದ ಹಾಗೆ ನಡುರಾತ್ರಿಯ ಕತ್ತಲನ್ನು ಕವಿಯಿಸಿತು [8] ಖಡ್ಗಜ್ವಾಲೆಯ ಪ್ರಚಂಡದೀಧಿತಿಯ ಇದಿರು ಅರಿಬಲ ಮಂಜಿನ ಮೋಡದಂತೆ ಕರಗಿತು [9] ವಿಜಯಯಾತ್ರೆ ಹೊರಟ ಹೊಯ್ಸಳ ಸೇನೆಗೆ ದಿಗಂಗನಿ ಎತ್ತಲೆಂದು ತಂದ ಕುಂಕುಮಾರತಿಯ ಹೊಂದಳಿಗೆಯಂತೆ ಮೂಡಲಲ್ಲಿ ರವಿ ಮೂಡಿದನು [10] ಹಿಮಾಲಯದ ಮೇಲೆ ಚಂದ್ರೋದಯವಾದಂತೆ, ಅವರ

---

1 ಕಂಬನಿಯ ಕುಯಿಲು, ಪುಟ ೪೯
2 ಅದೇ, ಪುಟ ೧೦೨
3 ಬೆಳಕು ತಂದ ಬಾಳಕ, ಪುಟ ೭
4 ಅದೇ, ಪುಟ ೨೧
5 ಅದೇ, ಪುಟ ೨೪
6 ಹಾವು ಹಿಡಿದವರು, ಪುಟ ೧೫
7 ಅದೇ, ಪುಟ ೧೬೮
8 ಕೀರ್ತಿ ನಾರಾಯಣ ಪುಟ ೪
9 ಅದೇ, ಪುಟ ೬
10 ಅದೇ, ಪುಟ ೮೪

ಮೊಗದ ಮೇಲೆ ಮಂದಹಾಸ ಮೂಡಿತು[11] (ಹಳ್ಳಿಯ ಜನ) ಕೆರಳಿದ ಕೋಣಗಳಂತೆ ಸೈನಿಕರ ಮೇಲೆ ಬಿದ್ದರು[12] ಅಶ್ವತ್ಥ ವೃಕ್ಷದ ಎಲೆಗಳು ಗಾಳಿಯಲ್ಲಿ ಗೆಜ್ಜೆಯಲುಗಿಸಿದಂತೆ ಸದ್ದು ಮಾಡಿದರೆ[13] ಭಯಕ್ಕೆ ಹುಡುಗನ ಕೈ ಅರಳಿಯ ಚಿಗುರಿನಂತೆ ಕಂಪಿಸುತ್ತಿತ್ತು. [14] ಬಯಲು ಸೀಮೆಯ ನಡುವೆ ಮಲೆನಾಡಿನ ತುಂಡೊಂದನ್ನು ತಂದಿಟ್ಟಂತಿದೆ ಹಳ್ಳಿ[15] ಮೃದಂಗನಾದದಂತೆ ಮಿಡಿವ ಜಲಪಾತದ ಗಂಭೀರ ಘೋಷ[16] ಭೂತಕನ್ನಡಿಯೊಳಗಿಂದ ಹಾದುಬರುವ ಬೆಳಕಿನ ಕಿರಣದಂತೆ, ನಿನ್ನ ಬಯಕೆಯೂ ಪ್ರಭಾವಶಾಲಿಯಾಗುತ್ತದೆ[17] ಒಣಗಿದ ಗಿಡದಂತೆ ಬರಿಮೂಳೆಯಾದ ಈ ಮೈಯಲ್ಲಿ ಆ ರಸದ ಚಿಲುಮೆ ಎಲ್ಲಿ ಅಡಗಿರಬಹುದು?[18] ನೀರು ಹಾಕಿ ಬೆಳೆಸಿದ ಬಳ್ಳಿ ಹೆಚ್ಚು ಹೂ ಕೊಡುವಂತೆ, ಕಡೆದ ವಜ್ರದ ಕಾಂತಿ ಹೆಚ್ಚಾಗುವಂತೆ, ಅನುಭವದಿಂದ ಪ್ರತಿಭೆಯೂ ಬೆಳೆದು ಉಜ್ವಲವಾಗುತ್ತದೆ [19] ಮುಂಗಾರಿನ ಮೇಘದಂತೆ ಗಂಭೀರವಾಗಿ ಘೋಷಿಸಿ, ಪ್ರವಾಹದಂತೆ ಭೋರ್ಗರೆದು, ಜಲಪಾತದಂತೆ ಭೋರೆಂದು ಧುಮುಕಿ, ಮುಗಿಲಾಳದಲ್ಲಿ ರೆಕ್ಕೆ ಚಲಿಸದೆ ಹಾರುವ ಹದ್ದಿನಂತೆ ತೇಲುತ್ತಾ ಹಾಡು ಹರಿಯುತ್ತಿತ್ತು [20] ಇಂತಹ ಹೋಲಿಕೆಗಳ ಔಚಿತ್ಯ ವೈಚಿತ್ರ್ಯವನ್ನು, ಅವುಗಳಿಂದ ಹೊಮ್ಮುವ ವಿಚಾರದೀಧಿತಿಯನ್ನು ತ.ರಾ.ಸು.ರವರ ಉಕ್ತಿಗಳಲ್ಲಿ ಮಾತ್ರ ಕಾಣಲು ಸಾಧ್ಯವಿದೆಯೆಂದರೆ ತಪ್ಪಾಗದು.

ನಾಗರವಾಸದ ಅನುಭವಕ್ಕೆ 'ನೀರಿನಿಂದ ತೆಗೆದು ಕೆಳಗೆ ಒಗೆದ ಮೀನಿನ[21] ಅವಸ್ಥೆಯನ್ನು ಉದಾಹರಿಸಿದ್ದಾರೆ. ಮುಗ್ಧನಾಗಿ ಮಾತು ಕೇಳಿದುದನ್ನು 'ಜಲಪಾತದ ಇದಿರು ನಿಂತ ಹಸುಮಗುವಿನಂತೆ'[22] ಎಂದಿದ್ದಾರೆ. ಕಣ್ಣಲ್ಲಿ ನಿಂತ ನೀರು, ಕಡಿದ ಮುತ್ತಿನ ಮಾಲೆಯಂತೆ ಕೆನ್ನೆಯ ಮೇಲೆ ಹರಿಯಿತಂತೆ[23] ಬೆಳೆದ ಪಟ್ಟಣ ದೈತ್ಯನಂತೆ ಕಾಣಿಸಿತು [24] ಕಂಪಿಸುವ ಮಾತು ವಿದ್ಯುದಲೆಯಂತಾಯಿತು [25]. ಬರಡಾದ ಮರದಲ್ಲಿ ಅರಳಿದ ಮುತ್ತುಗದ ಹೂಗಳು ಕೆನ್ನಾಲಗೆಯನ್ನು ಚಾಚಿದಂತೆ ಇವೆಯಂತೆ[26] ಬಿಸಿಲಿನಲ್ಲಿ ಹೊಳೆಯುತ್ತಿದ್ದ ಬೆಣಚುಕಲ್ಲಿನ ಬಂಡೆಗಳು ಉಜ್ಜಿದ ಹುಳುಕು ಹಲ್ಲಿನಂತಿವೆಯಂತೆ[27] ಹೊಸದು ಹುರಿಮಾಡದಿದ್ದ ಹಗ್ಗದ ಹಾಗೆ ಪ್ರಾಯದ ಬುದ್ಧಿ ಕಡಿಯುವುದು ಸುಲಭವಂತೆ [28] ನಂಬಲು ಸಾಧ್ಯವಿಲ್ಲದ

---

11 ರಕ್ತರಾತ್ರಿ ಪುಟ ೩೩
12 ಅದೇ ಪುಟ ೮೬
13 ಹಂಸಗೀತೆ ಪುಟ ೫೨
14 ಅದೇ, ಪುಟ ೫೩
15 ಅದೇ, ಪುಟ ೬೧
16 ಅದೇ, ಪುಟ ೬೪
17 ಅದೇ, ಪುಟ ೮೬
18 ಅದೇ, ಪುಟ ೯೨
19 ಅದೇ, ಪುಟ ೧೦೬
20 ಅದೇ, ಪುಟ ೨೦೦
21 ಕೇದಿಗೆ ವನ, ೨೮
22 ಅದೇ, ಪುಟ ೩೪
23 ಅದೇ, ಪುಟ ೩೩೯
24 ಅನ್ನಾವತಾರ - ಪು ೧೫
25 ರಕ್ತತರ್ಪಣ - ಪುಟ ೩೧
26 ಹಾವು ಹಿಡಿದವರು ಪುಟ ೨೦
27 ಅದೇ, ಪುಟ ೨೨
28 ಅದೇ, ಪುಟ ೧೫೮

ಪ್ರಾಯದ ಬುದ್ಧಿಯನ್ನು ಪ್ರವಾಹಕ್ಕೆ ಸಿಕ್ಕ ಹುಲ್ಲಿಗೆ[29] ಹೋಲಿಸಿದುದರ ಔಚಿತ್ಯ ನೋಡಬೇಕು. ವೃತ್ತಿಗೆ ಹೊಸಬನಾದ ಹಾವಾಡಿಗನ ಅವಸ್ಥೆಯ[30] ಉಪಮೆಯಲ್ಲಿರುವ ಸ್ವಾರಸ್ಯವನ್ನು ಅರಿಯಬೇಕು. ಬಗೆಹರಿಯದ ಚಿಂತೆವ್ಯಥೆಗಳಲ್ಲಿ ಸಿಲುಕಿ ಶತಪಥ ಹಾಕುತ್ತಿದ್ದ ಲಿಂಗಣ್ಣನಾಯಕನ ಸ್ಥಿತಿಯನ್ನು ಬೋನಿನಲ್ಲಿ ಬಿದ್ದ ಪಶುವಿಗೆ ಹೋಲಿಸಿದ[31] ಉಕ್ತಿ ವೈಶಿಷ್ಟ್ಯವನ್ನು ತಿಳಿಯಬೇಕು. ಅಸಮಾಧಾನಗೊಂಡ ಚಿಕ್ಕಣ್ಣನಾಯಕನ ಮನಃಸ್ಥಿತಿಯನ್ನ ಮೊದಲ ತುತ್ತಿನಲ್ಲಿಯೇ ಕಲ್ಲು ತಿಂದವನ ಸಿಡಿಮಿಡಿಗೊಳ್ಳುವ ಮನಸ್ಸಿಗೆ[32] ಉದಾಹರಿಸಿದುದರ ಹೊಳಹನ್ನು ಅವಲೋಕಿಸಬೇಕು. ಧೈರ್ಯಶಕ್ತಿಯೆಲ್ಲವೂ ಉಡುಗಿಹೋಗಿ ಆ ಕಂಠ ಹೇಳಿದ ಮಾತುಗಳನ್ನು ಕೇಳಿದ ಚಿಕ್ಕಣ್ಣನಾಯಕನನ್ನು ಸರ್ಪಾಕರ್ಷಿತವಾದ ಮಂಡೂಕದಂತೆ[33] ಎಂದ ಮಾತಿನಲ್ಲಿರುವ ಮಿನುಗನ್ನು ನೋಡಬೇಕು. ಹಿಂದಿನ ಸಂಜೆ ಕವಿದ ವಿಪತ್ತನ್ನು ಗುಡ್ಡದಂತೆ ಮತ್ತು ಮರುಹಗಲು ಹರಿವ ವೇಳೆಗೆ ಮಾಯವಾದ ಅದನ್ನು ಇಬ್ಬನಿಯಂತೆ[34] ಎಂದಿರುವ ನುಡಿಗಳ ಶೋಭೆಯನ್ನು ಲಕ್ಷಿಸಬೇಕು ಕನಕಮ್ಮನ ಕಣ್ಣುಗಳಿಂದ ಒಸರಿದ ಕಂಬನಿ ಹನಿಹನಿಯಾಗಿ ಕಣ್ಣಂಚಿನಿಂದ ಧುಮುಕಿದ ರೀತಿಯನ್ನು ಉಗುರಿನಿಂದ ಬಗೆದ,ಹಳ್ಳದ ಮರಳಿನಿಂದ ಹನಿಹನಿಯಾಗಿ ಒಸರುವ ಜಲದಂತೆ, ಚೂರಿಯಿಂದ ಕತ್ತರಿಸಿದ ರಬ್ಬರ್ ವೃಕ್ಷಗಳ ವಕ್ಷದಿಂದ ಹನಿಹನಿಯಾಗಿ ಜೀವರಸ ಧುಮುಕುವಂತೆ[35] ಎಂಬ ವಾಕ್ಯದ ಕಾಂತಿಯನ್ನು ಮನಗಾಣಬೇಕು. ಬೆವರಿನಲ್ಲಿ ತೊಯ್ದು ಮೈಗೆ ಹತ್ತಿಸಿಕೊಂಡ ಕುಪ್ಪಸವನ್ನು ಸೀಸದ ಕವಚದಂತೆ[36] ಎಂದು ಹೇಳಿದುದರ ಸಹಜತೆಯನ್ನು ಪರಾಂ–ಬರಿಸಬೇಕು. ಬಾಡುತ್ತಿದ್ದ ಬಳ್ಳಿ ತಟಕ್ಕನೆ ಚಿಗುರೊಡೆದಂತೆ ಮತ್ತೆ ಮೂರು ಮಕ್ಕಳಾಗಿದ್ದುವು[37] ಎಂಬ ಉಕ್ತಿಯ ಸತ್ಯವನ್ನು ವಿಚಾರಿಸಬೇಕು. ಉರಿಮುಂಜುಗಳ ಸುರಿತದಲ್ಲಿ ಅವಳ ಹೃದಯ ಪಾತ್ರೆ ಕುದಿದು ಅದರಲ್ಲಿದ್ದ ಅವಳ ಜೀವಜಲವೇ ಹಬೆಯಾಗಿ ಮೇಲೆದ್ದು ಹನಿಯಾಗಿ ಇಳಿದಂತೆ ಅವಳ ನೇತ್ರಪಾತ್ರೆಯಿಂದ ಕಂಬನಿಯ ಹನಿಗಳು ತುಳುಕುತ್ತಿದ್ದವು[38] ಎಂಬ ಮಾತಿನಲ್ಲಿ ಹೊಳೆಯುವ ಅರ್ಥದ ನವುರು ನವುರಾಗಿರುವ ಸೊಬಗನ್ನು ಸವಿಯಬೇಕು. ಒಂದೇ ಕಾಲದಲ್ಲಿ ಭಾವಪ್ರಪಂಚವನ್ನೇ ವ್ಯಕ್ತಪಡಿಸುವ ಗಾಯಕನ ಪ್ರತಿಭೆಯಂತೆ ಹಸಿರು ಬಣ್ಣವೊಂದರಲ್ಲೇ ಲೋಕದ ಚೆಲುವನ್ನೆಲ್ಲ ತುಂಬಿದ ಪ್ರಕೃತಿಯ ಪ್ರತಿಭೆ ನಿಜವಾಗಿಯೂ ಆಗುಂಬೆಯ ಮಾರ್ಗ

---

29 ಹಾವು ಹಿಡಿದವರು - ಪುಟ ೧೬೬

30 ರಾಜ್ಯದಾಹ, ಪುಟ ೧೧

31 ಅದೇ, ಪುಟ ೨೬

32 ಅದೇ, ಪುಟ ೫೩

33 ಅದೇ ಪುಟ ೬೩

34 ಅದೇ, ಪುಟ ೧೪೮

35 ಪಂಜರದ ಪಕ್ಷಿ, ಪುಟ ೨೫.

36 ಅದೇ, ಪುಟ ೧೬

37 ಅದೇ, ಪುಟ ೫೯

38 ಅದೇ, ಪುಟ ೨೦೯

ಜೀವಂತ ಕಪಿತೆ[39] ಎಂಬಲ್ಲಿರುವ ಮಾತಿನ ಚಿತ್ರ ವೈಚಿತ್ರ್ಯವನ್ನು ಕಂಡುಣಬೇಕು. ದೂರ ಬಹು ದೂರದಲ್ಲಿ ಕಣ್ಣು ಹೊಡೆಯುವ, ಹೊಳೆವ ಕಡಲ ತೆರೆಯನ್ನು ಮಿಂಚಿನ ಅಲಗಿನಂತೆ[40] ಎಂದಿರುವ ಉಕ್ತಿಯ ಶಕ್ತಿಯಂನ್ನು ಲಕ್ಷಿಸಬೇಕು.

ಇದರಂತೆ ರೂಪಕ ನಿರ್ಮಾಣದಲ್ಲಿಯೂ ತ.ರಾ.ಸು. ರವರದು ಎತ್ತಿದ ಕೈ. ಅದರಿಂದ ನಿರ್ಮಿತವಾದ ಉಕ್ತಿಗಳು ಭಾವ ಪುಷ್ಟಿಯನ್ನು ಹೆಚ್ಚಿಸಲು ಸಹಕಾರಿಗಳಾಗಿವೆ. ನೈಜ ಚಿತ್ರ ಕಂಗೊಳಿಸುವಂತೆ ಮಾಡಲು ಮುಂದಾಗಿವೆ. ಅಂದದ ಚೆಂದದ ಕಲ್ಪನಾಲತೆ ಕುಸುಮಿಸಿ, ಬೆಡಗನ್ನೀಯುವಂತಾಗಲು ನೆರವಾಗಿವೆ. ಸೈನ್ಯ ಕ್ರಾಂತಿಯ ಹಂಚ್ಚು ಹೊಳೆ [41] , ಹೆಮ್ಮೆಯ ಬೆಳಕು [42] , ಪ್ರತೀಕಾರ ಕೃಪೆ [43] , ವಚನದ ಶೃಂಖಲೆ [44] ,ನೋವಿನ ಚಕ್ರ [45] , ಚಿಂತೆಯ ಗೆದ್ದಲ ಗೂಡು [46] , ಅಸಮಾಧಾನದ ಹೊಗೆ [47] , ಆಸೆಯ ಪ್ರೇತ [48], ಶಾಂತಿಯ ಬೆಳದಿಂಗಳು [49], ಒಳ ಸಂಚುಗಳ ಮುಳ್ಳ ಪೊದರುಗಳು [50], ಮುಳ್ಳಿನ ಮಂಚ [51], ಕಣ್ಣ ನೋಟದ ಉಯ್ಯಾಲೆ [52], ಆತ್ಮಾವಹೇಳನದ ಶಾಖ [53]. ಮೈಯ ಪಂಜರದಲ್ಲಿದ್ದ ಜೀವದ ಹಕ್ಕಿ [54], ಈ ರೀತಿಯ ಮಾತುಗಳಿಂದ ಹೊಮ್ಮುತ್ತಲೇ ಇರುವ ಭಾವದ ಹಾಗೂ ಅರ್ಥದ ಹೊಂಗಿರಣಗಳು ಓದುವವನ ಕಣ್ಮನಗಳನ್ನು ಬೆಳಗಿಸುತ್ತವೆ.

ಬುದ್ಧಿಯನ್ನು ಹಾಲನ್ನಾಗಿ [55]. ಬಿಳಿ ನೊರೆಯನ್ನು ಮುತ್ತನ್ನಾಗಿ [56], ಅಕ್ಕರೆಯನ್ನು ಹೂ ಬುಟ್ಟಿಯನ್ನಾಗಿ [57],ವ್ಯಂಗ್ಯವನ್ನು ಕೂರಲಗನ್ನಾಗಿ[58],ಅಭಿಮಾನವನ್ನು ವಿಗ್ರಹವನ್ನಾಗಿ [59], ಬಾಳನ್ನು ಗಾಳಿ ಪಟವನ್ನಾಗಿ ಮತ್ತು ಅದಕ್ಕೆ ಹೆಬ್ಬಯಕೆಯನ್ನು ಸೂತ್ರವನ್ನಾಗಿ [60], ಗೌರವವನ್ನು ಗೋಪುರವನ್ನಾಗಿ [61], ಕರುಣೆಯನ್ನು ಕೊಳನ್ನಾಗಿ [62], ಸ್ವಾತಂತ್ರ್ಯವನ್ನು ಕಿರೀಟವನ್ನಾಗಿ [63], ಕಾವ್ಯವನ್ನು ಮಣಿಮುಕುರವ

---

39 ಇನ್ನೊಂದು ಮುಖ, ಪುಟ ೨
40 ಇನ್ನೊಂದು ಮುಖ ಪುಟ ೮
41 ರಾಜ್ಯ ದಾಹ, ಪುಟ ೩೫
42 ಅದೇ, ಪುಟ ೩೭
43 ಅದೇ, ಪುಟ ೩೯
44 ಅದೇ, ಪುಟ ೩೯
45 ಹಾವು ಹಿಡಿದವರು ಪುಟ ೧೫೫
46 ಅದೇ, ಪುಟ ೧೭೩
47 ರಾಜ್ಯ ದಾಹ, ಪುಟ ೫೬
48 ರಕ್ತರಾತ್ರಿ, ಪುಟ ೮
49 ಅದೇ, ಪುಟ ೩೨
50 ಕಂಬನಿಯ ಕುಯಿಲು ಪುಟ ೨೫
51 ಅದೇ, ಪುಟ ೨೫
52 ಪರಿಣಾಮ, ಪುಟ ೧೧
53 ಬೆಳಕು ತಂದ ಬಾಲಕ ಪುಟ ೧೬
54 ಕೀರ್ತಿ ನಾರಾಯಣ ಪುಟ ೧೧
55 ಅದೇ, ಪುಟ ೨೫
56 ಹಂಸಗೀತೆ, ಪುಟ ೬೪
57 ಅದೇ ಪುಟ ೯೪
58 ಕೇದಿಗೆವನ, ಪುಟ ೩೬
59 ಅದೇ, ಪುಟ ೫೫
60 ಅದೇ, ಪುಟ ೮೦
61 ಅದೇ, ಪುಟ ೨೭೧
62 ಅನ್ನಾವತಾರ ಪುಟ ೨
63 ಅದೇ, ಪುಟ ೧೯

ನ್ನಾಗಿ 64, ಪರಿಗಣಿಸಿದ ವೈಚಿತ್ರ್ಯ ಉಕ್ತಿ ನಾಟ್ಯ ಸರಸ್ವತಿಯ ಕಾಲಿಗೆ ಕುಂದಣದ ಅಂದವಿಟ್ಟಂತಾಗಿದೆ. ಇಂತಹ ಮಾತುಗಳು ಒಂದೇ, ಎರಡೇ ನೂರಾರು ಲಭಿಸುತ್ತವೆ.

ಇಷ್ಟು ಮಾತ್ರವಲ್ಲದೆ, ಹೊಗಳಿಕೆಯ ಮಾತು ಕೇಳಿ ಆಕೆಯ ಹೃದಯ ಹೂವಾಗಿ ಅರಳಿತ್ತು 65, ಒಂದೊಂದು ಮಾತೂ ಕಾದ ಗುಂಡಾಗಿತ್ತು 65, ಅಲೆದ ಲೆದು ಅವನ ಮೈ ಜಾಲಿಯ ಕೊರಡಾಗಿತ್ತು 67, ಅಕ್ಕರೆಯ ಜೇನಿನಲ್ಲಿ ಅದ್ದಿ ತೆಗೆದ68, ನಂಬಿಕೆಯ ಹೂವಿನಲ್ಲಿ ಯಾವ ಸಂಶಯದ ಕೀಟವೂ ಸೇರಲು ಅವಕಾಶವಿಲ್ಲ 69, ಹರ್ಷದ ತೆರೆ ಮೂಡಿಸುವಂಥ ಹಿತವಾದ ಮಿಂದುನಗೆ 70, ಕ್ರೋಧದ ಅಣೆ ಕಟ್ಟಿನ ಒಂದೆ ಒತ್ತಿ ನಿಂತಿದ್ದ ಪ್ರೀತಿ ಕಟ್ಟನ್ನು ಕಿತ್ತು ನುಗ್ಗಿತು 71, ಅವರು ಹೇಳಿದ ನಾಲ್ಕು ಮಾತು ನನ್ನ ಊಹಾ ಯಂತ್ರಕ್ಕೆ ಕೀಲು ಕೊಟ್ಟಿತ್ತು 72 ಎಂಬಲ್ಲಿನ ವೈಚಿತ್ರ್ಯಗಳನ್ನು ಕಂಡೇ ಅರಿಯಬೇಕು. ಉಂಡೇ ತಣಿಯಬೇಕು.

ಮೇಲೆ ಉದಾಹರಿಸಿದಂತಹ ಉಕ್ತಿ ವೈಚಿತ್ರ್ಯಗಳು ತ.ರಾ.ಸು. ರವರ ಭಾಷೆಯ ವಿಶೇಷವಾದ ಕೊಡುಗೆಗಳಾಗಿವೆ. ಅವುಗಳು ಭಾಷೆಯಲ್ಲಿ ಕನ್ನಡಿ ಕಟ್ಟಿದಂತಿದೆ. ಅವುಗಳಿಗೆ ಪ್ರಕೃತಿಯ ಗರ್ಭದಲ್ಲಿರುವ ಪ್ರತ್ಯೇಕ ವಸ್ತುಗಳು ಹೂವಾಗಿ ಅರಳಿ ಕಂಪಿನ ಹಾಗೂ ಸೊಂಪಿನ ರಸವನ್ನು ಧಾರೆಯೆರೆಯುತ್ತಿವೆ. ಅವುಗಳು ರಸಭಾವದಿಂದ ಪ್ರಬುದ್ಧವಾಗಿವೆ. ಪ್ರಕೃತಿ ವರ್ಣನೆಯಲ್ಲಿ ಮತ್ತು ಮಾನವ ಸ್ವಭಾವ ವರ್ಣನೆಯಲ್ಲಿ ಅವುಗಳ ಬೆಳವಣಿಗೆ ಉತ್ತರೋತ್ತರವಾಗಿ ಮುಗಿಲೆತ್ತರಕ್ಕೇರುತ್ತದೆ. ಪಾತ್ರಗಳ ಮಾನಸಿಕ ಭಾವನೆಗಳ ಅಭಿವ್ಯಕ್ತಿಯಲ್ಲಿ ಅಲೆ ಅಲೆಯಾಗಿ ಬರುತ್ತಿರುತ್ತವೆ. ಆದರಿಂದಾಗಿ ಇಂತಹ ಉಕ್ತಿಗಳ ಬಳಕೆ ಭಾಷೆಯ ಒಳ ಹೊರಗನ್ನು ಥಳ ಥಳಿಸುವಂತೆ ಮಾಡಿದೆ. ಪಾತ್ರಗಳಿಗೆ ಜೀವಂತ,ಸ್ವರೂಪವನ್ನು ಕೊಟ್ಟಿದೆ. ●

---

64 ಅದೇ, ಪುಟ ೯೪
65 ರಕ್ತ ತರ್ಪಣ ಪುಟ ೨೨
66 ಅದೇ, ಪುಟ ೩೨
67 ಹಂಸಗೀತೆ ಪುಟ ೯೪
68 ಅದೇ, ಪುಟ ೯೮
69 ಬೆಳಕು ತಂದ ಬಾಲಕ ಪುಟ ೧೩
70 ಅದೇ, ಪುಟ ೩೧
71 ಕಂಬನಿಯ ಕುಯಿಲು ಪುಟ ೨೯೦
72 ಹಂಸಗೀತೆ ಪುಟ ೧೧

ತ.ರಾ.ಸು ಅವರೊಡನೆ ಮಾತುಕತೆ

—ನಾ. ಪ್ರಭಾಕರ್, ಪಾಂಡವಪುರ

ತ.ರಾ.ಸು. ಅವರ ಬಾಳ ಪಥದಲ್ಲಿ ಇದೀಗ ಸಂವತ್ಸರ– ಚಕ್ರವೊಂದು ಉರುಳಿದೆ. ಒಂಭತ್ತನೆಯ ವಯಸ್ಸಿನಲ್ಲೇ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಭಾಷಣ ಮಾಡಿದ ತ.ರಾ.ಸು. ಸುಮಾರು ಅರ್ಧ ಶತಮಾನ ಕಾಲ ಬದುಕನ್ನು ಪ್ರಜ್ಞಾ ಪೂರ್ವಕವಾಗಿಯೇ ನೋಡಿದ್ದಾರೆ. ಬಾಳಿನಲ್ಲಿ ಬಂದದ್ದನ್ನು ಉಂಡಿದ್ದಾರೆ. ಕಂಡದ್ದನ್ನು ಉಂಡದ್ದನ್ನು ತಮ್ಮ ವಿಚಾರದ ನಿಕಷಕ್ಕೊಡ್ಡಿ ನೋಡಿದ್ದಾರೆ. ಸುಮಾರು ಹತ್ತು ವರ್ಷಗಳಿಂದಲೂ ದೇಹ ಸ್ವಾಸ್ಥ್ಯವನ್ನು ಕಳೆದುಕೊಂಡಿದ್ದರೂ ಓದುವ ಅಭ್ಯಾಸ ವನ್ನಾಗಲಿ, ಕನ್ನಡದ ಸಮಸ್ಯೆ ಕುರಿತು ಪರಿಹಾರಕ್ಕಾಗಿ ಯೋಚಿಸುವುದನ್ನಾಗಲಿ, ಬರೆಯುವ ಚಿಂತೆಯನ್ನಾಗಲಿ ಬಿಟ್ಟವರಲ್ಲ. ಎಂತಲೇ ಈ ಅರವತ್ತನೆಯ ಘಟ್ಟದಲ್ಲಿ ಅವರನ್ನು ಕಂಡು ಇಂದಿನ ಅವರ ನಿಲುವನ್ನು ಅರಿಯುವ ಪ್ರಯತ್ನಕ್ಕಾಗಿ ಅವರ ಬಳಿ ಹೋದಾಗ ಮಾತು ಅ.ನ.ಕೃ. ರವರನ್ನು ಕುರಿತೇ ಆರಂಭವಾಯಿತು.

ಅ.ನ.ಕೃ. ರವರ 'ಸಂಧ್ಯಾರಾಗ' ಓದಿ, ಇಂಗ್ಲೀಷ್ ವ್ಯಾಮೋಹದಿಂದ ತಮ್ಮನ್ನು ಬಿಡಿಸಿಕೊಂಡು ಕನ್ನಡದ ದೀಕ್ಷೆ ತೊಟ್ಟು ಸುಪ್ರಸಿದ್ಧ ಹಾಸ್ಯ ಸಾಹಿತಿಗಳಾಗಿ ಮೆರೆದವರೊಬ್ಬರು, ಆರಂಭದಲ್ಲಿ ಅ.ನ.ಕೃ. ತಮಗೆ ನೀಡಿದ ಪ್ರೋತ್ಸಾಹವನ್ನು ನೆನೆಯಲೇಬೇಕಾದ ಸಂದರ್ಭದಲ್ಲಿ ನಾಚಿದ ಉದಾಹರಣೆಯೊಂದಿಗೆ, ಬದುಕಿದ್ದಾಗ ಅ.ನ.ಕೃ. ರವರಿಂದ ಉಪಕೃತರಾದವರೇ ಇಂದು ಅವರ ಹೆಸರಿಗೆ ಮಸಿ ಬಳೆಯು ಲೆತ್ನಿಸುತ್ತಿರುವ ಕೃತಘ್ನತೆಯ ಇಂದಿನ ವಿಪರ್ಯಾಸಕರ ಪರಿಸ್ಥಿತಿಗೆ ತ.ರಾ.ಸು. ಪ್ರತಿಕ್ರಿಯಿಸಿದ್ದು ಹೀಗೆ :

ಅ.ನ.ಕೃ. ಕುರಿತು

ಅ.ನ.ಕೃ. ಇಂದು ಬದುಕಿಲ್ಲ. ಬದುಕಿಲ್ಲದಿರುವುದರಿಂದ ಯಾರಿಗೂ ಅವರು ಉಪಕಾರ ಮಾಡುವಂತಿಲ್ಲ. ಆದ್ದರಿಂದ ಅವರಿಂದ ಉಪಕೃತರಾದವರಿಗಾಗಲಿ, ಯಾರಿಗಾಗಲಿ ಅವರು ಈಗ ಬೇಕಿಲ್ಲ. ಅಷ್ಟೇ ಅಲ್ಲ, ಇಂದಿನ ನಮ್ಮ ಬರಹಗಾರರಿಗೆ ಬರೆದ ತಕ್ಷಣ ಅದು ಅಚ್ಚಾಗಿ, ಪ್ರಸಿದ್ಧಿಗೆ ಬರಬೇಕು. ಅದಕ್ಕಾಗಿ ಅಧಿಕಾರದಲ್ಲಿ ರುವವರನ್ನು, ಪತ್ರಿಕೆಯವರನ್ನು, ವಿಮರ್ಶಕರನ್ನು ಅವರು ಓಲೈಸುತ್ತಿದ್ದಾರೆ. ಹೀಗಾಗಿ ಕೃಷ್ಣರಾಯರಿಂದ ಉಪಕೃತರಾದವರಿಗೇ ಇಂದು ಅವರು ಬೇಕಿಲ್ಲ. ಇಂದಿನ ಪೀಳಿಗೆಯವರಿಗೆ ಅವರು ಗೊತ್ತೇ ಇಲ್ಲ. ಆದರೆ ವಾಸ್ತವವಾಗಿ ಅ. ನ. ಕೃ. ಅವರ ಸೇವೆ ನಮ್ಮ ನಾಡಿಗೆ ದೊರೆಯದಿದ್ದರೆ ಇವರುಗಳ ಪುಸ್ತಕಗಳನ್ನು ಓದುವುದಕ್ಕೆ ಜನರೇ ಸಿಗುತ್ತಿರಲಿಲ್ಲ. ಅ.ನ.ಕೃ. ಕೇವಲ ಕಾದಂಬರಿಗಳನ್ನು ಬರೆಯಲಿಲ್ಲ. ಅವರ ಹೃದಯ ವೈಶಾಲ್ಯ ಸಾಹಿತ್ಯದ ಅಭಿಮಾನ– ನೇರವಾದ ನನ್ನಂತಹ ಹತ್ತಾರು ಜನ ಕಾದಂಬರಿಕಾರರ ಸೃಷ್ಟಿಗೆ ಕಾರಣವಾದಂತೆಯೇ ಅಪ್ರತ್ಯಕ್ಷವಾಗಿ ನೂರಾರು ಜನ ಕನ್ನಡ ಸಾಹಿತ್ಯದ ರಚನೆಗೆ ಕೈ ಹಾಕಲು ಸ್ಫೂರ್ತಿಯಾಯಿತು.

ಇಂದೂ ಕನ್ನಡದಲ್ಲಿ ಪರಿಹಾರ ಕಾಣದೆ ಕಗ್ಗಂಟಾಗಿ ಉಳಿದಿರುವ ಹಲವಾರು ಕನ್ನಡಿಗರ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಅ.ನ.ಕೃ. ಅವಿಶ್ರಾಂತವಾಗಿ ಹೊಡೆದಾಡಿದರು. ಆ ಕಾರಣಕ್ಕಾಗಿಯೇ ಅಂದರೆ ಕೇವಲ ಕನ್ನಡದ ಹಿತದೃಷ್ಟಿಯಿಂದಾಗಿಯೇ ಎಷ್ಟೋ ಜನರ ದ್ವೇಷ ಕಟ್ಟಿಕೊಂಡರು. ಆ ಕಾರಣಕ್ಕಾಗಿ ಅವರಿಗೆ ನ್ಯಾಯವಾಗಿಯೇ ಸಲ್ಲಬೇಕಿದ್ದ ಯಾವ ಪುರಸ್ಕಾರವೂ ದೊರೆಯದ ಹಾಗೆ ಅವರ ಜೀವಿತ ಕಾಲದಲ್ಲಿಯೇ ಸಾಕಷ್ಟು ಮಸಲತ್ತು ನಡೆಯಿತು. ಆದರೆ ಎಂದೂ ಕೊರಗಲಿಲ್ಲ. ನಿರಾಶಾವಾದಿಗಳಾಗಲಿಲ್ಲ. ತಮ್ಮ ಹೃದಯ ವೈಶಾಲ್ಯವನ್ನಾಗಲಿ, ಭಾವ ಉದಾರತೆಯನ್ನಾಗಲಿ ಕಡಿಮೆ ಮಾಡಿಕೊಳ್ಳಲಿಲ್ಲ. ಅ.ನ.ಕೃ ಅವರನ್ನು ಕೆಲವರು ಹೊಗಳಬಹುದು, ಕೆಲವರು ತೆಗಳಬಹುದು. ಅದಕ್ಕೆ ನಾನು ಹೆಚ್ಚು ಮಾನ್ಯತೆ ಕೊಡುವುದಿಲ್ಲ. ಒಬ್ಬ ಸಮಕಾಲೀನನ ವಿಮರ್ಶೆ ಶಾಶ್ವತ ವಿಮರ್ಶೆಯಾಗಿ ಎಂದೂ ನಿಂತಿಲ್ಲ. ಇದು ಅ.ನ.ಕೃ. ಅವರ ಬಗ್ಗೆ ಅಷ್ಟೇ ಅಲ್ಲ, ಎಲ್ಲ ಸಾಹಿತಿ, ಕಲಾವಿದರ ಬಗ್ಗೆಯೂ ನಿಜ. ನನಗಂತೂ ಖಂಡಿತವಾಗಿಯೂ ನಂಬಿಕೆ ಇದೆ. ಕನ್ನಡ ಜನ ಮತ್ತೆ ಅ.ನ.ಕೃ. ಅವರನ್ನು ಸ್ಮರಿಸಿ, ಅವರಿಗೆ ಸಲ್ಲಬೇಕಾಗಿದ್ದ ಗೌರವವನ್ನು ಸಲ್ಲಿಸುತ್ತಾರೆ.

'ನೀವು ಪ್ರಶ್ನೆ ಕೇಳಿದಾಗ ಅ.ನ.ಕೃ. ಇಂದು ಬದುಕಿಲ್ಲ' ಎಂದು ಹೇಳಿದೆ ಅದು ಕೇವಲ ಅವರ ಭೌತಿಕ ದೇಹಕ್ಕೆ ಮಾತ್ರವೇ ಸಂಬಂಧ ಪಟ್ಟ ವಿಷಯ. ಎಲ್ಲಿಯವರೆಗೆ ಕನ್ನಡ ಇರುತ್ತದೆಯೋ ಅಲ್ಲಿಯವರೆಗೂ ಅ.ನ.ಕೃ. ಜೀವಂತ.

"ನೀವು ಅ.ನ.ಕೃ. ರವರನ್ನು ಸತ್ತ ಮೇಲೆ ಜನ ಮರೆತಿದ್ದಾರೆಂದು ವ್ಯಥೆ ಪಡುತ್ತಿದ್ದೀರಾ ? ನಮ್ಮ ನಾಡಿನಲ್ಲಿ ಇದು ಸತ್ತವರಿಗೆ ಮಾತ್ರವೇ ಮೀಸಲಾದ ಕೃತಘ್ನತೆಯೇನೂ ಅಲ್ಲ. ಬದುಕಿರುವವರ ಬಗ್ಗೆಯೂ ಇಂದು ಅವರಿಂದ ಉಪಕಾರ ಪಡೆದ ಜನ ಮರುದಿನವೇ ಅವರನ್ನ ತೆಗಳಿದುದನ್ನು, ಇಂದು ಹೊಗಳಿದ ನಾಲಗೆಯೇ ಕೆಲ ಕಾಲದ ಬಳಿಕ ಆ ವ್ಯಕ್ತಿಯ ಬಗ್ಗೆ ದುರ್ಭಾಷೆಯನ್ನು ಬಳಸಿದ್ದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಅಷ್ಟೇಕೆ, ನನ್ನದೇ ಒಂದು ಅನುಭವವಿದೆ. ನನಗೊಬ್ಬ ಕವಿ ಮಿತ್ರರಿದ್ದಾರೆ. ಅವರಿಗೂ ನನಗೂ ಸುಮಾರು ನಲವತ್ತು ವರ್ಷಗಳ ಸ್ನೇಹ. ಈಗಲೂ ಅವರು ನನ್ನೆದುರಿಗೆ ನನ್ನ ಕೃತಿಗಳನ್ನು ಮೆಚ್ಚಿ ಮಾತನಾಡುತ್ತಾರೆ. ಆದರೆ ನನ್ನ ಬಗ್ಗೆ ಲೇಖನವೊಂದು ಬೇಕೆಂದು ಅವರ ಬಳಿಗೆ ಹೋದಾಗ ಆ ಮಿತ್ರರು ಲೇಖನ ಬರೆದು ಕೊಡುವುದಿರಲಿ, ನನ್ನ ಪರಿಚಯವೇ ಇಲ್ಲದವರಂತೆ ವರ್ತಿಸಿದರಂತೆ. ಇಂಥ ಮಿತ್ರರು ನಾಲ್ಕಾರು ಜನ ಈಗಲೂ ನನ್ನ ಸುತ್ತಮುತ್ತಲೂ ಇದ್ದಾರೆ. ಪ್ರಾಯಶಃ ಇದು ಇಂದಿನ ಕಾಲಧರ್ಮ ಎಂದು ಕಾಣುತ್ತದೆ. ಆದರೆ ಕನ್ನಡಕ್ಕಾಗಿ ದುಡಿಯಬೇಕು ಎನ್ನುವ ಜನ ಇಂಥ ಸಣ್ಣ ವಿಷಯಗಳಿಂದ ಖಿನ್ನರಾಗಬೇಕಿಲ್ಲ. ಒಂದು ರೀತಿಯಲ್ಲಿ ಇವೆಲ್ಲ ಅವರ ಸತ್ವಪರೀಕ್ಷೆಯ ವಿಷಯ; ಸ್ತುತಿ ನಿಂದೆಗಳಿಗೆ ಮೀರಿ ನಿಲ್ಲದವನು ಯಾವ ಕಾರ್ಯವನ್ನೂ ಮಾಡಲಾರ. ಇಂತಹ ವಿಷಯಗಳನ್ನು ಮೈ ಮೇಲಿನ ಧೂಳನ್ನು ಕೊಡವಿಕೊಂಡ ಹಾಗೆ ಮನಸ್ಸಿನಿಂದ ಒಗೆದು ಕನ್ನಡದ ಕೆಲಸ

ಮಾಡಿ ತೋರಿಸುವುದೊಂದೇ ನಮಗಿರುವ ದಾರಿ.

ಈ ಸಾಹಿತ್ಯ ಚಳುವಳಿಗಳು

ಪ್ರಗತಿಶೀಲ ಸಾಹಿತ್ಯ ಚಳವಳಿಯಲ್ಲಿ ಅ.ನ.ಕೃ. ಅವರೊಂದಿಗೆ ತ.ರಾ.ಸು. ಕೂಡ ಸಕ್ರಿಯ ಪಾತ್ರ ವಹಿಸಿದ್ದವರು. ಅದೇ ಹಾದಿಯಲ್ಲಿ ತಮ್ಮ ಬರವಣಿಗೆಯನ್ನು ಕೊಂಡೊಯ್ದರೂ '೦–೦= ೦' ಮತ್ತು "ಬಿಡುಗಡೆಯ ಬೇಡಿ"ಯಂತಹ ಕೃತಿಗಳನ್ನು ನೀಡಿದವರು. ಇತ್ತೀಚೆಗೆ 'ನಾಲ್ಕು×ನಾಲ್ಕು= ಒಂದು' ಕಾದಂಬರಿ ಬರೆದು ಉಪನಿಷತ್ ಲೋಕಕ್ಕೇ ಹೋದದ್ದಲ್ಲದೆ, ಶ್ರೀ ಶಂಕರರನ್ನು ಕುರಿತು ಬರೆಯುವ ಸಿದ್ಧತೆಯಲ್ಲಿ ಇರುವವರು, ಒಟ್ಟಾರೆ ಸಾಹಿತ್ಯದಲ್ಲಿನ ಎಲ್ಲ ಬದಲಾವಣೆಯನ್ನು ಕಣ್ಣು–ಕಿವಿ ತೆರೆದೇ ಗಮನಿಸಿರುವ ತ.ರಾ.ಸು. ಅವರನ್ನು ಇಂದಿನ ನವ್ಯೋತ್ತರ ಚಳುವಳಿಯ ಬಗ್ಗೆ ಕೇಳಿದೆ.

ತ.ರಾ.ಸು. : "ಸಾಹಿತ್ಯ ನಿಂತ ನೀರಲ್ಲ. ಸಮಕಾಲೀನ ಜೀವನ ಸಾಹಿತಿಗಳ ಮೇಲೆ ಪರಿಣಾಮ ಮಾಡಿಯೇ ಮಾಡುತ್ತದೆ. ಹಾಗೆಯೇ ಸಾಹಿತಿಯೂ ಬೆಳೆಯುತಾ ಯಾವುದೋ ಒಂದು ಘಟ್ಟದಲ್ಲಿ ಬೇರೆ ರೀತಿಯಲ್ಲಿ ಬರೆಯಬೇಕು ಎಂದು ಅನಿಸಲೂ ಬಹುದು. ಹಾಗಾದಾಗ ಸಾಹಿತ್ಯ ವಸ್ತುವಿನಲ್ಲಲ್ಲ, ಹೊರ ರೂಪಿನಲ್ಲಿ ತನ್ನ ಗುರಿಯತ್ತ ಹೊಸ ಜಾಡನ್ನು ಕಂಡುಕೊಳ್ಳುವುದು ಅನಿವಾರ್ಯ. ಆದರೆ ಆಕಾರ ಯಾವುದಾದರೂ ಆಗಲಿ, ವೇಷವೇನಾದರೂ ಬದಲಾಗಲಿ, ನನಗೆ ತಿಳಿದ ಮಟ್ಟಿಗೆ ಸಾಹಿತ್ಯದ ಮೊದಲ ಕೆಲಸ–ಜನರನ್ನು ಮುಟ್ಟಬೇಕು. ಅದು ಅದರ ಮೊದಲ ಗುರಿ. ಈ ಮೂಲ ಭೂತ ಉದ್ದೇಶ ನೆರವೇರದಿದ್ದಾಗ ಕೇವಲ ಸರ್ಕಸ್‌ನಿಂದ ಹುಲಿಯ ವೇಷದ ಆಟಾಟೋಪದಿಂದ ಯಾವ ಚಳವಳಿಯೂ ಏನನ್ನೂ ಸಾಧಿಸುವುದಿಲ್ಲ. ಹೊಸದು ಕೆಲಕಾಲ ಕೆಲವರನ್ನು ಆಕರ್ಷಿಸಬಹುದು. ಅದು ನವೀನತೆಯ ಒಂದು ಮುಖ್ಯ ಗುಣ. ಅಂತಃಸತ್ತ್ವ ಇಲ್ಲದಿದ್ದಾಗ ಆ ಆಕರ್ಷಣೆ ಬಹು ಬೇಗ ತನ್ನ ಸತ್ತ್ವ ಕಳೆದುಕೊಳ್ಳುತ್ತದೆ. ಆದ್ದರಿಂದ ನಾನು ಈ ಚಳವಳಿಗಳ ಬಗ್ಗೆ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುವುದನ್ನು ಬಿಟ್ಟು ಬಿಟ್ಟಿದ್ದೇನೆ. ತನ್ನ ವಿಚಾರದ ಅಭಿವ್ಯಕ್ತಿಗೆ ಸೂಕ್ತ ಮಾಧ್ಯಮವನ್ನು ಆಯ್ದು ಕೊಳ್ಳುವುದು–ಸಾಹಿತಿಗೇ ಸೇರಿದ ವಿಷಯ. ಆ ಸ್ವಾತಂತ್ರ್ಯ ಅವನಿಗಿದೆ. ನನಗೆ ಬೇಕಾದುದಿಷ್ಟೆ: ಅದರಿಂದ ಏನಾಯಿತು?, ಎಷ್ಟಾಯಿತು?– ಎನ್ನುವುದು. ಮೈಲಿಯಾಗಲಿ, ಕಿಲೋಮೀಟರ್ ಆಗಲಿ ದಾರಿ ಸವೆಯುವುದು, ಗುರಿ ಸೇರುವುದು ಮುಖ್ಯವೇ ವಿನಹ ಈ ಹೆಸರಿನ ಬದಲಾವಣೆ,ವೇಷದ ಬದಲಾವಣೆ ನಮ್ಮ ರಾಜಕಾರಿಣಿಗಳು ಟೋಪಿಯನ್ನು ಬದಲಿಸಿದ ಹಾಗೆ, ಅಷ್ಟೇ. ಅದಕ್ಕಿಂತ ಹೆಚ್ಚೇನೂ ಮಹತ್ವ ಇಲ್ಲ."

ಅದೇ ಪರಿಸ್ಥಿತಿ

ಪ್ರಭಾಕರ್ : 'ಹಾಗಾದರೆ ನೀವುಗಳು ಮಾಡಿದ ಪ್ರಗತಿಶೀಲ ಚಳವಳಿ ನಿರರ್ಥಕವೇ ?'

ತ.ರಾ.ಸು. : "ನಾವು ಪ್ರಗತಿಶೀಲ ಸಾಹಿತ್ಯ ಚಳವಳಿಯನ್ನು ಆರಂಭ

ಮಾಡಿದಾಗ ಯಾವ ಮೂಲಭೂತವಾದ ಉದ್ದೇಶಗಳು ನಮ್ಮ ಕಣ್ಣೆದುರಿಗಿದ್ದುವೋ ಇಂದು ಅತ್ಯಾಧುನಿಕ ಎಂದು ಹೇಳಿಕೊಳ್ಳುವ ಬಂಡಾಯ ಸಾಹಿತ್ಯದ ಉದ್ದೇಶವೂ ಅದೇ ಆಗಿದೆ. ಆವತ್ತು ಯಾರು ದಲಿತರ ಬಗ್ಗೆ ಬರೆದರೋ ಇವತ್ತೂ ಅದೇ ಜನ ದಲಿತರ ಬಗ್ಗೆ ಬರೆಯುತ್ತಿದ್ದಾರೆ. ದಲಿತರು ಮಾತ್ರ ಮೂಕರಾಗಿಯೇ ಉಳಿದಿದ್ದಾರೆ. ಪ್ರಾಯಶಃ ೧೯೪೫ ರಲ್ಲಿರಬೇಕು. ಪ್ರಗತಿಶೀಲ ಸಾಹಿತ್ಯ ಕುರಿತು ಮೈಸೂರಿನ ಆಕಾಶ ವಾಣಿಯಲ್ಲಿ ಮಾತನಾಡುತ್ತಾ ನಾನು ಒಂದು ಮಾತಂ ಹೇಳಿದ್ದೆ– 'ಎಲ್ಲಿಯವರೆಗೆ ದಲಿತರು, ಶೋಷಿತರು, ಸಮಾಜದ ವಿಭಿನ್ನ ರಂಗಗಳಿಗೆ ಸೇರಿದ ಜನ ತಮ್ಮ ಬಗ್ಗೆ ತಾವೇ ಮಾತನಾಡಲು ಶಕ್ತಿಯನ್ನು ಗಳಿಸುವುದಿಲ್ಲವೋ ಅಲ್ಲಿಯವರೆಗೂ ನಿಜವಾದ ಪ್ರಗತಿಶೀಲ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಇನ್ನೊಬ್ಬರ ವಕೀಲಿ ನಡೆಸುವಾತ ನಿಜ ವಾಗಿಯೂ ಆ ವರ್ಗದ ಸಾಹಿತಿಯಾಗುವುದು ಸಾಧ್ಯವಿಲ್ಲ'–ಎಂದು. ಇಂದೂ ಅದೇ ಪರಿಸ್ಥಿತಿ ಇದೆ. ಕೇವಲ ಬೆರಳೆಣಿಕೆಯಷ್ಟು ಜನ ದೇವನೂರ ಮಹಾದೇವರಂಥವರು ನಿಜವಾಗಿಯೂ ಕನ್ನಡ ಸಾಹಿತ್ಯಕ್ಕೆ ಪ್ರಗತಿಯ ಹೊಸ ತಿರುವನ್ನು ನೀಡಿದ್ದಾರೆ. ಅಂಥ ಲೇಖಕರು ಇನ್ನೂ ಸಾವಿರ ಜನ ಬರಬೇಕು. ಆಗ–ನಿಜವಾಗಿಯೂ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಕಾಲದಲ್ಲಿ ನಾವು ಯಾವ ಕ್ರಾಂತಿಯ ಕನಸನ್ನು ಕಂಡಿದ್ದೆವೋ ಅದು ನಿಜವಾಗುತ್ತದೆ."

ಪ್ರಭಾಕರ್ : 'ಇಂದಿನ ಸಾಹಿತ್ಯ ಯಾವ ದಾರಿಯಲ್ಲಿ ಸಾಗುತ್ತಿದೆ? ಉತ್ತಮ ಸಾಹಿತ್ಯ ಸೃಷ್ಟಿಗೆ ಈ ಹಾದಿ ಪೋಷಕವೇ ?'

ತ.ರಾ.ಸು. : "ಇಂದಿನ ಸಾಹಿತ್ಯದ ಗತಿ ಯಾವುದೆಂದು ಗುರುತಿಸುವುದು ಅತ್ಯಂತ ತೊಡಕಿನ ಪ್ರಶ್ನೆ. ಎಲ್ಲ ಕಾಲದ ಹಾಗೆ–ಈಗಲೂ ಹಲವಾರು ಜನ ಅತ್ಯಂತ ಪ್ರತಿಭಾವಂತರಾದ ಲೇಖಕರು ನಮ್ಮಲ್ಲಿದ್ದಾರೆ. ಜಗತ್ತಿನ ಯಾವುದೇ ಸಾಹಿತ್ಯಕ್ಕೂ ನಾವು ಕಡಿಮೆಯಿಲ್ಲ ಎನ್ನಬಲ್ಲ ಆತ್ಮವಿಶ್ವಾಸ ನನಗಿದೆ. ಇವತ್ತು ಲೇಖಕರ ಸಂಖ್ಯೆ ಹೆಚ್ಚಿದೆ, ಪ್ರಕಾಶಕರ ಸಂಖ್ಯೆ ಹೆಚ್ಚಿದೆ, ಕೊಂಡು ಓದುವವರ ಸಂಖ್ಯೆಯೂ ಸುಧಾರಿಸಿದೆ. ಸರ್ಕಾರದ ಪ್ರೋತ್ಸಾಹವೂ ದೊರೆಯುತ್ತಿದೆ. ಇದೆಲ್ಲ ಒಳ್ಳೆಯ ಲಕ್ಷಣಗಳೇ. ಆದರೆ ಒಂದೇ ಒಂದು ದುಃಖದ ವಿಷಯವೆಂದರೆ – ಇಂದು ನಮ್ಮ ಸಮಾಜವನ್ನು ವಿನಾಶದತ್ತ ಕೊಂಡೊಯ್ದ ರಾಜಕೀಯ, ಮತೀಯ ದುಷ್ಟ ಶಕ್ತಿಗಳು ಸಾಹಿತ್ಯರಂಗದಲ್ಲೂ ತನ್ನ ಹೆಡೆಯಾಡಿಸುತ್ತಿರುವುದು. ಇದು ನನಗೆ ತುಂಬಾ ವ್ಯಥೆಯನ್ನುಂಟು ಮಾಡುವ ವಿಷಯ. ಸಾಹಿತ್ಯಕ್ಕೆ ಜಸಿವಾರವನ್ನಾಗಲಿ, ಶಿವದಾರ ವನ್ನಾಗಲಿ ತೊಡಿಸುವ ದುಷ್ಟಯತ್ನ, ಕೋಮುವಾರು ದಾಯುಷಾ ತರುವ ಕ್ಷುಲ್ಲಕ ಮನೋವೃತ್ತಿ ಅತ್ಯಂತ ಖಂಡನೀಯವಾದುದು. ಉತ್ತಮ ಸಾಹಿತ್ಯ ಸೃಷ್ಟಿಗೆ ಇದ ಕ್ಕಿಂತ ದೊಡ್ಡ ವೈರಿಗಳು ಬೇರೆ ಇಲ್ಲ. ಬೆಳೆಯಬೇಕು ಎನ್ನುವ ನಮ್ಮ ಸಾಹಿತಿಗಳು ಇಂಥ ದುಷ್ಟ ಶಕ್ತಿಗಳಿಂದ ಆದಷ್ಟು ದೂರವಿರಬೇಕು, ನಿರ್ಲಿಪ್ತವಾಗಿ ತಮಗನಿಸಿದ್ದನ್ನು ನಿರ್ಭಯವಾಗಿ ಬರೆಯಬೇಕು- ಇದು ನನ್ನ ಬಯಕೆ".

ಪರಿಷತ್ತು ಅಕಾಡೆಮಿಗಳು.

ಪ್ರಭಾಕರ್ : 'ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಕಲಾಪಗಳ ಬಗ್ಗೆ ಆಕ್ರೋಶಗೊಂಡಿದ್ದ ನೀವು ಈಗ ಹಂಪನಾರ ಕಾರ್ಯ–ವಿಧಾನದ ಬಗ್ಗೆ ಸಂತೃಪ್ತಿ ಹೊಂದಿರುವಿರಾ ?'

ತ.ರಾ.ಸು. : "ಈಗಿನ ಅಧ್ಯಕ್ಷರು ತರುಣರು, ಉತ್ಸಾಹಿಗಳು, ಬಹಳಷ್ಟು ಆಸೆ-ಆಕಾಂಕ್ಷೆಗಳನ್ನಿಟ್ಟು ಕೊಂಡಿದ್ದಾರೆ. ಆದರೆ ಎಲ್ಲಿಯವರೆಗೆ ಪರಿಷತ್ತು ಸರ್ಕಾರದ ಭಿಕ್ಷೆಯಿಂದ ಬದುಕುವ ಸಂಸ್ಥೆಯಾಗಿ ಉಳಿಯುತ್ತದೆಯೋ ಅಲ್ಲಿಯವರೆಗೂ ಪರಿಷತ್ತು ಹೊಸ ವಿಕ್ರಮವನ್ನೇನಾದರೂ ಸಾಧಿಸೀತು ಎಂಬ ಭರವಸೆ ನನಗಿಲ್ಲ."

'ಕನ್ನಡ ಸಾಹಿತಿಗಳಿಗೆ ಸರ್ಕಾರದಿಂದ ದೊರೆಯುತ್ತಿರುವ ಎಲ್ಲ ಸವಲತ್ತುಗಳು ಅಕಾಡೆಮಿಯ ಮೂಲಕ ಹರಿದು ಬರಬೇಕು. ಅಕಾಡೆಮಿಯ ಕಾರ್ಯವ್ಯಾಪ್ತಿ ವಿಸ್ತರಿಸಬೇಕು' ಎನ್ನುವ ಅಭಿಪ್ರಾಯ ತ.ರಾ.ಸು. ಅವರದು. ಮೈಸೂರಿನಲ್ಲಿ ನಡೆದ ಸನ್ಮಾನ ಸಮಾರಂಭವೊಂದರಲ್ಲಿ ಅಭಿನಂದನಾ ಭಾಷಣ ಮಾಡುತ್ತಾ ಅವರು ಸಾಹಿತಿಗಳ ಯೋಗ-ಕ್ಷೇಮದ ಬಗ್ಗೆ ಕಳಕಳಿ ವ್ಯಕ್ತ ಪಡಿಸಿ ಮಾತನಾಡಿದ ಬಗ್ಗೆ 'ಸಾಹಿತಿಗಳಿಗೆ ಅನ್ನ ಹಾಕುವುದು ಅಕಾಡೆಮಿಯ ಕೆಲಸವಲ್ಲ' ಎಂಬ ಅಕಾಡೆಮಿಯ ವರಿಷ್ಠರ ಟೀಕೆಗೆ ಪ್ರತಿಕ್ರಿಯೆ ಕೇಳಿದಾಗ- "ನನ್ನ ಮಾತಿನ ಬಗ್ಗೆ ಇಂಥ ಟೀಕೆಯೊಂದು ಬಂತು ಎಂದು ನಾನೂ ಕೇಳಿದ್ದೇನೆ. ಸಾಹಿತ್ಯ ಅಕಾಡೆಮಿ ಪಿಂಜರಾ ಪೋಲಾಗಬೇಕು. ಎಂದು ನನ್ನ ಅಭಿಪ್ರಾಯವೇನೂ ಅಲ್ಲ. ಸಾಹಿತ್ಯ ಅಕಾಡೆಮಿ ಪೂರ್ಣಯ್ಯನ ಛತ್ರವೂ ಅಲ್ಲ. ಸಾಹಿತ್ಯ ಅಕಾಡೆಮಿ ಸಾಹಿತಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವತ್ತ ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಬೇಕು ಎಂದು ನಾನು ಹೇಳಿದಾಗ ಸಾಹಿತ್ಯ ಅಕಾಡೆಮಿ ಉಡುಪಿಯ ಮಠವಾಗಬೇಕು ಎನ್ನುವ ಭಾವನೆಯೇನೂ ನನಗಿರಲಿಲ್ಲ, ಇಂದೂ ಇಲ್ಲ. ಅಂದು–ಇಂದು ನನ್ನ ಅಭಿಪ್ರಾಯವಿಷ್ಟೇ : ಪರಿಷತ್ತಿಗಿಂತಲೂ ಸರ್ಕಾರಕ್ಕೆ ಹತ್ತಿರವಾಗಿರುವ ಸಾಹಿತ್ಯ ಅಕಾಡೆಮಿ ಕೇವಲ ಸರ್ಕಾರಿ ಕೃಪಾ ಪೋಷಿತ ಸಂಸ್ಥೆಯಾಗಿಯೇ ಉಳಿಯಬಾರದು. ಅದು ಸರ್ಕಾರಕ್ಕೆ ಸಾಹಿತ್ಯ ಸಲಹೆಗಾರನಾಗ ಬೇಕು. ಅದಕ್ಕಿಂತ ಹೆಚ್ಚಾಗಿ ಮಾರ್ಗದರ್ಶಕನಾಗಬೇಕು. ಅಕಾಡೆಮಿಯ ಮಾರ್ಗ ದರ್ಶನ ಸರ್ಕಾರದ ಪಾಲಿಗೆ ಕಡ್ಡಾಯವಾಗಬೇಕು. ಇದು ಅಕಾಡೆಮಿಯ ಸ್ಥಾನ–ಮಾನದ ಬಗ್ಗೆ ನನಗಿರುವ ಅಭಿಪ್ರಾಯ. ಈ ದೃಷ್ಟಿಯಿಂದಲೇ ಸರ್ಕಾರ ಕೊಡುವ ಎಲ್ಲ ಸಾಹಿತ್ಯದ ಪ್ರೋತ್ಸಾಹವೂ ಅಕಾಡೆಮಿಯ ಮೂಲಕ ಹರಿದು ಬರಬೇಕು ಎಂದು ನಾನು ಹೇಳಿದೆ. ಹಾಗೆಯೇ ಸಾಹಿತಿ, ಪ್ರಕಾಶಕರ ನಡುವೆ ಉದ್ಭವಿಸಬಹುದಾದ ವ್ಯವಹಾರಗಳು ಕೋರ್ಟಿನ ಕಟ್ಟೆ ಹತ್ತದೆ ಗೌರವಯುತವಾಗಿ ಪರಿಹಾರವಾಗುವತ್ತ ಅಕಾಡೆಮಿಯಾಗಲಿ, ಪರಿಷತ್ತಾಗಲಿ ಒಂದು ಶಾಸನ ಬದ್ಧ ವ್ಯವಸ್ಥೆಯನ್ನು ಅನು ಗೊಳಿಸಬೇಕು ಎಂದೂ ನಾನು ಹೇಳಿದೆ. ಸರಕಾರ ರಚಿಸಿರುವ ಕಾಪಿರೈಟ್ ಆ್ಯಕ್ಟ್ ಸಾಕಷ್ಟು ದೋಷಪೂರ್ಣವಾಗಿದೆ. ಇದನ್ನು ರಚಿಸುವಾಗಲಾಗಲೀ, ತಿದ್ದುಪಡಿ

ಮಾಡುವಾಗಲಾಗಲಿ ಸರ್ಕಾರ – ಅಕಾಡೆಮಿ, ಪರಿಷತ್ತಿನಂತಹ ಸಂಸ್ಥೆಗಳ ಸಲಹೆ ಪಡೆದಿದೆ ಎಂದು ನನಗನಿಸುವುದಿಲ್ಲ. ಆದ್ದರಿಂದ ಅಕಾಡೆಮಿ ಕಾಪಿರೈಟ್ ಶಾಸನವನ್ನು ಪರಿಷ್ಕರಿಸುವುದರತ್ತ ಸರ್ಕಾರದ ಗಮನ ಸೆಳೆಯಬೇಕೆಂದೂ ಹೇಳಿದೆ. ಕಾಪಿರೈಟ್ ಆ್ಯಕ್ಟನ್ನು ಕನ್ನಡಕ್ಕೆ ಸರಳವಾಗಿ ಎಲ್ಲ ಲೇಖಕರಿಗೂ ಅರ್ಥವಾಗುವ ರೀತಿಯಲ್ಲಿ ಅಚ್ಚು ಮಾಡಬೇಕು. ಲೇಖಕರಿಗೆ ತಮ್ಮ ಕೃತಿಸ್ವಾಮ್ಯದ ಬಗ್ಗೆ ಏನು ಅಧಿಕಾರವಿದೆ ಎಂಬ ಅರಿವು ಇರಬೇಕು ಎನ್ನುವ ಮಾತನ್ನೂ ಹೇಳಿದೆ. ಈ ಮಾತನ್ನು ನಾನು ಹೇಳಿದ್ದು ತಪ್ಪಲ್ಲ ಎಂದು ಈಗಲೂ ನನ್ನ ನಂಬಿಕೆ.

"ಪರಿಷತ್ತಾಗಲಿ, ಅಕಾಡೆಮಿಯಾಗಲಿ ಏನು ಸಾವಿರದೆಂಟು ಕಾರ್ಯಕ್ರಮ ಗಳನ್ನು ಮಾಡಿದರೂ ಒಂದು ಮಾತಂತೂ ನಿಜ, ಅವು ಒಬ್ಬನೇ ಒಬ್ಬ ಸಾಹಿತಿ ಯನ್ನೂ ಸೃಷ್ಟಿಸಲಾರವು. ಅವು ಮಾಡಬಹುದಾದದ್ದು ಇಷ್ಟೇ : ಸಾಹಿತ್ಯದ ಸೃಷ್ಟಿಯ ಬಗ್ಗೆ ಒಲವು ಉಳ್ಳವರಿಗೆ ಮಾರ್ಗ ನಿರ್ದೇಶನ ಮಾಡಬಹುದು. ಈ ಕೆಲಸವನ್ನು ಅಕಾಡೆಮಿ ಮಾಡುತ್ತಿದೆ – ಸಂತೋಷ. ಆದರೆ ಸಾಹಿತಿಗಳ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಸಾಕಷ್ಟು ಕಳಕಳಿ ತೋರುತ್ತಿಲ್ಲ–ಎಂದೇ ನನ್ನ ಅನಿಸಿಕೆ. ಅಂದೂ ಈ ಮಾತನ್ನು ಹೇಳಿದೆ. ಈಗಲೂ ನನ್ನ ಮನಸ್ಸಿನಲ್ಲಿ ಅದೇ ಭಾವನೆ ಇದೆ. ಸಮಾಜದ ಎಲ್ಲ ವರ್ಗಗಳ ಹಿತ ರಕ್ಷಣೆಗಾಗಿ ಹೋರಾಡಲು ಆಯಾ ವರ್ಗಗಳ ಸಂಘ–ಸಂಸ್ಥೆಗಳಿವೆ. ಅಕಾಡೆಮಿ, ಪರಿಷತ್ತು ಎರಡೂ ಇದ್ದರೂ ನಮ್ಮ ಸಾಹಿತಿಗಳಿಗೆ ಎದುರಾಗುವ ಸಮಸ್ಯೆಗಳ ವಿರುದ್ಧ ಸಂಘಟಿತ ರೀತಿಯಲ್ಲಿ ಹೋರಾಡಲು ನಿಷ್ಕ್ರಿಯವಾಗಿದೆ. ಇನ್ನು ಮುಂದಾದರೂ ಅಕಾಡೆಮಿ ಸಾಹಿತಿಗಳ ಪರವಾಗಿ ಹೋರಾಡುವ ಕೆಲಸ ಮಾಡಲಿ ಎಂದು ನಾನು ಕೇಳಿದ್ದಾಗಲೀ, ನಿರೀಕ್ಷಿಸಿದ್ದಾಗಲೀ ತಪ್ಪೇ ? ಈ ಬಗ್ಗೆ ನಮ್ಮ ಜನ, ಸಾಹಿತಿಗಳು ಯೋಚಿಸಬೇಕು."

—ಎಂದು ತೀವ್ರ ಕಳಕಳಿಯಿಂದ ನುಡಿದರು.

ಪತ್ರಿಕೋದ್ಯಮಿ, ಪ್ರಜಾಪ್ರಭುತ್ವ, ಕರ್ನಾಟಕ,...

ಪ್ರಭಾಕರ್ : 'ನಿಮ್ಮ ಕಾಲಕ್ಕಿಂತ ಈಗ ಪತ್ರಿಕೋದ್ಯಮಿಗೆ ಹೆಚ್ಚು ಸ್ವಾತಂತ್ರ್ಯವಿದೆ ಎನಿಸುತ್ತದೆಯೇ ?'

ತ.ರಾ.ಸು. : "ಹಿಂದೆ ಪತ್ರಿಕೋದ್ಯಮವಾಗಿದ್ದುದು ಈಗ ಬರಿ ಉದ್ಯಮ ವಾಗಿದೆ. ನಾನು ಪತ್ರಿಕೋದ್ಯಮಿಯಾಗಿದ್ದ ಕಾಲದಲ್ಲಿ ಇದ್ದಷ್ಟು ಸ್ವಾತಂತ್ರ್ಯವೂ ಇಂದಿನ ಪತ್ರಿಕೋದ್ಯಮಿಗೆ ಇಲ್ಲ. ಇದಕ್ಕೆ ಕಾರಣ–ಎರಡು : ೧) ಸರ್ಕಾರ, ೨) ಬಂಡವಾಳಶಾಹಿಯ ಮಾಲೀಕ ವರ್ಗ. ಇದು ದೊಡ್ಡ ಪತ್ರಿಕೆಗಳ ವಿಷಯವಾಯಿತು. ಕೆಲವು ಸಣ್ಣ ಪತ್ರಿಕೆಗಳೇನೋ ನಿರ್ಭಯವಾಗಿ ಬರೆಯುತ್ತಿವೆ. ಆದರೆ ಪೀತವರ್ಣದ ಪತ್ರಿಕೆಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ನಾನು ಕೇಳಿದ್ದೇನೆ. ನನಗಂತೂ ಅವರ ಅನುಭವವಾಗಿಲ್ಲ. ಒಂದು ವೇಳೆ ಅದು ನಿಜವಾಗಿದ್ದರೆ ಅದೊಂದು ದೊಡ್ಡ ದುರಂತ."

ಪ್ರಭಾಕರ್ : 'ನಿಮಗೆ ಪತ್ರಿಕೆ ಮಾಡುವ ಚಟ ಈಗಲೂ ಇದೆಯೇ ?'

ತ.ರಾ.ಸು. : "ಪತ್ರಕರ್ತನಾಗುವುದು ನಾಟಕ ಕಂಪೆನಿಯಲ್ಲಿ ಬಣ್ಣ ಹಚ್ಚಿಕೊಂಡ ಹಾಗೆ. ಒಂದು ಸಲ ಆ ಗೀಳು ಹತ್ತಿದರೆ ಸಾಯುವವರೆಗೂ ಅದು ಹೋಗುವುದಿಲ್ಲ, ನಾನೂ ಇದಕ್ಕೆ ಹೊರತಲ್ಲ."

ಪ್ರಭಾಕರ : "ನಮ್ಮ ನಾಡು "ಕರ್ನಾಟಕ" ವಾಯಿತು, ಆಡಳಿತ ಭಾಷೆ 'ಕನ್ನಡ' ವಾಯಿತು. ನಾಡು ನುಡಿಗಾಗಿ ಇನ್ನೂ ಆಗಬೇಕಿರುವ ಕೆಲಸವೇನಿದೆ ?"

ತ. ರಾ. ಸು. : "ಹೆಸರಿಗೆ ಮಾತ್ರ ಎಲ್ಲಾ ಆಗಿದೆ, ಎಲ್ಲ ಸಮಸ್ಯೆಗಳೂ ತೋರಿಕೆಗೆ ಈಡೇರಿದೆ. ವಾಸ್ತವವಾಗಿ ೧೯೫೬ ರಲ್ಲಿ ನಾವು ಎಲ್ಲಿದ್ದೆವೋ ಈಗಲೂ ಅಲ್ಲೇ ಇದ್ದೇವೆ. ಪ್ರಾಯಶಃ ಎಲ್ಲೋ ಒಂದೆರಡು ಹೆಜ್ಜೆ ಮುಂದಿಟ್ಟಿದ್ದೇವೆ ಅಷ್ಟೇ."

ಪ್ರಭಾಕರ್: 'ಐತಿಹಾಸಿಕ ಕಾದಂಬರಿಗಳನ್ನು ನೀವು ಬರೆಯಲು ಕಾರಣ?'

ತ.ರಾ.ಸು. : "ಕಾದಂಬರಿ ಸಾಮಾಜಿಕವಾಗಲಿ, ಐತಿಹಾಸಿಕವಾಗಲಿ ಆ ಬಗ್ಗೆ ಸಾಕಷ್ಟು ಆಳವಾಗಿ ಅಭ್ಯಾಸ ಮಾಡದೆ ಸಾಮಾನ್ಯವಾಗಿ ಯಾವುದನ್ನೂ ನಾನು ಬರೆಯಲು ಕೈಹಾಕುವುದಿಲ್ಲ. ಹಾಗೆಂದು ನಾನು 'ಸರ್ವಜ್ಞ' ಎಂದು ಹೇಳಿಕೊಳ್ಳಲಾರೆ. ನನಗೆ ತಿಳಿದ ಮಟ್ಟಿಗೆ ಅಧ್ಯಯನ ಮಾಡಿಯೇ ಬರೆಯುತ್ತೇನೆ. ಸಾಮಾಜಿಕ ಕಾದಂಬರಿಗಳನ್ನು ಬರೆಯುವಾಗ ನನ್ನ ಉದ್ದೇಶ ಇಂದಿನ ಸಮಾಜ ಜೀವನದ ವಿಶ್ಲೇಷಣೆಯಾದರೆ, ಐತಿಹಾಸಿಕ ಕಾದಂಬರಿ ರಚನೆಯ ಉದ್ದೇಶ ಆ ಕಾಲದ ವಾಸ್ತವ ಚಿತ್ರವನ್ನು ಅಂದು ಹೇಗಿತ್ತೋ ಹಾಗಿಡುವುದು. ಗತ ಕಾಲದ ವಿಮರ್ಶಕನಾಗಿ ಎಂದೂ ನಾನು ಚಾರಿತ್ರಿಕ ಕಾದಂಬರಿ ರಚನೆಗೆ ಕೈ ಹಾಕಿಲ್ಲ. ಅದು ಒಳ್ಳೆಯದೇ ಅಲ್ಲವೇ ಎಂದು ತೀರ್ಮಾನಿಸುವ ಅಧಿಕಾರ ಇಂದಿನ ಜನಕ್ಕೆ ಎಷ್ಟರ ಮಟ್ಟಿಗೆ ಇದೆ ಎನ್ನುವುದು ನನಗೆ ಅನುಮಾನ. ಎಂತಲೇ ಸಮಕಾಲೀನ ವಿಮರ್ಶಕನಾಗಿ ಐತಿಹಾಸಿಕ ಕೃತಿಗಳನ್ನು ನಾನು ರಚಿಸಿಲ್ಲ. ಆ ಕಾಲವನ್ನು ಇಂದಿನ ನಮ್ಮ ಜನರ ಕಣ್ಣೆದುರು ಮೂಡಿಸಲು ಯತ್ನಿಸಿದ್ದೇನೆ. ನನ್ನ ಇನ್ನೊಂದು ಉದ್ದೇಶ ಇದು– ಭಾರತದ ಇತಿಹಾಸ ರಚನೆಯ ಕಾಲದಲ್ಲಿ ಕನ್ನಡ ಇತಿಹಾಸಕ್ಕೆ ಸಾಕಷ್ಟು ಅನ್ಯಾಯವಾಗಿದೆ. ಅದಕ್ಕೆ ಕಾರಣ, ನಮ್ಮ ಇತಿಹಾಸದ ಬಗ್ಗೆ ನಮ್ಮ ಅವಜ್ಞತೆ, ನಿರಾಭಿಮಾನ. ಇದನ್ನು ತೊರೆದು ಕನ್ನಡಿಗರಲ್ಲಿ ತಮ್ಮ ಇತಿಹಾಸದ ಬಗ್ಗೆ ಹೆಮ್ಮೆ, ಅಭಿಮಾನ ಮೂಡಿಸಬೇಕು ಎಂಬುದೂ ನಾನು ನಮ್ಮ ಕನ್ನಡ ಇತಿಹಾಸ ಕುರಿತು ಕಾದಂಬರಿಗಳನ್ನು ಬರೆಯಲು ಪ್ರೇರೇಪಿಸಿತು"

ಪ್ರಭಾಕರ್ : 'ಇಂದಿನ ಲೇಖಕರಂತೆ ನೀವು ಪಾಶ್ಚಾತ್ಯ ಸಾಹಿತ್ಯದಿಂದ ಪ್ರೇರಿತರಾಗಿಲ್ಲವೆ ? "

ತ. ರಾ. ಸು. : "ಪ್ರೇರಿತರಾಗುವುದೇನು, ಅನುವಾದಗಳನ್ನೂ ಮಾಡಿದ್ದೇನೆ. ಆದರೆ ಅನುವಾದವನ್ನು 'ಅನುವಾದ' ಎಂದೇ ಪ್ರಕಟಿಸಿದ್ದೇನೆ"

ಕೃತಿ ಸಂಖ್ಯೆಗೆ ಕಾರಣ

ಪ್ರಭಾಕರ್ : 'ಅ. ನ. ಕೃ. ಅವರಂತೆ ನೀವು ಕೃತಿಗಳ ಸಂಖ್ಯೆಗೇ ಹೆಚ್ಚು

ಮಹತ್ವ ನೀಡಿದಂತೆ ಕಾಣುತ್ತದೆ. ಏನು ಹೇಳುವಿರಿ? '

ತ. ರಾ. ಸು. : "ನಾನಾಗಲಿ, ಕೃಷ್ಣರಾಯರಾಗಲಿ ಸಂಖ್ಯೆಗೆ ಹೆಚ್ಚು ಮಹತ್ವ ಕೊಡಲಿಲ್ಲ. ಅಷ್ಟೇ ಅಲ್ಲ, ನಾವು ಬರೆದದ್ದೆಲ್ಲ ಚೊಕ್ಕ ಬಂಗಾರ ಎಂಬ ಭ್ರಮೆಯೂ ನಮಗಿರಲಿಲ್ಲ. ವಾಸ್ತವವಾಗಿ ಹೇಳುವುದಾದರೆ ನಾವು ಬಹಳಷ್ಟು ಕಾದಂಬರಿಗಳನ್ನು ಬರೆದ ಕಾಲ ಕನ್ನಡದಲ್ಲಿ ಪ್ರಕಾಶಕರಿಗೆ, ಓದುಗರಿಗೆ ಬರಗಾಲ. ನಮ್ಮ ಬರವಣಿಗೆಯ ಸತ್ತ್ವದಿಂದ ಪ್ರಕಾಶಕರನ್ನು, ಓದುಗರನ್ನು ಸೃಷ್ಟಿಮಾಡಿ ಕೊಂಡೇ ನಮ್ಮ ಬರವಣಿಗೆ ನಡೆಯಬೇಕಿತ್ತು. ನಮ್ಮ ಬಗ್ಗೆ ಜನ ಆಡುವ ಈ ಮಾತಿನಲ್ಲಿ ಸ್ವಲ್ಪ ಮಟ್ಟಿಗೆ ನಿಜ ಇದೆ. ನಮ್ಮಿಬ್ಬರ ಬರವಣಿಗೆಗಳಲ್ಲೂ ಅವಸರ ಕಾಣಬಹುದು. ಆದರೆ ಇವತ್ತು ಒಂದು ಕಾದಂಬರಿ ಬರೆದು ಹತ್ತಾರು ಜನ ವಿಮರ್ಶಕರಿಗದನ್ನು ತೋರಿಸಿ, ಎಂಟು–ಹತ್ತು ವರ್ಷಗಳ ಕಾಲ ಅಡೆ ಹಾಕಿ, ನಂತರ ಹೊರ ತರುವಷ್ಟು, ಹಾಗೆಯೇ ನಮಗೆ ಅನುಕೂಲವಾದ ವಿಮರ್ಶಕರನ್ನು ಸೃಷ್ಟಿ ಮಾಡಿಕೊಂಡು ಲೇಖನಿ ಹಿಡಿಯುವಷ್ಟು ಕಾಲಾವಕಾಶ ನಮಗಿರಲಿಲ್ಲ. ಪ್ರಾಯಶಃ ಇದು ಬರವಣಿಗೆಗೆ ನಮ್ಮ ಬದುಕನ್ನು ಗಂಟು ಹಾಕಿದ್ದರ ಫಲ ಇರಬೇಕು. ಆದರೆ ಇವತ್ತು ಬರೆದೇ ಬದುಕುತ್ತೇನೆ ಎಂದು ಹೇಳುವ 'ಗಂಡುತನ' ಎಷ್ಟು ಜನಕ್ಕಿದೆ ಎಂದು ನಾನು ಕೇಳುತ್ತೇನೆ. ಇಂದಿಗೂ ನಮ್ಮ ಹಾಗೆ ಆ ಹುಚ್ಚು ಸಾಹಸಕ್ಕಿಳಿಯುವ ಜನ ಇಲ್ಲ. ಇದ್ದರೆ ಒಬ್ಬರೋ – ಇಬ್ಬರೋ! ಉಳಿದವರೆಲ್ಲರಿಗೂ ಬರವಣಿಗೆ ಒಂದು ಉಪವೃತ್ತಿ. 'ವೃತ್ತಿ' ಎನ್ನುವ ಮಾತನ್ನು ಉದ್ದೇಶ ಪೂರ್ವಕವಾಗಿಯೇ ಬಳಸುತ್ತಿದ್ದೇನೆ. ಇಂದಿನ ಲೇಖಕರಲ್ಲಿ ಕಂಡು ಬರುತ್ತಿರುವಷ್ಟು ಕೀರ್ತಿ, ಹಣದ ದಾಹ ನಮ್ಮ ಆ ಹಳೆಯ ದಿನಗಳಲ್ಲಿ ಇರಲಿಲ್ಲ. ಆ ಕಾಲದಲ್ಲಿ ಗೌರವ ಧನ ಎಂದು ಬರುತ್ತಿದ್ದುದೇ ಕೆಲವರಿಗೆ. ಅದನ್ನೂ ಎಂಟಾಣೆ, ರೂಪಾಯಿ, ಹತ್ತು ರೂ. ಗಳ ಕಂತುಗಳಲ್ಲಿ ಸಾಕಷ್ಟು ವರ್ಷಗಳ ಕಾಲ ಕಾದು ತೀರಿಸಿಕೊಳ್ಳಬೇಕಿತ್ತು. ಆದ್ದರಿಂದ ಧನದ ವ್ಯಾಮೋಹಕ್ಕೆ, ಕೀರ್ತಿಕಾಮನೆಗೆ ಅ.ನ.ಕೃ. ರವರಾಗಲಿ, ನಾನಾಗಲಿ ಹೆಚ್ಚು ಬರೆದೆವು ಎಂದು ಯಾರಾದರೂ ಹೇಳಿದರೆ ಅದು ಪರಿಸ್ಥಿತಿ-ತಿಳಿಯದೆ ಆಡಿದ ಮಾತು."

ಪ್ರಭಾಕರ್ : ಅರಮನೆ, ಗುರುಮನೆ, ಸಂಪ್ರದಾಯಗಳನ್ನು ಉಗ್ರವಾಗಿ ಟೀಕಿಸುತ್ತಿದ್ದ ನೀವು ಈಗ ಶ್ರೀ ಶೃಂಗೇರಿ ಮಠಾಧೀಶರ ಪರಮ ಭಕ್ತರಾಗಿದ್ದೀರಲ್ಲ. ಇಂದಿನ ನಿಮ್ಮ ಈ ನಿಲುವು ನಿಮ್ಮ ಪ್ರಗತಿಶೀಲ ಮನೋಭಾವದ ಸೋಲಲ್ಲವೇ?'

ತ.ರಾ.ಸು. : "ಖಂಡಿತವಾಗಿಯೂ ಅಲ್ಲ. ನಾನು ಅಂದೂ ಸಂಪ್ರದಾಯ ವಾದಿಯಾಗಿರಲಿಲ್ಲ. ಇಂದೂ ಸಂಪ್ರದಾಯ ಶರಣನಲ್ಲ. ಶೃಂಗೇರಿಯ ಶ್ರೀ ಶ್ರೀ ಗಳವರ ಬಗ್ಗೆ ನನಗೆ ಅಪಾರ ಗೌರವ, ಭಕ್ತಿಗಳಿರುವುದು ನಿಜ. ಆದರೆ ಹಾಗೆಂದು ನಾನು ಬೇರೆ ಯಾವ ಜಾತಿಯವರನ್ನೂ ದೂರ ಮಾಡಿಲ್ಲ. ಇವತ್ತೂ ನನಗೆ ಯಾರನ್ನೂ 'ನಿಮ್ಮ ಜಾತಿ ಯಾವುದು?' ಎಂದು ಕೇಳುವ ಅಭ್ಯಾಸವಿಲ್ಲ. ನನ್ನ ಮನೆಯಲ್ಲೂ ಅಷ್ಟೆ. ಅದು ಮುಕ್ತದ್ವಾರ. ಜಾತಿಯ ಭೂತಕ್ಕೆ ನನ್ನ ಮನೆಯಲ್ಲಾಗಲಿ, ಮನದಲ್ಲಾ

ಗಲಿ ಪ್ರವೇಶವೇ ಇಲ್ಲ. ಇನ್ನು ವೈಯಕ್ತಿಕ ಶ್ರದ್ಧೆಯ ವಿಷಯ. ನಿಮ್ಮ ಹೆಂಡತಿಯನ್ನು ನೀವೇಕೆ ಪ್ರೀತಿಸುತ್ತೀರಿ ಎಂದು ಕೇಳಿದ ಹಾಗೆ. ಅದು ನನ್ನ ಖಾಸಾ ವಿಷಯ. ಎಲ್ಲಿಯವರೆಗೆ ನಾನು ನನ್ನ ಭಾವನೆಯನ್ನು ಇತರರ ನಂಬಿಕೆಯ ಮೇಲೆ ಹೇರುವುದಿಲ್ಲವೋ ಅಲ್ಲಿಯವರೆಗೂ ನನ್ನ ನಂಬಿಕೆಯ ಬಗ್ಗೆ ನನಗೆ ಅಪನಂಬಿಕೆ ಇಲ್ಲ. ಆ ಬಗ್ಗೆ ಕೀಳರಿಮೆಯೂ ಇಲ್ಲ."

ಪ್ರಭಾಕರ್ : 'ದೇವರು, ಧರ್ಮ ಇವುಗಳನ್ನು ಹಳಿಯುತ್ತಾ, ನಾಸ್ತಿಕತೆಯನ್ನು ನಟಿಸುತ್ತಾ ಇರುವುದೇ ಇಂದಿನ ಬುದ್ಧಿ ಜೀವಿಗಳ ಲಕ್ಷಣವಾಗಿದೆ. ಇದಕ್ಕೇನೆನ್ನುವಿರಿ ?'

ತ. ರಾ. ಸು. : "ಇವೆಲ್ಲವೂ ಒಬ್ಬ ವ್ಯಕ್ತಿಯ ಅನುಭವಗಳಿಗೆ ಸಂಬಂಧಿಸಿದ ವಿಷಯ. ತಮಗೆ ವಿಚಾರ ಸ್ವಾತಂತ್ರ್ಯ ಬೇಕು ಎನ್ನುವ ಈ ಜನ ಇತರರಿಗೂ ಅದು ಇದೆ ಎಂದು ತಿಳಿದುಕೊಂಡರೆ ತಿಕ್ಕಾಟವೇ ಇರುವುದಿಲ್ಲ."

ಪ್ರಭಾಕರ್ : "ಇಂದಿನ ಈ ಅರವತ್ತೂರರ ಘಟ್ಟದಲ್ಲಿ ನಿಂತು, ಹಿಂತಿರುಗಿ ನೋಡಿದಾಗ ನಿಮಗೆ ಜೀವನವನ್ನು ಅರ್ಥಮಾಡಿಕೊಂಡೆ ಎಂದೆನಿಸುತ್ತದೆಯೋ ?"

ತ. ರಾ. ಸು. : (ಸ್ವಲ್ಪ ಯೋಚಿಸಿ, ಸಿಗರೇಟ್ ಸೇದುತ್ತಾ ತಟಕ್ಕನೆ ಹೇಳತೊಡಗಿದರು) "ನನ್ನ ಬಾಳು ಹೋರಾಟದ ನಡುವೆ ನಡೆದಿದ್ದಾಗ ಕೆಲವು ಖಚಿತ ಗುರಿಗಳು ನನಗೆ ಕಾಣುತ್ತಿದ್ದವು. ಆ ಗುರಿಗಳನ್ನು ಮುಟ್ಟಿದ ಬಳಿಕ ನಾನು ನಿಶ್ಚಿಂತವಾಗಿರುತ್ತೇನೆ ಎಂದುಕೊಂಡಿದ್ದೆ. ಮನೆ, ಮಡದಿ, ಮಕ್ಕಳು ನಿತ್ಯ ಜೀವನಕ್ಕೆ ಕಾತರವಿಲ್ಲದ ಆರ್ಥಿಕ ವ್ಯವಸ್ಥೆ,ಮನಸ್ಸಿಗೆ ಪ್ರಿಯವಾದ ಹವ್ಯಾಸಕ್ಕೆ ಸಾಕಷ್ಟು ವಿರಾಮ, ಇವಿಷ್ಟುದೊರೆತರೆ ಸ್ವರ್ಗ ಸಾಧಿಸಿದಂತೆ ಎಂಬ ಭಾವನೆ ನನ್ನಲ್ಲಿತ್ತು.ಇವುಗಳ ಜೊತೆಗೆ ಕೀರ್ತಿ,ಪ್ರತಿಷ್ಠೆ,ಜನ ಪ್ರಿಯತೆ ಇವು ಬಂದರೆ ಮತ್ತಷ್ಟು ಲೇಸು ಎಂದುಬಯಸಿದ್ದೆ....

"ಈಗ- ಇವೆಲ್ಲವೂ ನನ್ನದಾಗಿದೆ. ಆದರೆ ಈ ಹಂತದಲ್ಲಿ ನನಗೆ ಸಿಗುತ್ತದೆ. ಎಂದು ನಂಬಿದ್ದ ಶಾಂತಿ ಮಾತ್ರ ಮರೀಚಿಕೆಯಾಗಿ, ನಾನು ಬೇಕು ಎಂದು ಬಯಸಿದ ವಸ್ತುಗಳೇ ಇಂದು ನನ್ನನ್ನು ಕಾಡುವ ಸಮಸ್ಯೆಗಳಾಗಿ-ಇವಾವೂ ಇಲ್ಲದಿದ್ದರೆ ನನ್ನ ಜೀವನ ಎಷ್ಟು ಪ್ರಶಾಂತವಾಗಿರುತ್ತಿತ್ತು ಎನಿಸುತ್ತಿದೆ. ಇದೇನು ನನ್ನ ವೈಯಕ್ತಿಕ ಸ್ವಭಾವದ ವಿಲಕ್ಷಣತೆಯೋ ಅಥವಾ ನನ್ನ ಹಾಗೆ ಬೇರೆಯವರಿಗೂ ಅನಿಸಿದೆಯೋ ? ಹೀಗೆನಿಸಿದಾಗ 'ಜೀವನವನ್ನು ಅರ್ಥಮಾಡಿಕೊಂಡೆ' ಎಂಬ ಮಾತುಎಷ್ಟು ಪೊಳ್ಳು ?

"ನನಗನಿಸುತ್ತದೆ- ಅರ್ಥವಾಗಿರುವ ವಸ್ತುವೇ ಅಲ್ಲ ಜೀವನ. ಪ್ರಾಯಶಃ ಇದೇ ಜೀವನದ ಭೀಷಣತೆಯೋ ರಮಣೀಯತೆಯೋ ಇರಬೇಕು. ಇದರ ಕರಾಳ ಸ್ವರೂಪಕ್ಕೆ ಹೆದರಿದವನೂ ಸೋತ. ರಮಣೀಯತೆಗೆ ಮಾರು ಹೋದವನೂ ಸೋತ. ಆದ್ದರಿಂದ ಜೀವನದಲ್ಲಿ 'ಗೆಲುವು' ಎನ್ನುವ ಮಾತು ಅರ್ಥ ಹೀನ ಎಂದೇ ತೋರುತ್ತದೆ. ಈ ಮಾರಕ-ಸಂಮೋಹಕತೆಯೇ ಜೀವನದ ಅರ್ಥವಿರಬಹುದೇ ?" ಎಂದು ನಮ್ಮನ್ನೇ ಪ್ರಶ್ನಿಸುವಂತೆ ನೋಡುತ್ತಾ ಮೌನವಾಗಿ ಸಿಗರೇಟ್ ಸೇದುತ್ತಲೇ ಕುಳಿತಿದ್ದರು.ಇಷ್ಟು ಹೊತ್ತು ಉತ್ತರಿಸಿದ್ದಕ್ಕೋ, ಇನ್ನೇತಕ್ಕೋ ದಣಿದವರಂತೆ ಕಾಣುತ್ತಿದ್ದ ಅವರಿಗೆ ಕೇಳುವುದು ಸಧ್ಯಕ್ಕೆ ಇಷ್ಟು ಸಾಕು ಎನಿಸಿತು.

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
V	2	ಬರೆಯಃವುದರಲ್ಲಿ	ಬರೆಯುವುದಿರಲಿ
VIII	4	ಸೊಗಸಾಗಿ	ಸೊಗಸಿಗಾಗಿ
8	9	ಅಭ್ಯೊದಯುವನ್ನು	ಅಭ್ಯುದಯವನ್ನು
8	10	ಕರಃಬುದ	ಕರುಬುವ
10	22	ಮಾಪೋಸಾ	ಮೋಪಾಸಾ
12	20	ಆದಕ್ಕಾಗಿ	ಅದಕ್ಕಾಗಿ
13	3	ಗದ್ಗದಿತರಾಗಿದರು	ಗದ್ಗದಿತರಾಗಿದ್ದರು.
14	11	ಅಗಹತ್ತಿದೆ	ಆಗಹತ್ತಿದೆ
17	23	ಸಾಹಿತವನ್ನು	ಸಾಹಿತ್ಯವನ್ನು
18	8	ಅಧ್ಯಯುನ	ಅಧ್ಯಕ್ಷ
18	21	ಬಸವರಾಳರು	ಬಸವನಾಳರು
20	11	ಅಗಲೇ	ಆಗಲೇ
20	25	ಅಲಿಸುತ್ತ	ಆಲಿಸುತ್ತ
22	11	ಅಚುದ್ರಾರ್ಕವಾಗಲಿ	ಆಚಂದ್ರಾರ್ಕವಾಗಲಿ
25	17	ಅದರ್ಶವನ್ನೇ	ಆದರ್ಶವನ್ನೇ
25	29	ಆಕರ್ಷಿ	ಆರಂಭಿ
26	11	ಕಾದಂಚರಿ	ಕಾದಂಬರಿ
26	31	ಅಗಿದ್ದಾಳೆ	ಆಗಿದ್ದಾಳೆ
30	18	ಅವರಣವು	ಆವರಣವು
30	19	ಅಸಕ್ತಿ	ಆಸಕ್ತಿ
34	11	ತಿರುಗುಬಾಣ'ಗಳಲ್ಲಿ	ತಿರುಗುಬಾಣ'ಗಳಲ್ಲಿ.
38	15	ಅರ್ಥಮಾಡಿಕೂಂಡವರು	ಅರ್ಥಮಾಡಿಕೊಂಡವರು
46	21	ಥಳಕು	ತಳಕು
59	21	ಹಿಂ ನ	ಹಿಂದಿನ
61	16	ವಿಮರ್ಷೆಯ	ವಿಮರ್ಶೆಯ
62	31	ಕಾಲವಂತಿಕೆ	ಕಲಾವಂತಿಕೆ
65	12	ಅಂಗ್ಲ ನಾಟಕದ	ಆಂಗ್ಲ ನಾಟಕದ
75	17	ಕನೆಕ್ಕಶನ್	ಕನೆಕ್ಶನ್
83	23	ನಿಷ್ಟ್ರಂತರು	ನಿಷ್ಣಾತರು
84	8	ಸ್ಪಷ್ಟಿ	ಸೃಷ್ಟಿ
85	19	ಹುಡುನೇನೋ	ಹುಡುಗನೇನೊ

86	16	ಗೂಂದಿಗಳನ್ನೆಲ್ಲ	ಗೊಂದಿಗಳನ್ನೆಲ್ಲ
87	7	ಅಂಟಿಸಿಕೊಳ್ಳುದಿದ್ದರೂ	ಅಂಟಿಸಿಕೊಳ್ಳದಿದ್ದರೂ
91	10	ವೂತ್ತ	ವೊತ್ತ
91	19	ದೂರೆತ	ದೊರೆತ
92	9	ಓದಿದಾದ	ಓದಿದಾಗ
95	4	ಮತಿವಿನಾಳದಲ್ಲಿ	ಮರೆವಿನಾಳದಲ್ಲಿ
98	5	ಒದುವುದು	ಓದುವುದಂ
104	15	ಮೂದಲೇ	ಮೊದಲೇ
111	8	ಗ್ವಿತವು	ನ್ವಿತವು
114	2	ಪ್ರತಿಮೆಯಲ್ಲಿ	ಪ್ರಕ್ರಿಯೆಯಲ್ಲಿ
115	13	ಆಕರ್ಶಣೆ	ಆಕರ್ಷಣೆ
115	20	ಆತ್ಮಹತ್ಯ	ಆತ್ಮಹತ್ಯೆ
117	4	ಕಲೆಯ	ಕತೆಯ
117	24	ಬಾಯಿಯ	ಬಾಯಿಗೆ
118	12	ಅಳಲಿದ	ಅಗಲಿದ
120	3	ನೋಪಾಸಾನ-ಕಲೆ ದಿನಕಲೇಸ್	ಮೋಪಾಸಾನ ಕತೆ ದಿ ನೆಕ್‌ಲೇಸ್
122	1	ಟಿ. ಶಾಮಸುಂದರ	ಬಿ. ಶಾಮಸುಂದರ
128	11	ವರ್ಯವಾದೆಡೆ	ವಾರ್ಯವಾದೆಡೆ
134	18	ಹೆಣಿಕಿದಾಗ	ಹಣಿಕಿದಾಗ
138	9	ಮಾ.ನ. ಮೂರ್ತಿ	ಮ.ನ. ಮೂರ್ತಿ
149	7	ಸುಬ್ಬರಾಯನ	ಸುಬ್ಬರಾಯರ
154	5	ಬಾಹುಲಿಯ	ಬಾಹುಬಲಿಯ
155	26	ಡಾ. ಆಪನೆ	ಡಾ. ಆ.ನೆ.
155	27	ಗಂಥದಿಂದ	ಗ್ರಂಥದಿಂದ
189	6	ಅಂತ್ಯವಾಗುತ್ತಾದೆ	ಅಂತ್ಯವಾಗುತ್ತದೆ
199	9	ಏಷ್ಟು	ಎಷ್ಟು
200	2	ಇಪ್ಪರವರೆಗೆ	ಇಪ್ಪರವರೆಗೆ
210	15	ಅಭಿಮಾನದ	ಅಭಿಮಾನ
217	19	ಅಂತ್ಯಂತ	ಅತ್ಯಂತ
222	11	ತಗೆಯಲು	ತೆಗೆಯಲು
236	31	ಮಾಡವನು	ಮಾಡುವವನು
239	8	ಸ್ವಪ್ನ	ಸ್ಪಷ್ಟ
246	9	ಜಲಂತವಾಗಿ	ಜ್ವಲಂತವಾಗಿ
247	4	ನಿಷ್ಕಲ್ಮ	ನಿಷ್ಕಲ್ಮಷ

	15	ಮುಹಾರಾಜ್ಞಿಯಂತೆ	ಮಹಾರಾಜ್ಞಿಯಂತೆ
248	4	ಅರಗಿಳೆ	ಅರಗಿಳಿ
	23	ಶೃಂಕಲೆ	ಶೃಂಖಲೆ
249	2	ರೋಪ್ಪಾಗಿ	ರೋಪಾಗಿ
249	6	ಘಾಡತೆಯನ್ನ	ಗಾಢತೆಯನ್ನು
249	12	ನೂೀಡ	ನೋಡ
253	26	ಸೊರೆಗೊಳ್ಳುತ್ತದೆ	ಸೂರೆಗೊಳ್ಳುತ್ತದೆ
254	3	ಜನರಲ್	ಜರ್ನಲ್
256	9	ಧಾಳಿಗಳಿಗೂ	ದಾಳಿಗಳಿಗೂ
257	15	ಆಂದ್ರ	ಆಂಧ್ರ
258	12	ಧಾಳಿಯಲ್ಲಿ	ದಾಳಿಯಲ್ಲಿ
259	6	Fendalatories	Feudatories
260	10	ಆವನ	ಅವನ
274	2	ಉಳಿದಳಂ	ಉಳಿದಳು
274	10	ಘಡ್ಯಂತ್ರದಲ್ಲಿ	ಷಡ್ಯಂತ್ರದಲ್ಲಿ
279	12	'ಶ್ರೀಮಂಥಕರ್ಮ'	'ಶ್ರೀಮಂತಕರ್ಮ'
280	4	ಪದಗಳನ್ನು	ಪಾದಗಳನ್ನು
282	19	ಆದುನಿಕ	ಆಧುನಿಕ
288	6	ಅದರೆ	ಆದರೆ
288	10	ಕೃತಿರಚನೆಯು	ಕೃತಿರಚನೆಯು
288	13	ಅದ	ಆದ
288	14	ಕೀರ್ತಿ	ಕೀರ್ತಿ
290	4	ಮಾರೋಕೆಗಳ	ಮಾರೋಲೆಗಳ
290	13	ಉತ್ಕಂದ	ಉಕ್ಕಂದ
292	9	ಆವನಿಗೆ	ಅವನಿಗೆ
292	25	ಅಸೆಬಿದ್ದು	ಆಸೆಬಿದ್ದು
293	15	ಮಾಡಿಲ್ಲ	ಮೂಡಿಲ್ಲ
293	28	ಹೇತನದ	ಚೇತನದ
299	27	ಘತ್ತಿನ	ಛತ್ತಿನ
300	6	ಸಮಾನದಲ್ಲಿಯ	ಸಮಾಜದಲ್ಲಿಯ
305	10	ಅಸ್ವತ್ಥವೃಕ್ಷದ	ಅಶ್ವತ್ಥವೃಕ್ಷದ
306	6	ಆಚಲಪ್ರೇಮ	ಅಚಲಪ್ರೇಮ
310	17	ಸಿಲುಕಿದೆ	ಸಿಲುಕದೆ
310	26	ಇನ್ನಶ್ಟು	ಇನ್ನಷ್ಟು

316	22	Impressionistie	Impressionistic
		ತಂತ	ತಂತ್ರ
325	12	ರಾಜಾವಧಾನಿ	ರಾಮಾವಧಾನಿ
	19	ರಾಜಾವಧಾನಿ	ರಾಮಾವಧಾನಿ
327	6	ಅಲ್ಲಗೆ	ಅಲ್ಲದೆ
331	11	ಶ್ರೀಮಾಂತವೆಂದು	ಶ್ರೀಮಂತವೆಂದು
	17	ಪತಿ ನೆಳಲಲ್ಲೇ	ಪಡಿನೆಳಲಲ್ಲೇ
335	5	ದೊದಲು	ಮೊದಲು
336	9	ತತ್ತಿನಂತೆ	ತೊತ್ತಿನಂತೆ
338	28	ಅಗಿದ್ದೇ	ಆಗಿದ್ದೆ
	32	ಅಗಬೇಕೆಂದೂ	ಆಗಬೇಕೆಂದೂ
341	28	ಈ ಮಧೆ	ಈ ಮಧ್ಯೆ
342	14	ವಯಕ್ತಿಕ	ವೈಯಕ್ತಿಕ
344	12	ಆಪ್ತೇಷ	ಆಪ್ತೇಷ್ಟ
346	19	ಕನಕಳಂತ	ಕನಕಳಂತಹ
348	23	ತಾಂತ್ರಿಕಂ	ಪೌತ್ರಿಕಂ
	24	ವಾಹನಾಗಿ	ವಾಹನಾನಿ
349	32	ಸ್ಥಾತಿಗಾಗಿ	ಸ್ಥಿತಿಗಾಗಿ
356	17	ಇದ್ದಕ್ಕಿಂದತೆ	ಇದ್ದಕಿದ್ದಂತೆ
360	7	ನ್ನಿ	ಚಿನ್ನಿ
366	4	ಕೂನೆಗೆ	ಕೊನೆಗೆ
368	24	ಅಗಲಿ	ಆಗಲಿ
	6	ಹೇತಿ	ಹೇಳಿ
371	14	ಮಾಬೇಕು	ಮಾಡಬೇಕು
372	9	ಅಡ್ರಿಯಾ	ಆಡ್ರೀಯಾ
380	8	ಕರಿಗಳಂತೆ	ಕವಿಗಳಂತೆ
381	28	ಒದುಗನನ್ನು	ಓದುಗನನ್ನು
382	8	ಪ್ರಶ	ಪ್ರಕ
385	20	ಸೂಸೆ	ಸೊಸೆ
389	18	ನಾಯಿಕಿಯರು	ನಾಯಕಿಯದು
390	11	ಸಂಸತಿ	ಸಂತತಿ
391	24	ನವಲ್ಲಿ	ನದಲ್ಲಿ
392	6	ಎನ್ನಿಸಿತು	ಏನನ್ನಿಸಿತು
393	12	ಕಾವಾಕ್ಷಿಯ	ಕಾಮಾಕ್ಷಿಯ

394	4	ಬೀವರ್ಚಸ್ಸನುರವಂತಹ	ವರ್ಚಸ್ಸನ್ನು ಬೀರುವಂತಹ
397	28	ಮಾವ	ಯಾವ
401	30	ಸೆಟೆದೇಳುತ್ತಾಳೆ	ಸೆಟೆದೇಳುತ್ತಾನೆ
414	17	ಉರಿಸೋರೆ	ಉರಿಸೋಕಿ
438	1	ಯಶಸ್ವಿ	ಯಶಸ್ಸು
	2	ಪ್ರಾಕಾರ	ಪ್ರಕಾರ
	13	ಬಂಧನದ	ಬಂಧದ
439	5	ಚೀವಿತವನ್ನೇ	ಜೀವಿತವನ್ನೇ
	17	ಸರ್ವಂಗ	ಸರ್ವಸಂಗ
442	14	ಸ್ಪರ್ಶಪಡಿಸುತ್ತದೆ	ಸ್ಪಷ್ಟಪಡಿಸುತ್ತದೆ
446	4	ಸಲಹಿದೋದಂ	ಸಲಹಿದೋರು
450	2	ಶೇಶಾದ್ರಿ	ಶೇಷಾದ್ರಿ
452	26	ಜಘುಕ್ಕೆ	ಓಘುಕ್ಕೆ
454	6	ನೈಜಕತೆ	ನೈಜತೆ
	12	ಸದುಸ್ಯೆಯನ್ನಷ್ಟೆ	ಸಮಸ್ಯೆಯನ್ನಷ್ಟೆ
456	15	ಕಲವು	ಕೆಲವು
457	16	ವಿಷಮಾತೆಗಳಿಗೆ	ವಿಷಮತೆಗಳಿಗೆ
	18	ಬಚ್ಚಿಡುತ್ತಾ	ಬಿಚ್ಚಿಡುತ್ತಾ
	20	ಬರೆದವುಗಳಲ್ಲಿ	ಬರೆದವುಗಳಲ್ಲ
458	3	ಆರ್ಪಿಸಿತು	ಅರ್ಪಿಸಿತು
458	4	ಚಂದ್ರಶೇಖರನ ಆತ	ಚಂದ್ರಶೇಖರನಂತಹ
460	9	ಅದರು	ಅವರು
461	23	ಮುಳ್ಳುವಾಗುವುದು	ಮುಳುವಾಗುವುದು
463	1	ಬದುಕಿನ	ಬದುಕಿನ
466	7	ಆದೇ	ಅದೇ
467	16	ನಿಷ್ಕ್ಲಯ	ನಿಷ್ಕ್ರಿಯ
468	12	ವೈವಿಧ	ವೈವಿಧ್ಯ
469	19	ಸ್ವಾಯುಲಾರ್ಕ	ಸ್ಕಾಯ್‌ಲಾರ್ಕ
470	15	ಆದರ	ಆದರೆ
472	31	ಅಣ್ಣನಂತೆ	ಅಣ್ಣನಂತೆ
472	31	ನೆರವಾತ್ತಾನೆ	ನೆರವಾಗುತ್ತಾನೆ
476	26	ಒಂಬುದಕ್ಕೆ	ಎಂಬುದಕ್ಕೆ
479	3	ಚಾಗೃತವಾಯಿತು	ಜಾಗೃತವಾಯಿತು
479	21	ಸಾಗಿ	ಸಾರಿ

ಚೆಲುವ ಕನ್ನಡ ನಾಡಿನಲ್ಲಿ
ಹುಟ್ಟಿ, ಕಳೆದ ನಾಲ್ಕು ದಶಕ-
ಗಳಿಗೂ ಮೀರಿ ದೇಶಪ್ರೇಮಿಯಾಗಿ,
ಪತ್ರಿಕಾಕರ್ತರಾಗಿ, ಹೆಸರಾಂತ ಸಾಹಿತಿ-
ಯಾಗಿ, ಪ್ರಗತಿಶೀಲ ಕನ್ನಡ ಚಳುವಳಿ-
ಗಳಲ್ಲಿ ಭಾಗವಹಿಸಿ ಕನ್ನಡ ನಾಡು ನುಡಿಯ
ಹಿತಚಿಂತನೆಯನ್ನು ಮಾಡುತ್ತಿರುವ
ಶ್ರೀ ತ. ರಾ. ಸು. ಅವರಿಗೆ ಕನ್ನಡಿಗರು
ಅರ್ಪಿಸಿದ ಗೌರವಗ್ರಂಥ.

ಇದು ... 'ತ. ರಾ. ಸು. ಬದುಕು ಬರಹ'